Digitized by Arya Samaj Foundation Chennai and eGangotri

ಶ್ರೀ ಸಾಯಣಮಾಧವ ವಿರಚಿತ

ಸರ್ವದರ್ಶನಸಂಗ್ರಹಃ

ಕನ್ನಡ ವ್ಯಾಖ್ಯಾನ

ಪ್ರಕಾಶ

ಭಾಗ ೨

ವೈಶೇಷಿಕ, ನ್ಯಾಯ, ಜೈಮಿನಿ,
ಪಾಣಿನಿ, ಸಾಂಖ್ಯ, ಯೋಗ ಮತ್ತು ಶಾಂಕರದರ್ಶನಗಳು

ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟ.

೧೯೭೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय
गुरुकुल कांगड़ी विश्वविद्यालय हरिद्वार
वर्ग संख्या ------- आगत सं० -------

पुस्तक - वितरण की तिथि नीचे अंकित है। इस तिथि सहित 15वें दिन तक यह पुस्तक पुस्तकालय में वापिस आ जानी चाहिए। अन्यथा 5 पैसे के हिसाब से विलम्ब - दण्ड लगेगा।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಸಾಯಣಮಾಧವ ವಿರಚಿತ

ಸರ್ವದರ್ಶನಸಂಗ್ರಹಃ

ಕನ್ನಡ ವ್ಯಾಖ್ಯಾನ

ಪ್ರಕಾಶ

ಭಾಗ ೨

ವೈಶೇಷಿಕ, ನ್ಯಾಯ, ಜೈಮಿನಿ,
ಪಾಣಿನಿ, ಸಾಂಖ್ಯ, ಯೋಗ ಮತ್ತು ಶಾಂಕರದರ್ಶನಗಳು

ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟ.
ಅಲಂಕಾರಶಾಸ್ತ್ರ ಪ್ರಾಧ್ಯಾಪಕ
ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

PRESENTED BY THE MINISTRY OF
EDUCATION & SOCIAL WELFARE
GOVERNMENT OF INDIA

೧೯೭೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sarvadarshanasangraha Vol. II of Sri Sayanamadhava with Kannada Commentary by G. Vishnumurthi Bhatta, Professor of Alankarasastra, Maharaja's Samskrita College, Mysore. First Edition 1973, Published by M. V. Balaganapathi, Vani Vilasa Road, Mysore; Pp. xii+362. Price : Ord. Rs. 13-00. Bound Rs. 16-00.

ಎಲ್ಲ ಹಕ್ಕುಗಳು ಲೇಖಕರವು

ಬೆಲೆ :

ಸಾದಾ ಪ್ರತಿ : ರೂ. ೧೩-೦೦

ಬೈಂಡು ರೂ. ೧೬-೦೦

ಮಂಗಳೂರು ಪ್ರಿಂಟರ್ಸ್,
ಶ್ರೀರಾಮಪೇಟೆ, ಮೈಸೂರು-1
ಅವರಿಂದ ಮುದ್ರಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ಅಜ್ಞನಾಗಲಿ, ಪ್ರಾಜ್ಞನಾಗಲಿ ಎಲ್ಲರಿಗೂ ಸುಖಹೊಂದಬೇಕು, ದುಃಖನಿವೃತ್ತಿಯಾಗಬೇಕು ಎಂಬ ಸ್ವಾಭಾವಿಕಜ್ಞಾನದಿಂದ ಕಾರ್ಯಪ್ರವೃತ್ತಿಯು ಪ್ರಸಿದ್ಧವಾಗಿದೆ. ಅದರಲ್ಲಿಯೂ ತನ್ನಂತೆಯೇ ಸಕಲರೂ ಶ್ರೇಯೋಭಾಗಿಗಳಾಗಬೇಕೆಂದು ಬಯಸುವುದೂ ನಮ್ಮ ಭಾರತ ಸಂಸ್ಕೃತಿಯ ಒಂದು ವೈಶಿಷ್ಟ್ಯ ಪ್ರಸಿದ್ಧವಾಗಿದೆ.

ಸರ್ವೇಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ||
ಸರ್ವೇ ಭದ್ರಾಣಿ ಪಶ್ಯಂತು ಮಾಕಶ್ಚಿದ್ದುಃಖಭಾಗ್‌ಭವೇತ್ ||

"ಎಲ್ಲರೂ ಸುಖಿಗಳಾಗಲಿ, ಎಲ್ಲರೂ ರೋಗವಿಲ್ಲದವರಾಗಲಿ. ಎಲ್ಲರೂ ಮಂಗಲವನ್ನು ನೋಡುತ್ತಿರಲಿ. ಈ ಲೋಕದಲ್ಲಿ ಯಾರೊಬ್ಬನೂ ದುಃಖವನ್ನು ಹೊಂದದಿರಲಿ" ಎಂದು ಭಾರತದ ಗೃಹಸ್ಥನ ಉದ್ದೇಶ, ಹಾಗೂ ದಿನದ ಪ್ರಾರ್ಥನೆಯಾಗಿದೆ. ಜನ್ಮ ಹೊಂದಿದಮೇಲೆ ಸುಖದುಃಖಗಳಿಂದ ಜೀವನ ನಿರ್ವಹಿಸುವುದು ಅನಿವಾರ್ಯ. ಇಡೀ ಜನ್ಮದಲ್ಲಿ ಒಬ್ಬನಿಗೆ ಸುಖವೇ ಆಗಲಿ, ದುಃಖವೇ ಆಗಲೀ ಒಂದೇ ಅನುಸ್ಯೂತವಾಗಿ ಹೊಂದಿಕೊಂಡಿರುವುದಿಲ್ಲ. "ಚಕ್ರಾರಪಂಕ್ತಿರಿವ ಭಾಗ್ಯಪಂಕ್ತಿಃ" ಎಂದು ಭಾಸನು ಹೇಳಿದಂತೆ, ಅಥವಾ "ನೀಚೈರ್ಗಚ್ಛತ್ಯುಪರಿಚ ದಶಾ ಚಕ್ರನೇಮಿಕ್ರಮೇಣ" ಎಂಬ ಕಾಳಿದಾಸನ ಸೂಕ್ತಿಯಂತೆ ಜೀವನದಲ್ಲಿ ಒಂದಾದ ಮೇಲೆ ಒಂದು ನಿಯತವಾಗಿರುತ್ತದೆ. ಹೀಗೆ ದುಃಖವು ನಿಯತವಾದರೂ ದುಃಖನಿವೃತ್ತ್ಯುಪಾಯದಲ್ಲಿ ಮಾನವನ ಯತ್ನವು ಅಧಿಕವಾಗಿದೆ. ಏಕವೃಂತಗತ ಫಲದ್ವಯನ್ಯಾಯದಿಂದ (ಒಂದು ತೊಟ್ಟಿನಲ್ಲಿ ಎರಡು ಹಣ್ಣುಗಳಿರುವಂತೆ) ಒಂದೇ ಪ್ರಯತ್ನದಿಂದ ಸುಖಪ್ರಾಪ್ತಿಯೂ ದುಃಖನಿವೃತ್ತಿಯೂ ಆಗುವುದಾದರೆ ಆಗ ಆ ಎರಡರಲ್ಲಿ ವಿಶೇಷವೇನೂ ತೋರುವುದಿಲ್ಲ. ಆದರೂ ವಿವೇಕಿಯ ಪ್ರವೃತ್ತಿಯು ಮೊದಲು ದುಃಖನಿವೃತ್ತಿಯಲ್ಲಿಯೂ ಆಮೇಲೆ ಸುಖಪ್ರಾಪ್ತಿಯಲ್ಲಿಯೂ ತೋರುತ್ತದೆ. ಕಾಲರಾ ರೋಗಪ್ರಾರಂಭವಾಯಿತೆಂದರೆ ಎಲ್ಲರಿಗೂ ಅದನ್ನು ತಡೆಯುವ ಚುಚ್ಚುಮದ್ದನ್ನು ಕೊಡುತ್ತಾರೆ. ಪ್ರಾಚೀನರು ಮುಂದೆ ಬರಲಿರುವ ದುಃಖಜನಕವಾದ ಪ್ರತ್ಯವಾಯ (ಪಾಪದೋಷ) ವನ್ನು ತಡೆಗಟ್ಟಲು ದೇವತಾಪ್ರಾರ್ಥನಾದಿ ನಿತ್ಯಕರ್ಮಗಳನ್ನು ವಿಧಿಸಿದ್ದರು. ನಿತ್ಯಕರ್ಮೋಪಾಸನೆಗಳಿಗೆ ಯಾವ ಫಲವೂ ಇಲ್ಲ. ಆದರೆ ಮಾಡದಿದ್ದರೆ ಮಾತ್ರ ದೋಷ ಸಂಭವಿಸುತ್ತದೆಂದು ಹೇಳಿರುತ್ತಾರೆ. ವ್ಯವಹಾರದಲ್ಲಿಯೂ ಇದು ಪ್ರಸಿದ್ಧವಾಗಿದೆ. ಪರರಾಷ್ಟ್ರದ ಆಕ್ರಮಣ ಉಂಟಾಗದಿರಲೆಂದು ಇಂದು ಪ್ರತಿಯೊಂದು ರಾಷ್ಟ್ರವೂ ರಕ್ಷಣಾವೆಚ್ಚವನ್ನು ಹೆಚ್ಚಿಸುತ್ತಿದೆ. ಇದು ದುಃಖನಿವೃತ್ತಿಯ ಪ್ರಯತ್ನವಲ್ಲದೆ ಮತ್ತೇನು ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಪ್ರತಿಯೊಂದು ಪ್ರಾಣಿಯ ಅಥವಾ ಮನುಷ್ಯನ ಪ್ರವೃತ್ತಿಯು ದುಃಖನಿವೃತ್ತಿಪೂರ್ವಕವಾಗಿ ಸುಖಪ್ರಾಪ್ತಿಗೋಸ್ಕರವೆಂದು ಸಿದ್ಧವಾದರೂ ಸುಖಪ್ರಾಪ್ತಿಯಲ್ಲಿ ತೃಪ್ತಿ ಹೊಂದಿರುವುದು ವಿವೇಕಿಗಳಿಗೆ ಮಾತ್ರ ಸಾಧ್ಯ. ಆಶೆಗೆ ಪಾರವಿಲ್ಲ. ನೂರುರೂಪಾಯಿ ಲಾಭಹೊಂದಿದವನಿಗೆ ಸಹಸ್ರಹೊಂದಬೇಕೆಂಬ ಆಶೆ ಬಲವಾಗುತ್ತದೆ. ತಡೆಯಿಲ್ಲದ ಆಶೆಗೆ ಪರಮಾವಧಿಯೇ ಇಲ್ಲ. ಹೀಗೆ ಶಬ್ದಸ್ಪರ್ಶಾದಿವೈಷಯಿಕಸುಖಗಳಿಗೂ ಪಾರವಿಲ್ಲ. ಅವುಗಳಲ್ಲಿಯೂ ಯಾವುದಕ್ಕೆ ಮಹತ್ತ್ವ ಯಾವುದಕ್ಕೆ ಅನಾದರತ್ವವೆಂದು ನಿಶ್ಚೈಯಿಸುವುದೂ ಅಸಾಧ್ಯವಾಗಿದೆ. "ಭಿನ್ನರುಚಿರ್ಹಿಲೋಕಃ" ಎಂದು ಕಾಳಿದಾಸನು ಹೇಳಿದಂತೆ ಒಬ್ಬನಿಗೆ ಸಂಗೀತದಲ್ಲಿ ಅತ್ಯಾಸಕ್ತಿಯಿದ್ದರೆ ಇನ್ನೊಬ್ಬನಿಗೆ ಸುಖಸ್ಪರ್ಶದಲ್ಲಿ ಅತ್ಯಾಶೆ ತೋರುತ್ತದೆ. ಕೆಲವರು ಸೌಂದರ್ಯೋಪಾಸಕರಾದರೆ ಕೆಲವರು ಜಿಹ್ವಾಲೋಲುಪರಾಗಿ ಇತರವಿಷಯಗಳನ್ನು ಉದಾಸೀನದೃಷ್ಟಿಯಿಂದ ನೋಡುತ್ತಾರೆ. ವಿಷಯಸುಖದಮಹತ್ತ್ವವು ಭೋಕ್ತ್ರಧೀನವಾದುದರಿಂದ ಇದೇ ಎಂದು ನಿಶ್ಚಯಿಸಲು ಸಾಧ್ಯವಿಲ್ಲ.

ದುಃಖನಿವೃತ್ತಿಯಲ್ಲಿಯೂ ಹೀಗೆಯೇ ತರತಮಭಾವವನ್ನು ನಿಶ್ಚಯಿಸುವುದು ಸುಲಭಸಾಧ್ಯವಲ್ಲ. ಇದರಲ್ಲಿ ವರ್ತಮಾನದುಃಖನಿವೃತ್ತಿ (ಅನುಭವಿಸುತ್ತಿರುವದುಃಖ) ಭಾವಿದುಃಖನಿವೃತ್ತಿ (ಮುಂದೆ ಬರುವ ದುಃಖದ ನಿವಾರಣೆ.) ಯೆಂದು ಎರಡು ರೀತಿಯಾಗಿ ವಿಂಗಡಿಸಬಹುದು. ಅನುಭವಿಸುವ ದುಃಖಕ್ಕಿಂತ ಮುಂದೆ ಬರುವ ದುಃಖವೇ ಬಲವತ್ತರವೆಂದು ನಿಶ್ಚಯಿಸಬಹುದು. ಅನುಭವಿಸುತ್ತಿರುವುದರಿಂದ ಅದರ ವೇದನೆ, ಪರಿಣಾಮವೇನೆಂದು ತಿಳಿದಿರುತ್ತದೆ. ಆದರೆ ಭಾವಿದುಃಖ ಹಾಗಿರುವುದಿಲ್ಲ. ಅನಾಗತವಾಗಿರುವುದರಿಂದ ಅದರ ಸ್ವರೂಪವನ್ನು ಊಹಿಸುವುದೇ ಅಸಾಧ್ಯ. ಅಣುಯುದ್ಧ ಇದುವರೆಗೆ ನಡೆದಿಲ್ಲ. ಒಂದುವೇಳೆ ನಡೆಯುವುದಾದರೆ ಮಾನವಜನಾಂಗಕ್ಕೆ ಯಾವ ವಿಪತ್ತು ಒದಗಬಹುದೆಂದು ನಿರ್ಣಯಿಸಲು ವಿಜ್ಞಾನಿಗಳೂ ಅಸಮರ್ಥರಾಗಿರುತ್ತಾರೆ. ಆದುದರಿಂದ ಮಾನವವಿನಾಶವೆಂದು ಒಂದೇ ಮಾತಿನಿಂದ ವಿವರಿಸಿರುತ್ತಾರೆ. ಯೋಗಸೂತ್ರಕಾರರಾದ ಪತಂಜಲಿಗಳೂ ಭೂತ, ವರ್ತಮಾನ, ಭವಿಷ್ಯದ್ದುಃಖಗಳಲ್ಲಿ ಭವಿಷ್ಯದುಃಖವೇ ಮಹತ್ತಮವೆಂದೂ ಅದರ ನಿವಾರಣೆಯೇ ಮಾನವನ ಧ್ಯೇಯವೆಂದೂ ವಿವರಿಸಿರುತ್ತಾರೆ. "ಹೇಯಂ ದುಃಖಮನಾಗತಂ" ಎಂದು ಅವರ ಸೂತ್ರ. ಅತೀತದುಃಖವು ಉಪಭೋಗದಿಂದ ನಷ್ಟವಾದುದರಿಂದ ಅದರ ನಿವೃತ್ತಿಗೆ ಪ್ರಯತ್ನಪಡಬೇಕಾಗಿಲ್ಲ. ವರ್ತಮಾನದುಃಖವು ಅನುಭವಿಸಲು ಪ್ರಾರಂಭಿಸಿರುವುದರಿಂದ ಅದನ್ನು ನಿವಾರಿಸುವುದು ಅವಶ್ಯಕವೇ. ಮುಂದೆ ಬರುವ ದುಃಖನಿವಾರಣೆಯನ್ನು ಸಾಧಿಸುವುದೇ ಮಾನವನ ಕರ್ತವ್ಯವೆಂದು ಅವರು ನಿರೂಪಿಸಿರುತ್ತಾರೆ. ದುಃಖವು ಬಾರದಿರುವಾಗ ಅದರ ಸ್ವರೂಪವನ್ನೇ ತಿಳಿಯದೆ ನಿವೃತ್ತಿಪಡಿಸುವ ಯತ್ನವು ಹೇಗೆ ಸಮಂಜಸವೆಂದು ಶಂಕೆ ಬರುವುದು ಸ್ವಾಭಾವಿಕ. ಇದಕ್ಕೆ ವಿವೇಕಿಗಳು ಹೀಗೆ ಸಮಾಧಾನ ಹೇಳುತ್ತಾರೆ. ಮುಂದೆ ಬರುವ ದುಃಖದ ಅಸ್ತಿತ್ವವು ಈಗ ಇಲ್ಲದಿದ್ದರೂ ಅದರಕಾರಣ ಪರಿಜ್ಞಾನವು ಈಗ ಇದ್ದೇ ಇರುತ್ತದೆ. ಆ ಕಾರಣ ಸಾಮಗ್ರಿಯು ತನ್ನ ಕಾರ್ಯವನ್ನು ಮುಂದೆ ಹುಟ್ಟಿಸದಿರುವಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿಬಂಧಕಸಾಮಗ್ರಿಯಿಂದ ಅಥವಾ ಸಾಧನಾಂತರದಿಂದ ಮಾಡಬಹುದು. ಇದರಿಂದ ಕಾರಣವಿದ್ದರೂ ಅದರಿಂದ ವಾಸ್ತವವಾಗಿ ಆಗಬೇಕಾದ ದುಃಖರೂಪಕಾರ್ಯವು ಮುಂದೆ ಉಂಟಾಗುವುದಿಲ್ಲ.

"ದುಃಖ ಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗಃ" ಎಂದು ನ್ಯಾಯಶಾಸ್ತ್ರಪ್ರವರ್ತಕರಾದ ಗೌತಮರ ಸೂತ್ರ. ಇಲ್ಲಿ ದುಃಖನಿವೃತ್ತಿಮಾರ್ಗ ಯುಕ್ತಿಯುಕ್ತವಾಗಿ ಹೇಳಿದೆ ಪೂರ್ವಪೂರ್ವಕ್ಕೆ ಉತ್ತರೋತ್ತರವು ಕಾರಣವಾದುದರಿಂದ ಕಾರಣನಾಶದಿಂದ ಕಾರ್ಯನಿವೃತ್ತಿಯಾಗುತ್ತದೆ. ದುಃಖವುಂಟಾಗಲು ಶರೀರಪ್ರಾಪ್ತಿ ಅಂದರೆ ಜನ್ಮವೇ ಕಾರಣ. ಶರೀರಪ್ರಾಪ್ತಿಗೆ ಪ್ರವೃತ್ತಿ ಅಂದರೆ ಶುಭಾಶುಭಫಲದಾಯಕಕರ್ಮಗಳೂ, ಅವು ಉಂಟಾಗಲು ರಾಗಾದಿ ದೋಷಗಳೂ, ರಾಗಕ್ಕೆ ಮಿಥ್ಯಾಜ್ಞಾನ ಅಂದರೆ ವಿವೇಕಜ್ಞಾನವಿಲ್ಲದಿರುವುದು ಕಾರಣ. ವಿವೇಕಜ್ಞಾನ ಹೊಂದಿದರೆ ಆಗ ರಾಗಾದಿ ದೋಷಗಳು ಪೀಡಿಸುವುದಿಲ್ಲ. ಉದಾರ ಚರಿತರಿಗೆ ವಸುಧೆಯೇ ಕುಟುಂಬವಾಗಿರುತ್ತದೆ. ಸಮದರ್ಶಿಗೆ ಆಕರ್ಷಕವಾದ ವಿಷಯ ಯಾವುದೂ ಇರುವುದಿಲ್ಲ. ಮಹಾತ್ಮರಾದವರ ಕಿಂದರಿಗೆ ಎಲ್ಲವೂ ಕೃಷ್ಣಸ್ವರೂಪವೆಂದು ತೋರಿದುದರಿಂದ ಸಂಸಾರ ಅಮೃತವಾಯಿತು. ಅವರು ಮನುಷ್ಯನು ದೇವನಾಗಬಹುದು ಎಂಬ ಸಿದ್ಧಾಂತವನ್ನು ಸ್ವಾನುಭವದಿಂದ ಜನತೆಗೆ ವ್ಯಕ್ತಪಡಿಸಿದರು. ರಾಗಾದಿದೋಷರಹಿತನಿಗೆ ಯಾವುದರಲ್ಲಿಯೂ ಅಭಿನಿವೇಶವಿರುವುದಿಲ್ಲ. ನಿಷ್ಕಾಮ ಪ್ರವೃತ್ತಿಯಿಂದಲೇ ಜೀವನವನ್ನು ಸುಖಮಯವಾಗಿ ಕಳೆಯುತ್ತಾರೆ. ಇದರಿಂದ ಮುಂದೆ ಜನ್ಮವಿಲ್ಲದಂತಾಗಿ ದುಃಖನಿವೃತ್ತಿ ಹೊಂದುತ್ತಾನೆಂದು ಮಹರ್ಷಿಗಳು ಉಪದೇಶಿಸಿರುತ್ತಾರೆ. ನ್ಯಾಯಮತದಲ್ಲಿ ದುಃಖನಿವೃತ್ತಿಯೇ ಮೋಕ್ಷ.

ಮಣಿ, ಮಂತ್ರ ಔಷಧಾದಿಗಳಿಂದ ತಾತ್ಕಾಲಿಕ ದುಃಖನಿವೃತ್ತಿಯಾಗಬಹುದು. ಇಂದಿನ ಜ್ವರ ಔಷಧದಿಂದ ಗುಣವಾದರೆ ಅದು ಮುಂದೆ ಬರುವುದಿಲ್ಲವೆಂತಿಲ್ಲ. ಶಾಶ್ವತವಾದ ದುಃಖನಿವೃತ್ತ್ಯುಪಾಯವನ್ನು ತಿಳಿಸುವುದೇ ದರ್ಶನಕಾರರ ಉದ್ದೇಶ. ಶಾಂತಿಕರವಾದ ವಿಚಾರಗಳೇ ದರ್ಶನಗಳು, ಹಿಂದಿನ ಮಹರ್ಷಿಗಳು ಪ್ರಪಂಚದ ಪದಾರ್ಥಗಳನ್ನು ವಿಮರ್ಶಿಸಿ ವಿಚಾರಿಸಿ ಅನುಭವ ಹೊಂದಿ, ದೃಢ ಸಂಸ್ಕಾರದಿಂದ ಭಾವನಾಮಯರಾಗಿ ತಮ್ಮ ಅನುಭವ ಸಾಕ್ಷಾತ್ಕಾರವನ್ನು ಗ್ರಂಥಗಳ ಮೂಲಕ ವ್ಯಕ್ತಪಡಿಸಿರುತ್ತಾರೆ. ಇವೇ ದರ್ಶನಗ್ರಂಥಗಳು. ತತ್ವವಿಚಾರಬೋಧಕಗ್ರಂಥಗಳೆಂದು ಪರಮಾರ್ಥ. ತತ್ತ್ವವೆಂದರೆ ಕಲ್ಪಿತವಲ್ಲದ ವಸ್ತು. ವ್ಯತ್ಯಾಸಹೊಂದದಿರುವ ಯಥಾರ್ಥವಾದ ಪದಾರ್ಥ. ಪ್ರತಿಯೊಂದು ವಸ್ತುವಿಗೂ ಒಂದು (ನಾಮ) ಹೆಸರು ಇದೆ. ಪದದಿಂದ ತಿಳಿಯಲ್ಪಡುವ ವಸ್ತುವೇ ಪದಾರ್ಥ. ಹೀಗೆ ಹೇಳಿದುದರಿಂದ ಆಕಾಶವೂ ಒಂದು ಪದಾರ್ಥವೆಂಬುದು ಸ್ಪಷ್ಟವಾಗುತ್ತದೆ. ಇಂತಹ ಪದಾರ್ಥಗಳ ಪರಿಶೋಧನೆಯಿಂದಲೇ ತತ್ತ್ವಸಾಕ್ಷಾತ್ಕಾರವಾಗುತ್ತದೆಂದು ದಾರ್ಶನಿಕರ ಸಿದ್ಧಾಂತ. ವಸ್ತು ಸ್ವಭಾವವನ್ನು ನಿರ್ಣಯಿಸಿ ಆಯಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದರ್ಶನಕಾರರು ಒಂದು ವ್ಯವಸ್ಥೆ ಅಥವಾ ನಿಯಮ ಮಾಡಿರುತ್ತಾರೆ. ಈ ನಿಯಮಕ್ಕೆ ಸಿದ್ಧಾಂತವೆಂದು ಹೆಸರು. ವಸ್ತುಸ್ವಭಾವ ನಿಯಮವೇ ಸಿದ್ಧಾಂತ.

ಲೋಕದಲ್ಲಿ ಪದಾರ್ಥಗಳು ಕೆಲವು ಪ್ರತ್ಯಕ್ಷಗಳಾಗಿದ್ದರೆ, ಆತ್ಮ, ಪರಲೋಕ, ಪುಣ್ಯ, ಪಾಪಾದಿ ಪದಾರ್ಥಗಳು ಪರೋಕ್ಷವಾಗಿರುತ್ತವೆ; ಅಂದರೆ ಪ್ರತ್ಯಕ್ಷಗೋಚರ ವಾಗುವವುಗಳಲ್ಲ. ವಿಚಿತ್ರವಾದ ಪ್ರಪಂಚಕ್ಕೆ ಮೂಲತತ್ತ್ವ ಯಾವುದು ? ಅದು ಒಂದೇ ? ಅಥವಾ ಅನೇಕವೇ ? ನಾನು ಎಂದರೇನು ? ಇದಕ್ಕೆ ಬೇಕಾದುದು ಯಾವುದು ಇವೇ ಮೊದಲಾದ ವಿಚಾರಗಳೇ ತತ್ತ್ವಮಾರ್ಗದ ಸ್ವಭಾವ.

ಚೇತನಾಚೇತನರೂಪದಿಂದ ಎರಡು ರೀತಿಯಾದ ಪದಾರ್ಥಗಳ ಮೂಲಕ ತತ್ತ್ವಾನುಸಂಧಾನವೇ ದರ್ಶನ, ಸರಿಯಾದ ಜ್ಞಾನ. ಇದೇ ದುಃಖನಿವೃತ್ತಿ ಅಥವಾ ಸುಖರೂಪಮೋಕ್ಷಕ್ಕೆ ಸಾಧನವೆಂದು ದಾರ್ಶನಿಕರು ಅಂಗೀಕರಿಸಿರುತ್ತಾರೆ. ಮನುಷ್ಯ ನಲ್ಲಿ ರಾಗ ದ್ವೇಷ ಮೋಹಗಳು ಸಹಜಸ್ವಭಾವ ಗುಣಗಳಾಗಿರುತ್ತವೆ. ದಯಾವಿನ ಯಾದಿಗಳು ಅಭ್ಯಾಸದಿಂದ ಬರುವ ಸ್ವಭಾವಗಳು. ರಾಗವೆಂದರೆ ಆಶೆ. ಇದೇ ಅಧಿಕ ವಾದರೆ ಕಾಮವಾಗುತ್ತದೆ. ಇದನ್ನು ಹೊಂದಲು ಪ್ರಯತ್ನಿಸಿದಾಗ ವಿರೋಧಿಸುವವರ ಮೇಲೆ ದ್ವೇಷವುಂಟಾಗಿ ಕ್ರೋಧ ಬರುತ್ತದೆ. ವಸ್ತುವಿನ ನಿಜವಾದ ಸ್ವಭಾವವನ್ನು ತಿಳಿಯದೇ ಇರುವುದು ಭ್ರಾಂತಿ ಅಥವಾ ಮೋಹ. ಇದಕ್ಕೆ ಅಜ್ಞಾನವೆಂದು ಶಾಸ್ತ್ರಕಾರರ ಸಂಕೇತ. ಇದು ಪ್ರಬಲವಾದರೆ ಲೋಭವೆಂದೆನಿಸುತ್ತದೆ. ಇವು ಮನುಷ್ಯನಿಗೆ ಪ್ರಬಲ ವಾದ ಶತ್ರುಗಳು. ಇವು ಅಧಿಕವಾದರೆ ಅನರ್ಥವಾಗುತ್ತದೆ. ಜೀವನದಲ್ಲಿ ಇವುಗಳನ್ನು ನಿಗ್ರಹಿಸಿ ಶಾಂತಿಯನ್ನು ಪಡೆಯುವುದೇ ಜೀವನ ಸಾಫಲ್ಯವೆಂದು ಪ್ರಾಚೀನರ ಸಿದ್ಧಾಂತ.

ಪದಾರ್ಥಗಳ ತತ್ತ್ವಾನುಸಂಧಾನವು ಪ್ರಮಾಣವೊಂದರಿಂದ ಸಾಧ್ಯವೆಂದು ಅನುಭವದಿಂದ ತಿಳಿಯಬಹುದು. ಸತ್ಯಾನುಭವಕ್ಕೆ ಸಾಧನವಾದುದೇ ಪ್ರಮಾಣ. ಇದು ಪ್ರತ್ಯಕ್ಷಾದಿಭೇದದಿಂದ ನಾನಾ ವಿಧವಾಗಿರುತ್ತದೆ. ಪ್ರಮಾಣಗಳ ಸಂಖ್ಯಾ ವಿಷಯದಲ್ಲಿ ವಿವಾದವಿದ್ದರೂ ಪದಾರ್ಥದ ಸತ್ಯತ್ವವಿಷಯದಲ್ಲಿ ಯಾವ ವಿಪ್ರತಿಪತ್ತಿಯೂ ಇರುವುದಿಲ್ಲ. ಮಾಧವಾಚಾರ್ಯರು ಹದಿನಾರು ದರ್ಶನಗಳನ್ನು ಸಂಗ್ರಹಿಸಿ 'ಸರ್ವದರ್ಶನಸಂಗ್ರಹ'ವೆಂಬ ಗ್ರಂಥದಲ್ಲಿ ಎಲ್ಲವನ್ನೂ ನಿರೂಪಿಸಿರುತ್ತಾರೆ. ದರ್ಶನಕಾರರಲ್ಲಿ ಕೆಲವರು ಶ್ರುತಿಯಲ್ಲಿ ದೃಢ ವಿಶ್ವಾಸವುಳ್ಳವರು. ಕೆಲವರು ಮಂದವಿಶ್ವಾಸಿಗಳು. ಕೆಲವರು ಶ್ರುತಿಯನ್ನು ನಂಬದಿರು ವವರು. ಮತಭೇದವುಂಟಾಗಲು ಇದೇ ಕಾರಣವಾಗಿರುತ್ತದೆ.

ಪ್ರತ್ಯಕ್ಷಪ್ರಮಾಣವೊಂದೇ ಮೂಲತತ್ತ್ವಾನುಸಂಧಾನದಲ್ಲಿ ಸರ್ವಾರ್ಥವೆಂದು ಚಾರ್ವಾಕರ ಮತ. ಪ್ರತ್ಯಕ್ಷ ಒಂದೇ ಸಾಲದು, ಅನುಮಾನವೆಂಬ ಪ್ರಮಾಣವನ್ನೂ ಅವಶ್ಯವಾಗಿ ಅಂಗೀಕರಿಸಬೇಕೆಂದು ಪೂರ್ವಮತವನ್ನು ಖಂಡಿಸಿ ತಮ್ಮ ತಮ್ಮ ಸಿದ್ಧಾಂತ ವನ್ನು ಬುದ್ಧಾದಿಗಳು ವ್ಯಕ್ತಪಡಿಸಿದರು. ಇವೆರಡೂ ಶ್ರುತ್ಯನುಸಾರಿಯಾಗಿದ್ದರೆ ಸರಿ ಯಾದ ಪ್ರಮಾಣಗಳಾಗುವುದರಿಂದ ಶ್ರುತಿರೂಪಶಬ್ದ ಪ್ರಮಾಣವೇ ಪ್ರಧಾನವೆಂದೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕಧೀನವಾಗಿ ಇತರ ಪ್ರಮಾಣಗಳೂ ಆವಶ್ಯಕವೆಂದೂ ವೈದಿಕದರ್ಶನಕಾರರ ಮತ. ಹೀಗೆ ಪ್ರಮಾಣತ್ರೈವಿಧ್ಯದಿಂದ ಆಧ್ಯಕ್ಷಿಕ, (ಪ್ರತ್ಯಕ್ಷದಿಂದ ಉಂಟಾದುದು) ತಾರ್ಕಿಕ ಶ್ರೌತವೆಂದು ಸಾಮಾನ್ಯವಾಗಿ ದರ್ಶನಗಳಲ್ಲಿ ಮೂರುಭೇದಗಳನ್ನು ಹೇಳಬಹುದು. ಕಣ್ಣಿದ್ದವರಲ್ಲಿಯೂ ಕೆಲವರು ಅತಿ ದೂರದ ವಸ್ತುವನ್ನು ನೋಡಲು ಸಮರ್ಥರಾಗಿರುತ್ತಾರೆ. ಕೆಲವರು ಸಮೀಪದಲ್ಲಿದ್ದರೆ ಗುರುತಿಸುತ್ತಾರೆ. ಇನ್ನು ಕೆಲವರು ಅತಿಸಮೀಪದ ಪದಾರ್ಥವನ್ನು ಮಾತ್ರ ತಿಳಿಯುತ್ತಾರೆ. ತರ್ಕದಿಂದಲೂ ಹೀಗೆಯೇ ಸೂಕ್ಷ್ಮ, ಸೂಕ್ಷ್ಮತರ, ಸೂಕ್ಷ್ಮತಮ, (ಅತ್ಯಂತಸೂಕ್ಷ್ಮ) ತತ್ತ್ವವನ್ನು ಕಂಡುಹಿಡಿಯುವುದರ ಮೂಲಕ ತಾರ್ಕಿಕರಲ್ಲಿಯೂ ವಿಭಾಗವುಂಟಾಗಿದೆ. ಶ್ರುತಿಯಲ್ಲಿಯೂ ಕೆಲವರು ತೋರತಕ್ಕ ವಾಚ್ಯಾರ್ಥವನ್ನು ತಿಳಿಯಲು ಶಕ್ತರು. ಕೆಲವರು ವ್ಯಂಗ್ಯಾರ್ಥಜ್ಞಾನ ಸಮರ್ಥರು. ಇನ್ನು ಕೆಲವರು ಅತಿರಹಸ್ಯವಾದ ಗೂಢಾರ್ಥವನ್ನು ಅನುಸಂಧಾನಮಾಡಿ ಅಪೂರ್ವತತ್ತ್ವವನ್ನು ಹೊರಗೆಡಹಿದುದರಿಂದ ಶ್ರುತ್ಯನುಯಾಯಿಗಳಲ್ಲಿಯೂ ಭೇದವುಂಟಾಯಿತು. ಹೀಗೆ ತತ್ತ್ವಾನುಸಂಧಾನಕ್ಕೆ ಸಾಧನವಾದ ಒಂದೇ ಪ್ರಮಾಣವನ್ನು ಅಂಗೀಕರಿಸಿದರೂ ಪ್ರತಿಭಾವೈಚಿತ್ರ್ಯದಿಂದ ತತ್ತ್ವಾನ್ವೇಷಣದಲ್ಲಿ ವೈಷಮ್ಯವುಂಟಾಗಿದೆ. ಪ್ರಮಾಣಭೇದದಿಂದ ಭಿನ್ನವಾದ ದರ್ಶನಗಳಲ್ಲಿಯೂ ಪ್ರತ್ಯೇಕವಾಗಿ ಕಂಡುಹಿಡಿಯುವ ತತ್ವಭೇದಗಳಿಂದ ಭೇದ ಪ್ರಸಿದ್ಧವಾಗಿದೆ.

ತತ್ವಜ್ಞಾನದಿಂದಲೇ ಮೋಕ್ಷವೆಂದು ದರ್ಶನಕಾರರ ಸಿದ್ಧಾಂತ. ಬಂಧನಕ್ಕೆ ಪ್ರತಿದ್ವಂದ್ವಿಯಾದುದೇ ಮೋಕ್ಷ. ಇದರ ವಿಷಯದಲ್ಲಿಯೂ ನಾನಾ ಮತಭೇದಗಳಿದ್ದರೂ ಸಂಸಾರ ಕ್ಲೇಶವನ್ನು ತೊರೆದು ನಿರತಿಶಯಸುಖಾವಸ್ಥೆ ಹೊಂದುವುದೆಂಬುದರಲ್ಲಿ ಯಾವ ಅಭಿಪ್ರಾಯ ಭೇದವೂ ಇಲ್ಲ. ಚೇತನಾಚೇತನಗಳ ಸಂಬಂಧವೇ ಬಂಧ. ಅಚೇತನ ಪದಾರ್ಥಗಳು ಅಪರಿಮಿತವಾಗಿದ್ದರೂ ಶರೀರದ ಮೂಲಕವೇ ಅವು ಚೇತನದ ಸಂಬಂಧ ಹೊಂದುತ್ತವೆ. ಆನೆ ಮಾರಿದ ಮೇಲೆ ಅಂಕುಶದಲ್ಲಿ ಅಭಿಲಾಷೆ ತೊರೆದಂತೆ ಚೇತನನಿಗೆ ಶರೀರಸಂಬಂಧವು ನಷ್ಟವಾದಾಗ ಶರೀರದ ಮೂಲಕ ಸಂಬಂಧ ಹೊಂದಿದ ಇತರ ಅಚೇತನಗಳ ಸಂಬಂಧವೂ ಇಲ್ಲದಂತಾಗುತ್ತದೆ. ಪರಮಸುಖಾಭಿಲಾಷಿಯಾದವನು ಪೂರ್ವೋಕ್ತವಾದ ಸಂಬಂಧತ್ಯಾಗದಲ್ಲಿ ಅಧಿಕವಾಗಿ ಪ್ರಯತ್ನಿಸಬೇಕು. ಸಂಬಂಧ ವಿನಾಶವಾಗಬೇಕಾದರೆ ಮೊದಲು ಅಚೇತನ ಪ್ರಪಂಚದ ತತ್ತ್ವಗಳನ್ನು ತಿಳಿದಿರಬೇಕು. ಚೇತನನಿಗೆ ಇವುಗಳ ಸಂಬಂಧವಾದುದು ಹೇಗೆ ? ಯಾವಾಗ ಉಂಟಾಯಿತು ಇತ್ಯಾದಿ ವಿಚಾರವನ್ನು ಮಾಡಬೇಕಾಗುತ್ತದೆ. ಸಂಸಾರವು ಅನಾದಿಯಾದುದರಿಂದ ಯಾವಾಗ ಈ ಸಂಬಂಧ ಬಂದಿದೆಯೆಂದಾಗಲೀ ಹೇಗೆ ಸಂಬಂಧವುಂಟಾಯಿತೆಂದಾಗಲೀ ತಿಳಿಯುವುದು ಅಸಾಧ್ಯ. ಇದನ್ನೆಲ್ಲಾ ಮಾಡಿದವನೊಬ್ಬನಿದ್ದಾನೆ. ಅವನು ಈಶ್ವರನೇ ಇರಲಿ ಅಥವಾ ಒಂದು ಅನಿರ್ವಾಚ್ಯವಾದ ಶಕ್ತಿಯಿರಲಿ. ಇದನ್ನೆಲ್ಲಾ ಪರಸ್ಪರವಾಗಿ ಯೋಜನೆ ಮಾಡಿದವನೊಬ್ಬನಿದ್ದಾನೆ ಎಂದು ಎಲ್ಲರೂ ಹೇಳುತ್ತಾರೆ. ಚೇತನಾಚೇತನಗಳ ಮೂಲತತ್ತ್ವಗಳನ್ನು ಚೆನ್ನಾಗಿ ತಿಳಿದರೆ ಆಗ ಅವುಗಳಿಗುಂಟಾದ ಸಂಬಂಧವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಗಾದರೂ ತಿಳಿಯಬಹುದು. ಆ ಸಂಬಂಧವನ್ನು ದೂರೀಕರಿಸಿ ಉತ್ತಮಸುಖ ಹೊಂದಬೇಕಾದರೆ ಪದಾರ್ಥತತ್ತ್ವಜ್ಞಾನವನ್ನು ಮೊದಲು ತಿಳಿದಿರಬೇಕು.

ಪರಮಸುಖವನ್ನು ಬಯಸುವವನು ಮೊದಲು ಮೋಕ್ಷಸ್ವರೂಪವೇನು ? ಅದರ ಉಪಾಯಗಳು ಯಾವುವು ? ಅದಕ್ಕೆ ಪ್ರತಿಬಂಧಕವಾದ ಬಂಧನದ ಸ್ವರೂಪವೇನು ? ಅದರ ಕಾರಣಗಳು ಯಾವುವು ? ಹೀಗೆ ನಾಲ್ಕು ರೀತಿಯಾಗಿ ವಿಚಾರಿಸಿ ತಿಳಿಯಬೇಕು. ಮೂಲತತ್ತ್ವಾನ್ವೇಷಣವನ್ನು ಒಬ್ಬ ದರ್ಶನಕಾರನು ಮಾಡಿದಮೇಲೆ ಇತರರು ಆ ವಿಷಯದಲ್ಲಿ ಪ್ರಯತ್ನಿಸಿದುದೇಕೆಂಬ ಶಂಕೆ ಬರಬಹುದು. ಮೂಲತತ್ತ್ವಾನ್ವೇಷಣದಲ್ಲಿಯೂ ಯಾವ ದಾರ್ಶನಿಕರಿಗೂ ಸಾಮರಸ್ಯ ಕಂಡುಬರುವುದಿಲ್ಲ. ಇದಕ್ಕೆ ಪಂಡಿತರು ಹೀಗೆ ಸಮಾಧಾನ ಹೇಳುತ್ತಾರೆ. ಒಬ್ಬೊಬ್ಬನ ಬುದ್ಧಿಯೂ ಭಿನ್ನಭಿನ್ನವಾಗಿರುತ್ತದೆ. ಹೀಗಿರುವಾಗ ಒಬ್ಬನು ಹೇಳಿದ ತತ್ತ್ವವನ್ನು ಪಂಡಿತನಾದವನು ಇನ್ನೊಬ್ಬನು ಅಂಗೀಕರಿಸುವುದು ಹೇಗೆ ? ಮತಿಭೇದವನ್ನು ಅವರು ಹೀಗೆ ಹೇಳಿರುತ್ತಾರೆ.

ಚೇತನಾನಾಂ ತಥೈವಾಚೇತನಾನಾಂ ತತ್ತ್ವಸಂಜ್ಞಿತಮ್ ।
ಯಥಾ ಯಥಾ ಯೇನ ಮೂಲಸ್ವರೂಪಮನುಸಂಹಿತಮ್ ॥

ತಥಾ ತಥಾ ಬುದ್ಧಿಸೌಕ್ಷ್ಮ್ಯತಾರತಮ್ಯಾದ್ಯಥೋತ್ತರಮ್ ।
ಚಾರ್ವಾಕಾದಿಷು ವಿಜ್ಞೇಯಂ ಜ್ಯಾಯಸ್ತ್ವಂ ತತ್ತ್ವದರ್ಶಿಷು ॥

ಚೇತನಾಚೇತನಗಳ ಮೂಲಸ್ವರೂಪವನ್ನೇ ತತ್ತ್ವವೆಂದು ಕರೆಯುತ್ತಾರೆ. ಅವರವರ ಬುದ್ಧಿಶಕ್ತಿಗನುಸಾರವಾಗಿ ಪದಾರ್ಥತತ್ತ್ವಾನ್ವೇಷಣವನ್ನು ಮಾಡಿ ತಮ್ಮ ಸಿದ್ಧಾಂತವನ್ನು ಅವರು ವ್ಯಕ್ತಪಡಿಸಿರುತ್ತಾರೆ. ಪ್ರಮಾಣಾನುಸಾರವಾಗಿಯೂ ಮತಿಭೇದವುಂಟಾಗಿದೆಯೆಂದು ಹಿಂದೆ ಹೇಳಿದೆ. ಪ್ರತ್ಯಕ್ಷ, ಅನುಮಾನ, ಶಬ್ದವೆಂದು ಮೂರು ಪ್ರಮಾಣಗಳು ಮುಖ್ಯವಾಗಿವೆ. ಪ್ರತ್ಯಕ್ಷಪ್ರಮಾಣವನ್ನು ಸಕಲದಾರ್ಶನಿಕರು ಅಂಗೀಕರಿಸಿದ್ದರೂ ಕೆಲವರು ಅದೊಂದೇ ಪ್ರಮಾಣವೆಂದು ಅದರಿಂದ ತಮ್ಮ ಸಿದ್ಧಾಂತವನ್ನು ಪ್ರಕಾಶಪಡಿಸಿರುತ್ತಾರೆ. ಇವರಿಗೆ 'ಆಧ್ಯಕ್ಷಿಕ' ರೆಂದು ಹೆಸರು. ಚಾರ್ವಾಕದರ್ಶನ ಇವರಿಂದ ಬಂದಿದೆ. ತರ್ಕಸಹಾಯದಿಂದ ಪರೋಕ್ಷವಾದ ವಸ್ತುವನ್ನೂ ಕಂಡುಹಿಡಿದು ಮೂಲತತ್ತ್ವಾನ್ವೇಷಣ ಮಾಡಿದವರಿಗೆ ತಾರ್ಕಿಕರೆಂದು ಹೆಸರು. ಇವರಲ್ಲಿಯೂ ಶ್ರುತಿಪ್ರಮಾಣವನ್ನು ಅಂಗೀಕರಿಸದವರು ನಾಸ್ತಿಕರು. ಅದನ್ನು ಅಂಗೀಕರಿಸಿ ಪರಲೋಕವಿದೆಯೆಂದು ಹೇಳಿದವರು ಆಸ್ತಿಕ ತಾರ್ಕಿಕರು. ಈ ಎರಡು ಪ್ರಮಾಣಗಳನ್ನೂ ಅಪ್ರಧಾನವಾಗಿ ಅಂಗೀಕರಿಸಿ ಕೇವಲ ಶ್ರುತಿರೂಪಶಬ್ದಪ್ರಮಾಣದಿಂದ ತತ್ತ್ವಾನ್ವೇಷಣ ಮಾಡಿ ಸಿದ್ಧಾಂತವನ್ನು ಹೇಳಿದವರು ಶ್ರೌತದಾರ್ಶನಿಕರು.

ಪ್ರತ್ಯಕ್ಷಪ್ರಮಾಣವೊಂದನ್ನೇ ಅಂಗೀಕರಿಸಿದ ಚಾರ್ವಾಕದರ್ಶನದಲ್ಲಿ ಪೃಥಿವೀ, ಅಪ್ (ಜಲ) ತೇಜ, ವಾಯುಗಳೆಂದು ನಾಲ್ಕೇ ತತ್ತ್ವಗಳು. ಸ್ವಾತಂತ್ರ್ಯ ಅಥವಾ ಮೃತ್ಯುವೇ ಮೋಕ್ಷ. ೨) ಬೌದ್ಧದರ್ಶನದಲ್ಲಿ ಮಾಧ್ಯಮಿಕರೆಂಬ ಒಂದು ಪಂಗಡದವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆತ್ಮೋಚ್ಛೇದವೇ ಮೋಕ್ಷವೆಂದು ಹೇಳುತ್ತಾರೆ. ಸೌತ್ರಾಂತಿಕ ಮುಂತಾದ ಇತರ ಸಂಗಡದವರು ನಿರ್ಮಲಜ್ಞಾನೋದಯವನ್ನು ಮೋಕ್ಷವೆಂದು ಅಂಗೀಕರಿಸಿರುತ್ತಾರೆ. ೩) ಜೈನದರ್ಶನದಲ್ಲಿ ಜೀವನಿಗೆ ಕರ್ಮನಿಮಿತ್ತವಾಗಿ ಶರೀರವೆಂಬ ಆವರಣ ಬಂದಿರುತ್ತದೆ. ಶರೀರಾವರಣ ನಷ್ಟವಾದೊಡನೆ ಸತತವಾಗಿ ಜೀವನ ಊರ್ಧ್ವಗಮನವೇ ಮೋಕ್ಷ. ೪) ರಾಮಾನುಜದರ್ಶನ—ಸರ್ವಕರ್ತೃತ್ವವೊಂದು ಧರ್ಮವನ್ನು ಬಿಟ್ಟು. ಉಳಿದ ಸರ್ವಜ್ಞತ್ವಾದಿ ಪರಮಾತ್ಮನ ಗುಣಗಳನ್ನು ಹೊಂದಿ ಭಗವತ್ಸ್ವರೂಪವನ್ನು ಅನುಭವಿಸುವುದೇ ಮೋಕ್ಷ. ೫) ಜಗತ್‌ಕರ್ತೃತ್ವ, ಲಕ್ಷ್ಮೀಪತಿತ್ವ, ಶ್ರೀವತ್ಸಾದಿಗಳ ಪ್ರಾಪ್ತಿ ಇಲ್ಲದ ದುಃಖಮಿಶ್ರಿತವಾಗದಿರುವ ಪೂರ್ಣಸುಖವೇ ಮೋಕ್ಷವೆಂದು ಪೂರ್ಣಪ್ರಜ್ಞದರ್ಶನದ ಸಿದ್ಧಾಂತ. (ಮಧ್ವಾಚಾರ್ಯರ ಸಿದ್ಧಾಂತ). ೬) ನಕುಲೀಶಪಾಶುಪತದರ್ಶನ — ಪರಮೈಶ್ವರ್ಯಪ್ರಾಪ್ತಿಯೇ ಮೋಕ್ಷ. ೭) ಶಿವತ್ವಪ್ರಾಪ್ತಿಯೇ ಮೋಕ್ಷವೆಂದು ಶೈವದರ್ಶನದ ಸಿದ್ಧಾಂತ. ೮) ಪೂರ್ಣಾತ್ಮತ್ವಲಾಭವೆ ಮೋಕ್ಷವೆಂದು ಪ್ರತ್ಯಭಿಜ್ಞಾದರ್ಶನವಾದಿಗಳ ಮತ. ೯) ರಸೇಶ್ವರದರ್ಶನ — ಪಾದರಸದಿಂದ ದೇಹಸ್ಥೈರ್ಯವುಂಟಾದಾಗ ಜೀವನ್ಮುಕ್ತಿಯೇ ಮೋಕ್ಷ. ೧೦) ಅಶೇಷವಿಶೇಷಗುಣಗಳ ಉಚ್ಛೇದ. (ನಾಶ)ವೇ ಮೋಕ್ಷವೆಂದು ವೈಶೇಷಿಕದರ್ಶನ ಮತ. ೧೧) ನ್ಯಾಯದರ್ಶನದಲ್ಲಿ ಆತ್ಯಂತಿಕವಾದ ದುಃಖನಿವೃತ್ತಿಯೇ ಮೋಕ್ಷ. ಇವರಲ್ಲಿ ಕೆಲವರು ಕೇವಲ ದುಃಖ ನಿವೃತ್ತಿಯಲ್ಲದೆ ಸುಖವೂ ಇದೆಯೆಂದು ಹೇಳುತ್ತಾರೆ. ೧೨) ಮೀಮಾಂಸಾದರ್ಶನ—ಯಾಗಾದಿಗಳಿಂದ ಸ್ವರ್ಗಪ್ರಾಪ್ತಿಯೇ ಮೋಕ್ಷ. ೧೩) ಮೂಲ ಚಕ್ರದಲ್ಲಿರುವ ಪರಾ ಎಂಬ ಹೆಸರುಳ್ಳ ಶಬ್ದಬ್ರಹ್ಮದ ಸಾಕ್ಷಾತ್ಕಾರವೇ ಮೋಕ್ಷವೆಂದು ಪಾಣಿನಿ ದರ್ಶನ. ೧೪) ಪ್ರಕೃತಿ ಸಂಬಂಧ ಹೋಗಿ ಪುರುಷನ ಸ್ವಸ್ವರೂಪದಿಂದ ಇರುವುದೇ ಮೋಕ್ಷವೆಂದು ಸಾಂಖ್ಯದರ್ಶನ ಸಿದ್ಧಾಂತ. ೧೫) ಚಿತ್‌ಶಕ್ತಿಯು ನಿರುಪಾಧಿಕಸ್ಥಿತಿಯಿಂದ ಇರುವುದೇ ಮೋಕ್ಷವೆಂದು ಪಾತಂಜಲದರ್ಶನ, ೧೬) ಅಜ್ಞಾನನಿವೃತ್ತಿಯಾದಾಗ ಸ್ವಸ್ವರೂಪ ತಿಳಿಯುವುದೇ ಅದ್ವೈತ ವೇದಾಂತದರ್ಶನದ ಸಿದ್ಧಾಂತ.

ಸುಖಪದವಾದ ಈ ಮೋಕ್ಷವನ್ನು ಪಡೆಯಲು ಮೊದಲು ಪದಾರ್ಥಾನುಸಂಧಾನವು ಆವಶ್ಯಕವೆಂದು ಆಯಾಯದರ್ಶನಕಾರರು ತಮ್ಮಕ್ಕೇ ಆದ ರೀತಿಯಿಂದ ತತ್ವವಿವರಣೆಮಾಡಿರುತ್ತಾರೆ. ಹೀಗೆ ದರ್ಶನಗಳ ಉದ್ದೇಶ, ಸ್ವರೂಪ, ಪ್ರಯೋಜನಗಳನ್ನು ಸಂಕ್ಷೇಪವಾಗಿ ತಿಳಿಸಿರುತ್ತೇನೆ.

ಪ್ರಕೃತ ಈ 'ಸರ್ವದರ್ಶನಸಂಗ್ರಹ' ವನ್ನು ಕನ್ನಡದಲ್ಲಿ ತರಲು ಪ್ರೋತ್ಸಾಹವಿತ್ತವರು ದಿ|| ಶ್ರೀಯಾಮುನಾಚಾರ್ಯರು. ಪುಸ್ತಕ ಮುಗಿದೊಡನೆ ತಿಳಿಸಿದರೆ ಅದರ ಮುದ್ರಣವನ್ನು ಯೂನಿವರ್ಸಿಟಿಯವರ ಮೂಲಕವಾಗಲೀ ಇತರಯೋಜನೆಯಿಂದಾಗಲೀ ಏರ್ಪಾಡು ಮಾಡೋಣವೆಂದು ಭರವಸೆ ಕೊಟ್ಟಿದ್ದರು. ನನ್ನ ದುರದೃಷ್ಟದಿಂದ ಅದು ನೆರವೇರಲಿಲ್ಲ. ಅವರು ಹೇಳಿದ ಮಾತನ್ನೂ ನಮೂದಿಸಿ ಮೈಸೂರು ಯೂನಿವರ್ಸಿಟಿ ಸಂಬಂಧವಾದ ಅಧ್ಯಯನ ಸಂಸ್ಥೆಯ ಅಧಿಕಾರಿಗಳಿಗೆ ಪ್ರಾರ್ಥನಾಪತ್ರ ಸಮರ್ಪಿಸಿದಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರು "ಇಲ್ಲಿ ಟೆಕ್ಸ್ಟ್ ಸಂಬಂಧವಾದವುಗಳನ್ನು ಮಾತ್ರ ಮುದ್ರಿಸುವುದಲ್ಲದೆ ಇತರ ಗ್ರಂಥಗಳಿಗೆ ಅವಕಾಶವಿಲ್ಲದುದರಿಂದ ವಿಷಾದದಿಂದ ವಾಪಸುಮಾಡಿದೆ" ಎಂದು ನನಗೆ ಕಳುಹಿಸಿದರು. ಮೈಸೂರು ಯೂನಿವರ್ಸಿಟಿ ಸಂಸ್ಕೃತ M. A ಗೆ ಪ್ರತಿವರ್ಷವೂ ಒಂದೊಂದು ದರ್ಶನವನ್ನು ಪಠ್ಯವಾಗಿಟ್ಟಿರುವಾಗ ಅವರು ಹಾಗೇಕೆ ಬರೆದರೋ ತಿಳಿಯದು. ಪ್ರಕೃತ ಕಳೆದವರ್ಷ ಮೈಸೂರಿನ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಗೆ ಇದರ ಸಹಾಯಕ್ಕಾಗಿ ಪ್ರಾರ್ಥಿಸಿಕೊಂಡಾಗ ಅಲ್ಲಿನ ಡೆಪ್ಯುಟಿ ಡೈರೆಕ್ಟರಾದ ಶ್ರೀ ಡಾ. N. S. ಅನಂತರಂಗಾಚಾರ್ಯರು ಮುದ್ರಣವಾದ ಮೇಲೆ ೫೦ ಪುಸ್ತಕಗಳನ್ನು ಕೊಡಬೇಕೆಂಬ ಶರತ್ತಿನಿಂದ ೨ ಸಾವಿರ ರೂ. ಸಹಾಯಧನವನ್ನು ಮಂಜೂರುಮಾಡಿಸಿ ಪ್ರೋತ್ಸಾಹವಿತ್ತರು. ಇದರಿಂದ ಆ ಸಂಸ್ಥೆಗೂ ಶ್ರೀ ಡಾ. N. S ಅನಂತರಂಗಾಚಾರ್ಯರಿಗೂ ಕೃತಜ್ಞನಾಗಿ ಹಾರ್ದಿಕ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ಸಂಸ್ಕೃತಾಭಿವೃದ್ಧಿಗಾಗಿ ಡೆಲ್ಲಿಯಲ್ಲಿರುವ ಸ್ಪೆಷಲ್ ಸಂಸ್ಕೃತ ಆಫೀಸಿಗೆ ಪ್ರಾರ್ಥನಾಪಾತ್ರ ಸಲ್ಲಿಸಿರುತ್ತೇನೆ. ಅಲ್ಲಿಂದ ಸಹಾಯಧನ ದೊರೆಯಬಹುದೆಂಬ ಆಶಾಭಾವನೆಯಲ್ಲಿದ್ದೇನೆ. ಅನೇಕ ಸಹೃದಯರೂ, ಮಿತ್ರರೂ, ಶಿಷ್ಯರೂ ಪುಸ್ತಕಕ್ಕೆ ಮುಂಗಡವಾಗಿ ಹಣಕೊಟ್ಟು ಸಹಾಯ ಮಾಡಿರುತ್ತಾರೆ. ಇದನ್ನು ಸ್ಮರಿಸಬೇಕಾದುದು ನನ್ನ ಕರ್ತವ್ಯ.

ದ್ವಿತೀಯ ಭಾಗವನ್ನು ಮುದ್ರಿಸಿಕೊಟ್ಟ 'ಮಂಗಳೂರು ಪ್ರಿಂಟರ್ಸ್' ಮಾಲಿಕರಿಗೆ ಕೃತಜ್ಞನಾಗಿರುತ್ತೇನೆ. ಮುಖ್ಯವಾಗಿ ಈ ಇದರ ಮುದ್ರಣ ಕಾರ್ಯವನ್ನು ಬಹು ಬೇಗ ಪೂರ್ಣವಾಗಿ ನೆರವೇರಿಸಿ, ಕಾಗದ ಹಣ ಮುಂತಾದ ಸಕಲ ವಿಧದಿಂದಲೂ ಸಹಾಯ ಮಾಡಿದ 'ಮಂಗಳೂರು ಪ್ರಿಂಟರ್ಸ್' ಮಾಲಿಕರಾದ ಶ್ರೀ ಶ್ರೀಪತಿರಾವ್ ಮಾರ್ಪಳ್ಳಿಯವರಿಗೆ ನಾನು ಎಷ್ಟು ಅಭಿನಂದನೆ ಸಲ್ಲಿಸಿದರೂ ಅದು ಅಲ್ಪವಾಗುತ್ತದೆ. ಅವರಿಗೆ ಪರಮಾತ್ಮನು ಆಯುರಾರೋಗ್ಯ ಭಾಗ್ಯ ಸಂಪತ್ತನ್ನು ಕೊಟ್ಟು ಶ್ರೇಯಸ್ಸನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಈ ಪುಸ್ತಕವು ಕರ್ನಾಟಕದಲ್ಲಿ ಪ್ರಕಾಶಿತವಾಗಿ ಕರ್ನಾಟಕ ಬಂಧುಗಳಿಗೆ ಜ್ಞಾನಸಾಧಕವಾಗಲೆಂದು ಪರಬ್ರಹ್ಮಸ್ವರೂಪಿಯಾದ ಕೃಷ್ಣಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಮೈಸೂರು. ಸಜ್ಜನವಿಧೇಯ

ತಾ ೧೦-೧೧-೭೩ ಜಿ. ವಿಷ್ಣುಮೂರ್ತಿ ಭಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಾನುಕ್ರಮಣಿಕಾ

ಭಾಗ ೨

೧.	(೧೦)	ವೈಶೇಷಿಕ(ಔಲೂಕ್ಯ)ದರ್ಶನ	೧
೨.	(೧೧)	ನೈಯಾಯಿಕ (ಅಕ್ಷಪಾದ)ದರ್ಶನ	೨೫
೩.	(೧೨)	ಜೈಮಿನಿದರ್ಶನ	೭೨
೪.	(೧೩)	ಪಾಣಿನಿದರ್ಶನ	೧೧೮
೫.	(೧೪)	ಸಾಂಖ್ಯದರ್ಶನ	೧೫೦
೬.	(೧೫)	ಯೋಗ(ಪಾತಂಜಲ)ದರ್ಶನ	೧೭೬
೭.	(೧೬)	ಶಾಂಕರದರ್ಶನ	೨೫೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

|| ಶ್ರೀಃ ||

ಅಥೌಲೂಕ್ಯ (ವೈಶೇಷಿಕ) ದರ್ಶನಮ್ || ೧೦ ||

ಇಹ ಖಲು ನಿಖಿಲಪ್ರೇಕ್ಷಾವಾನ್ನಿಸರ್ಗಪ್ರತಿಕೂಲವೇದನೀಯತಯಾ ನಿಖಿಲಾತ್ಮಸಂವೇದನಸಿದ್ಧಂ ದುಃಖಂ ಜಿಹಾಸುಸ್ತದ್ಧಾನೋಪಾಯಂ ಜಿಜ್ಞಾಸುಃ ಪರಮೇಶ್ವರಸಾಕ್ಷಾತ್ಕಾರಮುಪಾಯಮಾಕಲಯತಿ ||

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ |
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ||

ಇತ್ಯಾದಿವಚನನಿಚಯಪ್ರಾಮಾಣ್ಯಾತ್ | ಪರಮೇಶ್ವರಸಾಕ್ಷಾತ್ಕಾರಶ್ಚ ಶ್ರವಣಮನನಭಾವನಾಭಿರ್ಭಾವನೀಯಃ | ಯದಾಹ—

ಆಗಮೇನಾನುಮೇನ ಧ್ಯಾನಾಭ್ಯಾಸಬಲೇನ ಚ |
ತ್ರಿಧಾ ಪ್ರಕಲ್ಪಯನ್ಪ್ರಜ್ಞಾಂ ಲಭತೇ ಯೋಗಮುತ್ತಮಮ್ ||

ಇತಿ

ತತ್ರ ಮನನಮನುಮಾನಾಧೀನಮ್ | ಅನುಮಾನಂ ಚ ವ್ಯಾಪ್ತಿಜ್ಞಾನಾಧೀನಮ್ | ವ್ಯಾಪ್ತಿಜ್ಞಾನಂ ಚ ಪದಾರ್ಥವಿವೇಕಸಾಪೇಕ್ಷಮ್ | ಅತಃ ಪದಾರ್ಥಷಟ್ಕಂ — ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ (ಕ. ಸೂ. ೧-೧-೧) ಇತ್ಯಾದಿಕಾಯಾಂ ದಶಲಕ್ಷಣ್ಯಾಂ ಕಣಭಕ್ಷೇಣ ಭಗವತಾ ವ್ಯವಸ್ಥಾಪಿತಮ್ ||

ಔಲೂಕ್ಯದರ್ಶನವು ಕಣಾದದರ್ಶನ, ವೈಶೇಷಿಕದರ್ಶನಪದಗಳಿಂದ ಪ್ರಸಿದ್ಧವಾಗಿದೆ. ಕಣಾದಮುನಿಯು ಈ ದರ್ಶನದ ಸೂತ್ರಗಳನ್ನು ರಚಿಸಿರುತ್ತಾನೆ. ಇವರು ಕಪೋತವೃತ್ತಿಯಿಂದ ಅಂದರೆ ಹೊಲ ಗದ್ದೆ ದಾರಿಗಳಲ್ಲಿ ಬಿದ್ದಿರುವ ಧಾನ್ಯಕಣಗಳನ್ನು ಆರಿಸಿ ಅದರಿಂದ ಜೀವನ ನಡೆಸಿದುದರಿಂದ ಇವರಿಗೆ ಕಣಾದ, ಕಣಭಕ್ಷ ಎಂಬ ಹೆಸರು ಬಂದಿದೆ. ಕಶ್ಯಪಗೋತ್ರೋತ್ಪನ್ನನಾದ ಇವನು ಉಲೂಕ ಋಷಿಯ ಮಗನಾದುದರಿಂದ ಔಲೂಕ್ಯನೆಂದೂ ಪ್ರಸಿದ್ಧನಾಗಿರುತ್ತಾನೆ. ತಪೋನಿರತನಾಗಿರುವಾಗ ಇವನಿಗೆ ಈಶ್ವರನು ಉಲೂಕ(ಗೂಬೆ)ರೂಪಧಾರಿಯಾಗಿ ಆರು ಪದಾರ್ಥಗಳನ್ನು ಉಪದೇಶಿಸಿರುವುದರಿಂದ ಇವನ ದರ್ಶನಕ್ಕೆ ಔಲೂಕ್ಯ ದರ್ಶನವೆಂಬ ಪ್ರಸಿದ್ಧಿ ಬಂದಿದೆಯೆಂದು ಐತಿಹ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನೂ ಹೇಳುತ್ತಾರೆ. ಗೌತಮರು ನ್ಯಾಯಶಾಸ್ತ್ರದಲ್ಲಿ ಪ್ರಮಾಣಾದಿ ಷೋಡಶಪದಾರ್ಥಗಳ ತತ್ತ್ವಜ್ಞಾನದಿಂದ ಮೋಕ್ಷವೆಂದು ಪ್ರತಿಪಾದಿಸಿರುತ್ತಾರೆ. ಕಣಾದರಿಗೆ ಇದು ಸಂಮತವಾದರೂ ಪದಾರ್ಥವಿಭಾಗಗಳನ್ನು ವಿಶೇಷರೀತಿಯಿಂದ ತೋರಿಸಿರುತ್ತಾರೆ. ಧರ್ಮಿಪದಾರ್ಥಗಳು ಯಾವುವು ? ಅವು ಎಷ್ಟು ವಿಧ ? ಧರ್ಮಗಳು ಯಾವುವು? ಅವು ಎಷ್ಟು ವಿಧ ? ಎಂದು ಮೊದಲು ಅಸಂಕೀರ್ಣವಾಗಿ ತಿಳಿಯಬೇಕು. ಇಲ್ಲವಾದರೆ ಸಾಧರ್ಮ್ಯ ವೈಧರ್ಮ್ಯ ವಿಜ್ಞಾನವು ಸ್ಪಷ್ಟವಾಗಿ ತಿಳಿಯದಿರುವುದರಿಂದ ತನ್ಮೂಲಕವಾಗಿ ಅವಶ್ಯ ತಿಳಿಯಬೇಕಾದ ಸಾಹಚರ್ಯನಿಯಮರೂಪವಾದ ವ್ಯಾಪ್ತಿಜ್ಞಾನವುಂಟಾಗಲಾರದು. ಇದಕ್ಕೋಸ್ಕರ ಅವರು ದ್ರವ್ಯಾದಿಪದಾರ್ಥಗಳನ್ನು ಮೊದಲು ಹೇಳಿ ಆಮೇಲೆ ದ್ರವ್ಯಾದಿಗಳ ಸ್ವರೂಪ ಮತ್ತು ಅವುಗಳ ಗುಣಾದಿಗಳನ್ನೂ ಸುವ್ಯವಸ್ಥೆಯಿಂದ ನಿರೂಪಿಸಿರುತ್ತಾರೆ. ಈ ವಿಶೇಷವನ್ನಾಶ್ರಯಿಸಿ ಪ್ರವರ್ತಿಸಿರುವುದರಿಂದಲೇ ಈ ಶಾಸ್ತ್ರಕ್ಕೆ ವೈಶೇಷಿಕವೆಂಬ ಹೆಸರು ಬಂದಿದೆ. ಪ್ರತ್ಯಕ್ಷ, ಅನುಮಾನವೆಂದು ಇವರಲ್ಲಿ ಎರಡೇ ಪ್ರಮಾಣಗಳು. ಕೆಲವರು ಶಬ್ದವೂ ಸೇರಿ ಮೂರೆಂದು ಹೇಳುತ್ತಾರೆ. (ವ್ಯೋಮಶಿವಾಚಾರ್ಯ ಮುಂತಾದವರು) ಇತರ ಪ್ರಮಾಣಗಳೆಲ್ಲವೂ ಅನುಮಾನದಲ್ಲಿ ಸೇರುತ್ತವೆಂದೂ, ಅನುಪಲಬ್ಧಿಯೂ ಪ್ರತ್ಯಕ್ಷದಲ್ಲಿ ಸೇರುವುದೆಂದೂ ಇವರ ಸಿದ್ಧಾಂತ.

'ಇಹ' — ಇತಿ. ಈ ಜಗತ್ತಿನಲ್ಲಿ ಸಕಲ ವಿಚಾರಶೀಲನು ಸ್ವಾಭಾವಿಕವಾಗಿ ಪ್ರತಿಕೂಲವೇದ್ಯ (ಇದು ಬೇಡವೆಂಬ ಅನುಭವ) ವಾದುದರಿಂದ, ಎಲ್ಲಾ ಜೀವಾತ್ಮರ ಅನುಭವಸಿದ್ಧವಾದ ದುಃಖವನ್ನು ಬಿಡಲು ಬಯಸುವವನಾಗಿ,, ಅದನ್ನು ತ್ಯಜಿಸುವ ಉಪಾಯವನ್ನು ತಿಳಿಯಲು ಬಯಸಿ ಅಂತ್ಯದಲ್ಲಿ ಪರಮೇಶ್ವರನ ಪ್ರತ್ಯಕ್ಷವೊಂದನ್ನೇ ಉಪಾಯವನ್ನಾಗಿ ನಿಶ್ಚಯಿಸುತ್ತಾನೆ.

ಪ್ರತಿಕೂಲಜ್ಞಾನ ವಿಷಯವಾದುದೇ ದುಃಖ. ವಿಚಾರಶೀಲನು ಪ್ರತಿಯೊಬ್ಬನೂ ಈ ದುಃಖವನ್ನು ಹೇಗಾದರೂ ಹೋಗಲಾಡಿಸಿಕೊಳ್ಳಬೇಕೆಂದು ಬಯಸುತ್ತಾನೆ. ಸ್ವಭಾವದಿಂದ ದುಃಖ ನನಗೆ ಬೇಡವೆಂಬ ಅನುಭವ ಸಕಲಜೀವಿಗಳಿಗೂ ಇರುತ್ತದೆ. ದುಃಖವನ್ನು ಹೋಗಲಾಡಿಸಿಕೊಳ್ಳುವ ಉಪಾಯವೆಂದರೆ ಪರಮಾತ್ಮನ ಸಾಕ್ಷಾತ್ಕಾರ ಒಂದೇ ಅಲ್ಲದೆ ಇನ್ನು ಯಾವ ಮಾರ್ಗವೂ ಇಲ್ಲ. 'ತಮೇವಂ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಯನಾಯ' (ಶ್ವೇ ೩೧೮) ಎಂದು ಶ್ರುತಿಯೂ ಇದೇ ಅರ್ಥವನ್ನು ಹೇಳುತ್ತದೆ.

'ಯದಾ' — ಇತಿ. ಯಾವಾಗ ಮನುಷ್ಯರು ಚರ್ಮದಂತೆ ಆಕಾಶವನ್ನು ಮಡಚುತ್ತಾರೋ ಆಗ ಶಿವನನ್ನು ತಿಳಿಯದೆ ದುಃಖದ ಕೊನೆ ಹೊಂದುವುದು' ಇತ್ಯಾದಿ ವಚನ ಸಮೂಹ ಪ್ರಾಮಾಣ್ಯವಿರುವುದರಿಂದ (ಸಾಕ್ಷಾತ್ಕಾರವೊಂದೇ ಉಪಾಯವೆಂದರ್ಥ.) ಚರ್ಮ ಸುತ್ತಿದಂತೆ ಆಕಾಶವನ್ನು ಸುತ್ತುವುದು ಯಾರಿಂದಲೂ ಸಾಧ್ಯವಿಲ್ಲ, ಈಶ್ವರಜ್ಞಾನವಿಲ್ಲದೆ ಬೇರೆ ಯಾವ ಉಪಾಯಗಳಿಂದಲೂ ದುಃಖನಾಶವು ಸಾಧ್ಯವಾಗಲಾರದು. ಆಕಾಶವನ್ನು ಮಡಚುವುದೂ ಶಿವಜ್ಞಾನವಿಲ್ಲದೆ ಇತರೋಪಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ದುಃಖನಾಶ ಹೊಂದುವುದೂ ಒಂದೆಂದುದರಿಂದ ಎರಡೂ ಅಸಾಧ್ಯವೆಂದು ವ್ಯಕ್ತ ವಾಗುತ್ತದೆ.

'ಪರಮೇಶ್ವರ' — ಇತಿ ಶ್ರವಣ, ಮನನ, ನಿಧಿಧ್ಯಾಸನಗಳಿಂದ ಈಶ್ವರ ಸಾಕ್ಷಾತ್ಕಾರವನ್ನು ಹೊಂದಬೇಕು. ಇದನ್ನೇ ಪ್ರಮಾಣದಿಂದ ಸ್ಥಿರಪಡಿಸುತ್ತಾನೆ. 'ಆಗಮೇ' — ಇತಿ. ಶಾಸ್ತ್ರದಿಂದ (ಅಂದರೆ ಗುರುಮುಖದಿಂದ ಶಾಸ್ತ್ರ ಶ್ರವಣ ದಿಂದಲೂ) ಅನುಮಾನದಿಂದಲೂ, ಧ್ಯಾನ ಮತ್ತು ಅಭ್ಯಾಸಬಲದಿಂದಲೂ ಹೀಗೆ ಮೂರು ರೀತಿಯಿಂದ ತನ್ನ ಬುದ್ಧಿಯನ್ನು ಈಶ್ವರವಿಷಯಕವಾಗಿ ಮಾಡುತ್ತಾ ಉತ್ತಮ ಯೋಗವನ್ನು ಹೊಂದುತ್ತಾನೆ ಎಂದರ್ಥ. ಗುರುವಿನಿಂದ ಈಶ್ವರನ ಸ್ವರೂಪ ಮತ್ತು ಗುಣಗಳನ್ನು ಶಾಸ್ತ್ರದಿಂದ ಕೇಳಿ ತಿಳಿದುಕೊಳ್ಳುವುದು ಶ್ರವಣ (ಆಗಮ). ಕೇಳಿ ತಿಳಿದ ಅರ್ಥವು ಬುದ್ಧಿಯಲ್ಲಿ ನಿಶ್ಚಿತವಾಗಿರಲು ಅನುಮಾನಾದಿಗಳಿಂದ ಯುಕ್ತಿಪೂರ್ವಕವಾಗಿ ಚಿಂತಿಸುವುದೇ ಮನನ. ಅದು ಬುದ್ಧಿಯಲ್ಲಿ ದೃಢವಾಗಿ ನಿಲ್ಲಲು ಧ್ಯಾನಾಭ್ಯಾಸಗಳಿಂದ ಪುನಃ ಪುನಃ ಇತರ ಯಾವ ಯೋಚನೆಯಿಲ್ಲದೆ ಭಾವಿಸುವುದೇ ನಿಧಿಧ್ಯಾಸನ. ಹೀಗೆ ಈ ಮೂರು ರೀತಿಯಿಂದ ಈಶ್ವರನನ್ನು ಸಾಕ್ಷಾತ್ಕರಿಸಲು ಉತ್ತಮಯೋಗವನ್ನು ಹೊಂದ ಬೇಕು. ಇವುಗಳಲ್ಲಿ ಮನನವ್ಯಾಪಾರವು ಅನುಮಾನಾಧೀನವಾಗಿರುತ್ತದೆ. ಇದನ್ನು ಉದಯನಾಚಾರ್ಯರು ಹೀಗೆ ವಿವರಿಸಿರುತ್ತಾರೆ. ಈಶ್ವರನ ಮನನವೆಂದರೆ ನ್ಯಾಯ ಚರ್ಚಾ ಅಂದರೆ ನ್ಯಾಯದಿಂದ ಬಂದಿರುವ ಅನುಮಿತಿ. ಇದೇ ಶ್ರವಣೋತ್ತರಕಾಲದಲ್ಲಿ ಉಂಟಾಗುವ ಮನನವೆಂಬ ಈಶ್ವರೋಪಾಸನೆ. ಅನುಮಾನವು ವ್ಯಾಪ್ತಿಜ್ಞಾನವಿಲ್ಲದೆ ಬರುವುದಿಲ್ಲ. ಸಾಹಚರ್ಯ ನಿಯಮವೇ ವ್ಯಾಪ್ತಿ. ಹೇತು ಸಾಧ್ಯಗಳಿರುವ ಉಪಾಧಿ ರಹಿತವಾದ ಅವಿನಾಭಾವರೂಪವಾದ ಸಂಬಂಧವೇ ವ್ಯಾಪ್ತಿ. ಇದು ಪದಾರ್ಥಗಳ ವಿವೇಕದಿಂದಲೇ ಉಂಟಾಗಬೇಕಾದುದರಿಂದ ಪದಾರ್ಥ ವಿಭಾಗ ಸಾಪೇಕ್ಷಿತವಾಗಿದೆ.

'ಅತಃ'— ಇತಿ. ಆದುದರಿಂದ ಆರು ಪದಾರ್ಥಗಳು 'ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ' ಎಂದು ಮೊದಲನೇ ಸೂತ್ರವಾಗಿರುವ ಹತ್ತು ಅಧ್ಯಾಯಗಳಲ್ಲಿ ಪೂಜ್ಯ ರಾದ ಕಣಭಕ್ಷಮಹರ್ಷಿಗಳಿಂದ ವ್ಯವಸ್ಥೆಗೊಳಿಸಲ್ಪಟ್ಟಿವೆ.

ಪದಾರ್ಥ ವಿವೇಕಜ್ಞಾನವು ಮೊದಲು ಅಪೇಕ್ಷಿತವಾದುದರಿಂದ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯಗಳೆಂಬ ಆರುಪದಾರ್ಥಗಳನ್ನು ಕಣಾದರು ಸೂತ್ರರೂಪವಾಗಿ ಹತ್ತು ಅಧ್ಯಾಯಗಳಲ್ಲಿ ವಿವರಿಸಿರುತ್ತಾರೆ. 'ಅಥಾತಃ'—ಎಂಬುದೇ ಮೊದಲನೇ ಸೂತ್ರ. ಅಥ ಶಬ್ದವು ಆನಂತರ್ಯಾರ್ಥವನ್ನು ತಿಳಿಸುತ್ತದೆ. ಮಂಗಲವೂ ಗೌಣ ಪ್ರಯೋಜನವಾಗುತ್ತದೆ. 'ಶಿಷ್ಯಜಿಜ್ಞಾಸೆ ಬಂದನಂತರ ಯಾವಾಗ ಶ್ರವಣಪಟು ಗಳಾಗಿ, ಅಸೂಯಾದಿ ದೋಷರಹಿತರಾದ ಶಿಷ್ಯರು ಸಮೀಪಕ್ಕೆ ಬಂದರೋ ಆ ಕಾರಣ ದಿಂದ ಜ್ಞಾನಕ್ಕೆ ಕಾರಣವಾದ ಧರ್ಮದ ನಿರೂಪಣೆಯನ್ನು ಮಾಡುತ್ತೇವೆ ಎಂದು ಸೂತ್ರಾರ್ಥ. 'ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃ ಸ ಧರ್ಮಃ '(ಕಸೂ೧-೧-೨) ಯಾವುದರಿಂದ ಅಭ್ಯುದಯವೂ, ಮೋಕ್ಷವೂ ಪ್ರಾಪ್ತವಾಗುವುದೋ ಅದೇ ಧರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೆಂದು ಧರ್ಮಲಕ್ಷಣ ಹೇಳಿರುತ್ತಾರೆ. ಸ್ವರ್ಗಪ್ರಾಪ್ತಿ, ತತ್ವಜ್ಞಾನಾದಿಗಳೇ ಅಭ್ಯುದಯ. ನಿಃಶ್ರೇಯಸ್ಸೇ ಮೋಕ್ಷ. ದಶಾನಾಂ ಲಕ್ಷಣಾನಾಂ ಸಮಾಹಾರಃ ದಶಲಕ್ಷಣೀ. ಇಲ್ಲಿ ಲಕ್ಷಣ ಪದಕ್ಕೆ ಅಧ್ಯಾಯವೆಂದರ್ಥ.

ವಿಧಿವತ್ತಾಗಿ ವೇದ ವೇದಾಂಗಗಳನ್ನು ಓದಿ ಶ್ರವಣಸಂಪನ್ನರಾದ ಕೆಲವು ಅಸೂಯಾದಿ ದೋಷರಹಿತರಾದ ವಿದ್ಯಾರ್ಥಿಗಳು ಮನನವಿಶೇಷಜ್ಞಾನಕ್ಕೋಸ್ಕರ ಪರಮ ಕಾರುಣಿಕರಾದ ಕಣಾದ ಮಹರ್ಷಿಗಳನ್ನು ವಿಧಿವತ್ತಾಗಿ ಸೇವಿಸಿದುದರಿಂದ ಅವರು ಪದಾರ್ಥವಿವೇಕಕ್ಕೋಸ್ಕರ ಹತ್ತು ಅಧ್ಯಾಯ ಪರಿಮಿತವಾದ ಸೂತ್ರಗಳನ್ನು ರಚಿಸಿದರು. ಒಂದೊಂದು ಅಧ್ಯಾಯಕ್ಕೂ ಎರಡೆರಡು ಆಹ್ನಿಕಗಳಿರುತ್ತವೆ. ಹತ್ತು ಅಧ್ಯಾಯಗಳಲ್ಲಿ ವಿವರಿಸಿದ ವಿಷಯಗಳನ್ನು ಸೂಕ್ಷ್ಮವಾಗಿ ತಿಳಿಸುತ್ತಾರೆ.

ತತ್ರಾಹ್ನಿಕದ್ವಯಾತ್ಮಕೇ ಪ್ರಥಮಾಧ್ಯಾಯೇ-ಸಮವೇತಾಶೇಷಪದಾರ್ಥ ಕಥನಮಕಾರಿ ತತ್ರಾಪಿ ಪಥಮಾಹ್ನಿಕೇ ಜಾತಿಮನ್ನಿರೂಪಣಮ್ । ದ್ವಿತಿಯಾಹ್ನಿಕೇ ಜಾತಿ ವಿಶೇಷಯೋರ್ನಿರೂಪಣಮ್ । ಆಹ್ನಿಕದ್ವಯಯುಕ್ತೇ ದ್ವಿತೀಯೇಽಧ್ಯಾಯೇ ದ್ರವ್ಯನಿರೂಪಣಮ್ । ತತ್ರಾಪಿ ಪ್ರಥಮಾಹ್ನಿಕೇ ಭೂತವಿಶೇಷಣಲಕ್ಷಣಮ್ । ದ್ವಿತೀಯೇ ದಿಕ್ಕಾಲಪ್ರತಿಪಾದನಮ್ । ಆಹ್ನಿಕದ್ವಯಯುಕ್ತೇ ತೃತೀಯೇ ಆತ್ಮಾಂತಃಕರಣಲಕ್ಷಣಮ್ । ತಾತ್ರಾಪ್ಯಾತ್ಮಲಕ್ಷಣಂ ಪ್ರಥಮೇ । ದ್ವಿತೀಯೇಽಂತಃ ಕರಣಲಕ್ಷಣಮ್ । ಆಹ್ನಿಕದ್ವಯಯುಕ್ತೇ ಚತುರ್ಥೇ ಶರೀರತದುಪಯೋಗಿ ವಿವೇಚನಮ್ । ತತ್ರಾಪಿ ಪ್ರಥಮೇ ತದುಪಯೋಗಿವಿವೇಚನಮ್ । ದ್ವಿತೀಯೇ ಶರೀರವಿವೇಚನಮ್ । ಆಹ್ನಿಕದ್ವಯವತಿ ಪಂಚಮೇ ಕರ್ಮಪ್ರತಿಪಾದನಮ್ । ತತ್ರಾಪಿ ಪ್ರಥಮೇ ಶರೀರಸಂಬಂಧಿಕರ್ಮಚಿಂತನಮ್ । ದ್ವಿತೀಯೇ ಮಾನಸಕರ್ಮ ಚಿಂತನಮ್ । ಆಹ್ನಿಕದ್ವಯಶಾಲಿನಿ ಷಷ್ಠೇ ಶ್ರೌತ ಧರ್ಮ ನಿರೂಪಣಮ್ । ತತ್ರಾಪಿ ಪ್ರಥಮೇ ದಾನಪ್ರತಿಗ್ರಹಧರ್ಮ ವಿವೇಕಃ । ದ್ವಿತೀಯೇ ಚಾತುರಾಶ್ರಮ್ಯೋಚಿತ ಧರ್ಮನಿರೂಪಣಮ್ । ತಥಾವಿಧೇ ಸಪ್ತಮೇ ಗುಣಸಮವಾಯ ಪ್ರತಿಪಾದನಮ್ । ತತ್ರಾಪಿ ಪ್ರಥಮೇ ಬುದ್ಧಿ ನಿರಪೇಕ್ಷ ಗುಣ ಪ್ರತಿಪಾದನಮ್ ।ದ್ವಿತೀಯೇ ತತ್ಸಾಪೇಕ್ಷ ಗುಣಪ್ರತಿಪಾದನಂ ಸಮವಾಯ ಪ್ರತಿಪಾದನಂ ಚ । ಅಷ್ಟಮೇ ನಿರ್ವಿಕಲ್ಪಕಸವಿಕಲ್ಪಕ ಪ್ರತ್ಯಕ್ಷ ಪ್ರಮಾಣಚಿಂತನಮ್ । ನವಮೇ ಬುದ್ಧಿವಿಶೇಷಪ್ರತಿಪಾದನಮ್ । ದಶಮೇ ಅನುಮಾನಭೇದಪ್ರತಿಪಾದನಮ್ ॥

ಹತ್ತು ಅಧ್ಯಾಯಗಳ ಮಧ್ಯದಲ್ಲಿ ಎರಡು ಆಹ್ನಿಕಗಳಿಂದ ಕೂಡಿದ ಮೊದಲನೆಯ ಅಧ್ಯಾಯದಲ್ಲಿ (ಸಮವೇತ) ಸಮವಾಯ ಸಂಬಂಧದಿಂದ ಇರುವ ಎಲ್ಲಾ ಪದಾರ್ಥಗಳನ್ನು ಹೇಳಿರುತ್ತಾನೆ. ಆರುಪದಾರ್ಥಗಳಲ್ಲಿ ಸಮವಾಯವನ್ನು ಬಿಟ್ಟು ಉಳಿದ ದ್ರವ್ಯಾದಿ [illegible] ಅವಯವದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮವೇತವಾಗುತ್ತದೆ. ಗುಣಕರ್ಮಗಳು ದ್ರವ್ಯದಲ್ಲಿ ಸಮವಾಯಸಂಬಂಧದಿಂದ ಇರುತ್ತವೆ. ಸಾಮಾನ್ಯವೆಂದರೆ ಜಾತಿ. ಇದು ದ್ರವ್ಯಗುಣಕರ್ಮಗಳಲ್ಲಿ ಸಮವೇತವಾಗಿರುತ್ತದೆ. ವಿಶೇಷಗಳು ನಿತ್ಯದ್ರವ್ಯಗಳಲ್ಲಿ ಸಮವೇತಗಳು. ಪರಮಾಣುಗಳಿಗೆ ಅವಯವಗಳಿಲ್ಲದಿರುವುದರಿಂದ ಅವು ಎಲ್ಲಿಯೂ ಸಮವೇತವಾಗುವುದಿಲ್ಲ. ಹೀಗೆಯೇ ಆಕಾಶವೂ ಸಮವಾಯದಿಂದ ಎಲ್ಲಿಯೂ ಇರುವುದಿಲ್ಲ. ಆದರೂ ಸಮವೇತಪದಕ್ಕೆ ಇಲ್ಲಿ 'ಸಮವಾಯಸಂಬಂಧವತ್ತ್ವಂ' ಎಂಬಲ್ಲಿ ತಾತ್ಪರ್ಯ ಹೇಳಬೇಕು. ಆಗ ಇವುಗಳು ಸಮವೇತಗಳಾಗದಿದ್ದರೂ ಇವುಗಳಲ್ಲಿ ಗುಣಾದಿಗಳ ಸಮವಾಯವಿರುವುದರಿಂದ ಸಮವೇತವಾಗುತ್ತವೆ. ಸಮವಾಯಕ್ಕೆ ಸಮವಾಯಾಂತರಾಂಗೀಕಾರ ಮಾಡಿದರೆ ಅನವಸ್ಥಾ ಬರುವುದರಿಂದ ಅದು ಸಮವೇತವಾಗುವುದಿಲ್ಲ ಮೊದಲನೆಯ ಆಹ್ನಿಕದಲ್ಲಿ (ಜಾತಿಮತಾಂ ನಿರೂಪಣಂ) ಜಾತಿಯುಳ್ಳ ದ್ರವ್ಯ ಗುಣಕರ್ಮಗಳ ನಿರೂಪಣವೂ, ಎರಡನೆಯ ಆಹ್ನಿಕದಲ್ಲಿ ಜಾತಿ ಮತ್ತು ವಿಶೇಷ ಪದಾರ್ಥಗಳ ನಿರೂಪಣವೂ ಇರುತ್ತದೆ. ಎರಡನೆಯ ಅಧ್ಯಾಯದಲ್ಲಿ ದ್ರವ್ಯ ನಿರೂಪಣ. ಮೊದಲನೆಯ ಆಹ್ನಿಕದಲ್ಲಿ ಪೃಥಿವೀ, ಆಪ್, ತೇಜಸ್ಸು, ವಾಯು ಆಕಾಶಗಳೆಂಬ ಪಂಚಮಹಾಭೂತಗಳನ್ನೂ, ಎರಡನೆಯ ಆಹ್ನಿಕದಲ್ಲಿ ದಿಕ್ಕಾಲಗಳನ್ನು ನಿರೂಪಿಸಿರುತ್ತಾರೆ. ಮೂರನೆಯ ಅಧ್ಯಾಯದಲ್ಲಿ ಆತ್ಮ ಮತ್ತು ಅಂತಃಕರಣಗಳ (ಮನಸ್ಸು) ಲಕ್ಷಣವನ್ನು ಹೇಳುತ್ತಾನೆ. ಅಲ್ಲಿ ಒಂದನೆಯ ಆಹ್ನಿಕದಲ್ಲಿ ಆತ್ಮನಲಕ್ಷಣ, ಎರಡರಲ್ಲಿ ಮನಸ್ಸಿನಲಕ್ಷಣ ಹೇಳುತ್ತಾನೆ. ನಾಲ್ಕನೆಯ ಅಧ್ಯಾಯದಲ್ಲಿ ಶರೀರ ಮತ್ತು ಶರೀರವಿವೇಚನಗಳಿಗೆ ಉಪಯೋಗಿಯಾದ ಪರಮಾಣುಕಾರಣತ್ವಾದಿ ನಿರೂಪಣವಿರುತ್ತದೆ. ಮೊದಲನೆಯ ಆಹ್ನಿಕದಲ್ಲಿ ಶರೀರೋಪಯೋಗಿಯಾದ ಪರಮಾಣುಕಾರಣತ್ವಾದಿನಿರೂಪಣವೂ ಎರಡರಲ್ಲಿ ಶರೀರ ನಿರೂಪಣವೂ ಇವೆ. ಐದನೇ ಅಧ್ಯಾಯದಲ್ಲಿ ಕರ್ಮಪ್ರತಿಪಾದನ. ಮೊದಲನೆಯಾಹ್ನಿಕದಲ್ಲಿ ಶರೀರಸಂಬಂಧಿಕರ್ಮಗಳನ್ನೂ, ಎರಡರಲ್ಲಿ ಮಾನಸಕರ್ಮಗಳನ್ನೂ ಪ್ರತಿಪಾದಿಸಿರುತ್ತಾರೆ. ಆರನೇ ಅಧ್ಯಾಯದಲ್ಲಿ ಶ್ರುತಿಪ್ರತಿಪಾದಿತ ಧರ್ಮಗಳ ನಿರೂಪಣ. ಮೊದಲನೆಯ ಆಹ್ನಿಕದಲ್ಲಿ ದಾನಪ್ರತಿಗ್ರಹರೂಪಧರ್ಮವಿವೇಕ. ಎರಡನೆಯ ಆಹ್ನಿಕದಲ್ಲಿ ನಾಲ್ಕು ಆಶ್ರಮಗಳಿಗೆ ಉಚಿತಗಳಾದ ಧರ್ಮಗಳ ನಿರೂಪಣ. ಚಾತುರಾಶ್ರಮ ಶಬ್ದದ ಮೇಲೆ ಸ್ವಾರ್ಥದಲ್ಲಿ ಷ್ಯಞ್ ಪ್ರತ್ಯಯ ಬಂದು 'ಚತುರಾಶ್ರಮ್ಯಂ' ಎಂದಾಗಿದೆ. ಏಳರಲ್ಲಿ ಗುಣ ಮತ್ತು ಸಮವಾಯಗಳ ನಿರೂಪಣ. ಒಂದನೆಯ ಆಹ್ನಿಕದಲ್ಲಿ ರೂಪರಸಾದಿಬುದ್ಧಿನಿರಪೇಕ್ಷ ಗುಣಗಳ ನಿರೂಪಣ. ದ್ವಿತೀಯಾಹ್ನಿಕದಲ್ಲಿ ದ್ವಿತ್ವಪರತ್ವಾದಿ ಬುದ್ಧಿಸಾಪೇಕ್ಷ ಗುಣಗಳ ನಿರೂಪಣ ಮತ್ತು ಸಮವಾಯಪ್ರತಿಪಾದನ. ಎಂಟರಲ್ಲಿ ನಿರ್ವಿಕಲ್ಪಕಸವಿಕಲ್ಪಕ ಪ್ರತ್ಯಕ್ಷಪ್ರಮಾಣಪ್ರತಿಪಾದನ. ಒಂಭತ್ತರಲ್ಲಿ ಬುದ್ಧಿವಿಶೇಷಗಳ ಪ್ರತಿಪಾದನ. ಹತ್ತರಲ್ಲಿ ಅನುಮಾನ ಮತ್ತು ಅದರ ಭೇದಗಳನ್ನು ಪ್ರತಿಪಾದಿಸಿರುತ್ತಾರೆ.

ತತ್ರೋದ್ದೇಶೋ ಲಕ್ಷಣಂ ಪರೀಕ್ಷಾ ಚೇತಿ ತ್ರಿವಿಧಾಸ್ಯ ಶಾಸ್ತ್ರಸ್ಯ ಪ್ರವೃತ್ತಿಃ । ನನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಾಗಾಪೇಕ್ಷಯಾ ಚಾತುರ್ವಿಧ್ಯೇ ವಕ್ತವ್ಯೇಕಥಂ ತ್ರೈವಿಧ್ಯಮುಕ್ತಮಿತಿ ಚೇತ್ — ನೈವಂ ಮಂಸ್ಥಾಃ । ವಿಭಾಗಸ್ಯವಿಶೇಷೋದ್ದೇಶರೂಪತ್ವಾದುದ್ದೇಶೇ ಏವಾಂತರ್ಭಾವಾತ್ । ತತ್ರ ದ್ರವ್ಯಗುಣ ಕರ್ಮ ಸಾಮಾನ್ಯವಿಶೇಷಸಮವಾಯಾ ಇತಿ ಷಡೇವ ತೇ ಪದಾರ್ಥಾಃ ಇತ್ಯುದ್ದೇಶಃ । ಕಿಮತ್ರ ಕ್ರಮನಿಯಮೇ ಕಾರಣಮ್ । ಉಚ್ಯತೇ । ಸಮಸ್ತಪದಾರ್ಥಾಯತನತ್ವೇನ ಪ್ರಧಾನಸ್ಯ ದ್ರವ್ಯಸ್ಯ ಪ್ರಥಮಮುದ್ದೇಶಃ । ಅನಂತರಂ ಗುಣತ್ವೋಪಾಧಿನಾ ಸಕಲದ್ರವ್ಯವೃತ್ತೇ ರ್ಗುಣಸ್ಯ । ತದನು ಸಾಮಾನ್ಯವತ್ತ್ವಸಾಮ್ಯಾತ್ಕರ್ಮಣಃ । ಪಶ್ಚಾತ್ತ್ರಿತ ಯಾಶ್ರಿತಸ್ಯ ಸಾಮಾನ್ಯಸ್ಯ । ತದನಂತರಂ ಸಮವಾಯಾಧಿಕರಣಸ್ಯ ವಿಶೇಷಸ್ಯ । ಅಂತೇವಶಿಷ್ಟಸ್ಯ ಸಮವಾಯಸ್ಯೇತಿ ॥

'ತತ್ರ' — ಇತಿ. ಉದ್ದೇಶ, ಲಕ್ಷಣ, ಪರೀಕ್ಷಾ ಎಂದು ಶಾಸ್ತ್ರ ಪ್ರವೃತ್ತಿ ಮೂರು ವಿಧವಾಗಿರುತ್ತದೆ 'ನಾಮಮಾತ್ರೇಣ ವಸ್ತುಸಂಕೀರ್ತನಂ' ಉದ್ದೇಶ. ವಸ್ತು ವಿನ ಹೆಸರನ್ನು ಮೊದಲು ಹೇಳುವುದು. 'ದ್ರವ್ಯಗುಣ'—ಇತ್ಯಾದಿ ವಾಕ್ಯದಿಂದ ಆರು ಪದಾರ್ಥಗಳನ್ನು ಹೇಳಿರುತ್ತಾರೆ. 'ತತ್ತದಸಾಧಾರಣಧರ್ಮವಚನಂ' ಲಕ್ಷಣಮ್. ಆಯಾಯ ವಸ್ತುವಿನ ಅಸಾಧಾರಣ ಧರ್ಮವನ್ನು ಹೇಳುವುದೇ ಲಕ್ಷಣ. ಗುಣವತ್ವಂ, ದ್ರವ್ಯತ್ವವತ್ತ್ವಂ ಎಂದು ದ್ರವ್ಯದ ಲಕ್ಷಣ. 'ಯಥಾಲಕ್ಷಿತಸ್ಯೈತ ಲಕ್ಷಣಮುಪಪದ್ಯತೇ ನವಾ-ಇತಿ ವಿಚಾರಃ' ಪರೀಕ್ಷಾ. ಲಕ್ಷಣೋಪೇತವಾದ ವಸ್ತುವಿನಲ್ಲಿ ಆ ಲಕ್ಷಣ ಕೊಡುತ್ತದೆಯೇ ಇಲ್ಲವೇ ಎಂದು ವಿಚಾರಿಸುವುದು ಪರೀಕ್ಷಾ. 'ಉದ್ದಿಷ್ಟಾನಾಂ ದ್ರವ್ಯಾದೀನಾಮವಾಂತರಭೇದಕಥನಂ' ವಿಭಾಗಃ ಉದ್ದೇಶಿಸಿದ ಪದಾರ್ಥಗಳ ಅವಾಂತರ ಭೇದವನ್ನು ಹೇಳುವುದಕ್ಕೆ ವಿಭಾಗನೆಂದು ಹೆಸರು. ಪೃಥಿವೀ ಜಲಾದಿಭೇದ ಗಳಿಂದ ದ್ರವ್ಯವು ಒಂಬತ್ತು ವಿಧವೆಂದು ವಿಭಾಗ ತೋರಿಸುತ್ತಾರೆ.

'ನನು' —ಇತಿ. ಉದ್ದೇಶ, ಲಕ್ಷ್ಣಾ, ಪರೀಕ್ಷಾ, ವಿಭಾಗನೆಂದು ನಾಲ್ಕು ರೀತಿ ಯಾಗಿ ಶಾಸ್ತ್ರ ಪ್ರವೃತ್ತಿಯನ್ನು ಹೇಳದೇ ಮೂರು ವಿಧವೆಂದು ಹೇಳಿದುದು ಹೇಗೆ ? ಎಂದು ಶಂಕಾತಾತ್ಪರ್ಯ 'ನೈವಂ' —ಇತಿ. ಹೀಗೆ ತಿಳಿಯಬೇಡ. ಏಕೆಂದರೆ ವಿಭಾಗವೆಂದರೆ ವಿಶೇಷೋದ್ದೇಶರೂಪವೇ ಆಗಿರುವುದರಿಂದ ಅದು ಉದ್ದೇಶದಲ್ಲಿಯೇ ಸೇರುತ್ತದೆ. ಆಗ ಉದ್ದೇಶವು ಸಾಮಾನ್ಯೋದ್ದೇಶ, ವಿಶೇಷೋದ್ದೇಶವೆಂದು ಎರಡು ವಿಧವಾಗುತ್ತದೆ. 'ದ್ರವ್ಯಗುಣ.... ಪದಾರ್ಥಃ' ಎಂದು ಸಾಮಾನ್ಯೋದ್ದೇಶ. 'ಪೃಥಿವ್ಯಪ್—ದ್ರವ್ಯಾಣಿ' ಎಂದು ವಿಶೇಷೋದ್ದೇಶ. 'ತತ್ರ'—ಇತಿ. ದ್ರವ್ಯ, ಗುಣ ಇತ್ಯಾದಿ ಆರೇ ಪದಾರ್ಥಗಳೆಂದು ಮೊದಲು ಉದ್ದೇಶ ಹೇಳಿದೆ. ಇಲ್ಲಿ ಮೊದಲು ದ್ರವ ಆಮೇಲೆ ಗುಣ ಹೀಗೆ ಕ್ರಮವಾಗಿ ಹೇಳಿರುವುದಕ್ಕೆ ಕಾರಣವೇನು ? ಎಂದು ಪ್ರಶ್ನಿಸಿ 'ಉಚ್ಯತೇ' ಎಂದು ಹಾಗೆ ಕ್ರಮಸ್ವೀಕಾರಕ್ಕೆ ಕಾರಣತೋರಿಸುತ್ತಾರೆ.

'ಸಮಸ್ತ'—ಇತಿ. ಉಳಿದ ಸಮಸ್ತ ಪದಾರ್ಥಗಳಿಗೂ ಆಶ್ರಯವಾದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಧಾನವಾಗಿದೆಯೆಂದು ಮೊದಲು ದ್ರವ್ಯನಿರ್ದೇಶಮಾಡಿದೆ. ಧರ್ಮಿ ಯಾವುದೆಂದು ಮೊದಲು ತಿಳಿದ ಮೇಲೆ ಧರ್ಮ ಜಿಜ್ಞಾಸೆ ಬರುತ್ತದೆ. ಮನುಷ್ಯನು ಯಾರೆಂದು ತಿಳಿದ ಮೇಲೆ ಅವನು ಸ್ಥೂಲನೇ ಅಥವಾ ಕೃಶನೇ ಎಂಬ ವಿಚಾರ ಬರುತ್ತದೆ. ಆದುದರಿಂದ ಧರ್ಮಕ್ಕಿಂತ ಮೊದಲು ಧರ್ಮಿಜ್ಞಾನ ಬರುವುದರಿಂದ ಅದು ಪ್ರಧಾನ. ಗುಣಾದಿ ಐದು ಪದಾರ್ಥಗಳಿಗೂ ದ್ರವ್ಯವು ಸಾಕ್ಷಾತ್ತಾಗಿಯೂ ಪರಂಪರೆಯಿಂದಲೂ ಆಶ್ರಯವಾಗಿರುತ್ತದೆ. ಗುಣಕರ್ಮಗಳಿಗೆ ಸಾಕ್ಷಾತ್ತಾಗಿ ಆಶ್ರಯವಾಗಿದೆ. ದ್ರವ್ಯತ್ವಪೃಥಿವೀತ್ವಾದಿ ಜಾತಿಗಳಿಗೆ ಸಾಕ್ಷಾತ್ತಾಗಿ ಆಧಾರವಾದರೆ ಗುಣತ್ವಕರ್ಮತ್ವಾದಿಗಳಿಗೆ ಗುಣಧರ್ಮದ್ವಾರಾ ಪರಂಪರೆಯಿಂದ ಆಶ್ರಯವಾಗಿದೆ. ವಿಶೇಷಕ್ಕೆ ಸಾಕ್ಷಾತ್ತಾಗಿ ಆಧಾರ. ಸಮವಾಯಕ್ಕೆ ಕೆಲವು ಕಡೆ ಸಾಕ್ಷಾತ್ತಾಗಿಯೂ ಕೆಲವು ಕಡೆ ಗುಣಾದಿಮೂಲಕವಾಗಿಯೂ ಆಶ್ರಯವಾಗುತ್ತದೆ. ಹೀಗೆ ಸಕಲಾಧಾರವಾದುದರಿಂದ ಪ್ರಧಾನವಾದ ದ್ರವ್ಯವನ್ನು ಮೊದಲು ಹೇಳಿರುತ್ತಾನೆ. 'ಅನಂತರಂ' — ಇತಿ. ಆಮೇಲೆ ದ್ರವ್ಯಕ್ಕಿಂತ ಅಪ್ರಾಧಾನ್ಯ ವಿಶೇಷಣ ನಿಮಿತ್ತದಿಂದ ಸಕಲದ್ರವ್ಯಗಳಲ್ಲಿರುವ ಗುಣವನ್ನು ಹೇಳಿರುತ್ತಾನೆ. ಗುಣವೆಂದರೆ ಇಲ್ಲಿ ಅಪ್ರಧಾನ. ಅದೇ ಸಂಬಂಧವನ್ನಾಗಿಟ್ಟುಕೊಂಡು ಎಂದರ್ಥ. (ಗುಣತ್ವೋಪಾಧಿನಾ) ಯದ್ಯಪಿ ಗುಣಾದಿಪಂಚಕವೂ ಅಪ್ರಧಾನವಾಗುವುದರಿಂದ ಸಮಾನವಾಗಿರುತ್ತದೆ. ಆದರೂ ರೂಪರಸಾದಿಗಳಲ್ಲಿರುವ ವೈಶೇಷಿಕಪದಾರ್ಥಗಳಿಗೆ ಸಾಂಕೇತಿಕಗುಣ ಸಂಜ್ಞೆಯಿರುವುದರಿಂದ ಕೊನೆಗೆ ಹೇಳಿದೆ. ವಿಶೇಷಸಮವಾಯಗಳು ಪ್ರತ್ಯಕ್ಷ ವಿಷಯಗಳಾಗದಿರುವುದರಿಂದಲೂ ಕೊನೆಗೆ ಹೇಳಿರುವುದು ಸಂಗತವಾಗಿದೆ. ಗುಣಾದಿತ್ರಯದಲ್ಲಿ ಜಾತ್ಯಾಶ್ರಯವಾದುದರಿಂದ ಗುಣಕರ್ಮಗಳನ್ನು ಮೊದಲೂ, ಸಾಮಾನ್ಯವನ್ನು ಆಮೇಲೆಯೂ ಹೇಳಿದೆ. ಸಾಮಾನ್ಯವತ್ತ್ವಾತ್ = ಜಾತ್ಯಾಶ್ರಯವಾದುದರಿಂದ ಎಂದರ್ಥ. ಗುಣಕರ್ಮಗಳಲ್ಲಿಯೂ ಗುಣವು ಸಕಲದ್ರವ್ಯವೃತ್ತಿಯಾದುದರಿಂದ ಮೊದಲು ಹೇಳಿದೆ. ಕರ್ಮ ಕೆಲವು ದ್ರವ್ಯಗಳಲ್ಲಿ ಮಾತ್ರವಿರುತ್ತದೆ. ಆದುದರಿಂದ ಮೂರನೆಯದಾಗಿ ಹೇಳಿದೆ. ಆಕಾಶಾದಿ (೪) ವಿಭುಪದಾರ್ಥಗಳಲ್ಲಿ ಕರ್ಮ ಇರುವುದಿಲ್ಲ. ಕ್ರಿಯಾ ಇದೆಯೆಂದು ಅಂಗೀಕರಿಸಿದರೆ ಆಗ ಸಕಲ ಮೂರ್ತದ್ರವ್ಯ ಸಂಯೋಗಿತ್ವಲಕ್ಷಣ ಭಂಗವಾಗುತ್ತದೆ. ಗುಣತ್ವೇನ ಗುಣವು ಸಕಲದ್ರವ್ಯಗಳಲ್ಲಿಯೂ ಇರುತ್ತದೆ. ಆದುದರಿಂದ ಪೃಥಿವ್ಯಾದಿಗಳಲ್ಲಿ ಬುದ್ಧ್ಯಾದಿಗುಣಗಳು ಇಲ್ಲವಾದರೂ ದೋಷವಿಲ್ಲ. ದ್ರವ್ಯಾದಿ ಮೂರು ಪದಾರ್ಥಗಳನ್ನು ಆಶ್ರಯಿಸಿರುವುದರಿಂದ ಆಮೇಲೆ ಸಾಮಾನ್ಯ ಹೇಳಿದೆ. ಆಮೇಲೆ ಸಮವಾಯಕ್ಕೆ ಆಶ್ರಯವಾದ ವಿಶೇಷ ಹೇಳಿ ಕೊನೆಯಲ್ಲಿ ಉಳಿದ ಸಮವಾಯವೆಂಬ ಪದಾರ್ಥ ಹೇಳಿರುತ್ತಾನೆ.

ನನು ಷಡೇವ ಪದಾರ್ಥಾ ಇತಿ ಕಥಂ ಕಥ್ಯತೇ । ಅಭಾವಸ್ಯಾಪಿ ಸದ್ಭಾವಾದಿತಿ ಚೇತ್-
ನ್ನೈವಂ ವೋಚಃ । ನ ಇರ್ಥಾನುಲ್ಲಿಖಿತಧೀವಿಷಯತಯಾ ಭಾವರೂಪತಯಾ
ಷಡೇವೇತಿ ವಿವಕ್ಷಿತತ್ವಾತ್ । ತಥಾಪಿ ಕಥಂ ಷಡೇವೇತಿ ನಿಯಮ ಉಪಪದ್ಯತೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಕಲ್ಪಾನುಪಪತ್ತೇಃ । ತಥಾಹಿ । ನಿಯಮವ್ಯವಚ್ಛೇದ್ಯಂ ಪ್ರಮಿತಂ ನ ವಾ । ಪ್ರಮಿತತ್ವೇ ಕಥಂ ನಿಷೇಧಃ । ಅಪ್ರಮಿತತ್ವೇ ತಥಂತರಾವ್ । ನಹಿಕಶ್ಚಿತ್ ಪ್ರೇಕ್ಷಾವಾನ್ಮೂಷಿಕವಿಷಾಣಂ ಪ್ರತಿಷೇದ್ಧುಂ ಯತತೇ । ತತಶ್ಚಾನುಪಪತ್ತೇರ್ನ ನಿಯಮ ಇತಿ ಚೇತ್— ನ್ವೈವಂ ಭಾಷಿಷ್ಠಾಃ । ಸಪ್ತಮತಯಾ ಪ್ರಮಿತೇಂಧಕಾರದೌ ಭಾವತ್ವಸ್ಯ ಭಾವತಯಾ ಪ್ರಮಿತೇ ಶಕ್ತಿಸಾದೃಶ್ಯಾದೌ ಸಪ್ತಮತ್ವಸ್ಯ ಚ ನಿಷೇಧಾದಿತಿ ಕೃತಂ ವಿಸ್ತರೇಣ ॥

ನನು—ಇತಿ. ಆರೇ ಪದಾರ್ಥಗಳೆಂದು ಹೇಗೆ ಹೇಳುವುದು ? ಅಭಾವರೂಪ ಪದಾರ್ಥವೂ ಅಧಿಕವಾಗಿದೆಯಷ್ಟೆ ಅಂದರೆ ಹೀಗೆ ಹೇಳಬೇಡವೆಂದು ಸಮಾಧಾನ ತೋರಿಸುತ್ತಾರೆ. 'ನಞರ್ಥ'—ಇತಿ. ಅಸ್ತಿ—ಇದೆಯೆಂಬ ಜ್ಞಾನಕ್ಕೆ ವಿಷಯವಾಗುವ ಭಾವರೂಪದಿಂದ ತೋರುವ ದ್ರವ್ಯಾದಿಗಳು ಆರು ಹೇಳಿವೆ. ನಞರ್ಥವೆಂದರೆ ನಿಷೇಧ. ತದುಲ್ಲಿಖಿತಾಧೀಃ ಅಂದರೆ ನಾಸ್ತಿ ಎಂಬ ಜ್ಞಾನ. ಇದರಿಂದ ಅಭಾವರೂಪ ಜ್ಞಾನವುಂಟಾಗುತ್ತದೆ. ನಾಸ್ತಿಯೆಂಬ ಜ್ಞಾನದಲ್ಲಿ ವಿಷಯವಾಗಿ ತೋರುವ ಅಭಾವ ರೂಪವಾದ ಏಳನೆಯ ಪದಾರ್ಥವಿದ್ದರೂ ನಮಗೆ ಭಾಧಕವಿಲ್ಲ. ನಾವು ಭಾವಪದಾರ್ಥಗಳನ್ನು ಮಾತ್ರ ಹೇಳಿರುತ್ತೇವೆ. 'ತಥಾಪಿ'—ಇತಿ. ಹಾಗಾದರೂ ಆರೇ ಎಂಬ ನಿಯಮ ಹೇಗೆ ಸಂಗತವಾಗುತ್ತದೆ.? ಆರೇ ಎಂದರೆ ಆರಕ್ಕಿಂತ ಅಧಿಕವಾಗಿ ಇನ್ನೊಂದಿಲ್ಲವೆಂದು ಅರ್ಥವಾಗುತ್ತದೆ. ಆರಕ್ಕಿಂತ ಇನ್ನೊಂದು ಇದೆಯೋ ಇಲ್ಲವೋ ಎಂಬ ವಿಕಲ್ಪವೇ ಸಮಂಜಸವಾಗುವುದಿಲ್ಲ. 'ನಿಯಮ'—ಇತಿ. ಷಡೇವ ಎಂಬಲ್ಲಿ ಏವಕಾರದಿಂದ ಏಳನೆಯ ಪದಾರ್ಥವ್ಯಾವೃತ್ತಿ (ಇಲ್ಲವೆಂಬುದು) ಬೋಧಿತವಾಗುತ್ತದೆ. ವ್ಯಾವೃತ್ತಿ ಹೊಂದುವ ಏಳನೆಯ ಪದಾರ್ಥವು ಪ್ರಮಿತವೇ (ಪ್ರಮಾಣಸಿದ್ಧವಾದದ್ದು) ಅಥವಾ ಅಲ್ಲವೇ (ಪ್ರಮಾಣಸಿದ್ಧವಲ್ಲವೇ ?) ಎಂದು ವಿಕಲ್ಪ ಬರುತ್ತದೆ. ಪ್ರಮಿತ ಅಂದರೆ ಅದು ಪ್ರಮಾಣಸಿದ್ಧವಾದುದೆನ್ನುವುದಾದರೆ ನಿಷೇಧ ಮಾಡುವುದು ಹೇಗೆ ? ಪ್ರಮಾಣಸಿದ್ಧವಲ್ಲವೆಂದರೆ ನಿಷೇಧವೇಕೆ ? ನಿಷೇಧವೇ ಅಸಂಭವವಾಗುತ್ತದೆ. ಪ್ರತಿಯೋಗಿ ಪ್ರಸಿದ್ಧಿಯಿಲ್ಲದೆ ನಿಷೇಧ ಉಪಪನ್ನವಾಗುವುದಿಲ್ಲ. 'ನಹಿ'—ಇತಿ. ಪ್ರೇಕ್ಷಾವಾನ್ —ವಿಚಾರಶೀಲನು ಇಲಿಯ ಕೊಂಬನ್ನು ನಿಷೇಧಿಸುವುದಕ್ಕೆ ಪ್ರಯತ್ನಿಸುವುದಿಲ್ಲ. ಬಂಜೆಯ ಮಗನಂತೆ ಇಲಿಗೆ ಕೊಂಬಿರುವುದು ಅತ್ಯಂತಾ ಸಂಭವ. ಹುಚ್ಚನು ಬಂಜಗೆ ಮಗನಿಲ್ಲ. ಇಲಿಗೆ ಕೊಂಬಿಲ್ಲ ಎಂದು ನಿಷೇಧಮಾಡಬಹುದು. ಅಲ್ಪತಿಳುವಳಿಕೆ ಇರುವವನೂ ಕೂಡಾ ಲೋಕದಲ್ಲಿಲ್ಲದ ವಸ್ತುವನ್ನು ಇಲ್ಲವೆಂದು ಸಾಧಿಸಲು ಹೋಗುವುದಿಲ್ಲ.

'ತತಃ'— ಇತಿ. ಹೀಗೆ ಅನುಪಪತ್ತಿ ಇರುವಾಗ ನಿಯಮ ಮಾಡುವುದು ಹೇಗೆ ? ಅಂದರೆ ಹೀಗೆ ಹೇಳಬಾರದೆಂದು ಸಮಾಧಾನ ಹೇಳುತ್ತಾನೆ. ಇಲ್ಲಿ ಭಾಗಶಃ ಪ್ರತಿಯೋಗಿಪ್ರಮಿತಿ ಸಿದ್ಧವಾಗುತ್ತದೆ. ಕೇವಲ ಸಪ್ತಮವನ್ನಾಗಲೀ, ಕೇವಲ ಭಾವ ಪದಾರ್ಥವನ್ನಾಗಲೀ ನಿಷೇಧಿಸುವುದಿಲ್ಲ. ಸಪ್ತಮತ್ವವಿಶಿಷ್ಟ ಭಾವಪದಾರ್ಥಕ್ಕೆ ನಿಷೇಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳುತ್ತೇವೆ. ನಿಷೇಧವಿದ್ದಂತೆ ಪ್ರತಿಯೋಗಿ ಪ್ರಸಿದ್ಧಿಯಿರಬೇಕೆಂಬ ನಿಯಮವಿಲ್ಲ. ಏಳನೆಯದಾಗಿ ಕತ್ತಲೆಯೆಂಬ ಪದಾರ್ಥವು ಪ್ರಮಾಣ (ಕಣ್ಣಿನಿಂದ ನೋಡಲ್ಪಡುವು ದರಿಂದ) ಸಿದ್ಧವಾಗಿದೆ. ಅಲ್ಲಿ ಭಾವತ್ವ ಇದೆಯೆಂದು ಶಂಕೆ. ಹೀಗೆಯೇ ಭಾವರೂಪ ವಾಗಿ ತೋರುವ ಶಕ್ತಿಸಾದೃಶ್ಯಾದಿಗಳಲ್ಲಿ ಸಪ್ತಮತ್ವ ಇದೆಯೆಂದು ಪೂರ್ವಪಕ್ಷಿಯ ಅಭಿಪ್ರಾಯ. ಅಂಧಕಾರ ಏಳನೆಯದಾಗಿದ್ದರೂ ಅದು ಭಾವ ಪದಾರ್ಥವಾಗುವುದಿಲ್ಲ. ತೇಜೋಭಾವನೇ ಅಂಧಕಾರ. ಬೆಳಕಿಲ್ಲದಿದ್ದರೆ ಕತ್ತಲೆ ಸಿದ್ಧ. ಆಗ ಅಭಾವರೂಪ ವಾಯಿತು. ಹೀಗೆಯೇ ಶಕ್ತಿಯೆಂಬ ಭಾವಪದಾರ್ಥವಿದೆ. ಆದರೆ ಅದು ಏಳನೆಯ ಭಾವವಾಗುವುದಿಲ್ಲ. ಉಕ್ತವಾದ ಆರು ಪದಾರ್ಥಗಳಲ್ಲಿಯೇ ಸೇರುತ್ತದೆ. ಅತಿರಿಕ್ತ ಪದಾರ್ಥವೆಂದು ಕಲ್ಪಿಸುವವರು ಹೀಗೆ ವಾದಿಸುತ್ತಾರೆ. ದಾಹಶಕ್ತಿ ಪ್ರತಿಬಂಧಕ ಗಳಾದ ಮಣ್ಯಾದಿಗಳಿರುವಾಗ ಬೆಂಕಿ ಸುಡುವುದಿಲ್ಲ. ಆಗ ಅಲ್ಲಿ ದಾಹಕತ್ವಶಕ್ತಿ ಇಲ್ಲವೆನ್ನಬೇಕು. ಪ್ರತಿಬಂಧಕಗಳಿಲ್ಲದಿರುವಾಗ ಸುಡುವುದರಿಂದ ಅಲ್ಲಿ ಆಶಕ್ತಿ ಬಂದಿದೆ ಯೆಂದು ತಿಳಿಯುತ್ತದೆ. ಆದುದರಿಂದ ಅದನ್ನು ಅತಿರಿಕ್ತಪದಾರ್ಥವೆಂದು ಕಲ್ಪಿಸಬೇಕೆಂದು ಅವರ ಅಭಿಪ್ರಾಯ. ಆದರೆ ಅದು ಅತಿರಿಕ್ತವಲ್ಲ. ದಾಹಕ್ಕೆ ಕಾರಣವಾದುದೇ ಶಕ್ತಿ. ಕಾರ್ಯಸಾಮಾನ್ಯಕ್ಕೆ ಪ್ರತಿಬಂಧಕದ ಅಭಾವ ಕಾರಣವೆಂದು ಎಲ್ಲರೂ ಅಂಗೀಕರಿಸಿರು ತ್ತಾರೆ. ಪ್ರತಿಬಂಧಕವಿದ್ದರೆ ಸಂಪೂರ್ಣಕಾರಣ ಸಾಮಗ್ರಿ ಇಲ್ಲದಿರುವುದರಿಂದ ಕಾರ್ಯ ವಾಗುವುದಿಲ್ಲ. ಇದರಿಂದಲೇ ಉಪಪನ್ನವಾಗುವಾಗ ಅನಂತಶಕ್ತಿ ಕಲ್ಪನೆ ಅನ್ಯಾಯ ವೆಂದು ತಾರ್ಕಿಕರ ಸಿದ್ಧಾಂತ. ಹೀಗೆಯೇ ಸಾದೃಶ್ಯವೂ ಅತಿರಿಕ್ತ ಪದಾರ್ಥವಲ್ಲ. ತದ್ಭಿನ್ನತ್ವೇ ಸತಿ ತದ್ಗತಭೂಯೋಧರ್ಮವತ್ವಂ ಸಾದೃಶ್ಯಮ್" ಚಂದ್ರಸಾದೃಶ್ಯ ಮುಖ ದಲ್ಲಿ ಇದೆಯೆಂದರೆ ಚಂದ್ರನಿಂದ ಭಿನ್ನವಾಗಿ ಚಂದ್ರನಲ್ಲಿರುವ ಅಧಿಕ ಧರ್ಮದಿಂದ ಕೂಡಿರುವುದೆಂದರ್ಥವಾಗುತ್ತದೆ. ಹೀಗೆ ಯಾವುದಿದ್ದರೂ ಉಕ್ತವಾದ ಆರು ಪದಾರ್ಥ ಗಳಲ್ಲಿಯೇ ಸೇರುವುದರಿಂದ ಏಳನೆಯ ಭಾವಪದಾರ್ಥವಿಲ್ಲವೆಂದು ತಾತ್ಪರ್ಯ.

ತತ್ರ ದ್ರವ್ಯಾದಿತ್ರಿತಯಸ್ಯ ದ್ರವ್ಯತ್ವಾದಿ ಜಾತಿರ್ಲಕ್ಷಣಮ್ । ದ್ರವ್ಯತ್ವಂ ನಾಮ ಗಗನಾರವಿಂದ ಸಮವೇತತ್ವೇ ಸತಿ ನಿತ್ಯತ್ವೇ ಸತಿ ಗಂಧಾಸಮವೇತತ್ವಮ್ । ಗುಣತ್ವಂ ನಾಮ ಸಮವಾಯಿಕಾರಣಾಸಮವೇತಾಸಮವಾಯಿಕಾರಣ ಭಿನ್ನ ಸಮವೇತ ಸತ್ತಾಸಾಕ್ಷಾದ್ವ್ಯಾಪ್ಯಜಾತಿಃ । ಕರ್ಮತ್ವಂ ನಾಮ ನಿತ್ಯಾಸಮ ವೇತತ್ವಸಹಿತ ಸತ್ತಾಸಾಕ್ಷಾದ್ವ್ಯಾಪ್ಯಜಾತಿಃ । ಸಾಮಾನ್ಯಂ ತು ಪ್ರಧ್ವಂಸ ಪ್ರತಿಯೋಗಿತ್ವರಹಿತ ಮನೇಕ ಸಮವೇತಮ್ । ವಿಶೇಷೋ ನಾಮಾನ್ಯೋನ್ಯಾ ಭಾವವಿರೋಧಿಸಾಮಾನ್ಯರಹಿತಃ ಸಮವೇತಃ । ಸಮವಾಯಸ್ತು ಸಮವಾಯ ರಹಿತಃ ಸಂಬಂಧಃ–ಇತಿ ಷಣ್ಣಾಂ ಲಕ್ಷಣಾನಿ ವ್ಯವಸ್ಥಿತಾನಿ ॥

ದ್ರವ್ಯಾದಿ ಆರು ಭಾವಪದಾರ್ಥಗಳ ಲಕ್ಷಣ ಹೇಳುತ್ತಾನೆ. 'ತತ್ರ—' ಇತಿ. ದ್ರವ್ಯ, ಗುಣ, ಕರ್ಮಗಳಿಗೆ ದ್ರವ್ಯತ್ವ, ಗುಣತ್ವ, ಕರ್ಮತ್ವರೂಪ ಜಾತಿಯೇ ಲಕ್ಷಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುತ್ತವೆ. ದ್ರವ್ಯತ್ವಜಾತಿಯಿಂದ ಕೂಡಿರುವುದು ದ್ರವ್ಯ. ಹೀಗೆಯೇ ಗುಣಕರ್ಮ ಗಳು. ದ್ರವ್ಯತ್ವಜಾತಿಯನ್ನು ವಿಶದಪಡಿಸುತ್ತಾನೆ. 'ದ್ರವ್ಯತ್ವಂ—' ಇತಿ. ಗಗನಂ ಚ ಅರವಿಂದಂ ಚ, ಗಗನಾರವಿಂದೇ. ತಯೋಃ ಸಮವೇತಃ, ತಸ್ಯಭಾವಃ, ತಸ್ಮಿನ್. ದ್ವಂದ್ವಾಂತದಲ್ಲಿ ಶ್ರೂಯಮಾಣವಾದ ಸಮವೇತತ್ವಪದಕ್ಕೆ ಪ್ರತ್ಯೇಕಾನ್ವಯ. ಗಗನ ದಲ್ಲಿಯೂ ಸಮವೇತವಾಗಿ (ಸಮವಾಯದಿಂದ ಇದ್ದು) ಅರವಿಂದದಲ್ಲಿಯೂ ಸಮವೇತ ವಾಗಿ, ನಿತ್ಯವಾಗಿ, ಗಂಧದಲ್ಲಿ ಸಮವಾಯಸಂಬಂಧದಿಂದ ಇಲ್ಲದಿರುವ ಒಂದು ಧರ್ಮವೇ ದ್ರವ್ಯತ್ವಜಾತಿ. ಪೃಥಿವ್ಯಾದಿ ನವದ್ರವ್ಯಗಳಲ್ಲಿಯೂ ಅದು ಇರುವುದರಿಂದ ಗಗನ ದಲ್ಲಿಯೂ, ಕಮಲದಲ್ಲಿಯೂ ಇರುತ್ತದೆ. ಕಮಲ ಪೃಥಿವಿಯಾದುದರಿಂದ ಪೃಥಿವೀ ಸಮವೇತವೆಂದರ್ಥ. ಗಂಧವು ಗುಣ. ಅದರಲ್ಲಿ ದ್ರವ್ಯತ್ವವಿರುವುದಿಲ್ಲ. 'ಗಗನಸಮ ವೇತತ್ವೇ ಸತಿ' ಎಂದು ಹೇಳದಿದ್ದರೆ ಪೃಥಿವೀತ್ವ ಜಾತಿಯಲ್ಲಿ ಅತಿವ್ಯಾಪ್ತಿ ಬರುತ್ತದೆ. ಪೃಥಿವೀ ಮಾತ್ರದಲ್ಲಿರುವ ಪೃಥಿವೀತ್ವವು ಕಮಲ (ಪೃಥಿವೀ) ಸಮವೇತವಾಗಿಯೂ, ನಿತ್ಯವಾಗಿಯೂ, ಗಂಧದಲ್ಲಿ ಅಸಮವೇತವಾಗಿಯೂ ಇರುತ್ತದೆ. ಗಗನಸಮವೇತವಾಗಿರ ಬೇಕೆನ್ನುವುದರಿಂದ ಗಗನದಲ್ಲಿ ಪೃಥಿವೀತ್ವವಿಲ್ಲದಿರುವುದರಿಂದ ಅತಿವ್ಯಾಪ್ತಿ ಬರುವುದಿಲ್ಲ. 'ಅರವಿಂದ ಸಮವೇತತ್ವೇ ಸತಿ' ಎಂದು ಸತ್ಯಂತ ಹೇಳದಿದ್ದರೆ ಗಗನಗತ ಏಕತ್ವಸಂಖ್ಯೆ ಯಲ್ಲಿ ಅತಿವ್ಯಾಪ್ತಿ ಬರುತ್ತದೆ. ಗಗನದಲ್ಲಿರುವ ಏಕತ್ವಸಂಖ್ಯಾ ಗಗನದಲ್ಲಿಸಮವಾಯ ಸಂಬಂಧದಿಂದ ಇದ್ದು ನಿತ್ಯವಾಗಿ ಗಂಧಾಸಮವೇತವಾಗಿರುತ್ತದೆ ಆದರೆ ಕಮಲ ಸಮವೇತವಲ್ಲ. ಕಮಲದಲ್ಲಿರುವ ಏಕತ್ವಸಂಖ್ಯೆಯು ಗಗನಗತ ಏಕತ್ವಸಂಖ್ಯೆಯಿಂದ ಭಿನ್ನವಾದುದರಿಂದ ಅಲ್ಲಿಯೂ ಇದೆಯೆಂಬ ಶಂಕೆಗೆ ಅವಕಾಶವಿಲ್ಲ. 'ನಿತ್ಯತ್ವೇ ಸತಿ' ಎಂದು ಹೇಳದಿದ್ದರೆ ಗಗನಾರವಿಂದಗಳೆರಡಲ್ಲಿರುವ ದ್ವಿತ್ವ ಸಂಖ್ಯೆಯಲ್ಲಿ ಅತಿವ್ಯಾಪ್ತಿ. ಅದು ಗಗನಸಮವೇತ, ಅರವಿಂದ ಸಮವೇತ, ಗಂಧಾಸಮವೇತವಾಗಿದೆ. ಆದರೆ ನಿತ್ಯ ವಾಗುವುದಿಲ್ಲ. ಅಪೇಕ್ಷಾ ಬುದ್ಧಿಜನ್ಯವಾದುದರಿಂದ ಅದು ಅನಿತ್ಯ.

'ಗಂಧಾಸಮವೇತತ್ವಂ' ಎಂದು ಹೇಳದಿದ್ದರೆ ಸತ್ತಾಜಾತಿಯಲ್ಲಿ ಅತಿವ್ಯಾಪ್ತಿ. ದ್ರವ್ಯ ಗುಣ ಕರ್ಮ ಮೂರರಲ್ಲಿಯೂ ಇರುವ ಈ ಸತ್ತಾಜಾತಿಯು ನಿತ್ಯವಾಗಿ ಗಗನ ದಲ್ಲಿಯೂ ಅರವಿಂದದಲ್ಲಿಯೂ ಸಮವೇತವಾಗಿದೆ. ವಿಶೇಷ್ಯದಳ ಹೇಳಿದರೆ ಸತ್ತಾ ಜಾತಿಯು ಗುಣವಾದ ಗಂಧದಲ್ಲಿಯೂ ಸಮವಾಯದಿಂದ ಇರುವುದರಿಂದ ಗಂಧಾ ಸಮವೇತವಾಗುವುದಿಲ್ಲ. ಹೀಗೆ ಎಲ್ಲಾ ದಳಗಳೂ ಸಾರ್ಥಕಗಳಾಗಿವೆ. ಗುಣತ್ವ ಜಾತಿಯ ಲಕ್ಷಣ. 'ಸಮವಾಯಿ' – ಇತಿ. ಸಮವಾಯಿಕಾರಣದಲ್ಲಿ ಸಮವೇತ ವಾಗದೆಯೂ (ಸಮವಾಯ ಸಂಬಂಧದಿಂದ ಇಲ್ಲದೆಯೂ) ಅಸಮವಾಯಿಕಾರಣಕ್ಕಿಂತ ಭಿನ್ನವಾದುದರಲ್ಲಿ ಸಮವೇತವಾಗಿಯೂ, ಸತ್ತಾಜಾತಿಯಿಂದ ಸಾಕ್ಷಾತ್ತಾಗಿ ವ್ಯಾಪ್ಯ ವಾಗಿಯೂ ಇರುತ್ತದೆ. ಸತ್ತಾ ಎಂಬುದು ತ್ರಿತಯವೃತ್ತಿಯಾದ ಪರಾಜಾತಿ. ದ್ರವ್ಯತ್ವ, ಗುಣತ್ವ, ಕರ್ಮತ್ವ ಈ ಮೂರು ಜಾತಿಗಳು ಸತ್ತಾ ಸಾಕ್ಷಾದ್ವ್ಯಾಪ್ಯ ಜಾತಿ ಗಳಾಗುವುದರಿಂದ ಪರಂಪರಯಾ ಸತ್ತಾವ್ಯಾಪ್ಯ ಜಾತಿಗಳಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮವಾಯಿಕಾರಣವೆಂದರೆ ದ್ರವ್ಯವೇ ಆಗುತ್ತದೆ. ಅಲ್ಲಿ ಗುಣತ್ವವಿಲ್ಲ. ಆದುದರಿಂದ ಸಮವಾಯಿಕಾರಣಾ ಸಮವೇತವಾಗುತ್ತದೆ. (ಅಲ್ಲಿ ದ್ರವ್ಯತ್ವ ಸಮವೇತ) ಗುಣತ್ವ ಜಾತಿಯು ಗುಣದಲ್ಲಿ ಮಾತ್ರ ಸಮವೇತವಾಗಿರುತ್ತದೆ. ಎರಡನೆಯ ದಳ. ಅಸಮವಾಯಿಕಾರಣಭಿನ್ನಾಸಮವೇತತ್ವಂ. ಅಸಮವಾಯಿಕಾರಣಗಳು ಸಂಯೋಗಾದಿಗಳು. ತದ್ಭಿನ್ನಗಳು ಅಂದರೆ ಆತ್ಮವಿಶೇಷ ಗುಣಗಳು. ಇವು ಎಲ್ಲಿಯೂ ಅಸಮವಾಯಿಕಾರಣಗಳಾಗುವುದಿಲ್ಲ. ಅಲ್ಲಿ ಗುಣತ್ವವು ಸಮವಾಯಸಂಬಂಧದಿಂದ ಇರುವುದರಿಂದ ಸಮವೇತವಾಗುತ್ತದೆ. ಇಲ್ಲಿಯೂ ಸಮವೇತಕಾರಣಾಸಮವೇತವೆಂದು ಹೇಳದಿದ್ದರೆ ದ್ರವ್ಯತ್ವದಲ್ಲಿ ಅತಿವ್ಯಾಪ್ತಿ. ಅದು ಸತ್ತಾಸಾಕ್ಷಾದ್ವ್ಯಾಪ್ಯವಾದುದಲ್ಲದೆ, ಅಸಮವಾಯಿಕಾರಣ ಭಿನ್ನಅಂದರೆ ದ್ರವ್ಯದಲ್ಲಿ ಸಮವೇತವಾಗಿದೆ. ಸಮವಾಯಿಕಾರಣಾ ಸಮವೇತವಾಗಬೇಕೆಂದರೆ ಅದು ಸಮವಾಯಿಕಾರಣವಾದ ದ್ರವ್ಯದಲ್ಲಿ ಸಮವೇತವೇ ಆಗುತ್ತದೆ. ಆದುದರಿಂದ ಅದನ್ನು ತೆಗೆದು ಕೊಳ್ಳಲು ಬರುವುದಿಲ್ಲ. ಅಸಮವಾಯಿಕಾರಣಭಿನ್ನಸಮವೇತತ್ವದಳ ಹೇಳದಿದ್ದರೆ ಕರ್ಮತ್ವದಲ್ಲಿ ಅತಿವ್ಯಾಪ್ತಿ. ಇದು ಸಮವಾಯಿಕಾರಣ ಅಂದರೆ ದ್ರವ್ಯದಲ್ಲಿ ಅಸಮವೇತವಾಗಿ (ಅಲ್ಲಿ ಸಮವಾಯಸಂಬಂಧದಿಂದ ಕರ್ಮತ್ವವಿರುವುದಿಲ್ಲ.) ಸತ್ತಾಸಾಕ್ಷಾದ್ವ್ಯಾಪ್ಯ ಜಾತಿಯಾಗುತ್ತದೆ. ಆದಳ ಹೇಳಿದರೆ ಕರ್ಮತ್ವದಲ್ಲಿ ಬರುವುದಿಲ್ಲ. ಕರ್ಮವು ಯಾವಾಗಲೂ ಸಂಯೋಗಕ್ಕೆ ಅಥವಾ ವಿಭಾಗಕ್ಕೆ ಅಸಮವಾಯಿಕಾರಣವಾಗುವುದರಿಂದ ತದ್ಭಿನ್ನಸಮವೇತವಾಗುವುದಿಲ್ಲ. ಸತ್ತಾಸಾಕ್ಷಾದ್ವ್ಯಾಪ್ಯಜಾತಿಯೆಂದು ಹೇಳದಿದ್ದರೆ ಜ್ಞಾನತ್ವದಲ್ಲಿ ಅತಿವ್ಯಾಪ್ತಿ. ಇದು ಸಮವಾಯಿಕಾರಣವಾದ ದ್ರವ್ಯದಲ್ಲಿ ಅಸಮವೇತವಾಗಿ, ಅಸಮವಾಯಿಕಾರಣ ಭಿನ್ನವಾದ ಜ್ಞಾನದಲ್ಲಿ ಸಮವೇತವಾಗಿರುತ್ತದೆ. ಆತ್ಮವಿಶೇಷ ಗುಣವಾದುದರಿಂದ ಇದು ಎಲ್ಲಿಯೂ ಅಸಮವಾಯಿಕಾರಣವಾಗುವುದಿಲ್ಲ. ಆದರೆ ಇದು ಗುಣತ್ವಸಾಕ್ಷಾದ್ವ್ಯಾಪ್ಯವಾಗುವುದಲ್ಲದೆ ಸತ್ತಾಸಾಕ್ಷಾದ್ವ್ಯಾಪ್ಯಜಾತಿಯಾಗುವುದಿಲ್ಲ. ಸಮವಾಯಿಕಾರಣಾಸಮವಾಯಿಕಾರಣ ಭಿನ್ನಸಮವೇತತ್ವೇ ಸತಿ ಸತ್ತಾಸಾಕ್ಷಾದ್ವ್ಯಾಪ್ಯಜಾತಿತ್ವಂ ಎಂದೂ ಲಕ್ಷಣ ಹೇಳುತ್ತಾರೆ. ಆಗ ಯಾವುದು ಸಮವಾಯಿಕಾರಣವೂ ಅಲ್ಲವೋ, ಅಸಮವಾಯಿಕಾರಣವೂ ಅಲ್ಲವೋ, ಅಲ್ಲಿ ಸಮವೇತವಾಗಿರಬೇಕೆಂದರ್ಥ. ಜ್ಞಾನಾದಿಗಳಲ್ಲಿ ತದ್ದ್ವಯಭಿನ್ನತ್ವ ಬರುವುದರಿಂದ ಅಲ್ಲಿ ಸಮವೇತವಾದುದು ಗುಣತ್ವ. ದ್ರವ್ಯತ್ವವು ಸಮವಾಯಿಕಾರಣ ಭಿನ್ನಸಮವೇತವಾಗುವುದಿಲ್ಲ. ದ್ರವ್ಯಸಾಮಾನ್ಯವೂ ಸಮವಾಯಿಕಾರಣವಾಗುವುದೆಂದು ಹಿಂದೆ ಹೇಳಿದೆ. ಜೀವೇಶ್ವರಗತದ್ವಿತ್ವದಲ್ಲಿ ಈಶ್ವರನೂ ಸಮವಾಯಿಕಾರಣನಾಗಿರುತ್ತಾನೆ. 'ಕರ್ಮತ್ವಂ'— ಇತಿ. ನಿತ್ಯಪದಾರ್ಥಗಳಲ್ಲಿ ಇಲ್ಲದೇ ಇದ್ದು ಸತ್ತಾಸಾಕ್ಷಾದ್ವ್ಯಾಪ್ಯವಾಗಿರುವ ಜಾತಿಯೇ ಕರ್ಮತ್ವ. ನಿತ್ಯೇಷು (ಪದಾರ್ಥೇಷು) ಯತ್ ಅಸಮವೇತತ್ವಂ, (ಸಮವಾಯಸಂಬಂಧದಿಂದ ಇಲ್ಲದಿರುವುದು) ತೇನ ಸಹಿತಾ — ಯುಕ್ತಾ. ಸತ್ತಾಯಾಃ ಸಾಕ್ಷಾದ್ವ್ಯಾಪ್ಯಾ ಚ ಜಾತಿಃ ದ್ರವ್ಯತ್ವವು ನಿತ್ಯಗಳಾದ ಪರಮಾಣು ಆಕಾಶ ಮುಂತಾದವುಗಳಲ್ಲಿ ಸಮವೇತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿದೆ. ಹೀಗೆಯೇ ಗುಣತ್ವವೂ ನಿತ್ಯವಾದ ಜಲಪರಮಾಣುಗಳಲ್ಲಿ ಸಮವೇತವಾಗಿದೆ. ಆದುದರಿಂದ ಇವೆರಡೂ ನಿತ್ಯಾಸಮವೇತಗಳಾಗುವುದಿಲ್ಲ. ನಿತ್ಯಕರ್ಮಯಾವುದೂ ಇಲ್ಲದಿರುವುದರಿಂದ ಕರ್ಮತ್ವಜಾತಿ ನಿತ್ಯಸಮವೇತವಾಗುವುದಿಲ್ಲ. ನಿತ್ಯಸಮವೇತತ್ವ ರಹಿತಾ ಎಂದೂ ಪಾಠಾಂತರ. ಆಗ ಸ್ಪಷ್ಟಾರ್ಥವಾಗುತ್ತದೆ. 'ಸಾಮಾನ್ಯಂ'—ಇತಿ. ಪ್ರಧ್ವಂಸಸ್ಯ — ವಿನಾಶಸ್ಯ ಯಃ ಪ್ರತಿಯೋಗೀ — ವಿನಾಶೀ ಪದಾರ್ಥ. (ನಾಶಹೊಂದಿದ ಪದಾರ್ಥ) ತಸ್ಯ ಭಾವಃ ಪ್ರಧ್ವಂಸಪ್ರತಿಯೋಗಿತ್ವಂ — ವಿನಾಶಿತ್ವಂ ಎಂದು ತಾತ್ಪರ್ಯ ತೇನ ರಹಿತಂ — ಅವಿನಾಶೀ ಇತ್ಯರ್ಥಃ. ಅನೇಕೇಷು ಸಮವೇತಂ ಚ ಸಾಮಾನ್ಯಂ — ಜಾತಿಃ ನಾಶಹೊಂದಿದ ಪದಾರ್ಥವು ನಾಶಕ್ಕೆ ಪ್ರತಿಯೋಗಿಯಾಗುತ್ತದೆ. ಸಾಮಾನ್ಯವು ನಿತ್ಯವಾದುದರಿಂದ ವಿನಾಶಿತ್ವದಿಂದ ಕೂಡಿಲ್ಲ. ಅದು ಅವಿನಾಶಿ. ಅನೇಕಪದಾರ್ಥಗಳಲ್ಲಿ ಸಮವಾಯಸಂಬಂಧದಿಂದ ಇರುತ್ತದೆ. 'ವಿಶೇಷಃ—' ಇತಿ. ಅನ್ಯೋನ್ಯಾಭಾವಃ ಅಂದರೆ ಪರಮಾಣ್ವಾದಿಗಳಿಗಿರುವ ಪರಸ್ಪರ ಭೇದ. ತದ್ವಿರೋಧಿಯಾದ ಸಾಮಾನ್ಯ ಅಂದರೆ ಜಾತಿ, ಅದರಿಂದ ರಹಿತವಾದುದು, ಜಾತಿಇಲ್ಲದಿರುವುದೆಂದು ತಾತ್ಪರ್ಯ. ಸಮವೇತವಾಗಿರಬೇಕು ಅಂದರೆ ತಾನು ಸಮವಾಯಸಂಬಂಧದಿಂದ ಇರುತ್ತದೆಂದರ್ಥ. ಸಾಮಾನ್ಯರಹಿತವೆಂದುದರಿಂದ ದ್ರವ್ಯ ಗುಣಕರ್ಮಗಳಿಗೆ ವ್ಯಾವೃತ್ತಿಯೂ, ಸಮವೇತವೆಂದುದರಿಂದ ಸಾಮಾನ್ಯ ವ್ಯಾವೃತ್ತಿಯೂ ಆಗುತ್ತದೆ. ದ್ರವ್ಯಾದಿಗಳಲ್ಲಿ ಜಾತಿ ಇರುತ್ತದೆ. ಸಮವಾಯವು ಸ್ವರೂಪದಿಂದ ಇರುವು ದಲ್ಲದೆ ಅದು ಸಮವಾಯದಿಂದ ಎಲ್ಲಿಯೂ ಇರುವುದಿಲ್ಲ. ವಿಶೇಷಗಳಲ್ಲಿ ಜಾತಿ ಇಲ್ಲ. ಜಾತಿಯನ್ನು ಅಲ್ಲಿ ಅಂಗೀಕರಿಸಿದರೆ ಸ್ವತೋವ್ಯಾವರ್ತಕತ್ವರೂಪಹಾನಿ ಸಂಭವಿಸುತ್ತದೆ. ಆದುದರಿಂದ ಅನ್ಯೋನ್ಯಾಭಾವವಿರೋಧಿತ್ವರೂಪದಿಂದ ಅವು ಸಾಮಾನ್ಯ ರಹಿತವಾಗಿರು ತ್ತವೆ. 'ಸಮವಾಯಃ —' ಇತಿ. ಯಾವ ಸಂಬಂಧಕ್ಕೆ ಸಮವಾಯವಿಲ್ಲವೋ ಆ ಸಂಬಂಧವೇ ಸಮವಾಯ. ಸಂಯೋಗವು ಸಂಯೋಗಿಪದಾರ್ಥದಲ್ಲಿ ಸಮವಾಯದಿಂದ ಇರುತ್ತದೆ ಸಮವಾಯಕ್ಕೆ ಇನ್ನೊಂದು ಸಮವಾಯವಿಲ್ಲ.

ದ್ರವ್ಯಂ ನವವಿಧಂ ಪೃಥಿವ್ಯಪ್ತೇಜೋವಾಯ್ವಾಕಾಶಕಾಲದಿಗಾತ್ಮಮನಾಂಸೀತಿ । ತತ್ರ ಪೃಥಿವ್ಯಾದಿಚತುಷ್ಟಯಸ್ಯ ಪೃಥಿವೀತ್ವಾದಿಜಾತಿರ್ಲಕ್ಷಣಮ್ । ಪೃಥಿವೀತ್ವಂ ನಾಮ ಪಾಕಜರೂಪಸಮಾನಾಧಿಕರಣ ದ್ರವ್ಯತ್ವಸಾಕ್ಷಾದ್ವ್ಯಾಪ್ಯಜಾತಿಃ । ಅಪ್ತ್ವಂ ನಾಮ ಸರಿತ್ಸಾಗರಸಮವೇತತ್ವೇ ಸತಿ ಜ್ವಲನಾಸಮವೇತಂ ಸಾಮಾನ್ಯಮ್ । ತೇಜಸ್ತ್ವಂ ನಾಮ ಚಂದ್ರಚಾಮೀಕರಸಮವೇತತ್ವೇ ಸತಿ ಸಲಿಲಾಸಮವೇತಂ ಸಾಮಾನ್ಯಮ್ । ವಾಯುತ್ವಂ ನಾಮ ತ್ವಗಿಂದ್ರಿಯ ಸಮವೇತ ದ್ರವ್ಯತ್ವ ಸಾಕ್ಷಾದ್ವ್ಯಾಪ್ಯಜಾತಿಃ । ಆಕಾಶಕಾಲದಿಶಾ ಮೇಕೈಕ ತ್ವಾದಪರ ಜಾತ್ಯಭಾವೇ ಪಾರಿಭಾಷಿಕ್ಯಸ್ತಿಸ್ರಃ ಸಂಜ್ಞಾ ಭವಂತಿ. ಆಕಾಶಃ ಕಾಲೋ ದಿಗಿತಿ । ಸಂಯೋಗಾಜನ್ಯ ಜನ್ಯವಿಶೇಷಗುಣ ಸಮಾನಾಧಿಕರಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷಾಧಿಕರಣಮಾಕಾಶಮ್ । ವಿಭುತ್ವೇ ಸತಿ ದಿಗಸಮವೇತ ಪರತ್ವಾ ಸಮವಾಯಿ ಕಾರಣಾಧಿಕರಣಃ ಕಾಲಃ। ಅಕಾಲತ್ವೇ ಸತ್ಯವಿಶೇಷಗುಣಾ ಮಹತೀ ದಿಕ್ । ಆತ್ಮಮನಸೋಃ ರಾತ್ಮತ್ವಮನಸ್ತ್ವೇ । ಆತ್ಮತ್ವಂ ನಾಮಾಮೂರ್ತ ಸಮವೇತ ದ್ರವ್ಯತ್ವಾಪರಜಾತಿಃ । ಮನಸ್ತ್ವಂ ನಾಮ ದ್ರವ್ಯ ಸಮವಾಯಿಕಾರಣ ತ್ವರಹಿತಾಣು ಸಮವೇತ ದ್ರವ್ಯತ್ವಾಪರಜಾತಿಃ ॥

ಪೃಥಿವೀ, ಅಪ್, ತೇಜಃ, ವಾಯುಃ, ಆಕಾಶಃ, ಕಾಲಃ, ದಿಕ್, ಆತ್ಮಾ, ಮನಃ ಎಂದು ದ್ರವ್ಯವು ಒಂಬತ್ತು ವಿಧವಾಗಿದೆ. ಇವುಗಳಲ್ಲಿ ಮೊದಲನೆಯ ನಾಲ್ಕು ದ್ರವ್ಯ ಗಳಲ್ಲಿ ಜಾತಿ ಇರುವುದರಿಂದ ತದ್ವತ್ತ್ವಂ ಅಂದರೆ ಪೃಥಿವೀತ್ವವತ್ತ್ವಂ ಪೃಥಿವಿಯಲಕ್ಷಣ. ಜಲತ್ವವತ್ತ್ವಂ ಜಲದಲಕ್ಷಣ. ತೇಜಸ್ತ್ವವತ್ತ್ವಂ, ವಾಯುತ್ವವತ್ತ್ವಂ ತೇಜೋ ವಾಯುಗಳಲಕ್ಷಣವಾಗುತ್ತದೆ.

'ಪೃಥಿವೀತ್ವಂ'— ಇತಿ. ಪಾಕಜಂ ಯದ್ರೂಪಂ ತತ್ಸಮಾನಾಧಿಕರಣೀ ಭೂತಾ, ದ್ರವ್ಯತ್ವಸಾಕ್ಷಾದ್ವ್ಯಾಪ್ಯಾ ಯಾ ಜಾತಿಃ, ತದೇವ ಪೃಥಿವೀತ್ವಮ್. ಪೃಥಿವಿ ಯಲ್ಲಿರುವ ರೂಪವು ಪಾಕಜವಾಗಿರುತ್ತದೆ. ವಿಲಕ್ಷಣತೇಜಃ ಸಂಯೋಗಕ್ಕೆ ಪಾಕವೆಂದು ಹೆಸರು. ಪಾಕದಿಂದ ರೂಪ ಪರಾವೃತ್ತಿಯಾಗುತ್ತದೆ. ಮಾವಿನಕಾಯಿ ಹಸುರಾಗಿ ದ್ದರೆ ಪಾಕದಿಂದ ಹಳದಿಯಾಗುವುದು ಎಲ್ಲರಿಗೂ ತಿಳಿದವಿಷಯ. ಇಂತಹ ರೂಪಾಧಿ ಕರಣವಾದುದು ಪೃಥಿವೀ. ಅಲ್ಲಿ ಪೃಥಿವೀತ್ವವಿರುವುದಲ್ಲದೆ (ಪಾಕಜರೂಪವೂ ಪೃಥಿವೀತ್ವವೂ ಒಂದೇ ಅಧಿಕರಣ ಅಂದರೆ ಆಶ್ರಯದಲ್ಲಿದ್ದರೆ ಆಗ ಸಮಾನಾಧಿಕರಣ ಗಳಾಗುತ್ತವೆ.) ಅದು ದ್ರವ್ಯತ್ವಸಾಕ್ಷಾದ್ವ್ಯಾಪ್ಯವಾಗಿಯೂ ಇರುತ್ತದೆ. ಜಲಾದಿಗಳಲ್ಲಿ ಪಾಕದಿಂದ ರೂಪಪರಾವೃತ್ತಿಯುಂಟಾಗುವುದಿಲ್ಲ ಬೆಂಕಿಯಿಂದ ಬಿಸಿಯಾಗುವುದೆಂದರೆ ಅಲ್ಲಿ ಶೈತ್ಯಗುಣಹೋಗುವುದಿಲ್ಲ. ತೇಜಃ ಕಣಗಳು ಸೇರಿ ಬಿಸಿಯಾಗಿರುತ್ತದೆ. ಉಪಾಧಿ ಹೋದರೆ ಅದೂ ಹೋಗುತ್ತದೆ.

ಇಲ್ಲಿ ಪಾಕಜರೂಪಸಮಾನಾಧಿಕರಣವೆಂಬ ದಳ ಹೇಳದಿದ್ದರೆ ಜಲತ್ವಜಾತಿಯಲ್ಲಿ ಅತಿವ್ಯಾಪ್ತಿ. ಅದು ದ್ರವ್ಯತ್ವಸಾಕ್ಷಾದ್ವ್ಯಾಪ್ಯ ಜಾತಿಯಾಗಿದೆ. ಆದರೆ ಪಾಕಜರೂಪ ಸಮಾನಾಧಿಕರಣವಾಗುವುದಿಲ್ಲ. ಪಾಕಜರೂಪಕ್ಕೆ ಪೃಥಿವಿಯೊಂದೇ ಅಧಿಕರಣ. ದ್ರವ್ಯತ್ವ ಸಾಕ್ಷಾದ್ವ್ಯಾಪ್ಯವೆಂದುದರಿಂದ ಸತ್ತಾಘಟತ್ವಾದಿ ಜಾತಿವ್ಯಾವೃತ್ತಿಯಾಗುತ್ತದೆ. ಅವು ಪಾಕಜರೂಪಾಧಿಕರಣವಾದ ಘಟದಲ್ಲಿ ಇರುತ್ತವೆ. ಸತ್ತಾ ದ್ರವ್ಯತ್ವವ್ಯಾಪ್ಯ ವಾಗುವುದಿಲ್ಲ. ಘಟತ್ವಾದಿಗಳು ಸಾಕ್ಷಾದ್ವ್ಯಾಪ್ಯಗಳಾಗುವುದಿಲ್ಲ. 'ಅಪ್ತ್ವಂ—' ಇತಿ. ಸರಿತ್ಸಾಗರಗಳಲ್ಲಿ ಸಮವಾಯಸಂಬಂಧದಿಂದ ಇದ್ದು ಜ್ವಲನದಲ್ಲಿ ಅಸಮವೇತವಾಗಿರು ವುದು (ಸಮವಾಯದಿಂದ ಇಲ್ಲದಿರುವುದು). ಪ್ರಥಮದಳದಿಂದ ಪೃಥಿವೀತ್ವಾದಿ ವ್ಯಾವೃತ್ತಿ. ಅವು ಸರಿತ್ಸಾಗರಗಳಲ್ಲಿ ಸಮವಾಯದಿಂದ ಇರುವುದಿಲ್ಲ. ದ್ರವ್ಯತ್ವವು ಜ್ವಲನಸಮವೇತವಾದುದರಿಂದ ದ್ವಿತೀಯ ದಳದಿಂದ ವ್ಯಾವೃತ್ತಿ. ಸರಿತ್ವಜಾತಿ ಸಾಗರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮವೇತವಲ್ಲ. ಸಾಗರತ್ವಜಾತಿ ಸರಿತ್ಸಮವೇತವಲ್ಲ. ಸರಸ್ತ್ವಾದಿಗಳು ಸರಿತ್ಸಾಗರಸಮವೇತಗಳಾಗದಿರುವುದರಿಂದ ಎಲ್ಲಿಯೂ ಅತಿವ್ಯಾಪ್ತಿಗೆ ಅವಕಾಶವಿಲ್ಲ. 'ತೇಜಸ್ತ್ವಂ'—ಇತಿ. ಚಂದ್ರನಲ್ಲಿಯೂ ಚಾಮೀಕರ ಅಂದರೆ ಸುವರ್ಣದಲ್ಲಿಯೂ ಸಮವಾಯದಿಂದ ಇದ್ದು ಸಲಿಲದಲ್ಲಿ ಅಸಮವೇತವಾಗಿರುವ ಜಾತಿಯೇ ತೇಜಸ್ತ್ವಜಾತಿ. ಸುವರ್ಣವೂ ತೇಜಸ್ಸೆಂದು ತಾರ್ಕಿಕರು ಸಾಧಿಸಿರುತ್ತಾರೆ. ಹಿಂದಿನಂತೆ ದಳಸಾರ್ಥಕ್ಯ ತಿಳಿಯಬೇಕು. 'ವಾಯುತ್ವಂ'— ಇತಿ. ತ್ವಗಿಂದ್ರಿಯದಲ್ಲಿ ಸಮವಾಯದಿಂದ ಇದ್ದು ದ್ರವ್ಯತ್ವಸಾಕ್ಷಾದ್ವ್ಯಾಪ್ಯವಾದ ಜಾತಿ. ತ್ವಗಿಂದ್ರಿಯ ವಾಯುಸಂಬಂಧವಾದುದೆಂದು ಪ್ರಸಿದ್ಧವಾಗಿದೆ. ಆಕಾಶಕಾಲದಿಕ್ ಈ ಮೂರು ಒಂದೊಂದೇ ಆದುದರಿಂದ ಅಲ್ಲಿ ಆಕಾಶತ್ವಾದಿಜಾತಿ ಇರುವುದಿಲ್ಲ. ಆದುದರಿಂದ ಅವುಗಳಿಗೆ ಆಕಾಶ ಇತ್ಯಾದಿ ಪಾರಿಭಾಷಿಕ ಸಂಜ್ಞೆ ಅನಾದಿಯಿಂದ ಬಂದಿದೆಯೆಂದು ತಿಳಿಯಬೇಕು. 'ಸಂಯೋಗಾ'—ಇತಿ. ಸಂಯೋಗಾಜನ್ಯಃ ಜನ್ಯಶ್ಚಯಃ ವಿಶೇಷಗುಣಃ, ತತ್ಸಮಾನಾಧಿಕರಣಸ್ಯ ವಿಶೇಷಸ್ಯ ಯದಧಿಕರಣಂ ತದಾಕಾಶಮಿತ್ಯರ್ಥಃ. ವಿಶೇಷವೆಂಬ ಪದಾರ್ಥವು ಕೇವಲ ನಿತ್ಯದ್ರವ್ಯಗಳಲ್ಲಿರುತ್ತದೆಯೆಂದುದರಿಂದ ವಿಶೇಷಕ್ಕೆ ಅಧಿಕರಣವು ಆಕಾಶವಾಗುತ್ತದೆ. ಜನ್ಯವಾದ ವಿಶೇಷಗುಣವೆಂದರೆ ಇಲ್ಲಿ ಶಬ್ದ. (ಶಬ್ದವು ಆಕಾಶದ ಗುಣ). ವಿಶೇಷವು ಶಬ್ದವೆಂಬ ಜನ್ಯವಿಶೇಷಗುಣದೊಡನೆ ಸಮಾನಾಧಿಕರಣವಾಗುತ್ತದೆ. ಎರಡಕ್ಕೂ ಆಕಾಶವು ಒಂದೇ ಅಧಿಕರಣವಾಗಿದೆ. ಶಬ್ದವು ಅನಿತ್ಯವಾದುದರಿಂದ ಜನ್ಯ. ಅದು ಸಂಯೋಗದಿಂದ ಅಜನ್ಯವಾಗಿದೆ. ಶಬ್ದವು ವಿಭಾಗದಿಂದಲೂ ಶಬ್ದದಿಂದಲೂ ಹುಟ್ಟುವುದರಿಂದ ಶಬ್ದಜವಾಗುವುದಲ್ಲದೆ ಸಂಯೋಗಜ (ಸಂಯೋಗಜನ್ಯ) ವಾಗುವುದಿಲ್ಲ. ವಿಶೇಷಾಧಿಕರಣವೆಂದುದರಿಂದ ದ್ವ್ಯಣುಕಾದಿ ಅನಿತ್ಯದ್ರವ್ಯಗಳಿಗೂ, ಗುಣಕರ್ಮಗಳಿಗೂ ವ್ಯಾವೃತ್ತಿಯಾಗುತ್ತದೆ. ವಿಶೇಷಗಳು ಯಾವಾಗಲೂ ನಿತ್ಯದ್ರವ್ಯಗಳಲ್ಲಿ ಮಾತ್ರ ಇರುತ್ತವೆಂದು ಸಿದ್ಧಾಂತ. ಪೃಥಿವೀಪರಮಾಣುವಿನಲ್ಲಿರುವ ರೂಪಾದಿವಿಶೇಷಗುಣಗಳು ಜನ್ಯವಾದರೂ ಪಾಕಜಗಳಾಗುವುದರಿಂದ ಸಂಯೋಗಜನ್ಯವಾಗುವುದಿಲ್ಲ. ಜಲತೇಜೋವಾಯು ಪರಮಾಣುಗಳ ವಿಶೇಷಗುಣಗಳು ಜನ್ಯವಾಗುವುದಿಲ್ಲ. ದಿಕ್ಕಾಲ ಮನಸ್ಸುಗಳಲ್ಲಿ ವಿಶೇಷಗುಣಗಳೇ ಇರುವುದಿಲ್ಲ. ಪರಮಾತ್ಮನಲ್ಲಿರುವ ಬುದ್ಧ್ಯಾದಿವಿಶೇಷಗುಣಗಳು ಜನ್ಯವಲ್ಲ. ಜೀವಾತ್ಮನಲ್ಲಿ ಅವು ಜನ್ಯವಾದರೂ ಸಂಯೋಗಜನ್ಯವಾಗುವುದಿಲ್ಲ. ಮನಃಸಂಯೋಗದಿಂದ ಉಂಟಾಗುತ್ತವೆ. ಹೀಗೆ ಆಕಾಶವೊಂದೇ ಈ ಲಕ್ಷಣಕ್ಕೆ ಲಕ್ಷ್ಯವಾಗುತ್ತದೆ. 'ಶಬ್ದಗುಣಕಮಾಕಾಶಂ' ಎಂದು ಸುಲಭವಾಗಿ ಹೇಳಲು ಸಾಧ್ಯವಿರುವಾಗ ಈ ರೀತಿ ಲಕ್ಷಣ ಹೇಳಿರುವುದು ವೈಚಿತ್ರ್ಯಪ್ರದರ್ಶನವೆಂದು ತಿಳಿಯಬೇಕು. ಕಾಲದ ಲಕ್ಷಣ 'ವಿಭುತ್ವೇ'—ಇತಿ. 'ದಿಗಸಮವೇತಂ ಯತ್ಪರತ್ವಂ, ತದಸಮವಾಯಿಕಾರಣಂ ಯತ್ ತದಾಧಾರಭೂತಃ ಯಃ ವಿಭುಃ ಪದಾರ್ಥಃ ಸಃ ಕಾಲ ಇತ್ಯರ್ಥಃ. ಪರತ್ವ ಎರಡು ವಿಧ. ಸಮೀಪವಸ್ತುವಿಗಿಂತ ದೂರದಲ್ಲಿರುವ ವಸ್ತುವಿನಲ್ಲಿರುವ ಒಂದು ಪರತ್ವ. ಕನಿಷ್ಠನಿಗಿಂತ ಜ್ಯೇಷ್ಠನಲ್ಲಿರುವ ಪರತ್ವ. ಮೊದಲನೆಯ ಪರತ್ವಕ್ಕೆ ದಿಕ್ ವಸ್ತು ಸಂಯೋಗವು ಅಸಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಯಿ ಕಾರಣವಾಗುವುದರಿಂದ ಅದು ದಿಕ್ಸಮವೇತವಾಗುತ್ತದೆ. ಎರಡನೆಯದಕ್ಕೆ ಕಾಲ ವಸ್ತು ಸಂಯೋಗವು ಅಸಮವಾಯಿಕಾರಣವಾಗುವುದರಿಂದ ಕಾಲ ಸಮವೇತ. ಅದು ದಿಕ್ಸಮವೇತವಾಗುವುದಿಲ್ಲ. ಸಂಯೋಗವು ದ್ವಿನಿಷ್ಠವಾದುದರಿಂದ ಜೇಷ್ಠನಲ್ಲಿಯೂ ಇರುವುದರಿಂದ ಅಲ್ಲಿ ಅತಿವ್ಯಾಪ್ತಿವಾರಣೆಗೋಸ್ಕರ ವಿಭುತ್ವೇಸತಿ ಎಂದು ಹೇಳಿದೆ. ಆಕಾಶಾತ್ಮಗಳಲ್ಲಿ ವಿಭುತ್ವವಿರುವುದರಿಂದ ಅಲ್ಲಿ ಅತಿವ್ಯಾಪ್ತಿವಾರಣೆಗೆ ಪರತ್ವಾಸಮವಾಯಿ ಕಾರಣನೆಂದು ಹೇಳಿದೆ. ದಿಕ್ಕಿನಲ್ಲಿ ಅತಿವ್ಯಾಪ್ತಿವಾರಣೆಗೋಸ್ಕರ ದಿಗಸಮವೇತವೆಂದು ಹೇಳಿದೆ. 'ಅಕಾಲತ್ವೇ'—ಇತಿ. ಕಾಲಭಿನ್ನವಾಗಿಯೂ ವಿಶೇಷಗುಣರಹಿತವಾಗಿಯೂ ಇದ್ದು ಮಹತ್ವವುಳ್ಳದ್ದು ದಿಕ್. ಕ್ರಮವಾಗಿ ಕಾಲ, ಆಕಾಶಾತ್ಮ, ಮನಸ್ಸುಗಳಲ್ಲಿ ಅತಿ ವ್ಯಾಪ್ತಿವಾರಣೆಗೋಸ್ಕರ ಆಯಾಯದಳ ಹೇಳಿದೆ. ಆತ್ಮತ್ವ, ಮನಸ್ತ್ವಜಾತಿಯಿಂದ ಕೂಡಿರುವುದು ಆತ್ಮ, ಮನಸ್ಸುಗಳ ಲಕ್ಷಣ 'ಆತ್ಮತ್ವ'—ಇತಿ. ಅಮೂರ್ತಸಮವೇತ ವಾದ ದ್ರವ್ಯತ್ವವ್ಯಾಪ್ಯಜಾತಿಯೇ ಆತ್ಮತ್ವ. ಪೃಥಿವೀ ಆಪ್ ತೇಜೋವಾಯು ಮನಸ್ಸು ಮೂರ್ತದ್ರವ್ಯಗಳು. ಅಲ್ಲಿರುವ ಪೃಥಿವೀತ್ವಾದಿ ಜಾತಿಗಳು ಮೂರ್ತಾಸಮವೇತ ವಾಗುವುದಿಲ್ಲ. ಏಕವ್ಯಕ್ತಿಯಾದುದರಿಂದ ಆಕಾಶಕಾಲದಿಕ್ಕುಗಳಲ್ಲಿ ಜಾತಿಯೇ ಇಲ್ಲ. ಉಳಿದದ್ದು ಆತ್ಮತ್ವವೇ ಆಗುತ್ತದೆ. ಮನಸ್ತ್ವ ಜಾತಿಲಕ್ಷಣ. ದ್ರವ್ಯಸಮವಾಯಿ ಕಾರಣತ್ವ ಧರ್ಮರಹಿತವಾದ ಅಣುಗಳಲ್ಲಿ ಸಮವಾಯಸಂಬಂಧದಿಂದ ಇರುವ ದ್ರವ್ಯತ್ವ ವ್ಯಾಪ್ಯವಾದ ಜಾತಿ. ಪೃಥಿವ್ಯಪ್ತೇಜೋವಾಯು ಪರಮಾಣುಗಳು ತಮ್ಮ ದ್ವ್ಯಣುಕ ಗಳಿಗೆ ಸಮವಾಯಕಾರಣಗಳಾಗುವುದರಿಂದ ದ್ರವ್ಯಸಮವಾಯಿಕಾರಣತ್ವ ಧರ್ಮರಹಿತ ವಾಗುವುದಿಲ್ಲ. ಆತ್ಮ ವಿಭುವಾದುದರಿಂದ ಅಣುವಾಗುವುದಿಲ್ಲ. ಮನಸ್ಸು ಅಣುರೂಪ ವೆಂದು ಸಿದ್ಧಾಂತ.

ರೂಪರಸಗಂಧಸ್ಪರ್ಶಸಂಖ್ಯಾಪರಿಮಾಣಪೃಥಕ್ತ್ವಸಂಯೋಗವಿಭಾಗ ಪರತ್ವಾಪರತ್ವಬುದ್ಧಿ
ಸುಖದುಃಖೇಚ್ಛಾದ್ವೇಷಪ್ರಯತ್ನಾಶ್ಚ ಕಂಠೋಕ್ತಾಃ ಸಪ್ತದಶ ಚಶಬ್ದ ಸಮುಚ್ಚಿತಾ
ಗುರುತ್ವದ್ರವತ್ವಸ್ನೇಹಸಂಸ್ಕಾರಾದೃಷ್ಟಶಬ್ದಾಃ ಸಪ್ತೈವೇತ್ಯೇವಂ ಚತುರ್ವಿಂಶತಿ
ಗುಣಾಃ । ತತ್ರ ರೂಪಾದಿ ಶಬ್ದಾಂತಾನಾಂ ರೂಪತ್ವಾದಿ ಜಾತಿರ್ಲಕ್ಷಣಮ್ ।
ರೂಪತ್ವಂ ನಾಮ ನೀಲಸಮವೇತಗುಣತ್ವಾಪರಜಾತಿಃ । ಅನಯಾ ದಿಶಾ
ಶಿಷ್ಟಾನಾಂ ಲಕ್ಷಣಾನಿದ್ರಷ್ಟವ್ಯಾನಿ ॥

ಕಣಾದ ಸೂತ್ರದಲ್ಲಿ (೧-೧-೬) 'ರೂಪರಸಗಂಧಸ್ಪರ್ಶಾಃ ಸಂಖ್ಯಾಃ ಪರಿಮಾಣಾನಿ ಪೃಥಕ್ತ್ವಂ ಸಂಯೋಗವಿಭಾಗೌ ಪರತ್ವಾಪರತ್ವೇ ಬುದ್ಧಯಃ ಸುಖದುಃಖೇ ಇಚ್ಛಾದ್ವೇಷೌ, ಪ್ರಯತ್ನಾಶ್ಚ ಗುಣಾಃ" ಎಂದು ಹೇಳಿದೆ. ಅಲ್ಲಿ ಚಕಾರ ಹೇಳಿರು ವುದರಿಂದ ಅನುಕ್ತಸಮುಚ್ಚಾಯಕವೆಂದು ಉಳಿದ ಗುರುತ್ವಾದಿ ಏಳನ್ನು ಹೇಳಿ ಒಟ್ಟಿಗೆ ೨೪ ಗುಣಗಳೆಂದು ತಿಳಿಯಬೇಕು. ಅದೃಷ್ಟಪದದಿಂದ ಧರ್ಮ, ಅಧರ್ಮಗಳೆಂದು ೩ ಗುಣಗಳನ್ನು ಹೇಳಬೇಕು. ರೂಪತ್ವಜಾತಿಲಕ್ಷಣ. 'ನೀಲ—' ಇತಿ. ನೀಲರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷ. ಅದರಲ್ಲಿ ಸಮವಾಯಸಂಬಂಧದಿಂದ ಇದ್ದು ಗುಣತ್ವಕ್ಕೆ ಸಾಕ್ಷಾದ್ವ್ಯಾಪ್ಯ ವಾಗಿರುವ ಜಾತಿಯೇ ರೂಪತ್ವ. ರಸತ್ವಾದಿಗಳು ನೀಲಸಮವೇತಗಳಾಗುವುದಿಲ್ಲ. ಸತ್ತಾಜಾತಿ ಗುಣತ್ವವ್ಯಾಪ್ಯವಾಗುವುದಿಲ್ಲ. ನೀಲತ್ವಾದಿಗಳು ಗುಣತ್ವಸಾಕ್ಷಾದ್ವ್ಯಾಪ್ಯ ಗಳಾಗುವುದಿಲ್ಲ. ಹೀಗೆಯೇ ಇತರ ಗುಣಗಳ ಲಕ್ಷಣ ತಿಳಿಯಬೇಕು. ಮಧುರ ಸಮವೇತ ಗುಣತ್ವ ಸಾಕ್ಷಾದ್ವ್ಯಾಪ್ಯ ಜಾತಿಃ ಮಧುರತ್ವಂ–ಇತ್ಯಾದಿ.

ಕರ್ಮಪಂಚವಿಧಮ್। ಉತ್‌ಕ್ಷೇಪಣಾಪಕ್ಷೇಪಣಾಕುಂಚನ ಪ್ರಸಾರಣಗಮನ ಭೇದಾತ್ ಭ್ರಮಣರೇಚನಾದೀನಾಂ ಗಮನ ಏವಾಂತರ್ಭಾವಃ । ಉತ್‌ಕ್ಷೇಪಣಾದೀನಾ ಮುತ್‌ಕ್ಷೇಪಣತ್ವಾದಿರ್ಜಾತಿರ್ಲಕ್ಷಣಮ್ । ತತ್ರೋತ್‌ಕ್ಷೇಪಣತ್ವಂ ನಾಮೋ ರ್ಧ್ವದೇಶ ಸಂಯೋಗಾಸಮವಾಯಿಕಾರಣ ಸಮವೇತ ಕರ್ಮತ್ವಾಪರಜಾತಿಃ । ಏವಮಪಕ್ಷೇಪಣತ್ವಾದೀನಾಂ ಲಕ್ಷಣಂ ಕರ್ತವ್ಯಮ್ ।

ಕರ್ಮವಿಭಾಗ ತೋರಿಸುತ್ತಾನೆ. ಉತ್‌ಕ್ಷೇಪಣ, ಅಪಕ್ಷೇಪಣ, ಆಕುಂಚನ, ಪ್ರಸಾರಣ ಗಮನವೆಂದು ಅದು ಐದು ವಿಧ. ಭ್ರಮಣಾದಿಗಳು ಗಮನರೂಪ ಕರ್ಮ ದಲ್ಲಿಯೇ ಅಂತರ್ಭಾವ ಹೊಂದುವುದರಿಂದ ಬೇರೆಯಾಗಿ ಹೇಳಿಲ್ಲ. ಭ್ರಮಣಾದಿ ಗಳನ್ನು ಹೀಗೆ ಹೇಳಿರುತ್ತಾರೆ.

ಭ್ರಮಣಂ ರೇಚನಂ ಸ್ಯಂದನೋರ್ಧ್ವ ಜ್ವಲನಮೇವ ಚ॥
ತಿರ್ಯಗ್ಗಮನಮಪ್ಯತ್ರ ಗಮನಾದೇವ ಲಭ್ಯತೇ ॥ (ಭಾಷಾಪರಿಚ್ಛೇದ. ೭ ॥

ಉತ್‌ಕ್ಷೇಪಣವೆಂದರೆ ಮೇಲಕ್ಕೆ ಎಸೆಯುವುದು. ಇವೂ ಕೂಡ ಗಮನ ವಿಶೇಷವಲ್ಲವೇ ? ಎಂದು ಶಂಕಿಸಬಾರದು. ಸ್ವತಂತ್ರೇಚ್ಛೆಯುಳ್ಳ ಸೂತ್ರಕಾರರ ಮೇಲೆ ನಾವು ಪ್ರಶ್ನೆಹಾಕಬಾರದು. ಐದಕ್ಕೂ ಆಯಾಯ ಜಾತಿಯೇ ಲಕ್ಷಣ. ಮೊದಲನೆಯ ಜಾತಿಯ ಸ್ವರೂಪ ತೋರಿಸುತ್ತಾನೆ. 'ಊರ್ಧ್ವ'–ಇತಿ. ಊರ್ಧ್ವದೇಶಸಂಯೋಗಕ್ಕೆ ಅಸಮವಾಯಿ ಕಾರಣವಾದ ಯಾವ ಕರ್ಮವಿಶೇಷವಿದೆಯೋ, ತತ್ಸಮವೇತವಾಗಿ ಕರ್ಮತ್ವವ್ಯಾಪ್ಯವಾಗಿರುವ ಜಾತಿಯೆಂದರ್ಥ. ಹೀಗೆಯೇ ಇತರ ಲಕ್ಷಣ ತಿಳಿಯಬೇಕು. ಅಧೋದೇಶಸಂಯೋಗಕ್ಕೆ ಕಾರಣವಾದುದು ಅಪಕ್ಷೇಪಣ. ವಕ್ರತಾ ಸಂಪಾದಕ ವಾದುದು ಆಕುಂಚನ ಋಜುತ್ವಕಾರಣವಾದುದು ಪ್ರಸಾರಣ. ಉಳಿದವ್ಯಾಪಾರವೆಲ್ಲಾ ಗಮನವಾಗುತ್ತದೆ.

ಸಾಮಾನ್ಯಂ ದ್ವಿವಿಧಂ ಪರಮಪರಂ ಚ ॥ ಪರಂ ಸತ್ತಾ ದ್ರವ್ಯಗುಣಸಮವೇತಾ । ಅಪರಂ ದ್ರವ್ಯತ್ವಾದಿ । ತಲ್ಲಕ್ಷಣಂ ಪ್ರಾಗೇವೋಕ್ತಮ್ । ವಿಶೇಷಾಣಾಮನಂತ ತ್ವಾತ್ಸಮವಾಯಸ್ಯ ಚೈಕತ್ವಾದ್ವಿಭಾಗೋನ ಸಂಭವತಿ । ತಲ್ಲಕ್ಷಣಂ ಚ ಪ್ರಾಗೇವಾವಾದಿ ।

'ದ್ವಿತ್ವೇ ಚ ಪಾಕಜೋತ್ಪತ್ತೌ ವಿಭಾಗೇ ಚ ವಿಭಾಗಜೇ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಸ್ಯ ನ ಸ್ಖಲಿತಾ ಬುದ್ಧಿಸ್ತಂ ವೈ ವೈಶೇಷಿಕಂ ವಿದುಃ ॥ ”
ಇತ್ಯಾಭಾಣಕಸ್ಯ ಸದ್ಭಾವಾದ್ದ್ವಿತ್ವಾದ್ಯುತ್ಪತ್ತಿಪ್ರಕಾರಃ ಪ್ರದರ್ಶ್ಯತೇ ।

ತತ್ರ ಪ್ರಥಮಮಿಂದ್ರಿಯಾರ್ಥಸಂನಿಕರ್ಷಃ (೧) । ತಸ್ಮಾದೇಕತ್ವಸಾಮಾನ್ಯ ಜ್ಞಾನಮ್ । (೨) ತತೋಽಪೇಕ್ಷಾ ಬುದ್ಧಿಃ (೩) ತತೋ ದ್ವಿತ್ವೋತ್ಪತ್ತಿಃ (೪) ತತೋ ದ್ವಿತ್ವತ್ವಸಾಮಾನ್ಯ ಜ್ಞಾನಮ್ (೫) ತಸ್ಮಾತ್ ದ್ವಿತ್ವಗುಣ ಜ್ಞಾನಮ್. (೬) ತತೋ ದ್ವೇ ದ್ರವ್ಯೇ ಇತಿ ಧೀಃ (೭) ತತಃ ಸಂಸ್ಕಾರಃ।

ತದಾಹ —

ಆದಾ ವಿಂದ್ರಿಯಸಂನಿಕರ್ಷಘಟನಾದೇಕತ್ವಸಾಮಾನ್ಯಧೀ
ರೇಕತ್ವೋಭಯಗೋಚರಾ ಮತಿರತೋ ದ್ವಿತ್ವಂ ತತೋ ಜಾಯತೇ ।
ದ್ವಿತ್ವತ್ವಪ್ರಮಿತಿಸ್ತತೋ ನು ಪರತೋ ದ್ವಿತ್ವಪ್ರಮಾನಂತರಂ
ದ್ವೇ ದ್ರವ್ಯೇ ಇತಿ ಧೀರಿಯಂ ನಿಗದಿತಾ ದ್ವಿತ್ವೋದಯ ಪ್ರಕ್ರಿಯಾ ॥ ಇತಿ ॥

ಪರ, ಅಪರವೆಂದು ಸಾಮಾನ್ಯ (ಜಾತಿ) ವು ಎರಡುವಿಧ. ದ್ರವ್ಯ ಮತ್ತು ಗುಣ ಗಳೆರಡರಲ್ಲಿ ಸಮವಾಯಸಂಬಂಧದಿಂದ ಇರುವ ಜಾತಿಗೆ ಸತ್ತಾ ಎಂದು ಹೆಸರು. ಇದೇ ಪರಜಾತಿ. ದ್ರವ್ಯತ್ವಜಾತಿ ದ್ರವ್ಯದಲ್ಲಿಮಾತ್ರವಿರುತ್ತದೆ. ಗುಣತ್ವ ಗುಣದಲ್ಲಿಮಾತ್ರವಿರು ತ್ತದೆ. ಅವು ಅಪರಜಾತಿಗಳಾಗುತ್ತವೆ. ಅವುಗಳ ಲಕ್ಷಣವೂ ಹಿಂದೆ ಹೇಳಿದೆ. ವಿಶೇಷ ಗಳು ಅನಂತವಾದುದರಿಂದಲೂ, ಸಮವಾಯವು ಒಂದೇ ಆದುದರಿಂದಲೂ ಅವುಗಳಿಗೆ ವಿಭಾಗವಿಲ್ಲ. ಇವುಗಳ ಲಕ್ಷಣವೂ ಹಿಂದೆ ಹೇಳಿದೆ.

ದ್ವಿತ್ವೇ—ಇತಿ, ವೈಶೇಷಿಕನ ಲಕ್ಷಣ ಹೇಳುತ್ತಾನೆ. ದ್ವಿತ್ವ ಸಂಖ್ಯಾವಿಷಯ ದಲ್ಲಿಯೂ, ಪಾಕಜೋತ್ಪತ್ತಿವಿಷಯದಲ್ಲಿಯೂ, ವಿಭಾಗಜವಿಭಾಗವಿಷಯದಲ್ಲಿಯೂ ಯಾರ ಬುದ್ಧಿ ಸ್ಖಲಿತವಾಗುವುದಿಲ್ಲವೋ ಅವನೇ ವೈಶೇಷಕನೆಂದು ಶ್ಲೋಕಾರ್ಥ. ಈ ಮೂರು ವಿಷಯಗಳಲ್ಲಿ ವೈಶೇಷಿಕರಿಗೆ ವಿಶೇಷಾಭಿನಿವೇಶವಿರುತ್ತದೆಂದು ತಾತ್ಪರ್ಯ. ಜನರ ಪ್ರಸಿದ್ಧವಾದ ಮಾತೇ ಆಭಾಣಕ. ಹೀಗೆ ಪ್ರಸಿದ್ಧಿಯಿರುವುದರಿಂದ ದ್ವಿತ್ವಾ ದ್ಯುತ್ಪತ್ತಿ ರೀತಿಯನ್ನು ತೋರಿಸುತ್ತಾನೆ. 'ತತ್ರ'—ಇತಿ. ಪ್ರಥಮಂ ಅಂದರೆ ಪ್ರಥಮಕ್ಷಣದಲ್ಲಿ ಎಂದರ್ಥ. ಚಕ್ಷುರಿಂದ್ರಿಯಕ್ಕೆ ಎರಡು ಘಟಗಳೊಡನೆ ಸಂಬಂಧ ವುಂಟಾಗುತ್ತದೆ ದ್ವಿತೀಯಕ್ಷಣದಲ್ಲಿ ಏಕತ್ವಜಾತಿಜ್ಞಾನ. ತೃತೀಯಕ್ಷಣದಲ್ಲಿ 'ಇದೊಂದು ಇದೊಂದು' ಎಂಬ ಅಪೇಕ್ಷಾಬುದ್ಧಿ. ಚತುರ್ಥಕ್ಷಣದಲ್ಲಿ ದ್ವಿತ್ವಸಂಖ್ಯಾ ಉತ್ಪನ್ನವಾಗುತ್ತದೆ. ಪಂಚಮಕ್ಷಣದಲ್ಲಿ ದ್ವಿತ್ವತ್ವರೂಪಜಾತಿಜ್ಞಾನ. ಆರನೇ ಕ್ಷಣ ದಲ್ಲಿ ದ್ವಿತ್ವಸಂಖ್ಯಾಜ್ಞಾನ. ಏಳನೇಕ್ಷಣದಲ್ಲಿ 'ಇಮೌ ದ್ವೌ ಘಟೌ' ಎಂಬ ದ್ವಿತ್ವಸಂಖ್ಯಾವಿಶಿಷ್ಟದ್ರವ್ಯಜ್ಞಾನ. ಎಂಟನೆಯ ಕ್ಷಣದಲ್ಲಿ ಪೂರ್ವೋಕ್ತ ಜ್ಞಾನದಿಂದ ಹುಟ್ಟಿದ ಸಂಸ್ಕಾರವು ಆತ್ಮನಲ್ಲಿ ಹುಟ್ಟುತ್ತದೆ. ಇಲ್ಲಿ ಉತ್ತರೋತ್ತರವನ್ನು ಕುರಿತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ವಪೂರ್ವವು ಕಾರಣವಾಗುವುದರಿಂದ ಉಕ್ತಕ್ರಮವನ್ನು ಅವಶ್ಯವಾಗಿ ಅನುಸರಿಸಬೇಕು.

ಈ ವಿಷಯದಲ್ಲಿ ಮೀಮಾಂಸಕರು ಹೀಗೆ ಹೇಳುತ್ತಾರೆ. ಎರಡು ಘಟಗಳು ಪರಸ್ಪರ ಸಂನಿಹಿತವಾಗಿರುವಾಗ ಅಲ್ಲಿ ದ್ವಿತ್ವಸಂಖ್ಯಾ ಉತ್ಪನ್ನವಾಗುತ್ತದೆ. ಇಂದ್ರಿಯ ಸಂನಿಕರ್ಷವಾದಮೇಲೆ "ಅಯಮೇಕಃ, ಅಯಮೇಕಃ," ಎಂಬ ಅಪೇಕ್ಷಾಬುದ್ಧಿಯಿಂದ ದ್ವಿತ್ವ ಉತ್ಪನ್ನವಾಗುತ್ತದೆ, ಅಪೇಕ್ಷಾ ಬುದ್ಧಿಯು ದ್ವಿತ್ವಕ್ಕೆ ವ್ಯಂಜಕವಾಗುವುದಲ್ಲದೆ ಉತ್ಪಾದಕವಾಗುವುದಿಲ್ಲ. ಘಟದ್ವಯವು ಪರಸ್ಪರ ವಿಯುಕ್ತವಾದಾಗ ದ್ವಿತ್ವ ನಾಶವಾಗುತ್ತದೆ. ತ್ರಿತ್ವಾದಿ ವಿಷಯದಲ್ಲಿಯೂ ಹೀಗೆಯೇ ತಿಳಿಯಬೇಕು.

ವೈಶೇಷಿಕರು ಇದನ್ನು ಒಪ್ಪುವುದಿಲ್ಲ. ಮೊದಲು ತಿಳಿಯದಿರುವ ದ್ವಿತ್ವಸಂಖ್ಯೆಯನ್ನು ಒಪ್ಪುವುದು ಹೇಗೆ? ಹಾಗೆ ಅಂಗೀಕರಿಸುವುದು ವ್ಯರ್ಥ. ಅಪೇಕ್ಷಾ ಬುದ್ಧಿಯೇ ದ್ವಿತ್ವೋತ್ಪಾದಕವಾಗುತ್ತದೆಂದು ಹಿಂದೆ ಹೇಳಿದ ಕ್ರಮವನ್ನು ಅಂಗೀಕರಿಸಿರುತ್ತಾರೆ. ಅದನ್ನೇ 'ಆದಾವಿಂದ್ರಿಯ'—ಎಂಬ ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ. ದ್ವಿತ್ವೋದಯಪ್ರಕ್ರಿಯೆ ಹೀಗೆ ಸ್ಪಷ್ಟವಾಗಿರುತ್ತದೆ.

ದ್ವಿತ್ವಾದೇ ರಪೇಕ್ಷಾಬುದ್ಧಿಜನ್ಯತ್ವೇ ಕಿಂ ಪ್ರಮಾಣಮ್ । ಅತ್ರಾಹು ರಾಚಾರ್ಯಾಃ—

ಅಪೇಕ್ಷಾಬುದ್ಧಿರ್ದ್ವಿತ್ವಾದೇ ರುತ್ಪಾದಿಕಾ ಭವಿತುಮರ್ಹತಿ । ವ್ಯಂಜಕತ್ವಾನುಪಪತ್ತೌ ತೇನಾನುವಿಧೀಯಮಾನತ್ವಾತ್ । ಶಬ್ದಂ ಪ್ರತಿಸಂಯೋಗವದಿತಿ । ವಯಂ ತು ಬ್ರೂಮಃ—ದ್ವಿತ್ವಾದಿಕಂ ಏಕತ್ವದ್ವಯವಿಷಯಾನಿತ್ಯಬುದ್ಧಿವ್ಯಂಗ್ಯಂ ನ ಭವತಿ ಅನೇಕಾಶ್ರಿತ ಗುಣತ್ವಾತ್ ಪೃಥಕ್ತ್ವವದಿತಿ ॥

ಅಪೇಕ್ಷಾ ಬುದ್ಧಿಯಿಂದ ದ್ವಿತ್ವಾದಿಗಳು ಉತ್ಪನ್ನವಾಗುತ್ತವೆಂದು ವೈಶೇಷಿಕ ಸಿದ್ಧಾಂತ. ಆ ವಿಷಯದಲ್ಲಿ ಅನುಮಾನ ಪ್ರಮಾಣ ತೋರಿಸುತ್ತಾರೆ. "ಅಪೇಕ್ಷಾ ಬುದ್ಧಿಯು — ದ್ವಿತ್ವಾದಿಗಳಿಗೆ ಉತ್ಪಾದಕವಾಗುತ್ತದೆ.—ವ್ಯಂಜಕತ್ವ ಕೂಡದೇ ಇದ್ದು ಅಪೇಕ್ಷಾ ಬುದ್ಧಿಯನ್ನು ನಿತ್ಯವಾಗಿ ಅಪೇಕ್ಷಿಸುವುದರಿಂದ" ಲೋಕದಲ್ಲಿ ವ್ಯಂಗ್ಯಾರ್ಥವು ಯಾವಾಗಲೂ ವ್ಯಂಜಕವನ್ನು ಅಪೇಕ್ಷಿಸುತ್ತದೆ. ಹೀಗೆಯೇ ಉತ್ಪಾದ್ಯಾರ್ಥವು ಉತ್ಪಾದಕವನ್ನಪೇಕ್ಷಿಸುತ್ತದೆ. ಪ್ರಕೃತ ದ್ವಿತ್ವಾದಿ ಸಂಖ್ಯೆಯು ಅಪೇಕ್ಷಾಬುದ್ಧಿಯನ್ನು ಅಪೇಕ್ಷಿಸುತ್ತದೆ. (ಅನುವಿಧೀಯಮಾನತ್ವಾತ್—ಅಪೇಕ್ಷ್ಯಮಾಣತ್ವಾತ್) ಅಪೇಕ್ಷಾ ಬುದ್ಧಿಗಿಂತ ಮೊದಲೇ ದ್ವಿತ್ವಾದಿಗಳಿದ್ದರೆ ಅದಕ್ಕೆ ಅದು ವ್ಯಂಜಕವೆಂದು ಹೇಳಬಹುದು. ಹಾಗೆ ಅನುಭವವಿಲ್ಲ. ಎಲ್ಲಿ ವ್ಯಂಜಕತ್ವಾಭಾವಸಹಕೃತವಾದ ಅಪೇಕ್ಷಕತ್ವವಿದೆಯೋ ಅಲ್ಲಿ ಉತ್ಪಾದಕತ್ವವಿರುತ್ತದೆ. ಶಬ್ದದಲ್ಲಿ ಇದು ಸಿದ್ಧವಾದುದರಿಂದ ಆದರಂತೆ ಇಲ್ಲಿಯೂ ಹೇಳಬೇಕು. ಶಬ್ದವು ಕಂಠಾದಿಸ್ಥಾನಗಳಲ್ಲಿ ವಾಯುಸಂಯೋಗವನ್ನು ಅಪೇಕ್ಷಿಸುವುದರಿಂದ ಆ ಸಂಯೋಗವು ಶಬ್ದಕ್ಕೆ ಉತ್ಪಾದಕವಾಗುತ್ತದೆ. ಆ ಸಂಯೋಗಕ್ಕಿಂತ ಮೊದಲು ಶಬ್ದವಿಲ್ಲದಿರುವುರಿಂದ ಅದು ವ್ಯಂಜಕವಾಗುವುದಿಲ್ಲ. 'ವಯಂ'—ಎಂಬುದರಿಂದ ವ್ಯಂಜಕತ್ವವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಏಕತ್ವದ್ವಯ ವಿಷಯವಾಗಿರುವ 'ಅಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಕಃ ಅಯಮೇಕಃ' ಎಂಬ ಅನಿತ್ಯವಾದ ಅಪೇಕ್ಷಾಬುದ್ಧಿಯಿಂದ ದ್ವಿತ್ವವು ಎಂದೂ ವ್ಯಂಗ್ಯವಾಗುವುದಿಲ್ಲ. ಏಕೇಂದರೆ ದ್ವಿತ್ವವು ಅನೇಕಾಶ್ರಿತಗುಣವಾಗಿದೆ. ಎರಡರಲ್ಲಿಯೂ ಪರ್ಯಾಪ್ತವಾಗಿರುವುದು ದ್ವಿತ್ವಸಂಖ್ಯೆ. ಹೀಗೆ ತ್ರಿತ್ವಸಂಖ್ಯೆ ಮೂರರಲ್ಲಿ ಪರ್ಯಾಪ್ತವಾಗಿರುತ್ತದೆ. ಪೃಥಕ್ತ್ವಗುಣವೂ ಅನೇಕವೃತ್ತಿಯಾಗಿರುತ್ತದೆ. "ಚೈತ್ರಮೈತ್ರೌ ದೇವದತ್ತಾತ್ ಪೃಥಗ್ಭೂತೌ" ಎಂಬಲ್ಲಿ ಅದು ಅನೇಕಾಶ್ರಿತಗುಣವೆಂದು ವ್ಯಕ್ತವಾಗುತ್ತದೆ. ಚೈತ್ರನು ದೇವದತ್ತನಿಗಿಂತ ಬೇರೆ, ಮೈತ್ರನು ದೇವದತ್ತನಿಗಿಂತ ಬೇರೆ ಎಂದು ತೋರುವ ಪೃಥಕ್ತ್ವವು ಅಪೇಕ್ಷಾಬುದ್ಧಿವ್ಯಂಗ್ಯವಾಗುವುದಿಲ್ಲ. ಅದರಂತೆ ದ್ವಿತ್ವಕ್ಕೂ ಅದು ವ್ಯಂಜಕವಾಗದಿರುವುದರಿಂದ ಉತ್ಪಾದಕವೆಂದೇ ಹೇಳಬೇಕು.

ನಿವೃತ್ತಿಕ್ರಮೋ ನಿರೂಪ್ಯತೇ—ಅಪೇಕ್ಷಾಬುದ್ಧಿತ ಏಕತ್ವಸಾಮಾನ್ಯ ಜ್ಞಾನಸ್ಯ ದ್ವಿತ್ವೋತ್ಪತ್ತಿ ಸಮಕಾಲಂ ನಿವೃತ್ತಿಃ। ಅಪೇಕ್ಷಾಬುದ್ಧೇರ್ದ್ವಿತ್ವತ್ವ ಸಾಮಾನ್ಯ ಜ್ಞಾನಾತ್ ದ್ವಿತ್ವಗುಣಬುದ್ಧಿಸಮಸಮಯಮ್। ದ್ವಿತ್ವಸಾಪೇಕ್ಷಾಬುದ್ಧಿನಿವೃತ್ತೇರ್ದ್ರವ್ಯಬುದ್ಧಿಸಮಕಾಲಮ್। ಗುಣಬುದ್ಧೇರ್ದ್ರವ್ಯಬುದ್ಧಿತಃ ಸಂಸ್ಕಾರೋತ್ಪತ್ತಿಸಮಕಾಲಮ್। ದ್ರವ್ಯಬುದ್ಧೇಸ್ತದನಂತರಂ ಸಂಸ್ಕಾರಾದಿತಿ। ತಥಾ ಚ ಸಂಗ್ರಹಶ್ಲೋಕಾಃ —

ಆದಾವಪೇಕ್ಷಾಬುದ್ಧ್ಯಾ ಹಿ ನಶ್ಯೇದೇಕತ್ವಜಾತಿಧೀಃ ॥
ದ್ವಿತ್ವೋದಯಸಮಂ ಪಶ್ಚಾತ್ಸಾ ಚ ತಜ್ಜಾತಿಬುದ್ಧಿತಃ ॥
ದ್ವಿತ್ವಾಖ್ಯಗುಣಧೀಕಾಲೇ ತತೋ ದ್ವಿತ್ವಂ ನಿವರ್ತತೇ ॥
ಅಪೇಕ್ಷಾಬುದ್ಧಿನಾಶೇನ ದ್ರವ್ಯಧೀ ಜನ್ಮಕಾಲತಃ ॥
ಗುಣಬುದ್ಧಿರ್ದ್ರವ್ಯಬುದ್ಧ್ಯಾ ಸಂಸ್ಕಾರೋತ್ಪತ್ತಿಕಾಲತಃ ॥
ದ್ರವ್ಯಬುದ್ಧಿಶ್ಚ ಸಂಸ್ಕಾರಾದಿತಿ ನಾಶಕ್ರಮೋ ಮತಃ ॥ ಇತಿ ॥

ಇಂದ್ರಿಯಾರ್ಥ ಸಂನಿಕರ್ಷದಿಂದ ಸಂಸ್ಕಾರೋತ್ಪತ್ತಿಯವರೆಗೆ ಎಂಟು ಕ್ಷಣಗಳು ಹಿಂದೇ ಹೇಳಿವೆ. ಅಲ್ಲಿ ತೃತೀಯಕ್ಷಣದಲ್ಲಿ ಅಪೇಕ್ಷಾ ಬುದ್ಧಿಯು ಇದ್ದು ತನ್ನ ಮುಂದಿನ ಅಂದರೆ ನಾಲ್ಕನೆಯ ಕ್ಷಣದಲ್ಲಿ ದ್ವಿತ್ವಸಂಖ್ಯೆಯನ್ನು ಹುಟ್ಟಿಸುತ್ತದೆಂದು ಹೇಳಿದೆ. ಆಗ ಅದೇ ಕ್ಷಣದಲ್ಲಿ ದ್ವಿತೀಯ ಕ್ಷಣದಲ್ಲಿ ಹುಟ್ಟಿದ ಏಕತ್ವಜಾತಿಜ್ಞಾನವನ್ನೂ ನಾಶ ಮಾಡುತ್ತದೆ ಹೀಗೆಯೇ ಪಂಚಮ ಕ್ಷಣದಲ್ಲಿ ಹುಟ್ಟಿದ ದ್ವಿತ್ವತ್ವಜಾತಿ ಜ್ಞಾನವು ತನ್ನ ಮುಂದಿನ ಆರನೇ ಕ್ಷಣದಲ್ಲಿ ದ್ವಿತ್ವಸಂಖ್ಯಾಜ್ಞಾನವನ್ನು ಹುಟ್ಟಿಸುವುದಲ್ಲದೆ ಮೂರನೇ ಕ್ಷಣದಲ್ಲಿ ಹುಟ್ಟಿರುವ ಅಪೇಕ್ಷಾಬುದ್ಧಿಯನ್ನು ನಾಶಗೊಳಿಸುತ್ತದೆ. 'ದ್ವೌಘಟೌ' (ಇವೆರಡು ಘಟಗಳು) ಎಂಬ ದ್ರವ್ಯಜ್ಞಾನವುಂಟಾಗುವ ಏಳನೇ ಕ್ಷಣದಲ್ಲಿ ನಾಲ್ಕನೇ ಕ್ಷಣದಲ್ಲಿ ಹುಟ್ಟಿದ ದ್ವಿತ್ವಸಂಖ್ಯಾನಾಶ. ಇದಕ್ಕೆ ಕಾರಣವಾದ ಅಪೇಕ್ಷಾಬುದ್ಧಿಯು ತತ್ಪೂರ್ವ ಕ್ಷಣದಲ್ಲಿ (೬ನೇ ಕ್ಷಣ)ಯೇ ನಾಶವಾಗಿರುತ್ತದೆ. ಏಳನೇ ಕ್ಷಣದಲ್ಲಿ ಹುಟ್ಟಿದ 'ದ್ವೌಘಟೌ' ಎಂಬ ದ್ರವ್ಯಜ್ಞಾನವು ತನ್ನ ಉತ್ತರದ ಎಂಟನೇ ಕ್ಷಣದಲ್ಲಿ ತಿಳಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಕ್ಕ ಆತ್ಮನಲ್ಲಿ ಸಂಸ್ಕಾರವನ್ನು ಹುಟ್ಟಿಸುವುದಲ್ಲದೆ ಆರನೇ ಕ್ಷಣವಲ್ಲಿ ಹುಟ್ಟಿದ ದ್ವಿತ್ವ ಸಂಖ್ಯಾಜ್ಞಾನವನ್ನು ನಾಶಗೊಳಿಸುತ್ತದೆ. ಎಂಟನೇ ಕ್ಷಣದಲ್ಲಿ ಹುಟ್ಟಿದ ಸಂಸ್ಕಾರವು ನವಮಕ್ಷಣದಲ್ಲಿ ಹಿಂದೆ ಹುಟ್ಟಿದ ದ್ರವ್ಯಜ್ಞಾನವನ್ನು ನಾಶಮಾಡುತ್ತದೆ. ಹೀಗೆ ನಾಶ ಕ್ರಮವನ್ನು ತಿಳಿಯಬೇಕು. ಇದನ್ನೇ ಶ್ಲೋಕಗಳಲ್ಲಿ ಸಂಗ್ರಹಿಸಿರುತ್ತಾನೆ. 'ದ್ವಿತ್ವೋದಯ ಸಮಂ' ಎಂಬುದಕ್ಕೆ ಪೂರ್ವದೊಡನೆ ಅನ್ವಯ. ನಾಲ್ಕನೆಯ ದ್ವಿತ್ವಸಂಖ್ಯಾ ಉತ್ಪತ್ತಿ ಕ್ಷಣದಲ್ಲಿ ಅಪೇಕ್ಷಾಬುದ್ಧಿಯಿಂದ ಹಿಂದಿನ ಏಕತ್ವಜ್ಞಾನ ನಾಶವಾಗುತ್ತ ದೆಂದರ್ಥ. ಸಾ ಚ=ಆ ಅಪೇಕ್ಷಾ ಬುದ್ಧಿಯು —ದ್ವಿತ್ವತ್ವಜಾತಿಜ್ಞಾನದಿಂದ ನಷ್ಟ ವಾಗುತ್ತದೆ. ದಿತ್ವಾಖ್ಯಗುಣಧೀ ಕಾಲೇ=ಆರನೆಯ ದ್ವಿತ್ವಸಂಖ್ಯಾಜ್ಞಾನ ಕ್ಷಣದಲ್ಲಿ ಎಂದರ್ಥ. ಇದಕ್ಕೂ ಪೂರ್ವದೊಡನೆ ಸಂಬಂಧ. ದ್ರವ್ಯಧೀಜನ್ಮಕಾಲತಃ— 'ದ್ವಾವಿಘಟೌ' ಎಂಬ ದ್ರವ್ಯಜ್ಞಾನ ಕ್ಷಣದಲ್ಲಿ ಎಂದರ್ಥ. ಸಾರ್ವವಿಭಕ್ತಿಕತಸಿಲ್ ಬಂದುದರಿಂದ ಸಪ್ತಮ್ಯರ್ಥ ಹೇಳಬೇಕು. ಗುಣಬುದ್ಧಿಃ — ಇತಿ. ಏಳನೇ ಕ್ಷಣ ದಲ್ಲಿ ಹುಟ್ಟಿದ ದ್ರವ್ಯಜ್ಞಾನದಿಂದ ಎಂಟನೆಯ ಸಂಸ್ಕಾರೋತ್ಪತ್ತಿ ಕ್ಷಣದಲ್ಲಿ ಗುಣದ ದ್ವಿತ್ವಸಂಖ್ಯಾ ಬುದ್ಧಿಯು ನಾಶವಾಗುತ್ತದೆ. ನವಮಕ್ಷಣದಲ್ಲಿರುವ ಸಂಸ್ಕಾರದಿಂದ ಹಿಂದಿನ ದ್ರವ್ಯಜ್ಞಾನವು ನಾಶವಾಗುತ್ತದೆ.

ಬುದ್ಧೇರ್ಬುದ್ಧ್ಯಂತರವಿನಾಶ್ಯತ್ವೇ ಸಂಸ್ಕಾರವಿನಾಶ್ಯತ್ವೇ ಚ ಪ್ರಮಾಣಮ್— ವಿವಾದಾಧ್ಯಾಸಿತಾನಿ ಜ್ಞಾನಾನಿ – ಉತ್ತರೋತ್ತರಕಾರ್ಯವಿನಾಶ್ಯಾನಿ–ಕ್ಷಣಿಕವಿಭುವಿಶೇಷ ಗುಣತ್ವಾತ್–ಶಬ್ದವತ್ । ಕ್ವಚಿತ್ ದ್ರವ್ಯಾರಂಭಕ ಸಂಯೋಗೆ ಪ್ರತಿದ್ವಂದ್ವಿ ವಿಭಾಗಜನಕಕರ್ಮಸಮಕಾಲ ಮೇಕತ್ವಸಾಮಾನ್ಯಚಿಂತಯಾಶ್ರಯ ನಿವೃತ್ತೇರೇವ ದ್ವಿತ್ವನಿವೃತ್ತಿಃ । ಕರ್ಮಸಮಕಾಲಮಪೇಕ್ಷಾ ಬುದ್ಧಿಚಿಂತನಾದುಭಾಭ್ಯಾಮಿತಿ ಸಂಕ್ಷೇಪಃ ॥ ಅಪೇಕ್ಷಾಬುದ್ಧಿರ್ನಾಮ ವಿನಾಶಕವಿನಾಶ ಪ್ರತಿಯೋಗಿನೀ ಬುದ್ಧಿರಿತಿ ಬೋದ್ಧವ್ಯಮ್.

ಜ್ಞಾನವು ಇನ್ನೊಂದು ಜ್ಞಾನದಿಂದ ಸಂಸ್ಕಾರದಿಂದ ನಾಶವಾಗುತ್ತದೆಂಬುದರಲ್ಲಿ ಅನುಮಾನ ಪ್ರಮಾಣ ತೋರಿಸುತ್ತಾನೆ. 'ವಿವಾದ—' ಇತಿ. ಈ ಜ್ಞಾನಗಳು ತಮ್ಮಿಂದ ಹುಟ್ಟಿದ ಉತ್ತರಜ್ಞಾನಗಳಿಂದ ನಾಶವಾಗತ್ತವೆಯೆಂಬುದರಲ್ಲಿ ಹೇತು— ಕ್ಷಣಿಕ—' ಇತಿ. ಕ್ಷಣಿಕಶ್ಚಾಸೌ ವಿಭುವಿಶೇಷಗುಣಶ್ಚ, ತಸ್ಯ ಭಾವಃ – ತತ್ವಂ, ತಸ್ಮಾತ್ ॥ ಆಕಾಶ ವಿಭುವಾಗಿದೆ. ಅದರ ವಿಶೇಷಗುಣವಾದ ಶಬ್ದವು ಕ್ಷಣಿಕವಾಗಿದೆ. ಅದು ತನ್ನ ದ್ವಿತೀಯಕ್ಷಣದಲ್ಲಿ ತನಗೆ ಸದೃಶವಾದ ಶಬ್ದಾಂತರವನ್ನು ಹುಟ್ಟಿಸಿ ತೃತೀಯ ಕ್ಷಣದಲ್ಲಿ ನಾಶವಾಗುತ್ತದೆ. ಇದರಿಂದ ಪ್ರಥಮಕ್ಷಣಿಕವಾದ ಶಬ್ದದಿಂದ ದ್ವಿತೀಯ ಕ್ಷಣದಲ್ಲಿ ಹುಟ್ಟಿಸಲ್ಪಟ್ಟ ಅದರ ಕಾರ್ಯರೂಪವಾದ ಶಬ್ದವೇ ಅದಕ್ಕೆ ವಿನಾಶಕವೆಂದು ಸಿದ್ಧ ವಾಗಿದೆ. ಅದರಂತೆಯೇ ವಿಭುದ್ರವ್ಯವಾದ ಜೀವಾತ್ಮನ ಕ್ಷಣಿಕಗುಣಗಳಾದ ಜ್ಞಾನಾದಿ ಗಳೂ ಇರುತ್ತವೆ. ಅಂದರೆ ಪ್ರಥಮಕ್ಷಣಿಕ ಜ್ಞಾನದಿಂದ ದ್ವಿತೀಯಕ್ಷಣದಲ್ಲಿ ಹುಟ್ಟಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನವೂ, ಅಥವಾ ಸಂಸ್ಕಾರವೂ ತನಗೆ ಉತ್ಪಾದಕವಾದ ಪೂರ್ವಕ್ಷಣದ ಜ್ಞಾನವನ್ನು ತೃತೀಯಕ್ಷಣದಲ್ಲಿ ನಾಶಮಾಡುತ್ತದೆಂದು ಸಿದ್ಧವಾಗುತ್ತದೆ. ಹೀಗೆಯೇ ಅಪೇಕ್ಷಾಬುದ್ಧಿ ನಾಶದಿಂದ ದ್ವಿತ್ವನಾಶವೆಂದು ಹೇಳಿದೆ. ಅಲ್ಲಿಯೂ ವಿಶೇಷ ತೋರಿಸುತ್ತಾನೆ. ಕ್ವಚಿತ್—' ಇತಿ. ಪ್ರತಿದ್ವಂದ್ವಿ. ಅಂದರೆ ನಾಶಕವೆಂದರ್ಥ. ದ್ರವ್ಯವೆಂದರೆ, ಒಂದು ಘಟ. ಅದಕ್ಕೆ ಆರಂಭಕವಾದ ಸಂಯೋಗವೆಂದರೆ ಅದರ ಅವಯವಗಳ ಸಂಯೋಗ. ಅದಕ್ಕೆ ವಿನಾಶಕ (ಪ್ರತಿದ್ವಂದ್ವಿ) ವಾದುದು ವಿಭಾಗ. ಅದಕ್ಕೆ ಜನಕ ವಾದುದು (ಕಾರಣವಾದ) ಕರ್ಮ. (ಕ್ರಿಯಾ). ಈ ಕರ್ಮದಿಂದ ನಾಲ್ಕನೆಯಕ್ಷಣ ದಲ್ಲಿ ಘಟನಾಶವಾಗುತ್ತದೆ. ಮೊದಲನೆಯಕ್ಷಣದಲ್ಲಿ ಕರ್ಮ. ದ್ವಿತೀಯಕ್ಷಣದಲ್ಲಿ ಅದರಿಂದ ಅವಯವವಿಭಾಗ. ತೃತೀಯಕ್ಷಣದಲ್ಲಿ ಆ ವಿಭಾಗದಿಂದ ಅವಯವ ಸಂಯೋಗನಾಶ. ಅದರಿಂದ ನಾಲ್ಕನೆಯಕ್ಷಣದಲ್ಲಿ ಘಟದ ನಾಶ. ಹೀಗೆ ನಾಲ್ಕುಕ್ಷಣ ದಲ್ಲಿ ಆಗುವ ಕ್ರಮ ತಿಳಿಯಬೇಕು. ಹಿಂದೆ ದ್ವಿತ್ವೋತ್ಪತ್ತಿ ವಿಚಾರದಲ್ಲಿ ಎಂಟು ಕ್ಷಣ ಗಳು ಹೇಳಿವೆ. ಅಲ್ಲಿ ದ್ವಿತೀಯಕ್ಷಣದಲ್ಲಿ ಉಂಟಾದ ಏಕತ್ವ ಜಾತಿಜ್ಞಾನವು ಅಪೇಕ್ಷಾ ಬುದ್ಧಿಗೆ ಉತ್ಪಾದಕವಾಗುತ್ತದೆ ಎಂದು ಹೇಳಿದೆ. ಅದನ್ನು ಇಲ್ಲಿ ಹೇಳುವುದಾದರೆ ಪ್ರಥಮಕ್ಷಣದಲ್ಲಿ ವಿಭಾಗಜನಕವಾದ ಕರ್ಮದ ಉತ್ಪತ್ತಿ. ದ್ವಿತೀಯಕ್ಷಣದಲ್ಲಿ ವಿಭಾಗರೂಪಕಾರ್ಯ. ಅದೇ ಕ್ಷಣದಲ್ಲಿ ಅಪೇಕ್ಷಾಬುದ್ಧ್ಯುತ್ಪತ್ತಿಯೆಂದು ತಿಳಿಯಬೇಕು. ಸಂಯೋಗನಾಶಕ್ಷಣವಾದ ತೃತೀಯಕ್ಷಣದಲ್ಲಿ ದ್ವಿತ್ವೋತ್ಪತ್ತಿ. ಘಟನಾಶಕ್ಷಣವಾದ ಚತುರ್ಥಕ್ಷಣದಲ್ಲಿ ದ್ವಿತ್ವತ್ವಜಾತಿ ಜ್ಞಾನವುಂಟಾಗುತ್ತದೆ. ಆಗ ಅದೇ ಕ್ಷಣದಲ್ಲಿ ಘಟರೂಪಾಶ್ರಯನಾಶವಾದುದರಿಂದ ಅದರಿಂದ ಅದರ ಉತ್ತರಕ್ಷಣದಲ್ಲಿ ಘಟದ್ವಯಗತ ವಾದ ದ್ವಿತ್ವನಾಶವಾಗುತ್ತದೆ. ಘಟನಾಶವಾದ ಮೇಲೆ ಅದರ ಗುಣವಾದ ದ್ವಿತ್ವ ವಿರುವುದು ಹೇಗೆ? ಇಲ್ಲಿ ಅಪೇಕ್ಷಾಬುದ್ಧಿನಾಶದಿಂದ ದ್ವಿತ್ವನಾಶವೆಂಬ ಕ್ರಮವಿಲ್ಲ. ಇದಕ್ಕೆ ಕಾರಣವಿಷ್ಟೆ. ಇಲ್ಲಿ ದ್ವಿತ್ವನಾಶದಪೂರ್ವದಲ್ಲಿ ಅಪೇಕ್ಷಾಬುದ್ಧಿನಷ್ಟವಾಗಿರು ವುದಿಲ್ಲ. ಏಕತ್ವಸಾಮಾನ್ಯಚಿಂತಾ ಅಂದರೆ ಏಕತ್ವಜಾತಿಜ್ಞಾನವೆಂದರ್ಥ. ಇಲ್ಲಿಯೂ ಒಂದುವೇಳೆ ಏಕತ್ವಜಾತಿಜ್ಞಾನವು ಮೊದಲೇ ಆಗುವುದಾದರೆ ಆಗ ಅದರ ಉತ್ತರಕ್ಷಣ ದಲ್ಲಿ ವಿಭಾಗಜನಕವಾದ ಕರ್ಮವುಂಟಾಗುತ್ತದೆ. ಆಗ ವಿಭಾಗಜನಕಕರ್ಮಕ್ಷಣವಾದ ಮೊದಲನೆಯಕ್ಷಣದಲ್ಲಿ ಅಪೇಕ್ಷಾಬುದ್ಧ್ಯುತ್ಪತ್ತಿಯೆಂದೂ, ಅದರ ದ್ವಿತೀಯಕ್ಷಣದಲ್ಲಿ ದ್ವಿತ್ವೋತ್ಪತ್ತಿಯೆಂದೂ, ಸಂಯೋಗನಾಶಕ್ಷಣವಾದ ತೃತೀಯಕ್ಷಣದಲ್ಲಿ ದ್ವಿತ್ವತ್ವಜಾತಿ ಜ್ಞಾನವೆಂದೂ ಕ್ರಮ ಹೇಳಬೇಕು.

ನಾಲ್ಕನೆಯ ಘಟನಾಶಕ್ಷಣದಲ್ಲಿ ಅಪೇಕ್ಷಾಬುದ್ಧಿನಾಶವಾಗುತ್ತದೆ. ಈ ಕ್ಷಣ ದಲ್ಲಿ ಘಟರೂಪಾಶ್ರಯನಾಶವೂ ಅಪೇಕ್ಷಾಬುದ್ಧಿನಾಶವೂ ಹೀಗೆ ಎರಡೂ ಕಾರಣನಾಶ ವಾಗುವುದರಿಂದ ಇವೆರಡರಿಂದ ಅದರ ಉತ್ತರಕ್ಷಣದಲ್ಲಿ ದ್ವಿತ್ವನಾಶವಾಗುತ್ತದೆಂದು ತಿಳಿಯಬೇಕು. ಅಪೇಕ್ಷಾಬುದ್ಧಿಯನ್ನು ವಿಶದಪಡಿಸುತ್ತಾನೆ. "ಅಪೇಕ್ಷಾ—" ಇತಿ. ಅಪೇಕ್ಷಾಬುದ್ಧಿನಾಶವೇ ದ್ವಿತ್ವಸಂಖ್ಯೆಗೆ ನಾಶಕವಾಗುತ್ತದೆ. ವಿನಾಶಕಕ್ಕೆ ನಾಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದುದು ಅಂದರೆ ಅಪೇಕ್ಷಾಬುದ್ಧಿನಾಶ. ಅಂತಹನಾಶಕ್ಕೆ ಪ್ರತಿಯೋಗಿಯಾದುದು ಅಪೇಕ್ಷಾಬುದ್ಧಿ ವಿನಾಶಕವಿನಾಶವೆಂದು ಹೇಳದಿದ್ದರೆ ಜೀವಬುದ್ಧಿಯಲ್ಲಿ ಅವ್ಯಾಪ್ತಿ ಬರುತ್ತದೆ. 'ಅಯಂಘಟಃ' ಎಂಬ ಬುದ್ಧಿಯೂ ತೃತೀಯಕ್ಷಣದಲ್ಲಿ ನಾಶವಾಗುವುದ ರಿಂದ ವಿನಾಶಪ್ರತಿಯೋಗಿತ್ವವು ಅದಕ್ಕೆ ಸಂಭವಿಸುತ್ತದೆ. ವಿನಾಶಕವೆಂದರೆ ಆಗ ಘಟಜ್ಞಾನನಾಶದಿಂದ ಯಾವ ಜ್ಞಾನವೂ ನಾಶವಾಗದಿರುವುದರಿಂದ ಘಟಜ್ಞಾನನಾಶಕ್ಕೆ ವಿನಾಶಕತ್ವ ಸಂಭವಿಸುವುದಿಲ್ಲ. ಹೀಗೆ ಈ ರೀತಿಯಾದ ಪ್ರಕ್ರಿಯೆಯಿಂದ ದ್ವಿತ್ವವು ಅಪೇಕ್ಷಾಬುದ್ಧಿಜನ್ಯವೆಂದು ವೈಶೇಷಿಕಸಿದ್ಧಾಂತವು ಪ್ರಕಾಶಿತವಾಯಿತು. ನೈಯಾಯಿಕರಿಗೆ ಇದು ಅಭಿಮತವಾದರೂ ಹೀಗೆಯೇ ಹೇಳಬೇಕೆಂಬ ಅಭಿನಿವೇಶವಿಲ್ಲ. ಆದರೆ ವೈಶೇಷಿಕರಿಗೆ ಅಪೇಕ್ಷಾಬುದ್ಧಿವ್ಯಂಗವಾದುದು ದ್ವಿತ್ವವೆಂಬ ಮೀಮಾಂಸಕಮತ ಖಂಡನೆಮುಖ್ಯವಾದುದರಿಂದ ಹೀಗೆ ವಿಶದಪಡಿಸಿರುತ್ತಾರೆ.

ಅಥ ದ್ವ್ಯಣುಕನಾಶಮಾರಭ್ಯ ಕತಿಭಿಃ ಕ್ಷಣೈಃ ಪುನರನ್ಯತ್ ದ್ವ್ಯಣುಕಮುತ್ಪದ್ಯ ರೂಪಾದಿಮದ್ಭವತೀತಿ ಜಿಜ್ಞಾಸಾಯಾ ಮುತ್ಪತ್ತಿಪ್ರಕಾರಃ ಕಥ್ಯತೇ—ನೋದ ನಾದಿಕ್ರಮೇಣ ದ್ವ್ಯಣುಕನಾಶಃ । ನಷ್ಟೇ ದ್ವ್ಯಣುಕೇ ಪರಮಾಣಾವಗ್ನಿ ಸಂಯೋಗಾತ್ ಶ್ಯಾಮಾದೀನಾಂ ನಿವೃತ್ತಿಃ । ನಿವೃತ್ತೇಷು ಶ್ಯಾಮಾದಿಷು ಪುನರನ್ಯಸ್ಮಾದಗ್ನಿಸಂಯೋಗಾತ್ ರಕ್ತಾದೀನಾಮುತ್ಪತ್ತಿಃ । ಉತ್ಪನ್ನೇಷು ರಕ್ತಾ ದಿಷು ಅದೃಷ್ಟವದಾತ್ಮಸಂಯೋಗಾತ್ ಪರಮಾಣೌ ದ್ರವ್ಯಾರಂಭಣಾಯ ಕ್ರಿಯಾ । ತಯಾ ಪೂರ್ವದೇಶಾದ್ವಿಭಾಗಃ । ವಿಭಾಗೇನ ಪೂರ್ವದೇಶಸಂಯೋಗ ನಿವೃತ್ತಿಃ । ತಸ್ಮಿನ್ನಿವೃತ್ತೇ ಪರಮಾಣ್ವಂತರೇಣ ಸಂಯೋಗೋತ್ಪತ್ತಿಃ । ಸಂಯುಕ್ತಾಭ್ಯಾಂ ಪರಮಾಣುಭ್ಯಾಂ ದ್ವ್ಯಣುಕಾರಂಭಃ । ಆರಬ್ಧೇ ದ್ವ್ಯಣುಕೇ ಕಾರಣಗುಣಾದಿಭ್ಯಃ ಕಾರ್ಯಗುಣಾದೀನಾಂ ರೂಪಾದೀನಾಮುತ್ಪತ್ತಿರಿತಿ ಯಥಾ ಕ್ರಮಂ ನವಕ್ಷಣಾಃ । ದಶಕ್ಷಣಾದಿ ಪ್ರಕಾರಾಂತರಂ ವಿಸ್ತರಭಯಾನ್ನೇಹ ಪ್ರತ ನ್ಯತೇ । ಇತ್ಥಂ ಪೀಲುಪಾಕಪ್ರಕ್ರಿಯಾ । ಪಿಠರಪಾಕಪ್ರಕ್ರಿಯಾ ನೈಯಾಯಿ ಕಧೀಸಂಮತಾ ॥

ಪಾಕಜೋತ್ಪತ್ತಿ ವಿಷಯದಲ್ಲಿ ವೈಶೇಷಿಕ ಸಿದ್ಧಾಂತವನ್ನು ತೋರಿಸುತ್ತಾರೆ. 'ಅಥ —ಇತಿ ವಿಲಕ್ಷಣವಾದ ತೇಜಃ ಸಂಯೋಗದಿಂದ ದ್ರವ್ಯಗಳಲ್ಲಿ ರೂಪರಸಾದಿಗಳ ವ್ಯತ್ಯಾಸವಾಗುವುದು ಎಲ್ಲರಿಗೂ ತಿಳಿದ ವಿಷಯ. ಮಣ್ಣಿನ ಕೊಡ ಮೊದಲು ಕಪ್ಪಾಗಿದ್ದು ಅಗ್ನಿಸಂಯೋಗದಿಂದ ಆಮೇಲೆ ಕೆಂಪಾಗುತ್ತದೆ. ಹಸುರಾದ ಬಾಳೆಕಾಯಿ ಹಣ್ಣಾದಾಗ ಹಳದಿಯಾಗುತ್ತದೆ. ಗಟ್ಟಿಯಾದ ಮಾವಿನಕಾಯಿ ಹುಳಿಯಾಗಿ ಹಸು ರಾಗಿದ್ದರೆ ಹಣ್ಣಾದಾಗ ಸಿಹಿಯಾಗಿ ಕೆಂಪು ಅಥವಾ ಹಳದಿಯಾಗಿ ಮೃದುವಾಗುತ್ತದೆ. ಅಲ್ಲಿ ಗಂಧವೂ ವ್ಯತ್ಯಾಸವಾಗುವುದು ತಿಳಿದ ವಿಷಯ. ಮೊದಲು ದ್ರವ್ಯಕ್ಕೆ ತೇಜಃ ಸಂಯೋಗವಾಗಿ ಅದರ ಅವಯವಗಳ ವಿಭಾಗದಿಂದ ಅದರ ನಾಶವಾಗುತ್ತದೆ. ಘಟದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಯವವಾದ ಕಪಾಲವಿಯೋಗವಾದರೆ ಘಟನಾಶ. ಕಪಾಲಾವಯವನಾಶದಿಂದ ಕಪಾಲನಾಶ. ಹೀಗೆ ತ್ರ್ಯಣುಕದವರೆಗೆ ನಾಶವಾಗುತ್ತದೆ. ದ್ವ್ಯಣುಕಕ್ಕಾದರೋ ಅವಯವನಾಶದಿಂದ ನಾಶವಿಲ್ಲ. ಏಕೆಂದರೆ ಅದರ ಅವಯವಗಳೆಂದರೆ ಪರಮಾಣುಗಳು. ಅವು ನಿತ್ಯವಾದುದರಿಂದ ಅವುಗಳಿಗೆ ನಾಶವಿಲ್ಲ. ಎರಡು ಪರಮಾಣುಗಳ ವಿಯೋಗದಿಂದ ದ್ವ್ಯಣುಕಕ್ಕೆ ನಾಶ. ಹೀಗೆ ಪರಮಾಣುಗಳು ಬೇರೆ ಬೇರೆಯಾದಾಗ ಪೂರ್ವರೂಪ ರಸಾದಿಗಳು ನಷ್ಟವಾಗಿ ಪುನಃ ರೂಪಾದಿಗಳು ಉತ್ಪನ್ನವಾಗಿ ಅದೇ ಪರಮಾಣುಗಳಿಂದ ದ್ವ್ಯಣುಕ, ತ್ರ್ಯಣುಕಾದಿ ಕ್ರಮದಿಂದ ನೂತನ ಘಟವಾಗುತ್ತದೆ. ಇದೇ ವೈಶೇಷಿಕರ ಪೀಲುಪಾಕಪ್ರಕ್ರಿಯೆ. ಪೀಲುವೆಂದರೆ ಪರಮಾಣು. ಪರಮಾಣುಗಳಲ್ಲಿಯೇ ಪಾಕದಿಂದ ಪೂರ್ವರೂಪಾದಿಗಳು ಹೋಗಿ ನೂತನರೂಪಾದಿಗಳು ಉಂಟಾಗುತ್ತವೆಯೆಂದು ಅವರ ಸಿದ್ಧಾಂತ. ತೇಜಃಸಂಯೋಗದಿಂದ ಸ್ವತಂತ್ರಾವಯವಿಗಳಾದ ಪರಮಾಣುಗಳಲ್ಲಿಯೇ ಪಾಕವುಂಟಾಗಿ, ಆ ಪಕ್ವಪರಮಾಣು ಸಂಯೋಗದಿಂದ ದ್ವ್ಯಣುಕಾದಿ ಕ್ರಮದಿಂದ ಮಹಾವಯವಿಯವರೆಗೆ ಉತ್ಪತ್ತಿಯಾಗುತ್ತದೆ. ತೇಜಸ್ಸಿನ ಅತಿಶಯ ವೇಗದಿಂದ ಪೂರ್ವವ್ಯೂಹ ನಾಶವಾಗಿ ವ್ಯೂಹಾಂತರೋತ್ಪತ್ತಿಯಾಗುತ್ತದೆ. ಸೂಕ್ಷ್ಮತರ ಕಾಲವು ತಿಳಿಯದಿರುವುದರಿಂದ ಪೂರ್ವಘಟನಾಶವಾಗಿ ಉತ್ತರಘಟವು ಹುಟ್ಟಿರುವುದು ನಮಗೆ ತೋರುವುದಿಲ್ಲವೆಂದು ಅವರು ವಾದಿಸುತ್ತಾರೆ. ಪಿಠರಪಾಕವಾದಿಗಳು ನೈಯಾಯಿಕರು. ಪಿಠರನೆಂದರೆ ಅವಯವಿಘಟಾದಿಗಳು. ತೇಜಃಸಂಯೋಗದಿಂದ ಘಟ ನಾಶವಾಗುತ್ತದೆಂದು ಅವರು ಅಂಗೀಕರಿಸುವುದಿಲ್ಲ. ಅವಯವಗಳಿಂದ ಕೂಡಿದ ವಿಶಿಷ್ಟಾವಯವಿಯಲ್ಲಿಯೇ ಒಂದೇಕ್ಷಣದಲ್ಲಿ ಪೂರ್ವರೂಪಾದಿಗಳ ನಾಶವಾಗಿ ರೂಪಾಂತರೋತ್ಪತ್ತಿಯಾಗುತ್ತದೆಂದು ಅವರ ಸಿದ್ಧಾಂತ. ವೈಶೇಷಿಕರ ರೀತಿಯಿಂದ ಕ್ಷಣಾದಿ ಪ್ರಕ್ರಿಯೆಯನ್ನು ತಿಳಿಸುತ್ತಾರೆ. 'ನೋದನ'—ಇತಿ. ಸಂಯೋಗವಿಶೇಷಕ್ಕೆ ನೋದನವೆಂದು ಹೆಸರು. ಪ್ರಕೃತ ತೇಜಃಸಂಯೋಗವೇ ನೋದನ. ಇದರಿಂದ ದ್ರವ್ಯಾರಂಭಕವಾದ ಸಂಯೋಗಕ್ಕೆ ಪ್ರತಿದ್ವಂದ್ವಿಯಾದ ವಿಭಾಗಕ್ಕೆ ಜನಕವಾದ ಕರ್ಮ ಹುಟ್ಟುತ್ತದೆ. ಈ ಕರ್ಮದಿಂದ ಪರಮಾಣುದ್ವಯವಿಭಾಗವಾಗುತ್ತದೆ. ಅದರಿಂದ ದ್ವ್ಯಣುಕಾರಂಭಕವಾದ ಸಂಯೋಗದ ನಾಶ. ಆಮೇಲೆ ದ್ವ್ಯಣುಕ ನಾಶ. ದ್ವ್ಯಣುಕನಾಶಕ್ಷಣವನ್ನಾರಂಭಿಸಿ ಒಂಬತ್ತನೇ ಕ್ಷಣದಲ್ಲಿ ಇನ್ನೊಂದು ರೂಪಾಂತರದಿಂದ ಕೂಡಿದ ದ್ವ್ಯಣುಕವು ಹುಟ್ಟುತ್ತದೆ. 'ನಷ್ಟೇ'—ಇತಿ. ದ್ವ್ಯಣುಕ ನಷ್ಟವಾದಾಗ ಪರಮಾಣುವಿನಲ್ಲಿ ಅಗ್ನಿಸಂಯೋಗದಿಂದ ಶ್ಯಾಮಾದಿ ನಿವೃತ್ತಿಯಾಗುತ್ತದೆ. ದ್ವ್ಯಣುಕನಾಶದ ಪೂರ್ವದಲ್ಲಿ ಪರಮಾಣುಗಳು ದ್ವ್ಯಣುಕಸಂಬದ್ಧವಾದುದರಿಂದ ಪೂರ್ಣವಾಗಿ ಶ್ಯಾಮಾದಿ ನಿವೃತ್ತಿಯಾಗದಿರುವುದರಿಂದ ಹೀಗೆ ಹೇಳಿದೆ. 'ನಿವೃತ್ತೇಷು'—ಇತಿ. ಶ್ಯಾಮಾದಿಪೂರ್ವರೂಪಗಳು ನಷ್ಟವಾದ ಮೇಲೆ ಪುನಃ ಅನ್ಯತೇಜಃ ಸಂಯೋಗದಿಂದ ರಕ್ತಾದ್ಯುತ್ಪತ್ತಿಯಾಗುತ್ತದೆ. ಪೂರ್ವರೂಪಧ್ವಂಸವು ರೂಪಾಂತರದಲ್ಲಿ ಕಾರಣವಾದುದರಿಂದ ಶ್ಯಾಮಾದಿಗಳು ನಾಶವಾದ ಮೇಲೆಯೇ ರಕ್ತಾದ್ಯುತ್ಪತ್ತಿ ಹೇಳಬೇಕು. ರೂಪವಿನಾಶಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ಅಗ್ನಿಸಂಯೋಗವು ರೂಪೋತ್ಪಾದಕವಾಗುವುದಿಲ್ಲ. ಆದುದರಿಂದ ಅನ್ಯಾಗ್ನಿ ಸಂಯೋಗವೆಂದು ಹೇಳಿದೆ. 'ಉತ್ಪನ್ನೇ'—ಇತಿ. ರಕ್ತಾದಿಗಳು ಹುಟ್ಟಿದ ಮೇಲೆ ಅದೃಷ್ಟವುಳ್ಳ ಆತ್ಮಸಂಯೋಗದಿಂದ ಪರಮಾಣುವಿನಲ್ಲಿ ದ್ರವ್ಯಾರಂಭಕವಾದ ಕ್ರಿಯಾ ಉಂಟಾಗುತ್ತದೆ. ರಕ್ತೋತ್ಪತ್ತಿಯ ಪೂರ್ವದಲ್ಲಿ ದ್ರವ್ಯಾರಂಭಾನುಗುಣ ಕ್ರಿಯೆ ಹುಟ್ಟುವುದಿಲ್ಲ. ಏಕೆಂದರೆ ನಿರ್ಗುಣದ್ರವ್ಯದಲ್ಲಿ ಕ್ರಿಯಾ ಹುಟ್ಟುವುದಿಲ್ಲ. ಧರ್ಮಾಧರ್ಮಗಳೇ ಅದೃಷ್ಟ. ಇದರಿಂದ ಕೂಡಿರುವ ಆತ್ಮನ ಸಂಯೋಗದಿಂದ ಪರಮಾಣುಗಳಲ್ಲಿ ದ್ವ್ಯಣುಕದ್ರವ್ಯಾರಂಭಕಕ್ರಿಯಾ ಹುಟ್ಟುತ್ತದೆ. ಅದೃಷ್ಟವು ಪದಾರ್ಥ ಸಾಮಾನ್ಯಕ್ಕೆ ಸಾಧಾರಣ ಕಾರಣ. ಅದೃಷ್ಟಾಶ್ರಯನಾದ ಜೀವನುವಿಭುವಾದುದರಿಂದ ಸರ್ವತ್ರ ಸಂಪರ್ಕ ಹೊಂದಿರುವುದರಿಂದ ಆದೃಷ್ಟವೂ ಸಂನಿಹಿತವಾದಂತಾಗುತ್ತದೆ. ಐದನೆಯ ಕ್ಷಣದಲ್ಲಿ ಪೂರ್ವದೇಶದಿಂದ ವಿಭಾಗವಾಗುತ್ತದೆ. ಆರನೇ ಕ್ಷಣದಲ್ಲಿ ಆದರಿಂದ ಪೂರ್ವದೇಶಸಂಯೋಗನಿವೃತ್ತಿ. ಏಳನೇ ಕ್ಷಣದಲ್ಲಿ ಇತರ ಪರಮಾಣುವಿನಿಂದ ಸಂಯೋಗೋತ್ಪತ್ತಿ. ಎಂಟನೇ ಕ್ಷಣದಲ್ಲಿ ಸಂಯುಕ್ತ ಪರಮಾಣುಗಳಿಂದ ದ್ವ್ಯಣುಕಾರಂಭ. ಒಂಭತ್ತನೇ ಕ್ಷಣದಲ್ಲಿ ಆರಬ್ಧವಾದ ದ್ವ್ಯಣುಕದಲ್ಲಿ ಕಾರಣಗುಣಾದಿಗಳಿಂದ ಕಾರ್ಯಗುಣಗಳಾದ ರೂಪಾದಿಗಳು ಹುಟ್ಟುತ್ತವೆ. ತಂತುರೂಪದಿಂದ ಪಟರೂಪೋತ್ಪತ್ತಿ ಪ್ರಸಿದ್ಧವಾಗಿದೆ. ಹೀಗೆ ಒಂಭತ್ತು ಕ್ಷಣಗಳಲ್ಲಿ ಆಯಾಯ ಕಾರ್ಯಗಳು ಹುಟ್ಟುತ್ತವೆ. ವಿಭಾಗಜವಿಭಾಗಾಂಗೀಕಾರದಿಂದ ದಶಕ್ಷಣಪ್ರಕ್ರಿಯೆಯೂ ಹೇಳಿದೆ. ವಿಸ್ತರಭಯದಿಂದ ಅದನ್ನು ಇಲ್ಲಿ ವಿವರಿಸಲಿಲ್ಲ. ವೈಶೇಷಿಕರಿಗೆ ಸಂಮತವಾದುದು ಪೀಲುಪಾಕಪ್ರಕ್ರಿಯೆ. ಪಿಠರಪಾಕಪ್ರಕ್ರಿಯೆ ನೈಯಾಕರಿಗೆ ಸಂಮತವಾಗಿದೆ.

ವಿಭಾಗಜವಿಭಾಗೋ ದ್ವಿವಿಧಃ — ಕಾರಣಮಾತ್ರವಿಭಾಗಜಃ ಕಾರಣಾಕಾರಣವಿಭಾಗಜಶ್ಚ । ತತ್ರ ಪ್ರಥಮಃ ಕಥ್ಯತೇ — ಕಾರ್ಯವ್ಯಾಪ್ತೇ ಕಾರಣೇ ಕರ್ಮೋತ್ಪನ್ನಂ ಯದಾವಯವಾಂತರಾದ್ವಿಭಾಗಂ ವಿಧತ್ತೇನ ತದಾಕಾಶಾದಿದೇಶಾದ್ವಿಭಾಗಃ । ಯದಾ ತ್ವಾಕಾಶಾದಿದೇಶಾದ್ವಿಭಾಗೋ ನ ತದಾವಯವಾಂತರಾದಿತಿ ಸ್ಥಿತಿನಿಯಮಃ । ಕರ್ಮಣೋ ಗಗನವಿಭಾಗಾಕರ್ತೃತ್ವಸ್ಯ ದ್ರವ್ಯಾರಂಭಕಸಂಯೋಗವಿರೋಧಿ ವಿಭಾಗಾರಂಭಕತ್ವೇನ ಧೂಮಸ್ಯ ಧೂಮಧ್ವಜವರ್ಗೇಣೈವ ವ್ಯಭಿಚಾರಾನುಪಲಂಭಾತ್ । ತತಶ್ಚಾವಯವಕರ್ಮಾವಯವಾಂತರಾದೇವ ವಿಭಾಗಂ ಕರೋತಿ ನಾಕಾಶಾದಿದೇಶಾತ್ । ತಸ್ಮಾದ್ವಿಭಾಗಾದ್ದ್ರವ್ಯಾರಂಭಕಸಂಯೋಗನಿವೃತ್ತಿಃ । ತತಃ ಕಾರಣಾಭಾವಾತ್ ಕಾರ್ಯಾಭಾವ ಇತಿ ನ್ಯಾಯಾದವಯವವಿನಿವೃತ್ತಿಃ । ನಿವೃತ್ತೇವಯವಿನಿ ತತ್ಕಾರಣಯೋ ರವಯೋರ್ವರ್ತಮಾನೋ ವಿಭಾಗಃ ಕಾರ್ಯವಿನಾಶವಿಶಿಷ್ಟಂ ಕಾಲಂ ಸ್ವಾತಂತ್ರಂವಾವಯವಮಪೇಕ್ಷ್ಯ ಸಕ್ರಿಯಸ್ಯೈವಾವಯವಸ್ಯ ಕಾರ್ಯಸಂಯುಕ್ತಾದಾಕಾಶದೇಶಾದ್ವಿಭಾಗಮಾರಭತೇ ನ ನಿಷ್ಕ್ರಿಯಸ್ಯ । ಕಾರಣಾಭಾವಾತ್ । ದ್ವಿತೀಯಸ್ತುಹಸ್ತೇ ಕರ್ಮೋತ್ಪನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮವಯವಾಂತರಾದ್ವಿಭಾಗಂ ಕುರ್ವದಾಕಾಶಾದಿದೇಶೇಭ್ಯೋವಿಭಾಗಾ ನಾರಭತೇ ತೇ ಕಾರಣಾಕಾರಣವಿಭಾಗಾಃ ಕರ್ಮ ಯಾಂ ದಿಶಂಪ್ರತಿ ಕಾರ್ಯಾರಂಭಾಭಿಮುಖಂ ತಾಮುಪೇಕ್ಷ್ಯ ಕಾರ್ಯಾಕಾರ್ಯವಿಭಾಗಮಾರಭಂತೇ। ಯಥಾ ಹಸ್ತಾಕಾಶವಿಭಾಗಾತ್ ಶರೀರಾಕಾಶವಿಭಾಗಃ। ನ ಚಾಸೌ ಶರೀರಕ್ರಿಯಾಕಾರ್ಯಃ। ವ್ಯಧಿಕರಣಸ್ಯ ಕರ್ಮಣೋ ವಿಭಾಗಕರ್ತೃತ್ವಾನುಪಪತ್ತೇಃ। ಅತಃ ಪಾರಿಶೇಷ್ಯಾತ್ ಕಾರಣವಿಭಾಗಸ್ತಸ್ಯ ಕಾರಣಮಂಗೀಕರಣೀಯಮ್ ॥

ವಿಭಾಗದಿಂದ ಉಂಟಾಗುವ ವಿಭಾಗವು ಎರಡು ವಿಧವಾಗಿದೆ. ಕೇವಲ ಕಾರಣವಿಭಾಗದಿಂದ ಆಗುವ ವಿಭಾಗ, ಕಾರಣಾಕಾರಣವಿಭಾಗದಿಂದ ಆಗುವ ವಿಭಾಗ. ಅವುಗಳಲ್ಲಿ ಮೊದಲನೆಯ ವಿಭಾಗ ಮೊದಲು ಹೇಳುತ್ತಾರೆ. 'ಕಾರ್ಯವ್ಯಾಪ್ತೆ'— ಇತಿ. ದ್ವ್ಯಣುಕಸಂಬಂಧವಾದ ಪರಮಾಣುವಿನಲ್ಲಿ (ಕಾರ್ಯವ್ಯಾಪ್ತಕಾರಣದಲ್ಲಿ) ಉಂಟಾದ ಯಾವ ಕರ್ಮವಿದೆಯೋ ಅದು ದ್ವ್ಯಣುಕಾರಂಭಕ ಸಂಯೋಗಕ್ಕೆ ಪ್ರತಿದ್ವಂದ್ವಿಯಾದ ಇತರ ಪರಮಾಣುವಿನಿಂದುಂಟಾಗುವ ವಿಭಾಗವನ್ನು ಹುಟ್ಟಿಸುತ್ತದೆ. ಆ ಕರ್ಮವು ದ್ವ್ಯಣುಕಾನಾರಂಭಕಾಕಾಶಪ್ರದೇಶ ಸಂಯೋಗಕ್ಕೆ ಪ್ರತಿದ್ವಂದ್ವಿಯಾದ ವಿಭಾಗವನ್ನು ಹುಟ್ಟಿಸಲಾರದು. ಒಂದೇ ಕರ್ಮದಲ್ಲಿ ಆರಂಭಸಂಯೋಗಪ್ರತಿದ್ವಂದ್ವಿವಿಭಾಗಜನಕತ್ವವೂ ಅನಾರಂಭಕಸಂಯೋಗಪ್ರತಿದ್ವಂದ್ವಿವಿಭಾಗಜನಕತ್ವವೂ ಬರುವುದಿಲ್ಲ. ಅವು ಪರಸ್ಪರ ವಿರೋಧಿಯಾಗಿರುತ್ತವೆ. ಹೀಗೆ ಅಂಗೀಕರಿಸದಿದ್ದರೆ ಅರಳುವ ಕಮಲದ ಮೊಗ್ಗು ಅರಳದೇ ಹೋಗಬೇಕಾಗುತ್ತದೆ. ವಿಕಾಸಸಮಯದಲ್ಲಿ ಕಮಲಕ್ಕೆ ಅನಾರಂಭಕವಾದ ಆಕಾಶಪ್ರದೇಶ ಸಂಯೋಗ ಪ್ರತಿದ್ವಂದ್ವಿಯಾದ ವಿಭಾಗಕ್ಕೆ ಜನಕವಾದ ಕರ್ಮವು ಹುಟ್ಟುತ್ತದೆ. ಆಗ ಕಮಲಾರಂಭ ಸಂಯೋಗಕ್ಕೆ ಪ್ರತಿದ್ವಂದ್ವಿಯಾದ ವಿಭಾಗವನ್ನು ಹುಟ್ಟಿಸುವುದಾದರೆ ಕಮಲವಿನಾಶವಾಗಬೇಕಾಗುತ್ತದೆ. ಧೂಮವಿದ್ದಲ್ಲಿ ಧೂಮಧ್ವಜ ಅಂದರೆ ಅಗ್ನಿ ಇರುತ್ತದೆ. ಇವೆರಡಕ್ಕೆ ಎಲ್ಲಿಯೂ ವ್ಯಭಿಚಾರ ತೋರಿಲ್ಲ. ಹಾಗೆಯೇ ಯಾವ ಕರ್ಮದಲ್ಲಿ ಅನಾರಂಭಕವಾದ ಆಕಾಶಪ್ರದೇಶ ಸಂಯೋಗವಿರೋಧ್ಯಾಕಾಶಪ್ರದೇಶ ವಿಭಾಗಜನಕತ್ವವಿಲ್ಲವೋ ಆ ಕರ್ಮದಲ್ಲಿ ದ್ರವ್ಯಾರಂಭಕಾವಯವಾಂತರ ಸಂಯೋಗ ವಿರೋಧಿವಿಭಾಗಜನಕತ್ವವಿರುತ್ತದೆ. ಈ ವಿಷಯದಲ್ಲಿ ಎಲ್ಲಿಯೂ ವ್ಯಭಿಚಾರ ಬರುವುದಿಲ್ಲ. ಇವೆರಡಕ್ಕೆ ಯಾವಾಗಲೂ ಸಮನ್ವಯತ್ಯವಿರುತ್ತದೆ. ಇದನ್ನು ವ್ಯತ್ಯಾಸವಾಗಿಯೂ ಹೀಗೆ ಹೇಳಬಹುದು. ಯಾವ ಕರ್ಮದಲ್ಲಿ ದ್ರವ್ಯಾರಂಭಕಾವಯವಾಂತರ ಸಂಯೋಗವಿರೋಧಿ ವಿಭಾಗಜನಕತ್ವವಿರುತ್ತದೆಯೋ ಆ ಕರ್ಮದಲ್ಲಿ ಅನಾರಂಭಕಾಕಾಶ ಪ್ರದೇಶಸಂಯೋಗವಿರೋಧ್ಯಾಕಾಶಪ್ರದೇಶವಿಭಾಗ ಜನಕತ್ವವಿರುವುದಿಲ್ಲ. ಈ ನಿಯಮದಿಂದ ಪರಮಾಣುವಿನಲ್ಲಿ ಉಂಟಾದ ಕರ್ಮವೂ ಕೂಡಾ ಅನಾರಂಭಕಸಂಯೋಗ ವಿರೋಧ್ಯಾಕಾಶಪ್ರದೇಶವಿಭಾಗವನ್ನು ಹುಟ್ಟಿಸುವುದಿಲ್ಲ. ಆದರೆ ಆ ಕರ್ಮದಿಂದ ಹುಟ್ಟಿದ ಯಾವ ವಿಭಾಗವಿದೆಯೋ ಅದು ಕರ್ಮವಿಶಿಷ್ಟವಾದ ದ್ರವ್ಯದಲ್ಲಿ ಆಕಾಶಪ್ರದೇಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಾಗವನ್ನು ಹುಟ್ಟಿಸುತ್ತದೆ. ವಿಭಾಗಜನಕವಾದ ಈ ವಿಭಾಗವು ತನ್ನ ಅವ್ಯವಹಿತೋತ್ತರ ಕ್ಷಣದಲ್ಲಿಯೇ ಆಕಾಶಪ್ರದೇಶವಿಭಾಗವನ್ನು ಹುಟ್ಟಿಸುವುದಿಲ್ಲ. ಏಕೆಂದರೆ ಆ ಕ್ಷಣದಲ್ಲಿ ಅದು ಅಸಹಾಯಕವಾಗಿರುತ್ತದೆ. ಅಸಹಾಯಕವಾಗಿರುವಾಗ ವಿಭಾಗಜನಕತ್ವವನ್ನು ಯಾರೂ ಅಂಗೀಕರಿಸಿಲ್ಲ. ಹೀಗೆ ಒಪ್ಪಿದರೆ ಕರ್ಮಲಕ್ಷಣವಾದ ವಿಭಾಗದಲ್ಲಿ ಅತಿವ್ಯಾಪ್ತಿ ಬರುತ್ತದೆ. ಸಂಯೋಗವಿಭಾಗಗಳಿಗೆ ಯಾವುದು ಅಸಹಾಯಕವಾದ ಕಾರಣವಿದೆಯೋ ಅದೇ ಕರ್ಮವೆಂದು ಕಣಾದಸೂತ್ರ (೧. ೧. ೧೭) ದಲ್ಲಿಹೇಳಿದೆ. ಸ್ವೋತ್ತರೋತ್ಪನ್ನಭಾವಾಂತರಾನಪೇಕ್ಷತ್ವಂ ಅಸಹಾಯತ್ವಮ್. ವಿಭಾಗಕ್ಕೆ ವಿಭಾಗೋತ್ಪತ್ತಿಯಲ್ಲಿ ಸಹಾಯವು ಯಾವುದು ಅಂದರೆ ಆಗ ಹೀಗೆ ಕ್ರಮ ಹೇಳುವುದರಿಂದ ಅದು ಸ್ಪಷ್ಟವಾಗುತ್ತದೆ.

ಮೊದಲನೆಯ ಕ್ಷಣದಲ್ಲಿ ಅಗ್ನಿಸಂಯೋಗದಿಂದ ಪರಮಾಣುವಿನಲ್ಲಿ ಕರ್ಮ ಹುಟ್ಟುತ್ತದೆ. ೨ನೇ ಕ್ಷಣದಲ್ಲಿ ಇತರ ಪರಮಾಣುವಿನಿಂದ ವಿಭಾಗ. ೩ನೇ ಕ್ಷಣದಲ್ಲಿ ಆರಂಭಕ ಸಂಯೋಗದ ನಾಶ. ನಾಲ್ಕನೆಯ ಕ್ಷಣದಲ್ಲಿ ದ್ವ್ಯಣುಕನಾಶ. ಇಲ್ಲಿ ದ್ವಿತೀಯ ಕ್ಷಣದಲ್ಲಿ ಹುಟ್ಟಿದ ವಿಭಾಗವು ಮೂರನೆಯ ಆರಂಭಕಸಂಯೋಗನಾಶಕ್ಷಣದ ಸಹಾಯದಿಂದ ಆಕಾಶ ಪ್ರದೇಶವಿಭಾಗವನ್ನು ಹುಟ್ಟಿಸುವುದಾದರೆ ಆ ವಿಭಾಗಜವಿಭಾಗವು ನಾಲ್ಕನೆಯ ದ್ವ್ಯಣುಕನಾಶಕ್ಷಣದಲ್ಲಿ ಹುಟ್ಟುತ್ತದೆ ಎಂದು ಒಂದು ಪಕ್ಷ. ನಾಲ್ಕನೆಯ ದ್ವ್ಯಣುಕನಾಶಕ್ಷಣದ ಸಹಾಯದಿಂದ ಹುಟ್ಟಿಸುವುದಾದರೆ ಆಗ ದ್ವ್ಯಣುಕನಾಶೋತ್ತರಕ್ಷಣದಲ್ಲಿ ಅಂದರೆ ದ್ವ್ಯಣುಕಶ್ಯಾಮರೂಪನಾಶಸಮಯದಲ್ಲಿ ಆ ವಿಭಾಗಜ-ವಿಭಾಗವು ಹುಟ್ಟುತ್ತದೆಂದು ಇನ್ನೊಂದು ಪಕ್ಷ. ಅಲ್ಲಿ ಆರಂಭಕ-ಸಂಯೋಗನಾಶವಿಶಿಷ್ಟಕ್ಷಣವಾಗಲೀ, ದ್ವ್ಯಣುಕನಾಶವಿಶಿಷ್ಟಕ್ಷಣವಾಗಲೀ ತತ್ತದ್ವಿಶಿಷ್ಟರೂಪದಿಂದ ವಿಭಾಗಕ್ಕೆ ಸಹಾಯಕವಾಗುತ್ತದೆಂದು ಕೆಲವರ ಮತ. ಇನ್ನು ಕೆಲವರು ಇದು ವಿಶಿಷ್ಟಕ್ಷಣವಾದರೂ ತನ್ನದಾದ ಸ್ವಾತಂತ್ರ್ಯದಿಂದ ಕೇವಲ ರೂಪದಿಂದಲೇ ಸಹಾಯ ಮಾಡುತ್ತದೆಂದು ಹೇಳುತ್ತಾರೆ. ವಿಶಿಷ್ಟವಾಗಲೀ ಕೇವಲವಾಗಲೀ ಆರಂಭಕಸಂಯೋಗನಾಶಕ್ಷಣವು ಸಹಾಯಕವೆಂಬ ಮೊದಲನೆಯ ಪಕ್ಷದಲ್ಲಿ ಹಿಂದೆ ದ್ವ್ಯಣುಕನಾಶವನ್ನಾರಂಭಿಸಿ ರೂಪಾಂತರಯುಕ್ತ ದ್ವ್ಯಣುಕೋತ್ಪತ್ತಿಯವರೆಗೆ ಯಾವ ೯ಕ್ಷಣಗಳು ಹೇಳಿವೆಯೋ ಅವನ್ನು ಇಲ್ಲಿ ಹತ್ತು ಕ್ಷಣಗಳೆಂದು ಅಂಗೀಕರಿಸಬೇಕಾಗುತ್ತದೆ. ಮೂರನೆಯ ಅಥವಾ ನಾಲ್ಕನೆಯ ಕ್ಷಣಗಳ ಮಧ್ಯದಲ್ಲಿ ಒಂದು ಅಧಿಕಕ್ಷಣವನ್ನಂಗೀಕರಿಸಬೇಕಾಗುತ್ತದೆ. ಹೀಗೆಯೇ ವಿಶಿಷ್ಟವಾಗಲೀ ಕೇವಲವಾಗಲೀ ದ್ವ್ಯಣುಕನಾಶಕ್ಷಣವು ಸಹಾಯಕ ಎಂಬ ಎರಡನೆಯ ಪಕ್ಷದಲ್ಲಿಯೂ ಹನ್ನೊಂದು ಕ್ಷಣಗಳನ್ನಂಗೀಕರಿಸಬೇಕಾಗುತ್ತದೆ. ಹಿಂದೆ ಹೇಳಿದ ೨ಕ್ಷಣಗಳ (೩–೪ರ) ಮಧ್ಯದಲ್ಲಿ ಎರಡು ಕ್ಷಣಗಳನ್ನು ಅಂಗೀಕರಿಸಬೇಕು.

ನವಕ್ಷಣಗಳಲ್ಲಿ ನಾಲ್ಕನೆಯಕ್ಷಣದಲ್ಲಿ ದ್ರವ್ಯಾರಂಭಕವಾದ ಕರ್ಮವು ಹುಟ್ಟುತ್ತದೆಂದು ಹೇಳಿದೆ. ವಿಭಾಗಜನಕಕರ್ಮವಿರುವಾಗ ವಿರೋಧದಿಂದ ಆರಂಭಕಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ಪತ್ತಿಯಾಗಲಾರದು. ಆದ್ಯಪಕ್ಷದಲ್ಲಿ ವಿಭಾಗಜವಿಭಾಗವು ಮೊದಲಿನ ದ್ವ್ಯಣುಕನಾಶ ಕ್ಷಣದಲ್ಲಿ ಉಂಟಾಗಿರುತ್ತದೆ. ಆಮೇಲೆ ಪೂರ್ವಸಂಯೋಗನಾಶವು ಎರಡನೆಯ ಶ್ಯಾಮರೂಪನಾಶಕ್ಷಣದಲ್ಲಿ ಆಗುತ್ತದೆ. ಉತ್ತರಸಂಯೋಗೋತ್ಪತ್ತಿಯು ಮೂರನೆಯ ರಕ್ತೋತ್ಪತ್ತಿಕ್ಷಣದಲ್ಲಿ ಆಗಿರುತ್ತದೆ. ಹೀಗೆ ಉತ್ತರದೇಶ ಸಂಯೋಗೋತ್ಪತ್ತಿಯವರೆಗೆ ವಿಭಾಗಜನಕಕರ್ಮವನ್ನು ಅವಶ್ಯವಾಗಿ ಅಂಗೀಕರಿಸಬೇಕು. ಕರ್ಮವಿಲ್ಲದ ವಸ್ತುವಿನಲ್ಲಿ ಎಂದೂ ಉತ್ತರದೇಶಸಂಯೋಗ ಜನನವಾಗಲಾರದು. ಆಗ ವಿಭಾಗಜನಕಕರ್ಮ ನಾಶವು ನಾಲ್ಕನೆಯಕ್ಷಣದಲ್ಲಿಯೂ ಆರಂಭಕವಾದ ಕರ್ಮವು. ಐದನೆಯಕ್ಷಣ ದಲ್ಲಿಯೂ ಇರುತ್ತದೆಂದು ತಿಳಿಯಬೇಕು. ಎರಡನೆಯ ಪಕ್ಷದಲ್ಲಿ ವಿಭಾಗಜವಿಭಾಗವೇ ಎರಡನೆಯ ಶ್ಯಾಮರೂಪನಾಶಕ್ಷಣದಲ್ಲಿ ಉಂಟಾಗುತ್ತದೆ. ಮೂರನೆಯ ರಕ್ತೋತ್ಪತ್ತಿಯ ಕ್ಷಣದಲ್ಲಿ ಪೂರ್ವಸಂಯೋಗನಾಶವಾಗುತ್ತದೆ. ನಾಲ್ಕನೆಯ ಕ್ಷಣದಲ್ಲಿ ಉತ್ತರದೇಶಸಂಯೋಗೋತ್ಪತ್ತಿ. ಐದನೆಯ ಕ್ಷಣದಲ್ಲಿ ವಿಭಾಗಜನಕ ಕರ್ಮನಾಶ. ಆಗ ಆರನೆಯ ಕ್ಷಣದಲ್ಲಿ ಆರಂಭಕಕರ್ಮೋತ್ಪತ್ತಿಯನ್ನಂಗೀಕರಿಸಬೇಕಾಗುತ್ತದೆ. ಹೀಗೆ ವಿಭಾಗಜ ವಿಭಾಗವನ್ನು ಸ್ವೀಕಾರಮಾಡುವಾಗ ಕಾರ್ಯಕಾರಣರೂಪಗಳಾದ ಈ ಎರಡು ವಿಭಾಗಗಳಿಗೆ ಪೌರ್ವಾಪರ್ಯವಿದ್ದರೂ ಸೂಕ್ಷ್ಮಕಾಲದಲ್ಲಿ ಅವು ಆಗುವುದರಿಂದ ಕಾಲವಿಭಾಗವು ಲೌಕಿಕರಿಗೆ ಗೋಚರವಾಗುವುದಿಲ್ಲ.

"ದ್ವಿತೀಯಸ್ತು—" ಇತಿ. ಕಾರಣಾಕಾರಣವಿಭಾಗಜ ವಿಭಾಗವೆಂದರ್ಥ. ಎರಡು ಪರಮಾಣುಗಳೂ ದ್ವ್ಯಣುಕಕ್ಕೆ ಕಾರಣಗಳಾದುದರಿಂದ ಕಾರಣಮಾತ್ರವಿಭಾಗ ದಿಂದ ಹುಟ್ಟಿರುವುದೆಂದು ಹೇಳಿದೆ. ಹಸ್ತದಲ್ಲಿ ಉಂಟಾದ ಕರ್ಮವು ಅವಯವಾಂತರ ದಿಂದ ವಿಭಾಗವನ್ನುಂಟುಮಾಡುತ್ತಾ ಆಕಾಶಾದಿದೇಶಗಳಿಂದಲೂ ವಿಭಾಗವನ್ನುಂಟು ಮಾಡುತ್ತದೆ. ಆದಿಪದದಿಂದ ಘಟಪಟಾದಿಗಳು ಗೃಹೀತವಾಗುತ್ತವೆ. ಹಸ್ತವು ಶರೀರಾವಯವವಾದುದರಿಂದ ಶರೀರಕ್ಕೆ ಕಾರಣವಾಗುತ್ತದೆ. ಆಕಾಶಾದಿಗಳು ಶರೀರಕ್ಕೆ ಕಾರಣವಲ್ಲ ಕಾರಣಾಕಾರಣಗಳಾದ ಅವೆರಡರ ವಿಭಾಗಗಳು ಶರೀರಕ್ಕೆ ಆಕಾಶಾದಿಗಳಿಂದ ವಿಭಾಗವನ್ನುಂಟುಮಾಡುತ್ತವೆ. ಅವುಗಳೂ ಕೂಡಾ ಕರ್ಮಾನುಗುಣವಾಗಿಯೇ ಉಂಟಾಗುತ್ತವೆ. ಅಂದರೆ ಹಸ್ತವು ಉತ್ತರದಿಕ್ಕಿನಲ್ಲಿ ಚಲಿಸಿದರೆ ದಕ್ಷಿಣಾಕಾಶಪ್ರದೇಶ ದಿಂದ ವಿಭಾಗವೂ ಹಾಗೇ ಉಂಟಾಗುತ್ತದೆ. "ನ ಚಾಸೌ—" ಇತಿ. ಶರೀರಾಕಾಶ ವಿಭಾಗವು ಹಸ್ತಾಕಾಶವಿಭಾಗದಿಂದಲೇ ಹುಟ್ಟಿರುತ್ತದೆ. ಶರೀರವಲ್ಲಿರುವ ಕರ್ಮದಿಂದ ಅದು ಹುಟ್ಟುವುದಿಲ್ಲ. ಹಸ್ತಚಲಿಸುವಾಗ ಹಸ್ತಮಾತ್ರ ಕ್ರಿಯಾವಿಶಿಷ್ಟವಾಗುವುದಲ್ಲದೆ ಶರೀರವಲ್ಲ. ಆಗ ಅದು ನಿಷ್ಕ್ರಿಯವೇ ಆಗಿರುತ್ತದೆ. "ನಾಪಿ—" ಇತಿ. ಹಸ್ತಚಲನ ಕ್ರಿಯೆಯಿಂದ ಹೇಗೇ ಹಸ್ತಾಕಾಶವಿಭಾಗವುಂಟಾಗುತ್ತದೆಯೋ ಹಾಗೆ ಅದರಿಂದಲೇ ಶರೀರಾಕಾಶವಿಭಾಗವೂ ಉಂಟಾಗುತ್ತದೆಂದು ಹೇಳಲು ಸಾಧ್ಯವಿಲ್ಲ. ಕ್ರಿಯೆಯು ತನ್ನ ಆಶ್ರಯದಲ್ಲಿ ಮಾತ್ರ ತನ್ನ ಕಾರ್ಯವನ್ನುಂಟುಮಾಡುವುದಲ್ಲದೆ ಇತರ ಕಡೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಟ್ಟಿಸುವುದಿಲ್ಲ. ಹಸ್ತದಲ್ಲಿ ಕ್ರಿಯೆ ಇದೆ. ವಿಭಾಗ ಶರೀರದಲ್ಲಿದೆ. ವ್ಯಧಿಕರಣವಾದುದರಿಂದ ಹಸ್ತದಲ್ಲಿರುವ ಕರ್ಮವು ಶರೀರಾಕಾಶವಿಭಾಗವನ್ನು ಹುಟ್ಟಿಸುವುದಿಲ್ಲ.

ಯದವಾದಿ ಅಂಧಕಾರಾಜ್ಞಾ ಭಾವತ್ವಂ ನಿಷಿಧ್ಯತೇ ಇತಿ ತದಸಂಗತಮ್ । ತತ್ರ ಚತುರ್ಧಾ ವಿವಾದಸಂಭವಾತ್ । ತಥಾ ಹೀ । ದ್ರವ್ಯಂ ತಮಃ ಇತಿ ಭಾಟ್ಟಾಃ ವೇದಾಂತಿನಶ್ಚ ಭಣಂತಿ । ಆರೋಪಿತಂ ನೀಲರೂಪಮಿತಿ ಶ್ರೀಧರಾಚಾರ್ಯಾಃ । ಆಲೋಕಜ್ಞಾನಾಭಾವಃ ಇತಿ । ಪ್ರಾಭಾಕರೈಕದೇಶಿನಃ । ಆಲೋಕಾಭಾವಃ ಇತಿ ನೈಯಾಯಿಕಾದಯಃ ಇತಿ ಚೇತ್–ತತ್ರ ದ್ರವ್ಯತ್ವಪಕ್ಷೋ ನ ಘಟತೇ । ವಿಕಲ್ಪಾನುಪಪತ್ತೇಃ । ದ್ರವ್ಯಂ ಭವದಂಧಕಾರಾಖ್ಯಂ ಪೃಥಿವ್ಯಾದ್ಯನ್ಯತಮಮನ್ಯದ್ವಾ । ನಾದ್ಯಃ । ಯತ್ರಾಂತರ್ಭಾವೋಽಸ್ಯ ತಸ್ಯ ಯಾವಂತೋ ಗುಣಾಸ್ತಾವದ್ಗುಣಕತ್ವಪ್ರಸಂಗಾತ್ । ನ ದ್ವಿತೀಯಃ । ನಿರ್ಗುಣಸ್ಯ ತಸ್ಯ ದ್ರವ್ಯತ್ವಾಸಂಭವೇನ ದ್ರವ್ಯಾಂತರತ್ವಸ್ಯ ಸುತರಾಮಸಂಭವಾತ್ । ನನು ತಮಾಲಶ್ಯಾಮಲತ್ವೇನೋಪಲಭ್ಯಮಾನಂ ತಮಃ ಕಥಂ ನಿರ್ಗುಣಂ ಸ್ಯಾದಿತಿ ಚೇತ್–ತದಸಾರಮ್ । ಗಂಧಾದಿವ್ಯಾಪ್ತಸ್ಯ ನೀಲರೂಪಸ್ಯ ತನ್ನಿವೃತ್ತೌ ನಿವೃತ್ತೇಃ ।

ಹಿಂದೆ ಆರೇ ಭಾವಪದಾರ್ಥಗಳೆಂದು ಹೇಳಿದಾಗ ಕತ್ತಲೆ ಮುಂತಾದವುಗಳಿಗೆ ನಿಯಮವ್ಯವಚ್ಛೇದ್ಯತ್ವ ಬರುತ್ತದೆಂದು ಹೇಳಿದೆ. ಆದರೆ ಕತ್ತಲೆಯ ವಿಷಯದಲ್ಲಿ ಇತರ ಶಾಸ್ತ್ರಕಾರರು ನಾನಾರೀತಿ ಹೇಳಿರುತ್ತಾರೆ. ಭಾಟ್ಟರು ಕಾಡಿಗೆಯಂತೆ ತಮಸ್ಸು ಸ್ವಾಭಾವಿಕ ನೀಲರೂಪವಿಶಿಷ್ಟವಾದದರಿಂದ ದ್ರವ್ಯವೆಂದು ಹೇಳುತ್ತಾರೆ.

'ಆರೋಪಿತಂ'—ಇತಿ. ಶ್ರೀಧರಾಚಾರ್ಯರು ದ್ರವ್ಯವೆಂದು ಅಂಗೀಕರಿಸುತ್ತಾರೆ ; ಆದರೆ ನೀಲರೂಪ ವಾಸ್ತವಿಕವೆಂದು ಒಪ್ಪುವುದಿಲ್ಲ. ನೀರಿನಲ್ಲಿ ಬಣ್ಣವು ಆರೋಪಿತವಾದಂತೆ ಕತ್ತಲೆಯಲ್ಲಿ ನೀಲವು ಆರೋಪಿತವೆಂದು ಅಂಗೀಕರಿಸಿರುತ್ತಾರೆ. ಇನ್ನಿಬ್ಬರು ಅಭಾವವೆಂದು ಅಂಗೀಕರಿಸಿರುತ್ತಾರೆ. ದ್ರವ್ಯವೆಂದು ಹೇಳುವ ಪಕ್ಷವನ್ನು ಖಂಡಿಸುತ್ತಾನೆ. 'ವಿಕಲ್ಪ'—ಇತಿ. ದ್ರವ್ಯವೆಂದರೆ ಪೃಥಿವ್ಯಾದಿ ಒಂಬತ್ತರಲ್ಲಿ ಒಂದೇ (ಸೇರಿದೆಯೇ) ಅಥವಾ ಒಂಬತ್ತರಿಂದ ಅಧಿಕವಾದ ಹತ್ತನೆಯ ದ್ರವ್ಯವೇ? ಎಂದು ಕೇಳಬೇಕು. ಪೃಥಿವಿಯಲ್ಲಿ ಸೇರುತ್ತದೆಂದು ಹೇಳಿದರೆ ಅದರಲ್ಲಿರುವ ರೂಪಾದಿ ಹದಿನಾಲ್ಕು ಗುಣಗಳು ಕತ್ತಲೆಯಲ್ಲಿರಬೇಕಾಗುತ್ತದೆ. ಆದರೆ ಅಲ್ಲಿ ಶುಕ್ಲಾದಿಗಳು ತೋರದಿರುವುದರಿಂದ ಪೃಥಿವಿಯೆಂದು ಹೇಳಲು ಸಾಧ್ಯವಿಲ್ಲ. ಶೀತಸ್ಪರ್ಶಾದಿಗಳ ಉಪಲಬ್ಧಿ ಇಲ್ಲದಿರುವುದರಿಂದ ಜಲಾದಿಗಳೆಂದೂ ಹೇಳಲು ಸಾಧ್ಯವಿಲ್ಲ. ಯಾವುದೆಂದು ಹೇಳುವುದಾದರೂ ಅದರಲ್ಲಿರುವ ಗುಣಗಳ ಅನುಭವವಾಗಬೇಕು. ಹಾಗೆ ಅನುಭವವಿಲ್ಲದಿರುವುದರಿಂದ ಒಂಬತ್ತರಲ್ಲಿಯೂ ಸೇರುವುದಿಲ್ಲ. ಗುಣವಿಲ್ಲದ ಹತ್ತನೆಯ ದ್ರವ್ಯವೆನ್ನಬೇಕು. ಆದರೆ ಗುಣವುಳ್ಳದ್ದೇ ದ್ರವ್ಯವೆಂದುದರಿಂದ ನಿರ್ಗುಣವಾಗುವುದಾದರೆ ದ್ರವ್ಯವೇ ಆಗಲಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯವಾಗಿ ದ್ರವ್ಯತ್ವವೇ ಇಲ್ಲದಿರುವಾಗ ಹತ್ತನೆಯ ದ್ರವ್ಯವೆಂದು ಅಂಗೀಕರಿಸುವುದು ಹೇಗೂ ಸಮಂಜಸವಾಗಲಾರದು. ನೀಲರೂಪವು ಕತ್ತಲೆಯಲ್ಲಿ ತೋರುವಾಗ ಅದು ನಿರ್ಗುಣವೆಂದು ಹೇಳುವುದು ಹೇಗೆ ಎಂಬುದಕ್ಕೆ ಸಮಾಧಾನ ತೋರಿಸುತ್ತಾನೆ.

'ಗಂಧಾದಿವ್ಯಾಪ್ತಸ್ಯ'—ಇತಿ. "ಯತ್ರ ನೀಲರೂಪಂ ತತ್ರ ಗಂಧಾದಯೋ ಗುಣಾಃ, ಪ್ರಿಯಂಗುಕಲಿಕಾದೌ ಯಥಾ." ಎಂದು ವ್ಯಾಪ್ತಿ ಇರುತ್ತದೆ. ಪ್ರಕೃತ ವ್ಯಾಪಕವಾದ ಗಂಧಾದಿಗಳು ಇಲ್ಲದಿರುವುದರಿಂದ ವ್ಯಾಪ್ಯವಾದ ನೀಲರೂಪವೂ ಇಲ್ಲವೆನ್ನಬೇಕು.

ಅಥ ನೀಲಂ ತಮಃ ಇತಿ ಗತೇಃ ಕಾ ಗತಿ ರಿತಿ ಚೇತ್ ನೀಲಂ ನಭ ಇತಿವದ್ಭ್ರಾಂತಿ ರೇವೇತ್ಯಲಂ ವೃದ್ಧವೀವಧಯಾ । ಅತ ಏವ ನಾರೋಪಿತರೂಪಂ ತಮಃ । ಅಧಿಷ್ಠಾನಪ್ರತ್ಯಯ ಮಂತರೇಣಾರೋಪಾಯೋಗಾತ್ । ಬಾಹ್ಯಾಲೋಕ ಸಹಕಾರಿರಹಿತಸ್ಯ ಚಕ್ಷುಷಃ ರೂಪಾರೋಪೇ ಸಾಮರ್ಥ್ಯಾನುಪಲಂಭಾಚ್ಚ । ನ ಚಾಯಮಚಾಕ್ಷುಷಃ ಪ್ರತ್ಯಯಃ । ತದನುವಿಧಾನಸ್ಯಾನನ್ಯಥಾ ಸಿದ್ಧ ತ್ವಾತ್। ಅತ ಏವ ನಾಲೋಕಜ್ಞಾನಾಭಾವಃ । ಅಭಾವಸ್ಯ ಪ್ರತಿಯೋಗಿ ಗ್ರಾಹ ಕೇಂದ್ರಿಯಗ್ರಾಹ್ಯತ್ವಾನಿಯಮೇನ ಮಾನಸತ್ವ ಪ್ರಸಂಗಾತ್ । ತಸ್ಮಾದಾಲೋ ಕಾಭಾವ ಏವ ತಮಃ । ನ ಚ ವಿಧಿಪ್ರತ್ಯಯವೇದ್ಯತ್ವೇನಾಭಾವತ್ವಾಯೋಗ ಇತಿ ಸಾಂಪ್ರತಮ್ ।ಪ್ರತ್ಯಯ ವಿನಾಶಾವ ಸಾನಾದಿಷು ವ್ಯಭಿಚಾರಾತ್ । ನ ಚಾಭಾವೇ ಭಾವಧರ್ಮಾಧ್ಯಾರೋಪೋ ದುರುಪಪಾದಃ । ದುಃಖಾಭಾವೇ ಸುಖತ್ವಾರೋಪಸ್ಯ ಸಂಯೋಗಾಭಾವೇ ವಿಭಾಗತ್ವಾಭಿಮಾನಸ್ಯ ಚ ದೃಷ್ಟ ತ್ವಾತ್ । ನ ಚಾಲೋಕಾಭಾವಸ್ಯ ಘಟಾದ್ಯಭಾವವದ್ರೂಪವದಭಾವತ್ವೇನಾ ಲೋಕ ಸಾಪೇಕ್ಷ ಚಕ್ಷುರ್ಜನ್ಯಜ್ಞಾನವಿಷಯತ್ವಂ ಸ್ಯಾದಿತ್ಯೇಷಿತವ್ಯಮ್ ।

ಕತ್ತಲೆ ಕಪ್ಪಾಗಿದೆಯೆಂಬುದು ಆಕಾಶ ನೀಲವಾಗಿದೆಯೆಂಬಂತೆ ಭ್ರಾಂತಿ. ಇಲ್ಲಿ ವೃದ್ಧರು ಅಂದರೆ ಮೀಮಾಂಸಕರಾದ ಭಾಟ್ಟಾದಿಗಳು. ವೀವಧಾ=ದೋಷಪರ್ಯಾ ಲೋಚನಾ. 'ಅತ ಏವ'—ಇತಿ. ಅಂಧಕಾರವು ದ್ರವ್ಯವೇ ಅಲ್ಲವೆಂದಮೇಲೆ ಆರೋ ಪಿತವಾದ ನೀಲರೂಪದಿಂದ ಕೂಡಿರುವ ದ್ರವ್ಯವು ಕತ್ತಲೆಯೆಂದು ಹೇಳುವ ಶ್ರೀಧರಾ ಚಾರ್ಯರ ಮತವೂ ಯುಕ್ತವಲ್ಲವೆಂದರ್ಥ. ಅಧಿಷ್ಠಾನವೆಂದರೆ ಆಶ್ರಯ. ಆರೋಪಕ್ಕೆ ಆಶ್ರಯಭೂತವಾದ ವಸ್ತುವೇ ಇಲ್ಲದಿರುವಾಗ ಅದರಲ್ಲಿ ಆರೋಪಿಸುವುದಾದರೂ ಹೇಗೆ? ಶಂಖ ನೋಡಿದಮೇಲೆ ಅದರಲ್ಲಿ ಪಿತ್ತದೋಷಜನ್ಯವಾದ ಪೀತತ್ವದ ಆರೋಪ ಲೋಕದಲ್ಲಿ ಪ್ರಸಿದ್ಧವಾಗಿದೆ. 'ಬಾಹ್ಯ'— ಇತಿ. ಸಹಕಾರಿಯಾದ ಬಾಹ್ಯಾಲೋಕದಿಂದ ಕೂಡಿದ ಕಣ್ಣು ರೂಪಾರೋಪದಲ್ಲಿ ಸಮರ್ಥವಾಗುತ್ತದೆ. 'ಇದಂತಮಃ' ಎಂಬ ಜ್ಞಾನವು ಚಕ್ಷುರಿಂದ್ರಿಯದಿಂದ ಉಂಟಾಗಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಹಾಗೆ ಹೇಳುವುದಾಗಿದ್ದರೆ ರೂಪಾರೋಪದಲ್ಲಿ ಕಣ್ಣು ಕಾರಣವಲ್ಲದಿರುವುದರಿಂದ ಸಹಕಾರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಹಿತ್ಯವಿಚಾರವೂ ವ್ಯರ್ಥವೆಂದು ಹೇಳಬಹುದಿತ್ತು. ಆದರೆ ಕಣ್ಣಿನಿಂದಲೇ ನಮಗೆ ಅಂಧಕಾರಜ್ಞಾನವಾಗುತ್ತದೆ.

'ಲ್ಲತಏವ'—ಇತಿ. ಅಂಧಕಾರವು ಚಾಕ್ಷುಷಜ್ಞಾನವಿಷಯವಾದುದರಿಂದಲೇ ಆಲೋಕಜ್ಞಾನಾಭಾವವೇ ಅಂಧಕಾರವೆಂಬ ಪ್ರಾಭಾಕರೈಕದೇಶಿಮತವೂ ಸಮಂಜಸವಾಗುವುದಿಲ್ಲ. ಅಭಾವಕ್ಕೆ ಪ್ರತಿಯೋಗಿ ಗ್ರಾಹಕೇಂದ್ರಿಯಗ್ರಾಹ್ಯತ್ವವು ಪ್ರಸಿದ್ಧವಾಗಿದೆ ಅಭಾವಕ್ಕೆ ಪ್ರತಿಯೋಗಿ ಘಟ. ತದ್ಗ್ರಾಹಕೇಂದ್ರಿಯವೆಂದರೆ ನಯನ. ಆದರಿಂದಲೇ ಘಟಾಭಾವವೂ ಗೃಹೀತವಾಗುತ್ತದೆ. ಪ್ರಕೃತ ಆಲೋಕ ಜ್ಞಾನಾಭಾವವೇ ಅಂಧಕಾರವೆಂದರೆ ಅದು ಅಭಾವವಾದುದರಿಂದ ಅದಕ್ಕೆ ಪ್ರತಿಯೋಗಿ ಆಲೋಕಜ್ಞಾನ. ತದ್ಗ್ರಾಹಕೇಂದ್ರಿಯ ಮನಸ್ಸು. ತದ್ಗ್ರಾಹ್ಯತ್ವ ಆಲೋಕಜ್ಞಾನಾಭಾವಕ್ಕೆ ಬರಬೇಕಾಗುತ್ತದೆ. 'ಯೇಂನೇಂದ್ರಿಯೇಣ'—ಎಂಬ ನ್ಯಾಯವೇ ಇನ್ನೊಂದು ರೀತಿಯಿಂದ ಇಲ್ಲಿ ಹೇಳಿದೆಯೆಂದು ತಿಳಿಯಬೇಕು. ಆದುದರಿಂದ ಆಲೋಕಾಭಾವವೇ ತಮಸ್ಸು ಎಂದರೆ ಯಾವ ವಿರೋಧವೂ ಬರುವುದಿಲ್ಲ. 'ನ ಚ'—ಇತಿ. ತಮಸ್ಸು ವಿಧಿಪ್ರತ್ಯಯ ವೇದ್ಯವಾಗಿದೆ. 'ತಮಃ ಅಸ್ತಿ' ಎಂಬ ಜ್ಞಾನ ಪ್ರಸಿದ್ಧವಾಗಿದೆ. ಅಭಾವವಾಗಬೇಕಾದರೆ ನಞುಲ್ಲಿಖಿತ ಪ್ರತ್ಯಯವಿಷಯತ್ವ ವಿರಬೇಕು. 'ಘಟೋನ' ಎಂದರೆ ಇಲ್ಲ ಘಟಾಭಾವ ತೋರುತ್ತದೆ. ಆದುದರಿಂದ "ವಿಮತೋಂಧಕಾರಃ ಭಾವೋ ಭವಿತುಮರ್ಹತಿ — ನಞಾನುಲ್ಲಿಖಿತಧೀವಿಷಯತ್ವಾತ್—ಘಟವತ್" ಈ ಅನುಮಾನದಿಂದ ಅದು ಭಾವವೆಂದೇ ಸಿದ್ಧವಾಗುತ್ತದೆ ಅಸ್ತಿ ಎಂಬ ವಿಧಿಪ್ರತ್ಯಯವೇದ್ಯತ್ವವಿರುವಾಗ ಅಭಾವರೂಪವೆಂದು ಹೇಳಲು ಸಾಧ್ಯವಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ. ವ್ಯಭಿಚಾರವಿರುವುದರಿಂದ ಅನುಮಾನಪ್ರಮಾಣದಿಂದ ಸಾಧಿಸಿರುವುದು ವ್ಯರ್ಥವೆಂದು ಸಿದ್ಧಾಂತಿಯ ಉತ್ತರ. ಪ್ರಲಯ, ವಿನಾಶ, ಅವಸಾನ (ಸಮಾಪ್ತಿ=ವರ್ಣಾದ್ಯಭಾವ) ಗಳು ಅಭಾವರೂಪವಾಗಿದ್ದರೂ ಅವುಗಳಿಗೆ ವಿಧಿಪ್ರತ್ಯಯವೇದ್ಯತ್ವವಿರುತ್ತದೆ. 'ಪ್ರಲಯಃ ಅಸ್ತಿ' ಎಂಬ ವ್ಯವಹಾರವಿದೆ. ಭಾವತ್ವ ಇದ್ದಲ್ಲಿಯೇ ನಞಾನುಲ್ಲಿಖಿತಧೀವಿಷಯತ್ವವೆಂದಾಗಲೀ ಅಭಾವತ್ವವಿದ್ದಲ್ಲಿ ವಿಧಿಪ್ರತ್ಯಯವೇದ್ಯತ್ವವೆಂದಾಗಲೀ ನಿಯಮವಿಲ್ಲ.

'ನಚಾಭಾವೇ"—ಇತಿ. ಅಭಾವದಲ್ಲಿ ಭಾವ ಧರ್ಮಗಳನ್ನು ಆರೋಪಿಸುವುದು ಹೇಗೆ? ನೀಲಪುಷ್ಪದ ಧರ್ಮವೆಂದರೆ ನೀಲರೂಪ. ಇದನ್ನು ಆಲೋಕಾಭಾವರೂಪಾಂಧಕಾರದಲ್ಲಿ ಆರೋಪಿಸುವುದು ಹೇಗೆ? ಎಂದು ಪೂರ್ವಪಕ್ಷಿಯ ಶಂಕೆ. 'ದುಃಖಾಭಾವೇ'—ಇತಿ. ಭಾರಪೀಡಿತನಿಗೆ ದುಃಖವಿರುತ್ತದೆ. ಭಾರ ತೆಗೆದೊಡನೇ ಅವನು 'ಅಹಂ ಸುಖೀ ಸಂವೃತ್ತಃ' ಎನ್ನುತ್ತಾನೆ. ದುಃಖ ಹೋದದ್ದು ಅಲ್ಲಿ ವಾಸ್ತವಿಕ. ಸುಖ ಬಂದಿಲ್ಲ. ಅದುದರಿಂದ ದುಃಖಾಭಾವದಲ್ಲಿ ಸುಖತ್ವಾರೋಪ ಲೋಕಪ್ರಸಿದ್ಧವಾಗಿದೆ. ಹೀಗೆಯೇ ಸಂಯೋಗಾಭಾವವೇ ವಿಭಾಗವೆಂದು ಕೆಲವರ ಮತ (ಕಣಾದರ ಮತವಲ್ಲ.) ಅದನ್ನನುಸರಿಸಿ ಹೇಳಿದೆ. ಅಲ್ಲಿ ಸಂಯೋಗಾಭಾವದಲ್ಲಿ ವಿಭಾಗತ್ವವನ್ನು ಆರೋಪಿಸಿರುತ್ತಾರೆ. ಆದುದರಿಂದ ಭಾವಧರ್ಮಾರೋಪ ಎಲ್ಲಿಯೂ ಅಪ್ರಸಿದ್ಧವಾದುದಲ್ಲ. 'ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಾಲೋ'—ಇತಿ. ರೂಪವತ್ತಾದ ಘಟದ ಅಭಾವವು ಆಲೋಕಸಹಕೃತನಯನದಿಂದ ತಿಳಿಯಲ್ಪಡುವುದರಿಂದ ಅದರಂತೆಯೇ ರೂಪವತ್ತಾದ ಆಲೋಕಾಭಾವವೂ ಆಲೋಕ ಸಹಕೃತ ನಯನದಿಂದಲೇ ತಿಳಿಯಲ್ಪಡಬೇಕಲ್ಲವೇ ? ತನುಸ್ಸಾದರೋ ಹಾಗಿಲ್ಲ. ಎಂದು ಪೂರ್ವಪಕ್ಷಿಯ ಆಶಂಕೆ.

ಯದ್ಗ್ರಹೇ ಯದಪೇಕ್ಷಂ ಚಕ್ಷುಸ್ತದಭಾವಗ್ರಹೇಪಿ ತದಪೇಕ್ಷತ ಇತಿ ನ್ಯಾಯೇನಾ ಲೋಕಗ್ರಹೇ ಆಲೋಕಾಪೇಕ್ಷಾಯಾ ಅಭಾವೇನ ತದಭಾವಗ್ರಹೇಪಿ ತದಪೇ ಕ್ಷಾಯಾ ಅಭಾವಾತ್ । ನ ಚಾಧಿಕರಣಗ್ರಹಣಾವಶ್ಯಂಭಾವಃ । ಅಭಾವ ಪ್ರತೀತಾವಧಿಕರಣ ಗ್ರಹಣಾವಶ್ಯಂಭಾವಾನಂಗೀಕಾರಾತ್ । ಅಪರಥಾ ನಿವೃತ್ತಃ ಕೋಲಾಹಲ ಇತಿ ಶಬ್ದಪ್ರಧ್ವಂಸಪ್ರತ್ಯಕ್ಷೋ ನ ಸ್ಯಾದಿತಿ ಅಪ್ರಾಮಾಣಿಕಂ ಪರ ವಚನಮ್ । ತತ್ಸರ್ವಮಭಿಸಂಧಾಯ ಭಗವಾನ್ ಕಣಾದಃ ಪ್ರಣಿನಾಯ ಸೂತ್ರಂ 'ದ್ರವ್ಯಗುಣಕರ್ಮನಿಷ್ಪತ್ತಿವೈಧರ್ಮ್ಯಾದಭಾವಸ್ತಮಃ (ಕ ಸೂ ೫-೨-೧೯) ಇತಿ ॥

"ಯದ್ಗ್ರಹೇ"—ಇತಿ. ಘಟಾದಿಗ್ರಹದಲ್ಲಿ ಆಲೋಕಾಪೇಕ್ಷ ಚಕ್ಷಸ್ಸು ಕಾರಣ ವಾಗುವುದರಿಂದ ಘಟಾಭಾವಗ್ರಹಣದಲ್ಲಿ ಆಲೋಕಾಪೇಕ್ಷಚಕ್ಷಸ್ಸು ಅವಶ್ಯವಾಗಿರ ಬೇಕೆಂದು ಹೇಳಬಹುದು. ಆಲೋಕಗ್ರಹದಲ್ಲಿ ನಿರಪೇಕ್ಷವಾದ (ಯಾವ ಅಪೇಕ್ಷೆ ಇಲ್ಲದ) ಚಕ್ಷಸ್ಸೇ ಕಾರಣವಾಗುವುದರಿಂದ ಆಲೋಕಾಭಾವ ಗ್ರಹದಲ್ಲಿಯೂ ಕೇವಲ ಚಕ್ಷಸ್ಸು ಕಾರಣವೆಂದು ಸಿದ್ಧವಾಗುತ್ತದೆ. "ನಚಾಧಿಕರಣ'—ಇತಿ. ಅಭಾವ ಪ್ರತ್ಯಕ್ಷಕ್ಕೆ ಅಧಿಕರಣ ಜ್ಞಾನವೂ ಕವಶ್ಯಕವೆಂದು ಕೆಲವರು ಹೇಳುವುದು ಸಮಂಜಸವಲ್ಲ. ಸರ್ವತ್ರ ಈ ನಿಯಮವಿಲ್ಲ. ಘಟಾಭಾವಾದಿಗ್ರಹದಲ್ಲಿ ಕೆಲವು ಕಡೆ ಅಧಿಕರಣಜ್ಞಾನ ಬೇಕಾದರೂ 'ನಿವೃತ್ತ: ಕೋಲಾಹಲಃ' ಇತ್ಯಾದಿ ಶಬ್ದಪ್ರಧ್ವಂಸ (ಶಬ್ದಾಭಾವ) ಸ್ಥಳ ದಲ್ಲಿ ಆ ನಿಯಮವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಶಬ್ದಾಧಿಕರಣವು ಆಕಾಶವಾದು ದರಿಂದ ಶಬ್ದಪ್ರಧ್ವಂಸಾಧಿಕರಣವೂ ಆಕಾಶವಾಗುತ್ತದೆ. ಆಕಾಶಪ್ರತ್ಯಕ್ಷವೆಲ್ಲಿಯೂ ಇಲ್ಲ. ನಿಯಮವನ್ನಂಗೀಕರಿಸಿದರೆ ಆಕಾಶ ಪ್ರತ್ಯಕ್ಷವಾಗದಿದ್ದರೆ ಶಬ್ದಪ್ರಧ್ವಂಸ ಪ್ರತ್ಯಕ್ಷವೂ ಆಗದೇಹೋಗಬೇಕಾಗುತ್ತದೆ. ಆದರೆ ಹೀಗೆ ಅನುಭವವಿಲ್ಲ. ಆದುದರಿಂದ ಅಧಿಕರಣಜ್ಞಾನಬೇಕೆಂಬುದೂ ಸರಿಯಲ್ಲ. 'ಅಪ್ರಾಮಾಣಿಕಂ' ಇತಿ. ಅಂಧಕಾರವು ಆಲೋಕಾಭಾವರೂಪವಾದುದರಿಂದ ಅದು ದ್ರವ್ಯವೆಂಬ ಮೀಮಾಂಸಕರ ಮತವು ಸಮಂಜಸವಲ್ಲವೆಂದು ತಾತ್ಪರ್ಯ. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟು ಕಣಾದರೂ 'ದ್ರವ ಗುಣ"—ಇತ್ಯಾದಿ ಸೂತ್ರವನ್ನು ರಚಿಸಿರುತ್ತಾರೆ. ನಿಷ್ಪತ್ತಿಃ—ಉತ್ಪತ್ತಿ. ವೈಧರ್ಮ್ಯಂ— ವೈಲಕ್ಷಣ್ಯ. ಅಂಧಕಾರಕ್ಕೆ ಉತ್ಪತ್ತಿ ವಿನಾಶ ಪ್ರತ್ಯಕ್ಷಸಿದ್ಧವಾಗಿದೆ. ಆದುದರಿಂದ ಅದು ಅನಿತ್ಯವಾಗುತ್ತದೆ. ಸಾಮಾನ್ಯ ವಿಶೇಷಸಮವಾಯಗಳು ನಿತ್ಯವಾದುದರಿಂದ ಅವುಗಳಲ್ಲಿ ಸೇರುವುದಿಲ್ಲ. ಉತ್ಪತ್ತಿ ಇರುವ ದ್ರವ್ಯಗುಣಕರ್ಮಗಳಲ್ಲಿಯೂ ಸೇರುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಲ್ಲ. ಏಕೆಂದರೆ ಕತ್ತಲೆಯ ಉತ್ಪತ್ತಿಯು ದ್ರವ್ಯಾದ್ಯುತ್ಪತ್ತಿಗಿಂತ ವಿಲಕ್ಷಣವಾಗಿದೆ. ಜನ್ಯದ್ರವ್ಯವು ತನ್ನ ಅವಯವಗಳಿಂದ ಆರಬ್ಧವಾಗುತ್ತದೆ. ತಮಸ್ಸಿಗೆ ಅವಯವಗಳಿಲ್ಲ. ಬೆಳಕು ಹೋಯಿತೆಂದರೆ ಥಟ್ಟನೆ ಕತ್ತಲೆಯ ಅನುಭವ ಬರುತ್ತದೆ. ಗುಣಕರ್ಮಗಳಿಗೆ ದ್ರವ್ಯಾಶ್ರಯದಿಂದ ಉತ್ಪತ್ತಿದೃಷ್ಟವಾದುದರಿಂದ ಕತ್ತಲೆಗೆ ಇದಿಲ್ಲವಾದುದರಿಂದ ಅಲ್ಲಿಯೂ ಸೇರುವುದಿಲ್ಲವೆಂದು ಸೂತ್ರದ ತಾತ್ಪರ್ಯ.

ಅಭಾವಸ್ತು ನಿಷೇಧಮುಖಪ್ರಮಾಣಗಮ್ಯಃ ಸಪ್ತಮೋ ನಿರೂಪ್ಯತೇ । ಸ ಚಾ ಸಮವಾಯತ್ವೇ ಸತ್ಯಸಮವಾಯಃ । ಸಂಕ್ಷೇಪತೋದ್ವಿವಿಧಃ । ಸಂಸರ್ಗಾಭಾವಾನ್ಯೋನ್ಯಾಭಾವಭೇದಾತ್ । ಸಂಸರ್ಗಾಭಾವೋಪಿ ತ್ರಿವಿಧಃ । ಪ್ರಾಕ್‌ಪ್ರಧ್ವಂಸಾತ್ಯಂತಾಭಾವಭೇದಾತ್ । ತತ್ರಾನಿತ್ಯೋನಾದಿತಮಃ ಪ್ರಾಗಭಾವಃ । ಉತ್ಪತ್ತಿಮಾನವಿನಾಶೀ ಪ್ರಧ್ವಂಸಃ । ಪ್ರತಿಯೋಗ್ಯಾಶ್ರಯೋಽಭಾವೋಽತ್ಯಂತಾಭಾವಃ । ಅತ್ಯಂತಾಭಾವ ವ್ಯತಿರಿಕ್ತತ್ವೇ ಸತ್ಯನವಧಿರಭಾವೋನ್ಯೋನ್ಯಾಭಾವಃ ॥ ನನ್ವನ್ಯೋಽಭಾವ ಏವಾತ್ಯಂತಾ ಭಾವ ಇತಿ ಚೇತ್ ಅಹೋ ರಾಜಮಾರ್ಗ ಏವ ಭ್ರಮಃ । ಅನ್ಯೋನ್ಯಾಭಾವೋ ಹಿ ತಾದಾತ್ಮ್ಯ ಪ್ರತಿಯೋಗಿಕಃ ಪ್ರತಿಷೇಧಃ । ಯಥಾಘಟಃ ಪಟಾತ್ಮಾ ನ ಭವತೀತಿ । ಸಂಸರ್ಗಪ್ರತಿಯೋಗಿಕಃ ಪ್ರತಿಷೇಧೋಽತ್ಯಂತಾಭಾವಃ । ಯಥಾ ವಾಯೌ ರೂಪಸಂಬಂಧೋ ನಾಸ್ತೀತಿ । ನ ಚಾಸ್ಯ ಪುರುಷಾರ್ಥೋಪಯಿಕತ್ವಂ ನಾಸ್ತೀತ್ಯಾಶಂಕನೀಯಮ್ । ದುಃಖಾತ್ಯಂತೋಚ್ಛೇದಾಪರಪರ್ಯಾಯನಿಃಶ್ರೇಯಸರೂಪತ್ವೇನ ಪರಮಪುರುಷಾರ್ಥತ್ವಾತ್ ॥

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನಸಂಗ್ರಹೇ ಔಲೂಕ್ಯದರ್ಶನಮ್

ಅಭಾವಪದಾರ್ಥವನ್ನು ತಿಳಿಸುತ್ತಾರೆ – 'ಅಭಾವಸ್ತು—' ಇತಿ. ಅಭಾವವಾದರೋ ನಿಷೇಧರೂಪಪ್ರಮಾಣದಿಂದ ಸಿದ್ಧವಾಗುತ್ತದೆ. ಇದು ಏಳನೇ ಪದಾರ್ಥ. 'ಘಟವಿಲ್ಲ' ಎಂದರೆ ನಮಗೆ ಒಂದು ಅರ್ಥಜ್ಞಾನವುಂಟಾಗುವುದರಿಂದ ಅದೂ ಒಂದು ಪದಾರ್ಥವಾಗುತ್ತದೆ. 'ಸಚ—' ವಾಕ್ಯದಿಂದ ಅಭಾವಲಕ್ಷಣ ತೋರಿಸುತ್ತಾನೆ. 'ಸಮವಾಯಸಂಬಂಧರಹಿತತ್ವೇಸತಿ ಸಮವಾಯಭಿನ್ನಪದಾರ್ಥತ್ವಂ' ಅಭಾವದ ಲಕ್ಷಣಂ ಸತ್ಯಂತದಿಂದ ದ್ರವ್ಯಗುಣಕರ್ಮಸಾಮಾನ್ಯವಿಶೇಷಗಳ ವ್ಯಾವೃತ್ತಿಯಾಗುತ್ತದೆ. ಅವು ಸಮವಾಯಸಂಬಂಧವುಳ್ಳವುಗಳು. ದ್ರವ್ಯದಲ್ಲಿ ಗುಣಾದಿಗಳ ಸಮವಾಯವಿರುತ್ತದೆ. ಗುಣಾದಿಗಳು ಸಮವಾಯಸಂಬಂಧದಿಂದ ದ್ರವ್ಯದಲ್ಲಿರುತ್ತವೆ. ಅನಿತ್ಯದ್ರವ್ಯಗಳನ್ನು ತೆಗೆದುಕೊಂಡರೆ ಅವಯವಿಯು ಅವಯವಗಳಲ್ಲಿ ಸಮವಾಯದಿಂದ ಇರುತ್ತದೆ. ಸಾಮಾನ್ಯವೆಂದರೆ ಜಾತಿ. ಅದೂ ದ್ರವ್ಯಾದಿತ್ರಿಕದಲ್ಲಿ ಸಮವಾಯದಿಂದ ಇರುತ್ತದೆ. ವಿಶೇಷವೂ ನಿತ್ಯದ್ರವ್ಯಗಳಲ್ಲಿ ಸಮವಾಯದಿಂದ ಇರುತ್ತದೆ. ಸಮವಾಯಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮವಾಯವಿಲ್ಲ. ಅದಕ್ಕೂ ಸಮವಾಯವನ್ನಂಗೀಕರಿಸಿದರೆ ಅನವಸ್ಥಾ ಬರುತ್ತದೆ. ಸಮವಾಯಸಂಬಂಧರಾಹಿತ್ಯವು ಸಮವಾಯದಲ್ಲಿ ಬರುವುದರಿಂದ ಅತಿವ್ಯಾಪ್ತಿ ದೋಷ ನಿವಾರಣೆಗೆ 'ಸಮವಾಯಭಿನ್ನತ್ವಂ' ಎಂದು ಹೇಳಿದೆ. ಇದನ್ನು ಸಂಕ್ಷೇಪವಾಗಿ ಹೇಳುವು ದಾದರೆ ಸಂಸರ್ಗಾಭಾವ, ಅನ್ಯೋನ್ಯಾಭಾವವೆಂದು ಎರಡುವಿಧ. ಸಂಸರ್ಗವೆಂದರೆ ಸಂಬಂಧ. ಸಂಬಂಧಪ್ರತಿಯೋಗಿಕವಾದ (ಅಭಾವ) ನಿಷೇಧಕ್ಕೆ ಸಂಸರ್ಗಾಭಾವ ವೆಂದು ಹೆಸರು. ಘಟೋತ್ಪತ್ತಿಯಾಗಬೇಕಾದರೆ ಮೊದಲು 'ಇಹ ಘಟಃ ನಾಸ್ತಿ' ಎಂಬುದರಿಂದ ಪ್ರಾಗಭಾವವು ತೋರುತ್ತದೆ. ಆಗ ಮೃತ್ಪಿಂಡದಲ್ಲಿ ಘಟಸಂಬಂಧವು ನಿಷೇಧಿಸಲ್ಪಡುತ್ತದೆ. ಘಟನಾಶವಾದಮೇಲೆ 'ಇಹ ಘಟೋ ನಾಸ್ತಿ' ಎಂದಾಗ ಅದರಿಂದ ಪ್ರಧ್ವಂಸಾಭಾವವು ಬೋಧಿತವಾಗುತ್ತದೆ. ಆಗ ಘಟದ ತುಂಡುಗಳಲ್ಲಿ ಘಟ ಸಂಬಂಧವು ನಿಷೇಧಿಸಲ್ಪಡುತ್ತದೆ. 'ಭೂತಲೇ ಘಟೋ ನಾಸ್ತಿ' ಎಂದಾಗ ಭೂತಲ ದಲ್ಲಿ ಘಟಸಂಬಂಧವು ನಿಷಿದ್ಧವಾಗುತ್ತದೆ. ಇದರಿಂದ ಅತ್ಯಂತಾಭಾವವು ತೋರುತ್ತದೆ. ಹೀಗೆ ಮೂರುವಿಧಗಳಾದ ಸಂಸರ್ಗಾಭಾವಗಳಲ್ಲಿ ಪ್ರಾಗಭಾವ, ಪ್ರಧ್ವಂಸಾಭಾವಗಳು ಅನಿತ್ಯವಾಗಿಯೂ, ಅತ್ಯಂತಾಭಾವವು ನಿತ್ಯವಾಗಿಯೂ ಇರುತ್ತವೆ. ಪ್ರಾಗಾಭಾವಕ್ಕೆ ಉತ್ಪತ್ತಿಯಿಲ್ಲದಿದ್ದರೂ ನಾಶವಿರುತ್ತದೆ. ಪ್ರಧ್ವಂಸಾಭಾವಕ್ಕೆ ನಾಶವಿಲ್ಲದಿದ್ದರೂ ಉತ್ಪತ್ತಿಯಿರುತ್ತದೆ. ಅತ್ಯಂತಾಭಾವದಂತೆ ಅನ್ಯೋನ್ಯಾಭಾವವೂ ನಿತ್ಯವಾಗಿದೆ.

'ಅನಾದಿತಮಃ —' ಇತಿ. ಅತಿಶಯೇನ ಅನಾದಿಃ, ಅನಾದಿತಮಃ. ಜೀರ್ಣದೇವಾಲಯಾದಿಗಳ ಉತ್ಪತ್ತಿತಿಳಿಯದಿರುವುದರಿಂದ ಅದು ಅನಾದಿಯೆಂದು ಹೇಳು ತ್ತಾರೆ. ಅದರಂತೆ ಇದು ಅನಾದಿಯಲ್ಲ. ಇದು ಆದಿ ಬ್ರಹ್ಮನಿಂದಲೂ ತಿಳಿಯಲು ಸಾಧ್ಯವಿಲ್ಲ. ಆದುದರಿಂದ 'ಅನಾದಿತಮಃ, ಎಂದಿರುತ್ತಾನೆ. ಅನಾದಿತಮವಾದ ಅಭಾವವೇ ಪ್ರಾಗಭಾವವೆಂದು ಹೇಳಬೇಕಾಗಿಲ್ಲ. ಅನಾದಿಯಾದ ಭಾವಪದಾರ್ಥದಲ್ಲಿ ಅತಿವ್ಯಾಪ್ತಿವಾರಣೆಗೆ ಅಭಾವವೆಂದು ಹೇಳಬೇಕು. ಆದರೆ ಅನಾದಿಯಾದ ಭಾವಕ್ಕೆ ಅನಿತ್ಯತ್ವವಿಲ್ಲದಿರುವುದರಿಂದ ಅಲ್ಲಿ ಅತಿವ್ಯಾಪ್ತಿ ಬರುವುದಿಲ್ಲ. ಆದುದರಿಂದ ಅಭಾವ ವ್ಯರ್ಥವೆಂದು ಹೇಳಿಲ್ಲ. ಹೀಗೆಯೇ ಉತ್ಪತ್ತಿಯುಳ್ಳ ಅವಿನಾಶಿಯಾದುದು ಪ್ರಧ್ವಂಸಾ ಭಾವವೆಂದು ಹೇಳಿದೆ. ಇಲ್ಲಿಯೂ ಅಭಾವಪದ ಹೇಳಿಲ್ಲ. ಭಾವದಲ್ಲಿ ಅತಿವ್ಯಾಪ್ತಿ ಶಂಕೆ ಬರುವುದಿಲ್ಲ. ಅವಿನಾಶಿಯಾದ ಭಾವಕ್ಕೆ ಎಲ್ಲಿಯೂ ಉತ್ಪತ್ತಿಯಿರುವುದಿಲ್ಲ. 'ಪ್ರತಿಯೋಗಿ'— ಇತಿ. ಪ್ರಾಗಭಾವ, ಪ್ರಧ್ವಂಸಾಭಾವಗಳಿಗೆ ಎಂದೂ ಪ್ರತಿಯೋಗಿಯು ಆಶ್ರಯವಾಗಿರುವುದಿಲ್ಲ. ಪ್ರತಿಯೋಗಿಯೊಡನೆ ಅವುಗಳಿಗೆ ಯೌಗಪದ್ಯಸಂಭವಿಸುವು ದಿಲ್ಲ. ಘಟೋತ್ಪತ್ತಿಯ ಪೂರ್ವದಲ್ಲಿ ಅಥವಾ ಘಟನಾಶೋತ್ತರದಲ್ಲಿ ಘಟವೇ ಇಲ್ಲದಿರು ವುದರಿಂದ ಪ್ರತಿಯೋಗ್ಯಾಶ್ರಯಕವಾಗುವುದಿಲ್ಲ. ಅನ್ಯೋನ್ಯಾಭಾವಕ್ಕೂ ಪ್ರತಿ ಯೋಗಿಯು ಆಶ್ರಯವಾಗುವುದಿಲ್ಲ. ಏಕೆಂದರೆ ಘಟದಲ್ಲಿ ಘಟಭೇದವೆಂದೂ ಸಂಭವಿಸು ವುದಿಲ್ಲ. ಅತ್ಯಂತಾಭಾವದಲ್ಲಿ ಮಾತ್ರ ಪ್ರತಿಯೋಗಿಯು ಆಶ್ರಯವಾಗುತ್ತದೆ. ಭೂತಲ ದಲ್ಲಿ ಘಟಾಭಾವವಿರುವಂತೆ ಘಟದಲ್ಲಿಯೂ ಘಟವಿಲ್ಲದಿರುವುದರಿಂದ ಘಟಪ್ರತಿಯೋಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಶ್ರಯುವಾಗುತ್ತದೆ. ಇದೂ ಅತ್ಯಂತಾಭಾವ, ಅನ್ಯೋನ್ಯಾಭಾವಗಳಿಗೆ ಭೇದಸಾಧಕವಾಗುತ್ತದೆ. ಅತ್ಯಂತಾಭಾವವು ಪ್ರತಿಯೋಗ್ಯಾಶ್ರಯುವಾಗಿದ್ದರೂ ಪ್ರತಿಯೋಗಿಸಾಮಾನಾಧಿಕರಣ್ಯದಿಂದ ಎಂದೂ ತೋರುವುದಿಲ್ಲ. ಭೂತಲದಲ್ಲಿ ಘಟವಿರುವಾಗ (ಘಟದಲ್ಲಿ ಘಟಾತ್ಯಂತಾಭಾವವಿದ್ದರೂ) ಘಟಾತ್ಯಂತಾಭಾವವು ಯಾರಿಗೂ ಅನುಭವ ವಿಷಯುವಾಗುವುದಿಲ್ಲ. ಅನ್ಯೋನ್ಯಾಭಾವವಾದರೋ ಪ್ರತಿಯೋಗಿ ಸಾಮಾನಾಧಿಕರಣ್ಯದಿಂದಲೂ ಪ್ರತೀತವಾಗುತ್ತದೆ. ಘಟವಿರುವ ಭೂತಲದಲ್ಲಿ ಘಟಭೇದವನ್ನು ಹೇಳಲು ಸಾಧ್ಯವಾಗುತ್ತದೆ. ಸಾದೃಶ್ಯಾದಿಗಳಲ್ಲಿ ಅತಿವ್ಯಾಪ್ತಿವಾರಣೆಗೋಸ್ಕರ 'ಪ್ರತಿಯೋಗ್ಯಾಶ್ರಯಃ ಅಭಾವಃ' ಎಂದು ಹೇಳಿದೆ. ಸಾದೃಶ್ಯವೂ ಪ್ರತಿಯೋಗ್ಯಾಶ್ರಯಕವಾದರೂ ಅಭಾವವಲ್ಲ.

'ಅತ್ಯಂತಾಭಾವಃ' —ಇತಿ. ಅತ್ಯಂತಾಭಾವದಿಂದ ಬೇರೆಯಾಗಿ ಅನವಧಿಯಾಗಿರುವ ಅಭಾವಕ್ಕೆ ಅನ್ಯೋನ್ಯಾಭಾವವೆಂದು ಹೆಸರು. ಅನವಧಿಃ —ಕಾಲಕೃತಾವಧಿರಹಿತಃ ನಿತ್ಯವೆಂದು ತಾತ್ಪರ್ಯ. ಇಲ್ಲಿಯೂ ನಿತ್ಯವಾದ ಪರಮಾಣ್ವಾದಿಗಳು ಅತ್ಯಂತಾಭಾವಭಿನ್ನವಾಗಿ ನಿತ್ಯವಾದುದರಿಂದ ಅಲ್ಲಿ ಅತಿವ್ಯಾಪ್ತಿವಾರಣೆಗೆ ಅಭಾವಪದ ಹೇಳಿದೆ. 'ನನು'— ಇತಿ. ಎರಡೂ ನಿತ್ಯವಾದುದರಿಂದ ಒಂದಾಗಲಿ ಎಂದು ಪೂರ್ವಪಕ್ಷ. ಭೇದ ಸ್ಪಷ್ಟವಾಗಿದ್ದರೂ ಒಂದೆಂದು ತೋರಿದರೆ ರಾಜಮಾರ್ಗದಲ್ಲಿಯೇ ಭ್ರಾಂತಿ ಎಂದಾಗುತ್ತದೆ. ತಾದಾತ್ಮ್ಯವೆಂದರೆ ತತ್ಸ್ವರೂಪ. ಘಟವು ಪಟವಲ್ಲವೆಂದರೆ ಪಟಸ್ವರೂಪವಲ್ಲವೆಂದರ್ಥ. ವಾಯುವಿನಲ್ಲಿ ರೂಪಸಂಬಂಧವಿಲ್ಲವೆಂದರೆ ರೂಪಸಂಸರ್ಗ ಪ್ರತಿಯೋಗಿಕಾಭಾವವಾಗುತ್ತದೆ. 'ನ ಚಾಸ್ಯ'—ಇತಿ. ದ್ರವ್ಯಾದಿ ಆರುಪದಾರ್ಥಗಳ ತತ್ವಜ್ಞಾನದಿಂದ ಮೋಕ್ಷವುಂಟಾಗುವುದರಿಂದ ಅವುಗಳ ವಿಚಾರವು ಪುರುಷಾರ್ಥೋಪಯೋಗಿಯಾಗಬಹುದು. ಅಭಾವಜ್ಞಾನವು ಮೋಕ್ಷೋಪಯೋಗಿಯಾಗುವುದು ಹೇಗೆ ಎಂದು ಪೂರ್ವಪಕ್ಷಿಯ ಶಂಕೆ. ಇದಕ್ಕೆ ಸಮಾಧಾನ. 'ದುಃಖ'—ಇತಿ. ದುಃಖಾತ್ಯಂತೋಚ್ಛೇದವೇ (ನಾಶ) ಮೋಕ್ಷವೆಂದುದರಿಂದ ಈ ಅಭಾವವು ಪರಮಪುರುಷಾರ್ಥಸ್ವರೂಪವೇ ಆದುದರಿಂದ ಇದನ್ನು ಅವಶ್ಯವಾಗಿ ತಿಳಿಯಬೇಕಾಗಿದೆ.

ಔಲೂಕ್ಯದರ್ಶನದ ಕನ್ನಡ ವ್ಯಾಖ್ಯಾನ ಮುಗಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥಾಕ್ಷಪಾದ(ನ್ಯಾಯ)ದರ್ಶನಮ್ ॥ ೧೧ ॥

ತತ್ವಜ್ಞಾನಾದ್ ದುಃಖಾತ್ಯಂತೋಚ್ಛೇದಲಕ್ಷಣಂ ನಿಃಶ್ರೇಯಸಂ — ಭವತೀತಿ ಸಮಾನತಂತ್ರೇಽಪಿ ನಿರೂಪಿತಮ್ । ತದಾಹ ಸೂತ್ರಕಾರಃ—ಪ್ರಮಾಣಮೇಯೇತ್ಯಾದಿತತ್ವಜ್ಞಾನಾನ್ನಿಃಶ್ರೇಯಸಾದಿಗಮಃ' ಇತಿ । ಇದಂನ್ಯಾಯಶಾಸ್ತ್ರಸ್ಯಾದಿಮಂ ಸೂತ್ರಮ್। ನ್ಯಾಯಶಾಸ್ತ್ರಂ ಚ ಪಂಚಾಧ್ಯಾಯಾತ್ಮಕಮ್ । ತತ್ರ ಪ್ರತ್ಯಧ್ಯಾಯಮಾಹ್ನಿಕದ್ವಯಮ್ । ತತ್ರ ಪ್ರಥಮಾಧ್ಯಾಯಸ್ಯ ಪ್ರಥಮಾಹ್ನಿಕೇ ಭಗವತಾ ಗೌತಮೇನ ಪ್ರಮಾಣಾದಿ ಪದಾರ್ಥನವಕಲಕ್ಷಣ ನಿರೂಪಣಂ ವಿಧಾಯ ದ್ವಿತೀಯೇ ವಾದಾದಿ ಸಪ್ತಪದಾರ್ಥಲಕ್ಷಣ ನಿರೂಪಣಂ ಕೃತಮ್ । ದ್ವಿತೀಯಸ್ಯ ಪ್ರಥಮೇ ಸಂಶಯಪರೀಕ್ಷಣಂ ಪ್ರಮಾಣ ಚತುಷ್ಟಯಾಪ್ರಾಮಾಣ್ಯ ಶಂಕಾ ನಿರಾಕರಣಂ ಚ । ದ್ವಿತೀಯೇಽರ್ಥಾಪತ್ತ್ಯಾದೇರಂತರ್ಭಾವನಿರೂಪಣಮ್। ತೃತೀಯಸ್ಯ ಪ್ರಥಮೇ ಆತ್ಮಶರೀರೇಂದ್ರಿಯಾರ್ಥಪರೀಕ್ಷಣಮ್। ದ್ವಿತೀಯೇ ಬುದ್ಧಿಮನಃ ಪರೀಕ್ಷಣಮ್ । ಚತುರ್ಥಸ್ಯ ಪ್ರಥಮೇ ಪ್ರವೃತ್ತಿದೋಷಪ್ರೇತ್ಯಭಾವಫಲದುಃಖಾಪವರ್ಗಪರೀಕ್ಷಣಮ್ । ದ್ವಿತೀಯೇ ದೋಷನಿಮಿತ್ತಕತ್ವನಿರೂಪಣಮವಯವ್ಯಾದಿನಿರೂಪಣಂ ಚ । ಪಂಚಮಸ್ಯ ಪ್ರಥಮೇ ಜಾತಿಭೇದನಿರೂಪಣಮ್ । ದ್ವಿತೀಯೇ ನಿಗ್ರಹಸ್ಥಾನಭೇದ ನಿರೂಪಣಮ್ ॥

ಅಕ್ಷಪಾದರೆಂದರೆ ಗೌತಮರು. ಇವರು ಐದು ಅಧ್ಯಾಯಗಳಿಂದ ಸೂತ್ರರೂಪವಾಗಿ ಈ ದರ್ಶನವನ್ನು ಹೇಳಿರುತ್ತಾರೆ. ಇವರು ತಮ್ಮ ಶಾಸ್ತ್ರವನ್ನು ಖಂಡಿಸಿದ ವ್ಯಾಸರ ಮುಖವನ್ನು ನೋಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದಾಗ ವ್ಯಾಸರು ಬಹುವಾಗಿ ಕ್ಷಮಾಯಾಚನೆ ಮಾಡಿದ ಮೇಲೆ ಕಾಲಿನಲ್ಲಿ ಕಣ್ಣು ಧರಿಸಿ ನೋಡಿದರೆಂದು ಅಂದಿನಿಂದ ಇವರಿಗೆ 'ಅಕ್ಷಪಾದ' ಎಂಬ ಹೆಸರು ಬಂದಿತೆಂದೂ ಐತಿಹ್ಯವಿದೆ. ಆದುದರಿಂದ ಇವರ ನ್ಯಾಯಶಾಸ್ತ್ರಕ್ಕೆ ಅಕ್ಷಪಾದದರ್ಶನವೆಂದು ಹೆಸರಾಗಿದೆ.

ವೈಶೇಷಿಕದರ್ಶನದಿಂದ ಸಮಾನವಾದ `ತಂತ್ರವೆಂದರೆ ಶಾಸ್ತ್ರ. ತತ್ವಜ್ಞಾನದಿಂದಲೇ ಮೋಕ್ಷವೆಂದು ವೈಶೇಷಿಕದಲ್ಲಿ ಹೇಳಿದೆ. ಅದನ್ನೇ ಇವರೂ ಹೇಳಿರುತ್ತಾರೆ. ಆತ್ಯಂತಿಕದುಃಖನಿವೃತ್ತಿಯೇ ಮೋಕ್ಷ. (ನಿಃ ಶ್ರೇಯಸ್ಸು) "ಪ್ರಮಾಣ—" ಇತಿ. ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತಾವಯವತರ್ಕ ನಿರ್ಣಯವಾದ ಜಲ್ಪವಿತಂಡಾ ಹೇತ್ವಾಭಾಸ ಛಲಜಾತಿ ನಿಗ್ರಹಸ್ಥಾನಾನಾಂ ತತ್ತ್ವಜ್ಞಾನಾನ್ನಿಃಶ್ರೇಯಸಾಧಿಗಮಃ" (ಗೌ – ಸೂ – ೧ – ೧ – ೧) ಎಂದು ಮೊದಲನೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿಯೂ ಎರಡೆರಡು ಆಹ್ನಿಕಗಳಿವೆ. ಮೊದಲನೆಯ ಅಧ್ಯಾಯದ ಒಂದನೆಯ ಆಹ್ನಿಕದಲ್ಲಿ ಪೂಜ್ಯರಾದ ಗೌತಮರು ಪ್ರಮಾಣಾದಿ ನಿರ್ಣಯದವರೆಗಿನ ಒಂಬತ್ತು ಪದಾರ್ಥಗಳ ಲಕ್ಷಣವನ್ನು ನಿರೂಪಿಸಿರುತ್ತಾರೆ. ಎರಡನೆಯ ಆಹ್ನಿಕದಲ್ಲಿ ವಾದಾದಿ ಏಳು ಪದಾರ್ಥಗಳ ಲಕ್ಷಣವನ್ನು ಹೇಳಿರುತ್ತಾರೆ. ಎರಡನೆಯ ಅಧ್ಯಾಯದ ಮೊದಲನೆಯ ಆಹ್ನಿಕದಲ್ಲಿ ಸಂಶಯಪರೀಕ್ಷಣ ಅಂದರೆ ಸಂಶಯಕ್ಕೆ ಕಾರಣ ಮತ್ತು ಅದರ ಸ್ವರೂಪ ಮುಂತಾದವುಗಳೂ ನಾಲ್ಕುವಿಧ ಪ್ರಮಾಣಗಳಿಗೆ ಪ್ರಾಮಾಣ್ಯವಿಲ್ಲವೆಂಬ ಶಂಕಾನಿವಾರಣವೂ ವಿವರಿಸಿದೆ. ಎರಡನೆಯ ಆಹ್ನಿಕದಲ್ಲಿ ಅರ್ಥಾಪತ್ತ್ಯಾದಿ ಪ್ರಮಾಣಗಳು ನಾಲ್ಕುಪ್ರಮಾಣಗಳಲ್ಲಿಯೇ ಸೇರಿರುತ್ತವೆಯೆಂಬ ವಿಚಾರ ಹೇಳಿದೆ. ಹೀಗೆ ಎರಡು ಅಧ್ಯಾಯಗಳಲ್ಲಿ ಪ್ರಮಾಣಸಂಬಂಧವಾದ ವಿಚಾರವಾಗುತ್ತದೆ. ಮೂರನೇ ಅಧ್ಯಾಯದ ಎರಡು ಆಹ್ನಿಕಗಳು, ನಾಲ್ಕನೆಯ ಮೊದಲನೆಯ ಆಹ್ನಿಕ ಹೀಗೆ ಮೂರು ಆಹ್ನಿಕಗಳಲ್ಲಿ ಪ್ರಮೇಯ ವಿಚಾರಮಾಡಿದೆ. ಪ್ರಮೇಯವು ಹನ್ನೆರಡು ವಿಧವಾಗಿದೆ. "ಆತ್ಮಶರೀರೇಂದ್ರಿಯಾರ್ಥಬುದ್ಧಿಮನಃ ಪ್ರವೃತ್ತಿದೋಷ ಪ್ರೇತ್ಯಭಾವ ಫಲದುಃಖಾಪವರ್ಗಾಸ್ತು ಪ್ರಮೇಯಂ" (ಸೂ ೧-೧-೯) ಎಂದು ಸೂತ್ರ. ಮೂರನೆಯ ಮೊದಲಿನಾಹ್ನಿಕದಲ್ಲಿ ಆತ್ಮಶರೀರೇಂದ್ರಿಯಾರ್ಥ ವಿಚಾರವೂ, ಎರಡನೆಯಾಹ್ನಿಕದಲ್ಲಿ ಬುದ್ಧಿಮನಃ ಪರೀಕ್ಷಣವೂ, ನಾಲ್ಕನೆಯ ಪ್ರಥಮಾಹ್ನಿಕದಲ್ಲಿ ಉಳಿದ ಪ್ರವೃತ್ತ್ಯಾದಿ ಆರು ಪ್ರಮೇಯಗಳ ವಿಚಾರವೂ ಮಾಡಿದೆ. ಎರಡನೆಯ ಆಹ್ನಿಕದಲ್ಲಿ ದೋಷನಿಮಿತ್ತಗಳನ್ನೂ, ಅವಯವೀ ಮುಂತಾದವುಗಳ ನಿರೂಪಣವನ್ನೂ ಮಾಡಿರುತ್ತಾರೆ. ಅವಯವೀ ನಿರೂಪಣವೆಂದರೆ ಅವಯವಿಯಾದ ವಸ್ತ್ರಾದಿಗಳು ಅವಯವವಾದ ತಂತ್ವಾದಿಗಳಿಗಿಂತ ಬೇರೆಯಾಗಿವೆಯೆಂದು ತೋರಿಸಿ ಕೊಡುವುದು. ಆದಿಪದದಿಂದ ಪರಮಾಣುಗಳಿಗೆ ಅವಯವವಿಲ್ಲವೆಂದು ಸಾಧಿಸುವುದೂ ಆಗಿದೆ. ಐದನೆಯ ಪ್ರಥಮಾಹ್ನಿಕದಲ್ಲಿ ಜಾತಿಭೇದ ನಿರೂಪಣ. ದ್ವಿತೀಯಾಹ್ನಿಕದಲ್ಲಿ ನಿಗ್ರಹಸ್ಥಾನಭೇದ ನಿರೂಪಣ. ಹೀಗೆ ಐದು ಅಧ್ಯಾಯಗಳಲ್ಲಿ ಹೇಳಿದ ಪದಾರ್ಥಗಳ ಸೂಕ್ಷ್ಮ ಪರಿಚಯ ತಿಳಿಯಬೇಕು.

ಮಾನಾಧೀನಾ ಮೇಯಸಿದ್ಧಿರಿತಿ ನ್ಯಾಯೇನ ಪ್ರಮಾಣಸ್ಯ ಪ್ರಥಮಮುದ್ದೇಶೇ ತದನುಸಾರೇಣ ಲಕ್ಷಣಸ್ಯ ಕಥನೀಯತಯಾ ಪ್ರಥಮೋದ್ದಿಷ್ಟಸ್ಯ ಪ್ರಮಾಣಸ್ಯ ಪ್ರಥಮಂ ಲಕ್ಷಣಂ ಕಥ್ಯತೇ — ಸಾಧನಾಶ್ರಯವ್ಯತಿರಿಕ್ತತ್ವೇ ಸತಿ ಪ್ರಮಾವ್ಯಾಪ್ತಂ ಪ್ರಮಾಣಮ್ । ಏವಂ ಚ ಪ್ರತಿತಂತ್ರ ಸಿದ್ಧಾಂತಸಿದ್ಧಂ ಪರಮೇಶ್ವರ ಪ್ರಾಮಾಣ್ಯಂ ಸಂಗ್ರಹೀತಂ ಭವತಿ । ಯದಚಕಥಯತ್ಸೂತ್ರಕಾರಃ—ಮಂತ್ರಾಯುರ್ವೇದ ಪ್ರಾಮಾಣ್ಯವಚ ತತ್ಪ್ರಾಮಾಣ್ಯಮಾಪ್ತಪ್ರಾಮಾಣ್ಯಾತ್ (ಸೂ ೨-೧-೬೭) ಇತಿ । ತಥಾ ಚ ನ್ಯಾಯ ನಯಪಾರಾವಾರಪಾರದೃಶ್ವಾ ವಿಶ್ವವಿಖ್ಯಾತ ಕೀರ್ತಿ ರುದಯನಾಚಾರ್ಯೋಽಪಿ ನ್ಯಾಯಕುಸುಮಾಂಜಲೌ ಚತುರ್ಥೇ ಸ್ತಬಕೇ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಿತಿಃ ಸಮ್ಯಕ್ ಪರಿಚ್ಛಿತ್ತಿಸ್ತದ್ವತ್ತಾ ಚ ಪ್ರಮಾತೃತಾ ||
ತದಯೋಗವ್ಯವಚ್ಛೇದಃ ಪ್ರಾಮಾಣ್ಯಂ ಗೌತಮೇ ಮತೇ || ಇತಿ ||
ನ್ಯಾ.. ಕು. ೪|೫ ||

ಸಾಕ್ಷಾತ್ಕಾರಿಣಿ ನಿತ್ಯಯೋಗಿನಿ ಪರದ್ವಾರಾನಪೇಕ್ಷಸ್ಥಿತೌ
ಭೂತಾರ್ಥಾನುಭವೇ ನಿವಿಷ್ಟನಿಖಿಲ ಪ್ರಸ್ತಾವಿವಸ್ತುಕ್ರಮಃ ||
ಲೇಶಾದೃಷ್ಟಿನಿಮಿತ್ತ ದುಷ್ಟಿನಿಗಮ ಪ್ರಭ್ರಷ್ಟಶಂಕಾತುಷಃ
ಶಂಕೋನ್ಮೇಷಕಲಂಕಿಭಿಃ ಕಿಮಪರೈಸ್ತನ್ಮೇ ಪ್ರಮಾಣಂ ಶಿವಃ ||ಇತಿ||
ನ್ಯಾ-ಕು- ೪|೯ ||

'ಮಾನಾಧೀನಾ ಮೇಯಸಿದ್ಧಿಃ' ಪ್ರಮಾಣದಿಂದ ಪ್ರಮೇಯಜ್ಞಾನವಾಗಬೇಕು. ಕಣ್ಣಿದ್ದರೆ ವಸ್ತುವಿದೆಯೆಂದು ತಿಳಿಯಬಹುದು. ಆದುದರಿಂದ ಪ್ರಮಾಣವನ್ನು ಮೊದಲು ಹೇಳಬೇಕು ಇದರಿಂದಲೇ ಸೂತ್ರದಲ್ಲಿ ಅದನ್ನು ಮೊದಲು ಹೇಳುತ್ತಾರೆ. ಪ್ರಮಾಣವು ಪ್ರಥಮೋದ್ದಿಷ್ಟವಾದಮೇಲೆ ಅದರ ಲಕ್ಷಣ ಮೊದಲು ಹೇಳಬೇಕೆಂದು ತಿಳಿಸುತ್ತಾನೆ. 'ಲಕ್ಷಣಂ ಕಥ್ಯತೇ'—ಇತಿ. ಸಾಧನಂ ಚ ಆಶ್ರಯಶ್ಚ—ಸಾಧನಾಶ್ರಯೌ. ತಾಭ್ಯಾಮವ್ಯತಿರಿಕ್ತತ್ವಂ, ಪ್ರಮಯಾ ವ್ಯಾಪ್ತಂ—ನಿತ್ಯಸಂಬದ್ಧಮ್. ಪ್ರಮಾ ಅಂದರ ಯಥಾರ್ಥಾನುಭವ. ಅದಕ್ಕೆ ಸಾಧನವಾಗಿರುವುದು ಅಂದರೆ ಕರಣ. ಆಶ್ರಯ ಅಂದರೆ ಇಲ್ಲಿ ಆತ್ಮಾ. ಇವೆರಡಕ್ಕಿಂತ ಭಿನ್ನವಾಗದಿದ್ದು ಪ್ರಮಾದಿಂದ ನಿತ್ಯಸಂಬದ್ಧವಾಗಿರುವುದೇ ಪ್ರಮಾಣ ಕರಣವೆಂದರೆ ಅಸಾಧಾರಣಕಾರಣ ಅದು ಫಲದಿಂದ ಕೂಡಿರಲೇಬೇಕು. ಆದುದರಿಂದ ಪ್ರಮಾದಿಂದ ನಿತ್ಯಸಂಬದ್ಧವಾಗಿರುತ್ತದೆ. ಇಂದ್ರಿಯಮನಸ್ಸೇ ಕರಣ. ಇದು ಪ್ರಮಾಣವೆಂದು ಸರ್ವಸಂಮತವಾಗಿದೆ. ಪರಮೇಶ್ವರನೇ ಆಶ್ರಯ. ಅವನು ವಿಭುವಾದುದರಿಂದ ಪ್ರಮಾನಿತ್ಯಸಂಬದ್ಧನಾಗಿರುತ್ತಾನೆ. ಜೀವನಿಗೆ ಭ್ರಮೆಯ ಸಂಬಂಧವೂ ಇರುವುದರಿಂದ ಅವನಿಗೆ ಪ್ರಮಾವ್ಯಾಪ್ತಿ ಅಂದರೆ ಪ್ರಮಾನಿತ್ಯಸಂಬಂಧ ಬರುವುದಿಲ್ಲ. ಜೀವವ್ಯಾವೃತ್ತಿಗೋಸ್ಕರವೇ ಪ್ರಮಾವ್ಯಾಪ್ತಂ ಎಂದು ಹೇಳಿದೆ. ಆಪ್ತತಮನಾದ ಪರಮೇಶ್ವರನೇ ಪ್ರಮಾಣನಾಗುತ್ತಾನೆ. ಇದನ್ನೇ 'ಏವಂಚ' — ಎಂಬುದರಿಂದ ವಿವರಿಸುತ್ತಾನೆ. 'ಏಕಮಾತ್ರಾಭ್ಯುಪಗಮಃ ಪ್ರತಿತಂತ್ರಸಿದ್ಧಾಂತಃ' ಎಂದು ಕೆಲವರ ಅಭಿಪ್ರಾಯ. ಅಂದರೆ ವಾದಿ ಪ್ರತಿವಾದಿಗಳಲ್ಲಿ ಒಬ್ಬರು ಮಾತ್ರ ಅಂಗೀಕರಿಸುವುದು. ನೈಯಾಯಿಕರು ಶಬ್ದಕ್ಕೆ ಅನಿತ್ಯತ್ವವನ್ನಂಗೀಕರಿಸಿ ಪರಮೇಶ್ವರನಿಗೆ ಪ್ರಾಮಾಣ್ಯವನ್ನಂಗೀಕರಿಸುತ್ತಾರೆ. ಆದರೆ ಈ ರೀತಿಯಾಗಿ ಮೀಮಾಂಸಕರು ಅಂಗೀಕರಿಸುವುದಿಲ್ಲ. 'ಸಮಾನತಂತ್ರಸಿದ್ಧಃ ಪರತಂತ್ರಾಸಿದ್ಧಃ ಪ್ರತಿತಂತ್ರಸಿದ್ಧಾಂತಃ ಎಂದು ಸೂತ್ರಕಾರರ ಮತ. ಪರಮೇಶ್ವರಪ್ರಾಮಾಣ್ಯವು ಸಮಾನವಾದ ವೈಶೇಷಿಕಶಾಸ್ತ್ರದಲ್ಲಿ ಸಿದ್ಧವಾಗಿದೆ. ಮೀಮಾಂಸಕಾದಿಗಳು ಒಪ್ಪದಿರುವುದರಿಂದ ಅವರ ಶಾಸ್ತ್ರದಲ್ಲಿ ಅದು ಅಸಿದ್ಧವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಯದಚಕಥ' — ಇತಿ. ಆಪ್ತಪ್ರಾಮಾಣ್ಯದಿಂದಲೇ ಮಂತ್ರಗಳಿಗೂ ಆಯುರ್ವೇದಕ್ಕೂ ಪ್ರಾಮಾಣ್ಯ ಸಿದ್ಧವಾಗುತ್ತದೆ. ಋಗ್ವೇದದ ಉಪವೇದವೇ ಆಯುರ್ವೇದ. ಆಪ್ತನೆಂದರೆ ಪರಮೇಶ್ವರನು. ಅವನು ಧರ್ಮಸಾಕ್ಷಾತ್ಕಾರವುಳ್ಳವನಾಗಿ ಭೂತದಯಾಪರನಾಗಿರುತ್ತಾನೆ. ಅವನು ಯತಾರ್ಥವಕ್ತೃವಾದುದರಿಂದ ಪ್ರಮಾಣನು. ಅವನಿಗೆ ಪ್ರಾಮಾಣ್ಯವಿರುವುದರಿಂದ ಅವನಿಂದ ಉಪದಿಷ್ಟವಾದ ಶ್ರುತಿಗೂ ಪ್ರಾಮಾಣ್ಯಸಿದ್ಧವಾಗುತ್ತದೆ. 'ತತ್ ಪ್ರಾಮಾಣ್ಯಂ' ಎಂಬಲ್ಲಿ ತತ್ಪದದಿಂದ ಆಪ್ತೋಪದೇಶ ಗೃಹೀತವಾಗುತ್ತದೆ. ಹೀಗೆ ಆಪ್ತತಮನಾದ ಪರಮೇಶ್ವರನಿಗೆ ಪ್ರಾಮಾಣ್ಯವು ಸೂತ್ರಸಂಮತವಾಗಿದೆ. ಇದನ್ನು ಪ್ರಾಚೀನಾಚಾರ್ಯರೂ ಅನುಮೋದಿಸಿದ್ದಾರೆಂದು ತಿಳಿಸುತ್ತಾನೆ.

'ತಥಾಚ'—ಇತಿ. ನ್ಯಾಯಶಾಸ್ತ್ರವೇ ಒಂದು ಮಹಾಸಮುದ್ರ. ಅದರ ಆಚೆಯದಡವನ್ನು ನೋಡಿದವರು ಉದಯನಾಚಾರ್ಯರು. ಇವರು ತಮ್ಮ ಕುಸುಮಾಂಜಲಿ ಗ್ರಂಥದಲ್ಲಿ ಹೀಗೆ ಹೇಳಿರುತ್ತಾರೆ. 'ಮಿತಿಃ'—ಇತಿ. ಸಮ್ಯಕ್ ಪರಿಚ್ಛಿತ್ತಿಃ—ಯಥಾರ್ಥಜ್ಞಾನವೇ - ಮಿತಿಃ — ಪ್ರಮಾ ಎಂದೆನಿಸುತ್ತದೆ. ಅದು ಉಳ್ಳವನು ಪ್ರಮಾತಾ. ಅದನ್ನೇ 'ತದ್ವತ್ತ್ವಂ ಪ್ರಮಾತೃತ್ವಂ' ಎಂದಿರುತ್ತಾನೆ. ತಸ್ಯಾಃ (ಮಿತೇಃ) ಅಯೋಗಸ್ಯ —ಸಂಬಂಧಾಭಾವಸ್ಯ ಯಃ ವ್ಯವಚ್ಛೇದಃ —ವ್ಯಾವೃತ್ತಿಃ— ತದಯೋಗವ್ಯವಚ್ಛೇದಃ — ಪ್ರಮೆಯೊಂದಿಗೆ ಆವಶ್ಯಕವಾದ ಸಂಬಂಧವೇ ಪ್ರಾಮಾಣ್ಯವೆಂದು ಗೌತಮರ ಅಭಿಪ್ರಾಯವೆಂದರ್ಥ.

'ಸಾಕ್ಷಾತ್ಕಾರಿಣಿ—' ಇತಿ ನಿಷ್ಕಲಂಕ ಶಿವನೇ ನನಗೆ ಪ್ರಮಾಣನು. ಪೂರ್ವಾರ್ಧದಲ್ಲಿ ಅವನ ನಿತ್ಯಪ್ರತ್ಯಕ್ಷವನ್ನು ವರ್ಣಿಸುತ್ತಾನೆ. ಭೂತಾರ್ಥಾನುಭವವೇ ಅವನ ಪ್ರತ್ಯಕ್ಷ. ಭೂತಾನಾಂ — ಪೂರ್ವಸಿದ್ಧಾನಾಂ — ತ್ರೈಲೋಕ್ಯಗತ ಪದಾರ್ಥಾನಾಮನುಭವಃ, ಸ ಚ ಸಾಕ್ಷಾತ್ಕಾರೀ — ಅದೇ ಪ್ರತ್ಯಕ್ಷ. ಅದು ನಿತ್ಯಯೋಗೀ. ನಮ್ಮ ಪ್ರತ್ಯಕ್ಷದಂತೆ ಅದು ಕ್ಷಣಿಕವಲ್ಲ. ನಿತ್ಯಪ್ರತ್ಯಕ್ಷವಾಗಿದೆ. ಮತ್ತು ಅದು ಪರದ್ವಾರಾನಪೇಕ್ಷಸ್ಥಿತಿಕವಾಗಿದೆ. ನಮ್ಮ ಪ್ರತ್ಯಕ್ಷದಂತೆ ಇಂದ್ರಿಯಾದಿಗಳನ್ನಪೇಕ್ಷಿಸಿ ಅದು ಇರುವುದಿಲ್ಲ. "ಪರಸ್ಯ ಕಸ್ಯಚಿದನಪೇಕ್ಷಯೈವ ಯಸ್ಯ ಸ್ಥಿತಿಃ ಭವತಿ ತಾದೃಶಃ" ಯೋಗಿಗಳಿಗೂ ಯೋಗ ಬಲದಿಂದ ಭೂತಾರ್ಥಪ್ರತ್ಯಕ್ಷ ಜ್ಞಾನ ಬರುತ್ತಿರುವಾಗ ಅಚಿಂತ್ಯಶಕ್ತಿಸಂಪನ್ನನಾದ ಪರಮೇಶ್ವರನ ವಿಷಯದಲ್ಲಿ ಹೇಳಬೇಕಾದುದೇನಿದೆ. ಇಂತಹ ಅನುಭವವಲ್ಲಿ ಅವನು ನಿವಿಷ್ಟನಿಖಿಲ ಪ್ರಸ್ತಾವಿ ವಸ್ತುಕ್ರಮವುಳ್ಳವನಾಗಿರುತ್ತಾನೆ. ಸೃಷ್ಟ್ಯಾರಂಭದಲ್ಲಿ ಪೂರ್ವಕಲ್ಪದಲ್ಲಿ ಸಿದ್ಧವಾದ ಪದಾರ್ಥಗಳನ್ನೇ ಕಲ್ಪನೆಮಾಡಿ ಅವನು ನೋಡಲು ಪ್ರಾರಂಭಿಸುತ್ತಾನೆ. ಅವಲೋಕನ ಮಾತ್ರದಿಂದ ಅವು ಹಾಗೆಯೇ ಹುಟ್ಟುತ್ತವೆ. 'ಧಾತಾಯಥಾ ಪೂರ್ವಮಕಲ್ಪಯತ್' ಎಂದು ಶ್ರುತಿಯೂ ಇದನ್ನೇ ಹೇಳುತ್ತದೆ. 'ಸ್ವೀಯ ಪ್ರತ್ಯಕ್ಷಾನುಭವೇ ನಿಖಿಲಾನಾಂ ಸಾಂಪ್ರತಿಕ ವಸ್ತೂನಾಂ ಉತ್ಪತ್ತ್ಯಾದಿಕ್ರಮಃ ನಿವಿಷ್ಟಃ ಯೇನ ಸಃ—ತಾದೃಶಃ ಶಿವಃ"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಡಲ್ಪಟ್ಟ ಸಮಸ್ತ ಸಾಂಪ್ರತಿಕ ವಸ್ತುಕ್ರಮವುಳ್ಳವನೆಂದರ್ಥ. ಹೀಗೆ ಸಕಲ ವಸ್ತು ಪ್ರತ್ಯಕ್ಷವುಳ್ಳವನಾದುದರಿಂದಲೇ ಅವನು ಲೇಶಾ .... ತುಷನಾಗುತ್ತಾನೆ. ಲೇಶತಃ (ಯತ್ಪದಾರ್ಥಾನಾಂ) ಅದೃಷ್ಟಿಃ—ಅದರ್ಶನಂ, ತನ್ನಿಮಿತ್ತಾಯಾ ದುಷ್ಟಿಃ-ತನ್ಮೂಲಕವಾದ ದೋಷಗಳು. ತಸ್ಯಾಃ ವಿಗಮೇನ—ಅಪಗಮೇನ, ಪ್ರಭ್ರಷ್ಟಂ ಶಂಕಾರೂಪಂ ತುಷಂ ಯಸ್ಯ ತಾದೃಶಃ ಸ್ವಲ್ಪವೂ ತೋರದಿರುವ ಮೂಲಕ ಸಂಭವಿಸಬಹುದಾದ ಯಾವ ದೋಷಗಳೂ ಇಲ್ಲದಿರುವುದರಿಂದ ಶಂಕಾರೂಪವಾದ ಹೊಟ್ಟು ಅವನಿಗಿರುವುದಿಲ್ಲವೆಂದರ್ಥ. ನಮಗಾದರೋ ವಸ್ತುಗಳ ಪರೋಕ್ಷಜ್ಞಾನ ವಿರುವುದರಿಂದ ಅನೇಕ ಶಂಕೆಗಳು ಸಹಜವಾಗಿ ಬರುತ್ತವೆ. ಪ್ರತ್ಯಕ್ಷಾನುಭವವಿದ್ದರೂ ವಾಸ್ತವಿಕವಾಗಿ ಸಂಪೂರ್ಣ ಜ್ಞಾನವುಂಟಾಗದಿರುವುದರಿಂದ ಅಂಶತಃ ಅದರ್ಶನವಿರುವುದರಿಂದ ತನ್ಮೂಲಕ ದೋಷಗಳು ಉಂಟಾಗುತ್ತವೆ. ಅದರಿಂದ ವಿಪರೀತ ಭಾವನೆ ಬರುತ್ತದೆ. ಪರಮೇಶ್ವರನಿಗೆ ಇವುಗಳ ಸಂಪರ್ಕವೇ ಇರುವುದಿಲ್ಲ. ಆದುದರಿಂದ ಶಂಕೋನ್ಮೇಷ (ಪ್ರಾದುರ್ಭಾವ) ದಿಂದ ಕಲಂಕಿತವಾದ ಇತರ ಪ್ರಮಾಣಗಳಿಂದ ಏನು ಪ್ರಯೋಜನ? ನಿಷ್ಕಲಂಕನಾದ ಪರಮೇಶ್ವರನೇ ನನಗೆ ಪ್ರಮಾಣನು' ಎಂದು ಶ್ಲೋಕತಾತ್ಪರ್ಯ.

ತಚ್ಚಾತುರ್ವಿಧಂ ಪ್ರತ್ಯಕ್ಷಾನುಮಾನೋಪಮಾನಶಬ್ದಭೇದಾತ್ । ಪ್ರಮಾಯಾಂ ಯದ್ಧಿ ಪ್ರತಿಭಾಸತೇ ತತ್ಪ್ರಮೇಯಮ್ ತಚ್ಚ ದ್ವಾದಶಪ್ರಕಾರಂ — ಆತ್ಮಶರೀರೇಂದ್ರಿಯಾರ್ಥ ಬುದ್ಧಿಮನಃ ಪ್ರವೃತ್ತಿದೋಷ ಪ್ರೇತ್ಯಭಾವಫಲದುಃಖಾಪವರ್ಗ ಭೇದಾತ್ ॥

ಈ ಪ್ರಮಾಣವು ನಾಲ್ಕು ವಿಧವಾಗಿವೆ. ಪ್ರತ್ಯಕ್ಷಪ್ರಮಾಣ, ಅನುಮಾನಪ್ರಮಾಣ, ಉಪಮಾನಪ್ರಮಾಣ, ಶಬ್ದಪ್ರಮಾಣಗಳೆಂದು ಅವುಗಳ ಹೆಸರು. ಇಂದ್ರಿಯಜನ್ಯ ಜ್ಞಾನಕ್ಕೂ ಪ್ರತ್ಯಕ್ಷನೆಂದು ಹೆಸರು. ಎದುರಿಗೆ ಘಟವಿರುವಾಗ ನಯನಸಂಯೋಗವಾಗಿ 'ಇದು ಘಟ'ವೆಂಬ ಜ್ಞಾನವುಂಟಾಗುತ್ತದೆ. ಇದೇ ಪ್ರತ್ಯಕ್ಷ. ಲಿಂಗಪರಾಮರ್ಶವೇ ಅನುಮಾನ. ವ್ಯಾಪ್ತಿಮೂಲಕ ಅರ್ಥಜ್ಞಾಪಕವಾದುದೇ ಲಿಂಗ. ಧೂಮವು ಅಗ್ನಿಗೆ ಗಮಕವಾಗುವುದರಿಂದ ಅದು ಲಿಂಗ. 'ಯತ್ರ ಧೂಮಸ್ತತ್ರಾಗ್ನಿಃ' ಎಂಬ ಸಾಹಚರ್ಯ ನಿಯಮಕ್ಕೆ ವ್ಯಾಪ್ತಿಯೆಂದು ಹೆಸರು. ವ್ಯಾಪ್ತಿವಿಶಿಷ್ಟಲಿಂಗವು ಪರ್ವತಾದಿಪಕ್ಷದಲ್ಲಿ ಇದೆಯೆಂಬ ಜ್ಞಾನವೇ ಲಿಂಗಪರಾಮರ್ಶ ಇದೇ ಅನುಮಾನ. ಇದರಿಂದ ಅಗ್ನಿಯ ಅನುಮಿತಿ ಬರುತ್ತದೆ. ಅತಿದೇಶವಾಕ್ಯಸ್ಮರಣದೊಡನೆ ಬರುವ ಸದೃಶವಸ್ತುಜ್ಞಾನಕ್ಕೆ ಉಪಮಾನವೆಂದು ಹೆಸರು. "ಗೋಸದೃಶಃ ಗವಯಃ' ಎಂಬ ಅತಿದೇಶವಾಕ್ಯವನ್ನು ಕೇಳಿ, ಒಂದಾನೊಂದು ಸಮಯ ವನಕ್ಕೆ ಹೋದಾಗ ಪ್ರಾಣಿಯನ್ನು ನೋಡಿದೊಡನೆ ಹಿಂದಿನ ಅತಿದೇಶವಾಕ್ಯಸ್ಮರಣೆ ಬರುತ್ತದೆ. ಅದರ ಸಹಾಯದಿಂದ ಗೋಸದೃಶಪಶುಜ್ಞಾನ ಬರುತ್ತದೆ. 'ಇದು ಗವಯ' ಎಂಬ ಜ್ಞಾನವೇ ಉಪಮಿತಿಯಾಗುತ್ತದೆ. ಆಪ್ತ ವಾಕ್ಯವೇ ಶಬ್ದ. ಇದರಿಂದ ಪ್ರತ್ಯಕ್ಷಗೋಚರವಾಗದ ವಸ್ತುಗಳ ಜ್ಞಾನವೂ ಉಂಟಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತ್ಯಕ್ಷಜ್ಞಾನಕ್ಕೆ ಪ್ರಮಾ ಎಂದು ಹೆಸರು. ಪ್ರಮೆಯಲ್ಲಿ ವಿಷಯವಾಗಿ ತೋರುವುದೇ ಪ್ರಮೇಯ. (ಪದಾರ್ಥಗಳು). ಆತ್ಮಾದಿಭೇದಗಳಿಂದ ಪ್ರಮೇಯವು ಹನ್ನೆರಡು ವಿಧವಾಗಿದೆ. ೧. ಜ್ಞಾನವುಳ್ಳವನೇ ಆತ್ಮನು. ಈಶ್ವರ, ಜೀವ ಎಂದು ಆತ್ಮನು ಎರಡು ರೀತಿಯಾಗಿರುತ್ತಾನೆ. ಈಶ್ವರನು ಸರ್ವಜ್ಞನಾಗಿ ಒಬ್ಬನೇ ಆಗಿರುತ್ತಾನೆ. ಜೀವನು ಪ್ರತಿಶರೀರದಲ್ಲಿರುವುದರಿಂದ ಭಿನ್ನಭಿನ್ನವಾಗಿರುತ್ತಾನೆ. ಇಬ್ಬರು ವಿಭುವಾಗಿರುವುದಲ್ಲದೆ ನಿತ್ಯವಾಗಿರುತ್ತಾರೆ. ೨. ಸುಖದುಃಖಾದಿಭೋಗಸಾಧನವಾದುದೇ ಶರೀರ ೩. ಶರೀರಸಂಯುಕ್ತವಾಗಿದ್ದು ಜ್ಞಾನಕರಣವಾಗಿಯೂ, ಅತೀಂದ್ರಿಯವಾಗಿಯೂ ಇರುವವುಗಳೇ ಇಂದ್ರಿಯಗಳು. ೪. ದ್ರವ್ಯಗುಣಕರ್ಮಾದಿಗಳೇ ಅರ್ಥಗಳು. ಇವು ಏಳು ಎಂದು ವೈಶೇಷಿಕದರ್ಶನಗಳಲ್ಲಿ ಹೇಳಿದೆ. ೫. ಬುದ್ಧಿಯೇ ಜ್ಞಾನ. ೬. ಸುಖಾದ್ಯುಪಲಬ್ಧಿ ಸಾಧನವಾದ ಇಂದ್ರಿಯವೇ ಮನಸ್ಸು. ಇದು ನಾನಾ ವಿಧವಾಗಿ ಪ್ರತಿಜೀವನಿಯತವಾಗಿ ಅಣುರೂಪವಾಗಿರುತ್ತದೆ. ೭. ಪ್ರವೃತ್ತಿಯೆಂದರೆ ಕ್ರಿಯಾ. ಇದು ಕಾಯಿಕೀ, ವಾಚಿಕೀ, ಮಾನಸಿಕೀ, ಎಂದು ಮೂರು ವಿಧವಾಗಿರುತ್ತದೆ. ಇವೂ ಶುಭಾ ಅಶುಭಾ ಎಂದು ಎರಡು ಭೇದಗಳಿಂದ ಒಟ್ಟಿಗೆ ಆರುರೂಪವಾಗುತ್ತವೆ. ೮. ಪ್ರವೃತ್ತಿಗೆ ಜನಕವಾದವುಗಳೇ ದೋಷಗಳು. ರಾಗ, ದ್ವೇಷ, ಮೋಹಗಳೆಂದು ಇವು ಸಾಮಾನ್ಯವಾಗಿ ಮೂರು ವಿಧವಾಗಿವೆ. ೯. ಸತ್ತಮೇಲೆ ಆಗುವ ಪುನರ್ಜನ್ಮವೇ ಪ್ರೇತ್ಯಭಾವ. ೧೦. ಸುಖಾದಿಸಾಕ್ಷಾತ್ಕಾರವೇ ಫಲ. ೧೧. ಪೀಡೆಯೇ ದುಃಖ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂದು ಇದು ಮೂರು ವಿಧವಾಗಿರುತ್ತದೆ. ವಾತ ಪಿತ್ತ ಕಫ ದೋಷ ವೈಷಮ್ಯಮೂಲಕವಾಗಿ ಶರೀರದಲ್ಲಿ ಉಂಟಾಗುವ ದುಃಖಗಳೂ, ಕಾಮ ಕ್ರೋಧಾದಿಜನಿತವಾದ ಮಾನಸಿಕದುಃಖವೂ ಆಧ್ಯಾತ್ಮಿಕದುಃಖವಾಗುತ್ತದೆ. ಆಂತರಿಕೋಪಾಯಗಳಿಂದ ಇವುಗಳನ್ನು ನಿವಾರಿಸಬಹುದು. ಸರ್ಪವ್ಯಾಘ್ರಾದಿಜನಿತ ದುಃಖವೇ ಆಧಿಭೌತಿಕದುಃಖ. ಯಕ್ಷರಾಕ್ಷಸಗ್ರಹಾದ್ಯಾವೇಶಮೂಲಕವಾಗಿ ಬರುವ ದುಃಖಕ್ಕೆ ಆಧಿದೈವಿಕವೆಂದು ಹೆಸರು. ಇವು ಬಾಹ್ಯೋಪಾಯನಿವಾರ್ಯಗಳಾಗುತ್ತವೆ. ಇಪ್ಪತ್ತೊಂದು ರೀತಿಯಾದ ದುಃಖವೆಂದೂ ಬೇರೆಡೆ ಹೇಳಿದೆ. ಶರೀರ, ಷಡಿಂದ್ರಿಯಗಳು, ಷಡ್ವಿಷಯಗಳು, ಷಡ್ಬುದ್ಧಿಗಳು, ಸುಖ ದುಃಖಗಳೆಂದು ಇಪ್ಪತ್ತೊಂದು ರೀತಿಯಾಗಿ ಅವುಗಳನ್ನು ವಿವರಿಸಿರುತ್ತಾರೆ. ದುಃಖಸಂಬಂಧಿಯಾದುದರಿಂದ ಸುಖವೂ ದುಃಖವೇ ಆಗುತ್ತದೆ. ಶರೀರಾದಿಗಳು ದುಃಖಸಾಧನಗಳಾದುದರಿಂದ ದುಃಖವಾಗುತ್ತವೆ. ಪಾರತಂತ್ರ್ಯ, ಆಧಿ, ವ್ಯಾಧಿ, ಮಾನಚ್ಯುತಿ, ಶತ್ರು, ದಾರಿದ್ರ್ಯ, ಭಾರ್ಯಾದ್ವಯ, ಕನ್ಯಾಬಾಹುಲ್ಯ, ಕುಭಾರ್ಯ, ಕುಭೃತ್ಯ, ಕುಗ್ರಾಮವಾಸ, ಕುಸ್ವಾಮಿಸೇವಾ, ವೃದ್ಧತ್ವ, ಪರಗೃಹವಾಸ, ವರ್ಷಾಕಾಲದಲ್ಲಿ ಪ್ರವಾಸ, ದುರ್ಬಲನಿಂದ (ನೇಗಿಲಿಲ್ಲದವ) ಕೃಷಿ— ಹೀಗೆ ಹದಿನಾರು ರೀತಿಯಾಗಿ ಬಾಹ್ಯದುಃಖ ಸಾಧನಗಳನ್ನು ಹೇಳಿರುತ್ತಾರೆ. ೧೨. ಅಪವರ್ಗವೆಂದರೆ ಮೋಕ್ಷ. ಹೀಗೆ ಹನ್ನೆರಡು ಪ್ರಮೇಯಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನವಧಾರಣಾತ್ಮಕಂ ಜ್ಞಾನಂ ಸಂಶಯಃ। ಸ ತ್ರಿವಿಧಃ। ಸಾಧಾರಣಧರ್ಮಾಸಾಧಾರಣ ಧರ್ಮ ವಿಪ್ರತಿಪತ್ತಿಲಕ್ಷಣಭೇದಾತ್ ॥

'ಅನವಧಾ'—ಇತಿ. ಅನಿಶ್ಚಯಾತ್ಮಕವಾದ ಜ್ಞಾನಕ್ಕೆ ಸಂಶಯವೆಂದು ಹೆಸರು. ಲಕ್ಷಣಭೇದಾತ್ ಎಂಬಲ್ಲಿ ನಿಮಿತ್ತಭೇದಾತ್ ಎಂದರ್ಥ. ಲಕ್ಷಣಕಾರಣಭೇದಾತ್ ಎಂದಿದ್ದರೆ ಆಗ ಲಕ್ಷಣಶಬ್ದವು ಸ್ವರೂಪವಾಚಕವಾಗುತ್ತದೆ. ಸಾಧಾರಣಧರ್ಮಾದಿ ನಿಮಿತ್ತ ಭೇದಗಳಿಂದ ಸಂಶಯವು ಮೂರುವಿಧವಾಗುತ್ತದೆಂದರ್ಥ. 'ಸ್ಥಾಣುರ್ವಾ ಪುರುಷೋವಾ' ಎಂಬುದು ಮೊದಲನೆಯ ಸಂಶಯಕ್ಕೆ ಉದಾಹರಣೆ. ಉನ್ನತತ್ವರೂಪ ಸಾಧಾರಣ ಧರ್ಮವನ್ನು ತಿಳಿದವನಿಗೆ ಈ ಸಂಶಯ ಬರುತ್ತದೆ. ಸ್ಥಾಣುತ್ವನಿರ್ಣಾಯಕ ವಾದ ವಕ್ರಕೋಟರಾದಿಗಳಾಗಲೀ, ಪುರುಷತ್ವನಿರ್ಣಾಯಕಗಳಾದ ಕರಚರಣಾದಿಗಳಾ ಗಲೀ ತೋರದಿರುವುದರಿಂದ ಕೇವಲೌನ್ನತ್ಯಸಾಧಾರಣಧರ್ಮ ನಿಮಿತ್ತವಾಗಿ ಈ ಸಂಶಯ ಬರುತ್ತದೆ. ಪೃಥಿವಿಯು ನಿತ್ಯವೋ ಅನಿತ್ಯವೋ ಎಂಬುದು ಎರಡನೆಯ ಸಂಶಯ. ನಿತ್ಯಾನಿತ್ಯಪದಾರ್ಥಗಳಲ್ಲಿ ಎಂದೂ ನೋಡದಿರುವ ಪೃಥಿವಿಯಲ್ಲಿ ಮಾತ್ರ ನೋಡಿದ ಗಂಧರೂಪಾಸಾಧಾರಣಧರ್ಮ ನಿಮಿತ್ತವಾಗಿ ಈ ಸಂಶಯ ಬರುತ್ತದೆ. ಶಬ್ದಃ ನಿತ್ಯಃ ಅಥವಾ ಅನಿತ್ಯಃ' ಎಂಬುದು ಮೂರನೆಯ ಸಂಶಯ. ಒಬ್ಬನು (ಮೀಮಾಂಸಕ) ಶಬ್ದ ನಿತ್ಯವೆನ್ನುತ್ತಾನೆ. ಇನ್ನೊಬ್ಬನು (ತಾರ್ಕಿಕಾದಿ) ಅನಿತ್ಯವೆನ್ನು ತ್ತಾನೆ. ಇವರ ವಿಪ್ರತಿಪತ್ತಿಯಿಂದ ಮಧ್ಯಸ್ಥನಿಗೆ ಸಂಶಯ ಬರುತ್ತದೆ.

ಯಮಧಿಕೃತ್ಯ ಪ್ರವರ್ತಂತೇ ಪುರುಷಾಃ ತತ್ ಪ್ರಯೋಜನಮ್ । ತದ್ ದ್ವಿವಿಧಮ್ । ದೃಷ್ಟಾದೃಷ್ಟಭೇದಾತ್॥

ವ್ಯಾಪ್ತಿ ಸಂವೇದನ ಭೂಮಿರ್ದೃಷ್ಟಾಂತಃ। ಸ ದ್ವಿವಿಧಃ। ಸಾಧರ್ಮ್ಯವೈಧರ್ಮ್ಯ ಭೇದಾತ್ ॥

ಪ್ರಾಮಾಣಿಕತ್ವೇನಾಭ್ಯುಪಗತೋಽರ್ಥಃ ಸಿದ್ಧಾಂತಃ। ಸ ಚತುರ್ವಿಧಃ। ಸರ್ವತಂತ್ರ ಪ್ರತಿತಂತ್ರಾಧಿಕರಣಾಭ್ಯುಪಗಮಭೇದಾತ್ ॥

ಪರಾರ್ಥಾನುಮಾನವಾಕ್ಯೈಕದೇಶೋಽವಯವಃ। ಸ ಪಂಚ ವಿಧಃ। ಪ್ರತಿಜ್ಞಾಹೇತೂ ದಾಹರಣೋಪನಯನಿಗಮನಭೇದಾತ್ ॥

ಯಾವುದನ್ನು ಉದ್ದೇಶಿಸಿ ಜನರು ಕಾರ್ಯಪ್ರವೃತ್ತರಾಗುತ್ತಾರೆಯೋ ಅದೇ ಪ್ರಯೋಜನ. ಭತ್ತ ಕುಟ್ಟುವುದರಿಂದ ಹೊಟ್ಟು ಹೋಗುತ್ತದೆ. ಇದು ದೃಷ್ಟ ಪ್ರಯೋಜನ. ಯಾಗಾದಿಗಳಿಗೆ ಸ್ವರ್ಗಾದಿಗಳು ಅದೃಷ್ಟ ಪ್ರಯೋಜನ. 'ವ್ಯಾಪ್ತಿ'– ಇತಿ. ವ್ಯಾಪ್ತಿನಿಶ್ಚಯ ಜ್ಞಾನವನ್ನು ಹುಟ್ಟಿಸುವ ಸ್ಥಳವೇ ದೃಷ್ಟಾಂತ. (ಉದಾಹರಣೆ) ದೃಷ್ಟಃ ಅಂತಃ— ನಿಶ್ಚಯಃ ಯೇನ ಸಃ ದೃಷ್ಟಾಂತಃ. 'ಯತ್ರ ಧೂಮಃ ತತ್ರಾಗ್ನಿಃ' ಎಂಬ ವ್ಯಾಪ್ತಿಜ್ಞಾನಕ್ಕೋಸ್ಕರ ಮಹಾನಸಾದಿ (ಅಡಿಗೆಮನೆ)ಗಳು ಗೃಹೀತವಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇವು ಸಾಧರ್ಮ್ಯ ದೃಷ್ಟಾಂತಗಳು. ಹ್ರದಾದಿ (ಮಡು)ಗಳು ವೈಧರ್ಮ್ಯ ದೃಷ್ಟಾಂತಗಳು. ಪ್ರಮಾಣದಿಂದ ಅಂಗೀಕರಿಸಿದ ವಿಷಯವೇ ಸಿದ್ಧಾಂತ. ಅದು ನಾಲ್ಕು ವಿಧ. ಎಲ್ಲರೂ ಅಂಗೀಕರಿಸಿದ ಸಿದ್ಧಾಂತಕ್ಕೆ ಸರ್ವತಂತ್ರ ಸಿದ್ಧಾಂತವೆಂದು ಹೆಸರು. ಐದು ಜ್ಞಾನೇಂದ್ರಿಯಗಳು ಎಂದರೆ ಎಲ್ಲರೂ ಇದನ್ನೇ ಅಂಗೀಕರಿಸಿರುತ್ತಾರೆ. ಒಬ್ಬರು ಮಾತ್ರ ಅಂಗೀಕರಿಸಿದ ಸಿದ್ಧಾಂತವೇ ಪ್ರತಿತಂತ್ರ ಸಿದ್ಧಾಂತ. ಶಬ್ದವು ಅನಿತ್ಯವೆಂದರೆ ಇದನ್ನು ನೈಯಾಯಿಕನು ಅಂಗೀಕರಿಸಿರುತ್ತಾನೆ. ಆದರೆ ಮೀಮಾಂಸಕನು ಅಂಗೀಕರಿಸಿಲ್ಲ. ಕ್ಷಿತ್ಯಾದಿಗಳಿಗೆ ಕರ್ತೃಸಿದ್ಧವಾದಾಗ ಆಕರ್ತೃವಿಗೆ ಸರ್ವಜ್ಞತ್ವವಿದೆಯೆಂದರೆ ಇದು ಅಧಿಕರಣ ಸಿದ್ಧಾಂತವಾಗುತ್ತದೆ. ಅಸಂಮತವಾಗಿದ್ದರೂ ಅಂಗೀಕರಿಸಿ ಇನ್ನೊಂದನ್ನು ಹೇಳುವುದು ಅಭ್ಯುಪಗಮಸಿದ್ಧಾಂತ. ಉದಾ :—ಶಬ್ದವು ದ್ರವ್ಯವಾಗಲಿ ಆದರೂ ಅದು ಅನಿತ್ಯ. ತಾರ್ಕಿಕಮತದಲ್ಲಿ ಶಬ್ದವು ಗುಣ. ಆದುದರಿಂದ ದ್ರವ್ಯವೆಂದು ಅಂಗೀಕರಿಸಲು ಸಂಮತಿಯಿಲ್ಲ. ಆದರೂ ಅಂಗೀಕರಿಸಿ ಅನಿತ್ಯತ್ವ ಹೇಳಿದೆ. 'ಪರಾರ್ಥ'—ಇತಿ. ಇತರರಿಗೆ ಅನುಮಿತಿ ಬರಲು ಉಪಯೋಗಿಸುವ ವಾಕ್ಯಕ್ಕೆ ಪರಾರ್ಥಾನುಮಾನವೆಂದು ಹೆಸರು. ಅಂತಹ ವಾಕ್ಯದ ಏಕದೇಶಕ್ಕೆ ಅವಯವವೆಂದು ಹೆಸರು. ಪ್ರತಿಜ್ಞಾ, ಹೇತು ಉದಾಹರಣ, ಉಪನಯನಿಗಮನವೆಂದು ಅದು ಐದು ವಿಧವಾಗಿದೆ. ಸಾಧ್ಯರೂಪ ಧರ್ಮದಿಂದ ಕೂಡಿದ ಧರ್ಮಿಯನ್ನು ಪ್ರತಿಪಾದಿಸುವ ವಚನಕ್ಕೆ ಪ್ರತಿಜ್ಞಾ ಎಂದು ಹೆಸರು. ಉದಾ :—'ಪರ್ವತಃ ವಹ್ನಿಮಾನ್ ಇತಿ.' ಲಿಂಗ ಪ್ರತಿಪಾದಕವಚನವೇ ಹೇತು. ಉದಾ :— 'ಧೂಮವತ್ತ್ವಾತ್' ಇತಿ. ವ್ಯಾಪ್ತಿ ಸಹಿತವಾದ ದೃಷ್ಟಾಂತ ವಚನವೇ ಉದಾಹರಣ. ಉದಾ :— "ಯತ್ರ ಧೂಮಸ್ತತ್ರಾಗ್ನಿಃ ಯಥಾಮಹಾನಸಮ್" ಇತಿ. ಲಿಂಗೋಪಸಂಹಾರವಚನವೇ ಉಪನಯ. ಉದಾ :—'ಧೂಮವಾಂಶ್ಚಾಯಾಂ ಪರ್ವತಃ' ಇತಿ ಪಕ್ಷದಲ್ಲಿ ಸಾಧ್ಯೋಪಸಂಹಾರವಚನವೇ ನಿಗಮನ. ಉದಾ :—'ತಸ್ಮಾದಗ್ನಿಮಾನ್ ಪರ್ವತಃ' ಇತಿ. ಈ ವಾಕ್ಯ ಪ್ರಯೋಗದಿಂದ ಎಲ್ಲರಿಗೂ ಅನುಮಾನ ಜ್ಞಾನ ಬರುತ್ತದೆ.

ವ್ಯಾಪ್ಯಾರೋಪೇಣ ವ್ಯಾಪಕಾರೋಪಸ್ತರ್ಕಃ | ಸ ಚೈಕಾದಶವಿಧಃ | ವ್ಯಾಘಾತಾತ್ಮಾಶ್ರಯೇತರೇತರಾಶ್ರಯ ಚಕ್ರಕಾಶ್ರಯಾನವಸ್ಥಾಪ್ರತಿಬಂಧಿ ಕಲ್ಪನಾಕಲ್ಪನಾಲಾಘವಕಲ್ಪನಾಗೌರವೋತ್ಸರ್ಗ ಪವಾದ ವೈಜಾತ್ಯಭೇದಾತ್ | ಯಥಾರ್ಥಾನುಭವಪರ್ಯಾಯಾ ಪ್ರಮಿತಿರ್ನಿರ್ಣಯಃ | ಸ ಚತುರ್ವಿಧಃ | ಸಾಕ್ಷಾತ್ಕೃತ್ಯನುಮಿತ್ಯಪಮಿತಿ ಶಾಬ್ದ ಭೇದಾತ್ |

ತತ್ತ್ವನಿರ್ಣಯಫಲಃ ಕಥಾವಿಶೇಷೋ ವಾದಃ | ಉಭಯಸಾಧನವತೀ ವಿಜಿಗೀಷು ಕಥಾ ಜಲ್ಪಃ | ಸ್ವಪಕ್ಷಸ್ಥಾಪನಹೀನಃ ಕಥಾವಿಶೇಷೋ ವಿತಂಡಾ | ಕಥಾನಾಮ ವಾದಿ ಪ್ರತಿವಾದಿನೋಃ ಪಕ್ಷಪ್ರತಿಪಕ್ಷಪರಿಗ್ರಹಃ || ಅಸಾಧಕೋ ಹೇತುತ್ವೇನಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಿಮತೋ ಹೇತ್ವಾಭಾಸಃ । ಸ ಪಂಚ ವಿಧಃ । ಸವ್ಯಭಿಚಾರ ವಿರುದ್ಧಪ್ರಕರಣ ಸಮಸಾಧ್ಯಸಮಾತೀತ ಕಾಲಭೇದಾತ್

ತರ್ಕಲಕ್ಷಣವನ್ನು ನಿರೂಪಿಸುತ್ತಾನೆ. 'ವ್ಯಾಪ್ಯಾ'—ಇತಿ. "ಯದ್ಯತ್ರಾಗ್ನ್ಯಭಾವಃ ಸ್ಯಾತ್ತರ್ಹಿ ಧೂಮಾಭಾವಃ ಸ್ಯಾತ್" ಎಂಬಲ್ಲಿ ಅಗ್ನ್ಯಭಾವ ವ್ಯಾಪ್ಯ. ಇದರ ಆರೋಪದಿಂದ ವ್ಯಾಪಕವಾದ ಧೂಮಾಭಾವವು ಆರೋಪಿತವಾಗಿದೆ. ಪರ್ವತದಲ್ಲಿ ಧೂಮವನ್ನು ನೋಡಿದಾಗ ಈ ರೀತಿಯಾದ ತರ್ಕಸಹಾಯದಿಂದ ಅನುಮಾನ ಪ್ರಮಾಣಮೂಲಕವಾಗಿ ಅಗ್ನಿನಿಶ್ಚಯಬರುತ್ತದೆ. ಆದುದರಿಂದ ಈ ತರ್ಕವು ಪ್ರಮಾಣಾನುಗ್ರಾಹಕವಾಗುತ್ತದೆ. ವ್ಯಾಘಾತಾದಿಭೇದಗಳಿಂದ ಇದು ಹನ್ನೊಂದು ವಿಧವಾಗುತ್ತದೆ. ಅಸಂಬದ್ಧಾರ್ಥಕವಚನಕ್ಕೆ ವ್ಯಾಘಾತವೆಂದು ಹೆಸರು. 'ಅಹಂ ಮೂಕಃ' ಎಂದು ಹೇಳುವುದು. ಅಥವಾ ಅಮೂರ್ತದ್ರವ್ಯಗಳಲ್ಲಿ ರೂಪವಿದೆಯೆಂದು ಹೇಳುವುದು. "ಸ್ವಸ್ಯ ಸ್ವಾಪೇಕ್ಷಾಪಾದಕಃ ಪ್ರಸಂಗಃ—ಆತ್ಮಾಶ್ರಯಃ" ರೂಪವಿಶಿಷ್ಟ ವಸ್ತುವಿನಲ್ಲಿ ರೂಪವಿದೆಯೆಂದು ಹೇಳಿದರೆ ರೂಪಜ್ಞಾನವಾಗುವುದಿಲ್ಲ. 'ಸ್ವಸ್ಯ ಸ್ವಾಪೇಕ್ಷಿತಾಪೇಕ್ಷಿತತ್ವಂ—ಇತರೇತರಾಶ್ರಯಃ' ಜಾಗ್ರತನಾಗಬೇಕಾದರೆ 'ಚೈತ್ರ ಉತ್ತಿಷ್ಠ' ಎಂಬ ವಾಕ್ಯಶ್ರವಣವು ಕಾರಣ. ವಾಕ್ಯಶ್ರವಣವಾದ ಮೇಲೆ ಜಾಗರಣವುಂಟಾಗುತ್ತದೆ. ಏಕವ್ಯವಧಾನದಿಂದ ತನಗೆ ತನ್ನ ತಿಳಿವಳಿಕೆಯಾಪೇಕ್ಷೆಯುಂಟಾಗುವುದೇ ಇತರೇತರಾಶ್ರಯದೋಷ. ಅನೇಕವ್ಯವಧಾನದಿಂದ ತನಗೆ ತನ್ನ ಅಪೇಕ್ಷೆಯುಂಟಾದರೆ ಅಲ್ಲಿ ಚಕ್ರಕಾಶ್ರಯದೋಷ ಬರುತ್ತದೆ. ಶ್ರವಣದಲ್ಲಿ ಇಂದ್ರಿಯಾರ್ಥಸಂನಿಕರ್ಷವು ಕಾರಣ. ಇಂದ್ರಿಯಾರ್ಥಸಂನಿಕರ್ಷದಲ್ಲಿ ಜಾಗೃತಿ ಕಾರಣ. ಜಾಗೃತಿಯಲ್ಲಿ ಶ್ರವಣ ಕಾರಣ. ಹೀಗೆ ಹೇಳಿದರೆ ಚಕ್ರಕಾಶ್ರಯದೋಷ ಬರುತ್ತದೆ. ಎಲ್ಲಿಯೂ ಒಂದು ಕಡೆ ನಿಲ್ಲದಲ್ಲಿ ಅನವಸ್ಥಾ. ಜಾತಿಯಲ್ಲಿ ಜಾತಿಯಿದೆಯೆಂದು ಕಲ್ಪಿಸಿದರೆ ಅಲ್ಲಿಯೂ ಜಾತಿಯಿದೆಯೆಂದು ಎಲ್ಲಿಯೂ ನಿಲ್ಲದೆ ಅನವಸ್ಥೆ ಬರುತ್ತದೆ. ಪ್ರತಿಬಂಧಿಕಲ್ಪನಾ—ಅನಿಷ್ಟಾಂತರ ಪ್ರಸಂಜಕವಾದ ಉತ್ತರ. ಪುರುಷನಾದುದರಿಂದ ಚೋರನೆಂದಾಗ ಅದನ್ನು ಪರಿಹರಿಸದೇ ನೀನೂ ಚೋರನೆಂದರೆ ಆಗ ಪ್ರತಿಬಾಧಿಕಲ್ಪನೆಯಾಗುತ್ತದೆ. ಕಲ್ಪನಾಲಾಘವ, ಕಲ್ಪನಾಗೌರವ ಪ್ರಸಿದ್ಧವಾಗಿವೆ. ಸಾಮಾನ್ಯನಿಯಮವೇ ಉತ್ಸರ್ಗ. ವಿಶೇಷನಿಯಮವೇ ಅಪವಾದ. ವೈಲಕ್ಷಣ್ಯವೇ ವೈಜಾತ್ಯ. ಪ್ರಮಾಣಸಾಧ್ಯಾರ್ಥಗಳಿಗೆ ವಿರುದ್ಧಸಂಭಾವನಾ ಮಾಡಿದಾಗ ಅವುಗಳನ್ನು ಹೋಗಲಾಡಿಸುವುದರಿಂದ ಈ ತರ್ಕಗಳಿಗೆ ಪ್ರಮಾಣಾನುಗ್ರಾಹಕತ್ವವಿದೆಯೆಂದು ತಿಳಿಯಬೇಕು. ಯಥಾರ್ಥಾನುಭವಪರ್ಯಾಯವಾಚಕವಾದ ಪ್ರಮಿತಿಯೇ ನಿರ್ಣಯ. ಸಾಕ್ಷಾತ್‌ಕೃತಿ—ಪ್ರತ್ಯಕ್ಷ. ಅನುಮಿತಿ, ಉಪಮಿತಿ, ಶಾಬ್ದಗಳೆಂದು ಇದು ನಾಲ್ಕು ವಿಧವಾಗಿದೆ. ತತ್ವನಿರ್ಣಯವೇ ಫಲವಾಗಿರುವ ಕಥಾವಿಶೇಷಕ್ಕೆ ವಾದನೆಂದು ಹೆಸರು. ವಾದಿಪ್ರತಿವಾದಿಗಳ ಮತವನ್ನು ಸಾಧಿಸುವ ವಿಜಗೀಷು ಕಥೆಯೇ ಜಲ್ಪ. ವಾದದಲ್ಲಿ ಅತಿವ್ಯಾಪ್ತಿವಾರಣೆಗೆ ವಿಜಿಗೀಷುಪದವೂ, ವಿತಂಡಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾರಣೆಗೋಸ್ಕರ 'ಉಭಯ ಸಾಧನವತೀ' ಪದವೂ ಉಪಾತ್ತವಾಗಿದೆ. ಸ್ವಪಕ್ಷಸ್ಥಾಪನೆಯಿಲ್ಲದ ಕಥಾವಿಶೇಷಕ್ಕೆ ವಿತಂಡಾ ಎಂದು ಹೆಸರು. ವಾದಿಪ್ರತಿವಾದಿಗಳ ಪಕ್ಷವನ್ನು ಹಿಡಿದು ಹೇಳುವುದೇ ಕಥಾ. ಸಾಧ್ಯಸಾಧನಸಾಮರ್ಥ್ಯವಿಲ್ಲದೆ ಹೇತುವಿನಂತೆ ಪಂಚತ್ವ್ಯಂತವಾಗಿ ತೋರುವುದೇ ಹೇತ್ವಾಭಾಸ. ಇದು ಐದು ವಿಧ. ೧) ವ್ಯಭಿಚಾರದಿಂದ ಕೂಡಿರುವ ಹೇತುವೇ ಸವ್ಯಭಿಚಾರ. ಹೇತುವಿನಲ್ಲಿರುವ ಸಾಧ್ಯಾಭಾವವದ್ವೃತ್ತಿತ್ವ ಜ್ಞಾನಕ್ಕೆ ವ್ಯಭಿಚಾರವೆಂದು ಹೆಸರು. 'ಪರ್ವತಃ—ಅಗ್ನಿಮಾನ್—ಪ್ರಮೇಯತ್ವಾತ್' । ಇಲ್ಲಿ ಪ್ರಮೇಯತ್ವರೂಪವಾದ ಹೇತುವು ಅಗ್ನಿರೂಪ ಸಾಧ್ಯವಿಲ್ಲದಿರುವಲ್ಲಿಯೂ ಇರುವುದರಿಂದ ವ್ಯಭಿಚರಿತವಾಗುತ್ತದೆ. ೨) ಸಾಧ್ಯಾಭಾವದಿಂದ ವ್ಯಾಪ್ತವಾದ ಹೇತುವೇ ವಿರುದ್ಧ. 'ಶಬ್ದಃ—ನಿತ್ಯಃ—ಕೃತಕತ್ವಾತ್ । ಇಲ್ಲಿ ಕೃತಕತ್ವವೆಂದರೆ ಹುಟ್ಟಿರುವುದು. ಇದು ಸಾಧ್ಯವಾದ ನಿತ್ಯತ್ವದ ಅಭಾವದಿಂದ ಅಂದರೆ ಅನಿತ್ಯತ್ವದಿಂದ ವ್ಯಾಪ್ತವಾಗಿರುವುದರಿಂದ ವಿರುದ್ಧವಾಗುತ್ತದೆ. (ಯತ್ರ ಕೃತಕತ್ವಂ ತತ್ರ ಅನಿತ್ಯತ್ವಂ ಎಂದು ವ್ಯಾಪ್ತಿ) ೩) ಯಾವ ಹೇತುವಿಗೆ ಪ್ರತಿಪಕ್ಷವಾಗಿರುವ ಇನ್ನೊಂದು ಹೇತುವಿದೆಯೋ ಅದು ಪ್ರಕರಣಸಮವಾಗುತ್ತದೆ. ಇದಕ್ಕೆ ಸತ್ಪ್ರತಿಪಕ್ಷವೆಂದು ಕರೆಯುತ್ತಾರೆ. "ಸನ್‌ಪ್ರತಿಪಕ್ಷಃ — ಪ್ರತಿಹೇತುಃ ಯಸ್ಯ ಸಃ ಸತ್ಪ್ರತಿಪಕ್ಷಃ" ಪ್ರಕರಣವೆಂದರೆ ಪ್ರಕ್ರಿಯಾ — ವಿಚಾರ. ಅದು ಪ್ರಸ್ತುತವಾಗಿರುವಾಗ ವಾದಿಯಾಗಲೀ ಪ್ರತಿವಾದಿಯಾಗಲೀ ಯಾವುದಾದರೊಂದು ಅರ್ಥವನ್ನು ಸಾಧಿಸಲು ಹೇತುವನ್ನು ಪ್ರದರ್ಶಿಸಿದಾಗ ಹೇತುವು ನಿರ್ಣಾಯಕವಾದುದರಿಂದ ಸದ್ಯದಲ್ಲಿಯೇ ಪ್ರಕರಣ—ವಿಚಾರವು ಕೊನೆಗೊಳ್ಳುತ್ತದೆ. ಸತ್ಪ್ರತಿಪಕ್ಷ ಹೇತುವಿಗೆ ನಿರ್ಣಾಯಕತ್ವ ಸಂಭವಿಸದಿರುವುದರಿಂದ ಪ್ರಕರಣ ಸಮಾಪ್ತಿ ಮಾಡುವ ಸಾಮರ್ಥ್ಯವೂ ಇರುವುದಿಲ್ಲ. ವಿಚಾರ ಮುಂದುವರಿಯುತ್ತಲೇ ಇರುತ್ತದೆ. ಆದುದರಿಂದ ಇದು ಪ್ರಕರಣಕ್ಕೆ ಸಮ ಅಂದರೆ ಪ್ರಕರಣಕ್ಕಿಂತ ವಿಶೇಷವೇನೂ ಇಲ್ಲದಿರುವುದರಿಂದ ಪ್ರಕರಣ ಸಮವಾಗುತ್ತದೆ. ಉದಾ ಶಬ್ದಃ-ನಿತ್ಯಃ-ಅನಿತ್ಯಧರ್ಮಾನುಪಲಬ್ಧೇಃ । ಶಬ್ದಃ - ಅನಿತ್ಯಃ-ನಿತ್ಯಧರ್ಮಾನುಪಲಬ್ಧೇಃ ॥ ಇಲ್ಲಿ ಪೂರ್ವಹೇತು ಸತ್ಪ್ರತಿಪಕ್ಷವಾಗುತ್ತದೆ. ೪) ಅಸಿದ್ಧವಾದ ಹೇತುವೇ ಸಾಧ್ಯಸಮವಾಗುತ್ತದೆ. ಸಿದ್ಧವಾದ ಹೇತುವು ಯಾವಾಗಲೂ ಅಸಿದ್ಧವಾದ ಸಾಧ್ಯವನ್ನು ಸಾಧಿಸುತ್ತದೆ. ಆದರೆ ಅದೇ ಅಸಿದ್ಧವಾಗಿದ್ದರೆ ಸಾಧ್ಯಕ್ಕೆ ಸಮವಾಗಿ ಸಾಧ್ಯಸಾಧನಸಮರ್ಥವಾಗುವುದಿಲ್ಲ. ಉದಾ: —ಶಬ್ದಃ-ಗುಣಃ-ಚಾಕ್ಷುಷತ್ವಾತ್ । ಶಬ್ದದಲ್ಲಿ ಚಾಕ್ಷುಷತ್ವ ಅಸಿದ್ಧವಾಗಿದೆ. ಉಪಾಧಿಸಹಿತವಾದ ಹೇತುವೂ ಅಸಿದ್ಧವಿಶೇಷವೇ ಆಗಿರುತ್ತದೆ. ೫) ಯಾವುದರ ಸಾಧ್ಯಾಭಾವವು ಪ್ರಮಾಣಾಂತರದಿಂದ ನಿಶ್ಚಿತವಾಗಿದೆಯೋ ಅದು ಅತೀತಕಾಲವಾಗುತ್ತದೆ. ಇದೇ ಬಾಧಿತವೆಂದೂ ಹೇಳಲ್ಪಡುತ್ತದೆ. ಉದಾಃ—ಅಗ್ನಿಃ-ಅನುಷ್ಣಃ -ಪ್ರಭಾಶ್ರಯತ್ವಾತ್ । ಇಲ್ಲಿ ಅನುಷ್ಣತ್ವರೂಪಸಾಧ್ಯಾಭಾವವು (ಉಷ್ಣತ್ವ) ಪ್ರತ್ಯಕ್ಷ ಪ್ರಮಾಣದಿಂದ ನಿಶ್ಚಿತವಾಗಿದೆ. ಇಲ್ಲಿ ಹೇತು ವಾಕ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರವಣವಾಗಬೇಕಾದರೆ ಮೊದಲೇ ಸಾಧ್ಯಾಭಾವನಿಶ್ಚಯ ಬಂದಿರುತ್ತದೆ. ಅದನ್ನು ವಾಸ್ತವವಾಗಿ ಉಚ್ಚರಿಸಬೇಕಾಗಿಲ್ಲ. ಆದುದರಿಂದ ಅತೀತಕಾಲವುಳ್ಳ ಹೇತುವಾಗುತ್ತದೆ.

ಶಬ್ದವೃತ್ತಿವ್ಯತ್ಯಯೇನ ಪ್ರತಿಷೇಧಹೇತುಶ್ಛಲಮ್ । ತತ್ತ್ರಿವಿಧಮ್ । ಅಭಿಧಾನ ತಾತ್ಪರ್ಯೋಪಚಾರವೃತ್ತಿವ್ಯತ್ಯಯಭೇದಾತ್ ॥

ಸ್ವವ್ಯಾಘಾತಕಮುತ್ತರಂ ಜಾತಿಃ । ಸಾ ಚತುರ್ವಿಂಶತಿವಿಧಾ। ಸಾಧರ್ಮ್ಯವೈಧರ್ಮ್ಯೋತ್ಕರ್ಷಾಪಕರ್ಷವರ್ಣ್ಯಾವರ್ಣ್ಯವಿಕಲ್ಪ ಸಾಧ್ಯಪ್ರಾಪ್ತ್ಯಪ್ರಾಪ್ತಿಪ್ರಸಂಗಪ್ರತಿದೃಷ್ಟಾಂತಾನುತ್ಪತ್ತಿ ಸಂಶಯ ಪ್ರಕರಣ ಹೇತ್ವರ್ಥಾಪತ್ತ್ಯವಿಶೇಷೋಪಪತ್ತ್ಯುಪಲಬ್ಧ್ಯನುಪಲಬ್ಧಿ ನಿತ್ಯಾ ನಿತ್ಯಕಾರ್ಯಸಮಭೇದಾತ್॥

'ಶಬ್ದವೃತ್ತಿ'—ಇತಿ. ಶಬ್ದದಲ್ಲಿರುವ ವ್ಯಾಪಾರವ್ಯತ್ಯಾಸದಿಂದ ಪೂರ್ವೋಕ್ತಾರ್ಥ ನಿಷೇಧಮಾಡುವುದು ಛಲ. ಇದು ಮೂರುವಿಧ. ೧)ಅಭಿಧಾನವೃತ್ತಿವ್ಯತ್ಯಯ ಅಂದರೆ ಅಭಿಧಾ (ಶಕ್ತಿ) ವ್ಯಾಪಾರವನ್ನೇ ಬೇರೆಯಾಗಿ ಸ್ವೀಕರಿಸಿ ಅರ್ಥಾಂತರ ಕಲ್ಪಿಸುವುದು. 'ನವಕಂಬಲಃ ಅಯಂ ಮಾಣವಕಃ' ಎಂಬಲ್ಲಿ ನೂತನಾರ್ಥಾಭಿಪ್ರಾಯದಿಂದ ನವಶಬ್ದವನ್ನು ಒಬ್ಬನು ಹೇಳಿದಾಗ ಛಲವಾದಿಯು ನವಶಬ್ದಕ್ಕೆ ನವಸಂಖ್ಯಾರ್ಥವನ್ನು ಬೇರೊಂದು ಶಕ್ತಿಯಿಂದ ಕಲ್ಪಿಸಿ ಈ ದರಿದ್ರ ಹುಡುಗನಿಗೆ ಒಂದು ಕಂಬಳಿ ಸಿಗುವುದೇ ದರ್ಲಭವಾಗಿರುವಾಗ ಒಂಬತ್ತು ಕಂಬಳಿಗಳನ್ನು ಹೊಂದಿರುವುದು ಹೇಗೆ ಎಂದು ನಿಷೇಧಿಸುತ್ತಾನೆ. ೨) ತಾತ್ಪರ್ಯವೃತ್ತಿವ್ಯತ್ಯಯಕ್ಕೆ ಉದಾಃ — ಒಬ್ಬನು ಬ್ರಾಹ್ಮಣನಲ್ಲಿ ವಿದ್ಯಾಸಂಭವವಿದೆಯೆಂಬ ತಾತ್ಪರ್ಯದಿಂದ 'ಬ್ರಾಹ್ಮಣೇ ವಿದ್ಯಾ' ಎಂದು ಪ್ರಯೋಗಿಸುತ್ತಾನೆ. ಆಗ ಛಲವಾದಿಯು ಅಲ್ಲಿ (ಬ್ರಾಹ್ಮಣನಲ್ಲಿಯೇ ವಿದ್ಯಾ) ನಿಯಮವಿದೆಯೆಂದು ತಾತ್ಪರ್ಯಗ್ರಹಿಸಿ "ಅದು ಹೇಗೆ ಮೂರ್ಖರಾದ ಬ್ರಾಹ್ಮಣರೂ ಇರುತ್ತಾರೆ. ಬ್ರಾಹ್ಮಣರೇ ವಿದ್ಯಾಕ್ಕೆ ಆಶ್ರಯರೆಂದುದು ಸರಿಯಲ್ಲವೆಂದು ನಿಷೇಧಿಸುತ್ತಾನೆ. ೩) ಉಪಚಾರವೆಂದರೆ ಲಕ್ಷಣಾ- ಲಕ್ಷಣಾವೃತ್ತಿವ್ಯತ್ಯಯಕ್ಕೆ ಉದಾ:— ಮಂಚದಲ್ಲಿರುವ ಮನುಷ್ಯರನ್ನು ಲಕ್ಷಣೆಯಿಂದ ಮಂಚವೆಂದು ಗ್ರಹಿಸಿ "ಮಂಚಾಃ ಕ್ರೋಶಂತಿ' ಎಂದು ಪ್ರಯೋಗಿಸುತ್ತಾನೆ. ಆಗ ಛಲವಾದಿಯು ಲಕ್ಷಣಾವೃತ್ತಿವ್ಯತ್ಯಯದಿಂದ ಶಕ್ಯಾರ್ಥವನ್ನು ಮಾತ್ರ ಸ್ವೀಕರಿಸಿ ಮಂಚವು ಮರ. ಅಚೇತನವಾದ ಮಂಚವು ಕೂಗುವುದು ಹೇಗೆ ಎಂದು ಅವನ ಮಾತು ಸರಿಯಲ್ಲವೆಂದು ನಿಷೇಧಿಸುತ್ತಾನೆ.

ವಾದಿಯ ಮಾತಿಗೆ ವ್ಯಾಘಾತಕವಾದ ಉತ್ತರವೇ ಜಾತಿ. ಇದು ೨೪ ವಿಧ. ಕೊನೆಯಲ್ಲಿ ಸಮಪದವಿರುವುದರಿಂದ ಅದಕ್ಕೆ ೨೪ ರಲ್ಲಿಯೂ ಅನ್ವಯ. ೧) ಸಾಧರ್ಮ್ಯಸಮ. ಸಾಧರ್ಮ್ಯದಿಂದ ವಿರುದ್ಧವಾಗಿ ಹೇಳುವುದು. ವಾದಿಯು — ಶಬ್ದವು ಕೃತಕವಾದುದರಿಂದ ಅನಿತ್ಯವೆನ್ನುತ್ತಾನೆ. ಆಗ ಪ್ರತಿವಾದಿಯು ಶಬ್ದದಲ್ಲಿ ಅಮೂರ್ತತತ್ವವಿರುವುದರಿಂದ ನಿತ್ಯವಾದ ಆಕಾಶಸಾಧರ್ಮ್ಯವಿರುವುದರಿಂದ ನಿತ್ಯವೇಕಾಗಬಾರದು ಎಂದು ಪೂರ್ವೋಕ್ತಿಯನ್ನು ಖಂಡಿಸುತ್ತಾನೆ. ೨) ವೈಧರ್ಮ್ಯಸಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದಿಯು ಹಿಂದಿನಂತೆ ಹೇಳಿದಾಗ ಶಬ್ದದಲ್ಲಿ ಅಮೂರ್ತತ್ವಧರ್ಮವಿರುವುದರಿಂದ ಘಟ ವೈಧರ್ಮ್ಯವಿದೆಯೆಂದು ಶಬ್ದವು ನಿತ್ಯವು ಏಕಾಗಬಾರದು ಎಂದು ಆಪಾದಿಸುವುದು. ೩) ಉತ್ಕರ್ಷಸಮಾ—ಧರ್ಮಾಂತರದಿಂದ ಉತ್ಕರ್ಷವನ್ನು ಆಪಾದನೆ ಮಾಡುವುದು. ಹಿಂದಿನ ಸ್ಥಳದಲ್ಲಿಯೇ ಕೃತಕತ್ವಧರ್ಮದಿಂದ ಘಟಸಾಧರ್ಮ್ಯವಿದೆಯೆಂದು ಶಬ್ದದಲ್ಲಿ ಸೂತ್ರ. ಐದು ಅಧ್ಯಾಯಗಳಿಂದ ನ್ಯಾಯಶಾಸ್ತ್ರ ಹೇಳಿದೆ. ಒಂದೊಂದು ಅಧ್ಯಾಯ ಅನಿತ್ಯತ್ವಾಪಾದನೆ. ಮಾಡುವುದಾದರೆ ಘಟದಂತೆ ಅದು ಮೂರ್ತದ್ರವ್ಯವಾಗಲಿ. ಮೂರ್ತವಾಗದಿದ್ದರೆ ಘಟದಂತೆ ಅದು ಅನಿತ್ಯವೂ ಆಗದೇ ಹೋಗಲಿ ಎಂದು ಆಪಾದಿಸುವುದು. ೪) ಅಪಕರ್ಷಸಮಾ — ಹಿಂದಿನ ಸ್ಥಳದಲ್ಲಿಯೇ ಶಬ್ದವು ಘಟದಂತೆ ಅಶ್ರಾವಣವಾಗಲಿ. ಎಂದು ಆಪಾದಿಸುವುದರಿಂದ ಶ್ರಾವಣತ್ವಧರ್ಮದ ಅಪಕರ್ಷ ತೋರಿಸಿದಂತಾಗುತ್ತದೆ. ೫) ವರ್ಣ್ಯಸಮಾ— ವರ್ಣ್ಯ — ವರ್ಣನಾಯೋಗ್ಯವಾದ ಹೇತುರೂಪಧರ್ಮ. ಶಬ್ದವು ಕೃತಕತ್ವ ಹೇತುವಿನಿಂದ ಅನಿತ್ಯವೆನ್ನುತ್ತಿ. ಕೃತಕತ್ವ ವೆಂದರೆ ತಾಲುಕಂಠಾದಿವ್ಯಾಪಾರಗಳಿಂದ ಉಂಟಾಗುವುದು. ಆದರೆ ಹೀಗೆ ಘಟಾದಿ ಗಳಿಲ್ಲ. ಘಟವು ಕುಂಬಾರಾದಿ ವ್ಯಾಪಾರ ಜನ್ಯವಾಗಿದೆ ಎಂದು ಆಪಾದಿಸುವುದು. ೬) ಅವರ್ಣ್ಯಸಮಾ—ಅವರ್ಣ್ಯವೆಂದರೆ ಸಿದ್ಧವಾದ ದೃಷ್ಟಾಂತಧರ್ಮ. ವೈಪರೀತ್ಯ ದಿಂದ ಘಟದಲ್ಲಿರುವ ಕೃತಕತ್ವದಂತೆ ಶಬ್ದದಲ್ಲಿ ಇಲ್ಲವೆಂದು ಆಪಾದನೆ ಮಾಡುವುದು. ೭) ವಿಕಲ್ಪಸಮಾ — ಅಲ್ಲಿಯೇ "ಹೇಗೆ ಕೃತಕಗಳಲ್ಲಿ ವಸ್ತ್ರಾದಿ ಕೆಲವು ಮೃದು ವಾಗಿಯೂ, ಕಬ್ಬಿಣ ಮುಂತಾದ ಕೆಲವು ಕಠಿಣವಾಗಿಯೂ ಇರುತ್ತವೆಯೋ ಅದರಂತೆ ಕೃತಕಗಳಲ್ಲಿ ಘಟಾದಿ ಕೆಲವು ಅನಿತ್ಯವಾಗಲಿ, ಶಬ್ದಾದಿ ಕೆಲವು ನಿತ್ಯವಾಗಲಿ ಎಂದು ಆಪಾದಿಸುವುದು. ೮) ಸಾಧ್ಯಸಮಾ — ಅಲ್ಲಿಯೇ — ಶಬ್ದವು ಘಟದಂತೆ ಅನಿತ್ಯವಾದರೆ ಘಟವೂ ಶಬ್ದದಂತೆ ಶ್ರಾವಣವಾಗಲಿ ಎಂದು ಆಪಾದಿಸುವುದು. ೯) ಪ್ರಾಪ್ತಿಸಮಾ — ಪ್ರಾಪ್ತಿಯೆಂದರೆ ಸಂಬಂಧ. ಹೇತುವು ಸಾಧ್ಯದೊಡನೆ ಸಂಬಂಧ ಹೊಂದಿ ಸಾಧ್ಯಸಾಧಕವಾಗುವುದಾದರೆ ಸಾಧ್ಯಹೇತುಗಳಿಗೆ ಅನ್ಯೋನ್ಯವಾಗಿ ನಿತ್ಯ ಸಂಬಂಧವಿರುವುದರಿಂದ ಯಾವುದನ್ನು ಸಾಧ್ಯವೆಂದು ಸ್ವೀಕರಿಸುವುದು ? ಯಾವುದನ್ನು ಹೇತುವೆಂದು ಸ್ವೀಕರಿಸುವುದು ? ಎಂಬ ಅನಿಶ್ಚಯತ್ವವನ್ನು ಆಪಾದಿಸುವುದು. ೧೦) ಅಪ್ರಾಪ್ತಿಸಮಾ — ಹೇತುವು ಸಾಧ್ಯದೊಡನೆ ಸಂಬಂಧವಿಲ್ಲದೆ ಸಾಧ್ಯಸಾಧಕ ವಾಗುವುದು ಹೇಗೆ ? ಎಂದು ಆಪಾದಿಸುವುದು. ೧೧) ಪ್ರಸಂಗಸಮಾ — ಶಬ್ದದ ಕೃತಕತ್ವದಲ್ಲಿ ಸಾಧನ ಯಾವುದು ? ಆ ಸಾಧನಕ್ಕೆ ಸಾಧಕವಾದ ಸಾಧನಯಾವುದು ? ಎಂದು ಕೇಳುತ್ತಾ ಹೋದಾಗ ಬರುವ ಅನವಸ್ಥಾ. ಹಾಗೆಯೇ ದೃಷ್ಟಾಂತವಾದ ಘಟದ ಅನಿತ್ಯತ್ವದಲ್ಲಿಯೂ ಸಾಧನ ಯಾವುದು ? ಆ ಸಾಧನಕ್ಕೆ ಸಾಧನ ಯಾವುದು ? ಎಂದು ಕೇಳುವ ಅನವಸ್ಥಾ ಸಂಪಾದಕ ಪ್ರಶ್ನೆ. ೧೨) ಪ್ರತಿದೃಷ್ಟಾಂತ ಸಮಾ— ಶಬ್ದಃ - ಅನಿತ್ಯಃ- ಪ್ರಯತ್ನೇನ ವಿಭಾವ್ಯಮಾನತ್ವಾತ್ । ಘಟವತ್ — ಎಂದು ಪ್ರಯೋಗಿಸಿದಾಗ ಶಬ್ದಃ- ನಿತ್ಯಃ- ಪ್ರಯತ್ನೇನ ವಿಭಾವ್ಯಮಾನತ್ವಾತ್ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಕಾಶವತ್ । ಎಂದು ಪ್ರತಿದೃಷ್ಟಾಂತದಿಂದ ನಿತ್ಯತ್ವವನ್ನು ಆಪಾದಿಸುವುದು. ಕೂಪಖನನಾದಿ ಪ್ರಯತ್ನದಿಂದ ಅಲ್ಲಿರುವ ಆಕಾಶಕ್ಕೆ ವಿಭಾವ್ಯಮಾನತ್ವ ಬರುತ್ತದೆ. ೧೩) ಅನುತ್ಪತ್ತಿಸಮಾ— ಶಬ್ದದಲ್ಲಿ ಅನಿತ್ಯತ್ವ ಸಾಧಕವಾದ ಕೃತಕತ್ವ ಹೇತುವು ಶಬ್ದೋತ್ಪತ್ತಿಗಿಂತ ಮೊದಲು ಇರಲಿಲ್ಲ. ಧರ್ಮಿಯೇ ಇಲ್ಲದಿರುವಾಗ ಧರ್ಮಸಂಭವಿಸು ವುದಿಲ್ಲ. ಹಾಗೆಯೇ ಆಗ ಆ ಕೃತಕತ್ವದಿಂದ ಸಾಧ್ಯವಾದ ಅನಿತ್ಯತ್ವಧರ್ಮವೂ ಇಲ್ಲದಿರುವುದರಿಂದ ಶಬ್ದವು ನಿತ್ಯವೆಂದಾಗುತ್ತದೆ. ನಿತ್ಯಕ್ಕೆ ಉತ್ಪತ್ತಿ ಇಲ್ಲದಿರುವುದರಿಂದ ಅಲ್ಲಿ ಅನಿತ್ಯತ್ವವನ್ನು ಸಾಧಿಸುವುದು. ಹೇಗೆ ಎಂದು ಆಪಾದಿಸುವುದು–ಅಥವಾ ಅನಿತ್ಯತ್ವ ಹೇತುಕಾನುಮಾನದಲ್ಲಿ ಉತ್ಪತ್ತಿಗಿಂತ ಮೊದಲು ಪಕ್ಷದಲ್ಲಿ ಹೇತುವೇ ಇಲ್ಲವೆಂದು ಅಸಿದ್ಧ್ಯಾಪಾದನೆ ಮಾಡುವುದು. ೧೪) ಸಂಶಯಸಮಾ — ಕೃತಕತ್ವ ಸಾಧರ್ಮ್ಯದಿಂದ ಘಟದಂತೆ ಶಬ್ದವು ಹೇಗೆ ಅನಿತ್ಯವೋಹಾಗೆ ಇಂದ್ರಿಯ ವಿಷಯತ್ವ ಸಾಮ್ಯದಿಂದ ಘಟತ್ವದಂತೆ ಶಬ್ದವು ನಿತ್ಯವೇ ಎಂಬ ಸಂಶಯ. ೧೫) ಪ್ರಕರಣ ಸಮಾ—ಸಂಶಯಸಮದಲ್ಲಿರುವಂತೆ ಇಲ್ಲಿ ಎರಡರ ಸಾಮ್ಯ ಹೇಳುವುದಿಲ್ಲ. ವಿಪರೀತಾನು ಮಾನದಿಂದ ಪೂರ್ವಾನುಮಾನಕ್ಕೆ ಭಾಧಕತ್ವವನ್ನು ಆಪಾದಿಸುವುದು (ಸತ್ಪ್ರತಿಪಕ್ಷ ದಂತೆ). ೧೬) ಹೇತು ಸಮಾ — ಹೇತುವು ಸಾಧ್ಯಕ್ಕಿಂತ ಪೂರ್ವಕಾಲಿಕವೇ ? ಅಥವಾ ಉತ್ತರಕಾಲಿಕವೇ? ಅಥವಾ ಸಮಕಾಲಿಕವೇ? ಮೊದಲನೆಯ ಪಕ್ಷದಲ್ಲಿ ಹೇತು ಕಾಲದಲ್ಲಿ ಸಾಧ್ಯವಿಲ್ಲದಿರುವುದರಿಂದ ಯಾವುದಕ್ಕೆ ಸಾಧಕವಾಗುತ್ತದೆ? ಎರಡನೆಯ ಮತ ದಲ್ಲಿ ಮೊದಲೇ ಸಾಧ್ಯವು ಸಿದ್ಧವಾದುದರಿಂದ ಹೇತುವೇಕೆ ? ಮೂರನೆಯ ಮತದಲ್ಲಿ ಗೋವಿನ ಎರಡು ಕೊಂಬುಗಳು ಏಕಕಾಲದಲ್ಲಿ ಹುಟ್ಟುವುದರಿಂದ ಹೇಗೆ ಕಾರ್ಯಕಾರಣ ಭಾವವಿಲ್ಲವೋ ಅದರಂತೆ ಇವುಗಳಿಗೆ ಸಾಧ್ಯ ಸಾಧನ ಭಾವ ಸಂಭವಿಸಲಾರದು. ಕಾರಕ ಜ್ಞಾಪಕಹೇತುಗಳು ಒಂದೇ ಎಂಬ ತಾತ್ಪರ್ಯದಿಂದ ಈ ಆಪಾದನೆ ತಿಳಿಯಬೇಕು. ೧೭) ಅರ್ಥಾಪತ್ತಿಸಮಾ—ಇಲ್ಲಿ ಅರ್ಥಾಪತ್ತಿಪದದಿಂದ ಅರ್ಥಾಪತ್ತ್ಯಾಭಾಸವು ಗೃಹೀತ ವಾಗಿದೆ. ಶಬ್ದವು ಅನಿತ್ಯವೆಂದಾಗ ಅರ್ಥಾತ್ ಶಬ್ದಗಳಿಗಿಂತ ಬೇರೆಯಾದವುಗಳೆಲ್ಲಾ ನಿತ್ಯವೆಂದು ತಿಳಿಯುತ್ತದೆ. ಹೀಗಿರುವಾಗ ಘಟಾದಿದೃಷ್ಟಾಂತ ಹೇಳಿರುವುದು ಹೇಗೆ ? ಎಂದು ಆಪಾದಿಸುವುದು. ೧೮) ಅವಿಶೇಷಸಮಾ — ಕೃತಕತ್ವ ರೂಪಸಮಾನ ಧರ್ಮದಿಂದ ಶಬ್ದಘಟಗಳಿಗೆ ಅವಿಶೇಷವಿರುವುದಾದರೆ ಪ್ರಮೇಯತ್ವಾದಿ ಸಮಾನ ಧರ್ಮ ದಿಂದ ಎಲ್ಲಾ ಪದಾರ್ಥಗಳಿಗೂ ಅವಿಶೇಷ (ಭೇದವಿಲ್ಲದಿರುವುದು) ವಿರಬೇಕಾದುದರಿಂದ ಸರ್ವವೂ ಒಂದೂ ನಿತ್ಯವಾಗಲೀ ಇಲ್ಲವೇ ಅನಿತ್ಯವಾಗಲಿ ಎಂದು ಆಪಾದಿಸುವುದು. ೧೯) ಉಪಪತ್ತಿಸಮಾ—ಕೃತಕತ್ವೋಪಪತ್ತಿಯಿಂದ ಶಬ್ದವು ಅನಿತ್ಯವಾಗುವುದಾದರೆ ನಿರವಯವೋಪಪತ್ತಿಯಿಂದ ಶಬ್ದವು ನಿತ್ಯವೇಕಾಗಬಾರದು ? ೨೦) ಉಪಲಬ್ಧಿಸಮಾ– ಒಂದು ಕಾರ್ಯಕ್ಕೆ ಒಂದೇ ಕಾರಣವೆಂಬ ಅಭಿಮಾನದಿಂದ ವಹ್ನಿಮಾನ್–ಧೂಮಾತ್ ಎಂದು ಹೇಳಿದಾಗ ಧೂಮವಿಲ್ಲದಿದ್ದರೂ ಆಲೋಕ (ಬೆಳಕು) ಮುಂತಾದುವುಗಳಿಂದ ವಹ್ನಿ ಉಪಲಬ್ಧವಾಗುತ್ತದೆಯೆಂದು ಆಪಾದಿಸುವುದು. ೨೧) ಅನುಪಲಬ್ಧಿಸಮಾ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಬ್ದಃ ನ ಕೃತಕಃ– ಏಕೆಂದರೆ ಉಚ್ಚಾರಣೆಯುವೊದಲು ಅದು ಇದ್ದೇ ಇರುತ್ತದೆ. ಏಕೆ ಉಪಲಬ್ಧಿ ಇಲ್ಲ? ಎಂದರೆ ಆವರಣವಿರುವುದರಿಂದ ಅದು ಉಪಲಬ್ಧವಾಗಲಿಲ್ಲ. ಆವರಣವು ಉಪಲಬ್ಧವಾಗುವುದಿಲ್ಲವಷ್ಟೆ? ಆದರೆ ಆವರಣದ ಅನುಪಲಬ್ಧಿಯೂ ಉಪಲಬ್ಧವಾಗದಿರುವುದರಿಂದ ಆವರಣೋಪಲಬ್ಧಿಯೇ ಸಿದ್ಧಿಸುವುದರಿಂದ ಶಬ್ದವು ಅನಿತ್ಯವಾಗಲಾರದು ಎಂದು ಆಪಾದಿಸುವುದು ೨೨) ನಿತ್ಯಸಮಾ ಶಬ್ದದಲ್ಲಿರುವ ಅನಿತ್ಯತ್ವ ಧರ್ಮವು ನಿತ್ಯವೇ ಅನಿತ್ಯವೇ? ನಿತ್ಯವೆಂದರೆ ಧರ್ಮಿ ಇಲ್ಲದೇ ಧರ್ಮವಿರುವುದು ಅಸಂಭವವಾದುದರಿಂದ ಧರ್ಮಿಯಾದ ಶಬ್ದಕ್ಕೆ ನಿತ್ಯತ್ವಸಿದ್ಧವಾಗುತ್ತದೆ. ಅನಿತ್ಯತ್ವವನ್ನು ಒಪ್ಪುವುದಾದರೆ ಅನಿತ್ಯತ್ವವೇ ಅನಿತ್ಯವಾದುದರಿಂದ ಅರ್ಥಾತ್ ಶಬ್ದನಿತ್ಯತ್ವ ಸಿದ್ಧವಾಗುತ್ತದೆ. ೨೩) ಅನಿತ್ಯತ್ವಸಮಾ—ಕೃತಕತ್ವದಿಂದ ಘಟಸಾಧರ್ಮ್ಯದಿಂದ ಶಬ್ದವು ಅನಿತ್ಯವಾಗುವುದಾದರೆ ಪ್ರಮೇಯತ್ವಾದಿಸಾಧರ್ಮ್ಯದಿಂದ ಎಲ್ಲವೂ ಘಟ ಸಮಾನವಾಗುವುದರಿಂದ ಎಲ್ಲಾ ಪದಾರ್ಥಗಳೂ ಅನಿತ್ಯವಾಗಲಿ ಇಲ್ಲವಾದರೆ ಶಬ್ದವೂ ಅನಿತ್ಯವಾಗದಿರಲಿ ಎಂದು ಆಪಾದಿಸುವುದು. ೨೪) ಕಾರ್ಯಸಮಾ–ಶಬ್ದಃ–ಅನಿತ್ಯಃ–ಕಾರ್ಯತ್ವಾತ್ ಎಂದಾಗ ಕಾರ್ಯತ್ವವು ಜನ್ಯತ್ವ ಜ್ಞಾಪ್ಯತ್ವ ಸಾಧಾರಣವಾದುದರಿಂದ ವಾದುದರಿಂದ ಅದು ಅನಿತ್ಯತ್ವ ಸಾಧಕವಾಗಲಾರದು. ಎಂದು ಆಪಾದಿಸುವುದು. ಹೀಗೆ ೨೪ ರೀತಿಯಾದ ಜಾತಿಯಲ್ಲಿ ಸಾಧರ್ಮ್ಯ, ಸಂಶಯ, ಪ್ರಕರಣ–ಅರ್ಥಾಪತ್ತಿ ಅನಿತ್ಯಕಾರ್ಯಸಮಾದಿಜಾತಿಗಳಿಗೆ ಪರ್ಯವಸಾನದಲ್ಲಿ ದೂಷಣೈಕ್ಯವಿದ್ದರೂ ದೂಷಣೋದ್ಭಾವಪ್ರಕಾರಗಳು ಭಿನ್ನವಾದುದರಿಂದ ಬೇರೆ ಬೇರೆಯಾಗಿ ಹೇಳಿವೆ.

ಪರಾಜಯನಿಮಿತ್ತಂ ನಿಗ್ರಹಸ್ಥಾನಮ್ । ತತ್ ದ್ವಾವಿಂಶತಿಪ್ರಕಾರಮ್ । ಪ್ರತಿಜ್ಞಾ
ಹಾನಿ ಪ್ರತಿಜ್ಞಾಂತರ ಪ್ರತಿಜ್ಞಾವಿರೋಧ ಪ್ರತಿಜ್ಞಾಸಂನ್ಯಾಸ ಹೇತ್ವಂತರಾರ್ಥಾಂ
ತರ ನಿರರ್ಥಕಾವಿಜ್ಞಾತಾರ್ಥಾಪಾರ್ಥಕಾಪ್ರಾಪ್ತಕಾಲನ್ಯೂನಾಧಿಕ ಪುನರುಕ್ತಾನ
ನುಭಾಷಣಾಜ್ಞಾನಾಪ್ರತಿಭಾವಿಕ್ಷೇಪಮತಾನುಜ್ಞಾಪರ್ಯನುಯೋಜ್ಯೋಪೇ
ಕ್ಷಣ ನಿರನುಯೋಜ್ಯಾನುಯೋಗಾಪಸಿದ್ಧಾಂತ ಹೇತ್ವಾಭಾಸಭೇದಾತ್ ॥

ವಾದಿಯನ್ನು ಸೋಲಿಸಲು ಕಾರಣವಾದ ನಿಗ್ರಹಸ್ಥಾನವು ೨೨ ವಿಧವಾಗಿದೆ. ೧) ಪ್ರತಿಜ್ಞಾಹಾನಿ :—ಶಬ್ದ:— ಅನಿತ್ಯ:—ಐಂದ್ರಿಯಕತ್ವಾತ್ – ಎಂದು ಪ್ರತಿಜ್ಞೆ ಮಾಡಿದ ಮೇಲೆ ಇನ್ನೊಬ್ಬನು ಸಾಮಾನ್ಯವು (ಜಾತಿ) ಐಂದ್ರಿಯಕವಾದರೂ ನಿತ್ಯವಾಗಿರುತ್ತದೆ ಎಂದು ಹೇಳಿದಾಗ ಹಾಗೇ ಆಗಲಿ. ಶಬ್ದವೂ ನಿತ್ಯವಾಗಲಿ ಎಂದು ಒಪ್ಪುವುದು. ೨) ಪ್ರತಿಜ್ಞಾಂತರಂ–ಪೂರ್ವಪ್ರತಿಜ್ಞೆ ಹೇಳಿದಾಗ ಪರನು ಹಿಂದಿನಂತೆ ದೂಷಣ ಹೇಳಿದಾಗ ಸಾಮಾನ್ಯವು ಸರ್ವಗತವಾದುದರಿಂದ ನಿತ್ಯವಾಗಿದೆ. ನಾನು ಹೀಗೆ ಹೇಳುತ್ತೇನೆ. ಅಸರ್ವಗತವಾದ ಶಬ್ದವು–ಅನಿತ್ಯ. ಎಂದು ಇನ್ನೊಂದು ಪ್ರತಿಜ್ಞೆ ಮಾಡುವುದು. ೩) ಪ್ರತಿಜ್ಞಾವಿರೋಧ : — ಪ್ರತಿಜ್ಞಾವಾಕ್ಯ ಹೇತುವಾಕ್ಯಗಳಿಗೆ ವಿರೋಧವಿದ್ದರೆ ಪ್ರತಿಜ್ಞಾವಿರೋಧವಾಗುತ್ತದೆ. ದ್ರವ್ಯವು ಗುಣಕ್ಕಿಂತ ಬೇರೆಯಾಗಿದೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಎಂದು ಪ್ರತಿಜ್ಞೆ ಮಾಡಿ ಗುಣವ್ಯತಿರಿಕ್ತವಾಗಿ ಉಪಲಬ್ಧವಾಗದಿರುವುರಿಂದ ಎಂದು ಹೇತು ಹೇಳಿದರೆ ವಿರೋಧ ಬರುತ್ತದೆ. ೪) ಪ್ರತಿಜ್ಞಾಸಂನ್ಯಾಸ:— ಇತರರು ದೂಷಣ ಹೇಳಿದಾಗ 'ಶಬ್ದ ಅನಿತ್ಯವೆಂದು ಯಾರು ಹೇಳಿದರು ? ಎಂದು ಪೂರ್ವಕೃತ ಪ್ರತಿಜ್ಞೆಯ ಅಪಲಾಪ ಮಾಡುವುದು. ೫) ಹೇತ್ವಂತರಮ್—ಶಬ್ದ:—ಅನಿತ್ಯ : —ಬಾಹ್ಯೇಂದ್ರಿಯ ಪ್ರತ್ಯಕ್ಷತ್ವಾತ್ ಎಂದು ಪ್ರತಿಜ್ಞೆ ಮಾಡಿದಾಗ ಸಾಮಾನ್ಯದಲ್ಲಿ ವ್ಯಭಿಚಾರ ತೋರಿಸಿದಾಗ 'ಸಾಮಾನ್ಯವತ್ತ್ವೇ ಸತಿ' ಎಂದು ಹೇತುವಿಗೆ ವಿಶೇಷಣ ಹೇಳುವುದು ಸಾಮಾನ್ಯದಲ್ಲಿ ಸಾಮಾನ್ಯವಿಲ್ಲ. ೬) ಪ್ರತಿಜ್ಞಾಂತರಂ— ಒಂದು ಹೇತು ಹೇಳಿವಾಗ ಹಿಧಾತುವಿಗೆ ತುನ್ ಬಂದಾಗ ಹೇತುಶಬ್ದವಾಗುತ್ತದೆಂದು ಹೇತುಶಬ್ದ ನಿರ್ವಚನ ಮಾಡುವುದು. ೭) ನಿರರ್ಥಕಂ— ಕಚಟತಪಶಬ್ದ:— ನಿತ್ಯ :—ಖಫಛಠಥತ್ವಾತ್ ಜಬಗಡದವತ್ ಎಂದು ಪ್ರಯೋಗಿಸುವುದು, ೮) ಅವಿಜ್ಞಾತಾರ್ಥಂ — ಎರಡು ಮೂರು ಸಾರಿ ಹೇಳಿದರೂ ಶ್ಲಿಷ್ಟ, ಅಸಮರ್ಥ, ಅಪ್ರತೀತ, ಭಿನ್ನಭಾಷಾಶಬ್ದೋಚ್ಚಾರಣದಿಂದಾಗಲೀ, ಅತಿವೇಗವಾಗಿ ಹೇಳುವುದರಿಂದಾಗಲೀ ಮಧ್ಯಸ್ಥನಿಗೂ ಇತರರಿಗೂ ತಿಳಿಯದಿರುವುದು. ೯) ಅಪಾರ್ಥಕಂ—ಆಕಾಂಕ್ಷಾಯೋಗ್ಯತಾರಹಿತವಾಗಿ ಪೂರ್ವಾಪರಾಸಂಬದ್ಧೋಕ್ತಿಯಾಗುತ್ತದೆ. ದಶ ದಾಡಿಮಾನಿ ಷಡಪೂಪಾ-ಇತ್ಯಾದಿ ೧೦) ಅಪ್ರಾಪ್ತಕಾಲಂ — ಪ್ರತಿಜ್ಞಾಹೇತ್ವಾದಿ ಅವಯವಗಳನ್ನು ತಲೆಕೆಳಕಾಗಿ ಪ್ರಯೋಗಿಸುವುದು. ೧೧) ನ್ಯೂನಂ— ಪ್ರತಿಜ್ಞಾದಿಗಳಲ್ಲಿ ಕೆಲವನ್ನು ಹೇಳದಿರುವುದು ೧೨) ಅಧಿಕಂ—ಒಂದು ಹೇತು ಒಂದು ಉದಾಹರಣದಿಂದಲೇ ಸಾಧ್ಯವು ಸಿದ್ಧವಾಗುವಾಗ ಇನ್ನೊಂದು ಹೇತುವನ್ನಾಗಲೀ ಉದಾಹರಣೆಯನ್ನಾಗಲೀ ಹೇಳುವುದು. ೧೩) ಪುನರುಕ್ತಂ—ತಿರುಗಿ ತಿರುಗಿ ಆದೇಶಬ್ದವನ್ನಾಗಲೀ ಆದರ ಪರ್ಯಾಯವನ್ನಾಗಲೀ ಹೇಳುತ್ತಿರುವುದು. ಅನುವಾದದಲ್ಲಿ ಈ ದೋಷವಿಲ್ಲ. ೧೪) ಅನನುಭಾಷಣಂ—ಮಧ್ಯಸ್ಥನು ಎರಡು ಮೂರು ಬಾರಿ ಹೇಳಿದರೂ ಹೇಳದೆ ಸುಮ್ಮನಿರುವುದು. ೧೫) ಅಜ್ಞಾನಂ — ವಾದಿಯ ಉಕ್ತಿಯು ಮಧ್ಯಸ್ಥನಿಗೆ ತಿಳಿದರೂ ಪ್ರತಿವಾದಿಗೆ ತಿಳಿಯದಿರುವುದು. ಹೀಗೆಯೇ ಪ್ರತಿವಾದಿಯ ಉಕ್ತಿಯನ್ನು ವಾದಿಯು ತಿಳಿಯಲಸಮರ್ಥನಾಗುವುದು. ೧೬) ಅಪ್ರತಿಭಾ — ಪರೋಕ್ತಿಯನ್ನು ತಿಳಿದು ಅನುವಾದ ಮಾಡಿದರೂ ಅದಕ್ಕೆ ಉತ್ತರ ಸ್ಫೂರ್ತಿಯಾಗದಿರುವುದು. ೧೭) ವಿಕ್ಷೇಪ:—ಅಯುಕ್ತವಾದ ಕಾರ್ಯಾಂತರವನ್ನು ಉಪಕ್ಷೇಪಮಾಡುವುದು. ಶೌಚಕ್ಕೆ ಹೋಗುತ್ತೇನೆಂದು ಮಧ್ಯೆ ಹೇಳುವುದು. ಗೃಹದಾಹಾದಿಯೋಗ್ಯಕಾರಣಗಳಲ್ಲಿ ಇದು ದೋಷವಾಗುವುದಿಲ್ಲ. ೧೮) ಮತಾನುಜ್ಞಾ ನೀನು ಚೋರನೆಂದಾಗ ಅದನ್ನು ದೂರಪಡಿಸದೆ ನೀನೂ ಚೋರನೆಂದು ಹೇಳುವುದು. ಆಗ ತನ್ನಲ್ಲಿ ಚೋರತ್ವನಿಷಿದ್ಧವಾಗದಿರುವುದರಿಂದ ಒಪ್ಪಿದಂತಾಗುತ್ತದೆ. ೧೯) ಪರ್ಯನುಯೋಜ್ಯೋಪೇಕ್ಷಣಂ — ನಿಗ್ರಹಸ್ಥಾನವುಂಟಾದರೂ ಆದನ್ನು ಉದ್ಘಾಟನ ಮಾಡದೆ ಇನ್ನೊಂದರಿಂದ ನಿಗ್ರಹಿಸಲ್ಪಟ್ಟಿರುವಿಯೆಂದು ಹೇಳುವುದು. ೨೦) ನಿರನುಯೋಜ್ಯಾನುಯೋಗಃ— ನಿಗ್ರಹಸ್ಥಾನವು ಇಲ್ಲದಿದ್ದರೂ ಇದು ನಿಗ್ರಹಸ್ಥಾನವೆಂದು ಉದ್ಘಾಟನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡುವುದು. ೨೧) ಅಪಸಿದ್ಧಾಂತಃ—ಒಂದು ಸಿದ್ಧಾಂತವನ್ನು ಅಂಗೀಕರಿಸಿ ಹೇಳುತ್ತಿರುವಾಗ ಕಥಾಪ್ರಸಂಗದಿಂದ ಅದನ್ನು ಮರೆತು ಬಿಡುವುದು. ೨೩) ಹೇತ್ವಾಭಾಸಾಃ ಇದು ಸವ್ಯಭಿಚಾರ, ವಿರುದ್ಧ, ಸತ್ಪ್ರತಿಪಕ್ಷ, ಅಸಿದ್ಧ, ಬಾಧಿತವೆಂದು ಪ್ರಸಿದ್ಧವಾಗಿದೆ.

ಪ್ರಮಾಣಾದಿ ಹದಿನಾರು ಪದಾರ್ಥಗಳಲ್ಲಿ ಪ್ರಮೇಯವ್ಯತಿರಿಕ್ತಗಳಾದ ಹದಿನೈದು ಪದಾರ್ಥಗಳು ಪ್ರಮೇಯದಲ್ಲಿಯೇ ಅಡಕವಾಗುತ್ತವೆ. ಹನ್ನೆರಡು ವಿಧಗಳಾದ ಪ್ರಮೇಯಗಳಲ್ಲಿಯೂ ಅರ್ಥವ್ಯತಿರಿಕ್ತ ಹನ್ನೊಂದು ಪ್ರಮೇಯಗಳು ಅರ್ಥದಲ್ಲಿಯೇ ಸೇರುತ್ತವೆ. ಸೂತ್ರಕಾರರಿಗೂ ಇದು ಸಂಮತವಾಗಿದೆ. ಆದರೂ ಮೋಕ್ಷಕ್ಕೆ ಕಾರಣವಾದ ತತ್ತ್ವಜ್ಞಾನೋಪಯೋಗಿಗಳಾದುದರಿಂದ ಬೇರೆ ಬೇರೆಯಾಗಿ ಹೇಳಿವೆಯೆಂದು ತಿಳಿಯಬೇಕು. ಆತ್ಯಂತದುಃಖನಿವೃತ್ತಿಯೇ ಮೋಕ್ಷ. ದುಃಖವು ಮುಖ್ಯವಾಗಿ ಈ ಪ್ರೇತ್ಯಭಾವವು ಸುಖದುಃಖೋಪಭೋಗರೂಪ ಫಲಜನಕವಾದ ಪ್ರವೃತ್ತಿಯಿಂದ ಬರುತ್ತದೆ. ಪ್ರವೃತ್ತಿಯು ಮನೋಗತವಾದ ರಾಗದ್ವೇಷಮೋಹರೂಪದೋಷ ಮೂಲಕವಾಗಿರುತ್ತದೆ. ದೋಷಹಾನಿಯು ಶರೀರೇಂದ್ರಿಯಾರ್ಥಗಳಿಂದ ಬೇರೆಯಾದ ಆತ್ಮತತ್ತ್ವಜ್ಞಾನದಿಂದ ಉಂಟಾಗುತ್ತದೆ. ಪ್ರಮಾಣಗಳಿಂದ (೧) ಪ್ರಮೇಯಗಳ (೨) ತತ್ತ್ವಜ್ಞಾನಉಂಟಾಗುತ್ತದೆ. ಪ್ರಮಾಣಗಳಲ್ಲಿಯೂ ಅನುಮಾನವೇ ಸೂಕ್ಷ್ಮವಿಷಯಗಳಲ್ಲಿ ಪಂಚಾವಯವ (೭) ಗಳಿಂದ ಕೂಡಿ, ದೃಷ್ಟಾಂತಪರಿಪುಷ್ಟವಾಗಿ (೫) ಅನುಗ್ರಾಹಕ ತರ್ಕ (೮) ಸಹಾಯದಿಂದ ಸಂಶಯವನ್ನು (೩) ಹೋಗಲಾಡಿಸಿ ಸಿದ್ಧಾಂತಾ (೬) ನುಸಾರವಾಗಿ ನಿರ್ಣಯ (೯) ವನ್ನು ಹುಟ್ಟಿಸಿ ಕೊಡಲು ಸಮರ್ಥವಾಗುತ್ತದೆ. ನಿರ್ಣಯವು ಪಕ್ಷಪ್ರತಿಪಕ್ಷಪರಿಗ್ರಹರೂಪಕಥೆಯಲ್ಲಿ ವಾದ (೧೦) ದಿಂದ ದೃಢವಾಗುತ್ತದೆ. ಕಥೆಯಲ್ಲಿಯೂ ಜಲ್ಪ (೧೧) ವಿತಂಡಾ (೧೨) ಹೇತ್ವಾಭಾಸ (೧೩) ಛಲ (೧೪) ಜಾತಿ (೧೫) ನಿಗ್ರಹಸ್ಥಾನ (೧೬) ಗಳಿಂದ ಹೇಯತ್ವ ಬುದ್ಧಿಯುಂಟಾಗುವುದರಿಂದ ಅವುಗಳ ಜ್ಞಾನವೂ ಆವಶ್ಯಕವಾಗಿದೆ.

ಜಲ್ಪಾದಿಗಳನ್ನು ತಾನಾಗಿ ಪ್ರಯೋಗಿಸಬಾರದು. ಪರನು ಹೇಳಿದರೆ ಅವು ದೋಷಗಳೆಂದು ಮಧ್ಯಸ್ಥನಿಗೆ ತೋರಿಸಿಕೊಡಬೇಕು. ಪರನು ಅಜ್ಞನಾದರೆ ಅಥವಾ ಮೂರ್ಖನಾದರೆ ಅಥವಾ ಅಭಿನಿವಿಷ್ಟ ಬುದ್ಧಿಯುಳ್ಳವನಾದರೆ ಆಗ ಸುಮ್ಮನಿರುವುದೇ ಉತ್ತಮ, ಮಧ್ಯಸ್ಥನು ಒಪ್ಪುವುದಾದರೆ ಛಲಾದಿಗಳಿಂದ ಜಯಿಸಬಹುದು. ಇಲ್ಲವಾದರೆ ತಾನು ಸುಮ್ಮನಿದ್ದರೆ ಇವನು ಪರಾಜಿತನಾದನೆಂದು ತಿಳಿದು ಪರೋಕ್ತವಾದುದೇ ಸಿದ್ಧಾಂತವೆಂದು ಶ್ರದ್ಧೆಯಿಂದ ಸ್ವೀಕರಿಸಿ ಅಜ್ಞರಾದ ಜನರು ವಂಚಿತರಾಗಬಹುದು. ಇದಕ್ಕೋಸ್ಕರೇ ಛಲಾದಿಗಳನ್ನು ಮುನಿಯು ಕರುಣೆಯಿಂದ ಹೇಳಿರುವನೆಂದು ಒಂದು ಶ್ಲೋಕದಲ್ಲಿ ಹೇಳಿರುತ್ತಾರೆ.

ದುಃ ಶಿಕ್ಷಿತಕುತರ್ಕಾಂಶಲೇಶವಾಚಾಲಿತಾನನಾಃ ।
ಶಕ್ಯಾಃ ಕಿಮನ್ಯಥಾ ಜೇತುಂ ವಿತಂಡಾಟೋಪಮಂಡಿತಾಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗತಾನುಗತಿಕೋ ಲೋಕಃ ಕುಮಾರ್ಗಂ ತತ್ಪ್ರತಾರಿತಃ ।
ಮಾಗಾದಿತಿ ಛಲಾದೀನಿ ಪ್ರಾಹ ಕಾರುಣಿಕೋ ಮುನಿಃ ॥

ಅತ್ರ ಸರ್ವಾಂತರ್ಗಣಿಕಸ್ತು ವಿಶೇಷಸ್ತತ್ರ ಶಾಸ್ತ್ರೇ ವಿಸ್ಪಷ್ಟೋಽಪಿ ವಿಸ್ತರಭಿಯಾ ನ ಪ್ರಸ್ತೂಯತೇ ॥

ನನು ಪ್ರಮಾಣಾದಿಪದಾರ್ಥಷೋಡಶಕೇ ಪ್ರತಿಪಾದ್ಯಮಾನೇ ಕಥಮಿದಂ ನ್ಯಾಯಶಾಸ್ತ್ರಮಿತಿ ವ್ಯಪದಿಶ್ಯತೇ । ಸತ್ಯಮ್ । ತಥಾಪ್ಯಸಾಧಾರಣ್ಯೇನ ವ್ಯಪದೇಶಾ ಭವಂತೀತಿ ನ್ಯಾಯೇನ ನ್ಯಾಯಸ್ಯ ಪರಾರ್ಥಾನುಮಾನಾಪರಪರ್ಯಾಯಸ್ಯ ಸಕಲ ವಿದ್ಯಾನುಗ್ರಾಹಕತಯಾ ಸರ್ವಕಾಮಾನುಷ್ಠಾನ ಸಾಧನತಯಾ ಪ್ರಧಾನತ್ವೇನ ತಥಾ ವ್ಯಪದೇಶೋ ಯುಜ್ಯತೇ । ತಥಾಭಾಣಿ ಸರ್ವಜ್ಞೇನ ಸೋಽಯಂ ಪರಮೋ ನ್ಯಾಯೋ ವಿಪ್ರತಿಪನ್ನಪುರುಷಂ ಪ್ರತಿ ಪ್ರತಿಪಾದಕತ್ವಾತ್ । ತಥಾ ಪ್ರವೃತ್ತಿ ಹೇತುತ್ವಾಚ್ಚ (ಸೂ-೧-೧-೧) ಇತಿ ॥

"ಅತ್ರ—" ಇತಿ. ಹದಿನಾರುಪದಾರ್ಥಗಳಲ್ಲದೆ ಎಲ್ಲದರಲ್ಲಿಯೂ ಇರುವ ವಿಶೇಷವೆಂಬುದು ಈ ಶಾಸ್ತ್ರದಲ್ಲಿ ವಿಸ್ಪಷ್ಟವಾಗಿದ್ದರೂ ವಿಸ್ತಾರವಾಗುವ ಭಯದಿಂದ ಪ್ರತಿಪಾದಿಸಿಲ್ಲ. ಪ್ರಮಾಣಾದಿ ೧೬ ಪದಾರ್ಥಗಳನ್ನು ಪ್ರತಿಪಾದಿಸುವ ಈ ಶಾಸ್ತ್ರಕ್ಕೆ ನ್ಯಾಯಶಾಸ್ತ್ರವೆಂದು ಹೆಸರು ಬಂದುದು ಹೇಗೆಂಬ ಶಂಕೆ ಬಂದರೆ 'ಸತ್ಯಂ' ಎಂಬುದರಿಂದ ಸಮಾಧಾನ ಹೇಳುತ್ತಾನೆ. 'ತಥಾಪಿ—' ಇತಿ. 'ಅಸಾಧಾರಣ್ಯೇನ ವ್ಯಪದೇಶಾ ಭವಂತಿ' ಎಂದು ನ್ಯಾಯ. ಪಂಚಾವಯವವಾಕ್ಯಾತ್ಮಕವಾದ ಪರಾರ್ಥಾನುಮಾನವೇ ನ್ಯಾಯಪದವಾಚ್ಯವಾಗಿದೆ. "ನೀಯತೇ — ಪ್ರಾಪ್ಯತೇ – ವಿವಕ್ಷಿತಾರ್ಥ ಸಿದ್ಧಿಃ ಅನೇನ" ಎಂಬ ವ್ಯುತ್ಪತ್ತಿಯಿಂದ ಇದು ಸಕಲವಿದ್ಯಾನುಗ್ರಾಹಕವಾಗಿ, ಸರ್ವಕರ್ಮಾನುಷ್ಠಾನ ಸಾಧನವಾದುದರಿಂದ ಅಸಾಧಾರಣವಾಗಿ ಈ ಶಾಸ್ತ್ರದಿಂದ ಪ್ರತಿಪಾದಿತವಾಗಿದೆ. ಈ ನ್ಯಾಯವೇ ಇಲ್ಲಿ ಪ್ರಧಾನವಾದುದರಿಂದ ಈ ಶಾಸ್ತ್ರಕ್ಕೆ ನ್ಯಾಯಶಾಸ್ತ್ರವೆಂದು ಹೆಸರು ಬಂದಿರುತ್ತದೆ. "ತಥಾ—" ಇತಿ. ಹೀಗೆ ಗೌತಮರೇ ಸೂತ್ರದಲ್ಲಿ ಹೇಳಿರುತ್ತಾರೆ. ವಿಪ್ರತಿಪನ್ನಪುರುಷನನ್ನು ಕುರಿತು ಇದು ಪ್ರತಿಪಾದಕವಾದುದರಿಂದ 'ಪರಮೋ ನ್ಯಾಯಃ' ಎಂದು ಹೇಳಿರುತ್ತಾರೆ. ನಿರ್ಣಯಕವಾದ ಮುಖ್ಯ ಪ್ರಮಾಣವೆಂದು ಅದರ ತಾತ್ಪರ್ಯ. ಹೀಗೆಯೇ ಇದು ಪುರುಷಪ್ರವೃತ್ತಿ ಕಾರಣವೂ ಆಗಿರುತ್ತದೆಂದು ಹೇಳಿರುತ್ತಾರೆ.

ಪಕ್ಷಿಲ ಸ್ವಾಮಿನಾ ಚ ಸೇಯಮಾನ್ವೀಕ್ಷಕೀ ವಿದ್ಯಾ ಪ್ರಮಾಣಾದಿಭಿಃಪದಾರ್ಥೈಃ ಪ್ರವಿಭಜ್ಯಮಾನಾ-

ಪ್ರದೀಪಃ ಸರ್ವ ವಿದ್ಯಾನಾಮುಪಾಯಃ ಸರ್ವಕರ್ಮಣಾಮ್ ।
ಆಶ್ರಯಃ ಸರ್ವಧರ್ಮಾಣಾಂ ವಿದ್ಯೋದ್ದೇಶೇ ಪರೀಕ್ಷಿತಾ ॥ ಇತಿ ॥

ನ್ಯಾ-ಸೂ-ಭಾ-೧-೧-೧.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೌತಮರು ರಚಿಸಿರುವ ನ್ಯಾಯಸೂತ್ರಗಳಿಗೆ ಭಾಷ್ಯಬರೆದವರು ಪಕ್ಷಿಲಸ್ವಾಮಿಗಳು. ಇವರಿಗೆ ವಾತ್ಸ್ಯಾಯನರೆಂಬ ಹೆಸರೂ ಇದೆ. "ಪಕ್ಷಯತಿ ತತ್ತ್ವಜ್ಞಾನಂ ಪರಿಗೃಹ್ಣಾತೀತಿ ಪಕ್ಷಿಲಃ। ತತ್ವಜ್ಞಾನವನ್ನು ಹೊಂದಿರುವರೆಂದರ್ಥ. ಪಕ್ಷ—ಪರಿಗ್ರಹೇ–ಧಾತು. ಬಹುಲಗ್ರಹಣದಿಂದ ಕರ್ತ್ರರ್ಥದಲ್ಲಿ ಇಲಚ್ ಪ್ರತ್ಯಯ. ನ್ಯಾಯಶಾಸ್ತ್ರಕ್ಕೆ ಆನ್ವೀಕ್ಷಿಕೀ ವಿದ್ಯಾ ಎಂದು ಹೆಸರು. ಪ್ರತ್ಯಕ್ಷಾಗಮ:ಗಳಿಂದ ಈಕ್ಷಿತವಾದುದಕ್ಕೆ ಅನ್ವೀಕ್ಷಣವೇ ಅನ್ವೀಕ್ಷಾ. ಪ್ರತ್ಯಕ್ಷಾಗಮಗಳಿಂದ ನಿಶ್ಚಿತವಾದುದನ್ನು ಪುನಃ ಪರಿಶೀಲಿಸುವುದೆಂದರ್ಥ. ಪ್ರತ್ಯಕ್ಷಾಗಮಾಶ್ರಿತವಾದ ಅನುಮಾನದಿಂದ ಪುನಃ ಈಕ್ಷಿಸುವುದು. ಅದರಿಂದ ಪ್ರವರ್ತಿಸಲ್ಪಟ್ಟದು ಆನ್ವೀಕ್ಷಕೀ ನ್ಯಾಯವಿದ್ಯೆಯೆಂದರ್ಥ. ಇದು ಸಕಲ ವಿದ್ಯೆಗಳಿಗೆ ದೀಪದಂತೆಯೇ, ಸರ್ವಕರ್ಮಾನುಷ್ಠಾನಕ್ಕೆ ಉಪಾಯವೂ, ಸರ್ವಧರ್ಮಗಳಿಗೆ ಆಶ್ರಯವೂ ಆಗಿರುತ್ತದೆಂದು ಅವರು ವಿವರಿಸುತ್ತಾರೆ.

ನನು ತತ್ತ್ವಜ್ಞಾನಾನ್ನಿಃ ಶ್ರೇಯಸಂ ಭವತೀತ್ಯುಕ್ತಮ್ । ತತ್ರ ಕಿಂ ತತ್ತ್ವ ಜ್ಞಾನಾದನಂತರಮೇವ ನಿಃ ಶ್ರೇಯಸಂ ಸಂಪದ್ಯತೇ । ನೇತ್ಯುಚ್ಯತೇ । ಕಿಂ ತು ತತ್ತ್ವಜ್ಞಾನಾದ್ದುಃಖಜನ್ಮಪ್ರವೃತ್ತಿದೋಷ ಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗ ಇತಿ । ತತ್ರ ಮಿಥ್ಯಾಜ್ಞಾನಂ ನಾಮ ಅನಾತ್ಮನಿ ದೇಹಾದಾವಾತ್ಮಬುದ್ಧಿಃ । ತದನುಕೂಲೇಷು ರಾಗಃ । ತತ್ - ಪ್ರತಿಕೂಲೇಷು ದ್ವೇಷಃ । ವಸ್ತುತಸ್ತು ಆತ್ಮನಃ ಪ್ರತಿಕೂಲಮನುಕೂಲಂವಾ ನ ಕಿಂಚಿದ್ವಸ್ತ್ವಸ್ತಿ । ಪರಸ್ಪರಾನು ಬಂಧಿತ್ವಾಚ್ಚ ರಾಗಾದೀನಾಂ ಮೂಢೋ ರಜ್ಯತಿ ರಕ್ತೋಮುಹ್ಯತಿ । ಮೂಢಃ ಕುಪ್ಯತಿ, ಕುಪಿತೋ ಮುಹ್ಯತೀತಿ । ತತಸ್ತೈರ್ದೋಷೈಃ ಪ್ರೇರಿತಃ ಪ್ರಾಣೇ ಪ್ರತಿಷಿದ್ಧಾನಿ ಶರೀರೇಣ ಹಿಂಸಾಸ್ತೇಯಾದೀನ್ಯಾ ಚರತಿ ವಾಚಾ ಅನೃತಾದೀನಿ । ಮನಸಾ ಪರದ್ರೋಹಾದೀನಿ । ಸೇಯಂ ಪಾಪರೂಪಾ ಪ್ರವೃತ್ತಿರಧರ್ಮಃ । ಶರೀರೇಣ ಪ್ರಶಸ್ತಾನಿ ದಾನಪರಪರಿತ್ರಾಣಾದೀನಿ । ವಾಚಾ ಹಿತಸತ್ಯಾದೀನಿ । ಮನಸಾ ಅಜಿಘಾಂಸಾದೀನಿ । ಸೇಯಂ ಪುಣ್ಯ ರೂಪಾ ಪ್ರವೃತ್ತಿರ್ಧರ್ಮಃ । ಸೇಯಮುಭಯೀ ಪ್ರವೃತ್ತಿಃ ॥

ತತ್ತ್ವಜ್ಞಾನದಿಂದ ಮೋಕ್ಷವುಂಟಾಗುತ್ತದೆಂದು ಹೇಳಿದೆಯಷ್ಟೆ. ಅಲ್ಲಿ ತತ್ತ್ವಜ್ಞಾನ ಉಂಟಾದ ಕೂಡಲೇ ಅವ್ಯವಧಾನದಿಂದ ಅದು ಪ್ರಾಪ್ತವಾಗುತ್ತದೆಯೇ ಎಂದು ಪ್ರಶ್ನೆ. ಇಲ್ಲವೆಂದು ಉತ್ತರ ತತ್ವಜ್ಞಾನದಿಂದ ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನಗಳಲ್ಲಿ ಉತ್ತರೋತ್ತರವು ನಷ್ಟವಾದಾಗ ಅದರ ಅವ್ಯವಹಿತಪೂರ್ವವು ನಷ್ಟವಾಗುವುದರಿಂದ ಮೋಕ್ಷವಾಗುತ್ತದೆಂದು ಸೂತ್ರದಲ್ಲಿ ಹೇಳಿದೆ. ದುಃಖಾದಿ ಪಂಚಕದಲ್ಲಿ ಪೂರ್ವಪೂರ್ವವನ್ನು ಕುರಿತು ಉತ್ತರೋತ್ತರವು ಕಾರಣವಾದುದರಿಂದ ಕಾರಣವಿಲ್ಲದಿದ್ದರೆ ಕಾರ್ಯವೂ ನಷ್ಟವಾಗುವುದರಿಂದ ಈ ಕ್ರಮವನ್ನು ಅನುಸರಿಸಿರುತ್ತಾರೆ. ಕ್ರಮವಾಗಿ ಅಂತಿಮವಾದ ಮಿಥ್ಯಾಜ್ಞಾನವು ತನಗೆ ಪೂರ್ವವಾದ ದೋಷಕ್ಕೆ ಕಾರಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಗೆಂದು ವಿವರಿಸುತ್ತಾನೆ. "ತತ್ರ—" ಇತಿ. ಮಿಥ್ಯಾಜ್ಞಾನವೆಂದರೆ ದೇಹ, ಸ್ತ್ರೀ ಪುತ್ರಧನಾದಿಗಳಲ್ಲಿ ತನ್ನದು (ತಾನು) ಎಂಬ ಬುದ್ಧಿ. ತದನುಕೂಲೇಷು — ದೇಹಾದಿಗಳಿಗೆ ಅನುಕೂಲವಾದ ಪದಾರ್ಥಗಳಲ್ಲಿ ರಾಗವೂ, ಪ್ರತಿಕೂಲವಾದವುಗಳಲ್ಲಿ ದ್ವೇಷ ಬುದ್ಧಿಯೂ ಉಂಟಾಗುತ್ತದೆ. "ವಸ್ತುತಃ—" ಇತಿ. ವಾಸ್ತವವಾಗಿ ಶರೀರೇಂದ್ರಿಯ ಮನೋಬುದ್ಧಿ ಪ್ರಾಣವ್ಯತಿರಿಕ್ತನಾಗಿ ಶರೀರದಲ್ಲಿರುವ ಆತ್ಮನಿಗೆ ಯಾವುದೂ ಪ್ರತಿಕೂಲ ವಾಗಲೀ ಅನುಕೂಲವಾಗಲೀ ಆಗಿರುವುದಿಲ್ಲ. ಆತ್ಮನಲ್ಲಿ ಒಂದು ದೋಷಸಂಬಂಧದಿಂದ ಇನ್ನೊಂದು ದೋಷ ತೋರುವುದೇ ವಿನಾ ನಿಜವಾಗಿ ಅವು ಆತ್ಮವಸ್ತು ಸ್ವರೂಪಸ್ಪರ್ಶ ವನ್ನು ಹೊಂದಿರುವುದಿಲ್ಲ. ಇದನ್ನೇ "ಪರಸ್ಪರಾ—" ವಾಕ್ಯದಿಂದ ವಿವರಿಸುತ್ತಾನೆ. ರಾಗಾದಿಗಳಿಂದ ಮೋಹಗೊಂಡು ಆಸಕ್ತಿ ಹೊಂದುತ್ತಾನೆ. ಆಸಕ್ತಿಯಿಂದ ಮೋಹಗೊಳ್ಳುತ್ತಾನೆ. ಮೋಹದಿಂದ ಕೋಪವೂ, ಕೋಪದಿಂದ ಮೋಹವೂ ಉಂಟಾಗುತ್ತವೆ. ಈ ದೋಷಗಳಿಂದ ಪ್ರೇರೇಪಿಸಲ್ಪಟ್ಟ ಜೀವನು ಶರೀರದಿಂದ ಪ್ರತಿಷಿದ್ಧವಾಗಿರುವ ಕಳ್ಳತನ ಮುಂತಾದವುಗಳನ್ನು ಮಾಡುತ್ತಾನೆ. ಮಾತಿನಿಂದ ಅಸತ್ಯಾದಿಗಳನ್ನೂ ಮನಸ್ಸಿನಿಂದ ಪರದ್ರೋಹಾದಿಗಳನ್ನೂ ಮಾಡುತ್ತಾನೆ. ಹೀಗೆ ಮಿಥ್ಯಾಜ್ಞಾನಮೂಲಕವಾಗಿ ದೋಷಗಳು ಸಂಭವಿಸುವುದರಿಂದ ಮಿಥ್ಯಾಜ್ಞಾನ ನಷ್ಟ ವಾದರೆ ದೋಷವೂ ಹೋಗುತ್ತದೆ. 'ಸೇಯಂ—' ಇತಿ. ಹಿಂದೆ ಹೇಳಿದವುಗಳು ಪಾಪರೂಪ ಪ್ರವೃತ್ತಿಯಾದುದರಿಂದ ಅಧರ್ಮಗಳಾಗುತ್ತವೆ. ಇಲ್ಲಿ ಪ್ರವೃತ್ತಿಪದದಿಂದ ಪ್ರವೃತ್ತಿಗೆ ಸಾಧನಗಳಾದ ಧರ್ಮಾಧರ್ಮಗಳೇ ಹೇಳಿವೆ. 'ಅನ್ನಂ ಪ್ರಾಣಿನಃ ಪ್ರಾಣಾಃ' ಎಂದು ಭಾಷ್ಯದಲ್ಲಿ ಹೇಳಿದೆ. ಅಲ್ಲಿ ಪ್ರಾಣಸಾಧನವಾದ ಅನ್ನದ ಅಭೇದ ಪ್ರಾಣಕ್ಕೆ ಹೇಳಿದೆ. ಅದರಂತೆ ಇಲ್ಲಿಯೂ ತಿಳಿಯಬೇಕು. ಧರ್ಮದಿಂದ ಪ್ರವೃತ್ತಿ ತೋರಿಸುತ್ತಾನೆ. 'ಶರೀರೇಣಾ—' ಇತಿ. ದಾನಪರೋಪಕಾರಾದಿಗಳನ್ನು ಶರೀರ ದಿಂದಲೂ, ಹಿತಸತ್ಯಾದಿಗಳನ್ನು ಮಾತಿನಿಂದಲೂ, ಯಾರಿಗೂ ದ್ರೋಹವೆಸಗ ಬಾರದೆಂದು ಮನಸ್ಸಿಂದಲೂ ಆಚರಿಸುತ್ತಾನೆ. ಇದೇ ಪುಣ್ಯರೂಪವಾದ ಪ್ರವೃತ್ತಿ. ಹೀಗೆ ಧರ್ಮಾಧರ್ಮಗಳಿಂದ ಉಭಯವಿಧಗಳಾದ ಪ್ರವೃತ್ತಿಯುಂಟಾಗುತ್ತವೆ.

ತತಃ ಸ್ವಾನುರೂಪಂ ಪ್ರಶಸ್ತಂ ನಿಂದಿತಂ ವಾ ಜನ್ಮ ಪುನಃ ಶರೀರಾದೇಃ ಪ್ರಾದುರ್ಭಾವಃ। ತಸ್ಮಿನ್ ಸತಿ ಪ್ರತಿಕೂಲವೇದನೀಯತಯಾ ಬಾಧನಾತ್ಮಕಂ ದುಃಖಂ ಭವತಿ। ನ ಹ್ಯಪ್ರವೃತ್ತಸ್ಯ ದುಃಖಂ ಪ್ರತ್ಯಾಪದ್ಯತ ಇತಿ ಕಶ್ಚಿತ್ ಪ್ರತಿಪದ್ಯತೇ। ತ ಇಮೇ ಮಿಥ್ಯಾಜ್ಞಾನಾದಯೋ ದುಃಖಾಂತಾ ಅವಿಚ್ಛೇದೇನ ಪ್ರವರ್ತ ಮಾನಾಃ ಸಂಸಾರಶಬ್ದಾರ್ಥೋ ಘಟೀಚಕ್ರವನ್ನಿರವಧಿರನುವರ್ತತೇ। ಯದಾ ಕಶ್ಚಿತ್ಪುರುಷಧೌರೇಯಃ ಪುರಾಕೃತಸುಕೃತಪರಿಪಾಕವಶಾದಾಚಾರ್ಯೋಪದೇಶೇನ ಸರ್ವಮಿದಂ ದುಃಖಾಯತನಂ ದುಃಖಾನುಷಕ್ತಂ ಚ ಪಶ್ಯತಿ ತದಾ ತತ್ಸರ್ವಂ ಹೇಯತ್ವೇನ ಬುಧ್ಯತೇ। ತತಸ್ತನ್ನಿವರ್ತಕಮವಿದ್ಯಾದಿ ನಿವರ್ತಯಿತುಮಿಚ್ಛತಿ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನ್ನಿನ್ನೃತ್ಯುಪಾಯಶ್ಚ ತತ್ತ್ವಜ್ಞಾನಮಿತಿ। ಕಸ್ಯಚಿತ್ತತಸ್ಯ ಭಿರ್ವಿಧಾಭಿರ್ವಿಭಕ್ತಂ
ಪ್ರಮೇಯಂ ಭಾವಯತಃ ಸಮ್ಯಗ್ದರ್ಶನಪದವೇದನೀಯತಯಾ ತತ್ತ್ವಜ್ಞಾನಂ
ಜ್ಞಾಯತೇ। ತತ್ತ್ವಜ್ಞಾನಾನ್ಮಿಥ್ಯಾಜ್ಞಾನಮಪೈತಿ। ಮಿಥ್ಯಾಜ್ಞಾನಾಪಾಯೇ
ದೋಷಾ ಅಪಯಾಂತಿ। ದೋಷಾಪಾಯೇ ಪ್ರವೃತ್ತಿರಪೈತಿ। ಪ್ರವೃತ್ತ್ಯಪಾಯೇ
ಜನ್ಮಾಪೈತಿ। ಜನ್ಮಾಪಾಯೇ ದುಃಖಮತ್ಯಂತಂ ನಿವರ್ತತೇ। ಸಾತ್ಯಂತಿಕೀ
ದುಃಖನಿವೃತ್ತಿರಪವರ್ಗಃ। ನಿವೃತ್ತೇರಾತ್ಯಂತಿಕತ್ವಂ ನಾಮ ನಿವರ್ತ್ಯ
ಸಜಾತೀಯಸ್ಯ ಪುನಸ್ತತ್ರಾನುತ್ಪಾದ ಇತಿ। ತಥಾ ಚ ಪಾರಮರ್ಷಂ ಸೂತ್ರಂ
'ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದ
ನಂತರಾಪಾಯಾದಪವರ್ಗಃ' (ಗೌ-ಸೂ ೧-೧-೨) ಇತಿ.

ಆಮೇಲೆ ಈ ಉಭಯವಿಧಪ್ರವೃತ್ತಿಗಳಿಂದ ತನತನಗೆ ಅನುರೂಪವಾಗಿ ಪ್ರಶಸ್ತ
ವಾದ ಅಥವಾ ನಿಂದಿತವಾದ ಜನ್ಮವುಂಟಾಗುತ್ತದೆ. ಅಂದರೆ ಶರೀರಧಾರಣೆಮಾಡು
ತ್ತಾನೆ. ಶರೀರ ಬಂದೊಡನೆ ಅನಿಷ್ಟವಾದವುಗಳನ್ನು ಹೊಂದಿ ದುಃಖವನ್ನನುಭವಿಸು
ತ್ತಾನೆ, ನಹಿ—ಇತಿ. ಪ್ರವೃತ್ತಿ ಇಲ್ಲದಿದ್ದರೆ ಪುನರ್ಜನ್ಮವಿಲ್ಲದಿರುವುದರಿಂದ ದುಃಖ
ಸಂಭವಕ್ಕೆ ಕಾರಣವಿಲ್ಲವಾದುದರಿಂದ ಯಾರೂ ದುಃಖವನ್ನು ಹೊಂದುವುದಿಲ್ಲ. 'ತ
ಇಮೇ'—ಇತಿ. ಈ ಮಿಥ್ಯಾಜ್ಞಾನವೇ ಆದಿಯಾಗಿ ದುಃಖವವರೆಗೆ ಇರುವ ಬಂಧಕ
ಗಳು ವಿಚ್ಛಿತ್ತಿಯಿಲ್ಲದೆ ಅನುಸರಿಸುವುದೇ ಸಂಸಾರ. ಇದು ಘಟೀಚಕ್ರದಂತೆ ಅವಧಿ
ಇಲ್ಲದೆ ತಿರುಗುತ್ತಾ ಅಂದರೆ ಪುನರಾವೃತ್ತವಾಗುತ್ತಾ ಇರುತ್ತದೆ. 'ಯದಾ'—ಇತಿ.
ಯಾವಾಗ ಒಬ್ಬ ಪುರುಷಶ್ರೇಷ್ಠನು ಹಿಂದೆ ಮಾಡಿರುವ ಸುಕೃತ ಪರಿಪಾಕದಿಂದ
ಆಚಾರ್ಯೋಪದೇಶವನ್ನು ಹೊಂದಿ ಈ ಸಂಸಾರವು ದುಃಖಮಯವಾದುದೆಂದೂ ದುಃಖಕ್ಕೆ
ಆಶ್ರಯವೆಂದೂ ತಿಳಿದು ಅವುಗಳಲ್ಲಿ ಹೇಯತ್ವಬುದ್ಧಿ ಹೊಂದುತ್ತಾನೆ. ಆಮೇಲೆ ಇವು
ಗಳನ್ನುಂಟುಮಾಡುವ ಅವಿದ್ಯಾದಿಗಳನ್ನು ಕಳೆದುಕೊಳ್ಳಲು ಬಯಸುತ್ತಾನೆ. ನಿವರ್ತಕಂ
—ಉತ್ಪಾದಕಮ್. ಅವಿದ್ಯಾ—ಮಿಥ್ಯಾಜ್ಞಾನಮ್. ಆದಿಪದದಿಂದ ದೋಷಾದಿ
ಗಳನ್ನು ತೆಗೆದುಕೊಳ್ಳಬೇಕು. ತತ್ತ್ವಜ್ಞಾನವೇ ಅವಿದ್ಯಾನಿವೃತ್ತ್ಯುಪಾಯವಾಗಿದೆ.
ಆಮೇಲೆ ನಾಲ್ಕು ರೀತಿಗಳಿಂದ ವಿಭಾಗ ಹೊಂದಿದ ಪ್ರಮೇಯವನ್ನು ಚಿಂತಿಸುತ್ತಾ
ಸಮ್ಯಗ್ದರ್ಶನವೆಂಬ ಪದದಿಂದ ತಿಳಿಯಲ್ಪಡುವ ತತ್ತ್ವಜ್ಞಾನವನ್ನು ಹೊಂದುತ್ತಾನೆ.
ಉದ್ದೇಶ, ಲಕ್ಷಣ, ಪರೀಕ್ಷಾ ವಿಭಾಗವೆಂದು ಪ್ರಮೇಯದ ನಾಲ್ಕು ರೀತಿಗಳು. ಅಥವಾ
ದುಃಖ, ದುಃಖಹೇತು, ಮೋಕ್ಷ, ಮೋಕ್ಷೋಪಾಯಗಳೆಂದು ನಾಲ್ಕು ರೀತಿ ತಿಳಿಯ
ಬೇಕು. ಇವುಗಳಲ್ಲಿ ದುಃಖವು ಪ್ರಸಿದ್ಧವಾಗಿದೆ. ಮಿಥ್ಯಾಜ್ಞಾನಾದಿ ಸಮಸ್ತ
ಸಂಸಾರವೇ ದುಃಖಹೇತು. ಆತ್ಯಂತಿಕದುಃಖನಾಶವೇ ಮೋಕ್ಷ. ತತ್ತ್ವಜ್ಞಾನವೇ
ಮೋಕ್ಷೋಪಾಯವಾಗುತ್ತದೆ. ಇದರಿಂದ ಮಿಥ್ಯಾಜ್ಞಾನವು ನಷ್ಟವಾಗುತ್ತದೆ. ಮಿಥ್ಯಾ
ಜ್ಞಾನನಾಶವಾದಾಗ ದೋಷಗಳೂ ನಾಶವಾಗುತ್ತವೆ. ದೋಷವಿಲ್ಲದಿರುವಾಗ ಪ್ರವೃತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯುಂಟಾಗುವುದಿಲ್ಲ. ಪ್ರವೃತ್ತಿಯಿಲ್ಲವಾದರೆ ಜನ್ಮವೂ ಸಂಭವಿಸುವುದಿಲ್ಲ. ಜನ್ಮ ಹೊಂದದಿರುವಾಗ ಆತ್ಯಂತಿಕದುಃಖನಾಶವಾಗುತ್ತದೆ. ಆತ್ಯಂತಿಕದುಃಖನಿವೃತ್ತಿಯೇ ಮೋಕ್ಷ. ಆತ್ಯಂತಿಕ ಪದಾರ್ಥವನ್ನು ವಿವರಿಸುತ್ತಾನೆ. 'ನಿವರ್ತ್ಯ'—ಇತಿ. ನಿವರ್ತ್ಯಂ—ದುಃಖ. ಅದರ ಸಜಾತೀಯವೆಂದರೆ ಇತರ ದುಃಖ. ಅದು ಮುಂದೆ ಆದೀತೆಂಬ ಸಂಭಾವನೆಯೂ ಇಲ್ಲದಂತೆ ದುಃಖನಾಶವಾಗಿರುವುದೆಂದರ್ಥ. ಇದನ್ನೇ ಸೂತ್ರರೂಪವಾಗಿ ಪರಮರ್ಷಿಗಳು ಹೇಳಿರುತ್ತಾರೆಂದು ಸೂತ್ರವನ್ನು ತೋರಿಸುತ್ತಾನೆ. 'ದುಃಖಜನ್ಮ'—ಇತಿ. ಇದರ ಸರಳಾರ್ಥವೇ ಹಿಂದೆ ವಿವರಿಸಿತೆ.

ನನು ದುಃಖಾತ್ಯಂತೋಚ್ಛೇದೋಽಪವರ್ಗ ಇತ್ಯೇತದದ್ಯಾಪಿ ಕಫೋಣಿಗುಡಾಯಿತಂ ವರ್ತತೇ । ತತ್ಕಥಂ ಸಿದ್ಧವತ್ಕೃತ್ಯ ವ್ಯವಹ್ರಿಯತ ಇತಿ ಚೇತ್ ನೈವಮ್ । ಸರ್ವೇಷಾಂ ಮೋಕ್ಷವಾದಿನಾಮಪವರ್ಗದಶಾಯಾಂ ಆತ್ಯಂತಿಕೀದುಃಖನಿವೃತ್ತಿರಸ್ತೀತ್ಯರ್ಥಸ್ಯ ಸರ್ವತಂತ್ರ ಸಿದ್ಧಾಂತಸಿದ್ಧತಯಾ ಘಂಟಾಪಥತ್ವಾತ್ । ತಥಾ ಹಿ ಆತ್ಮೋಚ್ಛೇದೋ ಮೋಕ್ಷ ಇತಿ ಮಾಧ್ಯಮಿಕಮತೇ ದುಃಖೋಚ್ಛೇದೋಽಸ್ತೀತ್ಯೇತಾವದವಿವಾದಮ್ ।

ಅಥ ಮನ್ಯೇಥಾಃ—ಶರೀರಾದಿವದಾತ್ಮಾಪಿ ದುಃಖಹೇತುತ್ವಾದುಚ್ಛೇದ್ಯ ಇತಿ ತನ್ನ ಸಂಗಚ್ಛತೇ । ವಿಕಲ್ಪಾನುಪಪತ್ತೇಃ । ಕಿಮಾತ್ಮಾ ಜ್ಞಾನಸಂತಾನೋಽವಿನಕ್ಷಿತಸ್ತದತಿರಿಕ್ತೋ ವಾ । ಪ್ರಥಮೇ ನ ವಿಪ್ರತಿಪತ್ತಿ । ಕಃ ಖಲ್ವನುಕೂಲಮಾಚರತಿ ಪ್ರತಿಕೂಲಮಾಚರೇತ್ । ದ್ವಿತೀಯೇ ತಸ್ಯ ನಿತ್ಯತ್ವೇ ನಿವೃತ್ತಿರಶಕ್ಯವಿಧಾನೈವ। ಅನಿತ್ಯತ್ವೇ ಪ್ರವೃತ್ತ್ಯನುಪಪತ್ತಿಃ । ವ್ಯವಹಾರಾನುಪಪತ್ತಿಶ್ಚಾಧಿಕಂ ದೂಷಣಮ್ । ನ ಖಲು ಕಶ್ಚಿತ್ ಪ್ರೇಕ್ಷಾವಾನಾತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತೀತಿ ಸರ್ವತಃ ಪ್ರಿಯತಮಸ್ಯಾತ್ಮನಃ ಸಮುಚ್ಛೇದಾಯ ಪ್ರಯತತೇ । ಸರ್ವೋ ಹಿ ಪ್ರಾಣೀ ಸತಿ ಧರ್ಮಿಣಿ ಮುಕ್ತ ಇತಿ ವ್ಯವಹರತಿ ನನು। ಧರ್ಮಿನಿವೃತ್ತೌ ನಿರ್ಮಲಜ್ಞಾನೋದಯೋ ಮಹೋದಯ ಇತಿ ವಿಜ್ಞಾನವಾದಿಮತೇ ಸಾಮಗ್ರ್ಯಭಾವಃ ಸಾಮಾನಾಧಿಕರಣ್ಯಾನುಪಪತ್ತಿಶ್ಚ । ಭಾವನಾಚತುಷ್ಟಯಂ ಹಿ ತಸ್ಯ ಕಾರಣಮಭೀಷ್ಟಮ್ । ತಚ್ಚ ಕ್ಷಣಭಂಗಪಕ್ಷೇ ಸ್ಥಿರೈಕಾಧಾರಸಂಭವಾಲ್ಲಂಘನಾಭ್ಯಾಸಾದಿವದನಾಸಾದಿತಪ್ರಕರ್ಷಂ ನ ಸ್ಫುಟಮಭಿಜ್ಞಾನಮಭಿಜನಯಿತುಂ ಪ್ರಭವತಿ । ಸೋಪಪ್ಲವಸ್ಯ ಜ್ಞಾನಸಂತಾನಸ್ಯ ಬದ್ಧತ್ವೇ ನಿರೂಪಪ್ಲವಸ್ಯ ಚ ಮುಕ್ತತ್ವೇ ಯೋ ಬದ್ಧಃ ಸ ಏವ ಮುಕ್ತ ಇತಿ ಸಾಮಾನಾಧಿಕರಣ್ಯಂ ನ ಸಂಗಚ್ಛತೇ ॥

ದುಃಖಾತ್ಯಂತವಿಚ್ಛೇದವೇ ಮೋಕ್ಷವೆಂದು ಹೇಳುವುದು ಹೇಗೆ ? ಅದು ಕಫೋಣಿಗುಡಾಯತವಾಗಿದೆ. ಕಫೋಣಿಯೆಂದರೆ ಭುಜದಮಧ್ಯದ ಭಾಗ. ಅಲ್ಲಿ ಗುಡವಿದೆಯೆಂಬ ಭ್ರಾಂತಿಯಿಂದ ಆಸ್ವಾದನೆ ಮಾಡುವುದೇ ಕಫೋಣಿಗುಡನ್ಯಾಯ. ಅಲ್ಲಿ ಗುಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲ್ಲ. ಹೀಗಿರುವಾಗ ಅದರ ಆಸ್ವಾದನೆ ಹೇಗೆ ಫಲವಿಲ್ಲವೋ ಅದರಂತೆ ಮೋಕ್ಷ ಸ್ವರೂಪವೂ ಅಸಿದ್ಧವಾದುದರಿಂದ ಅದರ ಉಪಾಯಾದಿಗಳನ್ನು ವಿಚಾರಿಸುವುದು ನಿಷ್ಫಲನೆಂದು ಶಂಕಿಸುವವನ ತಾತ್ಪರ್ಯ. ನೈವಂ ಎಂಬುದರಿಂದ ಸಮಾಧಾನ ತೋರಿಸುತ್ತಾನೆ. ಮೋಕ್ಷವಾದಿಗಳಾದ ಸಕಲಶಾಸ್ತ್ರಕಾರರೂ ಮೋಕ್ಷದಶೆಯಲ್ಲಿ ಆತ್ಯಂತಿಕದುಃಖನಿವೃತ್ತಿ ಇದೆಯೆಂಬುದನ್ನು ಒಪ್ಪಿರುವುದರಿಂದ ಇದು ಸರ್ವತಂತ್ರ ಸಿದ್ಧಾಂತವಾದ ವಿಷಯವಾಗಿದೆ. ಘಂಟಾಪಥವೆಂದರೆ ಘಂಟಾದಿಗಳಿಂದ ಕೂಡಿದ ಆನೆ ಮುಂತಾದವುಗಳ ಮಾರ್ಗ. ವಿಶಾಲ ವಾದ ರಾಜಮಾರ್ಗವೆಂದರ್ಥ. ರಾಜಬೀದಿಯಲ್ಲಿ ಯಾವ ಪ್ರತಿಬಂಧವೂ ಇರುವುದಿಲ್ಲ. ಹಾಗೆ ಇಲ್ಲಿ ದುಃಖವಿಲ್ಲವೆಂಬುದು ಎಲ್ಲರೂ ಅಂಗೀಕರಿಸಿರುವುದರಿಂದ ಇದನ್ನು ಹೊಂದಲು ಎಲ್ಲರೂ ಯತ್ನಿಸಬಹುದು. ಇದಕ್ಕೆ ಯಾವ ಪ್ರತಿಬಂಧಕವೂ ಇರುವುದಿಲ್ಲ. ಒಂದೊಂದೇ ಶಾಸ್ತ್ರದಲ್ಲಿ ಅದರ ಪ್ರಸಿದ್ಧಿಯನ್ನು ತೋರಿಸುತ್ತಾನೆ. ಬೌದ್ಧರಲ್ಲಿ ಮಾಧ್ಯ ಮಿಕರೆಂದು ಒಂದು ಪಂಗಡ. ಆತ್ಮೋಚ್ಛೇದವೇ ಮೋಕ್ಷವೆಂದು ಅವರ ಮತ. ಅಲ್ಲಿ ದುಃಖೋಚ್ಛೇದವಿದೆಯೆಂಬುದರಲ್ಲಿ ವಿವಾದವಿಲ್ಲ. ಆದರೆ ಅಲ್ಲಿ ಖಂಡನೀಯಾಂಶವಿದೆ. ಶರೀರಾದಿಗಳಂತೆ ಆತ್ಮನೂ ದುಃಖಹೇತುವಾದುದರಿಂದ ಉಚ್ಛೇದ್ಯನೆಂದುದು ಕೂಡುವು ದಿಲ್ಲ. 'ವಿಕಲ್ಪಾನುಪಪತ್ತೇಃ' ಎಂಬುದರಿಂದ ಅವನ ವಾದವನ್ನು ಖಂಡಿಸುತ್ತಾನೆ. 'ಕಿಂ'—ಇತಿ. ಜ್ಞಾನಸಂತಾನ ಅಂದರೆ ಪ್ರವಾಹವೇ ಆತ್ಮನೇ ? ಅಥವಾ ಅದರಿಂದ ಅತಿರಿಕ್ತನಾದವನೇ ? (ಜ್ಞಾನಾಶ್ರಯನೇ ಎಂದು ತಾತ್ಪರ್ಯ.) ಈ ವಿಕಲ್ಪ ಕೂಡುವು ದಿಲ್ಲ. 'ಪ್ರಥಮೇ'—ಇತಿ. ಜ್ಞಾನಪ್ರವಾಹವೇ ಆತ್ಮನೆಂಬುದರಲ್ಲಿ ವಿಪ್ರತಿಪತ್ತಿಯಿಲ್ಲ. ಆತ್ಮೋಚ್ಛೇದವೆಂದರೆ ಜ್ಞಾನೋಚ್ಛೇದವೆಂದು ಅರ್ಥವಾಗುತ್ತದೆ. ಮೋಕ್ಷದಲ್ಲಿ ಜ್ಞಾನ ನಾಶವು ನೈಯಾಯಿಕರಿಗೂ ಇಷ್ಟವಾದುದೇ. ಏಕೆಂದರೆ ಅವರು ಮೋಕ್ಷದಲ್ಲಿ ಜೀವನಿಗೆ ಪಾಷಾಣವಂತಿರುವ ಸ್ಥಿತಿಯನ್ನು ಅಂಗೀಕರಿಸಿರುತ್ತಾರೆ. 'ಕ'—ಇತಿ. ತನಗೆ ಅನುಕೂಲವನ್ನೇ ಮಾಡುವವನಿಗೆ ಪ್ರತಿಕೂಲಾಚರಣೆಯನ್ನು ಯಾರೂ ಮಾಡುವು ದಿಲ್ಲ. ಪ್ರಕೃತ ಮಾಧ್ಯಮಿಕನು ನೈಯಾಯಿಕನಿಗೆ ಅನುಕೂಲವನ್ನೇ ಹೇಳುವಾಗ ನೈಯಾಯಿಕನು ಅದಕ್ಕೆ ಪ್ರತಿಕೂಲವಾಗಿ ಖಂಡನೆ ಮಾಡುತ್ತಾನೆಯೇ? ಎಂದೂ ಇಲ್ಲ. ಎರಡನೇ ಮತದಲ್ಲಿ ಅಂದರೆ ಜ್ಞಾನಾತಿರಿಕ್ತನು ಆತ್ಮನಾಗಿ ಅವನು ನಿತ್ಯನೆಂದರೆ ಆಗ ಅವನನ್ನು ನಿವೃತ್ತಿಪಡಿಸುವುದು ಅಶಕ್ಯವೇ. ಅಶಕ್ಯ ಪ್ರತಿವಿಧಾನಾ ಎಂದರೆ ಮಾಡು ವುದು ಅಸಾಧ್ಯವೆಂದೇ ಅರ್ಥ. ಆಗ ಆತ್ಮೋಚ್ಛೇದವು ಅಸಂಭವವೇ ಆಗುತ್ತದೆ. ಅನಿತ್ಯನೆಂದರೆ ಆತ್ಮೋಚ್ಛೇದ ಪ್ರವೃತ್ತಿ ಕೂಡುವುದಿಲ್ಲ. ವ್ಯವಹಾರಾನುಪಪತ್ತಿಯೂ ಅಧಿಕದೂಷಣವಾಗುತ್ತದೆ. ಅದನ್ನೇ ಉಪಪಾದನೆ ಮಾಡುತ್ತಾನೆ.

'ನ ಖಲು'—ಇತಿ. ಬುದ್ಧಿ ಇರುವ ಯಾವ ಮನುಷ್ಯನೂ 'ಆತ್ಮನ ಕಾಮ ಕ್ಕೋಸ್ಕರ ಎಲ್ಲವೂ ಪ್ರಿಯವಾಗಿದೆ'ಯೆಂದು ಶಾಸ್ತ್ರ ತಿಳಿಸುವಂತೆ ಎಲ್ಲದಕ್ಕಿಂತಲೂ ಪ್ರಿಯ ತರವಾದ ಆತ್ಮನ ನಾಶಕ್ಕೋಸ್ಕರ ಪ್ರಯತ್ನಿಸುವುದಿಲ್ಲ ವ್ಯವಹಾರಾನುಪಪತ್ತಿ ತೋರಿಸು ತ್ತಾನೆ. 'ಸರ್ವಃ'—ಇತಿ ಎಲ್ಲರೂ ಶುಕನು ಮುಕ್ತನಾಗಿರುತ್ತಾನೆ. ವಾಮದೇವನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಕ್ತನಾಗಿರುತ್ತಾನೆ ಎಂದು ವ್ಯವಹರಿಸುತ್ತಾರೆ. ಹಾಗೆ ವ್ಯವಹರಿಸಬೇಕಾದರೆ ಮೋಕ್ಷರೂಪಧರ್ಮಕ್ಕೆ ಆಶ್ರಯವಾಗಿರುವ ಒಂದು ಧರ್ಮಿಯು ಇದ್ದೇ ಇರಬೇಕು. ಮೋಕ್ಷಾವಸ್ಥೆಯಲ್ಲಿ ಆತ್ಮನಾಶವನ್ನೊಪ್ಪುವುದಾದರೆ ಈ ವ್ಯವಹಾರ ಕೂಡುವುದು ಹೇಗೆ ? ಹೀಗೆ ವಿಜ್ಞಾನವಾದಿಗಳಾದ ಕೆಲವು ಬೌದ್ಧರು ಪ್ರತಿಪಾದಿಸಿರುವ ಮೋಕ್ಷಸ್ವರೂಪವೂ ಸರಿಯಲ್ಲವೆಂದು ಖಂಡಿಸುತ್ತಾರೆ. 'ಧರ್ಮಿನಿವೃತ್ತೌ'—ಇತಿ. ಅವರ ಮತದಲ್ಲಿ ಜ್ಞಾನವು ಸ್ವಾಭಾವಿಕವಾಗಿ ನಿರ್ಮಲವೂ ಕ್ಷಣಿಕವೂ ಆಗಿರುತ್ತದೆ. ಆಶ್ರಯನಾಗಿರುವ ಆತ್ಮನ ಸಂಬಂಧದಿಂದ ಅದರಲ್ಲಿ ಮಲವುಂಟಾಗುತ್ತದೆ. ಆಶ್ರಯ ನಿವೃತ್ತಿಯಾದಾಗ (ಧರ್ಮಿನಿವೃತ್ತಿ) ಉತ್ತರಕ್ಷಣದಲ್ಲಿ ಪ್ರತಿಕ್ಷಣದಲ್ಲಿಯೂ ನಿರ್ಮಲವಾದ ಜ್ಞಾನವು ಹುಟ್ಟುತ್ತದೆ. ಇದಕ್ಕೆ ಮಹೋದಯವೆಂದು ಕರೆಯುತ್ತಾರೆ. ಇದೇ ಮೋಕ್ಷ. ಇವರ ಮತದಲ್ಲಿ ಸಾಮಗ್ರಿ ಇಲ್ಲದಿರುವುದು (ಕಾರಣಾಭಾವ) ಸಾಮಾನಾಧಿಕರಣ್ಯಾನುಪಪತ್ತಿ ಹೀಗೆ ಎರಡು ದೋಷಗಳು ಸಂಭವಿಸುತ್ತವೆ. ಭಾವನಾಚತುಷ್ಟಯವನ್ನು ಕಾರಣವನ್ನಾಗಿ ಹೇಳಬೇಕು. ಎಲ್ಲವೂ ದುಃಖ, ಕ್ಷಣಿಕ, ಸ್ವಲಕ್ಷಣ, ಶೂನ್ಯ ಎಂದು ಭಾವಿಸುವುದೇ ಭಾವನಾ ಚತುಷ್ಟಯ. ಸಾಮಾನ್ಯ ಭಾವನೆಯುಂಟಾದರೆ ಪ್ರತ್ಯಭಿಜ್ಞಾ ಉಂಟಾಗಲಾರದು. (ಅದೇ ಇದೆಂಬ ದೃಢಜ್ಞಾನ). 'ತಚ್ಚ' — ಇತಿ. ಕ್ಷಣಭಂಗಪಕ್ಷದಲ್ಲಿ ಸ್ಥಿರವಾದ ಒಂದು ಆಧಾರವಿಲ್ಲದಿರುವುದರಿಂದ ಲಂಘನಾಭ್ಯಾಸಾದಿಗಳಂತೆ ಪ್ರಕರ್ಷಸಾಧನೆಯಾಗದಿರುವುದರಿಂದ ಸ್ಫುಟವಾದ ಅಭಿಜ್ಞಾನವನ್ನು ಹುಟ್ಟಿಸಲಾರದು. ಸ್ಫುಟಲಕ್ಷಣರಹಿತವಾದ ಒಂದು ಮಣಿಯಲ್ಲಿ ಇದು ಮಣಿಯೆಂಬ ಸಾಮಾನ್ಯೋಕ್ತಿಯಿಂದ ಮಣಿತ್ವರೂಪಭಾವನೆಯುಂಟಾದರೂ ತದ್ವಿಶಿಷ್ಟಜ್ಞಾನವಾಗುವುದಿಲ್ಲ. ಪುನಃ ಪುನಃ ನೋಡುವ ಅಭ್ಯಾಸದಿಂದ ಪ್ರಕೃಷ್ಟಭಾವನೆಯುಂಟಾದಾಗ ಮಾತ್ರ ಪ್ರತ್ಯಭಿಜ್ಞಾ ಹುಟ್ಟುತ್ತದೆ. ಹೀಗೆಯೇ ಹಾರುವುದರಲ್ಲಿಯೂ ದಿನದಿನವೂ ಅಭ್ಯಾಸದಿಂದ ಪ್ರಕರ್ಷ ಲಭಿಸುತ್ತದೆ. ಹೀಗಿರುವಾಗ ಈ ಬೌದ್ಧರ ಮತದಲ್ಲಿ ಭಾವನಾಚತುಷ್ಟಯದ ಪ್ರಕರ್ಷಭಾವನೆಯುಂಟಾಗಲಾರದು. ಏಕೆಂದರೆ ಅವರ ಮತದಲ್ಲಿ ಭಾವನೆಗೆ ಆಧಾರವಾಗಿ ಸ್ಥಿರವಾಗಿರುವ ಒಂದು ಪದಾರ್ಥವೂ ಇರುವುದಿಲ್ಲ. ಪ್ರತಿಕ್ಷಣವೂ ಆತ್ಮನು ಭಿನ್ನನಾಗಿರುತ್ತಾನೆ. ಆದುದರಿಂದ ಸಕಲ ಪದಾರ್ಥಗಳ ದುಃಖಕ್ಷಣಿಕತ್ವಲಕ್ಷಣ ಶೂನ್ಯತ್ವಪ್ರತಿಭಿಜ್ಞಾ ಉಂಟಾಗದಿರುವುದರಿಂದ ಸಾಮಗ್ರಿ ಸಂಭವಿಸುವುದಿಲ್ಲ. ಸಾಮಾನಾಧಿಕರಣ್ಯಾನುಪಪತ್ತಿಯನ್ನು ತೋರಿಸುತ್ತಾನೆ. 'ಸೋಪಪ್ಲವ'—ಇತಿ. ಆಶ್ರಯಸಂಬದ್ಧವಾಗಿ ಮಲಸಹಿತವಾದ ಜ್ಞಾನ ಪ್ರವಾಹವೇ ಸೋಪಪ್ಲವ. ತದ್ಭಿನ್ನವಾದುದು ನಿರುಪಪ್ಲವ. ಆತ್ಮ ಕ್ಷಣಿಕನಾದುದರಿಂದ ಸೋಪಪ್ಲವನು ಬದ್ಧನು ನಿರುಪಪ್ಲವನು ಮುಕ್ತನು ಎಂದು ತೋರಿಸುವುದು ಹೇಗೆ ? ಹೀಗೆ ಸಾಮಾನಾಧಿಕರಣ್ಯವೂ ಸಂಭವಿಸದಿರುವುದರಿಂದ ಅವರ ಮತದಲ್ಲಿಯೂ ಮೋಕ್ಷವು ಕೂಡುವುದಿಲ್ಲ.

ಆವರಣ ಮುಕ್ತಿರ್ಮುಕ್ತಿರಿತಿ ಜೈನಜನಾಭಿಮತೋಽಪಿ ಮಾರ್ಗೋ ನ ನಿಸರ್ಗತೋ ನಿರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರ್ಗಲಃ । ಅಂಗ ಭವಾನ್ ಪೃಷ್ಟೋ ವ್ಯಾಚಷ್ಟಾಂ ಕಿಮಾವರಣಮ್ । ಧರ್ಮಾ ಧರ್ಮ ಭ್ರಾಂತಯ ಇತಿ ಚೇತ್—ಇಷ್ಟಮೇವ । ಅಥ ದೇಹಮೇವಾವರಣಂ, ತಥಾ ಚ ತನ್ನಿವೃತೌ ಪಂಜರಾನ್ಮುಕ್ತಸ್ಯ ಶುಕಸ್ಯೇವಾತ್ಮನಃ ಸತತೋರ್ಧ್ವ ಗಮನಂ ಮುಕ್ತಿರಿತಿ ಚೇತ್-ತದಾ ವಕ್ತವ್ಯಮ್ । ಕಿಮಯಮಾತ್ಮಾ ಮೂರ್ತಃ, ಅಮೂರ್ತೋವಾ । ಪ್ರಥಮೇ ನಿರವಯವಃ ಸಾವಯವೋವಾ । ನಿರವಯವತ್ವೇ ನಿರವಯವೋ ಮೂರ್ತಃ ಪರಮಾಣುರಿತಿ ಪರಮಾಣುಲಕ್ಷಣಾಪತ್ಯಾ ಪರ ಮಾಣುಧರ್ಮವದಾತ್ಮಧರ್ಮಾಣಾಮತೀಂದ್ರಿಯತ್ವಂ ಪ್ರಸಜೇತ್ । ಸಾವ ಯವತ್ವೇ ಯತ್ಸಾವಯವಂ ತದನಿತ್ಯಮಿತಿ ಪ್ರತಿಬಂಧಬಲೇನ ಅನಿತ್ಯತ್ವಾಪತ್ತೌ ಕೃತಪ್ರಣಾಶಾಕೃತಾಭ್ಯಾಗಮೌ ನಿಷ್ಪ್ರತಿಬಂಧೌ ಪ್ರಸರೇತಾಮ್ । ಅಮೂ ರ್ತತ್ವೇ ಗಮನಮನುಪಪನ್ನಮೇವ। ಚಲನಾತ್ಮಿಕಾಯಃ ಕ್ರಿಯಾಯಾಮೂರ್ತತ್ವ ಪ್ರತಿಬಂಧಾತ್ ॥

ಜೈನರಿಗೆ ಅಭಿಮತವಾದ ಮೋಕ್ಷಸ್ವರೂಪವನ್ನು ಖಂಡಿಸುತ್ತಾನೆ. 'ಆವರಣ'— ಇತಿ. ಆವರಣ ಮುಕ್ತಿಯೇ ಮುಕ್ತಿಯೆಂದು ಜೈನರು ಹೇಳುವ ಮಾರ್ಗವೂ ಸ್ವಭಾವ ದಿಂದ ತಡೆಯಿಲ್ಲದ್ದೆಂದು ಹೇಳಲು ಸಾಧ್ಯವಿಲ್ಲ. ನಿರರ್ಗಲಃ—ಪ್ರತಿಬಂಧರಹಿತಃ. ನಾವು ಹೇಳುವುದಕ್ಕೆ ಉತ್ತರ ಹೇಳು. ಆವರಣವೆಂದರೇನು ? ಧರ್ಮಾಧರ್ಮ ಭ್ರಾಂತಿಯೇ ಆವರಣವೆನ್ನುವುದಾದರೆ ಅದು ನಮಗೂ ಇಷ್ಟವಾದುದೇ. ದೇಹವೇ ಆವರಣ. ಅದು ನಿವೃತ್ತವಾದರೆ ಪಂಜರದಿಂದ ಮುಕ್ತವಾದ ಗಿಣಿಯಂತೆ ಆತ್ಮನಿಗೆ ಸತತವಾಗಿ ಊರ್ಧ್ವಗಮನವುಂಟಾಗುತ್ತದೆ. ಅದೇ ಮುಕ್ತಿ ಎಂದು ಹೇಳಿದರೆ ಆಗ ಹೀಗೆ ಕೇಳಬೇಕಾಗಿದೆ. ಊರ್ಧ್ವಗಮನವನ್ನು ಹೊಂದುವ ಆತ್ಮನು ಮೂರ್ತನೇ ಅಮೂರ್ತನೇ ? ಮೂರ್ತನೆನ್ನುವುದಾದರೆ ನಿರವಯವನೇ-ಸಾವಯವನೇ ? ನಿರವಯವ ವಾದ ಮೂರ್ತನೆನ್ನುವುದಾದರೆ ಪರಮಾಣುವಾಗುತ್ತಾನೆ. ಅವಯವರಹಿತವಾಗಿ ಮೂರ್ತವಾಗಿರುವುದು ಪರಮಾಣು. ಆಗ ಪರಮಾಣುಧರ್ಮಗಳಂತೆ ಆತ್ಮನಧರ್ಮ ಗಳೂ ಅತೀಂದ್ರಿಯವಾಗಬೇಕಾಗುತ್ತನೆ. ಸಾವಯವನೆಂದು ಒಪ್ಪುವುದಾದರೆ 'ಯತ್ಸಾ ವಯವಂ ತದನಿತ್ಯಂ' ಎಂದು ಪ್ರತಿಬಂಧ (ವ್ಯಾಪ್ತಿ) ಇರುವುದರಿಂದ ಆತ್ಮನು ಅನಿತ್ಯ ನಾಗುತ್ತಾನೆ. ಆಗ ಯಾವ ಪ್ರತಿಬಂಧಕಗಳೂ ಇಲ್ಲದೆ ಕೃತಪ್ರಣಾಶ ಅಕೃತಾಭ್ಯಾ ಗಮ ದೋಷಗಳು ಬರುತ್ತವೆ. (ಒಬ್ಬನು ಮಾಡಿದ ಕರ್ಮಕ್ಕೆ ಫಲವಿಲ್ಲದಿರುವುದು, ಇನ್ನೊಬ್ಬನು ಕರ್ಮಮಾಡದೆ ಫಲ ಅನುಭವಿಸುವುದು.) ಅಮೂರ್ತವೆಂದು ಒಪ್ಪುವು ದಾದರೆ ಆಗ ಗಮನ ಕೊಡುವುದಿಲ್ಲ. 'ಚಲನಾತ್ಮಿಕಾಯಾಃ'—ಇತಿ. ಕ್ರಿಯಾ ಚಲನಸ್ವರೂಪವಾದುದರಿಂದ ಅದು ಮೂರ್ತತ್ವ ವ್ಯಾಪ್ಯವಾಗುತ್ತದೆ. 'ಎಲ್ಲೆಲ್ಲಿ ಕ್ರಿಯೆ ಇದೆಯೋ ಅಲ್ಲಲ್ಲಿ ಮೂರ್ತತ್ವ' ಎಂದು ವ್ಯಾಪ್ತಿ. ಹೀಗೆ ಕ್ರಿಯೆಯು ಮೂರ್ತತ್ವ ವ್ಯಾಪ್ಯವಾದುದರಿಂದ ವ್ಯಾಪಕವಾದ ಮೂರ್ತತ್ವವು ಆತ್ಮನಲ್ಲಿ ಇಲ್ಲದಿರುವುದರಿಂದ ವ್ಯಾಪ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ಕ್ರಿಯೆಯೂ ಅವನಲ್ಲಿ ಸಂಭವಿಸದಿರುವುದರಿಂದ ಊರ್ಧ್ವಗಮನವು ಕೂಡುವುದಿಲ್ಲ. ಹೀಗೆ ಇವರ ಮೋಕ್ಷಸ್ವರೂಪವು ಅಸಂಗತವಾಗಿದೆ.

ಪಾರತಂತ್ರ್ಯಂ ಬಂಧಃ ಸ್ವಾತಂತ್ರ್ಯಂ ಮೋಕ್ಷ ಇತಿ ಚಾರ್ವಾಕಪಕ್ಷೇಽಪಿ ಸ್ವಾತಂತ್ರ್ಯಂ ದುಃಖನಿವೃತ್ತಿಶ್ಚೇತ್—ಅವಿವಾದಃ । ಐಶ್ವರ್ಯಂ ಚೇತ್—ಸಾತಿಶಯತಯಾ ಸವೃಕ್ಷತಯಾ ಚ ಪ್ರೇಕ್ಷಾವತಾಂ ನಾಭಿಮತಮ್ ।

ಚಾರ್ವಾಕಸಮ್ಮತವಾದ ಮೋಕ್ಷಸ್ವರೂಪದಲ್ಲಿಯೂ ದುಃಖೋಚ್ಛೇದವಿದೆಯೆಂದು ತೋರಿಸುತ್ತಾನೆ. 'ಪಾರತಂ'—ಇತಿ. ಇನ್ನೊಬ್ಬರ ಅಧೀನತೆಯೇ ಬಂಧ ಸ್ವಾತಂತ್ರ್ಯವೇ ಮೋಕ್ಷವೆಂದು ಅವರ ಸಿದ್ಧಾಂತ, ಸ್ವಾತಂತ್ರವೆಂದರೆ ದುಃಖನಿವೃತ್ತಿಯೆಂಬ ಅರ್ಥವನ್ನು ಹೇಳುವುದಾದರೆ ಆಗ ಅಲ್ಲಿ ವಿವಾದವಿಲ್ಲ. ಅದು ನಮಗೂ ಇಷ್ಟವಾದುದೇ. ಐಶ್ವರ್ಯವೆಂದರೆ ಅದರಲ್ಲಿ ತಾರತಮ್ಯ ಸಾದೃಶ್ಯಗಳಿರುವುದರಿಂದ ವಿಚಾರಶೀಲರಿಗೆ ಅದು ಅಭಿಮತವಾಗುವುದಿಲ್ಲ. ನಿರತಿಶಯ, ನಿರುಪಮವಾದುದೇ ಮೋಕ್ಷವೆಂದು ಅವರ ಸಿದ್ಧಾಂತ. ಹೀಗಿರುವಾಗ ಜೀವನ ಐಶ್ವರ್ಯವು ಎಂದೂ ಈ ಎರಡು ಗುಣಗಳಿಂದ ಕೂಡಿರಲಾರದು. ಸಾಮಾನ್ಯಜನ ಅಧಿಕಾರಿ ರಾಜಭೇದದಿಂದ ಅದು ತರತಮ ಭಾವದಿಂದ ಕೂಡಿರುತ್ತದೆ. ಕೆಲವುಕಡೆ ಐಶ್ವರ್ಯವೇ ಇಲ್ಲದಿರಬಹುದು. ಶರೀರ ಧಾರಣ ತ್ಯಾಗಾದಿಗಳಲ್ಲಿ ಸರ್ವಪ್ರಾಣಿಗಳೂ ಈಶ್ವರ ಅಂದರೆ ಸಮರ್ಥವಾಗಿರುತ್ತವೆ. ಹೀಗೆ ಚಾರ್ವಾಕಾಭಿಮತ ಮೋಕ್ಷವೂ ಸಂಗತವಾಗುವುದಿಲ್ಲ.

ಪ್ರಕೃತಿ ಪುರುಷಾನ್ಯತ್ವಖ್ಯಾತೌ ಪ್ರಕೃತ್ಯುಪರಮೇ ಪುರುಷಸ್ಯ ಸ್ವರೂಪೇಣಾವಸ್ಥಾನಂ ಮುಕ್ತಿರಿತಿ ಸಾಂಖ್ಯಾಖ್ಯಾತೇಽಪಿ ಪಕ್ಷೇ ದುಃಖೋಚ್ಛೇದೋಽಸ್ತ್ಯೇವ । ವಿವೇಕಜ್ಞಾನಂ ಪುರುಷಾಶ್ರಯಂ ಪ್ರಕೃತ್ಯಾಶ್ರಯಂ ವೇತ್ಯೇತಾವದವಶಿಷ್ಯತೇ । ತತ್ರ ಪುರುಷಾಶ್ರಯಮಿತಿ ನ ಶ್ಲಿಷ್ಯತೇ । ಪುರುಷಸ್ಯ ಕೌಟಸ್ಥ್ಯಾವಸ್ಥಾನನಿರೋಧಾಪಾತಾತ್ । ನಾಪಿ ಪ್ರಕೃತ್ಯಾಶ್ರಯಃ । ಅಚೇತನತ್ವಾತ್ತಸ್ಯಾಃ । ಕಿಂ ಚ ಪ್ರಕೃತಿಃ ಪ್ರವೃತ್ತಿಸ್ವಭಾವಾ ನಿವೃತ್ತಿಸ್ವಭಾವಾ ವಾ । ಆದ್ಯೇಽನಿರ್ಮೋಕ್ಷಃ । ಸ್ವಭಾವಸ್ಯಾನಪಾಯಾತ್ । ದ್ವಿತೀಯೇ ಸಂಪ್ರತಿ ಸಂಸಾರೋಽಸ್ತ ಮಿಯಾತ್।

ಸಾಂಖ್ಯಮತದಲ್ಲಿಯೂ ಮೋಕ್ಷದಲ್ಲಿ ದುಃಖೋಚ್ಛೇದವಿದೆಯೆಂದು ತೋರಿಸುತ್ತಾನೆ. 'ಪ್ರಕೃತಿ'—ಇತಿ. ಸಮಸ್ತಜಡವರ್ಗದ ಮೂಲಕಾರಣವಾಗಿ, ಅಚೇತನವೂ ತ್ರಿಗುಣಾತ್ಮಕವೂ ಆಗಿರುವ ಪ್ರಧಾನವೇ ಪ್ರಕೃತಿ. ಜೀವನೇ ಪುರುಷ. ಇವರ ಅನ್ಯತ್ವವೆಂದರೆ ವಿವೇಕ ಭೇದ. ಅದರ ಖ್ಯಾತಿಯೆಂದರೆ ಪ್ರತೀತಿ—ಸಾಕ್ಷಾತ್ಕಾರ. ಇದು ಆದಾಗ ಪ್ರಕೃತ್ಯುಪರಮದಿಂದ ಪುರುಷನು ಸ್ವಸ್ವರೂಪದಿಂದ ಇರುತ್ತಾನೆ. ಇದೇ ಮೋಕ್ಷ. ಇಂತಹ ಮೋಕ್ಷಕಾಲದಲ್ಲಿ ದುಃಖೋಚ್ಛೇದವಿರುತ್ತದೆ. ಆದರೆ ಇಲ್ಲಿ ವಿವೇಕಜ್ಞಾನವು ಪುರುಷಾ (ಜೀವ) ಶ್ರಯವೇ ಅಥವಾ ಪ್ರಕೃತ್ಯಾಶ್ರಯವೇ ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಚಾರಿಸಬೇಕು. ಪುರುಷಾಶ್ರಯವೆಂದರೆ ಅದು ಕೊಡುವುದಿಲ್ಲ ಅವನ ಮೂಲ ಸ್ವರೂಪದಿಂದ ಯಾವಾಗಲೂ ಏಕರೂಪದಿಂದ ಇರುತ್ತಾನೆಂಬ ಸಾಂಖ್ಯ ಸಿದ್ಧಾಂತ ಭಂಗವುಂಟಾಗುತ್ತದೆ. ಇದೇ ಕೌಟಸ್ಥ್ಯಾವಸ್ಥಾನ. ಪ್ರಕೃತ್ಯಾಶ್ರಯವೆಂದೂ ಹೇಳಲು ಸಾಧ್ಯವಿಲ್ಲ. ಅಚೇತನವಾದ ಪ್ರಕೃತಿಗೆ ವಿವೇಕಜ್ಞಾನ ಕೊಡುವುದಿಲ್ಲ. ಇದೂ ಅಲ್ಲದೆ ಪ್ರಕೃತಿಯು ಪ್ರವೃತ್ತಿಸ್ವಭಾವವುಳ್ಳದ್ದೇ? ನಿವೃತ್ತಿಸ್ವಭಾವವುಳ್ಳದ್ದೇ ? ಎಂದು ವಿಚಾರಿಸಿದರೆ ಎರಡೂ ಸಮಂಜಸವಾಗಿ ತೋರುವುದಿಲ್ಲ. ಸದಾಪ್ರವೃತ್ತಿಯೆಂದರೆ ಉಪರಮಾವಸ್ಥೆ ಇಲ್ಲದಿರುವುದರಿಂದ ಮೋಕ್ಷವಿಲ್ಲದೇ ಹೋಗಬೇಕಾಗುತ್ತದೆ. ಸ್ವಭಾವವನ್ನು ಅತಿಕ್ರಮಿಸುವುದು ಸಾಧ್ಯವಿಲ್ಲ. ನಿವೃತ್ತಿಸ್ವಭಾವವೆಂದರೆ ಈಗಲೂ ಸಂಸಾರವಿಲ್ಲದೇ ಹೋಗಬೇಕಾಗುತ್ತದೆ. ಆದುದರಿಂದ ಅವರ ಪ್ರಕ್ರಿಯೆಯೂ ಸಮಂಜಸವಲ್ಲ.

ನಿತ್ಯ ನಿರತಿಶಯ ಸುಖಾಭಿವ್ಯಕ್ತಿರ್ಮುಕ್ತಿರಿತಿ ಭಟ್ಟಸರ್ವಜ್ಞಾದ್ಯಭಿಮತೇಽಪಿ ದುಃಖನಿವೃತ್ತಿರಭಿಮತೈವ । ಪರಂತು ನಿತ್ಯಸುಖಂ ನ ಪ್ರಮಾಣಪದ್ಧತಿಮಧ್ಯಾಸ್ತೇ । ಶ್ರುತಿಸ್ತತ್ರ ಪ್ರಮಾಣಮಿತಿ ಚೇತ್—ನ । ಯೋಗ್ಯಾನುಪಲಬ್ಧಿಭಾಧಿತೇ ತದನವಕಾಶಾತ್ । ಅವಕಾಶೇ ವಾ ಗ್ರಾವಪ್ಲವೇಽಪಿ ತಥಾಭಾವಪ್ರಸಂಗಾತ್ ॥

ನಿತ್ಯವಾಗಿ ನಿರತಿಶಯವಾದ ಸುಖಾಭಿವ್ಯಕ್ತಿಯೇ ಮೋಕ್ಷವೆಂಬ ಮೀಮಾಂಸಕ ಮತದಲ್ಲಿಯೂ ದುಃಖನಿವೃತ್ತಿ ಇದ್ದೇ ಇದೆ. ಅಲ್ಪ ದುಃಖವಿದ್ದರೂ ನಿರತಿಶಯ ಸುಖವು ಸಂಭವಿಸಲಾರದು. 'ಪರಂ'—ಇತಿ. ಆದರೆ ನಿತ್ಯಸುಖವಿದೆಯೆಂಬುದರಲ್ಲಿ ಯಾವ ಪ್ರಮಾಣವೂ ಇಲ್ಲ. "ಸೋಽಶ್ನುತೇ ಸರ್ವಾನ್‌ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ" (ತೈ ೨-೧) ಎಂಬ ಶ್ರುತಿಯಲ್ಲಿ ಮೋಕ್ಷದಲ್ಲಿ ಸಕಲಕಾಮಪ್ರಾಪ್ತಿ ಹೇಳಿರುವುದರಿಂದ ನಿತ್ಯ ಸುಖವಿದೆಯೆಂಬುದರಲ್ಲಿ ಪ್ರಮಾಣವಾಗುವುದಿಲ್ಲವೇ ? ಎಂದರೆ ಅದು ಮುಖ್ಯಾರ್ಥ ಬೋಧಕವಾಗದಿರುವುದರಿಂದ ಪ್ರಮಾಣವಾಗಲಾರದು. ಯೋಗ್ಯಾನುಪಲಬ್ಧಿಯಿಂದ ಅದು ಬಾಧಿತವಾಗಿದೆ. ಶ್ರುತಿಪ್ರತಿಪಾದಿತಾರ್ಥಕ್ಕೆ ಬಾಧವಿರುವುದಾದರೆ ಆಗ ಅದು ಗೌಣವಾಗುವುದರಿಂದ ಶ್ರುತಿಗೆ ಅಲ್ಲಿ ಅವಕಾಶವಿರುವುದಿಲ್ಲ. ಅದು ಗೌಣವೆಂದು ಸಂಬಂಧಕಲ್ಪಿಸಬೇಕು. 'ಆತ್ಮನ ಆಕಾಶಃ ಸಂಭೂತಃ' (ತೈ-೨-೧)ಎಂದು ಶ್ರುತಿ ಹೇಳುತ್ತದೆ. ಇಲ್ಲಿ ಅವಯವಗಳಿಲ್ಲದೆ ಆಕಾಶಕ್ಕೆ ಉತ್ಪತ್ತಿಯನ್ನು ಶ್ರುತಿ ಹೇಳುವುದರಿಂದ ಬಾಧಿತವಿಷಯವಾಗಿದೆ. ಆಗ ಸಂಭೂತಃ ಎಂಬ ಪದಕ್ಕೆ ಅಭಿವ್ಯಕ್ತವಾಗಿದೆಯೆಂಬ ಗೌಣಾರ್ಥವನ್ನಂಗೀಕರಿಸಿ ಉಪಪಾದನೆ ಮಾಡಬೇಕು. ಹಾಗೆಯೇ ಇಲ್ಲಿಯೂ ಮೋಕ್ಷಾವಸ್ಥೆಯಲ್ಲಿ ಶರೀರೇಂದ್ರಿಯ ಸಂಬಂಧಗಳಿಲ್ಲದಿರುವುದರಿಂದ ಸುಖೋಲಬ್ಧಿ ಕೊಡದಿರುವುದರಿಂದ ಶ್ರುತಿಯು ಬಾಧಿತವಿಷಯಕವಾಗುವುದರಿಂದ ಗೌಣಾರ್ಥವನ್ನು ಸ್ವೀಕರಿಸಿ ಹೇಗಾದರೂ ಯೋಜನೆ ಮಾಡಬೇಕು. ಸರ್ವಕಾಮಾವಾಪ್ತಿಯೆಂಬುದಕ್ಕೆ ಸರ್ವಕಾಮಾನವಾಪ್ತ್ಯಭಾವವೆಂದು ಅರ್ಥ. ಶರೀರೇಂದ್ರಿಯರಹಿತನಾದ ಆತ್ಮನಿಗೆ ಮೋಕ್ಷದೆಶೆಯಲ್ಲಿ ಕಾಮವೇ ಇರುವುದಿಲ್ಲ. ಆದುದರಿಂದ ಕಾಮಾನವಾಪ್ತ್ಯಭಾವವೆಂದು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಅರ್ಥ ಕಲ್ಪಿಸಲೇಬೇಕು. ಅದೂ ಅಲ್ಲದೇ ಆ ಶ್ರುತಿಯಲ್ಲಿ 'ಸಹ ಅಶ್ನುತೇ' ಎಂದು ಹೇಳಿದೆ. ಸಹ ಎಂದರೆ ಏಕಕಾಲದಲ್ಲಿ ಎಂದರ್ಥ. ಸಕಲೇಂದ್ರಿಯಗಳಿಂದ ಏಕಕಾಲದಲ್ಲಿ ಸರ್ವವಿಷಯಭೋಗವು ಎಂದೂ ಕೂಡುವುದಿಲ್ಲ. ಏಕೆಂದರೆ ಮನಸ್ಸು ಅಣು ಎಂದು ಸಿದ್ಧಾಂತಿತವಾಗಿದೆ. ಅದು ಎಲ್ಲಾ ಇಂದ್ರಿಯಗಳೊಡನೆ ಸೇರುವುದು ಹೇಗೆ? 'ಅವಕಾಶೇ' —ಇತಿ. ಇಲ್ಲಿ ಬಾಧಿತವಾದರೂ ಮುಖ್ಯಾರ್ಥವನ್ನೇ ಸ್ವೀಕರಿಸಬೇಕು ಎಂದು ಹೇಳುವುದಾದರೆ 'ಗ್ರಾವಾಣಃ ಪ್ಲವಂತೇ' ಎಂಬಲ್ಲಿಯೂ ಮುಖ್ಯಾರ್ಥ ಸ್ವೀಕಾರಮಾಡಿ ಅದೂ ಪ್ರಮಾಣವೆಂದು ಅಂಗೀಕರಿಸಬೇಕಾಗುತ್ತದೆ. ಯಾರೂ ಹಾಗೆ ಅಂಗೀಕರಿಸುವುದಿಲ್ಲ. ಆದುದರಿಂದ ಪೂರ್ವಶ್ರುತಿ ಗೌಣಾರ್ಥಬೋಧಕವಾದುದರಿಂದ ಅದು ಪ್ರಮಾಣವಾಗಲಾರದು. ಇದರಿಂದ ನಿತ್ಯಸುಖವೆಂದುದು ಸರಿಯಲ್ಲವೆಂದು ವ್ಯಕ್ತವಾಗುತ್ತದೆ.

ನನು ಸುಖಾಭಿವ್ಯಕ್ತಿರ್ಮುಕ್ತಿರಿತಿ ಪಕ್ಷಂ ಪರಿತ್ಯಜ್ಯ ದುಃಖನಿವೃತ್ತಿರೇವ ಮುಕ್ತಿರಿತಿ ಸ್ವೀಕಾರಃ ಕ್ಷೀರಂ ವಿಹಾಯಾರೋಚಕಗ್ರಸ್ತಸ್ಯ ಸೌವೀರರುಚಿರನುಭಾವಯತೀತಿ ಚೇತ್—ತದೇತನ್ನಾಟಕಪಕ್ಷಪತಿತಂ ತ್ವದ್ವಚ ಇತ್ಯುಪೇಕ್ಷ್ಯತೇ। ಸುಖಸ್ಯ ಸಾತಿಶಯತಯಾ ಸದೃಕ್ಷತಯಾ ಬಹುಪ್ರತ್ಯನೀಕಾಕ್ರಾಂತತಯಾ ಸಾಧನಪ್ರಾರ್ಥನ ಪರಿಕ್ಲಿಷ್ಟತಯಾ ಚ ದುಃಖಾವಿನಾಭೂತತ್ವೇನ ವಿಷಾನುಷಕ್ತಮಧುವದ್ದುಃಖಪಕ್ಷ ನಿಕ್ಷೇಪಾತ್ ॥

ಸುಖಾಭಿವ್ಯಕ್ತಿಯೇ ಮುಕ್ತಿಯೆಂಬ ಪಕ್ಷವನ್ನು ಬಿಟ್ಟು ದುಃಖ ನಿನಿವೃತ್ತಿಯನ್ನು ಮೋಕ್ಷವೆಂದು ಸ್ವೀಕರಿಸಿರುವುದು ಬಾಯಿ ರುಚಿಯಿಲ್ಲದ ಅಜೀರ್ಣರೋಗಗ್ರಸ್ಥನಾದವನಿಗೆ ಹಾಲನ್ನು ಬಿಟ್ಟು ರುಚಿಯಿಲ್ಲದ ಗಂಜಿಯಲ್ಲಿ ಪ್ರವೃತ್ತಿಯುಂಟಾದಂತೆ ಆಗುತ್ತದೆ. ಅವನಿಗೆ ಯಾವ ಭಕ್ಷ್ಯದಲ್ಲಿಯೂ ಆಸಕ್ತಿ ಇರುವುದಿಲ್ಲ. ಹೀಗಿರುವಾಗ ಯಾವ ರುಚಿಯಿಲ್ಲದ ಗಂಜಿಯನ್ನು ಕುಡಿಯುತ್ತಾನೆಯೋ ? ಹಾಗೆ ಜನರಿಗೆ ಮೋಕ್ಷದಲ್ಲಿ ಪ್ರವೃತ್ತಿ ಹುಟ್ಟುವುದೇ ಮೊದಲು ವಿರಳ. ಅದರಲ್ಲಿಯೂ ಮೋಕ್ಷದಲ್ಲಿ ಸುಖವಿಲ್ಲವೆಂದರೆ ಯಾರೂ ಪ್ರವರ್ತಿಸಲಾರರು. ಹೀಗೆ ಇತರರು ಆಕ್ಷೇಪಿಸುವುದಾದರೆ ಆಗ ಅದಕ್ಕೆ ಉತ್ತರ ಹೇಳುತ್ತಾರೆ. ನಿನ್ನ ಮಾತು ನಾಟಕೀಯವಾಗಿ ಅತಿರಮಣೀಯವಾಗಿದೆ. ಆದ್ದರಿಂದ ಉತ್ತರ ಹೇಳಬೇಕಾಗಿಲ್ಲ. ನಾಟಕಾದಿಗಳಲ್ಲಿ ಉಕ್ತಿವೈಚಿತ್ರ್ಯವು ಸಾಮಾಜಿಕರ ಮನಸ್ಸಿನಲ್ಲಿ ಕ್ಷಣಕಾಲ ಚಮತ್ಕಾರವನ್ನು ಹುಟ್ಟಿಸುತ್ತದೆ. ಆದರೆ ಅದು ಪ್ರಮಾಣ ಸಿದ್ಧವಾಗುವುದಿಲ್ಲ. ಕೇಳುವುದಕ್ಕೆ ಮಾತ್ರ ಸೊಗಸಾಗಿರುತ್ತದೆ. ಅನುಕೂಲತರ್ಕವಿಲ್ಲದಿರುವಾಗ ಕೇವಲ ದೃಷ್ಟಾಂತದಿಂದ ಯಾವ ವಿಷಯವೂ ಸಿದ್ಧವಾಗಲಾರದು. ನಿನಗೆ ಅನುಕೂಲತರ್ಕವಿಲ್ಲ. ಅದನ್ನೇ "ಸುಖಸ್ಯ—" ವಾಕ್ಯದಿಂದ ತೋರಿಸುತ್ತಾನೆ. 'ಯದ್ಯತ್ಸುಖಂ ತತ್ತತ್ಸಾತಿಶಯಂ' ಎಂದು ವ್ಯಾಪ್ತಿ ಪ್ರಸಿದ್ಧವಾಗಿದೆ. ಆಗ ಎಲ್ಲರಿಗೂ ಅತಿಶಯಸುಖ ಹೊಂದಬೇಕೆಂಬ ಆಶಾ ಬಾಧಿಸುವುದರಿಂದ ದುಃಖ ಅವರ್ಜನೀಯವಾಗುತ್ತದೆ. ಸುಖಾನುಭವ ಕಾಲದಲ್ಲಿಯೂ ಪರಿಣಾಮ ದೃಷ್ಟಿಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುಃಖವು ಪ್ರತ್ಯಕ್ಷ ಸಿದ್ಧವಾಗಿದೆ. ಅನೇಕ ಸುಖವಿರೋಧಿಗಳಿಂದ ಯಾವಾಗಲೂ ಸಂಕ್ರಾಂತವಾದುದರಿಂದ ಸುಖವು ದುಃಖ ಸಂಬದ್ಧವಾಗಿಯೇ ಇರುತ್ತದೆ. ಹಾಗೆಯೇ ಸುಖಪ್ರಾಪ್ತಿ ಇಲ್ಲದಿರುವಾಗ ಅದನ್ನು ಹೊಂದಲು ಸುಖಸಾಧನೆಯನ್ನು ಹುಡುಕಬೇಕಾಗುವುದರಿಂದ ಅದೂ ಕ್ಲೇಶದಾಯಕವಾಗುವುದರಿಂದ ದುಃಖ ಸಂಬದ್ಧವಾಗದ ಸುಖವು ಲೋಕದಲ್ಲಿ ಇರುವುದೇ ಇಲ್ಲ. ಆದುದರಿಂದ ಸುಖೋದ್ದೇಶದಿಂದ ಮೋಕ್ಷದಲ್ಲಿ ಯಾರಿಗೂ ಪ್ರವೃತ್ತಿ ಹುಟ್ಟಲಾರದು. ವಿಷಾನು ಸಕ್ತಮಧುಃ — ವಿಷ ಮಿಶ್ರಿತವಾದ ಜೇನು, ಜೇನು ಮಧುರವಾದರೂ ವಿಷ ಮಿಶ್ರವಾದರೆ ಅದರಲ್ಲಿ ಪ್ರವೃತ್ತಿ ಬರುವುದಿಲ್ಲ. ಅದರಂತೆ ಸುಖವು ಅನುಕೂಲ ವೇದನೀಯ ವಾಗಿದ್ದರೂ ದುಃಖ ಸಂಪರ್ಕದಿಂದ ಅದನ್ನು ಹೊಂದಲು ಸ್ವಾರಸಿಕ ಪ್ರವೃತ್ತಿ ಯುಂಟಾಗಲಾರದು.

ನನ್ವೇಕಮನುಸಂಧಿತ್ಸತೋಽಪರಂ ಪ್ರಚ್ಯವತ ಇತಿ ನ್ಯಾಯೇನ ದುಃಖವತ್ ಸುಖಮು ಪ್ರುಚ್ಛಿದ್ಯತ ಇತ್ಯಕಾಮ್ಯೋಯಂ ಪಕ್ಷ ಇತಿ ಚೇತ್ — ನ್ವೈವಂ ಮಂಸ್ಥಾಃ । ಸುಖಸಂಪಾದನೇ ದುಃಖಸಂಪಾದನಬಾಹುಲ್ಯಾನುಷಂಗನಿಯಮೇನ ತಪ್ತಾಯಃಪಿಂಡೇ ತಪನೀಯಬುದ್ಧ್ಯಾ ಪ್ರವರ್ತಮಾನೇನ ಸಾಮ್ಯಾಪಾತಾತ್ । ತಥಾ ಹಿ ನ್ಯಾಯೋಪಾರ್ಜಿತೇಷು ವಿಷಯೇಷು ಕಿಯಂತಃ ಸುಖಖದ್ಯೋತಾಃ ಕಿಯಂತಿ ದುಃಖದುರ್ದಿನಾನಿ । ಅನ್ಯಾಯೋಪಾರ್ಜಿತೇಷು ತು ಯದ್ಭವಿಷ್ಯತಿ ತನ್ಮನಸಾಪಿ ಚಿಂತಯಿತುಂನ ಶಕ್ಯಮಿತಿ । ಏತತ್ಸ್ವಾನುಭವಮುಪ್ರಚ್ಛಾದಯಂತಃ ಸಂತೋ ವಿದಾಂಕುರ್ವಂತು. ವಿದಾಂವರಾ ಭವಂತಃ । ತಸ್ಮಾತ್ ಪರಿಶೇಷಾತ್ಪರಮೇಶ್ವರಾನುಗ್ರಹವಶಾತ್ ಶ್ರವಣಾದಿ ಕ್ರಮೇಣಾತ್ಮತತ್ತ್ವಸಾಕ್ಷಾತ್ಕಾರವತಃ ಪುರುಷಧೌರೇಯಸ್ಯ ದುಃಖ ನಿವೃತ್ತಿರಾತ್ಯಂತಿಕೀ ನಿಃಶ್ರೇಯಸಮಿತಿ ನಿರವದ್ಯಮ್ ॥

ತಿರುಗಿ ಆಶಂಕಿಸುತ್ತಾನೆ. 'ನನು—' ಇತಿ. ಒಂದನ್ನು ಸೇರಿಸಲು ಪ್ರಾರಂಭಿಸಿದಾಗ ಇನ್ನೊಂದು ಬಿಟ್ಟು ಹೋಗುತ್ತದೆಂದು ನ್ಯಾಯ. ಹಿಂದಿನಂತೆ ಆಶಂಕಿಸುವುದಾದರೆ ದುಃಖವನ್ನು ಬಿಡಬೇಕೆಂದು ಬಯಸುವವನಿಗೆ ಸುಖವೂ ತ್ಯಾಜ್ಯವಾಗಬೇಕಾಗುತ್ತದೆ. ಆಗ ದುಃಖನಿವೃತ್ತಿ ಪಕ್ಷವೂ ಯಾರಿಂದಲೂ ಅಪೇಕ್ಷಿಸಲ್ಪಡದೇ ಹೋಗಬೇಕಾಗುತ್ತದೆ ಎಂದು ಹೇಳಿದರೆ 'ನ್ವೈವಂ—' ಎಂಬುದರಿಂದ ಸಮಾಧಾನ ಹೇಳುತ್ತಾನೆ. ಮೋಕ್ಷದಲ್ಲಿ ಸುಖವಿದೆಯೆಂದು ಹೇಳುವವರ ಪಕ್ಷವೂ ಸಮಂಜಸವಾಗಿ ತೋರುವುದಿಲ್ಲ. ಸುಖವನ್ನು ಸಂಪಾದಿಸಬೇಕಾದರೆ ದುಃಖಾಧಿಕ್ಯವನ್ನು ಸಹಿಸಬೇಕಾಗುತ್ತದೆ. 'ತಪ್ತಾಯಃ—' ಇತಿ. ಕಾಸಿದ ಕಬ್ಬಿಣದಲ್ಲಿ ಸುವರ್ಣ ಭ್ರಾಂತಿಯಿಂದ ಅದನ್ನು ಹಿಡಿಯಲು ಪ್ರವರ್ತಿಸುವವನಿಗೆ ಸುವರ್ಣ ಸಿಗದಿರುವುದಲ್ಲದೆ ದಾಹವಾಗಿ ಅನಿಷ್ಟವೂ ಸಂಭವಿಸುತ್ತದೆ. ಹಾಗೆ ಸುಖಬುದ್ಧಿಯಿಂದ ಆರಂಭಿಸುವವನಿಗೆ ಸುಖವಾಗಿಯೇ ಆಗುತ್ತದೆಯೆಂಬ ನಿಯಮವಿಲ್ಲ. ಸುಖವು ದುಃಖ ಸಂಬಂಧ್ಧ ವಾದುದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಿಂದ ದುಃಖವಂತೂ ಅವರ್ಜನೀಯವಾಗುತ್ತದೆ. ಹೀಗಿರುವಾಗ ಬುದ್ಧಿಯಿದ್ದವನು ಪ್ರವರ್ತಿಸುವುದು ಹೇಗೆ ? ಸುಖದಲ್ಲಿ ದುಃಖಾವಶ್ಯಂಭಾವವನ್ನೂ, ಸುಖಕ್ಕಿಂತ ದುಃಖವು ಅಧಿಕವೆಂಬುದನ್ನೂ ತೋರಿಸುತ್ತಾನೆ. 'ತಥಾಹಿ—' ಇತಿ. ನ್ಯಾಯದಿಂದ ಸಂಪಾದಿಸಿದ ವಿಷಯಗಳಲ್ಲಿಯೇ ಎಷ್ಟು ಸುಖಜನಕಗಳಂತೆ ತೋರುತ್ತವೆ ? ಎಷ್ಟು ದುಃಖಸಂಪರೆಯನ್ನೇ ಕೊಡುತ್ತವೆ ? ಹೀಗಿರುವಾಗ ಅನ್ಯಾಯದಿಂದ ಸಂಪಾದಿಸಿದವುಗಳಲ್ಲಿ ಹೇಳಬೇಕಾದುದೇನಿದೆ ? ಮನಸ್ಸಿನಿಂದ ಎಣಿಸುವುದೂ ಅಸಾಧ್ಯವಾಗಿದೆ. 'ತಸ್ಮಾತ್'—ಇತಿ. ಆದುದರಿಂದ ಪರಮೇಶ್ವರನ ಅನುಗ್ರಹದಿಂದಲೇ ಸಂಪಾದಿತಗಳಾದ ಶ್ರವಣಮನನಾದಿಗಳಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದಿರುವ ಪುರುಷಶ್ರೇಷ್ಠನಿಗೆ ಆತ್ಯಂತಿಕವಾದ ದುಃಖನಿವೃತ್ತಿಯೇ ಮೋಕ್ಷವೆಂಬುದು ಯಾವ ದೋಷವಿಲ್ಲದೆ ಸಿದ್ಧವಾಗುತ್ತದೆ.

ನನ್ವೀಶ್ವರಸದ್ಭಾವೇ ಕಿಂ ಪ್ರಮಾಣಂ ಪ್ರತ್ಯಕ್ಷಮನುಮಾನಮಾಗಮೋವಾ । ನ ತಾವದತ್ರ ಪ್ರತ್ಯಕ್ಷಂ ಕ್ರಮತೇ । ರೂಪಾದಿರಹಿತತ್ವೇನಾತೀಂದ್ರಿಯತ್ವಾತ್ । ನಾಪ್ಯನುಮಾನಮ್ । ತದ್ವ್ಯಾಪ್ತಲಿಂಗಾಭಾವಾತ್ । ನಾಗಮಃ । ವಿಕಲ್ಪಾಸಹತ್ವಾತ್ । ಕಿಂ ನಿತ್ಯೋಽಗಮಯತ್ಯನಿತ್ಯೋ ವಾ । ಆದ್ಯೇಽಪಸಿದ್ಧಾಂತಾಪಾತಃ। ದ್ವಿತೀಯೇ ಪರಸ್ಪರಾಶ್ರಯಾಪಾತಃ । ಉಪಮಾನಾದಿಕಮಶಕ್ಯಶಂಕಮ್ । ನಿಯತವಿಷಯತ್ವಾತ್ । ತಸ್ಮಾದೀಶ್ವರಃ ಶಶವಿಷಾಣಾಯತ ಇತಿ ಚೇತ್— ತದೇತಸ್ಮ ಚತುರಚೇತಸಾಂ ಚೇತಸಿ ಚಮತ್ಕಾರಮಾವಿಷ್ಕರೋತಿ ॥

ಈಶ್ವರನಿದ್ದಾನೆಯೆಂಬುದರಲ್ಲಿ ಪ್ರಮಾಣವೇನು ? ಪ್ರತ್ಯಕ್ಷಪ್ರಮಾಣವಿದೆಯೇ ? ಅಥವಾ ಅನುಪ್ರಮಾಣವೇ ? ಅಥವಾ ಆಗಮವೇ ? ಯಾವುದೂ ಕೂಡುವುದಿಲ್ಲ. ಈಶ್ವರನು ರೂಪರಹಿತನಾದುದರಿಂದ ಪ್ರತ್ಯಕ್ಷ ಪ್ರಮಾಣದಿಂದ ಇದ್ದಾನೆಂದು ಹೇಳಲು ಸಾಧ್ಯವಿಲ್ಲ. ಈಶ್ವರವ್ಯಾಪ್ತವಾದ ಲಿಂಗವಿಲ್ಲದಿರುವುದರಿಂದ ಅನುಮಾನ ಪ್ರಮಾಣವೂ ಇಲ್ಲ. ಲಿಂಗವೆಂದರೆ ಜ್ಞಾಪಕವಾದ ಹೇತು. ಅದು ಈಶ್ವರವ್ಯಾಪ್ಯವಾಗಿರಬೇಕು. ಅಂತಹ ಹೇತುವಿಲ್ಲ. ಆಗಮಪ್ರಮಾಣದಿಂದ ಸಿದ್ಧಿಸಲಿ ಎಂದರೆ ಆಗಮವು ನಿತ್ಯವೇ, ಅನಿತ್ಯವೇ ? ಎಂದು ಮೊದಲು ವಿಚಾರಿಸಬೇಕು. ಎರಡು ಪಕ್ಷವೂ ಕೂಡುವುದಿಲ್ಲ. ನಿತ್ಯವೆಂದರೆ ಅಪಸಿದ್ಧಾಂತವಾಗುತ್ತದೆ. ಆಗಮವೆಂದರೆ ವೇದ. ಅದು ಪೌರ್ವಾಪರ್ಯ ವಿಶೇಷ ವಿಶಿಷ್ಟ ನಾನಾವರ್ಣಾತ್ಮಕವಾಗಿರುತ್ತದೆ. ವರ್ಣಗಳಾದರೂ ಉಚ್ಚರಿಸಲ್ಪಟ್ಟು ನಾಶವಾಗುವುದರಿಂದ ಅನಿತ್ಯವೆಂದು ಪ್ರತ್ರಕ್ಷ್ಯವಾಗಿ ತಿಳಿಯುತ್ತದೆ. ಆದುದರಿಂದ ಆಗಮವು ಅನಿತ್ಯವೆಂದು ನೈಯಾಯಿಕರ ಸಿದ್ಧಾಂತ. ಅನಿತ್ಯವೆಂದರೆ ಅನ್ಯೋನ್ಯಾಶ್ರಯ ದೋಷ ಬರುತ್ತದೆ. ಆಗಮವು ಅನಿತ್ಯವಾದುದರಿಂದ ಅದರ ಪ್ರಾಮಣ್ಯವು ಅದನ್ನು ನಿರ್ಮಿಸಿರುವ ಕರ್ತೃಪ್ರಾಮಾಣ್ಯವನ್ನವಲಂಬಿಸಿರುತ್ತದೆ. ಕರ್ತೃವೆನಿಸಿದ ಈಶ್ವರನ ಪ್ರಾಮಾಣ್ಯವಾದರೋ ಅವನಿಂದಾದ ಆಗಮ ಪ್ರಾಮಾಣ್ಯದಿಂದ ಸಿದ್ಧವಾಗಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಪರಸ್ಪರಾಶ್ರಯದಿಂದ ದೋಷ ಬರುತ್ತದೆ. ಆತ್ಮನಂತೆ ಬೇರೆ ಯಾರೂ ಇರದೆ ಅವನು ನಿಯತ ವಿಷಯನಾದುದರಿಂದ ಇತರ ಉಪಮಾನಾದಿ ಪ್ರಮಾಣಗಳಿಂದ ಸಾಧಿಸುವ ವಿಚಾರವೇ ಇಲ್ಲ. ಆದುದರಿಂದ ಮೊಲದ ಕೊಂಬಿನಂತೆ ಈಶ್ವರನ ಅಸ್ತಿತ್ವವೆಂದು ಶಂಕಿಸಿದರೆ ಈ ಶಂಕೆಯು ವಿಚಾರವಿಮರ್ಶಕರಾದ ಬುದ್ಧಿವಂತರಿಗೆ ಚಮತ್ಕಾರಜನಕವಾಗಲಾರದೆಂದು ಸಮಾಧಾನ ತೋರಿಸುತ್ತಾನೆ.

ವಿವಾದಾಸ್ಪದಂ ನಗಸಾಗರಾದಿಕಂ—ಸಕರ್ತೃಕಂ – ಕಾರ್ಯತ್ವಾತ್ । ಕುಂಭವತ್ । ನಾಚಾಯಮಸಿದ್ಧೋ ಹೇತುಃ । ಸಾವಯವತ್ವೇನ ತಸ್ಯ ಸುಸಾಧನತ್ವಾತ್ । ನನು ಕಿಮಿದಂ ಸಾವಯವತ್ವಮ್ । ಅವಯವಸಂಯೋಗಿತ್ವಂ, ಅವಯವಸಮವಾಯಿತ್ವಂ ವಾ । ನಾದ್ಯಃ । ಗಗನಾದೌ ವ್ಯಭಿಚಾರಾತ್ । ನ ದ್ವಿತೀಯಃ । ತಂತುತ್ವಾದಾವನೈಕಾಂತ್ಯಾತ್। ತಸ್ಮಾದನುಪಪನ್ನಮಿತಿ ಚೇತ್—ಮೈವಂ ವಾದೀಃ । ಸಮವೇತದ್ರವ್ಯತ್ವಂ ಸಾವಯವತ್ವಮಿತಿ ನಿರುಕ್ತೇರ್ವಕ್ತುಂ ಶಕ್ಯತ್ವಾತ್ । ಅವಾಂತರ ಮಹತ್ವೇನ ವಾ ಕಾರ್ಯತ್ವಾನುಮಾನಸ್ಯ ಸುಕರತ್ವಾತ್ । ನಾಪಿ ವಿರುದ್ಧೋ ಹೇತುಃ । ಸಾಧ್ಯವಿಪರ್ಯಯವ್ಯಾಪ್ತೇರಭಾವಾತ್ । ನಾಪ್ಯನೈಕಾಂತಿಕಃ ।ಪಕ್ಷಾದನ್ಯತ್ರ ವೃತ್ತೇರದರ್ಶನಾತ್ । ನಾಪಿ ಕಾಲಾತ್ಯಯಾಪದಿಷ್ಟಃ ಬಾಧಕಾನುಪಲಂಭಾತ್ । ನಾಪಿ ಸತ್ಪ್ರತಿಪಕ್ಷಃ । ಪ್ರತಿಭಟಾದರ್ಶನಾತ್ ॥

ಅನುಮಾನದಿಂದ ಈಶ್ವರಾಸ್ತಿತ್ವವನ್ನು ಸಾಧಿಸುತ್ತಾನೆ. ಪರ್ವತ ಸಮುದ್ರಾದಿಗಳು ಕಾರ್ಯಗಳಾದುದರಿಂದ ಅದಕ್ಕೆ ಒಬ್ಬ ಕರ್ತೃ ಇದ್ದೇ ಇರಬೇಕು. ಘಟವು ಕಾರ್ಯವಾದುದರಿಂದ ಕುಂಬಾರನು ಅದಕ್ಕೆ ಕರ್ತೃವಾಗಿರುವುದು ಪ್ರತ್ಯಕ್ಷ ಸಿದ್ಧವಾಗಿದೆ. ಅದರಂತೆ ಪ್ರಪಂಚಕ್ಕೆ ಕರ್ತೃವಾದವನೇ ಈಶ್ವರನು. ಕಾರ್ಯತ್ವ ಹೇತುವಿಗೆ ಹೇತ್ವಾಭಾಸತ್ವವನ್ನು ಆಶಂಕಿಸಿ ನಿರಾಕರಿಸುತ್ತಾನೆ. "ನಚಾ—" ಇತಿ ಸಾಗರಾದಿಗಳಲ್ಲಿ ಕಾರ್ಯತ್ವವೇ ಇಲ್ಲವೆಂದು ಶಂಕಿಸಬಾರದು. ಅವಯವಸಹಿತ ವಾದುವೆಲ್ಲವೂ ಕಾರ್ಯಗಳಾದುದರಿಂದ ಅವೂ ಸಾವಯವಗಳಾಗಿರುತ್ತವೆ. "ನಗಸಾಗರಾದಿಕಂ—ಕಾರ್ಯಂ ಸಾವಯವತ್ವಾತ್ । ಘಟವತ್ ।" ಈ ಅನುಮಾನದಿಂದ ಕಾರ್ಯತ್ವವನ್ನು ಸಾಧಿಸಿ ಅದರಿಂದ ಈಶ್ವರನನ್ನು ಸಾಧಿಸಿದರೆ ದೋಷಬರುವುದಿಲ್ಲ. ಈಗ ಸಾವಯವತ್ವವನ್ನು ಏನೆಂದು ವಿಚಾರಿಸುತ್ತಾನೆ. ಸಾವಯವತ್ವವೆಂದರೇನು ? ಅವಯವದ ಸಂಯೋಗವುಳ್ಳದ್ದು ಎಂದರ್ಥವೇ ? ಹಾಗೆ ಹೇಳಿದರೆ ಘಟಾದಿಗಳ ಅವಯವಗಳಿಗೆ ಆಕಾಶ ಸಂಯೋಗವಿರುವುದರಿಂದ ಆಕಾಶವೂ ಕಾರ್ಯವಾಗಬೇಕಾಗುತ್ತದೆ. ಆದರೆ ಅದು ನಿತ್ಯವೆಂದು ತಾರ್ಕಿಕಸಿದ್ಧಾಂತ. ಆದ್ದರಿಂದ ಕಾರ್ಯತ್ವಾಭಾವವಿರುವ ಆಕಾಶದಲ್ಲಿ ಸಾವಯವತ್ವಹೇತು ಬರುವುದರಿಂದ ವ್ಯಭಿಚಾರದೋಷ ಬರುತ್ತದೆ. ಅವಯವ ಅವಯವಿಗಳಿಗೆ ಸಂಯೋಗವಿರುವುದರಿಂದ 'ಸ್ವಾವಯವಗಳಿಂದ ಸಂಯೋಗವಿರುವುದು' ಎಂದೂ ಅರ್ಥಮಾಡಲು ಸಾಧ್ಯವಿಲ್ಲ. ಅವಯವಸಮವಾಯಿತ್ವಂ ಸಾವಯವತ್ವಂ–ಎಂದರೆ ಆಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಂತುತ್ವಾದಿಗಳಲ್ಲಿ ವ್ಯಭಿಚಾರ ಬರುತ್ತದೆ. ಪಟಾವಯವಗಳಾದ ತಂತುಗಳಲ್ಲಿ ತಂತುತ್ವವು ಸಮವಾಯಸಂಬಂಧದಿಂದ ಇರುತ್ತದೆ. ಹೀಗೆ ಸಾವಯವತ್ವವನ್ನು ನಿರ್ವಚನ ಮಾಡುವುದು ಕಷ್ಟವೆಂದರೆ ಆಗ ಸಮಾಧಾನ ತೋರಿಸುತ್ತಾನೆ. 'ಸಮವೇತದ್ರವ್ಯತ್ವಂ' ಇತಿ. ಆಕಾಶವು ನಿರವಯವವಾದುದರಿಂದ ಸಮವೇತವಾಗುವುದಿಲ್ಲ. ಸಮವೇತವೆಂದರೆ ಸಮವಾಯದಿಂದ ಇರುವುದು. ತಂತುತ್ವವು ಸಮವೇತವಾದರೂ ದ್ರವ್ಯವಲ್ಲ. ಆದುದರಿಂದ ಎಲ್ಲಿಯೂ ವ್ಯಭಿಚಾರವಿಲ್ಲ. 'ಅವಾಂತರ'—ಇತಿ. ಅವಾಂತರ ಮಹತ್ವವೆಂದರೆ ಅಪಕೃಷ್ಟಮಹತ್ತ್ವ. ಇದು ಪರಮಮಹತ್ವವಿಲ್ಲದ ದ್ವ್ಯಣುಕನಗಸಾಗರಾದಿ ಸಕಲಾನಿತ್ಯದ್ರವ್ಯಗಳಲ್ಲಿರುತ್ತದೆ. "ನಗಸಾಗರಾದಿಕಂ –ಕಾರ್ಯಂ — ಪರಮಮಹತ್ವಾಭಾವವತ್ತ್ವೇ ಸತಿ ಮಹತ್ವಾತ್ । ಘಟವತ್ ।" ಇದರಿಂದ ಕಾರ್ಯತ್ವಸಿದ್ಧವಾಗುತ್ತದೆ. 'ನಾಪಿ' — ಇತಿ. ಸಕರ್ತೃಕತ್ವಸಾಧಕವಾದ ಕಾರ್ಯತ್ವಹೇತುವು ಅಸಿದ್ಧರೂಪ ಹೇತ್ವಾಭಾಸವಾಗುವುದಿಲ್ಲ. ಕಾರಣತೋರಿಸುತ್ತಾನೆ. 'ಸಾಧ್ಯ'—ಇತಿ. ಇದು ಸಾಧ್ಯಾಭಾವದಿಂದ ವ್ಯಾಪ್ತವಾಗಿದ್ದರೆ ಅಸಿದ್ಧವಾಗುತ್ತಿತ್ತು. ಹಾಗೆ ಆಗಿಲ್ಲ. 'ನಾಪಿ' ಇತಿ. ವ್ಯಭಿಚರಿತವೂ ಆಗಿಲ್ಲ. 'ಪಕ್ಷಾತ್'—ಇತಿ. ಸಕರ್ತೃಕತ್ವರೂಪ ಸಾಧ್ಯದ ಅಭಾವವಿರುವ ಪರಮಾಣ್ವಾದಿಗಳಲ್ಲಿ ಕಾರ್ಯತ್ವವಿಲ್ಲದಿರುವುದರಿಂದ ಅದು ವ್ಯಭಿಚರಿತವಾಗಿಲ್ಲ. 'ಕಾಲಾ'—ಇತಿ. ಬಾಧಿತವೂ ಅಲ್ಲ. ಏಕೆಂದರೆ ಬಾಧಕ ಯಾವುದೂ ತೋರುವುದಿಲ್ಲ. ಹಾಗೆ ಸತ್ಪ್ರತಿಪಕ್ಷವೂ ಆಗಲಿಲ್ಲ. ಸಾಧ್ಯಾಭಾವಸಾಧಕವಾದ ಪ್ರತಿಭಟ ಅಂದರೆ ಬೇರೆ ಹೇತು ಯಾವುದೂ ಇಲ್ಲ.

ನನು ನಗಾದಿಕಂ – ಅಕರ್ತೃಕಂ – ಶರೀರಾಜನ್ಯತ್ವಾತ್ । ಗಗನವತ್ । ಇತಿ ಚೇತ್ ನೈತತ್ ಪರೀಕ್ಷಾಕ್ಷಮಮೀಕ್ಷ್ಯತೇ । ನಹಿ ಕಠೋರ ಕಂಠೀರವಸ್ಯ ಕುರಂಗಶಾವಃ ಪ್ರತಿಭಟೋ ಭವತಿ । ಅಜನ್ಯತ್ವಸ್ಯೈವ ಸಮರ್ಥತಯಾ ಶರೀರ ವಿಶೇಷಣ ವೈಯರ್ಥ್ಯಾತ್ । ತರ್ಹ್ಯಜನ್ಯತ್ವಮೇವ ಸಾಧನಮಿತಿ ಚೇತ್ ನ । ಅಸಿದ್ಧೇಃ । ನಾಪಿ ಸೋಪಾಧಿಕತ್ವ ಶಂಕಾಕಲಂಕಾಂಕುರಃ ಸಂಭವೀ ಅನುಕೂಲತರ್ಕ ಸಂಭವಾತ್ । ಯದ್ಯಯಮಕರ್ತೃಕಃ ಸ್ಯಾತ್ಕಾರ್ಯಮಪಿ ನಸ್ಯಾತ್ । ಇಹ ಜಗತಿ ನಾಸ್ತ್ಯೇವ ತತ್ಕಾರ್ಯಂ ನಾಮ ಯತ್ಕಾರಕಚಕ್ರಮ ವಧೀರ್ಯಾತ್ಮಾನ ಮಾಸಾದಯೇ ದಿತ್ಯೇತದ ವಿವಾದಮ್ । ತಚ್ಚ ಸರ್ವಂ ಕರ್ತೃವಿಶೇಷೋಪಹಿತ ಮರ್ಯಾದಮ್ । ಕರ್ತೃತ್ವಂ ಚೇತರಕಾರಕಾಪ್ರಯೋಜ್ಯತ್ವೇಸತಿ ಸಕಲಕಾರಕ ಪ್ರಯೋಕ್ತೃತ್ವಲಕ್ಷಣಂ ಜ್ಞಾನಚಿಕೀರ್ಷಾಪ್ರಯತ್ನಾಧಾರತ್ವಮ್ । ಏವಂ ಚ ಕರ್ತೃವ್ಯಾವೃತ್ತೇಸ್ತದುಪಹಿತ ಸಮಸ್ತ ಕಾರಕವ್ಯಾವೃತ್ತಾ ವಕಾರಣಕಕಾರ್ಯೋತ್ಪಾದ ಪ್ರಸಂಗ ಇತಿ ಸ್ಥೂಲಃ ಪ್ರಮಾದಃ । ತಥಾ ನಿರಟಂಕಿ ಶಂಕರ ಕಿಂಕರೇಣ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಕೂಲೇನ ತರ್ಕೇಣ ಸನಾಥೇ ಸತಿ ಸಾಧನೇ
ಸಾಧ್ಯವ್ಯಾಪಕತಾಭಂಗಾತ್ಪಕ್ಷೇ ನೋಪಾಧಿಸಂಭವಃ ॥ ಇತಿ

ಸಾಧ್ಯಾಭಾವಸಾಧಕ ಹೇತ್ವಂತರವಿದೆಯೆಂದು ಆಶಂಕಿಸುತ್ತಾನೆ. 'ನನು'-ಇತಿ. ಶರೀರಾಜನ್ಯತ್ವಹೇತುವೇ ಪ್ರತಿಭಟಹೇತು. ಶರೀರದಿಂದ ನಗಾದಿಗಳು ಹುಟ್ಟದಿರುವುದರಿಂದ ಅದು ಕರ್ತೃಜನ್ಯವಾಗಲಾರದು. ಆಕಾಶವು ಇದಕ್ಕೆ ದೃಷ್ಟಾಂತ. ಹೀಗೆ ಹೇಳುವುದು ಸರಿಯಲ್ಲವೆಂದು ಖಂಡಿಸುತ್ತಾನೆ. 'ನಹಿ'—ಇತಿ. ಪ್ರೌಢವಾದ ಸಿಂಹಕ್ಕೆ ಒಂದು ಜಿಂಕೆಯಮರಿ ಪ್ರತಿಸ್ಪರ್ಧಿಯೆಂದು ಹೇಳಲು ಶಕ್ಯವಿಲ್ಲ. ಹಾಗೆ ಅಕರ್ತೃಕತ್ವ ಸಾಧಕವಾದ ನಿನ್ನ ಶರೀರಾಜನ್ಯತ್ವಹೇತುವು ಸಕರ್ತೃಕತ್ವಸಾಧಕವಾದ ಕಾರ್ಯತ್ವಹೇತುವಿಗೆ ಪ್ರತಿಪಕ್ಷವಾಗಲಾರದು. ಸಮಾನಬಲವಿಲ್ಲದಿರುವುದೇ ಕಾರಣ. 'ಅಜನ್ಯತ್ವ'—ಇತಿ. "ಪರ್ವತಃ—ಅಗ್ನಿಮಾನ್-ನೀಲಧೂಮಾತ್" ಎಂಬಲ್ಲಿ ನೀಲಪದವು ಹೇಗೆ ವ್ಯರ್ಥವೋ ಅಲ್ಲಿ ಕೇವಲ ಧೂಮಮಾತ್ರವೇ ಅಗ್ನಿಸಾಧಕವಾಗಿದೆಯೋ ಅದರಂತೆ ಕೇವಲ ಅಜನ್ಯತ್ವಹೇತುವೇ ಅಕರ್ತೃಕತ್ವ ಸಾಧಕವಾಗಲಿ. ಶರೀರ ವಿಶೇಷಣ ವ್ಯರ್ಥವಾಗಿ ಸೇರಿಸಿದುದೇಕೆ ? ಎಂದು ಒಂದು ದೋಷ. ಅದೂ ಅಲ್ಲದೆ ಇಂತಹ ಹೇತುಪ್ರಯೋಗದಿಂದ ಪ್ರಯೋಗಿಸಿದವನ ಅಜ್ಞಾನವೇ ವ್ಯಕ್ತವಾಗುತ್ತದೆ. ಅಜನ್ಯತ್ವವನ್ನೇ ಹೇತುವೆಂದು ಸ್ವೀಕರಿಸಿದರೆ ಅಸಿದ್ಧವಾಗುತ್ತದೆ. ಅಜನ್ಯವೆಂದರೆ ಉತ್ಪತ್ತಿ ಇಲ್ಲದಿರುವುದೆಂದರ್ಥ. ನಗಸಾಗರಾದಿಗಳಲ್ಲಿ ಈ ಹೇತುವಿದೆಯೆಂದು ಸಪ್ರಮಾಣವಾಗಿ ಯಾರಿಂದಲೂ ಸಾಧಿಸಲು ಶಕ್ಯವಿಲ್ಲ. 'ನಾಪಿ—'ಇತಿ. ಕಾರ್ಯತ್ವಹೇತುವಿಗೆ ಉಪಾಧಿ ಇದೆಯೆಂದು ಶಂಕಿಸಲೂ ಸಾಧ್ಯವಿಲ್ಲ. ವಸ್ತುತಃ ಅದು ಉಪಾಧಿರಹಿತವಾಗಿದೆ. ಉಪಾಧಿಶಂಕೆಯಿಂದ ಅದು ಕಲಂಕಿತವೂ ಆಗಲಾರದು. ಸಕರ್ತೃಕತ್ವಕ್ಕೆ ವ್ಯಾಪಕವಾಗಿ ಕಾರ್ಯತ್ವಕ್ಕೆ ಅವ್ಯಾಪಕವಾದ ಒಂದು ವಸ್ತುವು ಇರುವುದಾದರೆ ಅದು ಉಪಾಧಿಗ್ರಸ್ತವಾಗಿ ವ್ಯಭಿಚರಿತವಾಗಬಹುದು. ಕಾರ್ಯತ್ವ ವ್ಯಭಿಚರಿತವಾದರೇ ಉಪಾಧಿ ಲಭಿಸುತ್ತದೆ. ಅಕರ್ತೃಕದಲ್ಲಿ ಕಾರ್ಯತ್ವ ದೃಷ್ಟವಾದರೆ ಅದು ವ್ಯಭಿಚಾರಿಯಾಗುತ್ತದೆ. ಆದರೆ ಅದು ಅನುಕೂಲತರ್ಕದಿಂದ ಬಾಧಿತವಾಗುವುದರಿಂದ ಹೇಳಲು ಸಾಧ್ಯವಿಲ್ಲವೆಂದು ತೋರಸುತ್ತಾನೆ. 'ಯದ್ಯಯಂ'—ಇತಿ. ಅಕರ್ತೃಕವಾಗುವುದಾದರೆ ಕಾರ್ಯವೂ ಆಗಲಾರದು. ಏಕೆಂದರೆ ಕರ್ತೃಜನ್ಯವಾದುದೇ ಕಾರ್ಯವೆಂದು ಲೋಕಪ್ರಸಿದ್ಧವಾಗಿದೆ. 'ಇಹ'—ಇತಿ. ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳೆಂದು ಆರು ಕಾರಕಗಳು. ಇವುಗಳಿಲ್ಲದೆ ಯಾವವಸ್ತುವು ಸ್ವರೂಪವನ್ನು ಹೊಂದುತ್ತದೆಯೋ ಅಂತಹ ಒಂದು ವಸ್ತುವೂ ಲೋಕದಲ್ಲಿರುವುದಿಲ್ಲ. ಇದು ಅವಿವಾದಾಸ್ಪದವಾದ ವಿಷಯ.

'ತಚ್ಚ'—ಇತಿ. ಎಲ್ಲಾ ಕಾರ್ಯಪ್ರಪಂಚವೂ ಕರ್ತ್ರಾದಿಗಳಿಂದಕೂಡಿಯೇ ಆಗುತ್ತದೆ. ಘಟಪಟಾದಿ ಕಾರ್ಯೋತ್ಪಾದ ಸಮಯದಲ್ಲಿ ಕುಂಭಕಾರತಂತುವಾಯಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ತೃವೂ ಇತರ ಕರಣಾದಿಕಾರಕಗಳನ್ನು ಕಾರ್ಯೋತ್ಪತ್ತಿಗನುಸಾರವಾಗಿ ಉಪಯೋಗಿಸುತ್ತಾನೆ. ಕರ್ತೃಪ್ರಧಾನನಾಗಿರುತ್ತಾನೆ. ಅವನಲಕ್ಷಣವನ್ನು ತೋರಿಸುತ್ತಾನೆ. 'ಕರ್ತೃತ್ವಂಚ'— ಇತಿ. ಇತರಕಾರಕಗಳಿಂದ ಪ್ರಯೋಜ್ಯನಾಗದೆ ಇತರಕಾರಕಗಳಿಗೆ ತಾನು ಪ್ರೇರಕನಾಗಿ ಪ್ರಯೋಗಿಸುತ್ತಾ, ಜ್ಞಾನಚಿಕೀರ್ಷಾ ಯತ್ನಗಳಿಗೆ ಆಶ್ರಯನಾದವನೇ ಕರ್ತೃ. ಮೃದ್ದಂಡಾದಿಗಳು ಘಟೋತ್ಪತ್ತಿಯಲ್ಲಿ ಕುಂಭಕಾರನಿಗೆ ಪ್ರೇರಕಗಳಾಗುವುದಿಲ್ಲ. ಕುಂಭಾರನೇ ಸ್ವೇಚ್ಛೆಯಿಂದ ಅವುಗಳನ್ನು ಪ್ರಯೋಗಿಸುತ್ತಾನೆ. ಮೊದಲು ಅವನು ತಿಳಿದು ಆನೇಲೆ ಇಚ್ಛೆಹೊಂದಿ ಯತ್ನಿಸುತ್ತಾನೆ. ಈ ಕ್ರಮವು ಲೋಕಸಿದ್ಧವಾಗಿದೆ. 'ಏವಂಚ'—ಇತಿ. ಕರ್ತೃ ಇರದಿದ್ದರೆ ಇತರಕಾರಕಗಳು ಏನೂ ಮಾಡಲಾರವು. ಅಕರ್ತೃ ಎಂದಾಗ ಅಲ್ಲಿ ಕರ್ತೃ ಇಲ್ಲವೆಂಬುದು ಪೂರ್ವಪಕ್ಷಿಗೂ ಸಂಮತವಾಗಿದೆ. ಕರ್ತೃ ಇಲ್ಲದಿರುವಾಗ ಇತರ ಕಾರಕಗಳು ವ್ಯಾಪಾರಶೂನ್ಯವಾಗಿರುತ್ತವೆ. ಕುಂಬಾರನಿಲ್ಲದೆ ದುಡವು ತಾನಾಗಿ ಭ್ರಮಣವನ್ನು ಹುಟ್ಟಿಸುವುದಿಲ್ಲ. ಹೀಗಿದ್ದರೂ ಅಲ್ಲಿ ಕಾರ್ಯತ್ವವನ್ನಂಗೀಕರಿಸಿದರೆ ಆಗ ಕಾರಣವಿಲ್ಲದೇ ಕಾರ್ಯೋತ್ಪತ್ತಿಯನ್ನು ಸ್ವೀಕರಿಸಿದಂತಾಗುತ್ತದೆ. ಇದು ಮಹಾ ಪ್ರಮಾದವಲ್ಲದೆ ಮತ್ತೇನು ? ಇದಕ್ಕೆ ಪ್ರಮಾಣವೂ ಹೇಳಿದೆಯೆಂದು ತೋರಿಸುತ್ತಾನೆ. 'ಅನುಕೂಲೇನ'—ಇತಿ. ನಿರಟಂಕಿ—ನಿಬದ್ಧಂ—ಉಕ್ತಂ ಎಂದರ್ಥ. ಅನುಕೂಲತರ್ಕದಿಂದ ಹೇತುವು ಯುಕ್ತವಾಗಿರುವಾಗ ಅಲ್ಲಿ ಉಪಾಧಿಯುಃ ಸಂಭವಿಸುವುದಿಲ್ಲ. ಪೂರ್ವಪಕ್ಷಿಯು ಉಪಾಧಿಯೆಂದು ತೋರಿಸಿದುದರಲ್ಲಿ ಸಾಧ್ಯವ್ಯಾಪಕತ್ವವಿಲ್ಲದಿರುವುದರಿಂದ ಉಪಾಧಿಲಕ್ಷಣವೇ ಬರುವುದಿಲ್ಲ. ಸಾಧ್ಯವ್ಯಾಪಕವಾಗಿದ್ದು ಸಾಧನಾವ್ಯಾಪಕವಾಗಿರುವುದೇ ಉಪಾಧಿ. ಅನುಕೂಲತರ್ಕವಿರುವುದರಿಂದ ಹೇತುವು ಸಾಧ್ಯವ್ಯಾಪ್ಯವೆಂದು ನಿಶ್ಚಿತವಾಗುತ್ತದೆ. ತನ್ನ ವ್ಯಾಪ್ಯವಾದುದಕ್ಕೆ ಅವ್ಯಾಪ್ಯವಾಗಿರುವಾಗ ತನಗೆ ವ್ಯಾಪಕವಾಗುವುದು ಹೇಗೆ ? ಆದುದರಿಂದ ಉಪಾಧಿ ಹೇಳಿರುವುದುಯುಕ್ತವಾಗುವುದಿಲ್ಲ.

ಯದೀಶ್ವರಃ ಕರ್ತಾ ಸ್ಯಾತ್ತರ್ಹಿ ಶರೀರೀ ಸ್ಯಾದಿತ್ಯಾದಿ ಪ್ರತಿಕೂಲ ತರ್ಕಜಾತಂ ಜಾಗರ್ತೀತಿ ಚೇತ್ — ಈಶ್ವರಸಿದ್ಧ್ಯಸಿದ್ಧಿಭ್ಯಾಂ ವ್ಯಾಘಾತಃ । ತದುದಿತಮುದಯನೇನ —

ಆಗಮಾದೇಃ ಪ್ರಮಾಣತ್ವೇ ಬಾಧನಾದನಿಷೇಧನಮ್ ।
ಆಭಾಸತ್ವೇ ತು ಸೈವ ಸ್ಯಾದಾಶ್ರಯಾಸಿದ್ಧಿರುದ್ಧತಾ ॥

(ನ್ಯಾ - ಕು ೩ । ೫ । ೩ ॥

ನ ಚ ವಿಶೇಷವಿರೋಧಃ – ಶಕ ಶಂಕ್ಯಃ । ಜ್ಞಾತತತ್ವಾಜ್ಞಾತತತ್ವಾ ವಿಕಲ್ಪಪರಾಹತತತ್ವಾತ್ ।

ಈಶ್ವರನು ಕರ್ತೃವಾದರೆ ಶರೀರವುಳ್ಳವನಾಗ ಬೇಕಾಗುತ್ತದೆಯೆಂದು ಸಿದ್ಧಾಂತಿ ಸಂಮತವಾದ ಅನುಮಾನಕ್ಕೆ ಪ್ರತಿಕೂಲ ತರ್ಕವನ್ನು ಶಂಕಿಸುತ್ತಾನೆ. ಅವನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಮಾನ. 'ಈಶ್ವರಃ- ನಗಸಾಗರಾದಿಕರ್ತಾನ ಭವತಿ — ಶರೀರ ರಹಿತತ್ವಾತ್ । ಆಕಾಶವತ್" ಹೀಗೆ ಆಶಂಕಿಸಿದರೆ ಉಕ್ತಿವ್ಯಾಘಾತವನ್ನು ತೋರಿಸುತ್ತಾನೆ. 'ಈಶ್ವರ ಸಿದ್ಧಿ—' ಇತಿ. ಆಗಮಾದಿ ಪ್ರಮಾಣದಿಂದ ಈಶ್ವರನು ಸಿದ್ಧಿಸುವುದಾದರೆ ಅದೇ ಪ್ರಮಾಣದಿಂದ ಜಗತ್ ಕರ್ತೃತ್ವವನ್ನೂ ಒಪ್ಪಬೇಕಾಗುತ್ತದೆ. ಆಗ ಪೂರ್ವ ಪಕ್ಷಿಯು ಅನುಮಾನವು ಬಾಧಿತವಾಗುವುದರಿಂದ ಅದರಿಂದ ಕರ್ತೃತ್ವ ನಿಷೇಧವು ಸಿದ್ಧಿಸಲಾರದು. ಆಗಮಾದಿಗಳು ಪ್ರಮಾಣನಲ್ಲ. ಅವು ಪ್ರಮಾಣಾ ಭಾಸಗಳು ಎಂದು ಹೇಳುವುದಾದರೆ ಆಗ ಈಶ್ವರನು ಅಸಿದ್ಧನಾಗುತ್ತಾನೆ. ಇದರಿಂದ ಪೂರ್ವಪಕ್ಷಿಯ ಅನುಮಾನದಲ್ಲಿ ಪಕ್ಷಾಸಿದ್ಧ ವಾಗುವುದರಿಂದ (ಆಶ್ರಯಾಸಿದ್ಧಿ ದೋಷದಿಂದ) ಅವನ ಅಭಿಮತವು ಸಿದ್ಧಿ ಯಾಗಲಾರದು. ಹೀಗೆ ಎರಡು ರೀತಿಯಿಂದಲೂ ವ್ಯಾಘಾತ ವುಂಟಾಗುತ್ತದೆ. ಇದನ್ನೇ ಉದಯನಾಚಾರ್ಯರು ಶ್ಲೋಕದಿಂದ ವಿವರಿಸಿರುತ್ತಾರೆ. "ನ ಚ ವಿಶೇಷ—' ಇತಿ. ವಿಶೇಷ ಸ್ವಭಾವ ವಿರುದ್ಧವಾಗಿದೆಯೆಂದು ಹೇಳಬಾರದು. ಜ್ಞಾತತ್ವಾ ಜ್ಞಾತತ್ವಾ ವಿಕಲ್ಪದಿಂದ ಅದು ಯುಕ್ತವಾಗುವುದಿಲ್ಲ. ಈಶ್ವರನು ನಿತ್ಯದ್ರವ್ಯನೆಂದು ಅವನಲ್ಲಿ ವಿಶೇಷವನ್ನು ತಾರ್ಕಿಕರು ಅಂಗೀಕರಿಸಿರುತ್ತಾರೆ. ಸ್ವಭಾವದಿಂದಲೇ ವಿಶೇಷವು ಸ್ವಕ್ಷಣವಾಗಿ ಇತರ ಎಲ್ಲಾ ಪದಾರ್ಥಗಳಿಂದ ವಿಲಕ್ಷಣವಾಗಿರುತ್ತದೆ. ಹೀಗಿರುವಾಗ ಜೀವನಲ್ಲಿಯೇ ಕರ್ತೃತ್ವವನ್ನು ನೋಡಿ ತತ್ಸಾಲಕ್ಷಣ್ಯದಿಂದ ಎಲ್ಲರಿಂದಲೂ ವಿಲಕ್ಷಣ ನಾದ ಯಾರಿಂದಲೂ ನೋಡಲ್ಪಡದಿರುವ ಈಶ್ವರನಲ್ಲಿ ಕರ್ತೃತ್ವವನ್ನು ಸಾಧಿಸುವುದು ಹೇಗೆ? ಹಾಗೆ ಅಂಗೀಕರಿಸಿದರೆ ವಿಶೇಷ ಸ್ವಭಾವ ವಿರುದ್ಧವಾಗುತ್ತದೆಯೆಂದು ಪೂರ್ವ ಪಕ್ಷಿಯ ಅಭಿಪ್ರಾಯ. ಆಗ ಸಮಾಧಾನ. ಪರಮಾತ್ಮನಲ್ಲಿರುವ ವಿಶೇಷವು ಜ್ಞಾತ ವಾಗಿದೆಯೇ ? ಅಥವಾ ಅಜ್ಞಾತವೇ ? ಜ್ಞಾತವೆಂದರೆ ಅದು ಇತರರಲ್ಲಿಲ್ಲದಿರುವ ಎಂದೂ ಎಲ್ಲಿಯೂ ಕಂಡುಬರದಿರುವ ಜಗತ್ಕರ್ತೃತ್ವಕ್ಕೂ ಪ್ರಯೋಜಕನಾಗುತ್ತದೆ. ಇದರಿಂದ ಬಾಧಯಾವುದೂ ತೋರುವುದಿಲ್ಲ. ಅಜ್ಞಾತವೆಂದರೆ ಅದನ್ನು ಆಶ್ರಯಿಸಿ ಅನುಮಾನಕ್ಕೆ ವಿರೋಧೋದ್ಭಾವನೆ ಮಾಡುವುದು ಕೂಡುವುದಿಲ್ಲ. ಹೀಗೆ ಎರಡು ರೀತಿಯಿಂದಲೂ ಸಮಂಜಸವಾಗದಿರುವುದರಿಂದ ಸಿದ್ಧಾಂತಿಯ ಅನುಮಾನವು ನಿರ್ದುಷ್ಟವಾಗುತ್ತದೆ.

ಸ್ಯಾದೇತತ್ । ಪರಮೇಶ್ವರಸ್ಯ ಜಗನ್ನಿರ್ಮಾಣೇ ಪ್ರವೃತ್ತಿಃ ಕಿಮರ್ಥಾ । ಸ್ವಾರ್ಥಾ ಪರಾರ್ಥಾವಾ ಆದ್ಯೈಪೀಷ್ಟಪ್ರಾಪ್ತ್ಯರ್ಥಾನಿಷ್ಟಪರಿಹಾರಾರ್ಥಾ ವಾ । ನಾದ್ಯಃ । ಅವ್ಯಾಪ್ತಸಕಲಕಾಮಸ್ಯ ತದನುಪಪತ್ತೇಃ । ಅತ ಏವ ನ ದ್ವಿತೀಯಃ । ದ್ವಿತೀಯೆ ಪ್ರವೃತ್ತ್ಯನುಪಪತ್ತಿಃ । ಕಃ ಖಲು ಪರಾರ್ಥಂ ಪ್ರವರ್ತಮಾನಂ ಪ್ರೇಕ್ಷಾವಾನಿತ್ಯಾ ಚಕ್ಷೀತ । ಅಥ ಕರುಣಯಾ ಪ್ರವೃತ್ತ್ಯುಪಪತ್ತಿರಿತ್ಯಾಚಕ್ಷೀತ ಕಶ್ಚಿತ್ ತಂ ಪ್ರತ್ಯಾ ಚಕ್ಷೀತ । ತರ್ಹಿ ಸರ್ವಾನ್ ಪ್ರಾಣಿನಃ ಸುಖಿನ ಏವ ಸೃಜೇದೀಶ್ವರಃ। ನ ದುಃಖಶಬಲಾನ್ । ಕರುಣಾವಿರೋಧಾತ್ । ಸ್ವಾರ್ಥಮನಪೇಕ್ಷ್ಯ ಪರದುಃಖ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಹಾಣೇಚ್ಛಾ ಹಿ ಕಾರುಣ್ಯಮ್ । ತಸ್ಮಾದೀಶ್ವರಸ್ಯ ಜಗತ್ಸರ್ಜನಂ ನ ಯುಜ್ಯತೇ ತದುಕ್ತಂ ಭಟ್ಟಾಚಾರ್ಯೈಃ—
ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ ॥
ಜಗಚ್ಚ ಸೃಜತಸ್ತಸ್ಯ ಕಿಂ ನಾಮ ನ ಕೃತಂ ಭವೇತ್ ॥ ಇತಿ ॥

ಪರಮೇಶ್ವರನು ಏತಕ್ಕೋಸ್ಕರ ಜಗತ್ತನ್ನು ನಿರ್ಮಿಸಬೇಕು. ಸ್ವಾರ್ಥ ಅಥವಾ ಪರಾರ್ಥಗಳಿಂದ ಲೋಕದಲ್ಲಿ ಜನರ ಪ್ರವೃತ್ತಿ ತೋರುತ್ತದೆ. ಈಶ್ವರನು ಸ್ವಾರ್ಥ ಕ್ಕೋಸ್ಕರ ಸೃಷ್ಟಿಸುತ್ತಾನೆಯೋ ? ಅದೂ ಇಷ್ಟಪ್ರಾಪ್ತಿ, ಅನಿಷ್ಟ ಪರಿಹಾರಾರ್ಥವಾಗಿ ಎರಡು ವಿಧವಾಗಿ ಪ್ರಸಿದ್ಧವಾಗಿದೆ. 'ಅವಾಪ್ತ'— ಇತಿ. ಸಕಲಕಾಮನೆಯನ್ನೂ ಹೊಂದಿದ ಪರಮೇಶ್ವರನಿಗೆ ಇಷ್ಟಪ್ರಾಪ್ತಿಗೋಸ್ಕರ ಜಗನ್ನಿರ್ಮಾಣವೆಂಬುದು ಸಮಂಜಸ ವಾಗುವುದಿಲ್ಲ. 'ಅತಃ' — ಇತಿ. ಸಕಲಕಾಮನೆಯನ್ನೂ ಹೊಂದಿದ ಸಕಲಕಾಮ ನಾದುದರಿಂದ ಅನಿಷ್ಟಪರಿಹಾರಕ್ಕೋಸ್ಕರವೂ ಪ್ರವೃತ್ತಿಯುಕ್ತವಾಗುವುದಿಲ್ಲ. ದ್ವಿತೀಯೇ ಇತಿ. ಪರಾರ್ಥಪ್ರವೃತ್ತಿಯನ್ನಂಗೀಕರಿಸುವುದಾದರೂ ಕೂಡುವುದಿಲ್ಲ. ಬುದ್ಧಿಯಿದ್ದ ವನು ಸ್ವಾರ್ಥವಿಲ್ಲದೆ ಪರಾರ್ಥದಲ್ಲಿ ಪ್ರವರ್ತಿಸುತ್ತಾನೆಂದು ಹೇಳಲಾರನು. ಕಾರುಣ್ಯ ದಿಂದ ಹಾಗೆ ಮಾಡುತ್ತಾನೆಂದು ಹೇಳುವುದಾದರೆ ಆಗ ಅವನನ್ನು ಕೇಳಬೇಕು. ಕರುಣಾಳುವಾದ ಈಶ್ವರನು ಎಲ್ಲಾ ಪ್ರಾಣಿಗಳನ್ನು ಸುಖಿಯಾಗಿಯೇ ಏಕೆ ಸೃಷ್ಟಿಸಲಿಲ್ಲ. ದುಃಖ ಮಿಶ್ರಿತವಾಗಿ ಸೃಷ್ಟಿಸಬಾರದಿತ್ತು. ಹಾಗೆ ಮಾಡಿದರೆ ಅವನ ಕರುಣಾಳುತ್ವಕ್ಕೆ ಭಂಗ ಬರುವುದಿಲ್ಲವೇ ? ಸ್ವಾರ್ಥವನ್ನು ಎಣಿಸದೆ ಪರದುಃಖ ನಿವಾರಣೆಮಾಡುವ ಇಚ್ಛೆಗೇ ಕಾರುಣ್ಯವೆಂದು ಕರೆಯುತ್ತಾರೆ. ಆದುದರಿಂದ ಪರಮಾತ್ಮನಿಗೆ ಜಗತ್ಸೃಷ್ಟೃತ್ವವು ಸಂಭವಿಸುವುದಿಲ್ಲ. ಭಟ್ಟಾಚಾರ್ಯರೂ ಇದನ್ನೇ ಹೇಳಿರುತ್ತಾರೆ. 'ಪ್ರಯೋಜನಂ' – ಇತಿ. ಎಂತಹ ಜಡಮತಿಯೂ ಪ್ರಯೋಜನದ ಉದ್ದೇಶವಿಲ್ಲದೆ ಯಾವ ಕೆಲಸವನ್ನೂ ಮಾಡುವುದಿಲ್ಲ. ಹೀಗಿರುವಾಗ ಪರಮಾತ್ಮನು ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವುದು ಹೇಗೆ ? ಎಂದು ತಾತ್ಪರ್ಯ. (ಕಿಂನಾಮ ನಕೃತಂ —ಅಪಿ ತು ಸರ್ವಮೇವ ಕೃತಂ)

ಅತ್ರೋಚ್ಯತೇ । ನಾಸ್ತಿಕಶಿರೋಮಣೇ ತಾವದೀರ್ಷ್ಯಾಕಷಾಯಿತೇ ಚಕ್ಷುಷೀ ನಿಮೀಲ್ಯ ಪರಿಭಾವಯತು ಭವಾನ್ । ಕರುಣಯಾ ಪ್ರವೃತ್ತಿರಸ್ತ್ಯೇವ। ನ ಚ ನಿಸರ್ಗತಃ ಸುಖಮಯಸರ್ಗ ಪ್ರಸಂಗಃ । ಸೃಜ್ಯಪ್ರಾಣಿಕೃತಸುಕೃತ ದುಷ್ಕೃತಪರಿಪಾಕ ವಿಶೇಷಾದ್ವೈಷಮ್ಯೋಪಪತ್ತೇಃ । ನ ಚ ಸ್ವಾತಂತ್ರ್ಯಭಂಗಃ ಶಂಕನೀಯಃ । ಸ್ವಾಂಗಂ ಸ್ವವ್ಯವಧಾಯಕಂ ನ ಭವತೀತಿ ನ್ಯಾಯೇನ ಪ್ರತ್ಯುತ ತನ್ನಿರ್ವಾಹಾತ್ ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ (ತೈ–ಸಂ–೧–೮–೯) ಇತ್ಯಾದಿರಾಗ ಮಸ್ತತ್ರಪ್ರಮಾಣಮ್ ॥

ನಾಸ್ತಿಕ ಶ್ರೇಷ್ಠನೇ ಅಸೂಯೆಯಿಂದ ತುಂಬಿದ ಕಣ್ಣನ್ನು ಬಿಡಿಸಿ ನೋಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಿದುದನ್ನು ವಿಮರ್ಶಿಸಿ ತಿಳಿ. ಕರುಣೆಯಿಂದಲೇ ಪರಮಾತ್ಮನು ಜಗತ್ತನ್ನು ಸೃಷ್ಟಿಸುತ್ತಾನೆ. 'ನ ಚ'—ಇತಿ. ಇದರಿಂದ ಸ್ವಾಭಾವಿಕವಾಗಿ ಸುಖಮಯ ಸೃಷ್ಟಿಯೇ ಆಗಲೆಂದು ಶಂಕಿಸಬಾರದು. ಸೃಜಿಸುವ ಪ್ರಾಣಿಗಳು ಮಾಡಿದ ಸುಕೃತ ದುಷ್ಕೃತಗಳ ಪರಿಪಾಕದಿಂದ ಸಾಮ್ಯವೈಷಮ್ಯವು ಕೂಡುತ್ತದೆ. ಜಗತ್ ಸೃಷ್ಟಿಯಲ್ಲಿ ಈಶ್ವರನು ಪ್ರಾಣಿಗಳ ಕರ್ಮವನ್ನಾಶ್ರಯಿಸುವುದಾದರೆ ಪರಾವಲಂಬಿಯಾಗುವುದರಿಂದ ಅವನ ಸ್ವಾತಂತ್ರ್ಯಕ್ಕೆ ಭಂಗ ಬರುವುದಿಲ್ಲವೇ ? ಎಂದು ಶಂಕಿಸಬಾರದು. 'ಸ್ವಾಂಗಂ' —ಇತಿ. ಒಂದು ಕಾರ್ಯವನ್ನಾರಂಭಿಸುವಾಗ ತನ್ನ ಹಸ್ತಪಾದಾದಿಗಳ ವ್ಯವಧಾನ ವುಂಟಾಗುತ್ತದೆಂದು ಯಾರೂ ಭಾವಿಸುವುದಿಲ್ಲ. ಅದು ಕಾರ್ಯನಿರ್ವಾಹಕ್ಕೆ ಸಹಾಯ ವಾಗುತ್ತದೆ. ಹಾಗೆ ಜಗದಂತರ್ಗತವಾದ ಕರ್ಮವೂ ಈಶ್ವರನಿಂದಲೇ ಸೃಷ್ಟವಾದುದ ರಿಂದ ಅದನ್ನು ಅಪೇಕ್ಷಿಸಿ ಈಶ್ವರನು ಎಂದೂ ಪರಾವಲಂಬಿಯಾಗುವುದಿಲ್ಲ. ಸ್ವಾರಬ್ಧ ಕಾರ್ಯಕ್ಕೆ ಸ್ವಾಧೀನವಾದ ಅದು ಸಾಧನವಾಗುವುದರಿಂದ ಸ್ವಾತಂತ್ರ್ಯದ ಉತ್ಕರ್ಷವೇ ಸಿದ್ಧಿಸುತ್ತದೆ. ಈಶ್ವರನಿದ್ದಾನೆ ಎಂಬುದರಲ್ಲಿ ಆಗಮ ಪ್ರಮಾಣವನ್ನು ತೋರಿಸುತ್ತಾನೆ. 'ಏಕ ಏವ'—ಇತಿ. ಒಬ್ಬನೇ ಈಶ್ವರನಿರುವುದು. ಅವನಿಗೆ ದ್ವಿತೀಯನು ಯಾರೂ ಇಲ್ಲ. ದ್ವಿತೀಯವಾಗಿ ತೋರುವ ಈ ಪ್ರಪಂಚವು ಅವನಿಂದಲೇ ಸೃಷ್ಟವಾದುದೆಂದರ್ಥ.

ಯದ್ಯೇವಂ ತರ್ಹಿ ಪರಸ್ಪರಾಶ್ರಯಬಾಧವ್ಯಾಧಿಂ ಸಮಾಧತ್ಸ್ವ-ಇತಿ ಚೇತ್ ತಸ್ಯಾನುತ್ಥಾನಾತ್ । ಕಿಮುತ್ಪತ್ತೌ ಪರಸ್ಪರಾಶ್ರಯಃ ಶಂಕ್ಯತೇ ಜ್ಞಪ್ತೌ ವಾ। ನಾದ್ಯಃ ಆಗಮಸ್ಯೇಶ್ವರಾಧೀನೋತ್ಪತ್ತಿಕತ್ವೇಽಪಿ ಪರಮೇಶ್ವರಸ್ಯ ನಿತ್ಯತ್ವೇನೋತ್ಪತ್ತೇರನುಪಪತ್ತೇಃ । ನಾಪಿ ಜ್ಞಪ್ತೌ । ಪರಮೇಶ್ವರಸ್ಯಾಗಮಾಧೀನಜ್ಞಪ್ತಿಕತ್ವೇಽಪಿ । ತಸ್ಯಾನ್ಯತೋಽವಗಮಾತ್ । ನಾಪಿ ತದನಿತ್ಯತ್ವಜ್ಞಪ್ತೌ । ಆಗಮಾನಿತ್ಯತ್ವಸ್ಯ ಶೀಘ್ರಾದಿಧರ್ಮೋಪೇತತ್ವಾದಿನಾ ಸುಗಮತ್ವಾತ್। ತಸ್ಮಾನ್ನಿರ್ವರ್ತಕಧರ್ಮಾನುಷ್ಠಾನವಶಾದೀಶ್ವರ ಪ್ರಸಾದ ಸಿದ್ಧಾವಭಿಮತೇಷ್ಟಸಿದ್ಧಿರಿತಿ ಸರ್ವಮವದಾತಮ್॥

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನ ಸಂಗ್ರಹೇಽಕ್ಷಪಾದದರ್ಶನಮ್

ಈಶ್ವರನನ್ನು ಆಗಮದಿಂದ ಸಾಧಿಸುವುದಾದರೆ ಈಶ್ವರಾಗಮಗಳಿಗೆ ಪರಸ್ಪರಾಶ್ರಯ ರೂಪವಾದ ದೋಷರೂಪ ವ್ಯಾಧಿಯ ಪ್ರತೀಕಾರವನ್ನು ಮಾಡು ಎಂದು ಪೂರ್ವಪಕ್ಷಿ ಹೇಳುವುದಾದರೆ ಅದಕ್ಕೂ ಅವಕಾಶವಿಲ್ಲವೆಂದು ತೋರಿಸುತ್ತಾನೆ. 'ತಸ್ಯ'—ಇತಿ. ಅನ್ಯೋನ್ಯಾಶ್ರಯ ದೋಷವನ್ನು ಪರಿಹರಿಸುವುದು ಅಶಕ್ಯವೆಂದು ಪೂರ್ವಪಕ್ಷಿಯು ತಿಳಿದಿರಬಹುದು. ಆದರೆ ಆ ದೋಷದ ಉತ್ಥಿತಿಯೇ ಇಲ್ಲಿ ಉಂಟಾಗುವುದಿಲ್ಲ. ಉತ್ಪತ್ತಿಯಲ್ಲಿ ಅನ್ಯೋನ್ಯಾಶ್ರಯವೇ ಅಥವಾ ಜ್ಞಾನದಲ್ಲಿಯೇ ? ಉತ್ಪತ್ತಿಯಲ್ಲಿ ಆ ದೋಷವನ್ನು ಹೇಳಲು ಸಾಧ್ಯವಿಲ್ಲ. ಆಗಮವು ಈಶ್ವರಾಪೇಕ್ಷವಾದ ಉತ್ಪತ್ತಿಯನ್ನು ಹೊಂದಿದ್ದರೂ, ಪರಮೇಶ್ವರನು ನಿತ್ಯನಾದುದರಿಂದ ಅವನಿಗೆ ಉತ್ಪತ್ತಿಯೇ ಇರುವುದಿಲ್ಲ- ಆದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉತ್ಪತ್ತಿಯಲ್ಲಿ ಈಶ್ವರನು ಆಗಮದ ಅಪೇಕ್ಷೆಯನ್ನು ಹೊಂದುವುದಿಲ್ಲ. ನಿತ್ಯನಾದುದರಿಂದಲೇ ಈಶ್ವರನು ಸ್ವತಃ ಪ್ರಾಮಾಣ್ಯವುಳ್ಳವನಾಗುತ್ತಾನೆ. ಆದುದರಿಂದ ಈಶ್ವರ ಪ್ರಾಮಾಣ್ಯೋತ್ಪತ್ತಿಯಲ್ಲಿಯೂ ಆಗಮದ ಅಪೇಕ್ಷೆ ಇರುವುದಿಲ್ಲ. 'ನಾಪಿ ಜ್ಞಾನೇ—ಇತಿ. ಜ್ಞಾನದಲ್ಲಿಯೂ ಈ ದೋಷಕ್ಕವಕಾಶ ಇರುವುದಿಲ್ಲ. ಪರಮೇಶ್ವರನು ಆಗಮಾಧೀನನಾಗಿ ತಿಳಿದು ಬಂದರೂ (ತಪ್ಪ) ಆಗಮದಜ್ಞಾನವು ಈಶ್ವರಾಧೀನವಾಗುವುದಿಲ್ಲ. ಘಟವು ಉತ್ಪತ್ತಿಯಲ್ಲಿ ಕುಂಬಾರಸೇಕ್ಷಿಯಾದರೂ ಅದರ ಜ್ಞಾನದಲ್ಲಿ ಕುಂಬಾರಸೇಕ್ಷಿಯಾಗುವುದಿಲ್ಲ. ಪ್ರಕಾಶಾದಿಗಳಿಂದ ಅದರ ಜ್ಞಾನವಾಗುತ್ತದೆ. ಹಾಗೆ ಗುರು ಪರಂಪರೆಯಿಂದ ತಿಳಿಯಲ್ಪಡುವ ಆಗಮವು ಈಶ್ವರಾಪೇಕ್ಷಿಯಾಗುವುದಿಲ್ಲ. ಆಗಮದಲ್ಲಿರುವ ಧರ್ಮಗಳ ಜ್ಞಾನದಲ್ಲಿಯೂ ಈಶ್ವರಾಪೇಕ್ಷಿತ್ವವಿಲ್ಲವೆಂದು ತಿಳಿಸುತ್ತಾನೆ. 'ನಾಪಿ'—ಇತಿ. ತೀವ್ರಾದಿಪದದಿಂದ ತೀಕ್ಷ್ಣ, ದುಃಸಹ, ಭಯಂಕರ, ಕಟು, ಇತ್ಯಾದಿ ತೆಗೆದುಕೊಳ್ಳಬೇಕು. ಅರ್ಥವಿಶಿಷ್ಟವಾದ ಶಬ್ದವೇ ಆಗಮ. ಅಲ್ಲಿ ಹೇಳಿದ ಅರ್ಥದಲ್ಲಿ ಕೆಲವು ಕಡೆ ತೀಕ್ಷ್ಣತ್ವಾದಿಧರ್ಮಗಳು ಇರುತ್ತವೆ. ಶಬ್ದದಲ್ಲಿ ಕರ್ಣ ಕಟುತ್ವಾದಿ ಧರ್ಮಗಳಿರುತ್ತವೆ. ಈ ಧರ್ಮಗಳೆಲ್ಲಾ ಅನಿತ್ಯತ್ವವ್ಯಾಪ್ಯಗಳಾದುದರಿಂದ ಆಗಮಾನಿತ್ಯತ್ವವನ್ನು ಜ್ಞಾಪಿಸುತ್ತವೆ. ವಿಷಯಭೇದದಿಂದ ಅನ್ಯೋನ್ಯಾಶ್ರಯಕ್ಕೆ ಅವಕಾಶವಿಲ್ಲ. ಸ್ಥಳದಲ್ಲಿ ಹಡಗನ್ನು ಇನ್ನೊಂದೆಡೆ ಒಯ್ಯಲು ಗಾಡಿಯ ಅಪೇಕ್ಷೆ ಬೇಕಾಗುತ್ತದೆ. ಜಲದಲ್ಲಿ ಗಾಡಿಯನ್ನು ಬೇರೆ ಕಡೆ ಒಯ್ಯಲು ಹಡಗಿನ ಅಪೇಕ್ಷೆ ಬೇಕಾಗುತ್ತದೆ. ಹೀಗೆ ಆಶ್ರಯಾಪೇಕ್ಷೆಯಿಂದ ಅನ್ಯೋನ್ಯಾಶ್ರಯ ತೋರಿದರೂ ಆಧಾರಭೇದದಿಂದ ಎಂದರೆ ಜಲನೆಲವನ್ನು ಕ್ರಮವಾಗಿ ತೆಗೆದುಕೊಂಡಾಗ ಈ ದೋಷಕ್ಕೆ ಅವಕಾಶವಿಲ್ಲ. ಅದರಂತೆ ಈಶ್ವರಾಗಮಗಳಿಗೆ ಅನ್ಯೋನ್ಯಾಶ್ರಯ ದೋಷವನ್ನು ಹೇಳಲು ಸಾಧ್ಯವಿಲ್ಲ. ಇವೆರಡರ ಪ್ರಾಮಾಣ್ಯ ವಿಷಯದಲ್ಲಿಯೂ ದೋಷಕ್ಕೆ ಸಂಭವವಿಲ್ಲ. 'ತಸ್ಮಾತ್'—ಇತಿ. ನಿವೃತ್ತಿಧರ್ಮಗಳನ್ನು ಆಚರಿಸುವುದರಿಂದ ಈಶ್ವರಾನುಗ್ರಹವಾಗಿ ಪುರುಷನು ಹೊಂದಬೇಕಾದ ದುಃಖನಿವೃತ್ತಿರೂಪ ಕೈವಲ್ಯವನ್ನು ಹೊಂದುತ್ತಾನೆ.

ಹೀಗೆ ಸರ್ವದರ್ಶನ ಸಂಗ್ರಹದಲ್ಲಿ ಅಕ್ಷಪಾದದರ್ಶನದ ಕನ್ನಡ ವ್ಯಾಖ್ಯಾನ ಮುಗಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಜೈಮಿನಿದರ್ಶನಮ್ ॥ ೧೨ ॥

ನನು ಧರ್ಮಾನುಷ್ಠಾನವಶಾತ್ ಅಭಿಮತಧರ್ಮಸಿದ್ಧಿರಿತಿ ಜೇಗೀಯತೇ ಭವತಾ। ಧರ್ಮಃ ಕಿಂಲಕ್ಷಣಃ ಕಿಂ ಪ್ರಮಾಣಕಃ ಇತಿ ಚೇತ್ ಉಚ್ಯತೇ। ಶ್ರೂಯತಾ ಮವಧಾನೇನ। ಅಸ್ಯ ಪ್ರಶ್ನಸ್ಯ ಪ್ರತಿವಚನಂ ಪ್ರಾಚ್ಯಾಂ ಮೀಮಾಂಸಾಯಾಂ ಪ್ರಾದರ್ಶಿ ಜೈಮಿನಿನಾ ಮುನಿನಾ। ಸಾಹಿ ಮೀಮಾಂಸಾ ದ್ವಾದಶಲಕ್ಷಣೀ। ತತ್ರ ಪ್ರಥಮೇಽಧ್ಯಾಯೇ ವಿಧ್ಯರ್ಥವಾದಮಂತ್ರಸ್ಮೃತಿನಾಮಧೇಯಾ ರ್ಥಕಸ್ಯ ಶಬ್ದ ರಾಶೇಃ ಪ್ರಾಮಾಣ್ಯಮ್। ದ್ವಿತೀಯೇ ಉಪೋದ್ಘಾತ ಕರ್ಮ ಭೇದ ಪ್ರಮಾಣಾಪವಾದ ಪ್ರಯೋಗ ಭೇದರೂಪೋಽರ್ಥಃ। ತೃತೀಯೇ ಶ್ರುತಿ ಲಿಂಗ ವಾಕ್ಯಾದಿವಿರೋಧ ಪ್ರತಿಪತ್ತಿಕರ್ಮಾನಾರಭ್ಯಾಧೀತ ಬಹುಪ್ರಧಾನೋಪ ಪಕಾರಕ ಪ್ರಯಾಜಾದಿ ಯಜಮಾನ ಚಿಂತನಮ್ ॥

ವಿಹಿತಕರ್ಮಾನುಷ್ಠಾನದಿಂದ ಈಶ್ವರಾನುಗ್ರಹವಾಗಿ ಅಭಿಮತೇಷ್ಟಸಿದ್ಧಿಯಾಗುತ್ತ ದೆಂದು ಅಕ್ಷಪಾದದರ್ಶನದಲ್ಲಿ ಹೇಳಿದೆ. ಆಗ ಧರ್ಮವೆಂದರೇನು? ಅದಕ್ಕೆ ಪ್ರಮಾಣ ಯಾವುದು? ಎಂದು ಜಿಜ್ಞಾಸೆ ಬರುತ್ತದೆ. ಅವಧಾನದಿಂದ ಕೇಳೆಂದು ತಿಳಿಸುತ್ತಾರೆ. ಈ ಪ್ರಶ್ನೆಗೆ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಜೈಮಿನಿಮುನಿಗಳಿಂದ ಉತ್ತರವು ಚನ್ನಾಗಿ ತೋರಿಸಿದೆ. ಅವರ ಮೀಮಾಂಸಾಶಾಸ್ತ್ರವು ಹನ್ನೆರಡು ಅಧ್ಯಾಯಗಳಿಂದ ಕೂಡಿದೆ. ಲಕ್ಷಣಶಬ್ದವು ಇಲ್ಲಿ ಅಧ್ಯಾಯವನ್ನು ಸೂಚಿಸುತ್ತದೆ. ದ್ವಾದಶಾನಾಂ ಲಕ್ಷಣಾನಾಂ ಸಮಾಹಾರಃ ದ್ವಾದಶಲಕ್ಷಣೀ. ಈ ಶಾಸ್ತ್ರಕ್ಕೆ ಪ್ರಧಾನವಾಗಿ ಧರ್ಮವೇ ವಿಷಯವಾಗಿದೆ. ಪ್ರಥಮಾಧ್ಯಾಯದ ಪ್ರಥಮ ಪಾದದಲ್ಲಿ ವಿಧಿಗೆ ಪ್ರಾಮಾಣ್ಯವಿಚಾ ರವೂ, ಎರಡನೆಯ ಪಾದದಲ್ಲಿ ಅರ್ಥವಾದ ಮಂತ್ರಗಳ ಪ್ರಾಮಾಣ್ಯವೂ, ೩ನೇ ಪಾದ ದಲ್ಲಿ ಮನ್ವಾದಿಸ್ಮೃತಿ ಪ್ರಾಮಾಣ್ಯವೂ, ಆಚಾರಪ್ರಾಮಾಣ್ಯವೂ, ನಿರೂಪಿತವಾಗಿವೆ. ೪ನೇ ಪಾದದಲ್ಲಿ ಉದ್ಭಿತ್, ಚಿತ್ರಾದಿ ನಾಮಧೇಯಗಳ ಪ್ರಾಮಾಣ್ಯ ಹೇಳಿದೆ. 'ದ್ವಿತೀಯೇ' — ಇತಿ. ೨ನೇ ಅಧ್ಯಾಯದ ಒಂದನೇ ಪಾದದಲ್ಲಿ ಆಖ್ಯಾತವೇ ಅಪೂರ್ವ ಬೋಧಕವೆಂದೂ, ಅಪೂರ್ವಒಂದಿದೆಯೆಂದೂ ಹೀಗೆ ಕರ್ಮಭೇದ ಚಿಂತೆಗೆ ಉಪಯುಕ್ತವಾದ ಉಪೋದ್ಘಾತವು ವರ್ಣಿಸಿದೆ. ೨ನೇ ಪಾದದಲ್ಲಿ ಧಾತುಭೇದ, ಪುನ ರುಕ್ತ್ಯಾದಿಗಳಿಂದ ಕರ್ಮಭೇದವೂ, ೩ರಲ್ಲಿ ಕರ್ಮಭೇದ ಪ್ರಾಮಾಣ್ಯಾಪವಾದವೂ, ನಾಲ್ಕನೇಪಾದದಲ್ಲಿ ನಿತ್ಯಕಾಮ್ಯಪ್ರಯೋಗಗಳ ಭೇದವೂ ವರ್ಣಿತವಾಗಿದೆ. ಮೂರನೇ ಅಧ್ಯಾಯದಲ್ಲಿ ೮ ಪಾದಗಳಿವೆ. ಒಂದನೇಪಾದದಲ್ಲಿ ಅಂಗತ್ವಬೋಧಕಗಳಾದ ಶ್ರುತ್ಯಾದಿ ಪ್ರಮಾಣ ಷಟ್ಕಗಳಲ್ಲಿ ಶ್ರುತಿಯು ವಿಚಾರಿತವಾಗಿದೆ. ೨ರಲ್ಲಿಲಿಂಗವೂ ಮೂರರಲ್ಲಿ ವಾಕ್ಯ ಪ್ರಕರಣಸ್ಥಾನಸಮಾಖ್ಯಾರೂಪ ಪ್ರಮಾಣಚತುಷ್ಟಯವೂ ವಿಚಾರಿತವಾಗಿದೆ. ೪ರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿವೀತೋಪವೀತಾದಿಗಳಲ್ಲಿ ಅರ್ಥವಾದತ್ವ, ವಿಧಿತ್ವಾದಿನಿರ್ಣಯ ಹೇತುವಾದ ಶ್ರುತ್ಯಾದಿಗಳ ಪರಸ್ಪರ ವಿರೋಧಸದಸದ್ಭಾವವೂ, ೫ರಲ್ಲಿ ಪ್ರತಿಪತ್ತಿಕರ್ಮಗಳೂ. (ಉಪಯುಕ್ತ ದ್ರವ್ಯಗಳ ವಿನಿಯೋಗವೇ ಪ್ರತಿಪತ್ತಿಕರ್ಮ) ೬ರಲ್ಲಿ ಅನಾರಭ್ಯಾಧೀತ ಕರ್ಮಗಳೂ ೭ರಲ್ಲಿ ಅನೇಕ ಪ್ರಧಾನೋಪಕಾರಕಪ್ರಯಾಜಾದಿ ಕರ್ಮಗಳೂ, ೮ರಲ್ಲಿ ಯಜಮಾನಸಂಬಂಧಿ ಕರ್ಮಗಳೂ ವರ್ಣಿತವಾಗಿವೆ.

ಶ್ರುತ್ಯಾದಿಗಳಲ್ಲಿ ಪೂರ್ವಪೂರ್ವಪ್ರಾಬಲ್ಯವೂ ಉತ್ತರೋತ್ತರದೌರ್ಬಲ್ಯವೂ ಜೈಮಿನಿ ಸೂತ್ರದಲ್ಲಿ ನಿರೂಪಿಸಿದೆ. "ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಖ್ಯಾನಾಂ ಸಮವಾಯೇ ಪಾರದೌರ್ಬಲ್ಯ ಮರ್ಥವಿಪ್ರಕರ್ಷಾತ್" (ಜೈ-ಸೂ-೩-೩-೧೪). ಇದರ ಅರ್ಥ ಮಂತ್ರಕ್ಕಾಗಲೀ, ದೇವತೆಗಾಗಲೀ, ಹವಿರ್ದ್ರವ್ಯಕ್ಕಾಗಲೀ ಯಾವುದಾದರೊಂದಕ್ಕೆ ಎಲ್ಲಿ ವಿನಿಯೋಗವೆಂದು ಆಕಾಂಕ್ಷೆ ಬಂದರೆ ಆಗ ಶ್ರುತ್ಯಾದಿ ಆರು ಪ್ರಮಾಣಗಳು ನಿರ್ಣಾಯಕಗಳಾಗುತ್ತವೆ. ಒಂದರಲ್ಲಿಯೇ ಎರಡು ಮೂರು ಪ್ರಮಾಣಗಳು ಬಂದರೆ ಆಗ ಪರವು ದುರ್ಬಲವೆಂದೂ ಪೂರ್ವಪ್ರಾಮಾಣ್ಯಕ್ಕೇ ಪ್ರಾಬಲ್ಯವೆಂದೂ ತಿಳಿಯಬೇಕು. ವಿನಿಯೋಗರೂಪಾರ್ಥದ ವಿಪ್ರಕರ್ಷವೇ ಇದಕ್ಕೆ ಕಾರಣ, ಅಂದರೆ ಪರವು ಪೂರ್ವಪ್ರಮಾಣಾಪೇಕ್ಷೆಯ ವಿಲಂಬಪ್ರತೀತಿಜನಕವಾಗುತ್ತದೆ. ಎಲ್ಲಾಕಡೆಯಲ್ಲಿಯೂ ಶ್ರುತಿಯೊಂದೇ ನಿರ್ಣಾಯಕವಾದ ಪ್ರಮಾಣ. ಇದು ಸಾಕ್ಷಾತ್‌ಪಠಿತವಾಗಿಯೂ, ಅನುಮಿತವಾಗಿಯೂ ಎರಡು ರೀತಿಯಿಂದ ಪ್ರಮಾಣವಾಗುತ್ತದೆ. ಸಾಕ್ಷಾತ್ಪಠಿತಶ್ರುತಿ ಪ್ರಮಾಣಕ್ಕೆ ಉದಾ:— 'ಐಂದ್ರ್ಯಾ ಗಾರ್ಹಪತ್ಯಮುಪತಿಷ್ಠತೇ' ಇಲ್ಲಿ ಇಂದ್ರಸಂಬಂಧಿಯಾದ ಋಕ್ಕಿಗೆಗಾರ್ಹಪತ್ಯಾಗ್ನಿಯ ಉಪಸ್ಥಾನದಲ್ಲಿ ಸಾಕ್ಷಾತ್ತಾಗಿ ಶ್ರುತಿಯು ವಿನಿಯೋಗವನ್ನು ತಿಳಿಸುತ್ತದೆ. ಅನುಮಿತಶ್ರುತಿಗೆ ಉದಾ:—'ಸ್ಯೋನಂ ತ ಇತಿ ಪುರೋಡಾಶಸ್ಯ ಸದನಂ ಕರೋತಿ'. ಇತಿ । ಈ ವಾಕ್ಯವು ಶ್ರುತಿಯಲ್ಲಿ ಎಲ್ಲಿಯೂ ಪಠಿತವಾಗಿಲ್ಲ. ಆದರೆ 'ಸ್ಯೋನಂ ತೇ ಸದನಂ ಕರೋಮಿ' (ತೈ-ಬ್ರಾ-೩೧೬) ಎಂಬ ಮಂತ್ರಾರ್ಥವನ್ನು ನೋಡಿ ಅದೇ ಲಿಂಗದಿಂದ ಮಂತ್ರಾರ್ಥಾನುಸಾರವಾಗಿ ಮಂತ್ರವಿನಿಯೋಜಕವಾದ ಪ್ರಕೃತಶ್ರುತಿಯು ಅನುಮಿತವಾಗುತ್ತದೆ. ಅದರಿಂದಲೇ ವಿನಿಯೋಗ ಹೇಳಬೇಕು. ೨)ಅರ್ಥಪ್ರಕಾಶನ ಸಾಮರ್ಥ್ಯವೇ ಲಿಂಗ. ಶ್ರುತ್ಯನುಮಾಪಕವಾದ ಈ ಲಿಂಗವು ಕೆಲವು ಕಡೆ ಸಾಕ್ಷಾತ್ತಾಗಿ ತೋರುತ್ತದೆ. ಕೆಲವು ಕಡೆ ಅನುಮಿತವಾಗುತ್ತದೆ. ಸಾಕ್ಷಾತ್ತಾಗಿ ತೋರಿದುದಕ್ಕೆ ಹಿಂದೆ ಹೇಳಿದುದೇ ಉದಾಹರಣೆ. ಅನುಮಿತಲಿಂಗಕ್ಕೆ ಉದಾ:—'ದೇವಸ್ಯತ್ವಾಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮಗ್ನೇ ಜುಷ್ಟಂ ನಿರ್ವಪಾಮಿ' (ತೈ-ಸಂ-೧-೧-೪) ಎಂದು ಒಂದು ಶ್ರುತಿವಾಕ್ಯ ೩) ಆಕಾಂಕ್ಷೆಯಿಂದ ಪರಸ್ಪರಾನ್ವಿತವಾದ ಅರ್ಥಕೊಡುವ ಪದಸಮೂಹವೇ ವಾಕ್ಯ. ಪೂರ್ವೋಕ್ತ ವಾಕ್ಯದಲ್ಲಿ 'ಅಗ್ನಯೇ ಜುಷ್ಟಂ ನಿರ್ವಪಾಮಿ' ಎಂಬ ಭಾಗಕ್ಕೆ ನಿರ್ವಾಪರೂಪಾರ್ಥಪ್ರಕಾಶನ ಸಾಮರ್ಥ್ಯವು ಸಾಕ್ಷಾತ್ತಾಗಿ ತೋರುತ್ತದೆ. ತದೇಕವಾಕ್ಯತಾಪನ್ನವಾದ 'ದೇವಸ್ಯತ್ವಾ'— ಇತ್ಯಾದಿ ಭಾಗಕ್ಕೂ ವಾಕ್ಯಪ್ರಮಾಣ ಬಲದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ವೋಕ್ತ ನಿರ್ವಾಪರೂಪಾರ್ಥಪ್ರಕಾಶನಸಾಮರ್ಥ್ಯವು ಅನುಮಿತವಾಗುತ್ತದೆ. ಹೀಗೆ ಎರಡೂ ಸೇರಿ ಸಮುದಿತಲಿಂಗದಿಂದ "ದೇವಸ್ಯತ್ವೇತಿ ನಿರ್ವಪತಿ" ಎಂಬ ಶ್ರುತಿಯು ಅನುಮಿತವಾಗುತ್ತದೆ. ಆದರಿಂದ ದೇವಸ್ಯತ್ವಾ ಎಂಬ ಮಂತ್ರಕ್ಕೆ ನಿರ್ವಾಪ ಕರ್ಮದಲ್ಲಿ ವಿನಿಯೋಗವೆಂದು ಸಿದ್ಧವಾಗುತ್ತದೆ.

ಲಿಂಗಾನುಮಾಪಕ ವಾಕ್ಯವು ಸಾಕ್ಷಾತ್ ದೃಶ್ಯಮಾನ, ಅನುಮಿತವೆಂದು ಎರಡು ರೀತಿಯಾಗಿರುತ್ತದೆ. ಈಗ ಹೇಳಿರುವುದು ಮೊದಲನೆಯದಕ್ಕಾಗುತ್ತದೆ. ಅನುಮಿತಕ್ಕೆ ಉದಾ:- 'ಸಮಿಧೋ ಯಜತಿ' ಎಂಬಲ್ಲಿ ಇಷ್ಟ ವಿಶೇಷವು ಎಲ್ಲಿಯೂ ತೋರುವುದಿಲ್ಲ. ಆಗ "ಸಮಿಧ್ಯಾಗೇನ ಕಿಂ ಭಾವಯೇತ್" ಎಂದು ಉಪಾಕಾರ್ಯಾ (ಫಲ) ಕಾಂಕ್ಷಾ ಬರುತ್ತದೆ. ದರ್ಶಪೂರ್ಣಮಾಸ ವಿಧಿವಾಕ್ಯದಲ್ಲಿಯೂ (ದರ್ಶಪೂರ್ಣಮಾಸೇನ ಸ್ವರ್ಗಂ ಭಾವಯೇತ್) 'ಕಥಂಭಾವಯೇತ್' ಎಂಬ ಉಪಕಾರಕಾಕಾಂಕ್ಷಾ ಸನ್ನಿಹಿತವಾಗುತ್ತದೆ. ೪) ಉಭಯಾಕಾಂಕ್ಷೆಯೇ ಪ್ರಕರಣವೆಂಬ ಪ್ರಮಾಣ. ಈ ಉಭಯಾ ಕಾಂಕ್ಷೆಯಿಂದ ಅವುಗಳಿಗೆ ಏಕವಾಕ್ಯತ್ವವು ಅನುಮಿತವಾಗುತ್ತದೆ. ಇದರಿಂದ ದರ್ಶಪೂರ್ಣಮಾಸ ಯಾಗಕ್ಕೆ ಫಲವಾದ ಸ್ವರ್ಗಕ್ಕೆ ಸಾಧನವಾದ ಅರ್ಥ ಪ್ರಕಾಶನ ಸಾಮರ್ಥ್ಯವು 'ಸಮಿಧೋ ಯಜತಿ' ಎಂಬುದಕ್ಕೆ ಅನುಮಿತವಾಗುತ್ತದೆ. ಆದರಿಂದ ಒಂದು ಶ್ರುತಿಯು ಅನುಮಿತವಾಗುತ್ತದೆ. ಆ ಶ್ರುತಿಯಿಂದ ಸಮಿದ್ಯಾಗಕ್ಕೆ ದರ್ಶಪೂರ್ಣಮಾಸ ಕರ್ಮದಲ್ಲಿ ವಿನಿಯೋಗವೆಂದು ಸಿದ್ಧವಾಗುತ್ತದೆ. ಪ್ರಕರಣ ಶಬ್ದದಿಂದ ಕರೆಯಲ್ಪಟ್ಟ ಈ ಉಭಯಾಕಾಂಕ್ಷೆಯೂ ಹಿಂದಿನಂತೆ ಸಾಕ್ಷಾದ್ದೃಶ್ಯಮಾನ, ಅನುಮಿತವೆಂದು ಎರಡು ವಿಧ. ಮೊದಲನೆಯದಕ್ಕೆ ಹಿಂದೆ ಹೇಳಿದುದೇ ಉದಾಹರಣೆ. ಅನುಮಿತಕ್ಕೆ ಉದಾ:- "ಐಂದ್ರಾಗ್ನಮೇಕಾದಶಕಪಾಲಂ ನಿರ್ವಪೇತ್" (ತೈ- ಸಂ ೨-೨-೧೧) "ವೈಶ್ವಾನರಂದ್ವಾದಶಕಪಾಲಂ ನಿರ್ವಪೇತ್" (ತೈ. ಸಂ. ೨-೨-೫)

ಹೀಗೆ ಕ್ರಮವಾಗಿ ಇಷ್ಟಿಗಳು ವಿಹಿತವಾಗಿವೆ. ಅಲ್ಲಿ "ಐಂದ್ರಾಗ್ನೀರೋಚನಾದಿವಃ" (ತೈ-ಸಂ. ೪-೨-೧೧) ಇತ್ಯಾದಿ ಯಾಜ್ಯಾನುವಾಕ್ಯ ಮಂತ್ರಗಳಿಗೆ ಸಂಖ್ಯಾನುಸಾರ ವಾಗಿ ಪ್ರಥಮಕ್ಕೆ ಪ್ರಥಮವೂ, ದ್ವಿತೀಯಕ್ಕೆ ದ್ವಿತೀಯವೂ ವಿನಿಯೋಗವು ಯಥಾ ಸಂಖ್ಯಪಾಠದಿಂದ ತಿಳಿಯುತ್ತದೆ. ೩) ಪಾಠಸ್ಥಾನ ವಿಶೇಷದಿಂದ ಉಭಯಾಕಾಂಕ್ಷಾ ಅನುಮಿತವಾಗುತ್ತದೆ. ಆದರಿಂದ ಏಕವಾಕ್ಯತೆಯೂ ಆದರಿಂದ ಲಿಂಗವೂ, ಆದರಿಂದ ಶ್ರುತಿಯೂ ಅನುಮಿತವಾಗುತ್ತದೆ. ಆ ಶ್ರುತಿಯಿಂದ ವಿನಿಯೋಗವು ತಿಳಿಯುತ್ತದೆ. ಈ ಉಭಯಾಕಾಂಕ್ಷಾನುಮಾಪಕವಾದ ಸ್ಥಾನ ಪ್ರಮಾಣವೂ ಕೆಲವು ಕಡೆ ಸಾಕ್ಷಾತ್ತಾಗಿ ತೋರುತ್ತದೆ. ಕೆಲವು ಕಡೆ ಸಮಾಖ್ಯಾದಿಂದ ಅನುಮಿತವಾಗುತ್ತದೆ. ಮೊದಲಿನದಕ್ಕೆ ಹಿಂದೆ ಹೇಳಿದುದೇ ಉದಾಹರಣೆ. ಎರಡನೆಯದಕ್ಕೆ ಉದಾ:—ಹೌತ್ರ ಮೌದ್ಗಾತ್ರ ಮಿ-ತ್ಯಾದಿ ಹೋತರಿದಂ ಹೌತ್ರಂ ಯೋಗಬಲದಿಂದ ಹೌತ್ರಾದಿಗಳೆಂಬ ಕರ್ಮಗಳು ಹೋತ್ರಾದಿಗಳಿಂದ ಅನುಷ್ಠಾನ ಮಾಡಲ್ಪಡಬೇಕು. ೬) ಯೋಗಬಲವೇ ಸಮಾಖ್ಯಾ. ಅನ್ವರ್ಥತಾ ಎಂದು ತಾತ್ಪರ್ಯ. ಸಂಬಂಧನಿಬಂಧನವಾದ ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾಖ್ಯಾ ಪ್ರಮಾಣವು ಅಸಂನ್ನಿಹಿತವಾದುದಕ್ಕೆ ಸಂಬಂಧ ಕೂಡದಿರುವುದರಿಂದ ಸಂಬಂಧ ಸಿದ್ಧಿಗೋಸ್ಕರ ಸಂನಿಧಿಪಾಠರೂಪ ಕ್ರಮವನ್ನು ಕಲ್ಪಿಸುತ್ತದೆ. ಪಾಠ ವಿಶೇಷ ಕ್ರಮವು ಅನುಮಿತವಾದಾಗ ಅದರಿಂದ ಉಭಯಾಕಾಂಕ್ಷೆಯೂ, ಅದರಿಂದ ವಾಕ್ಯವೂ, ಅದರಿಂದ ಲಿಂಗವೂ, ಅದರಿಂದ ಶ್ರುತಿಯೂ ಅನುಮಿತವಾಗಿ ಅದರಿಂದ ವಿನಿಯೋಗ ವ್ಯಕ್ತವಾಗುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಪ್ರಧಾನ ಪ್ರಯೋಜಕತ್ವಾದಿಗಳು ನಿರೂಪಿತವಾಗಿವೆ. ಪ್ರಥಮಪಾದದಲ್ಲಿ ಪ್ರಧಾನವಾದ ಆಮಿಕ್ಷೆಯು ದಧ್ಯಾನಯನಕ್ಕೆ ಪ್ರಯೋಜಿಕಾ ಇತ್ಯಾದಿ ಪ್ರಧಾನ ಪ್ರಯೋಕ್ತೃತ್ವವಿಚಾರ. ಎರಡನೆಯ ಪಾದದಲ್ಲಿ ಅಪ್ರಧಾನವಾದ ವತ್ಸಾಪಾಕರಣವು ಶಾಖಾಚ್ಛೇದದಲ್ಲಿ ಪ್ರಯೋಜಕವೆಂದು ಅಪ್ರಧಾನ ಪ್ರಯೋಕ್ತೃತ್ವವಿಚಾರ. ಮೂರನೇ ಪಾದದಲ್ಲಿ ಜುಹೂಪರ್ಣಮಯೀತ್ವಾದಿಗಳಿಗೆ ಅಪಾಪಶ್ಲೋಕಶ್ರವಣಾದಿ ಫಲ ಭಾವಾಭಾವಚಿಂತನ ವಿಚಾರ. ನಾಲ್ಕನೇ ಪಾದದಲ್ಲಿ ರಾಜಸೂಯದಲ್ಲಿರುವ ಗೌಣಾಂಗವಾದ ಅಕ್ಷದ್ಯೂತಾದಿ ಚಿಂತನವಿಚಾರ.

ಐದನೇ ಅಧ್ಯಾಯದಲ್ಲಿ ಶ್ರುತ್ಯಾದಿ ಕ್ರಮ ವಿಚಾರ. ಪ್ರಥಮ ಪಾದದಲ್ಲಿ ಶ್ರುತ್ಯರ್ಥ ಪಠನಾದಿ ಕ್ರಮವೂ, ದ್ವಿತೀಯ ಪಾದದಲ್ಲಿ ಅನೇಕ ಪಶುಗಳಿಂದ ಏಕೈಕ ಧರ್ಮ ಸಮಾಪನರೂಪವಾದ ಕ್ರಮ ವಿಶೇಷ ವಿಚಾರವೂ, ಮೂರನೇ ಪಾದದಲ್ಲಿ ವೃದ್ಧ್ಯವೃದ್ಧ್ಯಾದಿಗಳೂ (ಅಗ್ನೀಷೋಮೀಯಪಶಾ ವೇಕಾದಶಪ್ರಯಾಜಾನ್ಯ ಜತಿ — ಎಂಬಲ್ಲಿ ಪಂಚ ಪ್ರಯಾಜಗಳಿಗೆ ಆವೃತ್ತಿ ಮಾಡಿಕೊಂಡಾಗ ಹತ್ತಾಗುತ್ತದೆ. ಕೊನೆಯ ಪ್ರಯಾಜಕ್ಕೆ ಆವೃತ್ತಿ ಮಾಡಿಕೊಂಡಾಗ ಹನ್ನೊಂದಾಗುತ್ತದೆ. ಇದೇ ವೃದ್ಧಿ. ಕೆಲವು ಕಡೆ ಅದರ ಅಭಾವವಿರುತ್ತದೆ.) ನಾಲ್ಕನೇ ಪಾದದಲ್ಲಿ ಶ್ರುತ್ಯಾದಿ ಆರರಲ್ಲಿ ಪೂರ್ವ ಪೂರ್ವಕ್ಕೆ ಪ್ರಾಬಲ್ಯವೂ ಉತ್ತರೋತ್ತರಕ್ಕೆ ದೌರ್ಬಲ್ಯವೂ ವಿಚಾರಿತವಾಗಿವೆ.

ಶ್ರುತಿ, ಅರ್ಥ, ಪಠನ, ಸ್ಥಾನ, ಮುಖ್ಯ ಪ್ರವೃತ್ತಿಗಳೆಂಬ ಆರು ಪ್ರಮಾಣಗಳು ಕ್ರಮವನ್ನು ತಿಳಿಸುವುದರ ಮೂಲಕ ಪ್ರಯೋಗವಿಧಿಗೆ ಅಂಗವಾಗುತ್ತವೆ. ಶ್ರುತಿಗೆ ಉದಾ: 'ವೇದಂಕೃತ್ವಾ ವೇದಿಂ ಕರೋತಿ–' ಇತಿ. ಇಲ್ಲಿ ಪೂರ್ವಕಾಲಭೋಧಕವಾದ ಕ್ತ್ವಾಪ್ರತ್ಯಯದಶ್ರುತಿಯಿಂದ ಮೊದಲು ವೇದಕರಣ ಆಮೇಲೆ ವೇದಿಕರಣವೆಂದು ಕ್ರಮವು ತಿಳಿಯುತ್ತದೆ. ವೇದವೆಂದರೆ ದರ್ಭಮುಷ್ಟಿ. ಪರಿಷ್ಕೃತವಾದ ಭೂಮಿಗೆ ವೇದಿಯೆಂದು ಹೆಸರು. ಪ್ರಯೋಜನದಿಂದ ಕ್ರಮವು ಎಲ್ಲಿ ನಿರ್ಣೀತವಾಗುತ್ತದೆಯೋ ಅಲ್ಲಿ ಅರ್ಥ ಕ್ರಮವೆಂದು ತಿಳಿಯಬೇಕು. ಉದಾ:—'ಅಗ್ನಿಹೋತ್ರಂ ಜುಹೋತಿ, ಯವಾಗೂಂ ಪಚತಿ।' ಇಲ್ಲಿ ಯವಾಗೂಪಚನ ದ್ವಿತೀಯವಾಕ್ಯದಿಂದ ತಿಳಿಯುವುದರಿಂದ ಆಮೇಲೆಂದು ತಿಳಿದರೂ, ಯವಾಗೂ ಹೋಮಾರ್ಥವಾದುದರಿಂದ ತತ್ಪಾಕವು ಪ್ರಯೋಜನಾಧೀನವಾಗಿ ಮೊದಲು ಮಾಡಲ್ಪಟ್ಟು ಆಮೇಲೆ ಹೋಮಾನುಷ್ಠಾನವೆಂದು ಅರ್ಥಕ್ರಮದಿಂದ ನಿರ್ಣೀತವಾಗುತ್ತದೆ. ಪಾಠಕ್ರಮಾನುಸಾರವಾಗಿ ಯವಾಗೂಪಾಕವು ಆಮೇಲೆ ಮಾಡಲ್ಪಡುವುದಾದರೆ ಆಗ ಅದಕ್ಕೊಂದು ಅದೃಷ್ಟವನ್ನು ಕಲ್ಪಿಸಬೇಕಾಗುತ್ತದೆ ಆದುದರಿಂದ ಎಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೌತಕ್ರಮ ಮತ್ತು ಅರ್ಥಕ್ರಮವು ಇಲ್ಲವೋ ಅಲ್ಲಿ ಮಾತ್ರ ಪಾಠಕ್ರಮವನ್ನನುಸರಿಸಬೇಕು. ಸ್ಥಾನವೆಂದರೆ ಉಪಸ್ಥಿತಿ. ದೇಶಕ್ಕನುಸಾರವಾಗಿ, ಕಾಲಕ್ಕನುಸಾರವಾಗಿ ಎಲ್ಲಿ ಯಾವುದು ಉಪಸ್ಥಿತವಾಗುತ್ತದೆಯೋ ಅಲ್ಲಿ ಅದನ್ನು ಮೊದಲು ಮಾಡಬೇಕು. ಆಮೇಲೆ ಬೇರೇದನ್ನು ಅನುಷ್ಠಾನ ಮಾಡಬೇಕು. ಪ್ರಧಾನಕ್ರಮದಿಂದ ಅಂಗಗಳಿಗೆ ಯಾವ ಕ್ರಮವಿರುತ್ತದೆಯೋ ಅದು ಮುಖ್ಯಕ್ರಮವಾಗುತ್ತದೆ. ಯಾವ ಕ್ರಮದಿಂದ ಆದಿತ್ಯಾದಿ ಪ್ರಧಾನ ದೇವತೆಗಳು ಪೂಜಿಸಲ್ಪಡುತ್ತವೆಯೋ ಅದೇ ಕ್ರಮದಿಂದ ಅದರ ಅಧಿದೇವತೆಗಳೂ ಪೂಜಿಸಲ್ಪಡುತ್ತವೆ. ಪ್ರವೃತ್ತಿಕ್ರಮ ಒಂದು ಕಡೆ ಯಾವ ಕ್ರಮದಿಂದ ಉಪಚಾರಗಳು ಪ್ರವರ್ತಿಸಲ್ಪಡುತ್ತವೆಯೋ ಅದೇ ಕ್ರಮದಿಂದ ಇತರ ಕಡೆಯಲ್ಲಿಯೂ ಆಚರಿಸುವುದು.

ಚತುರ್ಥೇ ಪ್ರಧಾನ ಪ್ರಯೋಜಕತ್ವಾಪ್ರಧಾನ ಪ್ರಯೋಜಕತ್ವಜುಹೂಪರ್ಣತಾದಿಫಲ ರಾಜಸೂಯಗತಜಘನ್ಯಾಂಗಾಕ್ಷದ್ಯೂತಾದಿ ಚಿಂತಾ ‖ ಪಂಚಮೇ ಶ್ರುತ್ಯಾದಿ ಕ್ರಮತದ್ವಿಶೇಷವೃದ್ಧ್ಯವರ್ಧನ ಪ್ರಾಬಲ್ಯ ಚಿಂತಾ ‖ ಷಷ್ಠೇ ಅಧಿಕಾರಿತದ್ಧರ್ಮ ದ್ರವ್ಯಪ್ರತಿನಿಧ್ಯರ್ಥಲೋಪನ ಪ್ರಾಯಶ್ಚಿತ್ತಸತ್ರದೇಯವಹ್ನಿ ವಿಚಾರಃ। ಸಪ್ತಮೇ ಪ್ರತ್ಯಕ್ಷವಚನಾತಿದೇಶಶೇಷನಾಮಲಿಂಗಾತಿದೇಶವಿಚಾರಃ । ಅಷ್ಟಮೇ ಸ್ಪಷ್ಟಾಸ್ಪಷ್ಟ ಪ್ರಬಲಲಿಂಗಾತಿದೇಶಾಪವಾದವಿಚಾರಃ । ನವಮೇ ಊಹಾವಿಚಾರಾರಂಭಸಾಮೋಹಮಂತ್ರೋಹತತ್ಪ್ರಸಂಗಾಗತವಿಚಾರಃ । ದಶಮೇ ಬಾಧಹೇತುದ್ವಾರಲೋಪವಿಸ್ತಾರಬಾಧಕಾರಣಕಾರ್ಯೈಕತ್ವಸಮುಚ್ಚಯಗ್ರಹಾದಿಸಾಮಪ್ರಕೀರ್ಣಾನರ್ಥವಿಚಾರಃ । ಏಕಾದಶೇ ತಂತ್ರೋಪೋದ್ಘಾತ ತಂತ್ರಾವಾಪತಂತ್ರ ಪ್ರಪಂಚನಾವಾಪ್ರಪಂಚನ ಚಿಂತನಾನಿ । ದ್ವಾದಶೇ ಪ್ರಸಂಗತಂತ್ರಿ ನಿರ್ಣಯಸಮುಚ್ಚಯ ವಿಕಲ್ಪವಿಚಾರಃ ‖

ಆರನೇ ಅಧ್ಯಾಯದ ಪ್ರಥಮಪಾದದಲ್ಲಿ ಕರ್ಮಾಧಿಕಾರವು ಕಣ್ಣುಳ್ಳವನಿಗೆ, ಅಂಧನಿಗಲ್ಲವೆಂದು ಅಧಿಕಾರಿಯು ನಿರೂಪಿತವಾಗಿದೆ. ೨ನೇ ಪಾದದಲ್ಲಿ ಅಧಿಕಾರಿ ಧರ್ಮಗಳು ೩ನೇಪಾದದಲ್ಲಿ ಮುಖ್ಯನಿಲ್ಲದಿರುವಾಗ ಪ್ರತಿನಿಧಿಯನ್ನು ಎಲ್ಲಿ ತೆಗೆದುಕೊಳ್ಳಬೇಕು. ಎಲ್ಲಿ ತೆಗೆದುಕೊಳ್ಳಬಾರದೆಂಬ ವಿಚಾರ. ೪ನೇ ಪಾದದಲ್ಲಿ ಎಲ್ಲಿ ಯಾವುದಕ್ಕೆ ಲೋಪವೆಂಬ ವಿಚಾರ. ೫ರಲ್ಲಿ ಕಾಲಾದಿವೈಗುಣ್ಯವಿರುವಾಗ ಪ್ರಾಯಶ್ಚಿತ್ತವು ವಿಚಾರಿತವಾಗಿದೆ. ೬ರಲ್ಲಿ ಸತ್ರಾಧಿಕಾರಿಗಳು. ೭ರಲ್ಲಿ ಪಿತ್ರಾದಿ ನ ದೇಯಂ–

೮ರಲ್ಲಿ ಲೌಕಿಕಾಗ್ನಿಯಲ್ಲಿ ಎಲ್ಲಿ ಹೋಮವೆಂಬ ವಿಚಾರವಿದೆ.

ಏಳನೇ ಅಧ್ಯಾಯದ ಪ್ರಥಮಪಾದದಲ್ಲಿ 'ಸಮಾನಮಿತರತ್ ಶ್ಯೇನೇನ' - ಇತ್ಯಾದಿ ಪ್ರತ್ಯಕ್ಷವಚನಗಳಿಂದ ಅತಿದೇಶವು ನಿರೂಪಿತವಾಗಿದೆ. ೨ರಲ್ಲಿ ಅಂತಹಅತಿದೇಶದಶೇಷವು ನಿರೂಪಿತವಾಗಿದೆ. ೩ರಲ್ಲಿ ಅಗ್ನಿಹೋತ್ರನಾಮದಿಂದ ಅತಿದೇಶ. ೪ರಲ್ಲಿ ಲಿಂಗಾತಿದೇಶ.

ಎಂಟನೇ ಅಧ್ಯಾಯದ ಪ್ರಥಮಪಾದದಲ್ಲಿ ಪ್ರತ್ಯಕ್ಷವಚನವಿಲ್ಲದಿದ್ದರೂ ಸ್ಪಷ್ಟಲಿಂಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಿಂದ ಅತಿದೇಶ. ೨ನೇ ಪಾದದಲ್ಲಿ ಅಸ್ಪಷ್ಟಲಿಂಗಗಳಿಂದ ಅತಿದೇಶ. ೩ರಲ್ಲಿ ಪ್ರಬಲ ಲಿಂಗದಿಂದ ಅತಿದೇಶ. ೪ರಲ್ಲಿ ಅತಿದೇಶಾಪವಾದವು ವಿಚಾರಿತವಾಗಿದೆ.

ಒಂಬತ್ತನೇ ಅಧ್ಯಾಯದ ಪ್ರಥಮಪಾದದಲ್ಲಿ ಊಹಪ್ರಾರಂಭವೂ, ೨ನೇ ಪಾದದಲ್ಲಿ ಸಾಮೋಹವೂ, ೩ರಲ್ಲಿ ಮಂತ್ರೋಹವೂ, ೪ನೇ ಪಾದದಲ್ಲಿ ಮಂತ್ರೋಹ ಪ್ರಸಂಗಾಪತಿತವಾದ ವಿಚಾರವು ನಿರೂಪಿತವಾಗಿದೆ. ಊಹನೆಂದರೆ ಮಂತ್ರದಲ್ಲಿರುವ ದೇವತಾಲಿಂಗಸಂಖ್ಯಾದಿವಾಚಕ ಶಬ್ದಗಳಿಗೆ ಪ್ರಯೋಗ ವಿಶೇಷದಲ್ಲಿ ತತ್ತದ್ದೇವತಾಲಿಂಗಸಂಖ್ಯಾದ್ಯನುಸಾರವಾಗಿ ಪರಿವರ್ತನ ಮಾಡುವುದು.

ಹತ್ತನೇ ಅಧ್ಯಾಯದ ಪ್ರಥಮಪಾದದಲ್ಲಿ ಬಾಧಹೇತುವಾದದ್ವಾರಲೋಪವಿಚಾರ ಎಲ್ಲಿ ವೇದಿನಿಷ್ಪಾದನರೂಪದ್ವಾರವಿಲ್ಲವೋ ಅಲ್ಲಿ ವೇದಿನಿಷ್ಪಾದಕಗಳಾದ ಉದ್ಧನನಾದಿ ಕರ್ಮಗಳಿಗೆ ಅರ್ಥಾತ್ ಬಾಧ ಬರುತ್ತದೆ. ಎಲ್ಲಿ ಧಾನ್ಯಕ್ಕೆ ವಿತುಷೀಕರಣವಿಲ್ಲವೋ ಅಲ್ಲಿ ಅವಘಾತಕ್ಕೆ ಬಾಧ ಬರುತ್ತದೆ. ೨ನೇ ಪಾದದಲ್ಲಿ ಅನೇಕ ಉದಾಹರಣೆಗಳಿಂದ ದ್ವಾರಲೋಪದ ವಿಸ್ತಾರವು ವರ್ಣಿತವಾಗಿದೆ. ೩ರಲ್ಲಿ ಬಾಧಕಾರಣವಾದ ಕಾರ್ಯೈಕತ್ವವು ವಿಚಾರಿತವಾಗಿದೆ. ಪ್ರಕೃತಿ ಯಾಗದಲ್ಲಿ ಋತ್ವಿಕ್ ಪ್ರತಿಗ್ರಹವು ಗವಾಶ್ವಾದಿದಕ್ಷಿಣೆಯ ಕಾರ್ಯವಾಗಿ ಹೇಳಿದೆ. ವಿಕೃತಿಭೂತವಾದ ಒಂದು ಯಾಗದಲ್ಲಿ ಅದೇ ಕಾರ್ಯಕ್ಕೆ ಧೇನು ದಕ್ಷಿಣೆ ಉಕ್ತವಾಗಿದೆ. ಆಗ ಪ್ರಕೃತವದತಿದೇಶಪ್ರಾಪ್ತವಾದ ಗವಾಶ್ವಾದಿ ದಕ್ಷಿಣೆಗೆ ಬಾಧ ಬರುತ್ತದೆ. ೪ರಲ್ಲಿ ಎಲ್ಲಿ ಬಾಧ ಕಾರಣವಿಲ್ಲವೋ ಅಲ್ಲಿ ಸಮುಚ್ಚಯವೆಂದು ಹೇಳಿದೆ. ೫ರಲ್ಲಿ ಬಾಧ ಪ್ರಸಂಗದಿಂದ ಗ್ರಹಾದಿ ವಿಚಾರ. ೬ರಲ್ಲಿ ಬಾಧ ಪ್ರಸಂಗದಿಂದ ಸಾಮವಿಚಾರ. ೭ರಲ್ಲಿ ಬಾಧ ಪ್ರಸಂಗದಿಂದ ಇತರ ಸಾಮಾನ್ಯ ವಿಚಾರಗಳು. ೮ರಲ್ಲಿ ಬಾಧೋಪಯುಕ್ತವಾದ ನಞರ್ಥ ವಿಚಾರ.

ಹನ್ನೊಂದನೆಯ ಅಧ್ಯಾಯದ ಪ್ರಥಮಪಾದದಲ್ಲಿ ತಂತ್ರದ ಉಪೋದ್ಘಾತವು ವರ್ಣಿತವಾಗಿದೆ. ಸಕೃದನುಷ್ಠಾನದಿಂದ ಸಿದ್ಧಿಯೇ ತಂತ್ರ, ತನ್ಯತೇ ವಿಸ್ತಾರ್ಯತೇ ಬಹೂನಾಮುಪಕಾರೋ ಯೇನ ಸಕೃತ್ಪ್ರವರ್ತಿತೇನ ತತ್ತಂತ್ರಮ್ । ಅನೇಕೋದ್ದೇಶದಿಂದ ಸಕೃದನುಷ್ಠಾನವೇ ತಂತ್ರ. ಒಂದು ಸಾರಿ ಮಾಡಿದುದು ಅನೇಕೋಪಕಾರಕವಾಗಬೇಕು. ಹೇಗೆಂದರೆ ಅನೇಕಪದಾರ್ಥಗಳ ಮಧ್ಯದಲ್ಲಿ ಇಟ್ಟಿರುವ ಒಂದುದೀಪವು ಎಲ್ಲವನ್ನೂ ಪ್ರಕಾಶಿಸುತ್ತದೆ. ಆವೃತ್ತಿಯಿಂದ ಬಹೂಪಕಾರಕವಾದುದು ಆವಾಪ. ಬಹುಜನರಿಗೆ ಭೋಜನಮಾಡಿಸುವುದು ಇದಕ್ಕೆ ಉದಾಹರಣೆ. ಅನ್ಯೋದ್ದೇಶದಿಂದ ಅನ್ಯಸಂಬಂಧಿಗೂ ಸಹಾನುಷ್ಠಾನವು ಪ್ರಸಂಗವಾಗುತ್ತದೆ. ಎರಡನೇಪಾದದಲ್ಲಿ ತಂತ್ರಾವಾಪಗಳೂ, ೩ರಲ್ಲಿ ತಂತ್ರವಿಸ್ತಾರವೂ ನಿರೂಪಿತವಾಗಿದೆ.

ಹನ್ನೆರಡನೆಯ ಅಧ್ಯಾಯದ ಪ್ರಥಮಪಾದದಲ್ಲಿ ಪ್ರಸಂಗವಿಚಾರ. ಏಕೋದ್ದೇಶದಿಂದ ಅನುಷ್ಠಾನ ಮಾಡಲ್ಪಟ್ಟ ಒಂದು ಅಂಗವು ದೇಶಕಾಲಕರ್ತೃೈಕ್ಯವಿರುವಾಗ ಅನುದ್ದೇಶ್ಯವನ್ನೂ ಉಪಕರಿಸುವುದೇ ಪ್ರಸಂಗ. ೨ನೇಪಾದದಲ್ಲಿ ತಂತ್ರಿವಿಚಾರವೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸಾಧಾರಣಧರ್ಮವೇ ತಂತ್ರ. ಸಾಧಾರಣಾಂಗಕಲಾಪವುಳ್ಳವರು ತಂತ್ರಿಗಳು.) ಇರಲ್ಲಿ ಸಮುಚ್ಚಯವೂ, ಉರಲ್ಲಿ ವಿಕಲ್ಪವೂ ನಿರೂಪಿತವಾಗಿವೆ.

ತತ್ರ ಅಥಾತೋ ಧರ್ಮಜಿಜ್ಞಾಸಾ (ಜೈ-ಸೂ-೧-೧-೧) ಇತಿ ಪ್ರಥಮಮಧಿಕರಣಂ ಪೂರ್ವಮೀಮಾಂಸಾರಂಭೋಪಪಾದನಪರಮ್ । ಅಧಿಕರಣಂ ಚ ಪಂಚಾವಯವ ಮಾಚಕ್ಷತೇ ಪರೀಕ್ಷಕಾಃ । ತೇ ಚ ಪಂಚಾವಯವಾ ವಿಷಯಸಂಶಯ ಪೂರ್ವಪಕ್ಷಸಿದ್ಧಾಂತ ಸಂಗತಿರೂಪಾಃ

'ಅಥಾತಃ'—ಎಂಬುದುಮೀಮಾಂಸಾಶಾಸ್ತ್ರದ ಮೊದಲನೆಯ ಸೂತ್ರ. ಐದು ಅವಯವಗಳಿಂದ ಕೂಡಿರುವ ಅಂದರೆ ಪಂಚಾಂಗಕ್ಕೆ ಅಧಿಕರಣವೆಂದು ಕರೆಯುತ್ತಾರೆ.

ವಿಷಯೋ ವಿಶಯಶ್ಚೈವ ಪೂರ್ವಪಕ್ಷಸ್ತಥೋತ್ತರಮ್ ॥
ನಿರ್ಣಯಶ್ಚೇತಿ ಪಂಚಾಂಗಂ ಶಾಸ್ತ್ರೇಧಿಕರಣಂ ಸ್ಮೃತಮ್ ॥

ಎಂದು ಲಕ್ಷಣ ಹೇಳುತ್ತಾರೆ. ವಿಷಯುವೆಂದರೆ ಸಂಶಯ. ಶಾಸ್ತ್ರದಲ್ಲಿ ಅಧಿಕರಣ ರಚನೆಯು ಮುಖ್ಯವಾಗಿದೆ.

ತತ್ರಾಚಾರ್ಯಮತಾನುಸಾರೇಣಾಧಿಕರಣಂ ನಿರೂಪ್ಯತೇ ಸ್ವಾಧ್ಯಾಯೋಽಧ್ಯೇತವ್ಯ ಇತ್ಯೇತದ್ವಾಕ್ಯಂ ವಿಷಯಃ । ಚೋದನಾಲಕ್ಷಣೋಽರ್ಥೋ ಧರ್ಮಃ । (ಜೈ-ಸೂ-೧-೧-೨) ಇತ್ಯಾರಭ್ಯಾನ್ವಾಹಾರ್ಯೇ ಚ ದರ್ಶನಾತ್ (ಜೈ. ಸೂ ೧೨-೪-೪೦)ಇತ್ಯೇತದಂತಂ ಜೈಮಿನೀಯಂ ಧರ್ಮಶಾಸ್ತ್ರಮನಾರಭ್ಯಂ, ಆರಭ್ಯಂ ವಾ-ಇತಿ ಸಂದೇಹಃ । ಅಧ್ಯಯನ ವಿಧೇರದೃಷ್ಟಾರ್ಥತ್ವದೃಷ್ಟಾರ್ಥ ತ್ವಾಭ್ಯಾಮ್ ತತ್ರಾನಾರಭ್ಯಮಿತಿ ಪೂರ್ವಪಕ್ಷಃ ಅಧ್ಯಯನವಿಧೇರರ್ಥಾವ ಬೋಧ ಲಕ್ಷಣದೃಷ್ಟಫಲಕತ್ವಾನುಪಪತ್ತೇಃ । ಅರ್ಥಾವಬೋಧಾರ್ಥಮಧ್ಯಯನವಿಧಿ ರಿತಿ ವದನ್ವಾದೀಪ್ರಷ್ಟವ್ಯಃ-ಕಿಮತ್ಯಂತಮಪ್ರಾಪ್ತಮಧ್ಯಯನಂ ವಿಧೀಯತೇ ಕಿಂ ವಾ ಪಾಕ್ಷಿಕಮವಘಾತವನ್ನಿಯಮ್ಯತ ಇತಿ । ನ ತಾವದಾದ್ಯಃ । ವಿವಾದಪದಂ ವೇದಾಧ್ಯಯನಮರ್ಥಾವಬೋಧಹೇತು-ಅಧ್ಯಯನತ್ವಾತ್ । ಭಾರತಾಧ್ಯ ಯನವತ್ ಇತ್ಯನುಮಾನೇನ ವಿಧ್ಯನಪೇಕ್ಷಿತಯಾ ಪ್ರಾಪ್ತತ್ವಾತ್ । ಅಸ್ತು ತರ್ಹಿ ದ್ವಿತೀಯೋ ಯಥಾ ನಖವಿದಲನಾದಿನಾ ತಂಡುಲನಿಷ್ಪತ್ತಿಸಂಭವಾತ್ಪಾಕ್ಷಿ ಕೋಽವಘಾತೋಽವಶ್ಯಂ ಕರ್ತವ್ಯ ಇತಿ ವಿಧಿನಾ ನಿಯಮ್ಯತೇ ತಥಾ ಲಿಖಿತ ಪಾಠೇನಾರ್ಥಜ್ಞಾನಸಂಭವಾತ್ಪಾಕ್ಷಿಕಮಧ್ಯಯನಂ ವಿಧಿನಾ ನಿಯಮ್ಯತೇ ಇತಿ ಚೇತ್-ನೈತಚ್ಚತುರಸ್ರಮ್ ॥

ಮೊದಲನೆಯ ಸೂತ್ರದಲ್ಲಿ ಆಚಾರ್ಯಮತಾನುಸಾರವಾಗಿ ಅಧಿಕರಣ ರಚನೆಯನ್ನು ತೋರಿಸುತ್ತಾನೆ. ಆಚಾರ್ಯರೆಂದರೆ ಕುಮಾರಿಲಭಟ್ಟಾಚಾರ್ಯರು ಈ ಸೂತ್ರಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಧ್ಯಾಯಃ 'ಅಧ್ಯೇತವ್ಯಃ' ಎಂಬ ವಾಕ್ಯವೇ ವಿಷಯ. ತನಗೆ ವಿಹಿತವಾದ ಋಕ್ ಶಾಖಾದಿಗಳನ್ನು ಅಧ್ಯಯನ ಮಾಡಬೇಕೆಂದರ್ಥ. 'ಚೋದನಾಲಕ್ಷಣೋಽರ್ಥೋ ಧರ್ಮಃ' ಎಂದು ಆರಂಭಿಸಿ 'ಅನ್ವಾಹಾರ್ಯೇ ಚ ದರ್ಶನಾತ್' ಸೂತ್ರದವರೆಗೆ ಮೀಮಾಂಸಾ ಶಾಸ್ತ್ರದ ಸೂತ್ರಗಳು ಜೈಮಿನಿಯಿಂದ ಹೇಳಿವೆ. ಈ ಶಾಸ್ತ್ರವನ್ನು ಆರಂಭಿಸ ಬೇಕೇ, ಬೇಡವೇ ? ಎಂದು ಸಂದೇಹ. ಸಂದೇಹಕ್ಕೆ ಕಾರಣವಿದೆ. ಅಧ್ಯಯನವಿಧಿಗೆ ದೃಷ್ಟಾರ್ಥವೂ ಇದೆ, ಅದೃಷ್ಟಾರ್ಥವೂ ಇದೆ. ದೃಷ್ಟಃ ಅರ್ಥಃ ಪ್ರಯೋಜನಂ—ಅರ್ಥಾವಬೋಧರೂಪಂ ಯಸ್ಯ ಸಃ ದೃಷ್ಟಾರ್ಥಃ। ಆಚಾರ್ಯಕೃತೋಚ್ಚಾರಣೆಗನುಸಾರವಾಗಿ ತತ್ಸಮಾನಾನುಪೂರ್ವೀಕೋಚ್ಚಾರಣೆಗೆ ಅಧ್ಯಯನವೆಂದು ಹೆಸರು. ಅದರಲ್ಲಿಯೂ ಕೇವಲಾಧ್ಯಯನದಲ್ಲಿ ತಾತ್ಪರ್ಯ ಹೇಳದೆ ಅರ್ಥಜ್ಞಾನ ರೂಪವಾದ ದೃಷ್ಟ ಫಲ ಪರ್ಯಂತವಾಗಿ ತಾತ್ಪರ್ಯ ಹೇಳಬೇಕು. ವಿಚಾರವಿಲ್ಲದೇ ಅರ್ಥಜ್ಞಾನವಿರುವುದಿಲ್ಲ ಅದಕ್ಕೋಸ್ಕರ ವಿಧ್ಯನುಗ್ರಾಹಕವಾದ ಈ ಜೈಮಿನೀಯ ಶಾಸ್ತ್ರವು ಆರಂಭಣೀಯವೆಂದು ತಿಳಿಯುತ್ತದೆ. ಸ್ವರ್ಗಾದಿರೂಪಾದೃಷ್ಟಫಲಕ್ಕೋಸ್ಕರವೇ ವಿಧಿ ಇರುವುದಾದರೆ ಆಗ ಅದಕ್ಕೆ ಅರ್ಥಜ್ಞಾನರೂಪದೃಷ್ಟಫಲಪರ್ಯಂತತಾತ್ಪರ್ಯ ಹೇಳಬೇಕಾಗಿಲ್ಲವಾದುದರಿಂದ ವಿಚಾರ ಅನಾವಶ್ಯಕವಾಗುತ್ತದೆ. ಆಗ ಈ ವಿಚಾರಶಾಸ್ತ್ರವು ವಿಧ್ಯನುಗ್ರಾಹಕವಾಗದಿರುವುದರಿಂದ ಅನಾರಂಭಣೀಯವೆಂದು ಸಿದ್ಧವಾಗುತ್ತದೆ. ಹೀಗೆ ಸಂಶಯ ಬಂದರೆ ಪೂರ್ವಪಕ್ಷಿಯು ಅನಾರಂಭಣೀಯವೆಂದು ವಾದಿಸುತ್ತಾನೆ. ಅವನ ವಾದ—ಅರ್ಥಾವಬೋಧಲಕ್ಷಣವಾದ ಅಧ್ಯಯನ ವಿಧಿ ಎಂದು ಹೇಳುವವನನ್ನು ಹೀಗೆ ಕೇಳಬೇಕು. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ವಿಧಿಯು ಅಪೂರ್ವವಿಧಿಯೇ ಅಥವಾ ನಿಯಮ ವಿಧಿಯೇ ? ಯಾವ ವಿಧಿಯ ಪ್ರಯೋಜನವು ಪ್ರಮಾಣಾಂತರದಿಂದ ಸಿದ್ಧಿಸದಿರುವಾಗ ಆ ಫಲಸಿದ್ಧಿಗೋಸ್ಕರ ವಿಹಿತವಾದ ಆ ವಿಧಿಯು ಅಪೂರ್ವವಿಧಿಯಾಗುತ್ತದೆ. 'ಯಜೇತ ಸ್ವರ್ಗಕಾಮಃ' ಎಂಬಲ್ಲಿ ಯಾಗಕ್ಕೆ ಸ್ವರ್ಗಫಲವು ಯಾವ ಪ್ರಮಾಣದಿಂದಲೂ ಸಿದ್ಧವಾಗಿಲ್ಲ. ಈ ವಿಧಿಯಿಂದಲೇ ಸಿದ್ಧವಾಗುವುದರಿಂದ ಇದು ಅಪೂರ್ವವಿಧಿಯಾಗುತ್ತದೆ. ಒಂದು ಪಕ್ಷದಲ್ಲಿ ಅಪ್ರಾಪ್ತವಾಗಿರುವಾಗ ಹೇಳಿದ ವಿಧಿಯು ನಿಯಮವಿಧಿಯಾಗುತ್ತದೆ. 'ವ್ರೀಹೀನವಹಂತಿ' ಇಲ್ಲಿ ಹೊಟ್ಟು ತೆಗೆಯಲು ಅವಘಾತ ವಿಹಿತವಾಗಿದೆ. ಭತ್ತ ಕುಟ್ಟುವುದರಿಂದ ಹೊಟ್ಟು ಹೋಗುತ್ತದೆಂಬುದು ಲೋಕಪ್ರಸಿದ್ಧವಾಗಿದೆ. ಆದರೆ ಇಲ್ಲಿ ನಿಯಮ ಮಾಡಿದೆ. ತುಷವಿಮೋಕವು ನಾನಾ ಉಪಾಯಗಳಿಂದ ಸಾಧ್ಯವಾಗಿದೆ. ಆಗ ಕುಟ್ಟುವುದನ್ನು ಬಿಟ್ಟು ಉಪಾಯಾಂತರದಿಂದ ಸಾಧಿಸಿದರೆ ಅವಘಾತವು ಅಪ್ರಾಪ್ತವಾಗುತ್ತದೆ. ಆಗ ಅವಘಾತದಿಂದಲೇ ತುಷವಿಮೋಕಮಾಡಬೇಕೆಂದು ಅಪ್ರಾಪ್ತಾಂಶ ಪೂರಕವಾಗಿ ಈ ವಿಧಿಯು ನಿಯಮ ಮಾಡುತ್ತದೆ. ಅಪ್ರಾಪ್ತಾಂಶಪೂರಕತ್ವಮೇವ ನಿಯಮತ್ವಮ್. ಹೀಗೆ ಅಪೂರ್ವವಿಧಿಯೇ ಅಥವಾ ನಿಯಮವಿಧಿಯೇ ಎಂದು ವಿಚಾರಿಸಬೇಕು. ಅತ್ಯಂತವಾಗಿ ಅಪ್ರಾಪ್ತವಾದ ಅಧ್ಯಯನವನ್ನು ವಿಧಾನಮಾಡಿದರೆ ಆಗ ಅಪೂರ್ವವಿಧಿಯಾಗುತ್ತದೆ. ಆದರೆ ಹಾಗೆ ಹೇಳಲು ಸಾಧ್ಯವಿಲ್ಲ. ವಿವಾದಾಸ್ಪದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದಾಧ್ಯಯನಂ—ಅರ್ಥಾವಬೋಧಹೇತುಃ—ಅಧ್ಯಯನತ್ವಾತ್ । ಭಾರತಾಧ್ಯಯನವತ್ । ಎಂಬ ಅನುಮಾನದಿಂದ ವಿಧ್ಯಪೇಕ್ಷೆ ಇಲ್ಲದೆ ಇದು ಪ್ರಾಪ್ತವಾಗುತ್ತದೆ. ಹಾಗಾದರೆ ನಖನಿದಲನಾದಿಗಳಿಂದಲೂ ತುಷವಿಮೋಕ ಶಕ್ಯವಾಗುವಾಗ ಅವಘಾತದಿಂದಲೇ ಮಾಡಬೇಕೆಂದು ನಿಯಮಿಸಿದಂತೆ ಇದನ್ನು ನಿಯಮವಿಧಿಯೆಂದು ಹೇಳೋಣವೆಂದರೆ ಅದೂ ಸಂಭವಿಸುವುದಿಲ್ಲ. ಗುರೂಪದೇಶವಿಲ್ಲದೇ ಕೇವಲ ಬರೆದದ್ದನ್ನು ಓದಿಕೊಂಡು ಅರ್ಥಜ್ಞಾನವನ್ನು ಪಡೆಯುವುದು ಸಾಧ್ಯ. ಆಗ ಅಧ್ಯಯನವು ಪಾಕ್ಷಿಕವಾಗುವುದರಿಂದ ಅದನ್ನು ವಿಧಾನ ಮಾಡಿದಾಗ ನಿಯಮವಿಧಿಯಾಗುತ್ತದೆ. 'ನೈತತ್ ಚತುರಸ್ರಮ್'—ಇತಿ. ಚತುರಸ್ರಪದಕ್ಕೆ ಲಕ್ಷಣೆಯಿಂದ ಸಾಧು ಎಂದರ್ಥ. ನೈತತ್ ಸಾಧೂಚ್ಯತೇ' ಎಂದರ್ಥ. ಇದೂ ಸಮಂಜಸವಲ್ಲವೆಂದು ತಾತ್ಪರ್ಯ.

ದೃಷ್ಟಾಂತದಾರ್ಷ್ಟಾಂತಿಕಯೋರ್ವೈಧರ್ಮ್ಯ ಸಂಭವಾತ್ । ಅವಘಾತನಿಷ್ಪನ್ನೈರೇವ ತಂಡುಲೈಃ ಪಿಷ್ಟಪುರೋಡಾಶಾದಿಕರಣೇವಾಂತರಾಪೂರ್ವದ್ವಾರಾ ದರ್ಶಪೂರ್ಣಮಾಸಾದೌ ಪರಮಾಪೂರ್ವಮುತ್ಪಾದಯತೋ ನಾ ಪರಥಾ । ಅತೋಽಪೂರ್ವಮವಘಾತಸ್ಯ ನಿಯಮಹೇತುಃ । ಪ್ರಕೃತೇ ಲಿಖಿತಪಾಠಜನ್ಯೇನಾಧ್ಯಯನಜನ್ಯೇನ ವಾರ್ಥಾವಬೋಧೇನ ಕ್ರತ್ವನುಷ್ಠಾನ ಸಿದ್ಧೇರಧ್ಯಯನಸ್ಯ ನಿಯಮಹೇತುರ್ನಾಸ್ತ್ಯೇವ । ತಸ್ಮಾದರ್ಥಾವಬೋಧಹೇತುವಿಚಾರ ಶಾಸ್ತ್ರಸ್ಯ ವೈಧತ್ವಂ ನಾಸ್ತೀತಿ । ತರ್ಹಿ ಶ್ರೂಯಮಾಣಸ್ಯ ವಿಧೇಃ ಕಾಗತಿರಿತಿ ಚೇತ್ – ಸ್ವರ್ಗಫಲಕೋಕ್ಷರಗ್ರಹಣಮಾತ್ರವಿಧಿರಿತಿ ಭವಾನ್ ಪರಿತುಷ್ಯತು ।

ಅವಘಾತಾದಿ ದೃಷ್ಟಾಂತಕ್ಕೂ ಅಧ್ಯಯನವಿಧಿಯ ದಾರ್ಷ್ಟಾಂತಿಕಕ್ಕೂ ಸಾಮ್ಯವಿಲ್ಲವೆಂದು ತೋರಿಸುತ್ತಾನೆ. ವೈಧರ್ಮ್ಯವೇ ಇಲ್ಲಿ ತೋರುತ್ತದೆ. ಭತ್ತವನ್ನು ಕುಟ್ಟಿ ಶೋಧಿಸಿದ ಅಕ್ಕಿಯಿಂದ ಪಿಷ್ಟಪುರೋಡಾಶಾದಿಗಳನ್ನು ಮಾಡುವುದರಿಂದ ಅವಾಂತರಾಪೂರ್ವವುಂಟಾಗಿ ಅದು ದರ್ಶಪೂರ್ಣಮಾಸ ಯಾಗದಲ್ಲಿ ಸ್ವರ್ಗ ಸಾಧನವಾದ ಪರಮಾಪೂರ್ವವುಂಟಾಗಲು ಸಹಾಯವಾಗುತ್ತದೆ. ಪುರೋದಾಶ್ಯತೇ—ದೀಯತೇ ಇತಿ ಪುರೋಡಾಶಃ. ಒಂದು ಹವಿರ್ವಿಶೇಷ. ಪಿಷ್ಟವೆಂದರೆ ಅಕ್ಕಿಹಿಟ್ಟು, ಅದರಿಂದ ಮಾಡಿದ ರೊಟ್ಟಿ ಎಂದರ್ಥ. ಅಪೂರ್ವವೆಂದರೆ ಪುಣ್ಯವಿಶೇಷ. ಸ್ವರ್ಗಾದಿಸಾಧನವಾದ ಮುಖ್ಯಾಪೂರ್ವವು ದರ್ಶಪೂರ್ಣಮಾಸಾದಿ ಯಾಗದಿಂದ ಉಂಟಾಗುತ್ತದೆ. ಅದು ಉಂಟಾಗಲು ಸಹಾಯಕವಾಗಿರುವ ಅವಾಂತರಾಪೂರ್ವವು ಅವಘಾತಾದಿಗಳಿಂದ ಆಗುತ್ತದೆ. ಅಪೂರ್ವವು ಅದೃಷ್ಟವಾದುದರಿಂದ ಅಲ್ಲಿ ಕಾರ್ಯಕಾರಣಭಾವವು ಶಾಸ್ತ್ರದಿಂದಲೇ ನಿರ್ಣೀತವಾಗುತ್ತದೆ. ಪ್ರಕೃತ ಅಪೂರ್ವವೇ ಅವಘಾತಕ್ಕೆ ನಿಯಮಹೇತವಾಗುತ್ತದೆ. ಅವಘಾತನಿಯಮದಿಂದ ಉಂಟಾಗುವ ಅದೃಷ್ಟವನ್ನು ಕಲ್ಪಿಸದೇ ಹೋದರೆ, ಅಥವಾ ಕಲ್ಪಿಸಿರುವ ಆ ಅದೃಷ್ಟಕ್ಕೆ ಮುಖ್ಯಾಪೂರ್ವೋತ್ಪತ್ತಿಯಲ್ಲಿ ಸಹಾಯ ಸಂಪಾದಕತ್ವವನ್ನು ಹೇಳದೇ ಹೋದರೆ ಆಗ ಅವಘಾತ ವಿಧಿಶಾಸ್ತ್ರವು ವ್ಯರ್ಥವಾಗಬೇಕಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಟ್ಟು ಹೋಗುವುದೇ ಫಲವಾದರೆ ಆಗ ಶಾಸ್ತ್ರವಿಧಿಯ ಆವಶ್ಯಕತೆ ಇರುವುದಿಲ್ಲ. ಅದು ಲೋಕದಿಂದ ಸಿದ್ಧವಾಗುತ್ತದೆ. ಆದುದರಿಂದ ಶ್ರುತಿಯಿಂದ ಅವಘಾತನಿಯಮ ಮಾಡುವುದಕ್ಕೆ ದರ್ಶಪೂರ್ಣಮಾಸಜನ್ಯವಾದ ಮುಖ್ಯಾಪೂರ್ವವೇ ಕಾರಣವಾಗುತ್ತದೆ.

ಪ್ರಕೃತ ಲಿಖಿತಪಾಠದಿಂದಾಗಲೀ, ಅಧ್ಯಯನದಿಂದಾಗಲೀ ಉಂಟಾಗುವ ಅರ್ಥ ಜ್ಞಾನದಿಂದ ಯಾಗದ ಅನುಷ್ಠಾನವು ಸಿದ್ಧವಾಗುವುದರಿಂದ ಅಧ್ಯಯನಕ್ಕೆ ನಿಯಮ ಕಾರಣವು ಯಾವುದೂ ಇಲ್ಲ. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ನಿಯಮವು ಅರ್ಥ ಜ್ಞಾನಕ್ಕೋಪಸ್ಕರವೆಂದು ಹೇಳಲು ಸಾಧ್ಯವಿಲ್ಲ. ಅಧ್ಯಯನವಿಲ್ಲದೇ ಕೇವಲ ವ್ಯಾಖ್ಯಾನ ಗ್ರಂಥಾದಿಗಳಿಂದ ಅರ್ಥ ತಿಳಿಯುವುದು ಲೋಕಪ್ರಸಿದ್ಧವಾಗಿದೆ. ಇಂತಹ ಅರ್ಥಜ್ಞಾನ ದಿಂದ ಯಾಗಾನುಷ್ಠಾನ ಮಾಡಬಹುದು. ಆದುದರಿಂದ ತುಷವಿಮೋಕಕ್ಕಾಗಿ ವಿಹಿತ ವಾದ ಅವಘಾತ ವಿಧಿನಿಯಮದಿಂದ ಅವಾಂತರಾಪೂರ್ವವನ್ನು ಅಂಗೀಕರಿಸದಿದ್ದರೆ ಮುಖ್ಯಾಪೂರ್ವವು ಸಿದ್ಧಿಸದಿರುವುದರಿಂದ ಮುಖ್ಯಾಪೂರ್ವವೇ ಅವಾಂತರಾಪೂರ್ವ ಸ್ವೀಕಾರಕ್ಕೆ ಹೇಗೆ ಕಾರಣವೋ ಹಾಗೆ ಅರ್ಥಜ್ಞಾನಕ್ಕೋಪಸ್ಕರ ವಿಹಿತವಾದ ಅಧ್ಯಯನ ನಿಯಮದಿಂದ ಅವಾಂತರಾಪೂರ್ವಸ್ವೀಕಾರದಲ್ಲಿ ಯಾವ ಕಾರಣವೂ ಇಲ್ಲ. ಹಾಗಾದರೆ ಅಧ್ಯಯನ ವಿಧಿಯು ವ್ಯರ್ಥವಲ್ಲವೇ ? ಎಂದರೆ ವಿಶ್ವಜಿನ್ನ್ಯಾಯದಿಂದ ಸ್ವರ್ಗಾದಿಫಲ ವನ್ನು ಕಲ್ಪಿಸಬಹುದಾದುದರಿಂದ ವ್ಯರ್ಥವಾಗಲಾರದು. ಆದುದರಿಂದ ಇದು ಅಪೂರ್ವ ವಿಧಿಯೇ ಆಗುತ್ತದೆ, ಅಧ್ಯಯನವು ಸ್ವರ್ಗಸಾಧನವಾಗುತ್ತದೆಂದು ಈ ವಿಧಿಯು ತಿಳಿಸು ತ್ತದೆ. ಇದರಿಂದ ಅರ್ಥಜ್ಞಾನವೇ ಇದಕ್ಕೆ ಉದ್ದೇಶವೆಂದು ಸಿದ್ಧವಾಗುವುದಿಲ್ಲ ಹೀಗೆ ಅರ್ಥಜ್ಞಾನವು ವಿಧಿಬೋಧಿತವಾಗದಿರುವುದರಿಂದ ಅರ್ಥಜ್ಞಾನೋಪಯೋಗಿಯಾದ ಮೀಮಾಂಸಶಾಸ್ತ್ರಕ್ಕೂ ವಿಧಿತ್ವಸಂಭವಿಸದಿರುವುದರಿಂದ ಇದು ಅನಾರಂಭಣೀಯವೆಂದು ಪೂರ್ವ ಪಕ್ಷಿಯ ಅಭಿಪ್ರಾಯ. ಅಕ್ಷರಗ್ರಹಣಮಾತ್ರವೆಂದುದರಿಂದ ಅರ್ಥಜ್ಞಾನ ನಿರಾಸವೆಂದು ತಿಳಿಯುತ್ತದೆ.

"ಯಥಾ—" ಇತಿ ವಿಶ್ವಜಿನ್ನ್ಯಾಯವನ್ನು ಉಪಪಾದನೆ ಮಾಡುತ್ತಾನೆ. ಸ ಸ್ವರ್ಗಃ— ಎಂಬುದು ಸೂತ್ರ. ಸಃ — ದುಃಖಾಸಂಭಿನ್ನ ನಿರತಿಶಯ ಸುಖಾಸ್ಪದ ವಾದ, ಸ್ವರ್ಗಃ — ಸ್ವರ್ಗವು, ವಿಶ್ವಜಿನ್ನ್ಯಾಯಕ್ಕೆ ಫಲವಾಗುತ್ತದೆ. ಏಕೆಂದರೆ ಸಕಲಕಾಮರಿಗೂ ಅದು ಸಮಾನಫಲವಾಗಿರುತ್ತದೆ–ಎಂದು ಸೂತ್ರಾರ್ಥ. 'ವಿಶ್ವಜಿತಾ ಯಜೇತ' ಎಂಬಲ್ಲಿ ಕಾಮನೆ ಯಾವುದೂ ಹೇಳಿಲ್ಲ. ಹೀಗೆ ಕರ್ತೃ ವಿಶೇಷಣ (ಅಮುಕ ಕಾಮಃ) ಅಲ್ಲಿ ಹೇಳದಿರುವುದರಿಂದ ಅಲ್ಲಿ ಯಾರು ಅಧಿಕಾರಿಯೆಂಬ ಜಿಜ್ಞಾಸೆ ಯುಂಟಾಗುವುದರಿಂದ ಯಾವುದಾದರೊಂದು ಫಲವನ್ನು ಕಲ್ಪಿಸಿ ಆ ಫಲವನ್ನಪೇಕ್ಷಿಸು ವವನು ಅಧಿಕಾರಿಯೆಂದು ಕಲ್ಪಿಸಬೇಕು. ಎಲ್ಲರೂ ಅಧಿಕವಾಗಿ ಯಾವುದನ್ನು ಅಪೇಕ್ಷಿಸು ತ್ತಾರೆಯೋ ಅದನ್ನೇ ಕಲ್ಪಿಸುವುದು ಯುಕ್ತವಾದುದರಿಂದ ಸ್ವರ್ಗಸುಖವನ್ನೇ ಎಲ್ಲರೂ ಬಯಸುವುದರಿಂದ ವಿಶ್ವಜಿದ್ಯಾಗಕ್ಕೆ ಸ್ವರ್ಗವನ್ನೇ ಫಲವಾಗಿ ಕಲ್ಪಿಸುತ್ತಾರೆ. ಇದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ವಜಿನ್ನ್ಯಾಯ. ಆದರಂತೆ ಇಲ್ಲಿ ಫಲ ನಿರ್ದೇಶಿಸದಿರುವುದರಿಂದ ಸ್ವರ್ಗ ಫಲವನ್ನು ಕಲ್ಪಿಸುತ್ತೇವೆಂದು ಪೂರ್ವಪಕ್ಷಿಯ ಅಭಿಪ್ರಾಯ. ಇದನ್ನೇ ವಿವರಿಸುತ್ತಾನೆ.

ವಿಶ್ವಜಿನ್ನ್ಯಾಯೇನಾಶ್ರುತಸ್ಯಾಪಿ ಸ್ವರ್ಗಸ್ಯ ಕಲ್ಪಯಿತುಂ ಶಕ್ಯತ್ವಾತ್ । ಯಥಾ ಸ ಸ್ವರ್ಗಃ ಸರ್ವಾನ್ ಪ್ರತ್ಯ ವಿಶಿಷ್ಟತ್ವಾತ್ (ಜೈ– ಸೂ– ೪–೩–೧೩) ಇತಿ ವಿಶ್ವ ಜಿತ್ಯಶ್ರುತಮಪ್ಯಧಿಕಾರಿಣಂ ಸಂಪಾದಯತಾ ತದ್ವಿಶೇಷಣಂ ಸ್ವಗಃ ಫಲಂ ಯುಕ್ತ್ಯಾ ನಿರಣಾಯಿ ತದ್ವದಧ್ಯಯನೇಪ್ಯಸ್ತು ॥ ತದುಕ್ತಮ್—

ವಿನಾಪಿ ವಿಧಿನಾ ದೃಷ್ಟಲಾಭಾನ್ನ ಹಿ ತದರ್ಥತಾ
ಕಲ್ಪ್ಯಸ್ತು ವಿಧಿಸಾಮರ್ಥ್ಯಾತ್ ಸ್ವರ್ಗೋ ವಿಶ್ವಜಿದಾದಿವತ್ ॥ಇತಿ॥

ಏವಂ ಚ ಸತಿ ವೇದಮಧೀತ್ಯ ಸ್ನಾಯಾದಿತಿ ಸ್ಮೃತಿರನುಗೃಹೀತಾ ಭವತಿ । ಅತ್ರ ಹಿ ವೇದಾಧ್ಯಯನ ಸಮಾವರ್ತನಯೋರವ್ಯವಧಾದ ಮವಗಮ್ಯತೇ । ತಾವಕೇ ಮತೇ ತ್ವಧೀತೇಽಪಿ ವೇದೇ ಧರ್ಮವಿಚಾರಾಯ ಗುರುಕುಲೇ ವಸ್ತವ್ಯಮ್ । ತಥಾ ಸತ್ಯವ್ಯವಧಾನಂ ಬಾಧ್ಯೇತ । ತಸ್ಮಾದ್ವಿಚಾರಶಾಸ್ತ್ರಸ್ಯ ವೈಧತ್ವಾಭಾವಾ ತ್ಪಾಠಮಾತ್ರೇಣ ಸ್ವರ್ಗಸಿದ್ಧೇಃ ಸಮಾವರ್ತನಶಾಸ್ತ್ರಾಚ್ಚ ಧರ್ಮವಿಚಾರ ಶಾಸ್ತ್ರಮನಾರಂಭಣೀಯಮಿತಿ ಪೂರ್ವಪಕ್ಷಸಂಕ್ಷೇಪಃ ॥

ವಿಶ್ವಜಿನ್ನ್ಯಾಯದಿಂದ ಅಧ್ಯಯನಕ್ಕೆ ಸ್ವರ್ಗ ಫಲವನ್ನು ಕಲ್ಪಿಸುವುದರಿಂದ ಮೀಮಾಂಸಾಶಾಸ್ತ್ರಕ್ಕೆ ಅರ್ಥಬೋಧಹೇತುತ್ವವು ಸಂಗತವಾಗುವುದಿಲ್ಲವೆಂದು ತೋರಿಸುತ್ತಾನೆ. 'ವಿನಾ—' ಇತಿ. ವಿಧಿತ್ವ ಹೇಳದಿದ್ದರೂ ಲೋಕದಿಂದಲೇ ಅಧ್ಯಯನಕ್ಕೆ ಅರ್ಥಜ್ಞಾನರೂಪವಾದ ದೃಷ್ಟಫಲವು ಸಿದ್ಧವಾಗುತ್ತದೆ. ಆದರೆ ಅದಕ್ಕೆ ವಿಧಿತ್ವ ಹೇಳಿದ ಸಾಮರ್ಥ್ಯದಿಂದ ವಿಶ್ವಜಿನ್ನ್ಯಾಯದಿಂದ ಸ್ವರ್ಗವನ್ನು ಫಲವಾಗಿ ಕಲ್ಪಿಸ ಬೇಕೆಂದು ಶ್ಲೋಕಾರ್ಥ. "ಏವಂಚ—" ಇತಿ. ಅಧ್ಯಯನ ವಿಧಿಗೆ ಅರ್ಥಜ್ಞಾನ ಪರ್ಯಂತ ತಾತ್ಪರ್ಯವಿಲ್ಲವೆಂದು ಸಿದ್ಧವಾದುದರಿಂದ ವೇದವನ್ನು ಓದಿ ಸ್ನಾನ ಮಾಡ ಬೇಕೆಂದು ಹೇಳುವ ಸ್ಮೃತಿಯೂ ಸಂಗತವಾಗುತ್ತದೆ. ವೇದಾಧ್ಯಯನವಾದ ಮೇಲೆ ಗಾರ್ಹಸ್ಥ್ಯಾಧಿಕಾರಕ್ಕೆ ಪ್ರಯೋಜಕವಾದ ಕರ್ಮವಿಶೇಷಕ್ಕೆ ಸ್ನಾನವೆಂದು ಹೆಸರು. ಇದಕ್ಕೆ ಸಮಾವರ್ತನ ಸಂಸ್ಕಾರವೆಂದು ಕರೆಯುತ್ತಾರೆ. ವೇದವನ್ನು ಓದಿ ಸ್ನಾನ ವೆಂದುದರಿಂದ ಎರಡು ವಿಧಗಳಿಗೂ ಅವ್ಯವಧಾನವಿದೆಯೆಂದು ತಿಳಿಯುತ್ತದೆ. "ತಾವಕೇ—" ಇತಿ. ನಿನ್ನ ಮತದಲ್ಲಿ ಅರ್ಥಜ್ಞಾನ ಪಡೆಯ ಬೇಕಾದುದರಿಂದ ವೇದ ಓದಿದ ಮೇಲೂ ಧರ್ಮವಿಚಾರಕ್ಕೋಸ್ಕರ, ಗುರುಕುಲದಲ್ಲಿ ವಾಸಮಾಡ ಬೇಕಾಗುತ್ತದೆ. ಆಗ ಅವ್ಯವಧಾನವು ಬಾಧಿತವಾಗುತ್ತದೆ. 'ತಸ್ಮಾತ್'—ಇತಿ. ವಿಚಾರಶಾಸ್ತ್ರಕ್ಕೆ ವಿಧಿತ್ವ ಸಂಭವಿಸದಿರುವುದರಿಂದ, ಅಧ್ಯಯನಕ್ಕೆ ಸ್ವರ್ಗಫಲವನ್ನು ಕಲ್ಪಿಸುವುದರಿಂದ ಸಮಾವರ್ತನಶಾಸ್ತ್ರಬಲದಿಂದಲೂ, ಧರ್ಮವಿಚಾರಶಾಸ್ತ್ರವು ಅನಾರಂಭಣೀಯವೆಂದು ನಿಶ್ಚಿತವಾಗುತ್ತದೆಂದು ಪೂರ್ವಪಕ್ಷಿಯ ಆಶಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿದ್ಧಾಂತಸ್ತ್ವನ್ಯತಃ ಪ್ರಾಪ್ತತ್ವಾದಪ್ರಾಪ್ತವಿಧಿತ್ವಂ ಮಾಸ್ತು । ನಿಯಮವಿಧಿತ್ವಪಕ್ಷಸ್ತು ವಜ್ರಹಸ್ತೇನಾಪಿ ನಾಪಹಸ್ತಯಿತುಂ ಪಾರ್ಯತೇ । ತಥಾಹಿ ಸ್ವಾಧ್ಯಾಯೋಽಧ್ಯೇತವ್ಯ ಇತಿ ತವ್ಯಪ್ರತ್ಯಯಃ ಪ್ರೇರಣಾಪರಪರ್ಯಾಯಾಂ ಪುರುಷಪ್ರವೃತ್ತಿರೂಪಾರ್ಥಭಾವನಾಭಾವ್ಯಾಮಭಿಧಾಭಾವನಾಂ ಪ್ರತ್ಯಾಯಯತಿ । ಸಾ ಹ್ಯರ್ಥಭಾವನಾ ಭಾವ್ಯಮಾಕಾಂಕ್ಷತಿ । ನ ತಾವತ್ಸಮಾನಪದೋಪಾತ್ತಮಧ್ಯಯನಂ ಭಾವತ್ವೇನ ಪರಿರಮತೇ। ಅಧ್ಯಯನಶಬ್ದಾರ್ಥಸ್ಯ ಸ್ವಾಧೀನೋಚ್ಚಾರಣಕ್ಷಮತ್ವಸ್ಯ ವಾಙ್ಮನಸವ್ಯಾಪಾರಸ್ಯ ಕ್ಲೇಶಾರ್ಥಕಸ್ಯ ಭಾವ್ಯತ್ವಾಸಂಭವಾತ್ । ನಾಪಿ ಸಮಾನವಾಕ್ಯೋಪಾತ್ತಃ ಸ್ವಾಧ್ಯಾಯಃ। ಸ್ವಾಧ್ಯಾಯಶಬ್ದಾರ್ಥಸ್ಯ ವರ್ಣರಾಶೇರ್ನಿತ್ಯತ್ವೇನ ವಿಭುತ್ವೇನ ಚೋತ್ಪತ್ತ್ಯಾದೀನಾಂ ಚತುರ್ಣಾಂ ಕ್ರಿಯಾಫಲಾನಾಮಸಂಭವಾತ್ । ತಸ್ಮಾತ್ ಸಾಮರ್ಥ್ಯಪ್ರಾಪ್ತೋಽವಬೋಧೋ ಭಾವ್ಯತ್ವೇನಾವತಿಷ್ಠತೇ ।

ಅರ್ಥಬೋಧಕ್ಕೋಸ್ಕರವೇ ಅಧ್ಯಯನವೆಂದು ಸಿದ್ಧಾಂತ ತೋರಿಸುತ್ತಾನೆ. ಅರ್ಥಜ್ಞಾನವು ಲಿಖಿತಪಾಠಾದಿಗಳಿಂದಲೂ ಸಂಭವಿಸುವುದರಿಂದ ಅನ್ಯತಃ ಪ್ರಾಪ್ತಿ ಇರುವುದರಿಂದ ಅಪ್ರಾಪ್ತವಿಧಿತ್ವ ಇಲ್ಲದಿದ್ದರೂ ನಿಯಮವಿಧಿತ್ವವನ್ನು ಇಂದ್ರನಿಂದಲೂ ದೂರೀಕರಿಸಲು ಸಾಧ್ಯವಿಲ್ಲ. ಅಪಹಸ್ತನವೆಂದರೆ ಅಪಲಾಪ. ತಥಾಹಿ—ಎಂದು ನಿಯಮವಿಧಿತ್ವವನ್ನು ತೋರಿಸುತ್ತಾನೆ. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬಲ್ಲಿ ತವ್ಯಪ್ರತ್ಯಯವು ಪ್ರೇರಣಾಪರಪರ್ಯಾಯವಾದ ಶಾಬ್ದೀಭಾವನೆಯನ್ನು ತಿಳಿಸುತ್ತದೆ. ಭಾವನಾ ಅಂದರೆ ವ್ಯಾಪಾರ. ಅಭಿಧೀಯತೇ ಅನೇನ ಇತಿ. ಅಭಿಧಾ—ಶಬ್ದ. ಅದರ ಭಾವನೆಯೇ ಅಭಿಧಾ ಭಾವನಾ. (ಶಾಬ್ದೀಭಾವನಾ) ಸಾಧ್ಯತ್ವೇನ ಉದ್ದೇಶ್ಯವಾದುದಕ್ಕೆ ಭಾವ್ಯವೆಂದು ಹೆಸರು. ಶಾಬ್ದೀಭಾವನೆಗೆ ಸಾಧ್ಯತ್ವೇನ ಉದ್ದೇಶ್ಯವಾದುದು ಆರ್ಥೀಭಾವನಾ. ಪುರುಷಪ್ರವೃತ್ತಿರೂಪಾ ಯಾ ಆರ್ಥೀಭಾವನಾ, ಸಾ ಭಾವ್ಯಾ ಯಸ್ಯಾಃ ತಾಂ—ಪುರುಷಪ್ರವೃತ್ತಿರೂಪಾರ್ಥ ಭಾವನಾಭಾವ್ಯಾಮ್. ಶಾಬ್ದೀಭಾವನೆಯು ತವ್ಯಪ್ರತ್ಯಯವಾಚ್ಯವಾಗುತ್ತದೆ. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬಲ್ಲಿ ತವ್ಯಪ್ರತ್ಯಯ ಶ್ರವಣವಾದೊಡನೆ "ಅಯಂ ಶಬ್ದಃ ಮಾಂ ಅಧ್ಯಯನ ಕರ್ಮಣಿ ಪ್ರೇರಯತಿ" ಎಂದು ತಿಳಿಯುತ್ತದೆ.

ಯಾವುದು ಯಾವ ಶಬ್ದದಿಂದ ನಿಯಮದಿಂದ ತಿಳಿಯಲ್ಪಡುವುದೋ ಅದು ಆ ಶಬ್ದಕ್ಕೆ ವಾಚ್ಯವೆಂದು ಪ್ರಸಿದ್ಧವಾಗಿದೆ. ಈ ರೀತಿಯಾದ ಪ್ರೇರಣೆಯು ಪುರುಷನಲ್ಲಿದೆಯೆಂದು ತಿಳಿಯಬಾರದು. ಏಕೆಂದರೆ ವೇದವು ಅನಾದಿ. ಅದನ್ನು ಮಾಡಿದ ಪುರುಷರು ಯಾರೂ ಇಲ್ಲ. ಆದುದರಿಂದ ಪ್ರೇರಣಾಪರ ಪರ್ಯಾಯವಾಗಿರುವ ಶಾಬ್ದೀಭಾವನೆಗೆ ತವ್ಯ ಪ್ರತ್ಯಯವೇ ಆಶ್ರಯವಾಗುತ್ತದೆ. ಅದೇ ಅದಕ್ಕೆ ವಾಚಕ. ಈ ಶಾಬ್ದೀಭಾವನೆಯಿಂದ ಅಧ್ಯಯನಾದಿಗಳಲ್ಲಿ ಪುರುಷಪ್ರವೃತ್ತಿಯು ಸಾಧಿಸಲ್ಪಡುತ್ತದೆ. (ಸಾಧ್ಯ) ಈ ಪ್ರವೃತ್ತಿಗೆ ಆರ್ಥೀಭಾವನಾ ಎಂದು ಹೆಸರು. (ಪುರುಷಾದ್ಯರ್ಥನಿಷ್ಠಾ) ಇದಕ್ಕೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತವ್ಯಪ್ರತ್ಯಯವೇ ವಾಚಕವಾಗುತ್ತದೆ ಧಾತುವು ಕೇವಲ ಅಧ್ಯಯನ ಬೋಧಕವಾಗುತ್ತದೆ. ಆರ್ಥೀಭಾವನೆಗೆ ಭಾವ್ಯಾಕಾಂಕ್ಷಾ ಬರುತ್ತದೆ. (ಇದಕ್ಕೆ ಸಾಧ್ಯತ್ವೇನೋದ್ದೇಶ್ಯವಾದುದು ಯಾವುದು ?) ಯದ್ಯಪಿ ಅಧ್ಯಯನ ಪ್ರಯೋಜಕವಾದ ಈ ಆರ್ಥೀಭಾವನೆಯಲ್ಲಿ ಇದರಿಂದ ಸಾಧ್ಯವಾದುದು ಯಾವುದು ? (ತಯಾ ಕಿಂ ಭಾವಯೇತ್) ಎಂದು ಭಾವ್ಯಾಕಾಂಕ್ಷಾ ಬಂದಾಗ ಅಧ್ಯಯನವು ತತ್ಸಾಧ್ಯವಾದರೂ ಆರ್ಥೀಭಾವನೆಯಲ್ಲಿ ಭಾವ್ಯತ್ವರೂಪಸಂಬಂಧವನ್ನು ಹೊಂದಲಾರದು. 'ನತಾವತ್'—ಇತಿ. ಯದ್ಯಪಿ ಅಧ್ಯೇತವ್ಯಃ' ಎಂಬ ಒಂದೇ ಪದದಲ್ಲಿ ಪ್ರತ್ಯಯದಿಂದ ಆರ್ಥೀಭಾವನೆಯೂ, ಪ್ರಕೃತಿಯಿಂದ ಅಧ್ಯಯನವೂ ತೋರುವುದರಿಂದ ಸಮಾನಪದಬೋಧ್ಯಗಳಾಗುವುದರಿಂದ ಅಧ್ಯಯನವು ಸಂನಿಹಿತವಾಗಿದೆ. ಆದರೂ ಅಧ್ಯಯನವು ಕ್ಲೇಶಕರವಾದುದರಿಂದ ಅದು ಆರ್ಥೀಭಾವನೆಗೆ ಸಾಧ್ಯತ್ವೇನೋದ್ದೇಶವಾಗ (ಭಾವ್ಯ) ಲಾರದು. ಅಧ್ಯಯನವೆಂದರೆ ಸ್ವಾಧೀನೋಚ್ಚಾರಣೆಗೆ ಯೋಗ್ಯವಾದ ವಾಙ್ಮನೋವ್ಯಾಪಾರ. ಕ್ಲೇಶಾರ್ಥಕ ಅಂದರೆ ಕ್ಲೇಶ ಪ್ರಯೋಜಕ. ಕ್ಲೇಶದಾಯಕವಾದುದು ಪುರುಷ ಪ್ರವೃತ್ತಿಗೆ ಉದ್ದೇಶವಾಗಲಾರದು.

'ನಾಪಿ'—ಇತಿ. ಸಮಾನ ವಾಕ್ಯೋಪಾತ್ತವಾದ ಸ್ವಾಧ್ಯಾಯವು ಪುರುಷ ಪ್ರವೃತ್ತಿರೂಪ ಆರ್ಥೀಭಾವನೆಗೆ ಭಾವ್ಯವಾಗಲಿಯೆಂದರೆ ಅದೂ ಸಂಭವಿಸಲಾರದೆಂದು ತೋರಿಸುತ್ತಾನೆ. 'ಸ್ವಾಧ್ಯಾಯಃ ಅಧ್ಯೇತವ್ಯಃ' ಎಂದು ವಾಕ್ಯ. ಇಲ್ಲಿ ತವ್ಯಪ್ರತ್ಯಯದಿಂದ ಆರ್ಥೀಭಾವನೆ ವಾಚ್ಯವಾಗಿದೆ. ಸ್ವಾಧ್ಯಾಯವೆಂದರೆ ವೇದರಾಶಿ. ಸಮಾನಪದೋಪಾತ್ತತ್ವಾಪೇಕ್ಷೆಯಿಂದ ಸಮಾನವಾಕ್ಯೋಪಾತ್ತತ್ವವು ವಿಲಂಬೋಪಸ್ಥಿತಿಕವಾದರೂ ಇತರಾಪೇಕ್ಷಯ ಶೀಘ್ರೋಪಸ್ಥಿತಿಕವಾಗುವುದರಿಂದ ಪ್ರಕೃತ ಸಮಾನಪದೋಪಾತ್ತಕ್ಕೆ ಸಂಬಂಧ ಯೋಗ್ಯತ್ವವಿಲ್ಲದಿರುವುದರಿಂದ ಸಮಾನವಾಕ್ಯೋಪಾತ್ತಕ್ಕೆ ಸಂಬಂಧ ಹೇಳಬಹುದೆಂದು ಪೂರ್ವಪಕ್ಷಿಯ ಆಶಯ. ಆದರೆ ಅದೂ ಯುಕ್ತವಾಗುವುದಿಲ್ಲ. ವೇದರಾಶಿಗೆ ಎಂದೂ ಸಾಧ್ಯತ್ವಸಂಭವಿಸುವುದಿಲ್ಲ. ಕ್ರಿಯಾಫಲವು ಉತ್ಪತ್ತಿ, ಪ್ರಾಪ್ತಿ, ವಿಕಾರ, ಸಂಸ್ಕಾರಗಳೆಂದು ನಾಲ್ಕು ವಿಧಿ. ೧) ಕುಂಬಾರನ ಕ್ರಿಯೆಯಿಂದ ಘಟದ ಉತ್ಪತ್ತಿ. ೨) ಗಮನಕ್ರಿಯೆಯಿಂದ ದೇಶಾಂತರ ಪ್ರಾಪ್ತಿ. ೩) ಪಾಕಕ್ರಿಯೆಯಿಂದ ತಂಡುಲವಿಕಾರ. ೪) ಸಮುದ್ರ ನಾಲಿಗೆ ಮುಂತಾದವುಗಳಿಂದ ಉಜ್ಜುವುದರಿಂದ ಕನ್ನಡಿಯಲ್ಲಿ ಮಾಲಿನ್ಯ ಹೋಗಿ ಸಂಸ್ಕಾರವಾಗುತ್ತದೆ.

ಪ್ರಕೃತ ವೇದವು ನಿತ್ಯವೂ ವಿಭುವೂ ಆದುದರಿಂದ ಅದು ಅಧ್ಯಯನ ಪ್ರವೃತ್ತಿಯಿಂದ ಹೊಂದಲಾರದು. ವಿಭುವಾಗಿ ಎಲ್ಲಾಕಡೆ ಇರುವುದರಿಂದ ಹೊಂದಲ್ಪಡುವುದಿಲ್ಲ. ಲೋಕದಲ್ಲಿ ಯಾವುದು ಅಪ್ರಾಪ್ಯವೋ ಅದಕ್ಕೆ ಪ್ರಾಪ್ಯತ್ವ ಪ್ರಸಿದ್ಧವಾಗಿದೆ. ಇದು ನಿತ್ಯ ಪ್ರಾಪ್ತವಾದುದರಿಂದ ಪ್ರಾಪ್ತಿ ಇಲ್ಲ. ವಿಕಾರವನ್ನು ಒಪ್ಪಿದರೆ ನಿತ್ಯತ್ವಭಂಗ ಬರುವುದರಿಂದ ವಿಕಾರವೂ ಇಲ್ಲ. ಸಂಸ್ಕಾರವೆಂದರೆ ಕಾರ್ಯಾಂತರಯೋಗ್ಯತಾಪಾದನ. ನಿತ್ಯವಾದ ಈ ವೇದದಲ್ಲಿ ಅಪೂರ್ವಗುಣಾಧಾನವೂ ಸಂಭವಿಸದಿರುವುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರವೂ ಇಲ್ಲ. ಹೀಗೆ ನಾಲ್ಕುವಿಧಗಳಾದ ಕ್ರಿಯಾಫಲಗಳೂ ಈ ವೇದಕ್ಕೆ ಸಂಭವಿಸುವುದಿಲ್ಲ. 'ತಸ್ಮಾತ್' — ಇತಿ. ಭಾವ್ಯವಿಲ್ಲದಿದ್ದರೆ ಅಧ್ಯಯನ ವಿಧಿಯು ನಿರರ್ಥಕವಾಗುವುದರಿಂದ ತತ್ಸಾಮರ್ಥ್ಯದಿಂದ ಅರ್ಥಾವಬೋಧರೂಪವಾದ ದೃಷ್ಟಫಲವೇ ಇದಕ್ಕೆ ಭಾವ್ಯವೆಂದು ಸಿದ್ಧವಾಗುತ್ತದೆ. ಇದರಿಂದ ಅಧ್ಯಯನದಿಂದ ಅರ್ಥಾವಬೋಧವನ್ನು ಸಂಪಾದಿಸಬೇಕೆಂದು ವಿಧಿವಾಕ್ಯಾರ್ಥವು ನಿರ್ಣೀತವಾಗುತ್ತದೆ. ದೃಷ್ಟಫಲ ಸಂಭವಿಸುವಾಗ ಅದೃಷ್ಟವಾದ ಸ್ವರ್ಗಫಲವನ್ನು ಕಲ್ಪಿಸುವುದು ನ್ಯಾಯವಲ್ಲ. ವಿಶ್ವಜಿನ್ನ್ಯಾಯದಿಂದ ಸ್ವರ್ಗವನ್ನು ಕಲ್ಪಿಸಲು ಶಕ್ಯವಿದ್ದರೂ ಪ್ರಕೃತ ಹಿಂದೆ ಹೇಳಿವಂತೆ ಅದು ಯುಕ್ತನಲ್ಲವೆಂದು ತಾತ್ಪರ್ಯ.

ಅರ್ಥೀ ಸಮರ್ಥೋ ವಿದ್ವಾನಧಿಕ್ರಿಯತ ಇತಿ ನ್ಯಾಯೇನ ದರ್ಶ ಪೂರ್ಣಮಾಸಾದಿ ವಿಧಯಃ ಸ್ವವಿಷಯಾವಬೋಧಮಪೇಕ್ಷಮಾಣಾಃ ಸ್ವಾರ್ಥಬೋಧೇ ಸ್ವಾಧ್ಯಾಯಂ ವಿನಿಯುಂಜತೇ । ಅಧ್ಯಯನವಿಧಿಶ್ಚ ಲಿಖಿತಪಾಠಾದಿವ್ಯಾವೃತ್ತ್ಯಾಧ್ಯಯನ ಸಂಸ್ಕೃತತ್ವಂ ಸ್ವಾಧ್ಯಾಯಸ್ಯಾವಗಮಯತಿ । ತಥಾ ಚ ಯಥಾ ದರ್ಶಪೂರ್ಣಮಾಸಾದಿ ಜನ್ಯಂ ಪರಮಾಪೂರ್ವಮವಘಾತಾದಿ ಜನ್ಯಸ್ಯಾವಾಂತರಾಪೂರ್ವಸ್ಯ ಕಲ್ಪಕಂ ತಥಾ ಸಮಸ್ತಕ್ರತುಜನ್ಯಮಪೂರ್ವಜಾತಂ ಕ್ರತಜ್ಞಾನಸಾಧನಾಧ್ಯಯನ ನಿಯಮಜನ್ಯಮಪೂರ್ವಂ ಕಲ್ಪಯಿಷ್ಯತಿ । ನಿಯಮಾದೃಷ್ಟಾನಿಷ್ಟೌ ವಿಧಿಶ್ರವಣವೈಫಲ್ಯಮಾಪದ್ಯೇತ । ನ ಚ ವಿಶ್ವಜಿನ್ನ್ಯಾಯೇನ ಫಲಕಲ್ಪನಾವ ಕಲ್ಪತೇ । ಅರ್ಥಾವಬೋಧೇ ದೃಷ್ಟೇಫಲೇ ಸತಿ ಫಲಾಂತರಕಲ್ಪನಾಯಾ ಆಯೋಗಾತ್ । ತದುಕ್ತಂ

ಲಭ್ಯಮಾನೇ ಫಲೇ ದೃಷ್ಟೇ ನಾದೃಷ್ಟಫಲಕಲ್ಪನಾ ॥
ವಿಧೇಸ್ತು ನಿಯಮಾರ್ಥತ್ವಾನ್ನಾನರ್ಥಕ್ಯಂ ಭವಿಷ್ಯತಿ ॥ ಇತಿ ॥

ದೃಷ್ಟಫಲವು ಲೋಕದಿಂದಲೇ ಸಿದ್ಧವಾಗುವಾಗ ಇದನ್ನು ಪುನಃ ಏಕೆ ಹೇಳಬೇಕು? ಅಂದರೆ ಇದು ನಿಯಮವಿಧಿಯಾಗಲಿಯೆಂದು ಸಮಾಧಾನ ಹೇಳುತ್ತಾನೆ. 'ಅರ್ಥೀ'– ಇತಿ. ಅಧ್ಯಯನಪೂರ್ವಕವಾಗಿಯೇ ಅರ್ಥಜ್ಞಾನವನ್ನು ಸಂಪಾದಿಸಬೇಕೆಂಬ ನಿಯಮವಿಧಿಗೆ ದೃಷ್ಟಫಲ ಯಾವುದೂ ಇಲ್ಲದಿರುವುದರಿಂದ ಅಗತ್ಯಾ ಅದೃಷ್ಟವಾದ ಅವಾಂತರಾಪೂರ್ವವನ್ನು ಫಲವಾಗಿ ಕಲ್ಪಿಸಬೇಕು. ಸಮಸ್ತಕ್ರತುಜನ್ಯವಾದ ಪರಮಾಪೂರ್ವವೇ ಈ ಅವಾಂತರಾಪೂರ್ವಕಲ್ಪನೆಯಲ್ಲಿ ಕಾರಣವಾಗುತ್ತದೆ. ಹಣವುಳ್ಳವನೂ, ಸಮರ್ಥನೂ ವಿದ್ವಾಂಸನೂ ಯಾಗದಲ್ಲಿ ಅಧಿಕಾರಿಯೆಂಬುದರಿಂದ (೬–೧ರಲ್ಲಿ ಹೇಳಿದೆ) ದರಿದ್ರನಾಗಲೀ ಅಂಧಮೂಕರಾಗಲೀ, ಅಜ್ಞನಾಗಲೀ, ಅಂತಹವರಿಗೆ ಯಾಗದಲ್ಲಿ ಅಧಿಕಾರವಿರುವುದಿಲ್ಲ. ಅರ್ಥಜ್ಞಾನವಿಲ್ಲದೆ ಕೃತ್ಸ್ನಾನುಷ್ಠಾನ ಅಸಂಭವವಾದುದರಿಂದ ಅರ್ಥಜ್ಞಾನಾರ್ಥವಾಗಿ ಶ್ರುತಿಯು ಅಧ್ಯಯನ ನಿಯಮವನ್ನು ಮಾಡಿದೆ. ಯಾಗ ಮಾಡಬೇಕಾದರೆ ಅದರ ಅಂಗಾಂಗಗಳ ಅರ್ಥಾವಬೋಧವಾಗಬೇಕು. ಅದಕ್ಕೋಸ್ಕರ ಸ್ವಾಧ್ಯಾಯವಿನಿಯೋಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಿದೆ. ಈ ಅಧ್ಯಯನವಿಧಿಯು ಲಿಖಿತಪಾಠಾದಿವ್ಯಾವೃತ್ತಿ ಮೂಲಕ ಸ್ವಾಧ್ಯಾಯಕ್ಕೆ ಅಧ್ಯಯನ ಸಂಸ್ಕೃತತ್ವವನ್ನು ತಿಳಿಸುತ್ತದೆ. ಅಧ್ಯಯನ ಸಂಸ್ಕಾರವುಂಟಾದರೆ ವೇದ ರಾಶಿಗೆ ನಿತ್ಯತ್ವಭಂಗ ಬರುವುದಿಲ್ಲವೇ ? ಎಂದು ಶಂಕಿಸಬಾರದು. ಇಲ್ಲಿ ಸಂಸ್ಕಾರ ವೆಂದರೆ ಗುಣಾಧಾನ ರೂಪವಲ್ಲ. ಅಥವಾ ದೋಷಾಪನಯನರೂಪವೂ ಅಲ್ಲ. ಅರ್ಥಾವ ಬೋಧರೂಪಫಲಾಭಿಮುಖ್ಯಸಂಪಾದನವೇ ಅಧ್ಯಯನ ಸಂಸ್ಕಾರವೆಂದು ತಿಳಿಯಬೇಕು. ಹೀಗೆ ಅರ್ಥಕಲ್ಪಿಸುವುದರಿಂದ ವೇದರಾಶಿಗೆ ನಿತ್ಯತ್ವಭಂಗ ಬರುವುದಿಲ್ಲ. 'ತಥಾಚ'— ಇತಿ. ದರ್ಶಪೂರ್ಣಮಾಸಾದಿಗಳಿಂದ ಉಂಟಾದ ಪರಮಪೂರ್ವವು ಅವಘಾತಾದಿಜನ್ಯ ವಾದ ಅವಾಂತರಾಪೂರ್ವಕ್ಕೆ ಹೇಗೆ ಕಲ್ಪಕವೋ ಹಾಗೆಯೇ ಸಮಸ್ತಕ್ರತುಜನ್ಯವಾದ ಅಪೂರ್ವಸಮುದಾಯವು ಕ್ರತುಜ್ಞಾನಕ್ಕೆ ಸಾಧನವಾದ ಅಧ್ಯಯನ ನಿಯಮಜನ್ಯವಾದ ಅವಾಂತರಪೂರ್ವವನ್ನು ಕಲ್ಪಿಸುತ್ತದೆ. ನಿಯಮಾದೃಷ್ಟವನ್ನು ಒಪ್ಪದಿದ್ದರೆ ವಿಧಿಶ್ರವಣ ವೈಫಲ್ಯವಾಗಬೇಕಾಗುತ್ತದೆ. ಹಿಂದೆ ಹೇಳಿದಂತೆ ದೃಷ್ಟಫಲವು ಸಂಭವಿಸುವಾಗ ವಿಶ್ವ ಜಿನ್ನ್ಯಾಯದಿಂದ ಅದೃಷ್ಟವಾದ ಸ್ವರ್ಗಫಲವನ್ನು ಕಲ್ಪಿಸುವುದು ನ್ಯಾಯವಲ್ಲವೆಂಬುದ ರಲ್ಲಿ ವೃದ್ಧಸಂಮತಿ ತೋರಿಸುತ್ತಾನೆ. 'ಲಭ್ಯಮಾನೇ'—ಇತಿ. ದೃಷ್ಟಫಲ ದೊರೆಯು ವಾಗ ಅದೃಷ್ಟಫಲವನ್ನು ಕಲ್ಪಿಸಬಾರದು. ನಿಯಮವಿಧಿತ್ವವನ್ನಂಗೀಕರಿಸುವುದರಿಂದ ಯಾವ ದೋಷವೂ ಇಲ್ಲವೆಂದು ತಾತ್ಪರ್ಯ.

ನನುವೇದಮಾತ್ರಾಧ್ಯಾಯಿನೋಽರ್ಥಾವಬೋಧಾನುದಯೇಽಪಿ ಸಾಂಗವೇದಾಧ್ಯಯಿನಃ ಪುರುಷಾಸ್ಯಾರ್ಥಾವಬೋಧಸಂಭವಾದ್ವಿಚಾರಶಾಸ್ತ್ರಸ್ಯ ವೈಫಲ್ಯಮಿತಿ ಚೇತ್— ತದಸಮಂಜಸಮ್ । ಬೋಧಮಾತ್ರಸಂಭವೇಽಪಿ ನಿರ್ಣಯಸ್ಯ ವಿಚಾರಾಧೀನ ತ್ವಾತ್ ತದ್ಯಥಾ—ಅಕ್ತಾಃ ಶರ್ಕರಾ ಉಪದಧಾತಿ (ತೈ-ಬ್ರಾ-೩-೧೨-೫) ಇತ್ಯತ್ರ ಘೃತೇನೈವ ನ ತೈಲಾದಿನೇತ್ಯಯಂನಿರ್ಣಯೋ ವ್ಯಾಕರಣೇನ ನಿಗ ಮೇನ ನಿರುಕ್ತೇನ ವಾ ನ ಲಭ್ಯತೇ । ವಿಚಾರಶಾಸ್ತ್ರೇಣ ತು ತೇಜೋ ವೈ ಘೃತಮಿತಿ ವಾಕ್ಯಶೇಷವಶಾದರ್ಥ ನಿರ್ಣಯೋ ಲಭ್ಯತೇ । ತಸ್ಮಾದ್ವಿಚಾರ ಶಾಸ್ತ್ರಸ್ಯ ವೈಧತ್ವಂ ಸಿದ್ಧಮ್ । ನ ಚ ವೇದಮಧೀತ್ಯ ಸ್ನಾಯಾದಿತಿ ಶಾಸ್ತ್ರಂ ಗುರುಕುಲ ನಿವೃತ್ತಿಪರಂ ವ್ಯವಧಾನಪ್ರತಿಬಂಧಕಂ ಬಾಧ್ಯೇತೇತಿ ಮಂತವ್ಯಮ್। ಸ್ನಾತ್ವಾಭುಂಕ್ತೇಇತಿವತ್ ಪೂರ್ವಾಪರೀಭಾವ ಸಮಾನಕರ್ತೃಮಾತ್ರಪ್ರತಿಪತ್ತ್ಯಾ ಧ್ಯಯನಸಮಾವರ್ತನಯೋರ್ನೈರಂತರ್ಯಾಪ್ರತಿಪತ್ತೇಃ । ತಸ್ಮಾದ್ವಿಧಿ ಸಾಮರ್ಥ್ಯಾದ್ದೇಷಾಧಿಕರಣ ಸಹಸ್ರಾತ್ಮಕಂ ಪೂರ್ವಮೀಮಾಂಸಾಶಾಸ್ತ್ರ ಮಾರಂಭಣೀಯಮ್ ॥

ಕೇವಲ ವೇದ ಓದಿದವನಿಗೆ ಅರ್ಥಜ್ಞಾನವಾಗದಿದ್ದರೂ ಶಿಕ್ಷಾದಿಷಡಂಗಗಳಿಂದ ಕೂಡಿ ವೇದಾಧ್ಯಯನ ಮಾಡಿದವನಿಗೆ ಅರ್ಥಜ್ಞಾನವಾಗುವುದರಿಂದ ಈ ವಿಚಾರಶಾಸ್ತ್ರವು ವ್ಯರ್ಥವಲ್ಲವೇ ? ಎಂದು ಆಶಂಕಿಸಿದರೆ ಅದೂ ಸರಿಯಲ್ಲವೆಂದು ಸಮಾಧಾನ ತೋರಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾನೆ. 'ಬೋಧನಮಾತ್ರ'—ಇತಿ, ಸಾಂಗವೇದಾಧ್ಯಯನ ಮಾಡಿದವನಿಗೆ ಯಥಾವತ್ತಾಗಿ ಅರ್ಥವಾಗಬಹುದು. ಆದರೆ ಅದರಿಂದ ಅರ್ಥನಿರ್ಣಯವಾಗಲಾರದು. ವಿಚಾರದಿಂದಲೇ ಅರ್ಥ ನಿಶ್ಚಯವಾಗುತ್ತದೆ. ಉದಾಹರಣೆ ತೋರಿಸುತ್ತಾನೆ. 'ಅಕ್ತಾ'—ಇತಿ. ಇಲ್ಲಿ ಅಕ್ತಪದಕ್ಕೆ ತುಪ್ಪವೆಂದೂ ಎಣ್ಣೆಯೆಂದೂ ಅರ್ಥವಾಗುತ್ತದೆ. ಆದರೆ ತುಪ್ಪದಿಂದಲೇ ಎಂಬರ್ಥವು ವಿಚಾರ ಶಾಸ್ತ್ರದಿಂದಲೇ ನಿಶ್ಚಿತವಾಗುತ್ತದೆ. ವೇದಾಂಗವಾದ ವ್ಯಾಕರಣದಿಂದಾಗಲೀ, ನಿರುಕ್ತದಿಂದಾಗಲೀ ಉಂಟಾಗುವುದಿಲ್ಲ. 'ತೇಜೋವೈ ಘೃತಂ' ಎಂಬ ವಾಕ್ಯಶೇಷದಿಂದ ವಿಚಾರಶಾಸ್ತ್ರದಲ್ಲಿ ಇದು ನಿಶ್ಚಿತವಾಗಿದೆ. ಆದುದರಿಂದ ವಿಚಾರಶಾಸ್ತ್ರಕ್ಕೆ ವೈಧತ್ವವು ಸಿದ್ಧವಾಗುತ್ತದೆ.

'ನ ಚ'—ಇತಿ. ಅಧ್ಯಯನವು ಅರ್ಥಾವಬೋಧಫಲಕವಾದರೆ 'ವೇದಮಧೀತ್ಯ ಸ್ನಾಯಾತ್' ಎಂಬ ಶಾಸ್ತ್ರಕ್ಕೆ ಬಾಧಬರಬೇಕಾಗುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ ಅಧ್ಯಯನವಾದೊಡನೆಯೇ ಸಮಾವರ್ತನವೆಂದು ಅಲ್ಲಿ ಅರ್ಥವಾಗುವುದರಿಂದ ಅಧ್ಯಯನವಾದಮೇಲೆ ಗುರುಕುಲದಲ್ಲಿ ಅರ್ಥಕ್ಕೋಸ್ಕರ ಇರುವುದಾದರೆ ಅವ್ಯವಧಾನವು ಸಂಗತವಾಗುವುದಿಲ್ಲವೆಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಸ್ನಾತ್ವಾ'—ಇತಿ. ಸ್ನಾನಮಾಡಿ ಊಟ ಮಾಡುತ್ತಾನೆಂದರೆ ಇಲ್ಲಿ ಸ್ನಾನ ಭೋಜನಕ್ರಿಯೆಗೆ ಒಬ್ಬನೇ ಕರ್ತೃವೆಂದೂ ಅಲ್ಲಿ ಪೂರ್ವಕಾಲಿಕ ಕ್ರಿಯಾವಾಚಕದ ಮೇಲೆ ಕ್ತ್ವಾಪ್ರತ್ಯಯ ಬರುತ್ತದೆಂದೂ "ಸಮಾನಕರ್ತೃಕಯೋಃ ಪೂರ್ವಕಾಲೇ ಕ್ತ್ವಾ" ಎಂಬ ಪಾಣಿನಿಸೂತ್ರದಿಂದ ತಿಳಿಯುತ್ತದೆ. ಏಕಕರ್ತೃಕಧಾತ್ವರ್ಥಗಳು ತೋರುವಾಗ ಪೂರ್ವಕಾಲದಲ್ಲಿರುವ ಧಾತುವಿನ ಮೇಲೆ ಕ್ತ್ವಾ ಎಂದು ಸೂತ್ರಾರ್ಥ. ಉಪಸರ್ಗವಿದ್ದರೆ ಆ ಕ್ತ್ವಾಸ್ಥಾನದಲ್ಲಿ ಲ್ಯಪ್ ಬರುತ್ತದೆ. (ಅಧೀತ್ಯ). ಅಲ್ಲಿ ಎರಡು ಕ್ರಿಯೆಗಳಿಗೆ ವ್ಯವಧಾನವಿರಬಾರದೆಂದು ಹೇಳಿಲ್ಲ. ಆದುದರಿಂದ ಅಧ್ಯಯನಸಮಾವರ್ತನಗಳಿಗೆ ನೈರಂತರ್ಯವಿರಬೇಕೆಂದು ಹೇಳಬಾರದು. ವ್ಯವಧಾನವಿದ್ದರೂ ದೋಷವಿಲ್ಲ. ಹೀಗೆ ವಿಧಿಸಾಮರ್ಥ್ಯದಿಂದ ಸಾವಿರ ಅಧಿಕರಣದಿಂದ ಕೂಡಿದ ಮೀಮಾಂಸಾಶಾಸ್ತ್ರವು ಅವಶ್ಯಾರಂಭಣೀಯವೆಂದು ಸಿದ್ಧವಾಗುತ್ತದೆ.

ಇದಂ ಚಾಧಿಕರಣಂ ಶಾಸ್ತ್ರೇಣೋಪೋದ್ಘಾತತ್ವೇನ ಸಂಬಧ್ಯತೇ ತದಾಹ—

ಚಿಂತಾಂ ಪ್ರಕೃತಸಿದ್ಧ್ಯರ್ಥಾಮುಪೋದ್ಘಾತಂ ಪ್ರಚಕ್ಷತೇ । ಇತಿ ।
ಇದಮೇವಾಧಿಕರಣಂ ಗುರುಮತಮನುಸೃತ್ಯೋಪನ್ಯಸ್ಯತೇ ॥ ಅಷ್ಟವರ್ಷಂ ಬ್ರಾಹ್ಮಣಮುಪನಯೀತ ತತ್ರ ಅಧ್ಯಾಪನಂ ನಿಯೋಗವಿಷಯಃ ಪ್ರತಿಭಾಸತೇ । ನಿಯೋಗಶ್ಚ ನಿಯೋಜ್ಯಮಪೇಕ್ಷತೇ। ಕಶ್ಚಾತ್ರ ನಿಯೋಜ್ಯ ಇತಿಚೇತ್ — ಆಚಾರ್ಯಕಕಾಮ ಏವ। ಸಂಮಾನನ (ಪಾಣಿ-ಸೂ ೧-೩-೩೬) ಇತ್ಯಾದಿನಾ ಪಾಣಿನ್ಯನುಶಾಸನೇನಾಚಾರ್ಯಕೇ ಗಮ್ಯಮಾನೇ ನಯತೇರ್ಥಾತೋರಾತ್ಮನೇಪದಸ್ಯ ವಿಧಾನಾತ್ । ಉಪನಯನೇ ಯೋ ನಿಯೋಜ್ಯಃ ಸ ಏವಾಧ್ಯಾಪನೇಽಪಿ। ತಯೋರೇಕ ಪ್ರಯೋಜನತ್ವಾತ್ । ಅತ ಏವೋಕ್ತಂ ಮನುನಾ ಮುನಿನಾ —

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪನೀಯ ತು ಯಃ ಶಿಷ್ಯಂ ವೇದಮಧ್ಯಾಪಯೇದ್ವಿಜಃ ।
ಸಾಂಗಂ ಚ ಸರಹಸ್ಯಂ ಚ ತಮಾಚಾರ್ಯಂ ಪ್ರಚಕ್ಷತೇ ॥

(ಮನು-೨-೧೪೦) ಇತಿ

ಪ್ರಕೃತ ವಿಚಾರಿತವಾದ ಅಧಿಕರಣಕ್ಕೆ ಶಾಸ್ತ್ರದೊಡನೆ ಉಪೋದ್ಘಾತ ಸಂಗತಿಯಿಂದ ಸಂಬಂಧ ಹೇಳಬೇಕು. ಉಪೋದ್ಘಾತ ಲಕ್ಷಣವನ್ನು ತೋರಿಸುತ್ತಾನೆ. 'ಚಿಂತಾಂ,—ಇತಿ. ಪ್ರಕೃತಾರ್ಥಸಿದ್ಧಿಗೋಸ್ಕರ ಮಾಡುವ ವಿಚಾರವೇ ಉಪೋದ್ಘಾತವಾಗುತ್ತದೆ. 'ಇದಂ'—ಇತಿ. ಈ ಅಧಿಕರಣವನ್ನು ಗುರುಮತದಿಂದ ಈಗ ವಿವರಿಸುತ್ತಾನೆ. ಹಿಂದೆ ಹೇಳಿದುದು ಭಾಟ್ಟಮತಾನುಸಾರದಿಂದ ಎಂದು ಹೇಳಿದೆ. ಪ್ರಾಭಾಕರನಿಗೆ ಗುರುವೆಂಬ ಹೆಸರು ಬರಲು ಹೀಗೆ ಕಾರಣ ಹೇಳುತ್ತಾರೆ. ಇವನ ಗುರುವು 'ಅತ್ರ ತುನೋಕ್ತಂ, ತತ್ರಾಪಿನೋಕ್ತಂ, ಅತಃ ಪೌನರುಕ್ತ್ಯಂ' ಎಂಬಲ್ಲಿ ಭ್ರಾಂತರಾಗಿ "ಇಲ್ಲಿಯೂ ಹೇಳಲಿಲ್ಲ, ಅಲ್ಲಿಯೂ ಹೇಳಲಿಲ್ಲ ಆದುದರಿಂದ ಪೌನುರುಕ್ತ್ಯ' ಎಂದು ಅರ್ಥಮಾಡಿಕೊಂಡು ಇದು ಹೇಗೆ ಎಂದು ಚಿಂತಿಸುವಾಗ ಪ್ರಾಭಾಕರನು" ಅಲ್ಲಿ ತುಶಬ್ದದಿಂದ ಹೇಳಿದೆ (ತುನಾ ಅಪಿನಾ ಉಕ್ತಂ) ಅಲ್ಲಿ ಅಪಿ ಶಬ್ದದಿಂದ ಹೇಳಿದೆ, ಆದುದರಿಂದ ಪೌನರುಕ್ತ್ಯವೆಂದು ಅರ್ಥಮಾಡಿದುದರಿಂದ ಗುರುಗಳು ಸಂತುಷ್ಟರಾಗಿ ನೀನೇ ಗುರುವೆಂದರು. ಅಂದಿನಿಂದ ಅವರಿಗೆ ಗುರುವೆಂಬ ಅಡ್ಡ ಹೆಸರು ಪ್ರಸಿದ್ಧವಾಯಿತು.

"ಅಷ್ಟವರ್ಷಂ ಬ್ರಾಹ್ಮಣಮುಪನಯೀತ, ತಮಧ್ಯಾಪಯೀತ" ಎಂಬಲ್ಲಿ ಅಧ್ಯಾಪನವು ನಿಯೋಗ ವಿಷಯವಾಗಿ ತೋರುತ್ತದೆ. ನಿಯೋಗವೆಂದರೆ ವಿಧಿ. ಅಧ್ಯಾಪನವು ವಿಧೇಯವಾಗಿ ತೋರುತ್ತದೆ. ಯಾರನ್ನು ಕುರಿತುವಿಧಿ ಹೇಳುತ್ತೇವೋ ಅವನು ನಿಯೋಜ್ಯನು. ಇಲ್ಲಿ ನಿಯೋಜ್ಯನು ಯಾರು ? ಎಂದು ಆಕಾಂಕ್ಷೆ ಬಂದಾಗ ಆಚಾರ್ಯಕಕಾಮನೇ ನಿಯೋಜ್ಯನೆಂದು ತಿಳಿಯುತ್ತದೆ. ಉಪನಯನಪೂರ್ವಕವಾಗಿ ಅಧ್ಯಾಪನ ಮಾಡುವವನೇ (ಅಧ್ಯಾಪನಕರ್ತೃ) ಆಚಾರ್ಯ. 'ತಸ್ಯಭಾವಃ ಕರ್ಮವಾ' ಎಂಬರ್ಥದಲ್ಲಿ 'ಯೋಪಧಾತ್'—ಸೂತ್ರದಿಂದ ವುಞ್ ಬರುತ್ತದೆ. ಅದಕ್ಕೆ ಅಕಾದೇಶ. ಆಚಾರ್ಯಕಂ ಎಂದಾಗುತ್ತದೆ. ಉಪನಯನ ಎಂಬಲ್ಲಿ ಉಪಉಪಸರ್ಗ, ಣೀಞ್ ಧಾತು ಇದೆ. ವಿಧಿಪೂರ್ವಕಾತ್ಮಸಮೀಪಪ್ರಾಪಣವೇ ಉಪನಯನ. ಆ ರೀತಿಯಾದ ಪ್ರಾಪಣಕ್ರಿಯೆಗೆ ಮಾಣವಕನ ಸಂಸ್ಕಾರವೇ ಫಲ. ಈ ಫಲವು ಮಾಣವಕನಲ್ಲಿದೆ. ಆಚಾರ್ಯರೂಪಕರ್ತೃವಿನಲ್ಲಿಲ್ಲದಿರುವುದರಿಂದ "ಸ್ವರಿತಞಿತಃ—' ಸೂತ್ರದಿಂದ ಆತ್ಮನೇಪದಬರುವುದಿಲ್ಲ.

ಸಂಮಾನನೋತ್ಸಂಜನಾಚಾರ್ಯಕರಣ ಜ್ಞಾನಭೃತಿ ವಿಗಣನವ್ಯಯೇಷು ನಿಯಃ (ಪಾ-ಸೂ-೧-೩-೩೬) ಸೂತ್ರದಿಂದ ಆತ್ಮನೇಪದ ಹೇಳಬೇಕು. ಆಚಾರ್ಯಕರಣನಿಮಿತ್ತವಾಗಿ ಅಲ್ಲಿ ಆತ್ಮನೇಪದ ಹೇಳಿರುತ್ತಾರೆ. ಆಚಾರ್ಯಕರ್ಮವೇ ಆಚಾರ್ಯಕರಣ. ಈ ಅರ್ಥವು ಧಾತುವಾಚ್ಯವಾಗುವುದಿಲ್ಲ. ಪ್ರಯೋಗೋಪಾಧಿಗಳೆಂದು ಅಲ್ಲಿ ವಿವರಿಸಿರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾರೆ. ಪ್ರಕೃತ 'ಉಪನಯೀತ' ಎಂದು ಆತ್ಮನೇಪದ ಹೇಳಿರುವುದರಿಂದ ಆಚಾರ್ಯ ಕರ್ತೃವು ಅಲ್ಲಿ ತೋರುವುದರಿಂದ ಆಚಾರ್ಯಕಕಾಮನೇ ನಿಯೋಜ್ಯನೆಂದು ಸ್ಪಷ್ಟವಾಗುತ್ತದೆ.

'ತ್ರಯೋ:—' ಇತಿ. ಉಪನಯನದಲ್ಲಿ ಯಾರು ನಿಯೋಜ್ಯನೋ ಅವನೇ ಅಧ್ಯಾಪನದಲ್ಲಿಯೂ ನಿಯೋಜ್ಯನಾಗುತ್ತಾನೆ. ಆಗ ಉಪನಯನಾಧ್ಯಾಪನರೂಪಕ್ರಿಯಾ ದ್ವಯಮಿಲಿತವಾದ ಆಚಾರ್ಯತ್ವಪ್ರಾಪ್ತಿರೂಪವಾದ ಒಂದು ಪ್ರಯೋಜನವು ಸಿದ್ಧವಾಗುತ್ತದೆ. ಮನುವೂ ಈ ಅರ್ಥವನ್ನು ವಿಶದಪಡಿಸುತ್ತಾನೆ. 'ಉಪನೀಯ—' ಇತಿ ಯಾವ ಬ್ರಾಹ್ಮಣನು ವಿಧಿಪೂರ್ವಕವಾಗಿ ಶಿಷ್ಯನನ್ನು ತನ್ನ ಸಮೀಪಕ್ಕೆ ಒಯ್ದು ಅಂಗ, ರಹಸ್ಯಸಹಿತವಾದ ಸಕಲವೇದಶಾಖೆಗಳನ್ನು ಕಲಿಸುತ್ತಾನೋ ಅವನೇ ಆಚಾರ್ಯನಾಗುತ್ತಾನೆಂದು ಋಷಿಗಳು ಹೇಳುತ್ತಾರೆಂದರ್ಥ. ಉಪನಯನ ಪೂರ್ವಕಾಧ್ಯಾಪನದಿಂದ ಮಾತ್ರ ಅಧ್ಯಾಪಕನಲ್ಲಿ ಒಂದು ಅತಿಶಯವುಂಟಾಗುತ್ತದೆ. ಆಚಾರ್ಯಶಬ್ದಕ್ಕೆ ಇದೇ ಪ್ರವೃತ್ತಿನಿಮಿತ್ತವಾಗುತ್ತದೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪವೆಂದು ಆರುವೇದಾಂಗಗಳು. ಉಪನಿಷತ್ತಿಗೆ ರಹಸ್ಯವೆಂದು ಹೆಸರು. ಇದು ವೇದವಾದರೂ ಇದಕ್ಕೆ ಅಧಿಕಪ್ರಾಶಸ್ತ್ಯ ಹೇಳಲು ಬ್ರಾಹ್ಮಣವಸಿಷ್ಠನ್ಯಾಯದಿಂದ ಪುನಃ ಹೇಳಿದೆ. ಕೆಲವರು ವೇದಾಂತವೇ ಉಪನಿಷತ್ತು ಎಂದು ಪ್ರಸಿದ್ಧವಾದುದರಿಂದ ವೇದದ ಅಂತ ಅಂದರೆ ಸಮೀಪದಲ್ಲಿರುವುದು ಎಂದರ್ಥವಾಗುವುದರಿಂದ ಇದು ಅವೇದವಾಗುತ್ತದೆ ಎಂಬ ಭ್ರಾಂತಿ ನಿರಾಸಕ್ಕೆ ಪುನಃ ಹೇಳಿದೆಯೆಂದು ವ್ಯಾಖ್ಯಾನಮಾಡಿರುತ್ತಾರೆ (ಮೇಧಾತಿಥಿ ಇತ್ಯಾದಯಃ)

ತತಶ್ಚಾಚಾರ್ಯಕರ್ತೃಕಾಧ್ಯಾಪನಂ ಮಾಣವಕಕರ್ತೃಕೇಣಾಧ್ಯಯನೇನ ವಿನಾ ನ ಸಿಧ್ಯತೀತ್ಯಧ್ಯಾಪನವಿಧಿಪ್ರಯುಕ್ತ್ಯೈವಾಧ್ಯಯನಾನುಷ್ಠಾನಂ ಸೇತ್ಸ್ಯತಿ । ಪ್ರಯೋಜ್ಯವ್ಯಾಪಾರಮಂತರೇಣ ಪ್ರಯೋಜಕವ್ಯಾಪಾರಾನಿರ್ವಾಹಾತ್ । ತರ್ಹ್ಯಧ್ಯೇತವ್ಯಃ (ತೈ-ಆ-೨।೧೫) ಇತ್ಯಸ್ಯ ವಿಧಿತ್ವಂ ನ ಸಿಧ್ಯತೀತಿ ಚೇತ್ನಾಸ್ಮಾಕಮಿಷ್ಟಹಾನಿಃ । ಪೃಥಗಧ್ಯಯನವಿಧೇರಭ್ಯುಪಗಮೇ ಪ್ರಯೋಜನಾಭಾವಾತ್ । ವಿಧಿವಾಕ್ಯಸ್ಯ ನಿತ್ಯಾನುವಾದತ್ವೇನಾ ಪ್ಯುಪಪತ್ತೇಃ । ತಸ್ಮಾದಧ್ಯಯನವಿಧಿಮುಪಜೀವ್ಯ ಪೂರ್ವಮುಪನ್ಯಸ್ತೌ ಪೂರ್ವೋತ್ತರಪಕ್ಷೌ ಪ್ರಕಾರಾಂತರೇಣ ಪ್ರದರ್ಶನೀಯೌ ॥

ಪ್ರಯೋಜ್ಯವ್ಯಾಪಾರವಿದ್ದರೇ ಪ್ರಯೋಜಕವ್ಯಾಪಾರವು ಸಂಗತವಾಗುತ್ತದೆ. ಪ್ರಕೃತ ಅಧ್ಯಯನವಿಧಿ ಇಲ್ಲದೆ ಅಧ್ಯಾಪನವಿಧಿಯು ಕೂಡುವುದಿಲ್ಲವಾದುದರಿಂದ ಅಧ್ಯಾಪನವಿಧಿಯಿಂದಲೇ ಅಧ್ಯಯನವಿಧಿ ಸಿದ್ಧಿಸುತ್ತದೆ. ಹಾಗಾದರೆ 'ಅಧ್ಯೇತವ್ಯಃ' ಎಂಬುದಕ್ಕೆ ಅಪೂರ್ವತ್ವವಿಲ್ಲದಿರುವುದರಿಂದ ವಿಧಿತ್ವವಿಲ್ಲದೇ ಹೋಗಬೇಕಾಗುತ್ತದೆ ಎಂದರೆ ಇಷ್ಟಾಪತ್ತಿಯೆಂದು ಸಮಾಧಾನ ಹೇಳುತ್ತಾನೆ. ಅಧ್ಯಾಪನವಿಧಿಲಬ್ಧವಾದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಯನಕ್ಕೆ ಅಪ್ರಾಪ್ತತ್ವ ಬಾಧಿತವಾದುದರಿಂದ ವಿಧಿತ್ವಸಂಭವಿಸುವುದಿಲ್ಲ. 'ವಿಧಿ ವಾಕ್ಯಸ್ಯ'—ಇತಿ. ಕೆಲವುಕಡೆ ವಿಧಾಯಕನೆಂದು ತೋರುವ ವಾಕ್ಯಗಳು ನಿತ್ಯಪ್ರಾಪ್ತ ವಾದವುಗಳ ಅನುವಾದಕಗಳಾಗಿಯೂ ಇರುತ್ತವೆ. ಪ್ರಕೃತ ಅಧ್ಯಯನ ವಿಧಾಯಕ ವಾಕ್ಯವೂ ಅನುವಾದಕವಾಗುವುದರಿಂದ ದೋಷವಿಲ್ಲ. 'ತಸ್ಮಾತ್—'ಇತಿ. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ವಾಕ್ಯವು ಅನುವಾದಕವಾದುದರಿಂದ, ವಿಧಿತ್ವವೇ ಅದಕ್ಕೆ ಸಂಭವಿಸದಿರುವಾಗ ಅರ್ಥಾವಬೋಧಪರ್ಯಂತ ಅದಕ್ಕೆ ತಾತ್ಪರ್ಯಹೇಳುವುದು ಅಶಕ್ಯ ವಾದುದರಿಂದ, ಅದನ್ನು ಉಪಜೀವಿಸಿ ಹಿಂದೆ ಹೇಳಿದಪೂರ್ವೋತ್ತರಪಕ್ಷಗಳು ಸಮಂಜಸ ವಾಗುವುದಿಲ್ಲ. ಆದುದರಿಂದ ಬೇರೆರೀತಿಯಿಂದಲೇ ಉಪಪಾದನೆ ಮಾಡಬೇಕೆಂದು ತಾತ್ಪರ್ಯ.

ವಿಚಾರಶಾಸ್ತ್ರಮವೈಧತ್ವೇನಾನಾರಬ್ಧವ್ಯಮಿತಿ ಪೂರ್ವಪಕ್ಷಃ। ವೈಧತ್ವೇನಾರಬ್ಧವ್ಯಮಿತಿ ರಾದ್ಧಾಂತಃ। ತತ್ರ ವೈಧತ್ವಂ ವದತಾ ವದಿತವ್ಯಂ ಕಿಮಧ್ಯಾಪನವಿಧಿರ್ಮಾಣವಕಸ್ಯಾರ್ಥಾವಬೋಧಮಪಿ ಪ್ರಯುಂಕ್ತೇ ಕಿಂ ವಾ ಪಾಠಮಾತ್ರಮ್। ನಾದ್ಯಃ। ವಿನಾಪ್ಯರ್ಥಾವಬೋಧೇನಾಧ್ಯಾಪನ ಸಿದ್ಧೇಃ। ನ ದ್ವಿತೀಯಃ। ಪಾಠಮಾತ್ರೇ ವಿಚಾರಸ್ಯ ವಿಷಯಪ್ರಯೋಜನಯೋರಸಂಭವಾತ್। ಆಪಾತತಃ ಪ್ರತಿಭಾತಃ ಸಂದಿಗ್ಧೋಽರ್ಥೋ ವಿಚಾರಶಾಸ್ತ್ರಸ್ಯ ವಿಷಯೋ ಭವತಿ। ತಥಾ ಸತಿ ಯತ್ರಾರ್ಥಾವಗತಿರೇವ ನಾಸ್ತಿ ತತ್ರ ಸಂದೇಹಸ್ಯ ಕಾ ಕಥಾ। ವಿಚಾರ ಫಲಸ್ಯ ನಿರ್ಣಯಸ್ಯ ಪ್ರತ್ಯಾಶಾ ದೂರತ ಏವ। ತಥಾ ಚ ಯದಸಂದಿಗ್ಧಮಪ್ರಯೋಜನಂ ನ ಚ ತತ್ಪ್ರೇಕ್ಷಾವತ್ಪ್ರತಿಪಿತ್ಸಾಗೋಚರಃ। ಯಥಾ ಸಮನಸ್ಕೇಂದ್ರಿಯಸಂನಿಕೃಷ್ಟಃ ಸ್ಪಷ್ಟಾಲೋಕಮಧ್ಯಮಧ್ಯಾಸೀನೋ ಘಟ ಇತಿ ನ್ಯಾಯೇನ ವಿಷಯಪ್ರಯೋಜನಯೋ ರಸಂಭವೇನ ವಿಚಾರಶಾಸ್ತ್ರಮನಾರಭ್ಯಮಿತಿ ಪೂರ್ವಃ ಪಕ್ಷಃ

ವಿಧಿತ್ವಸಂಭವಿಸದಿರುವುದರಿಂದ ವಿಚಾರಶಾಸ್ತ್ರವು ಅನಾರಂಭಣೀಯವೆಂದು ಪೂರ್ವ ಪಕ್ಷ. ವಿಧಿತ್ವಸಂಭವಿಸುವುದರಿಂದ ಆರಂಭಣೀಯವೆಂದು ಸಿದ್ಧಾಂತ. ಪೂರ್ವಪಕ್ಷ ವನ್ನು ವಿವರಿಸುತ್ತಾನೆ. 'ತತ್ರ'—ಇತಿ. ವಿಧಿತ್ವಹೇಳುವವನನ್ನು ಕೇಳಬೇಕು. ಅಧ್ಯಾಪನವಿಧಿಯು ಮಾಣವಕನಿಗೆ ಅರ್ಥಜ್ಞಾನವನ್ನೂ ತಿಳಿಸಿಕೊಡುತ್ತದೆಯೋ ? ಅಥವಾ ಕೇವಲ ಪಾಠ ಮಾತ್ರವೇ ? ಅಪಿಪದದಿಂದ ಅಧ್ಯಾಪನವಿಧಿಯಿಂದ ಆಕ್ಷಿಪ್ತವಾದ ಅಧ್ಯಯನವೂ ಅರ್ಥಾವಬೋಧ ಸಹಿತವೇ ಅಥವಾ ಕೇವಲವೇ ? ಎಂದು ಸಮುಚ್ಚಿತ ವಾಗುತ್ತದೆ. ಮೊದಲನೇ ಪಕ್ಷ ಸರಿಯಲ್ಲ. ಅರ್ಥಾವಬೋಧವಿಲ್ಲದಿದ್ದರೂ ಅಧ್ಯಾ ಪನವು ಸಿದ್ಧವಾಗುತ್ತದೆ. ಅಧ್ಯಯನವಿಲ್ಲದೇ ಅಧ್ಯಾಪನ ಸಂಗತವಾಗುವುದಿಲ್ಲವಾದುದ ರಿಂದ ಅಗತಿಕವಾಗಿ ಅಧ್ಯಯನ ಮಾತ್ರ ಆಕ್ಷಿಪ್ತವಾಗುತ್ತದೆ. ಯಾವುದಿಲ್ಲದೇ ಅನುಪ ಪನ್ನವಾಗುವುದೋ ಅದನ್ನು ಮಾತ್ರ ಆಕ್ಷೇಪಿಸಬೇಕು. ಅದಕ್ಕಿಂತಲೂ ಅಧಿಕವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಕ್ಷೇಪಿಸುವ ಆವಶ್ಯಕತೆ ಇಲ್ಲ. ಆದುದರಿಂದ ಅರ್ಥಾವ ಬೋಧಕಲ್ಪನೆಗೆ ಅವಕಾಶವಿಲ್ಲ. ಪಾಠಮಾತ್ರವೆಂದು ಎರಡನೆಯಮತವನ್ನಂಗೀಕರಿಸಿದರಂತೂ ವಿಚಾರಶಾಸ್ತ್ರಕ್ಕೆ ವಿಷಯ ಪ್ರಯೋಜನಗಳೇ ಸಂಭವಿಸುವುದಿಲ್ಲ. ಆಪಾತತಃ—ಎಂಬುದರಿಂದ ಅಸಂಭವವನ್ನೇ ಉಪಪಾದನಮಾಡುತ್ತಾನೆ. ಯಥಾವತ್ತಾಗಿ ನೋಡಿದಾಗ ಸಂದೇಹವುಂಟಾದರೆ ಅಂತಹ ಸಂದಿಗ್ಧಾರ್ಥವು ವಿಚಾರಣೀಯವಾದುದರಿಂದ ವಿಚಾರಶಾಸ್ತ್ರಕ್ಕೆ ಅದು ವಿಷಯವಾಗುತ್ತದೆ. ಪ್ರಕೃತಪಾಠಮಾತ್ರದಿಂದ ಅಧ್ಯಾಪನವಿಧಿಯು ಸಂಗತವಾಗುವುದರಿಂದ ಅರ್ಥ ವಿಚಾರಕ್ಕೆ ಪ್ರಸಕ್ತಿಯೇ ಇಲ್ಲದಿರುವಾಗ ಸಂದಿಗ್ಧಾರ್ಥಕ್ಕೆ ಅವಕಾಶವೆಲ್ಲಿ ? ಅರ್ಥಸಂದೇಹ ಬಂದಿದ್ದರೆ ಅಲ್ಲಿ ವಿಚಾರಶಾಸ್ತ್ರ ಪ್ರಸಕ್ತವಾಗಿ ವಿಚಾರಫಲವಾಗಿ ನಿರ್ಣಯವನ್ನು ಹೇಳಬಹುದಾಗಿತ್ತು. ಆದರೆ ವಿಷಯವೇ ಇಲ್ಲದಿರುವಾಗ ಪ್ರಯೋಜನಕ್ಕೆ ಸಂಬಂಧವೇ ಇರುವುದಿಲ್ಲ. ದೂರತಏವ ಪ್ರತ್ಯಾಶಾ ಅಂದರೆ ಅದರ ಪ್ರಸಕ್ತಿಯೇ ಇಲ್ಲವೆಂದು ತಾತ್ಪರ್ಯ. 'ತಥಾಚ'— ಎಂಬುದರಿಂದ ಪೂರ್ವಪಕ್ಷಿಯ ತಾತ್ಪರ್ಯವನ್ನು ತೋರಿಸುತ್ತಾನೆ. ಪ್ರಕರ್ಷಣೇಕ್ಷಣಂ—ಪ್ರೇಕ್ಷಾ. (ವಸ್ತು ಸಮ್ಯಙ್ನಿರೀಕ್ಷಣಂ) ಇಂತಹ ಪ್ರೇಕ್ಷಾದಿಂದ ಕೂಡಿರುವವರು ಪ್ರೇಕ್ಷಾವಂತರು. ಪ್ರತಿಪಾದನೇಚ್ಛೆಗೆ ಪ್ರತಿಪಿತ್ಸಾ ಎಂದು ಹೆಸರು. ಅಸಂದಿಗ್ಧವೂ, ಅಪ್ರಯೋಜನವೂ ಇದ್ದಲ್ಲಿ ವಿಚಾರಶೀಲರು ವಿವರಿಸಲು ಉದ್ಯುಕ್ತರಾಗುವುದಿಲ್ಲ. ಅಂದರೆ ಪ್ರಯೋಜನವಿದ್ದರೂ ಯಾವವಿಷಯದಲ್ಲಿ ಸಂದೇಹವಿಲ್ಲವೋ ನಿರ್ಣಯವೇ ಇದೆಯೋ ಅಲ್ಲಿಯೂ, ಸಂದೇಹವಿದ್ದರೂ ಎಲ್ಲಿ ಅಲ್ಪಪ್ರಯೋಜನ ಇಲ್ಲವೋ ಅಲ್ಲಿಯೂ ಪ್ರತಿಪಾದನಾಪೇಕ್ಷೆ ಇರುವುದಿಲ್ಲ ಇವೆರಡರಲ್ಲಿ ಒಂದಿಲ್ಲದಿದ್ದರೂ ಪಂಡಿತರು ಪ್ರತಿಪಾದನೆಮಾಡಲು ಇಚ್ಛಿಸುವುದಿಲ್ಲ. ಪ್ರಕೃತ ಎರಡೂ ಇಲ್ಲದಿರುವುದರಿಂದ ವಿಚಾರಶಾಸ್ತ್ರಕ್ಕೆ ಪ್ರವೃತ್ತಿಯೇ ಇಲ್ಲವೆಂದು ತಾತ್ಪರ್ಯ. ಉದಾಹರಣೆಯಿಂದ ಸ್ಪಷ್ಟಪಡಿಸುತ್ತಾನೆ. 'ಯಥಾ'—ಇತಿ. ಮನಸ್ಸಂಯೋಗದಿಂದ ಕೂಡಿದ ಇಂದ್ರಿಯದೊಡನೆ ಸಂಬದ್ಧವಾದ ಸ್ಪಷ್ಟಾಲೋಕ (ಚೆನ್ನಾಗಿರುವ ಬೆಳಕು) ಮಧ್ಯದಲ್ಲಿರುವ ಘಟವು ಸಮ್ಯಕ್ ಜ್ಞಾತವಾದುದರಿಂದ ಅದನ್ನು ಜ್ಞಾಪಿಸಲು ಯಾರೂ. ಯತ್ನಿಸುವುದಿಲ್ಲ. 'ಅಧಿಶೀಙ್—ಸೂತ್ರದಿಂದ ಅಧ್ಯಾಸೀನಪದಯೋಗದಿಂದ 'ಸ್ಪಷ್ಟಾ....ಮಧ್ಯಂ' ಎಂದು ದ್ವಿತೀಯಾ ಬಂದಿದೆ. (ಆಧಾರಕ್ಕೆ ಕರ್ಮಸಂಜ್ಞಾ). ಹೀಗೆ ವಿಷಯಪ್ರಯೋಜನಗಳಿಲ್ಲದಿರುವುದರಿಂದ ವಿಚಾರಶಾಸ್ತ್ರವು ಅನಾರಂಭಣೀಯವೆಂದು ಪೂರ್ವಪಕ್ಷ.

ಅಧ್ಯಾಪನವಿಧಿನಾರ್ಥಾವಬೋಧೋ ಮಾ ಪ್ರಯೋಜಿ । ತಥಾಪಿ ಸಾಂಗವೇದಾಧ್ಯಾಯಿನೋ ಗೃಹೀತಪದಪದಾರ್ಥಸಂಗತಿಕಸ್ಯ ಪುರುಷಸ್ಯ ಪೌರುಷೇಯೇಷ್ವಿವ ಪ್ರಬಂಧೇಷು ಆಮ್ನಾಯೇಷ್ವರ್ಥಾವಬೋಧಃ ಪ್ರಾಪ್ನೋತ್ಯೇವ । ನನು ಯಥಾ ವಿಷಂ ಭುಂಕ್ಷ್ವೇತ್ಯತ್ರ ಪ್ರತೀಯಮಾನೋಽಪ್ಯರ್ಥೋ ನ ವಿವಕ್ಷ್ಯತೇಮಾಸ್ಯ ಗೃಹೇ ಭುಂಕ್ಥಾ ಇತಿ ಭೋಜನಪ್ರತಿಷೇಧಸ್ಯ ಮಾತೃವಾಕ್ಯತಾತ್ಪರ್ಯ ವಿಷಯತ್ವಾತ್ । ತಥಾಮ್ನಾಯಾರ್ಥಸ್ಯಾವಿವಕ್ಷಾಯಾಂ ವಿಷಯಾದ್ಯಭಾವದೋಷಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಚೀನಃ ಪ್ರಾದುಃಷ್ಯಾದಿತಿ ಚೇತ್—ನ್ನೈವಂವೋಚಃ। ದೃಷ್ಟಾಂತದಾರ್ಷ್ಟಾಂತಿಕಯೋರ್ವೈಷಮ್ಯಸಂಭವಾತ್ । ವಿಷಭೋಜನವಾಕ್ಯಸ್ಯಾಪ್ತಪ್ರಣೀತತ್ವೇನ ಮುಖ್ಯಾರ್ಥಪರಿಗ್ರಹೇ ಬಾಧಃ ಸ್ಯಾದಿತಿ ವಿವಕ್ಷಾ ನಾಶ್ರೀಯತೇ । ಅಪೌರುಷೇಯೇತು ವೇದೇ ಪ್ರತೀಯಮಾನೋರ್ಥಃ ಕುತೋ ನ ವಿವಕ್ಷ್ಯತೇ । ವಿವಕ್ಷಿತೇ ಚ ವೇದಾರ್ಥೇ ಯತ್ರ ಯತ್ರ ಪುರುಷಸ್ಯ ಸಂದೇಹಃ ಸ ಸರ್ವೋಪಿ ವಿಚಾರಶಾಸ್ತ್ರಸ್ಯ ವಿಷಯೋ ಭವಿಷ್ಯತಿ। ತನ್ನಿರ್ಣಯಶ್ಚ ಪ್ರಯೋಜನಮ್ । ತಸ್ಮಾದಧ್ಯಾಪನ ವಿಧಿಪ್ರಯುಕ್ತೇ ನಾಧ್ಯಯನೇನಾವಗಮ್ಯ ಮಾನಸ್ಯಾರ್ಥಸ್ಯ ವಿಚಾರಾರ್ಹತ್ವಾದ್ವಿಚಾರಶಾಸ್ತ್ರಸ್ಯ ವೈಧತ್ವೇನ ವಿಚಾರಶಾಸ್ತ್ರಮಾರಂಭಣೀಯಮಿತಿ ರಾದ್ಧಾಂತಸಂಗ್ರಹಃ ॥

ಅಧ್ಯಾಪನವಿಧಿಯು ಅರ್ಥಜ್ಞಾನಕ್ಕೆ ಪ್ರಯೋಜಕವಾಗುವುದು ಬೇಡ. ವೇದಾಂಗಗಳೊಡನೆ ವೇದಾಧ್ಯಯನವು 'ಅತ ಊರ್ಧ್ವಂ ತು ಛಂದಾಂಸಿ ಶುಕ್ಲೇಷು ನಿಯತಃ ಪಠೇತ್ । ವೇದಾಂಗಾನಿ ಚ ಸರ್ವಾಣಿ ಕೃಷ್ಣಪಕ್ಷೇಷು ಸಂಪಠೇತ್" ಎಂಬ ಮನುವಚನದಿಂದ ನಿರ್ಣೀತವಾಗಿದೆ. ಪದಪದಾರ್ಥಯೋಃ ಸಂಗತಿಃ—ಸಂಬಂಧಃ ಯೇನ ಗೃಹೀತಃ । ಕಾವ್ಯಾದಿಗಳಲ್ಲಿ ಹೇಗೆ ಪದಪದಾರ್ಥಸಂಬಂಧವು ಅಂದರೆ ಶಕ್ತಿಜ್ಞಾನವು ಗೃಹೀತವಾದಾಗ ಅರ್ಥಜ್ಞಾನವು ದೃಷ್ಟವಾಗಿದೆಯೋ ಅದರಂತೆ ಸಾಂಗವೇದಾಧ್ಯಯನ ಮಾಡಿದವನಿಗೂ ಶಕ್ತಿಜ್ಞಾನದಿಂದ ಪದಾರ್ಥಜ್ಞಾನವುಂಟಾಗುತ್ತದೆ. ಶಬ್ದಕ್ಕೆ ಬೋಧಕತ್ವಶಕ್ತಿಸ್ವಾಭಾವ್ಯದಿಂದ ವಿಧಿ ಇಲ್ಲದೆಯೇ ಅರ್ಥಾವಬೋಧಪ್ರಾಪ್ತಿ ಆಗುತ್ತದೆಂದರ್ಥ. ನನು ಎಂದು ಆಕ್ಷೇಪಿಸುತ್ತಾನೆ. ಯಥಾಶ್ರುವಾದ ಅರ್ಥದಿಂದ ಪ್ರಯೋಜನವಿಲ್ಲ. ವಿಷಂ-ಇತಿ ಅಜ್ಞಾನದಿಂದ ಶತ್ರುಗೃಹಕ್ಕೆ ತಿನ್ನಲು ಹೋಗುವ ಪುತ್ರನನ್ನು ಕುರಿತು ತಾಯಿ ಹೇಳುವ ಮಾತು. ಇಲ್ಲಿ ವಿಷವನ್ನು ತಿನ್ನು ಎಂದು ತಾಯಿ ಮಗನಿಗೆ ಎಂದೂ ಹೇಳುವುದಿಲ್ಲ. ಆದುದರಿಂದ ವಿಷಭೋಜನವಿಧಿರೂಪವಾದ ವಾಚ್ಯಾರ್ಥಕ್ಕೆ ಇಲ್ಲಿ ವಿವಕ್ಷಾ ಇರುವುದಿಲ್ಲ. 'ಇವನ ಮನೆಯಲ್ಲಿ ಊಟಮಾಡಬೇಡ' ಎಂದು ಇದರಿಂದ ತೋರುವ ಅರ್ಥವೇ ಇಲ್ಲಿ ವಿವಕ್ಷಿತವಾಗಿದೆ. ಲೋಕ ಸಾಮ್ಯಹೇಳುವುದಾದರೆ ವೇದಾರ್ಥಕ್ಕೂ ವಿವಕ್ಷಾ ಇಲ್ಲದಿರುವುದರಿಂದ ಗಮ್ಯಮಾನಾರ್ಥ ಕಲ್ಪಿಸಬೇಕಾಗುತ್ತದೆ. ವಾಚ್ಯಾರ್ಥಕ್ಕೆ ವಿವಕ್ಷಾ ಇಲ್ಲವೆಂದರೆ ಆಗ ವಿಷಯವಿಲ್ಲದಿರುವುದರಿಂದ ವಿಚಾರಶಾಸ್ತ್ರಕ್ಕೆ ಪ್ರವೃತ್ತಿ ಎಲ್ಲಿ ? ಎಂದರೆ 'ನೈವಂ' ಎಂದು ಸಮಾಧಾನ ಹೇಳುತ್ತಾನೆ. ಲೋಕಸಾಮ್ಯ ಇಲ್ಲಿ ಸಮಂಜಸವಾಗುವುದಿಲ್ಲ. ಪೂರ್ವಪಕ್ಷಿಯ ದೃಷ್ಟಾಂತ ವಿಷಮವಾಗುತ್ತದೆ. ವಿಷಭೋಜನವಾಕ್ಯವು ಆಪ್ತೋಚ್ಚಾರಿತವಾದುದರಿಂದ ಮುಖ್ಯಾರ್ಥವನ್ನು ಸ್ವೀಕರಿಸಿದರೆ ಬಾಧ ಬರುವುದರಿಂದ ಅದಕ್ಕೆ ವಿವಕ್ಷಾ ಇಲ್ಲವೆನ್ನಬೇಕು. ತಾಯಿಯೇ ಇಲ್ಲಿ ಆಪ್ತ. ಅನುಭವದಿಂದ ವಸ್ತುತತ್ವವನ್ನು ಸಂಪೂರ್ಣವಾಗಿ ನಿಶ್ಚಯದಿಂದ ತಿಳಿದವನೂ, ರಾಗಾದಿಗಳಿಂದಲೂ ಅನ್ಯಥಾ ಹೇಳದಿರುವವನೂ. ಆಪ್ತನೆಂದು ಲಕ್ಷಣವನ್ನು ಚರಕಾಚಾರ್ಯರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಿರುತ್ತಾರೆ. ಪುರುಷನಿರ್ಮಿತವಲ್ಲದ ವೇದದಲ್ಲಿ ಇಂತಹ ಬಾಧೆಗೆ ಅವಕಾಶವಿಲ್ಲದಿರುವುದರಿಂದ ವಾಚ್ಯಾರ್ಥಕ್ಕೆ ವಿವಕ್ಷೆ ಇರುತ್ತದೆ. ಆಗ ಎಲ್ಲೆಲ್ಲಿ ಸಂದೇಹ ಬರುತ್ತದೆಯೋ ಅಲ್ಲಲ್ಲಿ ವಿಚಾರಶಾಸ್ತ್ರಕ್ಕೆ ವಿಷಯ ತೋರಿಸಿದಂತಾಗುತ್ತದೆ. ವಿಚಾರಶಾಸ್ತ್ರವು ಅಲ್ಲಿ ಪ್ರವರ್ತಿಸಿ ನಿರ್ಣಯವನ್ನು ಮಾಡುತ್ತದೆ. ಇದೇ ಪ್ರಯೋಜನ. ಹೀಗೆ ಅಧ್ಯಾಪನವಿಧಿಯಿಂದ ಅಧ್ಯಯನವು ಬೋಧಿತವಾಗುವುದರಿಂದ ಅದರಿಂದ ಅರ್ಥಾವಬೋಧವು ಸಿದ್ಧವಾಗುವುದರಿಂದ, ಅರ್ಥವು ವಿಚಾರಾರ್ಹವಾದುವರಿಂದ ವಿಚಾರಶಾಸ್ತ್ರಕ್ಕೆ ವೈಧತ್ವಸಿದ್ಧವಾಗುತ್ತದೆ. ಇದರಿಂದ ವಿಚಾರಶಾಸ್ತ್ರವು ಆರಂಭಣೀಯವೆಂದು ಸಿದ್ಧವಾಗುತ್ತದೆ. ಗುರುಮತದಲ್ಲಿ 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬುದು ನಿತ್ಯಾನುವಾದ. ಸಾಂಗವೇದಾಧ್ಯಯನವಾದೊಡನೆಯೇ ಸ್ವಭಾವತಃ ತೋರಿದ ಅರ್ಥನಿರ್ಣಯಕ್ಕೆ ವಿಚಾರಾಪೇಕ್ಷೆ ಬರುತ್ತದೆ. ಹೀಗೆ ವಿಚಾರಶಾಸ್ತ್ರಕ್ಕೆ ವೈಧತ್ವವನ್ನು ಕಲ್ಪಿಸುತ್ತಾರೆ.

ಸ್ಯಾದೇತತ್ । ವೇದಸ್ಯ ಕಥಮಪೌರುಷೇಯತ್ವ ಮಭಿಧೀಯತೇ । ತತ್ಪ್ರತಿಪಾದಕ ಪ್ರಮಾಣಾಭಾವಾತ್ । ಅಥ ಮನ್ಯೇಥಾಃ- ಅಪೌರುಷೇಯಾ ವೇದಾಃ ಸಂಪ್ರದಾಯಾವಿಚ್ಛೇದೇ ಸತ್ಯಸ್ಮರ್ಯಮಾಣಕರ್ತೃಕತ್ವಾತ್, ಆತ್ಮವತ್ । ಇತಿ । ತದೇತನ್ಮಂದಮ್ । ವಿಶೇಷಣಾಸಿದ್ಧೇಃ । ಪೌರುಷೇಯವೇದವಾದಿಭಿಃ ಪ್ರಳಯೇ ಸಂಪ್ರದಾಯವಿಚ್ಛೇದಸ್ಯ ಕಕ್ಷೀಕರಣಾತ್ । ಕಿಂ ಚ ಕಿಮಿದಮಸ್ಮರ್ಯಮಾಣ ಕರ್ತೃಕತ್ವಂ ನಾಮ ? ಅಪ್ರಮೀಯಮಾಣ ಕರ್ತೃಕತ್ವಂ, ಅಸ್ಮರಣ ಗೋಚರ ಕರ್ತೃಕತ್ವಂ ವಾ ? । ನ ಪ್ರಥಮಃ ಕಲ್ಪಃ । ಪರಮೇಶ್ವರಸ್ಯ ಕರ್ತುಃ ಪ್ರಮಿತೇರಭ್ಯುಪಗಮಾತ್ । ನ ದ್ವಿತೀಯಃ । ವಿಕಲ್ಪಾಸಹತ್ವಾತ್ । ತಥಾಹಿ । ಕಿಂ ಏಕೇನಾಸ್ಮರಣಮಭಿಪ್ರೇಯತೇ ಸರ್ವೈರ್ವಾ । ನಾದ್ಯಃ । ಯೋಧರ್ಮಶೀಲೋ ಜಿತಮಾನರೋಷ ಇತ್ಯಾದಿಷು ಮುಕ್ತಕೋಕ್ತಿಷು ವ್ಯಭಿಚಾರಾತ್ । ನ ದ್ವಿತೀಯಃ । ಸರ್ವಾಸ್ಮರಣಸ್ಯಾಸರ್ವಜ್ಞದುರ್ಜ್ಞಾನತ್ವಾತ್ । ಪೌರುಷೇಯತ್ವೇ ಸಂಭವಾಚ್ಚ । ವೇದವಾಕ್ಯಾನಿ ಪೌರುಷೇಯಾಣಿ ವಾಕ್ಯತ್ವಾತ್ ಕಾಲಿದಾಸಾದಿವಾಕ್ಯವತ್ । ವೇದವಾಕ್ಯಾನ್ಯಾಪ್ತಪ್ರಣೀತಾನಿ ಪ್ರಮಾಣತ್ವೇ ಸತಿ ವಾಕ್ಯತ್ವಾತ್ ಮನ್ವಾದಿವಾಕ್ಯವತ್-ಇತಿ ॥

ಶಂಕಾಗ್ರಂಥಕ್ಕೆ ಆರಂಭ ಸೂಚಕವಾಗಿ ಪೂರ್ವ ಪಕ್ಷಿಯು ಹೇಳುವ ಮಾತು. "ಸ್ಯಾದೇತತ್—" ಇತಿ. ಮುಂದೆ ಹೇಳುವ ನನ್ನ ವಾದವು ಸ್ಥಿರವಾಗದಿದ್ದರೆ ನೀನು ಹೇಳಿದುದು ನಿಶ್ಚಿತವಾಗಬಹುದು ಎಂದರ್ಥ. ಇದು ವೇದ ಪೌರುಷೇಯವೆಂದು ಅಂಗೀಕರಿಸಿರುವ ನೈಯಾಯಿಕರ ಪೂರ್ವಪಕ್ಷ. ಪೌರುಷೇಯತ್ವಂ ನಾಮ—ಪುರುಷ ವಿರಚಿತಾನುಪೂರ್ವೀವಿಶೇಷವಿಶಿಷ್ಟತ್ವಮ್. ಪುರುಷನೆಂದರೆ ಇಲ್ಲಿ ಈಶ್ವರ. ಸಿದ್ಧಾಂತಿಯ ಅಪೌರುಷೇಯತ್ವ ಸಾಧಕವಾದ ಅನುಮಾನವನ್ನು ಅನುವಾದ ಮಾಡುತ್ತಾನೆ. 'ಅಪೌರುಷೇಯಾಃ—' ಇತಿ. ವೇದಾಃ—ಅಪೌರುಷೇಯಾಃ— ಸಂಪ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

....ಕತ್ವಾತ್ । ಆತ್ಮವತ್ ದೃಷ್ಟಾಂತ. ಗ್ರಂಥದ ಆದಿ ಅಥವಾ ಅಂತ ಅಥವಾ ಮಧ್ಯದಲ್ಲಿ ಗ್ರಂಥನಾಡಿದವನು ತನ್ನ ಹೆಸರನ್ನು ಸೂಚಿಸಿದ್ದರೆ ಆಗ ಅದು ಪೌರುಷೇಯ ವೆಂದು ವಿಚಾರವಿಲ್ಲದೆ ಒಪ್ಪಿಕೊಳ್ಳಬಹುದು. ಕಾವ್ಯಾದಿಗಳಲ್ಲಿ ಹಾಗೆ ಸೂಚಿತವಾದುದ ರಿಂದ ಇಂತಹ ಕವಿಕೃತವೆಂದು ನಾವು ಹೇಳುತ್ತೇವೆ. ಗ್ರಂಥ ಕರ್ತೃವನ್ನಾರಂಭಿಸಿ ಸಂಪ್ರದಾಯ ವಿಚ್ಛೇದವಿಲ್ಲದೆ ಗುರುಪರಂಪರೆಯಿಂದ ಕರ್ತೃವು ಸ್ಮರಿಸಲ್ಪಟ್ಟರೆ ಆಗ ವಿವಾದಕ್ಕೆ ಆಸ್ಪದವಿಲ್ಲ. ವ್ಯಾಕರಣಯೋಗ ವೇದಾಂತಾದಿ ಸೂತ್ರಗಳಲ್ಲಿ ಪಾಣಿನ್ಯಾದಿ ಋಷಿಗಳು ಸ್ಮರಿಸಲ್ಪಡುವುದು ಲೋಕಪ್ರಸಿದ್ಧವಾಗಿದೆ. ಸಂಪ್ರದಾಯ ವಿಚ್ಛೇದ ವುಂಟಾದಾಗ ಕರ್ತೃಸ್ಮರಣೆ ಇಲ್ಲವಾದರೆ ಸಂದೇಹವುಂಟಾಗುತ್ತದೆ. ಆದರೆ ಸಂಪ್ರದಾಯ ವಿಚ್ಛೇದವಿಲ್ಲದೆ ಗುರುಪರಂಪರೆಯಿಂದ ಕರ್ತೃಸ್ಮರಣೆ ಇಲ್ಲದೇ ಇದ್ದರೆ ಆಗ ಕರ್ತೃಸ್ಮರಣೆ ಇಲ್ಲವೆಂಬುದರಲ್ಲಿ ಕರ್ತ್ರಭಾವವೇ ಕಾರಣವಲ್ಲದೆ ಬೇರೆ ಯಾವ ಕಾರಣವೂ ಇರುವುದಿಲ್ಲ. ಇದರಿಂದ ವೇದಕ್ಕೆ ಅಪೌರುಷೇಯತ್ವ ಸಿದ್ಧವಾಗುತ್ತದೆಂದು ಸಿದ್ಧಾಂತಿಗಳ ಅಭಿಪ್ರಾಯ. ಇಲ್ಲಿ ಹೇತುವು ಸ್ವರೂಪಾಸಿದ್ಧವಾಗುತ್ತದೆಂದು ಪೂರ್ವಪಕ್ಷಿಯು ಹೇಳುತ್ತಾನೆ.

'ವಿಶೇಷಣಾಸಿದ್ಧೇಃ—' ಇತಿ. 'ಸಂಪ್ರದಾಯಾವಿಚ್ಛೇದೆ ಸತಿ' ಎಂದು ಹೇತುವಿ ನಲ್ಲಿ ಹೇಳಿರುವ ವಿಶೇಷಣವು ಸಂಗತವಾಗುವುದಿಲ್ಲ. ವೇದರೂಪ ಪಕ್ಷದಲ್ಲಿ ಸಂಪ್ರದಾಯ ವಿಚ್ಛೇದ ವಿಲ್ಲವೆನ್ನುವುದು ಹೇಗೆ? ಪ್ರಳಯ ಕಾಲದಲ್ಲಿ ವಿಚ್ಛೇದವಾಗಿಯೇ ಆಗುತ್ತದೆ. ಕಕ್ಷೀಕರಣವೆಂದರೆ ಅಂಗೀಕಾರ. ಅಸ್ಮರ್ಯಮಾಣ ಕರ್ತೃಕತ್ವಂ' ಎಂದು ವಿಶೇಷ್ಯ. ಕರ್ತೃಸ್ಮರಣೆ ಇಲ್ಲದಿರುವುದರಿಂದ ಎಂದರ್ಥ. ಹಾಗೆಂದರೇನು ಎಂದು ಶಂಕಿಸುತ್ತಾನೆ. 'ಕಿಮಿದಂ—' ಇತಿ. ಅಪ್ರಮೀಯಮಾಣಕರ್ತೃಕತ್ವಂ — ವೇದಕರ್ತೃವು ಪ್ರಮಾಣ ದಿಂದ ಸಿದ್ಧಿಸುವುದಿಲ್ಲ ಎಂದರ್ಥವೇ? ಅಥವಾ ಅಸ್ಮರ್ಯಮಾಣ ಗೋಚರ ಕರ್ತೃಕತ್ವಂ— ವೇದಕರ್ತೃವು ಸ್ಮರಣೆಗೆ ವಿಷಯ ನಾಗದಿರುವುದು ಎಂದರ್ಥವೇ ಮೊದಲನೆಯ ಕಲ್ಪ ಯುಕ್ತವಲ್ಲ. ಪರಮೇಶ್ವರನೇ ಕರ್ತೃವೆಂದು ಶ್ರುತಿಪ್ರಮಾಣಜನ್ಯ ಜ್ಞಾನವಿದೆ. (ಪ್ರಮಿತಿ—ಪ್ರಮಾಣಜನ್ಯ ಜ್ಞಾನ) 'ಅಸ್ಯ ಮಹತೋ ಭೂತಸ್ಯ ನಿಃ ಶ್ವಸಿತಮೇತತ್ ಯದ್ ಋಗ್ವೇದೋ ಯಜುರ್ವೇದಃ (ಬೃ– ೨–೪–೧೦). 'ತಸ್ಮಾದ್ಯ ಜ್ಞಾತ್ ಸರ್ವ ಹುತಃ ಋಚಃ ಸಾಮಾನಿ ಜಜ್ಞಿರೇ । ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತ ಸ್ಮಾದ ಜಾಯತ । ' (ತೈ– ಆ– ೨–೧೨). "ಇದಂ ಸರ್ವಮಸೃಜತ ಋಚೋ ಯಜೂಂಷಿ ಸಾಮಾನಿ' (ಬೃ– ೧–೨,೫) "ತೇಪಾನಾತ್ ತ್ರಯೋ ವೇದಾ ಅಜಾಯಾಂತ" ಇತ್ಯಾದಿ ಶೃತಿಗಳು ಈಶ್ವರನೇ ಕರ್ತೃವೆಂದು ಸ್ಪಷ್ಟವಾಗಿ ಹೇಳುತ್ತವೆ. ಎರಡನೆಯ ಕಲ್ಪವೂ ಸರಿಯಲ್ಲ. ಅಲ್ಲಿಯೂ ವಿಕಲ್ಪಮಾಡಬಹುದು. ಒಬ್ಬನ ಸ್ಮರಣೆಗೆ ವಿಷಯ ವಲ್ಲವೇ? ಅಥವಾ ಎಲ್ಲರ ಸ್ಮರಣೆಗೆ ಅವಿಷಯನೇ? ಇಲ್ಲಿ ಮೊದಲನೆಯ ಪಕ್ಷವನ್ನಂಗೀ ಕರಿಸಿದರೆ ಮುಕ್ತ ಕೋಕ್ತಿಯಲ್ಲಿ ವ್ಯಭಿಚಾರ ಬರುತ್ತದೆ. ಪರಸ್ಪರ ಸಂಬಂಧವಿಲ್ಲದೇ ಒಂದು ಕಡೆ ಸಂಗ್ರಹೀತವಾದ ಶ್ಲೋಕಗಳಿಗೆ ಮುಕ್ತಕವೆಂದು ಹೆಸರು. ಅಲ್ಲಿ ಒಬ್ಬನಿಂದ ಕರ್ತೃ ನಿಶ್ಚಯಮಾಡಲು ಸಾಧ್ಯವಿಲ್ಲ. ಎರಡನೇ ಪಕ್ಷವಂತೂ ಅಸಂಭವ. ವೇದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ತೃ ಎಂದೂ ಎಲ್ಲಿಯೂ ಯಾರಿಂದಲೂ ಸ್ಮರಿಸಲ್ಪಡಲಿಲ್ಲವೆಂದು ಅಸರ್ವಜ್ಞರಾದ ನಾವು ನಿಶ್ಚಯಿಸಲು ಸಾಧ್ಯವಿಲ್ಲ. ಪೌರುಷೇಯವೆಂಬುದರಲ್ಲಿ ಸ್ಫುಟ ಪ್ರಮಾಣಗಳಿವೆ. ವೇದವಾಕ್ಯಾಸಿ—ಇತ್ಯಾದಿ ಅನುಮಾನಗಳಿಂದ ಪೌರುಷೇಯತ್ವವನ್ನು ಸಾಧಿಸುತ್ತಾನೆ. ಕಾಲಿದಾಸವಾಕ್ಯವು ಪೌರುಷೇಯವೆಂದು ಪ್ರಸಿದ್ಧ. ಅದರಂತೆ ವಾಕ್ಯಾತ್ಮಕವಾದ ವೇದವೂ ಪೌರುಷೇಯವೆಂದರ್ಥ. ಮನ್ವಾದಿ ವಾಕ್ಯದಂತೆ ಇದು ಆಪ್ತನಾದ ಈಶ್ವರನಿಂದ ಹೇಳಲ್ಪಟ್ಟಿದೆಯೆಂದು ಪೂರ್ವಪಕ್ಷಿಯ ಅಭಿಪ್ರಾಯ. ಸಿದ್ಧಾಂತಿ ಸಂಮತವಾದ ಅನುಮಾನವನ್ನು ಶಂಕಾರೂಪವಾಗಿ ಅನುವಾದ ಮಾಡುತ್ತಾನೆ. ನನು — ಇತಿ ||

ನನು ವೇದ ಸ್ಯಾಧ್ಯಯನಂ ಸರ್ವಂ ಗುರ್ವಧ್ಯಯನಪೂರ್ವಕಮ್ |
ವೇದಾಧ್ಯಯನ ಸಾಮಾನ್ಯಾದಧುನಾಧ್ಯಯನಂ ಯಥಾ ||
(ಶ್ಲೋ– ವಾ –೭–೩೬೬)

ಇತ್ಯನುಮಾನಂ ಪ್ರತಿಸಾಧನಂ ಪ್ರಗಲ್ಭತೇ ಇತಿ ಚೇತ್– ತದಪಿ ನ ಪ್ರಮಾಣ ಕೋಟಿ ಪ್ರವೇಷ್ಟು ಮೀಷ್ಟೇ |
ಭಾರತಾಧ್ಯಯನಂ ಸರ್ವಂ ಗುರ್ವಧ್ಯಯನಪೂರ್ವಕಮ್ |
ಭಾರತಾಧ್ಯಯನತ್ವೇನ ಸಾಂಪ್ರತಾಧ್ಯಯನಂ ಯಥಾ ||
ಇತ್ಯಾಭಾಸ ಸಮಾನಯೋಗ ಕ್ಷೇಮಾತ್ | ನನು ತತ್ರ ವ್ಯಾಸಃ ಕರ್ತೇತಿ ಸ್ಮರ್ಯತೇ | ಕೋ ಹ್ಯ ನ್ಯಃ ಪುಂಡರೀಕಾಕ್ಷಾ ನ್ಮಹಾಭಾರತ ಕೃದ್ಭವೇತ್ || ಇತ್ಯಾದಾ ವಿತಿ ಚೇತ್ — ತದಸಾರಮ್ | ಋಚಃ ಸಾಮಾನಿ ಜಜ್ಞಿರೇ | ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ | (ತೈ– ೩–೧೨) ಇತಿ ಪುರುಷ ಸೂಕ್ತೇ ವೇದಸ್ಯ ಸಕರ್ತೃಕ ತಾ ಪ್ರತ್ತಿ ಪಾದನಾತ್ | ಕಿಂ ಚಾನಿತ್ಯಃ ಶಬ್ದಃ ಸಾಮಾನ್ಯವತ್ವೇ ಸತ್ಯ ಸ್ಮದಾದಿ ಬಾಹ್ಯೇಂದ್ರಿಯ ಗ್ರಾಹ್ಯತ್ವಾತ್, ಘಟವತ್. ||

ಅನುಮಾನ ಪ್ರಯೋಗ — "ವೇದಾಧ್ಯಯನಂ– ಗುರ್ವಧ್ಯಯನ ಪೂರ್ವಕಂ– ವೇದಾಧ್ಯಯನತ್ವಾತ್ | ವರ್ತಮಾನವೇದಾಧ್ಯಯನವತ್ |" ಇದರಿಂದ ಅಪೌರುಷೇಯತ್ವ ಸಾಧನ ಯುಕ್ತವಾಗುವುದಿಲ್ಲ. ಪ್ರತಿ ಸಾಧನವೆಂದರೆ ಪ್ರತಿಕೂಲ ಸಾಧನವೆಂದರ್ಥ. ಪೌರುಷೇಯತ್ವವನ್ನಂಗೀಕರಿಸಿದರೆ ಆವೇದ ಕರ್ತೃ ಪುರುಷ ಕೃತವಾದ ಅಧ್ಯಯನಕ್ಕೆ ಗುರ್ವಧ್ಯಯನಪೂರ್ವಕತ್ವ ಕೂಡುವುದಿಲ್ಲ. ಹಿಂದಿನ ಅನುಮಾನದಂತೆ ವ್ಯಾಪ್ತಿ ಹೇಳುವುದಾದರೆ ಅಲ್ಲಿಯೂ ಗುರ್ವಧ್ಯಯನ ಪೂರ್ವಕತ್ವ ಆವಶ್ಯಕ ವಾಗುವುದರಿಂದ ವೇದಕ್ಕೆ ಅಪೌರು ಷೇಯತ್ವವನ್ನು ಅಂಗೀಕರಿಸ ಬೇಕಾಗುತ್ತದೆ. ಪೂರ್ವ ಪಕ್ಷಿಯು ವಾಕ್ಯತ್ವ ಹೇತುವಿನಿಂದ ಪೌರು ಷೇಯತ್ವ ಸಾಧಿಸಿದರೆ ಈ ಅನುಮಾನದಿಂದ ಅಪೌರುಷೇಯತ್ವ ಸಾಧಿತವಾಗುತ್ತದೆ. ಪ್ರತಿಸಾಧನಂ ಎಂಬುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಮಾನಕ್ಕೆ ವಿಶೇಷಣ. ವೇದಾಧ್ಯಯನತ್ವರೂಪಪ್ರತಿಕೂಲಹೇತುವುಳ್ಳದೆಂದರ್ಥ. 'ಭಾರತಾ—' ಇತಿ. 'ಭಾರತಾಧ್ಯಯನಂ — ಗುರ್ವಧ್ಯಯನಪೂರ್ವಕಂ – ಭಾರತಾಧ್ಯಯನತ್ವಾತ್ । ವರ್ತಮಾನಾಧ್ಯಯನವತ್' ಎಂದು ಅನುಮಾನ ಮಾಡಿದರೆ ಹೇಗೆ ಭಾರತಾಧ್ಯಯನತ್ವ ಹೇತುಕಾನುಮಾನವು ಆಭಾಸವಾಗುತ್ತದೆಯೋ ಅದರಂತೆ ವೇದಾಧ್ಯಯನತ್ವ ಹೇತುಕಾನು ಮಾನವೂ ಆಭಾಸವಾಗುತ್ತದೆಯೆಂದರ್ಥ. ಹೇತುವು ಅಪ್ರಯೋಜಕವಾಗುವುದೇ ಆಭಾಸವಾಗುವುದಕ್ಕೆ ಕಾರಣ. "ಹೇತುಸ್ತ್ವಸ್ತು ಸಾಧ್ಯಂ ಮಾಸ್ತು' ಎಂದು ಅಪ್ರಯೋಜಕತ್ವಶಂಕಾ ಮಾಡಿದರೆ ತನ್ನಿವಾರಣೋಪಾಯ (ಪ್ರತಿಕೂಲ ತರ್ಕ) ವಿಲ್ಲವೆಂದು ತಾತ್ಪರ್ಯ.

ಅಧ್ಯಯನವೆಲ್ಲಾ ಗುರ್ವಧ್ಯಯನ ಪೂರ್ವಕ ವಾಗಿರಬೇಕೆಂಬ ನಿಯಮವು ಎಲ್ಲಿಯೂ ಕಂಡು ಬಂದಿಲ್ಲ. ಹಾಗೆ ಒಪ್ಪಿದರೆ ಲಿಖಿತ ಪಾಠಕಾದಿಗಳಲ್ಲಿ ವ್ಯಭಿಚಾರ ಬರುತ್ತದೆ. ಭಾರತದಲ್ಲಿ ಕರ್ತೃ ಸ್ಮೃತವಾಗಿದೆ. ಪುಂಡರೀಕಾಕ್ಷನೆಂದರೆ ನಾರಾಯಣ. ಅವನೇ ವ್ಯಾಸ ರೂಪದಿಂದ ಅವತರಿಸಿ ಭಾರತವನ್ನು ಮಾಡಿದನೆಂದು ಹೇಳಿದೆ. ವಿಷ್ಣುಪುರಾಣ ದಲ್ಲಿಯೂ 'ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ವಿಭುಮ್ । ಕೋಽನ್ಯೋ ಹಿ ಭುವಿ ಮೈತ್ರೇಯ ಮಹಾಭಾರತಕೃದ್ಭವೇತ್,' (ವಿ. ಪು. ೩–೪–೫) ಎಂದು ವ್ಯಾಸಕರ್ತೃ ಕತ್ವವನ್ನು ಸ್ಪಷ್ಟವಾಗಿ ಹೇಳಿದೆ. ಹೀಗೆ ವ್ಯಾಸ ಕರ್ತೃ ಕತ್ವ ನಿಶ್ಚಯದಿಂದ ಅಲ್ಲಿ ಗುರ್ವಧ್ಯಯನ ಪೂರ್ವಕತ್ವವು ಬಾಧಿತವೆಂದು ಹೇಳುವುದಾದರೆ ಅದೂ ಅಸಾರವೇ. ಏಕೆಂದರೆ 'ಋಚಃ—' ಇತ್ಯಾದಿ ಋಕ್ಕುಗಳಿಂದ ಪುರುಷಸೂಕ್ತದಲ್ಲಿ ಸಕರ್ತೃಕತ್ವವನ್ನು ಸ್ಪಷ್ಟವಾಗಿ ಹೇಳಿರುವುದರಿಂದ ವೇದಾಧ್ಯಯನದಲ್ಲಿಯೂ ಗುರ್ವಧ್ಯಯನಪೂರ್ವಕತ್ವಾನುಮಾನವೂ ಬಾಧಿತವಾಗುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ. ಪ್ರಕಾರಾಂತರದಿಂದಲೂ ಅಪೌರುಷೇಯತ್ವ ಸಾಧಕಾನು ಮಾನವು ಬಾಧಿತವೆಂದು ತೋರಿಸುತ್ತಾನೆ. 'ಕಿಂಚ—' ಇತಿ. ವೇದವು ಅಪೌರುಷೇಯವಾದರೆ ಅದು ನಿತ್ಯವಾಗಬೇಕು. ಆದರೆ ಅನುಮಾನದಿಂದ ನಿತ್ಯತ್ವವು ಬಾಧಿತವಾಗುತ್ತದೆ. "ಶಬ್ದಃ—ಅನಿತ್ಯಃ—ಸಾ.... ತ್ವಾತ್ । ಘಟವತ್' ಅನುಮಾನ. ಸಾಮಾನ್ಯವೆಂದರೆ ಜಾತಿ. ಜಾತಿಗೆ ಆಶ್ರಯವಾಗಿ ಬಹಿರಿಂದ್ರಿಯವಾದ ಶ್ರೋತ್ರದಿಂದ ಗ್ರಾಹ್ಯವಾದುದರಿಂದ ಎಂದು ಹೇತ್ವರ್ಥ. ಹೀಗೆ ಶಬ್ದದಲ್ಲಿ ಶಬ್ದತ್ವಜಾತಿ ಇದೆ. ತದ್ವ್ಯಾಪ್ಯವಾದ ಕತ್ವಾದಿಜಾತಿಗಳೂ ಇವೆ. ಹೀಗೆ ಈ ಅನುಮಾನದಿಂದ ವೇದವು ಸಿದ್ಧವಾಗುತ್ತದೆ.

ನನ್ವಿದಮನುಮಾನಂ ಸ ಏವಾಯಂ ಗಕಾರ ಇತಿ ಪ್ರತ್ಯಭಿಜ್ಞಾಪ್ರಮಾಣ ಪ್ರತಿಹತಮಿತಿ
ಚೇತ್—ತದತಿ ಫಲ್ಗು । ಲೂನಪುನರ್ಜಾತಕೇಶದಲಿತಕುಂದಾದಾವಿವ ಪ್ರತ್ಯಭಿಜ್ಞಾಯಾಃ ಸಾಮಾನ್ಯವಿಷಯತ್ವೇನ ಬಾಧಕತ್ವಾಭಾವಾತ್ । ನನ್ವಶರೀರಸ್ಯ ಪರಮೇಶ್ವರಸ್ಯ ತಾಲ್ವಾದಿಸ್ಥಾನಾಭಾವೇನ ವರ್ಣೋಚ್ಚಾರಣಾಸಂಭವಾತ್ ಕಥಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತ್ಪ್ರಣೀತತ್ವಂ ವೇದಸ್ಯಸ್ಯಾದಿತಿ ಚೇತ್—ನ ತದ್ಭದ್ರಮ್ । ಸ್ವಭಾವತೋಽ ಶರೀರಸ್ಯಾಪಿ ತಸ್ಯ ಭಕ್ತಾನುಗ್ರಹಾರ್ಥಂ ಲೀಲಾವಿಗ್ರಹಗ್ರಹಣಸಂಭವಾತ್ । ತಸ್ಮಾದ್ವೇದಸ್ಯಾಪೌರುಷೇಯತ್ವವಾಚೋಯುಕ್ತಿರ್ನ ಯುಕ್ತೇತಿ ಚೇತ್ ॥

ಶಬ್ದರಾಶಿ ಅನಿತ್ಯವೆಂದು ಅನುಮಾನದಿಂದ ಸಾಧಿಸಿರುವುದು ಯುಕ್ತವಲ್ಲ. ಪ್ರತ್ಯಭಿಜ್ಞಾ ಬಲದಿಂದ 'ಅದೇ ಈ ಗಕಾರ' ಎಂದು ತೋರುವುದರಿಂದ ನಿತ್ಯವೆಂದೇ ಆಗುತ್ತದೆ. ಆದುದರಿಂದ ಅನುಮಾನ ಕೆಟ್ಟು ಹೋಗಲಿಲ್ಲವೇ ಅಂದರೆ ಅದು ಅತಿಫಲ್ಗು ಅಂದರೆ ಅತಿತುಚ್ಛವಾಗಿದೆಯೆಂದು ತೋರಿಸುತ್ತಾನೆ: ಪ್ರತ್ಯಕ್ಷ ವಿಶೇಷವೇ ಪ್ರತ್ಯಭಿಜ್ಞಾ ಇಂದ್ರಿಯ ಸಹಕೃತ ಸಂಸ್ಕಾರಜನ್ಯ ವಾಗುತ್ತದೆ. ಕೂದಲು ಕತ್ತರಿಸಿ ಪುನಃ ಹುಟ್ಟಿದಾಗ, ಮಲ್ಲಿಗೆ ಬಳ್ಳಿ ಕತ್ತರಿಸಿದಾಗ ತಿರುಗಿ ಚಿಗುರಿದಾಗ ಅದೇ ಈ ಕೂದಲು, ಅದೇ ಈ ಬಳ್ಳಿ ಎಂದು ತೋರುತ್ತದೆ. ನಿಜವಾಗಿಯೂ ಅಲ್ಲಿ ಕೂದಲು ಬೇರೆ ಆದಂತಿರುವುದು. ಅಲ್ಲಿ ಪ್ರತ್ಯಭಿಜ್ಞಾ ಬರುತ್ತದೆ. ಅಲ್ಲಿ ಕೇಶತ್ವಜಾತಿ ಒಂದೇ ಆಗಿದೆ. ಜಾತ್ಯಭಿಪ್ರಾಯದಿಂದ 'ಅದೇ ಈ ಕೂದಲು' ಎಂದು ಪ್ರತ್ಯಭಿಜ್ಞಾ ಹೇಳುತ್ತೇವೆ. ಹೀಗೆಯೆ ಕತ್ತರಿಸಿದ ಬಳ್ಳಿ ಮುಂತಾದವುಗಳಲ್ಲಿ ತಿಳಿಯಬೇಕು. ಆದುದರಿಂದ ಪ್ರತ್ಯಭಿಜ್ಞೆಯಿಂದ ಅನುಮಾನಕ್ಕೆ ಯಾವ ಬಾಧಕವೂ ಇಲ್ಲ. "ನ ನ್ವೀಶ್ವರಸ್ಯ—' ಇತಿ. ಈಶ್ವರನಿಗೆ ಶರೀರವೇ ಇಲ್ಲದಿರುವಾಗ ತಾಲ್ವಾದಿ ಸ್ಥಾನವಿಲ್ಲದೆ ವರ್ಣೋಚ್ಚಾರಣೆ ಮಾಡುವುದು ಹೇಗೆ ಎಂದು ಕೇಳಬಾರದು. ನತತ್ ಭದ್ರಂ— ಅದು ಸಮಂಜಸವಲ್ಲ. ಸ್ವಭಾವದಿಂದ ಅವನು ಅಶರೀರಿಯಾದರೂ ಭಕ್ತಾನುಗ್ರಹ ಕ್ಕೋಸ್ಕರ ಲೀಲೆಯಿಂದಯಥೇಚ್ಛವಾಗಿ ಶರೀರೇಂದ್ರಿಯಾದಿಗಳನ್ನು ಧಾರಣ ಮಾಡುತ್ತಾನೆ. ಆದುದರಿಂದ ಉಚ್ಚರಿಸಲು ಯಾವ ಬಾಧಕವೂ ಇಲ್ಲದಿರುವುದರಿಂದ ವೇದವು ಅವನಿಂದ ಉಚ್ಚಾರಿತ ವಾದುದರಿಂದ ಅನಿತ್ಯವಾಗುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ.

ತತ್ರ ಸಮಾಧಾನಮಭಿಧೀಯತೇ । ಕಿಮಿದಂ ಪೌರುಷೇಯತ್ವಂ ಸಿಷಾಧಯಿಷಿತಮ್ । ಪುರುಷಾದುತ್ಪನ್ನತ್ವಮಾತ್ರಂ ಯಥಾಸ್ಮದಾದಿಭಿರಹರಹರುಚ್ಚಾರ್ಯಮಾಣಸ್ಯ ವೇದಸ್ಯ । ಪ್ರಮಾಣಾಂತರೇಣಾರ್ಥಮುಪಲಭ್ಯ ತತ್ಪ್ರಕಾಶನಾಯ ರಚಿತತ್ವಂ ವಾ ಯಥಾಸ್ಮದಾದಿಭಿರೇವ ನಿಬಧ್ಯಮಾನಸ್ಯ ಪ್ರಬಂಧಸ್ಯ । ಪ್ರಥಮೇ ನ ವಿಪ್ರತಿಪತ್ತಿಃ । ಚರಮೇ ಕಿಮನುಮಾನಬಲಾತ್ತತ್ಸಾಧನಮಾಗಮಬಲಾದ್ವಾ । ನಾದ್ಯಃ । ಮಾಲತೀಮಾಧವಾದಿವಾಕ್ಯೇಷು ಸವ್ಯಭಿಚಾರತ್ವಾತ್ । ಅಥ ಪ್ರಮಾಣತ್ವೇ ಸತೀತಿ ವಿಶಿಷ್ಯತ ಇತಿ ಚೇತ್ ತದಪಿ ನ ವಿಪಶ್ಚಿತೋ ಮನಸಿ ವೈಶದ್ಯಮಾಪದ್ಯತೇ । ಪ್ರಮಾಣಾಂತರಾಗೋಚರಾರ್ಥಪ್ರತಿಪಾದಕಂ ಹಿ ವಾಕ್ಯಂ ವೇದವಾಕ್ಯಮ್ । ತತ್ ಪ್ರಮಾಣಾಂತರಗೋಚರಾರ್ಥಪ್ರತಿಪಾದಕಮಿತಿ ಸಾಧ್ಯಮಾನೇ ಮಮಮಾತಾವಂಧ್ಯಾ ಇತಿವತ್ ವ್ಯಾಘಾತಾಪಾತಾತ್ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿದ್ಧಾಂತಿಯು ವೇದಕ್ಕೆ ಅಪೌರುಷೇಯತ್ವವನ್ನು ಸಾಧಿಸುತ್ತಾನೆ. ಪೂರ್ವಪಕ್ಷಿಯು ಸಾಧಿಸಬೇಕೆಂದಿರುವ ಪೌರುಷೇಯತ್ವದ ಸ್ವರೂಪವೇನೆಂದು ಮೊದಲುವಿಚಾರಿಸಬೇಕು. ನಾವು ನಿತ್ಯವೂ ವೇದವನ್ನು ಉಚ್ಚರಿಸುವಂತೆ ಪುರುಷನಿಂದ ಬಂದುದು ಎಂದರ್ಥವೇ ? ಅಥವಾ ಪ್ರತ್ಯಕ್ಷಾದಿ ಪ್ರಮಾಣಾಂತರಗಳಿಂದ ಒಂದು ಅರ್ಥವನ್ನು ಹೊಂದಿ ಅದನ್ನು ಪ್ರಕಾಶಪಡಿಸಲು ರಚಿಸಿದ ಶಬ್ದರಾಶಿಯೇ ? ಇದಕ್ಕೆ ಉದಾ:— 'ಯಥಾಸ್ಮ'—ಇತಿ. ನಾವು ಲೋಕದಲ್ಲಿ ಒಂದು ವಿಷಯವನ್ನು ತಿಳಿದು ಅದನ್ನು ಇತರರಿಗೆ ತಿಳಿಸಲು ಮಾಡುವ ಪ್ರಬಂಧರಚನೆಯಂತೆ ಈಶ್ವರನು ರಚಿಸಿರುವನೇ ? ಎಂದು ವಿಕಲ್ಪ. ಮೊದಲನೇ ಮತದಲ್ಲಿ ವಿವಾದವಿಲ್ಲ. ಈಶ್ವರನು ಹೇಳಿದುದು ಎಂದರೆ ವಿರಚಿತವೆಂದರ್ಥವಾಗದಿರುವುದರಿಂದ ನಮ್ಮ ಅಪೌರುಷೇಯತ್ವಕ್ಕೆ ಭಂಗ ಬರುವುದಿಲ್ಲ. ಎರಡನೆಯ ವಿಕಲ್ಪದಲ್ಲಿ ಹಾಗೆ ರಚಿಸಿರುತ್ತಾನೆ ಎಂಬುದರಲ್ಲಿ ಪ್ರಮಾಣವೇನು ? ಅನುಮಾನವೇ? ಆಗಮವೇ? ಅನುಮಾನವೆಂದರೆ ಹೇತು ವ್ಯಭಿಚಾರ ಸಹಿತವಾಗುವುದರಿಂದ ಸವ್ಯಭಿಚಾರ ರೂಪಹೇತ್ವಾಭಾಸವಾಗುತ್ತದೆ ಪ್ರಕೃತ 'ಪ್ರಮಾಣತ್ವೇ ಸತಿ ವಾಕ್ಯತ್ವಾತ್' ಎಂದು ನಿನ್ನ ಹೇತು. ಪೌರುಷೇಯತ್ವ ಸಾಧ್ಯ. ಅದಕ್ಕೆ ಪ್ರಮಾಣಾಂತರದಿಂದ ಅರ್ಥವನ್ನು ಹೊಂದಿ ಅದನ್ನು ಪ್ರಕಾಶಪಡಿಸುವುದಕ್ಕೋಸ್ಕರ ಮಾಡಿದರಚನೆ ಎಂದರ್ಥ. ಮಾಲತೀ ಮಾಧವದಲ್ಲಿ ಸ್ವಕಪೋಲಕಲ್ಪಿತಕಥೆಯಾದುದರಿಂದ ಅಲ್ಲಿ ಪ್ರಮಾಣಾಂತರಲಬ್ಧವಾದ ಅರ್ಥವಿಲ್ಲ. ಸಾಧ್ಯಾಭಾವವುಳ್ಳ ಮಾಲತೀಮಾಧವದಲ್ಲಿ ವಾಕ್ಯತ್ವರೂಪಹೇತು ಬರುವುದರಿಂದ ಅದು ಅಸದ್ಧೇತುವಾಗುತ್ತದೆಂದರ್ಥ. ಅಲ್ಲಿ ಪ್ರಮಾಣತ್ವೇ ಸತಿ ಎಂದು ಸೇರಿಸುತ್ತೇವೆ. ಕೇವಲ ವಾಕ್ಯತ್ವ ಹೇತುವಲ್ಲ. ಆಗ ಮಾಲತೀಮಾಧವದಲ್ಲಿ ಪ್ರಾಮಾಣ್ಯವಿಲ್ಲದಿರುವುದರಿಂದ ವಿಶೇಷಣಾಭಾವದಿಂದ ವಿಶಿಷ್ಟಾಭಾವ ಬರುವುದರಿಂದ ದೋಷ ಬರುವುದಿಲ್ಲ. ಹೀಗೆ ಹೇಳಿದರೂ ಸಮಂಜಸವಾಗುವುದಿಲ್ಲ. ಏಕೆಂದರೆ ವೇದವಾಕ್ಯವು ಪ್ರಮಾಣಾಂತರಕ್ಕೆ ಗೋಚರವಾಗದಿರುವ ಅರ್ಥವನ್ನೇ ಪ್ರತಿಪಾದಿಸುತ್ತದೆ. ಹೀಗಿರುವಾಗ ಪ್ರಮಾಣಾಂತರದಿಂದ ಲಬ್ಧಾರ್ಥವನ್ನು ಪ್ರಕಾಶಪಡಿಸಲು ರಚಿಸಿರುವುದು ಎಂಬರ್ಥ ಅಲ್ಲಿ ಹೇಗೆ ಸಂಗತವಾಗುತ್ತದೆ. ನನ್ನ ತಾಯಿ ಬಂಜೆ ಎಂದರೆ ಸ್ವೋಕ್ತಿವ್ಯಾಘಾತವಾದಂತೆ ಇಲ್ಲಿಯೂ ಹಾಗಾಗಬೇಕಾಗುತ್ತದೆ.

ಕಿಂಚ ಪರಮೇಶ್ವರಸ್ಯ ಲೀಲಾವಿಗ್ರಹಪರಿಗ್ರಹಾಭ್ಯುಪಗಮೇಪಿ ಅತೀಂದ್ರಿಯಾರ್ಥದರ್ಶನಂ ನ ಸಂಜಾಘಟೀತಿ । ದೇಶಕಾಲಸ್ವಭಾವ ವಿಪ್ರಕೃಷ್ಟಾರ್ಥಗ್ರಹಣೋಪಾಯಾಭಾವಾತ್ ನ ಚ ತಚ್ಚಕ್ಷುರಾದಿಕಮೇವತಾದೃಕ್ ಪ್ರತೀತಿಜನನಕ್ಷಮಮಿತಿ ಮಂತವ್ಯಮ್ । ದೃಷ್ಟಾನುಸಾರೇಣೈವಕಲ್ಪನಾಯಾ ಆಶ್ರಯಣೀಯತ್ವಾತ್ । ತದುಕ್ತಂ ಗುರುಭಿಃ ಸರ್ವಜ್ಞನಿರಾಕರಣವೇಲಾಯಾಮ್—

ಯತ್ರಾಪ್ಯತಿಶಯೋ ದೃಷ್ಟಃ ಸ ಸ್ವಾರ್ಥಾನತಿಲಂಘನಾತ್ ॥
ದೂರಸೂಕ್ಷ್ಮಾದಿದೃಷ್ಟೌ ಸ್ಯಾನ್ನ ರೂಪೇ ಶ್ರೋತ್ರವೃತ್ತಿತಾ ॥ ಇತಿ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತ ಏವ ನಾಗಮಬಲಾತ್ ತತ್ಸಾಧನಮ್ । ಯಥಾ 'ತೇನ ಪ್ರೋಕ್ತಂ' (ಪಾ- ಸೂ- ೪-೩-೧೦೧) ಇತಿ. ಪಾಣಿನ್ಯನುಶಾಸನೇ ಜಾಗ್ರತ್ಯಪಿ ಕಾಠಕಕಾಲಾಪತೈತ್ತಿರೀಯ ಮಿತ್ಯಾದಿಸಮಾಖ್ಯಾಧ್ಯಯನ ಸಂಪ್ರದಾಯಪ್ರವರ್ತಕವಿಷಯತ್ವೇನೋಪಪದ್ಯತೇ ತದ್ವದತ್ರಾಪಿ ಸಂಪ್ರದಾಯಪ್ರವರ್ತಕವಿಷಯತ್ವೇನಾಪ್ಯುಪಪದ್ಯತೇ ॥

ಲೀಲೆಯಿಂದ ಈಶ್ವರನು ಶರೀರಧರಿಸುವುದರಿಂದ ಉಚ್ಚಾರಣೆ ಸಂಭವವೆಂದಾಗಲೀ ಅತೀಂದ್ರಿಯಾರ್ಥದರ್ಶನವಾಗುತ್ತದೆಂದಾಗಲೀ ಕಲ್ಪಿಸುವುದೂ ಸಮಂಜಸವಾಗುವುದಿಲ್ಲ. ದೇಶ, ಕಾಲ, ಸ್ವಭಾವಗಳಿಂದ ವಿಪ್ರಕೃಷ್ಟವಾದ ಅಂದರೆ ಇಂದ್ರಿಯಸಂಬಂಧ ಹೊಂದಿರುವ ವಸ್ತುವನ್ನು ಹೊಂದುವ ಉಪಾಯಗಳು ಯಾವುದೂ ಇರುವುದಿಲ್ಲ. ಇತರ ದೇಶ ಅಥವಾ ಇತರ ಲೋಕದಲ್ಲಿರುವ ವಸ್ತುವು ದೇಶತಃ ವಿಪ್ರಕೃಷ್ಟವೂ, ಭೂತ ಭವಿಷ್ಯತ್ಕಾಲ ದಲ್ಲಿರುವ ವಸ್ತುವು ಕಾಲತಃ ವಿಪ್ರಕೃಷ್ಟವೂ, ಕಣ್ಣಿಗೆ ರಸಗಂಧಾದಿಗಳು ಸ್ವಭಾವತಃ ವಿಪ್ರಕೃಷ್ಟವೂ ಆಗುತ್ತವೆ. ಚಕ್ಷುಃ ಸಂಯುಕ್ತಪುಷ್ಪಾದಿಗಳಲ್ಲಿರುವ ರೂಪರಸಗಂಧಾದಿಗಳಿಗೆ ಚಕ್ಷುರಿಂದ್ರಿಯದೊಡನೆ ಸಂಯುಕ್ತಸಮವಾಯರೂಪಸಂನಿಕರ್ಷವು ಸಮಾನವಾಗಿದ್ದರೂ ಕಣ್ಣಿನಿಂದ ರೂಪಮಾತ್ರ ಗೃಹೀತವಾಗುವುದಲ್ಲದೆ ರಸಗಂಧಾದಿಗಳನ್ನು ಅದು ಗ್ರಹಿಸುವುದಿಲ್ಲ. ಸ್ವಭಾವದಿಂದ ವಿಪ್ರಕೃಷ್ಟವಾಗಿರುವುದೇ ಇದಕ್ಕೆ ಕಾರಣ. ರೂಪ ಗ್ರಹಣಮಾಡುವುದು ಚಕ್ಷುರಿಂದ್ರಿಯದ ಸ್ವಭಾವ. ರಸನೇಂದ್ರಿಯಗ್ರಾಹ್ಯತ್ವ ರಸದ ಸ್ವಭಾವವಲ್ಲದೆ ಚಕ್ಷುರೀಂದ್ರಿಯಗ್ರಾಹ್ಯತ್ವವಿಲ್ಲ. ಹೀಗೆಯೇ ಗಂಧಾದಿಗಳ ಸ್ವಭಾವವನ್ನು ತಿಳಿಯಬೇಕು. 'ನಚ ತಚ್ಚಕ್ಷುಃ—' ಇತಿ. ಈಶ್ವರನ ಚಕ್ಷುರಾದಿಗಳು ವಿಪ್ರಕೃಷ್ಟವಾಗಿದ್ದರೂ ವಸ್ತುಗ್ರಹಣ ಶಕ್ತಿಯನ್ನು ಹೊಂದಿರುತ್ತವೆಯೆಂದು ಹೇಳಬಾರದು. ಲೋಕದಲ್ಲಿ ಪ್ರಸಿದ್ಧವಾಗಿರುವಂತೆಯೇ ಕಲ್ಪಿಸಬೇಕಲ್ಲದೆ ಇಲ್ಲದುದನ್ನು ಕಲ್ಪಿಸುವುದು ನ್ಯಾಯವಲ್ಲ. ಗುರುವೆಂದರೆ ಇಲ್ಲಿ ಕುಮಾರಿಲಭಟ್ಟಾಚಾರ್ಯರು. ಅವರು ಸರ್ವಜ್ಞತ್ವವನ್ನು ಹೀಗೆ ನಿರಾಕರಣಮಾಡಿರುತ್ತಾರೆ.

'ಯತ್ರ—' ಇತಿ. ಅತಿಶಯವೆಂದರೆ ಸಾಮರ್ಥ್ಯವಿಶೇಷ. ಸ್ವಾರ್ಥಃ — ಸ್ವವಿಷಯವೆಂದರ್ಥ. ಅದು ಸ್ವವಿಷಯವನ್ನು ಅತಿಕ್ರಮಿಸದೆ ದೂರಸೂಕ್ಷ್ಮಾದಿ ದೃಷ್ಟಿಯಲ್ಲಿ ಕಾರಣವಾಗಬಹುದು. ಆದರೆ ಸ್ವವಿಷಯವನ್ನತಿಕ್ರಮಿಸಿ ಅದು ಗ್ರಹಿಸಲಾರದು. ರೂಪದಲ್ಲಿ ಶ್ರೋತ್ರಾದಿವ್ಯಾಪಾರವಿಷಯತ್ವ ಎಂದೂ ಬರಲಾರದು. ಈಶ್ವರನ ಇಂದ್ರಿಯಗಳಲ್ಲಿ ನಿರತಿಶಯ ಸಾಮರ್ಥ್ಯವನ್ನು ಅಂಗೀಕರಿಸಿದರೂ ವ್ಯವಧಾನವಿಲ್ಲದೆ ದೂರದ ಪರ್ವತಾದಿಗಳಲ್ಲಿರುವ ವಸ್ತುವನ್ನಾಗಲೀ, ಅತಿಸೂಕ್ಷ್ಮವಾದ ಪರಮಾಣುವನ್ನಾಗಲೀ ಗ್ರಹಿಸಬಹುದು ಆದರೆ ದೇಶಾಂತರಿತವಾದ ವಸ್ತುವನ್ನು ಎಂದೂ ಗ್ರಹಿಸಲಾರದು. ಹಾಗೆ ಅಂಗೀಕರಿಸಿದರೆ ರೂಪದಲ್ಲಿ ಶ್ರೋತ್ರವ್ಯಾಪಾರಪ್ರವೃತ್ತಿಯೂ ಆಗಲಿ ಎಂದು ಒಪ್ಪಬೇಕಾಗುತ್ತದೆ. 'ಅತಏವ—' ಇತಿ. ಹೀಗೆ ಯುಕ್ತಿಯಿಂದ ಸರ್ವಜ್ಞತ್ವ ಸಿದ್ಧಿಸದಿರುವುದರಿಂದ ಎಂದರ್ಥ. ಆಗಮದಿಂದಲೂ ಸರ್ವಜ್ಞತ್ವವು ಸಿದ್ಧಿಸಲಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವಮೂಲಭೂತವಾದುದು ಆಗಮ. 'ಯಃ ಸರ್ವಜ್ಞಃ—' (ಮು- ೧-೧-೯) ಎಂಬ ಆಗಮವು ಕೂಡಾ ಸಂಪ್ರದಾಯಪ್ರವರ್ತಕನಾದುದರಿಂದ ಈಶ್ವರನಲ್ಲಿ ಸರ್ವಜ್ಞತ್ವ ವನ್ನು (ಉಪಚಾರದಿಂದ) ಆರೋಪಿಸಿ ಹೇಳಿದೆ. ಯುಕ್ತಿವಿರೋಧ ಬರುವುದರಿಂದ ವಾಸ್ತವಸರ್ವಜ್ಞತ್ವವನ್ನು ಅದು ಹೇಳಿಲ್ಲವೆಂದು ತಿಳಿಯಬೇಕು. ಅದಕ್ಕೆ ದೃಷ್ಟಾಂತ ತೋರಿಸುತ್ತಾನೆ.

'ತೇನ ಪ್ರೋಕ್ತಂ'—ಇತಿ. ಪ್ರೋಕ್ತಾರ್ಥದಲ್ಲಿ ತೃತೀಯಾಂತಪ್ರಾತಿಪದಿಕದ ಮೇಲೆ ಅಣಾದಿ ಪ್ರತ್ಯಯಗಳು ಬರುತ್ತವೆಯೆಂದು ಸೂತ್ರಾರ್ಥ. ಪ್ರಕರ್ಷದಿಂದ ಉಕ್ತ ವಾದುದು ಪ್ರೋಕ್ತ. ಅಂದರೆ ಸ್ವಯಂವಿರಚಿಸಿರುವುದೆಂದರ್ಥ. ಇಲ್ಲಿ ಕಠಕಲಾಪಾದಿ ಗಳಿಂದ ವಾಸ್ತವವಾಗಿ ಆಯಾಯ ಶಾಖೆಗಳು ರಚಿತವಾಗಿಲ್ಲ. ಆಯಾಯ ಶಾಖಾ ಧ್ಯಯನ ಸಂಪ್ರದಾಯ ಪ್ರವರ್ತಕರಾದುದರಿಂದ ಆಯಾಯ ಶಾಖೆಗಳಲ್ಲಿ ತತ್ಕೃತತ್ವಾ ರೋಪದಿಂದ ಕಠಾದಿಸಮಾಖ್ಯಾ ಲೋಕಪ್ರಸಿದ್ಧವಾಗಿರುವಂತೆ ಈಶ್ವರನಲ್ಲಿ ಸರ್ವಜ್ಞತ್ವ ವನ್ನುಆರೋಪಿಸಿ ಹೇಳುತ್ತಾರೆ. ಯೌಗಿಕಶಬ್ದಕ್ಕೆ ಸಮಾಖ್ಯಾ ಎಂದು ಹೆಸರು. ಕಠ ಪ್ರೋಕ್ತಶಾಖಾ ಅಂದರೆ ಅವನು ರಚಿಸಿರುವ ಶಾಖೆಯೆಂದಲ್ಲ. ಆ ಶಾಖಾಧ್ಯಯನ ಸಂಪ್ರದಾಯಪ್ರವರ್ತಕನೆಂದರ್ಥ. ವಾಸ್ತವಾಗಿ ಪ್ರೋಕ್ತ ಎಂಬುದಕ್ಕೆ ಕೃತ ಎಂದು ಅರ್ಥ ಕಲ್ಪಿಸುವುದರಲ್ಲಿ ಯಾವ ಪ್ರಮಾಣವೂ ಇಲ್ಲ 'ಕೃತೇ ಗ್ರಂಥೇ' ಎಂದು ಮುಂದಿನ ಸೂತ್ರವಿರುವುದರಿಂದ ಪ್ರೋಕ್ತ ಎಂಬುದಕ್ಕೆ ವಿರಚಿಸಿದುದು ಎಂಬರ್ಥವಾಗುವು ದಿಲ್ಲ. ಅಧ್ಯಾಪನದಿಂದ ಅಥವಾ ಅರ್ಥವ್ಯಾಖ್ಯಾನದಿಂದ ಪ್ರಕಾಶಪಡಿಸಿರುವುದು ಎಂದರ್ಥ. ಇದರಿಂದ ಕಠಶಾಖಾ ಎಂಬಲ್ಲಿ ಆರೋಪವನ್ನೂ ಮಾಡಬೇಕಾಗಿಲ್ಲ.

ನ ಚಾನುಮಾನಬಲಾತ್ ಶಬ್ದಸ್ಯಾನಿತ್ಯತ್ವಸಿದ್ಧಿಃ। ಪ್ರತ್ಯಭಿಜ್ಞಾವಿರೋಧಾತ್ । ನ ಚಾಸತ್ಯಪ್ಯೇಕತ್ವೇ ಸಾಮಾನ್ಯನಿಬಂಧನಂ ತದಿತಿ ಸಾಂಪ್ರತಮ್ । ಸಾಮಾನ್ಯ ನಿಬಂಧನತ್ವಮಸ್ಯ ಬಲವದ್ಬಾಧಕೋಪನಿಪಾತಾದಾಶ್ರೀಯತೇ ಕ್ವಚಿದ್ವ್ಯಭಿಚಾರ ದರ್ಶನಾದ್ವಾ। ತತ್ರ ಕ್ವಚಿದ್ವ್ಯಭಿಚಾರದರ್ಶನೇ ತದುತ್ಪ್ರೇಕ್ಷಾಯಾಮುಕ್ತಂ ಸ್ವತಃ ಪ್ರಾಮಾಣ್ಯವಾದಿಭಿ:—

ಉತ್ಪ್ರೇಕ್ಷೇತ ಹಿ ಯೋ ಮೋಹಾದಜ್ಞಾತಮಪಿ ಬಾಧನಮ್ ॥
ಸ ಸರ್ವವ್ಯವಹಾರೇಷು ಸಂಶಯಾತ್ಮಾ ವಿನಶ್ಯತಿ ॥ ಇತಿ ॥

'ಅನಿತ್ಯಃ ಶಬ್ದಃ'— ಇತ್ಯಾದಿ ಹಿಂದೆ ಹೇಳಿದ ಅನುಮಾನದಿಂದ ವೇದಕ್ಕೆ ಅನಿ ತ್ಯತ್ವಸಿದ್ಧಿಯಾಗುತ್ತದೆಂದು ಹೇಳಿದುದೂ ಯುಕ್ತವಲ್ಲ ಪ್ರತ್ಯಾಭಿಜ್ಞಾ ವಿರೋಧದಿಂದ ನಿತ್ಯತ್ವವೇ ಸಿದ್ಧವಾಗುತ್ತದೆ. ಹಿಂದೆ ಹೇಳಿದಂತೆ ಅದು ಒಂದಾಗದಿದ್ದರೂ ಸಾಮಾನ್ಯ ನಿಬಂಧನವೆಂಬುದೂ ಯುಕ್ತವಲ್ಲ. (ಸಾಂಪ್ರತಂ) ಅದೇ ಈ ಗಕಾರ ಎಂಬ ಪ್ರತ್ಯಭಿ ಜ್ಞಾರೂಪಪ್ರತ್ಯಕ್ಷವು ಗತ್ವರೂಪಜಾತಿ ಮೂಲಕವೆಂದುದು ಸರಿಯಲ್ಲವೆಂದರ್ಥ. ಬಲ ವದ್ಬಾಧಕ ಬರುವುದರಿಂದ ಸಾಮಾನ್ಯ ನಿಬಂಧನವೆಂದು ಹೇಳುವುದೇ ? ಅಥವಾ ಕೆಲವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಡೆ ವ್ಯಭಿಚಾರ ತೋರಿ ಬಂದುದರಿಂದ ಹಾಗೆ ಹೇಳುವುದೇ ? ಎಂದು ವಿಕಲ್ಪ. ದೃಢತರ ಪ್ರಮಾಣದಿಂದ ವ್ಯಕ್ತಿಭೇದ ನಿಶ್ಚಯವೇ ಇಲ್ಲಿ ಬಲವದ್ಬಾಧಕವೆಂದು ತಿಳಿಯಬೇಕು. ಐಕ್ಯವಿರುವಾಗ ಅದೇ ಈ ಗಕಾರವೆಂದು ಪ್ರತ್ಯಭಿಜ್ಞಾ ನಿಯಮ ಹೇಳಬೇಕು. ಆದರೆ ಕತ್ತರಿಸಿ ಪುನಃ ಬಂದ ಕೇಶಾದಿಗಳಲ್ಲಿ ಅದೇ ಈ ಕೇಶವೆಂಬ ಪ್ರತ್ಯಭಿಜ್ಞಾ ತೋರುವುದರಿಂದ ವ್ಯಭಿಚಾರ ಬರುತ್ತದೆ. ಸೂಚೀಕಟಾಹ ನ್ಯಾಯದಿಂದ ದ್ವಿತೀಯ ಕಲ್ಪವನ್ನು ಮೊದಲು ದೂಷಿಸುತ್ತಾನೆ. 'ತತ್ರ'—ಇತಿ. ಕೆಲವು ಕಡೆ (ಕತ್ತರಿಸಿ ಪುನಃಹುಟ್ಟಿದ) ಲೂನ ಪುನರ್ಜಾತಕೇಶಾದಿಗಳಲ್ಲಿ ವ್ಯಕ್ತಿಭೇದ ಪ್ರತ್ಯಕ್ಷದಿಂದ ಬಾಧಕಬರುವುದರಿಂದ ಗತ್ಯಂತರವಿಲ್ಲದೆ ನಿಯಮವ್ಯಭಿಚಾರವನ್ನು ಅಂಗೀಕರಿಸಿದರೂ, ಅದನ್ನೇ ದೃಷ್ಟಾಂತವನ್ನಾಗಿ ಇಟ್ಟುಕೊಂಡು ಬಾಧಕವಿಲ್ಲದ ಸ್ಥಳದಲ್ಲಿಯೂ ಯಾವುದೋ ಬಾಧಕ ಬರುತ್ತದೆಂದು ಕಲ್ಪಿಸಿ ವ್ಯಭಿಚಾರಕಲ್ಪಿಸುವುದಾದರೆ ಸ್ವತಃ ಪ್ರಾಮಾಣ್ಯವಾದಿಗಳಾದ ಮೀಮಾಂಸಕರು ಹೀಗೆ ಹೇಳುತ್ತಾರೆ. 'ಉತ್ಪ್ರೇಕ್ಷೇತ'—ಇತಿ. ಯಾವನೋ ಒಬ್ಬನು ಹೋಗುವಾಗ ಎಡವಿ ಬಿದ್ದು ಸಾಯುತ್ತಾನೆ. ಒಬ್ಬನು ಮಿಂಚು ಹೊಡೆದು ಸಾಯುತ್ತಾನೆ. ಇವನ್ನು ತಿಳಿದು ಒಬ್ಬನು ತನ್ನ ಜೀವನ ಬಾಧಕವನ್ನು ತಿಳಿಯದೇ ತನಗೂ ಹಾಗೆ ಆಗಬಹುದೆಂದು ಊಹಿಸುವುದಾದರೆ ಅವನ ಎಲ್ಲಾ ವ್ಯವಹಾರಗಳೂ ನಿಲ್ಲಬೇಕಾಗುತ್ತವೆ. ಸಂಶಯ ಪ್ರಕೃತಿಕನಾದರೆ ಅವನು ಎಲ್ಲೆಡೆಗಳಲ್ಲಿಯೂ ನಾಶಹೊಂದುತ್ತಾನೆ. ಹಾಗೇ ಸಂಶಯಪಟ್ಟರೆ ಒಂದು ಹೆಜ್ಜೆ ಮುಂದಿಡುವುದೂ ಸಾಧ್ಯವಾಗಲಾರದು. ಆದುದರಿಂದ ಒಂದೆಡೆ ವ್ಯಭಿಚಾರ ಬಂತೆಂದು ಇಲ್ಲಿಯೂ ವ್ಯಭಿಚಾರ ಬರಬಹುದೆಂದು ಊಹಿಸಿ ಪ್ರತ್ಯಭಿಜ್ಞಾನಿಯಮ ಭಂಗವನ್ನು ಹೇಳಬಾರದು.

ನನ್ವಿದಂ ಪ್ರತ್ಯಭಿಜ್ಞಾನಂ ಗತ್ವಾದಿಜಾತಿ ವಿಷಯಂ ನ ಗಾದಿವ್ಯಕ್ತಿ ವಿಷಯಮ್ । ತಾಸಾಂ ಪ್ರತಿಪುರುಷಂ ಭೇದೋಪಲಂಭಾತ್ । ಅನ್ಯಥಾ ಸೋಮಶರ್ಮಾಧೀತ ಇತಿ ವಿಭಾಗೋ ನ ಸ್ಯಾದಿತಿ ಚೇತ್ ತದಪಿ ಶೋಭಾಂ ನ ಬಿಭರ್ತಿ । ಗಾದಿ ವ್ಯಕ್ತಿಭೇದೇ ಪ್ರಮಾಣಾಭಾವೇನ ಗತ್ವಾದಿಜಾತಿ ವಿಷಯಕಲ್ಪನಾಯಾಂ ಪ್ರಮಾಣಾಭಾವಾತ್ । ಯಥಾ ಗೋತ್ವಮುಜಾನತಾ ಏಕಮೇವ ಭಿನ್ನದೇಶಪರಿಮಾಣಸಂಸ್ಥಾನವ್ಯಕ್ತ್ಯುಪಧಾನವಶಾತ್ ಭಿನ್ನದೇಶಮಿವಾಲ್ಪಮಿವ ಮಹದಿವ ದೀರ್ಘಮಿವವಾಮನಮಿವ ಪ್ರಥತೇ ತಥಾ ಗವ್ಯಕ್ತಿಮುಜಾನತ ಏಕಾಪಿ ವ್ಯಂಜಕ ಭೇದಾತ್ ತತ್ತದ್ಧರ್ಮಾನುಬಂಧಿನೀ ಪ್ರತಿಭಾಸತೇ । ಏತೇನ ವಿರುದ್ಧಧರ್ಮಾಧ್ಯಾಸಾತ್ ಭೇದಸಿದ್ಧಿರಿತಿ ಪ್ರತ್ಯುಕ್ತಮ್ ॥

ಬಲವದ್ಬಾಧಕವನ್ನು ಆಶಂಕಿಸುತ್ತಾನೆ. 'ನನು'—ಇತಿ. ಅದೇ ಈ ಗಕಾರವೆಂಬ ಪ್ರತ್ಯಭಿಜ್ಞಾ ಗತ್ವಾದಿಜಾತಿ ವಿಷಯಕವಲ್ಲದೆ ಗಾದಿವ್ಯಕ್ತಿ ವಿಷಯಕವಾಗುವುದಿಲ್ಲ. ಏಕೆಂದರೆ ಗಕಾರಿದಿ ವ್ಯಕ್ತಿಗಳು ಪುರುಷಭೇದದಿಂದ ಬೇರೆಬೇರೆಯಾಗಿರುತ್ತವೆ. ಹಾಗೆ ಅವು ಭಿನ್ನಗಳು ಎಂದು ಅಂಗೀಕರಿಸದಿದ್ದರೆ ಸೋಮಶರ್ಮನು ಓದುತ್ತಾನೆ ಎಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಾಗವು ಕೂಡದೇ ಹೋಗಬೇಕಾಗುತ್ತದೆ. ಒಂದೇ ಎಂದು ಹೇಳಿದರೆ ಯಾವ ಸೋಮ ಶರ್ಮನು ಹೇಳಿದ ಗಕಾರಾದಿವರ್ಣಗಳಿರುತ್ತವೆಯೋ ಅವೇ ಕೃಷ್ಣಶರ್ಮನೂ ಹೇಳಿರು ವುದು ಎಂದು ಭೇದವಿಲ್ಲದೇ ಹೋಗಬೇಕಾಗುತ್ತದೆ. ಎಂದು ಹೀಗೆ ಆಶಂಕಿಸಿದರೆ ಅದೂ ಶೋಭಾವಹವಲ್ಲವೆಂದು ಖಂಡಿಸುತ್ತಾನೆ. ಅದೇ ಈ ಗಕಾರವೆಂಬ ವ್ಯಕ್ತಿ ವಿಷಯಕ ಪ್ರತಿಭಿಜ್ಞೆಯು ಜಾತಿವಿಷಯಕವೆಂದು ಕಲ್ಪಿಸುವುದರಲ್ಲಿ ಯಾವ ಪ್ರಮಾಣವೂ ಇಲ್ಲ. 'ಗೋತ್ವಂ'—ಇತಿ. ಗೋತ್ವಜಾತಿಯ ಸ್ವರೂಪವೇನೆಂದು ಒಬ್ಬನಿಗೆ ತಿಳಿದಿರುವು ದಿಲ್ಲ. ಹಾಗಿದ್ದರೂ ವಾಸ್ತವವಾಗಿ ಗೋತ್ವ ಒಂದೇ ಆಗಿದ್ದರೂ ಭಿನ್ನಭಿನ್ನದೇಶಾ ದ್ಯುಪಾಧಿಭೇದವಿರುವಾಗ ಭಿನ್ನ ಭಿನ್ನವಾಗಿಯೇ ತೋರುತ್ತದೆ. ಈ ಗೋತ್ವವು ನಮ್ಮ ದೇಶದಲ್ಲಿರುವ ಗೋತ್ವಕ್ಕಿಂತ ವಿಲಕ್ಷಣವಾಗಿದೆ. ಇದು ಅಲ್ಪ. ಇದು ಮಹತ್ತಾಗಿದೆ ಇತ್ಯಾದಿ. ಸಂಸ್ಥಾನವೆಂದರೆ ಅವಯವ ರಚನಾ ವಿಶೇಷ. ಉಪಧಾನವೆಂದರೆ ಉಪಾಧಿ. ವಾಮನ—ಹ್ರಸ್ವ. ಹಾಗೆಯೇ ಗವ್ಯಕ್ತಿಜ್ಞಾನವಿಲ್ಲದಿರುವವನಿಗೂ ಒಂದೇ ಗಕಾರ ವಾಗಿದ್ದರೂ ವ್ಯಂಜಕಭೇದದಿಂದ ತತ್ತದ್ಧರ್ಮಾನುಸಾರವಾಗಿ ಬೇರೆ ಬೇರೆಯಾಗಿ ತೋರು ತ್ತದೆ. ನಾಭಿ ಪ್ರದೇಶದಿಂದ ಪ್ರೇರಿತವಾದ ವಾಯುವು ಮುಖವನ್ನು ಹೊಂದಿ ನಾಲಿಗೆ ಮುಂತಾದವುಗಳ ಸ್ಪರ್ಶದೊಡನೆ ಕಂಠಾದಿಸ್ಥಾನಕ್ಕೆ ಹೊಡೆದು ಧ್ವನಿಯನ್ನು ಹುಟ್ಟಿಸು ತ್ತದೆ. ಆ ಧ್ವನಿಯು ಒಳಗೇ ಗಕಾರಾದಿವರ್ಣಗಳನ್ನು ಪ್ರಕಟಗೊಳಿಸುತ್ತದೆ. ಈ ಧ್ವನಿಗೆ ನಾದವೆಂದು ಕರೆಯುತ್ತಾರೆ. ಹೀಗೆ ವ್ಯಂಜಕನಾದ ಧ್ವನಿಯಲ್ಲಿರುವ ಅಲ್ಪತ್ವ ಮಹತ್ವಾದಿ ಧರ್ಮಸಂಬಂಧದಿಂದ ಗಕಾರವ್ಯಕ್ತಿ ಒಂದೇ ಆಗಿದ್ದರೂ ಭಿನ್ನ ಭಿನ್ನವಾದಂತೆ ತೋರುತ್ತದೆ. ಸೋಮಶರ್ಮನು ಓದುತ್ತಾನೆ ಇತ್ಯಾದಿ ವಿಭಾಗಗಳೂ ಹೀಗೆಯೇ ಕಲ್ಪಿತವೆಂದು ತಿಳಿಯಬೇಕು 'ಏತೇನ,—ಇತಿ. ಇದರಿಂದ ವಿರುದ್ಧಧರ್ಮಾಧ್ಯಾಸ ದಿಂದ ಭೇದಸಿದ್ಧವಾಗುತ್ತದೆಂದು ಹೇಳಿದ ಪೂರ್ವಪಕ್ಷಿಯ ವಾದವು ನಿರಸ್ತವಾಗುತ್ತ ದೆಂದರ್ಥ.

ತತ್ರ ಕಿಂ ಸ್ವಭಾವಿಕೋ ವಿರುದ್ಧಧರ್ಮಾಧ್ಯಾಸೋ ಭೇದಸಾಧಕತ್ವೇನಾಭಿಮತಃ ಪ್ರಾತೀತಿಕೋ ವಾ । ಪ್ರಥಮೇಽಸಿದ್ಧಿಃ । ಅಪರಥಾ ಸ್ವಾಭಾವಿಕಭೇದಾಭ್ಯುಪ ಗಮೇ ದಶ ಗಕಾರಾನುದಚಾರಯಚ್ಚೈತ್ರ ಇತಿ ಪ್ರತಿಪತ್ತಿಃ ಸ್ಯಾನ್ನತು ದಶ ಕೃತ್ವೋ ಗಕಾರ ಇತಿ । ದ್ವಿತೀಯೇ ತು ನ ಸ್ವಾಭಾವಿಕಭೇದಸಿದ್ಧಿಃ । ನ ಹಿ ಪರೋಪಾಧಿಭೇದೇನ ಸ್ವಾಭಾವಿಕಸ್ಯೈಕ್ಯಂ ವಿಹನ್ಯತೇ । ಮಾ ಭೂನ್ನ ಭಸೋಽಪಿ ಕುಂಭಾದ್ಯುಪಾಧಿಭೇದಾತ್ ಸ್ವಾಭಾವಿಕೋ ಭೇದಃ । ತತ್ರವ್ಯಾ ವೃತ್ತ್ಯವಹಾರೋ ನಾದನಿದಾನಃ । ತದುಕ್ತಮಾಚಾರ್ಯೈಃ—

ಪ್ರಯೋಜನಂ ತು ಯಜ್ಜಾತೇಸ್ತದ್ವರ್ಣಾದೇವ ಲಪ್ಸ್ಯತೇ ॥
ವ್ಯಕ್ತಿಲಭ್ಯಂ ತು ನಾದೇಭ್ಯ ಇತಿ ಗತ್ವಾದಿಧೀರ್ವೃಥಾ ॥ ಇತಿ ॥
ತಥಾ ಚ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತ್ಯಭಿಜ್ಞಾ ಯದಾ ಶಬ್ದೇ ಜಾಗರ್ತಿ ನಿರವಗ್ರಹಾ ||
ಅನಿತ್ಯತ್ವಾನುಮಾನಾನಿ ಸೈವ ಸರ್ವಾಣಿ ಬಾಧತೇ ||

ಗಕಾರಾದಿಭೇದಸಾಧಕವಾಗಿ ವಿರುದ್ಧಧರ್ಮಾಧ್ಯಾಸವು ಪೂರ್ವಪಕ್ಷಿಯಿಂದ ಅಂಗೀಕೃತವಾಗಿದೆಯಷ್ಟೆ. ಅದು ಸ್ವಾಭಾವಿಕವೇ ? ಅಥವಾ ಪ್ರಾತೀತಿಕವೇ ? ಎಂದು ಕೇಳೋಣ. ಅದು ಸ್ವಾಭಾವಿಕವೆಂದರೆ ಅಸಿದ್ಧಿಯಾಗುತ್ತದೆ. ಏಕೆಂದರೆ ಗಕಾರಾದಿಗಳಲ್ಲಿ ಸ್ವಾಭಾವಿಕವಾಗಿ ಎಂದೂ ವಿರುದ್ಧಧರ್ಮಗಳಿರುವುದಿಲ್ಲ. ಹಾಗೆ ಇದೆಯೆಂದು ಸಾಧಿಸುವುದಾದರೆ ಚೈತ್ರನು ಹತ್ತು ಗಕಾರಗಳನ್ನು ಉಚ್ಚರಿಸಿದನು ಎಂದೇ ಹೇಳಬೇಕು. ಹತ್ತು ಸಾರಿ ಗಕಾರ ಹೇಳಿದನೆಂದು ವಾಸ್ತವ ಪ್ರತೀತಿ ಇಲ್ಲದೇ ಹೋಗಬೇಕಾಗುತ್ತದೆ. ಆದರೂ ಯಾರೂ ಹತ್ತು ಗಕಾರವನ್ನುಚ್ಚರಿಸಿದನೆಂದು ಹೇಳುವುದಿಲ್ಲ. ಆದುದರಿಂದ ಗಕಾರದಲ್ಲಿ ಸ್ವಾಭಾವಿಕ ವಿರುದ್ಧಧರ್ಮಗಳಿವೆ ಎಂದು ಹೇಳಲು ಸಾಧ್ಯವಿಲ್ಲ. ಪ್ರಾತೀತಿಕ ಅಂದರೆ ತೋರಿಕೆಗೆ ಮಾತ್ರವಿರುವುದು.—ಸ್ವಾಭಾವಿಕವಾಗಿಲ್ಲವೆಂದು ಸಿದ್ಧವಾಗುತ್ತದೆ. ಇತರ ಉಪಾಧಿ ಭೇದಗಳಿಂದ ಗಕಾರದಲ್ಲಿರುವ ಸ್ವಾಭಾವಿಕವಾದ ಐಕ್ಯಕ್ಕೆ ಭಂಗಬರುವುದಿಲ್ಲ. ಹಾಗಾದರೆ ಆಕಾಶದಲ್ಲಿ ಘಟಾದ್ಯುಪಾಧಿಯಿಂದಲೂ ಭೇದವುಂಟಾಗಲಾರದು ಎಂದು ಶಂಕೆ ಬಂದರೆ ಅದಕ್ಕೆ ಇಷ್ಟಾಪತ್ತಿಯಿಂದ ಸಮಾಧಾನ ತೋರಿಸುತ್ತಾನೆ. 'ಮಾ ಭೂತ್'—ಇತಿ. ಘಟಾದ್ಯುಪಾಧಿಗಳಿಂದ ಆಕಾಶಕ್ಕೆ ವಾಸ್ತವವಾದ ಭೇದವಿಲ್ಲವೇ ಇಲ್ಲ. ಔಪಾಧಿಕಭೇದವೆಂಬುದಕ್ಕೆ ಉಪಾಧಿಗಳು ಭಿನ್ನ ಭಿನ್ನವಾಗಿವೆಯೆಂದು ತಾತ್ಪರ್ಯ. 'ತತ್ರ'—ಇತಿ. ಸೋಮಶರ್ಮನು ಓದುತ್ತಾನೆ. ಕೃಷ್ಣಶರ್ಮನು ಓದುತ್ತಾನೆ ಇತ್ಯಾದಿ ಪರಸ್ಪರ ವ್ಯಾವೃತ್ತ ಪ್ರತ್ಯಯವು ನಾದನಿದಾನವಾಗಿದೆ. ಅಂದರೆ ವ್ಯಂಜಕ ಧ್ವನಿ ಮೂಲಕವಾಗಿದೆ. ಇದನ್ನು ಕುಮಾರಿಲರು ವಿವರಿಸಿರುತ್ತಾರೆ. 'ಪ್ರಯೋಜನಂ'—ಇತಿ. ಗಕಾರಾದಿವ್ಯಕ್ತ್ಯೈಕ್ಯದಿಂದ ಅಲ್ಲಿ ಗತ್ವಾದಿಜಾತಿ ಇರುವುದಿಲ್ಲ ಏಕವ್ಯಕ್ತಿವೃತ್ತಿಯಾದರೆ ಅದು ಅಖಂಡೋಪಾಧಿಯಲ್ಲಿದೆ ಜಾತಿಯಾಗುವುದಿಲ್ಲ. ಆಕಾಶತ್ವ ಜಾತಿಯಲ್ಲ. ಘಟತ್ವಾದಿ ಜಾತಿಗಳನ್ನು ಸ್ವೀಕರಿಸಿರುವುದರಿಂದ 'ಅಯಂ ಘಟಃ, ಅಯಂಘಟಃ' ಇತ್ಯಾದಿ ಜ್ಞಾನವುಂಟಾಗುತ್ತದೆ. ಇಂತಹ ಪ್ರಯೋಜನವು ಗಕಾರ ಒಂದಾದರೂ ಅದರಿಂದಲೇ ಸಿದ್ಧವಾಗುತ್ತದೆ. ಈ ಗಕಾರವನ್ನು ಅಭಿವ್ಯಕ್ತಪಡಿಸುವ ನಾದ ಭೇದಗಳಿಂದಲೇ 'ತಾರಃ ಗಕಾರಃ, ಮಂದಃ ಗಕಾರಃ' ಇತ್ಯಾದಿ ಭೇದ ಜ್ಞಾನವುಂಟಾಗುತ್ತದೆ. ಇದಕ್ಕೋಸ್ಕರ ವ್ಯಕ್ತಿನಾನಾತ್ವವನ್ನು ಅಂಗೀಕರಿಸಬೇಕಾಗಿಲ್ಲ. ಗತ್ವಾದಿಜಾತಿವಿಷಯಕ ಬುದ್ಧಿಯು ವ್ಯರ್ಥವೇ ಎಂದು ತಾತ್ಪರ್ಯ. 'ಪ್ರತ್ಯಭಿಜ್ಞಾ'—ಇತಿ. 'ಸೋಽಯಂ ಗಕಾರಃ' ಎಂಬ ಪ್ರತ್ಯಭಿಜ್ಞೆಯು ನಿರವಗ್ರಹಾ ಅಂದರೆ ನಿರ್ಬಾಧವಾಗಿರುವಾಗ ಅದರಿಂದ ಅನಿತ್ಯತ್ವಾನುಮಾನಗಳೆಲ್ಲವೂ ಬಾಧಿತವಾಗುತ್ತವೆ ಎಂದು ತಾತ್ಪರ್ಯ.

ಏತೇನೇದಮಪಾಸ್ತಂ ಯದವಾದಿ ವಾಗೀಶ್ವರೇಣ ಮಾನಮನೋಹರೇ ಅನಿತ್ಯಃ—ಶಬ್ದಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂದ್ರಿಯಗ್ರಾಹ್ಯವಿಶೇಷ ಗುಣತ್ವಾತ್, ಚಕ್ಷೂರೂಪವತ್ ।ಇತಿ। ಶಬ್ದದ್ರವ್ಯತ್ವ ವಾದಿನಂ ಪ್ರತ್ಯಸಿದ್ಧೇಃ। ಧ್ವನ್ಯಂಶೇ ಸಿದ್ಧಸಾಧನತ್ವಾಚ್ಚ। ಅಶ್ರಾವಣತ್ವೋಪಾಧಿಬಾಧಿತತ್ವಾಚ್ಚ। ಉದಯನಸ್ತು ಆಶ್ರಯಾಪ್ರತ್ಯಕ್ಷತ್ವೇ ಪ್ರಭಾವಸ್ಯ ಪ್ರತ್ಯಕ್ಷತಾಂ ಮಹತಾ ಪ್ರಬಂಧೇನ ಪ್ರತಿಪಾದಯ ನ್ನಿವೃತ್ತಃ ಕೋಲಾಹಲಃ, ಉತ್ಪನ್ನ ಶಬ್ದಃ ಇತಿ ವ್ಯವಹಾರಾಚರಣೇ ಕಾರಣಂ ಪ್ರತ್ಯಕ್ಷಂ ಶಬ್ದಾನಿತ್ಯತ್ವೇ ಪ್ರಮಾಣ ಯತಿ ಸ್ಮ॥ ಸೋಽಪಿ ವಿರುದ್ಧಧರ್ಮ ಸಂಸರ್ಗಸ್ಯೋಪಾಧಿಕತ್ವೋಪಪಾದನ ನ್ಯಾಯೇನ ದತ್ತರಕ್ತಬಲಿವೇತಾಲಸಮಃ। ಯೋ ಹಿ ನಿತ್ಯತ್ವೇ ಸರ್ವದೋಪಲಬ್ಧ್ಯ ನುಪಲಬ್ಧಿಪ್ರಸಂಗೋ ನ್ಯಾಯಭೂಷಣಕಾರೋಕ್ತಃಧ್ವನಿಸಂಸ್ಕೃತಸ್ಯೋಪಲಂಭಾಭ್ಯುಪಗಮಾತ್ ಪ್ರತಿಕ್ಷಿಪ್ತಃ। ಯತ್ತು ಯುಗಪದಿಂದ್ರಿಯಸಂಬಂಧಿತ್ವೇನ ಪ್ರತಿನಿಯತಸಂಸ್ಕಾರತ ಸಂಸ್ಕಾರ್ಯತ್ವಾಭಾವಾನುಮಾನಂ ತದಾತ್ಮನ್ಯನೈಕಾಂತಿಕ ಮಿತ್ಯಲಮತಿಕಲಹೇನ। ತತಶ್ಚವೇದಸ್ಯಾಪೌರುಷೇಯ ತಯಾ ನಿರಸ್ತಸಮಸ್ತ ಶಂಕಾಕಲಶಾಂಕುರತ್ವೇನ ಸ್ವತಃಸಿದ್ಧಂ ಧರ್ಮೇ ಪ್ರಾಮಾಣ್ಯಮಿತಿ ಸುಸ್ಥಿತಮ್॥

ಮಾನಮನೋಹರ ಗ್ರಂಥದಲ್ಲಿ ವಾಗೀಶ್ವರನು ಶಬ್ದಕ್ಕೆ ಅನಿತ್ಯತ್ವವನ್ನು ಅನುಮಾನದಿಂದ ಸಾಧಿಸಿರುತ್ತಾನೆ. ಶಬ್ದಃ — ಅನಿತ್ಯಃ — ಇಂದ್ರಿಯಗ್ರಾಹ್ಯವಿಶೇಷ ಗುಣತ್ವಾತ್ । ಎಂದು ಅನುಮಾನಾಕಾರ ಚಕ್ಷೂರೂಪವತ್– ದೃಷ್ಟಾಂತ. ಶಬ್ದ ದ್ರವ್ಯತ್ವವಾದಿಗೆ ಇದು ಅಸಿದ್ಧವಾಗುತ್ತದೆ. ಮೀಮಾಂಸಕರು ವರ್ಣಾತ್ಮಕ ಶಬ್ದವು ದ್ರವ್ಯವೆಂದು ಅಂಗೀಕರಿಸಿರುತ್ತಾರೆ. ಮಧ್ವಮತಾನು ಸಾರಿಗಳೂ ಕಾಕಾರಾದಿಗಳಿಗೆ ದ್ರವ್ಯತ್ವವನ್ನು ಹೇಳುತ್ತಾರೆ. ಅವರ ಮತದಲ್ಲಿ ಶಬ್ದಕ್ಕೆ ಗುಣತ್ವವೇ ಇಲ್ಲದಿರುವಾಗ ಇಂದ್ರಿಯಗ್ರಾಹ್ಯಗುಣತ್ವಹೇತುವುಪಕ್ಷದಲ್ಲಿ ಬರುವುದು ಹೇಗೆ ? ಆದುದರಿಂದ ಅಸಿದ್ಧವಾಗುತ್ತದೆ. (ಸ್ವರೂಪಾಸಿದ್ಧವಾಗುತ್ತದೆ.) ಧ್ವನ್ಯಾತ್ಮಕ ಶಬ್ದಕ್ಕೆ ಅನಿತ್ಯತ್ವಾನುಮಾನವೂ ನಿಷ್ಫಲವೇ. ನಮ್ಮ ಮತದಲ್ಲಿಯೂ ಅದು ಸಾಧಿತವಾದುದರಿಂದ ಸಿದ್ಧ ಸಾಧನ ದೋಷಬರುತ್ತದೆ. ಅಶ್ರಾವಣತ್ವೋಪಾಧಿಯಿಂದಲೂ ಅದು ಬಾಧಿತವಾಗುತ್ತದೆ. 'ಯತ್ರ ಅನಿತ್ಯತ್ವಂ ತತ್ರಾಶ್ರಾವಣತ್ವಂ" ಘಟಾದಿಯಲ್ಲಿ ಇದು ದೃಷ್ಟವಾದುದರಿಂದ ಸಾಧ್ಯವ್ಯಾಪಕತ್ವವೂ, 'ಯತ್ರೇಂದ್ರಿಯಗ್ರಾಹ್ಯವಿಶೇಷಗುಣವತ್ವಂ ತತ್ರಾಶ್ರಾವಣತ್ವಂ' ಎಂಬ ನಿಯಮವಿಲ್ಲದಿರುವುದರಿಂದ ಸಾಧನಾವ್ಯಾಪಕತ್ವ ಬರುವುದರಿಂದಲೂ ಅಶ್ರಾವಣತ್ವಕ್ಕೆ ಉಪಾಧಿತ್ವಲಕ್ಷಣಸಂಗತವಾಗುತ್ತದೆ. ಶಬ್ದದಲ್ಲಿ ಇಂದ್ರಿಯಗ್ರಾಹ್ಯ ಗುಣತ್ವವಿದ್ದರೂ ಅಶ್ರಾವಣತ್ವವಿಲ್ಲದಿರುವುದರಿಂದ ಶಬ್ದದಲ್ಲಿಯೇ ಅದು ವ್ಯಭಿಚರಿತವಾಗುತ್ತದೆ. ಸೋಪಾಧಿಕವಾದ ಹೇತುವು ವ್ಯಾಪ್ಯತ್ವಾಸಿದ್ಧವಾಗುತ್ತದೆಂದು ಹೇಳಿದೆ. ಶಬ್ದಾನಿತ್ಯತ್ವವಾದಿಗಳಾದ ಉದಯನಾಚಾರ್ಯರ ಮತವನ್ನು ಅನುವಾದ ಮಾಡಿ ಖಂಡಿಸುತ್ತಾರೆ. 'ಉದಯನಃ—' ಇತಿ. ಶಬ್ದಃ—ಅನಿತ್ಯಃ ತದುತ್ಪತ್ತಿವಿನಾಶಯೋಃ ಪ್ರತ್ಯಕ್ಷಸಿದ್ಧತ್ವಾತ್। ಎಂದು ಅನುಮಾನಾಕಾರ. ಶಬ್ದೋತ್ಪತ್ತಿಯನ್ನು ನಾವು ಪ್ರತ್ಯಕ್ಷವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡುತ್ತೇವೆ. ತನ್ಮೂಲಕವಾಗಿ 'ಶಬ್ದಃ ಉತ್ಪನ್ನಃ' ಎಂದು ವ್ಯವಹಾರವು ಪ್ರಸಿದ್ಧ ವಾಗಿದೆ. ಶಬ್ದವಿನಾಶವೆಂದರೆ ಅದು ಪ್ರಧ್ವಂಸಾಭಾವರೂಪವಾಗುತ್ತದೆ. ಅದಕ್ಕೆ ಪ್ರತ್ಯಕ್ಷತ್ವ ಹೇಗೆ? ಅಭಾವಪ್ರತ್ಯಕ್ಷವಾಗಬೇಕಾದರೆ ಅದರ ಆಶ್ರಯು ಪ್ರತ್ಯಕ್ಷವಾಗಬೇಕು. ಇಲ್ಲಿ ಶಬ್ದವಿನಾಶಕ್ಕೆ ಆಶ್ರಯವಾದುದು ಆಕಾಶ. ಅದು ಅತೀಂದ್ರಿಯವಾದುದರಿಂದ ಪ್ರತ್ಯಕ್ಷವಾಗುವುದಿಲ್ಲ. ಹೀಗಿರುವಾಗ ಶಬ್ದಧ್ವಂಸಪ್ರತ್ಯಕ್ಷವು ಹೇಗಾಗುತ್ತದೆ ? ಎಂದು ಆಶಂಕಿಸಬಾರದು. ಆಶ್ರಯಪ್ರತ್ಯಕ್ಷವಿಲ್ಲದಿದ್ದರೂ ಅಭಾವಪ್ರತ್ಯಕ್ಷಲೋಕದಲ್ಲಿ ದೃಷ್ಟ ವಾಗಿದೆ. ವಾಯುವು ಕಣ್ಣಿಗೆ ತೋರುವುದಿಲ್ಲ. ಆದರೂ ಅದರಲ್ಲಿರುವ ರೂಪಾಭಾವದ ಪ್ರತ್ಯಕ್ಷ ಕಣ್ಣಿನಿಂದ ಆಗುತ್ತದೆ. ಆದುದರಿಂದ ಅವುಗಳಿಗೆ ಕಾರ್ಯಕಾರಣಭಾವವನ್ನು ಅಂಗೀಕರಿಸಬೇಕಾಗಿಲ್ಲ. ಹೀಗೆ ಉದಯನಾಚಾರ್ಯರು ಅನಿತ್ಯತ್ವಸಾಧನೆಯಲ್ಲಿ ಪ್ರತ್ಯಕ್ಷ ವನ್ನೇ ಪ್ರಮಾಣವಾಗಿಟ್ಟುಕೊಂಡು ಶಬ್ದವು ಅನಿತ್ಯವೆಂದು ಘೋಷಿಸಿರುತ್ತಾರೆ. 'ಸೋಪಿ'—ಎಂಬುದರಿಂದ ಖಂಡಿಸುತ್ತಾರೆ. ವ್ಯಂಜಕಧ್ವನಿರೂಪೋಪಾಧಿಯಲ್ಲಿರುವ ತಾರತಮ್ಯಾದಿವಿರುದ್ಧಧರ್ಮಗಳು ಶಬ್ದದಲ್ಲಿ ಇಲ್ಲದಿದ್ದರು ಹೇಗೆ ತೋರುತ್ತವೆಯೋ ಅದರಂತೆ ಉತ್ಪತ್ತಿವಿನಾಶಗಳು ಇಲ್ಲದಿದ್ದರೂ ಉಪಚಾರಿತವಾದುದರಿಂದ 'ಉತ್ಪನ್ನಃ ಶಬ್ದಃ' 'ನಿವೃತ್ತಃ ಕೋಲಾಹಲಃ' ಇತ್ಯಾದಿವ್ಯವಹಾರಗಳು ಉಪಪನ್ನವಾಗುತ್ತವೆ. "ದತ್ತ"- ಇತಿ. ರಕ್ತ ಬಲಿಯನ್ನು ಕೊಟ್ಟಮೇಲೆ ತೃಪ್ತನಾದ ಬೇತಾಳನು ಹೇಗೆ ಪೀಡಿಸುವು ದಿಲ್ಲವೋ ಹಾಗೆ 'ನಿವೃತ್ತಃ ಕೋಲಾಹಲಃ' ಇತ್ಯಾದಿವ್ಯವಹಾರಗಳನ್ನು ಹಿಂದೆ ಹೇಳಿದಂತೆ ಕೂಡಿಸಿಕೊಟ್ಟಮೇಲೆ ಸಮಾಧಾನಗೊಂಡ ಉದಯನಾಚಾರ್ಯರು ಶಬ್ದನಿತ್ಯತ್ವವನ್ನು ತಿರುಗಿ ಖಂಡಿಸಲು ಬರುವುದಿಲ್ಲವೆಂದರ್ಥ. ನ್ಯಾಯಭೂಷಣಕಾರ ಮತವನ್ನು ಖಂಡಿಸು ತ್ತಾನೆ. 'ಯೋಹಿ'—ಇತಿ. ನಿತ್ಯವಾದ ನಾನಾ ಶಬ್ದವು ಪ್ರತ್ಯೇಕವ್ಯಾಪಕವೆಂದರೆ ವ್ಯಂಜಕಧ್ವನಿಯಿಂದ ಯಾವಾಗಲೂ ಎಲ್ಲಾ ಶಬ್ದಗಳು ಪ್ರತ್ಯಕ್ಷವಾಗಬೇಕಾಗುತ್ತದೆ. ಅವ್ಯಾಪಕವೆಂದರೆ ಎಲ್ಲಿ ಯಾವ ಶಬ್ದವಿಲ್ಲವೋ ಅಲ್ಲಿ ಅದರ ವ್ಯಂಜಕದಿಂದ ಉಪಲಬ್ಧಿ ಯಾಗದೇಹೋಗಬೇಕಾಗುತ್ತದೆ ಎಂದು ಆತನು ದೋಷಹೇಳಿರುತ್ತಾನೆ. 'ಸೋಪಿ'— ಇತಿ. ಇದೂ ದೋಷವಾಗುವುದಿಲ್ಲ. ವ್ಯಂಜಕಧ್ವನಿಯಿಂದ ಎಲ್ಲಿ ಯಾವ ಶಬ್ದವು ಸಂಸ್ಕರಿಸಲ್ಪಡುವುದೋ ಅಲ್ಲಿ ಅದಕ್ಕೆ ಮಾತ್ರ ಉಪಲಬ್ಧಿಯೆಂದು ಅಂಗೀಕರಿಸುವುದರಿಂದ ಯಾವ ದೋಷಕ್ಕೂ ಅವಕಾಶವಿರುವುದಿಲ್ಲ. 'ಯತ್ತು'—ಇತಿ. ಶಬ್ದಗಳು ವ್ಯಾಪಕ ಗಳಾದುದರಿಂದ ಎಲ್ಲಾ ಶಬ್ದಗಳು ಏಕಕಾಲದಲ್ಲಿ ಶ್ರೋತ್ರೇಂದ್ರಿಯದೊಡನೆ ಸಂಬದ್ಧ ವಾದುದರಿಂದ ಅವುಗಳ ಮಧ್ಯದಲ್ಲಿ ಈ ಶಬ್ದವೇ ವ್ಯಂಜಕಧ್ವನಿಯಿಂದ ಸಂಸ್ಕರಿಸಲ್ಪಡು ತ್ತದೆಯೆಂಬ ನಿಯಮ ಸಂಭವಿಸಲಾರದು. ಎಂದು ಪುನಃ ಪೂರ್ವಪಕ್ಷಿಯವಾದ. ಇದಕ್ಕೆ ಅನುಮಾನ. "ಶಬ್ದವಿಶೇಷಃ—ನ ನಿಯತ ಸಂಸ್ಕಾರಸಂಸ್ಕಾರ್ಯಃ—ಇತರೈಃ ಸಹ ಸಂಬಂಧವಿಶೇಷಾತ್". ಎಂದರೆ ಇದು ಸದ್ಧೇತವೇ ಅಲ್ಲವೆಂದು ಸಿದ್ಧಾಂತ. ಆತ್ಮನಲ್ಲಿ ಅದು ವ್ಯಭಿಚರಿತವಾಗುತ್ತದೆ, ಎಲ್ಲಾ ಜೀವಾತ್ಮರು ವಿಭುವಾಗಿ ಎಲ್ಲಾ ಕಡೆ ಇರುತ್ತಾರೆ. ಹೀಗಿದ್ದರೂ ಚಾಕ್ಷುಷಾದಿ ಜ್ಞಾನಕಾಲದಲ್ಲಿ ಒಂದೇ ಆತ್ಮವಿಶೇಷಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರ್ಯತ್ವ ಲೋಕದಲ್ಲಿ ದೃಷ್ಟವಾಗಿದೆ. ಅದರಂತೆ ನಿತ್ಯವಾದ ಶಬ್ದವಿಶೇಷಕ್ಕೂ ತಿಳಿಯಬೇಕು. ಹೀಗೆ ವೇದವು ಅಪೌರುಷೇಯವೆಂಬುದರಲ್ಲಿ ಯಾವ ದೋಷವೂ ಬರುವುದಿಲ್ಲ.

ಸ್ಯಾದೇತತ್—

ಪ್ರಮಾಣತ್ವಾಪ್ರಮಾಣತ್ವೇ ಸ್ವತಃ ಸಾಂಖ್ಯಾಃ ಸಮಾಶ್ರಿತಾಃ ||
ನೈಯಾಯಿಕಾಸ್ತೇ ಪರತಃ ಸೌಗತಾಶ್ಚರಮಂ ಸ್ವತಃ ||
ಪ್ರಥಮಂ ಪರತಃ ಪ್ರಾಹುಃ ಪ್ರಾಮಾಣ್ಯಂ ವೇದವಾದಿನಃ |
ಪ್ರಮಾಣತ್ವಂ ಸ್ವತಃ ಪ್ರಾಹುಃ ಪರತಶ್ಚಾಪ್ರಮಾಣತಾಮ್ ||

ಇತಿ ವಾದಿವಿವಾದದರ್ಶನಾತ್ಕಥಂಕಾರಂ ಸ್ವತಃ ಧರ್ಮೇ ಪ್ರಾಮಾಣ್ಯಮಿತಿ ಸಿದ್ಧವತ್ ಕೃತ್ಯಃ ಸ್ವೀಕ್ರಿಯತೇ | ಕಿಂ ಚ ಕಿಮಿದಂ ಸ್ವತಃ ಪ್ರಾಮಾಣ್ಯಂ ನಾಮ | ಕಿಂ ಸ್ವತ ಏವ ಪ್ರಾಮಾಣ್ಯಸ್ಯ ಜನ್ಮ | ಆಹೋಸ್ವಿತ್ ಸ್ವಾಶ್ರಯಜ್ಞಾನ ಜನ್ಯತ್ವಮ್ | ಕಿಮುತ ಸ್ವಾಶ್ರಯ ಜ್ಞಾನ ಸಾಮಗ್ರೀ ಜನ್ಯತ್ವಮ್ | ಉತಾಹೋ ಜ್ಞಾನ ಸಾಮಾನ್ಯಸಾಮಗ್ರೀಜನ್ಯ ಜ್ಞಾನವಿಶೇಷಾಶ್ರಿತತ್ವಮ್ ! ಕಿಂವಾ ಜ್ಞಾನ ಸಾಮಾನ್ಯ ಸಾಮಗ್ರೀಮಾತ್ರಜನ್ಯಜ್ಞಾನವಿಶೇಷಾಶ್ರಿತಮ್ |

ಪ್ರಮಾ ಎಂದರೆ ಯಥಾರ್ಥಾನುಭವ. "ಪ್ರಮಾಣಾನಾಂ ಯಥಾರ್ಥಾನುಭವಾನಾಂ ಭಾವಃ ಪ್ರಾಮಾಣ್ಯಮ್'' ಇದಕ್ಕೇ ಪ್ರಮಾತ್ವವೆಂದು ಕರೆಯುತ್ತಾರೆ. ಯಥಾರ್ಥಾನುಭವದಲ್ಲಿರುವ ಧರ್ಮವಿಶೇಷವೇ ಪ್ರಾಮಾಣ್ಯ. ಇದಕ್ಕೇ ಪ್ರಮಾಣತ್ವ ಪ್ರಮಾತ್ವವೆಂದು ಕರೆಯುತ್ತಾರೆ. ಹೀಗೆಯೇ ಅಯಥಾರ್ಥಾನುಭವದಲ್ಲಿರುವ ಧರ್ಮ ವಿಶೇಷಕ್ಕೆ ಅಪ್ರಾಮಾಣ್ಯ, ಅಪ್ರಮಾತ್ವ, ಅಪ್ರಮಾಣತ್ವವೆಂದು ಹೆಸರು. ಇದರ ಕಾರಣ ವಿಷಯದಲ್ಲಿ ಉಂಟಾದ ವಾದಕ್ಕೆ ಪ್ರಾಮಾಣ್ಯವಾದವೆಂದು ಕರೆಯುತ್ತಾರೆ. ಜನಕ ಕಾರಣ ವಿಷಯಕವಾಗಿಯೂ, ಜ್ಞಾಪಕಕಾರಣವಿಷಯಕವಾಗಿಯೂ ಇದು ಎರಡು ವಿಧ ವಾಗಿದೆ. ಪ್ರಾಮಾಣ್ಯದ ಕಾರಣ ಅದೇ ಅಥವಾ ಬೇರೆಯೇ ಎಂಬ ಸಂಶಯವೇ ಈ ವಾದಕ್ಕೆ ಮೂಲವಾಗಿದೆ. ಸ್ವಯಂ (ಅದೇ) ಎಂಬಲ್ಲಿ ಪ್ರಾಮಾಣ್ಯ, ತದಾಶ್ರಯೀ ಭೂತಜ್ಞಾನ, ತತ್ಕಾರಣ ಸಾಮಗ್ರಿಯೆಂದು ಮೂರೂ ಸೇರಿರುತ್ತವೆ. ಈ ಮೂರಕ್ಕಿಂತ ಬೇರೆಯಾದುದು ಅನ್ಯವೆಂದು ತಿಳಿಯಬೇಕು. ಹೀಗೆ ಅಪ್ರಾಮಾಣ್ಯ ವಿಷಯದಲ್ಲಿಯೂ ಸ್ವಪರಪದಾರ್ಥಗಳನ್ನು ತಿಳಿಯಬೇಕು. ಪ್ರಾಮಾಣ್ಯ ಮತ್ತು ಅಪ್ರಾಮಾಣ್ಯಗಳೆರಡಕ್ಕೂ ಕಾರಣ ಸ್ವಯಂ ಅಂದರೆ ತಾನೇ ಎಂದು ಸಾಂಖ್ಯಮತ. ಎರಡಕ್ಕೂ ಕಾರಣ ಬೇರೆ ಯೆಂದು ನೈಯಾಯಿಕಮತ. ಪ್ರಮಾಣತ್ವಕ್ಕೆ ಕಾರಣ ಅವು. ಅಪ್ರಮಾಣತ್ವಕ್ಕೆ ಸ್ವಯಂ ಎಂದು ಸೌಗತರು ಅಂದರೆ ಬೌದ್ಧರ ಮತ. ಇದಕ್ಕೆ ವಿರುದ್ಧವಾಗಿ ಅಂದರೆ ಪ್ರಮಾಣತ್ವಕ್ಕೆ ಸ್ವಯಂ, ಅಪ್ರಮಾಣತ್ವಕ್ಕೆ ಬೇರೆ ಕಾರಣವೆಂದು ಮೀಮಾಂಸಕಮತ. ಇವರೇ ವೇದವಾದಿಗಳು. 'ಇತಿ ವಾದಿ'—ಇತಿ. ಹೀಗೆ ವಾದ ವಿವಾದಗಳಿರುವಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮದಲ್ಲಿ ಸ್ವತಃ ಪ್ರಾಮಾಣ್ಯವೆಂದು ಹೇಗೆ ಸಿದ್ಧಾಂತವಾಗಿ ಹೇಳಿದೆಯೆಂದು ಆಕ್ಷೇಪ. 'ಕಿಂಚ'—ಎಂಬುದರಿಂದ ಸ್ವತಃ ಪ್ರಾಮಾಣ್ಯವಾದಿಗಳ ಮತವನ್ನು ಪೂರ್ವಪಕ್ಷವಾಗಿ ಸ್ವೀಕರಿಸಿ ಕೇಳುತ್ತಾನೆ. ಸ್ವತಃ ಪ್ರಾಮಾಣ್ಯವೆಂದರೇನು ? 'ಕಿಂಸ್ವತಃ'—ಇತಿ. ಜ್ಞಾನದಲ್ಲಿರುವ ಪ್ರಾಮಾಣ್ಯರೂಪ ಧರ್ಮವು ತನ್ನಿಂದಲೇ ಉಂಟಾಗುತ್ತದೆಯೋ ? 'ಆಹೋ ಇತಿ ಅಥವಾ ತನಗೆ ಆಶ್ರಯವಾದ ಜ್ಞಾನದಿಂದ ಹುಟ್ಟುತ್ತದೆಯೋ? 'ಕಿಮುತ' ಇತಿ ಅಥವಾ ತನ್ನ ಆಶ್ರಯವಾದ ಜ್ಞಾನದ ಕಾರಣ ಸಾಮಗ್ರಿಗಳಿಂದ ಹುಟ್ಟುತ್ತದೆಯೇ? (ಹೀಗೆಪಕ್ಷತ್ರಯ) 'ಉತಾಹೋ-ಇತಿ. ಜ್ಞಾನಕ್ಕೆ ಯಾವ ಸಾಧಾರಣ ಕಾರಣಗಳಿವೆಯೋ ಅವುಗಳಿಂದ ಉಂಟಾದ ಯಾವ ಜ್ಞಾನವಿಶೇಷವಿದೆಯೋ ಅಲ್ಲಿರುವುದು '(ಜ್ಞಾನವಿಶೇಷಪ್ರವೃತ್ತಿತ್ವಂ)' ಪ್ರಾಮಾಣ್ಯವೇ ? 'ಕಿಂವಾ'—ಇತಿ. ಅಥವಾ ಜ್ಞಾನಕ್ಕೆ ಯಾವ ಸಾಧಾರಣಕಾರಣಗಳಿವೆಯೋ ಕೇವಲ ಅವುಗಳಿಂದ ಮಾತ್ರ ಹುಟ್ಟಿರುವ ಯಾವ ಜ್ಞಾನವಿಶೇಷವಿದೆಯೋ ತದ್ವೃತ್ತಿತ್ವವೇ ಪ್ರಾಮಾಣ್ಯವೇ ? ಎಂದು ಐದನೆಯಪಕ್ಷ .

ತತ್ರಾದ್ಯಃ । ಕಾರ್ಯಕಾರಣಭಾವಸ್ಯ ಭೇದಸಾಮಾನಾಧಿಕರಣತ್ವೇನ ಏಕಸ್ಮಿನ್ನಸಂಭವಾತ್ । ನಾಪಿ ದ್ವಿತೀಯಃ । ಗುಣಸ್ಯಸತೋ ಜ್ಞಾನಸ್ಯ ಪ್ರಾಮಾಣ್ಯಂ ಪ್ರತಿ ಸಮವಾಯಿಕಾರಣತಯಾ ದ್ರವ್ಯತ್ವಾಪಾತಾತ್ । ನಾಪಿ ತೃತೀಯಃ । ಪ್ರಾಮಾಣ್ಯಸ್ಯ ಉಪಾಧಿತ್ವೇ ಜಾತಿತ್ವೇ ವಾ ಜನ್ಮಾಯೋಗಾತ್ । ಸ್ಮೃತಿತ್ವಾನಧಿಕರಣಸ್ಯ ಜ್ಞಾನಸ್ಯ ಬಾಧಾತ್ಯಂತಾ ಭಾವಃ ಪ್ರಾಮಾಣ್ಯೋಪಾಧಿಃ । ನ ಚ ತಸ್ಯೋತ್ಪತ್ತಿಸಂಭವಃ । ಅತ್ಯಂತಾಭಾವಸ್ಯ ನಿತ್ಯತ್ವಾಭ್ಯುಪಗಮಾತ್ । ಅತ ಏವ ನ ಜಾತೇರಪಿ ಜನಿರುತ್ಪದ್ಯತೇ । ನಾ ಪಿ ಚತುರ್ಥಃ । ಜ್ಞಾನ ವಿಶೇಷೋ ಹಿ ಅಪ್ರಮಾ । ವಿಶೇಷಸಾಮಗ್ರ್ಯಾಂಚ ಸಾಮಾನ್ಯಸಾಮಗ್ರ್ಯನುಪ್ರವಿಶತಿ । ಶಿಂಶುಪಾಸಾಮಾನ್ಯಮಿವ ವೃಕ್ಷಸಾಮಗ್ರೀ । ಪರತಸ್ತ್ವೇನ ಸ್ವೀಕೃತಾಪ್ರಾಮಾಣ್ಯಂ ವಿಜ್ಞಾನಸಾಮಾನ್ಯ ಸಾಮಗ್ರೀಜನ್ಯಾಶ್ರಿತ ಮಿತ್ಯತ್ಯಾಪ್ತಿರಾಪದ್ಯೇತ ।

'ತತ್ರ'—ಇತಿ. ಐದರಲ್ಲಿ ಮೊದಲನೆಯದು ನಿಂದ್ಯವಾಗಿದೆ. ಕಾರ್ಯಕಾರಣಗಳು ಯಾವಾಗಲೂ ಭಿನ್ನ ಭಿನ್ನವಾಗಿ ಒಂದರಲ್ಲಿರುವುದಿಲ್ಲ. ಆದುದರಿಂದ ತಾನು ತನ್ನಿಂದ ಹುಟ್ಟಲಾರದು. ಎರಡನೆಯ ಪಕ್ಷವೂ ಸರಿಯಲ್ಲ. ಗುಣವಾದ ಜ್ಞಾನವು ಪ್ರಾಮಾಣ್ಯಕ್ಕೆ ಸಮವಾಯಿಕಾರಣವೆನ್ನುವುದಾದರೆ ಅದು ದ್ರವ್ಯವಾಗಬೇಕಾಗುತ್ತದೆ. 'ಸಮವಾಯಿಕಾರಣತ್ವಂ ದ್ರವ್ಯಸ್ಯೈವೇತಿ ವಿಜ್ಞೇಯಂ' ಎಂದು ಕಾರಿಕಾವಳಿಯಲ್ಲಿ ಹೇಳಿರುತ್ತಾರೆ. ಅದೂ ಅಲ್ಲದೆ ಜ್ಞಾನವು ಆತ್ಮನ ಗುಣವಾದುದರಿಂದ ಅದು ಯಾವುದಕ್ಕೂ ಸಮವಾಯಿಕಾರಣವಾಗುವುದೇ ಇಲ್ಲ. ಮೂರನೆಯ ಪಕ್ಷವು ಸರಿಯಲ್ಲ. 'ಪ್ರಾಮಾಣ್ಯ—ಇತಿ. ಪ್ರಾಮಾಣ್ಯವೆಂಬುದು ಉಪಾಧಿಯೆಂದು ಅಥವಾ ಜಾತಿಯೆಂದು ಸ್ವೀಕರಿಸಿದರೂ ಅದು ನಿತ್ಯವಾಗುವುದರಿಂದ ಅದಕ್ಕೆ ಜನ್ಮ ಸಂಭವಿಸಲಾರದು. ಪ್ರಮಾಣಭೂತ ಅನೇಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನಗಳಲ್ಲಿರುವ ಸರ್ವಾನುಮತವಾದ ಧರ್ಮವಿಶೇಷವೇ ಪ್ರಾಮಾಣ್ಯವೆಂದರೆ ಅದೇ ಸಾಮಾನ್ಯ ಅಂದರೆ ಜಾತಿಯಾಗುತ್ತದೆ. ಜಾತಿ, ಉಪಾಧಿಭೇದದಿಂದ ಸಾಮಾನ್ಯವು ಎರಡು ವಿಧವಾಗಿದೆ. ಜಾತಿಯೆಂದರೆ ಅದು ನಿತ್ಯವಾದುದರಿಂದ ಅದಕ್ಕೆ ಜನ್ಮ ಕೂಡುವುದಿಲ್ಲ. ಪ್ರತ್ಯಕ್ಷತ್ವಾದಿಗಳಿಂದ ಸಾಂಕರ್ಯ ಬರುವುದರಿಂದ ಪ್ರಾಮಾಣ್ಯವು ಜಾತಿಯಾಗುವುದಿಲ್ಲವೆಂದರೆ ಉಪಾಧಿಯೆಂದು ಅಂಗೀಕರಿಸಬೇಕಾಗುತ್ತದೆ. ಸಖಂಡೋಪಾಧಿ ಅಖಂಡೋಪಾಧಿಭೇದಗಳಿಂದ ಉಪಾಧಿ ಎರಡು ವಿಧವಾಗಿದೆ. ಪ್ರಾಮಾಣವು ಅಖಂಡೋಪಾಧಿಯೆಂದರೆ ಅದು ನಿತ್ಯವಾಗುವುದರಿಂದ ಜನ್ಮವಿಲ್ಲ. ಸಖಂಡೋಪಾಧಿಯೆಂದರೆ ಅದು ದ್ರವ್ಯಾದ್ಯನ್ಯತಮ ಸ್ವರೂಪವಾಗುವುದರಿಂದ ಕೆಲವುಕಡೆ ನಿತ್ಯವೂ ಕೆಲವು ಕಡೆ ಅನಿತ್ಯವೂ ಆಗುತ್ತದೆ. ಉದಾ :—ಪೃಥಿವೀತ್ವಾದಿಗಳಿಂದ ಸಾಂಕರ್ಯ ಬರುವುದರಿಂದ ಶರೀರತ್ವವು ಜಾತಿಯಾಗುವುದಿಲ್ಲ ಉಪಾಧಿಯಾಗುತ್ತದೆ. ಶರೀರವಲ್ಲಿ ಯಾವ ಚೇಷ್ಟಾಶ್ರಯತ್ವವಿದೆಯೋ ಅದೇ ಶರೀರತ್ವ. ಚೇಷ್ಟಾಶ್ರಯಸ್ಯ ಭಾವಃ ಚೇಷ್ಟಾಶ್ರಯತ್ವಂ. 'ಪ್ರಕೃತಿಜನ್ಯಬೋಧೇ ಪ್ರಕಾಶೋ ಭಾವಃ' ಎಂದುವರಿಂದ ಚೇಷ್ಟಾಶ್ರಯತ್ವವೆಂದರೆ ಚೇಷ್ಟೆಯೇ ಆಗುತ್ತದೆ. ಹಿತಾಹಿತಪ್ರಾಪ್ತಿಪರಿಹಾರಾತ್ಮಕ ಕ್ರಿಯೆಗೆ ಚೇಷ್ಟೆಯೆಂದು ಹೆಸರು. ಹೀಗೆ ಶರೀರತ್ವವು ಕ್ರಿಯಾರೂಪವಾದ ಉಪಾಧಿಸ್ವರೂಪವಾಗುವುದರಿಂದ ಅದು ಅನಿತ್ಯವಾಗುತ್ತದೆ. ಪ್ರಕೃತಪ್ರಮಾಣ್ಯವೆಂದರೆ ಯಥಾರ್ಥಾನುಭವತ್ವವೆಂದು ಹಿಂದೆ ಹೇಳಿದೆ. ಅನುಭವದಲ್ಲಿರುವ ಯಾಥಾರ್ಥ್ಯವೇ ಅನುಭವತ್ವ. ಸ್ಮೃತಿಭಿನ್ನಜ್ಞಾನವೇ ಅನುಭವ. ಬಾಧಾತ್ಯಂತಾಭಾವವೇ ಯಾಥಾರ್ಥ್ಯವಾಗುತ್ತದೆ. ಅದೇ ಇಲ್ಲಿ ಉಪಾಧಿ. ಇದರಿಂದ ಬಾಧಾತ್ಯಂತಾಭಾವರೂಪವೇ ಪ್ರಾಮಾಣ್ಯವೆಂದಾಗುತ್ತದೆ. ಅತ್ಯಂತಾಭಾವವು ನಿತ್ಯವಾದುದರಿಂದ ಉಪಾಧಿರೂಪವಾದರೂ ಅದಕ್ಕೆ ಉತ್ಪತ್ತಿ ಕೂಡುವುದಿಲ್ಲ. ಪ್ರಥಮ ದ್ವಿತೀಯ ಪಕ್ಷದಲ್ಲಿಯೂ ಹೀಗೆ ಹೇಳಬಹುದು. ಅತ ಏವ-ನಿತ್ಯವಾದುದರಿಂದಲೇ ಜಾತಿಯೆಂದರೂ ಉತ್ಪತ್ತಿಕೂಡುವುದಿಲ್ಲ. ನಾಲ್ಕನೆಯ ಪಕ್ಷವೂ ಯುಕ್ತವಲ್ಲ. ಜ್ಞಾನವಿಶೇಷವೆಂದರೆ ಅಪ್ರಮಾ ಆಗುತ್ತದೆ. ವಸ್ತುತಃ ಶುಕ್ತಿಯಾಗಿದ್ದರೂ ಕಾಚಾದಿದೋಷದೂಷಿತ ಇಂದ್ರಿಯದಿಂದ 'ಇದಂ ರಜತಂ' ಎಂಬ ಜ್ಞಾನ ಉಂಟಾಗುತ್ತದೆ. ಇದೇ ಅಯಥಾರ್ಥಜ್ಞಾನವಾಗುತ್ತದೆ. ಇದರಲ್ಲಿ ಜ್ಞಾನ ಸಾಮಾನ್ಯ ಸಾಮಗ್ರೀಜನ್ಯತ್ವವು ಸಂಭವಿಸುತ್ತದೆ. ಜ್ಞಾನಸಾಮಾನ್ಯ ಸಾಮಗ್ರೀ ಅಂದರೆ ಇಂದ್ರಿಯವಾಗುತ್ತದೆ.

ಇದಂ ರಜತಂ ಎಂಬಲ್ಲಿ ಯದ್ಯಪಿ ದುಷ್ಟೇಂದ್ರಿಯ ಕಾರಣವಾಗುತ್ತದೆ. ಆದರೂ ಅಲ್ಲಿ ಇಂದ್ರಿಯತ್ವ ಸಾಮಾನ್ಯವು ಇದ್ದೇ ಇರುವುದರಿಂದ ಅಲ್ಲಿ ಜ್ಞಾನ ಸಾಮಾನ್ಯ ಸಾಮಗ್ರೀಜನ್ಯತ್ವ ಬರಲು ಬಾಧಕವಿಲ್ಲ. ಉದಾಹರಣೆ ತೋರಿಸುತ್ತಾನೆ. 'ಶಿಂಶುಪಾ—ಇತಿ. ವೃಕ್ಷಕ್ಕೆ ಸಾಮಾನ್ಯ ಕಾರಣ ವೃಜ್ಜಲಾದಿಗಳಿಂದ ಸಹಕೃತವಾದ ಬೀಜ. ವೃಕ್ಷ ವಿಶೇಷವಾದ ಶಿಂಶುಪಾವೃಕ್ಷಕ್ಕೆ ಅಂತಹ ಬೀಜ ವಿಶೇಷವು ಕಾರಣವಾಗುತ್ತದೆ. ಅದು ಬೀಜ ವಿಶೇಷವಾದರೂ ಬೀಜನಷ್ಟೆ. ಬೀಜನಲ್ಲವೆಂದರೆ ಬೀಜವಿಲ್ಲದೆ ವೃಕ್ಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷವುಂಟಾಗಿದೆಯೆಂದು ಹೇಳಬೇಕಾಗುತ್ತದೆ. ಅದರಂತೆ ಅಯಥಾರ್ಥ ಜ್ಞಾನವು ಜ್ಞಾನ ಸಾಮಾನ್ಯ ಸಾಮಗ್ರೀಜನ್ಯವಾದ ಜ್ಞಾನ ವಿಶೇಷವಾಗುತ್ತದೆ. ಅದನ್ನು ಆಶ್ರಯಿಸಿರುವುದು ಅಪ್ರಾಮಾಣ್ಯವಾಗುವುದರಿಂದ ಪ್ರಾಮಾಣ್ಯಲಕ್ಷಣವುಅತಿವ್ಯಾಪ್ತವಾಗುತ್ತದೆ ಅಯಥಾರ್ಥಜ್ಞಾನವು ಜ್ಞಾನ ಸಾಮಾನ್ಯ ಸಾಮಗ್ರೀಜನ್ಯವಾದರೂ ಅಲ್ಲಿ ಅಧಿಕವಾದ ದೋಷವೂ ಕಾರಣವಾಗುವುದರಿಂದ ಜ್ಞಾನ ಸಾಮಾನ್ಯಸಾಮಗ್ರೀಮಾತ್ರಜನ್ಯತ್ವ ಬರುವುದಿಲ್ಲವೆಂದು ಮಾತ್ರಪದ ಸೇರಿಸಿ ಮುಂದಿನ ಪಕ್ಷವನ್ನು ಹೇಳುವುದಾದರೆ ಅಲ್ಲಿಯೂ ವಿಕಲ್ಪ ಮಾಡಿ ದೋಷ ತೋರಿಸುತ್ತಾನೆ.

ಪಂಚಮವಿಕಲ್ಪಂ ವಿಕಲ್ಪಯಾಮಃ । ಕಿಂ ದೋಷಾಭಾವಸಹಕೃತ ಜ್ಞಾನಸಾಮಗ್ರೀಜನ್ಯತ್ವಮೇವ ಜ್ಞಾನಸಾಮಗ್ರೀಮಾತ್ರಜನ್ಯತ್ವಂ ಕಿಂ ವಾ ದೋಷಾಭಾವಾ ಸಹಕೃತ ಜ್ಞಾನಸಾಮಗ್ರೀಜನ್ಯತ್ವಮ್ । ನಾದ್ಯಃ । ದೋಷಾಭಾವಸಹಕೃತಜ್ಞಾನಸಾಮಗ್ರೀಜನ್ಯತ್ವಮೇವ ಪರತಃ ಪ್ರಾಮಾಣ್ಯಮಿತಿ ಪರತಃ ಪ್ರಾಮಾಣ್ಯವಾದಿಭಿರುರರೀಕರಣಾತ್ ! ನಾಪಿ ದ್ವಿತೀಯಃ । ದೋಷಾಭಾವಸಹಕೃತತ್ವೇನ ಸಾಮಗ್ರ್ಯಂ ಸಹಕೃತತ್ವೇ ಸಿದ್ಧೇಽನನ್ಯಥಾಸಿದ್ಧಾನ್ವಯ ವ್ಯತಿರೇಕಸಿದ್ಧತಯಾ ದೋಷಾಭಾವಸ್ಯ ಕಾರಣತಾಯಾವಜ್ರಲೇಪಾಯಮಾನತ್ವಾತ್ । ಅಭಾವಃ ಕಾರಣಮೇವ ನ ಭವತೀತಿ ಚೇತ್ತದಾ ವಕ್ತವ್ಯಮಭಾವಸ್ಯ ಕಾರ್ಯತ್ವಮಸ್ತಿ ವಾ ನವಾ। ಯದಿನಾಸ್ತಿ ತದಾ ಘಟಪ್ರಧ್ವಂಸಾನುತ್ಪತ್ತ್ಯಾ ಘಟಸ್ಯ ನಿತ್ಯತಾ ಪ್ರಸಂಗಃ ಅಥಾಸ್ತಿ ಕಿಮಪರಾದ್ಧಂ ಕಾರಣತ್ವೇನೇತಿ ಸೇಯಮುಭಯತಸ್ಪಾಶಾರಜ್ಜುಃ ।

'ಕಿಂ'—ಇತಿ. ಅಯಥಾರ್ಥಜ್ಞಾನಸ್ಥಳದಲ್ಲಿ ಜ್ಞಾನಸಾಮಾನ್ಯಸಾಮಗ್ರಿಗಿಂತಲೂ ಅಧಿಕವಾಗಿ ದೋಷರೂಪ ಕಾರಣವಿರುವುದರಿಂದ ಮಾತ್ರಪದದಿಂದ ವ್ಯಾವೃತ್ತಿ ಮಾಡಿದಂತೆ ಯಥಾರ್ಥಜ್ಞಾನಸ್ಥಳದಲ್ಲಿಯೂ ಸಾಮಾನ್ಯಸಾಮಗ್ರಿಗಿಂತ ಅಧಿಕವಾಗಿ ದೋಷಾಭಾವರೂಪಕಾರಣವಿರುವುದರಿಂದ ಮಾತ್ರಪದದಿಂದ ಅದಕ್ಕೆ ವ್ಯಾವೃತ್ತಿ ಇದೆಯೋ ಇಲ್ಲವೋ ? ಎಂದು ವಿಕಲ್ಪ. ಮಾತ್ರಪದದಿಂದ ವ್ಯಾವೃತ್ತಿ ಹೇಳುವುದಾದರೆ ಆಗ ಪ್ರಾಮಾಣ್ಯಲಕ್ಷಣಕ್ಕೆ ಎಲ್ಲಿಯೂ ಉದಾಹರಣೆ ಇಲ್ಲದೆ ಅಸಂಭವದೋಷಸಂಭವಿಸುವುದರಿಂದ ದೋಷಾಭಾವಕ್ಕೆ ವ್ಯಾವೃತ್ತಿ ಹೇಳಬಾರದೆಂದು ಮೊದಲನೆಯ ಪಕ್ಷದವರ ತಾತ್ಪರ್ಯ. ಆಗ ಪರತಃ ಪ್ರಾಮಾಣ್ಯವಾದಿಗಳೂ ದೋಷಾಭಾವಸಹಕೃತಜ್ಞಾನ ಸಾಮಗ್ರೀಜನ್ಯತ್ವವನ್ನೇ ಪರತಃ ಪ್ರಾಮಾಣ್ಯವೆಂದು ಅಂಗೀಕರಿಸಿರುವುದರಿಂದ ಸಿದ್ಧಾಂತ ಭಂಗ ಬರುತ್ತದೆ. ದೋಷಾಭಾವಕ್ಕೆ ಕಾರಣತ್ವವೇ ಇಲ್ಲದಿರುವುದರಿಂದ ವ್ಯಾವೃತ್ತವಾದರೂ ದೋಷವಿಲ್ಲವೆಂದು ಎರಡನೇ ಪಕ್ಷದವರ ಮತ.

'ನಾಪಿದ್ವಿತೀಯಃ'—ಇತಿ. ಯಥಾರ್ಥಜ್ಞಾನದಲ್ಲಿ ದೋಷಾಭಾವವು ಕಾರಣವಲ್ಲವೆಂಬಲ್ಲಿ ಜ್ಞಾನವನ್ನು ಹುಟ್ಟಿಸುವ ಇಂದ್ರಿಯಾದಿಗಳಿಗೆ ದೋಷಾಭಾವವು ಕೇವಲ ಸಹಾಯಮಾಡುವುದಲ್ಲದೆ ಪಾರ್ಥಕ್ಯದಿಂದ ಅದಕ್ಕೆ ಜ್ಞಾನವನ್ನು ಕುರಿತು ಕಾರಣತ್ವವಿಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂದು ತಾತ್ಪರ್ಯವೇ ? ಅಥವಾ ನಿಃಸ್ವರೂಪವುಳ್ಳ ಅಭಾವಕ್ಕೆ ಎಲ್ಲಿಯೂ ಕಾರಣತ್ವ ವಿಲ್ಲವೆಂದು ಅಭಿಪ್ರಾಯವೇ ? ಮೊದಲನೆಯದು ಸಮಂಜಸವಲ್ಲವೆಂದು ತಿಳಿಸುತ್ತಾನೆ. 'ದೋಷಾಭಾವಸಹಕೃತತ್ವೇನ'—ಇತಿ. ದೋಷಾಭಾವವಿದ್ದರೆ ಜ್ಞಾನೋತ್ಪತ್ತಿ, ಇಲ್ಲದಿದ್ದರೆ ಇಲ್ಲ ಎಂಬ ಅನ್ವಯವ್ಯತಿರೇಕಗಳಿಂದ ಯಥಾರ್ಥ ಜ್ಞಾನವನ್ನು ಕುರಿತು ದೋಷಾಭಾವಕ್ಕೆ ಕಾರಣತ್ವವನ್ನು ನಿವಾರಣೆಮಾಡುವುದು ಅಸಾಧ್ಯ. ಎರಡನೆಯ ವಿಕಲ್ಪವೂ ಸರಿಯಲ್ಲ. ಅಭಾವಕ್ಕೆ ಕಾರ್ಯತ್ವವಿದ್ದಮೇಲೆ ಕಾರಣತ್ವವಿಲ್ಲವೆಂದು ಸಾಧಿಸುವ ದುರಾಗ್ರಹವೇಕೆ ? ಕಾರ್ಯತ್ವವಿಲ್ಲವೆಂದರೆ ಘಟಧ್ವಂಸವಾಗದೆ ಘಟವು ನಿತ್ಯವಾಗ ಬೇಕಾಗುತ್ತದೆ. ಇದನ್ನೇ ಉದಯನಾಚಾರ್ಯರು ವಿವರಿಸಿರುತ್ತಾರೆ.

ತದುದಿತಮುದಯನೇನ

ಭಾವೋ ಯಥಾ ತಥಾಭಾವಃ ಕಾರಣಂ ಕಾರ್ಯವನ್ಮತಃ ॥ (ನ್ಯಾ-ಕು-೧-೧೦) ಇತಿ.

ತಥಾ ಚ ಪ್ರಯೋಗಃ—ವಿಮತಂ ಪ್ರಾಮಾಣ್ಯಂ ಜ್ಞಾನಹೇತ್ವತಿರಿಕ್ತಹೇತ್ವಧೀನಂ ಕಾರ್ಯತ್ವೇ ಸತಿ ತದ್ವಿಶೇಷಾಶ್ರಿತತ್ವಾದಪ್ರಾಮಾಣ್ಯವತ್ । ಪ್ರಾಮಾಣ್ಯಂ ಪರತೋ ಜ್ಞಾಯತೇ ಅನಭ್ಯಾಸದಶಾಯಾಂ ಸಾಂಶಯಿಕತ್ವಾದಪ್ರಾಮಾಣ್ಯವತ್ । ತಸ್ಮಾದುತ್ಪತ್ತೌ ಜ್ಞಪ್ತೌ ಚ ಪರತಸ್ತ್ವೇ ಪ್ರಮಾಣಸಂಭವಾತ್ ಸ್ವತಃ ಸಿದ್ಧಂ ಪ್ರಾಮಾಣ್ಯಮಿತ್ಯೇತತ್ ಪೂತಿಕೂಷ್ಮಾಂಡಾಯತ ಇತಿ ಚೇತ್—

ಭಾವವು ಹೇಗೆ ಕಾರ್ಯವೂ, ಕಾರಣವೂ ಆಗುತ್ತದೆಯೋ ಹಾಗೆಯೇ ಅಭಾವವೂ ಆಗುತ್ತದೆಯೆಂದರ್ಥ. ಅಭಾವಕ್ಕೆ ಸಮವಾಯಿ ಕಾರಣತ್ವ ಸಂಗತವಾಗದಿದ್ದರೂ ನಿಮಿತ್ತಕಾರಣತ್ವವನ್ನು ಸ್ವೀಕರಿಸಬಹುದು. ಈ ವಿಷಯದಲ್ಲಿ ಯಾವ ಬಾಧಕವೂ ಇಲ್ಲ. ಹೇಗೆ ಐದುರೀತಿಗಳಿಂದಲೂ ಸ್ವತಃ ಪ್ರಾಮಾಣ್ಯವನ್ನು ಹೇಳಲು ಅವಶ್ಯವಾದುದರಿಂದ ಪರತಃ ಪ್ರಾಮಾಣ್ಯವನ್ನೇ ಹೇಳಬೇಕಾಗುತ್ತದೆ. ಪರತಃ ಪ್ರಾಮಾಣ್ಯದಲ್ಲಿ ಅನುಮಾನ ಪ್ರಮಾಣವನ್ನು ತೋರಿಸುತ್ತಾನೆ. 'ತಥಾಚ'—ಇತಿ. ಪ್ರಾಮಾಣ್ಯಂ—ಯಥಾರ್ಥಜ್ಞಾನತ್ವಂ. ಇದೇ ಪಕ್ಷ. ಜ್ಞಾನ ಸಾಮಾನ್ಯಕಾರಣವ್ಯತಿರಿಕ್ತ ಹೇತುವೆಂದರೆ ದೋಷಾಭಾವ ತದಧೀನತ್ವ ಸಾಧ್ಯ. ಕಾರ್ಯತ್ವೇ ಸತಿ ಜ್ಞಾನ ವಿಶೇಷಾಶ್ರಿತತ್ವಂ ಹೇತು. ಈ ಅನುಮಾನದಿಂದ ಪ್ರಾಮಾಣ್ಯೋತ್ಪತ್ತಿಯಲ್ಲಿ ಪರತಸ್ತ್ವವನ್ನು ಸಾಧಿಸಿ ಈಗ ಜ್ಞಪ್ತಿಯಲ್ಲಿ ಪರತಸ್ತ್ವವನ್ನು ಸಾಧಿಸುತ್ತಾನೆ. ಪ್ರಾಮಾಣ್ಯಂ—ಪರತೋಜ್ಞಾಯತೇ- ಅನ....ತ್ವಾತ್ । ಅನುಮಾನ. ಅಪ್ರಾಮಾಣ್ಯವತ್ ದೃಷ್ಟಾಂತ. ಪರತಃ ಎಂದುದರಿಂದ ಜ್ಞಾನಜ್ಞಾಪಕ ಸಾಮಗ್ರೀಮಾತ್ರದಿಂದ ತಿಳಿಯಲ್ಪಡುವುದಿಲ್ಲ. ಅಂದರೆ ಜ್ಞಾನವು ಯಾವುದರಿಂದ ತಿಳಿಯಲ್ಪಡುವುದೋ ತನ್ಮಾತ್ರದಿಂದ ಆಜ್ಞಾನದಲ್ಲಿರುವ ಪ್ರಾಮಾಣ್ಯವು ಗ್ರಹಿಸಲ್ಪಡುವುದಿಲ್ಲವೆಂದರ್ಥ. ಇದಕ್ಕೆ ಉದಾಹರಣೆ ಹೀಗೆ ಹೇಳಬಹುದು. ಮೊದಲು ಒಬ್ಬನು ನೀರನ್ನು ತಿಳಿಯದೆ (ಅನಭ್ಯಾಸದಶಾ) ಹೋಗುತ್ತಿರುವಾಗ ಮುಂದೆ ನೀರಿದೆಯೆಂದು ಒಂದು ಜ್ಞಾನಬಂದಾಗ ಈ ಜ್ಞಾನವು ಪ್ರಮೆಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲವೇ ? ಎಂಬ ಸಂಶಯ ಬರುತ್ತದೆ. ಆಮೇಲೆ ಮುಂದೆ ಹೋದಾಗ ನೀರನ್ನು ಸಾಕ್ಷಾತ್ ಹೊಂದುತ್ತಾನೆ. ಆಗ "ಪೂರ್ವಮುತ್ಪನ್ನಂ ಜಲ ಜ್ಞಾನಂ—ಪ್ರಮಾ—ಫಲವತ್ ಪ್ರವೃತ್ತಿಜನಕತ್ವಾತ್" "ಯತ್ ನ ಪ್ರಮಾ ನ ತತ್ ಫಲವತ್ ಪ್ರವೃತ್ತಿ ಜನಕಂ ಯಥಾ ಅಪ್ರಮಾ" ಎಂಬ ಅನುಮಾನದಿಂದ ಪ್ರಾಮಾಣ್ಯತಿಳಿಯಲ್ಪಡುತ್ತದೆ. ಜ್ಞಾನಜ್ಞಾಪಕಸಾಮಗ್ರಿಯಿಂದಲೇ ಪ್ರಾಮಾಣ್ಯವು ತಿಳಿಯಲ್ಪಡುವುದಾದರೆ ಆಗ ಜ್ಞಾನೋತ್ಪತ್ತಿಯಾದೊಡನೆಯೇ ಅಂತರಪ್ರತ್ಯಕ್ಷದಿಂದ ಜ್ಞಾನವೂ ಜ್ಞಾತವಾದುದರಿಂದ ತದ್ಗತ ಪ್ರಾಮಾಣ್ಯವೂ ಅದೇ ಸಮಯದಲ್ಲಿ ಜ್ಞಾತವಾಗುವುದರಿಂದ ಸಂಶಯವೇ ಹುಟ್ಟುತ್ತಿರಲಿಲ್ಲ. ಆದುದರಿಂದ ಉತ್ಪತ್ತಿಯಲ್ಲಾಗಲೀ ಜ್ಞಪ್ತಿಯಲ್ಲಾಗಲೀ ಪರತಃ ಪ್ರಾಮಾಣ್ಯವನ್ನೇ ಹೇಳಬೇಕು. ಸ್ವತಃ ಪ್ರಾಮಾಣ್ಯವೆಂಬುದು ಪೂತಿಕೂಷ್ಮಾಂಡ ಕಲ್ಪವೇ ಅಂದರೆ ಗಗನಕುಸುಮದಂತೆಯೇ ಎಂದು ನೈಯಾಯಿಕಾದಿ ಪೂರ್ವಪಕ್ಷಿಗಳ ಆಕ್ಷೇಪ.

ತದೇತದಾಕಾಶಮುಷ್ಟಿಹನನಾಯತೇ । ವಿಜ್ಞಾನಸಾಮಗ್ರೀಜನ್ಯತ್ವೇ ಸತಿ ತದತಿರಿಕ್ತ ಹೇತ್ವಜನ್ಯತ್ವಂ ಪ್ರಮಾಯಾಃ ಸ್ವತಸ್ತ್ವಮಿತಿ ನಿರುಕ್ತಿಸಂಭವಾತ್ । ಅಸ್ತಿ ಚಾತ್ರಾನುಮಾನಮ್ । ವಿಮತಾ ಪ್ರಮಾ- ವಿಜ್ಞಾನಸಾಮಗ್ರೀಜನ್ಯತ್ವೇ ಸತಿ ತದತಿರಿಕ್ತಜನ್ಯಾ ನ ಭವತಿ ।ಅಪ್ರಮಾತ್ವಾನಧಿಕರಣತ್ವಾತ್ । ಘಟಾದಿಪ್ರಮಾವತ್ । ನ ಚಾದಯಮನುಮಾನಂ ಪರತಸ್ತ್ವಸಾಧಕಮಿತಿ ಶಂಕನೀಯಮ್। ಪ್ರಮಾ ದೋಷವ್ಯತಿರಿಕ್ತಜ್ಞಾನ ಹೇತ್ವತಿರಿಕ್ತಜನ್ಯಾ ನ ಭವತಿ ಜ್ಞಾನತ್ವಾದ ಪ್ರಮಾವತ್ ಇತಿ ಪ್ರತಿಸಾಧನ ಗ್ರಹಗ್ರಸ್ತತ್ವಾತ್ । ಜ್ಞಾನ ಸಾಮಗ್ರೀಮಾತ್ರಾದೇವ ಪ್ರಮೋತ್ಪತ್ತಿಸಂಭವೇ ತದತಿರಿಕ್ತಸ್ಯ ಗುಣಸ್ಯ ದೋಷಾಭಾವಸ್ಯ ವಾ ಕಾರಣತ್ವಕಲ್ಪನಾಯಾಂ ಕಲ್ಪನಾಗೌರವಪ್ರಸಂಗಾಚ್ಚ । ನನು ದೋಷಸ್ಯಾಪ್ರಮಾಹೇತುತ್ವೇನ ತದಭಾವಸ್ಯ ಪ್ರಮಾಂ ಪ್ರತಿ ಹೇತುತ್ವಂ ದುರ್ನಿವಾರಮಿತಿ ಚೇತ್ । ದೋಷಾಭಾವಸ್ಯಾಪ್ರಮಾ ಪ್ರತಿಬಂಧಕತ್ವೇನಾನ್ಯಥಾ ಸಿದ್ಧತ್ವಾತ್।

'ತದೇ'—ಇತಿ. ಆಕಾಶಕ್ಕೆ ಮುಷ್ಟಿಯಿಂದ ಹೊಡೆಯುವುದು ಹೇಗೆ ಅಸಾಧ್ಯವೋ ಹಾಗೇ ಪೂರ್ವಪಕ್ಷಿಯಿಂದ ಮಾಡಿದ ಸ್ವತಃಪ್ರಾಮಾಣ್ಯದೂಷಣೋದ್ಭಾವನವೂ ಅಸಂಭವವೆಂದರ್ಥ. ಪ್ರಮಾಸ್ವತಸ್ತ್ವವನ್ನು ನಿರ್ವಚನ ಮಾಡುವುದು ಅಸಾಧ್ಯವೆಂದು ಹೇಳಿದುದು ಸರಿಯಲ್ಲ. ವಿಜ್ಞಾನಸಾಮಗ್ರೀಜನ್ಯತ್ವೇ ಸತಿ ತದತಿರಿಕ್ತಹೇತ್ವಜನ್ಯತ್ವಂ ಸ್ವತಸ್ತ್ವಂ" ಎಂದು ಹೇಳಬಹುದು. ಜ್ಞಾನಸಾಮಾನ್ಯಸಾಮಗ್ರಿಯಿಂದಲೇ ಜ್ಞಾನ ವಿಶೇಷವಾದ ಪ್ರಮರೂಪದ ಉತ್ಪತ್ತಿಯಾಗುವುದಲ್ಲದೆ ಅಲ್ಲಿ ಇತರ ಅಧಿಕಗುಣವಾಗಲೀ ದೋಷಾಭಾವವಾಗಲೀ ಕಾರಣವಾಗುವುದಿಲ್ಲ. ದೋಷವು ಪ್ರಮಾಪ್ರತಿಬಂಧಕವೆಂದು ಮೀಮಾಂಸಕರ ಸಿದ್ಧಾಂತ. ಇದನ್ನೇ ಅನುಮಾನದಿಂದ ವಿವರಿಸಿರುತ್ತಾನೆ. ಘಟ ಪ್ರಮಾವತ್ ಎಂದು ದೃಷ್ಟಾಂತ. ಇದನ್ನೇ ಅನುಮಾನದಿಂದ ವಿವರಿಸಿರುತ್ತಾನೆ. ಘಟಪ್ರಮಾವತ್ ಎಂದು ದೃಷ್ಟಾಂತ. ಯದ್ಯಪೀ ಘಟಾದಿಪ್ರಮಾ ಪಕ್ಷೈಕದೇಶವಾಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ. ಆದರೂ ಅದು ಸಾಧ್ಯವುಳ್ಳದ್ದೆಂದು ನಿಶ್ಚಿತವಾದುದರಿಂದ ಉದಾಹರಣವಾಗುತ್ತದೆ. ಉದಯನೇನ ಪ್ರೋಕ್ತಂ—ಔದಯನಂ ಅವನ ಅನುಮಾನ ಪರತಸ್ತ್ವಸಾಧಕವಾಗುತ್ತದೆಯಷ್ಟೇ ಎಂದು ಶಂಕಿಸಬಾರದು. ಪ್ರಮಾ ಪಕ್ಷ. ದೋಷ ... ನ ಭವತಿ—ಸಾಧ್ಯ. ದೋಷಕ್ಕಿಂತ ವ್ಯತಿರಿಕ್ತನಾಗಿಯೂ ಜ್ಞಾನ ಸಾಮಾನ್ಯ ಹೇತುಗಳಿಗಿಂತ ಅತಿರಿಕ್ತವಾಗಿಯೂ ಇರುವುದರಿಂದ ಹುಟ್ಟಿರುವುದೇ ಇರುವುದೆಂದರ್ಥ. ಜ್ಞಾನತ್ವಾತ್ ಹೇತು. ಅಪ್ರಮಾವತ್ ದೃಷ್ಟಾಂತ. ದೋಷ ವ್ಯತಿರಿಕ್ತವೆಂಬ ಪದಕೊಡದಿದ್ದರೆ ಅಪ್ರಮಾಜ್ಞಾನವು ಕೂಡಾ ಜ್ಞಾನಹೇತ್ವತಿರಿಕ್ತದೋಷಜನ್ಯವಾಗುವುದರಿಂದ ದೃಷ್ಟಾಂತತ್ವ ಕೂಡದೇ ಹೋಗಬೇಕಾಗುತ್ತದೆ. ಆದುದರಿಂದ ದೋಷಭಿನ್ನವಾಗಿದ್ದು ಎಂದು ಹೇಳಿದೆ. ಹೀಗೆ ಪ್ರತಿಸಾಧನಗ್ರಸ್ತವಾಗುವುದರಿಂದ ಉದಯನಾಚಾರ್ಯರ ಹೇತುವು ದುಷ್ಟವಾಗುತ್ತದೆ. ಪ್ರತಿಸಾಧನವೆಂದರೆ ಸಾಧ್ಯಾಭಾವಸಾಧಕವಾದ ಹೇತ್ವಂತರವೆಂದರ್ಥ. ('ತದ್ರೂಪಗ್ರಹಗ್ರಸ್ತಂ') ಸತ್ಪ್ರತಿಪಕ್ಷವೆಂದು ತಾತ್ಪರ್ಯ.

'ಜ್ಞಾನಸಾ'—ಇತಿ. ಕೇವಲ ಜ್ಞಾಸಾಮಗ್ರಿಯಿಂದಲೇ ಪ್ರಮಾ ಹುಟ್ಟುತ್ತಿರುವಾಗ ತದತಿರಿಕ್ತ ಗುಣಕ್ಕಾಗಲೀ, ದೋಷಾಭಾವಕ್ಕಾಗಲೀ ಕಾರಣತ್ವವನ್ನು ಕಲ್ಪಿಸುವುದಾದರೆ ಕಲ್ಪನಾಗೌರವ ಬರುತ್ತದೆ. 'ನನು'—ಇತಿ. ದೋಷವು ಅಪ್ರಮಾಹೇತುವಾದುದರಿಂದ ದೋಷಾಭಾವವು ಪ್ರಮಾಹೇತುವಾಗುತ್ತದೆಂದು ಹೇಳುವುದೂ ಯುಕ್ತವಲ್ಲ. ದೋಷಾಭಾವವು ಅಪ್ರತಿಮಾ ಪ್ರತಿಬಂಧಕವೆಂದು ಕಲ್ಪಿಸುವುದರಿಂದ ಅದಕ್ಕೆ ಕಾರಣತ್ವವೇ ಇರುವುದಿಲ್ಲ. ಅದು ಅನ್ಯಥಾ ಸಿದ್ಧವಾಗುತ್ತದೆ. ಘಟಕ್ಕೆ ದಂಡವು ಕಾರಣ. ದಂಡತ್ವವಾಗಲೀ ಘಟರೂಪವಾಗಲೀ ಘಟನಿಯತಪೂರ್ವವೃತ್ತಿಯಾಗಿದ್ದರೂ ಅನ್ಯಥಾಸಿದ್ಧವಾಗುತ್ತದೆ. ದಂಡವು ದಂಡತ್ವವಿಲ್ಲದೇ ಇರುವುದಿಲ್ಲವಾದುದರಿಂದ ದಂಡಕ್ಕೆ ಕಾರಣತ್ವ ಹೇಳುವುದರಿಂದ ದಂಡತ್ವ ಅನ್ಯಥಾಸಿದ್ಧವಾಗುತ್ತದೆ. ಹಾಗೆಯೇ ಪ್ರಮಾಜ್ಞಾನವನ್ನು ಕುರಿತು ದೋಷಾಭಾವವು ನಿಯತಪೂರ್ವವೃತ್ತಿಯಾದರೂ ಪ್ರಮಾಜ್ಞಾನಕ್ಕೆ ಕಾರಣವಾಗುವುದಿಲ್ಲ. ದೋಷವು ಅಪ್ರಮಾಹೇತುವಾಗುವುದರಿಂದ ದೋಷವಿದ್ದರೆ ಪ್ರಮೋತ್ಪತ್ತಿಯಾಗುವುದಿಲ್ಲ. ಆದುದರಿಂದ ಪ್ರಮಾಜ್ಞಾನಸ್ಥಲದಲ್ಲಿ ದೋಷಾಭಾವವು ನಿಯತಪೂರ್ವವೃತ್ತಿಯಾದರೂ ಅದು ಅದಕ್ಕೆ ಕಾರಣವಾಗುವುದಿಲ್ಲ. ದೋಷಾಭಾವವು ಅಪ್ರಮಾಜ್ಞಾನಕ್ಕೆ ಪ್ರತಿಬಂಧಕವೆಂದು ಅಂಗೀಕರಿಸಬೇಕು. ಪ್ರಮಾಜ್ಞಾನೋತ್ಪಾದನೋಪಯೋಗಿಯಾದ ಯಾವ ವ್ಯಾಪಾರವೂ ಅದರಲ್ಲಿರುವುದಿಲ್ಲವೆಂದು ಸಿದ್ಧಾಂತ. ಆದುದರಿಂದ ಅದು ಅನ್ಯಥಾಸಿದ್ಧವಾಗುತ್ತದೆ. ಪ್ರಮಾಜ್ಞಾನವನ್ನು ಕುರಿತು ಗುಣಕ್ಕೆ ಕಾರಣತ್ವವನ್ನು ಅಂಗೀಕರಿಸಿದಮೇಲೆ ಗುಣಕ್ಕೆ ಪ್ರಯೋಜನವೇನು ಎಂದು ಶಂಕೆ ಬಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ.

ತಸ್ಮಾದ್ಗುಣೇಭ್ಯೋ ದೋಷಾಣಾಮಭಾವಸ್ತದಭಾವತಃ ||
ಅಪ್ರಾಮಾಣ್ಯದ್ವಯಾಸತ್ವಂ ತೇನೋತ್ಸರ್ಗೋऽನಪೋದಿತಃ ||ಇತಿ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಣಗಳಿಂದ ದೋಷಾಭಾವ ಹುಟ್ಟುತ್ತದೆ. ದೋಷಾಭಾವವಿರುವಾಗ ಸಂಶಯ, ವಿಪರ್ಯಯರೂಪ ಜ್ಞಾನಗಳು ಹುಟ್ಟದಿರುವುದರಿಂದ ಎರಡುರೀತಿಯಾದ ಅಪ್ರಾಮಾಣ್ಯವೂ ಹುಟ್ಟುವುದಿಲ್ಲ. ಅಪ್ರಾಮಾಣ್ಯವಿಲ್ಲದಿರುವಾಗ ಉತ್ಸರ್ಗಭೂತವಾದ ಪ್ರಾಮಾಣ್ಯವು ಅನಪನೋದಿತವಾಗುತ್ತದೆ ಅಂದರೆ ಅಪವಾದರಹಿತವಾಗುತ್ತದೆ. ಅಪವಾದವಿಲ್ಲದಿರುವಾಗ ಉತ್ಸರ್ಗವಿರುತ್ತದೆ ಎಂಬ ನ್ಯಾಯ ಪ್ರಸಿದ್ಧವಾಗಿದೆ. 'ನಯೋದಿತಃ' ಎಂದು ಪಾಠಾಂತರ. ಆಗ ಅಪವಾದವಿಲ್ಲದಿರುವಾಗ ಉತ್ಸರ್ಗವು ನಯದಿಂದ ಅಂದರೆ ಸ್ವಭಾವದಿಂದಲೇ ಉದಿತವಾಗುತ್ತದೆ. ಅದು ತೋರಲು ಬೇರೆ ಯಾವುದರ ಅಪೇಕ್ಷೆಯೂ ಇರುವುದಿಲ್ಲವೆಂದರ್ಥ. ಏತನ್ಮೂಲಕವಾಗಿಯೇ ಇತರರಿಗೆ ಗುಣ, ಅಥವಾ ದೋಷಾಭಾವವು ಪ್ರಾಮಾಣ್ಯಕ್ಕೆ ಕಾರಣವಾಗುತ್ತದೆಯೆಂಬ ಭ್ರಮೆಯುಂಟಾಗಿದೆ. ಹೀಗೆ ಪ್ರಾಮಾಣ್ಯೋತ್ಪತ್ತಿಯಲ್ಲಿ ಸ್ವತಸ್ತ್ವವನ್ನು ಹೇಳಿ ಈಗ ಜ್ಞಪ್ತಿಯಲ್ಲಿಯೂ ಸ್ವತಸ್ತ್ವವನ್ನು ಸಾಧಿಸುತ್ತಾನೆ.

ತಥಾ ಪ್ರಮಾಜ್ಞಪ್ತಿರಪಿ ಜ್ಞಾನಜ್ಞಾಪಕಸಾಮಗ್ರೀತ ಏವ ಜಾಯತೇ ನ ಚ ಸಂಶಯಾನುದಯ ಪ್ರಸಂಗೋ ಬಾಧಕ ಇತಿ ಯುಕ್ತಂ ವಕ್ತುಮ್ । ಸತ್ಯಪಿ ಪ್ರತಿಭಾಸಪುಷ್ಕಲಕಾರಣೇ ಪ್ರತಿಬಂಧಕದೋಷಾದಿ ಸಮವಧಾನಾತ್ತದುತ್ಪತ್ತೇಃ । ಕಿಂ ಚ ತಾವಕಮನುಮಾನಂ ಸ್ವತಃ ಪ್ರಮಾಣಂ ನ ವಾ । ಆದ್ಯೇನೈಕಾಂತಿಕತಾ । ದ್ವಿತೀಯೇ ತಸ್ಯಾ ಪರತಃ ಪ್ರಾಮಾಣ್ಯಮೇವಂ ತಸ್ಯ ತಸ್ಯಾಪೀತ್ಯನವಸ್ಥಾ ದುರವಸ್ಥಾ ಸ್ಯಾತ್ ॥

ಪ್ರಮಾಜ್ಞಪ್ತಿಯೆಂದರೆ ಪ್ರಾಮಾಣ್ಯದ ಜ್ಞಾನ. ಪ್ರಾಮಾಣ್ಯಕ್ಕೆ ಆಶ್ರಯವಾಗಿರುವ ಜ್ಞಾನವು ಯಾವ ಸಾಧನಾ ಸಾಮಗ್ರಿಯಿಂದ ತಿಳಿಯಲ್ಪಡುತ್ತದೆಯೋ ಅದೇ ಸಾಧನದಿಂದ ತದ್ಗತಪ್ರಾಮಾಣ್ಯವೂ ತಿಳಿಯಲ್ಪಡುತ್ತದೆ. ಅಲ್ಲಿ ಅದಕ್ಕಿಂತಲೂ ಅತಿರಿಕ್ತವಾದ ಅನುಮಾನಾದಿಗಳ ಅಪೇಕ್ಷೆ ಇರುವುದಿಲ್ಲ. 'ನ ಚ'—ಇತಿ. ಹೀಗೆ ಹೇಳಿದರೆ ಸಂಶಯ ಹುಟ್ಟದಿರುವುದೇ ಬಾಧಕವಾಗುತ್ತದಷ್ಟೆ ಎಂದು ಶಂಕಿಸಬಾರದು. 'ಸತ್ಯಪಿ' — ಇತಿ. ಪ್ರತಿಭಾಸಾದಿಪುಷ್ಕಲಕಾರಣಗಳಿದ್ದರೂ ಪ್ರತಿಬಂಧಕವಾದ ದೋಷಾದಿಗಳಿದ್ದರೆ ಸಂಶಯ ಹುಟ್ಟಿಯೇ ಹುಟ್ಟುತ್ತದೆ. ಪ್ರಾಮಾಣ್ಯ ಜ್ಞಾನವನ್ನು ಕುರಿತು ದೋಷಾದಿಗಳು ಪ್ರತಿಬಂಧಕವಾಗುತ್ತದೆಂದು ಮೀಮಾಂಸಕರ ಸಿದ್ಧಾಂತ. 'ಕಿಂ ಚ'—ನಿನ್ನ ಅನುಮಾನವು ಅಂದರೆ ಉದಯನಾಚಾರ್ಯರಿಂದ ಹಿಂದೆ ಹೇಳಿದ ಪರತಸ್ತ್ವ ಸಾಧಕಾನುಮಾನವು ಸ್ವತಃ ಪ್ರಮಾಣವೇ ಅಥವಾ ಪರತಃ ಪ್ರಮಾಣವೇ ? ಸ್ವತಃ ಪ್ರಮಾಣವೆಂದರೆ ಪ್ರಾಮಾಣ್ಯವು ಪರತೋಗ್ರಾಹ್ಯವೆಂದು ನಿನಗೆ ಅಭಿಮತವಷ್ಟೆ. ಅದು ವ್ಯಭಿಚರಿತವಾದಂತಾಗುತ್ತದೆ. ಪರತಃ ಪ್ರಮಾಣವೆಂದರೆ ಅದಕ್ಕೊಂದು ಪ್ರಮಾಣವೆಂದು ಕಲ್ಪಿಸುತ್ತಾ ಹೋಗಬೇಕಾದುದರಿಂದ ಅನವಸ್ಥೆ ಬರುತ್ತದೆ. 'ದುರವಸ್ಥಾ'—ಇತಿ. ಸುವರ್ಣರಜತಾದಿ ಇಷ್ಟಸಾಧನ ವಸ್ತು ದರ್ಶನವಾದಾಗ ನೋಡಿದೊಡನೆಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಗೆದುಕೊಳ್ಳಲು ಓಡುತ್ತಾನೆ. ಮಧ್ಯದಲ್ಲಿ ಅನುಮಾನಮಾಡಿ ನಿಶ್ಚಯವನ್ನು ಸಂಪಾದಿಸಿ ಆಮೇಲೆ ಪ್ರವೃತ್ತಿ ಎಲ್ಲಿಯೂ ದೃಷ್ಟವಾಗಿಲ್ಲ. ಪರತಃ ಪ್ರಾಮಾಣ್ಯವೆಂದು ಹೇಳುವುದಾದರೆ ತತ್ ಕ್ಷಣದಲ್ಲಿ ಪ್ರವೃತ್ತಿಯುಂಟಾಗದೇ ಹೋಗಬೇಕಾಗುತ್ತದೆ. ಆದುದರಿಂದ ಸ್ವತಃ ಪ್ರಾಮಾಣ್ಯವನ್ನೇ ಸ್ವೀಕರಿಸಬೇಕು.

ಯದತ್ರ ಕುಸುಮಾಂಜಲಾವುದಯನೇನ ಝಟಿತಿ ಪ್ರಚುರಪ್ರವೃತ್ತೇಃ ಪ್ರಾಮಾಣ್ಯನಿಶ್ಚಯಾಧೀನತ್ವಾಭಾವಮಾಪಾದಯತಾ ಪ್ರಣ್ಯಗಾದಿ । ಪ್ರವೃತ್ತಿರ್ಹೀಚ್ಛಾಮಪೇಕ್ಷತೇ ತತ್ಪ್ರಾಚುರ್ಯಂ ಚೇಚ್ಛಾಪ್ರಾಚುರ್ಯಮ್। ಇಚ್ಛಾ ಚೇಷ್ಟಸಾಧನತಾಜ್ಞಾನಮ್ । ತಚ್ಚೇಷ್ಟ ಜಾತೀಯತ್ವಲಿಂಗಾನುಭವಮ್ । ಸೋಽಪೀಂದ್ರಿಯಾರ್ಥ ಸಂನಿಕರ್ಷಮ್ । ಪ್ರಾಮಾಣ್ಯ ಗ್ರಹಣಂ ತು ನ ಕ್ವಚಿದುಪಯುಜ್ಯತೇ ಇತಿ । ತದಪಿ ತಸ್ಕರಸ್ಯ ಪುರಸ್ತಾತ್ ಕಕ್ಷೇ ಸುವರ್ಣಮುಪೇಕ್ಷ್ಯ ಸರ್ವಾಂಗೋದ್ಘಾಟನಮಿವ ಪ್ರತಿಭಾತಿ । ಯತಃ ಸಮೀಹಿತ ಸಾಧನತಾಜ್ಞಾನಮೇವ ಪ್ರಮಾಣತಯಾವಗಮ್ಯಮಾನಮಿಚ್ಛಾಂಜನಯತೀತ್ಯತ್ರೈವ ಸ್ಫುಟ ಏವ ಪ್ರಾಮಾಣ್ಯಗ್ರಹ್ಯಸ್ಯೋಪಯೋಗಃ । ಕಿಂ ಚ ಕ್ವಚದಪಿ ಚೇನ್ನಿರ್ವಿಚಿಕಿತ್ಸಾ ಪ್ರವೃತ್ತಿಃ ಸಂಶಯಾದುಪಪದ್ಯೇತ ತರ್ಹಿ ಸರ್ವತ್ರ ತಥಾಭಾವ ಸಂಭವಾತ್ ಪ್ರಾಮಾಣ್ಯ ನಿಶ್ಚಯೋ ನಿರರ್ಥಕಃ ಸ್ಯಾತ್ । ತಥೋಕ್ತಂ—ಅನಿಶ್ಚಿತಸ್ಯ ಸತ್ವಮೇವ ದುರ್ಲಭಮಿತಿ । ಯದಿ ಸತ್ವಂ ಸುಲಭಂ ಭವೇತ್ ತದಾ ಪ್ರಾಮಣ್ಯಂ ದತ್ತಜಲಾಂಜಲಿಕಂ ಭವೇ ದಿತ್ಯಲಮತಿಪ್ರಪಂಚೇನ ॥

ನೈಯಾಯಿಕರು ಎಲ್ಲಾ ಕಡೆಗಳಲ್ಲಿಯೂ ಪ್ರವೃತ್ತಿಯನ್ನು ಕುರಿತು ಜ್ಞಾನ ಪ್ರಾಮಾಣ್ಯನಿಶ್ಚಯ ಕಾರಣವೆಂದು ಹೇಳುವುದಿಲ್ಲ. ಪ್ರಾಮಾಣ್ಯನಿಶ್ಚಯವಿಲ್ಲದಿದ್ದರೂ ಪ್ರವೃತ್ತಿ ಬಂದೇ ಬರುತ್ತದೆ. ಹೀಗೆಯೇ ಅನುಭವದಲ್ಲಿಯೂ ತಿಳಿಯಬೇಕು. ಇದನ್ನೇ ಉದಯನರು ಹೇಳಿದುದನ್ನು ಅನುವಾದ ಮಾಡಿ ಖಂಡಿಸುತ್ತಾರೆ. 'ಯದತ್ರ'—ಇತಿ. ಝಟಿತಿ (ವೇಗವಾದ) ಪ್ರವೃತ್ತಿಗೆ ಪ್ರಾಮಾಣ್ಯನಿಶ್ಚಯಾಧೀನತ್ವವಿಲ್ಲ. ಪ್ರವೃತ್ತಿಗೆ ಇಚ್ಛೆ ಬೇಕು. 'ತತ್'—ಇತಿ. ಪ್ರವೃತ್ತಿ ಪ್ರಾಚುರ್ಯವು ಇಚ್ಛಾಪ್ರಾಚುರ್ಯವನ್ನಪೇಕ್ಷಿಸುತ್ತದೆ. ಹೇಗೆ ಹೇಗೆ ಇಚ್ಛೆ ಅಧಿಕವಾಗುತ್ತದೆಯೋ ಹಾಗೆ ಹಾಗೆ ತದನುಸಾರವಾಗಿ ಪ್ರವೃತ್ತಿಯು ವೇಗವಾಗಿ ಬಲವಾಗುತ್ತದೆ. ಇಚ್ಛೆಯು ಇಷ್ಟಸಾಧನತಾಜ್ಞಾನವನ್ನಪೇಕ್ಷಿಸುತ್ತದೆ. ಇಷ್ಟಸಾಧನತಾಜ್ಞಾನವು ಇಷ್ಟಜಾತೀಯಲಿಂಗಾನುಭವವನ್ನಪೇಕ್ಷಿಸುತ್ತದೆ. ಅನುಭವವೂ ಇಂದ್ರಿಯಾರ್ಥಸಂನ್ನಿಕರ್ಷವನ್ನಪೇಕ್ಷಿಸುತ್ತದೆ. ಎಲ್ಲಿಯೂ ಪ್ರಾಮಾಣ್ಯ ಗ್ರಹಣದ ಅಪೇಕ್ಷೆ ಇರುವುದಿಲ್ಲವೆಂದು ತಾರ್ಕಿಕರ ಸಿದ್ಧಾಂತವೆಂದು ಉದಯನರು ಹೇಳಿರುತ್ತಾರೆ. 'ತದಪಿ'—ಇತಿ. ಇದೂ ಕೂಡಾ ಕಳ್ಳನ ಮುಂದೆ ಬಗಲಲ್ಲಿ ಚಿನ್ನವನ್ನಿಟ್ಟುಕೊಂಡು ಎಲ್ಲಾ ಅವಯವಗಳನ್ನು ತೋರಿಸಿದಂತೆ ತೋರುತ್ತದೆ. ಏಕೆಂದರೆ ಇಷ್ಟಸಾಧನತಾಜ್ಞಾನವೇ ಪ್ರಮಾಣತ್ವೇನ ಜ್ಞಾತವಾಗಿ ಇಚ್ಛೆಯನ್ನು ಹುಟ್ಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವುದಾದುದರಿಂದ ಪ್ರಾಮಾಣ್ಯಜ್ಞಾನದ ಉಪಯೋಗವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ನಿರ್ವಿಚಿಕಿತ್ಸಾ=ಸಂಶಯರಹಿತಾ (ನಿಶ್ಚಿತವಾದ ಎಂದರ್ಥ). ಸಂಶಯದಿಂದ ಹುಟ್ಟುವ ಪ್ರವೃತ್ತಿಗೆ ಒಂದಾದರೂ ಉದಾಹರಣೆ ನಿಶ್ಚಿತವಾಗಿದ್ದರೆ ಆಗ ಎಲ್ಲಾ ಕಡೆಯೂ ಹಾಗೆ ಅಂಗೀಕರಿಸಿ ಪ್ರಾಮಾಣ್ಯನಿಶ್ಚಯ ವ್ಯರ್ಥವೆಂದು ಹೇಳಬಹುದಿತ್ತು. ಆದರೆ ಎಲ್ಲಿಯೂ ಸಂಶಯದಿಂದ ಪ್ರವೃತ್ತಿ ಬರುವುದಿಲ್ಲ. ಅನಿಶ್ಚಿತ ವಸ್ತುವಿನಲ್ಲಿ ಸತ್ತ್ವವಿರುವುದಿಲ್ಲ. ಸತ್ತ್ವ ಸುಲಭವಾಗಿದ್ದರೆ ಪ್ರಾಮಣ್ಯ ವ್ಯರ್ಥವೆಂದು ಹೇಳಬಹುದಿತ್ತು. ಹಾಗೆ ಎಲ್ಲಿಯೂ ಇಲ್ಲವೆಂದು ಕಾರಿಕೆಯಿಂದಲೂ ವ್ಯಕ್ತಪಡಿಸುತ್ತಾನೆ.

ಯಸ್ಮಾದುಕ್ತಮ್—
ತಸ್ಮಾತ್ ಸದ್ಬೋಧಕತ್ವೇನ ಪ್ರಾಪ್ತಾ ಬುದ್ಧೇಃ ಪ್ರಮಾಣತಾ ||
ಅರ್ಥಾನ್ಯಥಾತ್ವಹೇತೂತ್ಥದೋಷ ಜ್ಞಾನಾದಪೋದ್ಯತೇ || ಇತಿ ||

ಸದ್ವಸ್ತು ಬೋಧಕವಾದುದರಿಂದ ಬುದ್ಧಿಗೆ ಪ್ರಾಮಾಣ್ಯವಿರುತ್ತದೆ. ಅರ್ಥಸ್ಯ—ಶುಕ್ತ್ಯಾದಿಗಳಿಗೆ, ಅನ್ಯಥಾತ್ವಂ—ರಜತರೂಪದಿಂದ ಅವಭಾಸನವು, ಹೇತೂತ್ಥ—ಅದರ ಹೇತುವಿನಿಂದ ಉಂಟಾದ, ದೋಷಜ್ಞಾನಾತ್—ಯಾವ ದೋಷಜ್ಞಾನವಿದೆಯೋ ಅದರಿಂದ ಪ್ರಾಮಾಣ್ಯವು ಹುಟ್ಟುವುದಿಲ್ಲವೆಂದರ್ಥ.

ತಸ್ಮಾದ್ಧರ್ಮೇ ಸ್ವತಃಸಿದ್ಧಪ್ರಮಾಣಭಾವೇ ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತೇತ್ಯಾದಿ ವಿಧ್ಯರ್ಥವಾದ ಮಂತ್ರನಾಮಧೇಯಾತ್ಮಕೇವೇದೇ ಯಜೇತೇತ್ಯತ್ರ ತಪ್ರತ್ಯಯಃ ಪ್ರಕೃತ್ಯರ್ಥೋಪರಕ್ತಾಂ ಭಾವನಾಮಭಿಧತ್ತೇ ಇತಿ ಸಿದ್ಧೇ ವ್ಯುತ್ಪತ್ತಿಮಭ್ಯುಪಗಚ್ಛತಾಮಭಿಹಿತಾನ್ವಯವಾದಿನಾಂ ಭಟ್ಟಾಚಾರ್ಯಾಣಾಂ ಸಿದ್ಧಾಂತಃ | ಯಾಗವಿಷಯಂ ನಿಯೋಗಮಿತಿಕಾರ್ಯೇ ವ್ಯುತ್ಪತ್ತಿಮನುಸರತಾಮನ್ವಿತಾಭಿಧಾನವಾದಿನಾಂ ಪ್ರಭಾಕರಗುರೂಣಾಂ ಸಿದ್ಧಾಂತ ಇತಿ ಸರ್ವಮವದಾತಮ್ ||

ಇತಿ ಶ್ರೀಮತ್ಸಾಯಣಮಾಧವೀಯೇಸರ್ವದರ್ಶನ ಸಂಗ್ರಹೇ ಜೈಮಿನಿದರ್ಶನಮ್

'ತಸ್ಮಾತ್'—ಇತಿ. ಧರ್ಮದಲ್ಲಿ ಸ್ವತಃ ಸಿದ್ಧ ಪ್ರಾಮಾಣ್ಯವು ಹೀಗೆ ನಿರ್ಣೀತವಾದ ಮೇಲೆ ವೇದವಿಭಾಗವನ್ನು ತೋರಿಸುತ್ತಾನೆ. ಅಜ್ಞಾತಾರ್ಥಜ್ಞಾಪಕ ವೇದ ಭಾಗಕ್ಕೆ ವಿಧಿಯೆಂದು ಹೆಸರು. ಅಗ್ನಿಹೋತ್ರಂ ಜುಹುಯಾತ್ ಸ್ವರ್ಗಕಾಮಃ' ಇದು ಪ್ರಮಾಣಾಂತರದಿಂದ ಅಪ್ರಾಪ್ತವಾದ ಸ್ವರ್ಗಪ್ರಯೋಜನವುಳ್ಳ ಹೋಮವನ್ನು ವಿಧಿಸುತ್ತದೆ. 'ಅಗ್ನಿಹೋತ್ರಹೋಮೇನ ಸ್ವರ್ಗಂ ಭಾವಯೇತ್' ಎಂದು ವಾಕ್ಯಾರ್ಥವಾಗುತ್ತದೆ. ಪ್ರಾಶಸ್ತ್ಯ ಅಥವಾ ನಿಂದಾಪರವಾದ ವಾಕ್ಯವೇ ಅರ್ಥವಾದ. "ವಾಯುರ್ವೈ ಕ್ಷೇಪಿಷ್ಠಾದೇವತಾ" (ತೈ. ಸಂ. ೨-೧-೧) ಈ ಅರ್ಥವಾದ ವಾಕ್ಯವು ವಾಯು ದೇವತಾಸ್ತುತಿ ಮೂಲಕವಾಗಿ 'ವಾಯುವ್ಯಂ ಶ್ವೇತಮಾಲಭೇತ' ಎಂಬ ವಿಧಿಗೆ ಪ್ರಾಶಸ್ತ್ಯ

CC-0. In.Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ತಿಳಿಸುತ್ತದೆ. 'ಸೋರೋದೀತ್ ತದ್ರುದ್ರಸ್ಯ ರುದ್ರತ್ವಂ' ಎಂಬ ಅರ್ಥವಾದ ವಾಕ್ಯವು ರೋದನದಿಂದ ರಜತೋತ್ಪತ್ತಿಯನ್ನು ತಿಳಿಸುವುದರ ಮೂಲಕ ಯಾಗದಲ್ಲಿ ರಜತವನ್ನು ಕೊಡಬಾರದೆಂದು ನಿಷೇಧಿಸುತ್ತಾ ರಜತನಿಂದೆಯನ್ನು ಮಾಡತ್ತದೆ. "ಪ್ರಯೋಗ ಸದುವೇತಾರ್ಥಸ್ಮಾರಕವೇದಭಾಗಃ ಮಂತ್ರಃ" ಸ್ಯೋನಂ ತೇ ಸದನಂ ಕೃಣೋಮಿ" (ತೈ-ಬ್ರಾ-೩೯ ll) ಇಲ್ಲಿ ಪುರೋಡಾಶಕ್ಕೆ ಸುಖಕರಾಸನಪ್ರಕಾಶನ ರೂಪಾರ್ಥ ಪ್ರಕಾಶನದ ಮೂಲಕ ಯಜ್ಞಾದಿ ಕರ್ಮಗಳಲ್ಲಿ ಉಪಯೋಗ ತಿಳಿಸುತ್ತದೆ. ಅರ್ಥವು ಮಂತ್ರದಿಂದಲೇ ಸ್ಮರಿಸಲ್ಪಡಬೇಕು. ಬೇರೆ ಯಾವುದರಿಂದಲೂ ಸ್ಮರಿಸಲ್ಪಡ ಬಾರದು ಎಂಬ ನಿಯಮವನ್ನಾಶ್ರಯಿಸುವುದರಿಂದ ಮಂತ್ರಕಥನಕ್ಕೆ ವೈಯರ್ಥ್ಯವಿರುವು ದಿಲ್ಲ. 'ಉದ್ಭಿದಾಯಜೇತ' ಇತ್ಯಾದಿ ವಾಕ್ಯಗಳಲ್ಲಿ ಉದ್ಭಿದಾದಿ ಶಬ್ದಗಳು ಯಾಗ ವಿಶೇಷನಾಮಧೇಯಪ್ರಕಾಶಕತ್ವಗಳಾಗುತ್ತವೆ. ವಿಧಿಯು ಶಾಬ್ದೀಭಾವನೆಯೆಂದೇ ಕುಮಾರಿಲರ ಮತ. ಆರ್ಥೀಭಾವನೆಯೂ ತಪ್ರತ್ಯಯ ವಾಚ್ಯವಾಗುತ್ತದೆ. ಯಜೇತ ಎಂಬಲ್ಲಿ ಯಜಧಾತು ಪ್ರಕೃತಿ. ಯಾಗವು ಅದರ ಅರ್ಥ. "ಯಾಗ ವಿಷಯಿಣೀ ಪ್ರವೃತ್ತಿಃ ಆರ್ಥೀಭಾವನಾ" ತಾದೃಶಾರ್ಥಭಾವನಾಫಲಿಕಾ" ಶಾಬ್ದೀಭಾವನಾ ಸಾಚ ಶ್ರುತಿಕರ್ತೃಕಪ್ರೇರಣಾರೂಪಾ ಭವತಿ)

'ಸಿದ್ಧೀ'—ಇತಿ. ಅನಿತ್ವಾಭಿಧಾನವಾದಿಗಳು ಪ್ರಾಭಾಕರ ಗುರುಗಳು. ಅಭಿ ಹಿತಾನ್ವಯವಾದಿಗಳು ಕುಮಾರಿಲಭಟ್ಟರು. ಮೊದಲಿನವರ ಸಿದ್ಧಾಂತ ಹೀಗೆ ವಿವೃತ ವಾಗಿದೆ. ಶಕ್ತಿಗ್ರಾಹಕಗಳಲ್ಲಿ ವೃದ್ಧವ್ಯವಹಾರವು ಮುಖ್ಯವಾಗಿದೆ. ವೃದ್ಧವ್ಯವಹಾರ ಹಿಂದೆ ಗವಾದಿಪದಗಳಿಗೆ ಕಾರ್ಯಾನ್ವಿತ ಗವಾದ್ಯರ್ಥಗಳಲ್ಲಿಯೇ ಶಕ್ತಿಗ್ರಹವುಂಟಾಗುತ್ತದೆ. ಕೇವಲ ಗವಾರ್ಥದಲ್ಲಾಗಲೀ ಇತರಾನ್ವಿತದಲ್ಲಾಗಲೀ ಎಂದು ಶಕ್ತಿಗ್ರಹವಿಲ್ಲ. ಏಕೆಂದರೆ ವಿಧಿಗೆ ವಿಷಯವಾದ ಆನಯನ ಕ್ರಿಯಾನ್ವಿತಗೋವನ್ನು ನೋಡಿಯೇ ಶಕ್ತಿಗ್ರಹವುಂಟಾಗು ತ್ತದೆ. ವಿಧಿಯೆಂದರೆ ನಿಯೋಗ. ಶಾಬ್ದೀಭಾವನೆಯಲ್ಲ. ಒಂದಕ್ಕೆ ಒಂದು ಕರ್ಮದಲ್ಲಿ ವಿನಿಯೋಗವೇ ನಿಯೋಗ. ಇಂತಹ ವಿಧಿಗೆ ವಿಷಯವಾದ ಆನಯನ ಕ್ರಿಯೆಯಲ್ಲಿ ನೀ ಧಾತುವಿಗೆ ಶಕ್ತಿ. ಇಂತಹ ಆನಯನಕ್ರಿಯಾನ್ವಿತವಾದ ಗವಾದ್ಯರ್ಥಗಳಲ್ಲಿ ಗವಾದಿ ಪದಗಳಿಗೆ ಶಕ್ತಿ. ಹೀಗೆ ಎಲ್ಲಾ ಪದಗಳಿಗೂ ಕಾರ್ಯಾನ್ವಿತಾರ್ಥದಲ್ಲಿಯೇ ಶಕ್ತಿ ಹೇಳ ಬೇಕು. ಸಿದ್ಧ ವಾಕ್ಯದಲ್ಲಿ ಕಾರ್ಯಾಂಶವಿಲ್ಲದಿರುವುದರಿಂದ ಎಲ್ಲಾಕಡೆ ಅವಶ್ಯವಾಗಿ ಲಕ್ಷಣೆಯನ್ನನುಸರಿಸಬೇಕು ಎಂದು ಅವರ ಸಿದ್ಧಾಂತ. ಆದರೆ ಕುಮಾರಿಲರು ಇದನ್ನು ಅಂಗೀಕರಿಸುವುದಿಲ್ಲ. ಕಾರ್ಯನ್ವಿತರ್ಥದಲ್ಲಿ ಮೊದಲು ಶಕ್ತಿಗ್ರಹವುಂಟಾದರೂ ಆಮೇಲೆ ಕಾರ್ಯಾಂಶವನ್ನು ಬಿಡಬೇಕಾಗುತ್ತದೆ. ಎಲ್ಲಾ ಕಡೆ ಸಿದ್ಧವಾಕ್ಯಗಳಲ್ಲಿ ಲಕ್ಷಣಾಶ್ರಯಣ ಯುಕ್ತವಲ್ಲ. ಅಗತಿಕವಾಗಿ ಸ್ವೀಕರಿಸಬೇಕೆಂಬ ಗುರುಗಳ ವಾದವೂ ಸರಿಯಲ್ಲ. ಯಾರಿಗೂ ಅಂತಹವಾಕ್ಯಗಳಲ್ಲಿ ಲಕ್ಷಣಾಜ್ಞಾನವೇ ಬರುವುದಿಲ್ಲ. ಅದೂ ಅಲ್ಲದೆ ಮುಖ್ಯಾರ್ಥಬಾಧಾದಿಲಕ್ಷಣಾಹೇತುಗಳಿಲ್ಲದೆ ಲಕ್ಷಣಾ ಎನ್ನುವುದು ಯುಕ್ತ ವಲ್ಲ. ಕಾರ್ಯಾಂಶ ತ್ಯಾಗ ಮಾಡಿದಂತೆ ಆಮೇಲೆ ಅನ್ವಯಾಂಶವನ್ನೂ ಬಿಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕು. ಏಕೆಂದರೆ ಅದು ಆಕಾಂಕ್ಷಾಯೋಗ್ಯತಾದಿಗಳಿಂದ ಬರುವುದರಿಂದ ಅನ್ಯಲಭ್ಯವಾಗುತ್ತದೆ. ಅನನ್ಯಲಭ್ಯವೇ ಶಬ್ದಾರ್ಥವೆಂದು ಸಿದ್ಧಾಂತ. ಆದುದರಿಂದ ಅನ್ವಯಾಂಶರಹಿತವಾಗಿಯೇ ಶಬ್ದಗಳಿಂದ ಸ್ವಾರ್ಥಗಳು ಅಭಿಹಿತವಾಗುತ್ತವೆ. ಅಭಿಹಿತವಾದ ಮೇಲೆ ಅವುಗಳಿಗೆ ಆಕಾಂಕ್ಷಾದಿಗಳಿಂದ ಅನ್ವಯ ಬರುತ್ತದೆಂದು ಅಭಿಹಿತಾನ್ವಯವಾದಿಗಳ ಸಿದ್ಧಾಂತ. "ಯಾಗವಿಷಯಂ ನಿಯೋಗಂ ತತ್ಪ್ರತ್ಯಯಃ ಅಭಿಧತ್ತೇಃ" ಎಂದು ವಾಕ್ಯಪೂರ್ತಿಮಾಡಿಕೊಳ್ಳಬೇಕು. ಅನ್ವಿತವಾದ ಅರ್ಥವನ್ನೇ ಶಬ್ದವು ತಿಳಿಸಿಕೊಡುತ್ತದೆಂದು ಅನ್ವಿತಾಭಿಧಾನವಾದಿಗಳ ಮತ.

ಜೈಮಿನಿದರ್ಶನ ಕನ್ನಡವ್ಯಾಖ್ಯಾನ ಸಮಾಪ್ತವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಪಾಣಿನಿದರ್ಶನಮ್ ॥ ೧೩ ॥

ನನ್ವಯಂ ಪ್ರಕೃತಿಭಾಗಃ, ಅಯಂ ಪ್ರತ್ಯಯಭಾಗ ಇತಿ ಪ್ರಕೃತಿಪ್ರತ್ಯಯ ವಿಭಾಗಃ ಕಥಮವಗಮ್ಯತ ಇತಿ ಚೇತ್—ಪೀತ ಪಾತಂಜಲಜಲಾನಾಮೇತಚ್ಚೋದ್ಯಂ ಚಮತ್ಕಾರಂ ನ ಕರೋತಿ । ವ್ಯಾಕರಣಶಾಸ್ತ್ರಸ್ಯ ಪ್ರಕೃತಿಪ್ರತ್ಯಯ ವಿಭಾಗ ಪ್ರತಿಪಾದನ ಪರತಯಾ ಪ್ರಸಿದ್ಧತ್ವಾತ್ । ತಥಾಹಿ ಪತಂಜಲೇರ್ಭಗವತೋ ಮಹಾಭಾಷ್ಯಕಾರಸ್ಯೇದಮಾದಿಮಂ ವಾಕ್ಯಂ ಅಥ ಶಬ್ದಾನುಶಾಸನಮ್ (ಪಾ-ಮ-ಭಾ-೧-೧-೧) ಇತಿ । ಅಸ್ಯಾರ್ಥಃ-ಅಥೇತ್ಯಯಂ ಶಬ್ದೋಽಧಿಕಾರಾರ್ಥಃ ಪ್ರಯುಜ್ಯತೇ । ಅಧಿಕಾರಃ ಪ್ರಸ್ತಾವಃ । ಪ್ರಾರಂಭ ಇತಿ ಯಾವತ್ । ಶಬ್ದಾನುಶಾಸನಶಬ್ದೇನ ಚ ಪಾಣಿನಿಪ್ರಣೀತಂ ವ್ಯಾಕರಣಶಾಸ್ತ್ರಂ ವಿವಕ್ಷ್ಯತೇ । ಶಬ್ದಾನುಶಾಸನಮಿತ್ಯೇತಾವತ್ಯಭಿಧೀಯಮಾನೇ ಸಂದೇಹಃ ಸ್ಯಾತ್ । ಕಿಂ ಶಬ್ದಾನುಶಾಸನಂ ಪ್ರಸ್ತೂಯತೇ ನವೇತಿ । ತಥಾ ಮಾ ಪ್ರಸಾಂಕ್ಷೀದಿತ್ಯಥಶಬ್ದಂ ಪ್ರಾಯುಙ್ಕ್ತ । ಅಥ ಶಬ್ದಪ್ರಯೋಗಬಲೇನಾರ್ಥಾಂತರವ್ಯುದಾಸೇನ ಪ್ರಸ್ತೂಯತ ಇತ್ಯಸ್ಯಾಭಿಧೀಯಮಾನತ್ವಾತ್ । ಅನೇನ ಹಿ ವೈದಿಕಾಃ ಶಬ್ದಾಃ 'ಶಂ ನೋ ದೇವೀರಭಿಷ್ಟಯೇ' (ಅಥರ್ವಸಂ-೧-೧) ಇತ್ಯಾದಯಸ್ತದುಪಕಾರಿಣೋ ಲೌಕಿಕಾಃ ಶಬ್ದಾ ಗೌರಶ್ವಃ ಪುರುಷೋ ಹಸ್ತೀ ಶಕುನಿರಿತ್ಯಾದಯಶ್ಚಾನುಶಿಷ್ಯಂತೇ ವ್ಯುತ್ಪಾದ್ಯ ಪ್ರಕ್ರಿಯಂತೇ ಪ್ರಕೃತಿಪ್ರತ್ಯಯವಿಭಾಗವತ್ತಯಾ ಬೋಧ್ಯಂತ ಇತಿ ಶಬ್ದಾನುಶಾಸನಮ್ ॥

ಒಂದು ಪದದಲ್ಲಿ ಇದು ಪ್ರಕೃತಿಭಾಗ, ಇದು ಪ್ರತ್ಯಯಭಾಗವೆಂದು ತಿಳಿಯುವುದು ಹೇಗೆ ? ಎಂದರೆ ಪಾತಂಜಲ ಜಲ (ರೂಪಕ)ಪಾನಮಾಡಿದವರಿಗೆ ಇದೊಂದು ದೊಡ್ಡ ಪ್ರಶ್ನೆಯಾಗುವುದಿಲ್ಲ. ಅಂದರೆ ಮಹಾಭಾಷ್ಯಾದಿಗಳನ್ನು ಓದಿದ ವೈಯಾಕರಣನಿಗೆ ಇದು ಪ್ರಶ್ನೆಯೇ ಅಲ್ಲವೆಂದು ತಾತ್ಪರ್ಯ. ಪ್ರಕೃತಿಪ್ರತ್ಯಯ ವಿಭಾಗಗಳನ್ನು ಪ್ರತಿಪಾದನಮಾಡುವುದೇ ವ್ಯಾಕರಣಶಾಸ್ತ್ರವಾಗಿದೆ. ಪೂಜ್ಯರಾದ ಪತಂಜಲಿ ಮುನಿಗಳು ತಮ್ಮ ಮಹಾಭಾಷ್ಯದಲ್ಲಿ 'ಅಥ ಶಬ್ದಾನುಶಾಸನಂ' ಎಂದು ಪ್ರಾರಂಭಿಸಿರುತ್ತಾರೆ. ಹೀಗೆ ಮೊದಲು ಹೇಳಿ ಆ ವಾಕ್ಯಕ್ಕೆ ತಾವೇ ವ್ಯಾಖ್ಯಾನಮಾಡಿರುತ್ತಾರ. "ಸೂತ್ರಾರ್ಥೋ ವರ್ಣ್ಯತೇ ಯತ್ರ ವಾಕ್ಯೈಃ ಸೂತ್ರಾನುಸಾರಿಭಿಃ । ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ" ಎಂದು ಭಾಷ್ಯಲಕ್ಷಣ ಹೇಳುತ್ತಾರೆ. ಕೈಯಟರೂ "ತಮ್ಮ ವಾಕ್ಯವನ್ನು ವ್ಯಾಖ್ಯಾನಮಾಡಲು ತದವಯವವಾದ ಅಥಶಬ್ದದ ವ್ಯಾಖ್ಯಾನವನ್ನು ಮಾಡುತ್ತಾರೆ" ಎಂದು ಹೇಳಿರುತ್ತಾರೆ. ಅಥಶಬ್ದವು ಅಧಿಕಾರವನ್ನು ಅಂದರೆ ಪ್ರಸ್ತಾವ ಅಂದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರಂಭವನ್ನು ತಿಳಿಸುತ್ತದೆ. ಪಾಣಿನಿ ಹೇಳಿರುವ ವ್ಯಾಕರಣಶಾಸ್ತ್ರವೇ ಶಬ್ದಾನುಶಾಸನ ಶಬ್ದದಿಂದ ವಿವಕ್ಷಿತವಾಗಿದೆ. ಕೇವಲ ಶಬ್ದಾನುಶಾಸನವೆಂದು ಹೇಳಿದರೆ ಸಂದೇಹ ಬರುತ್ತದೆ. ಏನು ? ಶಬ್ದಾನುಶಾಸನವು ಪ್ರಾರಂಭಿಸಲ್ಪಡುವುದೇ ? ಇಲ್ಲವೇ? ಎಂದು ವಿಕಲ್ಪ ಬರಬಹುದಾದುದರಿಂದ ಅದನ್ನು ಹೋಗಲಾಡಿಸಲು ಅಥಶಬ್ದವನ್ನು ಪ್ರಯೋಗಿಸಿರುತ್ತಾರೆ. ಕ್ರಿಯಾಪದವಿಲ್ಲದೆ ವಾಕ್ಯಪೂರ್ತಿಯಾಗುವುದಿಲ್ಲ. ಆಗ ಕಿಂ ಪ್ರಸ್ತೂಯತೇ? (ಪ್ರಾರಭ್ಯತೇ) ಅಥವಾ ಅನ್ಯತ್ ಪ್ರಸ್ತೂಯತೇ ? ಎಂದು ಸಂದೇಹ ಬರುತ್ತದೆ. ಅಥಶಬ್ದವನ್ನು ಪ್ರಯೋಗಿಸಿದಾಗ ಅದು ಪ್ರಾರಂಭಾರ್ಥವನ್ನು ತಿಳಿಸಿಕೊಡುವುದರಿಂದ ಅದಕ್ಕೆ ಅನುಗುಣವಾಗಿ 'ಪ್ರಸ್ತೂಯತೇ' ಎಂಬುದನ್ನು ಮಾತ್ರ ಅಧ್ಯಾಹಾರಮಾಡಿಕೊಳ್ಳುತ್ತೇವೆ. ಸ್ತವನಾದಿಗಳನ್ನು ಅಧ್ಯಾಹಾರಮಾಡಿಕೊಂಡು ವಾಕ್ಯ ಪರಿಪೂರ್ತಿ ಹೇಳಬಾರದೆಂದರ್ಥ. ಶಬ್ದಾನುಶಾಸನಶಬ್ದಕ್ಕೆ ವ್ಯುತ್ಪತ್ತಿಪ್ರದರ್ಶನಪೂರ್ವಕವಾಗಿ ಅದಕ್ಕೆ ವ್ಯಾಕರಣಾರ್ಥವನ್ನು ಸಾಧಿಸುತ್ತಾನೆ. 'ಅನೇನ'—ಇತಿ. ಶಬ್ದಾಃ ಅನುಶಿಷ್ಯಂತೇ ಅನೇನ ಇತಿ ಶಬ್ದಾನುಶಾಸನಂ—ವ್ಯಾಕರಣಶಾಸ್ತ್ರ. ಇದರಿಂದ 'ಶಂನೋ ದೇವೀ'—ಇತ್ಯಾದಿ ವೈದಿಕಶಬ್ದಗಳೂ ಅದಕ್ಕೆ ಉಪಕಾರಕವಾದ ಗೌಃ, ಅಶ್ವಃ ಇತ್ಯಾದಿ ಲೌಕಿಕಶಬ್ದಗಳೂ ಅನುಶಾಸನಮಾಡಲ್ಪಡುತ್ತವೆ. ಅರ್ಥಪ್ರಕಾಶನದ್ವಾರಾ ಉಪಕಾರಕಗಳೆಂದು ತಿಳಿಯಬೇಕು. ವೃದ್ಧವ್ಯವಹಾರಾದಿ ಶಕ್ತಿಗ್ರಾಹಕಪ್ರಮಾಣ ಲೋಕದಲ್ಲಿ ಶಬ್ದಶಕ್ತಿಯನ್ನು ನಿಶ್ಚಯಿಸಿ ತದನುಸಾರವಾಗಿ "ಲೋಕಾವಗತಸಾಮರ್ಥ್ಯಃ ಶಬ್ದೋ ವೇದೇಽಪಿ ಬೋಧಕಃ" ಎಂಬ ನ್ಯಾಯದಂತೆ ವೈದಿಕಶಬ್ದಾರ್ಥಬೋಧದಲ್ಲಿ ಪ್ರವೃತ್ತವಾಗುತ್ತದೆ. ಲೋಕದಿಂದ ನಿಶ್ಚಿತವಾದ ಪದಶಕ್ತಿ ಮತ್ತು ಪದಾರ್ಥಯೋಗ್ಯತೆಯನ್ನೂ ಸ್ವೀಕರಿಸಿಯೇ ವೇದಪ್ರಚಾರವಾಗಬೇಕು. ವ್ಯುತ್ಪಾದನೆ ತೋರಿಸಿ ಸಂಸ್ಕರಿಸುವುದು ಅಂದರೆ ಪ್ರಕೃತಿ ಪ್ರತ್ಯಯ ವಿಭಾಗಪೂರ್ವಕವಾಗಿ ಬೋಧಿಸುವುದು ಶಬ್ದಾನುಶಾಸನ.

ಅಥ ಕೇಚಿತ್ ಪರ್ಯನುಯುಂಜತೇ– ಅನುಶಾಸಿಕ್ರಿಯಾಯಾಃ ಸಕರ್ಮಕತ್ವಾತ್ ಕರ್ಮಭೂತಸ್ಯ ಶಬ್ದಸ್ಯ ಕರ್ತೃಭೂತಸ್ಯಾಚಾರ್ಯಸ್ಯ ಪ್ರಾಪ್ತೌ ಸತ್ಯಾಮುಭಯಪ್ರಾಪ್ತೌ ಕರ್ಮಣಿ (ಪಾ–ಸೂ ೨-೩-೬೬) ಇತ್ಯನುಶಾಸನಬಲಾತ್ ಕರ್ಮಣ್ಯೇಷಾ ಷಷ್ಠೀ ವಿಧಾತವ್ಯಾ । ತಥಾ ಚ 'ಕರ್ಮಣಿಚ' (ಡಾ–ಸೂ೨-೨-೧೪) ಇತಿ ಸಮಾಸಪ್ರತಿಷೇಧಸಂಭವಾತ್ ಶಬ್ದಾನುಶಾಸನಶಬ್ದಃ ನ ಪ್ರಮಾಣಪಥಮವತರತೀತಿ । ಅತ್ರಾಯಂ ಸಮಾಧಿರಭಿಧೀಯತೇ – ಯಸ್ಮಿನ್ ಕೃತ್ ಪ್ರತ್ಯಯೇ ಕರ್ತೃಕರ್ಮಣೋರುಭಯೋಃ ಪ್ರಾಪ್ತಿರಸ್ತಿ ತತ್ರ ಕರ್ಮಣ್ಯೇವ ಷಷ್ಠೀವಿಭಕ್ತಿರ್ಭವತಿ ನ ಕರ್ತರೀತಿ ಬಹುವ್ರೀಹಿವಿಜ್ಞಾನಬಲಾನ್ನಿಯಮ್ಯತೇ । ತದ್ಯಥಾಶ್ಚರ್ಯೋಗವಾಂ ದೋಹೋಽಶಿಕ್ಷಿತೇನ ಗೋಪಾಲಕೇನ ಇತಿ । ಶಬ್ದಾನುಶಾಸನಮಿತ್ಯತ್ರ ನ ಶಬ್ದಾನಾಮನುಶಾಸನಂ ನಾರ್ಥಾನಾಮಿತ್ಯೇತಾವತೋ ವಿವಕ್ಷಿತಸ್ಯಾರ್ಥಸ್ಯಾಚಾರ್ಯಸ್ಯ ಕರ್ತುರುಪಾದಾನೇನ ವಿನಾಪಿ ಸುಪ್ರತಿಪಾದಿತತ್ವಾದಾಚಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರ್ಯೋಪಾದಾನ ಮಕಿಂಚಿತ್ಕರಮ್ ‖ ತಸ್ಮಾದುಭಯಪ್ರಾಪ್ತೇರಭಾವಾದುಭಯ ಪ್ರಾಪ್ತೌ ಕರ್ಮಣೀತ್ಯೇಷಾ ಷಷ್ಠೀ ನ ಭವತಿ। ಕಿಂ ತು 'ಕರ್ತೃಕರ್ಮಣೋಃ ಕೃತಿ' (ಪಾ-ಸೂ-೨-೩-೬೫) ಇತಿ ಕೃದ್ಯೋಗೇ ಕರ್ತರಿ ಕರ್ಮಣಿ ಚ ಷಷ್ಠೀವಿಭಕ್ತಿರ್ಭವತೀತಿ ಕೃದ್ಯೋಗಲಕ್ಷಣಾ ಷಷ್ಠೀ ಭವಿಷ್ಯತಿ । ತಥಾ ಚೇಧ್ಮ ಪ್ರವಶ್ಚನ ಪಲಾಶ ಶಾತನಾದಿವತ್ ಸಮಾಸೋ ಭವಿಷ್ಯತಿ ‖

ಕೆಲವರು ಇಲ್ಲಿ ಪ್ರಶ್ನಿಸುತ್ತಾರೆ. 'ಶಬ್ದಾನುಶಾಸನಂ' ಎಂಬ ರೂಪವಾಗುವುದಿಲ್ಲ. ಅನುಶಾಸನಕ್ರಿಯೆಯ ಸಕರ್ಮಕವಾಗಿದೆ. ಶಬ್ದವು ಇಲ್ಲಿ ಕರ್ಮ. ಆಚಾರ್ಯನೇ ಕರ್ತೃ. ಆಗ 'ಉಭಯಪ್ರಾಪ್ತೌ ಕರ್ಮಣಿ' ಸೂತ್ರದಿಂದ ಕರ್ಮಭೂತವಾದ ಶಬ್ದದಮೇಲೆ ಷಷ್ಠೀಬರುತ್ತದೆ. ಕೃದಂತಯೋಗವಿರುವಾಗ (ಕೃತ್ ಪ್ರತ್ಯಯಾರ್ಥದಲ್ಲಿ) ಕರ್ತೃ ಕರ್ಮ ಎರಡೂ ಬಂದಾಗ ಕರ್ಮವಾಚಕವಾದುದರಮೇಲೆಯೇ ಷಷ್ಠೀ ಎಂದು ಸೂತ್ರಾರ್ಥ. ಯದ್ಯಪಿ ಇಲ್ಲಿ ಕರ್ಮ ಒಂದೇ ಇದೆ. ಕರ್ತೃವಾಚಕಪದವಿಲ್ಲ. ಆದರೂ ಧಾತು ಸಕರ್ಮಕವಾದುದರಿಂದ ಉಭಯಪ್ರಸಂಗವಿರುವುದರಿಂದ ಈ ಸೂತ್ರದಿಂದ ಷಷ್ಠೀ ಬಂದರೆ 'ಶಬ್ದಾನಾಂ ಅನುಶಾಸನಂ' ಎಂದಾಗುತ್ತದೆ. ಆಗ 'ಕರ್ಮಣಿಚ' ಸೂತ್ರದಿಂದ ಷಷ್ಠೀ ಸಮಾಸನಿಷೇಧ ಬರುತ್ತದೆ. ಅಲ್ಲಿ ಚ ಶಬ್ದವು ಇತಿಶಬ್ದಾರ್ಥಕವಾಗಿದೆ. 'ಕರ್ಮಣಿ' ಎಂಬ ಶಬ್ದವನ್ನು ಉಚ್ಚರಿಸಿ ಎಲ್ಲಿ ಷಷ್ಠೀವಿಧಾನ ಮಾಡಿದೆಯೋ ಅಲ್ಲಿ ನಿಷೇಧವೆಂದು ಅರ್ಥವಾಗುವುದರಿಂದ, ಉಭಯಪ್ರಾಪ್ತೌ ಕರ್ಮಣಿ' ಸೂತ್ರದಿಂದ ವಿಹಿತವಾದ ಷಷ್ಠಿಯೇ ಆಗುತ್ತದೆ. ಹೀಗೆ ಸಮಾಸನಿಷೇಧ ಬರುತ್ತಿರುವಾಗ ಹೇಗೆ ಸಮಾಸನಿರ್ದೇಶಮಾಡಿದೆ? ಎಂದು ಪೂರ್ವಪಕ್ಷಿಯ ಅಭಿಪ್ರಾಯ. ಅದಕ್ಕೆ ಸಮಾಧಾನ. 'ಉಭಯಪ್ರಾಪ್ತೌ' ಎಂಬಲ್ಲಿ ವ್ಯಧಿಕರಣಪದಬಹುವ್ರೀಹಿ. "ಉಭಯೋಃ ಪ್ರಾಪ್ತಿರ್ಯಸ್ಮಿನ್ ಕೃತ್ ಪ್ರತ್ಯಯೇ". ಇತಿ. ಕರ್ತೃಕರ್ಮ ಉಭಯಪ್ರಾಪ್ತಿಯಿದ್ದರೇ ಕರ್ತೃಕರ್ಮಗಳೆರಡರ ಮೇಲೂ ಷಷ್ಠೀಪ್ರಾಪ್ತಿ ಇರುತ್ತದೆ. ಉಭಯಪ್ರಯೋಗವಿರುವಾಗ ಉಭಯಾರ್ಥಕಗಳ ಮೇಲೆ ಷಷ್ಠೀಪ್ರಾಪ್ತವಾದಾಗ ಕರ್ಮವಾಚಕದ ಮೇಲೆ ಮಾತ್ರ ಷಷ್ಠೀ, ಕರ್ತೃವಾಚಕದ ಮೇಲೆ ಬರುವುದಿಲ್ಲವೆಂದು 'ಉಭಯ'—ಸೂತ್ರಹೇಳುತ್ತದೆ. 'ಆಶ್ಚರ್ಯಃ'—ಎಂಬುದು ಉದಾಹರಣೆ. ಆಶ್ಚರ್ಯ ಪ್ರತಿಪಾದ್ಯವಿಷಯ. ಆದುದರಿಂದ ಅಲ್ಲಿ 'ಅಗೋಪೇನ' ಎಂದು ಅವಶ್ಯವಾಗಿ ಕರ್ತೃಪದ ಹೇಳಬೇಕು. ಎರಡೂ ಉಪಾತ್ತವಾದುದರಿಂದ ಅಲ್ಲಿ ಕರ್ಮದ ಮೇಲೆ ಷಷ್ಠೀ ಬಂದಿದೆ. ಪ್ರಕೃತ ಶಬ್ದಗಳ ಅನುಶಾಸನ. "ನ ಅರ್ಥಾನಾಂ"—ಅರ್ಥಾನುಶಾಸನವಲ್ಲವೆಂದು ಮಾತ್ರ ವಿವಕ್ಷಿತವಾದುದರಿಂದ ಆಚಾರ್ಯರೂಪಕರ್ತೃವಿಗೆ ಉಪಾದಾನವಿಲ್ಲದಿದ್ದರೂ ನಿರ್ವಾಹವಾಗುವುದರಿಂದ ಆಚಾರ್ಯ ಕರ್ತೃ ಹೇಳಿಲ್ಲ. ಉಭಯ ಪ್ರಾಪ್ತಿ ಇಲ್ಲದಿರುವಾಗ ಅಸೂತ್ರ ಪ್ರವರ್ತಿಸುವುದಿಲ್ಲ. ಆಗ 'ಕರ್ತೃಕರ್ಮಣೋಃ ಕೃತಿ' ಸೂತ್ರದಿಂದ ಕೃದ್ಯೋಗಲಕ್ಷಣ ಷಷ್ಠೀಪ್ರಾಪ್ತವಾಗುತ್ತದೆ. ಅದು ಪ್ರತಿಪದವಿಧಾನ ಷಷ್ಠಿಯಾಗದಿರುವುದರಿಂದ ಸಮಾಸನಿಷೇಧ ಬರುವುದಿಲ್ಲ. ಉದಾ:—ಇಧ್ಮಪ್ರವ್ರಶ್ಚನಃ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಲಾಶಶಾತನಂ ಕರ್ಮಷಷ್ಠ್ಯಂತ ಇಧ್ಮಶಬ್ದಕ್ಕೆ ಪ್ರವೃಶ್ಚನಶಬ್ದದೊಡನೆ ಸಮಾಸ. ಇದರಂತೆ ಶಬ್ದಾನುಶಾಸನಂ ಎಂಬುದೂ ತಿಳಿಯಬೇಕು.

ಕರ್ತರ್ಯಪಿ ಷಷ್ಠೀ ಭವತೀತಿ ಕೇಚಿತ್ ಬ್ರುವತೇ । ಅತ ಏವೋಕ್ತಂ ಕಾಶಿಕಾವೃತ್ತೌ ಕೇಚಿದವಿಶೇಷೇಣೈವ ವಿಭಾಷಾಮಿಚ್ಛಂತಿ ಶಬ್ದಾನಾಮನುಶಾಸನಮಾಚಾರ್ಯೇಣಾಚಾರ್ಯಸ್ಯ ವೇತಿ । ಅಥ ವಾ ಶೇಷಲಕ್ಷಣೇಯಂ ಷಷ್ಠೀ । ತತ್ರ ಕಿಮಪಿ ಚೋದ್ಯಂ ನಾವತರತ್ಯೇವ । ಯದ್ಯೇವಂ ತರ್ಹಿ ಶೇಷಲಕ್ಷಣಾಯಾಃ ಷಷ್ಠ್ಯಾಃ ಸರ್ವತ್ರ ಸುವಚತ್ವಾತ್ ಷಷ್ಠೀಸಮಾಸಪ್ರತಿಷೇಧಸೂತ್ರಾಣಾಮಾನರ್ಥಕ್ಯಂ ಪ್ರಾಪ್ನುಯಾದಿತಿ ಚೇತ್ ಸತ್ಯಂ— ತೇಷಾಂ ಸ್ವರಚಿಂತಾಯಾ ಮುಪಯೋಗೋ ವಾಕ್ಯಪದೀಯೇ ಹರಿಣಾ ಪ್ರಾದರ್ಶಿ । ತದಾಹ ಮಹೋಪಾಧ್ಯಾಯವರ್ಧಮಾನಃ—

ಲೌಕಿಕವ್ಯವಹಾರೇಷು ಯಥೇಷ್ಟಂ ಚೇಷ್ಟತಾಂ ಜನಃ ।
ವೈದಿಕೇಷು ತು ಮಾರ್ಗೇಷು ವಿಶೇಷೋಕ್ತಿಃ ಪ್ರವರ್ತತಾಮ್ ।
ಇತಿ ಪಾಣಿನಿಸೂತ್ರಾಣಾ ಮರ್ಥವತ್ತ್ವಮಸೌ ಯತಃ ।
ಜನಿಕರ್ತುರಿತಿ ಬ್ರೂತೇ ತತ್ಪ್ರಯೋಜಕ ಇತ್ಯಪಿ ॥ ಇತಿ ॥

ತಥಾ ಚ ಶಬ್ದಾನುಶಾಸನಮಪರನಾಮಧೇಯಂ ವ್ಯಾಕರಣಶಾಸ್ತ್ರಮಾರಬ್ಧಂ ವೇದಿತವ್ಯಮಿತಿವಾಕ್ಯಾರ್ಥಃ ಸಂಪದ್ಯತೇ ॥

ಆವಶ್ಯಕಾರ್ಥದಲ್ಲಿ ಪ್ರಾಮಾಣ್ಯವಿಲ್ಲ. ಅನಾವಶ್ಯಕ ಸ್ಥಲದಲ್ಲಿಯೂ ಎರಡರ ಪ್ರಯೋಗವಿರುವಾಗ ಸೂತ್ರವು ಪ್ರವರ್ತಿಸುತ್ತದೆ ಎಂದು ಅರ್ಥ ವಿವರಿಸುವುದಾದರೆ ಆಗ ಆಚಾರ್ಯಪದಾಧ್ಯಾಹಾರದಿಂದ ಉಭಯಪ್ರಾಪ್ತಿ ಇರುವುದರಿಂದ ಷಷ್ಠೀ ಬಂದು "ಕರ್ಮಣಿಚ" ಸೂತ್ರದಿಂದ ನಿಷೇಧ ಬರುತ್ತದೆಂದು ಹೇಳುವುದಾದರೆ ಆಗ ಬೇರೆ ಸಮಾಧಾನ ತೋರಿಸುತ್ತಾನೆ. "ಕೇಚಿತ್—" ಇತಿ. ಪ್ರಕೃತಸೂತ್ರವು ಕರ್ತೃವಿಗೂ ಷಷ್ಠಿ ಹೇಳುತ್ತದೆ. ಅಲ್ಲಿ ಅದಕ್ಕೆ ಅಪವಾದವಾಗಿ—" ಸ್ತ್ರೀ ಪ್ರತ್ಯಯಯೋರಕಾಕಾರಯೋರ್ನಾಯಂ ನಿಯಮಃ" ಎಂಬ ವಚನ ಹೇಳಿದೆ "ಭೇದಿಕಾ, ಬಿಭಿತ್ಸಾ ವಾ ಜಗತಃ ರುದ್ರಸ್ಯ" ಉದಾಹರಣೆ. ಭೇದಿಕಾ ಎಂಬಲ್ಲಿ ಭಿದಧಾತುವಿಗೆ ಭಾವಾರ್ಥದಲ್ಲಿ ಅಕಪ್ರತ್ಯಯ. ಬಿಭಿತ್ಸಾ ಎಂಬಲ್ಲಿ ಬಿಭಿತ್ಸ ಎಂಬ ಸನ್ನಂತದಮೇಲೆ ಭಾವಾರ್ಥದಲ್ಲಿ ಅಕಾರರೂಪಪ್ರತ್ಯಯ. 'ಸ್ತ್ರಿಯಾಂಕ್ತಿನ್' ಅಧಿಕಾರದಲ್ಲಿ ಇವು ವಿಹಿತವಾದುದರಿಂದ ಸ್ತ್ರೀ ಪ್ರತ್ಯಯಗಳಾಗುತ್ತವೆ. ಇಲ್ಲಿ 'ಕರ್ಮಣ್ಯೇವ' ಎಂಬ ನಿಯಮವಿಲ್ಲದಿರುವುದರಿಂದ ಜಗತಃ ಎಂಬ ಕರ್ಮದ ಮೇಲೆಯೂ 'ರುದ್ರಸ್ಯ' ಎಂಬ ಕರ್ತೃಮೇಲೆಯೂ ಷಷ್ಠೀ ಬಂದಿದೆ. ಆಮೇಲೆ "ಶೇಷೇ ವಿಭಾಷಾ" ಎಂದು ಎರಡನೆಯ ಅಪವಾದವಚನ. "ಸ್ತ್ರೀಪ್ರತ್ಯಯೇ" ಎಂಬುದು ಹಿಂದಿನಿಂದ ಅನುವೃತ್ತವಾಗಿ ಸಂಬಂಧ ಹೊಂದುತ್ತದೆ. ಅಕಕಾರವ್ಯತಿರಿಕ್ತಸ್ತ್ರೀಪ್ರತ್ಯಯದಲ್ಲಿಯೂ ಉಭಯಪ್ರಾಪ್ತಿನಿಯಮವು ಬರುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎರಡರ ಮೇಲೆಯೂ ಷಷ್ಠೀ ಬರುತ್ತದೆ. ಆದರೆ ಕರ್ತರಿಷಷ್ಠಿಯು ವಿಕಲ್ಪವೆಂದು ತಿಳಿಯಬೇಕು. ಉದಾ:— 'ವಿಚಿತ್ರಾ ಜಗತಃ ಕೃತಿರ್ಹರೇರ್ಹರಿಣಾ ವಾ'. ಇಲ್ಲಿ ಕೆಲವರು ದ್ವಿತೀಯವಚನದಲ್ಲಿ ಸ್ತ್ರೀಪ್ರತ್ಯಯ ಸಂಬಂಧವನ್ನುಹೇಳದೇ ಅವಿಶೇಷವಾಗಿ ಅಕಾಕಾರವ್ಯತಿರಿಕ್ತಭಾವಪ್ರತ್ಯಯಸಾಮಾನ್ಯದಲ್ಲಿ ವಿಕಲ್ಪವನ್ನು ಹೇಳುತ್ತಾರೆ. ಆಗ 'ಶಬ್ದಾನಾಮನುಶಾಸನಂ ಆಚಾರ್ಯೇಣ, ಆಚಾರ್ಯಸ್ಯ ವಾ' ಎಂದು ಕರ್ತೃವಾಚಕದ ಮೇಲೆ ವಿಕಲ್ಪಷಷ್ಠೀ ಬರುತ್ತದೆ. ಉಭಯಪ್ರಾಪ್ತಿನಿಯಮ ವಿಲ್ಲದಿರುವುದರಿಂದ ಸಮಾಸನಿಷೇಧ ಬರುವುದಿಲ್ಲ.

'ಅಥವಾ—' ಇತಿ. 'ಷಷ್ಠೀಶೇಷೇ' ಸೂತ್ರದಿಂದಲೇ ಷಷ್ಠೀ ಬರುತ್ತದೆಂದರ್ಥ. 'ರಾಜ್ಞಃ ಪುರುಷಃ' ಉದಾಹರಣೆ. ಕಾರಕಪ್ರತಿಪಾದಿಕಾರ್ಥವ್ಯತಿರಿಕ್ತವಾದ ಸ್ವಸ್ವಾಮಿಭಾವಾದಿಸಂಬಂಧವೇ ಶೇಷಪದಾರ್ಥ. ವಸ್ತುತಃ ಕರ್ಮಾದಿಗಳಾಗಿದ್ದರೂ ಕರ್ಮತ್ವಾದಿ ವಿವಕ್ಷಾಮಾಡದೆ ಸಂಬಂಧತ್ವವಿವಕ್ಷಾಮಾಡಿದಾಗ ಇದರಿಂದ ಷಷ್ಠೀ. ಇದರಿಂದ "ಗ್ರಾಮಸ್ಯ ಗಚ್ಛತಿ' ಎಂದೂ ಆಗುತ್ತದೆ. ಇಲ್ಲಿಯೂ ಶಬ್ದಕ್ಕೆ ಕರ್ಮತ್ವವಿವಕ್ಷಾ ಇಲ್ಲದಿರುವುದರಿಂದ ಇದರಿಂದ ಷಷ್ಠೀ ಬಂದು ಉಭಯಪ್ರಾಪ್ತಿನಿಯಮ ಪ್ರವರ್ತಿಸದಿರುವುದರಿಂದ ಸಮಾಸನಿಷೇಧ ಬರುವುದಿಲ್ಲ. 'ಯದ್ಯೇವಂ—' ಇತಿ. ಸಮಾಸನಿಷೇಧ ವಿಧಾಯಕಶಾಸ್ತ್ರವಿದ್ದರೂ 'ಗವಾಂ ದೋಹಃ' ಎಂಬಲ್ಲಿ ಕರ್ಮತ್ವಾವಿವಕ್ಷೆಯಿಂದ ಗವಾಂ ಎಂಬಲ್ಲಿ ಶೇಷಷಷ್ಠೀ ಬಂದು 'ಗೋದೋಹಃ' ಎಂದು ಸಮಾಸವಾಗುವುದಾದರೆ ಸಮಾಸನಿಷೇಧವ್ಯರ್ಥವಾಗುವುದಿಲ್ಲವೇ ಎಂದು ಆಶಂಕೆ. ಸ್ವರದಲ್ಲಿ ವ್ಯತ್ಯಾಸವೇ ಪ್ರಯೋಜನವೆಂದು ಸಮಾಧಾನ. "ಗೋದೋಹಃ" ಎಂದು ಶೇಷಷಷ್ಠೀ ಬಂದು ಸಮಾಸವಾದಾಗ "ಸಮಾಸಸ್ಯ" ಎಂದು ಅಂತೋದಾತ್ತಸ್ವರ ಬರುತ್ತದೆ. ಇದಕ್ಕೆ ಅಪವಾದವಾದ 'ಗತಿಕಾರಕೋಪಪದಾತ್ ಕೃತ್' ಸೂತ್ರವು ಇಲ್ಲಿ ಪ್ರವರ್ತಿಸುವುದಿಲ್ಲ. ಗತಿ ಕಾರಕ, ಉಪಪದಗಳ ಪರದಲ್ಲಿ ಕೃದಂತೋತ್ತರಪದಕ್ಕೆ ಪ್ರಕೃತಿಸ್ವರ ಬರುತ್ತದೆಂದು ಆ ಸೂತ್ರಕ್ಕೆ ಅರ್ಥ. ಕಾರಕವಿದ್ದರೂ ಶೇಷತ್ವವಿವಕ್ಷಾಮಾಡಿರುವುದರಿಂದ ಅದು ಪ್ರವರ್ತಿಸುವುದಿಲ್ಲ. (ಮಧ್ಯೋದಾತ್ತ ಸಮಸ್ತಪದವಾಗಬೇಕಾಗುತ್ತದೆ). ಸಮಾಸನಿಷೇಧವಿಲ್ಲದಿದ್ದರೆ ಕರ್ಮಷಷ್ಠ್ಯಂತ ಗೋಪದಕ್ಕೂ ದೋಹಶಬ್ದದೊಡನೆ ಸಮಾಸವಾಗಿ ಈ ಸೂತ್ರದಿಂದ ದೋಹಃ ಎಂಬ ಉತ್ತರಪದಕ್ಕೆ ಪ್ರಕೃತಿಸ್ವರವೇ ಬರಬೇಕಾಗುತ್ತದೆ. ಆದುದರಿಂದ ಸಮಾಸನಿಷೇಧವು ಸ್ವರವ್ಯತ್ಯಾಸಪ್ರಯೋಜಕವಾದುದರಿಂದ ಸಾರ್ಥಕವಾಗುತ್ತದೆ. 'ಲೌಕಿಕ—' ಇತಿ. ಲೋಕಪ್ರಯೋಗದಲ್ಲಿ ಸ್ವರಕ್ಕೆ ಆದರವಿರುವುದಿಲ್ಲ. ವೈದಿಕ ಪ್ರಯೋಗಗಳಲ್ಲಿ ಸ್ವರನಿಯಮವಿರುವುದರಿಂದ ಸಮಾಸನಿಷೇಧಶಾಸ್ತ್ರಾದಿವಿಶೇಷೋಕ್ತಿಯು ಸಾರ್ಥಕವಾಗುತ್ತದೆ. ಇದರಿಂದಲೇ ಆ ಸೂತ್ರಗಳಿಗೆ ಸಾರ್ಥಕ್ಯ ಹೇಳಬೇಕು. 'ತೃಜಕಾಭ್ಯಾಂ ಕರ್ತರಿ' ಎಂದು ಪಾಣಿನೀಯೇ ಸಮಾಸನಿಷೇಧ ಹೇಳಿ "ಜನಿಕರ್ತುಃ ಪ್ರಕೃತಿಃ' 'ತತ್ಪ್ರಯೋಜಕೋಹೇತುಶ್ಚ' ಎಂದು ತಾನೇ ಸಮಾಸಮಾಡಿ ಸೂತ್ರಗಳನ್ನು ನಿರ್ದೇಶಿಸಿರುತ್ತಾನೆ. ಆದುದರಿಂದ ವೈದಿಕಪ್ರಯೋಗಗಳಲ್ಲಿ ಸ್ವರವಿಶೇಷಸಿದ್ಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಸ್ಕರವೇ ಅವು ಹೇಳಿವೆಯೆಂದು ತಿಳಿಯಬೇಕು. ಪ್ರಕೃತ ಶಬ್ದಾನುಶಾಸನವೆಂಬ ವ್ಯಾಕರಣಶಾಸ್ತ್ರವು ಆರಂಭಿಸಿದೆ ಎಂದು ವಾಕ್ಯಾರ್ಥವು ಪರ್ಯವಸನ್ನವಾಗುತ್ತದೆ.

ತಸ್ಯಾರ್ಥಸ್ಯ ಯಥಾಟೀತಿ ಪ್ರತಿಪತ್ತಯೇ ಅಥ ವ್ಯಾಕರಣಮಿತ್ಯೇವಾಭಿಧೀಯತಾಮ್ ।
ಅಥ ಶಬ್ದಾನುಶಾಸನಮಿತ್ಯಧಿಕಾಕ್ಷರಂ ಮುಧಾಭಿಧೀಯತ । ಇತಿ । ನೈವಮ್ ।
ಶಬ್ದಾನುಶಾಸನ ಮಿತ್ಯನ್ವರ್ಥಸಮಾಖ್ಯೋಪಾದಾನೇ ತದೀಯವೇದಾಂಗತ್ವಪ್ರತಿ
ಪಾದಕಪ್ರಯೋಜನಾನ್ವಾಖ್ಯಾನಸಿದ್ಧೇಃ । ಅನ್ಯಥಾ ಪ್ರಯೋಜನಾನಭಿಧಾನೇ
ವ್ಯಾಕರಣಾಧ್ಯಯನಾರ್ಥ್ಯೇಕ್ಷಣಾಂ ಪ್ರವೃತ್ತಿರೇವ ನ ಪ್ರಸೃಜೇತ್ । ನನು
ನಿಷ್ಕಾರಣೋಧರ್ಮಃ ಷಡಂಗೋ ವೇದೋಧ್ಯೇತವ್ಯ ಇತ್ಯಧ್ಯೇತವ್ಯತ್ವವಿಧಾನಾ
ದೇವಪ್ರವೃತ್ತಿಃ ಸೇತ್ಸ್ಯತೀತಿ ಚೇತ್ — ನೈವಮ್ । ತಥಾ ವಿಧಾನೇಽಪಿ
ತದೀಯವೇದಾಂಗತ್ವಪ್ರತಿಪಾದಕಪ್ರಯೋಜನಾನಭಿಧಾನೇ ತೇಷಾಂ ಪ್ರವೃತ್ತೇ
ರನುಪಪತ್ತೇಃ । ತಥಾ ಹಿ ಪುರಾ ಕಿಲ ವೇದಮಧೀತ್ಯಾಧ್ಯೇತಾರಸ್ತ್ವರಿತಂ
ವಕ್ತಾರೋ ಭವಂತಿ ॥
ವೇದಾನ್ನೋ ವೈದಿಕಾಃ ಶಬ್ದಾಃ ಸಿದ್ಧಾಃ ಲೋಕಾಚ್ಚ ಲೌಕಿಕಾಃ ॥ ತಸ್ಮಾ
ದನರ್ಥಕಂ ವ್ಯಾಕರಣ ಮಿತಿ ।

ವ್ಯಾಕರಣರೂಪಾರ್ಥವು ವ್ಯಾಕರಣಶಬ್ದದಿಂದ ಶೀಘ್ರವಾಗಿ ತಿಳಿಯುವಂತೆ ಶಬ್ದಾನುಶಾಸನ ಶಬ್ದದಿಂದ ಬೇಗ ತಿಳಿಯಲಾರದು. ಅದೂ ಅಲ್ಲದೆ ಅದು ಅಧಿಕಾಕ್ಷರ ದಿಂದ ಕೂಡಿದೆ. ಹೀಗಿರುವಾಗ ಅದು ನಿರರ್ಥಕವಲ್ಲವೇ ಎಂದು ಶಂಕೆ. 'ನೈವಂ' ಎಂದು ಸಮಾಧಾನ ತೋರಿಸುತ್ತಾನೆ. ಶಬ್ದಾನುಶಾಸನವೆಂಬ ಶಬ್ದವು ಅನ್ವರ್ಥಕ ವಾಗಿದೆ. ಅದು ವೈದಿಕಶಬ್ದಾರ್ಥಬೋಧಕವಾದುದರಿಂದ ವೇದಾಂಗವಾಗುತ್ತದೆ. ಈ ರೀತಿಯಾದ ಶಬ್ದಾರ್ಥಬೋಧಕತ್ವಧರ್ಮವು ಶಬ್ದಾನುಶಾಸನಶಬ್ದದಿಂದಮಾತ್ರ ತೋರುವುದಲ್ಲದೆ ವ್ಯಾಕರಣಪದದಿಂದ ತೋರುವುದಿಲ್ಲ. ಹೀಗೆ ವ್ಯಾಕರಣಕ್ಕೆ ಪ್ರಯೋಜನವು ಅದರಿಂದ ವ್ಯಕ್ತವಾಗುತ್ತದೆ. ಪ್ರಯೋಜನ ತೋರಿಸದಿದ್ದರೆ ಅದರಲ್ಲಿ ಓದುವವರಿಗೆ ಪ್ರವೃತ್ತಿಯುಂಟಾಗಲಾರದು. 'ನಿಷ್ಕಾರಣಃ—' ಎಂಬ ವಿಧಿವಾಕ್ಯದಿಂದ ಷಡಂಗವೇದಾಧ್ಯಯನದಲ್ಲಿ ಪ್ರವೃತ್ತಿಯುಂಟಾದರೂ ವ್ಯಾಕರಣಕ್ಕೆ ವೇದಾಂಗತ್ವ ವಿದೆಯೆಂದು ತಿಳಿಯದೆ ಅದರಲ್ಲಿ ಪ್ರವೃತ್ತಿಯುಂಟಾಗುವುದು ದುರ್ಲಭವೆಂದು ತಾತ್ಪರ್ಯ. ವೇದಾಂಗತ್ವಬೋಧಕತ್ವವೇ ಪ್ರಯೋಜನ. ಅದನ್ನೇ ಪ್ರಕಾರಾಂತರದಿಂದ ವಿವರಿಸು ತ್ತಾನೆ. 'ತಥಾಹಿ—' ಇತಿ. ವೇದಾಧ್ಯಯನವೇ ಬಹುದಿವಸವಾಗುವುದರಿಂದ ವಿವಾಹವಾಗಲು ತ್ವರಿತರಾಗಿ ಅವರು ವೇದದಿಂದ ವೈದಿಕಶಬ್ದಗಳೂ, ಲೋಕವ್ಯವಹಾರ ದಿಂದ ಲೌಕಿಕಶಬ್ದಗಳೂ ತಿಳಿದುದರಿಂದ ಇನ್ನು ಶಬ್ದಜ್ಞಾನಕ್ಕೋಸ್ಕರ ವ್ಯಾಕರಣವನ್ನು ಏಕೆ ಓದಬೇಕೆಂದು ಕೇಳುತ್ತಾರೆ. ಆದುದರಿಂದ ವ್ಯಾಕರಣವು ವೇದಾಂಗವೆಂದು ತಿಳಿಸಿದರೆ ಓದಲೇಬೇಕೆಂದು ತಿಳಿದು ಮಧ್ಯದಲ್ಲಿ ಹೀಗೆ ಪ್ರಶ್ನೆಮಾಡಲು ಹೋಗುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಮಾದ್ವೇದಾಂಗತ್ವಂ ಮನ್ಯಮಾನಾಸ್ತದಧ್ಯಯನೇ ಪ್ರವೃತ್ತಿಮಕಾರ್ಷುಃ । ತತಶ್ಚೇದಾನೀಂತನಾನಾಮಪಿ ತತ್ರ ಪ್ರವೃತ್ತಿರ್ನ ಸಿಧ್ಯೇತ್ । ಸಾ ಮಾ ಪ್ರಸಾಂಕ್ಷೀದಿತಿ ತದೀಯವೇದಾಂಗತ್ವಪ್ರತಿಪಾದಕಂ ಪ್ರಯೋಜನಮನ್ವಾಖ್ಯೇಯಮೇವ । ಯದ್ಯನ್ವಾಖ್ಯಾತೇಪಿ ಪ್ರಯೋಜನೇ ನ ಪ್ರವರ್ತೇರನ್ ತರ್ಹಿ ಲೌಕಿಕಶಬ್ದಸಂಸ್ಕಾರಜ್ಞಾನರಹಿತಾಸ್ತೇ ಯಾಜ್ಞೇ ಕರ್ಮಣಿ ಪ್ರತ್ಯವಾಯಭಾಜೋ ಭವೇಯುಃ । ಧರ್ಮಾದ್ಧೀಯೇರನ್ । ಅತ ಏವ ಯಾಜ್ಞಿಕಾಃ ಪಠಂತಿ – ಆಹಿತಾಗ್ನಿರಪಶಬ್ದಂ ಪ್ರಯುಜ್ಯ ಪ್ರಾಯಶ್ಚಿತ್ತೀಯಾಂ ಸಾರಸ್ವತೀಮಿಷ್ಟಿಂ ನಿರ್ವಪೇದಿತಿ । ಅತಸ್ತದೀಯವೇದಾಂಗತ್ವಪ್ರತಿಪಾದನ ಪ್ರಯೋಜನಾನ್ವಾಖ್ಯಾನಾರ್ಥಂ 'ಅಥ ಶಬ್ದಾನುಶಾಸನಂ" ಇತ್ಯೇವ ಕಲ್ಪ್ಯತೇ ನಾಥ ವ್ಯಾಕರಣಮಿತಿ ಭಣತಿ । ಚ ಶಬ್ದಸಂಸ್ಕಾರೋ ವ್ಯಾಕರಣಶಾಸ್ತ್ರಸ್ಯ ಪ್ರಯೋಜನಮ್ । ತಸ್ಯ ತದುದ್ದೇಶೇನ ಪ್ರವೃತ್ತೇಃ । ಯಥಾ ಸ್ವರ್ಗೋದ್ದೇಶೇನ ಪ್ರವೃತ್ತಸ್ಯ ಯಾಗಸ್ಯ ಸ್ವರ್ಗಃ ಪ್ರಯೋಜನಮ್ । ತಸ್ಮಾತ್ ಶಬ್ದಾನುಶಿಷ್ಟಿಃ ಸಂಸ್ಕಾರಪದವೇದನೀಯಾ ಶಬ್ದಾನುಶಾಸನಸ್ಯ ಪ್ರಯೋಜನಮ್ ॥

ಹಿಂದಿನ ಕಾಲದವರೇ ಶಂಕೆ ಮಾಡಿರುವಾಗ ಈಗಿನವರು ಅದನ್ನೇ ವಾಸ್ತವವೆಂದು ತಿಳಿದು ವ್ಯಾಕರಣದಲ್ಲಿ ಪ್ರವೃತ್ತಿ ಹೊಂದದೇ ಹೋಗುತ್ತಾರೆ. ಹಾಗಾಗ ಬಾರದೆಂದು ವ್ಯಾಕರಣವು ವೇದಾಂಗವಾಗಿದೆಯೆಂದು ಅದರ ಪ್ರಯೋಜನವನ್ನು ಮೊದಲು ಹೇಳಬೇಕಾಗಿದೆ. ಸಂಸ್ಕಾರವೆಂದರೆ ಪ್ರಕೃತಿಪ್ರತ್ಯಯವ್ಯುತ್ಪಾದನ ಪ್ರತ್ಯವಾಯವೆಂದರೆ ಪಾಪ ಪ್ರಯೋಜನ ಹೇಳಿದರೂ ವ್ಯಾಕರಣಾಧ್ಯಯನದಲ್ಲಿ ಪ್ರವೃತ್ತಿ ಹೊಂದದಿದ್ದರೆ ಆಗ ಪ್ರಕೃತಿ ಪ್ರತ್ಯಯವ್ಯುತ್ಪಾದನಪೂರ್ವಕವಾಗಿ ಶಬ್ದಾರ್ಥಜ್ಞಾನವಾಗದಿರುವುದರಿಂದ ಯಜ್ಞ ಕರ್ಮಗಳಲ್ಲಿ ಪಾಪ ಹೊಂದುತ್ತಾರೆ. ಕೆಲವು ಸಮಯ ಅಶ್ವಶಬ್ದವನ್ನು ಪ್ರಯೋಗಿಸುವಾಗ ಅಸ್ವಶಬ್ದವನ್ನು ಪ್ರಯೋಗಿಸಿದರೆ ಆಗ ಅದು ಅಪಶಬ್ದವಾಗುತ್ತದೆ. ಅಪಸಬ್ದ ಪ್ರಯೋಗವೇ ಪಾಪಸಾಧಕವಾಗುತ್ತದೆ. ಇದರಿಂದ ಅವನು ಪ್ರಾಯಶ್ಚಿತ್ತಾರ್ಥವಾಗಿ ಸಾರಸ್ವತೀ ಇಷ್ಟಿಯನ್ನು ಅಧಿಕವಾಗಿ ಮಾಡಬೇಕಾಗುತ್ತದೆಂದು ಶಾಸ್ತ್ರದಲ್ಲಿ ವಿಹಿತವಾಗಿದೆ. ಪ್ರಾಯಃ ಅಂದರೆ ಪಾಪ. ಅದರ ವಿಶೋಧನವಾದ ಚಿತ್ತವೇ ಪ್ರಾಯಶ್ಚಿತ್ತವೆಂದು ಹೇಳಿದೆ. 'ತಸ್ಮೈಹಿತಂ'—ಸೂತ್ರದಿಂದ ಛ (ಈಯಾದೇಶ) ಪ್ರತ್ಯಯ ಬಂದು ಪ್ರಾಯಶ್ಚಿತ್ತೀಯಾ ಎಂದಾಗಿದೆ. ಸರಸ್ವತೀ ದೇವತಾಕವಾದ ಯಾಗಕ್ಕೆ ಸಾರಸ್ವತೀ ಎಂದು ಹೆಸರು. ಹೀಗೆ ಅಪಶಬ್ದ ಪ್ರಯೋಗ ಜನಿತವಾದ ಪಾಪವನ್ನು ಕಳೆದುಕೊಳ್ಳಲು. ಅವನು ಅಧಿಕವಾಗಿ ಈ ಇಷ್ಟಿಯನ್ನು ಮಾಡಬೇಕಾಗುತ್ತದೆ. 'ಅತಃ'—ಇತಿ. ಆದುದರಿಂದ ವ್ಯಾಕರಣವು ವೇದಾಂಗವಾದುದರಿಂದ ವೈದಿಕಶಬ್ದಾರ್ಥಬೋಧಕವಾಗಿ ಅದು ಸಾರ್ಥಕವೆಂದು ತಿಳಿಸಲು ಶಬ್ದಾನುಶಾಸನ ಶಬ್ದವನ್ನೇ ಪ್ರಯೋಗಿಸಿರುತ್ತಾನೆ. ವ್ಯಾಕರಣ ಪದ ಪ್ರಯೋಗದಿಂದ ಈ ಅರ್ಥ ತಿಳಿಯಲಾರದು. ಶಬ್ದ ಸಂಸ್ಕಾರವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಕರಣ ಶಾಸ್ತ್ರದ ಪರಮಪ್ರಯೋಜನ. ಸ್ವರ್ಗೋದ್ದೇಶದಿಂದ ಪ್ರವೃತ್ತವಾದ ಯಾಗಕ್ಕೆ ಸ್ವರ್ಗವು ಪ್ರಯೋಜನವಾದಂತೆ ಶಬ್ದಸಂಸ್ಕಾರಕ್ಕೋಸ್ಕರ ಪ್ರವೃತ್ತವಾದ ವ್ಯಾಕರಣ ಶಾಸ್ತ್ರಕ್ಕೆ ಶಬ್ದಸಂಸ್ಕಾರವೇ ಫಲವಾಗುತ್ತದೆ. ಆದುದರಿಂದ ಶಬ್ದಾನುಶಾಸನಕ್ಕೆ ಶಬ್ದಾನು ಶಿಷ್ಟಿ ಅಂದರೆ ಶಬ್ದ ಸಂಸ್ಕಾರವೇ ಪರಮಪ್ರಯೋಜನವೆಂದು ತಿಳಿಯಬೇಕು.

ನನ್ವೇವಮಪ್ಯಭಿಮತಂ ಪ್ರಯೋಜನಂ ನ ಲಭ್ಯತೇ । ತದುಪಾಯಾಭಾವಾತ್ । ಅಥ ಪ್ರತಿಪದಪಾಠ ಏವಾಭ್ಯುಪಾಯ ಇತಿ ಮನ್ಯೇಥಾಸ್ತರ್ಹಿಸ ಹ್ಯನಭ್ಯುಪಾಯಃ ಶಬ್ದಾನಾಂ ಪ್ರತಿಪತ್ತೌ ಪ್ರತಿಪದಪಾಠೋ ಭವೇತ್। ಶಬ್ದಾಪಶಬ್ದಭೇದೇನಾನಂತ್ಯಾಚ್ಚಶಬ್ದಾನಾಮ್ । ಏವಂ ಹಿ ಸಮಾಮ್ನಾಯತೇ। ಬೃಹಸ್ಪತಿರಿಂದ್ರಾಯ ದಿವ್ಯಂ ವರ್ಷ ಸಹಸ್ರಂ ಪ್ರದಿಪದಪಾಠವಿಹಿತಾನಾಂ ಶಬ್ದಾನಾಂ ಶಬ್ದಪರಾಯಣಂ ಪ್ರೋವಾಚ ನಾಂತಂ ಜಗಾಮ। ಬೃಹಸ್ಪತಿಶ್ಚ ಪ್ರವಕ್ತಾ ಇಂದ್ರೋಧ್ಯೇತಾ ದಿವ್ಯಂ ವರ್ಷಸಹಸ್ರಮಧ್ಯಯನಕಾಲಃ। ನ ಚ ಪಾರಾವಾಪ್ತಿರಭೂತ್ । ಕಿಮು ತಾದ್ಯ ಯಶ್ಚಿರಂ ಜೀವತಿ ಸ ವರ್ಷಶತಂ ಜೀವತಿ। ಅಧೀತಿಬೋಧಾಚರಣ ಪ್ರಚಾರಣೈಶ್ಚತುರ್ಭಿರ್ಹರ್ಪ್ರಕಾರೈರ್ವಿದ್ಯೋಪಯುಕ್ತಾ ಭವತಿ। ತತ್ರಾಧ್ಯಯನ ಕಾಲೇನೈವ ಸರ್ವಮಾಯುರುಪಯುಕ್ತಂ ಸ್ಯಾತ್ । ತಸ್ಮಾದನಭ್ಯುಪಾಯಃ ಶಬ್ದಾನಾಂ ಪ್ರತಿಪತ್ತೌ ಪ್ರತಿಪದಪಾಠ ಇತಿ ಪ್ರಯೋಜನಂ ನ ಸಿದ್ಯೇದಿತಿ ಚೇತ್—ನ್ನೈವಮ್ ॥

ಶಬ್ದಸಂಸ್ಕಾರವನ್ನು ತಿಳಿಸುವದು ಅಸಾಧ್ಯ. ಏಕೆಂದರೆ ಹಾಗೆ ತಿಳಿಸಲು ಯಾವ ಉಪಾಯವೂ ಇಲ್ಲ. ಪ್ರತಿಪದಪಾಠ ಅಂದರೆ ರಾಮಕೃಷ್ಣಾದಿ ಒಂದೊಂದು ಪದವನ್ನೂ ಪಾಠಮಾಡಿ ಸಾಧುತ್ವಬೋಧನಮಾಡುವುದೇ ಉಪಾಯವೆಂದರೆ ಅದೂ ಆಗಲಾರದು. ಶಬ್ದ, ಅಪಶಬ್ದಭೇದಗಳಿಂದ ಅವು ಅನಂತವಾಗಿರುತ್ತವೆ. ಇದಕ್ಕೆ ಇತಿಹಾಸ ತೋರಿಸುತ್ತಾನೆ. 'ಬೃಹಸ್ಪತಿಃ'—ಇತಿ. ಬೃಹಸ್ಪತಿಯು ಇಂದ್ರನಿಗೆ ಪ್ರತಿಪದಪಾಠ ಮೂಲಕವಾಗಿ ಶಬ್ದಶಾಸ್ತ್ರವನ್ನು ಹೇಳಿದನು. ಆದರೂ ಅದು ಕೊನೆಗೊಳ್ಳಲಿಲ್ಲ. ವ್ಯಾಕರಣ ಶಾಸ್ತ್ರರೂಪಾರ್ಥದಲ್ಲಿ ಶಬ್ದಪಾರಾಯಣ ಶಬ್ದವು ಯೋಗರೂಢವಾಗಿದೆ. ಶಬ್ದಾನಾಂ ಎಂಬುದು ಪ್ರತಿಪದಪಾಠ ವಿಹಿತತ್ವಬೋಧಕವಾಗಿದೆ. ಪಾರಾವಾಪ್ತಿಃ — ಪಾರಸ್ಯ ಅಂತಸ್ಯಾವಾಪ್ತಿಃ ಪ್ರಾಪ್ತಿಃ। ಈಗಿನವರು ಜೀವಿಸುವುದಾದರೂ ಹೆಚ್ಚೆಂದರೆ ನೂರುವರ್ಷ. ಅಧೀತಿಃ—ಗುರುಸಮೀಪದಿಂದ ಗ್ರಹಣ. ಬೋಧ—ಅಭ್ಯಾಸದಿಂದ ಅದರಚಿಂತನ. ಆಚರಣ—ಯಜ್ಞಾದಿಗಳಲ್ಲಿ ಅದರಂತೆ ಅನುಷ್ಠಾನಮಾಡುವುದು. ಪ್ರಚಾರಣ—ಶಿಷ್ಯರಿಗೆ ಅಧ್ಯಾಪನ ಮಾಡುವುದು. ಅಧ್ಯಯನ ಕಾಲದಲ್ಲಿಯೇ ಮಾನವನ ಆಯುಸ್ಸು ಕಳೆದುಹೋಗುತ್ತದೆ. 'ತಸ್ಮಾತ್' — ಇತಿ. ಪ್ರತಿಪಧ ಪಾಠರೂಪವಾದ ಉಪಾಯವು ಸಂಭವಿಸದಿರುವುದರಿಂದ ಶಬ್ದಸಂಸ್ಕಾರ ಸಿದ್ಧಿಯಾಗಲಾರದೆಂದು ಪೂರ್ವ ಪಕ್ಷ. 'ನೈವಂ' ಎಂದು ಸಮಾಧಾನ ತೋರಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಬ್ದಪ್ರತಿಪತ್ತೇಃ ಪ್ರತಿಪದಪಾಠಸಾಧ್ಯತ್ವಾನಂಗೀಕಾರಾತ್ । ಪ್ರಕೃತ್ಯಾದಿ ವಿಭಾಗ ಕಲ್ಪನಾವತ್ಸು ಲಕ್ಷ್ಯೇಷು ಸಾಮಾನ್ಯವಿಶೇಷರೂಪಾಣಾಂ ಲಕ್ಷಣಾನಾಂ ಪರ್ಜನ್ಯವತ್ ಸಕೃದೇವ ಪ್ರವೃತ್ತೌ ಬಹೂನಾಂ ಶಬ್ದಾನಾ ಮನುಶಾಸನೋಪಲಂಭಾಚ್ಚ । ತಥಾ ಹಿ । 'ಕರ್ಮಣ್ಯಣ್' (ಪಾ-ಸೂ ೩-೨-೧) ಇತ್ಯೇಕೇನ ಸಾಮಾನ್ಯರೂಪೇಣ ಲಕ್ಷಣೇನ ಕರ್ಮೋಪಪದಾತ್ ಧಾತುಮಾತ್ರಾತ್ ಅಣ್ ಪ್ರತ್ಯಯೇ ಕೃತೇ ಕುಂಭಕಾರಃ ಕಾಂಡಲಾವ ಇತ್ಯಾದೀನಾಂ ಬಹೂನಾಂ ಶಬ್ದಾನಾಂ ಅನುಶಾಸನಮುಪಲಭ್ಯತೇ । ಏವಂ 'ಆತೋಽನುಪಸರ್ಗೇ ಕಃ' (ಪಾ-ಸೂ ೩-೨-೩) ಇತ್ಯೇಕೇನ ವಿಶೇಷಲಕ್ಷಣೇನಾಕಾರಾಂತಾದ್ಧಾತೋಃ ಕಪ್ರತ್ಯಯೇ ಕೃತೇ ಧಾನ್ಯದೋ ಧನದಃ ಇತ್ಯಾದೀನಾಂಬಹೂನಾಂ ಶಬ್ದಾನುಶಾಸನಮುಪಲಭ್ಯತೇ । ಬೃಹಸ್ಪತಿರಿಂದ್ರಾಯೇತಿ ಪ್ರತಿಪದಪಾಠಸ್ಯಾಶಕ್ಯತ್ವಪ್ರತಿಪಾದನಪರೋಽರ್ಥವಾದಃ ॥

ಶಬ್ದಪ್ರತಿಪತ್ತಿಯೆಂದರೆ ಶಬ್ದಾರ್ಥಜ್ಞಾನ. ಇದಕ್ಕೆ ಪ್ರತಿಪದಪಾಠವು ಕಾರಣವೆಂದು ನಾವು ಅಂಗೀಕರಿಸುವುದಿಲ್ಲ. ಉಪಾಯ ಯಾವುದೆಂದು ತಿಳಿಸುತ್ತಾನೆ. 'ಪ್ರಕೃತ್ಯಾದಿ'—ಇತಿ. ಪ್ರಕೃತಿ ಪ್ರತ್ಯಯ ವಿಭಾಗಕಲ್ಪನೆಯಿರುವ ಲಕ್ಷ್ಯಗಳಲ್ಲಿ ಸಾಮಾನ್ಯವಿಶೇಷರೂಪಲಕ್ಷಣಗಳು ಮಳೆಯಂತೆ ಒಂದೇ ಸಾರಿ ಪ್ರವೃತ್ತವಾಗುತ್ತವೆ. ಇದರಿಂದ ಬಹುಶಬ್ದಸಂಸ್ಕಾರವುಂಟಾಗುತ್ತದೆ. 'ಕರ್ಮಣ್ಯಣ್' ಇದು ಸಾಮಾನ್ಯ ಸೂತ್ರ. ಕರ್ಮವಾಚಕ ಪದವು ಉಪಪದವಾಗಿರುವಾಗ ಧಾತುವಿಗೆ ಅಣ್ ಪ್ರತ್ಯಯ ಬರುತ್ತದೆಂದು ಸೂತ್ರಾರ್ಥ. ಕುಂಭಂ ಕರೋತಿ—ಕುಂಭಕಾರಃ. ಕಾಂಡಂ ಲುನಾತಿ—ಕಾಂಡಲಾವಃ ಅಣ್ಣಿತ್ತಾದುದರಿಂದ ಕೃ-ಲುಧಾತುಗಳಿಗೆ ವೃದ್ಧಿ ಬರುತ್ತದೆ. ಹೀಗೆಯೇ ಈ ಒಂದು ಸೂತ್ರದಿಂದ ಅನೇಕಲಕ್ಷ್ಯಸಿದ್ಧಿಗಳಾಗುತ್ತವೆ. 'ಆತೋಽನುಪಸರ್ಗೇಕಃ' ಇದು ವಿಶೇಷ ಸೂತ್ರ. ಪೂರ್ವಸೂತ್ರಕ್ಕೆ ಅಪವಾದ. ಪ್ರಾದ್ಯುಪಸರ್ಗರಹಿತವಾದ ಕರ್ಮವಾಚಕಪದವು ಉಪಪದವಾಗಿರುವಾಗ ಆಕಾರಾಂತ ಧಾತುಗಳಿಗೆ ಕ ಪ್ರತ್ಯಯ (ಅ ಉಳಿಕೆ) ಬರುತ್ತದೆ. ಧಾನ್ಯಂ ದದಾತಿ ಇತಿ ಧಾನ್ಯದಃ ಧನಂ ದದಾತಿ ಇತಿ ಧನದಃ. ಕಬಂದಾಗ ಆಕಾರಕ್ಕೆ ಲೋಪ ಬರುತ್ತದೆ. ಹೀಗೆ ಅನೇಕ ಶಬ್ದಗಳ ರೂಪ ಸಿದ್ಧಿಯಾಗುತ್ತದೆ. ಲಘುವಾದ ಈ ಉಪಾಯದಿಂದ ಸಕಲಶಬ್ದಗಳಿಗೂ ಪ್ರಕೃತಿ ಪ್ರತ್ಯಯವಿಭಾಗವ್ಯುತ್ಪಾದನ ಪೂರ್ವಕವಾದ ಅರ್ಥಜ್ಞಾನವುಂಟಾಗುತ್ತದೆ. ಹಿಂದೆ ಹೇಳಿದ ಇತಿಹಾಸವು ಪ್ರತಿಪದಪಾಠವು ಅಶಕ್ಯವೆಂದು ತಿಳಿಸುವ ಅರ್ಥವಾದವೆಂದು ತಿಳಿಯಬೇಕು.

ನನ್ವನ್ಯೇಷ್ವಪ್ಯಂಗೇಷು ಸತ್ಸು ಕಿಮಿತ್ಯೇತದೇವಾದ್ರಿಯತೇ । ಉಚ್ಯತೇ । ಪ್ರಧಾನಂ ಚ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಷಟ್ಸ್ವಂಗೇಷು ಸತ್ಸು ವ್ಯಾಕರಣಮ್ । ಪ್ರಧಾನೇ ಚ ಕೃತೋ ಯತ್ನಃ ಫಲವಾನ್ ಭವತಿ । ತದುಕ್ತಮ್—

ಆಸನ್ನಂ ಬ್ರಾಹ್ಮಣಸ್ತಸ್ಯ ತಪಸಾಮುತ್ತಮಂ ತಪಃ ।
ಪ್ರಥಮಂ ಛಂದಸಾಮಂಗಮಾಹುರ್ವ್ಯಾಕರಣಂ ಬುಧಾಃ ॥
(ವಾಕ್ಯಪ-೧-೧೧) ಇತಿ.

ತಸ್ಮಾದ್ವ್ಯಾಕರಣಶಾಸ್ತ್ರಸ್ಯ ಶಬ್ದಾನುಶಾಸನಂ ಭವತಿ—ಸಾಕ್ಷಾತ್ ಪ್ರಯೋಜನಮ್ । ಪಾರಂಪರ್ಯೇಣ ತು ವೇದರಕ್ಷಾದಿನೀ। ಅತ ಏವೋಕ್ತಂ ಭಗವತಾ ಭಾಷ್ಯಕಾರೇಣ—ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಮ್ (ಪಾ ಮ ಭಾಷ್ಯ೧-೧೧) ಇತಿ.

ಶಿಕ್ಷಾದಿ ಇತರ ಅಂಗಗಳೂ ಇರುವಾಗ ಈ ವ್ಯಾಕರಣದಲ್ಲಿಯೇ ಆದರಾತಿಶಯಕ್ಕೆ ಕಾರಣವೇನು ? ಅಂದರೆ ಇದು ಷಡಂಗದಲ್ಲಿ ಪ್ರಧಾನವಾಗಿದೆ. ವಾಕ್ಯಾರ್ಥಜ್ಞಾನಕ್ಕೆ ಕಾರಣವಾದ ಪದ ಪದಾರ್ಥಜ್ಞಾನವು ವ್ಯಾಕರಣಾಧೀನವಾದುದರಿಂದ ಪ್ರಾಧಾನ್ಯ ತಿಳಿಯಬೇಕು. ಪ್ರಧಾನದಲ್ಲಿ ಮಾಡಿದ ಪ್ರಯತ್ನವೇ ಫಲವುಳ್ಳದಾಗುತ್ತದೆಂದು ವಾಕ್ಯಪದೀಯದಲ್ಲಿ ಭರ್ತೃಹರಿಯು ಹೇಳಿರುತ್ತಾನೆ. ಫಲಶಬ್ದದಿಂದ ಇಲ್ಲಿ ವಾಕ್ಯಾರ್ಥಜ್ಞಾನವೇ ವಿವಕ್ಷಿತವಾಗಿದೆ. 'ಆಸನ್ನಂ' —ಇತಿ. ತಸ್ಯ ಬ್ರಹ್ಮಣಃ—ಆ ವೇದವೆಂಬ ಬ್ರಹ್ಮನಿಗೆ (ಈ ವ್ಯಾಕರಣವು) ಆಸನ್ನಂ—ಅತಿ ಸಮೀಪದಲ್ಲಿರುತ್ತದೆ. ಸಾಧುತ್ವಪ್ರತಿಪತ್ತಿ ಫಲಕವಾದ ಸ್ವರೂಪ ಸಂಸ್ಕಾರಕ್ಕೆ ಇದು ಸಾಕ್ಷಾತ್ತಾಗಿ ಉಪಕಾರಕವಾದುದರಿಂದ ಸಂನಿಕೃಷ್ಟವೆಂದು ತಿಳಿಯಬೇಕು. ತಪಸಾಂ—ಚಾಂದ್ರಾಯಣಾದಿಗಳಿಗೂ, ಉತ್ತಮಂ ತಪಃ—ಇಷ್ಟಫಲಕಾರಣವಾದುದರಿಂದ ಉತ್ತಮ ತಪಸ್ಸಾಗಿದೆ. 'ಪ್ರಥಮಂ' – ಇತಿ. ಆದುದರಿಂದ ಪಂಡಿತರು ವೇದಾಂಗಗಳಲ್ಲಿ ವ್ಯಾಕರಣವನ್ನೇ ಮುಖ್ಯವಾದ ಅಂಗವೆಂದು ಹೇಳುತ್ತಾರೆ. 'ತಸ್ಮಾತ್'—ಇತಿ. ಆದುದರಿಂದ ವ್ಯಾಕರಣಶಾಸ್ತ್ರಕ್ಕೆ ಶಬ್ದಸಂಸ್ಕಾರಬೋಧವೇ ಸಾಕ್ಷಾತ್ ಪ್ರಯೋಜನವಾಗುತ್ತದೆ. ಪರಂಪರಾ ಸಂಬಂಧದಿಂದ ವೇದರಕ್ಷಾದಿಗಳೂ ಪ್ರಯೋಜನವೆಂದು ಭಾಷ್ಯಕಾರರು ತಿಳಿಸಿರುತ್ತಾರೆ. 'ರಕ್ಷೋ'—ಇತಿ. ಇಲ್ಲಿ ಪ್ರಯೋಜನ ಪದದಿಂದ ಪ್ರಯೋಜಕ ಮತ್ತು ಫಲ ಎರಡನ್ನೂ ತೆಗೆದುಕೊಳ್ಳಬೇಕು. ರಕ್ಷಾದಿಗಳಲ್ಲಿ ಆಗಮವು ಪ್ರಯೋಜಕ. ಉಳಿದ ನಾಲ್ಕು ಫಲಗಳು. "ಬ್ರಾಹ್ಮಣೇನ ನಿಷ್ಕಾರಣೋ ಧರ್ಮಃ ಷಡಂಗೋ ವೇದೋಽಧ್ಯೇಯೋ ಜ್ಞೇಯಶ್ಚ" ಎಂದು ಆಗಮ. ಇದು ಶ್ರುತಿಯೆಂದೇ ಹರದತ್ತಾದಿಗಳ ಮತ. ಭಟ್ಟಾಚಾರ್ಯರು ಸ್ಮೃತಿಯೆಂದಿರುತ್ತಾರೆ. ಆಗಮ ಪದದಿಂದ ತನ್ಮೂಲಕವಾದ ಸ್ಮೃತಿಯೂ ಗ್ರಾಹ್ಯವೆಂದು ಅವರ ಮತ.

ಕಾರ್ಯತೇ ಅನುಷ್ಠಾಪ್ಯತೇ ಅನೇನ ಇತಿ ಕಾರಣಂ—ಫಲಮ್. ನಿಷ್ಕಾರಣಃ—ದೃಷ್ಟಫಲಾಭಿಸಂಧಿ ಇಲ್ಲದಿರುವ ನಿತ್ಯವಾದ ಎಂದರ್ಥ. ರಕ್ಷಾಲೋಕದಲ್ಲಿ ಇಲ್ಲದ ಕೆಲವು ಪ್ರಯೋಗಗಳು ವೇದದಲ್ಲಿ ಇರುತ್ತವೆ. ದೇವಾಃ ಎಂದು ಪ್ರಯೋಗಿಸುವಾಗ ಅಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇವಾಸಃ ಎಂದು ಪ್ರಯೋಗಿಸಿದೆ. ದೇವೈಃ ಎಂದು ಹೇಳುವಾಗ 'ದೇವೇಭಿಃ' ಎಂದಿದೆ. ಆತ್ಮನಾ ಎಂಬಲ್ಲಿ ತ್ಮನಾ ಎಂದು ಪ್ರಯೋಗಿಸಿದೆ. ಹೀಗೆಯೇ ವ್ಯತ್ಯಸ್ತವಾದ ಅನೇಕ ಪ್ರಯೋಗಗಳನ್ನು ನೋಡಿ ವ್ಯಾಕರಣ ತಿಳಿಯದವನು ಅದು ತಪ್ಪೆಂದು ತಿದ್ದಬಹುದು. ಆಗ ಆನುಪೂರ್ವೀವ್ಯತ್ಯಾಸವಾಗುತ್ತದೆ. ಆದರಿಂದ ಪ್ರತ್ಯವಾಯ (ಪಾಪ) ಬರುತ್ತದೆ. ವ್ಯಾಕರಣ ತಿಳಿದವನು 'ಆಜ್ಜಸೇರಸುಕ್' ಇತ್ಯಾದಿ ಸೂತ್ರಜ್ಞಾನವಿರುವುದರಿಂದ ಇದು ಸರಿಯಾದ ಪ್ರಯೋಗವೆಂದೇ ತಿಳಿಯುತ್ತಾನೆ. ಇದರಿಂದ ವೇದಾನುಪೂರ್ವಿಯು ಸಂರಕ್ಷಿತವಾಗುತ್ತದೆ. ಊಹವೆಂದರೆ ವೈದಿಕಶಬ್ದಗಳನ್ನು ತತ್ತದ್ದೇವತಾಲಿಂಗಾನುಸಾರ ವಾಗಿ ವಿಪರಿಣಾಮಮಾಡುವುದು. 'ಅಗ್ನಯೇ ಜುಷ್ಟಂ ನಿರ್ವಪಾಮಿ' (ತೈ-ಸಂ-೧-೧-೪) ಎಂದು ವೇದದಲ್ಲಿ ಹೇಳಿದೆ. ಕೆಲವುಕಡೆ ಸೂರ್ಯನು ದೇವತೆಯಾದಾಗ 'ಸೂರ್ಯಾಯ ಜುಷ್ಟಂ' ಎಂದು ಪರಿಣಾಮಮಾಡಿಕೊಳ್ಳುವುದು. ಹೀಗೆಯೇ ಲಿಂಗವಚನವ್ಯತ್ಯಾಸ ವನ್ನು ತಿಳಿಯಬೇಕು. ವೈಯಾಕರಣನು ಮಾತ್ರ ಹೀಗೆ ಊಹಿಸಲು ಸಮರ್ಥನಾಗು ತ್ತಾನೆ. ಲಘು ಅಂದರೆ ಲಾಘವ. ವೈಯಾಕರಣನು ಶಬ್ದಗಳ ಪ್ರಕೃತಿಪ್ರತ್ಯಯವಿಭಾಗ ವನ್ನು ತಿಳಿದುದರಿಂದ ಪ್ರತಿಪದಪಾಠಕ್ಕಿಂತಲೂ ಲಾಘವದಿಂದ ಶಬ್ದಾರ್ಥವನ್ನು ತಿಳಿಯು ತ್ತಾನೆ. ಸಂದೇಹವಿಲ್ಲದಿರುವುದೇ ಅಸಂದೇಹ.

'ಸ್ಥೂಲಪೃಷತೀಮನಡ್ವಾಹೀಮಾಲಭೇತ' ಎಂದು ವೇದವಾಕ್ಯ. ಅನಡ್ವಾಹೀ-ಪಶು. ಸ್ಥೂಲಪೃಷತೀಂ ಎಂಬುದು ಅದಕ್ಕೆ ವಿಶೇಷಣ. ಇಲ್ಲಿ ಕರ್ಮಧಾರಯವೇ ಬಹುವ್ರೀಹಿಯೇ ಎಂದು ಸಂದೇಹ. 'ಸ್ಥೂಲಾಚಾಸೌ ಪೃಷತೀ ಚ' ಎಂದು ಕರ್ಮ ಧಾರಯ. ಪೃಷತ್ ಪದಕ್ಕೆ ಚುಕ್ಕೆಗಳೆಂದರ್ಥ. ಲಕ್ಷಣಯಾ ಇಲ್ಲಿ ಚುಕ್ಕೆಯುಳ್ಳದ್ದೆಂ ದರ್ಥ. ಆಗ ಚುಕ್ಕೆಗಳು ಹೇಗೇ ಇರಲಿ. ಹಸು ಸ್ಥೂಲವಾಗಿದ್ದು ಬಿಂದುವುಳ್ಳದ್ದಾಗಿರ ಬೇಕೆಂದು ಕರ್ಮಧಾರಯದಲ್ಲಿ ಅರ್ಥವಾಗುತ್ತದೆ. 'ಸ್ಥೂಲಾನಿ ಪೃಷಂತಿ ಯಸ್ಯಾಂ ಸಾ' ಎಂದು ಬಹುವ್ರೀಹಿ. ಇಲ್ಲಿ ಗೋವು ಹೇಗಿದ್ದರೂ ಇರಬಹುದು, ಆದರೆ ಬಿಂದುಗಳು ಮಾತ್ರ ಇದರಲ್ಲಿ ಸ್ಥೂಲವಾಗಿರ ಬೇಕೆಂದು ವಿರುದ್ಧಾರ್ಥತೋರುತ್ತದೆ. ಯಾವ ಹಸು ವನ್ನು ತೆಗೆದುಕೊಳ್ಳಬೇಕು? ಎಂದು ಸಂದೇಹಬಂದಾಗ ವ್ಯಾಕರಣ ಜ್ಞಾನದಿಂದ ಸಂದೇಹ ನಿವೃತ್ತಿಯಾಗುತ್ತದೆ. "ಸ್ಥೂಲಪೃಷತೀಂ" ಎಂಬಲ್ಲಿ ಪೂರ್ವಪದ ಪ್ರಕೃತಿಸ್ವರವಿರು ವುದರಿಂದ ('ಬಹುವ್ರೀಹೌ ಪ್ರಕೃತ್ಯಾಪೂರ್ವಂ' ಎಂದು ಸೂತ್ರ) ಬಹುವ್ರೀಹಿಯೆಂದು ನಿರ್ಣೀತವಾಗುತ್ತದೆ. ಕರ್ಮಧಾರಯವಾದರೆ 'ಸಮಾಸಸ್ಯ' ಸೂತ್ರದಿಂದ ಅಂತೋ ದಾತ್ತವಾಗುತ್ತದೆ. ಹೀಗೆ ಪರಂಪರೆಯಿಂದ ವ್ಯಾಕರಣದ ಪ್ರಯೋಜನ ವಿವೃತವಾಗಿದೆ.

ಸಾಧುಶಬ್ದಪ್ರಯೋಗವಶಾದಭ್ಯುದಯೋಽಪಿ ಭವತಿ । ತಥಾ ಚ ಕಥಿತಂ ಕಾತ್ಯಾಯ ನೇನ—ಶಾಸ್ತ್ರಪೂರ್ವಕೇ ಪ್ರಯೋಗೇಽಭ್ಯುದಯಸ್ತತ್ತುಲ್ಯಂ ವೇದಶಬ್ದೇನೇತಿ । ಅನ್ಯೈರಪ್ಯುಕ್ತಂ— ಏಕಃ ಶಬ್ದಃ ಸಮ್ಯಗ್ ಜ್ಞಾತಃ ಸುಷ್ಠು ಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಗ್ಭವತೀತಿ । ತಥಾ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಕಮಿಷ್ಟಸುಖಂ ಯಾಂತಿ ಸುಯುಕ್ತೈರ್ಬದ್ಧವಾಗ್ರಥೈಃ ||
ಅಥ ಪತ್ಕಾಷಿಣೋ ಯಾಂತಿ ಯೇ ಚಿಕ್ಕಮಿತಭಾಷಿಣಃ ||

ನನ್ವಚೇತನಸ್ಯ ಶಬ್ದಸ್ಯ ಕಥಮೀದೃಶಂ ಸಾಮರ್ಥ್ಯಮುಪಪದ್ಯತ ಇತಿ ಚೇತ್—ನೈವಂ ಮನ್ಯೇಥಾಃ |ಮಹತಾ ದೇವೇನ ಸಾಮ್ಯಶ್ರವಣಾತ್ |

ತದಾಹ ಶ್ರುತಿಃ—

ಚತ್ವಾರಿ ಶೃಂಗಾ ತ್ರಯೋಽಸ್ಯ ಪಾದಾ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ |
ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ
ಮರ್ತ್ಯಾಂ ಆವಿವೇಶ ||
(ಮ-ನಾ-೧೦-೧)

ಸಾಧು ಶಬ್ದ ಪ್ರಯೋಗದಿಂದ ಅಭ್ಯುದಯವೂ ಉಂಟಾಗುತ್ತದೆ. ಇವನ್ನು ಕಾತ್ಯಾಯನರು ಹೀಗೆ ಹೇಳಿರುತ್ತಾರೆ. ವ್ಯಾಕರಣ ಶಾಸ್ತ್ರಜ್ಞಾನಪೂರ್ವಕವಾಗಿ ಯಾರು ಶಬ್ದ ಪ್ರಯೋಗ ಮಾಡುತ್ತಾರೆಯೋ ಅವನು ಅಭ್ಯುದಯವನ್ನು ಹೊಂದುತ್ತಾನೆ. "ಯೋಽಗ್ನಿಷ್ಟೋಮೇನ ಯಜತೇ ಯ ಉ ಚೈನ ಮೇವಂ ವೇದ" (ತೈ-ಬ್ರಾ-೩-೧-೭) ಎಂಬಲ್ಲಿ ವೇದಶಬ್ದ ಹೇಳಿರುವುದರಿಂದ ಜ್ಞಾನ ಪೂರ್ವಕವಾಗಿ ಅನುಷ್ಠಾನ ಮಾಡಿದ ಅಗ್ನಿಷ್ಟೋಮಯಾಗದಿಂದ ಫಲವುಂಟಾಗುತ್ತದೆಂದು ಹೇಳಿದೆ. 'ತತ್ತುಲ್ಯಂ' ಇತಿ ಅದರಂತೆ ಇಲ್ಲಿ ತಿಳಿಯಬೇಕು. ಸಮ್ಯಗ್‌ಜ್ಞಾತಃ—ಪ್ರಕೃತಿಪ್ರತ್ಯಯಜ್ಞಾನ ಪೂರ್ವಕವಾಗಿ ಶಾಸ್ತ್ರದಿಂದ ತಿಳಿಯಲ್ಪಟ್ಟ. ಹೀಗೆ ಚೆನ್ನಾಗಿ ಪ್ರಯೋಗಿಸಿದ ಶಬ್ದವು ಸ್ವರ್ಗಲೋಕದಲ್ಲಿ ಯಥೇಷ್ಟವಾದ ಫಲವನ್ನು ಕೊಡುತ್ತದೆ. 'ನಾಕಂ'—ಇತಿ. ನಾಕವೆಂದರೆ ಸ್ವರ್ಗಲೋಕ. ಬದ್ಧವಾಗ್ರಥೈಃ— ಪ್ರಕೃತಿಪ್ರತ್ಯಯವಿಭಾಗಜ್ಞಾನಪೂರ್ವಕವಾಗಿ ಅರ್ಥ ತಿಳಿದು ತಯಾರಾದ ವಾಕ್ಕೆಂಬ ರಥಗಳಿಂದ. ಹೀಗೆ ತಿಳಿದು ಪ್ರಯೋಗಿಸಿದವರು. ಇಷ್ಟಸುಖದಾಯಕವಾದ ಸ್ವರ್ಗಲೋಕವನ್ನು ಹೊಂದುತ್ತಾರೆಂದರ್ಥ. ಯೇ—ಯಾವ ಚಿಕ್ಕಮಿತಭಾಷಿಣಃ— (ಅವೈಯಾಕರಣರಾದುದರಿಂದ) ಸಂಸ್ಕಾರ ರಹಿತರಾಗಿ (ಚಿಕ್ಕ—) ಅವ್ಯಕ್ತಶಬ್ದದಿಂದ, (ಮಿತಂ—) ಸಮಾನವಾಗಿ ಮಾತನಾಡುತ್ತಾ, ಪದ್ಭಿಃ ಕಾಷಿಣಃ—ಕಾಲುಗಳಿಂದಲೇ ಮಾರ್ಗವನ್ನು ಹೊಡೆಯುತ್ತಾ ಯಾಂತಿ—ಹೋಗುತ್ತಾರೆ. ರಥದಿಂದ ಶೀಘ್ರವಾದ ಸುಖಕರವಾದ ಗಮನವಿಲ್ಲವೆಂದು ತಾತ್ಪರ್ಯ. 'ನನು—' ಇತಿ. ಅಚೇತನವಾದ ಶಬ್ದಕ್ಕೆ ಈ ಸಾಮರ್ಥ್ಯ ಹೇಗೆ ಬಂದಿದೆಯೆಂದು ಶಂಕೆ. ವೇದದಲ್ಲಿ ಮಹಾದೇವನಿಂದ ಸಾಮ್ಯ ಹೇಳಿರುವುದರಿಂದಲೇ ಈ ಸಾಮರ್ಥ್ಯಬಂದಿದೆಯೆಂದು ಸಮಾಧಾನ. 'ಚತ್ವಾರಿ—' ವೇದದ ಅರ್ಥವನ್ನು ಭಾಷ್ಯಕಾರರು ಶಬ್ದಪರವಾಗಿ ಹೀಗೆ ವ್ಯಾಖ್ಯಾನಮಾಡಿರುತ್ತಾರೆ.

ವ್ಯಾಚಕಾರ ಚ ಭಾಷ್ಯಕಾರಃ— ಚತ್ವಾರಿ ಶೃಂಗಾಣಿ ಚತ್ವಾರಿ ಪದಜಾತಾನಿ ನಾಮಾಖ್ಯಾತೋಪಸರ್ಗನಿಪಾತಾಃ | ತ್ರಯೋ ಅಸ್ಯ ಪಾದಾ ಲಡಾದಿವಿಷಯಾಸ್ತ್ರಯೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂತಭವಿಷ್ಯದ್ವರ್ತಮಾನಕಾಲಾಃ। ದ್ವೇ ಶೀರ್ಷೇ ದ್ವೌ ಶಬ್ದಾತ್ಮಾನೌ ನಿತ್ಯಃ ಕಾರ್ಯಶ್ಚ। ವ್ಯಂಗ್ಯವ್ಯಂಜಕಭೇದಾತ್। ಸಪ್ತ ಹಸ್ತಾಸೋ ಅಸ್ಯ ತಿಙಾ ಸಹ ಸಪ್ತ ಸುಬ್ವಿಭಕ್ತಯಃ। ತ್ರಿಧಾ ಬದ್ಧಸ್ತ್ರಿಷು ಸ್ಥಾನೇಷು ಉರಸಿ ಕಂಠೇ ಶಿರಸಿ ಚ ಬದ್ಧಃ। ವೃಷಭ ಇತಿ ಪ್ರಸಿದ್ಧ ವೃಷಭತ್ವೇನ ರೂಪಣಂಕ್ರಿಯತೇ। ವರ್ಷಣಾತ್। ವರ್ಷಣಂ ಚ ಜ್ಞಾನಪೂರ್ವಕಾನುಷ್ಠಾನೇನ ಫಲಪ್ರದತ್ವಮ್। ರೋರವೀತಿ ಶಬ್ದಂ ಕರೋತಿ। ರೌತಿಃ ಶಬ್ದಕರ್ಮಾ। ಇಹ ಶಬ್ದಶಬ್ದೇನ ಪ್ರಪಂಚೋ ವಿವಕ್ಷಿತಃ। ಮಹೋ ದೇವೋ ಮರ್ತ್ಯಾಂ ಆವಿವೇಶ। ಮಹಾನ್ದೇವಃ ಶಬ್ದೋ ಮರ್ತ್ಯಾ ಮರಣಧರ್ಮಾಣೋ ಮನುಷ್ಯಾಸ್ತಾನಾವಿವೇಶೇತಿ। ಮಹತಾದೇವೇನ ಪರೇಣ ಬ್ರಹ್ಮಣಾ ಸಾಮ್ಯಮುಕ್ತಂಸ್ಯಾತ್ (ಪಾ- ಮ. ಭಾ- ೩-೧೭) ಇತಿ

ಶೃಂಗಾ—ಶೃಂಗಾಣಿ. 'ತ್ರಯೋ ಅಸ್ಯ' ಇತ್ಯಾದಿಗಳಲ್ಲಿ 'ಪ್ರಕೃತ್ಯಾಂತಃ ಪಾದಂ' ಎಂಬುದರಿಂದ ಪ್ರಕೃತಿಭಾವಬಂದಿದೆ. ಶೀರ್ಷಶಬ್ದ ಅಕಾರಾಂತ ನಪುಂಸಕ ಲಿಂಗ. ಹಸ್ತಾಸಃ— ಹಸ್ತಾಃ. ಮಹಃ—ಮಹಾನ್. ಮಹ್ಯತೇ ಪೂಜ್ಯತೇ ಇತಿ ಮಹಃ। ಘಞರ್ಥೇ ಕವಿಧಾನಂ —ಎಂಬುದರಿಂದ ಕರ್ಮಣಿಯಲ್ಲಿ ಕಪ್ರತ್ಯಯ. ಮರ್ತ್ಯಾನ್ ಎಂಬಲ್ಲಿ ನಕಾರಕ್ಕೆ ರುತ್ವ, ಯತ್ವ, ಯಲೋಪ. 'ಆತೋಟಿನಿತ್ಯಂ' ಎಂಬುದರಿಂದ ಪೂರ್ವಾಕಾರಕ್ಕೆ ಅನುನಾಸಿಕ. ಇಲ್ಲಿ ಶಬ್ದಕ್ಕೆ ವೃಷಭತ್ವನಿರೂಪಣ ಮಾಡಿದೆ. ನಾಮ—ಸುಬಂತ. ಆಖ್ಯಾತ—ತಿಙಂತ. ಉಪಸರ್ಗ—ಪ್ರ, ಪರಾ ಮುಂತಾದವುಗಳು. ನಿಪಾತ—ವಾ, ಹಾ ಇತ್ಯಾದಿ. ಗೋಬಲೀವರ್ದನ್ಯಾಯದಿಂದ ಉಪಸರ್ಗನಿಪಾತಗಳನ್ನು ಬೇರೆಯಾಗಿ ಹೇಳಿದೆ. ಭೂತಾದಿಕಾಲತ್ರಯಪ್ರತಿಪಾದಕ ಗಳಾದ ಲಡಾದಿಗಳು ಪಾದಗಳೆಂದರ್ಥ. ಕಾಲಕ್ಕೆ ವರ್ಣರೂಪತ್ವವಿಲ್ಲದಿರುವುದರಿಂದ ಕಾಲಬೋಧಕ ಲಡಾದಿಗಳಿಗೆ ಪಾದತ್ವ ಕಲ್ಪಿಸಿದೆ. ಲಕಾರಗಳು ಹತ್ತಾದರೂ ಅವುಗಳಿಂದ ತಿಳಿಸಲ್ಪಡುವ ಕಾಲ ಮೂರೇ ಆದುದರಿಂದ ತ್ರಿತ್ವವನ್ನಾರೋಪಿಸಿದೆ. ಶಬ್ದಾತ್ಮಾನೌ ಎಂಬಲ್ಲಿ ಆತ್ಮಶಬ್ದ ಸ್ವರೂಪವಾಚಕವಾಗಿದೆ. ನಿತ್ಯಾಽನಿತ್ಯ ಭೇದದಿಂದ ಎರಡುರೀತಿಯಾಗಿರುವ ಶಬ್ದಸ್ವರೂಪವೇ ಮಸ್ತಕದ್ವಯವೆಂದು ತಿಳಿಯಬೇಕು. ವ್ಯಂಗ್ಯವು ನಿತ್ಯವಾಗಿ ಆಂತರವಾಗಿರುತ್ತದೆ. ಅನಿತ್ಯವಾಗಿ ವೈಖರೀರೂಪವಾಗಿರುವುದು ವ್ಯಂಜಕ.

ಸಪ್ತವಿಭಕ್ತಿಗಳು—ಕರ್ತ್ರಾದಿ ಆರುಕಾರಕಬೋಧಕಗಳು ಮತ್ತು ಪ್ರಥಮಾ ಸೇರಿ ಏಳು ಆಗುತ್ತವೆ. ಕರ್ತ್ರರ್ಥಕ ತಿಙ್, ಕರ್ಮಾರ್ಥಕತಿಙ್ ಎರಡೂ ಕಾರಕಬೋಧಕ ವಾಗುವುದರಿಂದ ಆರುಕಾರಕಗಳಲ್ಲಿಯೇ ಸೇರುತ್ತವೆ. ಕಾರಕಭೋಧಕ ಆರು ಮತ್ತು ತದಿತರ ಒಂದು ಎಂದು ವ್ಯಾಖ್ಯಾನಮಾಡಿ ತದಿತರಪದದಿಂದ ಪ್ರಾತಿಪದಿಕಾರ್ಥದಲ್ಲಿ ಹೇಳಿದ ಪ್ರಥಮಾ, ಶೇಷಲಕ್ಷಣಷಷ್ಠೀ, ಭಾವಾರ್ಥಕತಿಙ್ವಿಭಕ್ತಿ ಇವುಗಳಿಗೆ ಸಂಗ್ರಹ ವೆಂದು ಹೇಳುತ್ತಾರೆ. ಇನ್ನು ಕೆಲವರು ಏಳು ವಿಭಕ್ತಿಯೆಂದರೆ ಪ್ರಥಮಾದಿ ಏಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಕ್ತಿಗಳು. ತಿಙಂಗೆ ಕಾಲಬೋಧಕವಾದುದರಿಂದ ಪಾದರೂಪಣವೆಂದೇ ಹೇಳುತ್ತಾರೆ. ಮೂರು ಸ್ಥಾನದಲ್ಲಿ ಸಂಬದ್ಧವಾಗುವರೀತಿ—ವರ್ಗಪಂಚಮಗಳು ಯವರಲಗಳು ಮತ್ತು ಹಾಕಾರ-ಇವುಗಳಿಗೆ ಉರಃ ಸ್ಥಾನ. ಅಕಾರಕವರ್ಗಹಕಾರವಿಸರ್ಗಗಳಿಗೆ ಕಂಠಸ್ಥಾನ. ಕಂಠದಿಂದ ಮುಖಾಂತರ್ಗತವಾದ ತಾಲ್ವಾದಿಸ್ಥಾನವನ್ನು ತೆಗೆದುಕೊಳ್ಳಬೇಕು. ಋಕಾರ ಟವರ್ಗ ರೇಫಷಕಾರಗಳಿಗೆ ಶಿರಃ ಸ್ಥಾನ. ಶಬ್ದಕವರ್ಮ=ಶಬ್ದಾರ್ಥಕ ವೆಂದರ್ಥ. ಶಬ್ದವು ಶಬ್ದವನ್ನು ಹೇಗೆ ಮಾಡುತ್ತದೆಂಬ ಶಂಕೆಗೆ ಸಮಾಧಾನ ತೋರಿಸು ತ್ತಾನೆ. 'ಇಹ—' ಇತಿ. ಶಬ್ದಂ ಕರೋತಿ ಎಂಬಲ್ಲಿ ಶಬ್ದಪದಕ್ಕೆ ಪ್ರಪಂಚವೆಂದರ್ಥ. ನಿತ್ಯ ಶಬ್ದವು ಅಖಿಲಪ್ರಪಂಚವನ್ನು ವಿಸ್ತಾರಪಡಿಸುತ್ತದೆ. ಮಹಾನ್—ಪರಬ್ರಹ್ಮ ಸ್ವರೂಪವಾದ, ದೇವಃ—ಅಂತರ್ಯಾಮಿರೂಪವಾದ ಶಬ್ದವು ಮನುಷ್ಯರನ್ನು ಪ್ರವೇಶಿಸಿ ತೆಂದರ್ಥ. ಸಾಮ್ಯ—ಸಾಯುಜ್ಯ. ವ್ಯಾಕರಣಶಾಸ್ತ್ರದಿಂದ ಉಂಟಾದ ಶಬ್ದಜ್ಞಾನ ಪೂರ್ವಕವಾಗಿ ಪ್ರಯೋಗಿಸುವುದರಿಂದ ಕ್ಷೀಣಪಾಪನಾದ ಪುರುಷನು ಅಹಂಕಾರಾದಿ ಗ್ರಂಥಿಗಳನ್ನು ಕಳೆದುಕೊಂಡು ಶಬ್ದಬ್ರಹ್ಮನಿಂದ ಸಾಯುಜ್ಯ ಹೊಂದುವನೆಂದು ತಾತ್ಪರ್ಯ.

ಜಗನ್ನಿದಾನಂ ಸ್ಫೋಟಾಖ್ಯೋ ನಿರವಯವೋ ನಿತ್ಯಃ ಶಬ್ದೋ ಬ್ರಹ್ಮೈವೇತಿ
ಹರಿಣಾಭಾಣಿ ಬ್ರಹ್ಮಕಾಂಡೇ —
ಅನಾದಿನಿಧನಂ ಬ್ರಹ್ಮ ಶಬ್ದತತ್ವಂ ತದಕ್ಷರಮ್ ।
ವಿವರ್ತತೇಽರ್ಥಭಾವೇನ ಪ್ರಕ್ರಿಯಾ ಜಗತೋಯತಃ ॥ ವಾಕ್ಯ-ಪ-
೧-೧ ॥ ಇತಿ.

ನನು ನಾಮಾಖ್ಯಾತಭೇದೇನ ಪದದ್ವೈವಿಧ್ಯಪ್ರತೀತೇಃ ಕಥಂ ಚಾತುರ್ವಿಧ್ಯಮುಕ್ತ ಮಿತಿ ಚೇತ್- ನ್ನೈವಮ್ । ಪ್ರಕಾರಾಂತರಸ್ಯ ಪ್ರಸಿದ್ಧತ್ವಾತ್ । ತದುಕ್ತಂ ಪ್ರಕೀರ್ಣಕೇ—
ದ್ವಿಧಾ ಕೈಶ್ಚಿತ್‌ಪದಂ ಭಿನ್ನಂ ಚತುರ್ಧಾ ಪಂಚಧಾಪಿ ವಾ ॥
ಅಪೋದ್ಧೃತ್ಯೈವ ವಾಕ್ಯೇಭ್ಯಃ ಪ್ರಕೃತಿಪ್ರತ್ಯಯಾದಿವತ್ ॥ ಇತಿ ॥

ಕರ್ಮಪ್ರವಚನೀಯೇನ ವೈ ಪಂಚಮೇನ ಸಹ ಪದಸ್ಯ ಪಂಚವಿಧತ್ವಮಿತಿ ಹೇಲಾ ರಾಜೋ ವ್ಯಾಖ್ಯಾತವಾನ್ । ಕರ್ಮಪ್ರವಚನೀಯಾಸ್ತು ಕ್ರಿಯಾವಿಶೇಷೋಪ ಜನಿತಸಂಬಂಧಾವಚ್ಛೇದಹೇತವ ಇತಿ ಸಂಬಂಧವಿಶೇಷದ್ಯೋತನದ್ವಾರೇಣ ಕ್ರಿಯಾವಿಶೇಷದ್ಯೋತನಾದುಪಸರ್ಗೇಷ್ವೇವಾಂತರ್ಭವಂತೀತ್ಯಭಿಸಂಧಾಯ ಪದ ಚಾತುರ್ವಿಧ್ಯಂ ಭಾಷ್ಯಕಾರೇಣೋಕ್ತಂ ಯುಕ್ತಮಿತಿ ವಿವೇಕ್ತವ್ಯಮ್

ಸ್ಫೋಟಪದಾರ್ಥವನ್ನು ಮುಂದೆ ಮೂಲದಲ್ಲಿಯೇ ವಿವರಿಸುತ್ತಾನೆ. ಅನಾದಿ ನಿಧನಂ—ಆದ್ಯಂತರಹಿತವಾದ, ಶಬ್ದ ಸ್ವರೂಪವೇ ಬ್ರಹ್ಮ. ಅದಕ್ಕೆ ಯಾವುದೂ ನಿಮಿತ್ತವಿಲ್ಲದಿರುವುದರಿಂದ-ಅಕ್ಷರಂ—ವಿಕಾರಶೂನ್ಯವಾಗಿರುತ್ತದೆ. ಇದೇ ಜಗದ್ರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ಪ್ರಕಾಶಿಸುತ್ತದೆ. ಶಬ್ದ ಬ್ರಹ್ಮನಿಂದಲೇ ಜಗದ್ರಚನೆಯಾಗುವುದೆಂದು ತಾತ್ಪರ್ಯ. ಅಪೋದ್ಧೃತ್ಯ—ಪ್ರವಿಭಜ್ಯ. ಪದಾರ್ಥಜ್ಞಾನಕ್ಕೋಸ್ಕರ ಹೇಗೆ ಪ್ರಕೃತಿಪ್ರತ್ಯಯಗಳು ಪದದಿಂದ ಬೇರ್ಪಡಿಸಲ್ಪಡುತ್ತವೆಯೋ ಅದರಂತೆ ವಾಕ್ಯಾರ್ಥಜ್ಞಾನಕ್ಕೋಸ್ಕರ ವಾಕ್ಯ ದಿಂದ ಪದಗಳು ಬೇರೆಮಾಡಲ್ಪಡುತ್ತವೆ. ಹೀಗೆ ಬೇರೆ ಮಾಡಿದ ಪದ ಸಮೂಹವನ್ನು ನಾಮ ಆಖ್ಯಾತ ಎಂದು ವಿಭಾಗಿಸಿ ಎರಡು ರೀತಿಯೆಂದು ಕೆಲವರು ಹೇಳುತ್ತಾರೆ. ಉಪಸರ್ಗ, ನಿಪಾತಗಳನ್ನು ಬೇರೆಯಾಗಿ ಹೇಳಿ ನಾಲ್ಕು ಎಂದು ಕೆಲವರ ಮತ. ಕರ್ಮ ಪ್ರವಚನೀಯುವನ್ನು ಸೇರಿಸಿ ಐದು ಎಂದು ಇನ್ನು ಕೆಲವರು. ಕ್ರಿಯೆಯಲ್ಲಿರುವ ವಿಶೇಷ ವನ್ನು ತಿಳಿಸಿ ಕೊಡುವವುಗಳು ಉಪಸರ್ಗಗಳು. ಕ್ರಿಯಾನುಯೋಗಿಕ ಸಂಬಂಧವಿಶೇಷ ದ್ಯೋತಕಗಳು ಕರ್ಮಪ್ರವಚನೀಯಗಳು. 'ಜಪಮನು ಪ್ರಾವರ್ಷತ್' ಇಲ್ಲಿ ಜಪಪ್ರತಿ ಯೋಗಿಕವರ್ಷಣಾನುಯೋಗಿಕವಾದ ಲಕ್ಷ್ಯಲಕ್ಷಣಭಾವ ಸಂಬಂಧವನ್ನು ಅನು ಎಂಬ ಕರ್ಮಪ್ರವಚನೀಯವು ಪ್ರಕಾಶಪಡಿಸುತ್ತದೆ. ಕರ್ಮಪ್ರೋಕ್ತವಂತ ಇತಿ ಕರ್ಮ ಪ್ರವಚನೀಯಾಃ ಕರ್ಮ (ಕ್ರಿಯಾ)ಪದವು ಲಕ್ಷಣೆಯಿಂದ ಕ್ರಿಯಾನುಯೋಗಿಕ ಸಂಬಂಧವನ್ನು ತಿಳಿಸುತ್ತನೆ. ಪ್ರಉಪಸರ್ಗವಿಶಿಷ್ಟವಾದ ವಚಧಾತುವಿಗೆ ಬಹಲಗ್ರಹಣ ದಿಂದ ಕರ್ತರಿಯಲ್ಲಿ ಅನೀಯರ್ ಪ್ರತ್ಯಯ ಬಂದು ಪ್ರವಚನೀಯ ಎಂದಾಗಿದೆ. 'ಕ್ರಿಯಾ ವಿಶೇಷ'—ಇತಿ. ಕ್ರಿಯಾವಿಶೇಷವೆಂದರೆ ವರ್ಷಣ. ಅದರೊಡನೆ ಉಂಟಾದ ಜಪದ ಸಂಬಂಧದ ಅವಚ್ಛೇದ ಅಂದರೆ ಲಕ್ಷ್ಯಲಕ್ಷಣಭಾವಸಂಬಂಧವೆಂದರ್ಥ. ಇದಕ್ಕೆ ಜ್ಞಾಪಕ ವಾದದ್ದು ಕರ್ಮಪ್ರವಚನೀಯವಾದ ಅನು ಆಗುತ್ತದೆ. ಸಂಬಂಧವಿಶೇಷದ್ಯೋತದ್ವಾರಾ ಕ್ರಿಯಾವಿಶೇಷದ್ಯೋತಕವೇ ಆದುದರಿಂದ ಅದು ಉಪಸರ್ಗದಲ್ಲಿಯೇ ಸೇರುವುದರಿಂದ ನಾಲ್ಕು ವಿಧವೆಂದು ಭಾಷ್ಯಕಾರರ ಅಭಿಪ್ರಾಯ.

ನನು ಭವತಾ ಸ್ಫೋಟಾತ್ಮಾ ನಿತ್ಯಃ ಶಬ್ದ ಇತಿ ನಿಜಾಗದ್ಯತೇ । ತನ್ನ ಮೃಷ್ಯಾಮಹೇ ತತ್ರ ಪ್ರಮಾಣಾಭಾವಾದಿತಿ ಕೇಚಿತ್ । ಅತ್ರೋಚ್ಯತೇ–ಪ್ರತ್ಯಕ್ಷಮೇವಾತ್ರ ಪ್ರಮಾಣಮ್ । ಗೌರಿತ್ಯೇಕಂ ಪದಮಿತಿ ನಾನಾವರ್ಣಾತಿರಿಕ್ತೈಕಪದಾವಗತೇಃ ಸರ್ವಜನೀನತ್ವಾತ್ । ನ ಹ್ಯಸತಿ ಬಾಧಕೇ ಪದಾನುಭವಃ ಶಕ್ಯೋ ಮಿಥ್ಯೇತಿ ವಕ್ತುಮ್। ಪದಾರ್ಥಪ್ರತೀತ್ಯನ್ಯಥಾನುಪಪತ್ತ್ಯಾಪಿ ಸ್ಫೋಟೋಽಭ್ಯುಪಗಂತವ್ಯಃ ನ ಚ ವರ್ಣೇಭ್ಯ ಏವ ತತ್ಪ್ರತ್ಯಯಃ ಪ್ರಾದುರ್ಭವತೀತಿ ಪರೀಕ್ಷಾಕ್ಷಮಮ್ । ವಿಕಲ್ಪಾಸಹತ್ವಾತ್ । ಕಿಂ ವರ್ಣಾಃ ಸಮಸ್ತಾ ವ್ಯಸ್ತಾ ವಾರ್ಥಪ್ರತ್ಯಯಂ ಜನ ಯಂತಿ । ನಾದ್ಯಃ । ವರ್ಣಾನಾಂ ಕ್ಷಣಿಕಾನಾಂ ಸಮೂಹಾಸಂಭವಾತ್ । ನಾಂತ್ಯಃ । ವ್ಯಸ್ತವರ್ಣೇಭ್ಯೋಽರ್ಥಪ್ರತ್ಯಯಾ ಽಸಂಭಾತ್ । ನ ಚ ವ್ಯಾಸಸಮಾಸಾಭ್ಯಾಮನ್ಯಃ ಪ್ರಕಾರಃ ಸಮಸ್ತೀತಿ । ತಸ್ಮಾದ್ವರ್ಣಾನಾಂ ವಾಚ ಕತ್ವಾನುಪಪತ್ತೌ ಯದ್ಬಲಾದರ್ಥಪ್ರತಿಪತ್ತಿಃ ಸ ಸ್ಫೋಟಃ । ವರ್ಣಾತಿರಿಕ್ತೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣಾಭಿವ್ಯಂಗ್ಯೋಽರ್ಥಪ್ರತ್ಯಾಯಕೋ ನಿತ್ಯಃ ಶಬ್ದಃ ಸ್ಫೋಟ ಇತಿ ತದ್ವಿದೋ ವದಂತಿ ।

ನೈಯಾಯಿಕ ಮತದಿಂದ ಆಶಂಕಿಸುತ್ತಾರೆ. 'ನನು'—ಇತಿ. 'ಘಟಮಾನಯ' ಎಂದು ವಾಕ್ಯೋಚ್ಚಾರಣ ಮಾಡಿದಾಗ ಅಲ್ಲಿರುವ ಘಕಾರಾದಿಗಳು ಕಂಠಾದಿಸ್ಥಾನಗಳಲ್ಲಿ ವಾಯುಸಂಯೋಗದಿಂದ ಉಂಟಾಗುತ್ತವೆ. ಆಮೇಲೆ ಶ್ರವಣೇಂದ್ರಿಯಕ್ಕೆ ಗೋಚರ ವಾಗಿ ವಿನಾಶಹೊಂದುತ್ತವೆ. ಇವೇ ಶಬ್ದಗಳು. ಇವುಗಳಿಂದ ಅತಿರಿಕ್ತವಾದ ಬೇರೊಂದು ಶಬ್ದವಿಲ್ಲ. ಕಂಬುಗ್ರೀವಾದಿಗಳುಳ್ಳ ವಸ್ತುವಾಚಕಗಳೂ ಆಶಬ್ದಗಳೇ ಆಗುತ್ತವೆ. ಆದುದ ರಿಂದ ಅವು ಅನಿತ್ಯವೆಂದು ಅವರ ಮತ. ವೈಯಾಕರಣರು ಹೀಗೆ ಅಂಗೀಕರಿಸುವುದಿಲ್ಲ ಇದು ಶಬ್ದವಾಗುವುದಿಲ್ಲ. ಶಬ್ದ ವ್ಯಂಜಕವಾದ ಧ್ವನಿಯಿದು. ಅದರಿಂದ ವ್ಯಂಗ್ಯ ವಾದುದು ಶಬ್ದ. ಅದೇ ವಸ್ತುವಾಚಕವಾಗುತ್ತದೆ. ಅದು ನಿತ್ಯ ಅದಕ್ಕೆ ಉತ್ಪತ್ತಿ ವಿನಾಶಗಳಿರುವುದಿಲ್ಲ. ಇದಕ್ಕೆ ಸ್ಫೋಟವೆಂದು ಹೆಸರು. ಇದನ್ನು ಪ್ರಕಾಶಪಡಿಸುವ ಧ್ವನಿಗೆ ಅರ್ಥವಿಲ್ಲ. 'ಘಟಮಾನಾಯ' ಎಂದು ಉಚ್ಚಾರಿಸಿದ ಧ್ವನಿಯಿಂದ ವಾಚಕ ವಾದ ನಿತ್ಯಶಬ್ದವು ಅಭಿವ್ಯಕ್ತವಾಗಿ ಅದರಿಂದ ಅರ್ಥಜ್ಞಾನವಾಗುತ್ತದೆ ಎಂದು ಹೇಳು ತ್ತಾರೆ. ಇದನ್ನೇ 'ಗೌರಿತಿ'—ಎಂಬ ವಾಕ್ಯದಿಂದ ವಿವರಿಸುತ್ತಾನೆ. 'ಏಕಪದಾವ ಗತೇಃ'—ಇತಿ. 'ಏಕಂಪದಂ' ಎಂದು ಏಕತ್ವವನ್ನು ಗ್ರಹಿಸುವ ಸರ್ವಜನಪ್ರಸಿದ್ಧವಾದ ಪ್ರತೀತಿಯೆಂದರ್ಥ. ಇಲ್ಲಿ ಏಕತ್ವ ವರ್ಣದಲ್ಲಿರುವುದಿಲ್ಲ. ಏಕೆಂದರೆ ವರ್ಣಗಳು ಅನೇಕ ವಾಗಿವೆ. ಆದುದರಿಂದ ಅದಕ್ಕೆ ಆಶ್ರಯವಾದ ವರ್ಣಸಮೂಹದಿಂದ ವ್ಯಂಗ್ಯವಾದುದನ್ನು ಅವಶ್ಯವಾಗಿ ಅಂಗೀಕರಿಸಬೇಕು. ಅದೇ ಸ್ಫೋಟ. 'ವ್ಯಸ್ತ'—ಇತಿ. ಒಂದೊಂದು ವರ್ಣವನ್ನು ಉಚ್ಚರಿಸಿದಾಗ ಅದರಿಂದ ಅರ್ಥಾವಬೋಧವಾಗುವುದಿಲ್ಲವೆಂದರ್ಥ. ಅದೂ ಅಲ್ಲದೆ ಪ್ರತ್ಯೇಕವಾಗಿ ಅರ್ಥವಿದೆಯೆಂದರೆ ಒಂದರಿಂದಲೇ ಅರ್ಥ ಪ್ರತೀತಿಯುಂಟಾಗು ವಾಗ ಉಳಿದವರ್ಣಗಳು ಅನರ್ಥವೆಂದು ಹೇಳಬೇಕಾಗುತ್ತದೆ. ಮತ್ತು ಒಂದು ಪದ ದಲ್ಲಿ ಎಷ್ಟು ವರ್ಣಗಳವೆಯೋ ಅಷ್ಟು ವಸ್ತುಬೋಧವಾಗಬೇಕಾಗುತ್ತದೆ. ಅಥವಾ ವರ್ಣಗಳಿಗೆ ಪರ್ಯಾಯತಾಪತ್ತಿದೋಷ ಬರುತ್ತದೆ. ಎರಡು ಮಾರ್ಗಗಳಿಗಿಂತ ಬೇರೆ ಮಾರ್ಗವಿಲ್ಲ. ಆದುದರಿಂದ ಅರ್ಥಜ್ಞಾನಕ್ಕೋಸ್ಕರ ಸ್ಫೋಟವನ್ನಂಗೀಕರಿಸಲೇಬೇಕು. ವರ್ಣಗಳಿಗಿಂತ ಬೇರೆಯಾಗಿ ವರ್ಣಗಳಿಂದ ಪ್ರಕಾಶಿತವಾಗಿ, ಅರ್ಥಬೋಧಕವಾಗಿ, ನಿತ್ಯ ವಾಗಿರುವ ಶಬ್ದವೇ ಸ್ಫೋಟವೆಂದು ಸಿದ್ಧಾಂತ. (ಅದನ್ನು ತಿಳಿದವರು ಹೇಳುತ್ತಾರೆ).

ಅತ ಏವ ಸ್ಫುಟ್ಯತೇ ವ್ಯಜ್ಯತೇ ವರ್ಣೈರಿತಿ ಸ್ಫೋಟೋವರ್ಣಾಭಿವ್ಯಂಗ್ಯಃ ಸ್ಫುಟತಿ ಸ್ಫುಟೀಭವಂತ್ಯಸ್ಮಾದರ್ಥ ಇತಿ ಸ್ಫೋಟೋಽರ್ಥಪ್ರತ್ಯಾಯಕ ಇತಿ ಸ್ಫೋಟ ಶಬ್ದಾರ್ಥಮುಭಯಥಾ ನಿರಾಹುಃ । ತಥಾ ಚೋಕ್ತಂ ಭಗವತಾ ಪತಂಜಲಿನಾ ಮಹಾಭಾಷ್ಯೇ—ಅಥ ಗೌರಿತ್ಯತ್ರ ಕಃ ಶಬ್ದೋ ಯೇನೋಚ್ಚಾರಿತೇನಸಾ ಸ್ನಾ ಲಾಂಗೂಲಕಕುದ ಖುರವಿಷಾಣಿನಾಂ ಸಂಪ್ರತ್ಯಯೋ ಭವತಿ ಸ ಶಬ್ದಃ (ಪಾ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮ-ಭಾ-೧-೬) ಇತಿ। ವಿವೃತಂ ಚ ಕೈಯಟೇನ—ವೈಯಾಕರಣಾ ವರ್ಣವ್ಯತಿರಿಕ್ತಸ್ಯ ಪದಸ್ಯ ವಾಚಕತ್ವಮಿಚ್ಛಂತಿ। ವರ್ಣಾನಾಂ ವಾಚಕತ್ವೇ ದ್ವಿತೀಯಾದಿವರ್ಣೋಚ್ಚಾರಣಾನರ್ಥಕ್ಯಪ್ರಸಂಗಾದಿತ್ಯಾದಿನಾ ತದ್ವ್ಯತಿರಿಕ್ತಃ ಸ್ಫೋಟಃ ನಾದಾಭಿವ್ಯಂಗ್ಯಃ ವಾಚಕೋ ವಿಸ್ತರೇಣ ವಾಕ್ಯಪದೀಯೇ ವ್ಯವಸ್ಥಾಪಿತ ಇತ್ಯಂ ತೇನ ಪ್ರಬಂಧೇನ ॥

ಸ್ಫೋಟಪದವ್ಯುತ್ಪತ್ತಿಯನ್ನು ತೋರಿಸುತ್ತಾನೆ. 'ಸ್ಫುಟ್ಯತೇ'—ಇತಿ. ವರ್ಣಗಳಿಂದ ಪ್ರಕಾಶಿಸಲ್ಪಡುವುದು ಸ್ಫೋಟವೆಂದು ಒಂದು ರೀತಿಯ ವ್ಯುತ್ಪತ್ತಿ. ಇದರಿಂದ ಅರ್ಥವು ಸ್ಪಷ್ಟವಾಗಿ ತಿಳಿಯಲ್ಪಡುತ್ತದೆಂದು ಇನ್ನೊಂದು ರೀತಿಯ ವ್ಯುತ್ಪತ್ತಿ. ಇದನ್ನು ಭಾಷ್ಯಕಾರರೂ ವಿಶದಪಡಿಸಿರುತ್ತಾರೆ. 'ಯೇನ'—ಇತಿ. ಗೌಃ ಎಂಬಲ್ಲಿ ಶಬ್ದ ಯಾವುದು ಎಂದು ಪ್ರಶ್ನಿಸಿ ಅದಕ್ಕೆ ನಾನಾ ರೀತಿಯಿಂದ ಉತ್ತರ ಹೇಳಲು ಸಾಧ್ಯವಾಗುವುದಿಲ್ಲವೆಂದು ವಿಶದಪಡಿಸಿ ಆಮೇಲೆ 'ಯೇನೋಚ್ಚಾರಿತೇನ'—ಎಂಬುದರಿಂದ ಸಮಾಧಾನ ಹೇಳಿರುತ್ತಾರೆ. ಉಚ್ಚಾರಣ ಕ್ರಿಯೆಯಿಂದ ಪ್ರಕಾಶಿತವಾದ ಯಾವ ಶಬ್ದದಿಂದ ಗಂಗೆತೊಗಲುಳ್ಳ (ಗೋಗಲಕಂಬಲ) ಬಾಲವುಳ್ಳ, ಭುಜವುಳ್ಳ, ಗೊರಸುಳ್ಳ, ಕೊಂಬುಳ್ಳ ವ್ಯಕ್ತಿಯಜ್ಞಾನವುಂಟಾಗುವುದೋ ಅದೇ ಶಬ್ದ ಇದನ್ನು ಕೈಯಟರು ಹೀಗೆ ವಿವರಿಸಿರುತ್ತಾರೆ. ವೈಯಾಕರಣರು ವರ್ಣವ್ಯತಿರಿಕ್ತವಾದ ಪದಕ್ಕೆ ವಾಚಕತ್ವವನ್ನು ಹೇಳುತ್ತಾರೆ. ವರ್ಣಗಳಿಗೆ ವಾಚಕತ್ವಹೇಳುವುದಾದರೆ ಒಂದು ವರ್ಣವೇ ವಾಚಕವಾಗಿ ದ್ವಿತೀಯಾದಿ ವರ್ಣಗಳಿಗೆ ಆನರ್ಥಕ್ಯ ಬರಬೇಕಾಗುತ್ತದೆ. ಆದುದರಿಂದ ಅದಕ್ಕಿಂತಲೂ ವ್ಯತಿರಿಕ್ತವಾದ ನಾದದಿಂದ ಅಂದರೆ ವರ್ಣರೂಪಧ್ವನಿಯಿಂದ ಅಭಿವ್ಯಕ್ತವಾದ ಸ್ಫೋಟವೇ ವಾಚಕವಾಗುತ್ತದೆ. ಇದು ವಾಕ್ಯಪದೀಯದಲ್ಲಿ ವಿಸ್ತರವಾಗಿ ವರ್ಣಿಸಿದೆಯೆಂದು ಅವರು ವಿವರಿಸಿರುತ್ತಾರೆ.

ನನು ಸ್ಫೋಟಸ್ಯಾಪ್ಯರ್ಥಪ್ರತ್ಯಾಯಕತ್ವಂ ನ ಘಟತೇ। ವಿಕಲ್ಪಾಸಹತ್ವಾತ್। ಕಿಮಭಿವ್ಯಕ್ತಃ ಸ್ಫೋಟೋಽರ್ಥಂ ಪ್ರತ್ಯಾಯಯತಿ ? ಅನಭಿವ್ಯಕ್ತೋ ವಾ ? ನ ಚರಮಃ। ಸರ್ವಪದಾರ್ಥ ಪ್ರತ್ಯಯಲಕ್ಷಣಕಾರ್ಯೋತ್ಪಾದಪ್ರಸಂಗಾತ್। ಸ್ಫೋಟಸ್ಯ ನಿತ್ಯತ್ವಾಭ್ಯುಪಗಮೇನ ನಿರಪೇಕ್ಷ್ಯಸ್ಯ ಹೇತೋಃ ಸದಾ ಸತ್ವೇನ ಕಾರ್ಯಸ್ಯ ವಿಲಂಬಾಯೋಗಾತ್। ಅಥೈತದ್ದೋಷಪರಿಜಿಹೀರ್ಷಯಾಭಿವ್ಯಕ್ತಃ ಸ್ಫೋಟೋಽರ್ಥಂ ಪ್ರತ್ಯಾಯಯತೀತಿ ಕಕ್ಷೀಕ್ರಿಯತೇ ತಥಾಪ್ಯಭಿವ್ಯಂಜಯಂತೋ ವರ್ಣಾಃ ಕಿಂ ಪ್ರತ್ಯೇಕಮಭಿವ್ಯಂಜಯಂತಿ ಸಂಭೂಯ ವಾ। ಪಕ್ಷದ್ವಯೇಽಪಿ ವರ್ಣಾನಾಂ ವಾಚಕತ್ವಪಕ್ಷೇ ಭವತಾ ಯೇ ದೋಷಾ ಭಾಷಿತಾಸ್ತ ಏವ ಸ್ಫೋಟಾಭಿವ್ಯಂಜಕತ್ವಪಕ್ಷೇ ವ್ಯಾವರ್ತನೀಯಾಃ। ತದುಕ್ತಂ ಭಟ್ಟಾಚಾರ್ಯೈರ್ಮೀಮಾಂಸಾಶ್ಲೋಕವಾರ್ತಿಕೇ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಸ್ಯಾನವಯವಃ ಸ್ಫೋಟೋ ವ್ಯಜ್ಯತೇ ವರ್ಣಬುದ್ಧಿಭಿಃ ।
ಸೋಽಪಿ ಪರ್ಯನುಯೋಗೇನ ನೈಕೇನಾಽಪಿ ವಿಮುಚ್ಯತೇ ॥ ಇತಿ.

ಸ್ಫೋಟಕ್ಕೂ ಅರ್ಥಬೋಧಕತ್ವವು ಕೂಡುವುದಿಲ್ಲ. ಎರಡು ರೀತಿಯಿಂದ ಅದು ಅರ್ಥಬೋಧಕವೆಂದು ಹೇಳಬೇಕು. ಆ ಎರಡು ರೀತಿಯೂ ಸಮಂಜಸವಾಗುವುದಿಲ್ಲ ನಾದದಿಂದ ಅಭಿವ್ಯಕ್ತನಾದ ಸ್ಫೋಟವು ಅರ್ಥಪ್ರತ್ಯಾಯಕವಾಗುತ್ತದೆಯೇ ? ಅಥವಾ ಅನಭಿವ್ಯಕ್ತವಾಗಿ ಬೋಧಕವಾಗುತ್ತದೆಯೇ? 'ನ ಚರಮಃ'— ಇತಿ. ಅನಭಿವ್ಯಕ್ತ ಪಕ್ಷವು ಸ್ಫೋಟವಾದಿಸಂಮತವಾಗದಿರುವುದರಿಂದಲೂ ಅತ್ಯಂತಾಸಂಭಾವಿತವಾದುದರಿಂದಲೂ ಸೂಚೀಕಟಾಹನ್ಯಾಯದಿಂದ ಮೊದಲು ಖಂಡಿಸುತ್ತಾನೆ. ಸರ್ವಪದಾರ್ಥ ಪ್ರತ್ಯಯ ವೆಂದರೆ ಅರ್ಥ ಬೋಧ. ತದ್ರೂಪಂ ಯತ್ಕಾರ್ಯಂ, ತಸ್ಯ ಕಾರಣಂ ಸ್ಫೋಟಃ — ಎಂದರ್ಥ. ಅಭಿವ್ಯಕ್ತನಪೇಕ್ಷಿತವಾದುದರಿಂದ ಸದಾ ಅದು ಇರುವುದರಿಂದ ಸದಾ ಅರ್ಥಬೋಧವಾಗ ಬೇಕಾಗುತ್ತದೆಂದರ್ಥ. 'ಅಥ' — ಇತಿ. ಈ ದೋಷನಿವಾರಣೆಗೋಸ್ಕರ ಅಭಿವ್ಯಕ್ತ ವಾದ ಸ್ಫೋಟವೇ ಅರ್ಥಬೋಧಕವಾಗುತ್ತದೆಂದು ಅಂಗೀಕರಿಸುವುದಾದರೆ ಅಭಿವ್ಯಕ್ತ ಗೊಳಿಸುವ ವರ್ಣಗಳು ಪ್ರತ್ಯೇಕವಾಗಿ ಅಭಿವ್ಯಕ್ತಗೊಳಿಸುತ್ತವೆಯೋ ? ಅಥವಾ ಒಟ್ಟು ಸೇರಿ ಅಭಿವ್ಯಕ್ತಪಡಿಸುತ್ತವೆಯೋ ಎಂದು ಕೇಳಬೇಕು. ಎರಡು ಪಕ್ಷದಲ್ಲಿಯೂ ವರ್ಣ ಗಳು ವಾಚಕ ಎಂಬ ಪಕ್ಷದಲ್ಲಿ ಏನು ದೋಷಗಳು ಹೇಳಲ್ಪಟ್ಟವೆಯೋ ಅವೆಲ್ಲವೂ ಈ ಅಭಿವ್ಯಂಜಕತ್ವಪಕ್ಷದಲ್ಲಿ ದೂರಮಾಡಲ್ಪಡಬೇಕಾಗಿವೆ. ವ್ಯಾವರ್ತನೀಯಾಃ—ಪ್ರತಿ ನಿವರ್ತನೀಯಾಃ ॥ ಸ್ಫೋಟವಾದಿಯು ಮೇಲೂ ಆಪಾದಿಸಬೇಕಾಗಿವೆಯೆಂದು ತಾತ್ಪರ್ಯ. ವರ್ಣಗಳು ಪ್ರತ್ಯೇಕವಾಗಿ ಅಭಿವ್ಯಕ್ತಗೊಳಿಸುತ್ತವೆಯೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಒಂದೊಂದು ವರ್ಣಉಚ್ಚರಿತವಾದಾಗ ಎಂದೂ ಸ್ಫೋಟವು ಅಭಿವ್ಯಕ್ತವಾಗುವುದಿಲ್ಲ. ಅದೂ ಅಲ್ಲದೆ ಒಂದು ವರ್ಣದಿಂದಲೇ ಅದು ಅಭಿವ್ಯಕ್ತವಾಗು ವಾಗ ಇತರ ವರ್ಣಗಳು ವ್ಯರ್ಥವೆಂದು ಹೇಳಬೇಕಾಗುತ್ತದೆ. ಮತ್ತು ಒಂದು ಪದದಲ್ಲಿ ಎಷ್ಟು ವರ್ಣಗಳಿವೆಯೋ ಅಷ್ಟು ಸಂಖ್ಯೆಯುಳ್ಳ ಸ್ಫೋಟಗಳು ಅಭಿವ್ಯಕ್ತವಾಗಬೇಕಾಗು ತ್ತದೆ. ಒಟ್ಟಿಗೆ ಸೇರಿ ಅಭಿವ್ಯಕ್ತಗೊಳಿಸುತ್ತವೆಯೆಂದೂ ಹೇಳಲು ಸಾಧ್ಯವಿಲ್ಲ. ವರ್ಣ ಗಳು ಕ್ಷಣಿಕಗಳಾದುದರಿಂದ ಆಶುವಿನಾಶಿಗಳಾದುದರಿಂದ ಅವುಗಳ ಸಮೂಹವು ಸಂಭವಿಸ ಲಾರದು. ಈ ಆಕ್ಷೇಪವನ್ನು ಕುಮಾರಿಲರು ತೋರಿಸುತ್ತಾರೆ.

'ಯಸ್ಯ' ಇತಿ. ನಿರವಯವವಾದ ವಾಚಕವಾದ ಸ್ಫೋಟವು ವರ್ಣಜ್ಞಾನದಿಂದ ಅಭಿವ್ಯಕ್ತವಾಗುತ್ತದೆಂದು ಯಾರಮತವೋ ಆ ಸ್ಫೋಟವಾದಿಯಾದ ವೈಯಾಕರಣನೂ ತನ್ನಿಂದ ಹಿಂದೆ ಪ್ರಶ್ನಿಸಲ್ಪಟ್ಟ ಪ್ರತಿವಾದಿಯಂತೆ ಅಂದರೆ ವೈಯಾಕರಣನು ಪ್ರತಿವಾದಿಗೆ ಕೇಳಿದ ಪ್ರಶ್ನೆಗಳಲ್ಲಿ ಒಂದರಿಂದಲೂ ಬಿಡಲ್ಪಡುವುದಿಲ್ಲ. ಕಿಂವರ್ಣಾಃ ಸಮಸ್ತಾಃ— ಇತ್ಯಾದಿ ಪ್ರಶ್ನೆಗಳನ್ನು ಸ್ಫೋಟವಾದಿಯೂ ಕೇಳಿದ್ದನು. ಅದನ್ನೇ ಈಗ ಅವನಿಗೂ ಕೇಳಬೇಕಾಗಿದೆಯೆಂದರ್ಥ. ಸ್ಫೋಟ ಸಾವಯವ ಎಂದಿದ್ದರೆ ಆಗ ಒಂದು ವರ್ಣದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಯವ ಅವಯವರೂಪವಾಗಿಯೇ ಸ್ಫೋಟವು ಅಭಿವ್ಯಕ್ತವಾಗುತ್ತದೆಂದು ಹೇಳಬಹುದಾಗಿತ್ತು. ಆದರೆ ಸ್ಫೋಟವಾದಿಗಳು ಸ್ಫೋಟವನ್ನು ನಿರವಯವವೆಂದು ಅಂಗೀಕರಿಸಿರುತ್ತಾರೆ. ಆದುದರಿಂದ ಅವರು ಪೂರ್ವಪಕ್ಷಿಗೆ ಕೇಳಿದ ಪ್ರಶ್ನೆಗಳು ಅವರಿಗೇ ಈಗ ಪೂರ್ವಪಕ್ಷಿಯು ಕೇಳುವುದರಿಂದ ಸಮಾಧಾನ ಹೇಳಬೇಕಾಗಿದೆ. 'ವಿಭಕ್ತ್ಯಂತ'—ಇತಿ. ಪ್ರಥಮಾದ್ವಿತೀಯಾದಿ ಪ್ರತ್ಯಯಗಳಿಗೆ ಸುಪ್ ಎಂದು ಹೆಸರು. ಧಾತುಗಳ ಮೇಲೆ ವಿಧಿಸಿದ ತಿಪುಂತಾದವುಗಳಿಗೆ ತಿಙ್ ಎಂದು ಹೆಸರು. ಇವೆರಡಕ್ಕೂ ವಿಭಕ್ತಿ ಎಂದು ಒಂದು ಹೆಸರು. ವಿಭಕ್ತ್ಯಂತವಾದ ಶಬ್ದರೂಪಕ್ಕೆ ಪದವೆಂದು ಹೆಸರು. 'ತೇ ವಿಭಕ್ತಿ'—ಇತಿ. ತೇ ಪದದಿಂದ ವರ್ಣಗಳು ಪರಾಮೃಷ್ಟವಾಗುತ್ತವೆ. ವಿಭಕ್ತಿಸಂಜ್ಞಕಪ್ರತ್ಯಯಾಂತವಾದ ವರ್ಣಗಳು ಪದಸಂಜ್ಞೆಯುಳ್ಳವುಗಳಾಗುತ್ತವೆಯೆಂದರ್ಥ. ಈ ಎರಡು ಸೂತ್ರಗಳಿಂದ ವರ್ಣಸಮುದಾಯವೇ ಪದವೆಂದೂ, ಇದಕ್ಕಿಂತ ಅತಿರಿಕ್ತವಾದ ಸ್ಫೋಟವು ಪದವಲ್ಲವೆಂದೂ ತಿಳಿಯುತ್ತದೆ. 'ಸಂಕೇತ'—ಇತಿ. ವರ್ಣಗಳು ಆಶುನಾಶಿಯಾದುದರಿಂದ ಸಮೂಹ ಸಂಭವಿಸದಿರುವುದರಿಂದ ಪದಬುದ್ಧಿಯುಂಟಾಗುವುದು ಹೇಗೆ? ಎಂಬ ಶಂಕೆ ಬರುತ್ತದೆ. ಆದರೂ ವೃದ್ಧ ವ್ಯವಹಾರದಿಂದ ವರ್ಣಸಮುದಾಯದಲ್ಲಿಯೇ ಸಂಕೇತಗ್ರಹವಾಗಿ, ಆದರಿಂದ ಏಕಾರ್ಥಪ್ರತ್ಯಾಯವುಂಟಾಗುವುದು ಪ್ರಸಿದ್ಧವಾದುದರಿಂದ ವಿನಾಶಿಯಾದರೂ ಅವುಗಳಿಂದ ಉತ್ತರೋತ್ತರಾನುಗ್ರಹವಾಗುತ್ತದೆಂದು ಅನುಭವದಿಂದ ಹೇಳಬೇಕು. ಹೀಗೆ ಸಮೂಹಕಲ್ಪನೆಯಿಂದ ಪದಬುದ್ಧಿಗೆ ಯಾವ ಬಾಧಕವೂ ಇರುವುದಿಲ್ಲ.

ವಿಭಕ್ತ್ಯಂತೇಷ್ವೇವ ವರ್ಣೇಷು 'ಸುಪ್ತಿಙಂತಂ ಪದಂ' (ಪಾ-ಸೂ-೧-೪-೪) ಇತಿ ಪಾಣಿನಿನಾ, "ತೇ ವಿಭಕ್ತ್ಯಂತಾಃ ಪದಂ" (ಗೌ-ಸೂ-೨-೨-೬೦) ಇತಿ ಗೌತಮೇನ ಚ ಪದಸಂಜ್ಞಾಯಾಃ ವಿಹಿತತ್ವಾತ್ಸಂಕೇತಗ್ರಹೇಣಾನುಗ್ರಹವಶಾದ್ವರ್ಣೇಷ್ವೇವ ಪದಬುದ್ಧಿರ್ಭವಿಷ್ಯತಿ ||

ತರ್ಹಿ ಸರ ಇತ್ಯೇತಸ್ಮಿನ್ಪದೇ ಯಾವಂತೋ ವರ್ಣಾಸ್ತಾವಂತ ಏವ ರಸ ಇತ್ಯತ್ರಾಪಿ | ಏವಂ ವನಂ ನವಂ ನದೀ ದೀನಾ ರಾಮೋ ಮಾರೋ ರಾಜಾ ಜಾರೇತ್ಯಾದಿಷ್ವರ್ಥಭೇದಪ್ರತೀತಿರ್ನ ಸ್ಯಾದಿತಿ ಚೇನ್ನ || ಕ್ರಮಭೇದೇನ ಭೇದ ಸಂಭವಾತ್ | ತದುಕ್ತಂ ತೌತಾತಿತೈಃ—

ಯಾವಂತೋ ಯಾದೃಶಾ ಯೇ ಚ ಯದರ್ಥಪ್ರತಿಪಾದನೇ ||
ವರ್ಣಾಃ ಪ್ರಜ್ಞಾತಸಾಮರ್ಥ್ಯಾಸ್ತೇ ತಥೈವಾವಬೋಧಕಾಃ ||ಇತಿ||

ತಸ್ಮಾದ್ದ್ವಯೋರ್ಭಯೋಃ ಸಮೋ ದೋಷೋ ನ ತೇನೈಕಶ್ಚೋದ್ಯೋ ಭವತೀತಿ ನ್ಯಾಯಾದ್ವರ್ಣಾನಾಮೇವ ವಾಚಕತ್ವೋಪಪತ್ತೌ ನಾತಿರಿಕ್ತ ಸ್ಫೋಟಕಲ್ಪನಾವಕಲ್ಪತ ಇತಿ ಚೇತ್— ತದೇತತ್ಕಾಶಕುಶಾವಲಂಬನಕಲ್ಪಮ್ | ವಿಕಲ್ಪಾನುಪಪತ್ತೇಃ—

ವರ್ಣಗಳೇ ವಾಚಕಗಳೆಂದರೆ ರಸ ಎಂಬಲ್ಲಿ ಎಷ್ಟು ವರ್ಣಗಳಿವೆಯೋ ಅಷ್ಟೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣಗಳು ಸರಃ ಎಂಬಲ್ಲಿರುತ್ತವೆ. ಹೀಗೆಯೇ ವನ, ನವಾದಿಗಳಲ್ಲಿರುತ್ತವೆ. ಇವುಗಳಿಂದ ಅರ್ಥಭೇದತೋರುವುದು ಹೇಗೆ? ಎಂದು ಶಂಕೆ. ಕ್ರಮವುಳ್ಳ ವರ್ಣಗಳಿಗೇ ವಾಚಕತ್ವವನ್ನಂಗೀಕರಿಸುವುದರಿಂದ ಈ ದೋಷಕ್ಕೆ ಅವಕಾಶವಿಲ್ಲವೆಂದು ಸಮಾಧಾನ. ಇದನ್ನೇ 'ಯಾವಂತಃ'—ಶ್ಲೋಕದಿಂದ ವಿವರಿಸಿರುತ್ತಾರೆ. ಸಕಾರೋತ್ತರರಾ ಕಾರೋತ್ತರರೇಫೋತ್ತರವಿಸರ್ಗವೇ ಸರೋವರ ವಾಚಕವೆಂದು ಅಂಗೀಕರಿಸುವುದರಿಂದ ರಸವೆಂಬುದು ಅಲ್ಲಿ ವಾಚಕವಾಗುವುದಿಲ್ಲ. 'ತಸ್ಮಾತ್'—ಇತಿ.

"ಯಶ್ಚೋಭಯೋಃ ಸಮೋ ದೋಷಃ ಪರಿಹಾರೋಽಪಿ ವಾ ಸಮಃ ।
ನೈಕಃ ಪರ್ಯನುಯೋಕ್ತವ್ಯಸ್ತಾದೃಗರ್ಥವಿಚಾರಣೇ" ॥

ಎಂದು ನ್ಯಾಯ. ಇಬ್ಬರಲ್ಲಿಯೂ ದೋಷವೂ ಪರಿಹಾರವೂ ಸಮವಾಗಿರುವಾಗ ಒಬ್ಬರಿಗೊಬ್ಬರು ಆಕ್ಷೇಪಿಸುವುದೇನಿದೆ? ಎಂದು ಪೂರ್ವಪಕ್ಷಿಯ ಆಕ್ಷೇಪ. ಆದುದರಿಂದ ವರ್ಣಗಳಿಗೇ ವಾಚಕತ್ವಸಂಭವಿಸುವಾಗ ಇವುಗಳಿಂದ ಅತಿರಿಕ್ತವಾದ ಸ್ಫೋಟಕಲ್ಪನೆ ಮಾಡಬೇಕಾಗಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ. 'ತದೇತತ್'—ಇತಿ. ಕೈಯಿಂದ ನದೀದಾಟುವವನು ಸಾಮರ್ಥ್ಯಸಾಲದೆ ಮುಳುಗುವಾಗ ಪ್ರಾಣಸಂರಕ್ಷಣೆಗೆ ದೃಢವಾದ ಆಶ್ರಯಪಡೆಯಬೇಕು ಕೇವಲ ದರ್ಭೆಯಂತಿರುವ ಹುಲ್ಲನ್ನು ಆಶ್ರಯಿಸಿದರೆ ಅದರಿಂದ ಏನೂ ಆಗಲಾರದು. ಅದನ್ನು ಆಶ್ರಯಿಸಿದಂತೆ ಪೂರ್ವಪಕ್ಷಿಯ ಅವಸ್ಥೆ ಆಗಿದೆಯೆಂದು ತಾತ್ಪರ್ಯ. ವಿಕಲ್ಪ ಹೇಗೂ ಕೂಡುವುದಿಲ್ಲವೆಂದು ಖಂಡಿಸುತ್ತಾನೆ.

ಕಿಂ ವರ್ಣಮಾತ್ರಂ ಪದಪ್ರತ್ಯಯಾಲಂಬನಂ ವರ್ಣಸಮೂಹೋವಾ । ನಾದ್ಯಃ । ಪರಸ್ಪರವಿಲಕ್ಷಣವರ್ಣಮಾಲಾಯಾಮಭಿನ್ನಂ ನಿಮಿತ್ತಂ ಪುಷ್ಪೇಷು ವಿನಾ ಸೂತ್ರಂ ಮಾಲಾಪ್ರತ್ಯಯವದಿತ್ಯೇಕಂ ಪದಮಿತಿ ಪ್ರತಿಪತ್ತೇರನುಪಪತ್ತೇಃ । ನಾಪಿ ದ್ವಿತೀಯಃ । ಉಚ್ಚರಿತಪ್ರಧ್ವಸ್ತಾನಾಂ ವರ್ಣಾನಾಂ ಸಮೂಹಭಾವಾಸಂಭವಾತ್ । ತತ್ರ ಹಿ ಸಮೂಹವ್ಯಪದೇಶೋ ಯೇ ಪದಾರ್ಥಾ ಏಕಸ್ಮಿನ್ಪ್ರದೇಶೇ ಸಹಾವಸ್ಥಿತತಯಾ ಜಕವ್ರೋಽನುಭೂಯಂತೇ । ಯಥೈಕಸ್ಮಿನ್ ಪ್ರದೇಶೇ ಸಹಾವಸ್ಥಿತತಯಾನುಭೂಯಮಾನೇಷು ಧವಖದಿರಪಲಾಶಾದಿಷು ಸಮೂಹವ್ಯಪದೇಶಃ ಯಥಾ ವಾ ಗಜನರತುರಗಾದಿಷು । ನ ಚ ತೇ ವರ್ಣಾಸ್ತಥಾನುಭೂಯಂತೇ । ಉತ್ಪನ್ನಪ್ರಧ್ವಸ್ತತ್ವಾತ್ । ಅಭಿವ್ಯಕ್ತಿಪಕ್ಷೇಽಪಿ ಕ್ರಮೇಣೈವಾಭಿವ್ಯಕ್ತಿಃ । ಸಮೂಹಾಸಂಭವಾತ್ । ನಾಪಿ ವರ್ಣೇಷು ಕಾಲ್ಪನಿಕಃ ಸಮೂಹಃ ಕಲ್ಪನೀಯಃ । ಪರಸ್ಪರಾಶ್ರಯಪ್ರಸಂಗಾತ್ । ಏಕಾರ್ಥಪ್ರತ್ಯಾಯಕತ್ವಸಿದ್ಧೌ ತದುಪಾಧಿನಾ ವರ್ಣೇಷು ಪದತ್ವಪ್ರತೀತಿ ಸ್ತತಿಸಿದ್ಧಾವೇಕಾರ್ಥಪ್ರತ್ಯಾಯಕತ್ವಸಿದ್ಧಿರಿತಿ । ತಸ್ಮಾದ್ವರ್ಣಾನಾಂ ವಾಚಕತ್ವಾಸಂಭವಾತ್ ಸ್ಫೋಟೋಭ್ಯುಪಗಂತವ್ಯಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಪ್ರತ್ಯಯಕ್ಕೆ ಒಂದು ವರ್ಣವು ಆಶ್ರಯವೇ ? ಅಥವಾ ವರ್ಣಸಮೂಹವೇ? ಒಂದು ವರ್ಣವೆಂದು ಹೇಳಲು ಸಾಧ್ಯವಿಲ್ಲ. ಹಗ್ಗವಿಲ್ಲದೆ ಪುಷ್ಪಗಳಲ್ಲಿ ಮಾಲಾಜ್ಞಾನವು ಹೇಗೆ ಬರುವುದಿಲ್ಲವೋ ಹಾಗೆ ಪರಸ್ಪರವಿಲಕ್ಷಣವಾದ ವರ್ಣಮಾಲೆಯಲ್ಲಿಯೂ ಒಂದು ಅನೇಕವರ್ಣಗಳಲ್ಲಿ ಅನುಗತವಾಗಿಲ್ಲದಿರುವುದರಿಂದ ಪದಪ್ರತ್ಯಯವುಂಟಾಗಲಾರದು. 'ನಾಪಿ'—ಇತಿ. ಉಚ್ಚರಿಸಿನಷ್ಟವಾಗುವುದರಿಂದ ವರ್ಣಗಳ ಸಮೂಹವೇ ಸಂಭವಿಸು ವುದಿಲ್ಲ. ಎಲ್ಲಿ ಪದಾರ್ಥಗಳು ಒಂದುಕಡೆ ಇದ್ದು ಒಟ್ಟಿಗೆ ಅನೇಕಗಳು ತೋರುತ್ತವೆಯೋ ಅಲ್ಲಿ ಸಮೂಹವೆಂದು ಕರೆಯಬಹುದು. ಧವಾದಿವೃಕ್ಷವಿಶೇಷಗಳು ಮೂರು ಒಂದೆಡೆ ಸೇರಿದಾಗ ಮೂರೂ ಅನುಭವವಿಷಯವಾಗುವುದರಿಂದ ಸಮುದಾಯವೆಂದು ವ್ಯವಹರಿ ಸಲು ಸಾಧ್ಯವಿದೆ. ಹಾಗೆಯೇ ಒಂದುಕಡೆ ಒಟ್ಟಿಗಿರುವ ಗಜನರತುರಗಾದಿಗಳಲ್ಲಿ ಸಮು ದಾಯವೆಂದು ಕರೆಯಲು ಸಾಧ್ಯವಿದೆ. ಉತ್ಪನ್ನಧ್ವಸ್ತಗಳಾಗುವುದರಿಂದ ವರ್ಣಗಳಲ್ಲಿ ಹೀಗೆ ಸಮುದಾಯ ವ್ಯವಹಾರಮಾಡಲು ಸಾಧ್ಯವಿಲ್ಲ. ಆದುದರಿಂದ ವರ್ಣಸಮೂಹ ವನ್ನು ಹೇಗೂ ಉಪಪಾದನೆ ಮಾಡಲಾಗುವುದಿಲ್ಲ. ಸ್ಫೋಟವಾದಿಪಕ್ಷದಲ್ಲಿಯೂ ಸ್ಫೋಟಾಭಿವ್ಯಂಜಕವರ್ಣಸಮೂಹವನ್ನು ತರುವುದು ಹೇಗೆ ? ಅಲ್ಲಿಯೂ ಈ ಅನುಪ ಪತ್ತಿ ಇಲ್ಲವೇ ? ಅಂದರೆ ಇಷ್ಟಾಪತ್ತಿಯೆಂದು ವಿವರಿಸುತ್ತಾನೆ. 'ಅಭಿವ್ಯಕ್ತಿಪಕ್ಷೇ'— ಇತಿ. ವರ್ಣಸಮೂಹದಿಂದ ಒಂದೇ ಕ್ಷಣದಲ್ಲಿ ಸ್ಫೋಟಾಭಿವ್ಯಕ್ತಿಯಾಗುತ್ತದೆಂದು ಹೇಳುವುದಿಲ್ಲ. ಸಮೂಹವು ಸಂಭವಿಸದಿರುವುದರಿಂದ ಕ್ರಮವಾಗಿಯೇ ಅಭಿವ್ಯಕ್ತಿ ಯೆಂದು ಅಂಗೀಕರಿಸುತ್ತೇವೆ. ವರ್ಣಗಳಲ್ಲಿ ಕಾಲ್ಪನಿಕವಾದ ಸಮೂಹವನ್ನೂ ಕಲ್ಪಿಸು ವುದಿಲ್ಲ. ಹಾಗೆ ಕಲ್ಪಿಸಿದರೆ ಪರಸ್ಪರಾಶ್ರಯದೋಷ ಬರುತ್ತದೆಂದು ತಿಳಿಸುತ್ತಾನೆ. 'ಏಕಾರ್ಥ'—ಇತಿ. ಏಕಾರ್ಥಪ್ರತ್ಯಾಯಕತ್ವಪದತ್ವ ಈ ಎರಡನ್ನು ಸ್ಫೋಟವಾದಿಗಳು ವರ್ಣಸಂಘಾತಕ್ಕೆ ಕಲ್ಪಿಸುವುದಿಲ್ಲ. ಸ್ಫೋಟಕ್ಕೇ ಕಲ್ಪಿಸುತ್ತಾರೆ. ಸ್ಫೋಟವನ್ನಂಗೀ ಕರಿಸದವರು ಇವೆರಡನ್ನು ಹೇಳುವಾಗ ಆ ದೋಷ ಪ್ರಸಕ್ತವಾಗುತ್ತದೆ. ವರ್ಣಗಳಲ್ಲಿ ಸಮೂಹವನ್ನು ಕಲ್ಪಿಸಿ ಇವೆರಡನ್ನೂ ಸಾಧಿಸಬೇಕು. ಆಗ ಏಕಾರ್ಥಪ್ರತ್ಯಾಯಕತ್ವ ಸಿದ್ಧಿಯಾಗಬೇಕಾದರೆ ಮೊದಲು ಅದರ ಉಪಾಧಿಯಾದ ವರ್ಣಗಳಲ್ಲಿ ಪದತ್ವಜ್ಞಾನವೂ, ಪದತ್ವಜ್ಞಾನ ಬರಬೇಕಾದರೆ ಏಕಾರ್ಥಪ್ರತ್ಯಾಯಕತ್ವಜ್ಞಾನವೂ ಅಪೇಕ್ಷಿತವಾಗುವುದ ರಿಂದ ದೋಷ ಬರುತ್ತದೆ. ಏಕಾರ್ಥಪ್ರತ್ಯಾಯಕತ್ವದ ಅನುಭವವಿದ್ದರೂ ಸ್ಫೋಟಾಂಗೀ ಕಾರದಿಂದಲೇ ಅದು ಸಿದ್ಧಿಸುವಾಗ ಅಸಂಭವಿಯಾದ ವರ್ಣಸಮೂಹಕಲ್ಪನೆ ವ್ಯರ್ಥ ವೆಂದು ತಾತ್ಪರ್ಯ.

ನನು ಸ್ಫೋಟವ್ಯಂಜಕತಾಪಕ್ಷೇಽಪಿ ಪ್ರಾಗುಕ್ತವಿಕಲ್ಪಪ್ರಸರೇಣ ಘಟ್ಟಕುಟೀಪ್ರಭಾತಾಯಿ ತಮಿತಿ ಚೇತ್ — ತದೇತನ್ಮನೋರಾಜ್ಯವಿಜೃಂಭಣಮ್ । ವೈಷಮ್ಯಸಂಭ ವಾತ್ । ತಥಾ ಹಿ—ಅಭಿವ್ಯಂಜಕೋಽಪಿ ಪ್ರಥಮೋ ಧ್ವನಿಃ ಸ್ಫೋಟಮಸ್ಫುಟ ಮಭಿವ್ಯನಕ್ತಿ । ಉತ್ತರೋತ್ತರಾಭಿವ್ಯಂಜಕಕ್ರಮೇಣ ಸ್ಫುಟಂ ಸ್ಫುಟತರಂ ಸ್ಫುಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮುಮ್ । ಯಥಾ ಸ್ವಾಧ್ಯಾಯಃ ಸಕೃತ್ಪಠ್ಯಮಾನೋ ನಾವಧಾರ್ಯತೇ । ಅಭ್ಯಾಸೇನ ತು ಸ್ಫುಟಾವಸಾಯಃ । ಯಥಾ ವಾ ರಜತತ್ವಂ ಪ್ರಥಮಪ್ರತೀತೌ ಸ್ಫುಟಂ ನ ಚಕಾಸ್ತಿ । ಚರಮೇ ಚೇತಸಿ ಯಥಾವದಭಿವ್ಯಜ್ಯತೇ ।

ನಾದೈರಾಹಿತ ಬೀಜಾಯಾ ಮಂತ್ಯೇನ ಧ್ವನಿನಾ ಸಹ ।
ಆ ವೃತ್ತಿಪರಿಪಾಕಾಯಾಂ ಬುದ್ಧೌ ಶಬ್ದೋಽವಧಾರ್ಯತೇ॥ ವಾ-ಪ-೧-೮-೫ ॥

ಇತಿ ಪ್ರಾಮಾಣಿಕೋಕ್ತೇಃ । ತಸ್ಮಾದಸ್ಮಾಚ್ಛಬ್ದಾದರ್ಥಂ ಪ್ರತಿಪದ್ಯಾಮಹ ಇತಿ ವ್ಯವಹಾರ ವಶಾದ್ವರ್ಣಾನಾಮರ್ಥವಾಚಕತ್ವಾನುಪಪತ್ತೇಃ । ಪ್ರಥಮೇಕಾಂಡೇ ತತ್ರಭವದ್ಭಿಃ ಭರ್ತೃಹರಿಭಿರಭಿಹಿತತ್ವಾನ್ನಿರವಯಮರ್ಥಪ್ರತ್ಯಾಯಕಂ ಶಬ್ದತತ್ವಂ ಸ್ಫೋಟಾಖ್ಯಮಭ್ಯುಪಗಂತವ್ಯಮಿತಿ । ಏತತ್ಸರ್ವಂ ಪರಮಾರ್ಥ ಸಂವಿಲ್ಲಕ್ಷಣ ಸತ್ತಾಜಾತಿರೇವ ಸರ್ವೇಷಾಂ ಶಬ್ದಾನಾಮರ್ಥ ಇತಿ ಪ್ರತಿಪಾದನಪರೇ ಜಾತಿ ಸಮುದ್ದೇಶೇ ಪ್ರತಿಪಾದಿತಮ್॥

'ನನು'—ಇತಿ. 'ಕಿಮಭಿವ್ಯಕ್ತಃ'—ಇತ್ಯಾದಿಗಳಿಂದ ಹಿಂದೆ ಆಕ್ಷೇಪಮಾಡಿದೆ. ಘಟ್ಟಕುಟೀಪ್ರಭಾತನ್ಯಾಯ — ಸುಂಕದಕಟ್ಟೆಯನ್ನು ತಪ್ಪಿಸಿಕೊಳ್ಳಬೇಕೆಂದು ಒಬ್ಬ ಲೋಭಿಯು ರಾತ್ರಿಯೆಲ್ಲಾ ದಾರಿಬಿಟ್ಟು ತಿರುಗಿ ಬೆಳಿಗ್ಗೆ ಪುನಃ ಅದೇ ಸುಂಕದ ಕಟ್ಟೆಯನ್ನು ತಲ್ಪುವುದು. ಅದರಂತೆ ಸಿದ್ಧಾಂತಿಯ ಸ್ಥಿತಿಯೆಂದು ಹೇಳಬಾರದು. ಮೊದಲನೆಯ ವರ್ಣವು ಅಲ್ಪವಾಗಿ ಸ್ಫೋಟವನ್ನು ತಿಳಿಸಿಕೊಟ್ಟಮೇಲೆ ಇನ್ನೊಂದು ಮತ್ತೂ ಚೆನ್ನಾಗಿ ತಿಳಿಸಿಕೊಡುತ್ತದೆ. ಅಭ್ಯಾಸದಿಂದ ಅಧ್ಯಯನದಂತೆ ಪ್ರತ್ಯೇಕ ವರ್ಣಗಳು ಸ್ಫೋಟವ್ಯಂಜಕಗಳಾದುದರಿಂದ ಕೊನೆಯ ವರ್ಣದಿಂದ ಸ್ಫುಟವಾಗಿ ಅದು ವ್ಯಕ್ತವಾಗುತ್ತದೆ. ಇದರಿಂದ ಅಸಂಭವಿಯಾದ ವರ್ಣಸಮುದಾಯವನ್ನು ಕಲ್ಪಿಸಬೇಕಾಗಿಲ್ಲ. 'ನಾದೈಃ,—ಇತಿ. ಅಂತ್ಯಧ್ವನಿಯೊಡನೆ ಕೂಡಿದ ನಾದಗಳಿಂದ ಉಚ್ಚರಿಸಲ್ಪಡುವ ಸಕಲಪೂರ್ವಧ್ವನಿಗಳಿಂದ (ಆಹಿತಂ—(ಸ್ಥಾಪಿತವಾದ) ಬೀಜಂ—(ವ್ಯಕ್ತ್ಯವಗಮಾನುಗುಣವಾದ ಸಂಸ್ಕಾರವು) ಯಸ್ಯಾಂ ಬದ್ಧೌ—ತಸ್ಯಾಮ್) ಸ್ಥಾಪಿಸಲ್ಪಟ್ಟ ಸಂಸ್ಕಾರವುಳ್ಳ, ಆವೃತ್ತಿಪರಿಪಾಕಾಯಾಂ—ಪೂರ್ವ ಪೂರ್ವ ಸಂಸ್ಕಾರಸಹಕೃತವಾದ ಸಂಸ್ಕಾರಾವೃತ್ತಿಯಿಂದ ಪರಿಪಾಕವೆಂದರೆ ಯೋಗ್ಯತಾವಿಶೇಷವನ್ನು ಹೊಂದಿದ ಬುದ್ಧಿಯಲ್ಲಿ ಈ ಶಬ್ದವೆಂದು ನಿಶ್ಚಯಿಸಲ್ಪಡುತ್ತದೆ ಎಂದರ್ಥ. "ಈ ಶಬ್ದದಿಂದ ಅರ್ಥವನ್ನು ತಿಳಿಯುತ್ತೇವೆ" ಎಂಬ ವ್ಯವಹಾರವು ಲೋಕಪ್ರಸಿದ್ಧವಾದುದರಿಂದ ವರ್ಣಗಳು ಅರ್ಥವಾಚಕಗಳಾಗಲಾರವು ಎಂದು ವಾಕ್ಯಪದೀಯದ ಪ್ರಥಮಕಾಂಡದಲ್ಲಿ ಭರ್ತೃಹರಿಯು ಹೇಳಿರುತ್ತಾನೆ. ಇದರಿಂದ ನಿರವಯವವಾದ ಅರ್ಥಾವಬೋಧಕಶಬ್ದತತ್ವವೇ ಸ್ಫೋಟವೆಂದು ತಿಳಿಯಬೇಕು. 'ಏತತ್ಸರ್ವಂ'—ಇತಿ. ಪರಮಾರ್ಥವಾದ ಸಂವಿತ್ ಅಂದರೆ ನಿರ್ವಿಕಲ್ಪವಾದ ಯಾವ ವಿಶೇಷವೂ ತೋರದ ಸಾಮಾನ್ಯಜ್ಞಾನ. ತದ್ರೂಪವಾಗಿದ್ದು ಅಖಿಲ ಪದಾರ್ಥಾನುಗತವಾದ ಸತ್ತೆಯೇ ಘಟಪಟಾದಿ ಸಂಬಂಧಿಭೇದದಿಂದ ಘಟತ್ವಪಟತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿರೂಪವಾಗಿ ಘಟಪಟಾದಿಗಳ ಅರ್ಥರೂಪವಾಗಿ ತೋರುತ್ತದೆ. ಪರಮಾರ್ಥ ಸತ್ತೆಯೇ ನಾನಾರೂಪವಾದ ಅರ್ಥವಾಗಿ ತೋರುವುದೆಂದರ್ಥ.

ಯದಿಸತ್ತೈವ ಸರ್ವೇಷಾಂ ಶಬ್ದಾನಾಮರ್ಥಸ್ತರ್ಹಿ ಸರ್ವೇಷಾಂ ಶಬ್ದಾನಾಂ ಪರ್ಯಾಯತಾ ಸ್ಯಾತ್ । ತಥಾ ಚ ಕ್ವಚಿದಪಿ ಯುಗಪತ್ತ್ರಿಚತುರ ಪದಪ್ರಯೋಗಾಯೋಗ ಇತಿ ಮಹಚ್ಛಾತುರ್ಯಮಾಯುಷ್ಮತಃ । ತದುಕ್ತಂ—

ಪರ್ಯಾಯಾಣಾಂ ಪ್ರಯೋಗೋಹಿ ಯೌಗಪದ್ಯೇನ ನೇಷ್ಯತೇ ।
ಪರ್ಯಾಯೇಣೈವ ತೇ ಯಸ್ಮಾದ್ವದಂತ್ಯರ್ಥಂ ನ ಸಂಹತಾಃ ॥ ಇತಿ ॥

ತಸ್ಮಾದಯಂ ಪಕ್ಷೋ ನಕ್ಷೋದಕ್ಷಮ ಇತಿಚೇತ್—ತದೇತದ್ಗಗನರೋಮಂಥಕಲ್ಪಮ್ ನೀಲಲೋಹಿತ ಪೀತಾದ್ಯುಪರಂಜಕದ್ರವ್ಯಭೇದೇನ ಸ್ಫಟಿಕಮಣೇರಿವ ಸಂಬಂಧಿಭೇದಾತ್ಸತಾಯಾಸ್ತದಾತ್ಮನಾ ಭೇದೇನ ಪ್ರತಿಪತ್ತಿಸಿದ್ಧಾ ಗೋಸತ್ತಾದಿರೂಪ ಗೋತ್ವಾದಿ ಭೇದನಿಬಂಧನ ವ್ಯವಹಾರಿ ವೈಲಕ್ಷಣ್ಯೋಪಪತ್ತೇಃ ।

ಸತ್ತಾ ಎಂಬುದೇ ಸಕಲಶಬ್ದಗಳ ಅರ್ಥವಾಗುವುದಾದರೆ ಎಲ್ಲಾ ಶಬ್ದಗಳಿಗೂ ಒಂದೇ ಅರ್ಥವಾಗುವುದರಿಂದ ಪರ್ಯಾಯತ್ವ ಬರಬೇಕಾಗುತ್ತದೆ. ಆಗ ಎಲ್ಲಿಯೂ ನಾಲ್ಕಾರು ಪದಗಳ ಪ್ರಯೋಗವಿಲ್ಲದೇ ಹೋಗಬೇಕಾಗುತ್ತದೆ. 'ಪರ್ಯಾಯಾಣಾಂ'— ಇತಿ. ಪರ್ಯಾಯ ಪದಗಳ ಏಕಕಾಲದ ಪ್ರಯೋಗವು ಎಲ್ಲಿಯೂ ದೃಷ್ಟವಾಗಿಲ್ಲ. ಪರ್ಯಾಯಪದಗಳಾದುದರಿಂದಲೇ ಅವು ಅಸಂಹತವಾಗಿ ಅಂದರೆ ಸಮುಚ್ಚಯವಿಲ್ಲದೇ ಅರ್ಥಬೋಧಕಗಳಾಗುತ್ತವೆಯೆಂದರ್ಥ. ಆದುದರಿಂದ ಸ್ಫೋಟವಾದಿಮತ ಸರಿಯಲ್ಲವೆಂದು ಪೂರ್ವಪಕ್ಷಿಯ ಆಕ್ಷೇಪ. ಇದು ಆಕಾಶದರೋಮಂಥ (ಮೆಲಕುಹಾಕುವುದು) ವೆಂದು ಸಿದ್ಧಾಂತಿ ಖಂಡಿಸುತ್ತಾನೆ. ಆಕಾಶದರೋಮಂಥ ಅಸಂಭವವಾದಂತೆ ಈ ಆಕ್ಷೇಪವೂ ಕೂಡುವುದಿಲ್ಲವೆಂದರ್ಥ. ಸ್ಫಟಿಕಮಣಿ ಸ್ವಚ್ಛವಾಗಿರುತ್ತದೆ. ಅದರ ಹತ್ತಿರ ನೀಲಾದಿ ದ್ರವ್ಯವಿರುವಾಗ ಬೇರೆಯಾಗಿ ತೋರುತ್ತದೆ. ಅದರಂತೆ ಸತ್ತಾ ಒಂದೇ ಆದರೂ ಸಂಬಂಧಿ ಭೇದದಿಂದ ಭೇದಸಿದ್ಧವಾಗುವುದರಿಂದ ಭಿನ್ನ ಭಿನ್ನ ಶಬ್ದ ವ್ಯವಹಾರವು ಸಂಗತವಾಗುತ್ತದೆ. ಇದಕ್ಕೆ ಪ್ರಮಾಣ ತೋರಿಸುತ್ತಾನೆ.

ಸ್ಫಟಿಕಂ ವಿಮಲಂ ದ್ರವ್ಯಂ ಯಥಾಯುಕ್ತಂ ಪೃಥಕ್ ಪೃಥಕ್ ॥
ನೀಲಲೋಹಿತಪೀತಾದ್ಯೈಸ್ತದ್ವರ್ಣಮುಪಲಭ್ಯತೇ ॥ ಇತಿ ॥
ತಥಾ ಹರಿಣಾಪ್ಯುಕ್ತಮ್—
ಸಂಬಂಧಿಭೇದಾತ್ಸತ್ತೈವ ಭಿದ್ಯಮಾನಾ ಗವಾದಿಷು ।
ಜಾತಿರಿತ್ಯುಚ್ಯತೇ ತಸ್ಯಾಂ ಸರ್ವೇ ಶಬ್ದಾ ವ್ಯವಸ್ಥಿತಾಃ ॥
ತಾಂ ಪ್ರಾತಿಪದಿಕಾರ್ಥಂ ಚ ಧಾತ್ವರ್ಥಂ ಚ ಪ್ರಚಕ್ಷತೇ ।
ಸಾ ನಿತ್ಯಾ ಸಾ ಮಹಾನಾತ್ಮಾ ತಾಮಾಹುಸ್ತ್ವತಲಾದಯಃ ॥ ಇತಿ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಶ್ರಯಾಭೂತ್ಯೈಃ ಸಂಬಂಧಿಭಿರ್ಭಿದ್ಯಮಾನಾ ಕಲ್ಪಿತ ಭೇದಾ ಗವಾಶ್ವಾದಿಷು ಸತ್ತೈವ ಮಹಾಸಾಮಾನ್ಯಮೇವ ಜಾತಿಃ। ಗೋತ್ವಾದಿಕಮಪರಂ ಸಾಮಾನ್ಯಂ ಪರಮಾರ್ಥತಸ್ತತೋ ಭಿನ್ನಂ ನ ಭವತಿ। ಗೋಸತ್ತೈವ ಗೋತ್ವಂನಾ ಪರಮನ್ವಯಿ ಪ್ರತಿಭಾಸತೇ । ಏವಮಶ್ವಸತ್ತಾಶ್ವತ್ವಮಿತ್ಯಾದಿ ವಾಚ್ಯಮ್। ಏವಂ ಚ ತಸ್ಯಾಮೇವ ಗವಾದಿಭೇದಭಿನ್ನಾಯಾಂ ಸತ್ತಾಯಾಂ ಜಾತೌ ಸರ್ವೇಗೋಶಬ್ದಾದಯೋ ವಾಚಕತ್ವೇನ ವ್ಯವಸ್ಥಿತಾಃ। ಪ್ರಾತಿಪದಿಕಾರ್ಥಶ್ಚ ಸತ್ತೇತಿ ಪ್ರಸಿದ್ಧಮ್ ಭಾವವಚನೋ ಧಾತುರಿತಿ ಪಕ್ಷೇ ಭಾವಃ ಸತ್ತೈವೇತಿ ಧಾತ್ವರ್ಥಃ ಸತ್ತಾಭವತ್ಯೇವ ॥

ಪರಿಶುದ್ಧವಾದ ಸ್ಫಟಿಕವು ಬೇರೆ ಬೇರೆ ಬಣ್ಣದ ವಸ್ತುಗಳ ಸಂಬಂಧಹೊಂದಿ ಬೇರೆಬೇರೆಯಾಗಿ ತೋರುತ್ತದೆ. ಅದರಂತೆ ಈ ಸತ್ತಾ ಎಂಬುದು ಸಂಬಂಧಿಭೇದದಿಂದ ಗವಾದಿಗಳಲ್ಲಿ ಬೇರೆಯಾಗಿ ತೋರಿ ಜಾತಿಯೆಂದು ವ್ಯವಹರಿಸಲ್ಪಡುತ್ತದೆ. ಇದರಲ್ಲಿಯೇ ಸಕಲಶಬ್ದಗಳೂ ವ್ಯವಸ್ಥಿತವಾಗಿವೆ. ಅದನ್ನೇ ಪ್ರಾತಿಪದಿಕಾರ್ಥವೆಂದೂ, ಧಾತ್ವರ್ಥವೆಂದೂ ಕರೆಯುತ್ತಾರೆ. 'ಸಾ'—ಇತಿ. ಸಕಲಪದಾರ್ಥಾನುಗತವಾದ ಸಂವಿದ್ರೂಪವಾದ ಆ ಸತ್ತಾ ನಿತ್ಯವಾಗಿರುತ್ತದೆ. ಅದೇ ಮಹಾನಾತ್ಮಾ—ಪರಬ್ರಹ್ಮವಾಗಿರುತ್ತದೆ. ಆ ಸತ್ತೆಯನ್ನೇ ತ್ವತಲಾದಿಪ್ರತ್ಯಯಗಳು ಹೇಳುತ್ತವೆ. ಭಾವಾರ್ಥದಲ್ಲಿ ತ್ವತಲ್ ವಿಹಿತವಾಗಿದೆ. ಘಟಸ್ಯಭಾವಃ—ಘಟತ್ವಂ, ಘಟತಾ. ಈ ಘಟಾದಿಭಾವವು ಸತ್ತೆಯೇ ಆಗಿರುತ್ತದೆ. ಈ ಎರಡು ಕಾರಿಕೆಗಳ ಅರ್ಥವನ್ನೇ 'ಆಶ್ರಯ ಭೂತ್ಯೈಃ'—ವಾಕ್ಯಗಳಿಂದ ವಿವರಿಸುತ್ತಾನೆ. ಆಶ್ರಯಭೇದದಿಂದ ಬೇರೆಯಾಗಿ ತೋರುವುದರಿಂದ ಕಲ್ಪಿತಭೇದವುಳ್ಳದ್ದಾಗಿ ಈ ಸತ್ತೆಯೇ ಮಹಾ ಸಾಮಾನ್ಯವೆಂದೂ ಪರಜಾತಿಯೆಂದೂ, ವ್ಯವಹರಿಸಲ್ಪಡುತ್ತದೆ. ಸಕಲಗೋವ್ಯಕ್ತಿಗಳಲ್ಲಿ ಅನುಸ್ಯೂತವಾಗಿ ಸತ್ತಾಕ್ಕಿಂತ ಅತಿರಿಕ್ತವಾಗಿ ಬೇರೆ ಯಾವುದೂ ತೋರುವುದಿಲ್ಲ. ಗೋತ್ವವೆಂದರೂ ಗೋಸತ್ತೆಯೇ ಆಗುತ್ತದೆ. ಅಶ್ವತ್ವವೇ ಅಶ್ವಸತ್ತಾ. ಹೀಗೆ ಗವಾದಿಭೇದಭಿನ್ನವಾದ ಈ ಸತ್ತಾಜಾತಿಯಲ್ಲಿಯೇ ಸಕಲ ಗೋ ಶಬ್ದಾದಿಗಳು ವಾಚಕಗಳಾಗಿ ವ್ಯವಸ್ಥಿತವಾಗಿರುತ್ತವೆ. ಪ್ರಾತಿಪದಿಕಾರ್ಥವು ಸತ್ತಾ ಎಂದು ಪ್ರಸಿದ್ಧವಾಗಿದೆ. 'ಭಾವವಚನೋ ಧಾತುಃ' ಎಂಬ ಪಕ್ಷದಲ್ಲಿಯೂ ಭಾವವೆಂದರೆ ಸತ್ತಾ. ಇದೇ ಧಾತ್ವರ್ಥವೆಂದರ್ಥ.

ಕ್ರಿಯಾ ವಚನೋ ಧಾತುರಿತಿ ಪಕ್ಷೇಪಿ
ಜಾತಿಮನ್ಯೇ ಕ್ರಿಯಾಮಾಹುರನೇಕವ್ಯಕ್ತಿವರ್ತಿನೀಮ್ ॥

ಇತಿ ಕ್ರಿಯಾಸಮುದ್ದೇಶೇ ಕ್ರಿಯಾಯಾ ಜಾತಿರೂಪತ್ವ ಪ್ರತಿಪಾದನಾದ್ಧಾತ್ವರ್ಥಃ ಸತ್ತಾ ಭವತ್ಯೇವ। "ತಸ್ಯ ಭಾವಸ್ತ್ವತಲೌ" (ಪಾ-ಸೂ-೫-೧-೧೧೯) ಇತಿ ಭಾವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರ್ಥೇ ತ್ವತಲಾದೀನಾಂ ವಿಧಾನಾತ್ ಸತ್ತಾವಾಚಿತ್ವಂ ಯುಕ್ತಮ್ । ಸಾ ಚ ಸತ್ತಾ ಉದಯವ್ಯಯವ್ಯೈಧುರ್ಯಾನ್ನಿತ್ಯಾ । ಸರ್ವಸ್ಯ ಪ್ರಪಂಚಸ್ಯ ತದ್ವಿವರ್ತತಯಾ ದೇಶತಃ ಕಾಲತೋ ವಸ್ತುತಶ್ಚ ಪರಿಚ್ಛೇದರಾಹಿತ್ಯಾತ್ಸಾ ಸತ್ತಾ ಮಹಾನಾತ್ಮೇತಿ ವ್ಯಪದಿಶ್ಯತ ಇತಿ ಕಾರಿಕಾದ್ವಯಾರ್ಥಃ ॥

ಅನೇಕವ್ಯಕ್ತಿಯಲ್ಲಿರುವುದು ಜಾತಿ. ಇದನ್ನೇ ಕೆಲವರು ಕ್ರಿಯೆಯೆಂದು ಹೇಳುತ್ತಾರೆ. ಸಕಲಪಾಚಕವ್ಯಕ್ತಿಗಳಲ್ಲಿರುವ ಪಾಚಕತ್ವಜಾತಿಯೇ ಪಾಕಕ್ರಿಯೆ ಎಂದು ಅವರ ಮತ. ಈ ಸತ್ತಾಜಾತಿಯು ಉದಯವ್ಯಯಗಳು ಅಂದರೆ ಉತ್ಪತ್ತಿವಿನಾಶಗಳಿಲ್ಲದಿರುವುದರಿಂದ ನಿತ್ಯವಾಗುತ್ತದೆ. ಸಕಲಪ್ರಪಂಚವೂ ಇದರ ವಿವರ್ತ. ಶುಕ್ತಿಯೇ ರಜತರೂಪದಿಂದ ತೋರುವಂತೆ ಈ ಸತ್ತೆಯೇ ಆಕಾಶಾದಿ ಸಮಸ್ತಪ್ರಪಂಚರೂಪದಿಂದ ತೋರುತ್ತದೆ. ಪರಿಚ್ಛೇದ—ಸಂಕೋಚ. ವ್ಯಾಪಕವಾದವಸ್ತು ಎಲ್ಲಾ ಕಡೆಯೂ ಇರುವುದರಿಂದ ಅದಕ್ಕೆ ದೇಶದಿಂದ ಪರಿಚ್ಛೇದವಿರುವುದಿಲ್ಲ. ನಿತ್ಯವಾಗಿರುವುದರಿಂದ ಕಾಲದಿಂದ ಪರಿಚ್ಛೇದವಿಲ್ಲ. ಸರ್ವಾಧಿಷ್ಠಾನವಾದುದರಿಂದ ವಸ್ತುವಿನಿಂದ ಪರಿಚ್ಛೇದವಿರುವುದಿಲ್ಲ. ಅಖಿಲ ಪ್ರಪಂಚವೂ ಮಹತ್ತಾದ ಅನಾದಿಯಾದ ಈ ಸತ್ತೆಯಲ್ಲಿ ತೋರುವುದರಿಂದ ಇದು ತ್ರಿವಿಧಪರಿಚ್ಛೇದರಹಿತವಾಗಿ ಪರಬ್ರಹ್ಮವಾಗಿರುತ್ತದೆಂದು ಕಾರಿಕಾತಾತ್ಪರ್ಯ.

ದ್ರವ್ಯಪದಾರ್ಥವಾದಿನೋಽಪಿ ನಯೇ ಸಂವಿಲ್ಲಕ್ಷಣಂ ತತ್ತ್ವಮೇವ ಸರ್ವಶಬ್ದಾರ್ಥ ಇತಿ ಸಂಬಂಧಸಮುದ್ದೇಶೇ ಸಮರ್ಥಿತಮ್—

ಸತ್ಯಂ ವಸ್ತು ತದಾಕಾರೈರಸತ್ಯೈರವಧಾರ್ಯತೇ ।
ಅಸತ್ಯೋಪಾಧಿಭಿಃ ಶಬ್ದೈಃ ಸತ್ಯಮೇವಾಭಿಧೀಯತೇ ॥
ಅಧ್ರುವೇಣ ನಿಮಿತ್ತೇನ ದೇವದತ್ತಗೃಹಂ ಯಥಾ ।
ಗೃಹೀತಂ ಗೃಹಶಬ್ದೇನ ಶುದ್ಧಮೇವಾಭಿಧೀಯತೇ ॥ಇತಿ॥

ಭಾಷ್ಯಕಾರೇಣಾಪಿ 'ಸಿದ್ಧೇ ಶಬ್ದಾರ್ಥಸಂಬಂಧೇ' ಇತ್ಯೇತದ್ವಾರ್ತಿಕವ್ಯಾಖ್ಯಾನಾವಸರೇ ದ್ರವ್ಯಂಹಿ ನಿತ್ಯಮಿತ್ಯನೇನ ಗ್ರಂಥೇನಾ ಸತ್ಯೋಪಾಧ್ಯವಚ್ಛಿನ್ನಂ ಬ್ರಹ್ಮತತ್ತ್ವಂ ದ್ರವ್ಯಶಬ್ದವಾಚ್ಯಂ ಸರ್ವಶಬ್ದಾರ್ಥ ಇತಿ ನಿರೂಪಿತಮ್ ॥

ಜಾತಿಪದಾರ್ಥವಾದಿಮತದಲ್ಲಿ ಜಾತಿಯು ಸತ್ತಾಕ್ಕಿಂತ ಬೇರೆಯಾಗದೇ ಇರುವುದರಿಂದ ಪರಮಾರ್ಥಸಂವಿದ್ರೂಪಸತ್ತೆಯೇ ಸಕಲಶಬ್ದಗಳ ಅರ್ಥವಾಗುತ್ತದೆಂದು ಸಾಧಿಸಿ ವ್ಯಕ್ತಿಪದಾರ್ಥವಾದಿಮತದಲ್ಲಿಯೂ ಅದೇ ಶಬ್ದಾರ್ಥನೆಂದು ತೋರಿಸುತ್ತಾನೆ. 'ದ್ರವ್ಯ—' ಇತಿ. ಘಟಾದಿವ್ಯಕ್ತಿಗೆ ದ್ರವ್ಯವೆಂದು ಹೆಸರು. ಗಾಮಾನಯ, ಅಶ್ವಂನಯ ಇತ್ಯಾದಿ ವ್ಯವಹಾರಗಳಲ್ಲಿ ತತ್ತತ್ಕ್ರಿಯಾವಿಶೇಷವಾಗಿ ವ್ಯಕ್ತಿಯೇ ವ್ಯವಹರಿಸಲ್ಪಡುತ್ತದೆಂದು ತಿಳಿಯುತ್ತದೆ. ಆದುದರಿಂದ ಜಾತಿವಿಶಿಷ್ಟವಾದ ವ್ಯಕ್ತಿಯೇ ಪದಾರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂದು ಕೆಲವರ ಮತ. ಇವರಮತದಲ್ಲಿಯೂ ಪರಮಾರ್ಥವಾದ ನಿರ್ವಿಕಲ್ಪಕಜ್ಞಾನ ಸ್ವರೂಪವಾದ ಸತ್ತಾತತ್ವವೇ ಸಕಲಶಬ್ದಾರ್ಥವಾಗುತ್ತದೆ. 'ಸತ್ಯಂ—' ಇತಿ. ಗವಯವಪ್ರಾಣಿ ಹೇಗಿದೆ? ಎಂದು ಕೇಳಿದಾಗ ತಿಳಿದವನು ಸತ್ಯವಾದ ಗವಯವು ಸಮೀಪದಲ್ಲಿ ಇಲ್ಲದಿರುವುದರಿಂದ ಅದನ್ನು ತಿಳಿಸಲು ಅದರ ಚಿತ್ರವನ್ನು ತೋರಿಸುತ್ತಾನೆ. ಅಸತ್ಯವಾದ ರೇಖಾಗವಯದಿಂದ ಸತ್ಯವಾದ ಗವಯವನ್ನು ತಿಳಿಯುವಂತೆ ಅಸತ್ಯವಾದ ದ್ರವ್ಯರೂಪಉಪಾಧಿಗಳಿಂದಶಬ್ದಗಳಿಂದಸತ್ಯವುತಿಳಿಸಲ್ಪಡುತ್ತದೆ. ಶಬ್ದಗಳು ಪ್ರವೃತ್ತಿ ನಿವೃತ್ತಿ ಯೋಗ್ಯಗಳಾದ ವ್ಯಕ್ತಿಯನ್ನು ಪುರಸ್ಕರಿಸಿ ತನ್ಮೂಲಕ ಸತ್ತಾಎಂಬ ಸತ್ಯತತ್ವ ವನ್ನೇ ಹೇಳುತ್ತೇವೆ. "ಅಧ್ರುವೇಣ—" ಇತಿ. ಅಧ್ರುವವೆಂದರೆ ಅಸ್ಥಿರವಾದುದು. ಚೈತ್ರ ಮೈತ್ರರಿಬ್ಬರು ಹೋಗುವಾಗ ಒಂದು ಮನೆಯಮೇಲೆ ಯಾದೃಚ್ಛಿಕವಾಗಿ ಒಂದು ಕಾಗೆ ಕುಳಿತಿರುತ್ತದೆ. ಆಗ ಚೈತ್ರನು ದೇವದತ್ತನ ಮನೆಯಾವುದು ಎಂದು ಕೇಳುತ್ತಾನೆ. ಮೈತ್ರನು 'ಕಾಕವದ್ದೇವದತ್ತಗೃಹಂ' ಎಂದು ಬೋಧಿಸುತ್ತಾನೆ. ಅಲ್ಲಿ ಯದ್ಯಪಿ ಕಾಗೆಯು ಸ್ಥಿರವಾಗಿರುವುದಿಲ್ಲ. ಆದರೂ ತನ್ನಿಮಿತ್ತದಿಂದ ಮೈತ್ರನು ಚೈತ್ರನಿಗೆ ಗೃಹ ಪರಿಚಯ ಮಾಡಿಕೊಡುತ್ತಾನೆ. ಅದು ಗೃಹಜ್ಞಾನಕ್ಕೆ ಉಪಾಯವಾಗುತ್ತದೆ. ಗೃಹ ಶಬ್ದದಿಂದ ಕಾಕರಹಿತವಾದ ಶುದ್ಧವಾದ ಮನೆಯೇ ಅಭಿಹಿತವಾಗುತ್ತದೆ. ಇದ ರಂತೆಯೇ ಗೋಘಟಾದಿಶಬ್ದಗಳಿಂದ ವ್ಯಕ್ತಿಯನ್ನೇ ಪುರಸ್ಕರಿಸಿ ತನ್ಮೂಲಕ ಆವ್ಯಕ್ತಿರಹಿತ ವಾದ ಕೇವಲವಾದ ಸತ್ತಾಎಂಬ ಸತ್ಯತತ್ವವು ಅಭಿಹಿತವಾಗುತ್ತದೆಂದರ್ಥ.

'ಸಿದ್ಧೇ' —ಎಂಬುದು ವಾರ್ತಿಕ. ಪಾಣಿನಿಯು ಶಬ್ದವನ್ನು, ಅರ್ಥವನ್ನು, ಅವುಗಳ ಸಂಬಂಧವನ್ನು ಸೃಜಿಸುವನೇ ಅಥವಾ ಇದ್ದ ಅವುಗಳನ್ನು ಸ್ಮರಿಸುವನೇ ಎಂದು ಆಶಂಕಾ ಬಂದಾಗ ಅದಕ್ಕೆ ಸಮಾಧಾನವಾಗಿ ಈ ವಾರ್ತಿಕ ಹೇಳಿದೆ. ಇಲ್ಲಿ ಸಿದ್ಧಶಬ್ದವು ನಿತ್ಯಾರ್ಥವಾಚಿ. ಶಬ್ದಾರ್ಥಗಳೂ ಅವುಗಳ ಸಂಬಂಧವೂ ನಿತ್ಯವಾದುದರಿಂದ ಅದರ ಜ್ಞಾಪನಕ್ಕೋಸ್ಕರ ಪಾಣಿನಿಯಪ್ರವೃತ್ತಿಯೆಂದರ್ಥ- ಅರ್ಥವಿಷಯದಲ್ಲಿ 'ಜಾತಿಃ ಪದಾರ್ಥಃ', 'ವ್ಯಕ್ತಿಃ ಪದಾರ್ಥಃ' ಎಂದು ಎರಡುಮತ. ವ್ಯಕ್ತಿಯೆಂದರೆ ದ್ರವ್ಯ. ಈ ಎರಡು ಪಕ್ಷಗಳಲ್ಲಿಯೂ ಅರ್ಥವು ನಿತ್ಯವೇ ಆಗುತ್ತದೆ. 'ಜಾತಿ ಪದಾರ್ಥಃ' ಎಂಬ ಪಕ್ಷದಲ್ಲಿ ಹಿಂದೆ ಹೇಳಿದಂತೆ ಜಾತಿಯು ಸತ್ತಾರೂಪವಾದುದರಿಂದ ನಿತ್ಯತ್ವ ಸಿದ್ಧವಾಗು ತ್ತದೆ. ಸತ್ತಾತಿರಿಕ್ತ ಜಾತಿವಾದಿಗಳ ಮತದಲ್ಲಿಯೂ ಜಾತಿ ನಿತ್ಯವೆಂಬುದರಲ್ಲಿ ವಿಪ್ರತಿ ಪತ್ತಿಯಿಲ್ಲ. 'ದ್ರವ್ಯಂ ಪದಾರ್ಥಃ' ಎಂಬ ಪಕ್ಷದಲ್ಲಿಯೂ ಅರ್ಥಕ್ಕೆ ನಿತ್ಯತ್ವವೇ ಇರುತ್ತ ದೆಂಬ ಅಭಿಪ್ರಾಯದಿಂದ 'ದ್ರವ್ಯಂ ಹಿ ನಿತ್ಯಂ' ಎಂದು ಭಾಷ್ಯಕಾರರು ಹೇಳಿರುತ್ತಾರೆ. ಇಲ್ಲಿ ದ್ರವ್ಯಶಬ್ದಕ್ಕೆ ಗೋಘಟಾದಿ ಲೌಕಿಕ ದ್ರವ್ಯವೆಂಬ ಅರ್ಥವನ್ನು ಹೇಳಿದರೆ ಅದು ಅನಿತ್ಯವಾಗುವುದರಿಂದ 'ದ್ರವ್ಯಂ ಹಿ ನಿತ್ಯಂ' ಎಂಬ ಭಾಷ್ಯಕಾರರ ಉಕ್ತಿಯು ಸಮಂಜಸ ವಾಗುವುದಿಲ್ಲವೆಂದು ಕೈಯಟರು– "ಅಸತ್ಯೋಪಾಧ್ಯವಚ್ಛಿನ್ನಂ ಬ್ರಹ್ಮತತ್ವಮತ್ರ ದ್ರವ್ಯ ಶಬ್ದವಾಚ್ಯಂ" ಎಂದು ಹೇಳಿರುತ್ತಾರೆ. ಹೀಗೆ ಜಾತಿವ್ಯಕ್ತಿಪಕ್ಷಗಳಲ್ಲಿ ಪರಮಾರ್ಥಸಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲ್ಲಕ್ಷಣವಾದ ಬ್ರಹ್ಮಸತ್ತೆಯೇ ಸಕಲಶಬ್ದಾರ್ಥವೆಂದು ಸಿದ್ಧವಾಗುತ್ತದೆ. "ಸಿದ್ಧೇಶಬ್ದಾ'-ಎಂಬ ವಾರ್ತಿಕದಿಂದ ಅರ್ಥವಚ್ಛಬ್ದವು ನಿತ್ಯವೆಂದೂ, ನಿತ್ಯವಾದ ಸ್ಫೋಟರೂಪಶಬ್ದವೇ ಅರ್ಥವಾಚಕವೆಂದೂ ಅನಿತ್ಯವಾದ ವರ್ಣರೂಪಧ್ವನಿಯು ಅದಕ್ಕೆ ವ್ಯಂಜಕವೆಂದೂ ಸ್ಪಷ್ಟವಾಗುತ್ತದೆ.

ಜಾತಿಶಬ್ದಾರ್ಥವಾಚಿನೋ ವಾಜಪ್ಯಾಯನಸ್ಯ ಮತೇ ಗವಾದಯಃ ಶಬ್ದಾ ಭಿನ್ನದ್ರವ್ಯ ಸಮವೇತಜಾತಿಮಭಿದಧತಿ । ತಸ್ಯಾಮವಗಾಹಮಾನಾಯಾಂ ತತ್ಸಂಬಂಧಾದ್ದ್ರವ್ಯಮವಗಮ್ಯತೇ । ಶುಕ್ಲಾದಯಃ ಶಬ್ದಾ ಗುಣಸಮವೇತಾಂ ಜಾತಿಮಾಚಕ್ಷತೇ । ಗುಣೇ ತತ್ಸಂಬಂಧಾತ್ ಪ್ರತ್ಯಯಃ । ದ್ರವ್ಯೇ ಸಂಬಂಧಿ ಸಂಬಂಧಾತ್ । ಸಂಜ್ಞಾಶಬ್ದಾನಾಮುತ್ಪತ್ತಿಪ್ರಭೃತ್ಯಾ ವಿನಾಶಾಚ್ಛೈಶವ ಕೌಮಾರಯೌವನಾದ್ಯವಸ್ಥಾದಿಭೇದೇಪಿ ಸ ಏವಾಯ ಮಿತ್ಯಭಿಸನ್ನಪ್ರತ್ಯಯ ಬಲಾತ್ಸಿದ್ಧಾದೇವದತ್ತತ್ವಾದಿ ಜಾತಿರಭ್ಯುಪಗಂತವ್ಯಾ । ಕ್ರಿಯಾಸ್ವಪಿ ಜಾತಿರಾಲಕ್ಷ್ಯತೇ । ಸೈವ ಧಾತುವಾಚ್ಯಾ । ಪಚತೀತ್ಯಾದಾವನುವೃತ್ತಪ್ರತ್ಯಯಸ್ಯ ಪ್ರಾದುರ್ಭಾವಾತ್ । ದ್ರವ್ಯಪದಾರ್ಥವಾದಿವ್ಯಾಡಿನಯೇ ಶಬ್ದಸ್ಯ ವ್ಯಕ್ತಿರೇವಾಭಿಧೇಯತಯಾ ಪ್ರತಿಭಾಸತೇ । ಜಾತಿಸ್ತೂಪಲಕ್ಷಣತಯೇತಿ ನಾನಂತ್ಯಾದಿ ದೋಷಾವಕಾಶಃ । ಪಾಣಿನ್ಯಾಚಾರ್ಯಸ್ಯೋಭಯಂ ಸಂಮತಮ್ । ಯತೋ ಜಾತಿಪದಾರ್ಥಮಭ್ಯುಪಗಮ್ಯ 'ಜಾತ್ಯಾಖ್ಯಾಯಾಮೇಕಸ್ಮಿನ್ ಬಹುವಚನಮನ್ಯತರಸ್ಯಾಂ' (ಪಾ-ಸೂ ೧-೨-೫೮) ಇತ್ಯಾದಿ ವ್ಯವಹಾರಃ । ದ್ರವ್ಯಪದಾರ್ಥಮಂಗೀಕೃತ್ಯ "ಸರೂಪಾಣಾಮೇಕಶೇಷ ಏಕವಿಭಕ್ತೌ (ಪಾ-ಸೂ-೧-೨-೬೪) ಇತ್ಯಾದಿಃ । ವ್ಯಾಕರಣಸ್ಯ ಸರ್ವಪಾರ್ಷದತ್ವಾನ್ನತದ್ವಯಾಭ್ಯುಪಗಮೇ ನ ಕಶ್ಚಿದ್ವಿರೋಧಃ । ತಸ್ಮಾದದ್ವಯಂ ಸತ್ಯಂ ಪರಂ ಬ್ರಹ್ಮತತ್ವಂ ಸರ್ವಶಬ್ದಾರ್ಥ ಇತಿ ಸ್ಥಿತಮ್ ।

ವಾಜಪ್ಯಾಯನನೆಂಬುವನು ಜಾತಿಪದಾರ್ಥವಾದೀ. ವ್ಯಾಡಿಯೆಂಬವನು ವ್ಯಕ್ತಿ ಪದಾರ್ಥವಾದೀ. ಪಾಣಿನಿಗೆ ಉಭಯವೂ ಸಂಮತವಾಗಿದೆ. ಗವಾದಿಶಬ್ದಗಳು ಭಿನ್ನಗೋದ್ರವ್ಯಾದಿಗತವಾದ ಗೋತ್ವಾದಿ ಜಾತಿಯನ್ನೇ ಹೇಳುತ್ತವೆ. ಇದು ಅವಗತ ವಾದರೆ ಈ ಜಾತಿಸಂಬಂಧದಿಂದ ಗೋದ್ರವ್ಯಾದಿಗಳು ತಿಳಿಯುತ್ತವೆ. ಶುಕ್ಲಾದಿ ಶಬ್ದಗಳೂ ಗುಣಸಮವೇತಜಾತಿವಾಚಕಗಳಾಗುತ್ತವೆ. ತತ್ಸಂಬಂಧದಿಂದ ಗುಣಜ್ಞಾನ ವುಂಟಾಗುತ್ತದೆ. ದ್ರವ್ಯದಲ್ಲಿ ಸಂಬಂಧಿಸಂಬಂಧದಿಂದ ಅದರ ಜ್ಞಾನವುಂಟಾಗುತ್ತದೆ. ಸಂಜ್ಞಾಶಬ್ದಗಳಲ್ಲಿಯೂ ಉತ್ಪತ್ತಿಯನ್ನಾರಂಭಿಸಿ ವಿನಾಶದವರೆಗೆ ಶೈಶವಾದಿ ಅವಸ್ಥಾ ಭೇದವಿದ್ದರೂ ಅವನೇ ಇವನು ಎಂಬ ಅಭೇದಪ್ರತೀತಿಯಿಂದ ಸಿದ್ಧವಾದ ದೇವದತ್ತ ತ್ವಾದಿಜಾತಿಯನ್ನೇ ಅಂಗೀಕರಿಸಬೇಕು. ಕ್ರಿಯೆಯಲ್ಲಿಯೂ ಜಾತಿ ತೋರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವೇ ಧಾತುವಾಚ್ಯವಾಗಿರುತ್ತದೆ. ಹೀಗೆ ವಾಜಪ್ಯಾಯನನಮತ. ಜಾತಿಗುಣ ಕ್ರಿಯಾ ಸಂಜ್ಞಾಭೇದಗಳಿಂದ ಶಬ್ದಗಳು ನಾಲ್ಕುವಿಧಗಳಾಗಿವೆ. ಪ್ರವೃತ್ತಿನಿಮಿತ್ತ ಭೇದಗಳಿಂದ ಈ ಚಾತುರ್ವಿಧ್ಯ ತಿಳಿಯಬೇಕು. ಜಾತಿಯೇ ಪ್ರವೃತ್ತಿನಿಮಿತ್ತವಾಗಿರುವ ಶಬ್ದಕ್ಕೆ ಜಾತಿಶಬ್ದವೆಂದೂ, ಗುಣಪ್ರವೃತ್ತಿನಿಮಿತ್ತಕಶಬ್ದಕ್ಕೆ ಗುಣಶಬ್ದವೆಂದೂ, ಕ್ರಿಯಾ ಪ್ರವೃತ್ತಿನಿಮಿತ್ತಕಕ್ಕೆ ಕ್ರಿಯಾಶಬ್ದವೆಂದೂ, ಸಂಜ್ಞಾಪ್ರವೃತ್ತಿನಿಮಿತ್ತಕಕ್ಕೆ ಸಂಜ್ಞಾಶಬ್ದ ವೆಂದೂ ಹೆಸರು. ಗೌಃ, ಶುಕ್ಲಃ, ಚಲಃ, ಡಿತ್ಥಃ ಉದಾಹರಣೆ. ಒಂದೇ ಗೋ ವ್ಯಕ್ತಿಗೆ ಇಲ್ಲಿ ನಾಲ್ಕುಶಬ್ದಗಳು ವ್ಯವಹೃತವಾಗಿವೆ. ವ್ಯಕ್ತಿಗತವಾದ ಗೋತ್ವ ಜಾತಿಯನ್ನು ತಿಳಿದು ಗೋಶಬ್ದವೂ, ತದ್ಗತಶುಕ್ಲಗುಣಜ್ಞಾನದಿಂದ ಶುಕ್ಲಶಬ್ದವೂ, ಚಲನಕ್ರಿಯಾಜ್ಞಾನದಿಂದ ಚಲಶಬ್ದವೂ, ಡಿತ್ಥವೆಂಬ ಸಂಜ್ಞಾಜ್ಞಾನದಿಂದ ಡಿತ್ಥಶಬ್ದವೂ ಪ್ರಯೋಗಿಸಲ್ಪಟ್ಟಿವೆ. ಇಲ್ಲಿ ನಾನಾದರ್ಶನಗಳಿವೆ. ಪ್ರವೃತ್ತಿನಿಮಿತ್ತವಾದ ಜಾತ್ಯಾದಿ ಗಳೇ ತತ್ತಚ್ಛಬ್ದಗಳಿಗೆ ವಾಚ್ಯಾರ್ಥಗಳಾಗುತ್ತವೆ. ಜಾತಿಗೆ ಆಶ್ರಯವಾದುದರಿಂದ ವ್ಯಕ್ತಿಗೆ ಆಕ್ಷೇಪದಿಂದ ಭಾನವೆಂದು ಒಬ್ಬರ ಮತ. ವ್ಯಕ್ತಿಯೇ ವಾಚ್ಯಾರ್ಥ. ಪ್ರವೃತ್ತಿ ನಿಮಿತ್ತವು ಅನೇಕವ್ಯಕ್ತ್ಯನುಗಮಕವಾದುದರಿಂದ ಉಪಲಕ್ಷಣವೆಂದು ಎರಡನೆಯವರ ಮತ. ಪ್ರವೃತ್ತಿನಿಮಿತ್ತವಿಶಿಷ್ಟವ್ಯಕ್ತಿಯೇ ವಾಚ್ಯಾರ್ಥವೆಂದು ಮೂರನೆಯವರ ಮತ. ವಾಜಪ್ಯಾಯನನು ಪ್ರಥಮದರ್ಶನಾನುಸಾರದಿಂದ ಸಕಲಶಬ್ದಗಳಿಗೂ ಜಾತಿಯೊಂದೇ ಪ್ರವೃತ್ತಿನಿಮಿತ್ತವೆಂದು ಅಂಗೀಕರಿಸಿರುತ್ತಾನೆ. ಅನೇಕ ಗೋವ್ಯಕ್ತಿಸಮವೇತವಾದ ಗೋತ್ವಜಾತಿಯು ಗೋಶಬ್ದಕ್ಕೆ ಪ್ರವೃತ್ತಿನಿಮಿತ್ತವಾಗುತ್ತದೆ. ಅದೇ ವಾಚ್ಯಾರ್ಥ. ಗವಾದಿಗಳಲ್ಲಿರುವ ಶುಕ್ಲಾದಿಗುಣಗಳಲ್ಲಿಯೂ ಶುಕ್ಲತ್ವಾದಿಜಾತಿಯೇ ಪ್ರವೃತ್ತಿನಿಮಿತ್ತ ವಾಗಿ ವಾಚ್ಯಾರ್ಥವಾಗುತ್ತದೆ. ಆ ಜಾತಿ ಸಂಬಂಧದಿಂದ ಶುಕ್ಲಾದಿಜ್ಞಾನವುಂಟಾಗು ತ್ತದೆ. ಶುಕ್ಲಗುಣವಿಶಿಷ್ಟಘಟಾದಿದ್ರವ್ಯವು ಶುಕ್ಲಶಬ್ದದಿಂದ ಆಗುವುದಾದರೆ ಶುಕ್ಲತ್ವ ಜಾತಿಸಂಬಂಧಿ ಶುಕ್ಲಸಂಬಂಧದಿಂದ (ಸಂಬಂಧಿ ಸಂಬಂಧಾತ್) ಎಂದು ತಿಳಿಯಬೇಕು. ಅನೇಕ ಚಲನಕ್ರಿಯೆಗಳಲ್ಲಿರುವ ಚಲನತ್ವಜಾತಿಯೇ ಚಲ ಶಬ್ದಕ್ಕೆ ಪ್ರವೃತ್ತಿನಿಮಿತ್ತವಾಗಿ ಚಲಶಬ್ದದ ವಾಚ್ಯಾರ್ಥವಾಗುತ್ತದೆ. ಚಲನತ್ವಜಾತಿ ಸಂಬಂಧದಿಂದ ಚಲಶಬ್ದದಿಂದ ಚಲನಕ್ರಿಯಾಜ್ಞಾನವಾಗುತ್ತದೆ. ಕ್ರಿಯಾಶ್ರಯದೇವದತ್ತಾದಿಬೋಧವು ಆ ಜಾತಿ ಸಂಬಂಧಿಯಾದ ಕ್ರಿಯಾಸಂಬಂಧದಿಂದ ಉಂಟಾಗುತ್ತದೆ. ಡಿತ್ಥಸಂಜ್ಞಕಪಶ್ವಾದಿಗಳು ಒಂದಾದರೂ ಕೌಮಾರಾದ್ಯವಸ್ಥಾಭೇದದಿಂದ ಭೇದಹೊಂದುವುದರಿಂದ ಅಲ್ಲಿಯೂ ಅನೇಕ ವ್ಯಕ್ತಿಗತವಾದ ಡಿತ್ಥತ್ವ ಜಾತಿಯೇ ಡಿತ್ಥ ಶಬ್ದದ ಪ್ರವೃತ್ತಿ ನಿಮಿತ್ತವಾಗುತ್ತದೆ. ಅದೇ ಡಿತ್ಥ ಶಬ್ದದ ವಾಚ್ಯಾರ್ಥ. ಡಿತ್ಥತ್ವಜಾತ್ಯಾಶ್ರಯವಾದುದರಿಂದ ವ್ಯಕ್ತಿ ಬೋಧ ಬರುತ್ತದೆ.

ವ್ಯಾಡಿಯು ಶಬ್ದಕ್ಕೆ ವ್ಯಕ್ತಿಯೇ ವಾಚ್ಯವೆಂದು ಅಂಗೀಕರಿಸುತ್ತಾನೆ. 'ಜಾತಿಸ್ತು' —ಇತಿ. ಗೋವ್ಯಕ್ತಿಗಳು ಅನಂತವಾದುದರಿಂದ ಗೋಶಬ್ದಾರ್ಥಜ್ಞಾನವು ದುಷ್ಕರ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವಾದರೂ ಗೋತ್ವಜಾತಿಯಿಂದ ಸಕಲಗೋವ್ಯಕ್ತ್ಯನುಗಮವುಂಟಾಗುತ್ತದೆ. ಇದರಿಂದ ಗೋತ್ವಜಾತಿಯು ಕೇವಲ ವ್ಯಕ್ತ್ಯುಪಲಕ್ಷಣವಾಗುವುದಲ್ಲದೆ ವಾಚ್ಯಕುಕ್ಷಿಯಲ್ಲಿ ಅದು ಸೇರುವುದಿಲ್ಲವೆಂದು ತಿಳಿಯುತ್ತದೆ. ಇವೆರಡೂ ಮತಗಳು ಪಾಣಿನಿಗೆ ಸಂಮತವೆಂಬುದರಲ್ಲಿ ಪ್ರಮಾಣ ತೋರಿಸುತ್ತಾನೆ. 'ಜಾತ್ಯಾಖ್ಯಾಯಾಂ'—ಜಾತಿ ತೋರುವಾಗ ಒಂದು ಅರ್ಥವೇ ವಿಕಲ್ಪದಿಂದ ಬಹುವಂತಾಗುತ್ತದೆ. 'ಬ್ರಾಹ್ಮಣಾಃ ಪೂಜ್ಯಾಃ' 'ಬ್ರಾಹ್ಮಣಃ ಪೂಜ್ಯಃ' ಇಲ್ಲಿ ಬ್ರಾಹ್ಮಣಜಾತಿ ಪೂಜ್ಯವೆಂದು ತಾತ್ಪರ್ಯ. ಬ್ರಾಹ್ಮಣಶಬ್ದವು ಬ್ರಾಹ್ಮಣತ್ವಜಾತಿಯನ್ನು ತಿಳಿಸುತ್ತದೆ. ಈ ಸೂತ್ರ ಪರಿಶೀಲನೆಯಿಂದ 'ಜಾತಿಃ ಪದಾರ್ಥಃ' ಎಂಬುದು ಪಾಣಿನಿಗೆ ಸಂಮತವೆಂದು ತಿಳಿಯುತ್ತದೆ. 'ಸರೂಪಾಣಾಂ'—ಇತಿ. ವಿಭಕ್ತಿ ಪರವಾದಾಗ ಯಾವುದು ಸರೂಪವಾಗಿಯೇ ತೋರಿದೆಯೋ ಅವುಗಳಲ್ಲಿ ಒಂದು ಮಾತ್ರ ಉಳಿಯುತ್ತದೆ. ರಾಮಶ್ಚ ರಾಮಶ್ಚ—ರಾಮೌ. ಹೀಗೆಯೇ ರಾಮಾಃ ಈ ಸೂತ್ರವಿಲ್ಲದಿದ್ದರೆ ಘಟಪಟೌ ಎಂದಾದಂತೆ ರಾಮರಾಮೌ ಎಂದೇ ಇರಬೇಕಾಗುತ್ತದೆ. 'ವ್ಯಕ್ತಿಃ ಪದಾರ್ಥಃ' ಎಂಬ ಮತದಲ್ಲಿ ವ್ಯಕ್ತಿಗಳು ಅನೇಕವಾದುದರಿಂದ ತದನುಸಾರವಾಗಿ ಎರಡು, ಮೂರು ಅಥವಾ ಅನೇಕರಾಮ ಶಬ್ದಗಳ ಪ್ರಯೋಗವು ಪ್ರಾಪ್ತವಾಗುವುದರಿಂದ ತನ್ನಿವೃತ್ತಿಗೋಸ್ಕರ ಈ ಸೂತ್ರವನ್ನು ಆರಂಭಿಸುತ್ತಾರೆ. ಇದರಿಂದ ಪಾಣಿನಿಗೆ 'ವ್ಯಕ್ತಿಃ ಪದಾರ್ಥಃ' ಎಂಬ ಮತವೂ ಸಂಮತವೆಂದು ತಿಳಿಯುತ್ತದೆ. ವ್ಯಾಕರಣವು ಪಾರ್ಷದವಾದುದರಿಂದ ಯಾರಿಗೂ ಅಸಾಧಾರಣವಾಗಿರುವುದಿಲ್ಲ. ಪಾರ್ಷದ—ಅನುಸಾರೀ. ಪರ್ಷತ್—ಸಭಾ. ಶ್ಯೈಷಿಕವಾದ ಅಣ್ ಬಂದು ಪಾರ್ಷದಃ ಎಂದಾಗಿದೆ. ಅನೇಕ ಜಾತ್ಯಾದಿ ಪದಾರ್ಥವಾದಿಗಳ ಸಭೆ ಯಾವುದಿದೆಯೋ ಅಲ್ಲಿರುವ ಸರ್ವ ಸಭ್ಯರಿಗೆ ಸಾಧಾರಣವಾದುದು ವ್ಯಾಕರಣವಾದುದರಿಂದ ಉಭಯಸಂಮತಿಯಿಂದ ಯಾವ ಹಾನಿಯೂ ಇಲ್ಲ. 'ತಸ್ಮಾತ್'—ಇತಿ. ಜಾತಿ ಪಕ್ಷದಲ್ಲಿ ಗೋತ್ವಾದಿಜಾತಿಯು ಬ್ರಹ್ಮಸತ್ತೆಗಿಂತ ಬೇರಾಗದಿದ್ದುದರಿಂದಲೂ ವ್ಯಕ್ತಿಪಕ್ಷದಲ್ಲಿಯೂ ಅಸತ್ಯವಾದವ್ಯಕ್ತ್ಯುಪಾಧಿಮೂಲಕ ಸತ್ಯವಾದ ಬ್ರಹ್ಮಪ್ರತಿಪಾದನೆ ಇರುವುದರಿಂದ ಯಾವ ದೋಷವೂ ಇಲ್ಲವೆಂದರ್ಥ. ಇದನ್ನೇ ಪ್ರಮಾಣಶ್ಲೋಕಗಳಿಂದ ದೃಢಪಡಿಸುತ್ತಾನೆ.

ತದುಕ್ತಮ್—

ತಸ್ಮಾದ್ವ್ಯಕ್ತಿವಿಭಾಗೇನ ಸತ್ಯಃ ಸರ್ವಃ ಸದಾತ್ಮಕಃ ।
ಏಕೋಽರ್ಥಃ ಶಬ್ದವಾಚ್ಯತ್ವೇ ಬಹುರೂಪಃ ಪ್ರಕಾಶತೇ ॥ ಇತಿ ॥

ಸತ್ಯಸ್ವರೂಪಮಪಿ ಹರಿಣೋಕ್ತಂ ಸಂಬಂಧಸಮುದ್ದೇಶೇ

ಯತ್ರ ದ್ರಷ್ಟಾ ಚ ದೃಶ್ಯಂ ಚ ದರ್ಶನಂ ಚಾವಿಕಲ್ಪಿತಮ್ ॥
ತಸ್ಯೈವಾರ್ಥಸ್ಯ ಸತ್ಯತ್ವಮಾಹುಸ್ತ್ರಯ್ಯಂತವೇದಿನಃ ॥ ಇತಿ ॥

ದ್ರವ್ಯಸಮುದ್ದೇಶೇಽಪಿ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಕಾರಾಪಗಮೇ ಸತ್ಯಂ ಸುವರ್ಣಂ ಕುಂಡಲೇ ಯಥಾ ।
ವಿಕಾರಾಪಗಮೋ ಯತ್ರ ತಾಮಾಹುಃ ಪ್ರಕೃತಿಂ ಪರಾಮ್ ॥ ಇತಿ

ಅಭ್ಯುಪಗತಾಽದ್ವಿತೀಯತ್ವ ನಿರ್ವಾಹಾಯ ವಾಚ್ಯವಾಚಕಯೋರವಿಭಾಗಃ ಪ್ರದರ್ಶಿತಃ

ವಾಚ್ಯಾ ಸಾ ಸರ್ವಶಬ್ದಾನಾಂ ಶಬ್ದಾಚ್ಚ ನ ಪೃಥಕ್ತತಃ ।
ಅಪೃಥಕ್ತ್ವೇಽಪಿ ಸಂಬಂಧಸ್ತಯೋರ್ಜೀವಾತ್ಮನೋರಿವ ॥ ಇತಿ ॥

ತತ್ತದುಪಾಧಿಪರಿಕಲ್ಪಿತ ಭೇದಬಹುಲತಯಾ ವ್ಯವಹಾರಸ್ಯಾವಿದ್ಯಾಮಾತ್ರಕಲ್ಪಿತತ್ವೇನ ಪ್ರತಿನಿಯತಾಕಾರೋಪಧೀಯಮಾನರೂಪಭೇದಂ ಬ್ರಹ್ಮತತ್ತ್ವಂ ಸರ್ವಶಬ್ದ ವಿಷಯಃ । ಅಭೇದೇ ಚ ಪಾರಮಾರ್ಥಿಕೇ ಸಂವೃತಿವಶಾದ್ವ್ಯವಹಾರದಶಾಯಾಂ ಸ್ವಪ್ನಾವಸ್ಥಾವದುಚ್ಚಾವಚಃ ಪ್ರಪಂಚೋ ವಿವರ್ತತ ಇತಿ ಕಾರಿಕಾರ್ಥಃ ॥

'ತಸ್ಮಾದಿತಿ'— ಸತ್ಯ, ಸರ್ವವ್ಯಾಪಿ, ಸದ್ರೂಪವಾದ ಪರಮಾತ್ಮರೂಪ ಏಕಾರ್ಥವು ತತ್ತಚ್ಛಬ್ದವಾಚ್ಯತ್ವಾವಸ್ಥೆಯಲ್ಲಿ ಶಕ್ತಿವಿಭಾಗದಿಂದ ಬಹುರೂಪವಾಗಿ ಪ್ರಕಾಶಿಸುತ್ತದೆಯೆಂದರ್ಥ. ಇದನ್ನು ಹರಿಯೂ ವಿವರಿಸುತ್ತಾನೆ. 'ಯತ್ರ'—ಇತಿ. ಇವನು ದೃಷ್ಟ, ಇದು ದೃಶ್ಯ, ಇದು ದರ್ಶನವೆಂಬ ತ್ರಿಪುಟೀಕಲ್ಪನೆ ಎಲ್ಲಿ ಇಲ್ಲವೋ ಆ ಆತ್ಮರೂಪ ಏಕಾರ್ಥವನ್ನೇ (ತ್ರಯೀ—ವೇದ, ಅದರ ಅಂತ—ಉಪನಿಷತ್) ವೇದಾಂತಶಾಸ್ತ್ರಜ್ಞರು ಸತ್ಯವೆಂದು ಹೇಳುತ್ತಾರೆ. 'ವಿಕಾರಾಪ'—ಇತಿ. ಕುಂಡಲ ರೂಪವಿಕಾರ ಹೋದಾಗ ಚಿನ್ನ ಮಾತ್ರ ಉಳಿಯುವಂತೆ ಪ್ರತ್ಯಯಾದಿಗಳಿಂದ ವಿಕಾರಾಪ ಗಮವಾದಾಗ ಪರಾಪ್ರಕೃತಿ ಮಾತ್ರ ಉಳಿಯುತ್ತದೆ. ಬ್ರಹ್ಮತತ್ವವೇ ಸಕಲ ಶಬ್ದಗಳಿಗೆ ವಾಚ್ಯ. ಸ್ಫೋಟರೂಪ ಶಬ್ದವೇ ವಾಚಕವೆಂದರೆ ದ್ವೈತ ಬರುವುದಿಲ್ಲವೇ ? ಹೀಗಿರು ವಾಗ ಅದ್ವಯ ಬ್ರಹ್ಮತತ್ವವು ಹೇಗೆ ಸರ್ವಶಬ್ದಾರ್ಥವಾಗುತ್ತದೆ ಎಂದು ಶಂಕೆ ಬಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಅಭ್ಯುಗತಾ'—ಇತಿ. ಅದ್ವಿತೀಯತ್ವ ನಿರ್ವಹಣೆಗೋಸ್ಕರ ವಾಚ್ಯ ವಾಚಕಗಳಿಗೆ ಅವಿಭಾಗವನ್ನು ಹೀಗೆ ತೋರಿಸಿರುತ್ತಾರೆ. 'ವಾಚ್ಯಾ'=ಇತಿ. ಸಾ—ಆ ಬ್ರಹ್ಮಸತ್ತೆಯೇ ಸರ್ವಶಬ್ದಗಳಿಗೂ ವಾಚ್ಯವಾಗುತ್ತದೆ. ಅದು ವಾಚಕವಾದ ಸ್ಫೋಟರೂಪ ಶಬ್ದದಿಂದ ಬೇರಾದುದಲ್ಲ. ಹೀಗೆ ವಾಚ್ಯವಾಚಕ ಗಳಿಗೆ ಅಭೇದವಿದ್ದರೂ ಕೇವಲ ಕಲ್ಪನೆಯಿಂದ ಅವುಗಳ ಸಂಬಂಧ ತೋರುತ್ತದೆ. ಜೀವ ಪರಮಾತ್ಮರು ಒಂದಾದರೂ ಕಲ್ಪನೆಯಿಂದ ವ್ಯವಹಾರದಶೆಯಲ್ಲಿ ನಿಯಮ್ಯನಿಯಾಮಕ ಭಾವ ಸಂಬಂಧದಂತೆ ಇಲ್ಲಿಯೂ ತಿಳಿಯಬೇಕು. ಸಂವೃತಿವಶಾತ್—ಆವರಣವಶಾತ್, ಕಲ್ಪನಾವಶಾದ್ವಾ. ಆಯಾಯ ಉಪಾಧಿಗಳಿಂದ ಕಲ್ಪಿತವಾದ ಭೇದಬಾಹುಲ್ಯದಿಂದ ವ್ಯವಹಾರವು ಕೇವಲ ಅವಿದ್ಯೆಯಿಂದ ಕಲ್ಪಿತವಾದುದರಿಂದಲೂ ಪ್ರತಿನಿಯತಾಕಾರೋ ಪಾಧಿಭೇದದಿಂದ ತೋರುವ ಬ್ರಹ್ಮತತ್ವವೇ ಸರ್ವಶಬ್ದ ವಿಷಯವಾಗಿದೆ. ಅಭೇದವು ಪಾರ ಮಾರ್ಥಿಕವಾದರೂ ಆವರಣದಿಂದ ವ್ಯವಹಾರಾವಸ್ಥೆಯಲ್ಲಿ ಸ್ವಪ್ನಾವಸ್ಥೆಯಂತೆ ನಾನಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪಪ್ರಪಂಚರೂಪವಾಗಿ ಅದು ವಿವರ್ತಿತವಾಗುತ್ತದೆಂದು ಕಾರಿಕಾರ್ಥ. ಇದನ್ನೇ ವೇದಾಂತಿಗಳ ಮಾತಿನಿಂದ ವಿವರಿಸುತ್ತಾನೆ. 'ತದಾಹುಃ'—ಇತಿ.

ತದಾಹುರ್ವೇದಾಂತವಾದ ನಿಪುಣಾಃ—
ಯಥಾ ಸ್ವಪ್ನಪ್ರಪಂಚೋಽಯಂ ಮಯಿ ಮಾಯಾವಿಜೃಂಭಿತಃ ।
ಏವಂ ಜಾಗೃತ್‌ಪ್ರಪಂಚೋಽಪಿ ಮಯಿಮಾಯಾವಿಜೃಂಭಿತಃ ॥ ಇತಿ ॥

ತದಿತ್ಥಂ ಕೂಟಸ್ಥೇ ಪರಸ್ಮಿನ್ ಬ್ರಹ್ಮಣಿ ಸಚ್ಚಿದಾನಂದರೂಪೇ ಪ್ರತ್ಯಗಭಿನ್ನೇಽವಗತೇಽನಾದ್ಯವಿದ್ಯಾನಿವೃತ್ತೌ ತಾದೃಗ್ಬ್ರಹ್ಮಾತ್ಮನಾವಸ್ಥಾನಲಕ್ಷಣಂ ನಿಃಶ್ರೇಯಸಂ ಸೇತ್ಸ್ಯತಿ ।

ಶಬ್ದಬ್ರಹ್ಮಣಿ ನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ (ಮ-ಭಾಷ್ಯ.) ಇತ್ಯಭಿಯುಕ್ತೋಕ್ತೇಃ। ತಥಾ ಚ ಶಬ್ದಾನುಶಾಸನಶಾಸ್ತ್ರಸ್ಯ ನಿಃಶ್ರೇಯಸಸಾಧನತ್ವಂ ಸಿದ್ಧಮ್ । ತದುಕ್ತಂ—

ತದ್ದ್ವಾರಮಪವರ್ಗಸ್ಯ ವಾಙ್ಮಲಾನಾಂ ಚಿಕಿತ್ಸಿತಮ್ ।
ಪವಿತ್ರಂ ಸರ್ವವಿದ್ಯಾನಾಮಧಿವಿದ್ಯಂ ಪ್ರಚಕ್ಷತೇ ॥ ವಾಕ್ಯಪ-೧-೧೪) ಇತಿ ॥

ತಥಾ—

ಇದಮಾದ್ಯಂ ಪದಸ್ಥಾನಂ ಸಿದ್ಧಿಸೋಪಾನಪರ್ವಣಾಮ್ ।
ಇಯಂ ಸಾ ಮೋಕ್ಷಮಾಣಾನಾಮಜಿಹ್ಮಾ ರಾಜಪದ್ಧತಿಃ ॥
(ವಾಕ್ಯಪ-೧-೧೬) ಇತಿ ॥

ತಸ್ಮಾದ್ವ್ಯಾಕರಣಶಾಸ್ತ್ರಂ ಪರಮಪುರುಷಾರ್ಥಸಾಧನತಯಾಧ್ಯೇತವ್ಯಮಿತಿಸಿದ್ಧಮ್ ॥

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನಸಂಗ್ರಹೇ ಪಾಣಿನಿ ದರ್ಶನಮ್

'ಯಥಾ'—ಇತಿ. ಸ್ವಪ್ನಪ್ರಪಂಚವೂ ಮಾಯೆಯಿಂದ ಬ್ರಹ್ಮನಲ್ಲಿಯೇ ಕಲ್ಪಿತವಾದಂತೆ ಜಾಗೃತ್ಪ್ರಪಂಚವೂ ಅದೇ ಮಾಯೆಯಿಂದ ಕಲ್ಪಿತವಾಗಿದೆಯೆಂದರ್ಥ. 'ತದಿತ್ಥಂ'—ಇತಿ. ಸಚ್ಚಿದಾನಂದಪರಬ್ರಹ್ಮಸ್ವರೂಪವುಜ್ಞಾತವಾದಾಗ ಅನಾದ್ಯವಿದ್ಯಾನಿವೃತ್ತಿಯಾಗಿ ಆ ರೀತಿಯ ಬ್ರಹ್ಮಾವಸ್ಥಾನಲಕ್ಷಣಮೋಕ್ಷವು ಸಿದ್ಧಿಸುತ್ತದೆ. ಶಬ್ದಬ್ರಹ್ಮನನ್ನು ತಿಳಿಯುವ ಚತುರನೇ ಪರಬ್ರಹ್ಮನನ್ನು ಹೊಂದುತ್ತಾನೆಂದು ಮಹಾಭಾಷ್ಯಕಾರನೂ ಹೇಳಿರುತ್ತಾನೆ. ಆದುದರಿಂದ ಶಬ್ದಾನುಶಾಸನಶಾಸ್ತ್ರವು ನಿಃಶ್ರೇಯಸಸಾಧನವಾಗುತ್ತದೆ. 'ತದ್ವಾರಂ'—ಇತಿ. ಇದು ವ್ಯಾಕರಣಶಾಸ್ತ್ರದ ಪ್ರಾಶಸ್ತ್ಯವನ್ನು ಬೋಧಿಸುತ್ತದೆ. ವಿದ್ಯಾಸು—ಅಧಿವಿದ್ಯಂ. ವಿಭಕ್ತ್ಯರ್ಥದಲ್ಲಿ ಅವ್ಯಯೀಭಾವಸಮಾಸ. ವಿದ್ಯೆಗಳಲ್ಲಿ ಈ ವ್ಯಾಕರಣಶಾಸ್ತ್ರವು ಅಪವರ್ಗಸ್ಯ—ಮೋಕ್ಷಕ್ಕೆ ದ್ವಾರವಾಗಿದೆ. ವಾಙ್ಮಲವನ್ನು ಹೋಗಲಾಡಿಸುತ್ತದೆ. ಸರ್ವವಿದ್ಯೆಗಳಲ್ಲಿಯೂ ಇದೇ ಅತಿ ಪವಿತ್ರವಾಗಿರುತ್ತದೆ. ಸಕಲ ವಿದ್ಯೆಗಳಲ್ಲಿಯೂ ಅರ್ಥವು ಶಬ್ದದಿಂದ ತಿಳಿಯುತ್ತದೆ. ಶಬ್ದದ ಸಂಸ್ಕಾರವಾದರೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಕರಣಾಧೀನವಾಗಿರುತ್ತದೆ. ಆದುದರಿಂದ ಇದು ಸಕಲ ಪ್ರಕಾಶಕವೆಂದರ್ಥ. 'ಇದಮಾದ್ಯಂ' — ಇತಿ. ಸಿದ್ಧಿಯೆಂದರೆ ಕೈವಲ್ಯಪ್ರಾಪ್ತಿ. ಮೋಕ್ಷಪ್ರಾಪಕಸೋಪಾನ ಮೆಟ್ಟಲುಗಳಲ್ಲಿ ಇದು ಹೆಜ್ಜೆ ಇಡುವ ಮೊದಲನೇ ಮೆಟ್ಟಲಾಗಿರುತ್ತದೆ. ಮುಮುಕ್ಷುಗಳಿಗೆ ವ್ಯಾಕರಣಶಾಸ್ತ್ರವೇ ಸರಳವಾದ ರಾಜಮಾರ್ಗವಾಗಿರುತ್ತದೆ. ಆದುದರಿಂದ ಈ ವ್ಯಾಕರಣಶಾಸ್ತ್ರವು ಪರಮಪುರುಷಾರ್ಥಸಾಧನವೆಂದು ತಿಳಿದು ಮೊದಲು ಓದಬೇಕಾಗಿದೆ.

ಹೀಗೆ ಸಾಯಣಮಾಧವರ ಪಾಣಿನಿದರ್ಶನದ
ಕನ್ನಡ ವ್ಯಾಖ್ಯಾನ ಮುಗಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಸಾಂಖ್ಯದರ್ಶನಮ್ ॥ ೧೪ ॥

ಅಥ ಸಾಂಖ್ಯೈರಾಖ್ಯಾತೇ ಪರಿಣಾಮವಾದೇ ಪರಿಪಂಥಿನಿ ಜಾಗರೂಕೇ ಕಥಂಕಾರಂ ವಿವರ್ತವಾದ ಆದರಣೀಯೋ ಭವೇತ್ । ಏಷ ಹಿ ತೇಷಾಮಾಘೋಷಃ । ಸಂಕ್ಷೇಪೇಣ ಹಿ ಸಾಂಖ್ಯಶಾಸ್ತ್ರೇ ಚತಸ್ರೋ ವಿಧಾಃ ಸಂಭಾವ್ಯಂತೇ । ಕಶ್ಚಿದರ್ಥಃ ಪ್ರಕೃತಿರೇವ, ಕಶ್ಚಿತ್ ವಿಕೃತಿಪ್ರಕೃತಿಶ್ಚ, ಕಶ್ಚಿದ್ವಿಕೃತಿರೇವ, ಕಶ್ಚಿದನುಭಯಃ, ಇತಿ ॥

ತತ್ರ ಕೇವಲಾ ಪ್ರಕೃತಿಃ ಪ್ರಧಾನಪದೇನ ವೇದನೀಯಾ ಮೂಲಪ್ರಕೃತಿಃ । ನಾಸಾವನ್ಯಸ್ಯ ಕಸ್ಯಚಿದ್ವಿಕೃತಿಃ । ಪ್ರಕರೋತೀತಿ ಪ್ರಕೃತಿರಿತಿ ವ್ಯುತ್ಪತ್ತ್ಯಾ ಸತ್ತ್ವರಜಸ್ತಮೋಗುಣಾನಾಂ ಸಾಮ್ಯಾವಸ್ಥಾಯಾ ಅಭಿಧಾನಾತ್ । ತದುಕ್ತಂ ಮೂಲಪ್ರಕೃತಿರವಿಕೃತಿಃ— (ಸಾಂ-ಕಾ-೩) ಇತಿ । ಮೂಲಂ ಚಾಸೌ ಪ್ರಕೃತಿಶ್ಚ ಮೂಲಪ್ರಕೃತಿಃ ಮಹದಾದೇಃ ಕಾರ್ಯಕಲಾಪಸ್ಯಾಸೌ ಮೂಲಂ ನತ್ವಸ್ಯ ಪ್ರಧಾನಸ್ಯ ಮೂಲಾಂತರಮಸ್ತಿ । ಅನವಸ್ಥಾಪಾತಾತ್ । ನ ಚ ಬೀಜಾಂಕುರವದನವಸ್ಥಾದೋಷೋ ನ ಭವತೀತಿ ವಾಚ್ಯಮ್ । ಪ್ರಮಾಣಾಭಾವಾದಿತಿ ಭಾವಃ ॥

ಪರಿಣಾಮವಾದಿ ಸಾಂಖ್ಯರ ಮತವನ್ನು ವಿವರಿಸುತ್ತಾರೆ. ಸದ್ದ್ರವ್ಯದ ಅವಸ್ಥಾಂತರಪ್ರಾಪ್ತಿಯೇ ಪರಿಣಾಮ. ಸಕಲ ಪ್ರಕೃತ್ಯಾದಿತತ್ವಗಳು ತತ್ತತ್ಕಾರ್ಯರೂಪದಿಂದ ಪರಿಣತವಾಗುತ್ತವೆಂದು ಅವರ ಸಿದ್ಧಾಂತ. ಸಾಂಖ್ಯರಿಂದ ಹೇಳಿದ ಪರಿಣಾಮವಾದವು ವಿರುದ್ಧವಾಗಿ ಜಾಗರೂಕವಾಗಿರುವಾಗ ವಿವರ್ತವಾದವನ್ನು ಆದರಿಸುವುದು ಹೇಗೆ ? ಅಪರಿತ್ಯಕ್ತವಾದ ಪೂರ್ವರೂಪವುಳ್ಳ ವಸ್ತುವಿಗೆ ಅಸತ್ತಾದರೂಪಾಂತರದಿಂದ ತೋರುವಿಕೆಯೇ ವಿವರ್ತ. ಶುಕ್ತಿಯು ರಜತವಾಗಿ ತೋರುವುದು. ಈ ವಿವರ್ತವಾದವನ್ನು ವೈಯಾಕರಣರೂ, ಮಾಯಾವಾದಿಗಳಾದ ಅದ್ವೈತವೇದಾಂತಿಗಳೂ ಸ್ವೀಕರಿಸಿರುತ್ತಾರೆ. ಅಧಿಷ್ಠಾನವಾದ ಬ್ರಹ್ಮರೂಪವಸ್ತುವಿನಲ್ಲಿ ಅಸತ್ತಾದ ಈ ಸಕಲ ಪ್ರಪಂಚವು ಭ್ರಾಂತಿಯಿಂದ ತೋರುತ್ತದೆಂದು ಅವರ ಸಿದ್ಧಾಂತ. ಸಾಂಖ್ಯಶಾಸ್ತ್ರಾಭಿಮತತತ್ವಗಳಲ್ಲಿ ನಾಲ್ಕು ಪ್ರಭೇದಗಳು ಮೊದಲು ಹೀಗೆ ಹೇಳಿವೆ. ೧) ಕೇವಲಪ್ರಕೃತಿಃ ೨) ಪ್ರಕೃತಿವಿಕೃತಿ. ೩) ಕೇವಲವಿಕೃತಿ. ೪) ಪ್ರಕೃತಿಯೂ ಅಲ್ಲ ವಿಕೃತಿಯೂ ಅಲ್ಲದಿರುವುದು. ಕೇವಲಪ್ರಕೃತಿ ಪ್ರಧಾನವೆಂಬ ಹೆಸರಿನಿಂದ ಮೂಲಪ್ರಕೃತಿಯಾಗಿರುತ್ತದೆ. ಇದು ಯಾವುದರ ವಿಕೃತಿಯೂ ಅಲ್ಲ. ಪ್ರಕರ್ಷೇಣ ಕರೋತಿ ಕಾರ್ಯಂ ಉತ್ಪಾದಯತೀತಿ ಪ್ರಕೃತಿಃ. ಪ್ರಕರ್ಷವೆಂದರೆ ತತ್ವಾಂತರಾರಂಭಕವೆಂದರ್ಥ. ಯಾವುದರಿಂದ ತತ್ವಾಂತರವು ಹುಟ್ಟುವುದೋ ಅಂತಹ ಕಾರಣವಿಶೇಷವೇ ಮೂಲ ಪ್ರಕೃತಿ. ಲೋಕದಲ್ಲಿ ಪ್ರಕರ್ಷವನ್ನು ವಿವಕ್ಷಾ ಮಾಡದೆ ಪ್ರಕೃತಿಶಬ್ದಕ್ಕೆ ಉಪಾದಾನ ಕಾರಣಸಾಮಾನ್ಯವಾಚಿತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನಂಗೀಕರಿಸಿ ಮೃದಾದಿಗಳಿಗೆ ಘಟಾದಿಪ್ರಕೃತಿತ್ವವನ್ನು ಹೇಳುತ್ತಾರೆ. 'ತತ್ವಾಂತರಾರಂಭಕತ್ವ ಪ್ರಕೃತಿತ್ವಂ' ಎಂದು ಪ್ರಕೃತಿಯು ಸಾಮಾನ್ಯ ಲಕ್ಷಣ. ಪ್ರಕೃಷ್ಟಾ ಕೃತಿಃ ಅಸ್ಮಾಃ ಎಂದೂ ವಿಗ್ರಹ ಹೇಳಬಹುದು.

ತ್ರಿಗುಣಾತ್ಮಕವಾದ ಪ್ರಕೃತಿಯು ಪ್ರಧಾನಪದವಾಚ್ಯವಾಗಿದೆ. ಸತ್ವ, ರಜಸ್ಸು ತಮಸ್ಸು ಎಂದು ಮೂರು ಗುಣಗಳು. ಪ್ರಕೃತಿಯು ಈ ಮೂರರ ಸಾಮ್ಯಾವಸ್ಥೆಯಾಗಿರುತ್ತದೆ. ಸಾಮ್ಯಾವಸ್ಥೆ ಇರುವುದರಿಂದಲೇ ಇದು ಸತ್ವ, ಇದು ರಜಸ್ಸು ಎಂಬ ವ್ಯವಹಾರಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಅಲ್ಲಿ ತತ್ತ್ವತ್ರಯವ್ಯವಹಾರವಿಲ್ಲ. ಒಂದೆಂದೇ ವ್ಯವಹರಿಸಲ್ಪಡುತ್ತದೆ. ಸತ್ವಾದಿಗಳು ಯದ್ಯಪಿ ದ್ರವ್ಯರೂಪಗಳು. ಏಕೆಂದರೆ ಅವು ಸಂಯೋಗವಿಭಾಗಾಶ್ರಯಗಳಾಗಿ ಮಹದಾದಿಗಳಿಗೆ ಉಪಾದಾನಕಾರಣಗಳಾಗಿರುತ್ತವೆ. ಪುರುಷಭೋಗಸಾಧನವಾದುದರಿಂದ ಗುಣಗಳಾಗಿ ಗುಣಪದವ್ಯವಹಾರ್ಯಗಳಾಗುತ್ತವೆ. ಗಂಧವ್ಯತಿರಿಕ್ತವಾದ ಪೃಥಿವಿಗೆ ಗಂಧವು ಗುಣ. ಹಾಗೆ ಸತ್ವಾದಿತ್ರಯವ್ಯತಿರಿಕ್ತವಾದ ಪ್ರಕೃತಿಗೆ ಸತ್ವಾದಿಗಳು ಗುಣವೆಂದು ತಿಳಿಯಬಾರದು. ಸತ್ವಾದಿಗಳು ಪ್ರಕೃತಿಸ್ವರೂಪವೇ ಆದುದರಿಂದ ಪ್ರಕೃತಿಧರ್ಮಗಳಾಗುವುದಿಲ್ಲ. 'ಸತ್ವಾದೀನಾಂ ಅತದ್ಧರ್ಮತ್ವಂ ತದ್ರೂಪತ್ವಾತ್' ಎಂದು ಸಾಂಖ್ಯಪ್ರವಚನ ಸೂತ್ರ. ವನದ ಮರವೆಂಬಂತೆ ಪ್ರಕೃತಿಯ ಗುಣಗಳು ಎಂಬ ವ್ಯವಹಾರ ತಿಳಿಯಬೇಕು. "ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ" ಎಂದು ಗೀತೆಯಲ್ಲಿ ಹೇಳಿದೆ. ಅಲ್ಲಿಯೂ ಗುಣಪದದಿಂದ ಪ್ರಕೃತಿಸ್ವರೂಪವಾದ ಗುಣಗಳಿಗೆ ಗ್ರಹಣವಿಲ್ಲ. ಪ್ರಕೃತಿಕಾರ್ಯವಾದ ವೈಷಮ್ಯಾವಸ್ಥೆ ಹೊಂದಿರುವ ಮಹತ್ತತ್ವಾದಿಗಳಿಗೆ ಕಾರಣವಾದ ಸತ್ವಾದಿಗಳಿಗೆ ಗ್ರಹಣವೆಂದು ತಿಳಿಯಬೇಕು. ಪ್ರಕೃತಿಸ್ವರೂಪಭೂತವಾದ ಗುಣಗಳು ಪ್ರಕೃತಿಧರ್ಮಗಳಾಗುವುದಿಲ್ಲ. ಸಾಂಖ್ಯಪ್ರವಚನಸೂತ್ರದಲ್ಲಿ "ಸತ್ವಾದೀನಾಮತದ್ಧರ್ಮತ್ವಂ ತದ್ರೂಪತ್ವಾತ್" (ಸಾಂ-ಪ್ರ-ಸೂ-೬।೩೯) ಎಂದು ಹೇಳಿದೆ. ವನದ ವೃಕ್ಷಗಳು ಎಂಬ ವ್ಯವಹಾರದಂತೆ ಪ್ರಕೃತಿಯ ಗುಣಗಳು ಎಂಬ ವ್ಯವಹಾರ ಸಂಗತವಾಗುತ್ತದೆ.

'ಸತ್ವಂ ರಜಃ'—ಎಂಬಲ್ಲಿ ಪ್ರಕೃತಿಸ್ವರೂಪಭೂತವಾದ ಗುಣಗಳಿಗೆ ಗ್ರಹಣವೆನ್ನುವುದಾದರೆ ಆಗ ಅವು ನಿತ್ಯವಾದುದರಿಂದ ಉತ್ಪತ್ತಿಸಂಭವಿಸದೆ 'ಪ್ರಕೃತಿಸಂಭವಾಃ' ಎಂದು ಹೇಳಿರುವುದು ಸಂಗತವಾಗಲಾರದು. ವೈಷಮ್ಯವೆಂದರೆ ಪರಿಣಾಮವಿಶೇಷ. ಸತ್ವಾದಿಗಳಲ್ಲಿ ಪ್ರತ್ಯೇಕವಾಗಿ ಅನೇಕವ್ಯಕ್ತಿಗಳಗೆ ಅನ್ಯೋನ್ಯವಾಗಿ ಸಜಾತೀಯ (ಸಂವಲನ) ಸಂಬಂಧದಿಂದ ಲಘುತ್ವಪ್ರಕರ್ಷಾದಿಫಲೋಪಧಾನದಿಂದ ಇದು ಸತ್ವ, ಇದು ರಜಸ್ಸು ಇತ್ಯಾದಿವ್ಯವಹಾರಯೋಗ್ಯವಾದ ಪರಿಣಾಮವಿಶೇಷ. ಈ ವೈಷಮ್ಯಾವಸ್ಥೆ ಹೊಂದಿದ ಗುಣತ್ರಯಗಳು ಪ್ರಕೃತಿಗಿಂತ ಬೇರೆಯಾದ ತತ್ತ್ವತ್ರಯವೆಂದು ಕೆಲವರು ಸಾಂಖ್ಯರಲ್ಲಿ ೨೮ ತತ್ವಗಳೆಂದು ಹೇಳುತ್ತಾರೆ.

ಸತ್ವಂ ಲಘು ಪ್ರಕಾಶಮಿಷ್ಟಮುಪಷ್ಟಂಭಕಂ ಚಲಂ ಚ ರಜಃ ||
ಗುರು ವರಣಕಮೇವ ತಮಃ (ಸಾ. ಕಾ ೧೩)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ಸಾಂಖ್ಯಕಾರಿಕೆಯಲ್ಲಿ ಸತ್ತ್ವಾದಿಗಳಿಗೆ ಲಘುತ್ವಾದಿಸ್ವಭಾವವಿಶೇಷಗಳು ಹೇಳಿವೆ. ಏವಕಾರಕ್ಕೆ ಸತ್ತ್ವಾದಿಗಳಲ್ಲಿ ಅನ್ವಯ. "ಸತ್ತ್ವಮೇವ ಲಘು ಪ್ರಕಾಶಕಂ ಚೇಷ್ಟಂ" ಸತ್ತ್ವವು ಲಘುವಾದುದರಿಂದಲೇ ತತ್ಕಾರ್ಯಗಳಾದ ಇಂದ್ರಿಯಗಳಲ್ಲಿ ವಿಷಯ ಗ್ರಹಣೌನ್ಮುಖ್ಯರೂಪವಾದ ಪಾಟವ ತೋರುತ್ತದೆ. ಸತ್ತ್ವವು ಪ್ರಕಾಶಕವಾದುದರಿಂದಲೇ ಇಂದ್ರಿಯಗಳಿಗೆ ವಿಷಯಪ್ರಕಾಶಕತ್ವವು ಬಂದಿದೆ. ರಜಸ್ಸೇ ಉಪಷ್ಟಂಭಕ, ಚಲವಾಗಿದೆ. ಚಲವಾದುದರಿಂದ ಸ್ವಭಾವದಿಂದ ಸಕ್ರಿಯವಾಗಿದೆ. ಸತ್ತ್ವ ಮತ್ತು ತಮಸ್ಸುಗಳಿಗೆ ಉಪ ಷ್ಟಂಭಕವಾಗಿದೆ ಅಂದರೆ ಅವುಗಳ ಕಾರ್ಯೋತ್ಪಾದದಲ್ಲಿ ಪ್ರವರ್ತಕವಾಗುತ್ತದೆ. ಅವು ಅಕ್ರಿಯಗಳಾದುದರಿಂದ ಅವೆರಡರಲ್ಲಿ ಸ್ವಾಭಾವಿಕ ಪ್ರವೃತ್ತಿಯುಂಟಾಗುದಿಲ್ಲ. ತಮಸ್ಸೇ ಗುರು ಮತ್ತು ಆವರಕವೆಂದು ಇಷ್ಟವಾಗಿದೆ. ಗುರುತ್ವವೆಂದರೆ ಲಘುತ್ವಕ್ಕೆ ವಿರೋಧಿ ಯಾಗಿ ಸ್ಥಿತಿಗೆ ಕಾರಣವಾಗಿರುವ ಧರ್ಮ. ಅದರ ಉತ್ಕರ್ಷದಿಂದ ಸತ್ತ್ವಸ್ವಭಾವಗಳೂ, ರಜಃಸ್ವಭಾವಗಳೂ ಪ್ರತಿಬದ್ಧವಾಗುತ್ತವೆ. ಇದಕ್ಕೇ ಆವರಕತ್ವವೆಂದು ಕರೆಯುತ್ತಾರೆ. ಸತ್ತ್ವವು ಲಘುವಾದುದರಿಂದಲೇ ಪ್ರಕಾಶಕವಾಗುತ್ತದೆ. ರಜಸ್ಸು ಚಲವಾದುದರಿಂದಲೇ ಉಪಷ್ಟಂಭಕವಾಗುತ್ತದೆ. ತಮಸ್ಸು ಗುರುವಾದುದರಿಂದಲೇ ಆವಾರಕವಾಗುತ್ತದೆ. ಪ್ರಕೃತಿಸ್ವಭಾವಭೂತವಾದ ಸತ್ತ್ವರಜಸ್ತಮಸ್ಸುಗಳು ಪ್ರತ್ಯೇಕವಾಗಿ ನಾನಾ ವಿಧವಾಗು ತ್ತದೆ. ಸತ್ತ್ವವ್ಯಕ್ತಿಗಳು ಅನೇಕಗಳು. ಅಲ್ಲಿ ಕೆಲವು ಅಣು ಪರಿಮಾಣಗಳು, ಕೆಲವು ವಿಭುಪರಿಮಾಣಗಳು. ಮಧ್ಯಮಪರಿಮಾಣಗಳು ಯಾವುದೂ ಇಲ್ಲ. ಹಾಗೆ ಇದೆ ಯೆಂದು ಒಪ್ಪಿದರೆ ಘಟಾದಿಗಳಂತೆ ಅನಿತ್ಯತ್ವಪ್ರಸಕ್ತಿ ಬರುತ್ತದೆ. ನೈಪನ್ಯಾವಸ್ಥೆ ಇರುವಕಾರ್ಯರೂಪವಾದ ಸತ್ತ್ವವು ಮಧ್ಯಮಪರಿಮಾಣವುಳ್ಳದ್ದೂ ಆಗಿರುತ್ತದೆ. ಹೀಗೆಯೇ ರಜಸ್ತಮಸ್ಸುಗಳೂ ನಾನಾರೂಪವಾಗಿ ಇರುತ್ತವೆ. ಹಾಗಾದರೆ ಗುಣತ್ರಯವೆಂಬ ಮಾತು ಹೇಗೆ ಕೂಡುತ್ತದೆ? ಎಂದರೆ ಸತ್ತ್ವಾದಿಗಳಲ್ಲಿ ಪ್ರತ್ಯೇಕವಾಗಿ ಅನೇಕಗಳೆಂದು ಅಂಗೀಕಾರಮಾಡದಿರುವುದರಿಂದಲೇ ಮೂರೆಂದು ಪ್ರಸಿದ್ಧವಾಗಿದೆ. ಅದೂ ಅಲ್ಲದೆ ಗುಣ ವಿಭಾಜಕ ಸತ್ತ್ವತ್ವಾದ್ಯುಪಾಧಿಗಳು ಮೂರೇ ಆದುದರಿಂದ ಗುಣತ್ರಯವೆಂದುದು ಸಮಂಜಸವಾಗುತ್ತದೆ. ವೈಶೇಷಿಕಮತದಲ್ಲಿ ಪೃಥಿವ್ಯಾದಿದ್ರವ್ಯನವಕದಲ್ಲಿ ಪೃಥಿವ್ಯಾದಿ ಗಳಿಗೆ ಪ್ರತ್ಯೇಕವಾಗಿ ಏಕತ್ವವಿದ್ದರೂ, ಪೃಥಿವೀತ್ವಾದಿದ್ರವ್ಯವಿಭಾಜಕೋಪಾಧಿ ಭೇಧ ಗಳಿಂದ ನವದ್ರವ್ಯಗಳೆಂಬ ವ್ಯವಹಾರ ಹೇಗೋಹಾಗೆ ತಿಳಿಯಬೇಕು. "ಅಷ್ಟೌಪ್ರಕೃ ತಯಃ'— (ಸಾಂ-ಸ-ಸೂ ೧) ಎಂಬಲ್ಲಿ ಸತ್ತ್ವಾದಿಗಳ ಧರ್ಮಗಳು ಹೇಳಿವೆ. ಸುಖ ಪ್ರಸಾದಪ್ರಕಾಶಾದಿಧರ್ಮಗಳು ಸತ್ತ್ವಕ್ಕೂ, ದುಃಖಕಾಲುಷ್ಯಪ್ರವೃತ್ತ್ಯಾದಿಗಳು ರಜಸ್ಸಿಗೂ, ಮೋಹಾವರಣಸ್ತಂಭನಾದಿಗಳು ತಮಸ್ಸಿಗೂ ಹೇಳಿವೆ. ಧರ್ಮಧರ್ಮಿಗಳಿಗೆ ಅಭೇದಾಭಿ ಪ್ರಾಯದಿಂದ ಸತ್ತ್ವವು ಸುಖಾತ್ಮಕವೆಂಬ ವ್ಯವಹಾರ ಉಪಪನ್ನವಾಗುತ್ತದೆ. ಹೀಗೆಯೇ ರಜಸ್ಸು ದುಃಖಾತ್ಮಕವೂ ತಮಸ್ಸು ಮೋಹಾತ್ಮಕವೆಂದೂ ತಿಳಿಯಬೇಕು.

ಮೂಲಪ್ರಕೃತಿರೂಪತತ್ತ್ವವು ಅನುಮಾನದಿಂದ ಸಿದ್ಧವಾಗುತ್ತದೆ. ಆದುದರಿಂದ ಇದಕ್ಕೆ ಆನುಮಾನಿಕವೆಂದೂ ಹೆಸರಿದೆ. "ಮಹದಾದಿಕಾರ್ಯಂ—ಸುಖದುಃಖಮೋಹಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ಮಕ ದ್ರವ್ಯಕಾರ್ಯಂ— ಕಾರ್ಯತ್ವೇ ಸತಿ ಸುಖದುಃಖಮೋಹಾತ್ಮಕತ್ವಾತ್ |" ಎಂದು ಅನುಮಾನ. 'ವಸ್ತ್ರಾದಿಕಾರ್ಯಭೂತಶಯ್ಯಾಸನಾದಿವತ್' ದೃಷ್ಟಾಂತ. ವಸ್ತ್ರಾದಿಗಳ ಕಾರ್ಯವಾದ ಶಯ್ಯಾಸನಾದಿಗಳು ಸುಖಾದಿ ಸಾಧನಗಳಾದರೂ ಸುಖಾದ್ಯಾತ್ಮಕವಾಗದಿರುವುದರಿಂದ ದೃಷ್ಟಾಂತವಾಗುವುದು ಹೇಗೆ? ಸುಖಾದಿಗಳು ಅಂತರಮನೋಧರ್ಮವಾಗಿ ಅನುಭವಿಸಲ್ಪಡುತ್ತವೆ ಎಂದು ಶಂಕಿಸಬಾರದು. 'ಕಾರಣಗುಣಗಳು ಕಾರ್ಯದಲ್ಲಿ ಗುಣಾಂತರವನ್ನು ಆರಂಭಿಸುತ್ತವೆ, ಎಂಬ ನ್ಯಾಯದಿಂದ ಮನೋಧರ್ಮವಾದ ಸುಖಾದಿಗಳು ಕಾರಣಗುಣಪೂರ್ವಕಗಳಾದುದರಿಂದ ಆ ರೀತಿ ಸುಖಾದಿಗಳನ್ನು ಕೊಡುವುದರಿಂದ ಮನಸ್ಸಿಗೆ ಪರಂಪರೆಯಿಂದ ಕಾರಣವಾದ ಮೂಲಪ್ರಕೃತಿಯಲ್ಲಿ ಸುಖಾದಿಧರ್ಮಗಳನ್ನು ಅವಶ್ಯವಾಗಿ ಅಂಗೀಕರಿಸಬೇಕು. ಮೂಲ ಪ್ರಕೃತಿಯಲ್ಲಿರುವ ಸುಖಾದಿಗಳು ಹಿಂದೆ ಹೇಳಿದ ನ್ಯಾಯದಂತೆ ಕಾರ್ಯವಿಶೇಷವಾದ ಮನಸ್ಸಿನಲ್ಲಿ ಬರುವಂತೆ ಪಂಚಮಹಾಭೂತ ಕಾರ್ಯಾಂತರದಲ್ಲಿಯೂ ಸುಖಾದ್ಯಾರಂಭಕತ್ವವಿದೆಯೆಂಬುದರಲ್ಲಿ ಯಾವ ಬಾಧಕವೂ ಇಲ್ಲ. ಹೀಗೆ ಭೌತಿಕವಿಷಯಗಳಲ್ಲಿ ಸುಖಾದಿಗಳು ಸಿದ್ಧಿಸುವುದರಿಂದ ಧರ್ಮಧರ್ಮಿಗಳಿಗೆ ಅಭೇದಾಭಿಪ್ರಾಯದಿಂದ ಭೌತಿಕವಾದ ಶಯ್ಯಾಸನಾದಿಗಳಿಗೆ ಸುಖಾದಿಸ್ವರೂಪವು ಸಿದ್ಧಿಸುವುದರಿಂದ ದೃಷ್ಟಾಂತವು ಸಮಂಜಸವಾಗುತ್ತದೆ. ಘಟರೂಪ, ಪಟರೂಪವೆಂಬ ಜ್ಞಾನದಂತೆ ಚಂದನಸುಖ ಸ್ತ್ರೀಸುಖ ಇತ್ಯಾದಿ ಜ್ಞಾನವಿರುವುದರಿಂದ ವಿಷಯದಲ್ಲಿ ಸುಖಾದಿಗಳು ಸಿದ್ಧಿಸುತ್ತವೆ. ವಿಷಯಸುಖೋತ್ಪಾದಕವಾದುದರಿಂದ ವಿಷಯದಲ್ಲಿ ಸುಖಾದ್ಯಾರೋಪವೆಂದು ತಿಳಿಯಬೇಕು.

ಎರಡನೆಯ ತತ್ವ ಬುದ್ಧಿ. ಇದಕ್ಕೆ ಮಹತ್ ಎಂಬ ಸಂಜ್ಞೆ ಇದೆ. ಇದಕ್ಕೆ ಧರ್ಮಜ್ಞಾನವೈರಾಗ್ಯ ಐಶ್ವರ್ಯವೆಂಬ ಪ್ರಕೃಷ್ಟಗುಣಯೋಗವಿರುತ್ತದೆ. ಪ್ರಧಾನ ಸಂಜ್ಞೆ ಇರುವ ಮೂಲಪ್ರಕೃತಿತತ್ವದಿಂದ ಇದು ಹುಟ್ಟುತ್ತದೆ. ಪ್ರಧಾನದಂತೆ ಇದೂ ತ್ರಿಗುಣಾತ್ಮಕವಾಗುತ್ತದೆ. ಆದರೆ ಗುಣಗಳಲ್ಲಿ ಸತ್ವಾಂಶವೇ ಪ್ರಧಾನವಾಗಿರುತ್ತದೆ. "ಸಾತ್ವಿಕಾಂಶಾತ್ ಪ್ರಧಾನಾತ್ತು ಮಹತ್ತತ್ವಮಜಾಯತ" ಎಂಬಲ್ಲಿ ಸತ್ವಾಂಶಪ್ರಾಧಾನ್ಯ ವಿವಕ್ಷೆಯಿಂದ ಹೇಳಿದೆ. ಬುದ್ಧ್ಯಹಂಕಾರಮನೋರೂಪತತ್ವತ್ರಯರೂಪವಾದ ಅಂತಃಕರಣರೂಪವಾದ ಮರಕ್ಕೆ ಮಹತ್ತತ್ವವು ಅಂಕುರವಾಗುತ್ತದೆ. ನಿಶ್ಚಯಪ್ರವೃತ್ತಿಕವಾದ ಅಂತಃಕರಣವೇ ಬುದ್ಧಿ. ಅಭಿಮಾನಪ್ರವೃತ್ತಿಕವಾದ ಅಂತಕರಣವು ಅಹಂಕಾರ. ಸಂಕಲ್ಪವೃತ್ತಿಕವಾದ ಅಂತಃಕರಣವೇ ಮನಸ್ಸು. ಪ್ರಧಾನದಂತೆ ಬುದ್ಧಿತತ್ತ್ವವೂ ನಾನಾವಿಧವಾಗಿರುತ್ತದೆ. ಇದು ಬ್ರಹ್ಮಾದಿಸ್ಥಾವರಾಂತದವರೆಗೆ ಜೀವಕರಿಗೆ ಪ್ರತ್ಯೇಕವಾಗಿ ಒಂದೊಂದು ಉಪಾಧಿರೂಪವಾಗಿರುತ್ತದೆ. ಎಲ್ಲಾ ಬುದ್ಧಿಗಳಲ್ಲಿ ಸತ್ವಾಂಶ ಪ್ರಧಾನವಾಗಿದ್ದರೂ ಕೆಲವು ಕಡೆ ರಜಸ್ತಮಸ್ಸುಗಳ ಪ್ರಾಕಟ್ಯವೂ ಇರುತ್ತದೆ. ಬ್ರಹ್ಮ ವಿಷ್ಣು ಮಹೇಶ್ವರರ ಉಪಾಧಿಭೂತವಾದ ಬುದ್ಧಿಯಲ್ಲಿ ಕ್ರಮವಾಗಿ ರಜಃ ಸತ್ತ್ವ ತಮೋಗುಣಗಳು ಪ್ರಕಟಾವಸ್ಥೆಯಲ್ಲಿರುತ್ತವೆ. ಕೆಲವು ಬುದ್ಧಿತತ್ತ್ವಗಳು ರಜಸ್ತಮಸ್ಸುಗಳ ಪ್ರಾಕಟ್ಯಾವಸ್ಥೆಯಿರುವುದರಿಂದ ಸತ್ತ್ವವು ಅಲ್ಲಿ ತಿರೋಭೂತವಾಗಿ ಮುಚ್ಚಲ್ಪಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿದ್ದರೂ ಅವುಹತ್ತಿನಂತೆ ಅಧರ್ಮಾಜ್ಞಾನ ವೈರಾಗ್ಯಾನೈಶ್ವರ್ಯಗಳಿಂದ ಕೂಡಿರುತ್ತವೆ. ಅಂತಹ ಉಪಾಧಿಗಳಿಂದ ಕೂಡಿದ ಕ್ಷುದ್ರಪುಣ್ಯಹೀನಜೀವಿಗಳು ಧರ್ಮಾಚರಣದಲ್ಲಿ ಪ್ರವರ್ತಿಸುವುದಿಲ್ಲ. ಅಧರ್ಮವನ್ನೇ ಆಚರಿಸುತ್ತವೆ.

ವಿಶೇಷಗಳು ಸಾಮಾನ್ಯಪ್ರಕೃತಿಕವಾಗಿರುತ್ತವೆಯೆಂಬ ನ್ಯಾಯದಿಂದ ಬುದ್ಧಿ ಸಾಮಾನ್ಯಭೂತವಾದ ಮಹತ್ತತ್ತ್ವದಿಂದ ಬುದ್ಧಿವಿಶೇಷಭೂತವಾದ ತತ್ತ್ವವು ಹುಟ್ಟುತ್ತದೆ. ಅಹಂತಾ, ಇದಂತಾ ಬುದ್ಧಿವಿಶೇಷಗಳು. ಅಹಂತಾ ಇಲ್ಲದೆ ಇದಂತಾ ಹುಟ್ಟದಿರುವುದರಿಂದ ಮೊದಲು ಬುದ್ಧಿವಿಶೇಷರೂಪವಾದ ಅಹಂಕಾರತತ್ತ್ವವು ಹುಟ್ಟುತ್ತದೆ. ಪ್ರಕೃತಿಸಂಜ್ಞಕತತ್ತ್ವಾಷ್ಟಕದಲ್ಲಿ ಇದು ಮೂರನೆಯತತ್ತ್ವ. ಸಾತ್ವಿಕ, ರಾಜಸ, ತಾಮಸವೆಂದು ಬುದ್ಧಿತತ್ತ್ವದಂತೆ ಇದೂ ಮೂರುವಿಧವಾಗುತ್ತದೆ. ಸಾತ್ವಿಕಕ್ಕೆ ವೈಕಾರಿಕವೆಂದೂ, ರಾಜಸಕ್ಕೆ ತೈಜಸವೆಂದೂ, ತಾಮಸಕ್ಕೆ ಭೂತಾದಿಯೆಂದೂ ಹೆಸರು. ಎಲ್ಲಿ ರಜಸ್ತಮಸ್ಸುಗಳನ್ನು ತಿರಸ್ಕರಿಸಿ ಸತ್ವಗುಣವೇ ಉತ್ಕಟವಾಗುವುದೋ ಆಗ ಸಾತ್ವಿಕವಾಗುತ್ತದೆ. ಇದು ತೈಜಸಾಂಶ ಸಹಾಯದಿಂದ ಪ್ರವೃತ್ತಿಧರ್ಮಕವಾದ ಹನ್ನೊಂದು ಇಂದ್ರಿಯಗಳನ್ನು ಹುಟ್ಟಿಸುತ್ತದೆ. ಇದರಿಂದ ಸಾತ್ವಿಕ, ತೈಜಸಗಳಿಂದ ಇಂದ್ರಿಯೋತ್ಪತ್ತಿಯೆಂದು ಹೇಳುತ್ತಾರೆ. ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳೂ, ಮನಸ್ಸೂ ಸೇರಿ ಹನ್ನೊಂದು ಇಂದ್ರಿಯಗಳಾಗುತ್ತವೆ. ಸತ್ವರಜಸ್ಸುಗಳನ್ನು ತಿರಸ್ಕರಿಸಿ ತಮೋಗುಣವು ಉತ್ಕಟವಾದಾಗ ಅದು ತಾಮಸವಾಗುತ್ತದೆ. ಇದೂ ತೈಜಸಸಹಾಯದಿಂದ ಪ್ರವೃತ್ತಿಧರ್ಮಕವಾದ ತನ್ಮಾತ್ರಪಂಚಕವನ್ನು ಹುಟ್ಟಿಸುತ್ತದೆ. ಇದರಿಂದಲೇ ತಾಮಸತೈಜಸಗಳಿಂದ ತನ್ಮಾತ್ರಪಂಚಕೋತ್ಪತ್ತಿಯೆಂಬ ವ್ಯವಹಾರ ಪ್ರಸಿದ್ಧವಾಗಿದೆ.

ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ. ರೂಪತನ್ಮಾತ್ರ, ರಸತನ್ಮಾತ್ರ, ಗಂಧತನ್ಮಾತ್ರಗಳೆಂದು ಐದು ತನ್ಮಾತ್ರಗಳು. ನಿರ್ವಿಶೇಷಗಳಾದ ಶಬ್ದಸ್ಪರ್ಶರೂಪರಸ ಗಂಧಗಳಿಗೆ ಆಶ್ರಯವಾದ ಸೂಕ್ಷ್ಮಪಂಚಭೂತಗಳಿಗೆ ತನ್ಮಾತ್ರವೆಂದು ಹೆಸರು. ಶಬ್ದದಲ್ಲಿ ವಿಶೇಷವೆಂದರೆ ಉದಾತ್ತಾದಿ, ನಿಷಾದಾದಿಗಳು. ಸ್ಪರ್ಶದಲ್ಲಿ ಶೀತೋಷ್ಣಾದಿಗಳು. ರೂಪದಲ್ಲಿ ಶುಕ್ಲತ್ವಾದಿಗಳು. ರಸದಲ್ಲಿ ಮಧುರತ್ವಾದಿಗಳು. ಗಂಧದಲ್ಲಿ ಸುರಭಿತ್ವಾದಿಗಳು. ಈ ಐದರಲ್ಲಿಯೂ ಶಾಂತಘೋರಮೂಢರೂಪವಾಗಿ ಶಬ್ದತ್ವಸ್ಪರ್ಶತ್ವವ್ಯಾಪ್ಯಗಳಾದ ಜಾತಿ ವಿಶೇಷಗಳು ಇರುತ್ತವೆಯೆಂದು ಸಾಂಖ್ಯತತ್ತ್ವವಿವೇಚನೆಯಲ್ಲಿ ಹೇಳಿದೆ.

ಶಬ್ದತನ್ಮಾತ್ರಮಿತ್ಯೇತಚ್ಛಬ್ದ ಏವೋಪಲಭ್ಯತೇ ||
ನ ತೂದಾತ್ತನಿಷಾದಾದಿ ಭೇದಸ್ತಸ್ಯೋಪಲಭ್ಯತೇ || ಇತ್ಯಾದಿ ||

ಈ ತನ್ಮಾತ್ರೆಗಳು ಕ್ರಮವಾಗಿ ಆಕಾಶ, ವಾಯು, ತೇಜೋ, ಜಲ, ಪೃಥಿವೀ ಪಂಚಭೂತಗಳಿಗೆ ಪ್ರಕೃತಿಗಳಾಗುತ್ತವೆ. ಹೀಗೆ ಪ್ರಕೃತ್ಯಷ್ಟಕಗಳೂ, ಏಕಾದಶ ಇಂದ್ರಿಯಗಳೂ. ಪಂಚಮಹಾಭೂತಗಳೂ, ಸೇರಿ ೨೪ ತತ್ತ್ವಗಳಾಗುತ್ತವೆ. ೨೫ ನೇ ತತ್ತ್ವವೇ ಪುರುಷ. ಜೀವಾತ್ಮನೇ ಇವನಲ್ಲದೆ ಇವನಿಗಿಂತ ಬೇರೆಯಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವಜ್ಞನಾದ ಈಶ್ವರನೊಬ್ಬ ನಿಲ್ಲ. ಈಶ್ವರನಿದ್ದಾನೆಂಬುದರಲ್ಲಿ ಯಾವ ಪ್ರಮಾಣವೂ ಇಲ್ಲ. ಜೀವಾತ್ಮನು ಪ್ರತಿಶರೀರದಲ್ಲಿಯೂ ಭಿನ್ನನಾಗಿರುತ್ತಾನೆ. ಒಬ್ಬನೇನ್ನುವು ದಾದರೆ ಆಗ ಸುಖದುಃಖಜನ್ಮಮರಣಮೋಕ್ಷಾದಿವ್ಯವಸ್ಥೆಯು ಕೂಡದೇ ಹೋಗುತ್ತದೆ. ಇದನ್ನೇ ಸಾಂಖ್ಯಪ್ರವಚನಸೂತ್ರದಲ್ಲಿ "ಜನ್ಮಾದಿವ್ಯವಸ್ಥಾತಃ ಪುರುಷಬಹುತ್ವಂ" (ಸಾಂ, ಪ್ರ- ಸೂ ೬೧೪೫) ಎಂದು ಹೇಳಿದೆ. ಈ ಜೀವಾತ್ಮನು ಅನಾದಿ, ಸೂಕ್ಷ್ಮ, ಚೇತನ, ಸರ್ವಗತ, ನಿರ್ಗುಣ, ಕೂಟಸ್ಥ, ನಿತ್ಯ, ದ್ರಷ್ಟೃ, ಭೋಕ್ತೃ ಆಗಿರುತ್ತಾನೆ.

ವೈಶೇಷಿಕರು ಹೇಳಿದ ಏಳು ಪದಾರ್ಥಗಳು ಈ ೨೫ ತತ್ತ್ವಗಳಲ್ಲಿಯೇ ಅಂತರ್ಭಾವ ಹೊಂದುತ್ತದೆ. ಪೃಥಿವ್ಯಾದಿನವದ್ರವ್ಯಗಳಲ್ಲಿ ಪೃಥಿವ್ಯಪ್ತೇಜೋವಾಯುಆಕಾಶ ಮನಸ್ಸು ಗಳು ತತ್ತದ್ರೂಪದಿಂದಲೇ ನಿರ್ದಿಷ್ಟವಾಗಿವೆ. ಆತ್ಮನು ಪುರುಷನಾಗುತ್ತಾನೆ. ದಿಕ್ಕಾಲ ಗಳು ಆಕಾಶದಲ್ಲಿ ಸೇರುತ್ತವೆ. 'ದಿಕ್ಕಾಲಾವಾಕಾಶಾದಿಭ್ಯಃ' ಎಂದು ಸಾಂಖ್ಯಪ್ರವಚನ ಸೂತ್ರ. (೨-೧೨) ಗುಣಕರ್ಮಸಾಮಾನ್ಯಗಳು ದ್ರವ್ಯದಲ್ಲಿ ಅಂತರ್ಭಾವ ಹೊಂದು ತ್ತವೆ. ಧರ್ಮಧರ್ಮಿಗಳಿಗೆ ಯಾವಾಗಲೂ ಅಭೇದವಿರುತ್ತದೆ. ವಿಶೇಷಸಮವಾಯ ಗಳು ಪದಾರ್ಥಗಳೇ ಅಲ್ಲದಿರುವುದರಿಂದ ಅವುಗಳಿಗೆ ಅಂಗೀಕಾರವಿಲ್ಲ. ಅವುಗಳಿಂದ ಯಾವ ಫಲವೂ ಇರುವುದಿಲ್ಲ. ಅಭಾವವೂ ಭಾವದಲ್ಲಿಯೇ ಸೇರುತ್ತದೆ. ಘಟ ಪ್ರಾಗಭಾವವೆಂದರೆ ಮಣ್ಣು. ಘಟಧ್ವಂಸವು ಘಟದಅವಯವೇ. ಘಟಾತ್ಯಂತಾ ಭಾವವು ಅಧಿಕರಣಸ್ವರೂಪವಾಗುತ್ತದೆ. ಘಟೋನ್ಯೋನ್ಯಾಭಾವವು ಘಟಸ್ವರೂಪವೇ ಆಗಿರುತ್ತದೆ.

ಅವರು ಸೃಷ್ಟಿಕ್ರಮವನ್ನು ಹೀಗೆ ಹೇಳುತ್ತಾರೆ. ಅವ್ಯಕ್ತವೆಂಬ ಮೂಲಪ್ರಕೃತಿಯು ಪ್ರವೃತ್ತಿಸ್ವಭಾವವುಳ್ಳದ್ದಾಗಿಯೂ, ಸ್ವತಂತ್ರವಾಗಿಯೂ ಇದ್ದು ಸೃಷ್ಟ್ಯಾರಂಭದಲ್ಲಿ ತಾನಾಗಿಯೇ ಕ್ಷೋಭೆಗೊಂಡು ನಾರಾಯಣವೆಂಬ ಜೀವವಿಶೇಷದೊಡನೆ ಸಂಬಂಧ ಹೊಂದುತ್ತದೆ. ಆಮೇಲೆ ಅನ್ಯಸಜಾತೀಯಪ್ರಕೃತ್ಯಂಶಗಳು ನ್ಯೂನಾಧಿಕಭಾವದಿಂದ ಸೇರುವುದರಿಂದ ಮಹತ್ತತ್ವವು ಹುಟ್ಟುತ್ತದೆ. ಪುರುಷನು ಪ್ರಕೃತಿಯೊಡನೆ ಸೇರಿದರೆ 'ಅಸಂಗನು ಅವನು' ಎಂದು ಹೇಳುವ ಶ್ರುತಿಬಾಧೆ ಬರುವುದಿಲ್ಲವೆ? ಎಂದು ಶಂಕೆ ಬರಬಹುದು. ವಿಕಾರಹೇತುಸಂಗವೇ ಇಲ್ಲಿ ಸಂಗ ಪದಾರ್ಥವಾದುದರಿಂದ ದೋಷವಿಲ್ಲ. 'ಪದ್ಮಪತ್ರಮಿವಾಂಭಸಾ' ಎಂಬ ಗೀತಾವಚನಕ್ಕೂ ಹೀಗೆ ಅರ್ಥ ಹೇಳಬೇಕು. ಮಹತ್ತತ್ತ್ವವು ಚೇತನಾ ಚೇತನಾತ್ಮಕವಾಗಿರುತ್ತದೆ. ಅಚೇತನಾಂಶಕ್ಕೆ ಮುಖ್ಯೋ ತ್ಪತ್ತಿಯೂ, ಚೇತನಾಂಶಕ್ಕೆ ಅಭಿವ್ಯಕ್ತಿರೂಪಗೌಣೋತ್ಪತ್ತಿಯೂ, ಹೇಳಬೇಕು. ಹೀಗೆ ಸೃಷ್ಟಿ ಆರಂಭವಾದಾಗ ಜೀವವಿಶೇಷವಾದ ಆದಿಶಕ್ತಿಯೂ, ಮಹತ್ತತ್ವಕ್ಕೆ ಕಾರಣವಾದ ವಿಷಮಾವಸ್ಥೆಹೊಂದಿದ ಗುಣತ್ರಯಸಂಬಂಧದಿಂದ ಅಭಿವ್ಯಕ್ತವಾಗುತ್ತದೆ. ಅಧಿಷ್ಠಾ ತ್ರ್ಯದ ಈ ಪ್ರಕೃತಿಯೇ ಮಹಾಲಕ್ಷ್ಮಿ, ದುರ್ಗಾ ಇತ್ಯಾದಿ ಪದಗಳಿಂದ ಪುರಾಣಾದಿ ಗಳಲ್ಲಿ ವ್ಯವಹರಿಸಿರುತ್ತಾರೆ. ಜೀವಗತವಾದ ಸಕಲವಿಶೇಷಗಳೂ ಪ್ರಧಾನಾದ್ಯುಪಾಧಿ ಸಂಬಂಧದಿಂದ ತೋರುವುದರಿಂದ ಔಪಾಧಿಕಗಳೆಂದು ಹೇಳಬೇಕು. ಇದಕ್ಕಿಂತಲೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ವದಲ್ಲಿರುವ ನಿರ್ವಿಶೇಷವಾದ ಜೀವಸಮಷ್ಟಿಯು ಬ್ರಹ್ಮಶಬ್ದದಿಂದ ಹೇಳಲ್ಪಡುತ್ತದೆ. ಸ್ವಯಂಭೂಬ್ರಹ್ಮನು ಸವಿಶೇಷವಾದ ಜೀವಸಮಷ್ಟಿಯಾಗಿರುತ್ತಾನೆ. ವಿಶೇಷಗಳು ಯಾವಾಗಲೂ ಔಪಾಧಿಕವೆಂದೇ ತಿಳಿಯಬೇಕು. ಉಪಾಧಿ ಲಿಂಗಶರೀರವಾಗಿರುತ್ತದೆ. ಬುದ್ಧಿ ಅಹಂಕಾರ ಮನಸ್ಸು ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯಪಂಚಕ, ಪಂಚತನ್ಮಾತ್ರಗಳ (೧೮) ಸಮುದಾಯವೇ ಲಿಂಗಶರೀರ. ಅಹಂಕಾರವನ್ನು ಬುದ್ಧಿಯಲ್ಲಿ ಸೇರಿಸಿ ವೇದಾಂತಿಗಳು ೧೭ ಎಂದು ಹೇಳುತ್ತಾರೆ. ಬುದ್ಧಿಯ ಪ್ರಭೇದವೇ ಪ್ರಾಣವಾಗುತ್ತದೆ. ಬೆಂಕಿಗೆ ಕಟ್ಟಿಗೆಯಂತೆ ಉಪಾಧಿಯು ಆತ್ಮಚೈತನ್ಯಾಭಿವ್ಯಕ್ತಿಗೆ ಕಾರಣವಾಗುತ್ತದೆ. ಈ ಲಿಂಗಶರೀರವು ಮೊದಲು ಸ್ವಯಂಭೂವಿಗೆ ಉಪಾಧಿರೂಪವಾಗಿ ಒಂದೇ ಉಂಟಾಗುತ್ತದೆ. ಪಿತೃಲಿಂಗಶರೀರದಿಂದ ಪುತ್ರ ಲಿಂಗ ಶರೀರದಂತೆ ಆಮೇಲೆ ವ್ಯಷ್ಟಿ ಜೀವರಿಗೆ ಉಪಾಧಿಗಳಾಗಿ ವ್ಯಷ್ಟಿಲಿಂಗಶರೀರಗಳು ತದಂಶಗಳಾಗಿ ವಿಭಾಗಿಸಲ್ಪಡುತ್ತವೆ. ಈ ಸ್ವಯಂಭು ಎಂಬುವನು ಸೂಕ್ಷ್ಮಗಳಾದ ಅತ್ಯಲ್ಪಗಳಾದ ತನ್ನ ಲಿಂಗ ಶರೀರಾವಯವಗಳನ್ನು ತನ್ನ ಅಂಶಗಳಾದ ಚೇತನಗಳಲ್ಲಿ ಜೋಡಿಸಿ ಎಲ್ಲಾ ಪ್ರಾಣಿಗಳನ್ನು ಸೃಷ್ಟಿಸುತ್ತಾನೆ. ವಸ್ತುತಃ ಜೀವಗಳು ಭಿನ್ನವಾಗಿರುತ್ತವೆ. ಅವುಗಳ ಸಮಷ್ಟಿಯೇ ಸ್ವಯಂಭೂ. ದೀಪದಿಂದ ಘಟಾದಿಗಳು ತೋರುವಂತೆ ಶರೀರಾದ್ಯುಪಾಧಿಗಳಿಂದ ಜೀವರ ಪರಸ್ಪರ ಭೇದವು ಅಭಿವ್ಯಕ್ತವಾಗುತ್ತದೆ. ಸ್ಥೂಲಶರೀರೋಪಾಧಿಕನಾದ ಸ್ವಯಂಭೂವೇ ನಾರಾಯಣನೆಂದು ಹೇಳಲ್ಪಡುತ್ತಾನೆ.

ಮಹತ್ತತ್ವದಿಂದ ಅದರ ಹತ್ತನೆಯ ಅಂಶವಾಗಿ ಅಹಂಕಾರ ಹುಟ್ಟುತ್ತದೆ. ಅದರಿಂದ ತನ್ಮಾತ್ರ ಮೂಲಕವಾಗಿ ಅದರ ದಶಮಾಂಶವಾಗಿ ಆಕಾಶವೂ, ಅದರಿಂದ ನ್ಯೂನವಾಗಿ ಅದರ ದಶಮಾಂಶವು ವಾಯುವೂ, ಅದರ ದಶಮಾಂಶವು ತೇಜಸ್ಸೂ, ಅದರ ದಶಮಾಂಶ ಜಲವೂ, ಅದರ ದಶಮಾಂಶವು ಪೃಥಿವಿಯೂ ಆಗಿ ಹುಟ್ಟುತ್ತವೆ. ಈ ಪೃಥಿವಿಯೇ ಸ್ಥೂಲಶರೀರಕ್ಕೆ ಬೀಜವಾಗುತ್ತದೆ. ಅದು ಅಂಡರೂಪವಾಗಿ ಪರಿಣಾಮ ಹೊಂದುತ್ತದೆ. ಅಲ್ಲಿ ಮಧ್ಯದಲ್ಲಿ ಅದರ ದಶಮಾಂಶವಾದ ಚತುರ್ದಶಭುವನವೇ ಸ್ವಯಂಭೂವಿನ ಸ್ಥೂಲಶರೀರವಾಗುತ್ತದೆ. ಸ್ಥೂಲಶರೀರೋಪಾಧಿಕನೇ ನಾರಾಯಣನೆಂದು ಹಿಂದೆ ಹೇಳಿದೆ. ತನ್ಮಾತ್ರೋತ್ಪತ್ತಿಗಿಂತ ಹಿಂದೆ ಇಂದ್ರಿಯೋತ್ಪತ್ತಿಯೂ, ಅದರ ಹಿಂದೆ ತನ್ಮಾತ್ರೋತ್ಪತ್ತಿಯಾಗಲೀ ಹೇಳಬಹುದು. ಅಲ್ಲಿ ಕ್ರಮನಿಯಮವಿಲ್ಲ. ಆವೆರಡಕ್ಕೆ ಕಾರ್ಯಕಾರಣಭಾವವಿಲ್ಲದಿರುವುದರಿಂದ ಕ್ರಮನಿಯಮವಿರುವುದಿಲ್ಲ. ಇಂದ್ರಿಯಗಳಲ್ಲಿಯೂ ಇದೇ ಇಂದ್ರಿಯವು ಮೊದಲು ಹುಟ್ಟುತ್ತದೆಂದು ನಿಯಮವಿಲ್ಲ. ಹೀಗೆ ತನ್ಮಾತ್ರೋತ್ಪತ್ತಿಯಲ್ಲಿ ಮಾತ್ರ ಕ್ರಮವಿರುತ್ತದೆ. ಅಹಂಕಾರದಿಂದ ಮೊದಲು ಶಬ್ದತನ್ಮಾತ್ರವೂ, ಅಹಂಕಾರಸಹಿತಶಬ್ದತನ್ಮಾತ್ರದಿಂದ ಸ್ಪರ್ಶತನ್ಮಾತ್ರವೂ ಶಬ್ದಸ್ಪರ್ಶಉಭಯಗುಣವಾಗಿ ಹುಟ್ಟುತ್ತದೆ. ಆ ಅಹಂಕಾರಸಹಿತ ಸ್ಪರ್ಶತನ್ಮಾತ್ರದಿಂದ ಶಬ್ದ, ಸ್ಪರ್ಶರೂಪಗುಣಕವಾದ ರೂಪತನ್ಮಾತ್ರವೂ, ಅ ಅಹಂಕಾರದಿಂದ ಕೂಡಿದ ರೂಪತನ್ಮಾತ್ರದಿಂದ ಶಬ್ದಾದಿ-ರಸಗುಣಕವಾದ ರಸತನ್ಮಾತ್ರವೂ, ಅಹಂಕಾರಸಹಿತ ಚತುರ್ಗುಣ ರಸತನ್ಮಾತ್ರದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಬ್ದಾದಿ ಪಂಚಗುಣಕಗಳಾದ ಪೃಥಿವೀತನ್ಮಾತ್ರವೂ ಹುಟ್ಟುತ್ತದೆ. ಈ ತನ್ಮಾತ್ರಗಳಿಂದ ಆಯಾಯ ಗುಣಗಳುಳ್ಳ ಮಹಾಭೂತಗಳು ಹುಟ್ಟುತ್ತವೆ. ಹೀಗೆ ಪ್ರಧಾನ, ಮಹತ್, ಅಹಂಕಾರ, ಪಂಚತತ್ವಾತ್ರರೂಪ ಪ್ರಕೃತ್ಯಷ್ಟಕವೂ, ಪಂಚ ಜ್ಞಾನೇಂದ್ರಿಯ ಕರ್ಮೇಂದ್ರಿಯ, ಪಂಚತನ್ಮಾತ್ರಗಳು, ಪಂಚಮಹಾಭೂತಗಳು, ಸೇರಿ ೨೪ ತತ್ವಗಳು. ಇವು ಪ್ರಧಾನವಾದ ಮೂಲಪ್ರಕೃತಿಯ ಪ್ರಪಂಚವಾಗುತ್ತದೆ. ೨೫ನೇ ತತ್ತ್ವವಾದ ಪುರುಷನು ಯಾವುದರ ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ. ಹೀಗೆ ಸಂಕ್ಷೇಪವಾಗಿ ಪುರುಷಪ್ರಧಾನಾತ್ಮಕವಾಗಿ ಚಿತ್, ಅಚಿತ್ ರೂಪವಾಗಿ ಎರಡು ವಿಧವಾಗಿರುತ್ತದೆ. ಇವುಗಳ ಭೇದಜ್ಞಾನದಿಂದಲೇ ಮೋಕ್ಷ. ಈ ಭೇದಜ್ಞಾನಕ್ಕೋಸ್ಕರವೇ ಪ್ರಕೃತಿ ಪರಿಣಾಮಗಳಾದ ಮಹದಾದಿತತ್ತ್ವಗಳನ್ನು ತಿಳಿಯಬೇಕು. ಇಲ್ಲವಾದರೆ ಆತ್ಮನ ಉಪಾಧಿಯಾದ ಬುದ್ಧಿಮನಃ ಪ್ರಾಣಶರೀರಾದಿಗಳಿಂದ ಆತ್ಮನಭೇದ ಸಿದ್ಧಿಸಲಾರದು. ಪ್ರಕೃತಿ ಪುರುಷರ ಅವಿವೇಕವೇ ಸಂಸಾರ, ವಿವೇಕವೇ ಮೋಕ್ಷವೆಂದು ತಿಳಿಯಬೇಕು.

'ಬೀಜಾಂಕುರ'—ಇತಿ. ಬೀಜಕ್ಕೆ ಅಂಕುರಕಾರಣ, ಅಂಕುರಕ್ಕೆ ಇನ್ನೊಂದು ಬೀಜ, ಅದಕ್ಕೆ ಇನ್ನೊಂದು ಅಂಕುರ ಹೀಗೆ ಅನವಸ್ಥೆ ಪ್ರಾಪ್ತವಾದರೂ ಗತ್ಯಂತರವಿಲ್ಲದಿರುವುದರಿಂದ ಅನವಸ್ಥೆ ಇಲ್ಲವೋ ಅದರಂತೆ ಇಲ್ಲಿ ಹೇಳಬಹುದು ಎಂದು ಶಂಕಿಸುವವನ ಅಭಿಪ್ರಾಯ. ಆದರೆ 'ಪ್ರಮಾಣಭಾವಾತ್' ಎಂದು ಅದನ್ನು ಖಂಡಿಸುತ್ತಾನೆ. ಎಲ್ಲಿ ಪ್ರತ್ಯಕ್ಷಾದಿ ಪ್ರಮಾಣದಿಂದ ಎರಡಕ್ಕೆ ಪರಸ್ಪರವಾಗಿ ಕಾರ್ಯಕಾರಣಭಾವ ಸಿದ್ಧವಾಗಿದೆಯೋ ಅಲ್ಲಿ ಅವೆರಡಕ್ಕೆ ಯಾವುದು ಯಾವುದಕ್ಕೆ ಮೊದಲು ಕಾರಣವಾಗುತ್ತದೆಂದು ಆಕಾಂಕ್ಷೆ ಬಂದರೆ ಪ್ರವಾಹಾನಾದಿತ್ವವನ್ನಂಗೀಕರಿಸಿ ಅನವಸ್ಥೆಯು ದೋಷಾಸ್ಪದವಾಗುವುದಿಲ್ಲವೆಂದು ಹೇಳಬೇಕು. ಇದೇ ಬೀಜಾಂಕುರನ್ಯಾಯ ವಿಷಯವಾಗಿದೆ. ಪ್ರಕೃತ ಪ್ರಕೃತಿಗೆ ಒಂದು ಕಾರಣವಿದೆಯೆಂಬುದರಲ್ಲಿ ಯಾವ ಪ್ರಮಾಣವೂ ಇಲ್ಲ. ಅಪ್ರಾಮಾಣಿಕವಾದ ಕಾರ್ಯಕಾರಣವನ್ನು ಕಲ್ಪಿಸುವುದರಿಂದ ಅನವಸ್ಥಾದೋಷ ಬಂದೇ ಬರುತ್ತದೆಂದು ತಾತ್ಪರ್ಯ.

ವಿಕೃತಯಶ್ಚ ಪ್ರಕೃತಯಶ್ಚ ಮಹದಹಂಕಾರತನ್ಮಾತ್ರಾಣಿ । ತದುಕ್ತಂ ಮಹದಾದ್ಯಾಃ ಪ್ರಕೃತಿವಿಕೃತಯಃ ಸಪ್ತ (ಸಾಂಕಾ–ಕಾ ೩) ಇತಿ । ಅಸ್ಯಾರ್ಥಃ ಪ್ರಕೃತಯಶ್ಚ ತಾಃ ವಿಕೃತಯಶ್ಚೇತಿ ಪ್ರಕೃತಿವಿಕೃತಯಃ ಸಪ್ತಮಹದಾದೀನಿ ತತ್ವಾನಿ । ತತ್ರಾಂತಃ ಕರಣಾದಿ ಪದವೇದನೀಯಂ ಮಹತ್ತತ್ವಮಹಂಕಾರಸ್ಯ ಪ್ರಕೃತಿಃ । ಮೂಲಪ್ರಕೃತೇಸ್ತು ವಿಕೃತಿಃ । ಏವಮಹಂಕಾರತತ್ತ್ವಮಭಿಮಾನಾಪರ ನಾಮಧೇಯಂ ಮಹತೋ ವಿಕೃತಿಃ । ಪ್ರಕೃತಿಶ್ಚ ತದೇವಾಹಂಕಾರತತ್ತ್ವಂ ತಾಮಸಂ ಸತ್ ಪಂಚತನ್ಮಾತ್ರಾಣಾಂ ಸೂಕ್ಷ್ಮಾಭಿಧಾನಮ್ । ತದೇವ ಸಾತ್ವಿಕಂ ಸತ್ ಪ್ರಕೃತಿರೇಕಾದಶೇಂದ್ರಿಯಾಣಾಂ ಬುದ್ಧೀಂದ್ರಿಯಾಣಾಂ ಚಕ್ಷುಃ ಶ್ರೋತ್ರಘ್ರಾಣರಸನಾತ್ವಗಾಖ್ಯಾನಾಂ ಕರ್ಮೇಂದ್ರಿಯಾಣಾಂ ವಾಕ್ಪಾಣಿಪಾದಪಾಯೂಪಸ್ಥಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖ್ಯಾನಾಮುಭಯಾತ್ಮಕಸ್ಯ ಮನಸಶ್ಚ । ರಜಸಸ್ತೂಭಯತ್ರ ಕ್ರಿಯೋತ್ಪಾದನ ದ್ವಾರೇಣ ಕಾರಣತ್ವಮಸ್ತೀತಿ ನ ವೈಯರ್ಥ್ಯಮ್ । ತದುಕ್ತಮೀಶ್ವರಕೃಷ್ಣೇನ –

ಅಭಿಮಾನೋಹಂಕಾರಸ್ತಸ್ಮಾದ್ದ್ವಿವಿಧಃ ಪ್ರವರ್ತತೇ ಸರ್ಗಃ ।
ಏಕಾದಶಕರಣಗಣಸ್ತನ್ಮಾತ್ರಾಪಂಚಕಂ ಚೈವ ॥
ಸಾತ್ತ್ವಿಕ ಏಕಾದಶಕಃ ಪ್ರವರ್ತತೇ ವೈಕೃತಾದಹಂಕಾರಾತ್ ॥
ಭೂತಾದೇಸ್ತನ್ಮಾತ್ರಃ ಸ ತಾಮಸಸ್ತೈಜಸಾದುಭಯಮ್ ॥
ಬುದ್ಧೀಂದ್ರಿಯಾಣಿ ಚಕ್ಷುಃ ಶ್ರೋತ್ರಘ್ರಾಣರಸನತ್ವಗಾಖ್ಯಾನಿ ॥
ವಾಕ್ಪಾಣಿ ಪಾದಪಾಯೂಪಸ್ಥಾಃ ಕರ್ಮೇಂದ್ರಿಯಾಣ್ಯಾಹುಃ ॥
ಉಭಯಾತ್ಮಕಮತ್ರಮನಃ ಸಂಕಲ್ಪಕಮಿಂದ್ರಿಯಂಚ ಸಾಧರ್ಮ್ಯಾತ್ ॥
(ಸಾಂ ಕಾ-೨೪-೨೭) ಇತಿ

ವಿವೃತಂ ಚ ತತ್ತ್ವಕೌಮುದ್ಯಾಮಾಚಾರ್ಯವಾಚಸ್ಪತಿಭಿಃ ॥

ಮಹತ್, ಅಹಂಕಾರ, ಪಂಚತನ್ಮಾತ್ರಗಳು ಹೀಗೆ ಇವು ಏಳು ಪ್ರಕೃತಿ ವಿಕೃತಿ ಗಳಾಗುತ್ತವೆ. ಅಂತಃಕರಣವೆಂಬ ಮಹತ್ತತ್ತ್ವವು ಅಹಂಕಾರಕ್ಕೆ ಪ್ರಕೃತಿಯೂ, ಪ್ರಕೃತಿ ಪ್ರಕೃತಿಯಿಂದ ಹುಟ್ಟುವುದರಿಂದ ಮೂಲ ಪ್ರಕೃತಿಯ ವಿಕೃತಿಯೂ ಆಗುತ್ತದೆ. ನಾನು ಇಲ್ಲಿ ಅಧಿಕೃತನಾಗಿದ್ದೇನೆ, ನನಗೆ ಇದರಲ್ಲಿ ಸಾಮರ್ಥ್ಯ, ನನಗೋಸ್ಕರವೇ ಈ ವಿಷಯ ಗಳು, ನಾನು ಇವನಾಗಿದ್ದೇನೆ–ಇತ್ಯಾದಿ ಅಭಿಮಾನಾತ್ಮಕಗಳಾದ ಅಸಾಧಾರಣ ವ್ಯಾಪಾರವುಳ್ಳದ್ದೇ ಅಹಂಕಾರ. ವ್ಯಾಪಾರ, ವ್ಯಾಪಾರವುಳ್ಳದ್ದಕ್ಕೆ ಅಭೇದವಿವಕ್ಷೆಯಿಂದ ಅಭಿಮಾನವೇ ಅಹಂಕಾರವೆಂದು ಹೇಳಿದೆ. ಇದು ಮಹತ್ತತ್ತ್ವದ ವಿಕೃತಿ" ಇಂದ್ರಿಯ ಪಂಚತನ್ಮಾತ್ರಗಳಿಗೆ ಪ್ರಕೃತಿಯಾಗುತ್ತದೆ. ಪ್ರಕಾಶಕ, ಜಡ ಭೇದದಿಂದ ಸೃಷ್ಟಿಯು ೨ ವಿಧ. ಆಹಂಕಾರದಿಂದ ಈ ಎರಡು ರೀತಿಯಾದ ಸೃಷ್ಟಿಯಾಗುತ್ತದೆ. ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನಸ್ಸು ಇವು ಪ್ರಕಾಶಕಗಳು, ಈ ಹನ್ನೊಂದರ ಒಂದು ಗಣ. ಶಬ್ದತನ್ಮಾತ್ರಾದಿ ಐದು ಜಡಗಳ ಸಮುದಾಯ ಇನ್ನೊಂದು ಗಣ. ಅಹಂಕಾರ ಒಂದಾದರೂ ಸತ್ತ್ವರಜಸ್ತಮೋಗುಣಗಳ ಉದ್ಭವ ಅಭಿಭವಾವಸ್ಥೆಯಿಂದ ಬೇರೆ ಬೇರೆಯಾಗುತ್ತದೆ.

ಅದರಲ್ಲಿ ಸತ್ತ್ವಪ್ರಧಾನವಾದಾಗ ವೈಕೃತವೆಂಬ ಸಂಜ್ಞೆ ಬರುತ್ತದೆ. ಇದರಿಂದಲೇ ಏಕಾದಶೇಂದ್ರಿಯಗಣಗಳು ಹುಟ್ಟುತ್ತವೆ. ತಮೋಗುಣಪ್ರಧಾನವಾದಾಗ ಅದಕ್ಕೆ ಭೂತಾದಿಯೆಂದು ಹೆಸರು. ಭೂತಾದಿ ಅಹಂಕಾರದಿಂದ ಪಂಚತನ್ಮಾತ್ರಗಳು ಹುಟ್ಟು ತ್ತವೆ. ತನ್ಮಾತ್ರಾಣಿ ಸಂತ್ಯಸ್ಮಿನ್ ಗಣೇ ಇತಿ ತನ್ಮಾತ್ರಃ । ಅರ್ಶಆದಿಗಣದಲ್ಲಿ ಸೇರಿರು ವುದರಿಂದ ಅಚ್ ಮತ್ವರ್ಥದಲ್ಲಿ ಬಂದಿದೆ. ರಜಸ್ಸಿಗೆ ಕ್ರಿಯೋತ್ಪಾದನಮೂಲಕ ಎರಡ ರಲ್ಲಿಯೂ ಕಾರಣತ್ವವಿರುವುದರಿಂದ ವೈಯರ್ಥ್ಯವಿಲ್ಲ. ರಜಃ ಪ್ರಧಾನವಾದಾಗ ಅಹಂಕಾರವು ಮೂರನೇ ಭೇದವನ್ನು ಹೊಂದುತ್ತದೆ. ರಜಸ್ಸಿನ ಕಾರ್ಯವೇ ಹಿಂದಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎರಡು ಕಾರ್ಯಗಳಾಗುವುದರಿಂದ ಅದರಿಂದ· ಬೇರೆ ಯಾವುದೂ ಹುಟ್ಟುವುದಿಲ್ಲ. ರಜೋಗುಣದ ಸಹಾಯವಿಲ್ಲದಿದ್ದರೆ ಸತ್ವತಮಸ್ಸುಗಳು ಸಮರ್ಥಗಳಾಗಿದ್ದರೂ ಕ್ರಿಯಾರಹಿತಗಳಾದುದರಿಂದ ತಮ್ಮ ಕಾರ್ಯವನ್ನು ಮಾಡಲಾರವು. ಆದುದರಿಂದ ರಾಜಸಾಹಂಕಾರವು ಅವುಗಳಲ್ಲಿ ಕ್ರಿಯೋತ್ಪಾದನಮೂಲಕ ಸಹಾಯಕವಾಗುತ್ತದೆ.

'ಬುದ್ಧೀಂದ್ರಿಯಾಣಿ'—ಇತಿ. ಇಂದ್ರ ಶಬ್ದವು ಆತ್ಮವಾಚಕ. ಅವನಿಗೆ ಚಿಹ್ನವಾದುದು ಇಂದ್ರಿಯ. ಇಂದ್ರಿಯಪ್ರವೃತ್ತಿಯಿಂದ ಆತ್ಮನು ಅನುಮಿತನಾಗುತ್ತಾನೆ. ಸಾತ್ವಿಕಾಹಂಕಾರಕಾರ್ಯದಲ್ಲಿ ಇಂದ್ರಿಯಶಬ್ದವು ಯೋಗರೂಢವಾಗಿದೆ. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಪ್ರವರ್ತಕವಾದುದರಿಂದ ಮನಸ್ಸು ಉಭಯಾತ್ಮಕವಾಗುತ್ತದೆ. ಸಂಕಲ್ಪಕವಾದದ್ದು ಮನಸ್ಸು. ಸಮ್ಯಕ್ಕಲ್ಪಯತೀತಿ. ಸಂಕಲ್ಪಕಮ್. ವಿಶೇಷಣ ವಿಶೇಷ್ಯಭಾವದಿಂದ ವಿವೇಚನವೇ ಸಮ್ಯಕ್‌ಕಲ್ಪನ. ಮನಃ ಸಂಬದ್ಧವಾದ ಇಂದ್ರಿಯದಿಂದ ಮೊದಲು ಸಾಮಾನ್ಯಾಲೋಚಿತವಾದ ವಸ್ತುವು ಆಮೇಲೆ ಇದು ಹೀಗೆ, ಇದು ಹೀಗಲ್ಲವೆಂದು ಸಮ್ಯಕ್‌ಕಲ್ಪನಮಾಡುವುದು. ಈ ಮನಸ್ಸು ಚಕ್ಷುರಾದಿಗಳೊಡನೆ ಸಾತ್ವಿಕಾಹಂಕಾರ ಕಾರ್ಯತ್ವರೂಪಸಾಧರ್ಮ್ಯದಿಂದ ಇಂದ್ರಿಯವೆಂದು ಕರೆಯಲ್ಪಡುತ್ತದೆ. ಇದನ್ನು ವಾಚಸ್ಪತಿಮಿಶ್ರರು ತತ್ತ್ವಕೌಮುದಿಯೆಂಬ ಗ್ರಂಥದಲ್ಲಿ ಚನ್ನಾಗಿ ವಿವರಿಸಿರುತ್ತಾರೆಂದ ತಿಳಿಸುತ್ತಾರೆ—'ವಿವೃತಂ'—ಇತಿ.

ಕೇವಲಾ ವಿಕೃತಿಸ್ತು ವಿಯದಾದೀನಿ ಪಂಚ ಮಹಾಭೂತಾನಿ ಏಕಾದಶೇಂದ್ರಿಯಾಣಿ ಚ

> ಉಕ್ತಂ ಷೋಡಶಕಸ್ತು ವಿಕಾರಃ (ಸಾಂ-ಕಾ-೩) ಇತಿ । ಷೋಡಶಸಂಖ್ಯಾವಚ್ಛಿನ್ನೋ ಗಣಃ ಷೋಡಶಕೋ ವಿಕಾರ ಏವನ ಪ್ರಕೃತಿರಿತ್ಯರ್ಥಃ । ಯದ್ಯಪಿ ಪೃಥಿವ್ಯಾದಯೋ ಗೋಘಟಾದೀನಾಂ ಪ್ರಕೃತಿಸ್ತಥಾಪಿ ನ ತೇ ಪೃಥಿವ್ಯಾದಿಭ್ಯಸ್ತತ್ತ್ವಾಂತರಮಿತಿ ನ ಪ್ರಕೃತಿಃ । ತತ್ತ್ವಾಂತರೋಪಾದಾನತ್ವಂ ಚೇಹ ಪ್ರಕೃತಿತ್ವಮಭಿಮತಮ್ । ಗೋಘಟಾದೀನಾಂ ಸ್ಥೂಲತ್ವೇಂದ್ರಿಯ ಗ್ರಾಹ್ಯತ್ವಯೋಃ ಸಮಾನತ್ವೇನ ತತ್ತ್ವಾಂತರತ್ವಾಭಾವಃ । ತತ್ರ ಶಬ್ದಸ್ಪರ್ಶರೂಪರಸಗಂಧತನ್ಮಾತ್ರೇಭ್ಯಃ ಪೂರ್ವಪೂರ್ವಸೂಕ್ಷ್ಮಭೂತಸಹಿತೇಭ್ಯಃ ಪಂಚ ಮಹಾಭೂತಾನಿ ವಿಯದಾದೀನಿ ಕ್ರಮೇಣೈಕದ್ವಿತ್ರಿಚತುಷ್ಪಂಚಗುಣಾನಿ ಜಾಯಂತೇ । ಇಂದ್ರಿಯಸೃಷ್ಟಿಸ್ತು ಪ್ರಾಗೇವೋಕ್ತಾ—ತದುಕ್ತಮ್—
>
> ಪ್ರಕೃತೇರ್ಮಹಾಂಸ್ತತೋಽಹಂಕಾರಸ್ತಸ್ಮಾದ್ಗಣಶ್ಚ ಷೋಡಶಕಃ ॥
> ತಸ್ಮಾದಪಿ ಷೋಡಶಕಾತ್ಪಂಚಭ್ಯಃ ಪಂಚ ಭೂತಾನಿ ॥ ಸಾಂ-ಕಾ ೨೨ ॥ಇತಿ॥

ಆಕಾಶಾದಿ ಪಂಚಮಹಾ ಭೂತಗಳೂ, ೧೧ ಇಂದ್ರಿಯಗಳೂ ಕೇವಲ ವಿಕೃತಿಗಳಾಗುತ್ತವೆ. ಇವುಗಳು ಇನ್ನೊಂದರಿಂದ ಹುಟ್ಟುವುದಲ್ಲದೆ ಇವುಗಳಿಂದ ಯಾವುದೂ ಹುಟ್ಟುವುದಿಲ್ಲ. ಇದನ್ನೇ ಕಾರಿಕೆಯಲ್ಲಿ ಷೋಡಶಕಗಳು ವಿಕಾರಗಳೆಂದು ಹೇಳಿದೆ. 'ಯದ್ಯಪಿ'—ಇತಿ. ಪೃಥಿವ್ಯಾದಿಗಳಿಂದ ಗೋಘಟಾದಿಗಳು ಉಂಟಾದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಘಟಾದಿಗಳು ಪೃಥಿವಿಗಿಂತ ಬೇರೆ ತತ್ತ್ವಗಳಲ್ಲ. ಆದುದರಿಂದ ಪೃಥಿವ್ಯಾದಿಗಳಿಗೆ ಪ್ರಕೃತಿತ್ವವನ್ನು ಶಂಕಿಸಬಾರದು. ಇನ್ನೊಂದು ತತ್ತ್ವಕ್ಕೆ ಉಪಾದಾನಕಾರಣವಾದರೆ ಆಗ ಮಾತ್ರ ಅದು ಪ್ರಕೃತಿಯೆಂದು ಇಲ್ಲಿ ತಿಳಿಯಬೇಕು. ಸ್ಥೂಲತ್ವ ಇಂದ್ರಿಯ ಗ್ರಾಹ್ಯತ್ವ ಪೃಥಿವ್ಯಾದಿಗಳಿಗಿರುವುದರಿಂದ ಗೋಘಟಾದಿಗಳಿಗೂ ಅವು ಇರುವುದರಿಂದ ಅವು ಪೃಥಿವ್ಯಾದಿಗಳೇ ಆಗುತ್ತವೆ. ಶಬ್ದತನ್ಮಾತ್ರದಿಂದ ಶಬ್ದಗುಣವುಳ್ಳ ಆಕಾಶವೂ, ಶಬ್ದತನ್ಮಾತ್ರಸಹಿತ ಸ್ಪರ್ಶತನ್ಮಾತ್ರದಿಂದ ವಾಯುವೂ ಈ ಕ್ರಮದಿಂದಲೇ ಮುಂದಿನ ತೇಜಸ್ಸಾದಿಗಳು ಹುಟ್ಟುತ್ತವೆ. ಆದುದರಿಂದಲೇ ಕ್ರಮವಾಗಿ ಒಂದೊಂದರಲ್ಲಿ ಒಂದೊಂದು ಗುಣ ಹೆಚ್ಚಾಗಿ ಕೊನೆಯ ಪೃಥಿವಿಯಲ್ಲಿ ಶಬ್ದಾದಿ ಐದುಗುಣಗಳೂ ಸಂಭವಿಸುತ್ತವೆ. ಈ ವಿಷಯ ಹಿಂದಿನ ವ್ಯಾಖ್ಯಾನದಲ್ಲಿ ವಿವರಿಸಿದೆ.

ವಿವೇಕಜ್ಞಾನವೇ ಮೋಕ್ಷಸಾಧನ. ವಿವೇಕವೆಂದರೆ ಭೇದ. ಇದು ಬರಬೇಕಾದರೆ ಮೊದಲು ಯಾವುದಕ್ಕೆ ಯಾವದರಿಂದ ಎಂದು ಎರಡರಜ್ಞಾನ ಆವಶ್ಯಕವಾಗಿದೆ. ಪ್ರಕೃತಿಪುರುಷರೂಪವಾದ ಈ ದ್ವಯವೇ ತತ್ತ್ವ. ಇದರಿಂದಲೇ 'ತತ್ತ್ವಜ್ಞಾನದಿಂದ ಮೋಕ್ಷವೆಂದು' ಪ್ರಸಿದ್ಧವಾಗಿದೆ. ವಿವೇಕಜ್ಞಾನದಲ್ಲಿ ಪ್ರತಿಯೋಗಿತ್ವರೂಪದಿಂದ ಅಥವಾ ಅನುಯೋಗಿತ್ವರೂಪದಿಂದ ಯಾವುದಕ್ಕೆ ಸಂಬಂಧವಿದೆಯೋ ಅದೇ ತತ್ತ್ವವೆಂದು ಅದರ ಸಾಮಾನ್ಯಲಕ್ಷಣ. ಮೂಲಪ್ರಕೃತಿಯು ಅತಿಸೂಕ್ಷ್ಮವಾದುದರಿಂದ ತಿಳಿಯಲಸಾಧ್ಯವಾದುದರಿಂದ, ಅದರಿಂದ ಭೇದ ಪುರುಷನಲ್ಲಾಗಲೀ, ಪುರುಷನಭೇದ ಅದರಲ್ಲಾಗಲೀ ತಿಳಿಯಲು ಅಸಾಧ್ಯವಾದುದರಿಂದ ಪ್ರಕೃತಿಯಕಾರ್ಯಜ್ಞಾನವು ಆವಶ್ಯಕವಾಗುತ್ತದೆ. ಕಾರ್ಯಭೇದದಿಂದ ಕಾರಣಭೇದವನ್ನು ಅನುಮಾನ ಮಾಡಬಹುದು. ಆದುದರಿಂದ ಕಾರ್ಯಭೇದ ತಿಳಿಯಬೇಕು. ಪ್ರಕೃತಿಯ ಸಾಕ್ಷಾತ್ಕಾರ್ಯ ಮಹತತ್ತ್ವ ಅದರಿಂದ ಅಹಂಕಾರ. ಅದರಿಂದ ಪಂಚತನ್ಮಾತ್ರಗಳು. ಇವು ಏಳೂ ಸೂಕ್ಷ್ಮವಾದುದರಿಂದ ವಿಶದವಾಗಿ ತಿಳಿಯಲು ಬರುವುದಿಲ್ಲ. ಆದುದರಿಂದ ಪ್ರಕೃತಿಯ ಪರಂಪರೆಯಿಂದ ಕಾರ್ಯಗಳಾದವುಗಳನ್ನು ತಿಳಿಯಬೇಕು. ಆಗ ಇಂದ್ರಿಯಗಳ ಮತ್ತು ಪಂಚಭೂತಗಣವು ತತ್ತ್ವರೂಪವಾಗಿ ವರ್ಣಿಸಬೇಕಾಯಿತು. ಈ ಹದಿನಾರು ತತ್ತ್ವಗಳು ತಮ್ಮ ತಮ್ಮ ಕಾರ್ಯವಿಶೇಷರೂಪದಿಂದ ಚೆನ್ನಾಗಿ ಜ್ಞಾನಗೋಚರವಾಗುವುದರಿಂದ ಅವು ತಮ್ಮಿಂದ ಪುರುಷನಲ್ಲಿ ಭೇದ ತಿಳಿಸಿಕೊಡುತ್ತವೆ. ಇದರಿಂದ ಅವುಗಳ ಕಾರಣಗಳಾದ ಪ್ರಕೃತಿಯವರೆಗಿರುವ ತತ್ತ್ವಗಳ ಭೇದವೂ ಪುರುಷನಲ್ಲಿ ಗೃಹೀತವಾಗುತ್ತದೆ. ಭೂತಗಳಿಂದ ಪುರುಷನಲ್ಲಿ ಭೇದಗೃಹೀತವಾದಮೇಲೆ ಭೌತಿಕಗಳಾದ ಗೋ ಘಟಾದಿವಿಶೇಷಗಳಿಂದ ಭೇದವು ಮೋಕ್ಷಜ್ಞಾನದಲ್ಲಿ ಅನುಪಯುಕ್ತವೇ. ಪುರುಷನು ನಿರ್ವಿಶೇಷನಾದುದರಿಂದ ವಿಧಿಮುಖದಿಂದ ತಿಳಿಯಲಶಕ್ಯನಾದುದರಿಂದ "ನ ಈದೃಶಃ" ಇತ್ಯಾದಿ ನಿಷೇಧಮುಖದಿಂದಲೇ ತಿಳಿಯಬೇಕು. ಇಂದ್ರಿಯಗ್ರಾಹ್ಯವಾದ ಸ್ಥೂಲವಾದ ಭೂತಗಳಿಂದ ಭಿನ್ನನಾದುದರಿಂದ ಪುರುಷನು ಸ್ಥೂಲನಲ್ಲ. ಇಂದ್ರಿಯಗ್ರಾಹ್ಯನೂ ಅಲ್ಲ. ಇದರಿಂದ ಅವನಲ್ಲಿ ಸ್ಥೌಲ್ಯಾದಿಗುಣಗಳು ನಿಷಿದ್ಧವಾಗುತ್ತವೆ. ಭೂತಗಳಿಂದ ಭೇದಜ್ಞಾನಬಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂತಗಳಲ್ಲಿರುವ ಗುಣಗಳು ಅವನಲ್ಲಿ ಇಲ್ಲವೆಂದು ನಿಶ್ಚಿತವಾದ ಮೇಲೆ ಭೌತಿಕಪ್ರಪಂಚ ದಿಂದಲೂ ಭೇದಸಿದ್ಧವಾದಂತೆಯೇ ಆಗುವುದರಿಂದ ಅವು ಬೇರೆ ತತ್ತ್ವಾಂತರಗಳಾಗು ವುದಿಲ್ಲ.

ಈ ಉತ್ಪತ್ತಿಕ್ರಮವನ್ನು ಕಾರಿಕೆಯಲ್ಲಿ ಹೇಳಿರುವುದನ್ನು ತೋರಿಸುತ್ತಾನೆ. 'ಪ್ರಕೃತೇಃ'—ಇತಿ. 'ಜಾಯತೇ' ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ಷೋಡಶ ಸಂಖ್ಯಾಪರಿಮಾಣಂ ಅಸ್ಯ– ಇತಿ ಷೋಡಶಕಃ. ಏಕಾದಶ ಇಂದ್ರಿಯಗಳು ಪಂಚ ತನ್ಮಾತ್ರಗಳೇ ಷೋಡಶಕಗಣ. ಹದಿನಾರರಲ್ಲಿ ನಿಷ್ಕೃಷ್ಟವಾದ (ಬೇರೆತೆಗೆದ) ಪಂಚ ತನ್ಮಾತ್ರಗಳಿಂದ ಪಂಚಮಹಾಭೂತಗಳು ಹುಟ್ಟುತ್ತವೆಯೆಂದರ್ಥ. ಅಲ್ಲಿ 'ನಿಷ್ಕೃ ಷ್ಟೇಭ್ಯಃ' ಎಂದು ಅಧ್ಯಾಹಾರಮಾಡಿಕೊಳ್ಳಬೇಕು.

ಅನುಭಯಾತ್ಮಕಃ ಪುರುಷಃ । ತದುಕ್ತಂ– ನ ಪ್ರಕೃತಿರ್ನವಿಕೃತಿಃ ಪುರುಷಃ (ಸಾಂ–ಕಾ–೩) ಇತಿ । ಪುರುಷಸ್ತು ಕೂಟಸ್ಥನಿತ್ಯೋಽಪರಿಣಾಮೀ ನ ಕಸ್ಯಚಿತ್ಪ್ರಕೃತಿರ್ನಾಪಿ ವಿಕೃತಿಃ ಕಸ್ಯಚಿದಿತ್ಯರ್ಥಃ । ಏತತ್ಪಂಚವಿಂಶತಿತತ್ತ್ವಸಾಧಕತ್ವೇನ ಪ್ರಮಾಣ ತ್ರಯಮಭಿಮತಮ್ । ತದಪ್ಯುಕ್ತಮ್—

ದೃಷ್ಟಮನುಮಾನಮಾಪ್ತವಚನಂ ಚ ಸರ್ವ ಪ್ರಮಾಣಸಿದ್ಧತ್ವಾತ್ ॥
ತ್ರಿವಿಧಂ ಪ್ರಮಾಣಮಿಷ್ಟಂ ಪ್ರಮೇಯಸಿದ್ಧಿ । ಪ್ರಮಾಣಾದ್ಧಿ ॥ ಸಾಂ–ಕಾ ೪ ॥
ಇತಿ ॥

ಇಹಕಾರ್ಯಕಾರಣಭಾವೇ ಚತುರ್ಧಾ ವಿಪ್ರತಿಪತ್ತಿಃ ಪ್ರಸರತಿ । ಅಸತಃ ಸಜ್ಜಾಯತೇ ಇತಿ ಸೌಗತಾಃ ಸಂಗಿರಂತೇ । ನೈಯಾಯಿಕಾದಯಃ ಸತೋಽಸಜ್ಜಾಯತ ಇತಿ । ವೇದಾಂತಿನಃ ಸತೋ ವಿವರ್ತಃ ಕಾರ್ಯಜಾತಂ ನ ವಸ್ತುಸದಿತಿ । ಸಾಂಖ್ಯಾಃ ಪುನಃ ಸತಃ ಸಜ್ಜಾಯತ ಇತಿ ॥

೨೫ ನೇ ತತ್ತ್ವವಾದ ಪುರುಷನು ಪ್ರಕೃತಿಯೂ ಅಲ್ಲ ವಿಕೃತಿಯೂ ಅಲ್ಲ. ಅವನು ಪರಿಣಾಮಿಯಲ್ಲ. ಆದುದರಿಂದ ಅವನಿಂದ ಯಾವುದೂ ಹುಟ್ಟುವುದಿಲ್ಲ. ಕೂಟಸ್ಥ ನಿತ್ಯನಾದುದರಿಂದ ತಾನು ಯಾವುದರಿಂದಲೂ ಹುಟ್ಟಿರುವುದಿಲ್ಲ. ಈ ೨೫ ತತ್ತ್ವಗಳನ್ನು ಸಾಧಿಸಲು ಮೂರು ಪ್ರಮಾಣಗಳನ್ನು ಹೇಳಿರುತ್ತಾರೆ. ದೃಷ್ಟಂ— ಪ್ರತ್ಯಕ್ಷ. ಆಪ್ತವಚನ—ಆಪ್ತವಾಕ್ಯವಾದ ಶಬ್ದಪ್ರಮಾಣ. ಪ್ರತ್ಯಕ್ಷ, ಅನುಮಾನ, ಶಬ್ದವೆಂದು ಮೂರೇ ಪ್ರಮಾಣಗಳು. ಉಪಮಾನಾದಿ ಪ್ರಮಾಣಗಳು ಈ ಮೂರ ರಲ್ಲಿಯೇ ಅಂತರ್ಭಾವ ಹೊಂದುತ್ತವೆ. ಪ್ರಮೇಯವೆಂದರೆ ಪ್ರಕೃತ್ಯಾದಿ ತತ್ತ್ವ ಸಮುದಾಯ. ಅವುಗಳ ಜ್ಞಾನವು ಪ್ರಮಾಣದಿಂದಲೇ ಆಗುತ್ತದೆ. ವಿಷಯಸನ್ನಿ ಕೃಷ್ಟವಾದ ಇಂದ್ರಿಯದೊಡನೆ ಮನಸ್ಸಿನ ವಿಷಯದೇಶದಲ್ಲಿ ಉಂಟಾಗುವ ವಿಷಯಾ ಕಾರವಾದ ವೃತ್ತಿಗೆ ಪ್ರತ್ಯಕ್ಷಪ್ರಮಾಣವೆಂದು ಹೆಸರು. ಆ ವೃತ್ತಿಯು ಅಲ್ಲಿರುವ ಆತ್ಮನಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿಬಿಂಬ ಹೊಂದುತ್ತದೆ. ಆತ್ಮನು ವಿಭುವಾದುದರಿಂದ ಸಕಲಸಂಬಂಧ ಹೊಂದಿರುತ್ತಾನೆ. ಆ ವೃತ್ತಿ ಪ್ರತಿಬಿಂಬಾವಚ್ಛಿನ್ನಚೈತನ್ಯವೇ ಪ್ರತ್ಯಕ್ಷಪ್ರಮಾ ಆಗುತ್ತದೆ. ಹೀಗೆಯೇ ವ್ಯಾಪ್ತಿ ಜ್ಞಾನದಿಂದ ಹುಟ್ಟುವ ಸಾಧ್ಯವಿಶಿಷ್ಟಪಕ್ಷಾಕಾರವಾದ ಮನೋವೃತ್ತಿಯೇ ಅನುಮಾನ ಪ್ರಮಾಣವೂ, ಆ ವೃತ್ತಿಯ ಪ್ರತಿಬಿಂಬಾವಚ್ಛಿನ್ನ ಚೈತನ್ಯವು ಅನುಮಿತಿಯೂ, ಆಪ್ತವಾಕ್ಯಜ್ಞಾನಜನ್ಯವಾದ ಪದಾರ್ಥ ಸಂಸರ್ಗಾಕಾರವಾದ ಮನೋವೃತ್ತಿಯು ಶಬ್ದಪ್ರಮಾಣವೂ, ತತ್ಪ್ರತಿಬಿಂಬಾವಚ್ಛಿನ್ನಚೈತನ್ಯವು ಶಾಬ್ದಜ್ಞಾನವೂ ಆಗುತ್ತದೆ. ಅಪರೋಕ್ಷತ್ವ, ಪರೋಕ್ಷತ್ವ, ಸ್ಮೃತಿತ್ವ, ಸಂಶಯತ್ವ, ವಿಪರ್ಯಯತ್ವಾದಿ ವೃತ್ತಿಧರ್ಮಗಳು ತತ್ಪ್ರತಿಬಿಂಬರೂಪವಾದ ಉಪಾಧಿ ಮೂಲಕ ಆತ್ಮ ಚೈತನ್ಯದಲ್ಲಿ ತೋರುತ್ತವೆ. ಇದನ್ನು ವಿಜ್ಞಾನಾಚಾರ್ಯರು ತಮ್ಮ ಕಾರಿಕೆಯಲ್ಲಿ ಹೀಗೆ ವಿವರಿಸಿರುತ್ತಾರೆ.

ಪ್ರಮಾತಾ ಚೇತನಃ ಶುದ್ಧಃ ಪ್ರಮಾಣಂ ವೃತ್ತಿರೇವ ಚ ||
ಪ್ರಮಾರ್ಥಾಕಾರವೃತ್ತೀನಾಂ ಚೇತನೇ ಪ್ರತಿಬಿಂಬನಮ್ ||
ಪ್ರತಿಬಿಂಬಿತವೃತ್ತೀನಾಂ ವಿಷಯೋ ಮೇಯ ಉಚ್ಯತೇ|
ವೃತ್ತಯಃ ಸಾಕ್ಷಿಭಾಸ್ಯಾಃ ಸ್ಯುಃ ಕರಣಸ್ಯಾನಪೇಕ್ಷಣಾತ್ ||
ಸಾಕ್ಷಾದ್ದರ್ಶನರೂಪಂ ಚ ಸಾಕ್ಷಿತ್ವಂ ಸಾಂಖ್ಯಸೂತ್ರಿತಮ್ || ಇತಿ ||

ಆತ್ಮರೂಪಜ್ಞಾನ ನಿತ್ಯವಾದುದರಿಂದ ಜ್ಞಾನಕ್ಕೆ ಜನ್ಯತ್ವ, ನಾಶ್ಯತ್ವ, ಆತ್ಮಧರ್ಮತ್ವಾದಿಗಳು ಪ್ರತಿಬಿಂಬೋಪಾಧಕವಾಗಿರುತ್ತವೆ. ವಾಸ್ತವವಲ್ಲ.

ಈ ಮೂರು ಪ್ರಮಾಣಗಳಿಂದ ೨೫ ತತ್ತ್ವಗಳು ಸಾಧಿಸಲ್ಪಡುತ್ತವೆ. ಪ್ರಧಾನವಾದ ಪ್ರಕೃತಿ ತತ್ತ್ವಕ್ಕೆ ಸಾಧಕವಾದುದು ಅನುಮಾನ. ಸತ್ತಿನಿಂದ ಸತ್ತೇ ಹುಟ್ಟುತ್ತದೆಂಬ ಕಾರ್ಯಕಾರಣಭಾವವನ್ನು ಉಪಜೀವಿಸಿ ಅನುಮಾನ ಹೇಳಬೇಕು. ಅದಕ್ಕೋಸ್ಕರ ಆ ರೀತಿಯ ಕಾರ್ಯಕಾರಣಭಾವವನ್ನು ಮೊದಲು ಹೇಳಬೇಕು ಆದರೆ ಆ ವಿಷಯದಲ್ಲಿ ನಾನಾ ವಿಪ್ರತಿಪತ್ತಿಗಳು ಇವೆ. ಅವುಗಳನ್ನು ನಿರಾಸಮಾಡಲು ಮೊದಲು ಅವುಗಳನ್ನು ತೋರಿಸುತ್ತಾನೆ. 'ಇಹ'—ಇತಿ. ಈ ಜಗತ್ಕಾರ್ಯ ಮತ್ತು ಅದರ ಮೂಲಕಾರಣಗಳ ಸತ್ವಾಸತ್ವ ಭೇದದಿಂದ ಕಾರ್ಯಕಾರಣಭಾವ ವಿಚಾರದಲ್ಲಿ ಪ್ರಧಾನವಾದ ನಾಲ್ಕು ವಿಪ್ರತಿಪತ್ತಿಗಳಿರುತ್ತವೆ. ಅಸತ್ತಿನಿಂದ ಅಸತ್ಕಾರ್ಯ ಹುಟ್ಟುತ್ತದೆಂದು ಹೇಳುವುದು ಅಸಂಭವ. ಗಗನಕುಸುಮ ಅಸತ್. ಅದು ಎಂದೂ ಹುಟ್ಟುವುದಿಲ್ಲ. ಅಸತ್ತಾದ ಕಾರಣದಿಂದ ಸತ್ಕಾರ್ಯ ಹುಟ್ಟುತ್ತದೆಂದು ಬೌದ್ಧರ ಮತ. ಸಕಲಭಾವರೂಪಗಳಾದ ವಸ್ತುಗಳು ಕ್ಷಣಿಕವೆಂದು ಅವರ ಸಿದ್ಧಾಂತ. ಕ್ಷಣಿಕಭಾವಗಳಿಗೆ ಕಾರ್ಯಕಾರಣಭಾವ ಹೇಳುವುದು ಹೇಗೆ ? ಕಾರ್ಯಕ್ಷಣದಲ್ಲಿ ಕಾರಣವಾಗಲೀ, ಕಾರಣ ಕ್ಷಣದಲ್ಲಿ ಕಾರ್ಯವಾಗಲೀ ಇರುವುದಿಲ್ಲ. ಆದುದರಿಂದ ಪೂರ್ವಕ್ಷಣಿಕಭಾವದ ವಿನಾಶವೇ ಉತ್ತರಕ್ಷಣಿಕಕಾರ್ಯಕ್ಕೆ ಕಾರಣವೆಂದು ಅಂಗೀಕರಿಸಬೇಕು. ಕಾರ್ಯಸತ್ವವೆಂದರೆ ಅವರ ಮತದಲ್ಲಿ ಕಾಲತ್ರಯಾಬಾಧ್ಯತ್ವ ರೂಪವಲ್ಲ ; ಕ್ಷಣಾವಸ್ಥಿತಿರೂಪವೆಂದು ತಿಳಿಯಬೇಕು. ಸತ್ತಿನಿಂದ ಅಸತ್ಕಾರ್ಯ ಹುಟ್ಟುತ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂಬ ಮೂರನೆಯ ಕಲ್ಪವು ಮಾಯಾವಾದಿಗಳಾದ ವೇದಾಂತಿಗಳ ಮತ. ಘಟಪಟಾದಿ ಕಾರ್ಯಗಳು ವ್ಯಾವಹಾರಿಕಸತ್ತಾಶ್ರಯಗಳಾದರೂ ಪಾರಮಾರ್ಥಿಕಸತ್ತ್ವವಿಲ್ಲದಿರುವುದ ರಿಂದ ಅಸತ್ತಾಗುತ್ತವೆ. ಆದರೆ ಅವು ಶಶವಿಷಾಣದಂತೆ ತುಚ್ಛವಲ್ಲ. ಇದರಿಂದ ಕಾರ್ಯೋತ್ಪತ್ತಿಯೂ ಕೂಡುತ್ತದೆ. ಕಾರ್ಯಭೂತವಾದ ಜಗತ್ತು ಅವರ ಮತದಲ್ಲಿ ಮೂಲ ಕಾರಣವಾದ ಬ್ರಹ್ಮನ ವಿವರ್ತವಾಗುತ್ತದೆ. (ಪರಿಣಾಮವಲ್ಲ). ವಿವರ್ತವಾದುದ ರಿಂದಲೇ ಆಭಾಸ ಮಾತ್ರವಾದುದರಿಂದ ಅದು ಪಾರಮಾರ್ಥಿಕವಾವುವುದಿಲ್ಲ. ಅದರಲ್ಲಿ ವ್ಯಾವಹಾರಿಕಸತ್ಯತ್ವ ಇದ್ದೇ ಇವೆ. ಈ ಅಭಿಪ್ರಾಯದಿಂದ ಸತ್ತಿನಿಂದ ಸತ್ಕಾರ್ಯ ಹುಟ್ಟುತ್ತದೆಂದು ಹೇಳಬಹುದು. ಕಾರ್ಯಸತ್ವ ಪಾರಮಾರ್ಥಿಕವಾಗುವುದಾದರೆ ಈ ನಾಲ್ಕನೆಯ ಪಕ್ಷವು ಸಾಂಖ್ಯನೈಯಾಯಿಕಸಂಮತವಾಗುತ್ತದೆ. ಆದರೆ ಅವರಲ್ಲಿಯೂ ಪರಸ್ಪರ ಭೇದವಿವೆ. ಘಟವಿನಾಶಿಯಾದರೂ ಕೆಲವು ಕಾಲವಿರುವುದರಿಂದ ಅದಕ್ಕೆ ಪಾರಮಾರ್ಥಿಕಸತ್ತ್ವನನ್ನಂಗೀಕರಿಸಿರುತ್ತಾರೆ. ಸಾಂಖ್ಯರು ಕಾಲತ್ರಯಾಬಾಧ್ಯತ್ವ ರೂಪ ಪಾರಮಾರ್ಥಿಕತ್ವವನ್ನಂಗೀಕರಿಸುತ್ತಾರೆ. ಹೀಗೆ ನಾಲ್ಕು ಪಕ್ಷಗಳಲ್ಲಿ ಮೊದಲ ನೆಯ ಮತ ಸಂಭವಿಸುವುದಿಲ್ಲವೆಂದು ಹೇಳಿದೆ. ಸೌಗತರೆಂದರೆ ಬೌದ್ಧರು. ಅವರ ಮತವನ್ನೂ ಇತರರು ಖಂಡಿಸಿರುತ್ತಾರೆ. 'ನೈಯಾಯಿಕಾ'—ಇತಿ. ಉತ್ಪತ್ತಿಯ ಪೂರ್ವದಲ್ಲಿ ಇಲ್ಲದಿರುವ ಘಟಾದಿಕಾರ್ಯಗಳು ಇತರಕ್ಕೆ ಮೃದಾದಿ ಕಾರಣಕಲಾಪಗಳಿಂದ ಹುಟ್ಟುತ್ತವೆಂದು ಅವರ ಸಿದ್ಧಾಂತ. ಆದಿಪದದಿಂದ ವೈಶೇಷಿಕರನ್ನು ತೆಗೆದುಕೊಳ್ಳ ಬೇಕು. ಅದ್ವೈತ ವೇದಾಂತಿಗಳು ವಿವರ್ತವಾದವನ್ನು ಹೇಳುತ್ತಾರೆ. ತನ್ನ ಸ್ವರೂಪ ವನ್ನು ಬಿಡದಿರುವ ವಸ್ತುವಿನಲ್ಲಿ ತೋರುವ ರೂಪಾಂತರವೇ ವಿವರ್ತ.

ತತ್ರಾಸತಃ ಸಜ್ಜಾಯತ ಇತಿ ನ ಪ್ರಾಮಾಣಿಕಃ ಪಕ್ಷಃ । ಅಸತೋ ನಿರುಪಾಖ್ಯಸ್ಯ ಶಶ ವಿಷಾಣವತ್ ಕಾರಣತ್ವಾನುಪಪತ್ತೇಃ । ತುಚ್ಛಾತುಚ್ಛಯೋಸ್ತಾದಾತ್ಮ್ಯಾನು ಪಪತ್ತೇಶ್ಚ ॥

ಬೌದ್ಧರ ಕಾರ್ಯಕಾರಣಭಾವವನ್ನು ಖಂಡಿಸುತ್ತಾನೆ. ಅಸತ್ತೆಂದರೆ ಅದು ಶಶ ವಿಷಾಣದಂತೆ ಸ್ವರೂಪರಹಿತವಾಗಿರುತ್ತದೆ. ಪೂರ್ವಕ್ಷಣದಲ್ಲಿರುವ ಘಟದ ಅಭಾವವು ಉತ್ತರಕ್ಷಣದಲ್ಲಿರುವ ಘಟಕ್ಕೆ ಉಪಾದಾನ ಕಾರಣವೆಂದು ಅವರು ಹೇಳುವುದು ಯುಕ್ತ ವಾಗುವುದಿಲ್ಲ. ತುಚ್ಛ — ನಿಃಸ್ವರೂಪ. ಅಭಾವಕ್ಕೆ ಯಾವ ಸ್ವರೂಪವೂ ಇಲ್ಲ. ಅದು ಉತ್ತರ ಕ್ಷಣದಲ್ಲಿರುವ ಅತುಚ್ಛವಾದ ಭಾವವಾದ ಘಟಾದಿಗಳೊಡನೆ ತಾದಾತ್ಮ್ಯ ಹೊಂದುವುದು ಹೇಗೆ ? ತಾದಾತ್ಮ್ಯವಿಲ್ಲದೆ ಉಪಾದಾನೋಪಾದೇಯಭಾವ ಸಂಭವಿಸು ವುದಿಲ್ಲ. ಆದುದರಿಂದ ಅವರ ಪಕ್ಷವು ಪ್ರಾಮಾಣಿಕವಾಗುವುದಿಲ್ಲ.

ನಾಪಿ ಸತೋಽಸಜ್ಜಾಯತೇ । ಕಾರಕವ್ಯಾಪಾರಾತ್ ಪ್ರಾಕ್ ಅಸತಃ ಶಶವಿಷಾಣವತ್ ಸತ್ತಾಸಂಬಂಧಲಕ್ಷಣೋತ್ಪತ್ತ್ಯನುಪಪತ್ತೇಃ । ನ ಹಿ ನೀಲಂ ನಿಪುಣತಮೇನಾಪಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೀತಂ ಕರ್ತುಂ ಪಾರ್ಯತೇ । ನನು ಸತ್ತ್ವಾಽಸತ್ತ್ವೇ ಘಟಸ್ಯ ಧರ್ಮಾವಿತಿ ಚೇತ್– ತದಚಾರು । ಅಸತಿ ಧರ್ಮಿಣಿ ತದ್ಧರ್ಮ ಇತಿ ವ್ಯಪದೇಶಾನುಪಪತ್ತ್ಯಾ ಧರ್ಮಿಣಃ ಸತ್ತ್ವಾಪತ್ತೇಃ

ನೈಯಾಯಿಕರಿಗೆ ಅಭಿಮತವಾದ ಕಾರ್ಯಕಾರಣಭಾವವನ್ನು ಖಂಡಿಸುತ್ತಾನೆ. 'ನಾಪಿ'—ಇತಿ. ಪೂರ್ವದಲ್ಲಿಲ್ಲದಿರುವ ಘಟಾದಿಕಾರ್ಯಗಳು ಸತ್ತಾದ ಮೃದಾದಿಕಾರಣ ಕಲಾಪಗಳಿಂದ ಹುಟ್ಟುತ್ತದೆಂದು ಹೇಳುವುದು ಸರಿಯಲ್ಲ. ಉತ್ಪತ್ತಿಯೆಂದರೆ ಸತ್ಪದಾರ್ಥ ದೊಡನೆ ಸಂಬಂಧ. ಇದು ಇರತಕ್ಕ ಎರಡು ಪದಾರ್ಥಗಳಿಗೆ ಸಂಭವಿಸುವುದಿಲ್ಲ. ಸತ್ ಅಸತ್ತುಗಳಿಗೆ ಸಂಭವಿಸುವುದಿಲ್ಲ ಶಶವಿಷಾಣಕ್ಕೆ ಇದರೊಡನೆ ಸಂಬಂಧವೆಂದು ಹೇಳಲು ಸಾಧ್ಯವಿಲ್ಲ. ಹಾಗೆಯೇ ಹಿಂದೆ ಇಲ್ಲದಿರುವ ಘಟಾದಿಕಾರ್ಯಕ್ಕೆ ಸತ್ತಿಯೊಡನೆ ಸಂಬಂಧವು ಕೂಡದಿರುವುದರಿಂದ ಸತ್ತಾಸಂಬಂಧರೂಪವಾದ ಘಟಾದಿಕಾರ್ಯದ ಉತ್ಪತ್ತಿಯೂ ಸಂಭ ವಿಸುವುದಿಲ್ಲ. ಹಿಂದೆ ಇಲ್ಲದಿರುವ ಘಟಾದಿಕಾರ್ಯಗಳು ಕುಂಬಾರನವ್ಯಾಪಾರದಿಂದ ಸದ್ರೂಪವಾಗಲು ಎಂದೂ ಶಕ್ಯವಿಲ್ಲ. ಸತ್, ಅಸತ್ತುಗಳು ನೀಲಪೀತಗಳಂತೆ ವಿರುದ್ಧವಾಗಿರುತ್ತವೆ. ಸತ್ತ್ವ, ಅಸತ್ತ್ವ ಘಟದ ಧರ್ಮವೆಂದು ಹೇಳುವುದೂ ಸಮಂಜಸ ವಲ್ಲ. ಇಲ್ಲದಿರುವ ಧರ್ಮಿಗೆ ಧರ್ಮ ಹೇಳುವುದು ಹೇಗೆ? ಕಟಕತ್ವ ಧರ್ಮವಿಶಿಷ್ಟ ವಾದ ಸುವರ್ಣವು ಅಕ್ಕಸಾಲಿಯ ವ್ಯಾಪಾರದಿಂದ ಕುಂಡಲತ್ವಧರ್ಮವುಳ್ಳದ್ದಾಗುವಂತೆ ಅಸತ್ವಧರ್ಮವಿಶಿಷ್ಟವಾದ ಘಟವು ಕುಲಾಲನ ವ್ಯಾಪಾರದಿಂದ ಸತ್ವಧರ್ಮವಿಶಿಷ್ಟವಾಗು ತ್ತದೆಂದು ತಾರ್ಕಿಕನು ಹೇಳಬಹುದು. ಆದರೆ ಇದು ಅಸತ್ವಸ್ಥಾಪಕವಾಗಲಾರದು. ಅಸತ್ವವು ಘಟಧರ್ಮವೆಂದು ಹೇಳುವುದಾದರೆ ಧರ್ಮಿ ಇಲ್ಲದೇ ಧರ್ಮ ಇರುವುದೇ ಅಸಂಭವವಾದುದರಿಂದ ಅಸತ್ವಧರ್ಮ ಕಾಲದಲ್ಲಿ ಧರ್ಮಿಯಾದ ಘಟವನ್ನು ಅವಶ್ಯವಾಗಿ ಒಪ್ಪಬೇಕಾಗುತ್ತದೆ. ಇದರಿಂದ ಧರ್ಮಿ ನಿತ್ಯವೆಂದೇ ಸಿದ್ಧವಾಗುತ್ತದೆ.

ತಸ್ಮಾತ್ಕಾರಕವ್ಯಾಪಾರಾತ್ ಪ್ರಾಗಪಿ ಕಾರ್ಯಂ ಸದೇವ । ಸತಶ್ಚಾಭಿವ್ಯಕ್ತಿರುಪಪದ್ಯತೇ । ಯಥಾ ಪೀಡನೇನ ತಿಲೇಷು ತೈಲಸ್ಯ । ದೋಹನೇನ ಸೌರಭೇಯೀಷು ಪಯಸಃ । ಅಸತಃ ಕಾರಣೇ ಕಿಮಪಿ ನಿದರ್ಶನಮ್ । ನ ದೃಶ್ಯತೇ । ಕಿಂಚ ಕಾರ್ಯೇಣ ಕಾರಣಂ ಸಂಬಂದ್ಧಂ ತಜ್ಜನಕಮಸಂಬದ್ಧಂ ವಾ । ಪ್ರಥಮೇ ಕಾರ್ಯಸ್ಯ ಸತ್ವ ಮಾಯಾತಮ್ । ಸತೋರೇವ ಸಂಬಂಧ ಇತಿ ನಿಯಮಾತ್ । ಚರಮೇ ಸರ್ವಂ ಕಾರ್ಯಜಾತಂ ಸರ್ವಸ್ಮಾಜ್ಜಾಯೇತ । ಅಸಂಬದ್ಧತ್ವಾವಿಶೇಷಾತ್ । ತದಾಖ್ಯಾಯಿ ಸಾಂಖ್ಯಾಚಾರ್ಯೈಃ :—

ಅಸತ್ವಾನ್ನಾಸ್ತಿ ಸಂಬಂಧಃ ಕಾರಣೈಃ ಸತ್ವಸಂಗಿಭಿಃ ।
ಅಸಂಬದ್ಧಸ್ಯ ಚೋತ್ಪತ್ತಿಮಿಚ್ಛತೋ ನ ವ್ಯವಸ್ಥಿತಿಃ ॥ ಇತಿ ॥

ಸಾಂಖ್ಯಾಭಿಮತ ಕಾರ್ಯಕಾರಣಭಾವವನ್ನು ಸಿದ್ಧಾಂತವಾಗಿ ವಿವರಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ತಸ್ಮಾತ್"—ಇತಿ. ಘಟಾದಿ ಕಾರ್ಯವು ಮೊದಲೇ ಇರುವುದಾದರೆ ಕುಲಾಲಾದಿಕಾರಕ ವ್ಯಾಪಾರವ್ಯರ್ಥವಲ್ಲವೇ ? ಎಂಬ ಶಂಕೆ ಬಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಸನಿಷ್ಟ'—ಇತಿ. ಘಟಾದಿ ಕಾರ್ಯಗಳು ಮೊದಲು ಇದ್ದರೂ ಅನಭಿವ್ಯಕ್ತವಾಗಿರುತ್ತವೆ. ಕುಲಾಲಾದಿಕಾರಕವ್ಯಾಪಾರದಿಂದ ಕೇವಲ ಅಭಿವ್ಯಕ್ತಿ (ಪ್ರಕಾಶ)ಯನ್ನು ಹೊಂದುತ್ತವೆ. ದೃಷ್ಟಾಂತ ತೋರಿಸುತ್ತಾನೆ. 'ಯಥಾ'— ಇತಿ. ತಿಲದಲ್ಲಿ ಎಣ್ಣೆಯು ಮೊದಲೇ ಇರುತ್ತದೆ. ತೈಲಕ್ಕೆ ತಿಲಪೀಡನವ್ಯಾಪ್ಯಾರವು ಕೇವಲ ಅಭಿವ್ಯಂಜಕವಾದುದರಿಂದ ಕಾರಣವಾಗುತ್ತದೆ. ಹಸುವಿನ (ಸೌರಭೇಯೀ) ಉದರದಲ್ಲಿರುವ ಹಾಲಿಗೆ ಗೋ ದೋಹನ ವ್ಯಾಪಾರವು ಕೇವಲ ಅಭಿವ್ಯಂಜಕವಾಗುವುದರಿಂದ ಕಾರಣವಾಗುತ್ತದೆ. ಅಸತ್ತಾದ ಕಾರ್ಯಕ್ಕೆ ಕಾರಣವೆಂದರೆ ಎಲ್ಲಿಯೂ ದೃಷ್ಟಾಂತ ದೊರೆಯಲಾರದು. ಅಸತ್ತಾದ ಘಟಕ್ಕೆ ದಂಡಾದಿಗಳು ಕಾರಣವಾಗಿವೆಯೆಂದು ಲೋಕದಲ್ಲಿ ಪ್ರಸಿದ್ಧವಾಗಿದೆ ಯೆಂದು ತಾರ್ಕಿಕನು ಹೇಳಬಹುದು. ಆದರೆ ಅದು ಉಭಯವಾದಿ ಸಂಮತವಾದು ದಲ್ಲ. ಸಾಂಖ್ಯರು ಘಟಾದಿ ಕಾರ್ಯವನ್ನು ಮೊದಲು ಕಾರಣರೂಪದಿಂದ ಇದೆಯೆಂದೇ ಅಂಗೀಕರಿಸಿರುತ್ತಾರೆ. 'ಕಿಂಚ'—ಇತಿ. ಮೃದಾದಿ ಕಾರಣವು ಘಟಾದಿಕಾರ್ಯದೊಡನೆ ಸಂಬದ್ಧವಾಗಿದ್ದು ಘಟಾದಿಕಾರ್ಯವನ್ನು ಹುಟ್ಟಿಸುತ್ತದೆಯೇ ? ಅಥವಾ ಸಂಬಂಧ ಹೊಂದದೆ ಹುಟ್ಟಿಸುತ್ತದೆಯೇ ? ಸಂಬದ್ಧವಾಗಿ ಹುಟ್ಟಿಸುತ್ತದೆ ಅಂದರೆ ಆಗ ಸಂಬಂಧಿ ಯಾದ ಘಟಾದಿಕಾರ್ಯವು ಮೊದಲು ಇದೆಯೆಂದು ಅಂಗೀಕರಿಸಬೇಕಾಗುತ್ತದೆ. ಅಸಂಬದ್ಧವಾಗಿ ಹುಟ್ಟಿಸುತ್ತದೆಂದರೆ ಮೃದಾದಿ ಕಾರಣವು ತನ್ನಿಂದ ಸಂಬಂಧ ಹೊಂದದ ಘಟಾದಿಗಳನ್ನು ಹುಟ್ಟಿಸುವಂತೆ ಪಟಾದಿಗಳನ್ನೂ ಹುಟ್ಟಿಸಲಿ. ಸಂಬಂಧದ ಆವಶ್ಯಕತೆ ಯಿಲ್ಲವೆಂಬುದು ಎರಡರಲ್ಲಿಯೂ ಸಮಾನವಾಗಿರುತ್ತದೆ. 'ಅಸತ್ವಾತ್' — ಇತಿ. ಸತ್ವೇನ—ಸತ್ವಧರ್ಮೇಣ ಸಹ, ಸಂಗಃ—ಸಂಬಂಧಃ ಯೇಷಾಂ ತೇ, ತೈ : —ಸತ್ವ ಸಂಗಿಭಿಃ. ಸತ್ವಧರ್ಮವಿಶಿಷ್ಟಗಳಾದ ಮೃದಾದಿ ಕಾರಣಗಳಿಂದ ಕಾರ್ಯೋತ್ಪತ್ತಿಯ ಮೊದಲು ಸಂಬಂಧವಿರುವುದಿಲ್ಲ. ಏಕೆಂದರೆ ಕಾರ್ಯವು ಉತ್ಪತ್ತಿಯ ಮೊದಲು ಇರುವು ದಿಲ್ಲ. ಅಸಂಬದ್ಧವಾಗಿಯೇ ಹುಟ್ಟುತ್ತತೆಂದು ಹೇಳುವುದಾದರೆ ಮೃದಾದಿಕಾರಣ ಕಲಾಪಗಳಿಂದ ಘಟಾದಿಗಳೇ ಹುಟ್ಟುತ್ತವೆ. ಪಟಾದಿಗಳು ಹುಟ್ಟುವುದಿಲ್ಲವೆಂಬ ವ್ಯವಸ್ಥೆ ಸಿದ್ಧಿಸದೇ ಹೋಗಬೇಕಾಗುತ್ತದೆ ಎಂದರ್ಥ.

ಅಥೈವಮುಚ್ಯೇತಾಽಸಂಬದ್ಧಮಪಿ ತತ್ತದೇವ ಜನಯತಿ ಯತ್ರಯಚ್ಛಕ್ತಮ್ । ಶಕ್ತಿಶ್ಚ, ಕಾರ್ಯದರ್ಶನೋನ್ನೇಯೇತಿ । ತನ್ನ ಸಂಗಚ್ಛತೇ । ತಿಲೇಷು ತೈಲಜನನಶಕ್ತಿರಿತ್ಯತ್ರ ತೈಲಸ್ಯಾಽಸತ್ವೇ ಸಂಬಂಧತ್ವಾಸಂಬಧತ್ವವಿಕಲ್ಪೇನ ತಚ್ಛಕ್ತಿರಿತಿ ನಿರೂಪಣಾ ಯೋಗಾತ್ । ಕಾರ್ಯಕಾರಣಯೋರಭೇದಾಚ್ಚ ಕಾರಣಾತ್ ಪೃಥಕ್ಕಾರ್ಯಸ್ಯ ಸತ್ವಂ ನ ಭವತಿ । ಪಟಸ್ತಂತುಭ್ಯೋ ನ ಭಿದ್ಯತೇ । ತದ್ಧರ್ಮತ್ವಾತ್ । ನ ಯದೇವಂ ನ ತದೇವಂ ಯಥಾ ಗೋರಶ್ವಃ । ತದ್ಧರ್ಮಶ್ಚ ಪಟಃ । ತಸ್ಮಾನ್ನಾರ್ಥಾಂತರಮ್ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರ್ಹಿ ಪ್ರತ್ಯೇಕಂ ತ ಏವ ಪ್ರಾವರಣಕಾರ್ಯಂ ಕುರ್ಯುರಿತಿಚೇನ್ನ । ಸಂಸ್ಥಾನ ಭೇದೇ ನಾವಿರ್ಭೂತಪಟಭಾವಾನಾಂ ಪ್ರಾವರಣಾರ್ಥಕ್ರಿಯಾಕಾರಿತ್ವೋಪಪತ್ತೇಃ । ಯಥಾ ಹಿ ಕೂರ್ಮಸಾಙ್ಗಾನಿ ಕೂರ್ಮಶರೀರೇ ನಿವಿಶಮಾನಾನಿ ತಿರೋಭವಂತಿ ನಿಃಸರಂತಿ ಚಾವಿರ್ಭವಂತಿ ಏವಂ ಕಾರಣಸ್ಯ ತಂತ್ವಾದೇಃ ಪಟಾದಯೋ ವಿಶೇಷಾ ನಿಃಸರಂತ ಆವಿರ್ಭವಂತ ಉತ್ಪದ್ಯಂತ ಇತ್ಯುಚ್ಯಂತೇ । ನ ಪುನರಸತಾಮುತ್ಪತ್ತಿಃ ಸತಾಂ ವಾ ವಿನಾಶಃ । ಯಥೋಕ್ತಂ ಭಗವದ್ಗೀತಾಯಾಮ್-

ನಾಸತೋ ವಿದ್ಯತೇ ಭಾವೋ ನಾ ಭಾವೋ ವಿದ್ಯತೇಸತಃ (ಗೀ-೨-೧೬) ಇತಿ॥

'ಅಸಂಬದ್ಧಂ'—ಇತಿ. ಕಾರಣವು ಕಾರ್ಯದಿಂದ ಸಂಬಂಧಹೊಂದದಿದ್ದರೂ ಅಂತಹ ಕಾರ್ಯವನ್ನೇ ಅದು ಹುಟ್ಟಿಸುತ್ತದೆ ಅಂದರೆ ಯಾವ ಕಾರಣವು ಯಾವಕಾರ್ಯದಲ್ಲಿ ಶಕ್ತವಾಗಿದೆಯೋ ಅಂತಹ ಕಾರ್ಯವನ್ನು ಹುಟ್ಟಿಸುತ್ತದೆ. ಮೃದ್ರೂಪಕಾರಣವು ಘಟೋತ್ಪಾದನೆಯಲ್ಲಿ ಮಾತ್ರ ಸಮರ್ಥವಾದುದರಿಂದ ಪಟೋತ್ಪಾದನೆಯಲ್ಲಿ ಅಸಮರ್ಥವಾದುದರಿಂದ ಘಟವನ್ನು ಮಾತ್ರ ಹುಟ್ಟಿಸುತ್ತದೆ. ಪಟೋತ್ಪಾದನೆಯಲ್ಲಿ ಅದು ಶಕ್ತವಾಗುವುದಿಲ್ಲ. ಕಾರ್ಯೋತ್ಪಾದನಾಸಾಮರ್ಥ್ಯವೇ ಶಕ್ತಿ. ಮಣ್ಣಿನಿಂದ ಉಂಟಾಗುವ ಘಟಾದಿಕಾರ್ಯವನ್ನು ನೋಡಿ ಹಿಂದೆ ಹೇಳಿದ ಶಕ್ತಿಯನ್ನು ಅನುಮಾನಮಾಡಬಹುದು. ಆದುದರಿಂದ ಮಣ್ಣಿನಲ್ಲಿರುವ ಸ್ವಾಭಾವಿಕವಾದ ಘಟೋತ್ಪಾದನಶಕ್ತಿಯು ಆಮೇಲೆ ಉಂಟಾಗುವ ಘಟಾದಿಕಾರ್ಯದರ್ಶನದಿಂದ ಅನುಮಾನಮಾಡಲ್ಪಡುತ್ತದೆಂದು ತಾರ್ಕಿಕರ ಸಿದ್ಧಾಂತ. ಇದನ್ನು ಖಂಡಿಸುತ್ತಾನೆ. 'ತಿಲೇಷು'—ಇತಿ. ತೈಲೋತ್ಪತ್ತಿಗಿಂತಲೂ ಹಿಂದೆ ಇರುವ ತಿಲಶಕ್ತಿಯನ್ನು ಆಮೇಲೆ ತೈಲೋತ್ಪತ್ತಿಯನ್ನು ನೋಡಿ ಅನುಮಾನ ಮಾಡಿ ತಿಳಿದುಕೊಳ್ಳಲಿ. ಆದರೆ ಹಿಂದೆ ಇರುವ ಆ ತಿಲಗತಶಕ್ತಿಯು ಆಗ ತೈಲದೊಡನೆ ಸಂಬಂಧ ಹೊಂದಿರುತ್ತದೆಯೋ ? ಅಥವಾ ಇಲ್ಲವೇ ? ತೈಲದೊಡನೆ ಸಂಬದ್ಧವಾಗಿದೆಯೆಂದರೆ ಉತ್ಪತ್ತಿಯ ಪೂರ್ವದಲ್ಲಿ ತೈಲಸತ್ವವಿದ್ದಂತಾಗುತ್ತದೆ. ಸಂಬಂಧವಿಲ್ಲವೆಂದರೆ ಅದು ತೈಲೋತ್ಪಾದನಶಕ್ತಿಯೆಂದು ಹೇಳುವುದಾದರೂ ಹೇಗೆ ? ಅಸಂಭವಿಯಾದ ಅರ್ಥವನ್ನು ಅನುಮಾನದಿಂದ ತಿಳಿಯುವುದಾದರೂ ಹೇಗೆ ? ಬೇರೆಕಾರಣದಿಂದಲೂ ಕಾರ್ಯವು ಪೂರ್ವದಲ್ಲಿರುತ್ತದೆಂದು ಸಾಧಿಸುತ್ತಾನೆ. 'ಕಾರ್ಯಕಾರಣಯೋಃ'—ಇತಿ. ಕಾರ್ಯಕಾರಣಗಳು ಒಂದಾದುದರಿಂದ ಒಂದೇ ಸತ್ತಾ ಇರುವುದಲ್ಲದೆ ಸತ್ತಾದ್ವಯವಿರುವುದಿಲ್ಲ. ಆಗ ಕಾರ್ಯೋತ್ಪತ್ತಿಯ ಮೊದಲು ಕಾರಣ ಸತ್ತಾ ನಿಯಮದಿಂದ ಇರುವುದರಿಂದ ತದಭಿನ್ನವಾದ ಕಾರ್ಯಸತ್ತೆಯೂ ಇರಬೇಕಾಗುತ್ತದೆ. ಪಟವು ತಂತುವಿನ ಧರ್ಮವಾದುದರಿಂದ ತಂತುಗಿಂತ ಬೇರೆಯಾಗುವುದಿಲ್ಲ. ಅದು ತಂತ್ವವಸ್ಥಾ ವಿಶೇಷರೂಪವಾಗುವುದರಿಂದ ತಂತುಧರ್ಮವಾಗುತ್ತದೆ. "ಯಾವುದು ಯಾವುದರ ಅಭೇದ ಹೊಂದಿಲ್ಲವೋ ಅದು ಅದರ ಧರ್ಮವೂ ಆಗುವುದಿಲ್ಲ" ಗೋವು ಅಶ್ವಾಭಿನ್ನವಾಗದಿರುವುದರಿಂದ ಅದು ಅಶ್ವಧರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುವುದಿಲ್ಲ. ಆದುದರಿಂದ ಪಟವು ತಂತುಧರ್ಮವಾಗುವುದಲ್ಲದೆ ಬೇರೊಂದು ವಸ್ತುವಾಗುವುದಿಲ್ಲ. ಪುನಃ ಶಂಕಿಸುತ್ತಾನೆ "ತರ್ಹಿ"—ಇತಿ. ತಂತುಗಳಿಂದ ಪಟವು ವಸ್ತ್ವಂತರ (ಬೇರೆ) ವಾಗದಿದ್ದರೆ ಪ್ರತ್ಯೇಕವಾಗಿ ಒಂದೊಂದು ನೂಲೂ ಪ್ರಾವರಣ (ಹೊದೆಯುವುದು) ರೂಪಕಾರ್ಯವನ್ನು (ಶೀತಾಪನೋದನಾದಿಕಾರ್ಯವಾಗಲೀ) ಮಾಡಲಿ. ಒಂದು ನೂಲಿನಿಂದ ಶರೀರಾಚ್ಛಾದನೆ ಸಾಧ್ಯವಿಲ್ಲವೆಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಸಂಸ್ಥಾನ'—ಇತಿ. ಅವಯವಸಂನಿವೇಶವಿಶೇಷಕ್ಕೆ ಸಂಸ್ಥಾನವೆಂದು ಹೆಸರು. ತಂತುಗಳಲ್ಲಿ ಮೊದಲು ಪಟಭಾವವಿದ್ದರೂ ಅದು ಈ ಅವಯವಸಂನಿವೇಶದಿಂದ ಅಭಿವ್ಯಕ್ತವಾಗುತ್ತದೆ. ಪಟಭಾವವೆಂದರೆ ಪಟತ್ವ. ಅರ್ಥಃ—ಪದಾರ್ಥಃ. ಪಟರೂಪಪದಾರ್ಥದಲ್ಲಿ ಯಾವ ಪ್ರಾವರಣರೂಪಕ್ರಿಯಾ ಇದೆಯೋ ಅದು ಸಂಸ್ಥಾನದಿಂದ ಪ್ರಕಾಶಿತವಾಗುತ್ತದೆ. ಅಥವಾ ಅರ್ಥ ಅಂದರೆ ಪ್ರಯೋಜನ. ಕಾರ್ಯ. ಪಟಕಾರ್ಯಭೂತವಾದ ಪ್ರಾವರಣರೂಪಕ್ರಿಯಾ ಎಂದರ್ಥ. ತಂತುಗಳಿಗೆ ತಾದೃಶಕ್ರಿಯಾಕಾರಿತ್ವಶಕ್ತಿಯು ಪಟಭಾವಾವಿರ್ಭಾವಾನಂತರ ಬರುತ್ತದೆ. ಕೂರ್ಮದ ಅವಯವಗಳು ಕೂರ್ಮಶರೀರದಲ್ಲೇ ಸೇರಿ ಹೇಗೆ ಆವಿರ್ಭಾವವುಳ್ಳವುಗಳೂ, ತಿರೋಭಾವವುಳ್ಳವುಗಳೂ, ನಿಃಸರಣಕ್ರಿಯಾವಿಶಿಷ್ಟಗಳೂ ಆಗುತ್ತವೆಯೋ ಅದರಂತೆ ಪಟಾದಿವಿಶೇಷಗಳು ತಂತುಗಳಿಂದ ಆಗುತ್ತವೆಯೆಂದು ತಿಳಿಯಬೇಕು. ಅಂಗಾನಿ ಎಂಬುದಕ್ಕೆ ವಿಶೇಷಣಗಳಾದುದರಿಂದ ನಿಃಸರಂತೀತ್ಯಾದಿಗಳು ಪ್ರಥಮಾ ಬಹುವಚನವೆಂದು ತಿಳಿಯಬೇಕು. ಒಳಗೆ ಎಳೆದುಕೊಂಡಾಗ ತೋರದಿರುವುದರಿಂದ ನಾಶವಾಗುತ್ತದೆಂದು ಆರೋಪಿಸುತ್ತಾರೆ. ಇದರಿಂದ ಅಸತ್ತಿಗೆ ಉತ್ಪತ್ತಿಯಿಲ್ಲ. ಸತ್ತಿಗೆ ನಾಶವಿಲ್ಲವೆಂದು ವ್ಯಕ್ತವಾಗುತ್ತದೆ. ಇದನ್ನು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ. 'ನಾಸತಃ'—ಇತಿ. ಇಲ್ಲದಿರುವುದಕ್ಕೆ ಎಂದೂ ಸತ್ತಾ ಇರುವುದಿಲ್ಲ. ಇರುವುದಕ್ಕೆ ಅವಿದ್ಯಮಾನತಾ ಅಂದರೆ ಇಲ್ಲದಿರುವಿಕೆ ಇಲ್ಲ. ಯಾವುದು ಸತ್ತಾಗಿದೆಯೋ ಅದು ಯಾವಾಗಲೂ ಸತ್ತಾಗಿಯೂ, ಯಾವುದು ಅಸತ್ತೋ ಅದು ಯಾವಾಗಲೂ ಅಸತ್ತಾಗಿಯೂ ಇರುತ್ತದೆ.

ತತಶ್ಚ ಕಾರ್ಯಾನುಮಾನಾತ್ ತತ್ಪ್ರಧಾನಸಿದ್ಧಿಃ ಃ ತದುಕ್ತಮ್—

ಅಸದಕರಣಾದುಪಾದಾನಗ್ರಹಣಾತ್ಸರ್ವಸಂಭವಾಭಾವಾತ್ ।

ಶಕ್ತಸ್ಯ ಶಕ್ಯಕರಣಾತ್ಕಾರಣಭಾವಾಚ್ಚ ಸತ್ಕಾರ್ಯಮ್ ॥ (ಸಾಂ,-ಕಾ-೯) ಇತಿ.

ನಾಪಿಸತೋ ಬ್ರಹ್ಮತತ್ವಸ್ಯ ವಿವರ್ತಃ ಪ್ರಪಂಚಃ। ಬಾಧಾನುಪಲಂಭಾತ್ । ಅಧಿಷ್ಠಾನಾರೋಪ್ಯಯೋಶ್ಚಿಜ್ಜಡಯೋಃ ಕಲಧೌತ ಶುಕ್ತ್ಯಾದಿವತ್ ಸಾರೂಪ್ಯಾಭಾವೇನಾರೋಪಾಸಂಭವಾಚ್ಚ ।

ಕಾರ್ಯೋತ್ಪತ್ತಿಗಿಂತಲೂ ಕಾರ್ಯಸತ್ತ್ವವನ್ನು ಹೇಳಿದ ಈಶ್ವರಕೃಷ್ಣನ ಕಾರಿಕಾ ಪ್ರಮಾಣವನ್ನು ತೋರಿಸುತ್ತಾನೆ. 'ಅಸತ್'—ಇತಿ. ಕಾರಣವ್ಯಾಪಾರದಿಂದ ಮೊದಲೇ ಕಾರ್ಯವಿದೆಯೆಂದು ಹೇಳಬೇಕು. ೧) ಅಸದಕರಣಾತ್ ಎಂಬುದು ಹೇತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸತ್ತಿಗೆ ಕಾರಣವನ್ನು ಯಾರಿಂದಲೂ ಕಲ್ಪಿಸಲು ಸಾಧ್ಯವಿಲ್ಲ. ಕರಣಂ ಅಂದರೆ ಕ್ರಿಯಾ, ಉತ್ಪತ್ತಿ. ಸತ್ತಿಯೊಡನೆ ಸಂಬಂಧ. ೨) ಉಪಾದಾನಗ್ರಹಣಾತ್. ಉಪಾದಾನವೆಂದರೆ ಕಾರಣ. ಅವುಗಳ ಗ್ರಹಣವೆಂದರೆ ಕಾರ್ಯದೊಡನೆ ಸಂಬಂಧ. ಕಾರಣವು ಕಾರ್ಯಸಂಬದ್ಧವಾಗಿದ್ದೇ ಕಾರ್ಯವನ್ನು ಹುಟ್ಟಿಸುತ್ತದೆ. ಕಾರ್ಯವು ಮೊದಲು ಇಲ್ಲವೆನ್ನುವುದಾದರೆ ಆಗ ಕಾರಣಸಂಬಂಧ ಹೇಳಲು ಸಾಧ್ಯವಿಲ್ಲ. ಕಾರ್ಯಸಂಬದ್ಧವಾಗಿಯೇ ಕಾರಣವು ಕಾರ್ಯೋತ್ಪಾದಕವೆಂಬುದರಲ್ಲಿ ನಿಯಮವನ್ನು ತೋರಿಸುತ್ತಾನೆ. 'ಸರ್ವಸಂಭವಾಭಾವಾತ್' ಇತಿ. ಕಾರ್ಯಾಸಂಬದ್ಧವಾಗಿದ್ದು ಕಾರಣವು ಕಾರ್ಯೋತ್ಪಾದಕವಾಗುತ್ತದೆಂದು ಅಂಗೀಕರಿಸಿದರೆ ಎಲ್ಲಾ ಕಾರ್ಯಗಳು ಎಲ್ಲದರಿಂದಲೂ ಉಂಟಾಗಲಿ ಎಂದು ಆಪಾದಿಸಬಹುದು. ಆದರೆ ಹೀಗೆ ಎಲ್ಲಿಯೂ ಕಂಡಿಲ್ಲ.

ಮಣ್ಣಿನಿಂದಲೇ ಘಟ, ತಂತುಗಳಿಂದಲೇ ಪಟ, ಸುವರ್ಣದಿಂದಲೇ ಕಟಕವೆಂದು ಕಾರಣವಿಶೇಷದಿಂದ ಕಾರ್ಯವಿಶೇಷವೇ ಹುಟ್ಟುವುದು ತೋರಿದೆ. ಕಾರ್ಯವಿಶೇಷನಿಯಮಕ್ಕೋಸ್ಕರ ಕಾರಣದಲ್ಲಿ ಒಂದು ಶಕ್ತಿ ವಿಶೇಷವನ್ನು ಕಲ್ಪಿಸಿ ಆಶಕ್ತಿವಿಶಿಷ್ಟವಾಗಿ ಶಕ್ತವಾದ ಕಾರಣವೇ ಸ್ವಶಕ್ಯವಾದ ಕಾರ್ಯಕ್ಕೆ ಉತ್ಪಾದಕವಾಗುತ್ತದೆಂದು ಹೇಳುವುದಾದರೆ ಆಗಲೂ ಕಾರ್ಯಕ್ಕೆ ಪೂರ್ವಸತ್ವವು ಸಿದ್ಧವಾಗುತ್ತದೆಂದು ತೋರಿಸುತ್ತಾನೆ. ೪) ಶಕ್ತಸ್ಯ ಶಕ್ಯಕರಣಾತ್. ಮೃತ್ತಿನಲ್ಲಿ ಕಲ್ಪಿಸಲ್ಪಡುವ ಶಕ್ತಿವಿಶೇಷವು ಘಟಸಂಬದ್ಧವಾಗಿದ್ದರೆ ಆಗ ಅದು ಘಟವನ್ನೇ ಹುಟ್ಟಿಸುತ್ತದೆಂದು ಹೇಳಲು ಸಾಧ್ಯವಾಗುತ್ತದೆ. ಇಲ್ಲವಾದರೆ ನಿಯಮವು ಸಿದ್ಧಿಸಲಾರದು. ಘಟಸಂಬಂಧ ಹೇಳಬೇಕಾದರೆ ಘಟವೊದಲಿಲ್ಲದೇ ಹೇಳಲು ಸಾಧ್ಯವಿಲ್ಲ. ಆದುದರಿಂದ ಮೊದಲು ಘಟಸತ್ತ್ವವನ್ನು ಅಂಗೀಕರಿಸಲೇಬೇಕು "ಕಾರಣಭಾವಾಚ್ಚ ಕಾರ್ಯಸ್ಯ ಪ್ರಾಕ್‌ಸತ್ವಂಸಿಧ್ಯತಿ" ಇಲ್ಲಿ ಭಾವವೆಂದರೆ ಸ್ವರೂಪ. ಕಾರ್ಯಕಾರಣಗಳಿಗೆ ಅಭೇದವಿರುವುದರಿಂದ ಕಾರ್ಯವು ಕಾರಣಸ್ವರೂಪವೇ ಆಗಿರುತ್ತದೆ. ಕಾರ್ಯೋತ್ಪತ್ತಿಗಿಂತ ಕಾರಣವು ಇದೆಯೆಂದು ಹೇಳುವುದಾದರೆ ಆಗ ಕಾರ್ಯವೂ ಇರುತ್ತದೆಂದು ನಿಯಮದಿಂದ ಒಪ್ಪಲೇಬೇಕಾಗುತ್ತದೆ. ಅದ್ವೈತವೇದಾಂತಿಗಳಿಗಭಿಮತವಾದ ಕಾರ್ಯಕಾರಣವನ್ನು ಖಂಡಿಸುತ್ತಾನೆ. 'ನಾಪಿ'—ಇತಿ. ಶುಕ್ತಿಯಲ್ಲಿ ರಜತವು ತೋರುವಂತೆ ಬ್ರಹ್ಮನಲ್ಲಿ ಪ್ರಪಂಚ ತೋರುತ್ತದೆಂದು ಹೇಳುವುದು ಯುಕ್ತವಲ್ಲ. ಏಕೆಂದರೆ ಮುಂದೆ 'ಇದು ರಜತವಲ್ಲ' ಎಂಬ ಬಾಧಜ್ಞಾನ ಬರುವಂತೆ 'ಇದು ಪ್ರಪಂಚವಲ್ಲ' ಎಂದು ಯಾರಿಗೂ ಬಾಧಜ್ಞಾನ ಬರುವುದಿಲ್ಲ. ಆರೋಪಕ್ಕೆ ಅಧಿಷ್ಠಾನವೆಂದರೆ ಚಿದ್ರೂಪವಾದ ಬ್ರಹ್ಮ. ಅದರಲ್ಲಿ ಆರೋಪಿಸಲ್ಪಡುವುದು ಜಡವಾದ ಪ್ರಪಂಚ. ಆರೋಪಮಾಡಬೇಕಾದರೆ ಸಾರೂಪ್ಯವಿರಬೇಕು. ಚಿಜ್ಜಡಗಳು ಪರಸ್ಪರವಿಲಕ್ಷಣಗಳಾದುದರಿಂದ ಆರೋಪಕ್ಕೆ ಕಾರಣವಾದ ಸಾರೂಪ್ಯವಿಲ್ಲದಿರುವುದರಿಂದ ಬ್ರಹ್ಮನಲ್ಲಿ ಪ್ರಪಂಚವನ್ನು ಆರೋಪಿಸುವುದು ಯುಕ್ತವಲ್ಲ. ಕಲಧೌತವೆಂದರೆ ಬೆಳ್ಳಿ. ಶುಕ್ತಿಗೂ ಅದಕ್ಕೂ ಶೌಕ್ಲ್ಯಚಾಕಚಿಕ್ಯದಿಂದ ಸಾಮ್ಯವಿರುವುದರಿಂದ ಅಲ್ಲಿ ಆರೋಪ ಸಂಭವಿಸಬಹುದು. ಕಲಧೌತಶುಕ್ತಿ ದೃಷ್ಟಾಂತ ಇಲ್ಲಿ ವೈಧರ್ಮ್ಯದಿಂದ ಎಂದು ತಿಳಿಯಬೇಕು. ಸಾಧರ್ಮ್ಯದೃಷ್ಟಾಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂದು ಹೇಳಬೇಕಾದರೆ ಕಲಧೌತಪದಕ್ಕೆ ಚಿನ್ನವೆಂದು ಅರ್ಥಹೇಳಬೇಕು. ಚಿನ್ನಬೆಳ್ಳಿಗಳು ಪೀತಶುಕ್ಲಗಳಾದುದರಿಂದ ಹೇಗೆ ಆರೋಪಕ್ಕೆ ಪ್ರಯೋಜಕವಾದ ಸಾರೂಪ್ಯವಿಲ್ಲದಿರುವುದರಿಂದ ರೂಪ್ಯದಲ್ಲಿ ಕಲಧೌತಾರೋಪವಿಲ್ಲವೋ ಅಥವಾ ಕಲಧೌತದಲ್ಲಿ ರೂಪ್ಯಾರೋಪವಿಲ್ಲವೋ ಅದರಂತೆ ಇಲ್ಲಿಯೂ ತಿಳಿಯಬೇಕು. ಆದುದರಿಂದ ವಿವರ್ತವಾದವೂ ಸರಿಯಲ್ಲವೆಂದು ತಾತ್ಪರ್ಯ.

ತತಶ್ಚ ಸುಖದುಃಖಮೋಹಾತ್ಮಕಸ್ಯ ಪ್ರಪಂಚಸ್ಯ ತಥಾವಿಧಕಾರಣಮವಧಾರಣೀಯಮ್ । ತಥಾ ಚ ಪ್ರಯೋಗಃ—ವಿಮತಂ ಭಾವಜಾತಂ—ಸುಖದುಃಖಮೋಹಾತ್ಮಕಕಾರಣಕಂ — ತದನ್ವಿತತ್ವಾತ್ । ಯತ್ ಯೇನಾನ್ವೀಯತೇ ತತ್ತತ್ಕಾರಣಕಂ ಯಥಾರುಚಕಾದಿಕಂ ಸುವರ್ಣಾನ್ವಿತಂ ಸುವರ್ಣಕಾರಣಕಮ್ । ತಥಾ ಚೇದಂ ತಸ್ಮಾತ್ತಥೇತಿ । ತತ್ರ ಜಗತ್ಕಾರಣೇ ಯೇಯಂ ಸುಖಾತ್ಮಕತಾ ತತ್ಸತ್ತ್ವಂ, ಯಾ ದುಃಖಾತ್ಮಕತಾ ತದ್ರಜಃ, ಯಾ ಚ ಮೋಹಾತ್ಮಕತಾ ತತ್ತಮ ಇತಿ ತ್ರಿಗುಣಾತ್ಮಕ ಕಾರಣಸಿದ್ಧಿಃ । ತಥಾ ಹಿ–ಪ್ರತ್ಯೇಕಂ ಭಾವಾಸ್ತ್ರೈಗುಣ್ಯವಂತೋಽನುಭೂಯಂತೇ । ಯಥಾ ಮೈತ್ರದಾರೇಷು ಸತ್ಯವತ್ಯಾಂ ಮೈತ್ರಸ್ಯ ಸುಖಮಾವಿರಸ್ತಿ । ತಂಪ್ರತಿ ಸತ್ತ್ವಗುಣಪ್ರಾದುರ್ಭಾವಾತ್ । ತತ್ಸಪತ್ನೀನಾಂ ದುಃಖಮ್ । ತಾಃ ಪ್ರತಿ ರಜೋಗುಣಪ್ರಾದುರ್ಭಾವಾತ್ । ತಾಮಲಭಮಾನಸ್ಯ ಚೈತ್ರಸ್ಯ ಮೋಹೋ ಭವತಿ । ತಂ ಪ್ರತಿ ತಮೋಗುಣಸಮುದ್ಭವಾತ್ । ಏವಮನ್ಯದಪಿ ಘಟಾದಿಕಂ ಲಭ್ಯಮಾನಂ ಸುಖಂ ಕರೋತಿ । ಪರೈರಪಹ್ರಿಯಮಾಣಂ ದುಃಖಾಕರೋತಿ । ಉದಾಸೀನಸ್ಯೋಪೇಕ್ಷಾವಿಷಯತ್ವೇನೋಪತಿಷ್ಠತೇ । ಉಪೇಕ್ಷಾವಿಷಯತ್ವಂ ನಾಮ ಮೋಹಃ । ಮುಹ–ವೈಚಿತ್ತ್ಯೇ–ಇತ್ಯಸ್ಮಾದ್ಧಾತೋರ್ಮೋಹಶಬ್ದನಿಷ್ಪತ್ತೇಃ । ಉಪೇಕ್ಷಣೀಯೇಷು ಚಿತ್ತವೃತ್ತ್ಯನುದಯಾತ್ । ತಸ್ಮಾತ್ಸರ್ವಂ ಭಾವಜಾತಂ ಸುಖದುಃಖಮೋಹಾತ್ಮಕಂ ತ್ರಿಗುಣಪ್ರಧಾನಕಾರಣಕಮವಗಮ್ಯತೇ ॥

ಈ ರೀತಿಯಾಗಿ ಬೌದ್ಧನೈಯಾಯಿಕ ಅದ್ವೈತವೇದಾಂತಿಗಳಿಂದ ಪ್ರದರ್ಶಿತವಾದ ಕಾರ್ಯಕಾರಣಭಾವವನ್ನು ಖಂಡಿಸಿ, ಸಾಂಖ್ಯಾಭಿಮತವಾದ ಉತ್ಪತ್ತಿಯ ಮೊದಲೇ ಕಾರ್ಯಸತ್ತ್ವವನ್ನು ತೋರಿಸಿ ಸತ್ಕಾರ್ಯಕ್ಕೆ ಕಾರಣದಿಂದ ಅಭಿವ್ಯಕ್ತಿಯನ್ನೂ ವ್ಯಕ್ತಪಡಿಸಿ ಈ ಕಾರ್ಯಕಾರಣಭಾವಾಶ್ರಯಣದಿಂದ ಹಿಂದೆ ಹೇಳಿದ ೨೫ ತತ್ತ್ವಗಳಲ್ಲಿ ಮೊದಲು ಪ್ರಧಾನವಾದ ಮೂಲಪ್ರಕೃತಿಯನ್ನು ಅನುಮಾನಪ್ರಮಾಣದಿಂದ ಸಾಧಿಸುತ್ತಾನೆ. 'ತತಶ್ಚ—' ಇತಿ. ವಿಮತವೆಂದರೆ ಸಾಧ್ಯತ್ವೇನ ಸಂದಿಗ್ಧವಾದುದು ಎಂದರ್ಥ. 'ಸಂದಿಗ್ಧಸಾಧ್ಯವಾನ್ ಪಕ್ಷಃ' ಎಂದು ಪಕ್ಷಲಕ್ಷಣ ಹೇಳಿದೆ. ಆದುದರಿಂದ ವಿಮತಪದವನ್ನು ಅಲ್ಲಲ್ಲಿ ಪಕ್ಷವಿಶೇಷಣವಾಗಿ ಹೇಳುತ್ತಾರೆ. ಭಾವಜಾತವೆಂದರೆ ಪದಾರ್ಥಸಮುದಾಯ. ಇದೇಪಕ್ಷ. ಸುಖದುಃಖಮೋಹಾಃ ಆತ್ಮಾ—ಸ್ವರೂಪಂ ಯಸ್ಯ (ಕಾರಣಸ್ಯ) ತಾದೃಶಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರಣಂ ಯಸ್ಯ—ಎಂದು ಬಹುವ್ರೀಹಿಗರ್ಭಬಹುವ್ರೀಹಿ ಹೇಳಬೇಕು. ಸುಖದುಃಖ ಮೋಹಸ್ವರೂಪವುಳ್ಳ ಕಾರಣವುಳ್ಳದೆಂದರ್ಥ. ಇದು ಸಾಧ್ಯ. ತೈಃ ಅನ್ವಿತಃ, ತದನ್ವಿತಃ ತಸ್ಯಭಾವಃ, ತಸ್ಮಾತ್. ಸುಖದುಃಖಮೋಹಗಳಿಂದ ಕೂಡಿರುವುದರಿಂದ ಎಂದು ಹೇತುನಿರ್ದೇಶ. ಅನ್ವೀಯತೇ — ಸಂಬಧ್ಯತೇ. ಯಾವುದು ಯಾವುದ ರಿಂದ ಸಂಬದ್ಧವಾಗಿದೆಯೋ ಅದು ಅದೇ ಕಾರಣವಾಗಿ ಉಳ್ಳದ್ದಾಗುತ್ತದೆ. ರುಚಕ ವೆಂದರೆ ಚಿನ್ನದಪಾತ್ರ. ಅದು ಚಿನ್ನಸಂಬದ್ಧವಾದುದರಿಂದ ಅದಕ್ಕೆ ಚಿನ್ನವೇ ಕಾರಣ ವಾಗಿರುತ್ತವೆ. ಇದು ಉದಾಹರಣೆ. ತಥಾಚ — ಇತ್ಯಾದಿಗಳಿಂದ ಉಪನಯ, ನಿಗಮನ ಹೇಳಿರುತ್ತಾನೆ. ಜಗತ್ತು ಸುಖದುಃಖಮೋಹಾತ್ಮಕವಾದುದರಿಂದ ಪ್ರಧಾನ ಕಾರಣಕವಾಗುತ್ತದೆ. ಪ್ರಧಾನವು ಸುಖದುಃಖಮೋಹಯುಕ್ತವಾಗಲಿ. ಅದು ತ್ರಿಗುಣಾತ್ಮಕವಾಗುವುದು ಹೇಗೆ ಎಂಬ ಶಂಕೆಗೆ ಸಮಾಧಾನ ತೋರಿಸುತ್ತಾನೆ.

'ತತ್ರ—' ಇತಿ. ಜಗತ್ಕಾರಣದಲ್ಲಿರುವ ಸುಖಸ್ವರೂಪತ್ವವೇನಿದೆಯೋ ಅದೇ ಸತ್ವಗುಣ. ದುಃಖಸ್ವರೂಪವೇ ರಜಸ್ಸು. ಮೋಹಾತ್ಮಕತ್ವವೇ ತಮಸ್ಸು. ಹೀಗೆ ಕಾರಣವು ತ್ರಿಗುಣಾತ್ಮಕವೆಂದು ಸಿದ್ಧವಾಗುತ್ತದೆ. 'ತಥಾಹಿ —' ಎಂಬುದರಿಂದ ಸುಖದುಃಖಮೋಹಗಳಿಂದ ಕೂಡಿರುವುದನ್ನು ತೋರಿಸುತ್ತಾನೆ. ಮೈತ್ರನೆಂಬವನಿಗೆ ಅನೇಕ ಪತ್ನಿಯರಿರುತ್ತಾರೆ. ಅವರಲ್ಲಿ ಸತ್ಯವತೀ ಎಂಬವಳು ಮೈತ್ರನಿಗೆ ಅತಿಪ್ರಿಯ ಳಾಗಿರುತ್ತಾಳೆ. ಆಗ ಅವಳಲ್ಲಿರುವ ಸತ್ತ್ವಗುಣವು ಪ್ರಿಯನವಿಷಯದಲ್ಲಿ ಪ್ರಾದುರ್ಭಾವ ಹೊಂದುತ್ತದೆ. ಆದುದರಿಂದ ಅವಳಿಂದ ಪ್ರಿಯನಿಗೆ ಸುಖವಾಗುತ್ತದೆ. ಸಪತ್ನೀ ವಿಷಯದಲ್ಲಿ ಸತ್ಯವವತಿಯಲ್ಲಿರುವ ರಜೋಗುಣ ಪ್ರಾದುರ್ಭವಿಸುತ್ತದೆ. ಇದರಿಂದ ಅವರಿಗೆ ದುಃಖವಾಗುತ್ತದೆ. ಸತ್ಯವತಿಯನ್ನು ಹೊಂದದಿರುವ ಚೈತ್ರನಿಗೆ ತತ್ಪ್ರಾಪ್ತ್ಯ ನಿಚ್ಛೆಯಿಂದ ಮೋಹವಾಗುತ್ತದೆ. ಆಗ ಅವನ ವಿಷಯದಲ್ಲಿ ಸತ್ಯವತಿಯಲ್ಲಿರುವ ತಮೋ ಗುಣವು ಅಭಿವ್ಯಕ್ತವಾಗುತ್ತದೆ. ಹೀಗೆಯೇ ಘಟಾದಿಗಳನ್ನು ಹೊಂದಿದರೆ ಸುಖ ವುಂಟಾಗುತ್ತದೆ. ಇತರರಿಂದ ಅಪಹರಿಸಲ್ಪಟ್ಟರೆ ದುಃಖವನ್ನುಂಟು ಮಾಡುತ್ತದೆ. ಉದಾಸೀನನಿಗೆ ಉಪೇಕ್ಷಾವಿಷಯವಾಗುತ್ತದೆ. ಮೋಹವೇ ಉಪೇಕ್ಷಾವಿಷಯವೆಂದು ತಿಳಿಯಬೇಕು. ವೈಚಿತ್ಯ ಧಾತ್ವರ್ಥ—ವಿಗತಚಿತ್ತತ್ವ, ಅಂದರೆ ಚಿತ್ತರಾಹಿತ್ಯವೆಂದರ್ಥ. ಚಿತ್ತವ್ಯಾಪಾರವುಂಟಾಗದಿರುವುದೇ ಚಿತ್ತರಾಹಿತ್ಯವೆನ್ನಬೇಕು. ಸ್ವರೂಪದಿಂದ ಚಿತ್ತ ರಾಹಿತ್ಯವೆನ್ನುವುದು ಅಸಂಭವ. ಉಪೇಕ್ಷಾವಿಷಯವಾದ ವಸ್ತುವಿನಲ್ಲಿ ಚಿತ್ತವ್ಯಾಪಾರ ವುಂಟಾಗುವುದಿಲ್ಲ. ಹೀಗೆ ಸಕಲಪದಾರ್ಥಸಮುದಾಯವೂ ಸುಖದುಃಖಮೋಹಾತ್ಮಕ ವಾಗಿ ತ್ರಿಗುಣರೂಪಪ್ರಧಾನಕಾರಣಕವಾಗಿರುತ್ತದೆಂದು ತಿಳಿಯಬೇಕು.

ತಥಾ ಚ ಶ್ವೇತಾಶ್ವತರೋಪನಿಷದಿ ಶ್ರೂಯತೇ—

ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ
ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಜೋ ಹ್ಯೇಕೋ ಜುಷಮಾಣೋನುಶೇತೇ
ಜಹಾತ್ಯೇನಾಂ ಭುಕ್ತಭೋಗಾಮಜೋನ್ಯಃ || ಶ್ವೇ-೪|೫| ಇತಿ

ಅತ್ರ ಲೋಹಿತಶುಕ್ಲಕೃಷ್ಣಶಬ್ದಾ ರಂಜಕತ್ವಪ್ರಕಾಶಕತ್ವಾವರಕತ್ವಸಾಧರ್ಮ್ಯಾದ್ರಜಃ ಸತ್ವತಮೋಗುಣತ್ರಯ ಪ್ರತಿಪಾದನಪರಾಃ

ಅಜಾಶಬ್ದವು ಆಡು ಮುಂತಾದವುಗಳಲ್ಲಿ ರೂಢವಾದರೂ ಅಧ್ಯಾತ್ಮವಿದ್ಯೆಯಾದುದರಿಂದ ಇಲ್ಲಿ ಯೌಗಿಕಾರ್ಥವನ್ನೇ ಸ್ವೀಕರಿಸಬೇಕು. 'ನ ಜಾಯತೇ ಇತಿ ಅಜಾ'. ಮೂಲಪ್ರಕೃತಿಯೆಂದರ್ಥ. ಇದು ನಿತ್ಯವಾದುದರಿಂದ ಎಂದೂ ಹುಟ್ಟುವುದಿಲ್ಲ. ಅದು ಒಂದಾಗಿ ಲೋಹಿತಶುಕ್ಲಕೃಷ್ಣರೂಪವಾಗಿದೆ. ಇಲ್ಲಿಯೂ ಲೋಹಿತಾದಿಪದಗಳು ವರ್ಣವಾಚಕಗಳಾದರೂ ಲಕ್ಷಣೆಯಿಂದ ಗುಣತ್ರಯಬೋಧಕಗಳಾಗುತ್ತವೆ. ಲೋಹಿತ (ರಕ್ತ) ವರ್ಣವು ಪಟಾದಿಗಳನ್ನು ರಂಜಿಸುವಂತೆ ಪದಾರ್ಥದಲ್ಲಿರುವ ರಜೋಗುಣವು ನೋಡುವವನನ್ನು ರಂಜಿಸುತ್ತದೆ. ರಂಜಕತ್ವಸಾಧರ್ಮ್ಯದಿಂದ ಲೋಹಿತಶಬ್ದವು ರಜೋಗುಣವನ್ನು ಲಕ್ಷಣೆಯಿಂದ ತಿಳಿಸುತ್ತದೆ. ಹೀಗೆಯೇ ಬೆಳ್ಳಗಾದ ಸೂರ್ಯ ಮುಂತಾದಪದಾರ್ಥಗಳು ಪ್ರಕಾಶಕವಾಗಿರುತ್ತವೆ. ಸತ್ವಗುಣವೂ ಪ್ರಕಾಶಕವಾಗಿದೆ. ಪ್ರಕಾಶಕತ್ವಸಾಧರ್ಮ್ಯದಿಂದ ಶುಕ್ಲಶಬ್ದವು ಸತ್ವಗುಣವನ್ನು ತಿಳಿಸಿಕೊಡುತ್ತದೆ. ಕೃಷ್ಣವಾದ ಮೇಘಾದಿಗಳು ಸೂರ್ಯಾದಿಗಳಿಗೆ ಆವಾರಕವಾಗುತ್ತದೆ. ತಮೋಗುಣವೂ ಆವಾರಕವಾಗುವುದರಿಂದ ಆವಾರಕತ್ವಸಾಧರ್ಮ್ಯದಿಂದ ಕೃಷ್ಣಶಬ್ದದಿಂದ ತಮೋಗುಣವು ಲಕ್ಷಿತವಾಗುತ್ತದೆ. ಹೀಗೆ ಲೋಹಿತಾದಿಗಳಿಂದ ತ್ರಿಗುಣಾತ್ಮಕವಾದದ್ದು ಪ್ರಕೃತಿಯೆಂದು ಅರ್ಥವಾಗುತ್ತದೆ. ಈ ಪ್ರಕೃತಿಯು ತ್ರಿಗುಣಾತ್ಮಕವಾಗಿ ತ್ರಿಗುಣಗಳಿಂದ ಕೂಡಿದ ಅನೇಕ ಪ್ರಜೆ (ಪದಾರ್ಥ) ಗಳನ್ನು ಸೃಷ್ಟಿಸುತ್ತದೆ. ಸಕಲಪದಾರ್ಥಗಳೂ ತ್ರಿಗುಣಗಳುಳ್ಳವುಗಳೆಂದು ಹಿಂದೆ ತೋರಿಸಿದೆ. ಒಬ್ಬ ಅಜನು ಬದ್ಧನಾಗಿ ಪುರುಷರೂಪದಿಂದ ಪ್ರಕೃತಿಯನ್ನು ಸೇವಿಸುತ್ತಾ ಅದನ್ನೇ ಅನುಸರಿಸುತ್ತಾನೆ. ಪ್ರಕೃತಿಕಾರ್ಯಗಳಾದ ಬುದ್ಧಿಮನಸಾದಿಗಳನ್ನು ತಾನೇ ಎಂದು ತಿಳಿದು ಸಂಸಾರಿಯಾಗಿರುತ್ತಾನೆ. ಇನ್ನೊಬ್ಬ ಅಜನಾದ ಪುರುಷನು ವಿವೇಕದಿಂದ ಭುಕ್ತಭೋಗವುಳ್ಳ ಈ ಪ್ರಕೃತಿಯನ್ನು ಬಿಟ್ಟಿರುತ್ತಾನೆ. ಪ್ರಕೃತಿವಿವೇಕದಿಂದ ಮೋಕ್ಷ ಹೊಂದಿರುತ್ತಾನೆಂದರ್ಥ. ಹೀಗೆ ಪೂರ್ವಾರ್ಧದಲ್ಲಿ ಮೂಲಪ್ರಕೃತಿಯನ್ನೂ ಉತ್ತರಾರ್ಧದಲ್ಲಿ ಆತ್ಮಭೇಧವನ್ನೂ, ಪುರುಷನನ್ನೂ ಹೇಳುವುದರಿಂದ ಸಾಂಖ್ಯತತ್ತ್ವವು ಶ್ರುತ್ಯನುಗುಣವಾಗಿ ಹೇಳಿದೆಯೆಂದು ವ್ಯಕ್ತವಾಗುತ್ತದೆ.

ನನ್ವಚೇತನಂ ಪ್ರಧಾನಂ ಚೇತನಾನಧಿಷ್ಠಿತಂ ಮಹದಾದಿಕಾರ್ಯೇ ನ ವ್ಯಾಪ್ರಿಯತೇ | ಅತಃ ಕೇನಚಿಚ್ಚೇತನೇನಾಧಿಷ್ಠಾತ್ರಾ ಭವಿತವ್ಯಮ್ | ತಥಾ ಚ ಸರ್ವಾರ್ಥದರ್ಶೀ ಪರಮೇಶ್ವರಃ ಸ್ವೀಕರ್ತವ್ಯಃ ಸ್ಯಾದಿತಿಚೇತ್—ತದಸಂಗತಮ್ | ಅಚೇತನಸ್ಯಾಪಿ ಪ್ರಧಾನಸ್ಯ ಪ್ರಯೋಜನವಶೇನ ಪ್ರವೃತ್ತ್ಯುಪಪತ್ತೇಃ | ದೃಷ್ಟಂ ಚಾಚೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನಂ ಚೇತನಾನಧಿಷ್ಠಿತಂ ಪುರುಷಾರ್ಥಾಯ ಪ್ರವರ್ತಮಾನಂ, ಯಥಾ ವತ್ಸ ವಿವೃದ್ಧ್ಯರ್ಥಮಚೇತನಂ ಕ್ಷೀರಂ ಪ್ರವರ್ತತೇ ಯಥಾ ಚ ಜಲಮಚೇತನಂ ಲೋಕೋಪಕಾರಾಯ ಪ್ರವರ್ತತೇ ತಥಾ ಪ್ರಕೃತಿರಚೇತನಾಪಿ ಪುರುಷ ವಿಮೋಕ್ಷಾಯ ಪ್ರವರ್ತಿಷ್ಯತಿ । ತದುಕ್ತಂ—

ವತ್ಸವಿವೃದ್ಧಿನಿಮಿತ್ತಂ ಕ್ಷೀರಸ್ಯ ಯಥಾ ಪ್ರವೃತ್ತಿರಜ್ಞಸ್ಯ ॥
ಪುರುಷವಿಮೋಕ್ಷನಿಮಿತ್ತಂ ತಥಾ ಪ್ರವೃತ್ತಿಃ ಪ್ರಧಾನಸ್ಯ ॥ ಸಾಂ, ಕಾ ೫೭) ಇತಿ

ಅಚೇತನವಾದ ಪ್ರಧಾನವು ತಾನಾಗಿ ಸ್ವಾತಂತ್ರ್ಯದಿಂದ ಕಾರ್ಯೋತ್ಪಾದನಪ್ರವೃತ್ತಿ ಹೊಂದಲಾರದು ಎಂದು ಶಂಕಿಸುತ್ತಾನೆ. 'ನನು'—ಇತಿ. ಮೂಲಪ್ರಕೃತಿಯು ತಾನು ಅಚೇತನವಾದುದರಿಂದ ಯಾವುದೋ ಒಂದು ಚೇತನದಿಂದ ಪ್ರೇರಿತವಾಗಿ ಮಹದಾದಿ ಕಾರ್ಯೋತ್ಪತ್ತಿಗನುಗುಣವಾದ ವ್ಯಾಪಾರವನ್ನು ಹೊಂದಲು ಶಕ್ಯವಾಗಲಾರದು. ಲೋಕ ದಲ್ಲಿಯೂ ಹೀಗೆ ಎಲ್ಲಿಯೂ ಕಂಡಿಲ್ಲ. ಕುದುರೆ ಕಟ್ಟದೆ ರಥವು ತಾನಾಗಿ ಹೋಗಲು ಸಮರ್ಥವಾಗಲಾರದು. ಆದುದರಿಂದ ಪ್ರಧಾನಕ್ಕೆ ಪ್ರೇರಕನನ್ನಾಗಿ ಈಶ್ವರನನ್ನು ಅಂಗೀಕರಿಸಲೇ ಬೇಕು ಎಂದು ಪೂರ್ವಪಕ್ಷಿಯ ಮತ. 'ಅಚೇತನಸ್ಯ' ಎಂಬುದರಿಂದ ಖಂಡಿಸುತ್ತಾನೆ. ಅಜ್ಞವಾದ ಅಚೇತನವಾದ ಕ್ಷೀರವು ಚೇತನಾಧಿಷ್ಠಿತವಾಗದೇ ಕರುವಿನ ವೃದ್ಧಿಗೋಸ್ಕರ ಪ್ರವೃತ್ತಿಹೊಂದುವುದು ಲೋಕದಲ್ಲಿ ದೃಷ್ಟವಾಗಿದೆ. ಹಾಗೆ ಅಚೇತನ ಪ್ರಕೃತಿಯು ಚೇತನ ಪ್ರೇರಣೆ ಇಲ್ಲದೆ ಇತರ ಪ್ರಯೋಜನಕ್ಕೋಸ್ಕರ (ಪುರುಷಾರ್ಥ ಕ್ಕೋಸ್ಕರ) ವ್ಯಾಪಾರ ಹೊಂದುತ್ತದೆ. ಪುರುಷವಿಮೋಕ್ಷವೇ ಪ್ರಕೃತಿಯಪ್ರಯೋಜನ. ಅಚೇತನವಾದ ನೀರು ಲೋಕೋಪಕಾರಕ್ಕೋಸ್ಕರ ತಾನಾಗಿ ಹರಿಯುತ್ತದೆ. ಹಾಗೆ ಅಚೇತನವಾದ ಪ್ರಧಾನದ ಪ್ರವೃತ್ತಿಯನ್ನು ಕಲ್ಪಿಸಬೇಕು. ಪ್ರಧಾನದ ಪ್ರವೃತ್ತಿಯಿಂದ ಪುರುಷನ ಮೋಕ್ಷ ಹೇಗೆ ? ಎಂಬ ಶಂಕೆ ಬರಬಹುದು. ಇದೂ ಸರಿಯಲ್ಲ. ದುಃಖ ನಿವೃತ್ತಿಯೇ ಮೋಕ್ಷವಷ್ಟೆ. ಇದು ಪ್ರಕೃತಿಪುರುಷರ ವಿವೇಕಜ್ಞಾನದಿಂದ ಉಂಟಾಗು ತ್ತದೆ. ಪ್ರಕೃತಿಯು ಅತ್ಯಂತ ಸೂಕ್ಷ್ಮವಾದುದರಿಂದ ತಿಳಿಯಲಸಾಧ್ಯವಾದುದರಿಂದ ಪುರುಷನಿಗೆ ಅದರಿಂದ ವಿವೇಕ ತಿಳಿಯುವುದೂ ಕಷ್ಟವೇ. ಪ್ರಕೃತಿಯ ಪ್ರವೃತ್ತಿ ಯುಂಟಾದ ಮೇಲೆ ಈ ಭೌತಿಕ ಪ್ರಪಂಚವು ಉಂಟಾಗುವುದರಿಂದ ಅದು (ಸ್ಥೂಲವಾಗಿರು ವುದರಿಂದ) ಚೆನ್ನಾಗಿ ತಿಳಿಯುತ್ತದೆ. ಸ್ಥೂಲಾರುಂಧತೀನ್ಯಾಯದಂತೆ ತತ್ಕಾರಣಗಳಿಂದ ಭೇದ ತಿಳಿದು ಕೊನೆಗೆ ಪ್ರಕೃತಿಯಿಂದಲೂ ಭೇದ ತಿಳಿಯುತ್ತದೆ. ಹೀಗೆ ವಿವೇಕಜ್ಞಾನವು ಸುಗಮವಾಗುತ್ತದೆ. ಇದನ್ನೇ 'ವತ್ಸವಿವೃದ್ಧಿ'— ಕಾರಿಕೆಯಿಂದ ವಿವರಿಸಿರುತ್ತಾನೆ.

ಯಸ್ತು ಪರಮೇಶ್ವರಃ ಕರುಣಯಾ ಪ್ರವರ್ತಕ ಇತಿ ಪರಮೇಶ್ವರಾಸ್ತಿತ್ವವಾದಿನಾಂ ಡಿಂಡಿಮಃ ಸ ಗರ್ಭಸ್ರಾವೇಣ ಗತಃ । ವಿಕಲ್ಪಾನುಪಪತ್ತೇಃ । ಸಃ ಕಿಂ ಸೃಷ್ಟೇಃ ಪ್ರಾಕ್ ಪ್ರವರ್ತತೇ ಸೃಷ್ಟ್ಯುತ್ತರಕಾಲಂವಾ । ಆದ್ಯೇ ಶರೀರಾದ್ಯಭಾವೇನ ದುಃಖಾನುತ್ಪತ್ತೌ ಜೀವಾನಾಂ ದುಃಖಪ್ರಹಾಣೇಚ್ಛಾನುಪಪತ್ತಿಃ । ದ್ವಿತೀಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಸ್ಪರಾಶ್ರಯಪ್ರಸಂಗಃ । ಕರುಣಯಾ ಸೃಷ್ಟಿಃ ಸೃಷ್ಟ್ಯಾ ವಾ ಕಾರುಣ್ಯಮಿತಿ। ತಸ್ಮಾದಚೇತನಸ್ಯಾಪಿ ಚೇತನಾಧಿಷ್ಠಿತಸ್ಯ ಪ್ರಧಾನಸ್ಯ ಮಹದಾದಿರೂಪೇಣ ಪರಿಣಾಮಃ ಪುರುಷಾರ್ಥಪ್ರಯುಕ್ತಃ ಪ್ರಧಾನಪುರುಷಸಂಯೋಗನಿಮಿತ್ತಃ । ಯಥಾ ನಿರ್ವ್ಯಾಪಾರಸ್ಯಾಪ್ಯಯಸ್ಕಾಂತಸ್ಯ ಸಂನಿಧಾನೇನ ಲೋಹಸ್ಯ ವ್ಯಾಪಾರಸ್ತಥಾ ನಿರ್ವ್ಯಾಪಾರಸ್ಯ ಪುರುಷಸ್ಯ ಸಂನಿಧಾನೇನ ಪ್ರಧಾನವ್ಯಾಪಾರೋ ಯುಜ್ಯತೇ । ಪ್ರಕೃತಿಪುರುಷಸಂಬಂಧಶ್ಚ ಪಂಗ್ವಂಧವತ್ಪರಸ್ಪರಾಪೇಕ್ಷಾನಿಬಂಧನಃ ।

ಪರಮೇಶ್ವರಾಸ್ತಿತ್ವವಾದಿಗಳು ಅವನು ಕರುಣೆಯಿಂದ ಸೃಷ್ಟಿಗೆ ಪ್ರವರ್ತಕನೆಂದು ಹೇಳುತ್ತಾರೆ. ಇವರ ಸಿದ್ಧಾಂತವು ಗರ್ಭಸ್ರಾವದಂತೆ ವ್ಯರ್ಥವಾಗಿ ಅಳಸಿಹೋಗುತ್ತದೆ. ಇವನು ಸೃಷ್ಟಿಯ ಮೊದಲು ಪ್ರವರ್ತಕನೇ ? ಅಥವಾ ಸೃಷ್ಟಿಯಾದಮೇಲೆಯೇ ? ಯಾವ ವಿಕಲ್ಪವೂ ಸಂಭವಿಸುವುದಿಲ್ಲ. ಮೊದಲನೇಪಕ್ಷ ಒಪ್ಪುವುದಾದರೆ ದುಃಖವು ಶರೀರಸಾಪೇಕ್ಷವಾದುದರಿಂದ ಶರೀರವಿದ್ದರೇ ದುಃಖ, ಇಲ್ಲವಾದರೆ ದುಃಖವೂ ಇಲ್ಲವಾದುದರಿಂದ ದುಃಖತ್ಯಾಗೇಚ್ಛಾ ಹುಟ್ಟಲಾರದು. ಎರಡನೇ ಪಕ್ಷ ಅಂಗೀಕರಿಸುವುದಾದರೆ ಪರಸ್ಪರಾಶ್ರಯದೋಷ ಬರುತ್ತದೆ. ಕರುಣೆಯಿಂದ ಅಂದರೆ ಪರದುಃಖ ಹರಣೇಚ್ಛೆಯಿಂದ ಸೃಷ್ಟಿಯೂ, ಸೃಷ್ಟಿಯಿಂದ ಕಾರುಣ್ಯವನ್ನೂ ಹೇಳಬೇಕಾಗುತ್ತದೆ. ಆದುದರಿಂದ ಅಚೇತನವಾದರೂ ಚೇತನಾನಧಿಷ್ಠಿತವಾದ ಪ್ರಧಾನದ, ಮಹದಾದಿರೂಪದಿಂದ ಪರಿಣಾಮವು ಪುರುಷಾರ್ಥಕ್ಕೆ ಉಪಯೋಗಿಯಾಗಿ ಪ್ರಧಾನಪುರುಷಸಂಯೋಗನಿಮಿತ್ತವಾಗಿ ಉಂಟಾಗುತ್ತದೆ. ವ್ಯಾಪಾರಶೂನ್ಯವಾದ ಅಯಸ್ಕಾಂತದ (ಸೂಜಿಗಲ್ಲು) ಸಂನಿಧಾನದಿಂದ ಅಚೇತನವಾದ ಕಬ್ಬಿಣದಲ್ಲಿ ವ್ಯಾಪಾರವುಂಟಾಗುವಂತೆ, ನಿರ್ವ್ಯಾಪಾರನಾದ ಪುರುಷನಸಂನಿಧಾನದಿಂದ ಪ್ರಧಾನದವ್ಯಾಪಾರವು ಸಂಗತವಾಗುತ್ತದೆ. ಪಂಗ್ವಂಧ ನ್ಯಾಯದಂತೆ ಈ ಪ್ರಕೃತಿಪುರುಷರಸಂಬಂಧವು ಪರಸ್ಪರಾಪೇಕ್ಷಾ ನಿಯಮದಿಂದ ಸಂಗತವಾಗುತ್ತದೆ. ಅದನ್ನೇ ಮುಂದೆ ವಿವರಿಸುತ್ತಾನೆ.

ಪ್ರಕೃತಿರ್ಹಿ ಭೋಗ್ಯತಯಾ ಭೋಕ್ತಾರಂ ಪುರುಷಮಪೇಕ್ಷತೇ । ಪುರುಷೋಽಪಿ ಭೇದಾಗ್ರಹಾತ್ ಬುದ್ಧಿಚ್ಛಾಯಾಪತ್ತ್ಯಾ ತದ್ಗತಂ ದುಃಖತ್ರಯಂ ವಾರಯಮಾಣಃ ಕೈವಲ್ಯಮಪೇಕ್ಷತೇ । ತತ್ ಪ್ರಕೃತಿಪುರುಷವಿವೇಕನಿಬಂಧನಂ ನ ಚ ತದಂತರೇಣ ಯುಕ್ತಮಿತಿ ಕೈವಲ್ಯಾರ್ಥಂ ಪುರುಷಃ ಪ್ರಧಾನಮಪೇಕ್ಷತೇ । ಯಥಾ ಖಲು ಕೌಚಿತ್ಪಂಗ್ವಂಧೌ ಪಥಿ ಸಾರ್ಥೇನ ಗಚ್ಛಂತೌ ದೈವಕೃತಾದುಪಪ್ಲವಾತ್ಪರಿತ್ಯಕ್ತಸಾರ್ಥೌ ಮಂದಮಂದಮಿತಸ್ತತಃ ಪರಿಭ್ರಮಂತೌ ಭಯಾಕುಲೌ ದೈವವಶಾತ್ಸಂಯೋಗಮುಪಗಚ್ಛೇತಾಮ್ । ತತ್ರ ಚಾಂಧೇನ ಪಂಗುಃ ಸ್ಕಂಧಮಾರೋಪಿತಃ । ತತಃ ಪಂಗುದರ್ಶಿತೇನ ಮಾರ್ಗೇಣಾಂಧಃ ಸಮೀಹಿತಂ ಸ್ಥಾನಂ ಪ್ರಾಪ್ನೋತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂಗುರುಪಿ ಸ್ಕಂಧಾಧಿರೂಢಃ । ತಥಾ ಪರಸ್ಪರಾಪೇಕ್ಷ ಪ್ರಧಾನಪುರುಷನಿಬಂಧನಃ ಸರ್ಗಃ । ಯಥೋಕ್ತಂ—

ಪುರುಷಸ್ಯ ದರ್ಶನಾರ್ಥಂ ಕೈವಲ್ಯಾರ್ಥಂ ತಥಾ ಪ್ರಧಾನಸ್ಯ ॥
ಪಂಗ್ವಂಧವದುಭಯೋರಪಿ ಸಂಬಂಧಸ್ತತ್ಕೃತಃ ಸರ್ಗಃ ॥

(ಸಾಂ-ಕಾ-೨೧) ಇತಿ ।

ಭೋಗ್ಯವು ಭೋಕ್ತೃವನ್ನಪೇಕ್ಷಿಸುತ್ತದೆ. ಪ್ರಕೃತಿ ಭೋಗ್ಯವಾದುದರಿಂದ ಭೋಕ್ತೃವಾದ ಪುರುಷನನ್ನಪೇಕ್ಷಿಸುತ್ತದೆ. ಪುರುಷನೂ ಕೂಡಾ ಕೈವಲ್ಯವನ್ನು ಅಪೇಕ್ಷಿಸುತ್ತಾನೆ. ಯದ್ಯಪಿ ಅವನಲ್ಲಿ ಪ್ರಕೃತಿ ಮತ್ತು ಅದರ ಪರಿಣಾಮರೂಪವಾದ ಬುದ್ಧಿಯ ಭೇದವಿರುತ್ತದೆ. ಅಜ್ಞಾನದಿಂದ ಭೇದ ತಿಳಿಯದೆ ತಾನೇ ಬುದ್ಧಿ ಸ್ವರೂಪ ನೆಂದು ತಿಳಿದು ಬುದ್ಧಿಗತವಾದ ಸುಖಾದಿಗಳು ತನಗೆ ಎಂದು ಅದನ್ನು ಹೋಗಲಾಡಿಸಿ ಕೊಳ್ಳಲು (ಕೈವಲ್ಯ) ಮೋಕ್ಷವನ್ನು ಬಯಸುತ್ತಾನೆ. ಈ ಮೋಕ್ಷವಾದರೋ ಪ್ರಕೃತಿ ಪುರುಷರ ಭೇದಜ್ಞಾನ ಮೂಲಕವಾದುದರಿಂದ ಭೇದಜ್ಞಾನ ಮೊದಲು ತಿಳಿಯದೇ ಸಂಗತವಾಗುವುದಿಲ್ಲ. ಮೋಕ್ಷಸಾಧನವಾದ ಈ ಭೇದಜ್ಞಾನವು ಪುರುಷನಿಗೆ ಬರಬೇಕಾ ದರೆ ಭೇದಕ್ಕೆ ಪ್ರತಿಯೋಗಿಯಾದ ಪ್ರಕೃತ್ಯಪೇಕ್ಷೆ ಬೇಕಾಗುತ್ತದೆ. ಇದಕ್ಕೆ ದೃಷ್ಟಾಂತ ತೋರಿಸುತ್ತಾನೆ. 'ಯಥಾ'—ಇತಿ. ಯಾರೋ ಇಬ್ಬರು ಕುಂಟಕುರುಡರು ದಾರಿ ಯಲ್ಲಿ ಜನಸಮುದಾಯದೊಡನೆ ಹೋಗುತ್ತಿರುವಾಗ ಅದೃಷ್ಟದಿಂದ ಚೋರಾದಿಕೃತ ವಾದ ಉಪದ್ರವದಿಂದ ಸಮುದಾಯದಿಂದ ದೂರವಾಗಿ ಮೆಲ್ಲನೆ ಅಲ್ಲಲ್ಲಿ ತಿರುಗುತ್ತಾ ಭಯಾಕ್ರಾಂತರಾಗಿ ದೈವವಶಾತ್ ಇಬ್ಬರು ಒಟ್ಟಿಗೆ ಸೇರುತ್ತಾರೆ. ಆಗ ಕುರುಡನು ಕುಂಟನನ್ನು ತನ್ನ ಹೆಗಲ ಮೇಲೆ ಏರಿಸಿಕೊಳ್ಳುತ್ತಾನೆ. ಆಮೇಲೆ ಪಂಗು ತೋರಿಸಿದ ಮಾರ್ಗದಿಂದ ಕುರುಡನೂ ಕುಂಟನೂ ತಮ್ಮ ಇಷ್ಟವಾದ ಸ್ಥಾನವನ್ನು ಹೊಂದುತ್ತಾರೆ. ಹೀಗೆಯೇ ಪ್ರಕೃತಿ ಪುರುಷರ ಪರಸ್ಪರಾಪೇಕ್ಷೆಯಿಂದ ಸೃಷ್ಟಿಮೋಕ್ಷಗಳನ್ನು ತಿಳಿಯ ಬೇಕು. ಇದನ್ನೇ ಕಾರಿಕೆಯಲ್ಲಿ ವಿವರಿಸಿರುತ್ತಾರೆ. 'ಪುರುಷಸ್ಯ'—ಇತಿ. ಪ್ರಧಾನವು ತನ್ನ ಸೃಷ್ಟಿ ನೋಡಲೆಂದು ಪುರುಷನನ್ನೂ, ಪುರುಷನು ಮೋಕ್ಷವಾಗಲೆಂದು ಪ್ರಧಾನ ವನ್ನೂ ಅಪೇಕ್ಷಿಸುವುದರಿಂದ ಅವರಿಬ್ಬರಿಗೆ ಸಂಯೋಗವಾಗುತ್ತದೆ. ಪಂಗುವಿಗೆ ದೃಕ್ ಶಕ್ತಿ ಇದ್ದರೂ ಗತಿ ಸಾಮರ್ಥ್ಯವಿಲ್ಲ. ಅಂಧನಿಗೆ ಗತಿಶಕ್ತಿ ಇದ್ದರೂ ದೃಕ್ ಶಕ್ತಿ ಇರುವುದಿಲ್ಲ. ಹೀಗೆ ಇವರ ಸಂಯೋಗದಿಂದ ಸೃಷ್ಟಿಯಾಗುತ್ತದೆ. ಪುರುಷನು ಕ್ರಿಯಾ ಶಕ್ತಿಶೂನ್ಯನಾದುದರಿಂದ ಪಂಗುಸಮಾನನೂ, ಪ್ರಧಾನವು ಅಚೇತನವಾದುದರಿಂದ ಅಂಧ ಸಮಾನವಾಗುತ್ತದೆ. ಪಂಗು ಸಂಬಂಧದಿಂದ ಅಂಧನು ಮಾರ್ಗದಲ್ಲಿ ಹೋಗುವಂತೆ ಪುರುಷ ಸಂಬಂಧದಿಂದ ಪ್ರಕೃತಿಯು ಸೃಷ್ಟಿಯಲ್ಲಿ ಪ್ರವರ್ತಿಸುತ್ತದೆ. ಅಂಧ ಸಂಬಂಧ ದಿಂದ ಪಂಗುವು ತನ್ನ ಇಷ್ಟವಾದ ಸ್ಥಾನ ಹೊಂದುವಂತೆ ಪ್ರಧಾನ ಸಂಬಂಧದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುರುಷನು ವಿವೇಕಜ್ಞಾನ ಮೂಲಕವಾಗಿ ಮೋಕ್ಷವನ್ನು ಹೊಂದುತ್ತಾನೆ ಎಂದು ತಾತ್ಪರ್ಯ.

ನನು ಪುರುಷಾರ್ಥ ನಿಬಂಧನಾ ಭವತು ಪ್ರಕೃತೇಃ ಪ್ರವೃತ್ತಿಃ । ನಿವೃತ್ತಿಸ್ತು ಕಥಮುಪಪದ್ಯತೇ ಇತಿ ಚೇತ್—ಉಚ್ಯತೇ । ಯಥಾ ಭರ್ತ್ರಾ ದೃಷ್ಟದೋಷಾ ಸ್ವೈರಿಣೀ ಭರ್ತಾರಂ ಪುನರ್ನೋಪೈತಿ ಯಥಾ ವಾ ಕೃತಪ್ರಯೋಜನಾ ನರ್ತಕೀ ನಿವರ್ತತೇ ತಥಾ ಪ್ರಕೃತಿರಪಿ । ಯಥೋಕ್ತಂ—

ರಂಗಸ್ಯ ದರ್ಶಯಿತ್ವಾ ನಿವರ್ತತೇ ನರ್ತಕೀ ಯಥಾ ನೃತ್ಯಾತ್ ।
ಪುರುಷಸ್ಯ ತಥಾತ್ಮಾನಂ ಪ್ರಕಾಶ್ಯ ವಿನಿವರ್ತತೇ ಪ್ರಕೃತಿಃ ॥

(ಸಾಂ–ಕಾ–೫೭) ಇತಿ ॥

ಏತಚ್ಚ ನಿರೀಶ್ವರ ಸಾಂಖ್ಯಶಾಸ್ತ್ರಪ್ರವರ್ತಕ ಕಪಿಲಾದಿಮತಾನುಸಾರಿಣಾಂ ಮತಮುಪನ್ಯಸ್ತಮ್ ॥

ಇತಿ ಶ್ರೀಮತ್ಸಾಯಣ ಮಾಧವೀಯೇ ಸರ್ವದರ್ಶನ ಸಂಗ್ರಹೇ
ಸಾಂಖ್ಯದರ್ಶನಮ್.

ಪುರುಷಾರ್ಥಕ್ಕೋಸ್ಕರ ಪ್ರಕೃತಿಯ ಪ್ರವೃತ್ತಿಯುಂಟಾಗಲಿ. ಆದರೆ ನಿವೃತ್ತಿ ಹೇಗೆ ಸಮಂಜಸವಾಗುತ್ತದೆಯೆಂದರೆ ದೃಷ್ಟಾಂತದಿಂದ ಹೊಂದಿಸುತ್ತಾನೆ. ಗಂಡನಿಂದ ಕಂಡು ಹಿಡಿದ ದೋಷವುಳ್ಳ ಸ್ವೇಚ್ಛಾ ಪ್ರವೃತ್ತಿಯ ವ್ಯಭಿಚಾರಿಣಿಯಾದ ಹೆಂಡತಿಯು ಹೇಗೆ ಗಂಡನನ್ನು ಬಿಟ್ಟು ಹೋಗುವಳೋ, ನರ್ತಕಿಯು ತಾನು ಪಡೆಯಬೇಕಾದ ಫಲ ಹೊಂದಿದ ಮೇಲೆ ರಂಗಸ್ಥಳದಿಂದ ನಿವೃತ್ತಳಾಗುವಳೋ ಅದರಂತೆ ಪ್ರಕೃತಿಯು ನಿವೃತ್ತವಾಗುವುದೆಂದು ತಿಳಿಯಬೇಕು. ಕಾರಿಕೆಯಲ್ಲಿ ಹೀಗೆಯೇ ವಿವೃತವಾಗಿದೆ. 'ರಂಗಸ್ಯ'—ಇತಿ. ರಂಗಪದದಿಂದ ಅಲ್ಲಿರುವ ಜನರನ್ನು ತೆಗೆದುಕೊಳ್ಳಬೇಕು. ನರ್ತಕಿಯು ಪ್ರೇಕ್ಷಕ ಜನರಿಗೆ ನೃತ್ಯಮಾಡಿ ತೋರಿಸಿ ನೃತ್ಯದಿಂದ ನಿವೃತ್ತಿ ಹೊಂದಿದಂತೆ ಪ್ರಕೃತಿಯು ತನ್ನ ಸ್ವರೂಪವನ್ನು ಮಹತತ್ತ್ವಾದಿ ಪರಿಣಾಮದ ಮೂಲಕ ಶಬ್ದಾದಿ ವಿಷಯ ರೂಪದಿಂದ ಪುರುಷನಿಗೆ ಪ್ರಕಾಶಪಡಿಸಿ ಆಮೇಲೆ ತಾನು ನಿವೃತ್ತವಾಗುತ್ತದೆಂದರ್ಥ.

ಸರ್ವದರ್ಶನ ಸಂಗ್ರಹದಲ್ಲಿ ಕನ್ನಡವ್ಯಾಖ್ಯಾನದಲ್ಲಿ
ಸಾಂಖ್ಯದರ್ಶನ ಮುಗಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಪಾತಂಜಲ(ಯೋಗ)ದರ್ಶನಮ್ ॥ ೧೫ ॥

ಸಾಂಪ್ರತಂ ಸೇಶ್ವರಸಾಂಖ್ಯಪ್ರವರ್ತಕ ಪತಂಜಲಿಪ್ರಭೃತಿ ಮುನಿಮತ ಮನುವರ್ತಮಾನಾನಾಂ ಮತಮುಪನ್ಯಸ್ಯತೇ—

ತತ್ರ ಸಾಂಖ್ಯಪ್ರವಚನಾಪರನಾಮಧೇಯಂ ಯೋಗಶಾಸ್ತ್ರಂ ಪತಂಜಲಿಪ್ರಣೀತಂ ಪಾದಚತುಷ್ಟಯಾತ್ಮಕಮ್ । ತತ್ರ ಪ್ರಥಮೇ ಪಾದೇ- ಅಥಯೋಗಾನುಶಾಸನಮ್' (ಪಾತ-ಯೋ-ಸೂ ೧-೧) ಇತಿ ಯೋಗಶಾಸ್ತ್ರಾರಂಭಪ್ರತಿಜ್ಞಾನಂ ವಿಧಾಯ' 'ಯೋಗಶ್ಚಿತ್ತವೃತ್ತಿನಿರೋಧಃ' (ಸೂ-೧-೨) ಇತ್ಯಾದಿನಾ ಯೋಗಲಕ್ಷಣಮಭಿಧಾಯ ಸಮಾಧಿಂ ಸಪ್ರಪಂಚಂ ನಿರದಿಕ್ಷದ್ಭಗವಾನ್ ಪತಂಜಲಿಃ ॥

'ಸಾಂಪ್ರತಂ—' ಇತಿ. ಜೀವಾತಿರಿಕ್ತನಾದ ಪರಮೇಶ್ವರನು ಇದ್ದಾನೆಯೆಂದು ಯಾವ ಸಾಂಖ್ಯರು ತಿಳಿಯುತ್ತಾರೆಯೋ ಆ ಮತವನ್ನು ಪ್ರಕಾಶಪಡಿಸಿದವರು ಪತಂಜಲಿ ಮುಂತಾದ ಋಷಿಗಳು. ಅವರ ಮತವನ್ನು ಈಗ ಹೇಳುತ್ತೇವೆ. ಪ್ರಭೃತಿಪದದಿಂದ ಹಿರಣ್ಯಗರ್ಭಯಾಜ್ಞ್ಯವಲ್ಕ್ಯ ಮುಂತಾದವರನ್ನು ತೆಗೆದುಕೊಳ್ಳಬೇಕು. ಇವರು ಪತಂಜಲಿಗಿಂತ ಪ್ರಾಚೀನರಾದರೂ ಇವರಿಂದ ಯೋಗಶಾಸ್ತ್ರವು ಹಿಂದೆಯೇ ಹೇಳಲ್ಪಟ್ಟದ್ದರೂ, ಜಿಜ್ಞಾಸುಗಳಿಗೆ ಸುಲಭವಾಗಿ ತಿಳಿಯುವಂತೆ ಪತಂಜಲಿಮುನಿಗಳು ಸಮಾಧಿ, ಸಾಧನ, ವಿಭೂತಿ, ಕೈವಲ್ಯವೆಂಬ ಅವಾಂತರಭೇದದಿಂದ ವಿಷಯವನ್ನು ವಿವೇಚಿಸಿ ಶಾಸ್ತ್ರವನ್ನು ಪ್ರತಿಪಾದಿಸಿರುವುದರಿಂದ ಈ ಯೋಗಶಾಸ್ತ್ರಕ್ಕೆ' ಪಾತಂಜಲದರ್ಶನ' ಎಂದು ಪ್ರಸಿದ್ಧಿ ಬಂದಿದೆ.

ಇದಕ್ಕೆ 'ಸಾಂಖ್ಯಪ್ರವಚನ' ಎಂಬ ಹೆಸರೂ ಇದೆ. 'ಯೋಗಶಾಸ್ತ್ರ' ಎಂದೂ ಒಂದು ಹೆಸರು. ಇದಕ್ಕೇ ಎರಡನೆಯ ಹೆಸರು ಸಾಂಖ್ಯಪ್ರವಚನವೆಂದು ತಿಳಿಯಬೇಕು. ಪತಂಜಲಿಗಳು ಈ ಶಾಸ್ತ್ರದ ಸೂತ್ರಗಳನ್ನು ರಚಿಸಿರುತ್ತಾರೆ. ಇಲ್ಲಿ ನಾಲ್ಕು ಅಧ್ಯಾಯಗಳು ಇವೆ. ೧) ಸಮಾಧಿಪಾದ. ೨) ಸಾಧನಪಾದ. ೩) ವಿಭೂತಿಪಾದ. ೪) ಕೈವಲ್ಯಪಾದ. 'ಅಥಯೋ'—ಎಂಬಲ್ಲಿ ಅಥಶಬ್ದವು ಸ್ವರೂಪದಿಂದ ಮಂಗಲಬೋಧಕವಾಗಿದೆ. ಅದನ್ನು ಉಚ್ಚರಿಸಿದರೇ ಮಂಗಲವಾಗುತ್ತದೆ. ಇಲ್ಲಿ ಅಧಿಕಾರಾರ್ಥಕವೆಂದು ತಿಳಿಯಬೇಕು. ಅಧಿಕಾರವೆಂದರೆ ಆರಂಭ. ಯೋಗಃ ಅನುಶಿಷ್ಯತೇ — ವಿವಚ್ಯಬೋಧ್ಯತೇ ಇತಿ ಯೋಗಾನುಶಾಸಮ್. (ಶಾಸ್ತ್ರಂ) ಹಿರಣ್ಯಗರ್ಭಾದಿಗಳಿಂದ ಉಪದಿಷ್ಟವಾದ ಯೋಗವೇ ಇಲ್ಲಿ ವಿವೇಚಿಸಿ ತಿಳಿಸಲ್ಪಡುತ್ತದೆಯೆಂದರ್ಥ. ಯೋಗಶಾಸ್ತ್ರವು ಆರಬ್ಧವಾಗಿದೆಯೆಂದು ಸೂತ್ರಾರ್ಥ. 'ಯೋಗ'—ಇತಿ. ಚಿತ್ತದ ವೃತ್ತಿಯೆಂದರೆ ಪ್ರಮಾಣವಿಪರ್ಯಯಾದಿಗಳ, ನಿರೋಧವೆಂದರೆ ನಿವರ್ತನ. ಇದೇ ಯೋಗ. ಇದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿತ್ತನಿಗ್ರಹರೂಪವಾದ ಅತೀಂದ್ರಿಯವಾದ ಯತ್ನವಿಶೇಷವಾಗುತ್ತದೆ. ಸಮ್ಯಗಾಧಾನಂ ಚಿತ್ತಾವಸ್ಥಾನಂ ಸಮಾಧಿಃ—ಯೋಗವಾಸಿಷ್ಠದಲ್ಲಿ ಇದರ ಲಕ್ಷಣ ಹೀಗೆ ಹೇಳಿರುತ್ತಾರೆ. "ಇಮಂ ಗುಣಸಮಾಹಾರಮನಾತ್ಮತ್ವೇನ ಪಶ್ಯತಃ । ಅಂತಃ ಶೀತಲತಾ ಯಸ್ಯ ಸಮಾಧಿರಿತಿ ಕಥ್ಯತೇ" ॥ ಸಂಪ್ರಜ್ಞಾತ, ಅಸಂಪ್ರಜ್ಞಾತವೆಂದು ಇದು ೨ವಿಧ. ಸಮ್ಯಕ್ ಸಂಶಯವಿಪರ್ಯಯರಾಹಿತ್ಯೇನ ಪ್ರಜ್ಞಾಯತೇ—ಪ್ರಕರ್ಷೇಣ ಜ್ಞಾಯತೇ ಧ್ಯೇಯ ಸ್ವರೂಪಂ ಯತ್ರ ಸ ಸಂಪ್ರಜ್ಞಾತಃ. ಸಂಶಯಾದಿಗಳು ಇಲ್ಲದಂತೆ ಧ್ಯೇಯಸ್ವರೂಪ ವನ್ನು ತಿಳಿಯುವುದು. ಅಸಂಪ್ರಜ್ಞಾತಸಮಾಧಿಯಲ್ಲಿ ಧ್ಯೇಯಧ್ಯಾನಗಳಿಗೆ ಭೇದ ಜ್ಞಾನವೂ ಇರುವುದಿಲ್ಲ. ಏಕೆಂದರೆ ಧ್ಯೇಯಾಕಾರವಾದ ವೃತ್ತಿಯನ್ನು ಅಲ್ಲಿ ನಿರೋಧಿಸಿರುತ್ತಾರೆ. ನಿರದಿಕ್ಷತ್—ನಿರ್ದೇಶಿಸಿರುತ್ತಾನೆಂದರ್ಥ.

ದ್ವಿತೀಯೇ ತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ಕ್ರಿಯಾಯೋಗಃ (ಪಾ–ಯೋ–ಸೂ ೨–೧) ಇತ್ಯಾದಿನಾ ವ್ಯುತ್ಥಿತಚಿತ್ತಸ್ಯ ಕ್ರಿಯಾಯೋಗಂ ಯಮಾದೀನಿ ಚ ಪಂಚ ಬಹಿರಂಗಾನಿ ಸಾಧನಾನಿ । ತೃತೀಯೇ ದೇಶಬಂಧಶ್ಚಿತ್ತಸ್ಯ ಧಾರಣಾ (ಪಾ–ಯೋವಸೂ–೩।೧) ಇತ್ಯಾದಿನಾ ಧಾರಣಾಧ್ಯಾನಸಮಾಧಿತ್ರಯಮಂತರಂಗಂ ಸಂಯಮಪದವಾಚ್ಯಂ ತದವಾಂತರ ಫಲಂ ವಿಭೂತಿಜಾತಮ್ । ಚತುರ್ಥೇ ಜನ್ಮೌಷಧಿಮಂತ್ರತಪಃಸಮಾಧಿಜಾಃಸಿದ್ಧಯಃ(ಪಾ-ಯೋ–ಸೂ-೪–೧)ಇತ್ಯಾದಿನಾ ಸಿದ್ಧಿಪಂಚಕಪ್ರಪಂಚನಪುರಃಸ್ಸರಂ ಪರಮಂ ಪ್ರಯೋಜನಂ ಕೈವಲ್ಯಮ್ । ಪ್ರಧಾನಾದೀನಿ ಪಂಚವಿಂಶತಿತತ್ವಾನಿ ಪ್ರಾಚೀನಾನ್ಯೇವ ಸಂಮತಾನಿ । ಷಡ್ವಿಂಶಸ್ತು ಪರಮೇಶ್ವರಃಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷಃ ಸ್ವೇಚ್ಛಯಾ ನಿರ್ಮಾಣಕಾಯಮಧಿಷ್ಠಾಯ ಲೌಕಿಕ ವೈದಿಕಸಂಪ್ರದಾಯ ಪ್ರವರ್ತಕಃ ಸಂಸಾರಾಂಗಾರೇತಪ್ಯಮಾನಾನಾಂ ಪ್ರಾಣಭೃತಾಮನುಗ್ರಾಹಕಶ್ಚ ॥

ಚಿತ್ತಪ್ರಸಾದಕ್ಕೆ ಅನುಕೂಲವಾದ ಶಾಸ್ತ್ರೋಕ್ತವಾದ ಉಪವಾಸಾದಿಗಳಿಗೆ ತಪಸ್ಸೆಂದು ಹೆಸರು. ಪ್ರಣವಾದಿಜಪ ಅಥವಾ ಮೋಕ್ಷಶಾಸ್ತ್ರಾಧ್ಯಯನಕ್ಕೆ ಸ್ವಾಧ್ಯಾಯವೆಂದು ಹೆಸರು. ಪರಮೇಶ್ವರಚಿಂತನ, ಅವನಲ್ಲಿ ಸರ್ವಕರ್ಮಾರ್ಪಣವೇ ಈಶ್ವರ ಪ್ರಣಿಧಾನ. ಇವು ಕ್ರಿಯಾರೂಪವಾದ ಯೋಗವಾಗುತ್ತವೆ. ಯೋಗಸಾಧನಗಳಾದರೂ ಯೋಗವೆಂದು ಹೇಳಿದೆ. ವ್ಯುತ್ಥಿತಚಿತ್ತನಿಗೆ ಈ ಕ್ರಿಯಾಯೋಗ ಹೇಳಿದೆ. ಸಮಾಹಿತ ಚಿತ್ತನಿಗೆ ಇದರ ಆವಶ್ಯಕತೆ ಇಲ್ಲ. ಈ ಕ್ರಿಯಾಯೋಗವನ್ನೂ ಯಮಾದಿ ಪಂಚ ಬಹಿರಂಗ ಸಾಧನಗಳನ್ನೂ ಎರಡನೆಯ ಸಾಧನ ಪಾದದಲ್ಲಿ ತೋರಿಸುತ್ತಾನೆ. ಯಮ, ನಿಯಮ, ಆಸನ, ಪ್ರಾಣಯಾಮ, ಪ್ರತ್ಯಾಹಾರಗಳೇ ಯಮಾದಿ ಪಂಚಕಗಳು. ಅಹಿಂಸಾ, ಸತ್ಯಂ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹವೆಂದು ಯಮ ಐದು ರೀತಿಯಾಗಿವೆ. (ಪ್ರಾಣವಿಯೋಗಾನುಕೂಲವ್ಯಾಪಾರಕ್ಕೆ ಹಿಂಸಾ ಎಂದು ಹೆಸರು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರ ಅಭಾವವೇ ಅಹಿಂಸಾ. ಯಥಾರ್ಥವಾದ ಮಾತು ಮತ್ತು ಮನಸ್ಸಿಗೆ ಸತ್ಯವೆಂದು ಹೆಸರು. (ಮಾತಿನ ಯಾಥಾರ್ಥ್ಯ.) ಪರದ್ರವ್ಯವನ್ನು ಅಪಹರಿಸುವುದು ಸ್ತೇಯ. ಅದರ ಅಭಾವ ಅಸ್ತೇಯ. ಉಪಸ್ಥ ಮತ್ತು ಇಂದ್ರಿಯಗಳ ನಿಯಮನವೇ ಬ್ರಹ್ಮಚರ್ಯೆ. ಭೋಗಸಾಧನವಸ್ತುಗಳನ್ನು ಪರಿಗ್ರಹಿಸದಿರುವುದು ಅಪರಿಗ್ರಹ, ಶೌಚಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನವೆಂಬ ಐದು ನಿಯಮಗಳು. ಶೌಚವೆಂದರೆ ಶುದ್ಧಿ. ಇದು ಶಾರೀರ, ಮಾನಸವೆಂದು ಎರಡು ವಿಧ. ಬಾಹ್ಯ ಆಂತರವೆಂದು ಶಾರೀರ ಎರಡು ವಿಧ. ಮೃಜ್ಜಲಾದಿಗಳಿಂದ ಶರೀರವನ್ನು ತೊಳೆಯುವುದು ಬಾಹ್ಯ. ಪಂಚ ಗವ್ಯಾದಿಭಕ್ಷಣದಿಂದ ಆಂತರಶುದ್ಧಿಯಾಗುತ್ತದೆ. ಸಮ್ಯಗ್‌ಭಾವನೆಯಿಂದ ರಾಗ ದ್ವೇಷಾದಿ ಮನೋಮಲಕ್ಷಾಲನಕ್ಕೆ ಮಾನಸಶೌಚವೆಂದು ಹೆಸರು. ತೃಷ್ಣಾಕ್ಷಯವೇ ಸಂತೋಷ. ತಪಸ್ಸು ಹಿಂದೆ ಹೇಳಿದೆ. ಸ್ಥಿರಸುಖವೇ ಆಸನ. ಆಸ್ಯತೇ ಅನೇನ ಇತಿ ಆಸನಮ್. ಇವು ಸ್ಥಿರವಾಗಿಯೂ ನಿಶ್ಚಲವಾಗಿಯೂ ಸುಖಕರವಾಗಿಯೂ ಇರುವ ಪದ್ಮಾಸನಾದಿ ಭೇದಗಳಿಂದ ಹಸ್ತಪಾದಾದಿ ಅವಯವಾವಸ್ಥಾನವಿಶೇಷರೂಪವಾಗಿರುತ್ತವೆ. ಆಸನಸ್ಥೈರ್ಯದಿಂದ ಶೀತೋಷ್ಣಾದಿಪೀಡೆಗಳು ಉಂಟಾಗುವುದಿಲ್ಲ. ಶ್ವಾಸಪ್ರಶ್ವಾಸಕಾ ಕಾಲದಲ್ಲಿ ವಾಯುವಿನ ಸ್ವಾಭಾವಿಕಗತಿಯನ್ನು ತಡೆಯುವುದಕ್ಕೆ ಪ್ರಾಣಾಯಾಮವೆಂದು ಹೆಸರು. ನಾಸಾಪುಟದಿಂದ ವಾಯುವಿನ ಅಂತಃಪ್ರವೇಶವು ಶ್ವಾಸ. ಹೊರಗೆ ಹೋಗು ವುದು ನಿಃಶ್ವಾಸ (ಪ್ರಶ್ವಾಸ). ಪ್ರಾಣಾಯಾಮದಿಂದ ಸ್ಥಿರವಾದ ಮನಸ್ಸು ಹೊರಗಿನ ಶಬ್ದಾದಿವಿಷಯಗಳೊಡನೆ ಸಂಬಂಧ ಹೊಂದುವುದಿಲ್ಲ. ಇದರಿಂದ ಇಂದ್ರಿಯಗಳೂ ವಿಷಯಗಳೊಡನೆ ಹೋಗುವುದಿಲ್ಲ. ಅವು ಆವಾಗ ಕೇವಲ ಚಿತ್ತಸ್ವರೂಪವನ್ನೇ ಹೊಂದಿರುತ್ತವೆ. ಈ ಸ್ಥಿತಿಗೆ ಪ್ರತ್ಯಾಹಾರವೆಂದು ಹೆಸರು. ಎಂಟು ಯೋಗಾಂಗಗಳಲ್ಲಿ ಈ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರರೂಪಗಳಾದ ಐದು ಬಹಿ ರಂಗಸಾಧನಗಳಾಗುತ್ತವೆ. ಇವು ಚಿತ್ತಸ್ಥೈರ್ಯವನ್ನು ಹುಟ್ಟಿಸುವುದರ ಮೂಲಕ ಪರಂಪರಾ ಸಂಬಂಧದಿಂದ ಸಮಾಧಿಗೆ ಉಪಕಾರಕಗಳಾಗುತ್ತವೆ. ಧಾರಣ, ಧ್ಯಾನ, ಸಮಾಧಿಗಳೆಂಬ ಮೂರು ಸಮಾಧಿಸ್ವರೂಪನಿಷ್ಪಾದಕಗಳಾಗುವುದರಿಂದ ಸಮಾಧಿಗೆ ಅಂತರಂಗಸಾಧನಗಳಾಗಿವೆ. ಸಮಾಧಿಯೆಂದರೆ ಯೋಗ. ಇದು ಚಿತ್ತ ಕ್ಷೇತ್ರದಲ್ಲಿ ಯಮನಿಯಮಗಳಿಂದ ಹೊಂದಿದ ಬೀಜಾವಸ್ಥೆಯುಳ್ಳದ್ದಾಗಿ, ಆಸನ ಪ್ರಾಣಾಯಾಮ ಗಳಿಂದ ಅಂಕುರಿತವಾಗಿ, ಪ್ರತ್ಯಾಹಾರದಿಂದ ಕುಸುಮಿತವಾಗಿ, ಧಾರಣಾದಿ ಅಂತರಂಗ ಸಾಧನಗಳಿಂದ ಫಲಿತವಾಗುತ್ತದೆ.

'ತೃತೀಯೇ—' ಇತಿ. ಈ ಮೂರು ಅಂತರಂಗ ಸಾಧನಗಳನ್ನು ವಿಭೂತಿಪಾದ ವೆಂಬ ಮೂರನೇ ಅಧ್ಯಾಯದಲ್ಲಿ ನಿರೂಪಿಸಿರುತ್ತಾರೆ. "ದೇಶ—" ಇತಿ. ಹೃತ್ಪುಂಡ ರೀಕಾದಿ ದೇಶದಲ್ಲಿ ಧ್ಯೇಯವಾದುದನ್ನು ಚಿಂತಿಸಬೇಕು. ಆ ದೇಶದಲ್ಲಿ ಚಿತ್ತದ ಬಂಧ ಅಂದರೆ ಏಕಾಗ್ರತಾ. ಇದಕ್ಕೆ ಧಾರಣಾ ಎಂದು ಹೆಸರು. ವೃತ್ತ್ಯಂತರವ್ಯವಧಾನವಿಲ್ಲದೆ ಧ್ಯೇಯಾಕಾರವಾದ ಮನಸ್ಸಿನ ವೃತ್ತಿಪ್ರವಾಹಕ್ಕೆ ಧ್ಯಾನವೆಂದು ಹೆಸರು. ಧ್ಯಾನವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧ್ಯಾನಧ್ಯಾತೃದೃಷ್ಟಿಶೂನ್ಯವಾಗಿ ಕೇವಲಧ್ಯೇಯಾಕಾರವಾದರೆ ಆಗ ಅದೇ ಸಮಾಧಿಯಾಗುತ್ತದೆ. ಏಕ ವಿಷಯವಾದ ಧಾರಣಾಧ್ಯಾನಸಮಾಧಿತ್ರಯಕ್ಕೆ 'ಸಂಯಮ' ಎಂದು ಪಾರಿಭಾಷಿಕವಾದ ಸಂಜ್ಞೆ. 'ತತ್ತ್ರಯಮೇಕತ್ರ ಸಂಯಮಃ' (ಪಾ-ಯೋ-ಸೂ-೩-೧೪) ಎಂದು ಇದನ್ನು ಸೂತ್ರದಲ್ಲಿ ಹೇಳಿರುತ್ತಾರೆ. ಸಂಯಮಕ್ಕೆ ಯೋಗವೇ ಮುಖ್ಯವಾದ ಫಲ. ವಿಭೂತಿಗಳು ಅವಾಂತರಫಲಗಳಾಗುತ್ತವೆ. (ಜಾತ—ಸಮುದಾಯ) ಭೂತಭವಿಷ್ಯದರ್ಥಜ್ಞಾನ, ಪಶುಪಕ್ಷ್ಯಾದಿಶಬ್ದಜ್ಞಾನ, ಜನ್ಮಾಂತರಸ್ಮರಣ, ಪರಮನೋಗತಾರ್ಥಜ್ಞಾನ, ಅಂತರ್ಧಾನ-ಮುಂತಾದವುಗಳು ವಿಭೂತಿಗಳು. ಇವೆಲ್ಲವನ್ನೂ ಮೂರನೇ ಅಧ್ಯಾಯದಲ್ಲಿ ತೋರಿಸಿರುತ್ತಾನೆ. ನಾಲ್ಕನೇದು ಕೈವಲ್ಯಪಾದ. ಜನ್ಮಮಾತ್ರದಿಂದ ಉಂಟಾದವುಗಳು ಜನ್ಮಜಗಳು. ಇದು ದೇವಾದಿಗಳದ್ದಾಗುತ್ತದೆ. ಪಾದರಸಾದಿರಸಸೇವನೆಯಿಂದ ಉಂಟಾದ ಸಿದ್ಧಿಗಳು ಔಷಧಿಜಗಳು. ಹೀಗೆ ಮಂತ್ರ, ತಪಸ್ಸು, ಸಮಾಧಿಸಾಧನೆಗಳಿಂದ ಉಂಟಾದ ಸಿದ್ಧಿಗಳು ಮೂರು. ಹೀಗೆ ಐದು ವಿಧಗಳಾದ ಸಿದ್ಧಿಗಳು. ಅಣಿಮಾದಿಗಳೂ, ಅಜರಾಮರತ್ವಾದಿಗಳೂ, ಆಕಾಶಗಮನಾದಿಗಳೂ ಈ ಸಿದ್ಧಿಗಳಾಗುತ್ತವೆ. ಹಿಂದೆ ಹೇಳಿದ ಯಮನಿಯಮಾದ್ಯಷ್ಟಾಂಗಗಳಿಂದ ಯೋಗವೃಕ್ಷವು ಫಲಿತವಾದಾಗ ಪ್ರಕೃತಿಪುರುಷರ ಭೇದದ ಸಾಕ್ಷಾತ್ಕಾರವಾಗುತ್ತದೆ. ಆಗ ಅಸಂಗಪುರುಷಜ್ಞಾನದಿಂದ ದುಃಖಾತ್ಯಂತಾಭಾವರೂಪವಾದ ಮೋಕ್ಷವು ಸಿದ್ಧಿಸುತ್ತದೆ. ಇವೆಲ್ಲವನ್ನೂ ನಾಲ್ಕನೇ ಪಾದದಲ್ಲಿ ವಿವರಿಸಿರುತ್ತಾರೆ. 'ಪ್ರಾಚೀನಾನಿ'—ಇತಿ. ಸಾಂಖ್ಯದರ್ಶನದಲ್ಲಿ ಹೇಳಿದ ಪ್ರಕೃತ್ಯಾದಿ ೨೫ ತತ್ತ್ವಗಳೇ ಇಲ್ಲಿಯೂ ಸಂಮತವಾಗಿವೆ.

"ಷಡ್ವಿಂಶಃ"—ಇತಿ. ಸಾಂಖ್ಯದರ್ಶನಕ್ಕಿಂತ ಇಲ್ಲಿ ವಿಶೇಷವೆಂದರೆ ಈಶ್ವರನ ಅಂಗೀಕಾರ. ಈಶ್ವರನೊಬ್ಬನಿದ್ದಾನೆ ಎಂದು ಅಧಿಕವಾಗಿ ಇವರು ಅಂಗೀಕರಿಸಿರುತ್ತಾರೆ. ಸಾಂಖ್ಯರಲ್ಲಿ ಕೆಲವರು ಅವನನ್ನು ಅಂಗೀಕರಿಸಿದ್ದರೂ ಅವರ ದರ್ಶನವು ಬೇರೆಯಾಗಿ ಹೇಳಿಲ್ಲ. 'ಕ್ಲೇಶ'—ಇತಿ. ಅವಿದ್ಯಾದಿಗಳೇ ಕ್ಲೇಶಗಳು. ಇವು ಬುದ್ಧಿಯಲ್ಲಿದ್ದು ತ್ರಿಗುಣಾತ್ಮಕ ಸಂಸಾರವನ್ನು ದೃಢಪಡಿಸುತ್ತಾ ಪರಿತಾಪವನ್ನುಂಟುಮಾಡುತ್ತವೆ. ಇದರಿಂದ ಕ್ಲೇಶಗಳೆಂದು ಅನ್ವರ್ಥನಾಮ ಬಂದಿದೆ. ವಿಹಿತ, ನಿಷಿದ್ಧಗಳೆಂದು ಕರ್ಮ ಎರಡು ವಿಧವಾಗಿರುತ್ತದೆ. ಕರ್ಮಫಲವಾದ ಜನ್ಮ, ಆಯುಃ, ಭೋಗರೂಪಗಳಾದ ಮೂರು ವಿಪಾಕವಾಗುತ್ತದೆ. ಆಶೇರತೇ ಚಿತ್ತಭೂಮೌ ಇತಿ ಆಶಯಾಃ—ಸಂಸ್ಕಾರಗಳು. ಈ ಕ್ಲೇಶಾದಿಗಳ ಸಂಬಂಧವಿಲ್ಲದೆ (ಕಾಲತ್ರಯದಲ್ಲಿಯೂ ಸಂಬಂಧ ಹೊಂದದೆ) ಇರುವ ಪುರುಷವಿಶೇಷನಿಗೆ ಈಶ್ವರನೆಂದು ಹೆಸರು. ಸಾಂಖ್ಯಮತದಂತೆ ಇಲ್ಲಿಯೂ ಸಕಲ ಜೀವರಿಗೂ ವಸ್ತುತಃ ಕ್ಲೇಶಾದಿಸ್ಪರ್ಶವಿಲ್ಲದಿದ್ದರೂ ಚಿತ್ತದಲ್ಲಿರುವ ಕ್ಲೇಶಾದಿಗಳು ಜೀವರಲ್ಲಿ ಆರೋಪಿತವಾಗುತ್ತವೆ. ಈಶ್ವರನಿಗೆ ಆರೋಪಿತವಾದ ಕ್ಲೇಶಾದಿಗಳೂ ಇರುವುದಿಲ್ಲ. ಇವನು ಸ್ವೇಚ್ಛೆಯಿಂದಲೇ ಬಂದು ಅಥವಾ ಏಕಕಾಲದಲ್ಲಿ ಅನೇಕ ಶರೀರಗಳನ್ನು ನಿರ್ಮಿಸುತ್ತಾನೆ. ಇವುಗಳಿಗೆ ನಿರ್ಮಾಣಕಾಯವೆಂದು ಹೆಸರು. ಸಂಪ್ರದಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರವರ್ತನ, ಜೀವಾನುಗ್ರಹಕರಣಲಿಂಗಗಳಿಂದ ಈಶ್ವರನು ಅನುಮಾನ ಪ್ರಮಾಣದಿಂದ ಸಿದ್ಧಿಸುತ್ತಾನೆ.

ನನು ಪುಷ್ಕರಪಲಾಶವನ್ನಿರ್ಲೇಪಸ್ಯ ತಸ್ಯ ತಪ್ಯಭಾವಃ ಕಥಮುಪಪದ್ಯತೇ, ಯೇನ ಪರಮೇಶ್ವರೋನುಗ್ರಾಹಕತಯಾ ಕಕ್ಷೀಕ್ರಿಯತೇ ಇತಿ ಚೇತ್ ಉಚ್ಯತೇ। ತಾಪಕಸ್ಯ ರಜಸಃ ಸತ್ತ್ವಮೇವ ತಪ್ಯಂ ಬುದ್ಧ್ಯಾತ್ಮನಾ ಪರಿಣತಮಿತಿ ಸತ್ತ್ವೇ ಪರಿತಪ್ಯಮಾನೇ ತದಾರೋಪವಶೇನ ತದಭೇದಾವಗಾಹಿಪುರುಷೋಪಿ ತಪ್ಯತ ಇತ್ಯುಚ್ಯತೇ । ತದುಕ್ತಮಾಚಾರ್ಯೈ:—

ಸತ್ತ್ವಂ ತಪ್ಯಂ ಬುದ್ಧಿಭಾವೇನವೃತ್ತಂ ಭಾವಾಯೇವಾ ರಾಜಸಾಸ್ತಾಪಕಾಸ್ತೇ ॥
ತಪ್ಯಾಭೇದಗ್ರಾಹಿಣೀ ತಾಮಸೀ ಯಾ ವೃತ್ತಿಸ್ತಸ್ಯಾ ತಪ್ಯ ಇತ್ಯುಕ್ತ ಆತ್ಮಾ ॥
ಇತಿ ॥

ಜೀವನು ತಾವರೆಯ ಎಲೆಯ ಮೇಲೆ ನೀರಿದ್ದಂತೆ ನಿರ್ಲೇಪನು. ಅವನಿಗೆ ತಪ್ಯಭಾವ ಅಂದರೆ ತಪ್ಯತಾ (ದುಃಖ) ಹೇಗೆ ಸಂಭವಿಸುತ್ತದೆ ? ದುಃಖವಿಲ್ಲದಿರುವಾಗ ಈಶ್ವರನ ಅನುಗ್ರಾಹಕತ್ವವೂ ವ್ಯರ್ಥವಲ್ಲವೇ ಎಂದು ಆಕ್ಷೇಪ. 'ತಾಪಕಸ್ಯ'— ಇತಿ. ಜೀವನು ವಾಸ್ತವವಾಗಿ ತಪ್ಯನೂ ಅಲ್ಲ ತಾಪಕನೂ ಅಲ್ಲ. ಬುದ್ಧಿಯಲ್ಲಿರುವ ಸತ್ತ್ವಾಂಶವು ಪಾದತಲದಂತೆ ಮೃದುವಾದುದರಿಂದ ತಪ್ಯವಾಗುತ್ತದೆ. ರಜಸ್ಸು ಮುಳ್ಳಿನಂತೆ ಕಠಿಣವಾದುದರಿಂದ ತಾಪಕವಾಗುತ್ತದೆ. ಪ್ರಧಾನದ ಪರಿಣಾಮವೇ ಬುದ್ಧಿ. ತ್ರಿಗುಣಾತ್ಮಕವಾದ ಪ್ರಧಾನವು ಬುದ್ಧಿರೂಪದಿಂದ ಪರಿಣಾಮ ಹೊಂದುತ್ತದೆ. ಜೀವನು ಅಪರಿಣಾಮಿ ನಿಷ್ಕ್ರಿಯ, ಕ್ರಿಯಾಜನ್ಯಫಲಾಶ್ರಯತ್ವರೂಪಕರ್ಮತ್ವವು ಅವನಲ್ಲಿ ಸಂಭವಿಸುವುದಿಲ್ಲ. ಜ್ಞಾನಕ್ರಿಯಾಕರ್ಮತ್ವರೂಪ ವಿಷಯತ್ವವು ಅವನಲ್ಲಿ ಇರುತ್ತದೆ. ಹೀಗಿರುವಾಗ ಪುರುಷಾರ್ಥವು ಅವನಿಗೆ ಸಂಭವಿಸುವುದು ಹೇಗೆ ? ಪುರುಷನಿಂದ ಅಪೇಕ್ಷಿಸಲ್ಪಡುವುದು ಪುರುಷಾರ್ಥ. ಜೀವನಲ್ಲಿ ದುಃಖವೇ ಇಲ್ಲವೆನ್ನುವುದಾದರೆ ದುಃಖನಿವೃತ್ತಿರೂಪ ಪುರುಷಾರ್ಥವು ಸಂಭವಿಸುವುದು ಹೇಗೆ ? ಅದೂ ಅಲ್ಲದೆ ಬುದ್ಧಿಯಲ್ಲಿ ದುಃಖವಿದ್ದರೆ ಪುರುಷನಿಗೆ ಉಂಟಾಗುವ ದೋಷವೇನು ? ಇದನ್ನು ನಿವೃತ್ತಿಪಡಿಸಲು ಬುದ್ಧಿಯು ಪ್ರಯತ್ನಿಸುವುದಾದರೂ ಹೇಗೆ ಎಂದು ಆಕ್ಷೇಪ ಬರಬಹುದು. ಆದರೆ ಇದು ಸರಿಯಲ್ಲ. ಬುದ್ಧಿಯಲ್ಲಿರುವ ಸತ್ತ್ವಾಂಶವು ತಪಿಸಲ್ಪಡುವಾಗ ಬುದ್ಧಿಯಲ್ಲಿ ಪ್ರತಿಬಿಂಬಿತನಾದ ಪುರುಷನೂ ತತ್ಸಮಾನಾಕಾರನಾಗಿ ಅನುತಾಪಹೊಂದುತ್ತಾನೆಂದು ವಿವೇಕವಿಲ್ಲದಿರುವಾಗ ತೋರುತ್ತದೆ. ಬುದ್ಧಿಯಿಂದ ಜೀವನಿಗೆ ವಾಸ್ತವವಾಗಿ ಭೇದವಿದ್ದರೂ ಅಜ್ಞಾನದಿಂದ ಅದು ತಿಳಿಯದೆ ಒಂದೆಂಬ ಭ್ರಾಂತಿಯಿಂದ ಬುದ್ಧಿಯಲ್ಲಿರುವ ಧರ್ಮಗಳು ಅಲ್ಲಿ ಆರೋಪಿತವಾಗುತ್ತವೆ. ವಿದ್ವದ್ದೃಷ್ಟಿಯಿಂದಲೂ ಪ್ರತಿಬಿಂಬರೂಪದಿಂದ ಪುರುಷನಿಗೆ ಭೋಕ್ತೃತ್ವ ಧರ್ಮವಿರುತ್ತದ. ಇದರಿಂದ ಬುದ್ಧಿಗತವಾದ ದುಃಖವು ಹೇಯವಾದುದರಿಂದ ಪುರುಷಾರ್ಥತ್ವವೂ ಕೂಡುತ್ತದೆ. "ಸತ್ತ್ವಂ"— ಇತಿ. ಬುದ್ಧಿಭಾವದಿಂದ ವೃತ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದುದು ಅಂದರೆ ಬುದ್ಧಿರೂಪದಿಂದ ಪರಿಣತವಾದದ್ದು ಎಂದರ್ಥ. ತಪ್ಯವಾದ ಬುದ್ಧಿಗತಸತ್ವಾಂಶದಿಂದ ಅಭೇದವನ್ನು ಗ್ರಹಿಸುವ ಯಾವ ತಾಮಸ್ಯಜ್ಞಾನಮೂಲಕವಾದ ಮನೋವೃತ್ತಿ ಇದೆಯೋ ಅದರಲ್ಲಿ ಅಭೇದಾರೋಪದಿಂದ ಆತ್ಮನೂ ತಪ್ಯನಾಗುತ್ತಾನೆ ಎಂದರ್ಥ. ಹಿಂದಿನಂತೆ ಆರೋಪವೆಂದು ತಿಳಿಯಬೇಕು.

ಪಂಚಶಿಖೇನಾಪ್ಯುಕ್ತಂ — ಅಪರಿಣಾಮಿನೀ ಹಿ ಭೋಕ್ತೃಶಕ್ತಿರಪ್ರತಿಸಂಕ್ರಮಾ ಚ ಪರಿಣಾಮಿನ್ಯರ್ಥೇ ಪ್ರತಿಸಂಕ್ರಾಂತೇವ ತದ್ವೃತ್ತಿಮನುಪತತೀತಿ ಭೋಕ್ತೃಶಕ್ತಿರಿತಿ ಚಿಚ್ಛಕ್ತಿರುಚ್ಯತೇ। ಸಾ ಚಾತ್ಮೈವ। ಪರಿಣಾಮಿನ್ಯರ್ಥೇ ಬುದ್ಧಿತತ್ವೇ ಪ್ರತಿಸಂಕ್ರಾತೇವ ಪ್ರತಿಬಿಂಬಿತೇವ ತದ್ವೃತ್ತಿಮನುಪತತೀತಿ ಬುದ್ಧೌ ಪ್ರತಿಬಿಂಬಿತಾ ಸಾ ಚಿಚ್ಛಕ್ತಿರ್ಬುದ್ಧಿಚ್ಛಾಯಾಪತ್ತ್ಯಾ ಬುದ್ಧಿವೃತ್ತ್ಯನುಕಾರವತೀತಿ ಭಾವಃ। ತಥಾ ಶುದ್ಧೋಽಪಿ ಪುರುಷಃ ಪ್ರತ್ಯಯಂ ಬೌದ್ಧಮನುಪಶ್ಯತಿ ತಮನುಪಶ್ಯನ್ನತದಾತ್ಮಾಽಪಿ ತದಾತ್ಮಕ ಇವ ಪ್ರತಿಭಾಸತ ಇತಿ। ಇತ್ಥಂ ತಪ್ಯಮಾನಸ್ಯ ಪುರುಷಸ್ಯಾದರನೈರಂತರ್ಯ ದೀರ್ಘಕಾಲಾನುಬಂಧಿಯಮ ನಿಯಮಾದ್ಯಷ್ಟಾಂಗಯೋಗಾನುಷ್ಠಾನೇನ ಪರಮೇಶ್ವರಪ್ರಣಿಧಾನೇನ ಚ ಸತ್ವ ಪುರುಷಾನ್ಯತಾಖ್ಯಾತಾವನುಪಪ್ಲವಾಯಾಂ ಜಾತಾಯಾಮವಿದ್ಯಾದಯಃ ಪಂಚ ಕ್ಲೇಶಾಃ ಸಮೂಲಕಾಷಂ ಕಷಿತಾ ಭವಂತಿ। ಕುಶಲಾ ಕುಶಲಾಶ್ಚ ಶಯಾಃ ಸಮೂಲಘಾತಂ ಹತಾ ಭವಂತಿ। ತತಶ್ಚ ಪುರುಷಸ್ಯ ನಿರ್ಲೇಪಸ್ಯ ಕೈವಲ್ಯೇನಾವಸ್ಥಾನಂ ಕೈವಲ್ಯಮಿತಿ ಸಿದ್ಧಮ್

'ಪಂಚ' —ಇತಿ. 'ದ್ರಷ್ಟಾ ದೃಶಿಮಾತ್ರಃ' (ಪ-ಯೋ-ಸೂ-೨-೨೦) ಎಂಬ ಸೂತ್ರದಲ್ಲಿ ಈ ಪಂಚಶಿಖಾಚಾರ್ಯರ ಮಾತನ್ನು ಭಾಷ್ಯಕಾರರು ಹೇಳಿರುತ್ತಾರೆ. ಪ್ರತಿಸಂಕ್ರಮ ಅಂದರೆ ಉಪರಾಗ—ವಿಕಾರಕ್ಕೆ ಕಾರಣವಾದ ಸಂಯೋಗವೆಂದರ್ಥ. ಭೋಕ್ತೃಶಕ್ತಿಯೆಂದರೆ ಚಿಚ್ಛಕ್ತಿ ಅಂದರೆ ಆತ್ಮಾ. ಇದು ಅಪರಿಣಾಮಿ. ಆದುದರಿಂದಲೇ ಅಪ್ರತಿಸಂಕ್ರಮಾ. ವಿಕಾರ ಹುಟ್ಟಿಸುವ ಯಾವ ಸಂಯೋಗವೂ ಇದರಲ್ಲಿಲ್ಲ. ಆದರೂ ಆತ್ಮನು ಬುದ್ಧಿಯಲ್ಲಿ ಪ್ರತಿಬಿಂಬರೂಪದಿಂದ ಸಂಕ್ರಾಂತವಾದವನಂತೆ ಆಗುತ್ತಾನೆ. ಆಗ ವಿಷಯಾಕಾರವಾದ ಆ ಬುದ್ಧಿವೃತ್ತಿಯನ್ನು ಸ್ವಸಂಬಂಧದಿಂದ ಚೇತನವೆಂಬಂತೆ ಮಾಡುತ್ತಾನೆ. ಸೂರ್ಯನು ತನ್ನ ಪ್ರತಿಬಿಂಬದಿಂದ ಕೂಡಿದ ಜಲವನ್ನು ತೇಜಸ್ವಿತಾದಿಗುಣಗಳಿಂದ ಕೂಡಿರುವಂತೆ ತೋರಿಸುತ್ತಾನೆ. ಅದರಂತೆ ಆತ್ಮಬುದ್ಧಿಸಂಬಂಧ ತಿಳಿಯಬೇಕು. ಜ್ಞಾನವೆಂದರೆ ತತ್ತದ್ವಿಷಯಾಕಾರಗ್ರಹಣ. ಇದು ಬುದ್ಧಿಗಿದ್ದರೂ ತನ್ಮೂಲಕ ತತ್ಸಂಯುಕ್ತನಾದ ಆತ್ಮನಿಗೂ ಇರುವುದರಿಂದ ಆತ್ಮನು ಜ್ಞಾನೀ ಎಂದು ಹೇಳಲ್ಪಡುತ್ತಾನೆ. ಬುದ್ಧಿಸತ್ವವೂ ಕೂಡಾ ಆತ್ಮಸಂಬಂಧದಿಂದ ಚೇತನವೆಂದು ಹೇಳಲ್ಪಡುತ್ತತೆ. 'ತಥಾ'—ಇತಿ. ನಿರ್ಲೇಪನಾಗಿದ್ದರೂ ಆತ್ಮನು ಬೌದ್ಧಂ—ಬುದ್ಧಿಗತವಾದ ವಿಷಯಾಕಾರಗ್ರಹಣರೂಪವಾದ ಪ್ರತ್ಯಯ ಅಂದರೆ ಜ್ಞಾನವನ್ನು ಅನುಕರಿಸುತ್ತಾನೆ (ಅನುಪಶ್ಯತಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ ಆ ಪುರುಷನು ವಸ್ತುತಃ ಆರೂಪಹೊಂದಿರದಿದ್ದರೂ ಬುದ್ಧ್ಯಸ್ವರೂಪನಾಗಿದ್ದರೂ, ತದಾತ್ಮಕನಂತೆಯೂ, ಬುದ್ಧಿಸ್ವರೂಪನಂತೆಯೂ ತೋರುತ್ತಾನೆ ಎಂದರ್ಥ. ತಾದಾತ್ಮ್ಯಾಧ್ಯಾಸವೇ ಇವುಗಳಿಗೆ ಮೂಲಕಾರಣವಾಗುತ್ತದೆ. ಯಮನಿಯಮಾದಿ ಅಷ್ಟಾಂಗಗಳಿಂದ ಕೂಡಿದ ಯೋಗದ, ತಪಃ ಶ್ರದ್ಧಾದಿರೂಪವಾದ ಆಸಕ್ತಿಯಿಂದ ಕೂಡಿ ನಿರಂತರವಾಗಿ ದೀರ್ಘಕಾಲದವರೆಗೆ ಯಾವ ಅನುಷ್ಠಾನವಿದೆಯೋ ಅದರಿಂದಲೂ ಈಶ್ವರಧ್ಯಾನದಿಂದಲೂ ಸತ್ವಪುರುಷರಲ್ಲಿ ಸತ್ವವು ಬುದ್ಧಿಯಗುಣವೆಂದೂ ಪುರುಷನು ಬೇರೆಯಾದ ಆತ್ಮನೆಂದೂ ವಿವೇಕಜ್ಞಾನವುಂಟಾಗುತ್ತದೆ. ಈ ಭೇದಜ್ಞಾನಕ್ಕೆ ಅನ್ಯಥಾಖ್ಯಾತಿಯೆಂದು ಹೇಳುತ್ತಾರೆ. ಇತರ ಯಾವ ಜ್ಞಾನವೂ ಇಲ್ಲದ ಈ ಭೇದಜ್ಞಾನವುಂಟಾದಾಗ ಅವಿದ್ಯಾದಿಗಳು ಸಮೂಲವಾಗಿ ನಾಶವಾಗುತ್ತವೆ. ಕ್ಲೇಶಗಳನ್ನು ಮುಂದೆ ವಿವರಿಸುತ್ತಾನೆ. ಸಮೂಲಕಾಷಂ ಕಷಿತಾಃ—ಮೂಲೇನ ಸಹವಿನಷ್ಟಾ ಭವಂತೀತ್ಯರ್ಥಃ. ಕ್ಲೇಶಮೂಲಕವಾಗಿ ಸಂಸ್ಕಾರವಿರುತ್ತದೆ. ಆಶೇರತೇ ಸಾಂಸಾರಿಕಾಃ ಪುರುಷಾ ಅಸ್ಮಿನ್ನಿತ್ಯಾಶಯಃ, ಕರ್ಮಣಾಂ ಆಶಯಃ ಕರ್ಮಾಶಯಃ (ಕರ್ಮನಿಧಿ) ಪುಣ್ಯಪಾಪರೂಪವಾದ ಈ ಕರ್ಮನಿಧಿಯು ಕ್ಲೇಶಮೂಲ ಸಂಸ್ಕಾರದೊಡನೆ ನಷ್ಟವಾಗುತ್ತದೆ. 'ತತಃ'—ಇತಿ. ಯಾವ ಸಂಬಂಧದಿಂದ ಒಂದರಧರ್ಮವು ಇನ್ನೊಂದರ ಸಂಬಂಧಿಯೆಂದು ವ್ಯಹರಿಸಲ್ಪಡುತ್ತದೆಯೋ ಅಂತಹ ಸಂಬಂಧವಿಶೇಷಕ್ಕೆ ಲೇಪವೆಂದು ಕರೆಯುತ್ತಾರೆ. ಇಂತಹ ಲೇಪವಿಲ್ಲದೆ ಪ್ರಕೃತಿಗಿಂತ ಬೇರೆಯಾಗಿರುವ ಅವಸ್ಥೆಗೆ ಮೋಕ್ಷವೆಂದು ಹೆಸರು.

ತತ್ರ 'ಅಥಯೋಗಾನುಶಾಸನಂ' (ಸೂ-೧-೧) ಇತಿ ಪ್ರಥಮಸೂತ್ರೇಣ ಪ್ರೇಕ್ಷಾವತ್ಪ್ರವೃತ್ತ್ಯಂಗಂ ವಿಷಯಪ್ರಯೋಜನಸಂಬಂಧಾಧಿಕಾರಿರೂಪಮನುಬಂಧ ಚತುಷ್ಟಯಂ ಪ್ರತಿಪಾದ್ಯತೇ—

ಅತ್ರ ಅಥಶಬ್ದೋಧಿಕಾರಾರ್ಥಃ ಸ್ವೀಕ್ರಿಯತೇ । ಅಥ ಶಬ್ದಸ್ಯಾನೇಕಾರ್ಥತ್ವೇ ಸಂಭವತಿ ಕಥಮಾರಂಭಾರ್ಥತ್ವಪಕ್ಷೇ ಪಕ್ಷಪಾತಃ ಸಂಭವೇತ್ ಅಥಶಬ್ದಸ್ಯ ಮಂಗಲಾದ್ಯನೇಕಾರ್ಥತ್ವಂ ನಾಮಲಿಂಗಾನುಶಾಸನೇನಾನುಶಿಷ್ಟಂ— ಮಂಗಲಾನಂತರಾರಂಭಪ್ರಶ್ನಕಾರ್ತ್ಸ್ನ್ಯೇಷ್ವಥೋ ಅಥ' (ಅಮರ-೩ ಕಾಂ) ಇತಿ । ಅತ್ರ ಪ್ರಶ್ನಕಾರ್ತ್ಸ್ನ್ಯಯೋರಸಂಭವೇಸ್ಯಾನಂತರ್ಯ ಮಂಗಲಪೂರ್ವ ಪ್ರಕೃತಾಪೇಕ್ಷಾರಂಭಲಕ್ಷಣಾನಾಂ ಚತುರ್ಣಾಮರ್ಥಾನಾಂ ಸಂಭವಾದಾರಂಭಾರ್ಥತ್ವಾನುಪಪತ್ತಿರಿತಿ ಚೇತ್

ನ್ನೈವಂ ಮಂಸ್ಥಾಃ । ವಿಕಲ್ಪಾಸಹತ್ವಾತ್ । ಆನಂತರ್ಯಮಥಶಬ್ದಾರ್ಥ ಇತಿ ಪಕ್ಷೇ ಯತಃ ಕುತಶ್ಚಿದಾನಂತರ್ಯಂ ಪೂರ್ವವೃತ್ತಶಮಾದ್ಯಸಾಧಾರಣಾತ್ಕಾರಣಾದಾನಂತರ್ಯಂ ವಾ ? । ನ ಪ್ರಥಮಃ

ನ ಹಿ ಕಶ್ಚಿತ್‌ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ (ಗೀ-೩।೫) ಇತಿ ನ್ಯಾಯೇನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೋಽಜಂತುರವಶ್ಯಂ ಕಿಂಚಿತ್ ಕೃತ್ವಾ ಕಿಂಚಿತ್ ಕರೋತ್ಯೇವೇತಿ ತಸ್ಯಾಭಿಧಾನಮಂತರೇಣಾಪಿ ಪ್ರಾಸ್ತುತಯಾ ತದರ್ಥಾಥಶಬ್ದಪ್ರಯೋಗವೈಯರ್ಥ್ಯಪ್ರಸಕ್ತೇಃ ।

ವಿಚಾರಶಾಲಿಗಳಿಗೆ ಪ್ರೇಕ್ಷಾನಂತರೆಂದು ಹೆಸರು. ಅವರಿಗೆ ಶಾಸ್ತ್ರಾವಲೋಕನದಲ್ಲಿ ಪ್ರವೃತ್ತಿಬರಬೇಕಾದರೆ ಅನುಬಂಧಚತುಷ್ಟಯವನ್ನು ಹೇಳಬೇಕು. ಅದರಜ್ಞಾನವಾದ ಮೇಲೆಯೇ ಪ್ರವೃತ್ತಿಯುಂಟಾಗುತ್ತದೆ. ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿ ಎಂದು ಈ ನಾಲ್ಕಕ್ಕೆ ಅನುಬಂಧಗಳೆಂದು ಪಾರಿಭಾಷಿಕವಾದ ಸಂಜ್ಞೆ. ಶಾಸ್ತ್ರಪ್ರತಿಪಾದ್ಯವಾದ ಅರ್ಥಕ್ಕೆ ವಿಷಯವೆಂದು ಹೆಸರು. ಈ ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಡುವ ವಿಷಯ ಯಾವುದು ? ಅದಕ್ಕೆ ಫಲವೇನು ? ಅಧಿಕಾರಿಯಾರು ? ವಿಷಯಫಲಾಽಧಿಕಾರಿಗಳಿಗೆ ಸಂಬಂಧ ಯಾವುದು ? ಎಂದು ಅವಶ್ಯವಾಗಿ ತಿಳಿಯಬೇಕು. ಲೋಕದಲ್ಲಿಯೂ ಕೂಡಾ ಅಲ್ಪವಾದ ಘಟವಿಷಯದಲ್ಲಿಯೂ, ಅಥವಾ ಮಹಾಪ್ರಾಸಾದವಿಷಯದಲ್ಲಿಯೂ ಕಾರ್ಯವಾಗಬೇಕಾದರೆ ಕಾರ್ಯಯಾವುದು ? ಏಕೆ ಕಾರ್ಯಮಾಡಬೇಕು ? ಹೇಗೆ, ಯಾವುದರಿಂದ ಕಾರ್ಯ ? ಎಂದು ಸಕಲವನ್ನೂ ಮೊದಲು ವಿಚಾರಿಸುವುದು ಪ್ರಸಿದ್ಧವಾಗಿದೆ. ಹೀಗೆ ಅನುಬಂಧ ಚತುಷ್ಟಯವನ್ನು 'ಅಥ'—ಸೂತ್ರದಲ್ಲಿ ವಿವರಿಸಿರುತ್ತಾರೆ. ಇಲ್ಲಿ ಅಥಶಬ್ದವು ಅಧಿಕಾರ ಅಂದರೆ ಆರಂಭಾರ್ಥವನ್ನು ತಿಳಿಸುತ್ತದೆ. ಇದೇ ಅರ್ಥವನ್ನು ಏಕೆ ಅಂಗೀಕರಿಸಬೇಕೆಂದು ವಿಚಾರಿಸುತ್ತಾನೆ.

ಅಥಶಬ್ದಕ್ಕೆ "ಮಂಗಲಾ....ಅಥ" ಎಂದು ಅಮರಶ್ಲೋಕದಲ್ಲಿ ಮಂಗಲ, ಅನಂತರ ಆರಂಭ, ಪ್ರಶ್ನ ಕಾರ್ತ್ಸ್ನ್ಯ ಅರ್ಥಗಳು ಹೇಳಿವೆ. ಅಥೋ ಎಂಬುದಕ್ಕೂ ಈ ಅರ್ಥಗಳು ಇರುತ್ತವೆ. ಮಂಗಲಾರ್ಥದಲ್ಲಿ ತತ್ಸಾಧನತ್ವೇನ ಈ ಶಬ್ದಗಳು ಇವೆಯೆಂದು ತಿಳಿಯಬೇಕು. ವಾಚಕಗಳಲ್ಲ. ಇವೆರಡರ ಉಚ್ಚಾರಣೆಯಿಂದ ಮಂಗಲವಾಗುತ್ತದೆ. ಅನಂತರಾದಿಗಳಿಗೆ ವಾಚಕಗಳಾಗಿವೆ. ಅನಂತರಾದ್ಯನ್ಯತಮಾರ್ಥದಲ್ಲಿ ಹೇಳಿದ ಅಥ ಶಬ್ದವು ಮಂಗಲಸಾಧಕವಾಗುತ್ತದೆ. "ಸ್ನಾನಂ ಕೃತ್ವಾ ಅಥ ಭುಂಜೀಥ" ಇಲ್ಲಿ ಅನಂತರಾರ್ಥದಲ್ಲಿ ಅಥ ಶಬ್ದವಿದೆ. "ಅಥ ಶಬ್ದಾನು ಶಾಸನಂ'' ಇಲ್ಲಿ ಆರಂಭಾರ್ಥ. 'ಅಥ ವಕ್ತುಂ ಸಮರ್ಥೋಽಸಿ' । ಇಲ್ಲಿ ಪ್ರಶ್ನಾರ್ಥ. 'ಅಥಧಾತೂನ್ ಬ್ರೂಮಃ' ಇಲ್ಲಿ ಕಾರ್ತ್ಸ್ನ್ಯಾರ್ಥ. 'ಅತ್ರ'—ಇತಿ. ಇಲ್ಲಿ ಪ್ರಶ್ನಾರ್ಥ ಸಂಭವಿಸುವುದಿಲ್ಲ. ಪತಂಜಲಿಗಳು ಇಲ್ಲಿ ಯಾರನ್ನೂ ಪ್ರಶ್ನಿಸುವ ಕಾರಣವಿಲ್ಲ. ಕೃತ್ಸ್ನಯೋಗಾನುಶಾಸನ ಪ್ರತಿಪಾದನಕ್ಕೆ ಪ್ರಯೋಜನವಿಲ್ಲದಿರುವುದರಿಂದ ಕಾರ್ತ್ಸ್ನ್ಯಾರ್ಥವೂ ಸಂಭವಿಸುವುದಿಲ್ಲ. ಆನಂತರ್ಯಮಂಗಲಾರ್ಥಗಳು ಸಂಭವಿಸುವಾಗ ಆರಂಭಾರ್ಥತ್ವ ಹೇಳಿದುದು ಹೇಗೆ ? ಅನುಪಪತ್ತಿ ಎಂದರೆ ಆರಂಭಾರ್ಥಕವೇ ಎಂಬ ನಿಶ್ಚಯಾನುಪಪತ್ತಿ ಯೆಂದರ್ಥ. ಪೂರ್ವಪ್ರಕೃತಾಪೇಕ್ಷತ್ವವೂ ಸಂಭವಿಸುತ್ತದೆ. "ಆತ್ಮಾ ನಿತ್ಯಃ ಅಥ ಅನಿತ್ಯಃ'' ಎಂಬ ವಿಪ್ರತಿಪತ್ತಿ ವಾಕ್ಯದಲ್ಲಿ ಅಥ ಶಬ್ದಕ್ಕೆ ಪೂರ್ವಪ್ರಕೃತಾಪೇಕ್ಷಾರ್ಥತ್ವ ಸಂಭವಿಸುತ್ತದೆ. ಇಲ್ಲಿ ಪೂರ್ವ ಪ್ರಕೃತಾಪೇಕ್ಷೆಯು ಪ್ರಯೋಗೋಪಾಧಿಯಾಗುವುದಲ್ಲದೆ ಅಥ ಶಬ್ದದ ವಾಚ್ಯಾರ್ಥವಾಗುವುದಿಲ್ಲ. ಪೂರ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕೃತನಾದ ಆತ್ಮನೇ ವಾಚ್ಯಾರ್ಥ. ಅಥಾನಿತ್ಯ ಎಂಬಲ್ಲಿ ಅನಿತ್ಯರು ಯಾರು ? ಎಂದು ವಿಶೇಷ್ಯಾಕಾಂಕ್ಷೆಯುಂಟಾದಾಗ ನಿತ್ಯಃ ಎಂದು ಪೂರ್ವವಾಕ್ಯದಲ್ಲಿ ಪ್ರಕೃತನಾದ ಆತ್ಮನು ಅಥಶಬ್ದದಿಂದ ಪರಾಮೃಷ್ಟನಾಗುತ್ತಾನೆ. ನಿತ್ಯತ್ವ, ಅನಿತ್ಯತ್ವಧರ್ಮಗಳು ಪರಸ್ಪರ ವಿರುದ್ಧವಾದುದರಿಂದ ಎರಡನ್ನೂ ಹೇಳಿದಾಗ ವಿಕಲ್ಪದಲ್ಲಿ ಪರ್ಯವಸಾನ ಹೊಂದಿ ಅವುಗಳಿಗೆ ಪಾಕ್ಷಿಕತ್ವ ಸಿದ್ಧವಾಗುತ್ತದೆ. ಇದೇ ಇಲ್ಲಿ ಅಥಶಬ್ದಕ್ಕೆ ಪೂರ್ವಪ್ರಕೃತಾಪೇಕ್ಷಾರ್ಥತ್ವ ವೆಂದು ತಿಳಿಯಬೇಕು.

'ನ್ಯೈವಂ ಮಂಸ್ಥಾಃ' — ಎಂದು ಅವು ಯಾವ ಅರ್ಥವೂ ಆಗುವುದಿಲ್ಲವೆಂದು ತಿಳಿಸುತ್ತಾನೆ. ಆನಂತಾರ್ಯಾರ್ಥವನ್ನು ಸ್ವೀಕರಿಸುವುದಾದರೆ ಯಾವುದರ ಆನಂತರ್ಯವೆಂದು ನಿಶ್ಚಯಿಸಲು ಸಾಧ್ಯವಾಗಲಾರದು. ಯಾವುದಾದರೊಂದರ ಅನಂತರವೆಂದರ್ಥವೇ ? ಅಥವಾ ಹಿಂದೆ ಹೇಳಿದ ಶಮಾದ್ಯಸಾಧಾರಣ ಕಾರಣದಿಂದ ಆನಂತರ್ಯವೇ ? (ಯೋಗಾ ಭ್ಯಾಸದ ಪೂರ್ವದಲ್ಲಿ ಸಂಪಾದಿತವಾದ ಶಮಾದಿಗಳು ಯೋಗಕ್ಕೆ ಅಸಾಧಾರಣ ಕಾರಣ ಗಳಾಗುತ್ತವೆ. ತನ್ನಿರೂಪಿತ ಆನಂತರ್ಯವೇ ?.) ಯಾವುದಾದರೊಂದರ ಆನಂತರ್ಯ ಹೇಳಬೇಕಾಗಿಲ್ಲ. ಲೋಕದಲ್ಲಿ ಸಕಲಪ್ರಾಣಿಗಳೂ ಏನಾದರೊಂದನ್ನು ಮಾಡಿ ಆಮೇಲೆ ಇನ್ನೊಂದನ್ನು ಮಾಡುತ್ತಲೇ ಇರುತ್ತವೆ. ಇದನ್ನು ಹೇಳದಿದ್ದರೂ ಸ್ವಭಾವದಿಂದಲೇ ಈ ಆನಂತರ್ಯಾರ್ಥವು ಪ್ರಾಪ್ತವಾಗುವುದರಿಂದ ಈ ರೀತಿಯಾದ ಆನಂತರ್ಯಾರ್ಥವು ಅಥ ಶಬ್ದಕ್ಕೆ ಹೇಳಿದರೆ ವೈಯರ್ಥ್ಯದೋಷ ಬರುತ್ತದೆ. ಇನ್ನು ಶಮಾದಿಗಳ ಅನಂತರ್ಯ ಹೇಳಬೇಕು. ಶಮವೆಂದರೆ ಮನೋನಿಗ್ರಹ. ಆದಿಪದದಿಂದ ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನಗಳನ್ನು ಸಂಗ್ರಹಿಸಬೇಕು. ದಮವೆಂದರೆ ಬಾಹ್ಯೇಂದ್ರಿಯ ನಿಗ್ರಹ. ಉಪರತಿಃ=ಸಂನ್ಯಾಸ. ತಿತಿಕ್ಷಾ—ಸಹನೆ. । ಗುರುವಾಕ್ಯಾದಿಗಳಲ್ಲಿ ವಿಶ್ವಾಸ ಶ್ರದ್ಧಾ । ಚಿತ್ತೈಕಾಗ್ರ್ಯವೇ ಸಮಾಧಾನ. ಈ ಆನಂತರ್ಯವೂ ಸಂಭವಿಸು ವುದಿಲ್ಲವೆಂದು ಖಂಡಿಸುತ್ತಾನೆ.

ನ ಚರಮಃ । ಶಮಾದ್ಯಾನಂತರಂ ಯೋಗಸ್ಯ ಪ್ರವೃತ್ತಾವಪಿ ತಸ್ಯಾನುಶಾಸನಪ್ರವೃತ್ತ್ಯನು ಬಂಧತ್ವೇನೋಪಾತ್ತತಯಾ ಶಬ್ದತಃ ಪ್ರಾಧಾನ್ಯಾಭಾವಾತ್ । ನ ಚ ಶಬ್ದತಃ ಪ್ರಧಾನಭೂತಸ್ಯಾನುಶಾಸನಸ್ಯ ಶಮಾದ್ಯಾನಂತರ್ಯಮಥಶಬ್ದಾರ್ಥಃ ಕಿಂ ನ ಸ್ಯಾದಿತಿ ವದಿತವ್ಯಮ್ । ಅನುಶಾಸನಮಿತಿ ಹಿ ಶಾಸ್ತ್ರಮಾಹ । ಅನುಶಿಷ್ಯತೇ ವ್ಯಾಖ್ಯಾಯತೇ ಲಕ್ಷಣಭೇದೋಪಾಯಫಲಸಹಿತೋ ಯೋಗೋಯೇನ ತದನು ಶಾಸನಮಿತಿ ವ್ಯುತ್ಪತ್ತೇಃ । ಅನುಶಾಸನಸ್ಯ ಚ ತತ್ವಜ್ಞಾನ ಚಿಖ್ಯಾಪಯಿಷಾ ನಂತರಭಾವಿತ್ವೇನ ಶಮದಮಾದ್ಯಾನಂತರ್ಯನಿಯಮಾಭಾವಾತ್ । ಜಿಜ್ಞಾಸಾ ಜ್ಞಾನಯೋಸ್ತು ಶಮಾದ್ಯಾನಂತರ್ಯಮಾಮ್ನಾಯತೇ—ತಸ್ಮಾಚ್ಛಾಂತೋದಾಂತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾತ್ಮನ್ಯೇವಾತ್ಮಾನಂ ಪಶ್ಯೇತ್ (ಬೃ-೪-೪-೨೩ ಇತ್ಯಾದಿನಾ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಮಾದಿನಿರೂಪಿತಾನಂತರ್ಯವೂ ಸಮಂಜಸವಾಗುವುದಿಲ್ಲ. ಯದ್ಯಪಿ ನಿಯಮ ದಿಂದ ಶಮಾದಿಗಳಿಗೆ ಯೋಗಾಪೇಕ್ಷಯಾ ಪೂರ್ವವೃತ್ತತ್ವವಿರುತ್ತದೆ. ಅದರೂ ಇಲ್ಲಿ ಅಥಶಬ್ದವು ಶಮಾದ್ಯಾನಂತರ್ಯಬೋಧಕವಾಗುವುದಿಲ್ಲ. ಸೂತ್ರದಿಂದ ಉಂಟಾದ ಶಾಬ್ದ ಬೋಧದಲ್ಲಿ ಯಾವುದಕ್ಕೆ ಪ್ರಾಧಾನ್ಯವಿರುತ್ತದೆಯೋ ಅಲ್ಲಿಯೇ ಸೂತ್ರ ಘಟಕವಾದ ಅಥ ಶಬ್ದಾರ್ಥಕ್ಕೆ ಅನ್ವಯ ಹೇಳುವುದು ನ್ಯಾಯವಾಗಿದೆ. "ಅಥ ಯೋಗಾನುಶಾಸನಂ" ಎಂಬ ಸೂತ್ರದ ಅರ್ಥದಲ್ಲಿ ಅನುಶಾಸನಕ್ಕೆ ಪ್ರಾಧಾನ್ಯ ತೋರುತ್ತದೆ. ಯೋಗಕ್ಕೆ ಪ್ರಾಧಾನ್ಯವಿಲ್ಲ. ಅನುಶಾಸನಕ್ಕೆ ವಿಶೇಷಣವಾಗಿ ಅಲ್ಲಿ ಯೋಗಹೇಳಿದೆ. ಅನುಶಾಸನ ವೆಂದರೆ ಶಾಸ್ತ್ರ. ಅಲ್ಲಿ ವಿವೇಕಿಗಳಿಗೆ ಪ್ರವೃತ್ತಿಯುಂಟಾಗಲು ಅನುಬಂಧಚತುಷ್ಟಯ ವನ್ನು ಹೇಳಬೇಕು. ವಿಷಯರೂಪವಾದ ಅನುಬಂಧವು ಅಲ್ಲಿ ಯೋಗಶಬ್ದದಿಂದ ಪ್ರತಿ ಪಾದಿಸಿದೆ. ಆದುದರಿಂದ ಸೂತ್ರಾರ್ಥದಲ್ಲಿ ಅದಕ್ಕೆ ಶಾಬ್ದಪ್ರಾಧಾನ್ಯವಿರುವುದಿಲ್ಲ. ಶಾಬ್ದಪ್ರಾಧಾನ್ಯವಿಲ್ಲದಮೇಲೆ ಅಥಶಬ್ದಾರ್ಥಕ್ಕೆ ಅಲ್ಲಿ ಅನ್ವಯವೂ ಇರುವುದಿಲ್ಲ. ಇದನ್ನೇ "ತಸ್ಯಾನುಶಾಸನಸ್ಯ" ವಾಕ್ಯದಿಂದ ವಿವರಿಸಿರುತ್ತಾನೆ. ಯೋಗವು ಪ್ರಧಾನ ವಾದ ಅನುಶಾಸನದ ಪ್ರವೃತ್ತಿಯನ್ನು ಹುಟ್ಟಿಸುವ ವಿಷಯರೂಪ ಅನುಬಂಧವಾಗಿ ಹೇಳಿರುವುದರಿಂದ ಅದಕ್ಕೆ ಶಾಬ್ದಪ್ರಾಧಾನ್ಯವಿರುವುದಿಲ್ಲ. ಆದುದರಿಂದ ಪ್ರಧಾನವಾದ ಅನುಶಾಸನಕ್ಕೇ ಶಮಾದ್ಯಾನಂತರ್ಯವು ಅಥಶಬ್ದದಿಂದ ಏತಕ್ಕೆ ಹೇಳಬಾರದು ? ಎಂದು ಆಕ್ಷೇಪಿಸುವುದೂ ಯುಕ್ತವಲ್ಲ. "ಯೋಗಶ್ಚಿತ್ತವೃತ್ತಿನಿರೋಧಃ" (ಪಾ ೧-೨) ಸೂತ್ರ ದಿಂದ ಯೋಗಲಕ್ಷಣ ಹೇಳಿದೆ. "ವಿತರ್ಕವಿಚಾರ— (ಪಾ-೧-೧೭) ಇತ್ಯಾದಿ ಸೂತ್ರ ಗಳಿಂದ ಸಂಪ್ರಜ್ಞಾತಾದಿಭೇದಗಳು ಹೇಳಿವೆ. ಎರಡನೆಯ ಸಾಧನಪಾದದಲ್ಲಿ ಯೋಗದ ಉಪಾಯ ಹೇಳಿದೆ. ನಾಲ್ಕನೆಯ ಕೈವಲ್ಯಪಾದದಲ್ಲಿ ಮೋಕ್ಷರೂಪಫಲವು ಹೇಳಿದೆ. ಇಂತಹ ಯೋಗವು ಯಾವುದರಿಂದ ಹೇಳಲ್ಪಡುವುದೋ ಅದು ಅನುಶಾಸನ.

'ಅನುಶಾಸನಸ್ಯ ಇತಿ. ಅನುಶಾಸನಾಪೇಕ್ಷಯಾ ನಿಯಮದಿಂದ ಯಾವುದು ಪೂರ್ವದಲ್ಲಿರುವುದೋ ಅದರ ಅನಂತರ್ಯವನ್ನೇ ಅನುಶಾಸನ ಸಂಬದ್ಧವಾದ ಅಥಶಬ್ದಕ್ಕೆ ಹೇಳಬೇಕು. ಅನುಶಾಸನವು ಸೂತ್ರಕಾರಕರ್ತೃಕವಾಗಿದೆ. ಸೂತ್ರಕಾರನಿಗೆ ತತ್ತ್ವ ಜ್ಞಾನಪ್ರಕಾಶನೇಚ್ಛಾನಂತರದಲ್ಲಿ ಶಾಸ್ತ್ರಕರಣಪ್ರವೃತ್ತಿಯುಂಟಾಗುತ್ತದೆ. ಶಮಾದಿ ಸಾಧನಸಂಪತ್ಯನಂತರವೆಂದು ಅಲ್ಲಿ ಹೇಳಲು ಸಾಧ್ಯವಿಲ್ಲ. ತತ್ವಜ್ಞಾನಚಿಕ್ಷಾ ಪಯಿಷಾ—ತತ್ವಜ್ಞಾನಪ್ರಕಾಶನೇಚ್ಛಾ. ಆದುದರಿಂದ ಶಮಾದ್ಯಾನಂತರ್ಯವನ್ನು ಅಥ ಶಬ್ದ ಹೇಳುತ್ತದೆಂಬ ವಾದ ಸಮಂಜಸವಾಗುವುದಿಲ್ಲ. ಹಾಗಾದರೆ ಶ್ರುತಿಯಲ್ಲಿ. ಶಮಾದ್ಯಾನಂತರ್ಯವನ್ನು ಯಾವುದಕ್ಕೆ ಹೇಳಿದೆ ? ಎಂದರೆ ಜಿಜ್ಞಾಸಾಜ್ಞಾನಗಳಿಗೆ ಶಮಾದ್ಯಾನಂತರ್ಯ ಹೇಳಿದೆಯೆಂದು ತೋರಿಸುತ್ತಾನೆ. 'ಜಿಜ್ಞಾಸಾ—' ಇತಿ. 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬಲ್ಲಿ ಜಿಜ್ಞಾಸಾ, ಅಥವಾ ಜ್ಞಾನಕ್ಕೆ ಪ್ರಾಧಾನ್ಯವಿರು ತ್ತದೆ. ಅಲ್ಲಿ ಅನುಶಾಸನವಿಚಾರವೇ ಪ್ರಸಕ್ತವಾಗುವುದಿಲ್ಲ. ಅನುಶಾಸನವಾಚಕ ಶಬ್ದವೂ ಅಲ್ಲಿರುವುದಿಲ್ಲ. ಆದುದರಿಂದ ಜಿಜ್ಞಾಸಾ ಅಥವಾ ಜ್ಞಾನಕ್ಕೆ ಶಮಾದ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಂತರ್ಯವು ಶ್ರುತಿಯಿಂದ ವ್ಯಕ್ತವಾಗುತ್ತದೆ. ಅಂತಃಕರಣತೃಷ್ಣೆಯಿಂದ ನಿವೃತ್ತನಾದವನೇ ಶಾಂತನು. ನಿಗೃಹೀತಬಾಹ್ಯೇಂದ್ರಿಯವುಳ್ಳನನೇ ದಾಂತನು. ಸರ್ವೈಷಣಾವಿನಿರ್ಮುಕ್ತನೇ ಉಪರತನು. ಜೀವನಾಽವಿಚ್ಛೇದದಿಂದ ಶೀತೋಷ್ಣಾದಿದ್ವಂದ್ವ ಸಹಿಷ್ಣುವಾದವನು ತಿತುಕ್ಷು. ಚೆನ್ನಾಗಿ ಆತ್ಮನಲ್ಲಿ ಸ್ಥಾಪಿಸಿದ ಚಿತ್ತವುಳ್ಳವನು ಸಮಾಹಿತನು. ಇಂತಹನೇ ಆತ್ಮಸಾಕ್ಷಾತ್ಕಾರ ಹೊಂದುತ್ತಾನೆಂದರ್ಥ.

ನಾಪಿ ತತ್ತ್ವಜ್ಞಾನಚಿಕ್ಷಾಪಯಿಷಾನಂತರ್ಯಮಥಶಬ್ದಾರ್ಥಃ । ತಸ್ಯ ಸಂಭವೇಽಪಿ ಶ್ರೋತೃಪ್ರತಿಪತ್ತಿಪ್ರವೃತ್ತ್ಯೋರನುಪಯೋಗೇನಾನಾಭಿಧೇಯತ್ವಾತ್ । ತವಾಪಿ ನಿಃಶ್ರೇಯಸ ಹೇತುತಯಾ ಯೋಗಾನುಶಾಸನಂ ಪ್ರಮಿತಂ ನ ವಾ । ಆದ್ಯೇ ತದಭಾವೇಪ್ಯುಪಾದೇಯತ್ವಂ ಭವೇತ್ । ದ್ವಿತೀಯೇ ತದ್ಭಾವೇಽಪಿ ಹೇಯತ್ವಂ ಸ್ಯಾತ್ । ಪ್ರಮಿತಂ ಚಾಸ್ಯ ನಿಃ ಶ್ರೇಯಸನಿದಾನತ್ವಮ್. ।

ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾಧೀರೋ ಹರ್ಷಶೋಕೌ ಜಹಾತಿ । (ಕಾ-೨-೧೨) ಇತಿ ಶ್ರುತೇಃ । "ಸಮಾಧಾವಚಲಾ ಬುದ್ಧಿಸ್ತದಾಯೋಗಮವಾಪ್ಸ್ಯಸಿ" (೫-೨-೫೩) ಇತಿ ಸ್ಮೃತೇಶ್ಚ ॥ ಅತ ಏವ ಶಿಷ್ಯಪ್ರಶ್ನತಪಶ್ಚರಣರಸಾಯನೋಪಯೋಗಾದ್ಯಾನಂತರ್ಯಂ ಪರಾಕೃತಮ್ । ಅಥಾತೋ ಬ್ರಹ್ಮಜಿಜ್ಞಾಸಾ (ಬ್ರ-ಸೂ ೧-೧-೧) ಇತ್ಯತ್ರ ತು ಬ್ರಹ್ಮಜಿಜ್ಞಾಸಾಯಾ ಅನಧಿಕಾರ್ಯತ್ವೇನಾಧಿಕಾರಾರ್ಥತ್ವಂ ಪರಿತ್ಯಜ್ಯ ಸಾಧನಚತುಷ್ಟಯ ಸಂಪತ್ತಿವಿಶಿಷ್ಟಾಧಿಕಾರಿಸಮರ್ಪಣಾಯ ಶಮದಮಾದಿವಾಕ್ಯವಿಹಿತಾಚ್ಛಮಾದೇರಾನಂತರ್ಯಮಥಶಬ್ದಾರ್ಥ ಇತಿ ಶಂಕರಾಚಾರ್ಯೈರ್ನಿರಟಂಕಿ ॥

ಅನುಶಾಸನಕ್ಕಿಂತಲೂ ನಿಯಮದಿಂದ ಪೂರ್ವಭಾವಿಯಾದ ತತ್ತ್ವಜ್ಞಾನಾದಿ ಪ್ರಕಾಶಾನೇಚ್ಛಾನಂತರ್ಯವು ಅಥಶಬ್ದದಿಂದ ಏಕೆ ಹೇಳಬಾರದು ? ಎಂಬುದಕ್ಕೆ ಸಮಾಧಾನ ಹೇಳುತ್ತಾನೆ. 'ನಾಪಿ—' ಇತಿ. ಹಾಗೆ ಆನಂತರ್ಯ ಸಂಭವಿಸಿದರೂ ಅದು ಶ್ರೋತೃವಿನ ಜ್ಞಾನಕ್ಕಾಗಲೀ ಪ್ರವೃತ್ತಿಗಾಗಲೀ ಕಾರಣವಾಗದಿರುವುದರಿಂದ ಹಾಗೆ ಹೇಳುವುದು ವ್ಯರ್ಥವಾಗುತ್ತದೆ. ಶಾಸ್ತ್ರಕಾರನು ಯಾವುದನ್ನು ಹೊಂದಿದಮೇಲೆ ಶಾಸ್ತ್ರವನ್ನು ರಚಿಸುತ್ತಾನೋ ಅದರ ಜ್ಞಾನವು ಶ್ರೋತೃಗಳಿಗೆ ಶಾಸ್ತ್ರದಿಂದ ಉಂಟಾಗುವ ಯೋಗವಿಷಯಕಜ್ಞಾನದಲ್ಲಿಯಾಗಲೀ, ಯೋಗವಿಷಯಕ ಪ್ರವೃತ್ತಿಯಲ್ಲಿಯಾಗಲೀ ಕಾರಣವಾಗಲಾರದು. ಅದರ ಆನಂತರ್ಯ ಹೇಳುವುದು ನಿಷ್ಫಲವಾಗುವುದರಿಂದ ಹಾಗೆ ಹೇಳುವುದು ಯುಕ್ತವಲ್ಲ. ಈ ಮಾತು ತತ್ತ್ವಪ್ರಕಾಶನೇಚ್ಛೆಗೆ ಅನುಶಾಸನದಪೂರ್ವಭಾವಿತ್ವವು ನಿಯಮದಿಂದ ಇದೆಯೆಂದು ಅಂಗೀಕರಿಸಿ ಹೇಳಿದುದಾಗಿದೆ. ವಿಚಾರ ಮಾಡಿದರೆ, ಇದೂ ಸರಿಯಲ್ಲವೆಂದು ತಿಳಿಸುತ್ತಾನೆ. 'ತವಾಪಿ—' ಇತಿ. ಆನಂತರ್ಯವು ಅಥ ಶಬ್ದಾರ್ಥವೆಂದು ಹೇಳುವವನ ಮತದಲ್ಲಿಯೂ ಯೋಗಾನುಶಾಸನವು ಮೋಕ್ಷ ಹೇತುವೆಂದು ಪ್ರಮಿತವಾಗಿದೆಯೋ ಇಲ್ಲವೇ ? ಆದ್ಯೇ—ಪ್ರಮಿತವೆಂಬ ಮೊದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲನೇ ಮತದಲ್ಲಿ. ಯೋಗಾನುಶಾಸನವು ಮೋಕ್ಷಹೇತುವೆಂದು ನಿಶ್ಚಯವಾದರೆ ಆಗ ತತ್ತ್ವಜ್ಞಾನ ಪ್ರಕಾಶನೇಚ್ಛಾ ಇಲ್ಲದಿದ್ದರೂ ಯೋಗಾನು ಶಾಸನವನ್ನು ಮಾಡಲೇಬೇಕೆಂದು ತಿಳಿಯುತ್ತದೆ. ಎರಡನೇ ಮತದಲ್ಲಿ ಮೋಕ್ಷಹೇತುವೆಂಬ ನಿಶ್ಚಯವಿಲ್ಲದಿದ್ದರೆ ಆಗ ತತ್ತ್ವ ಜ್ಞಾನಪ್ರಕಾಶನೇಚ್ಛಾ ಇದ್ದರೂ ಯೋಗಾನುಶಾಸನಕ್ಕೆ ಅಕರ್ತವ್ಯತ್ವಬರಬೇಕಾಗುತ್ತದೆ. ಹೀಗೆ ವ್ಯಭಿಚಾರ ಸಂಭವಿಸುವುದರಿಂದ ಅನುಶಾಸನಕ್ಕಿಂತ ತತ್ತ್ವಪ್ರಕಾಶನೇಚ್ಛೆಗೆ ನಿಯಮ ದಿಂದ ಪೂರ್ವಭಾವಿತ್ವವು ಸಂಭವಿಸುವುದಿಲ್ಲ. ಎರಡನೆಯ ಪಕ್ಷದಲ್ಲ ಇನ್ನೊಂದು ದೋಷವನ್ನು ತೋರಿಸುತ್ತಾನೆ.

'ಪ್ರಮಿತಂ' —ಇತಿ. ಯೋಗಶಾಸ್ತ್ರಕ್ಕೆ ಯೋಗದಮೂಲಕ ಮೋಕ್ಷ ಹೇತುತ್ವ ನಿಶ್ಚಿತವಾಗಿರುತ್ತದೆ. ಆತ್ಮನಲ್ಲಿ ಚಿತ್ತಸಮಾಧಾನವೇ ಅಧ್ಯಾತ್ಮಯೋಗ. ಇದಕ್ಕೆ ನಿದಿಧ್ಯಾಸನವೆಂದು ಹೆಸರು. ಆಯೋಗದ ಅಧಿಗಮವೆಂದರೆ ಪ್ರಾಪ್ತಿ. ಅದರಿಂದ ದೇವಂ ಅಂದರೆ ಆತ್ಮನನ್ನು ತಿಳಿದು (ಸಾಕ್ಷಾತ್ಕರಿಸಿ) ಧೀರಃ—ಜ್ಞಾನಿಯು ಹರ್ಷಶೋಕಗಳನ್ನು ಬಿಡುತ್ತಾನೆ. ಹರ್ಷಶೋಕರಹಿತನಾಗಿ ಮುಕ್ತನಾಗುತ್ತಾನೆ ಎಂದರ್ಥ. 'ಸಮಾಧೌ'— ಇತಿ. ಯಾವಾಗ ನಿನ್ನ ಬುದ್ಧಿಯು ಸಮಾಧಿಯಲ್ಲಿ ಆತ್ಮನಲ್ಲಿ ಸ್ಥಿರವಾಗುವುದೋ ಆಗ ಯೋಗ ಅಂದರೆ ಯೋಗಫಲವಾದ ಆತ್ಮಸಾಕ್ಷಾತ್ಕಾರವನ್ನು ಹೊಂದುವಿ, ಮುಕ್ತನಾಗುವಿ ಎಂದರ್ಥ. ಈ ಎರಡು ಶ್ರುತಿಸ್ಮೃತಿಗಳಿಂದ ಯೋಗಕ್ಕೆ ಮೋಕ್ಷಹೇತುತ್ವವು ಸಿದ್ಧವಾಗು ತ್ತದೆ. ಶಾಸ್ತ್ರಕಾರರಿಗೆ ತಮ್ಮ ತತ್ತ್ವಜ್ಞಾನಪ್ರಕಾಶನೇಚ್ಛೆ ಇಲ್ಲದಿದ್ದರೂ ಅನುಶಾಸನ ಮಾಡಬೇಕಾದುದರಿಂದ ತತ್ತ್ವಜ್ಞಾನಪ್ರಕಾಶನೇಚ್ಛೆಯು ನಿಯಮದಿಂದ ಅನುಶಾಸನ ಕ್ಕಿಂತ ಪೂರ್ವದಲ್ಲಿರಬೇಕೆಂದು ಸಿದ್ಧವಾಗುವುದಿಲ್ಲ.

ಎಲ್ಲಿ ಮಧ್ಯದಲ್ಲಿ ಅಥಶಬ್ದ ಹೇಳಿದೆಯೋ ಅಲ್ಲಿ ಅದರಿಂದ ಪ್ರತಿಪಾದಿತವಾದ ಆನಂತರ್ಯವು ಪೂರ್ವಪ್ರಕೃತಾರ್ಥನಿರೂಪಿತವೇ ಆಗಿರುತ್ತದೆ. ಅಲ್ಲಿ ತದಾನಂತರ್ಯ ಪ್ರತಿ ಪಾದನೆಗೆ ಉಪಯೋಗವಿರಲಿ ಅಥವಾ ಇಲ್ಲದಿರಲಿ ದೋಷವಿಲ್ಲ. ಪೂರ್ವಪ್ರಕೃತಾರ್ಥಕ್ಕೆ ನಿಯಮದಿಂದ ಪೂರ್ವವೃತ್ತತ್ವವೂ ಅಲ್ಲಿ ಅಪೇಕ್ಷಿತವಾಗುವುದಿಲ್ಲ. 'ದೇವದತ್ತಃ ಗತೋ ನವಾ' ಎಂದು ಪ್ರಶ್ನಿಸಿದಾಗ 'ಸಃ ಸ್ನಾನಂ ಕೃತ್ವಾ ಅಥಗತಃ' ಎನ್ನುತ್ತಾರೆ. ಇಲ್ಲಿ ಪ್ರಶ್ನೆಗನುಗುಣವಾಗಿ ಗಮನದಲ್ಲಿ ಸ್ನಾನಾನಂತರ್ಯಪ್ರತಿಪಾದನವಿದ್ದರೂ, ಅದಕ್ಕೆ ಉಪ ಯೋಗವಿಲ್ಲದಿದ್ದರೂ, ಸ್ನಾನಕ್ಕೆ ಗಮನಕ್ಕಿಂತ ನಿಯಮದಿಂದ ಪೂರ್ವವೃತ್ತತ್ವವಿಲ್ಲ ದಿದ್ದರೂ ಅಥಶಬ್ದವು ಸ್ನಾನಾನಂತರ್ಯವನ್ನು ತಿಳಿಸುತ್ತದೆ. ಎಲ್ಲಿ ಪೂರ್ವ ಪ್ರಕೃತವು ಯಾವುದೂ ಇಲ್ಲದೆ ಅಥಶಬ್ದಪ್ರಯೋಗವಿದೆಯೋ ಅಲ್ಲಿ ಅಥಶಬ್ದಕ್ಕೆ ಆನಂತರ್ಯಾರ್ಥವನ್ನು ಸ್ವೀಕರಿಸಿದರೆ ಪೂರ್ವವೃತ್ತವು ಯೋಗ್ಯತೆಯಿಂದ ಆಕ್ಷೇಪದಿಂದಲೇ ನಿಶ್ಚಯಿಸಲ್ಪಡುತ್ತದೆ. ಅಲ್ಲಿ ಆನಂತರ್ಯವು ಅವ್ಯಭಿಚರಿತ ಪೂರ್ವವೃತ್ತಾಪೇಕ್ಷೆಯಿಂದಲೇ ಹೇಳಬೇಕು. ಅಲ್ಲಿಯೂ ಆನಂತರ್ಯಪ್ರತಿಪಾದನಕ್ಕೆ ಉಪಯೋಗವಿರುವಾಗಮಾತ್ರ ಹೀಗೆ ಆಕ್ಷೇಪಿಸಬೇಕು. ಇಲ್ಲ ವಾದರೆ ಆಕ್ಷೇಪವೇ ಸಂಭವಿಸಲಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಅತಏವ' — ಇತಿ. ತತ್ತ್ವಜ್ಞಾನಪ್ರಕಾಶನೇಚ್ಛಾನಂತರ್ಯವು ನಿರಾಕೃತವಾದಂತೆಯೇ, ಶಿಷ್ಯಪ್ರಶ್ನಾನಂತರ್ಯವೂ ನಿರಾಕೃತವಾಗುತ್ತದೆ. ಎರಡಕ್ಕೂ ಸಮಾಧಾನ ಒಂದೇ ರೀತಿಯಾಗಿರುತ್ತದೆ. ಶಾಸ್ತ್ರಕಾರರ ಪ್ರವೃತ್ತಿಯು ನಾನಾ ರೀತಿಯಾಗಿರುತ್ತದೆ. ಪಾಶುಪತಶಾಸ್ತ್ರದಲ್ಲಿ ಶಿಷ್ಯಪ್ರಶ್ನಾನಂತರದಲ್ಲಿ ಪ್ರವೃತ್ತಿಯುಂಟಾಗಿದೆ. ತಪಶ್ಚರ್ಯದಿಂದ ಜ್ಞಾನಸಂಪಾದನೆಯಾದ ಮೇಲೆ ಪಾಣಿನಿವ್ಯಾಕರಣದಲ್ಲಿ ಪ್ರವೃತ್ತಿ ಕಂಡು ಬಂದಿದೆ. ಕೆಲವು ಕಡೆ ರಸಾಯನಾದ್ಯುಪಯೋಗವಾದನಂತರ ಪ್ರವೃತ್ತಿ ತೋರಿದೆ. ಪಾರದಾದಿ ರಸ ಸೇವನದಿಂದ ತತ್ವಸಾಕ್ಷಾತ್ಕಾರವಾದ ಮೇಲೆ ಅನುಶಾಸನದಲ್ಲಿ ಪ್ರವೃತ್ತಿಯುಂಟಾಗುತ್ತದೆ. ಆದಿಪದದಿಂದ ಗುರ್ವಾಜ್ಞೆ, ಲೋಕಾನುಕಂಪಾದಿಗಳಿಗೆ ಸಂಗ್ರಹಹೇಳಬೇಕು. ಇವುಗಳಿಂದಲೂ ಶಾಸ್ತ್ರಕಾರರಿಗೆ ಶಾಸ್ತ್ರರಚನೆಯಲ್ಲಿ ಪ್ರವೃತ್ತಿಯುಂಟಾಗುತ್ತದೆ. ಶಿಷ್ಯಪ್ರಶ್ನಾದಿಗಳ ಮಧ್ಯದಲ್ಲಿ ಯಾವುದಕ್ಕೂ ಪೂರ್ವವೃತ್ತತ್ವವಿಲ್ಲದಿರುವುದರಿಂದ ತದಾನಂತರ್ಯ ಪ್ರತಿಪಾದನೆಗೆ ಪ್ರಯೋಜನವಿಲ್ಲದಿರುವುದರಿಂದಲೂ ಅಥಶಬ್ದವು ತದಾನಂತರ್ಯಬೋಧಕವಾಗುವುದಿಲ್ಲ. 'ಅಥಾತೋ'—ಇತಿ. ಅಧಿಕಾರವೆಂದರೆ ಆರಂಭ. ಬ್ರಹ್ಮಜ್ಞಾನೇಚ್ಛೆಯೇ ಬ್ರಹ್ಮಜಿಜ್ಞಾಸಾ. ಇಲ್ಲಿ ಅಥಶಬ್ದಕ್ಕೆ ಅಧಿಕಾರಾರ್ಥ ಹೇಳಿದರೆ ಬ್ರಹ್ಮಜ್ಞಾನೇಚ್ಛೆಯು ಆರಂಭಿಸಲ್ಪಡುತ್ತದೆ ಎಂದರ್ಥವಾಗುತ್ತದೆ. ಇಚ್ಛೆಯನ್ನಾರಂಭಿಸಲು ಅಶಕ್ಯವಾದುದರಿಂದ ಅರ್ಥವು ಸಂಭವಿಸುವುದಿಲ್ಲ. ಅಲ್ಲಿ ಪ್ರತ್ಯಧಿಕರಣನಲ್ಲಿಯೂ ಇಚ್ಛಾಮಾಡಲ್ಪಡುವುದಿಲ್ಲ. ಅಲ್ಲಿ ಹೇಳುವುದು ವಿಚಾರ· ಜಿಜ್ಞಾಸಾಪದಕ್ಕೆ ಲಕ್ಷಣಯಾ ವಿಚಾರವೇ ಅರ್ಥವೆಂದು ಹೇಳಲು ಸಾಧ್ಯವಿಲ್ಲ. ಯದ್ಯಪಿ ಸನ್‌ಪ್ರತ್ಯಯಾಂತಜ್ಞಾಧಾತುವಿಗೆ ವಿಚಾರಾರ್ಥದಲ್ಲಿ ಪ್ರಯೋಗವು ಶ್ರುತಿಯಲ್ಲಿ ದೃಷ್ಟವಾಗಿದೆ. 'ಸವಿಜಿಜ್ಞಾಸಿತವ್ಯಃ (ಛಾ-೮೧೭-೧) ತದ್ವಿಜಿಜ್ಞಾಸಸ್ವ (ತೈ-೩-೧-೨) ಇತ್ಯಾದಿ ಸ್ಥಳಗಳಲ್ಲಿ ವಿಚಾರವೇ ಅರ್ಥ. ಇಚ್ಛೆಗೆ ವಿಧೇಯತ್ವ ಇಲ್ಲದಿರುವುದರಿಂದ ಅಲ್ಲಿ ಜ್ಞಾನೇಚ್ಛಾರೂಪಾರ್ಥ ಹೇಳಲು ಶಕ್ಯವಿಲ್ಲ. ಹೀಗೆ ಬ್ರಹ್ಮಸೂತ್ರಕಾರರು ಪ್ರತ್ಯಧಿಕರಣದಲ್ಲಿಯೂ ವಿಚಾರವನ್ನೇ ಮಾಡುವುದರಿಂದ ಅಥಶಬ್ದಕ್ಕೆ ಅಧಿಕಾರಾರ್ಥವನ್ನು ಸ್ವೀಕರಿಸುವುದರಿಂದ ಯಾವ ಬಾಧಕವೂ ಇಲ್ಲವೆಂದು ಆಕ್ಷೇಪಿಸಬಾರದು. ಅಧಿಕಾರಾರ್ಥವನ್ನು ಹೇಳಲು ಶಕ್ಯವಿದ್ದರೂ ಅದನ್ನು ಬಿಟ್ಟು ಅಧಿಕಾರವಿಶೇಷಲಾಭಕ್ಕೋಸ್ಕರ ಆನಂತರ್ಯಾರ್ಥವನ್ನೇ ಭಾಷ್ಯಕಾರರು ಸ್ವೀಕರಿಸಿರುತ್ತಾರೆ. ಬ್ರಹ್ಮವಿಚಾರವು ಪ್ರಾರಂಭಿಸಲ್ಪಡುತ್ತದೆಯೆಂದರೆ ಬ್ರಹ್ಮಜಿಜ್ಞಾಸುವೇ ಇಲ್ಲಿ ಅಧಿಕಾರಿಯೆಂದು ಸಾಮಾನ್ಯವಾಗಿ ಆಕ್ಷೇಪದಿಂದಲೇ ತಿಳಿಯಬಹುದು. ಆನಂತರ್ಯಾರ್ಥವನ್ನು ಸ್ವೀಕರಿಸಿದಾಗ ಯಾವುದರ ಆನಂತರ್ಯವೆಂದು ನಿಯಮದಿಂದ ಆಕಾಂಕ್ಷಾ ಉಂಟಾಗುವುದರಿಂದ ಯೋಗ್ಯತಾಬಲದಿಂದ ಸಾಧನಚತುಷ್ಟಯ ಸಂಪತ್ತ್ಯನಂತರವೆಂದು ನಿಶ್ಚಿತವಾಗುತ್ತದೆ ಸಾಧನ ಚತುಷ್ಟಯ ಸಂಪನ್ನನಾದ ಜಿಜ್ಞಾಸುವೇ ಇಲ್ಲಿ ಅಧಿಕಾರಿಯೆಂದು ಅಧಿಕಾರಿ ವಿಶೇಷಲಬ್ಧವಾಗುತ್ತದೆ. ಇದನ್ನೇ ಶಂಕರಾಚಾರ್ಯರು ಶಮದಮಾದಿವಾಕ್ಯವಿಹಿತವಾದ ಶಮಾದಿಗಳ ಆನಂತರ್ಯವನ್ನು ಅಥಶಬ್ದಕ್ಕೆ ಹೇಳಬೇಕೆಂದು ವಿವರಿಸಿರುತ್ತಾರೆ. ನಿರಟಂಕಿ—ನಿಶ್ಚಯಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಮಾನಾಮ ಭೂದಾನಂತರ್ಯಾರ್ಥೋಽಥಶಬ್ದಃ । ಮಂಗಲಾರ್ಥಃ ಕಿಂ ನಸ್ಯಾತ್ । ಮಂಗಲಸ್ಯ ವಾಕ್ಯಾರ್ಥೇ ಸಮನ್ವಯಾಭಾವಾತ್ । ಅಗರ್ಹಿತಾಭೀಷ್ಟಾವಾಪ್ತಿರ್ಮಂಗಲಮ್ । ಅಭೀಷ್ಟಂ ಚ ಸುಖಾವ್ಯಾಪ್ತಿ ದುಃಖಪರಿಹಾರರೂಪತಯೇಷ್ಟಮ್ । ಯೋಗಾನುಶಾಸನಸ್ಯ ಚ ಸುಖದುಃಖನಿವೃತ್ತ್ಯೋರನ್ಯತರತ್ವಾಭಾವಾತ್ ನ ಮಂಗಲತಾ। ತಥಾಚ ಯೋಗಾನುಶಾಸನಂ ಮಂಗಲಮಿತಿ ನಸಂಪನೀಪದ್ಯತೇ ಮೃದಂಗಧ್ವನೇರಿವಾಥಶಬ್ದಶ್ರವಣಸ್ಯ ಕಾರ್ಯತಯಾ ಮಂಗಲಸ್ಯ ವಾಚ್ಯತ್ವಲಕ್ಷ್ಯತ್ವಯೋರಸಂಭವಾಚ್ಚ । ಯಥಾರ್ಥಿಕಾರ್ಥೋವಾಕ್ಯಾರ್ಥೇ ನ ನಿವಿಶತೇ ತಥಾ ಕಾರ್ಯಮಪಿ ನ ನಿವಿಶೇತ। ಅಪದಾರ್ಥತ್ವಾವಿಶೇಷಾತ್ । ಪದಾರ್ಥ ಏವ ಹಿ ವಾಕ್ಯಾರ್ಥೇ ಸಮನ್ವೀಯತೇ । ಅನ್ಯಥಾ ಶಬ್ದಪ್ರಮಾಣಕಾನಾಂ ಶಾಬ್ದೀ ಹ್ಯಾಕಾಂಕ್ಷಾ ಶಬ್ದೇನೈವ ಪೂರ್ಯತ ಇತಿ ಮುದ್ರಾಭಂಗಃ ಕೃತೋಭವೇತ್ ।

ಅಥಶಬ್ದಕ್ಕೆ ಆನಂತರ್ಯಾರ್ಥ ಸಂಭವಿಸದಿರುವುದರಿಂದ ಅದು ಬೇಡ. ಮಂಗಲಾರ್ಥವನ್ನು ಸ್ವತಂತ್ರವಾಗಿ ಏಕೆ ಸ್ವೀಕರಿಸಬಾರದು ? ಅಂದರೆ ವಾಕ್ಯಾರ್ಥದಲ್ಲಿ ಸಮನ್ವಯ ಹೊಂದದಿರುವುದರಿಂದ ಅದನ್ನು ಹೇಳಬಾರದು ಎಂದು ಮೊದಲಿನ ಸಮಾಧಾನ. ಯೋಗಾನುಶಾಸನವು ಮಂಗಲವು ಎಂಬ ವಾಕ್ಯಾರ್ಥ ಕೊಡುವುದಿಲ್ಲ. ಅಗರ್ಹಿತವಾಗಿ ನಿಂದಿತವಾಗದೇ ಇರುವ, ಅಭೀಷ್ಟದ—ಸುಖಾವಪ್ತಿ, ದುಃಖ ಪರಿಹಾರರೂಪವಾದ ಇಷ್ಟದ ಪ್ರಾಪ್ತಿಗೆ ಮಂಗಲವೆಂದು ಹೆಸರು. ಯೋಗಾನುಶಾಸನವು ಸುಖ ಅಥವಾ ದುಃಖನಿವೃತ್ತಿಗಳಲ್ಲಿ ಒಂದೂ ಆಗದಿರುವುದರಿಂದ ಮಂಗಲತ್ವವು ಅದಕ್ಕೆ ಸಂಭವಿಸುವುದಿಲ್ಲ. ಅಥ ಶಬ್ದಕ್ಕೆ ಮಂಗಲವು ವಾಚ್ಯಾರ್ಥವಾಗುವುದಿಲ್ಲವೆಂದು ಹಿಂದೆಯೇ ಹೇಳಿದೆ. 'ತಥಾಚ'—ಇತಿ. ಎಂಬುದರಿಂದ ಅದನ್ನೇ ವಿವರಿಸುತ್ತಾನೆ. ನ ಸಂಪನೀಪದ್ಯತೇ—ಚೆನ್ನಾಗಿ ಕೊಡುವುದಿಲ್ಲ ಮೃದಂಗಧ್ವನಿಯಂತೆ ಅಥ ಶಬ್ದದ ಶ್ರವಣ ಅಥವಾ ಉಚ್ಚಾರಣಕ್ಕೆ (ಉಪಲಕ್ಷಣದಿಂದ ಒಂದು ಅರ್ಥ) ಮಂಗಲವು ಕಾರ್ಯವಾಗಿದೆ. ಅದು ಅಥಶಬ್ದದ ವಾಚ್ಯಾರ್ಥವಾಗುವುದಿಲ್ಲ. ಹಾಗೆಯೇ ಲಕ್ಷ್ಯಾರ್ಥವೂ ಆಗುವುದಿಲ್ಲ. ವಾಚ್ಯಾರ್ಥಸಂಬಂಧ ಹೊಂದಿದ ಅರ್ಥವೇ ಲಕ್ಷ್ಯಾರ್ಥವಾಗುವುದರಿಂದ ಅದು ಇಲ್ಲಿ ಸಂಭವಿಸುವುದಿಲ್ಲ. ಮಂಗಲಾರ್ಥವು ಆ ಸೂತ್ರದಲ್ಲಿ ಆನಂತರ್ಯಾದಿವಾಚ್ಯಗಳಲ್ಲಿ ಯಾವುವರಿಂದಲಾದರೂ ಒಂದರಿಂದ ಸಂಬದ್ಧವಾಗಿ ಅದು ಸೂತ್ರಕಾರರಿಗೆ ತಿಳಿಸಲು ಇಷ್ಟವಾಗಿದೆ ಎಂದು ಹೇಳಲು ಸಾಧ್ಯವಿಲ್ಲವೆಂದು ತಾತ್ಪರ್ಯ. ಆದುದರಿಂದ ಮಂಗಲಕ್ಕೆ ವಾಕ್ಯಾರ್ಥದಲ್ಲಿ ಅನ್ವಯವಿಲ್ಲವೆಂದು ತಿಳಿಯಬೇಕು. ವಾಕ್ಯಾರ್ಥದಲ್ಲಿ ಅದಕ್ಕೆ ಪ್ರವೇಶ ಯೋಗ್ಯತೆಯೂ ಇಲ್ಲವೆಂದು ತಿಳಿಸುತ್ತಾನೆ. 'ಯಥಾ'—ಇತಿ. ಆರ್ಥಿಕವಾದ ಅರ್ಥಕ್ಕೆ ವಾಕ್ಯಾರ್ಥದಲ್ಲಿ ಹೇಗೆ ಪ್ರವೇಶವಿಲ್ಲವೋ ಅದರಂತೆ ಕಾರ್ಯಕ್ಕೂ ಪ್ರವೇಶವಿಲ್ಲ. 'ಸ್ಥೂಲನಾಗಿರುವ ದೇವದತ್ತನು ಹಗಲಿನಲ್ಲಿ ಊಟಮಾಡುವುದಿಲ್ಲ' ಎಂದರೆ ಅಲ್ಲಿ ಅರ್ಥಾತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾತ್ರಿಭೋಜನಮಾಡುತ್ತಾನೆಂದು ತಿಳಿಯುತ್ತದೆ. ಅದಕ್ಕೆ ಹೇಗೆ ವಾಕ್ಯಾರ್ಥದಲ್ಲಿ ಅನ್ವಯವಿಲ್ಲವೋ ಹಾಗೆಯೇ ಕಾರ್ಯವಾದ ಅರ್ಥಕ್ಕೂ ಪದಾರ್ಥತ್ವವಿಲ್ಲದಿರುವುದರಿಂದ ವಾಕ್ಯಾರ್ಥದಲ್ಲಿ ಅನ್ವಯವಿಲ್ಲ. (ಎರಡೂ ಅಪದಾರ್ಥಗಳಾಗಿರುತ್ತವೆ.) ಪದದಿಂದ ತೋರುವ ಅರ್ಥಕ್ಕೆ ವಾಕ್ಯಾರ್ಥದಲ್ಲಿ ಅನ್ವಯಲೋಕಪ್ರಸಿದ್ಧವಾಗಿದೆ. ಹೀಗೆ ಅಂಗೀಕರಿಸದಿದ್ದರೆ ಶಾಬ್ದಾಕಾಂಕ್ಷೆಯು ಶಬ್ದದಿಂದಲೇ ಪೂರೈಸಲ್ಪಡುತ್ತದೆ ಎಂಬ ಮೀಮಾಂಸಕರ ನಿಯಮಭಂಗ (ಮುದ್ರಾಹಾನಿ)ವಾಗುತ್ತದೆ. ಆದುದರಿಂದ ಮಂಗಲಾರ್ಥ ಹೇಳಬಾರದು.

ನನು ಪ್ರಾರಿಪ್ಸಿತಪ್ರಬಂಧಪರಿಸಮಾಪ್ತಿ ಪರಿಪಂಥಿಪ್ರತ್ಯೂಹವ್ಯೂಹಪ್ರಶಮನಾಯಶಿಷ್ಟಾಚಾರಪರಿಪಾಲನಾಯ ಚ ಶಾಸ್ತ್ರಾರಂಭೇ ಮಂಗಲಾಚರಣಮನುಷ್ಠೇಯಮ್ । ಮಂಗಲಾದೀನಿ ಮಂಗಲಮಧ್ಯಾನಿ ಮಂಗಲಾಂತಾನಿ ಚ ಶಾಸ್ತ್ರಾಣಿ ಪ್ರಥಂತೇ ಆಯುಷ್ಮತ್ಪುರುಷಕಾಣಿ ವೀರಪುರುಷಕಾಣಿ ಚ ಭವಂತಿ (ಪಾತ-ಭಾ-೧-೩-೧) ಇತ್ಯಭಿಯುಕ್ತೋಕ್ತೇಃ । ಭವತಿ ಚ ಮಂಗಲಾರ್ಥೋಽಥಶಬ್ದಃ—

ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ॥
ಕಂಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾವುಭೌ ॥ ಇತಿ ಸ್ಮೃತಿ ಸಂಭವಾತ್ ।

ತಥಾ ಚ 'ವೃದ್ಧಿರಾದೈಚ್' (ಪಾ-ಸೂ೧-೧-೧) ಇತ್ಯಾದೌ ವೃದ್ಧ್ಯಾದಿಶಬ್ದವತ್ ಅಥ ಶಬ್ದೋಽ ಮಂಗಲಾರ್ಥಃ ಸ್ಯಾದಿತಿ ಚೇತ್—ನ್ನೈವಂ ಭಾಷಿಷ್ಠಾಃ ॥

ಸೂತ್ರಕಾರರು ಪ್ರಾರಂಭಿಸಲು ಇಷ್ಟಪಟ್ಟ ಯೋಗಾನುಶಾಸನಪ್ರಬಂಧದ ಪರಿಸಮಾಪ್ತಿಯಲ್ಲಿ ಶತ್ರುಭೂತ (ಪರಿಪಂಥಿ) ವಾದ ಯಾವ ವಿಘ್ನಸಮುದಾಯವಿದೆಯೋ ಅದರ ನಾಶಕ್ಕೋಸ್ಕರವೂ ಹಾಗೆಯೇ ಶಿಷ್ಟಾಚಾರವನ್ನು ರಕ್ಷಿಸುವುದಕ್ಕೋಸ್ಕರವೂ ಶಾಸ್ತ್ರಾರಂಭದಲ್ಲಿ ಮಂಗಲವನ್ನಾಚರಿಸಬೇಕು. "ಮಂಗಲಾ—" ಇತಿ. ಮಂಗಲವೇ ಆದಿಯಾಗಿರುವ, ಮಂಗಲಮಧ್ಯದಲ್ಲಿರುವ, ಮಂಗಲವೇ ಅಂತ್ಯದಲ್ಲಿರುವ ಶಾಸ್ತ್ರಗಳು ಪ್ರಸಿದ್ಧಿಹೊಂದುತ್ತವೆ. (ಪ್ರಥಂತೇ). ಮತ್ತು ಅವು ಆಯುಃಪರಿಪೂರ್ಣಪುರುಷರಿಂದ ಕೂಡಿದ್ದಾಗಿಯೂ, ವೀರಪುರುಷರಿಂದ ಕೂಡಿದ್ದಾಗಿಯೂ ಆಗುತ್ತವೆ—ಎಂದು ಮಹಾಭಾಷ್ಯಕಾರರು ಹೇಳಿರುತ್ತಾರೆ. ಮಂಗಲಾರ್ಥದಲ್ಲಿ ಅಥಶಬ್ದವಿದೆಯೆಂಬುದರಲ್ಲಿ ಪ್ರಮಾಣ ತೋರಿಸುತ್ತಾನೆ. "ಓಂಕಾರ—" ಇತಿ. ಓಂಕಾರ ಮತ್ತು ಅಥಶಬ್ದಗಳು ಹಿಂದೆ ಬ್ರಹ್ಮನ ಕಂಠದಿಂದ ಹೊರಗೆ ಬಂದಿರುತ್ತವೆ. ಆದುದರಿಂದ ಅವು ಮಂಗಲವಿಶಿಷ್ಟವಾಗಿವೆ ಎಂದರ್ಥ. 'ವೃದ್ಧಿರಾದೈಚ್' ಎಂಬ ಪಾಣಿನಿಸೂತ್ರದಲ್ಲಿ ಹೇಗೆ ವೃದ್ಧ್ಯಾದಿಶಬ್ದಗಳನ್ನು ಮಂಗಲಾರ್ಥವಾಗಿ ಹೇಳಿವೆಯೋ ಅದರಂತೆ ಇಲ್ಲಿಯೂ ಅಥಶಬ್ದ ಮಂಗಲಾರ್ಥ ಏಕೆ ಆಗಬಾರದು ಎಂದು ಆಕ್ಷೇಪ. 'ನ್ನೈವಂ—' ಎಂಬುದರಿಂದ ಖಂಡಿಸುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥಾಂತರಾಭಿಧಾನಾಯ ಪ್ರಯುಕ್ತಸ್ಯಾಥಶಬ್ದಸ್ಯ ವೀಣಾವೇಣ್ವಾದಿಧ್ವನಿವತ್ ಶ್ರವಣಮಾತ್ರೇಣಮಂಗಲಫಲತ್ವೋಪಪತ್ತೇಃ । ಅಥಾರ್ಥಾಂತರಾರಂಭವಾಕ್ಯಾರ್ಥಧೀಫಲಕಸ್ಯಾಥಶಬ್ದಸ್ಯ ಕಥಮನ್ಯಫಲಕತೇತಿ ಚೇನ್ನ । ಅನ್ಯಾರ್ಥಂ ನೀಯಮಾನೋದಕುಂಭೋಪಲಂಭವತ್ಸಂಭವಾತ್ । ನ ಚ ಸ್ಮೃತಿವ್ಯಾಕೋಪಃ । ಮಾಂಗಲಿಕಾವಿತಿ ಮಂಗಲಪ್ರಯೋಜಕತ್ವವಿವಕ್ಷಯಾ ಪ್ರವೃತ್ತೇಃ ॥ ನಾಪಿ ಪೂರ್ವಪ್ರಕೃತಾಪೇಕ್ಷೋಽಥಶಬ್ದಃ । ಫಲತ ಆನಂತರ್ಯಾವ್ಯತಿರೇಕೇಣ ಪ್ರಾಗುಕ್ತದೂಷಣಾನುಷಂಗಾತ್ । ಕಿಮಯಮಥಶಬ್ದಃ ಅಧಿಕಾರಾರ್ಥಃ, ಅಥ ಆನಂತರ್ಯಾರ್ಥ ಇತ್ಯಾದಿವಿಮರ್ಶವಾಕ್ಯೇ ಪಕ್ಷಾಂತರೋಪನ್ಯಾಸೇ ತತ್ಸಂಭವೇಪಿ ಪ್ರಕೃತೇ ತದಸಂಭವಾಚ್ಚ ॥

ಪಾಣಿನಿ ಸೂತ್ರದಲ್ಲಿಯೂ ವೃದ್ಧಿಶಬ್ದವು ಮಂಗಲಾರ್ಥಕವಾಗುವುದಿಲ್ಲ. ಅದು ವೃದ್ಧಿ ಎಂಬ ಸಂಜ್ಞೆಯನ್ನು ತಿಳಿಸುತ್ತದೆ. ಹಾಗೆ ತಿಳಿಸುವ ಆ ಶಬ್ದವು ವೀಣಾಧ್ವನಿಯಂತೆ ಉಚ್ಚರಿಸುವುದರಿಂದ ಅಥವಾ ಕೇಳುವುದರಿಂದ ಮಂಗಲವನ್ನೂ ಸಾಧಿಸುತ್ತದೆ. 'ಅರ್ಥಾಂತರ'—ಇತಿ. ಮಂಗಲಾರ್ಥಕ್ಕಿಂತ ಬೇರೆಯಾದ ಆರಂಭಾದಿರೂಪಾರ್ಥಕ್ಕೆ ವಾಕ್ಯಾರ್ಥದಲ್ಲಿ ಅನ್ವಯಬುದ್ಧಿಯುಂಟಾಗುವುದೇ ಫಲವಾಗಿರುವ ಅಥಶಬ್ದಕ್ಕೆ ಅನ್ಯ ಫಲವನ್ನು ಹೇಳುವುದು ಹೇಗೆ ? ಎಂದು ಶಂಕಿಸಬಾರದು. ಮನೆಕಾರ್ಯಕ್ಕೋಸ್ಕರ ನೀರು ತರಲು ಘಟವನ್ನು ನದಿಗೆ ಒಯ್ದು ನೀರುತುಂಬಿ ತರುವಾಗ ಎದುರಾಗಿ ನೋಡಿದವನಿಗೆ ಶುಭಶಕುನವಾಗಿ ಕಾರ್ಯಸಿದ್ಧಿಯನ್ನು ಸೂಚಿಸುವಂತೆ ಮಂಗಲವೂ ಅನ್ಯಾರ್ಥಕವಾಗುತ್ತದೆ. ಇದರಿಂದ 'ತಸ್ಮಾತ್ ಮಾಂಗಲಿಕಾವುಭೌ' ಎಂದು ಹಿಂದೆ ಹೇಳಿದ ಸ್ಮೃತಿಗೆ ಬಾಧ ಬರುವುದಿಲ್ಲವೇ ? ಅಂದರೆ ಅಲ್ಲಿ ಮಂಗಲವಾಚಕವೆಂದು ಅರ್ಥವಲ್ಲ. ಮಂಗಲವು ವಾಚ್ಯಾರ್ಥವೆಂದು ಶಂಕೆಮಾಡುವವನ ಅಭಿಪ್ರಾಯ. ಆದರೆ ಅಲ್ಲಿ ಮಂಗಲವೇ ಪ್ರಯೋಜನವಾಗಿರುವುದು ಅಥಶಬ್ದವೆಂದು ಅರ್ಥ ಹೇಳಬೇಕು. 'ಮಂಗಲಂ ಪ್ರಯೋಜನಮಸ್ಯ' ಎಂಬರ್ಥದಲ್ಲಿ 'ಪ್ರಯೋಜನಂ' ಎಂಬ ಸೂತ್ರದಿಂದ ಮಂಗಲಶಬ್ದದ ಮೇಲೆ ಠಞ್ ಪ್ರತ್ಯಯ. ಇಕಾದೇಶ. ಆದಿವೃದ್ಧಿ. 'ನಾಪಿ' ಇತಿ. ಪೂರ್ವಪ್ರಕೃತಾಪೇಕ್ಷೆಯಿಂದ ಅಥಶಬ್ದವು ಪ್ರಯುಕ್ತವಾಗುತ್ತದೆಂದು ಹಿಂದೆ ಹೇಳಿದೆ. ಪ್ರಕೃತಸೂತ್ರದಲ್ಲಿ ಪೂರ್ವಪ್ರಕೃತವಾದುದು ಯಾವುದೂ ಇಲ್ಲ. ಆಗ ಯೋಗ್ಯತಾಬಲದಿಂದ ಶಮದಮಾದಿಗಳನ್ನಾಗಲೀ, ತತ್ತ್ವಪ್ರಕಾಶನೇಚ್ಛೆಯನ್ನಾಗಲೀ, ಶಿಷ್ಯಪ್ರಶ್ನೆಯನ್ನಾಗಲೀ ಯಾವುದಾದರೊಂದನ್ನು ಸ್ವೀಕರಿಸಬೇಕು. ಹೀಗೆ ಸ್ವೀಕರಿಸಿದಾಗ ಅದಕ್ಕೆ ಯೋಗಾನುಶಾಸನದಲ್ಲಿ ಅಭೇದಾನ್ವಯ ಸಂಭವಿಸದಿರುವುದರಿಂದ ಪೌರ್ವಾಪರ್ಯಸಂಬಂಧದಿಂದ ಅನ್ವಯ ಹೇಳಬೇಕು. ಇದರಿಂದ ಆನಂತರ್ಯವೇ ಫಲಿತವಾಗುತ್ತದೆ. ಆಗ ಅನಂತರ್ಯಾರ್ಥಸ್ವೀಕಾರ ಪಕ್ಷದಲ್ಲಿ ಹೇಳಿದ ದೂಷಣಗಳೇ ಇಲ್ಲಿಯೂ ಬರುತ್ತವೆ. ಈ ಅಥಶಬ್ದವು ಅಧಿಕಾರಾರ್ಥವೇ, ಅಥವಾ ಆನಂತರ್ಯಾರ್ಥವೇ ಎಂಬ ವಿಮರ್ಶವಾಕ್ಯದಲ್ಲಿ (ವಿಪ್ರತಿಪತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೋಧಕವಾದ ವಾಕ್ಯ). ಅಧಿಕಾರಾರ್ಥ ಸಂಭವಿಸಿದರೂ, ಇದು ಸಂಭವಿಸಲಾರದು. ಪೂರ್ವಪ್ರಕೃತವಾದುದು ಯಾವುದೂ ಇಲ್ಲದಿರುವುದರಿಂದ ಆನಂತರ್ಯ ಕೊಡುವುದಿಲ್ಲ ವೆಂದು ತಾತ್ಪರ್ಯ. ನಿತ್ಯಸಾಕಾಂಕ್ಷಿತಗಳಾದ ಆನಂತರ್ಯಾದ್ಯರ್ಥಗಳಿಂದ ಸ್ವಾವಧಿಯು ಆಕ್ಷಿಪ್ತವಾದರೂ ಇಲ್ಲಿ ಅಂತಹ ಯಾವ ಅರ್ಥವೂ ಇಲ್ಲದಿರುವುದರಿಂದ ಆಕ್ಷೇಪವೂ ಸಂಭವಿಸುವುದಿಲ್ಲ.

ತಸ್ಮಾತ್ ಪಾರಿಶೇಷ್ಯಾತ್ ಅಧಿಕಾರಪದ ವೇದನೀಯ ಪ್ರಾರಂಭಾರ್ಥೋಽಥಶಬ್ದ ಇತಿ ವಿಶೇಷೋ ಭಾಷ್ಯತೇ ॥ ಯಥಾ ಅಥೈಷಜ್ಯೋತಿರಥೈಷ ವಿಶ್ವಜ್ಯೋತಿರಿತ್ಯತ್ರಾಥಶಬ್ದಃ ಕ್ರತುವಿಶೇಷಪ್ರಾರಂಭಾರ್ಥಃ ಪರಿಗೃಹೀತೋ, ಯಥಾ ಚ ಅಥ ಶಬ್ದಾನುಶಾಸನಮ್ (ಪಾ-ಭಾ-೧-೧) ಇತ್ಯತ್ರಾರ್ಥ ಶಬ್ದೋ ವ್ಯಾಕರಣ ಶಾಸ್ತ್ರಾಧಿಕಾರಾರ್ಥಸ್ತದ್ವತ್ । ತದಭಾಷಿ ವ್ಯಾಸಭಾಷ್ಯೇ ಯೋಗಸೂತ್ರವಿವರಣ ಪರೇ ಅಥೇತ್ಯಯ ಮಧಿಕಾರಾರ್ಥಃಪ್ರಯುಜ್ಯತ ಇತಿ । ತದ್ವ್ಯಾಚಖ್ಯಾವಾಚಸ್ಪತಿಃ । ತದಿತ್ಥಮ್ — ಅಮುಷ್ಯಾಥಶಬ್ದಸ್ಯಾಧಿಕಾರಾರ್ಥತ್ವಪಕ್ಷೇಶಾಸ್ತ್ರೇಣ ಪ್ರಸ್ತೂಯಮಾನಸ್ಯ ಯೋಗಸ್ಯೋಪವರ್ತನಾತ್ಸಮಸ್ತಶಾಸ್ತ್ರತಾತ್ಪರ್ಯಾರ್ಥ ವ್ಯಾಖ್ಯಾನೇನ ಶಿಷ್ಯಸ್ಯ ಸುಖಾವಬೋಧ ಪ್ರವೃತ್ತಿರ್ಭವತೀತ್ಯಥಶಬ್ದಸ್ಯಾಧಿಕಾರಾರ್ಥತ್ವಮುಪಪನ್ನಮ್ ॥

ಹೀಗೆ ಕೊನೆಯಲ್ಲಿ ಅಥಶಬ್ದಕ್ಕೆ ಅಧಿಕಾರಪದದಿಂದ ವೇದನೀಯವಾದ ಪ್ರಾರಂಭಾರ್ಥವೇ ಉಳಿಯುತ್ತದೆ. ಅಧಿಕಾರಶಬ್ದಕ್ಕೆ ವಾಚ್ಯವಾದ ಯಾವ ಪ್ರಾರಂಭ ರೂಪ ಅರ್ಥವಿದೆಯೋ ಆ ಅರ್ಥವುಳ್ಳದ್ದು ಅಥಶಬ್ದವಾಗುತ್ತದೆಂದು ತಾತ್ಪರ್ಯ. ನಾನಾರ್ಥಗಳಲ್ಲಿ ಸಂಭವಿಸುವ ಅರ್ಥ ಇದೊಂದೇ ಆದುದರಿಂದ ಅದೇ ಇಲ್ಲಿ ಸ್ವೀಕೃತ ವಾಗುತ್ತದೆ. ಇದಕ್ಕೆ ದೃಷ್ಟಾಂತ ತೋರಿಸುತ್ತಾನೆ. 'ಅಥೈಷ ಜ್ಯೋತಿಃ—' ಇತಿ ಮಂತ್ರವಾಕ್ಯಗಳಲ್ಲಿ ಅಥಶಬ್ದವು ಪ್ರಾರಂಭವಾಚಕವಾಗಿದೆ. "ಅಥ ಶಬ್ದಾನುಶಾಸನಂ" ಎಂಬಲ್ಲಿಯೂ ಅದು ಪ್ರಾರಂಭವಾಚಕವಾಗಿದೆ. ಅದರಂತೆ ಇಲ್ಲಿಯೂ ತಿಳಿಯಬೇಕು. ಯೋಗಸೂತ್ರವಿವರಣೆಮಾಡುವ ವ್ಯಾಸಭಾಷ್ಯದಲ್ಲಿಯೂ ಅಥಶಬ್ದವು ಪ್ರಾರಂಭಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೆಂದು ಹೇಳಿದೆ. "ತದಿತ್ಥಂ—" ಇತಿ. ಅದಕ್ಕೆ ವಾಚಸ್ಪತಿ ಯಿಂದ ಮಾಡಿದ ವ್ಯಾಖ್ಯಾನವು ಹೀಗಿದೆಯೆಂದರ್ಥ. ಅದನ್ನು ಅರ್ಥರೂಪದಿಂದ ಅನುವಾದಮಾಡಿ ತೋರಿಸುತ್ತಾನೆ. 'ಅಮುಷ್ಯ —' ಇತಿ. ತತ್ವಜ್ಞಾನಪ್ರಕಾಶ ನೇಚ್ಛಾನಂತರ್ಯಾರ್ಥಕ ಅಥಶಬ್ದವೆಂದು ಅಂಗೀಕರಿಸಿದರೆ ಆಗ ಆ ರೀತಿಯಾದ ಆನಂತರ್ಯವು ಶ್ರೋತೃಪ್ರವೃತ್ತಿಯಲ್ಲಿಯಾಗಲೀ ಶ್ರೋತೃಜ್ಞಾನದಲ್ಲಾಗಲೀ ಯಾವ ಉಪಯೋಗವನ್ನುಂಟುಮಾಡಲಾರದು. ಅಧಿಕಾರಾರ್ಥಕಾಥಶಬ್ದವನ್ನು ಅಂಗೀಕರಿಸಿದರೆ ಆಗ ಪ್ರಯೋಜನವಾಗುತ್ತದೆ. ಯೋಗವಿಷಯಕವಾದ ಈ ಶಾಸ್ತ್ರವು ಪ್ರಾರಂಭಿಸಲ್ಪಡುತ್ತದೆ. ಯೋಗವು ಸಕಲಶಾಸ್ತ್ರತಾತ್ಪರ್ಯವಿಷಯವಾದ ಅರ್ಥವಾದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯರೀತಿಯಿಂದ ಅದನ್ನು ಮೊದಲು ತಿಳಿದರೆ, ಆಮೇಲೆ ಶಾಸ್ತ್ರಸಹಾಯದಿಂದ ವಿಶೇಷವಾಗಿ ಸುಖವಾಗಿ ಅದನ್ನು ತಿಳಿಯಬಹುದು. ಸಾಮಾನ್ಯಜ್ಞಾನವುಂಟಾದಮೇಲೆ ಶಾಸ್ತ್ರಾವಲೋಕನದಲ್ಲಿ ಸುಖಪ್ರವೃತ್ತಿಯುಂಟಾಗುತ್ತದೆ. ಉಪವರ್ತನ—ಪ್ರತಿಪಾದನು ಹೀಗೆ ಅಥಶಬ್ದಕ್ಕೆ ಆರಂಭಾರ್ಥಕತ್ವವೇ ಇಲ್ಲಿ ಸಮಂಜಸವಾಗುತ್ತದೆ.

ನನು ಹಿರಣ್ಯಗರ್ಭೋ ಯೋಗಸ್ಯ ವಕ್ತಾ ನಾನ್ಯಃ ಪುರಾತನಃ। ಇತಿ ಯಾಜ್ಞವಲ್ಕ್ಯಸ್ಮೃತೇಃ ಪತಂಜಲಿಃ ಕಥಂ ಯೋಗಸ್ಯ ಶಾಸಿತಾ ? ಇತಿ ಚೇತ್—ಅದ್ಧಾ। ಅತ ಏವ ತತ್ರ ತತ್ರ ಪುರಾಣಾದೌ ವಿಶಿಷ್ಯಯೋಗಸ್ಯ ವಿಪ್ರಕೀರ್ಣತಯಾ ದುರ್ಗ್ರಾಹ್ಯಾರ್ಥಂ ಮನ್ಯಮಾನೇನ ಭಗವತಾ ಕೃಪಾಸಿಂಧುನಾ ಫಣಿಪತಿನಾ ಸಾರಂ ಸಂಜಿಘೃಕ್ಷುಣಾನುಶಾಸನಮಾರಬ್ಧಂ ನ ತು ಸಾಕ್ಷಾಚ್ಛಾಸನಂ। ಯದಾಯಾಮಥಶಬ್ದೋಽಧಿಕಾರಾರ್ಥಸ್ತದೈವಂ ವಾಕ್ಯಾರ್ಥಃ ಸಂಪದ್ಯತೇ—ಯೋಗಾನುಶಾಸನಂ ಶಾಸ್ತ್ರಮಧಿಕೃತಂ ವೇದಿತವ್ಯಮಿತಿ। ತಸ್ಮಾದಯಮಥಶಬ್ದೋಽಧಿಕಾರದ್ಯೋತಕೋ ಮಂಗಲಾರ್ಥಶ್ಚೇತಿ ಸಿದ್ಧಮ್॥

ಯೋಗಶಾಸ್ತ್ರವು ಹಿರಣ್ಯಗರ್ಭನಿಂದಲೇ ಆರಬ್ಧವಾದುದರಿಂದ ಇಲ್ಲಿ ಪತಂಜಲಿಸೂತ್ರದಲ್ಲಿ ಅಥಶಬ್ದಕ್ಕೆ ಆರಂಭಕಾರ್ಥವು ಯುಕ್ತವನನೆಂದು ಆಶಂಕಿಸುತ್ತಾನೆ. 'ನನು' ಇತಿ. ಅದ್ಧಾ—ಸತ್ಯವೆಂದರ್ಥ. ಪತಂಜಲಿಗಳು ಯೋಗವನ್ನು (ಶಾಸನಮಾಡಿಲ್ಲ) ಪಪ್ರಥಮವಾಗಿ ಹೇಳಿಲ್ಲ. ಹಿರಣ್ಯಗರ್ಭನೇ ಮೊದಲು ಹೇಳಿರುವುದು. ಪತಂಜಲಿಗಳು ಅದರ ಅನುಶಾಸನಮಾಡಿರುತ್ತಾರೆ. ಅನ್ಯಶಿಷ್ಟವಾದುದನ್ನು ವಿವೇಕದಿಂದ ಬೋಧಿಸುವುದೇ ಅನುಶಾಸನ. 'ಪುರಾಣಾದೌ—' ಇತಿ. ಯೋಗವು ಪುರಾಣಾದಿಗಳಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿಲ್ಲ. ಆದುದರಿಂದ ವಿಶೇಷವಾಗಿ ಅದನ್ನೇ ಹೇಳಿಲ್ಲ. ಪ್ರಸಂಗಾನುಸಾರದಿಂದ ಅಲ್ಲಲ್ಲಿ ಕೆಲಕೆಲವಂಶಗಳು ಮಾತ್ರ ಹೇಳಿರುವುದರಿಂದ ವಿಪ್ರಕೀರ್ಣವಾಗಿರುತ್ತವೆ. ವಿಷ್ಣುಪುರಾಣದಲ್ಲಿ ಆರನೇ ಭಾಗದ ೭ನೇ ಅಧ್ಯಾಯದಲ್ಲಿಯೂ, ಗಾರುಡಪುರಾಣದ ೧೪, ೪೯ನೇ ಅಧ್ಯಾಯಗಳಲ್ಲಿಯೂ, ಮಾರ್ಕಾಂಡೇಯದ ಯೋಗಚಿಕಿತ್ಸಾ ಎಂಬ ಹೆಸರುಳ್ಳ ೩೯ನೇ ಅಧ್ಯಾಯದಲ್ಲಿಯೂ, ಲಿಂಗಪುರಾಣದ ೯ನೇ ಅಧ್ಯಾಯದಲ್ಲಿಯೂ ಭಾಗಭಾಗವಾಗಿ ಯೋಗವು ವಿವೃತವಾಗಿದೆ. ಸಂಪೂರ್ಣವಾಗಿ ಎಲ್ಲಿಯೂ ಹೇಳಿಲ್ಲ. ಆದುದರಿಂದ (ವಿಪ್ರಕೀರ್ಣ—ಅಲ್ಲಲ್ಲಿ ಹೇಳಿರುವುದು) ಯೋಗರೂಪಾರ್ಥವನ್ನು ತಿಳಿಯುವುದು ಕಷ್ಟವೆಂದು ತಿಳಿದು ಪತಂಜಲಿಗಳು ದಯೆಯಿಂದ ಯೋಗಸೂತ್ರಗಳನ್ನು ರಚಿಸಿ ಅಲ್ಲಿರುವ ಸಾರವನ್ನು ಸಂಗ್ರಹಿಸಿರುತ್ತಾರೆ. ಸಾಕ್ಷಾತ್ತಾಗಿ ಶಾಸನಮಾಡಿಲ್ಲ. ಅಥಶಬ್ದಕ್ಕೆ ಆರಂಭಾರ್ಥವನ್ನಂಗೀಕರಿಸಿದಾಗ ಹೀಗೆ ವಾಕ್ಯಾರ್ಥ ನಿಶ್ಚಿತವಾಗುತ್ತದೆ. ಯೋಗಾನುಶಾಸನಶಾಸ್ತ್ರವು ಆರಬ್ಧವಾಗಿದೆಯೆಂದು ತಿಳಿಯಬೇಕು. ಇದು ಅಧಿಕಾರಾರ್ಥವನ್ನು ತಿಳಿಸುವುದರ ಮೂಲಕ ಮಂಗಲಾರ್ಥಕವೂ ಆಗುತ್ತದೆ.

ತತ್ರ ಶಾಸ್ತ್ರೇ ವ್ಯುತ್ಪಾದ್ಯಮಾನತಯಾ ಯೋಗಃ ಸಸಾಧನಃ ಸಫಲೋ ವಿಷಯಃ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದ್ವ್ಯುತ್ಪಾದನಮವಾಂತರಫಲಮ್ । ವ್ಯುತ್ಪಾದಿತಸ್ಯ ಯೋಗಸ್ಯ ಕೈವಲ್ಯಂ ಪರಮಪ್ರಯೋಜನಮ್ । ಶಾಸ್ತ್ರಯೋಗಯೋಃ ಪ್ರತಿಪಾದ್ಯಪ್ರದಿಪಾದಕಲಕ್ಷಣಃ ಸಂಬಂಧಃ । ಯೋಗಸ್ಯ ಕೈವಲ್ಯಸ್ಯ ಚ ಸಾಧ್ಯಸಾಧನ ಲಕ್ಷಣಃ ಸಂಬಂಧಃ । ಸ ಚ ಶ್ರುತ್ಯಾದಿಪ್ರಸಿದ್ಧ ಇತಿ ಪ್ರಾಗೇವಾವಾದಿಷಮ್ । ಮೋಕ್ಷಮುಪೇಕ್ಷಮಾಣಾ ಏವಾಧಿಕಾರಿಣ ಇತ್ಯರ್ಥ-ಸಿದ್ಧಮ್ । ನ ಚ 'ಅಥಾತೋ ಬ್ರಹ್ಮಜಿಜ್ಞಾಸಾ' ಇತ್ಯಾದಾವಧಿಕಾರಿಣೋಽರ್ಥತಃ ಸಿದ್ಧಿರಾಶಂಕನೀಯಾ । ತತ್ರಾಥಶಬ್ದೇನಾನಂತರ್ಯಾಭಿಧಾನಪ್ರಣಾಡಿಕಯಾಧಿಕಾರಿ ಸಮರ್ಪಣಸಿದ್ಧಾವಾರ್ಥಿಕತ್ವಶಂಕಾನುದಯಾತ್ । ಅತ ಏವೋಕ್ತಂ ಶ್ರುತಿಪ್ರಾಪ್ತೇಽಪ್ರಕರಣಾದೀನಾಮನವಕಾಶ ಇತಿ ॥

ಅಥಶಬ್ದಾರ್ಥವಿವೇಚನಪೂರ್ವಕವಾಗಿ ಸೂತ್ರಾರ್ಥವನ್ನು ನಿಶ್ಚಯಿಸಿ ಅದರಿಂದ ಅನುಬಂಧ ಚತುಷ್ಟಯವೂ ಪ್ರತಿಪಾದಿಸಿದೆಯೆಂದು ಹಿಂದೆ ಹೇಳಿದೆ. ಈಗ ಆ ಅನುಬಂಧ ಚತುಷ್ಟಯವನ್ನು ವಿವರಿಸುತ್ತಾನೆ. 'ಶಾಸ್ತ್ರೇ'—ಇತಿ. ಸಾಧನ ಸಹಿತವಾದ ಫಲ ವಿಶಿಷ್ಟವಾದ ಯೋಗವೇ ಇಲ್ಲಿ ವಿಷಯ. ಅದರ ಜ್ಞಾನ ಅವಾಂತರಫಲ ಅದರಿಂದ ಉಂಟಾಗುವ ಮೋಕ್ಷವೇ ಪರಮಪ್ರಯೋಜನ ಇವುಗಳಿಗೆ ಪರಸ್ಪರಸಂಬಂಧ ಪ್ರಸಿದ್ಧವಾಗಿದೆ. ಶಾಸ್ತ್ರಪ್ರತಿಪಾದಕ, ಯೋಗ ಪ್ರತಿಪಾದ್ಯ. ಯೋಗ ಸಾಧಕ, ಕೈವಲ್ಯ ಸಾಧ್ಯ. 'ಮೋಕ್ಷಂ'—ಇತಿ. 'ಅಧ್ಯಾತ್ಮಯೋಗಾಧಿಗಮೇನ'—ಇತ್ಯಾದಿ ಶ್ರುತಿಪ್ರಮಾಣದಿಂದ ಯೋಗಫಲವು ಮೋಕ್ಷವೆಂದು ಸಿದ್ಧನಾದ ಮೇಲೆ ಅದನ್ನು ಬಯಸುವವನೇ ಅಧಿಕಾರಿಯೆಂದು ಅರ್ಥಾತ್ ಸಿದ್ಧವಾಗುತ್ತದೆ. ಇಲ್ಲಿ ಅಥಶಬ್ದಕ್ಕೆ ಯೋಗದಲ್ಲಿ ಅನ್ವಯ ಹೇಳಿದ್ದರೆ ಆಗ ಆನಂತರ್ಯವನ್ನು ಅಥಶಬ್ದಕ್ಕೆ ಹೇಳಿ ಶಮಾದಿ ಸಂಪತ್ತ್ಯನಂತರವೆಂದು ಸೂತ್ರಾರ್ಥವಾಗುವುದರಿಂದ ಆ ರೀತಿಯಾದ ಸಾಧನಸಂಪನ್ನನಾದವನೇ ಅಧಿಕಾರಿಯೆಂದು ಅರ್ಥವಾಗಬೇಕು. ಅಥಾತೋಬ್ರಹ್ಮಜಿಜ್ಞಾಸಾ—ಎಂಬಲ್ಲಿಯೂ ಆನಂತರ್ಯಾರ್ಥ ಗ್ರಹಣದಿಂದ ತತ್ಪ್ರತಿಯೋಗಿಭೂತವಾದ ಸಾಧನ ಚತುಷ್ಟಯಸಂಪತ್ತಿವಿಶಿಷ್ಟನಾದವನೇ ಅಧಿಕಾರಿಯೆಂದು ತಿಳಿದಂತೆ ಇಲ್ಲಿಯೂ ಹೇಳಬೇಕಾಗುತ್ತದೆ. ಆದರೆ ಇಲ್ಲಿ ಯೋಗಶಬ್ದವು ಶಾಸನವನ್ನು ಕುರಿತು ಅಪ್ರಧಾನವಾಗುವುದರಿಂದ ಅಲ್ಲಿ ಅಥಶಬ್ದಾರ್ಥಾನ್ವಯವು ಸಂಗತವಾಗುವುದಿಲ್ಲವೆಂದು ಹಿಂದೆ ಹೇಳಿದೆ. ಹಾಗಾದರೆ 'ಅಥಾತೋ'—ಎಂಬ ಬ್ರಹ್ಮಸೂತ್ರದಲ್ಲಿಯೂ ಅಧಿಕಾರಾರ್ಥವನ್ನು ಹೇಳುತ್ತೇವೆ.

'ತಮೇವಂ ವಿದ್ವಾನಮೃತ ಇಹ ಭವತಿ— (ಶ್ವೇ ೧೮) ಇತ್ಯಾದಿ ಶ್ರುತಿಗಳಿಂದ ಬ್ರಹ್ಮಜ್ಞಾನಫಲವು ಮೋಕ್ಷವೆಂದು ನಿಶ್ಚಿತವಾಗುವುದರಿಂದ ಇಲ್ಲಿ ಹೇಳಿದಂತೆಯೇ ಮೋಕ್ಷಕಾಮನು ಇಲ್ಲಿ ಅಧಿಕಾರಿಯಾಗುತ್ತಾನೆಂದು ಹೇಳಬಹುದಲ್ಲವೇ? ಎಂದರೆ (ಇಲ್ಲಿ) ಹಾಗೆ ಹೇಳಬಾರದೆಂದು ವಿವರಿಸುತ್ತಾನೆ. 'ತತ್ರಾಥ'—ಇತಿ. ಯಾವುದಾದರೊಂದು ಅರ್ಥವು ಸಾಕ್ಷಾತ್ತಾಗಲೀ ಪರಂಪರೆಯಿಂದಾಗಲೀ ಶಬ್ದದಿಂದಲೇ ನಿಷ್ಪತ್ತಿ ಹೊಂದುವುದಾದರೆ ಅಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥತಃ ಅದನ್ನು ಸಾಧಿಸಬಾರದು. ಅಥಶಬ್ದಕ್ಕೆ ಆನಂತರ್ಯಾರ್ಥವನ್ನು ಹೇಳುವುದರ ಮೂಲಕ (ಪ್ರಣಾಡಿ—ದ್ವಾರ) ಅಧಿಕಾರಿಯೂ ಸಿದ್ಧವಾಗುವುದರಿಂದ ಅದಕ್ಕೆ ಆರ್ಥಿಕತ್ವ ಕಲ್ಪನೆಮಾಡಬಾರದು. 'ಅತಏವ'—ಇತಿ. ಶ್ರುತಿ—ಶಬ್ದ. ಆದರಿಂದಲೇ ಪ್ರಾಪ್ತ ವಾಗುವಾಗ ಪ್ರಕರಣ, ಲಿಂಗ, ವಾಕ್ಯ, ಸ್ಥಾನ, ಸಮಾಖ್ಯೆಗಳಿಗೆ ಅವಕಾಶವಿರುವುದಿಲ್ಲ. ಇದು ಮೀಮಾಂಸಾದರ್ಶನದಲ್ಲಿ ಹೇಳಿದೆ.

ಅಸ್ಯಾರ್ಥಃ—ಯತ್ರ ಹಿ ಶ್ರುತ್ಯಾರ್ಥೋ ನ ಲಭ್ಯತೇ ತತ್ರೈವ ಪ್ರಕರಣಾದಯೋಽರ್ಥಂ ಸಮರ್ಪಯಂತಿ ನೇತರತ್ರ। ಯತ್ರ ತು ಶಬ್ದಾದೇವಾರ್ಥಸ್ಯೋಪಲಂಭಸ್ತತ್ರ ನೇತರಸ್ಯ ಸಂಭವಃ। ಶೀಘ್ರಬೋಧಿನ್ಯಾ ಶ್ರುತ್ಯಾ ವಿನಿಯೋಗಸ್ಯ ಬೋಧನೇನ ನಿರಾಕಾಂಕ್ಷತಯಾ ಇತರೇಷಾಮನವಕಾಶಾತ್। ಕಿಂ ಚ ಶ್ರುತ್ಯಾ ಬೋಧಿತೇಽರ್ಥೇ ತದ್ವಿರುದ್ಧಾರ್ಥಂ ಸಮರ್ಪಯತ್ಯವಿರುದ್ಧಂ ವಾ। ನ ಪ್ರಥಮಃ। ವಿರುದ್ಧಾರ್ಥಬೋಧಕಸ್ಯ ತಸ್ಯ ಬಾಧಿತತ್ವಾತ್। ನ ಚರಮಃ। ವೈಯರ್ಥ್ಯಾತ್। ತದಾಹ—ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಸಮವಾಯೇ ಪಾರದೌರ್ಬಲ್ಯಂ ಅಥ ವಿಪ್ರಕರ್ಷಾತ್ (ಜೈ-ಸೂ-೩-೩-೧೪) ಇತಿ ॥

ಬಾಧಿಕೈವ ಶ್ರುತಿರ್ನಿತ್ಯಂ ಸಮಾಖ್ಯಾ ಬಾಧ್ಯತೇ ಸದಾ ॥
ಮಧ್ಯಮಾನಾಂ ತು ಬಾಧ್ಯತ್ವಂ ಬಾಧಕತ್ವಮಪೇಕ್ಷಯಾ ॥ ಇತಿ ಚ ॥

ತಸ್ಮಾದ್ವಿಷಯಾದಿಮತ್ತ್ವಾದ್ಬ್ರಹ್ಮವಿಚಾರಕ ಶಾಸ್ತ್ರವದ್ಯೋಗಾನುಶಾಸನಂ ಶಾಸ್ತ್ರಂ ಆರಂಭಣೀಯಮಿತಿ ಸಿದ್ಧಮ್ ॥

ಶ್ರುತ್ಯಾದಿಸ್ವರೂಪವು ಜೈಮಿನಿದರ್ಶನದಲ್ಲಿ ವಿವೃತವಾಗಿದೆ. 'ಅಥಾತಃ'—ಬ್ರಹ್ಮ ಸೂತ್ರದಲ್ಲಿ ಆರಂಭಾರ್ಥವನ್ನು ಅಂಗೀಕರಿಸಿದರೆ ಯಾರಿಂದ ಬ್ರಹ್ಮಜಿಜ್ಞಾಸಾ ಮಾಡಬೇಕೆಂದು ಅಧಿಕಾರ್ಯಾಕಾಂಕ್ಷಾ ಬರುತ್ತದೆ. ಕೆಲವು ಮೋಕ್ಷವಾಕ್ಯಗಳಲ್ಲಿ ಹೇಗೆ ಮೋಕ್ಷ ಉಂಟಾಗುತ್ತದೆಂದು ಸಾಧನಾಕಾಂಕ್ಷೆಯುಂಟಾಗುತ್ತದೆ. ಕೆಲವು ಕಡೆ ಮೋಕ್ಷಸಾಧನ ರೂಪವಾಗಿ ಬ್ರಹ್ಮಜ್ಞಾನವು ಅವಗತವಾದಾಗ ಹೇಗೆ ಸಂಪಾದಿಸಬೇಕು ಎಂದು ಆಕಾಂಕ್ಷೆ ಬರುತ್ತದೆ. ಉಭಯಾಕಾಂಕ್ಷೆಗಳ ಪ್ರಕರಣವೆಂದು ಹೆಸರು. ಇದರಿಂದ 'ಅಥಾತಃ'-ಎಂಬ ವಾಕ್ಯಕ್ಕೂ ಮೋಕ್ಷವಾಕ್ಯಕ್ಕೂ ಏಕವಾಕ್ಯತ್ವ ಅನುಮಿತವಾಗುತ್ತದೆ. ಇದರಿಂದ ಮೋಕ್ಷಸಾಧನವಾದ ಬ್ರಹ್ಮಜಿಜ್ಞಾಸಾರೂಪ ಅರ್ಥಪ್ರಕಾಶಸಾಮರ್ಥ್ಯವು ಬ್ರಹ್ಮಜಿಜ್ಞಾಸಾ ಪದಕ್ಕೆ ಅನುಮಿತವಾಗುತ್ತದೆ. ಈ ಲಿಂಗದಿಂದ ಮುಮುಕ್ಷುವಾದವನಿಂದ ಬ್ರಹ್ಮ ಜಿಜ್ಞಾಸಾ ಮಾಡಲ್ಪಡಬೇಕೆಂಬ ಶಬ್ದವು ಅನುಮಿತವಾಗುತ್ತದೆ. ಆಮೇಲೆ ವಿನಿಯೋಗ ವಾಗುವುದರಿಂದ ವಿಲಂಬವಾಗಿ ಅಧಿಕಾರಿ ತಿಳಿಯುತ್ತದೆ. ಆನಂತರ್ಯಾರ್ಥಕವಾದ ಅಥ ಶಬ್ದವನ್ನು ಸ್ವೀಕರಿಸಿದರೆ ಯೋಗ್ಯತಾಬಲದಿಂದ ಶಮಾದಿಸಾಧನಸಂಪತ್ತ್ಯನಂತರದಲ್ಲಿ ಬ್ರಹ್ಮಜಿಜ್ಞಾಸಾ ಮಾಡಲ್ಪಡಬೇಕೆಂದು ಅರ್ಥವಾಗುವುದರಿಂದ ಅಥಶಬ್ದಾರ್ಥಬಲ ದಿಂದಲೇ ಸಾಧನಚತುಷ್ಟಯಸಂಪನ್ನನಾದ ಅಧಿಕಾರಿಯು ಶೀಘ್ರವಾಗಿ ತಿಳಿಯಲ್ಪಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾನೆ. "ಯತ್ರ"—ಇತಿ. ಶ್ರುತಿಯಿಂದ ಅರ್ಥ ದೊರೆಯದ ಸ್ಥಳದಲ್ಲಿ ಮಾತ್ರ ಪ್ರಕರಣಾದಿಗಳು ಅರ್ಥಬೋಧಕಗಳಾಗುತ್ತವೆ ಶಬ್ದದಿಂದ ಅರ್ಥಪ್ರಾಪ್ತಿ ಇರುವ ಸ್ಥಳ ದಲ್ಲಿ ಬೇರೆ ಯಾವುದಕ್ಕೂ ಪ್ರವೃತ್ತಿ ಇಲ್ಲ. ಶ್ರುತಿಯು ಸಾಕ್ಷಾತ್ತಾಗಿ ವಿನಿಯೋಗವನ್ನು ಬೋಧಿಸುವುದರಿಂದ ಇತರಾಕಾಂಕ್ಷೆ ಬಾರದಿರುವುದರಿಂದ ಪ್ರಕರಣಾದಿಗಳಿಗೆ ಅವಕಾಶ ವಿರುವುದಿಲ್ಲ. ಶ್ರುತಿಬೋಧಿತಾರ್ಥವಿರುವಲ್ಲಿ ಪ್ರಕರಣಾದಿಗಳು ವಿರುದ್ಧಾರ್ಥಬೋಧಕ ಗಳಾಗುವುದಾದರೆ ಅವು ಬಾಧಿತವಾಗುತ್ತವೆ. ಅವಿರುದ್ಧಾರ್ಥವನ್ನು ಬೋಧಿಸುತ್ತವೆ ಯೆಂದರೆ ತಿರುಗಿ ಹೇಳಬೇಕಾಗಿಲ್ಲವಾದುದರಿಂದ ವ್ಯರ್ಥವಾಗುತ್ತದೆ 'ಶ್ರುತಿಲಿಂಗ'— ಎಂಬ ಸೂತ್ರಾರ್ಥವು ಜೈಮಿನಿದರ್ಶನದಲ್ಲಿ ಹೇಳಿದೆ. 'ಬಾಧಿಕೈವ'—ಇತಿ. ಶ್ರುತಿ ಗಿಂತ ಪೂರ್ವದಲ್ಲಿ ಯಾವ ಪ್ರಮಾಣವೂ ಇಲ್ಲದಿರುವುದರಿಂದ ಅದು ನಿತ್ಯಬಾಧಕವಾಗು ತ್ತದೆ. ಯಾವುದರಿಂದಲೂ ಬಾಧ್ಯವಾಗುವುದಿಲ್ಲ. ಹಾಗೆಯೇ ಸಮಾಖ್ಯಾ ಕೊನೆ ಯದಾದುದರಿಂದ ಅದಕ್ಕಿಂತಲೂ ಪರಪ್ರಮಾಣಯಾವುದೂ ಇಲ್ಲದಿರುವುದರಿಂದ ಅದು ಎಂದೂ ಬಾಧಕವಾಗುವುದಿಲ್ಲ. ಮಧ್ಯದಲ್ಲಿರುವ ಲಿಂಗಾದಿಗಳಿಗೆ ಪೂರ್ವದೊಡನೆ ಸಮಾವೇಶಬಂದಾಗ ಬಾಧ್ಯತ್ವವೂ, ಪರದೊಡನೆ ಸಮಾವೇಶ ಬಂದಾಗ ಬಾಧಕತ್ವವೂ ಹೀಗೆ ಎರಡೂ ಸಂಭವಿಸುತ್ತದೆ. 'ತಸ್ಮಾತ್'--ಇತಿ. ವಿಷಯಾದಿಗಳಿರುವುದರಿಂದ ಬ್ರಹ್ಮವಿಚಾರಕಶಾಸ್ತ್ರದಂತೆ ಯೋಗಾನುಶಾಸನಶಾಸ್ತ್ರವೂ ಆರಂಭಣೀಯವೆಂದು ಸಿದ್ಧ ವಾಗುತ್ತದೆ.

ನನು ವ್ಯುತ್ಪಾದ್ಯಮಾನತಯಾ ಯೋಗ ಏವಾತ್ರಪ್ರಸ್ತುತಃ, ನ ಶಾಸ್ತ್ರಮಿತಿಚೇತ್— ಸತ್ಯಮ್ । ಪ್ರತಿಪಾದ್ಯತಯಾ ಯೋಗಃ ಪ್ರಾಧಾನ್ಯೇನ ಪ್ರಸ್ತುತಃ । ಸ ಚ ತದ್ವಿಷಯೇಣ ಶಾಸ್ತ್ರೇಣ ಪ್ರತಿಪಾದ್ಯತ ಇತಿ ತತ್ಪ್ರತಿಪಾದನೇ ಕರಣಂ ಶಾಸ್ತ್ರಂ । ಕರಣಗೋಚರಶ್ಚ ಕರ್ತೃವ್ಯಾಪಾರೋ ನ ಕರ್ಮಗೋಚರತಾಮಾಚರತಿ । ಯಥಾ ಛೇತ್ತುರ್ದೇವದತ್ತಸ್ಯ ವ್ಯಾಪಾರಭೂತಮುದ್ಯಮನನಿಪಾತನಾದಿಕರ್ಮ ಕರಣ ಭೂತಪರಶುಗೋಚರಂ ನ ಕರ್ಮಭೂತವೃಕ್ಷಾದಿಗೋಚರಮ್ । ತಥಾ ಚ ವಕ್ತುಃ ಪತಂಜಲೇಃ ಪ್ರವಚನವ್ಯಾಪಾರಾಪೇಕ್ಷಯಾ ಯೋಗ ವಿಷಯಸ್ಯಾಧಿಕೃತತಾ ಕರಣಸ್ಯ ಶಾಸ್ತ್ರಸ್ಯ । ಅಭಿಧಾನವ್ಯಾಪಾರಾಪೇಕ್ಷಯಾತು ಯೋಗಸ್ಯೈವೇತಿ ವಿಭಾಗಃ । ತಥಾ ಚ ಯೋಗಶಾಸ್ತ್ರಸ್ಯಾರಂಭಃ ಸಂಭಾವನಾಂ ಭಜತೇ ॥

ಮುಂದೆ ಸೂತ್ರದಲ್ಲಿ ಯೋಗವ್ಯುತ್ಪತ್ತಿ ಹೇಳುವುದರಿಂದ ಯೋಗವೇ ಪ್ರಕೃತ ವಾದುದರಿಂದ ಪತಂಜಲಿಗಳು ಯೋಗವನ್ನು ಆರಂಭಿಸಬೇಕು. ಶಾಸ್ತ್ರವನ್ನಲ್ಲವೆಂದು ಪೂರ್ವಪಕ್ಷಿಯ ಶಂಕೆಯ ಅಭಿಪ್ರಾಯ. ಯೋಗವೇ ಮುಖ್ಯವಾಗಿ ಹೇಳುವುದರಿಂದ ಇಲ್ಲಿ ಪ್ರಾಧಾನ್ಯದಿಂದ ಪ್ರಸ್ತುತವಾದುದು ಯೋಗವೇ. ಆದರೆ ಇಲ್ಲಿ ಸೂತ್ರಕಾರನ ವ್ಯಾಪಾರ ಪ್ರವಚನವಾದುದರಿಂದ ಅದು ಶಾಸ್ತ್ರಕರಣವಿಷಯವಾದುದರಿಂದ ಶಾಸ್ತ್ರವೇ ಆರಬ್ಧವಾಗಿದೆ. ಅಭಿಧಾನ (ಹೇಳುವುದು) ರೂಪಶಾಸ್ತ್ರವ್ಯಾಪಾರ ವಿಷಯವಾದುದರಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಗವೂ ಆರಬ್ಧವಾಗುತ್ತದೆ. ದೃಷ್ಟಾಂತದಿಂದ ವಿಶದಪಡಿಸುತ್ತಾನೆ. ಪ್ರತಿಪಾದನೆಯಲ್ಲಿ ಕರಣಶಾಸ್ತ್ರ. ಛೇದನದಲ್ಲಿ ಪರಶುಕರಣ. ಉದ್ಯಮನನಿಪತನಾದಿಗಳು ಪರಶುವಿನಲ್ಲಿ ಇರುವವುಗಳಲ್ಲದೆ ಕರ್ಮವಾದ ವೃಕ್ಷದಲ್ಲಿ ಇರುವುದಿಲ್ಲ. ಅದರಂತೆ ಇಲ್ಲಿ ಯೋಗಶಾಸ್ತ್ರಾರಂಭವನ್ನು ತಿಳಿಯಬೇಕು.

ಅತ್ರ ಚಾನುಶಾಸನೀಯೋ ಯೋಗಶ್ಚಿತ್ತವೃತ್ತಿನಿರೋಧ ಇತ್ಯುಚ್ಯತೇ । ನ ತು ಯುಜಿರ್ಯೋಗ ಇತಿ ಸಂಯೋಗಾರ್ಥತಯಾ ಪರಿಪಠಿತಾದ್ಯುಜೇರ್ನಿಷ್ಪನ್ನೋ ಯೋಗಶಬ್ದಃ ಸಂಯೋಗವಚನ ಏವ ಸ್ಯಾನ್ನತು ನಿರೋಧವಚನಃ । ಅತ ಏವೋಕ್ತಂ ಯಾಜ್ಞವಲ್ಕ್ಯೇನ—

ಸಂಯೋಗೋ ಯೋಗ ಇತ್ಯುಕ್ತೋ ಜೀವಾತ್ಮಪರಮಾತ್ಮನೋಃ ॥ ಇತಿ ॥

ತದೇತದಪ್ಯಾರ್ತವಮ್ । ಜೀವಪರಯೋಃ ಸಂಯೋಗೇ ಕಾರಣಸ್ಯಾನ್ಯತರಕರ್ಮಾದೇರಸಂಭವಾತ್ । ಅಜಸಂಯೋಗಸ್ಯ ಕಣಭಕ್ಷಾಕ್ಷಚರಣಾದಿಭಿಃ ಪ್ರತಿಕ್ಷೇಪಾಚ್ಚ । ಮೀಮಾಂಸಕಮತಾನುಸಾರೇಣ ತದಂಗೀಕಾರೋಪಿ ನಿತ್ಯಸಿದ್ಧಸ್ಯತಸ್ಯಸಾಧ್ಯತ್ವಾಭಾವೇನ ಶಾಸ್ತ್ರಸ್ಯೈಫಲ್ಯಾಪತ್ತೇಶ್ಚ ॥

ಯೋಗವೆಂದರೆ ಚಿತ್ತವೃತ್ತಿನಿರೋಧವೆಂದು ಮುಂದೆ ಹೇಳುತ್ತಾನೆ. ಯುಜಿರ್ಯೋಗೇ-ಧಾತು. ಸಂಯೋಗಾರ್ಥಕ ಯುಜಧಾತುವಿನಿಂದ ನಿಷ್ಪನ್ನವಾದ ಯೋಗಶಬ್ದವು ನಿರೋಧಾರ್ಥವನ್ನು ತಿಳಿಸುವುದು ಹೇಗೆ ? ಸಂಯೋಗಾರ್ಥವನ್ನೇ ಹೇಳಬೇಕು. ಇದನ್ನು ಯಾಜ್ಞ್ಯವಲ್ಕ್ಯರೂ ಸಮರ್ಥಿಸಿರುತ್ತಾರೆ. 'ಸಂಯೋಗ'—ಇತಿ. ಜೀವಾತ್ಮಪರಮಾತ್ಮರ ಸಂಯೋಗವೇ ಯೋಗವೆಂದು ಅವರು ಹೇಳಿರುತ್ತಾರೆ. ಇದು ಸರಿಯಲ್ಲವೆಂದು ವಿವರಿಸುತ್ತಾನೆ. ಆರ್ತವಂ—ತುಚ್ಛವಮ್. ಸಂಯೋಗವಾಗಬೇಕಾದರೆ ಕಾರಣವಾದ ಒಂದು ಕರ್ಮವಿರಬೇಕು. ಜೀವಪರಮಾತ್ಮರ ಸಂಯೋಗವೆಂದು ಹೇಳುವುದಾದರೆ ಅಲ್ಲಿ ಕಾರಣವಾದ ಕರ್ಮ ಯಾವುದು ? ಯಾವುದೂ ಇಲ್ಲವಾದುದರಿಂದ ಹಾಗೆ ಹೇಳುವುದು ಯುಕ್ತವಲ್ಲ. 'ಅನ್ಯತರಕರ್ಮ'—ಇತಿ. ಅನ್ಯತರಕರ್ಮಜ, ಉಭಯಕರ್ಮಜ, ಸಂಯೋಗಜವೆಂದು ಸಂಯೋಗವು ಮೂರುವಿಧವಾಗಿದೆ. ಶ್ಯೇನಪತನಕ್ರಿಯೆಯಿಂದ ಶೈಲಶ್ಯೇನಗಳ ಸಂಯೋಗವೂ, ಜಟ್ಟಿಗಳ ಅಥವಾ ಎರಡು ಆಡುಗಳ ಸಂಯೋಗವೂ, ಹಸ್ತಪುಸ್ತಕಗಳ ಸಂಯೋಗದಿಂದ ಕಾಯಪುಸ್ತಕಗಳ ಸಂಯೋಗವೂ ಇವುಗಳಿಗೆ ಉದಾಹರಣೆಗಳು. ಜೀವಪರಮೇಶ್ವರರು ವಿಭುವಾದುದರಿಂದ ಚಲನಕ್ರಿಯೆಯೇ ಇಲ್ಲದಿರುವುದರಿಂದ ಈ ಮೂರರಲ್ಲಿ ಯಾವ ಸಂಯೋಗವು ಕೂಡುವುದಿಲ್ಲ. ಜೀವಪರಮಾತ್ಮರ ಸಂಯೋಗನಿತ್ಯವಾದುದರಿಂದ ಅಲ್ಲಿ ಕಾರಣಾಪೇಕ್ಷೆ ಇಲ್ಲವೆನ್ನುವುದೂ ಯುಕ್ತವಲ್ಲ. 'ಅಜಸಂಯೋಗ'—ಇತಿ. ವೈಶೇಷಿಕಸೂತ್ರಕಾರರಿಗೆ ಕಣಭಕ್ಷಮುನಿಗಳೆಂದು ಹೆಸರು. ಅಕ್ಷಚರಣರು ಗೌತಮರು. ಇವರಿಬ್ಬರೂ ನಿತ್ಯಸಂಯೋಗವನ್ನು ಅಂಗೀಕರಿಸಿಲ್ಲ. ಸಂಯೋಗವುಳ್ಳವುಗಳೆರಡೂ ನಿತ್ಯಗಳಾದರೆ ಅವುಗಳ ಸಂಯೋಗವನ್ನು ನಿತ್ಯವೆಂದು ಹೇಳಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಘಟಪಟಸಂಯೋಗವಾಗಲೀ ಘಟಾಕಾಶಸಂಯೋಗವಾಗಲೀ ನಿತ್ಯವಾಗುವುದಿಲ್ಲ. ಸಂಯೋಗಿಗಳೆರಡೂ ನಿತ್ಯಗಳಾಗಿದ್ದರೂ ಪರಿಚ್ಛಿನ್ನಗಳಾದರೆ ಆಗಲೂ ಸಂಯೋಗವು ಅನಿತ್ಯವೇ ಆಗುತ್ತದೆ ಉದಾ:—ಪರಮಾಣುಗಳೆರಡರ ಸಂಯೋಗ. ಎರಡರಲ್ಲಿ ಒಂದು ವಿಭುವಾದರೂ ತತ್ತತ್ಪ್ರದೇಶಭೇದದಿಂದ ನವನವವಾಗಿ ಹುಟ್ಟುವುದರಿಂದ ಸಂಯೋಗವು ಅನಿತ್ಯವೇ ಆಗುತ್ತದೆ. ಉದಾ:—ಆತ್ಮಮನಃಸಂಯೋಗಗಳು ಎರಡೂ ವಿಭುವಾದಾಗ ಅವುಗಳ ಸಂಯೋಗ ನಿತ್ಯವೆನ್ನಬೇಕು. ಆದರೆ ಅಲ್ಲಿರುವ ಸಂಯೋಗ ದಿಂದ ಯಾವ ಕಾರ್ಯವೂ ಆಗದಿರುವುದರಿಂದ ಅದನ್ನು ಅಂಗೀಕರಿಸಿ ಪ್ರಯೋಜನವಿಲ್ಲ. ಅದರಿಂದ ಆಗುವ ಕಾರ್ಯವಾದರೂ ನಿತ್ಯವೇ ಆಗಬೇಕಾಗುತ್ತದೆ. ಸಹಕಾರಿಕಾರಣದಿಂದ ಅದು ಅನಿತ್ಯವಾಗುತ್ತದೆಂದು ಹೇಳುವುದಾದರೆ ಸಹಕಾರಿಕಾರಣವೇ ಕಾರ್ಯೋತ್ಪಾದಕ ವಾಗುತ್ತದೆ. ನಿತ್ಯಸಂಯೋಗಕ್ಕೆ ಕಾರಣತ್ವಕಲ್ಪನೆಮಾಡಬೇಕಾಗಿಲ್ಲ. "ಸಂಯೋಗ ವೆಲ್ಲವೂ ಅನಿತ್ಯವೇ, ಅಜಸಂಯೋಗನನ್ನಂಗೀಕರಿಸಿಲ್ಲ'' ಎಂದು ವಾಕ್ಯವೃತ್ತಿಯಲ್ಲಿಯೂ ಹೇಳಿದೆ. ಆದುದರಿಂದ ನೈಯಾಯಿಕರು ಯುತಸಿದ್ಧಗಳ ಸಂಬಂಧವನ್ನೇ ಸಂಯೋಗ ವೆಂದು ಹೇಳಿರುತ್ತಾರೆ. ಮೀಮಾಂಸಕಮತವನ್ನಂಗೀಕರಿಸಿ ನಿತ್ಯಸಂಯೋಗವನ್ನಂಗೀ ಕರಿಸಿದರೂ ನಿತ್ಯಸಿದ್ಧವಾದ ಅದಕ್ಕೆ ಕಾರ್ಯಯಾವುದೂ ಇಲ್ಲದಿರುವುದರಿಂದ ವ್ಯರ್ಥಕಲ್ಪನೆ ಯಾಗುತ್ತದೆ.

ಧಾತೂನಾಮನೇಕಾರ್ಥತ್ವೇನ ಯುಜೇಃ ಸಮಾಧ್ಯರ್ಥತ್ವೋಪಪತ್ತೇಶ್ಚ। ತದುಕ್ತಮ್—

ನಿಪಾತಶ್ಚೋಪಸರ್ಗಾಶ್ಚ ಧಾತವಶ್ಚೇತಿ ತೇ ತ್ರಯಃ ॥
ಅನೇಕಾರ್ಥಾಃ ಸ್ಮೃತಾಃ ಸರ್ವೇ ಪಾಠಸ್ತೇಷಾಂ ನಿದರ್ಶನಮ್ । ಇತಿ ।

ಅತ ಏವ ಕೇಚನ ಯುಜಿಂ ಸಮಾಧಾವಪಿ ಪಠಂತಿ । ಯುಜ ಸಮಾಧಾವಿತಿ । ನಾಪಿ ಯಾಜ್ಞ್ಯವಲ್ಕ್ಯವಚನವ್ಯಾಕೋಪಃ । ತತ್ರಸ್ಥಸ್ಯಾಪಿ ಯೋಗಶಬ್ದಸ್ಯಾಪಿ ಸಮಾಧ್ಯರ್ಥತ್ವಾತ್ ।

ಸಮಾಧಿಃ ಸಮತಾವಸ್ಥಾ ಜೀವಾತ್ಮಪರಮಾತ್ಮನೋಃ ।
ಬ್ರಹ್ಮಣ್ಯೇವ ಸ್ಥಿತಿರ್ಯಾ ಸಾ ಸಮಾಧಿಃ ಪ್ರತ್ಯಗಾತ್ಮನಃ ॥

ಇತಿ ತೇನೈವೋಕ್ತತ್ವಾಚ್ಚ । ತದುಕ್ತಂ ಭಗವತಾ ವ್ಯಾಸೇನ (ಯೋ-ಭಾ-೨।೧) ಯೋಗಃ ಸಮಾಧಿರಿತಿ ॥

ಧಾತುಗಳಿಗೆ ಅನೇಕಾರ್ಥವಿರುವುದರಿಂದ ಯುಜಧಾತುವಿಗೆ ಸಮಾಧ್ಯರ್ಥವು ಉಪ ಪನ್ನವಾಗುತ್ತದೆ. 'ನಿಪಾತಃ'—ಇತಿ. ನಿಪಾತ, ಉಪಸರ್ಗ. ಧಾತು ಈ ಮೂರಕ್ಕೆ ನಾನಾರ್ಥಗಳು ಇವೆಯೆಂದರ್ಥ. ನಾನಾರ್ಥದಲ್ಲಿ ಪಾಠ ಮಾಡಿರುವುದೇ ಇದಕ್ಕೆ ಪ್ರಮಾಣ. ಕೇಚನ ಅಂದರೆ ಪಾಣಿನಿಮುಂತಾದವರು. ಸಂಯೋಗಾರ್ಥವನ್ನು ಹೇಳಿದ ಯಾಜ್ಞ್ಯವಲ್ಕ್ಯರ ವಚನಕ್ಕೂ ವಿರೋಧ ಬರುವುದಿಲ್ಲ. ಸಂಯೋಗವೆಂದರೆ ಸಮ್ಯಗ್ಯೋಗ. ಸಾಮ್ಯಾವಸ್ಥಾಯೋಗವೇ ಸಮ್ಯಗ್ಯೋಗ. ಇದೇ ಸಮಾಧಿಯಾಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ. ಬುದ್ಧ್ಯಾದಿ ಸಂಬಂಧಮೂಲಕವಾಗಿ ಕಲ್ಪಿತವಾದ ಧರ್ಮಗಳನ್ನು ಬಿಟ್ಟು ಸ್ವಾಭಾವಿಕವಾದ ಅಸಂಗರೂಪದಿಂದ ಜೀವನ ಪರಮಾತ್ಮನಂತಿರುವ ಸ್ಥಿತಿಯೇ ಸಾಮ್ಯಾವಸ್ಥೆ. ಇದನ್ನೇ ಶ್ರುತಿಯಲ್ಲಿ 'ನಿರಂಜನಃ ಪರಮಂ ಸಾಮ್ಯಮುಪೈತಿ' ಎಂಬಿವೇ ಮುಂತಾದ ವಾಕ್ಯಗಳಿಂದ ಮುಕ್ತಿಯೆಂದು ಹೇಳಿದೆ. ಹೀಗೆ ಯೋಗಪದಕ್ಕೆ ಸಮಾಧಿಯೆಂಬ ಅರ್ಥವನ್ನು ಅವರೇ ಬೇರೆ ಕಡೆಯಲ್ಲಿ ಹೇಳಿರುತ್ತಾರೆ. 'ಸಮಾಧಿಃ'—ಇತಿ.

ನನ್ವೇವ ಮಷ್ಟಾಂಗಯೋಗೇ ಚರಮಸ್ಯಾಂಗಸ್ಯ ಸಮಾಧಿತ್ವಮುಕ್ತಂ ಪತಂಜಲಿನಾ (ಪಾ-ಯೋ-ಸೂ ೨।೨೯) ಯಮನಿಯಮಾಸನಪ್ರಾಣಾಯಾಮ ಪ್ರತ್ಯಾಹಾರಧಾರಣಾ ಧ್ಯಾನಸಮಾಧಯೋಽಷ್ಟಾವಂಗಾನಿ ಯೋಗಸ್ಯ ಇತಿ ॥ ನ ಚಾಂಗ್ಯೇವಾಂಗತಾಂ ಗಂತುಮುತ್ಸಹತೇ । ಉಪಕಾರ್ಯೋಪಕಾರಕಭಾವಸ್ಯ ದರ್ಶಪೂರ್ಣಮಾಸ ಪ್ರಯಾಜಾದೌ ಭಿನ್ನಾಯತನತ್ವೇನಾತ್ಯಂತಭೇದಾತ್ । ಅತಃ ಸಮಾಧಿರಪಿ ನ ಯೋಗಶಬ್ದಾರ್ಥೋ ಯುಜ್ಯತ ಇತಿ ಚೇತ್–ತನ್ನ ಯುಜ್ಯತೇ । ವ್ಯುತ್ಪತ್ತಿ ಮಾತ್ರಾಭಿಧಿತ್ಸಯಾ ತದೇವಾರ್ಥಮಾತ್ರನಿರ್ಭಾಸಂ ಸ್ವರೂಪಶೂನ್ಯಮಿವ ಸಮಾಧಿಃ (ಪಾ-ಯೋ ಸೂ-೨।೩) ಇತಿ ನಿರೂಪಿತ ಚರಮಾಂಗವಾಚಕೇನ ಸಮಾಧಿಶಬ್ದೇನಾಂಗಿನೋ ಯೋಗಸ್ಯಾಭೇದವಿವಕ್ಷಯಾ ವ್ಯಪದೇಶೋಪಪತ್ತೇಃ। ನ ಚ ವ್ಯುತ್ಪತ್ತಿಬಲಾದೇವ ಸರ್ವತ್ರ ಶಬ್ದಃ ಪ್ರವರ್ತತೇ । ತಥಾತ್ವೇ ಗಚ್ಛತೀತಿ ಗೌರಿತಿ ವ್ಯುತ್ಪತ್ತೇಸ್ತಿಷ್ಠನ್ ಗೌರ್ನ ಸ್ಯಾತ್ । ಗಚ್ಛನ್ ದೇವದತ್ತಶ್ಚ ಗೌಃ ಸ್ಯಾತ್ । ಪ್ರವೃತ್ತಿನಿಮಿತ್ತಂ ಚ ಪ್ರಾಗುಕ್ತಮೇವ ಚಿತ್ತವೃತ್ತಿನಿರೋಧ ಇತಿ । ತದುಕ್ತಂ ಯೋಗಶ್ಚಿತ್ತವೃತ್ತಿನಿರೋಧಃ (ಪಾತ-ಯೋ-ಸೂ-೧।೨) ಇತಿ॥

ಯೋಗಶಬ್ದಕ್ಕೆ ಸಮಾಧ್ಯರ್ಥ ಕೊಡುವುದಿಲ್ಲವೆಂದು ಆಕ್ಷೇಪಿಸುತ್ತಾನೆ. 'ನನು' ಇತಿ ಯೋಗವೆಂದರೆ ಚಿತ್ತವೃತ್ತಿನಿರೋಧವೆಂದು ಹಿಂದೆ ಹೇಳಿದೆ. ಈಗ ಯೋಗಶಬ್ದಕ್ಕೆ ಸಂಯೋಗಾರ್ಥವನ್ನು ನಿರಾಕರಿಸಿ ಸಮಾಧಿಯೆಂದು ವಿವರಿಸಿದೆ. ಸಮಾಧಿಶಬ್ದಾರ್ಥವು ಚಿತ್ತವೃತ್ತಿನಿರೋಧಕ್ಕಿಂತ ಬೇರೆಯಾಗುವುದಾದರೆ ಆಗ ಪೂರ್ವಾಪರವಿರೋಧ ಬರುತ್ತದೆ. ಚಿತ್ತವೃತ್ತಿನಿರೋಧವೇ ಸಮಾಧಿಯೆನ್ನುವುದಾದರೆ 'ಯಮನಿಯಮ' — ಸೂತ್ರಕ್ಕೆ ವಿರೋಧ ಬರುತ್ತದೆ. ಅಲ್ಲಿ ಎಂಟು ಯೋಗಾಂಗಗಳಲ್ಲಿ ಸಮಾಧಿಯೂ ಒಂದು ಅಂಗವಾಗಿ ಹೇಳಿದೆ. ಯೋಗವೇ ಸಮಾಧಿಯೆಂದು ಹೇಳಿಲ್ಲ. ಸಮಾಧಿಯು ಯೋಗಕ್ಕೆ ಅಂಗವಾದುದರಿಂದ ಯೋಗಕ್ಕೆ ಉಪಕಾರಕವಾಗಿದೆ. ಯೋಗವು ಅಂಗಿಯಾದುದರಿಂದ (ಪ್ರಧಾನ) ಉಪಕಾರ್ಯವಾಗುತ್ತದೆ. ತನಗೆ ತಾನೇ ಎಲ್ಲಿಯೂ ಉಪಕಾರ್ಯವೂ ಉಪಕಾರಕವೂ ಆಗಿರುವುದು ದೃಷ್ಟವಾಗಿಲ್ಲ. ಅವುಗಳಿಗೆ ಭಿನ್ನಭಿನ್ನಾಶ್ರಯವಿರುತ್ತದೆ. ಉದಾಹರಣೆಯಿಂದ ಇವನ್ನು ಸ್ಪಷ್ಟಪಡಿಸುತ್ತಾನೆ. 'ದರ್ಶ'—ಇತಿ ದರ್ಶಪೂರ್ಣಮಾಸವೆಂಬುದು ಒಂದು ಪ್ರಧಾನ (ಅಂಗೀ) ಯಾಗ. ಇದು ಉಪಕಾರ್ಯಕ್ಕೆ ಆಶ್ರಯವಾಗುತ್ತದೆ. ಅದಕ್ಕೆ ಅಂಗಗಳಾದ ಪ್ರಯಾಜಾದಿಗಳು ಉಪಕಾರಕಗಳಾಗಿ ಉಪಕಾರಕತ್ವಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಶ್ರಯಗಳಾಗುತ್ತವೆ. ಆದರಂತೆ ಉಪಕಾರ್ಯವಾದ ಅಂಗಿಭೂತವಾದ ಯೋಗಕ್ಕಿಂತ ಉಪಕಾರಕವಾದ ಅಂಗವಾದ ಸಮಾಧಿಯು ಅತ್ಯಂತ ಭಿನ್ನವಾದುದರಿಂದ ಯೋಗವು ಸಮಾಧಿಯಾಗುವುದು ಹೇಗೆ ? ಆಯತನ—ಆಶ್ರಯ. 'ತನ್ನ'—ಎಂಬುದರಿಂದ ಸಮಾಧಾನ ತೋರಿಸುತ್ತಾನೆ. ವ್ಯುತ್ಪತ್ತಿಯೆಂದರೆ ಪ್ರಕೃತಿಪ್ರತ್ಯಯಾವಯವಾರ್ಥ. ಯೋಗಶಬ್ದಕ್ಕೆ ಒಂದು ಅವಯವಾರ್ಥವನ್ನು ನಿರೂಪಿಸಬೇಕು ಎಂಬ ತಾತ್ಪರ್ಯದಿಂದಲೇ ವ್ಯಾಸಭಾಷ್ಯದಲ್ಲಿ ಸಮಾಧ್ಯರ್ಥಕ ಯುಜಧಾತುವನ್ನು ಸ್ವೀಕರಿಸಿ "ಯೋಗಃ ಸಮಾಧಿಃ" ಎಂದು ವ್ಯವಹರಿಸಿದೆ. ಸಮಾಧಿಯು ಯೋಗಾಂಗವಾದುದರಿಂದ ಅಂಗಿಯಾದ ಯೋಗಕ್ಕಿಂತ ಭೇದವಿದ್ದರೂ ಅಂಗಾಂಗಿಗಳಿಗೆ ಕೇವಲ ಅಭೇದವಿವಕ್ಷೆಯಿಂದ ಹೇಳಿದೆಯೆಂದು ಕಷ್ಟದಿಂದ ಯೋಜನೆಮಾಡಬೇಕು. ಹಾಗೆ ಹೇಳುವುದರಲ್ಲಿಯೇ ಅಭಿನಿವೇಶವಿದೆಯೆಂದು ತಿಳಿಯಬಾರದು. 'ನಚ'—ಇತಿ. ಎಲ್ಲಾ ಕಡೆಯಲ್ಲಿಯೂ ವ್ಯುತ್ಪತ್ತಿನಿಮಿತ್ತವನ್ನೇ ಇಟ್ಟುಕೊಂಡು ಶಬ್ದವ್ಯವಹಾರವಿರುವುದಿಲ್ಲ. (ಪ್ರಯೋಗ). ಹಾಗೆ ಹೇಳುವುದಾದರೆ 'ಗಚ್ಛತೀತಿ ಗೌಃ' ಎಂಬ ವ್ಯುತ್ಪತ್ತಿನಿಮಿತ್ತದಿಂದ ತಿರುಗುತ್ತಿರುವ ಹಸುವಿನಲ್ಲಿ ಮಾತ್ರ 'ಗೌಃ' ಎಂಬ ಪ್ರಯೋಗವೂ, ಮಲಗಿದ ಹಸುವಿನಲ್ಲಿ 'ಗೌಃ' ಎಂಬ ಪ್ರಯೋಗ ಮಾಡದೆಯೂ ಇರಬೇಕಾಗುತ್ತದೆ. ಹೋಗುವ ದೇವದತ್ತನಲ್ಲಿಯೂ 'ಗೌಃ' ಎಂದು ಪ್ರಯೋಗಿಸಬೇಕಾಗುತ್ತದೆ. ಸಮಾಧಿಯು ಎಂಟು ಯೋಗಾಂಗಗಳಲ್ಲಿ ಕೊನೆಯ ಅಂಗವಾಗಿದೆ. 'ತದೇವಾರ್ಥಮಾತ್ರ'—ಇತಿ. ಇದರಿಂದ ಸೂತ್ರಾರ್ಥ ಲಕ್ಷಿತವಾಗುತ್ತದೆ. 'ತದೇವ'—ಸೂತ್ರ. ಅಲ್ಲಿ ತಚ್ಛಬ್ದದಿಂದ 'ತತ್ರಪ್ರತ್ಯಯೈಕತಾನತಾಧ್ಯಾನಮ್' (ಯೋ-ಸೂ-೩।೨ ಎಂದು ಪೂರ್ವಸೂತ್ರದಲ್ಲಿ ಹೇಳಿದ ಧ್ಯಾನರೂಪವಾದ ಏಳನೆಯ ಯೋಗಾಂಗವು ಪರಾಮೃಷ್ಟವಾಗುತ್ತದೆ. ಸೂತ್ರದಲ್ಲಿರುವ ಮಾತ್ರಪದದ ವಿವರಣವನ್ನು ಸೂತ್ರಕಾರರು ತಾವೇ 'ಸ್ವರೂಪಶೂನ್ಯಮಿವ' ಎಂದು ಹೇಳುವುದರಿಂದ ತೋರಿಸಿರುತ್ತಾರೆ. ಅದೇ ಧ್ಯಾನವೇ ಧ್ಯೇಯಾ (ಪರಮಾತ್ಮ) ವೇಶವಶದಿಂದ ಧ್ಯಾನಧ್ಯಾತೃದೃಷ್ಟಿಶೂನ್ಯವಾಗಿ, ಧ್ಯೇಯಾರ್ಥಮಾತ್ರವನ್ನು ಗ್ರಹಿಸಿದಾಗ ಧ್ಯಾನವಿದ್ದರೂ ಧ್ಯಾತೃ, ಧ್ಯಾನ, ಧ್ಯೇಯಾದಿವಿಭಾಗಗ್ರಹಣವಿಲ್ಲದಿರುವುದರಿಂದ ಸ್ವರೂಪಶೂನ್ಯದಂತಾಗುತ್ತದೆ. ಇದೇ ಸಮಾಧಿಯೆನಿಸುತ್ತದೆ. ಈ ಯೋಗಾಂಗಭೂತವಾದ ಸಮಾಧಿಯೇ ಸೂತ್ರಕಾರರಿಂದ ಲಕ್ಷಿತವಾಗಿದೆ. (ಸೂತ್ರದಿಂದ ವಿವರಿಸಿದೆ). ಇಲ್ಲಿ ವೃತ್ತಿನಿರೋಧವಿರುವುದಿಲ್ಲ. ಯೋಗಶಬ್ದಕ್ಕೆ ಅವಯವಾರ್ಥಾನುಸಾರದಿಂದ ಯೋಗಾಂಗವಾದ ಸಮಾಧಿರೂಪಾರ್ಥದಲ್ಲಿ ಪ್ರವೃತ್ತಿಯುಂಟಾಗಲಿ ಎಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ.

'ನಚ—' ಇತಿ. ಯೌಗಿಕಶಬ್ದಸ್ಥಳದಲ್ಲಿ ಅವಯವಾರ್ಥಾನುಸಾರವಾಗಿ ಪ್ರವೃತ್ತಿ ಹೇಳಬಹುದು. ಏಕೆಂದರೆ ಅಲ್ಲಿ ಅವಯವಾರ್ಥವೇ ಪ್ರವೃತ್ತಿನಿಮಿತ್ತವಾಗುತ್ತದೆ ಪಾಚಕ ಎಂದರೆ ಪಾಕಮಾಡುವವನೇ ಆಗುತ್ತಾನೆ. ಯೋಗರೂಢಿಸ್ಥಳದಲ್ಲಿಯೂ (ಪಂಕಜ) ರೂಢಿಸ್ಥಲದಲ್ಲಿಯೂ (ಮಂಡಪಕುಶಲ) ಅವಯವಾರ್ಥಾತಿರಿಕ್ತವನ್ನೇ ಪ್ರವೃತ್ತಿನಿಮಿತ್ತವನ್ನಾಗಿ ಅಂಗೀಕರಿಸುವುದರಿಂದ ಅದನ್ನು ಅನುಸರಿಸಿ ಶಬ್ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರವೃತ್ತಿಯನ್ನು ಹೇಳಬೇಕು. ಗೋಶಬ್ದಕ್ಕೆ ಗೋತ್ವವೇ ಪ್ರವೃತ್ತಿನಿಮಿತ್ತವಾಗುವು ದಲ್ಲದೆ ಗಮನಕ್ರಿಯೆಯನ್ನನುಸರಿಸಿ ಎಂದೂ ಗೋಪದಪ್ರವೃತ್ತಿ ಇರುವುದಿಲ್ಲ. ಗೋತ್ವ ವಿದ್ದಲ್ಲಿ 'ಗೌಃ' ಎಂದು ವ್ಯವಹರಿಸುತ್ತಾರೆ. ಪ್ರಕೃತ ಚಿತ್ತವೃತ್ತಿನಿರೋಧರೂಪಪ್ರವೃತ್ತಿ ನಿಮಿತ್ತವನ್ನನುಸರಿಸಿ ಯೋಗಶಬ್ದವು ಸಮಾಧಿರೂಪಯೋಗಾಂಗದಲ್ಲಿ ಪ್ರವೃತ್ತಿ ಹೊಂದುವುದಿಲ್ಲ. 'ಯೋಗಃ ಸಮಾಧಿಃ' ಎಂದು ಹೇಳಿದ ಭಾಷ್ಯವು ಗೌಣಾಭಿಪ್ರಾಯ ದಿಂದ ಪ್ರವೃತ್ತವಾಗಿದೆಯೆಂದು ತಿಳಿಯಬೇಕು. ಸಮಾಧಿಶಬ್ದಕ್ಕೆ ಅನೇಕಾರ್ಥಗಳಿವೆ. 'ಯಮನಿಯಮ—' ಸೂತ್ರದಲ್ಲಿ ಹೇಳಿರುವುದರಿಂದ ಯೋಗದ ಚರಮಾಂಗವೂ ಸಮಾಧಿ ಯಾಗುತ್ತದೆ. ಅಂಗಿಯಾದ ಯೋಗವೂ ಸಮಾಧಿಯಾಗುತ್ತದೆ. 'ತಾ ಏವ ಸಬೀಜಃ ಸಮಾಧಿಃ (ಯೋ- ಸೂ ೧।೪೬) ತಸ್ಯಾಪಿ ನಿರೋಧೇ ಸರ್ವನಿರೋಧಾನ್ನಿರ್ಬೀಜಃ ಸಮಾಧಿಃ (ಯೋ-ಸೂ ೧।೫೧) ಎಂಬ ಎರಡು ಸೂತ್ರಗಳಲ್ಲಿಯೂ ಅಂಗಿಯಾದ ಸಂಪ್ರ ಜ್ಞಾತ, ಅಸಂಪ್ರಜ್ಞಾತಭೇದಗಳಿಂದ ಎರಡುವಿಧಯೋಗಗಳನ್ನೂ ಸಮಾಧಿಶಬ್ದದಿಂದ ವ್ಯವಹರಿಸಿರುತ್ತಾರೆ. ವ್ಯಾಸಭಾಷ್ಯದಲ್ಲಿಯೂ ಈ ಎರಡು ಅರ್ಥಗಳಲ್ಲಿ ಸಮಾಧಿಶಬ್ದ ಪ್ರಯೋಗವನ್ನು ಹಲವು ಬಾರಿ ಮಾಡಿರುತ್ತಾರೆ. ಆದುದರಿಂದ ಅಂಗಿವಾಚಕವಾಗಿ 'ಯೋಗಃ ಸಮಾಧಿಃ' ಎಂದು ಹೇಳಿದ ಭಾಷ್ಯವೂ ಸಂಗತವಾಗಿಯೇ ಇರುತ್ತದೆ.

ನನು ವೃತ್ತೀನಾಂ ನಿರೋಧಶ್ಚೇದ್ಯೋಗಾಭಿಮತಸ್ತಾಸಾಂ ಜ್ಞಾನತ್ವೇನ ಆತ್ಮಾ ಶ್ರಯತಯಾ ತನ್ನಿರೋಧೋಽಪಿ ಪ್ರಧ್ವಂಸಪದವೇದನೀಯಸ್ತದಾಶ್ರಯೋ ಭವೇತ್ । ಪ್ರಾಗಭಾವಪ್ರಧ್ವಂಸಯೋಃ ಪ್ರತಿಯೋಗಿಸಮಾನಾಶ್ರಯತ್ವ ನಿಯಮಾತ್ । ತತಶ್ಚ

"ಉಪಯನ್ನಪಯನ್ಧರ್ಮೋ ವಿಕರೋತಿ ಹಿ ಧರ್ಮಿಣಮ್ ॥"

ಇತಿ ನ್ಯಾಯೇನಾತ್ಮನಃ ಕೌಟಸ್ಥ್ಯಂ ವಿಹನ್ಯೇತೇತಿ ಚೇತ್— ತದಪಿ ನ—ಘಟತೇ । ನಿರೋಧಪ್ರತಿಯೋಗಿಭೂತಾನಾಂ ಪ್ರಮಾಣವಿಪರ್ಯಯವಿಕಲ್ಪನಿದ್ರಾಸ್ಮೃತಿ ಸ್ವರೂಪಾಣಾಂ ವೃತ್ತೀನಾಮಂತಃಕರಣಾದ್ಯಪರ ಪರ್ಯಾಯಚಿತ್ತಧರ್ಮತ್ವಾಂಗೀ ಕಾರಾತ್ । ಕೂಟಸ್ಥನಿತ್ಯಾ ಚಿಚ್ಛಕ್ತಿರಪರಿಣಾಮಿನೀ ವಿಜ್ಞಾನ ಧರ್ಮಾಶ್ರಯೋ ಭವಿತುಂ ನಾರ್ಹತ್ಯೇವ । ನ ಚ ಚಿತಿಶಕ್ತೇರಪರಿಣಾಮಿತ್ವಮಸಿದ್ಧಮಿತಿ ಮಂತವ್ಯಮ್ । 'ಚಿತ್ತಿಶಕ್ತಿರಪರಿಣಾಮಿನೀ-ಸದಾ ಜ್ಞಾತೃತ್ವಾತ್ ನಯದೇವಂ ನ ತದೇವಂ ಯಥಾ ಚಿತ್ತಾದಿ— ಇತ್ಯಾದ್ಯನುಮಾನಸಂಭವಾತ್ ।

ವೃತ್ತಿನಿರೋಧವೇ ಯೋಗವಾಗುವುದಾದರೆ ಅವು ಜ್ಞಾನಗಳಾಗುವುದರಿಂದ ಆತ್ಮ ನಲ್ಲಿರುತ್ತವೆ. ನಿರೋಧವೆಂದರೆ ಅವುಗಳನಾಶ. ಅವುಗಳೂ ತಮ್ಮ ಪ್ರತಿಯೋಗಿಯ ನ್ನಾಶ್ರಯಿಸಿರುವುದರಿಂದ ಆತ್ಮನಲ್ಲಿಯೇ ಉಂಟಾಗಬೇಕಾಗುತ್ತವೆ. ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿಗಳೆಂದು (ಯೊ-ಸೂ ೧-೬) ಐದು ವೃತ್ತಿಗಳು ಹೇಳಿವೆ. ಅನಧಿಗತಾರ್ಥನಿಶ್ಚಯಾಕಾರವಾದವೃತ್ತಿಯೇ ಪ್ರಮಾಣವೃತ್ತಿ. ಮಿಥ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನವೇ ವಿಪರ್ಯಯ. ಅರ್ಥಶೂನ್ಯವಾಗಿ ಕೇವಲ ಕಲ್ಪನಾಮಯವಾದ ಪ್ರತ್ಯಯಕ್ಕೆ (ಆಹಾರ್ಯಜ್ಞಾನ) ವಿಕಲ್ಪವೆಂದು ಹೆಸರು. (ಶಶಶೃಂಗಾದಿ.) ನಿದ್ರಾ, ಸ್ಮೃತಿ ಎಲ್ಲರಿಗೂ ತಿಳಿದಿವೆ. ಈ ವೃತ್ತಿಗಳನಿರೋಧವೇ ಯೋಗವಾಗುತ್ತದೆ. ನಿರೋಧ ವೆಂದರೆ ವಿನಾಶ. ವೃತ್ತಿಗಳು ಯಾವ ಅಧಿಕರಣವನ್ನಾಶ್ರಯಿಸಿರುತ್ತವೆಯೋ ಅಲ್ಲಿಯೇ ವಿನಾಶವಾಗಬೇಕು. ವೃತ್ತಿಗಳು ಜ್ಞಾನರೂಪಗಳಾದುದರಿಂದ ಆತ್ಮನಲ್ಲಿರುತ್ತವೆ. ಆಗ ವಿನಾಶವೂ ಆತ್ಮನಲ್ಲಿಯೇ ಉಂಟಾಗಬೇಕು. ಆ ವಿನಾಶಗಳುಂಟಾಗುವಾಗ ತಮ್ಮ ಆಶ್ರಯವಾದ ಆತ್ಮನಲ್ಲಿ ಯಾವುದಾದರೊಂದು ವಿಕಾರವನ್ನುಂಟುಮಾಡುತ್ತವೆ. ಸ್ವಲ್ಪವೂ ವಿಕಾರಹೊಂದದಧರ್ಮಿಯಲ್ಲಿ ಎಂದೂ ಧರ್ಮವಿನಾಶವಾಗುವುದಿಲ್ಲ. ಆಗ ವೃತ್ತಿನಾಶಕಾಲದಲ್ಲಿ ಆತ್ಮನಿಗೆ ವಿಕಾರಸಂಭವಿಸಿ ಆತ್ಮನು ಕೂಟಸ್ಥ ಎಂಬ ಸಿದ್ಧಾಂತಕ್ಕೆ ಭಂಗಬಂದಂತಾಗುತ್ತದೆ. ಕೂಟವೆಂದರೆ ಮೂಲಸ್ವರೂಪ. ಕೂಟದಿಂದಲೇ ಇರುವವನು, ಎಂದೂ ವಿಕಾರ ಹೊಂದದವನೇ ಕೂಟಸ್ಥನು. ಘಟಪ್ರಾಗಭಾವವು ಘಟಕ್ಕೆ ಆಶ್ರಯವಾದ ಮೃತ್ತಿನಲ್ಲಿಯೇ ಇರುತ್ತದೆ. ಘಟಧ್ವಂಸವೂ ಘಟಾಶ್ರಯ ಗಳಾದ ಘಟಾವಯವಗಳಲ್ಲಿಯೇ ಇರುತ್ತದೆ.

'ಉಪಯನ್—' ಈ ನ್ಯಾಯವು ಸಿದ್ಧಾಂತಬಿಂದುವಿನ ಟೀಕೆಯಾದ ನ್ಯಾಯ ರತ್ನಾವಲಿಯಲ್ಲಿ ಹೇಳಿದೆ. ಉಪಯನ್—ಹುಟ್ಟುವುದೆಂದರ್ಥ (ಜಾಯಮಾನಃ) ಅಪಯನ್—ನಾಶವಾಗುವುದು, (ವಿನಶ್ಯನ್) ವಿಕರೋತಿ— ಉತ್ಪತ್ತಿವಿನಾಶಭಾಜಂ ಕರೋತಿ. ವಿದ್ಯಾರಣ್ಯರ ಸೂತಸಂಹಿತೆಯ ವ್ಯಾಖ್ಯಾನದಲ್ಲಿಯೂ (ಶಿವಮಾಹಾತ್ಮ್ಯ ಖಂಡ) ಈ ನ್ಯಾಯ ಹೇಳಿದೆ. ಅಂತಃಕರಣ, ಬುದ್ಧಿ, ಚಿತ್ತ ಇತ್ಯಾದಿಪರ್ಯಾಯ ಪದಗಳು. ಜ್ಞಾನವು ಅದರ ಪರಿಣಾಮ. ಬುದ್ಧಿವೃತ್ತಿಯಲ್ಲಿ ವಿಷಯಾಕಾರ ಸಮರ್ಪಣವೇ ವಿಷಯದ ಜ್ಞಾತತ್ವವೆಂದು ತಿಳಿಯಬೇಕು. ವಿಷಯಾಕಾರೋಪರಕ್ತ ಬುದ್ಧಿವೃತ್ತಿಯು ಚಿಚ್ಛಕ್ತಿಯಲ್ಲಿ ಪ್ರತಿಬಿಂಬಿತವಾಗುತ್ತದೆ. ಜಲಾದಿಗಳಲ್ಲಿ ರೂಪವುಳ್ಳ ಸ್ಥೂಲದ್ರವ್ಯಗಳ ಪ್ರತಿಬಿಂಬನಸಾಮರ್ಥ್ಯವು ಹೇಗೆ ಪ್ರಸಿದ್ಧವಾಗಿದೆಯೋ ಹಾಗೆ ಪುರುಷ ನಲ್ಲಿ ವೃತ್ತಿಮುತ್ತಿಚ್ಛಿತ್ತದ ಪ್ರತಿಬಿಂಬನಸಾಮರ್ಥ್ಯವನ್ನು ತಿಳಿಯಬೇಕು. ಆಗ ಬುದ್ಧಿ ವೃತ್ತಿಗೆ ಭೇದಗ್ರಹವಿಲ್ಲದಿರುವುದರಿಂದ ಬುದ್ಧಿವೃತ್ತ್ಯವಿಭಾಗಾಪನ್ನವಾದಚಿಚ್ಛಕ್ತಿಯು ಅರ್ಥ ವನ್ನನುಭವಿಸುತ್ತದೆಂಬ ವ್ಯವಹಾರ ಕೂಡುತ್ತದೆ. ಹೀಗೆ ಜ್ಞಾನವು ವಸ್ತುತಃ ಬುದ್ಧಿ ಸಂಬಂಧಿಯೇ ಆಗಿರುತ್ತದೆ. ಎಂದೂ ಆತ್ಮಸಂಬಂಧಿಯಾಗುವುದಿಲ್ಲ. ಹಾಗೆಯೇ ಜ್ಞಾನವಿಶೇಷರೂಪಗಳಾದ ಪ್ರಮಾಣಾದಿವೃತ್ತಿಗಳೂ ಆತ್ಮಸಂಬಂಧಿಯಾಗದಿರುವುದರಿಂದ ಆತ್ಮನಿಗೆ ಕೂಟಸ್ಥತ್ವವು ಸಿದ್ಧಿಸುತ್ತದೆ. ಜ್ಞಾನವು ವಸ್ತುತಃ ಆತ್ಮಧರ್ಮವೆಂದೇ ಹೇಳುವ ನೈಯಾಯಿಕರ ಮತ ಸರಿಯಲ್ಲವೆಂದು ತೋರಿಸುತ್ತಾನೆ. 'ಕೂಟಸ್ಥ'—ಇತಿ. ಜ್ಞಾನ ವೆಂದರೆ ವಿಷಯಾಕಾರಸದೃಶಾಕಾರದಿಂದ ಬುದ್ಧಿಯ ಪರಿಣಾಮ. ಇದು ಪರಿಣಾಮ ರಹಿತನಾದ ಆತ್ಮನಿಗೆ ಸಂಭವಿಸುವುದಿಲ್ಲ. ಚಿತ್‌ಶಕ್ತಿಯು ಅಪರಿಣಾಮಿಯೆಂಬುದರಲ್ಲಿ ಪ್ರಮಾಣವೇನು? ಎಂದರೆ ಅನುಮಾನ ಪ್ರಮಾಣತೋರಿಸುತ್ತಾನೆ. 'ಚಿತಿಶಕ್ತಿಃ'—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತಿ. ಚಿಚ್ಛಕ್ತಿಗೆ ವೃತ್ತಿನುಚ್ಚಿತ್ತವು ವಿಷಯವಾಗುತ್ತದೆ. ಚಿತ್ತಕ್ಕೆ ಘಟಾದಿಗಳು ವಿಷಯ. ಅವು ಸಾಕ್ಷಾತ್ತಾಗಿ ಚಿಚ್ಛಕ್ತಿಗೆ ವಿಷಯಗಳಾಗುವುದಿಲ್ಲ. ಅವುಗಳು ತಿಳಿಯ ಬೇಕಾದರೆ ಇಂದ್ರಿಯ ಸಂಯೋಗ ಪ್ರಕಾಶಾದಿಸಾಧನಗಳಿರಬೇಕು. ಸಾಧನಗಳಿಲ್ಲದಿದ್ದರೆ ಅವುಗಳು ಇದ್ದರೂ ಅಜ್ಞಾತಗಳಾಗಿಯೇ ಇರುತ್ತವೆ. ಆದರೆ ಚಿತ್ತವೃತ್ತಿಯು ಇರುವಾಗ ಎಂದೂ ಅದು ಅಜ್ಞಾತವಾಗಿರುವುದಿಲ್ಲ. ವೃತ್ತಿಯಲ್ಲಿ ಎಂದೂ ಅಜ್ಞಾತಸತ್ತಾ ಸಂಭವಿಸುವುದಿಲ್ಲ. ಇರತಕ್ಕ ಚಿತ್ತವೃತ್ತಿಯು ಯಾವಾಗಲಾದರೂ ಅಜ್ಞಾತವಾಗುತ್ತದೆ ಯೆಂದರೆ ನಾನು ಸುಖಿಯೋ ಅಲ್ಲವೇ, ದುಃಖಿಯೋ ಅಲ್ಲವೇ, ಇಚ್ಛಿಸುವೆನೇ ಇಲ್ಲವೇ ಇತ್ಯಾದಿ ಸಂಶಯವೇ ಇರಬೇಕಾಗುತ್ತದೆ. ಆದುದರಿಂದ ಚಿತ್ತವೃತ್ತಿಸಾಕ್ಷಿತ್ವಕಾಲದಲ್ಲಿ ಅಪರಿಣಾಮಿತ್ವವನ್ನು ಒಪ್ಪಲೇಬೇಕು. ಚಿತ್ತದಂತೆ ಚಿಚ್ಛಕ್ತಿಗೂ ಪರಿಣಾಮವನ್ನು ಅಂಗೀಕರಿಸಿದರೆ ಪರಿಣಾಮವು ಕಾರ್ಯವಾಗುವುದರಿಂದ ಅದು ಕಾದಾಚಿತ್ಕವಾಗಿ (ಅನಿತ್ಯವಾಗಿ, ಚಿತ್ತವೃತ್ತಿಗೆ ಸದಾಜ್ಞಾತತ್ವವು ಕೂಡದೇ ಹೋಗಬೇಕಾಗುತ್ತದೆ. ಬುದ್ಧಿವೃತ್ತಿಯಲ್ಲಿ ಸ್ವಾಕಾರಸಮರ್ಪಣವೇ ವಿಷಯದ ಜ್ಞಾತತ್ವ. ಬುದ್ಧಿವೃತ್ತಿಯ ಜ್ಞಾತತ್ವವೆಂದರೆ ಚಿಚ್ಛಕ್ತಿಯಲ್ಲಿ ಪ್ರತಿಬಿಂಬನಮಾತ್ರವೆಂದು ತಿಳಿಯಬೇಕು. ಚಿಚ್ಛಕ್ತಿರೂಪ ಪುರುಷನು ಸದಾ ಅಧಿಷ್ಠಾತೃವಾಗಿರುವುದರಿಂದ ಬುದ್ಧಿವೃತ್ತಿಯಸಂಬಂಧ ಯಾವಾಗಲೂ ಇರುತ್ತದೆ. ಅವನ ಅಂತರಂಗವಾದ ನಿರ್ಮಲಸತ್ವಯಾವುದಿದೆಯೋ ಅದೂ ಯಾವಾಗಲೂ ಇರುತ್ತದೆ. ಹೀಗೆ ಚಿತ್ತವೃತ್ತಿಗೆ ಯಾವಾಗಲೂ ಜ್ಞಾತತಾ ಇರುವುದರಿಂದ ಚಿಚ್ಛಕ್ತಿಗೆ ಸದಾ ಜ್ಞಾತೃತ್ವವೂ ಅರ್ಥಾತ್ ಸಿದ್ಧವಾಗುವುದರಿಂದ ಇದನ್ನೇ ಲಿಂಗವಾಗಿ ಸ್ವೀಕರಿಸಿ ಆದರಿಂದ ಚಿಚ್ಛಕ್ತಿಗೆ ಅಪರಿಣಾಮಿತ್ವವು ಅನುಮಿತವಾಗುತ್ತದೆ. ಇದಕ್ಕೆ ಅನ್ವಯವ್ಯಾಪ್ತಿಯಲ್ಲಿ ದೃಷ್ಟಾಂತವಿಲ್ಲದಿರುವುದರಿಂದ ವ್ಯತಿರೇಕದೃಷ್ಟಾಂತ ತೋರಿಸುತ್ತಾನೆ. 'ನಯದೇವಂ'—ಇತಿ. ಯಾವುದು ಅಪರಿಣಾಮಿ ಆಗುವುದಿಲ್ಲವೋ ಅದು ಸದಾ ಜ್ಞಾತೃವೂ ಆಗುವುದಿಲ್ಲ. ಹೇಗೆಂದರೆ ಬುದ್ಧಿ

ತಥಾ ಯದ್ಯಸೌಪುರುಷಃ ಪರಿಣಾಮೀ ಸ್ಯಾತ್ತದಾ ಪರಿಣಾಮಸ್ಯ ಕಾದಾಚಿತ್ಕತ್ವಾತ್ತಾಸಾಂ ಚಿತ್ತವೃತ್ತೀನಾಂ ಸದಾ ಜ್ಞಾತತ್ವಂ ನೋಪಪದ್ಯೇತ । ಚಿದ್ರೂಪಸ್ಯ ಪುರುಷಸ್ಯ ಸದೈವಾಧಿಷ್ಠಾತೃತ್ವೇನಾವಸ್ಥಿತಸ್ಯ ಯದಂತರಂಗಂ ನಿರ್ಮಲಂ ಸತ್ವಂ ತಸ್ಯಾಪಿ ಸದೈವ ಸ್ಥಿತತ್ವಾತ್ ಯೇನ ಯೇನಾರ್ಥೇನ ಉಪರಕ್ತಂ ಭವತಿ ತಸ್ಯ ದೃಶ್ಯಸ್ಯ ಸದೈವ ಚಿಚ್ಛಾಯಾಪತ್ತ್ಯಾ ಭಾನೋಪಪತ್ತ್ಯಾ ಪುರುಷಸ್ಯ ನಿಃಸಂಗತ್ವಂ ಸಂಭವತಿ । ತತಶ್ಚ ಸಿದ್ಧಂ ತಸ್ಯ ಸದಾ ಜ್ಞಾತೃತ್ವಮಿತಿ ನ ಕದಾಚಿತ್ಪರಿಣಾಮಿತ್ವಶಂಕಾವತರತಿ । ಚಿತ್ತಂ ಪುನರ್ಯೇನ ವಿಷಯೇಣೋಪರಕ್ತಂ ಭವತಿ ಸ ವಿಷಯೋ ಜ್ಞಾತಃ, ಯೇನೋಪರಕ್ತಂ ನ ಭವತಿ ತದಜ್ಞಾತಮಿತಿ ವಸ್ತುನೋಽಯಸ್ಕಾಂತಮಣಿಕಲ್ಪಸ್ಯ ಜ್ಞಾನಾಜ್ಞಾನಕರಣಭೂತೋಪರಾಗಾನುಪರಾಗ ಧರ್ಮಿತ್ವಾದಯಃ ಸಧರ್ಮಕಂಚಿತ್ತಂ ಪರಿಣಾಮೀತ್ಯುಚ್ಯತೇ—।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುರುಷನು ಪರಿಣಾಮಿಯಾದರೆ ಪರಿಣಾಮವು ಅನಿತ್ಯವಾಗುವುದರಿಂದ ಚಿತ್ತವೃತ್ತಿಗಳ ಸದಾಜ್ಞಾತೃತ್ವವು ಕೂಡವೇ ಹೋಗಬೇಕಾಗುತ್ತದೆ. ಚಿದ್ರೂಪನಾದ ಪುರುಷನು ಅಧಿಷ್ಠಾತೃವಾಗಿದ್ದು ಅವನ ಅಂತರಂಗವಾದ ನಿರ್ಮಲವಾದ ಸತ್ವವು ಯಾವಾಗಲೂ ಇರುವುದರಿಂದ ಯಾವ ಯಾವ ಅರ್ಥದಿಂದ ಉಪರಕ್ತವಾಗುವುದೋ ಆದೃಶ್ಯಪದಾರ್ಥಕ್ಕೆ ಯಾವಾಗಲೂ ಚಿಚ್ಛಾಯಾ ರೂಪದಿಂದ ಪ್ರಕಾಶವು ಕೂಡುವುದರಿಂದ ಪುರುಷನಿಗೆ ನಿಃಸಂಗತ್ವ ಸಂಗತವಾಗುತ್ತದೆ. ಹೀಗೆ ಅಂಗೀಕರಿಸಿರುವುದರಿಂದ ಪುರುಷನು ಜ್ಞಾತೃವಾದುದರಿಂದ ಅವಶ್ಯವಾಗಿ ವಿಷಯಸಂಬಂಧವಾಗುವುದರಿಂದ ನಿಃ ಸಂಗತ್ವವು ಕೂಡುವುದಿಲ್ಲವೆಂಬ ಆಕ್ಷೇಪ ಸಂಗತವಾಗುವುದಿಲ್ಲ. ಚಿತ್ತವೃತ್ತಿಪ್ರತಿಬಿಂಬನವೇ ಜ್ಞಾತೃತ್ವವೆಂದು ಹಿಂದೆಯೇ ಹೇಳಿವೆ. ಚಿತ್ತವೃತ್ತಿಗೆ ಪರಿಣಾಮಿತ್ವ ಹೇಳಿ ಈಗ ಚಿತ್ತಕ್ಕೆ ಪರಿಣಾಮಿತ್ವವನ್ನು ತೋರಿಸುತ್ತಾನೆ. 'ಚಿತ್ತಂ ಪುನಃ'—ಇತಿ. ಚಿತ್ತವು ಯಾವ ಪದಾರ್ಥದೊಡನೆ ಉಪರಕ್ತವಾಗುವುದೋ ಅದು ಜ್ಞಾತವಾಗುತ್ತದೆ. ಯಾವ ವಸ್ತುವಿನೊಡನೆ ಉಪರಕ್ತವಾಗುವುದಿಲ್ಲವೋ ಆ ವಸ್ತುವು ಅಜ್ಞಾತವಾಗಿರತ್ತದೆ. ಸೂಜಿಗಲ್ಲಿನ ಕ್ರಿಯೆಯು ಕಬ್ಬಿಣಕ್ಕೆ ಆಕರ್ಷಕವಾಗುತ್ತದ. ಹೀಗೆಯೇ ಕ್ರಿಯಾರಹಿತವಾದ ವಿಷಯಗಳೂ (ಪದಾರ್ಥ) ಕಬ್ಬಿಣದಂತೆ ಕ್ರಿಯಾಶೀಲವಾದ ಚಿತ್ತವನ್ನು ತಮ್ಮ ಸಾಮರ್ಥ್ಯದಿಂದ ಇಂದ್ರಿಯಗಳ ಮೂಲಕ ಸೆಳೆದು ಅಲ್ಲಿ ತಮ್ಮ ಆಕಾರಕ್ಕೆ ಸಮಾನವಾದ ಆಕಾರವನ್ನು ಸಮರ್ಪಿಸುತ್ತವೆ. ಈ ಆಕಾರ ಸಮರ್ಪಣಕ್ಕೆ ಉಪರಂಜನ, ಉಪರಾಗವೆಂದು ಕರೆಯುತ್ತಾರೆ. ಉಪರಾಗವಾದಾಗ ವಸ್ತುವು ಜ್ಞಾತವಾಗು (ಜ್ಞಾನಗೋಚರ) ತ್ತದೆ. ಇಲ್ಲವಾದರೆ ಅಜ್ಞಾತವಾಗುತ್ತದೆ. ಚಿತ್ತವು ಪರಿಣಾಮಶೀಲವಾದರೆ ಈ ಉಪರಾಗವು ಕೂಡುವುದರಿಂದ ಚಿತ್ತವು ಪರಿಣಾಮಿಯೆಂದು ಸಿದ್ಧವಾಗುತ್ತದೆ.

ನನು ಚಿತ್ತಸ್ಯೇಂದ್ರಿಯಾಣಾಂ ಚಾಹಂಕಾರಿಕಾಣಾಂ ಸರ್ವಗತತ್ವಾತ್ ಸರ್ವವಿಷಯೈರಸ್ತಿ ಸದಾ ಸಂಬಂಧಃ । ತಥಾ ಚ ಸರ್ವೇಷಾಂ ಸರ್ವದಾ ಸರ್ವತ್ರ ಜ್ಞಾನಂ ಪ್ರಸಜ್ಯೇತೇತಿ ಚೇತ್ —ನ । ಸರ್ವಗತತ್ವೇಽಪಿ ಚಿತ್ತಂ ಯತ್ರ ಶರೀರೇ ವೃತ್ತಿಮತ್ತೇನ ಶರೀರೇಣ ಸಹ ಸಂಬಂಧೋ ಯೇಷಾಂ ವಿಷಯಾಣಾಂ ತೇಷ್ವೇವಾಸ್ಯ ಜ್ಞಾನಂ ಭವತಿ ನೇತರೇಷ್ವಿತ್ಯತಿ ಪ್ರಸಂಗಾಭಾವಾತ್ । ಅತ ಏವಾಯಸ್ಕಾಂತಮಣಿಕಲ್ಪಾ ವಿಷಯಾ ಅಯಃ ಸಧರ್ಮಕಂ ಚಿತ್ತಂ ಇಂದ್ರಿಯ ಪ್ರಣಾಲಿಕಯಾಭಿಸಂಬಂಧ್ಯ ಉಪರಂಜಯಂತೀತ್ಯುಕ್ತಮ್ । ತಸ್ಮಾತ್ ಚಿತ್ತಸ್ಯ ಧರ್ಮಾಃ ವೃತ್ತಯಃ ನಾತ್ಮನಃ ॥

ಸರ್ವಗತವೆಂದರೆ ವಿಭು. ಚಿತ್ತವನ್ನು ಅಣುಪರಿಣಾಮವೆಂದು ಅಂಗೀಕರಿಸುವುದು ಯುಕ್ತವಾಗುವುದಿಲ್ಲ. ಅಣುವೆಂದರೆ ಏಕಕಾಲದಲ್ಲಿ ಅನೇಕ ವಿಷಯ ಸಂಬಂಧ ಸಂಭವಿಸದಿರುವುದರಿಂದ ಏಕಾಗ್ರತಾ ಸ್ವತಃ ಸಿದ್ಧವಾಗುವುದರಿಂದ ಏಕಾಗ್ರತೋಪದೇಶವು ವ್ಯರ್ಥವಾಗಬೇಕಾಗುತ್ತದೆ. ಲಾಮಂಚದಿಂದ ಪರಮಳೀಕೃತವಾದ ಜಲಪಾನಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿಯೂ ದೀರ್ಘಶಷ್ಕುಲೀಭಕ್ಷಣಾದಿಗಳಲ್ಲಿಯೂ ಏಕಕಾಲದಲ್ಲಿ ಅನೇಕೇಂದ್ರಿಯವೃತ್ತ್ಯನುಭವಗಳು ಆಗದೇ ಹೋಗಬೇಕಾಗುತ್ತದೆ. ಮತ್ತು ಯೋಗಿಗಳಿಗೆ ಏಕಕಾಲದಲ್ಲಿ ಸರ್ವಾವಚ್ಛೇದದಿಂದ ಅಖಿಲಸಾಕ್ಷಾತ್ಕಾರವಾಗುವುದು ಆಗದೇ ಹೋಗಬೇಕಾಗುತ್ತದೆ. ಯೋಗಿ ಸಾಕ್ಷಾತ್ಕಾರವು ಲೌಕಿಕಸಂನಿಕರ್ಷದಿಂದ ಹುಟ್ಟುವುದಿಲ್ಲ. ಯೋಗಜಧರ್ಮದಿಂದ ಅದು ಹುಟ್ಟುವುದರಿಂದ ಅಲ್ಲಿ ದೋಷವಿಲ್ಲವೆನ್ನುವುದೂ ಯುಕ್ತವಾಗುವುದಿಲ್ಲ. ಮನಸ್ಸು ವಿಭುವೆಂದು ಅಂಗೀಕರಿಸಿರುವುದರಿಂದ ಲೌಕಿಕ ಸಂನಿಕರ್ಷದಿಂದಲೇ ಉಪಪನ್ನವಾಗುವಾಗ ಇತರ ಸಂನಿಕರ್ಷಕಲ್ಪನದಲ್ಲಿ ಯಾವ ಪ್ರಮಾಣವೂ ಇಲ್ಲ. ಹಾಗೆ ಕಲ್ಪಿಸಿದರೆ ಗೌರವದೋಷ ಬರುತ್ತದೆ. ಲೌಕಿಕಸಂನಿಕರ್ಷಕಾರ್ಯತಾವಚ್ಛೇದಕರೂಪವಾಗಿ ಸಾಕ್ಷಾತ್ಕಾರದಲ್ಲಿ ಒಂದು ಜಾತಿ ವಿಶೇಷವನ್ನು ಕಲ್ಪಿಸುವುದಲ್ಲದೆ ಯೋಗಜಧರ್ಮಕಾರ್ಯತಾವಚ್ಛೇದಕರೂಪವಾಗಿ ಸಾಕ್ಷಾತ್ಕಾರದಲ್ಲಿ ಇನ್ನೊಂದು ಜಾತಿವಿಶೇಷವನ್ನು ಕಲ್ಪಿಸಬೇಕಾದುದರಿಂದ ಗೌರವ ಬರುತ್ತದೆ. ಆದುದರಿಂದ ಯೋಗಜನ್ಯ ಸಾಕ್ಷಾತ್ಕಾರದಲ್ಲಿಯೂ ಲೌಕಿಕ ಸಂನಿಕರ್ಷವೇ ಕಾರಣವೆಂದು ಹೇಳಬೇಕು.

ಸರ್ವಾರ್ಥಗ್ರಹಣ ಸಮರ್ಥವಾದ ಚಿತ್ತದ ತಮೋರೂಪಾವರಣಭಂಗವು ಮಾತ್ರ ಯೋಗದಿಂದ ಮಾಡಲ್ಪಡುತ್ತದೆ. ಹಾಗೆಯೇ 'ಅತಿದೂರಾತ್ಸಾಮೀಪ್ಯಾತ್'—ಕಾರಿಕೆಯಲ್ಲಿ ಹೇಳಿದ ಉಪಲಬ್ಧಿಪ್ರತಿಬಂಧಕಕಾರಣಗಳೂ ಈ ಯೋಗದಿಂದ ಹೋಗಲಾಡಿಸಲ್ಪಡುತ್ತವೆ. ಯೋಗಿಗಳಿಗೆ ದೇಶಾಂತರದಲ್ಲಿರುವ ವಸ್ತುಸಾಕ್ಷಾತ್ಕಾರವಾಗುವುದರಿಂದ ಇಂದ್ರಿಯಗಳೂ ವಿಭುವೆಂದು ಅಂಗೀಕರಿಸಬೇಕು. ಅವುಗಳ ವೃತ್ತಿಗಳಾದರೊ ಆಯಾಯ ಸ್ಥಾನದಲ್ಲಿಯೇ ಆಗುತ್ತವೆಯೆಂದು ತಿಳಿಯಬೇಕು. ಹಾಗಾದರೆ ಅವುಗಳ ಅಣುತ್ವವ್ಯವಹಾರ ಹೇಗೆ? ಎಂದರೆ ತತ್ತತ್ ಸ್ಥಾನನಿಮಿತ್ತವಾಗಿ ಔಪಾಧಿಕವಾಗಿ ಬಂದಿದೆಯೆಂದು ತಿಳಿಯಬೇಕು. ಅಹಂಕಾರವು ವ್ಯಾಪಕವಾದುದರಿಂದಲೂ ಸಾತ್ವಿಕಾಹಂಕಾರದಿಂದ ಇಂದ್ರಿಯಗಳು ಹುಟ್ಟಿರುವುದರಿಂದಲೂ ಅವುಗಳ ವಿಭುತ್ವಾಂಗೀಕಾರದಲ್ಲಿಯೂ ಯಾವ ಅನುಪಪತ್ತಿಯೂ ಬರುವುದಿಲ್ಲ. ಮನಸ್ಸು ವಿಭುವಾದರೆ ಅದರ ಗತಿಯನ್ನು ಹೇಳುವ ಶ್ರುತಿಗೆ ವಿರೋಧ ಬರುವುದಿಲ್ಲವೇ ? ಅಂದರೆ ಪ್ರಾಣಾದ್ಯುಪಾಧಿಸಂಬಂಧದಿಂದ ಅದು ಸಂಗತವಾಗುತ್ತದೆ. ಇದರಿಂದ ಅದು ಮಧ್ಯಮ ಪರಿಣಾಮನೆಂಬವರ ವಾದವೂ ಸರಿಯಾಗುವುದಿಲ್ಲ. ಮಧ್ಯಮ ಪರಿಣಾಮವೆಂದರೆ ಅದು ಪ್ರಳಯದಲ್ಲಿ ನಾಶವಾಗಬೇಕಾದುದರಿಂದ ಅದೃಷ್ಟಕ್ಕೆ ಆಧಾರವಿಲ್ಲದೇ ಹೋಗಬೇಕಾಗುತ್ತದೆ. ಹೀಗೆ ಮನಸ್ಸು ಮತ್ತು ಇಂದ್ರಿಯಗಳಿಗೆ ವಿಭುತ್ವಾಂಗೀಕಾರದಿಂದ ಸಕಲವಿಷಯ ಸಂನಿಕರ್ಷವು ಸದಾ ಇರುವುದರಿಂದ ಯೋಗಿಗಳಾಗಲೀ ಯೋಗಿಭಿನ್ನರಿಗಾಗಲೀ ಸರ್ವದಾ ಜ್ಞಾನಪ್ರಸಕ್ತಿ ಬರಬೇಕಾಗುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ. ಇದಕ್ಕೆ ಸಮಾಧಾನ ತೋರಿಸುತ್ತಾನೆ. 'ಸರ್ವಗತತ್ವೇಽಪಿ'—ಇತಿ. ವೃತ್ತಿಮತ್—ವಿಷಯಾಕಾರದಿಂದ ಪರಿಣಾಮಿ. ಚಿತ್ತಪರಿಣಾಮವೆಂದರೆ ಶರೀರ. ಅಂತಹ ಯಾವ ಶರೀರದಿಂದ ಯಾವ ವಿಷಯಗಳಿಗೆ ಸಂಬಂಧವುಂಟಾಗಿದೆಯೋ ಆ ವಿಷಯಗಳಲ್ಲಿ ಮಾತ್ರ ಆ ಚಿತ್ತಪರಿಣಾಮಶರೀರಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನವುಂಟಾಗುತ್ತದೆ. ಇತರ ವಿಷಯಗಳ ಜ್ಞಾನವಾಗುವುದಿಲ್ಲವೆಂದು ಅಂಗೀಕರಿಸುವುದರಿಂದ ಎಲ್ಲಿಯೂ ದೋಷ ಬರುವುದಿಲ್ಲ. 'ಉಕ್ತಂ'—ಇತಿ. 'ತದುಪರಾಗಾಪೇಕ್ಷಿತ್ವಾತ್' (ಯೋ-ಸೂ ೪ | ೧೭) ಎಂಬ ಸೂತ್ರದ ವ್ಯಾಸ ಭಾಷ್ಯದಲ್ಲಿ ಈ ವಿಷಯ ಹೇಳಿದೆ. ಅಯಸ್ಕಾಂತ ಮಣಿ ಸಮಾನಗಳು ವಿಷಯಗಳು. ಇವು ಕಬ್ಬಿಣ ಸಮಾನ ಚಿತ್ತವನ್ನು ಇಂದ್ರಿಯ ಪ್ರಣಾಲಿಕಾ ಮೂಲಕ ಸಂಬಂಧ ಹೊಂದಿ ಸ್ವಾಕಾರ ಸಮರ್ಪಣ (ಉಪರಂಜನ) ಮಾಡುತ್ತವೆ. ಆದುದರಿಂದ ವೃತ್ತಿಗಳು ಚಿತ್ತಧರ್ಮಗಳೇ ವಿನಾ ಆತ್ಮ ಧರ್ಮಗಳಾಗೇವುದಿಲ್ಲ.

ತಥಾ ಚ ಶ್ರುತಿಃ—'ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾऽಶ್ರದ್ಧಾ ಧೃತಿರಧೃತಿರ್ಹ್ರೀರ್ಧೀರ್ಭೀರಿತ್ಯೇತತ್ಸರ್ವಂ ಮನ ಏವ (ಬೃ-೧-೫-೩) ಇತಿ | ಚಿಚ್ಛಕ್ತೇರಪರಿಣಾಮಿತ್ವಂ ಪಂಚಶಿಖಾಚಾರ್ಯೈರಖ್ಯಾಯಿ - ಅಪರಿಣಾಮಿನೀ ಭೋಕ್ತೃಶಕ್ತಿರಿತಿ | ಪತಂಜಲಿನಾಪಿ "ಸದಾ ಜ್ಞಾತಾಶ್ಚಿತ್ತವೃತ್ತಯಸ್ತತ್ಪ್ರಭೋಃ ಪುರುಷಸ್ಯಾಪರಿಣಾಮಿತ್ವಾತ್ | ಪಾ-ಯೋ-ಸು-೪-೧೮ | ಇತಿ | ಪರಿಣಾಮಿತ್ವೇऽನುಮಾನಮುಚ್ಯತೇ —ಚಿತ್ತಂ — ಪರಿಣಾಮಿ-ಜ್ಞಾತಾಜ್ಞಾತ ವಿಷಯತ್ವಾತ್ —ಶ್ರೋತ್ರಾದಿವದಿತಿ ||

ಕಾಮಃ—ವಿಷಯಾಭಿಲಾಷೆ. ಸಂಕಲ್ಪಃ—ಇದು ನೀಲ ಎಂಬವೇ ಮುಂತಾದ ಕಲ್ಪನೆ. ವಿಚಿಕಿತ್ಸಾ—ಸಂಶಯ. ಶ್ರದ್ಧಾ—ಆಸ್ತಿಕ್ಯ ಬುದ್ಧಿ. ಇದಕ್ಕೆ ವಿಪರೀತವಾದ ಬುದ್ಧಿಯೇ ಅಶ್ರದ್ಧಾ. ಧೃತಿಃ-ಧೈರ್ಯ. ಇದಕ್ಕೆ ವಿರುದ್ಧವಾದುದು ಅಧೈರ್ಯ ಹ್ರೀಃ—ಲಜ್ಜಾ. ಧೀಃ— ಜ್ಞಾನ ಭೀಃ—ಭಯ. ಇವೆಲ್ಲವೂ ಮನಸ್ಸೇ ಆಗುತ್ತವೆ. ವೃತ್ತಿವೃತ್ತಿಮತ್‌ಗಳಿಗೆ ಅಭೇದ ಕಲ್ಪನೆಯಿಂದ ಮನಸ್ಸೆಂದು ಹೇಳಿವೆ. ಧೀಃ—ಜ್ಞಾನವೂ ಮನಸ್ಸೆಂದುದರಿಂದ ಆತ್ಮನಿಗೆ ಜ್ಞಾನರೂಪಪರಿಣಾಮವಿಲ್ಲವೆಂದು ತಿಳಿಯುವುದರಿಂದ ಆತ್ಮನಿಗೆ ಅಪರಿಣಾಮಿತ್ವ ಸಿದ್ಧವಾಗುತ್ತದೆ ಈ ವಿಷಯದಲ್ಲಿ ಪಂಚಶಿಖಾಚಾರ್ಯರಿಂದ ಹೇಳಿರುವುದನ್ನು ಪ್ರಮಾಣವಾಗಿ ತೋರಿಸುತ್ತಾನೆ. 'ಚಿಚ್ಛಕ್ತೇಃ'—ಇತಿ. ಭೋಕ್ತೃಶಕ್ತಿಯೆಂದರೆ ಆತ್ಮಾ. ಚಿಚ್ಛಕ್ತಿಗೆ ವಿಷಯವಾಗಿರುವ ಚಿತ್ತವೃತ್ತಿಗಳು ವಿದ್ಯಮಾನತಾವಸ್ಥೆಯಲ್ಲಿ ಯಾವಾಗಲೂ ಜ್ಞಾತವಾಗಿಯೇ ಇರುತ್ತವೆ. ಚಿತ್ತವೃತ್ತಿಗೆ ವಿಷಯಗಳಾದ ಘಟಾದಿಗಳು ಜ್ಞಾತ, ಅಜ್ಞಾತರೂಪವಾಗಿರುತ್ತವೆ. ಹೀಗೆ ಭೋಕ್ತೃ ಪುರುಷನು ಅಪರಿಣಾಮಿಯಾಗಿಯೂ ಚಿತ್ತವು ಪರಿಣಾಮಿಯಾಗಿಯೂ ಇವೆಯೆಂದು ಸಿದ್ಧವಾಗುತ್ತದೆ.

ಪರಿಣಾಮಶ್ಚ ತ್ರಿವಿಧಃ ಪ್ರಸಿದ್ಧಃ ಧರ್ಮಲಕ್ಷಣಾವಸ್ಥಾಭೇದಾತ್ ಧರ್ಮಿಣಶ್ಚಿತ್ತಸ್ಯ ನೀಲಾದ್ಯಾಲೋಚನಂ ಧರ್ಮಪರಿಣಾಮಃ | ಯಥಾ ಕನಕಸ್ಯ ಕಟಕಮುಕುಟಕೇಯುರಾದಿ | ಧರ್ಮಸ್ಯ ವರ್ತಮಾನತ್ವಾದಿಃ ಲಕ್ಷಣಪರಿಣಾಮಃ | ನೀಲ್ಯಾದ್ಯಲೋಚನಸ್ಯ ಸ್ಫುಟತ್ವಾದಿರವಸ್ಥಾ ಪರಿಣಾಮಃ | ಕಟಕಾದೇಸ್ತು ನವ ಪುರಾಣತ್ವಾದಿರವಸ್ಥಾಪರಿಣಾಮಃ | ಏವಮನ್ಯತ್ರಾಪಿಯಥಾಸಂಭವಂ ಪರಿಣಾಮತ್ರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಯನುಮೂಹನೀಯಮ್ । ತಥಾ ಚ ಪ್ರಮಾಣಾದಿವೃತ್ತೀನಾಂ ಚಿತ್ತಧರ್ಮತ್ವಾ ತ್ತನ್ನಿರೋಧೋಽಪಿ ತದಾಶ್ರಯ ಏವೇತಿ ನ ಕಿಂಚಿದನುಪಪನ್ನಮ್ ।

ಧರ್ಮ, ಲಕ್ಷಣ, ಅವಸ್ಥಾ ಭೇದಗಳಿಂದ ಪರಿಣಾಮವು ಮೂರುವಿಧಗಳಾಗಿರುತ್ತವೆ. ಧರ್ಮಿಗೆ ಧರ್ಮ ಪರಿಣಾಮ. ಧರ್ಮಕ್ಕೆ ಲಕ್ಷಣಪರಿಣಾಮ. ಲಕ್ಷಣಕ್ಕೆ ಅವಸ್ಥಾಪರಿಣಾಮ. ಧರ್ಮ ಪರಿಣಾಮವೆಂದರೆ ಇರುವ ಧರ್ಮಿಯಲ್ಲಿ ಪೂರ್ವಧರ್ಮವು ತಿರೋಭೂತವಾಗಿ ಧರ್ಮಾಂತರಪ್ರಾದುರ್ಭಾವ ಹೊಂದುವುದು. ಚಿತ್ತಕ್ಕೆ ತತ್ತ ದ್ವಿಷಯಾಕಾರವಾಗಿರುವ ಅನೇಕವೃತ್ತಿಗಳೇ ಧರ್ಮಗಳಾಗುತ್ತವೆ. ಅಲ್ಲಿ ಒಂದು ಪದಾರ್ಥಾಲೋಚನರೂಪವಾದ ಪದಾರ್ಥಾಕಾರಚಿತ್ತವೃತ್ತಿಯು ತಿರೋಭೂತವಾದಾಗ ವಿಷಯಾಂತರಾಲೋಚನರೂಪವಾದ ಚಿತ್ತವೃತ್ತಿಯು ಪ್ರಾದುರ್ಭವಿಸುತ್ತದೆ. ಚಿನ್ನಕ್ಕೆ ಕಟಕಧರ್ಮ (ಬಳೆ) ತಿರೋಭಾವವಾಗಿ ಮುಕುಟಧರ್ಮ ಪ್ರಾದುರ್ಭವಿಸುತ್ತದೆ. ಮಣ್ಣಿಗೆ ಪಿಂಡಧರ್ಮ ಹೋಗಿ ಘಟಧರ್ಮ ಬರುತ್ತದೆ. ದ್ರವ್ಯವನ್ನೂ ಧರ್ಮಶಬ್ದದಿಂದಲೇ ವ್ಯವಹರಿಸುವುದರಿಂದ ಘಟಾದಿಧರ್ಮಗಳು ಸಂಗತವಾಗುತ್ತವೆ. ಸಾಂಖ್ಯರ ಸತ್ಕಾರವಾದವನ್ನು ಅಂಗೀಕರಿಸಿರುವುದರಿಂದ ಧರ್ಮತಿರೋಭಾವವೆಂದಿದೆ, ನಾಶ ಹೇಳಲಿಲ್ಲ. ಹಾಗೆಯೇ ಧರ್ಮಾಂತರೋತ್ಪತ್ತಿ ಹೇಳದೆ ಪ್ರಾದುರ್ಭಾವ ಹೇಳಿದೆ.

ಇವರ ಮತದಲ್ಲಿ ಸಕಲಧರ್ಮಗಳೂ ಯಾವಾಗಲೂ ಇರುವುದರಿಂದ ಆವಿರ್ಭಾವ ತಿರೋಭಾವಗಳನ್ನೇ ಉತ್ಪತ್ತಿವಿನಾಶಪದಗಳಿಂದ ವ್ಯವಹರಿಸುತ್ತಾರೆ. ಅಸತ್ತಿಗೆ ಉತ್ಪತ್ತಿಯಾಗಲೀ ಸತ್ತಿಗೆ ನಾಶವಾಗಲೀ ಇಲ್ಲ. ಹೇಗೆ ಧರ್ಮಿಯೂ ಸ್ವರೂಪದಿಂದ ಯಾವಾಗಲೂ ಇದ್ದುದೇ. ಆಗಿ ತತ್ತದ್ಧರ್ಮವಿಶಿಷ್ಟವಾಗುತ್ತದೆಯೋ ಹಾಗೆಯೇ ಧರ್ಮವೂ ಕೂಡಾ ಪ್ರತ್ಯೇಕವಾಗಿ ಇದ್ದದ್ದಾದರೂ ಕ್ರಮವಾಗಿ ಅನಾಗತತ್ವ, ವರ್ತಮಾನತ್ವ, ಅತೀತತ್ವರೂಪಭಿನ್ನಭಿನ್ನಲಕ್ಷಣವುಳ್ಳದ್ದಾಗುತ್ತದೆ. ಇದೇ ಧರ್ಮದ ಲಕ್ಷಣಪರಿಣಾಮವು. ಲಕ್ಷಣಪರಿಣಾಮವೆಂದರೆ ಇರುವಧರ್ಮಕ್ಕೇ ಒಂದು ಲಕ್ಷಣವನ್ನು ಬಿಟ್ಟು ಇನ್ನೊಂದು ಲಕ್ಷಣದಿಂದ ಪರಿಣಾಮ ಹೊಂದುವುದು. ಇಲ್ಲಿಯೂ ಕೂಡಾ ಅನಾಗತತ್ವ, ವರ್ತಮಾನತ್ವ, ಅತೀತ್ವರೂಪವಾಗಿ ಈ ಮೂರು ಲಕ್ಷಣ, ಶಬ್ದದಿಂದಲೂ, ಅಧ್ವಶಬ್ದದಿಂದಲೂ ವ್ಯವಹರಿಸಲ್ಪಡುತ್ತದೆ. ಧರ್ಮದಂತೆ ಲಕ್ಷಣಗಳೂ ಇರುವವುಗಳೇ ಆಗಿವೆ. ಅವು ಆವಿರ್ಭಾವ ತಿರೋಭಾವಗಳನ್ನು ಹೊಂದುವುದರಿಂದ ಸತ್ಕಾರ್ಯವಾದಕ್ಕೆ ಭಂಗ ಬರುವುದಿಲ್ಲ. ಈ ಮೂರುಲಕ್ಷಣಗಳಿಗೂ ಪ್ರತಿಕ್ಷಣದಲ್ಲಿ ತಾರತಮ್ಯ ಉಂಟಾಗುತ್ತದೆ. ಈ ಲಕ್ಷಣತಾರತಮ್ಯವನ್ನು ಆಯಾಯಲಕ್ಷಣವನ್ನು ಹೊಂದಿದ ಧರ್ಮಗಳಲ್ಲಿಯೇ ನೋಡಬೇಕು. ನೀಲಾಲೋಚನ (ಪದಾರ್ಥಾಕಾರ ಹೊಂದಿದ ಚಿತ್ತ) ರೂಪ ಚಿತ್ತರೂಪ ಧರ್ಮದ ವರ್ತಮಾನತ್ವ ಲಕ್ಷಣವಿರುವಾಗ ಅಸ್ಫುಟತರತ್ವ, ಅಸ್ಫುಟತ್ವ, ಸ್ಫುಟತರತ್ವ, ಸ್ಫುಟತ್ವರೂಪಾನೇಕಾವಸ್ಥೆಗಳಿಂದ ತಾರತಮ್ಯವು ಅನುಭವಗೋಚರವಾಗುತ್ತದೆ. ಇದಕ್ಕೆ ಚಿನ್ನದ ದೃಷ್ಟಾಂತ. ಚಿನ್ನದ ಧರ್ಮವಾದ ಕಟಕಾದಿಗಳಾಗಲೀ ಮೃದ್ಧರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ಘಟಾದಿಗಳಾಗಲೀ ನವತ್ವ ಪುರಾಣತ್ವಾದ್ಯವಸ್ಥಾಭೇದಗಳನ್ನು ಸುಲಭವಾಗಿ ತಿಳಿಯಬಹುದು. ಇದು ಸತ್ವಾದಿಗುಣಗಳ ಚಂಚಲ ಸ್ವಭಾವದಿಂದ ಪ್ರತಿಕ್ಷಣದಲ್ಲಿಯೂ ಉಂಟಾಗುತ್ತದೆಂದು ಅನುಮಾನದಿಂದ ತಿಳಿಯಬಹುದು. ಇದೇ ಲಕ್ಷಣದ ಅವಸ್ಥಾ ಪರಿಣಾಮ.

ಇರುವಲಕ್ಷಣವೇ ಒಂದು ಅವಸ್ಥೆಯನ್ನು ಬಿಟ್ಟು ಇನ್ನೊಂದು ಅವಸ್ಥೆಯಿಂದ ಪರಿಣಾಮಹೊಂದುವುದೇ ಅವಸ್ಥಾಪರಿಣಾಮ. ವರ್ತಮಾನತ್ವ ಲಕ್ಷಣಾಪನ್ನವಾದ ಧರ್ಮದಲ್ಲಿ ಈ ಅವಸ್ಥಾಪರಿಣಾಮವು ಸ್ಪಷ್ಟವಾಗಿ ತೋರುತ್ತದೆ. ಅನಾಗತತ್ವ, ಅತೀತತ್ವಾಪನ್ನ ಧರ್ಮಗಳಲ್ಲಿ ದೃಷ್ಟಾಂತದಿಂದ ಅದು ಅನುಮೇಯವಾಗುತ್ತದೆ. ಇವೆಲ್ಲವೂ ಧರ್ಮಿಯಿಂದ ಧರ್ಮಲಕ್ಷಣಾವಸ್ಥೆಗಳಿಗೆ ಕಾಲ್ಪನಿಕ ಭೇದವನ್ನಾಶ್ರಯಿಸಿ ಹೇಳಿವೆಯೆಂದು ತಿಳಿಯಬೇಕು. ವಾಸ್ತವವಾಗಿ ಹೇಳುವುದಾದರೆ ಎಲ್ಲವೂ ಧರ್ಮಿಯ ಪರಿಣಾಮವೇ ಆಗಿರುತ್ತನೆ. ಧರ್ಮಲಕ್ಷಣಾವಸ್ಥೆಗಳಿಗೆ ಕೇವಲ ಧರ್ಮಿಯೇ ಸ್ವರೂಪವಾಗಿರುತ್ತದೆ. ಧರ್ಮಾದಿಪರಿಣಾಮ ಮೂಲಕ ಧರ್ಮಿಯಪರಿಣಾಮವಾದ ಪ್ರಪಂಚವೇ ಈ ವಿವರಣೆಯಾಗುತ್ತದೆ. ಧರ್ಮಿಯ ಮೂರುವಿಧ ಪರಿಣಾಮಗಳಲ್ಲಿಯೂ ಅವಸ್ಥಾಪರಿವರ್ತನೆಯಲ್ಲದೆ ದ್ರವ್ಯಾನ್ಯಥಾಭಾವವಿರುವುದಿಲ್ಲ. ಇವರು ಧರ್ಮಧರ್ಮಿಗಳಿಗೆ ಅತ್ಯಂತಭೇದವನ್ನೂ ಅಂಗೀಕರಿಸುವುದಿಲ್ಲ. ಅತ್ಯಂತಾಭೇದವನ್ನೂ ಅಂಗೀಕರಿಸುವುದಿಲ್ಲ. ಪ್ರಮಾಣಾದಿವೃತ್ತಿಗಳು ಚಿತ್ತಧರ್ಮಗಳಾದುದರಿಂದ ಅವುಗಳ ನಿರೋಧವೂ ಚಿತ್ತವನ್ನೇ ಆಶ್ರಯಿಸಿರುತ್ತವೆ. ಹೀಗೆ ಅಂಗೀಕರಿಸಿದುದರಿಂದ ಎಲ್ಲಿಯೂ ದೋಷ ಬರುವುದಿಲ್ಲ.

ನನು ವೃತ್ತಿನಿರೋಧೋ ಯೋಗ ಇತ್ಯಂಗೀಕಾರೇ ಸುಷುಪ್ತ್ಯಾದೌ ಕ್ಷಿಪ್ತಮೂಢಾದಿಚಿತ್ತವೃತ್ತೀನಾಂ ನಿರೋಧಸಂಭವಾದ್ಯೋಗತ್ವಸಂಭವಃ । ನ ಚೈತದ್ಯುಜ್ಯತೇ । ಕ್ಷಿಪ್ತಾದ್ಯವಸ್ಥಾಸು ಕ್ಲೇಶಪ್ರಹಾಣಾದೇರಸಂಭವಾನ್ನಿಃ ಶ್ರೇಯಸ ಪರಿಪಂಥಿತ್ವಾಚ್ಚ । ತಥಾಹಿ— ಕ್ಷಿಪ್ತಂ ನಾಮ ತೇಷು ತೇಷು ವಿಷಯೇಷು ಕ್ಷಿಪ್ಯಮಾಣಮಸ್ಥಿರಂ ಚಿತ್ತಮುಚ್ಯತೇ । ತಮಃ ಸಮುದ್ರೇ ಮಗ್ನಂ ನಿದ್ರಾವೃತ್ತಿಭಾವಿತಂ ಮೂಢಮಿತಿ ಗೀಯತೇ । ಕ್ಷಿಪ್ತಾದ್ವಿಶಿಷ್ಟಂ ಚಿತ್ತಂ ವಿಕ್ಷಿಪ್ತಮಿತಿ ಗೀಯತೇ । ವಿಶೇಷೋ ನಾಮ

ಚಂಚಲಂ ಹಿಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ॥ ಗೀ ೬೩೪ ॥ ಇತಿ ನ್ಯಾಯೇನ ಅಸ್ಥಿರಸ್ಯಾಪಿ ಮನಸಃ ಕಾದಾಚಿತ್ಕಸಮುದ್ಭೂತವಿಷಯಸ್ಥೈರ್ಯಸಂಭವೇನ ಸ್ಥೈರ್ಯಮ್ । ಅಸ್ಥಿರತ್ವಂ ಚ ಸ್ವಾಭಾವಿಕಂ ವ್ಯಾಘ್ರಾದ್ಯನುಶಯಜನಿತಂ ವಾ । ತದಾಹ—ವ್ಯಾಧಿ ಸ್ತ್ಯಾನ ಸಂಶಯ ಪ್ರಮಾದಾಲಸ್ಯಾವಿರತಿ ಭ್ರಾಂತಿದರ್ಶನಾಲಬ್ಧಭೂಮಿಕತ್ವಾನವಸ್ಥಿತತ್ವಾನಿ ಚಿತ್ತವಿಕ್ಷೇಪಾಸ್ತೇಂತರಾಯಾಃ (ಪಾ-ಯೋ- ಸೂ ೧೩೩) ಇತಿ ॥

ಚಿತ್ತವೃತ್ತಿನಿರೋಧವೇ ಯೋಗವೆಂಬುದು ಸಂಗತವಾಗುವುದಿಲ್ಲವೆಂದು ಆಶಂಕಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾನೆ. 'ನನು'—ಇತಿ. ವೃತ್ತಿನಿರೋಧವೆಂದರೆ ಯಾವುದಾದರೊಂದು ವೃತ್ತಿಯ ನಿರೋಧ. ಸಕಲವೃತ್ತಿನಿರೋಧವಲ್ಲ ಹೀಗೆ ಹೇಳದಿದ್ದರೆ ಯೋಗತ್ವೇನಾಭಿಮತ ವಾದ ಸಂಪ್ರಜ್ಞಾತ ಸಮಾಧಿಯಲ್ಲಿ ಅವ್ಯಾಪ್ತಿ ಬರುತ್ತದೆ. ಏಕೆಂದರೆ ಅಲ್ಲಿ ಸಾತ್ವಿಕ ವಾದ ಆತ್ಮವಿಷಯಕವಾದ ವೃತ್ತಿ ಇದ್ದೇ ಇರುವುದರಿಂದ ಅದಕ್ಕೆ ನಿರೋಧವಿರುವುದಿಲ್ಲ. ಚಿತ್ತವೂ ಕೂಡ ಕೆಲವು ಸಮಯ ಕ್ಷಿಪ್ತವಾಗಿಯೂ, ಕೆಲವು ಸಮಯ ಮೂಢವಾಗಿಯೂ, ಕೆಲವು ಸಮಯ ವಿಕ್ಷಿಪ್ತವಾಗಿಯೂ, ಕೆಲವು ಸಮಯ ಏಕಾಗ್ರವಾಗಿಯೂ, ಕೆಲವು ಸಮಯ ನಿರುದ್ಧವಾಗಿಯೂ ಇದ್ದು ಹೀಗೆ ಪಂಚವೃತ್ತಿಗಳಿಂದ ಕೂಡಿರುತ್ತದೆ. ಸುಷುಪ್ತಿ ಯಲ್ಲಿ ಕ್ಷಿಪ್ತವಿಕ್ಷಿಪ್ತಪ್ರವೃತ್ತಿಗಳು ಇರುವುದಿಲ್ಲ. ಜಾಗೃದವಸ್ಥೆಯಲ್ಲಿ ಮೂಢವೃತ್ತಿ ಇರುವು ದಿಲ್ಲ. ಬದ್ಧಜೀವನಿಗೆ ಯಾವಾಗಲೂ ಏಕಾಗ್ರ ನಿರುದ್ಧವೃತ್ತಿಗಳು ಇರುವುದೇ ಇಲ್ಲ. ಇಂತಹ ವೃತ್ತಿಗಳ ನಿರೋಧವೇ ಯೋಗವಾಗಲಿ ಎಂದು ಆಶಂಕೆ. ಇಷ್ಟಾಪತ್ತಿಯೆಂದು ಹೇಳಲು ಸಾಧ್ಯವಿಲ್ಲ. ಸೂತ್ರಕಾರರು ಕ್ಲೇಶಗಳ ಮತ್ತು ಕರ್ಮಗಳ ನಿವೃತ್ತಿಯ ನ್ನಾಗಲೀ, ನಿಃಶ್ರೇಯಸಪ್ರಾಪ್ತಿಯನ್ನಾಗಲೀ (ಯೋಗಫಲವಾಗಿ ಹೇಳಿದ) ಹೇಳಿರುವುದು ಎಲ್ಲಿಯೂ ತೋರುವುದಿಲ್ಲ. ಅದೂ ಅಲ್ಲದೆ ಈ ವೃತ್ತಿನಿರೋಧವು ಮೋಕ್ಷವಿರೋಧಿಯೇ ಆಗುತ್ತದೆ. ಸುಷುಪ್ತ್ಯಾದಿಪದದಿಂದ ಜಾಗೃತಿಗೆ ಗ್ರಹಣ. ಮೂಢಾದಿಪದದಿಂದ ವಿಕ್ಷಿಪ್ತೈ ಕಾಗ್ರ ನಿರುದ್ಧಗಳನ್ನು ತೆಗೆದುಕೊಳ್ಳಬೇಕು. ನಿಃಶ್ರೇಯಸವೇ ಮೋಕ್ಷ. ಪರಿಪಂಥಿ ಯೆಂದರೆ ಶತ್ರುವಾಗಿರುವುದೆಂದರ್ಥ. ಕ್ಷಿಪ್ತಾದಿಗಳ ಲಕ್ಷಣ ತೋರಿಸುತ್ತಾನೆ.

'ಕ್ಷಿಪ್ತಂ—' ಇತಿ ರಜೋಗುಣೋದ್ರೇಕದಿಂದ ಅಸ್ಥಿರವಾಗಿ ಬಹಿರ್ಮುಖವಾಗಿರು ವುದರಿಂದ ವಿಷಯುಗಳಲ್ಲಿ ಪ್ರೇರಿತವಾಗಿರುವ ಚಿತ್ತವೆಂದರ್ಥ. ದೈತ್ಯದಾನವರಿಗೆ ಈ ರೀತಿಯಾದ ಚಿತ್ತವು ಯಾವಾಗಲೂ ಇರುತ್ತದೆ. 'ತಮಃ—' ಇತಿ. ತಮೋಗುಣೋ ದ್ರೇಕದಿಂದ ಕೃತ್ಯಾಕೃತ್ಯವಿಚಾರಶೂನ್ಯವಾದ ಕ್ರೋಧಾದಿಗಳಿಂದ ಆವರಿಸಿದ ನಿದ್ರಾವೃತ್ತಿ ಯಿಂದಕೂಡಿದ ಚಿತ್ತವು ಮೂಢವಾಗುತ್ತದೆ. ರಕ್ಷಃ ಪಿಶಾಚಾದಿಗಳಿಗೆ ಈ ರೀತಿಯ ಚಿತ್ತವಿರುತ್ತದೆ. ಸತ್ವಗುಣೋದ್ರೇಕದಿಂದ ದುಃಖ ಸಾಧನವನ್ನು ಪರಿಹರಿಸಿ ಸುಖ ಸಾಧನಗಳಾದ ಶಬ್ದಾದಿಗಳಲ್ಲಿ ಪ್ರವೃತ್ತವಾದ ಚಿತ್ತವೇ ವಿಕ್ಷಿಪ್ತವಾಗುತ್ತದೆ. ಸದಾ ದೇವತೆಗಳಿಗೆ ಈ ಚಿತ್ತವಿರುತ್ತದೆ. ಇದು ವಿಷಯವಿಶೇಷಾನುಸಾರವಾಗಿ ಕೆಲವು ಸಮಯ ಸ್ಥಿರವಾಗಿಯೂ ಇರುತ್ತದೆ. 'ಚಂಚಲಃ'—ಇತಿ. ಸದಾ ಚಲನಸ್ವಭಾವವೆಂದರ್ಥ. ಪ್ರಮಾಥಿ—ಶರೀರೇಂದ್ರಿಯಕ್ಷೋಭಕರನೆಂದರ್ಥ. ಬಲವತ್—ಇಷ್ಟವಾದ ವಿಷಯ ದಿಂದ ಯಾವ ಉಪಾಯದಿಂದಲೂ ತಿರುಗಿಸಲಸಾಧ್ಯವಾದುದು. ದೃಢಂ=ವಿಷಯ ವಾಸನಾದುರ್ಗಪ್ರವಿಷ್ಟವಾದುದರಿಂದ ಭೇದಿಸಲಶಕ್ಯವಾದುದು. ವ್ಯಾಧ್ಯಾದ್ಯನುಶಯಃ —ವ್ಯಾಧಿ ಮುಂತಾದವುಗಳ ಅನುಬಂಧ (ಸಂಬಂಧ) ಇವುಗಳನ್ನೇ ಸೂತ್ರದಲ್ಲಿ ಹೇಳುತ್ತಾರೆ. 'ವ್ಯಾಧಿ'—ಇತಿ. ವ್ಯಾಧಿ ಮುಂತಾದ ಈ ೯ ಚಿತ್ತವಿಕ್ಷೇಪಗಳು ಅಸ್ಥಿರವನ್ನುಂಟುಮಾಡುತ್ತಾ ಯೋಗಕ್ಕೆ ವಿಘ್ನಕಾರಕಗಳಾಗಿ ವಿರೋಧಿಗಳಾಗುತ್ತವೆ ಯೆಂದು ಸೂತ್ರಾರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತತ್ರ ದೋಷತ್ರಯವೈಷಮ್ಯನಿಮಿತ್ತಃ ಜ್ವರಾದಿಃ ವ್ಯಾಧಿಃ । ಚಿತ್ತಸ್ಯ ಅಕರ್ಮಣ್ಯತ್ವಂ ಸ್ತ್ಯಾನಮ್ । ವಿರುದ್ಧಕೋಟಿದ್ವಯಾವಗಾಹಿ ಜ್ಞಾನಂ ಸಂಶಯಃ । ಸಮಾಧಿ ಸಾಧನಾನಾಮಭಾವನಂ ಪ್ರಮಾದಃ ॥ ಶರೀರವಾಕ್ಚಿತ್ತಗುರುತ್ವಾದಪ್ರವೃತ್ತಿ ರಾಲಸ್ಯಮ್ । ವಿಷಯಾಭಿಲಾಷೋಽವಿರತಿಃ । ಅತಸ್ಮಿನ್ ತದ್‌ಬುದ್ಧಿ ಭ್ರಾಂತಿ ದರ್ಶನಮ್ । ಕುತಶ್ಚಿನ್ನಿಮಿತ್ತಾತ್ಸಮಾಧಿ ಭೂಮೇರಲಾಭೋಽಲಬ್ಧಭೂಮಿ ಕತ್ವಮ್ । ಲಬ್ಧಾಯಾಮಪಿ ತಸ್ಯಾಂ ಚಿತ್ತಸ್ಯಾಪ್ರತಿಷ್ಠಾನಮನವಸ್ಥಿತತ್ವಮಿತ್ಯರ್ಥಃ ತಸ್ಮಾತ್ ನ ವೃತ್ತಿನಿರೋಧೋ ಯೋಗಪಕ್ಷನಿಕ್ಷೇಪಮರ್ಹತೀತಿ ಚೇತ್ — ನ್ನೈವಂ ಮೋಚಃ ॥

ವಾತ, ಪಿತ್ತ, ಕಫಗಳೇ ೩ ದೋಷಗಳು. ಇವುಗಳು ಶರೀರದಲ್ಲಿ ವ್ಯತ್ಯಾಸ ವಾದಾಗ ಜ್ವರಾದಿರೋಗಗಳುಂಟಾಗುತ್ತವೆ. ಯೋಗಾನುಷ್ಠಾನಕ್ಕೆ ಅಸಮರ್ಥತಾ ವಸ್ಥೆಯೇ ಅಕರ್ಮಣ್ಯತ್ವ. ಎರಡುವಿರುದ್ಧವಿಷಯಗಳನ್ನು ಗ್ರಹಿಸುವಜ್ಞಾನವೇ ಸಂಶಯ. ಸಮಾಧಿಸಾಧನೆಗಳ ಪ್ರಯತ್ನಮಾಡದಿರುವುದೇ ಪ್ರಮಾದ. ಇದರಿಂದ ಸಮಾಧಿಗೆ ಸಾಧನಗಳಾದ ಶಮದಮಾದಿಗಳ ಪ್ರಾಪ್ತಿಯುಂಟಾಗುವುದಿಲ್ಲ. ಶರೀರಾದಿ ಗುರುತ್ವದಿಂದ ಪ್ರವೃತ್ತಿಹೊಂದಿರುವುದೇ ಆಲಸ್ಯ. ಕಫಾದಿಗಳಿಂದ ಶರೀರಗುರುತ್ವವೂ, ತಾಮಸಪದಾರ್ಥಸೇವನೆಯಿಂದ ವಾಗ್ಗುರುತ್ವವೂ, ತಮೋಗುಣೋದ್ರೇಕದಿಂದ ಚಿತ್ತದ ಗುರುತ್ವವುಂಟಾಗುತ್ತದೆ. ವಿಷಯಾಭಿಲಾಷೆಗೆ ಅವಿರತಿಯೆಂದು ಹೆಸರು. ಶುಕ್ತ್ಯಾದಿ ಗಳಲ್ಲಿ ರಜತಾದಿಬುದ್ಧಿಯುಂಟಾಗುವುದು ಭ್ರಾಂತಿದರ್ಶನ. ಯಾವುದೋಕಾರಣದಿಂದ ಮಧುಮತ್ಯಾದಿ ಸಮಾಧಿಗಳಲ್ಲಿ ಯಾವುದನ್ನೂ ಪಡೆಯದಿರುವುದು. ಮಧುಮತ್ಯಾದಿ ಸ್ವರೂಪಗಳನ್ನು ಮುಂದೆ ಹೇಳುತ್ತಾರೆ. ಹೊಂದಿದರೂ ಚಿತ್ತವುಸ್ಥಿರವಾಗದಿರುವುದು ಅನವಸ್ಥಾನ. 'ತಸ್ಮಾತ್—' ಇತಿ. ಹೀಗೆ ಕ್ಷಿಪ್ತಾದ್ಯವಸ್ಥೆಗಳಲ್ಲಿ ವೃತ್ತಿನಿರೋಧ ವಿದ್ದರೂ ಯೋಗಫಲೀಭೂತವಾದ ಕ್ಲೇಶಹಾನಿ, ನಿಃಶ್ರೇಯಸಪ್ರಾಪ್ತಿಗಳ ಅಭಾವ ದಿಂದ ವೃತ್ತಿನಿರೋಧವು ಯೋಗಸ್ವರೂಪವನ್ನು ಹೊಂದಲಾರದು ಎಂದು ಪೂರ್ವಪಕ್ಷ ಪ್ರಾಪ್ತವಾದರೆ 'ನೈವಂ—' ಎಂದು (ಹೀಗೆ ಹೇಳಬಾರದೆಂದು) ಅದಕ್ಕೆ ಸಮಾಧಾನ ತೋರಿಸುತ್ತಾನೆ.

ಹೇಯಭೂತ ಕ್ಷಿಪ್ತಾದ್ಯವಸ್ಥಾತ್ರಯೇ ವೃತ್ತಿನಿರೋಧಸ್ಯ ಯೋಗತ್ವಾಸಂಭವೇಽಪಿ ಉಪಾದೇಯಯೋರೇಕಾಗ್ರ ನಿರುದ್ಧಾವಸ್ಥಯೋರ್ವೃತ್ತಿನಿರೋಧಸ್ಯ ಯೋಗತ್ವ ಸಂಭವಾತ್ ಏಕತಾನಂ ಚಿತ್ತಮೇಕಾಗ್ರಮುಚ್ಯತೇ । ನಿರುದ್ಧಸಕಲವೃತ್ತಿಕಂ ಸಂಸ್ಕಾರಮಾತ್ರವಿಶೇಷಂ ಚಿತ್ತ ನಿರುದ್ಧಮಿತಿ ಭಣ್ಯತೇ ॥

ಸ ಚ ಸಮಾಧಿರ್ದ್ವಿವಿಧಃ । ಸಂಪ್ರಜ್ಞಾತ, ಅಸಂಪ್ರಜ್ಞಾತಭೇದಾತ್ । ತತ್ರೈಕಾಗ್ರ ಚೇತಸಿ ಯಃ ಪ್ರಮಾಣಾದಿವೃತ್ತೀನಾಂ ಬಾಹ್ಯವಿಷಯಾಣಾಂ ನಿರೋಧಃ ಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪ್ರಜ್ಞಾತ ಸಮಾಧಿಃ। ಸಮ್ಯಕ್ ಪ್ರಜ್ಞಾಯತೇಽಸ್ಮಿನ್ ಪ್ರಕೃತೇರ್ವಿವಿಕ್ತತಯಾ ಧ್ಯೇಯಮಿತಿ ವ್ಯುತ್ಪತ್ತೇಃ ॥

ಕ್ಷಿಪ್ತಾದಿ ಮೂರು ಅವಸ್ಥೆಗಳು ಹೇಯವಾದುದರಿಂದ ಅಲ್ಲಿ ಯೋಗಲಕ್ಷಣ ಕೂಡ ದಿದ್ದರೂ ಉಪಾದೇಯವಾಗಿರುವ ಏಕಾಗ್ರಾದ್ಯವಸ್ಥೆಗಳಲ್ಲಿ ಚಿತ್ತವೃತ್ತಿನಿರೋಧರೂಪ ಯೋಗಲಕ್ಷಣವು ಸಂಗತವಾಗುತ್ತದೆ. ಕ್ಷಿಪ್ತಾದ್ಯವಸ್ಥೆಗಳಲ್ಲಿ ಯತ್ಕಿಂಚಿತ್ ವೃತ್ತಿ ನಿರೋಧವಿರುವುದರಿಂದ ಅಲ್ಲಿ ಯೋಗಲಕ್ಷಣವು ಅತಿವ್ಯಾಪ್ತವಾಗುತ್ತದೆಂದು ಶಂಕಿಸ ಬಾರದು. ದ್ರಷ್ಟೃವಿನ ಆತ್ಯಂತಿಕ ಸ್ವರೂಪವಾದ ಸ್ಥಿತಿಗೆ ಕಾರಣವಾದ ಚಿತ್ತವೃತ್ತಿ ನಿರೋಧ ಅಥವಾ ಕ್ಲೇಶಕರ್ಮಾದಿಪರಿಪಂಥಚಿತ್ತವೃತ್ತಿನಿರೋಧವೇ ಯೋಗಲಕ್ಷಣವೆಂದು ಅಂಗೀಕರಿಸಿರುವುದರಿಂದ ಎಲ್ಲಿಯೂ ದೋಷ ಬರುವುದಿಲ್ಲ. ಪ್ರಲಯದಲ್ಲಿಯೂ ಸುಷುಪ್ತಿ ಯಲ್ಲಿಯೂ ಇರುವ ವೃತ್ತಿನಿರೋಧದ ವ್ಯಾವೃತ್ತಿಗೋಸ್ಕರ ಆತ್ಯಂತಿಕಪದವನ್ನು ಹೇಳಿದೆ. ಕ್ಷಿಪ್ತಮೂಢವಿಕ್ಷಿಪ್ತಾವಸ್ಥೆಗಳಲ್ಲಿ ಯತ್ಕಿಂಚಿತ್ ವೃತ್ತಿನಿರೋಧವಿದ್ದರೂ ಅದು ಸ್ವರೂಪಾವ ಸ್ಥಿತಿಗೆ ಕಾರಣವಾಗುವುದಿಲ್ಲ; ಅಥವಾ ಕ್ಲೇಶಾದಿಪರಿಪಂಥಿಯೂ ಆಗುವುದಿಲ್ಲ. ಸಂಪ್ರಜ್ಞಾತಸಮಾಧಿಯು ಅಸಂಪ್ರಜ್ಞಾತದ ಮೂಲಕ ಸ್ವರೂಪಾವಸ್ಥಿತಿಗೆ ಕಾರಣವಾಗು ತ್ತದೆ. ಸ ಚ ಸಮಾಧಿಃ ಅಂದರೆ ಅಂಗೀಭೂತವಾದ ಯೋಗಪದವಾಚ್ಯವಾದ ಸಮಾಧಿ ಯೆಂದರ್ಥ. 'ಬಾಹ್ಯವಿಷಯ'—ಇತಿ. ಆ ಸಮಯದಲ್ಲಿ ಆತ್ಮವಿಷಯವಾದ ಸಾತ್ವಿಕ ವಾದ ಪ್ರಮಾಣವೃತ್ತಿಯು ಇದ್ದೇ ಇರುತ್ತದೆ. ವಿವಿಕ್ತತಯಾ—ಭಿನ್ನತಯಾ.

ಸ ಚತುರ್ವಿಧಃ। ಸವಿತರ್ಕಾದಿಭೇದಾತ್। ಸಮಾಧಿರ್ನಾಮ ಭಾವನಾ। ಸಾ ಚ ಭಾವ್ಯಸ್ಯ ವಿಷಯಾಂತರ ಪರಿಹಾರೇಣ ಚೇತಸಿ ಪುನಃ ಪುನರ್ನಿವೇಶನಮ್। ಭಾವ್ಯಂ ಚ ದ್ವಿವಿಧಮ್—ಈಶ್ವರಸ್ತತ್ವಾನಿ ಚ। ತಾನ್ಯಪಿ ದ್ವಿವಿಧಾನಿ ಜಡಾ ಜಡಭೇದಾತ್। ಜಡಾನಿ ಪ್ರಕೃತಿಮಹದಹಂಕಾರಾದೀನಿ ಚತುರ್ವಿಂಶತಿಃ। ಅಜಡಃ ಪುರುಷಃ। ತತ್ರ ತದಾ ಪೃಥಿವ್ಯಾದೀನಿ ಸ್ಥೂಲಾನಿ ವಿಷಯತ್ವೇನಾ ದಾಯ ಪೂರ್ವಾಪರಾನುಸಂಧಾನೇನ ಶಬ್ದಾರ್ಥೋಲ್ಲೇಖಸಂಭೇದೇನ ಚ ಭಾವನಾ ಪ್ರವರ್ತತೇ ಸ ಸಮಾಧಿಃ ಸವಿತರ್ಕಃ। ಯದಾ ತನ್ಮಾತ್ರಾಂತಃಕರಣ ಲಕ್ಷಣಂ ಸೂಕ್ಷ್ಮಂ ವಿಷಯಮಾಲಂಬ್ಯ ದೇಶಾನ್ಯವಚ್ಛೇದೇನ ಭಾವನಾ ಪ್ರವ ರ್ತತೇ ತದಾ ಸವಿಚಾರಃ ॥ ಯದಾ ರಜಸ್ತಮೋಲೇಶಾನುವಿದ್ಧಂ ಚಿತ್ತಂ ಭಾವ್ಯತೇ ತದಾ ಸುಖಪ್ರಕಾಶಮಯಸ್ಯ ಸತ್ವಸ್ಯೋದ್ರೇಕಾತ್ ಸಾನಂದಃ ॥

ಈ ಸಂಪ್ರಜ್ಞಾತ ಸಮಾಧಿಯು ಸವಿತರ್ಕ, ಸವಿಚಾರ, ಸಾನಂದ, ಸಾಸ್ಮಿತ ಗಳೆಂದು ನಾಲ್ಕುವಿಧಗಳಾಗಿವೆ. ಸಮಾಧಿಯೆಂದರೆ ಭಾವನೆ. ಭಾವ್ಯಃ—ಭಾವ ನೀಯಃ ವಿಷಯಾಂತರಗಳನ್ನು ಪರಿತ್ಯಜಿಸಿ ಚಿತ್ತದಲ್ಲಿ ಭಾವ್ಯವನ್ನು ಪುನಃ ಪುನಃ ಇಡು ವುದೇ ಭಾವನೆ. ಈಶ್ವರನೂ ಭಾವ್ಯ. ತತ್ವಗಳೂ ಭಾವ್ಯ. ಜಡ ಮತ್ತು ಅಜಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳೆಂದು ತತ್ವಗಳು ಎರಡುವಿಧ ಪ್ರಕೃತಿಮಹದಾದಿ ೨೪ ತತ್ವಗಳು ಸಾಂಖ್ಯದರ್ಶನದಲ್ಲಿ ಹೇಳಿವೆ. ಈಶ್ವರನನ್ನು ಬೇರೆ ಹೇಳಿರುವುದರಿಂದ ಇಲ್ಲಿ ಅಜಡಪುರುಷನೆಂದರೆ ಜೀವಾತ್ಮನನ್ನು ತೆಗೆದುಕೊಳ್ಳಬೇಕು. 'ಪೃಥಿವ್ಯಾದೀನಿ' — ಇತಿ. ಜೀವೇಶ್ವರರಿಗೆ ಉಪಾಧಿಭೂತವಾದ ಶರೀರೇಂದ್ರಿಯಗಳು ವಿರಾಟ್‌ಶರೀರ, ಚತುರ್ಭುಜಾದಿಗಳನ್ನಧಿಕರಿಸಿ ಅಥವಾ ಈಶ್ವರಸಹಿತವಾದ, ಜೀವಸಹಿತವಾದ ಸ್ವಶರೀರವನ್ನಧಿಕರಿಸಿ ಭಾವನಾಪ್ರವೃತ್ತವಾಗುತ್ತದೆ. ಶರೀರದಲ್ಲಿಯೂ, ಇಂದ್ರಿಯಗಳಲ್ಲಿಯೂ ಯಾವ ಗುಣದೋಷಗಳು ಪೂರ್ವದಲ್ಲಿ ಶ್ರುತವಾಗಿರುತ್ತವೆಯೋ ಅವುಗಳಲ್ಲಿ ಮೊದಲು ಸಾಮಾನ್ಯವಾಗಿಯೂ ಆಮೇಲೆ ವಿಶೇಷವಾಗಿಯೂ, ಹಾಗೆಯೇ ಮೊದಲು ಧರ್ಮಿಯಲ್ಲಿಯೂ ಆಮೇಲೆ ಧರ್ಮದಲ್ಲಿಯೂ, ಹೀಗೆ ಪೂರ್ವಾಪರಾನುಸಂಧಾನದಿಂದ ಭಾವನೆ ಮಾಡುವುದರಿಂದ ಸಾಕ್ಷಾತ್ಕಾರವುಂಟಾಗುತ್ತದೆ. ಹೀಗೆಯೇ ಆಯಾಯ ಶಬ್ದೋಲ್ಲೇಖನಪೂರ್ವಕವಾಗಿ ಆಯಾ ಯಾರ್ಥಭಾವನೆಯಿಂದಲೂ ಸಾಕ್ಷಾತ್ಕಾರವಾಗುತ್ತದೆ. ಪೂರ್ವದಲ್ಲಿ ಕೇಳದಿರುವ ವಿಶೇಷಗಳ ಭಾವನೆಯುಂಟಾಗದಿದ್ದರೂ ಅದಿಲ್ಲದೇ ಯೋಗಬಲದಿಂದಲೇ ಸಾಕ್ಷಾತ್ಕಾರವಾಗುತ್ತದೆ. ಈ ಸ್ಥೂಲವಿಷಯಕಸಾಕ್ಷಾತ್ಕಾರಕ್ಕೆ ವಿತರ್ಕವೆಂದು ಹೆಸರು. ವಿಶೇಷೇಣ ತರ್ಕಣಂ ಶಬ್ದಾರ್ಥಜ್ಞಾನವಿಕಲ್ಪರೂಪಂ ಯತ್ರ—ಎಂದು ವ್ಯುತ್ಪತ್ತಿ. ವಿತರ್ಕದಿಂದ ಸಹಿತವಾದುದು ಸವಿತರ್ಕ. ಈ ಸಾಕ್ಷಾತ್ಕಾರವಾದ ಮೇಲೆ ಅಲ್ಲಿ ಅನಿತ್ಯತ್ವಾದಿ ದೋಷಜ್ಞಾನದಿಂದ ಈ ಸ್ಥೂಲಾಕಾರದೃಷ್ಟಿಯನ್ನು ಬಿಟ್ಟು ಸ್ಥೂಲವಾದ ಭೂತೇಂದ್ರಿಯಗಳಿಗೆ ಕಾರಣಗಳಾದ ಪ್ರಕೃತಿಮಹದಹಂಕಾರರೂಪ ಸೂಕ್ಷ್ಮ ಪದಾರ್ಥಗಳೇನಿವೆಯೋ ಅವುಗಳ ಮತ್ತು ಅವುಗಳಲ್ಲಿರುವ ವಿಶೇಷಗಳ ಅವು (ಶ್ರುತವಾಗದಿದ್ದರೂ) ದೇಶಕಾಲಧರ್ಮಾನುಸಾರವಾದ ಭಾವನೆಯಿಂದ ಯಾವ ಸಾಕ್ಷಾತ್ಕಾರವಾಗುತ್ತದೆಯೋ ಅದೇ 'ವಿಚಾರ' ಎಂದು ವ್ಯವಹರಿಸಲ್ಪಡುತ್ತದೆ. ವಿಶೇಷೇಣ ಚಾರಃ—ಸೂಕ್ಷ್ಮವಸ್ತು ಪರ್ಯಂತಃ ಸಂಚಾರಃ ಯತ್ರ—ಎಂದು ವ್ಯುತ್ಪತ್ತಿ. ವಿಚಾರದಿಂದ ಕೂಡಿರುವುದು ಸವಿಚಾರ. ಕಾರ್ಯಕಾರಣಗಳಿಗೆ ಅಭೇದಾಂಗೀಕಾರದಿಂದ ಸ್ಥೂಲವಾದ ಪದಾರ್ಥಗಳಲ್ಲಿಯೂ ಯಥಾರ್ಥವಾದ ಸೂಕ್ಷ್ಮದೃಷ್ಟಿಯು ಉಂಟಾಗುತ್ತದೆ. ಆಮೇಲೆ ಆ ಸೂಕ್ಷ್ಮವಿಷಯಕವಾದ ದೃಷ್ಟಿಯನ್ನೂ ಅನಿತ್ಯಾದಿದೋಷಜ್ಞಾನದಿಂದ ಬಿಟ್ಟು ಇಪ್ಪತ್ತನಾಲ್ಕು ಪ್ರಕೃತ್ಯಾದಿತತ್ವಗಳಲ್ಲಿ ಅನುಗತವಾಗಿರುವ ಸತ್ವಗುಣಕಾರ್ಯರೂಪವಾದ ಯಾವ ಸುಖವಿದೆಯೋ ಅದರ ಭಾವನೆಯಿಂದ ಮನೋರಾಜ್ಯದಿಂದ ಕಲ್ಪಿಸಲ್ಪಡುವಂತೆ ಉಂಟಾಗುವ ವೈಷಯಿಕ ಸುಖಸಾಕ್ಷಾತ್ಕಾರಕ್ಕೆ 'ಆನಂದ'ವೆಂದು ಹೆಸರು. ಆಗ ರಜಸ್ತಮೋಲೇಶದಿಂದ ಅಭಿಭೂತವಾದ ಸತ್ವಾಶ್ರಯಣದಿಂದ ಚಿತಶಕ್ತಿಯು ನ್ಯಗ್ ಭೂತವಾಗಿರುತ್ತದೆ. ಇದರಿಂದ ಕೂಡಿರುವ ಸಮಾಧಿಯೇ ಸಾನಂದಸಮಾಧಿಯಾಗಿರುತ್ತದೆ.

ಯದಾ ರಜಸ್ತಮೋಲೇಶಾನಭಿಭೂತಂ ಶುದ್ಧಂ ಸತ್ವಮಾಲಂಬನೀಕೃತ್ಯಯಾ ಪ್ರವರ್ತತೇ ಭಾವನಾ ತದಾ ತಸ್ಯಾಂ ಸತ್ವಸ್ಯ ನ್ಯಗ್ಭಾವಾತ್ ಚಿತಿಶಕ್ತೇರುದ್ರೇಕಾಚ್ಚ ಸತ್ತಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರಾವಶೇಷತ್ವೇನ ಸಾಸ್ಮಿತಃ ಸಮಾಧಿಃ। ತದುಕ್ತಂ ಪತಂಜಲಿನಾ—ವಿತರ್ಕ ವಿಚಾರಾನಂದಾಸ್ಮಿತಾರೂಪಾನುಗಮಾತ್ ಸಂಪ್ರಜ್ಞಾತಃ (ಪಾ-ಯೋ-ಸೂ ೧ । ೧೭) ಇತಿ । ಸರ್ವವೃತ್ತಿನಿರೋಧೇ ತು ಅಸಂಪ್ರಜ್ಞಾತಃ ಸಮಾಧಿಃ। ನನು ಸರ್ವವೃತ್ತಿನಿರೋಧೋ ಯೋಗ ಇತ್ಯುಕ್ತೇ ಸಂಪ್ರಜ್ಞಾತೇ ವ್ಯಾಪ್ತಿರ್ನಸ್ಯಾತ್ । ತತ್ರ ಸತ್ವಪ್ರಧಾನಾಯಾಃ ಸತ್ವಪುರುಷಾನ್ಯಥಾಖ್ಯಾತಿ ಲಕ್ಷಣಾಯಾ ವೃತ್ತೇರ ನಿರೋಧಾದಿತಿ ಚೇತ್—ತದೇತದ್ವಾರ್ತಮ್। ಕ್ಲೇಶಕರ್ಮ ವಿಪಾಕಾಶಯಪರಿ ಪಂಥಿಚಿತ್ತವೃತ್ತಿನಿರೋಧೋ ಯೋಗ ಇತ್ಯಂಗೀಕಾರಾತ್ ।

ಅಸ್ಮಿತ ಸಮಾಧಿಸ್ವರೂಪವನ್ನು ತಿಳಿಸುತ್ತಾನೆ. 'ಯದಾ'—ಇತಿ. ರಜಸ್ತ ಮೋಲೇಶಗಳಿಂದ ತಿರಸ್ಕೃತವಾಗದಿರುವ ಶುದ್ಧಸತ್ವವನ್ನಾಶ್ರಯಿಸಿ ಯಾವ ಭಾವನೆ ಪ್ರವೃತ್ತವಾಗುತ್ತದೆಯೋ ಅಲ್ಲಿ ಸತ್ವವು ಕಡಿಮೆಯಾಗಿ ಚಿತಿಶಕ್ತಿಯು ಉದ್ರೇಕವಾಗಿರು ವುದರಿಂದ ಕೇವಲ ಸತ್ತಾ ಉಳಿದಿರುತ್ತದೆ. ಇದೇ ಅಸ್ಮಿತಸಮಾಧಿ. ಇದರಿಂದ ಕೂಡಿರು ವುದು ಸಾಸ್ಮಿತಸಮಾಧಿ ಯದ್ಯಪಿ ಸುಖದಂತೆ ದುಃಖಮೋಹಗಳೂ ಎಲ್ಲಾ ಸಮಾಧಿ ಗಳಲ್ಲಿಯೂ ಅನುಗತವಾಗಿರುತ್ತವೆ. ಆದರೂ ಅವು ಸ್ವಭಾವದಿಂದಲೇ ಹೇಯವಾದುದ ರಿಂದ ಅವುಗಳ ಭಾವನೆಯ ಆವಶ್ಯಕತೆ ಇರುವುದಿಲ್ಲ. ಆಮೇಲೆ ಸುಖದಲ್ಲಿಯೂ ಕ್ಷಣಿ ಕತ್ವ, ಅನಿತ್ಯತ್ವಾದಿ ದೋಷದೃಷ್ಟಿಯಿಂದ ವೈರಾಗ್ಯಹೊಂದಿ ಜೀವಸ್ವರೂಪಕ್ಕೂ, ಈಶ್ವರ ಸ್ವರೂಪಕ್ಕೂ ಜಡಪದಾರ್ಥಗಳಿಂದ ವಿವೇಕಹೊಂದಿ ಆಗುವ ಆತ್ಮಾಕಾರ ಸಾಕ್ಷಾತ್ಕಾರವೇ ಅಸ್ಮಿತವಾಗುತ್ತದೆ. 'ಅತ್ರಾಸ್ಮಿ ಅತ್ರಾಸ್ಮಿ' ಎಂಬುದೇ ಇದರ ಆಕಾರ. ಮೊದಲು ಇಲ್ಲಿ ಜೀವಾತ್ಮವಿಷಯಕವಾದ ಅಸ್ಮಿತಾ ಉಂಟಾಗಿ ಆಮೇಲೆ ಅತಿ ಸೂಕ್ಷ್ಮವಾದ ಪರಮಾತ್ಮ ವಿಷಯಕವಾಗುತ್ತದೆ. ಇದನ್ನೇ ಸೂತ್ರದಲ್ಲಿ ಹೇಳಿರುತ್ತಾರೆ. 'ವಿತರ್ಕ'—ಇತಿ ಚಿತ್ತದ ಚರಮಭೂಮಿಯೇ ಸಾಸ್ಮಿತಸಮಾಧಿ. ಇದರಿಂದ ಮುಂದೆ ತಿಳಿಯಬೇಕಾದುದು ಯಾವುದೂ ಇರುವುದಿಲ್ಲ. ಈ ನಾಲ್ಕು ಸಮಾಧಿಗಳಲ್ಲಿರುವ ಚಿತ್ತಭೂಮಿಗಳು ಕ್ರಮ ವಾಗಿ ಮಧುಮತೀ, ಮಧುಪ್ರತೀಕಾ, ವಿಶೋಕಾ, ಸಂಸ್ಕಾರಶೇಷಾ ಎಂದು ಹೇಳಲ್ಪಡು ತ್ತವೆ. ಸಕಲವೃತ್ತಿನಿರೋಧವಾದಾಗ ಅಸಂಪ್ರಜ್ಞಾತ ಸಮಾಧಿಯಾಗುತ್ತದೆ. ಸಕಲ ವೃತ್ತಿನಿರೋಧವೇ ಯೋಗವಾಗುವುದಾದರೆ ಸಂಪ್ರಜ್ಞಾತ ಸಮಾಧಿಯಲ್ಲಿ ಸತ್ವವೃತ್ತಿ ಪ್ರಧಾನವಾದ ಸತ್ವಪುರುಷಾನ್ಯಥಾ ಖ್ಯಾತಿರೂಪವಾದ ವೃತ್ತಿಯಿರುವುದರಿಂದ ಅದು ಯೋಗವಾಗಲಾರದು. ಎಂದು ಆಕ್ಷೇಪ. ಕ್ಲೇಶಾದಿಪರಿಪಂಥಿಚಿತ್ತವೃತ್ತಿನಿರೋಧವೇ ಯೋಗವೆಂದು ಅಂಗೀಕರಿಸುವುದರಿಂದ ಯಾವದೋಷಕ್ಕೂ ಅವಕಾಶವಿಲ್ಲವೆಂದು ಅದಕ್ಕೆ ಸಮಾಧಾನ.

ಕ್ಲೇಶಾಃ ಪುನಃ ಪಂಚಧಾ ಪ್ರಸಿದ್ಧಾಃ–ಅವಿದ್ಯಾಸ್ಮಿತಾರಾಗದ್ವೇಷಾಭಿಮತಾಃ ಕ್ಲೇಶಾಃ (ಯೋ–ಸೂ–೨।೩।) ಇತಿ. ॥

ನನ್ವವಿದ್ಯೇತ್ಯತ್ರ ಕಿಮಾಶ್ರೀಯತೇ ಪೂರ್ವಪದಾರ್ಥಪ್ರಾಧಾನ್ಯಮುಮುಕ್ಷಿಕಂ ವರ್ತತ ಇತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವತ್ । ಉತ್ತರಪದಾರ್ಥಪ್ರಾಧಾನ್ಯಂ ವಾ ರಾಜಪುರುಷ ಇತಿವತ್ । ಅನ್ಯಪದಾರ್ಥಪ್ರಾಧಾನ್ಯಂ ವಾ ಅಮಕ್ಷಿಕೋ ದೇಶ ಇತಿವತ್ । ತತ್ರ ನ ಪೂರ್ವಃ । ಪೂರ್ವಪದಾರ್ಥಪ್ರಧಾನತ್ವೇ ಅವಿದ್ಯಾಯಾಂ ಪ್ರಸಜ್ಯಪ್ರತಿಷೇಧೋಪಪತ್ತೌ ಕ್ಲೇಶಾದಿಕಾರಕತ್ವಾನುಪಪತ್ತೇಃ। ಅವಿದ್ಯಾಶಬ್ದಸ್ಯ ಸ್ತ್ರೀಲಿಂಗತ್ವಾಭಾವಾಪತ್ತೇಶ್ಚ ನ ದ್ವಿತೀಯಃ । ಕಸ್ಯಚಿದಭಾವೇನ ವಿಶಿಷ್ಟಾಯಾ ವಿದ್ಯಾಯಾಃ ಕ್ಲೇಶಾದಿಪರಿಪಂಥಿತ್ವೇನ ತದ್ಬೀಜತ್ವಾನುಪಪತ್ತೇಃ । ನ ತೃತೀಯಃ । ನಞೋಽಸ್ತ್ಯರ್ಥಾನಾಂ ಬಹುವ್ರೀಹಿರ್ವಾ ಚೋತ್ತರಪದಲೋಪಶ್ಚೇತಿ ವೃತ್ತಿಕಾರವಚನಾನುಸಾರೇಣ ಅವಿದ್ಯಮಾನಾ ವಿದ್ಯಾ ಯಸ್ಯಾ ಸಾ ಅವಿದ್ಯಾ ಬುದ್ಧಿರಿತಿ ಸಮಾಸಾರ್ಥಸಿದ್ಧೌ ತಸ್ಯಾ ಅವಿದ್ಯಾಯಾ ಕ್ಲೇಶಾದಿಬೀಜತ್ವಾನುಪಪತ್ತೇಃ । ವಿವೇಕಖ್ಯಾತಿಪೂರ್ವಕ ಸರ್ವವೃತ್ತಿನಿರೋಧ ಸಂಪನ್ನಾಯಾ ಸ್ತಸ್ಯಾಸ್ತಥಾತ್ವಪ್ರಸಂಗಾಚ್ಚ । ಉಕ್ತಂ ಚಾಸ್ಮಿತಾದೀನಾಂ ಕ್ಲೇಶಾನಾಮವಿದ್ಯಾನಿದಾನತ್ವಂ - 'ಅವಿದ್ಯಾಕ್ಷೇತ್ರಮುತ್ತರೇಷಾಂ ಪ್ರಸುಪ್ತತನುವಿಚ್ಛಿನ್ನೋದಾರಾಣಾಮ್' (ಯೋ-ಸೂ-೨।೪) ಇತಿ

ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶಗಳೆಂದು ಐದು ಕ್ಲೇಶಗಳು. ಇವುಗಳ ಸ್ವರೂಪವನ್ನು ವಿಸ್ತರವಾಗಿ ಮುಂದೆ ತಿಳಿಸುತ್ತಾರೆ. ಸಾಮಾನ್ಯವಾಗಿ ಅತಸ್ಮಿನ್ ತದ್ಬುದ್ಧಿಃ —ಅವಿದ್ಯಾ. ಇದರಿಂದ ಅಸ್ಮಿತಾದಿಗಳು ಹುಟ್ಟುತ್ತವೆ. ಚಿತ್ತಪುರುಷರಿಗೆ ಐಕ್ಯಾಭಿಮಾನವೇ ಅಸ್ಮಿತಾ. ವಿಷಯಾಭಿಲಾಷವೇ ರಾಗ ಕ್ರೋಧವೇ ದ್ವೇಷ. ಶರೀರಾದಿಗಳಿಂದ ಎಂದೂ ವಿಯೋಗವಾಗದಿರಲಿ ಎಂಬ ಮಾನಸಭಾವಕ್ಕೆ ಅಭಿನಿವೇಶವೆಂದು ಹೆಸರು. 'ನನು'—ಇತಿ. ಅವಿದ್ಯಾ ಎಂಬಲ್ಲಿ ಸಮಾಸಹೇಗೆಂದು ವಿಚಾರಿಸುತ್ತಾನೆ. ಅಭಾವಾರ್ಥಕ ನಞವ್ಯಯದೊಡನೆ ವಿದ್ಯಾಶಬ್ದಕ್ಕೆ 'ಅವ್ಯಯಂ ವಿಭಕ್ತಿ'—ಸೂತ್ರದಿಂದ ಅವ್ಯಯೀಭಾವಸಮಾಸ ಮಾಡಿದರೆ ವಿದ್ಯೆಯ ಅಭಾವ ಎಂದರ್ಥವಾಗುತ್ತದೆ. ಅವ್ಯಯೀಭಾವಸಮಾಸದಲ್ಲಿ ಸಾಮಾನ್ಯವಾಗಿ ಪೂರ್ವಪದಾರ್ಥಕ್ಕೆ ಪ್ರಾಧಾನ್ಯವಿರುತ್ತದೆ. ಅಮಕ್ಷಿಕಂ ಎಂದರೆ ಮಕ್ಷಿಕಾಣಾಂ ಅಭಾವಃ—ನೊಣಗಳ ಅಭಾವವೆಂದರ್ಥವಾಗುತ್ತದೆ. ನಞ್ ತತ್ಪುರುಷಸಮಾಸವನ್ನಂಗೀಕರಿಸಿದರೆ ಯಾವುದಾದರೊಂದು ಅಭಾವದಿಂದ ಕೂಡಿದ ವಿದ್ಯಾ ಎಂದರ್ಥವಾಗುತ್ತದೆ. ನವಿದ್ಯಾ—ಅವಿದ್ಯಾ. ತತ್ಪುರುಷದಲ್ಲಿ ಸಾಮಾನ್ಯವಾಗಿ ಉತ್ತರಪದಾರ್ಥಕ್ಕೆ ಪ್ರಾಧಾನ್ಯವಿರುತ್ತದೆ. ರಾಜಪುರುಷಃ ಇದು ತತ್ಪುರುಷ. ರಾಜಸಂಬಂಧಿತ್ವವಿಶಿಷ್ಟಪುರುಷನೆಂದರ್ಥ. ಅರಾಜಪುರುಷಃ ಎಂಬಲ್ಲಿ ಆರೋಪಿತ ರಾಜಪುರುಷನೆಂದರ್ಥವಾಗುತ್ತದೆ. ನ ಮಕ್ಷಿಕಾಃ ಯಸ್ಮಿನ್ ಅಮಕ್ಷಿಕೋ ದೇಶಃ-ಇದು ಬಹುವ್ರೀಹಿ. ಇಲ್ಲಿ ಸಾಮಾನ್ಯವಾಗಿ ಅನ್ಯಪದಾರ್ಥಕ್ಕೆ ಪ್ರಾಧಾನ್ಯವಿರುತ್ತದೆ. ಇಲ್ಲಿ ಯಾವಸಮಾಸವನ್ನಂಗೀಕರಿಸಿದರೂ ಸರಿಯಾಗುವುದಿಲ್ಲವೆಂದು ತಿಳಿಸುತ್ತಾನೆ. 'ನಪ್ರಥಮಃ'—ಇತಿ. ಅವಿದ್ಯಾಶಬ್ದದಿಂದ ವಿದ್ಯಾಪ್ರಸಕ್ತಿಪೂರ್ವಕವಾಗಿ ವಿದ್ಯಾಭಾವಮಾತ್ರ ಪ್ರತೀತವಾಗುತ್ತದೆ. ತತ್ಸಹಕೃತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ಯಾವ ಭಾವವೂ ತೋರುವುದಿಲ್ಲ. ಪ್ರಾಪ್ತಿಪೂರ್ವಕವಾದ ನಿಷೇಧವೇ ಪ್ರಸಜ್ಯ
ಪ್ರತಿಷೇಧ. ವಿದ್ಯೆಯಃಅಭಾವವು ಎಂದೂ ಕ್ಲೇಶಾದಿಜನಕವಾಗುವುದಿಲ್ಲ. ವಿದ್ಯಾ
ವಿಪರೀತವಾದ ಜ್ಞಾನವೇ ಕ್ಲೇಶಾದಿಗಳನ್ನು ಹುಟ್ಟಿಸುತ್ತದೆ. ಇಂತಹ ಜ್ಞಾನವು ಅವ್ಯಯೀ
ಭಾವಸಮಾಸವನ್ನಂಗೀಕರಿಸಿದರೆ ಅವಿದ್ಯಾಶಬ್ದದಿಂದ ತೋರಲಾರದು. ಅದೂ ಅಲ್ಲದೆ
ಅವ್ಯಯೀಭಾವಸಮಾಸವಾದ ಮೇಲೆ 'ಅವ್ಯಯೀಭಾವಶ್ಚ' ಸೂತ್ರದಿಂದ ನಪುಂಸಕತ್ವ
ಬರಬೇಕಾಗುತ್ತದೆ. ಅವಿದ್ಯಾ ಎಂದು ಸ್ತ್ರೀಲಿಂಗ ಶಬ್ದವಾಗಲಾರದು. 'ನದ್ವಿತೀಯಃ'
ಇತಿ. ತತ್ಪುರುಷವೂ ಕೂಡುವುದಿಲ್ಲ. ಯಾವುದಾದರೊಂದು ಅಭಾವದಿಂದ ಕೂಡಿ
ರುವ ಅಂದರೆ ರಾಗದ್ವೇಷಶೋಕಮೋಹಾದಿಗಳಲ್ಲಿ ಯಾವುದಾದರೊಂದರ ಅಭಾವದಿಂದ
ಕೂಡಿದ ವಿದ್ಯೆಯು ಕ್ಲೇಶಾದಿಗಳಿಗೆ ಪರಿಪಂಥಿಯೇ ಆಗುತ್ತದೆ ಅಂದರೆ ಕ್ಲೇಶಾದಿಗಳನ್ನು
ನಾಶಪಡಿಸುವುದೇ ವಿನಾ ಜನಕವಾಗಲಾರದು. ಇಲ್ಲಿ ಕೆಲವರು ಆಕ್ಷೇಪಿಸುತ್ತಾರೆ. ಇಲ್ಲಿ
ಅಭಾವಕ್ಕೆ ಪ್ರತಿಯೋಗಿಯಾಗಿ ರಾಗಾದಿಗಳನ್ನು ವಿವಕ್ಷಾ ಮಾಡುವುದಿಲ್ಲ. ಆತ್ಮಸಾಕ್ಷಾ
ತ್ಕಾರವನ್ನೇ ಪ್ರತಿಯೋಗಿಯಾಗಿ ಹೇಳುತ್ತೇವೆ. ಆತ್ಮಸಾಕ್ಷಾತ್ಕಾರಾಭಾವದಿಂದ ಯುಕ್ತ
ವಾದ ವಿದ್ಯೆಗೆ ಕ್ಲೇಶಾದಿ ಬೀಜತ್ವವು ಸಂಭವಿಸುತ್ತದೆ. ಎಂದು ಆಕ್ಷೇಪಿಸಿದರೆ ಅಂತಹ
ವಿದ್ಯೆಗೆ ವಿದ್ಯಾತ್ವವೇ ಸಂಭವಿಸದಿರುವುದರಿಂದ ಈ ವಾದವು ಸರಿಯಾಗಲಾರದು. ತತ್ಪು
ರುಷದಲ್ಲಿ ಉತ್ತರಪದಾರ್ಥಕ್ಕೆ ಪ್ರಾಧಾನ್ಯವಷ್ಟೆ. ಪೂರ್ವಪದಾರ್ಥವಾದ ಅಭಾವಕ್ಕೆ
ಅಪ್ರಾಧಾನ್ಯವಿರುತ್ತದೆ. ಅಲ್ಲಿ ಪ್ರತಿಯೋಗಿಗೆ ಆಕ್ಷೇಪಬರಬಹುದು. ಅದರಿಂದ ಪ್ರಧಾನ
ವಾದ ವಿದ್ಯಾಸ್ವರೂಪಕ್ಕೆ ಭಂಗಬರಲಾರದು. ಆದುದರಿಂದ ವಿದ್ಯಾವಿರುದ್ಧಗಳಾದ ರಾಗಾದಿ
ಗಳ ಅಭಾವವನ್ನೇ ಸ್ವೀಕರಿಸಬೇಕು. 'ನತ್ಯತೀಯಃ'—ಇತಿ. ಬಹುವ್ರೀಹಿಸಮಾಸ
ದಲ್ಲಿಯೂ ಅನುಪಪತ್ತಿಯಿರುತ್ತದೆ. 'ನಞೋಽ' ಇತಿ. ನಞಿನ ಪರದಲ್ಲಿರುವ
ಅಸ್ತ್ಯರ್ಥವಾಚಿಪದಗಳಿಗೆ ಪದಾಂತರದೊಡನೆ ಬಹುವ್ರೀಹಿ ಸಮಾಸವಾಗುತ್ತದೆ. ಪೂರ್ವ
ಪದಘಟಕವಾದ ಅಸ್ತ್ಯರ್ಥಪದಕ್ಕೆ ಲೋಪಬರುತ್ತದೆಂದು ವಾರ್ತಿಕಾರ್ಥ. ಪ್ರಕೃತ ಹೀಗೆ
ಬಹುವ್ರೀಹಿಯನ್ನಂಗೀಕರಿಸಿದರೆ ವಿದ್ಯಾರಹಿತಬುದ್ಧಿಯೇ ಸಮಾಸಾರ್ಥವಾಗುತ್ತದೆ.
ಇಂತಹಬುದ್ಧಿಗೆ ವಿದ್ಯೆಯ ಅಭಾವ ಮಾತ್ರಾರ್ಥವು ಭೋಧಿತವಾಗುವುದರಿಂದ ಇದಕ್ಕೂ
ಕ್ಲೇಶಾದಿಜನಕತ್ವ ಸಂಭವಿಸುವುದಿಲ್ಲ. ವಿದ್ಯಾವಿಪರೀತ ಬುದ್ಧಿ ಇದ್ದರೇ ಅದು ಕಾರಣ
ವಾಗುತ್ತದೆ. ಅಭಾವದಿಂದ ವಿಪರೀತ ಬುದ್ಧಿ ತೋರಲಾರದು. ವಿದ್ಯೆಯ ಅಭಾವವೇ
ಕ್ಲೇಶಾದಿಜನಕವೆಂದರೆ ದೋಷವೇನು ? ಎಂದು ಆಶಂಕಿಸಿದರೆ ಅದಕ್ಕೆ ಸಮಾಧಾನ
ತೋರಿಸುತ್ತಾನೆ. 'ವಿವೇಕ' ಇತಿ. ವಿದ್ಯೆಯೆಂದರೆ ಜ್ಞಾನವಿಶೇಷ. ಅಸಂಪ್ರಜ್ಞಾತ
ಸಮಾಧಿಯಲ್ಲಿ ಪ್ರಕೃತಿಪುರುಷಭೇದಸಾಕ್ಷಾತ್ಕಾರಪೂರ್ವಕವಾಗಿ ಬುದ್ಧಿಯ ಸಕಲವೃತ್ತಿ
ನಿರೋಧವಾಗುವುದರಿಂದ ಜ್ಞಾನಸಾಮಾನ್ಯಾಭಾವವನ್ನಂಗೀಕರಿಸಿರುವುದರಿಂದ ಜ್ಞಾನ
ವಿಶೇಷರೂಪವಿದ್ಯೆಯ ಅಭಾವವೂ ಅಲ್ಲಿರುವುದರಿಂದ ಆಗ ಆ ಅಭಾವಕ್ಕೆ ಕ್ಲೇಶಾದಿ
ಜನಕತ್ವ ಸಂಭವಿಸಬೇಕಾಗುತ್ತದೆ. ಕ್ಲೇಶಾದಿಗಳಿಗೆ ಅವಿದ್ಯಾಹೇತುತ್ವವು ಸೂತ್ರದಲ್ಲಿ
ಹೇಳಿದೆಯೆಂದು ಪ್ರಮಾಣ ತೋರಿಸುತ್ತಾನೆ. 'ಉಕ್ತಂಚ'—ಇತಿ. 'ಅವಿದ್ಯಾಸ್ಮಿತಾ'—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬುದು ಹಿಂದಿನ ಸೂತ್ರ. ಉತ್ತರೇಷಾಂ—ಪೂರ್ವಸೂತ್ರೋಕ್ತ ಕ್ಲೇಶಪಂಚಕಗಳ ಮಧ್ಯದಲ್ಲಿ ನಮುಂದಿನ ಅಸ್ಮಿತರಾಗದ್ವೇಷ ಅಭಿನಿವೇಶಗಳಿಗೆ ಅವಿದ್ಯಾ ಎಂಬುದು ಕ್ಷೇತ್ರಂ-ಉತ್ಪತ್ತಿಭೂಮಿಯಾಗುತ್ತದೆಯೆಂದರ್ಥ. 'ಪ್ರಸುಪ್ತ'—ಇತಿ ಪ್ರಸುಪ್ತ, ತನು, ವಿಚ್ಛಿನ್ನ, ಉದಾರಗಳೆಂದು ಈ ಕ್ಲೇಷಗಳು ಪ್ರತ್ಯೇಕವಾಗಿ ನಾಲ್ಕು ವಿಧಗಳಾಗಿರುತ್ತವೆ.

ತತ್ರ ಪ್ರಸುಪ್ತತ್ವಂ ಪ್ರಭೋಧ ಸಹಕಾರ್ಯ ಭಾವೇನ ಅನಭಿವ್ಯಕ್ತಿಃ । ತನುತ್ವಂ ಪ್ರತಿ ಪ್ರತಿಪಕ್ಷಭಾವನಯಾ ಶಿಥಿಲೀಕರಣಮ್ । ವಿಚ್ಛಿನ್ನತ್ವಂ ಬಲವತಾ ಕ್ಲೇಶೇನಾಭಿಭವಃ । ಉದಾರತ್ವಂ ಸಹಕಾರಿಸಂನಿಧಿವಶಾತ್ ಕಾರ್ಯಕಾರಿತ್ವಮ್ । ತದುಕ್ತಂ ವಾಚಸ್ಪತಿಮಿಶ್ರೇಣ ವ್ಯಾಸಭಾಷ್ಯವ್ಯಾಖ್ಯಾಯಾಂ—
ಪ್ರಸುಪ್ತಾಸ್ತತ್ವಲೀನಾನಾಂ ತನ್ವವಸ್ಥಾಶ್ಚಯೋಗಿನಾಮ್ ॥
ವಿಚ್ಛಿನ್ನೋದಾರರೂಪಾಶ್ಚ ಕ್ಲೇಶಾ ವಿಷಯಸಂಗಿನಾಮ್ ॥ ಇತಿ॥
ದ್ವಂದ್ವನತ್ ಸ್ವತಂತ್ರಪದಾರ್ಥದ್ವಯಾ ನವಗಮಾತ್ ಉಭಯಪದಾರ್ಥ ಪ್ರಧಾನತ್ವಂ ನಾ ಶಂಕಿತಮ್ ತಸ್ಮಾತ್ ಪ್ರಕ್ಷತ್ರಯೇಪಿ ಕ್ಲೇಶಾದಿ ನಿದಾನತ್ವಮ ವಿದ್ಯಾಯಾಃ ಪ್ರಸಿದ್ಧಂ ಹೀಯೇತೇತಿ ಚೇತ್ ।—

'ತತ್ರ'—ಇತಿ. ಯಾವ ಕ್ಲೇಶಗಳು ಚಿತ್ತಭೂಮಿಯಲ್ಲಿದ್ದು ಪ್ರಬೋಧಕಗಳು ಇಲ್ಲದಿರುವುದರಿಂದ ತಮ್ಮ ಕಾರ್ಯವನ್ನು ಆರಂಭಿಸುವುದಿಲ್ಲವೋ ಅವು ಪ್ರಸುಪ್ತಗಳು. ಇವು ಪ್ರಕೃತಿಲಯವಾದವರಲ್ಲಿಯೂ ಬಾಲರಲ್ಲಿಯೂ ಇರುತ್ತವೆ. ಚಿತ್ತವು ಉಪಾಸನೆಯಿಂದ ಪ್ರಕೃತಿಯಲ್ಲಿ ಲೀನವಾದಾಗ ಬ್ರಹ್ಮಾಂಡದ ಹೊರಗೆ ಪ್ರಕೃತ್ಯಾವರಣವಿರುವಾಗ ಅಧಿಕಾರದಿಂದ ಲಿಂಗದೇಹದೊಡನೆ ಚಿತ್ತಪುನರಾವೃತ್ತಿಪರ್ಯಂತ ಕೈವಲ್ಯ ಪದವಿಯಂತೆ ಯಾರು ಅನುಭವಿಸುತ್ತಾರೆಯೋ ಅವರೇ ಪ್ರಕೃತಿಲಯರು. ವಿರುದ್ಧಭಾವನೆಯಿಂದ ಶಿಥಿಲವಾಗಿರುವ ಕ್ಲೇಶಕ್ಕೆ ತನುವೆಂದು ಹೆಸರು. ವಾಸನಾಶೇಷದಿಂದ ಇರುವ ಯೋಗಿ ಚಿತ್ತದಲ್ಲಿರುತ್ತದೆ. ಬಲಿಷ್ಠಕ್ಲೇಶದಿಂದ ಇನ್ನೊಂದಕ್ಕೆ ತಿರಸ್ಕಾರವೇ ವಿಚ್ಛಿನ್ನತ್ವ. ದ್ವೇಷಾವಸ್ಥೆಯಲ್ಲಿ ರಾಗವಿಚ್ಛಿನ್ನತಾ. ರಾಗಾವಸ್ಥೆಯಲ್ಲಿ ದ್ವೇಷವಿಚ್ಛಿನ್ನತಾ. ಇವು ಪರಸ್ಪರವಿರುದ್ಧಗಳಾದುವರಿಂದ ಇವುಗಳಿಗೆ ಯೌಗಪದ್ಯವು (ಏಕಕಾಲಪ್ರವೃತ್ತಿಕತ್ವಂ) ಸಂಭವಿಸುವುದಿಲ್ಲ. ಸಹಕಾರಿಕಾರಣಗಳ ಸಂನಿಧಾನವಿರುವಾಗ ಕಾರ್ಯಕಾರಿತ್ವ ಬಂದಾಗ ಉದಾರತಾವಸ್ಥೆ ಸಂಭವಿಸುತ್ತದೆ. ಬದ್ಧಜೀವರಲ್ಲಿ ಇದು ಸಂಭವಿಸುತ್ತದೆ. 'ಅವಿದ್ಯಾ ಕ್ಷೇತ್ರಂ'-ಎಂಬಸೂತ್ರದಲ್ಲಿ ವ್ಯಾಸಭಾಷ್ಯಕ್ಕೆವ್ಯಾಖ್ಯಾನಮಾಡುವಾಗ ವಾಚಸ್ಪತಿಮಿಶ್ರರು ಹೀಗೆ ಹೇಳುತ್ತಾರೆ. 'ಪ್ರಸುಪ್ತಾಃ' —ಇತಿ. ಪ್ರಕೃತ್ಯಾದಿತತ್ವಗಳಲ್ಲಿ ಲೀನರಾದವರಿಗೆ ಪ್ರಸುಪ್ತಾವಸ್ಥಾಪನ್ನ ಕ್ಲೇಶವೂ, ಯೋಗಿಗಳಿಗೆ ತನ್ವವಸ್ಥಾಪನ್ನಕ್ಲೇಶವೂ, ವಿಷಯಾಸಕ್ತರಾದ ಸಂಸಾರಿಗಳಿಗೆ ಉಳಿದ ಎರಡು ರೀತಿಯ ಕ್ಲೇಶಗಳೂ ಇರುತ್ತವೆ ಯೆಂದರ್ಥ. ಇಲ್ಲಿ ಸ್ವತಂತ್ರಪದಾರ್ಥಗಳೆರಡು ತೋರದಿರುವುದರಿಂದ ದ್ವಂದ್ವಸಮಾಸದ ಪ್ರಸಕ್ತಿ ಇಲ್ಲ. ಹೀಗೆ ಅವ್ಯಯೀಭಾವ, ತತ್ಪುರುಷ, ಬಹುವ್ರೀಹಿರೂಪಪಕ್ಷತ್ರಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿಯೂ ಅವಿದ್ಯೆಯಲ್ಲಿ ಪ್ರಸಿದ್ಧವಾಗಿರುವ ಕ್ಲೇಶಾದಿಕಾರಣತ್ವಕ್ಕೆ ಭಂಗ ಬರುತ್ತದೆ. ಎಂದು ಆಕ್ಷೇಪ.

ತದಪಿ ನ ಶೋಭನಂ ವಿಭಾತಿ । ಪರ್ಯುದಾಸಶಕ್ತಿಮಾಶ್ರಿತ್ಯ ಅವಿದ್ಯಾಶಬ್ದೇನ ವಿದ್ಯಾವಿರುದ್ಧಸ್ಯ ವಿಪರ್ಯಯಜ್ಞಾನಸ್ಯಾಭಿಧಾನಮಿತಿ ವೃದ್ಧೈರಂಗೀಕಾರಾತ್ ತದಾಹ—

ನಾಮಧಾತ್ವರ್ಥಯೋಗೇ ತು ನೈವ ನಞ್ ಪ್ರತಿಷೇಧಕಃ ।
ವದತ್ಯಬ್ರಾಹ್ಮಣಾಧರ್ಮಾವನ್ಯಮಾತ್ರ ವಿರೋಧಿನೌ ॥ ಇತಿ ॥
ವೃದ್ಧಪ್ರಯೋಗಗಮ್ಯೋ ಹಿ ಶಬ್ದಾರ್ಥಃ ಸರ್ವ ಏವನಃ ।
ತೇನ ಯತ್ರ ಪ್ರಯುಕ್ತೋ ಯೋ ನ ತಸ್ಮಾದಪನೀಯತೇ ॥ ಇತಿ ॥

ವಾಚಸ್ಪತಿ ಮಿಶ್ರೈರಪ್ಯುಕ್ತಂ ಲೋಕಾಧೀನಾವಧಾರಣೋ ಹಿ ಶಬ್ದಾರ್ಥಯೋಃ ಸಂಬಂಧಃ । ಲೋಕೇ ಚ ಉತ್ತರಪದಾರ್ಥಪ್ರಧಾನಸ್ಯಾಪಿ ನಞ ಉತ್ತರಪದಾಭಿಧೇಯೋಪಮರ್ದಕಸ್ಯ ತದ್ವಿರುದ್ಧತಯಾ ತತ್ರತತ್ರೋಪಲಬ್ಧೇರಿಹಾಪಿ ತದ್ವಿರುದ್ಧೇ ಪ್ರವೃತ್ತಿರಿತಿ ॥

ಈ ಆಕ್ಷೇಪ ಸರಿಯಲ್ಲ. ಪರ್ಯುದಾಸವನ್ನಾಶ್ರಯಿಸಿ ವಿದ್ಯಾವಿರುದ್ಧವಾದ ಮಿಥ್ಯಾಜ್ಞಾನವನ್ನು ಇಲ್ಲಿ ಹೇಳಲು ಸಾಧ್ಯವಿದೆ. ಪರ್ಯುದಾಸವೆಂದರೆ ಭೇದ. ಕೆಲವು ಕಡೆ ಪ್ರಯೋಗೋಪಾಧಿಯಿಂದ ವಿರೋಧಾರ್ಥವೂ ತೋರುತ್ತದೆ. ಅಧರ್ಮವೆಂದರೆ ಧರ್ಮಭಿನ್ನವಾಗಿ ಧರ್ಮವಿರೋಧಿಯಾದ ಪಾಪ ಎಂದರ್ಥವಾಗುತ್ತದೆ. ಹಾಗೆ ಅವಿದ್ಯಾಶಬ್ದಕ್ಕೆ ವಿದ್ಯಾಭಿನ್ನವಾಗಿ ವಿದ್ಯಾವಿರೋಧಿಯಾಗಿರುವ ಮಿಥ್ಯಾಜ್ಞಾನವೆಂದರ್ಥವಾಗುತ್ತದೆ. 'ನಾಮಧಾ—' ಇತಿ. ನಾಮಾರ್ಥಯೋಗವಿರುವಾಗ, ಧಾತ್ವರ್ಥಯೋಗವಿರುವಾಗ ನಞ್‌ಗೆ ನಿಷೇಧಾರ್ಥ ತೋರುವುದಿಲ್ಲ. ವಿಧ್ಯರ್ಥಕ ಲಿಙಾದಿಪ್ರತ್ಯಯಯೋಗವಿರುವಾಗ ಮಾತ್ರ ನಿಷೇಧಾರ್ಥ ತೋರುತ್ತದೆ. ನಾಮಾರ್ಥಯೋಗದಲ್ಲಿ ಪರ್ಯುದಾಸವನ್ನು ಹೇಳುತ್ತಾರೆ. ಅಬ್ರಾಹ್ಮಣವೆಂಬಲ್ಲಿ ಬ್ರಾಹ್ಮಣನಿಂದ ಬೇರೆಯಾದವನು ಎಂಬರ್ಥವನ್ನು ನಞ್ ತಿಳಿಸುತ್ತದೆ. ಅಧರ್ಮವೆಂಬಲ್ಲಿ ಧರ್ಮವಿರೋಧ್ಯರ್ಥವನ್ನು ಅದು ತಿಳಿಸುತ್ತದೆ. ವೃದ್ಧಪ್ರಯೋಗದಿಂದಲೇ ನಮಗೆ ಶಬ್ದಾರ್ಥ ನಿರ್ಣಯವಾಗುತ್ತದೆ ಆದುದರಿಂದ ಯಾವ ಅರ್ಥವಿವಕ್ಷೆಯಿಂದ ಹೇಳಿದೆಯೋ ಆ ಅರ್ಥವನ್ನೇ ಹೇಳಬೇಕಲ್ಲದೆ ಬೇರೆ ಅರ್ಥ ಹೇಳಬಾರದು. 'ಅನಿತ್ಯಾಶುಚಿ—' (ಯೋ-ಸೂ-೨।೫) ಸೂತ್ರಭಾಷ್ಯದವ್ಯಾಖ್ಯಾನಾವಸರದಲ್ಲಿ ವಾಚಸ್ಪತಿಮಿಶ್ರರೂ ಇದನ್ನೇ ಹೇಳಿರುತ್ತಾರೆ. ಲೋಕಪ್ರಯೋಗದಿಂದ ಶಬ್ದಾರ್ಥಸಂಬಂಧವನ್ನು ನಿಶ್ಚಯಿಸಬೇಕು. ಲೋಕದಲ್ಲಿ ನಞ್ ತತ್ಪುರುಷಸಮಾಸಮಾಡಿದಾಗ ಉತ್ತರಪದಾರ್ಥಪ್ರಾಧಾನ್ಯವಿದ್ದರೂ ನಞ ಉತ್ತರಪದಾರ್ಥಕ್ಕೆ ಉಪಮರ್ದಕವಾಗಿ ತದ್ವಿರುದ್ಧಾರ್ಥವನ್ನೂ ಕೆಲವು ಕಡೆ ತಿಳಿಸುವುದು ಪ್ರಸಿದ್ಧವಾಗಿದೆ. ಪರ್ಯುದಸ್ಯತೇ—ಉಪಮೃದ್ಯತೇ, ಆಗ ನಞ್‌ಗೆ ಉತ್ತರಪದಾರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿರುದ್ಧಾರ್ಥ ಅರ್ಥವಾಗುವುದರಿಂದ ಇಲ್ಲಿ ಅವಿದ್ಯಾಪದಕ್ಕೆ ವಿದ್ಯಾವಿರುದ್ಧವಾದ ಮಿಥ್ಯಾಜ್ಞಾನವೆಂದು ಅರ್ಥವಾಗುತ್ತದೆ.

ಏತದೇವಾಭಿಪ್ರೇತ್ಯೋಕ್ತಂ—ಅನಿತ್ಯಾಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ (ಯೋ-ಸೂ-೨೫) ಇತಿ । ಅತಸ್ಮಿನ್ ತದ್ಬುದ್ಧಿರ್ವಿಪರ್ಯಯ ಇತ್ಯುಕ್ತಂ ಭವತಿ । ತದ್ಯಥಾ—ಅನಿತ್ಯೇ ಘಟಾದೌ ನಿತ್ಯತ್ವಾಭಿಮಾನಃ । ಅಶುಚೌ ಕಾಯಾದೌ ಶುಚಿತ್ವಪ್ರತ್ಯಯಃ ।

ಸ್ಥಾನಾದ್ಬೀಜಾದುಪಷ್ಟಂಭಾ ನ್ನಿಷ್ಯಂದಾನ್ನಿಧನಾದಪಿ ।
ಕಾಯಮಾಧೇಯಶೌಚತ್ವಾ ತ್ಪಂಡಿತಾ ಹ್ಯಶುಚಿಂ ವಿದುಃ ॥ ಇತಿ ॥

ಪರಿಣಾಮತಾಪಸಂಸ್ಕಾರದುಃಖೈರ್ಗುಣವೃತ್ತಿವಿರೋಧಾಚ್ಚ ದುಃಖಮೇವ ಸರ್ವಂ ವಿವೇಕಿನಃ (ಯೋ-ಸೂ-೨೧೫) ಇತಿ ನ್ಯಾಯೇನ ದುಃಖೇ ಸ್ರಕ್‌ಚಂದನವನಿತಾದೌ ಸುಖತ್ವಾರೋಪಃ । ಅನಾತ್ಮನಿ ದೇಹಾದಾವಾತ್ಮಬುದ್ಧಿಃ । ತದುಕ್ತಂ—

ಅನಾತ್ಮನಿ ಚ ದೇಹಾದಾವಾತ್ಮಬುದ್ಧಿಸ್ತು ದೇಹಿನಾಮ್ ।
ಅವಿದ್ಯಾ ತತ್‌ಕೃತೋಬಂಧಸ್ತನ್ನಾಶೋ ಮೋಕ್ಷ ಉಚ್ಯತೇ ॥ ಇತಿ ॥

ಏವಮಿಯಮವಿದ್ಯಾ ಚತುಷ್ಪದಾ ಭವತಿ ॥

ಈಗ ಅವಿದ್ಯಾಸ್ವರೂಪವನ್ನು ತೋರಿಸುತ್ತಾನೆ. ಏತದೇವ—ಪರ್ಯುದಾಸಾರ್ಥಕತ್ವಮೇವ. 'ಅನಿತ್ಯ—' ಇತಿ. 'ಅತಸ್ಮಿನ್ ತದಿತಿ ಪ್ರತಿಭಾಸಃ ಅವಿದ್ಯಾ' ಎಂದು ಮುಂದೆ ಅವಿದ್ಯಾಸಾಮಾನ್ಯಲಕ್ಷಣವನ್ನು ಹೇಳುತ್ತಾನೆ. ಈ ಸೂತ್ರದಲ್ಲಿ ಅದರ ನಾಲ್ಕು ಅವಾಂತರಭೇದಗಳನ್ನು ಹೇಳುತ್ತಾನೆ. ಅನಿತ್ಯದಲ್ಲಿ ನಿತ್ಯತ್ವಜ್ಞಾನ, ಅಶುಚಿಯಲ್ಲಿ ಶುಚಿತ್ವಜ್ಞಾನ, ದುಃಖದಲ್ಲಿ ಸುಖತ್ವಪ್ರತೀತಿ, ಅನಾತ್ಮನಲ್ಲಿ ಆತ್ಮತ್ವಪ್ರತೀತಿ ಹೀಗೆ ನಾಲ್ಕುವಿಧವಾದ ಅಜ್ಞಾನವಿರುತ್ತದೆ. ಇವೆಲ್ಲವೂ ಅವಿದ್ಯೆಯೇ ಆಗುತ್ತವೆ. ಇವು ಇತರಗಳಿಗೂ ಉಪಲಕ್ಷಣವಾದುದರಿಂದ ಪಾಪಾದಿಗಳಲ್ಲಿ ಪುಣ್ಯಾದಿಬುದ್ಧಿಯೂ ಅವಿದ್ಯೆಯಾಗುತ್ತದೆ. ವಾಸ್ತವ ಅದಲ್ಲದಿರುವಲ್ಲಿ ಅದು ಎಂದು ತಿಳಿಯುವ ಬುದ್ಧಿಯೇ ವಿಪರ್ಯಯವಾಗುತ್ತದೆ. ಅನಿತ್ಯವಾದ ಘಟಾದಿಯಲ್ಲಿ ನಿತ್ಯತ್ವಾಭಿಮಾನವೇ ವಿಪರ್ಯಯ. ಅಶುಚಿಯಾದ ಶರೀರದಲ್ಲಿ ಶುಚಿತ್ವಜ್ಞಾನ. ಶರೀರ ಅಶುಚಿಯೆಂಬುದನ್ನು ವ್ಯಕ್ತಪಡಿಸುತ್ತಾನೆ. 'ಸ್ಥಾನಾತ್—' ಇತಿ. ಸ್ಥಾನವೆಂದರೆ ಶರೀರದ ಉತ್ಪತ್ತಿಸ್ಥಾನ—ಮೂತ್ರಾದಿಗಳಿಂದ ಕೂಡಿದ ತಾಯಿಯ ಉದರ. ಬೀಜವೆಂದರೆ ಉಪಾದಾನಕಾರಣ. ಶರೀರಕ್ಕೆ ಶುಕ್ಲಶೋಣಿತಗಳೇ ಉಪಾದಾನಕಾರಣ. ಉಪಷ್ಟಂಭಃ—ಪೋಷಕವಾದ ತಿಂದು ಕುಡಿದ ಅನ್ನರಸಾದಿಗಳು. ನಿಷ್ಯಂದವೆಂದರೆ ಬೆವರು ಮುಂತಾದವುಗಳು. ನಿಧನವೆಂದರೆ ಮರಣ. ಇವು ಎಂತಹ ಶ್ರೋತ್ರಿಯನ ಶರೀರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನಾದರೂ ಮಲಿನಗೊಳಿಸುತ್ತವೆ. ಆಧೇಯ ಶೌಚತ್ವಾತ್—ಸ್ನಾನಾದಿಗಳಿಂದ ಉಂಟಾಗುವ ಶೌಚವುಳ್ಳದ್ದಾಗುವುದರಿಂದ ದೇಹವು ಅಶುಚಿಯೆಂದು ಪರಿಗಣಿಸಲ್ಪಟ್ಟಿದೆ.

'ಪರಿಣಾಮ—' ಇತಿ ಸ್ರಕ್‌ಚಂದನವನಿತಾದ್ಯುಪಭೋಗಗಳಿಂದ ಉಂಟಾಗುವ ವೈಷಯಿಕ ಸುಖವೆಲ್ಲವೂ ವಿವೇಕಿಗಳಿಗೆ ದುಃಖವೇ ಆಗುತ್ತವೆ. ವಿಷಸಂಪೃಕ್ತವಾದ ರುಚಿಯಾದ ಅನ್ನದಂತೆ ಮೊದಲು ಸುಖವಾಗಿ ತೋರಿದರೂ ಕೊನೆಗೆ ದುಃಖವಾಗಿ ಪರಿಣಮಿಸುತ್ತವೆ. ಅಂತಹ ಸುಖವು ಪರಿಣಾಮದುಃಖಕ್ಕೂ, ತಾಪದುಃಖಕ್ಕೂ, ಸಂಸ್ಕಾರದುಃಖಕ್ಕೂ ಕಾರಣವಾಗುತ್ತದೆ. ಸುಖಸಾಧನ ಸಂಪತ್ತಿಯಿರುವಾಗ ಸುಖೋಪಭೋಗಕಾಲದಲ್ಲಿ ಹಿಂಸಾದಿಗಳು ಇದ್ದೇ ಇರುವುದರಿಂದ ಅದರಿಂದ ಮುಂದೆ ಉಂಟಾಗುವ ದುಃಖವು ಪರಿಣಾಮದುಃಖವಾಗುತ್ತದೆ. ಸುಖೋಪಭೋಗಕಾಲದಲ್ಲಿ ತನಗಿಂತಲೂ ಇತರರಿಗೆ ಅಧಿಕವಾಗಿದೆಯೆಂದು ನೋಡುವುದರಿಂದ ಅಸಹನೆಯುಂಟಾಗಿ ಆಗುವ ದುಃಖವು ತಾಪದುಃಖವು. ಸುಖೋಪಭೋಗಕಾಲದಲ್ಲಿ ಉಂಟಾಗುವ ಸಂಸ್ಕಾರದಿಂದ ಪುನಃ ತತ್ಸ್ಪೃಹಣೆಯಾದಾಗ ಅದನ್ನು ಹೊಂದಲು ಪ್ರಯತ್ನಿಸಿದಾಗ ಕೆಲವು ಸಮಯ ಅದು ಸಿಗದಿರುವಾಗ ಉಂಟಾಗುವ ದುಃಖವು ಸಂಸ್ಕಾರದುಃಖವು ಸಕಲವೂ ತ್ರಿಗುಣಾತ್ಮಕಗಳಾದುದರಿಂದ ಗುಣತ್ರಯಕಾರ್ಯಗಳೂ ಪರಸ್ಪರ ಸಂಸಕ್ತವಾಗಿರುತ್ತವೆ. ಇದರಿಂದ ಸುಖಸಾಧನವೆಂದು ತಿಳಿದ ಪದಾರ್ಥವಲ್ಲಿಯೂ ರಜೋಗುಣಕಾರ್ಯವಾದ ದುಃಖವು ಕೊನೆಯಲ್ಲಿಯಾದರೂ ಇದ್ದೇ ಇರುತ್ತದೆ. ಹೀಗೆ ಚೆನ್ನಾಗಿ ತಿಳಿದಕ್ಲೇಶಾದಿ ವಿವೇಕವುಳ್ಳ ವಿವೇಕಿ ಪುರುಷನಿಗೆ ಸಕಲಭೋಗಸಾಧನವೂ ಪ್ರತಿಕೂಲವೇದ್ಯವೇ ಆಗಿರುತ್ತದೆ. 'ಅನಾತ್ಮನಿ'- ಇತಿ. ವಾಸ್ತವಾಗಿ ಆತ್ಮಭಿನ್ನವಾದ ದೇಹಾದಿಗಳಲ್ಲಿ ಅಜ್ಞಾನಿಗಳಿಗೆ ಆತ್ಮಬುದ್ಧಿ ಇರುತ್ತದೆ. ಇದೇ ಅವಿದ್ಯೆ. ಇದನ್ನೇ 'ಅನಾತ್ಮನಿ ಚ' ಕಾರಿಕೆಯಲ್ಲಿ ಸ್ಪಷ್ಟವಾಗಿ ವಿವರಿಸಿರುತ್ತಾನೆ. ಈ ಅವಿದ್ಯೆಯಿಂದಲೇ ಸಂಸಾರಬಂಧವುಂಟಾಗಿದೆ. ಇಂತಹ ಅವಿದ್ಯಾನಾಶವೇ ಮೋಕ್ಷವಾಗುತ್ತದೆ. ಚತುಷ್ಪದಾ'—ಇತಿ. ಅಸ್ಮಿತಾದಿಭೇದದಿಂದ ನಾಲ್ಕು ರೀತಿಯಾದ ಈ ಅವಿದ್ಯೆಯೇ ಸಂಸಾರಕ್ಕೆ ಮೂಲಕಾರಣವಾಗುತ್ತದೆಂದು ಸೂತ್ರಕಾರರ ಮತ.

ನನ್ವೇತೇಷು ಅವಿದ್ಯಾವಿಶೇಷೇಷು ಕಿಂಚಿದನುಗತಂ ಸಾಮಾನ್ಯಲಕ್ಷಣಂ ವರ್ಣನೀಯಮ್
ಅನ್ಯಥಾ ವಿಶೇಷಸ್ಯಾಸಿದ್ಧೇಃ । ತಥಾ ಚೋಕ್ತಂ ಭಟ್ಟಾಚಾರ್ಯೈಃ—
ಸಾಮಾನ್ಯಲಕ್ಷಣಂ ಮುಕ್ತ್ವಾ ವಿಶೇಷಸ್ಯೈವ ಲಕ್ಷಣಮ್ ।
ನ ಶಕ್ಯಂ ಕೇವಲಂ ವಕ್ತುಮತೋಽಪ್ಯಸ್ಯ ನ ವಾಚ್ಯತಾ ॥ ಇತಿ ॥
ತದಪಿ ನ ವಾಚ್ಯಮ್ । ಅತಸ್ಮಿನ್ ತದ್ಬುದ್ಧಿರಿತಿ ಸಾಮಾನ್ಯಲಕ್ಷಣಾಭಿಧಾನೇನ ದತ್ತೋತ್ತರತ್ವಾತ್ ।

ಸತ್ತ್ವಪುರುಷಯೋರ ಹಮಸ್ಮೀತ್ಯೇಕತಾಭಿಮಾನೋಽಸ್ಮಿತಾ । ತದಪ್ಯುಕ್ತಂ ದೃಗ್ದರ್ಶನ ಶಕ್ತ್ಯೋರೇಕಾತ್ಮತೇವಾಸ್ಮಿತಾ (ಯೋ-ಸು-೨।೬) ಇತಿ । ಸುಖಾಭಿಜ್ಞಸ್ಯ ಸುಖಾನುಸ್ಮೃತಿಪೂರ್ವಕಃ ಸುಖಸಾಧನೇಷು ತೃಷ್ಣಾರೂಪೋ ಗರ್ಧೋ ರಾಗಃ। ದುಃಖಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಿಜ್ಞಸ್ಯ ತದನುಸ್ಮೃತಿಪುರಸ್ಸರಂ ತತ್ಸಾಧನೇಷು ನಿವೃತ್ತಿಃ ದ್ವೇಷಃ । ತದುಕ್ತಂ- ಸುಖಾನುಶಯೀ ರಾಗಃ (ಯೋ-ಸೂ ೨।೭) ದುಃಖಾನುಶಯೀ ದ್ವೇಷಃ (ಯೋ -ಸೂ-೨।೮) ಇತಿ ॥

ಅನುಗತವಾದ ಸಾಮಾನ್ಯಲಕ್ಷಣ ಹೇಳದೇ ವಿಶೇಷ ಹೇಳಿದುದು ಸಂಗತವಾಗುವುದಿಲ್ಲವೆಂದು ಪೂರ್ವಪಕ್ಷ. ಭಟ್ಟಾಚಾರ್ಯರೂ ಹೀಗೆಯೇ ಆಕ್ಷೇಪಿಸಿರುತ್ತಾರೆ. ಆದುದರಿಂದ ಅವಿದ್ಯೆಯನ್ನು ಹೇಳುವುದೇ ಯುಕ್ತವಲ್ಲವೆಂದು ಅವರ ವಾದ. 'ಅತಸ್ಮಿನ್' — ಎಂಬುದು ಅವಿದ್ಯೆಯ ಸಾಮಾನ್ಯಲಕ್ಷಣ. ಇದು ಹಿಂದೆ ಹೇಳಿದೆ. ಅವಿದ್ಯೆಯನ್ನು ತೋರಿಸಿ ಈಗ ಅವಿದ್ಯಾಮೂಲಕವಾದ ಎರಡನೆಯ ಅಸ್ಮಿತಾಕ್ಲೇಶವನ್ನು ನಿರೂಪಿಸುತ್ತಾನೆ. 'ಸತ್ವಪು'—ಇತಿ. ಸತ್ವವೆಂದರೆ ಚಿತ್ತ ಬುದ್ಧಿತತ್ವ (ಅಂತಃಕರಣ). ಬುದ್ಧಿಪುರುಷರು ಒಂದು ಎಂದು ತಿಳಿಯುವುದೇ ಅಸ್ಮಿತಾ. ಇದನ್ನೇ ಸೂತ್ರದಲ್ಲಿ ಹೇಳಿರುತ್ತಾರೆ. 'ದೃಕ್'—ಇತಿ. 'ದೃಕ್ ಚ, ದರ್ಶನಂ ಚ, ದೃಗ್ದರ್ಶನೇ ಏವ ಶಕ್ತೀ, ತಯೋಃ" ದೃಕ್‌ಶಕ್ತಿಯೆಂದರೆ ದೃಷ್ಟೃಪುರುಷ. ದರ್ಶನಶಕ್ತಿಯೆಂದರೆ ಕರಣವಾದ ಬುದ್ಧಿಶಕ್ತಿ. ಆತ್ಮಾನಾತ್ಮರೂಪಗಳಾದ ಇವುಗಳಿಗೆ ಏಕಾಕಾರರೂಪದಿಂದ ಏಕಸ್ವರೂಪವೆಂದು ತಿಳಿಯುವುದೇ ಅಸ್ಮಿತಾಕ್ಲೇಶವಾಗುತ್ತದೆ. ಅನಾತ್ಮವಾದ ಬುದ್ಧಿಯಲ್ಲಿ ಆತ್ಮಬುದ್ಧಿರೂಪವಾದ ಅವಿದ್ಯೆಯಿಂದ ಈ ಅಸ್ಮಿತಾ ಸಂಪಾದಿತವಾಗಿದೆ. ಅವಿದ್ಯಾವಸ್ಥೆಯಿರುವಾಗ ಬುದ್ಧ್ಯಾದಿಗಳಲ್ಲಿ ಸಾಮಾನ್ಯವಾಗಿ ಅಹಂಬುದ್ಧಿ ಇದ್ದರೂ ಅದು ಭೇದಾಽಭೇದ ವಿಷಯಕವಾಗಿರುತ್ತದೆ. ಆಗ ಅತ್ಯಂತಾಭೇದಗ್ರಹಣವಿರುವುದಿಲ್ಲ. ಆಮೇಲೆ ಪುರುಷನಲ್ಲಿ ಬುದ್ಧ್ಯಾದಿಗಳಲ್ಲಿರುವ ಗುಣದೋಷಗಳ ಆರೋಪ ಮೂಲಕವಾಗಿ ಈಶ್ವರನೇ ನಾನು ಅನಾನು ಭೋಗಿಸುವವನು ಎಂದು ಅತ್ಯಂತವಾದ ಏಕತಾಭ್ರಮ ಬರುತ್ತದೆ ಇದೇ ಅಸ್ಮಿತಾ ಏಕತಾಭ್ರಮವುಂಟಾಗದೆ ಅನ್ಯೋನ್ಯದಲ್ಲಿ ಅನ್ಯೋನ್ಯಧರ್ಮಾಧ್ಯಾಸವುಂಟಾಗಿ ಭೋಗ ಬರುವುದಿಲ್ಲ. ಪುರುಷಬುದ್ಧಿಗಳಿಗೆ ಅವಿಭಾಗರೂಪದಿಂದ ಏಕತ್ವಜ್ಞಾನ ಬಂದಮೇಲೆಯೇ ಪರಸ್ಪರಧರ್ಮಾಧ್ಯಾಸವುಂಟಾಗಿ ಭೋಗವು ಸಂಭವಿಸುತ್ತದೆ. ಈ ಅಸ್ಮಿತಾಕ್ಲೇಶ ಮೂಲಕವಾಗಿ ಮೂರನೆಯ ಕ್ಲೇಶವಾದ ರಾಗವನ್ನೂ ತನ್ಮೂಲಕವಾದ ದ್ವೇಷವನ್ನೂ (ನಾಲ್ಕನೆಯ ಕ್ಲೇಶ) ತೋರಿಸುತ್ತಾನೆ. 'ಸುಖಾಭಿಜ್ಞ'—ಇತಿ. ಸುಖವನ್ನನು ಭವಿಸಿದ ಮೇಲೆ ತತ್‌ಸ್ಮೃತಿಯುಂಟಾಗಿ ಅದರ ಸಾಧನಗಳಲ್ಲಿ ತೃಷ್ಣಾರೂಪವಾದ ಅಭಿಲಾಷೆಯೇ ರಾಗವಾಗುತ್ತದೆ. ದುಃಖವನ್ನನುಭವಿಸಿ ಅದರ ಸ್ಮರಣದಿಂದ ತತ್ಸಾಧನಗಳಲ್ಲಿ ನಿವೃತ್ತಿಯೇ ದ್ವೇಷ. ಇದನ್ನೇ ಸೂತ್ರದಲ್ಲಿ ಸುಖಾನುಶಯೀರಾಗವೆಂದು, ದುಃಖಾನುಶಯೀದ್ವೇಷವೆಂದು ತಿಳಿಸಿರುತ್ತಾನೆ. ಅನುಶಯೀಪದದ ಸಾಧುತ್ವವನ್ನು ಪ್ರಸಂಗಾನುಸಾರವಾಗಿ ಮುಂದೆ ತಿಳಿಸುತ್ತಾನೆ. 'ಕಿಮ್'—ಇತಿ.

ಕಿಮತ್ರಾನುಶಯಿಶಬ್ದೇ ತಾಚ್ಛೀಲ್ಯಾರ್ಥೇ ಣಿನಿರಿನಿರ್ವಾ ಮತ್ವರ್ಥೀಯೋಽಭಿಮತಃ । ನಾದ್ಯಃ । ಸುಪ್ಯಜಾತೌ ಣಿನಿಸ್ತಾಚ್ಛೀಲ್ಯೇ (ಪಾ-ಸೂ ೩-೨-೭೮) ಇತ್ಯತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಪೀತಿ ವರ್ತಮಾನೇ ಪುನಃ ಸುಬ್‌ಗ್ರಹಣಮ್ಯೋಪಸರ್ಗ ನಿವೃತ್ತ್ಯರ್ಥತ್ವೇನ ಸೋಪಸರ್ಗಾದ್ಧಾತೋಃ ಣಿನೇರನುತ್ಪತ್ತೇಃ । ಯಥಾಕಥಂಚಿತ್ತದಂಗೀಕಾರೇಽಪಿ "ಅಚೋಽಞ್ಣಿತಿ" (ಪಾ–ಸೂ–೭–೨–೧೧೫) ಇತಿ ವೃದ್ಧಿಪ್ರಸಕ್ತಾವತಿಶಾಯ್ಯಾದಿ ಪದವದನುಶಾಯಿಪದಸ್ಯ ಪ್ರಯೋಗಪ್ರಸಂಗಾತ್ । ನ ದ್ವಿತೀಯಃ ।

ಏಕಾಕ್ಷರಾತ್ ಕೃತೋ ಜಾತೇಃ ಸಪ್ತಮ್ಯಾಂಚ ನ ತೌ ಸ್ಮೃತೌ ॥

ಇತಿ ತತ್‌ಪ್ರತಿಷೇಧಾತ್ ! ಅತ್ರ ಚಾನುಶಯಶಬ್ದಸ್ಯಾಜಂತತ್ವೇನ ಕೃದಂತತ್ವಾತ್ ।ತಸ್ಮಾದನುಶಯಿಶಬ್ದೋ ದುರುಪಪಾದ ಇತಿ ಚೇತ್–ನೈತದ್ಭದ್ರಮ್–

ಸುಖಂ ಅನುಶೇತೇ ತಚ್ಛೀಲಃ ಸುಖಾನುಶಯೀ. ಸುಖ ಉಪಪದವಾಗಿರುವಾಗ ಅನುಉಪಸರ್ಗಪೂರ್ವದಲ್ಲಿರುವ ಶೀಧಾತುವಿಗೆ ತಾಚ್ಛೀಲ್ಯಾರ್ಥದಲ್ಲಿ ಣಿನಿಪ್ರತ್ಯಯು ಬಂದಿದೆಯೇ ? ಅಥವಾ ಸುಖಸ್ಯ ಅನುಶಯಃ (ಸಂಬಂಧವಿಶೇಷಃ). ಸುಖಾನುಶಯಃ ಅಸ್ಯ ಅಸ್ತಿ ಇತಿ ಸುಖಾನುಶಯೀ. ಮತ್ವರ್ಥದಲ್ಲಿ (ಅದು ಇಲ್ಲಿ ಹೀಗೆ ಇದೆ) ಸುಖಾನು ಶಯಪದದಮೇಲೆ "ಅತ ಇನಿಠನೌ" ಸೂತ್ರದಿಂದ ಇನಿಪ್ರತ್ಯಯು ಬಂದಿದೆಯೇ ? ಹೀಗೆ ೨ ವಿಕಲ್ಪಬಂದಾಗ ಣಿನಿ ಎಂದು ಹೇಳಲು ಸಾಧ್ಯವಿಲ್ಲ. 'ಸುಪ್ಯಜಾತೌ ಣಿನಿಸ್ತಾಚ್ಛೀಲ್ಯೇ—' ಸೂತ್ರಾರ್ಥ. ಜಾತಿಭಿನ್ನವಾಚಕಸುಬಂತವು ಉಪಪದ ವಾಗಿರುವಾಗ ತಾಚ್ಛೀಲ್ಯಾರ್ಥ ದ್ಯೋತ್ಯ (ತೋರುವುದು) ವಾಗುವಾಗ ಧಾತುವಿಗೆ ಕರ್ತ್ರರ್ಥದಲ್ಲಿ ಣಿನಿ ಪ್ರತ್ಯಯು ಬರುತ್ತದೆ. ಉಷ್ಣಭೋಜೀ. ಉಷ್ಣಭೋಜನಶೀಲ ನೆಂದರ್ಥ. ಯಾವಾಗಲಾದರೂ ಒಂದು ಬಾರಿ ಉಷ್ಣವನ್ನು ತಿಂದರೆ ಆಗ ತಾಚ್ಛೀಲ್ಯ ತೋರದಿರುವುದರಿಂದ ಬರುವುದಿಲ್ಲ. ಇಲ್ಲಿ 'ಸುಪಿಸ್ಥಃ' ಸೂತ್ರದಿಂದ 'ಸುಪಿ' ಪದವು ಅನುವೃತ್ತವಾಗುತ್ತಿರುವಾಗ ಪುನಃ ಈ ಸೊತ್ರದಲ್ಲಿ ಸುಪಿ ಎಂದುದರಿಂದ ಪೂರ್ವದ ಸುಪಿ ಪದವು 'ಸತ್ಸೂದ್ವಿಷ'—ಸೂತ್ರದಲ್ಲಿ ಉಪಸರ್ಗಸಂಬದ್ಧವಾದುದರಿಂದ ಇಲ್ಲಿ ಉಪಸರ್ಗ ಭಿನ್ನವಾದ ಸುಬಂತವುಉಪಪದದಲ್ಲಿರುವಾಗ ಮಾತ್ರ ಬರುತ್ತದೆಂದು ಹೇಳಲು ಪುನಃ ಸುಪಿ ಎಂದು ಹೇಳಿದೆ. ಆಗ ಅನು ಉಪಸರ್ಗ ಇಲ್ಲಿರುವುದರಿಂದ ಣಿನಿ ಬರಲಾರದು. ಆದರೆ ಭಾಷ್ಯಕಾರರು ಸುಪನುವೃತ್ತಿಯಿಂದಲೇ ಬರುವಾಗ ಪುನಃ ಇಲ್ಲಿ 'ಸುಪಿ' ಎಂದು ದೇಕೆ ? ಎಂದು ಆಶಂಕಿಸಿ ಅಲ್ಲಿ ಉಪಸರ್ಗಭಿನ್ನವಾದ ಸುಬಂತ ಎಂದರ್ಥ ಹೇಳಿರುವುದ ರಿಂದ ಇಲ್ಲಿ ಉಪಸರ್ಗ ತದ್ಭಿನ್ನಸುಬಂತಗಳು ಉಪಪದವಾಗಿರುವಾಗ ಎಂದು ವಿಶೇಷಾರ್ಥ ಹೇಳಲು ಪುನಃ ಹೇಳಿದೆ ಎಂದು ಸಮಾಧಾನ ಹೇಳಿರುತ್ತಾರೆ. ಆದುದರಿಂದ ಇತರ ಅನುಪಪತ್ತಿ ತೋರಿಸುತ್ತಾನೆ.

'ಯಥಾಕಥಂಚಿತ್'—ಇತಿ. ಉಪಸರ್ಗ ಇರುವಾಗಲೂ ಣಿನಿಬಂದ ಪ್ರಯೋಗಗಳು ಕಾವ್ಯದಲ್ಲಿ ಬಹಳವಾಗಿವೆ. ಅನುಯಾಯಿವರ್ಗಃ (ರಘು ೨।೪) ಪ್ರಭವೋನುಜೀವಿಭಿಃ (ಕಿರಾ೧।೪). ವಿಸಾರಿ ಸರ್ವತಃ (ಮಾಘ ೧।೨). ಹೇಗೋಣಿನಿ ಬರುತ್ತದೆಂದರೂ ಅಲ್ಲಿ ಣಕಾರ ಇತ್ತಾದುದರಿಂದ, ಣಕಾರೇತ್ಸಂಜ್ಞಕಪ್ರತ್ಯಯಪರದಲ್ಲಿರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗ 'ಅಚೋಽಞ್ಣಿತಿ' ಸೂತ್ರದಿಂದ ವೃದ್ಧಿಪ್ರಾಪ್ತವಾಗಿ ಅತಿಶಾಯೀ ಇತ್ಯಾದಿಗಳಂತೆ ಅನುಶಾಯೀ ಎಂದಾಗಬೇಕಾಗುತ್ತದೆ. ಮತ್ವರ್ಥೀಯ ಇನಿಪ್ರತ್ಯಯವೂ ಬರಲಾರದು. (೨ನೇಪಕ್ಷ) ಅದಕ್ಕೆ 'ಏಕಾಕ್ಷರಾತ್'—ಎಂಬ ನಿಷೇಧವಿರುತ್ತದೆ. ಹ್ರಸ್ವಾಕಾರಾಂತ ಪ್ರಾತಿಪದಿಕದಮೇಲೆ ಮತ್ವರ್ಥದಲ್ಲಿ ಇನಿ, ಠನ್ ಪ್ರತ್ಯಯಗಳು ಬರುತ್ತವೆಯೆಂದು 'ಅತ ಇನಿ'—ಸೂತ್ರ ಹೇಳಿದರೂ ಆಪ್ರಾತಿಪದಿಕವು ಏಕಾಕ್ಷರರೂಪವಾಗಿದ್ದರೆ, ಕೃದಂತವಾಗಿದ್ದರೆ, ಜಾತಿವಾಚಕವಾಗಿದ್ದರೆ ಆಗ ಬರುವುದಿಲ್ಲವೆಂದು ನಿಷೇಧಹೇಳಿದೆ. ಸ್ವಂ ಅಸ್ಯಾಸ್ತೀತಿ ಸ್ವವಾನ್. ಏಕಾಕ್ಷರವಾದುದರಿಂದ ಇನಿಬಾರದೆ ಮತುಪ್ ಬಂದಿದೆ. ಹೀಗೆಯೇ ಕಾರಕವಾನ್, ಘಟವಾನ್ ಎಂಬಲ್ಲಿ ಕ್ರಮವಾಗಿ ನಿಷೇಧ ತಿಳಿಯಬೇಕು. ಸಪ್ತಮ್ಯರ್ಥದಲ್ಲಿಯೂ ಬರುವುದಿಲ್ಲ. ದಂಡಃ ಅಸ್ಯಾಂ ಅಸ್ತೀತಿ ದಂಡವತೀ ಶಾಲಾ ಇತ್ಯಾದಿ. ಪ್ರಕೃತ ಅನುಶಯಶಬ್ದವು ಕೃದಂತವಾದುದರಿಂದ ಆ ವಚನದಿಂದ ನಿಷೇಧಬರುತ್ತದೆ. ಅನುಪೂರ್ವವಾಗಿರುವಾಗ ಶೀಧಾತುವಿಗೆ 'ಏರಚ್' ಸೂತ್ರದಿಂದ ಭಾವಾರ್ಥದಲ್ಲಿ ಅಚ್ ಪ್ರತ್ಯಯ ಬಂದು ಧಾತುವಿನ ಇಕಾರಕ್ಕೆ ಗುಣ ಆಯಾದೇಶಗಳು ಬಂದು 'ಅನುಶಯ' ಎಂಬ ಕೃದಂತಪದವಾಗಿದೆ. ನಿಷೇಧವಿರುವುದರಿಂದ ಮತುಪೇ ಬಂದು ಅನುಶಯವಾನ್ ಎಂದಾಗಬೇಕಾಗುತ್ತದೆ. ಹೀಗೆ ಆಶಂಕೆ ಬಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಭಾವಾನವ'—ಇತಿ. ಅಭಿಪ್ರಾಯ ತಿಳಿಯದೇ ಹೀಗೆ ಆಶಂಕಿಸಿದರೆ ಎಂದು ತಾತ್ಪರ್ಯ

ಭಾವಾನವಭೋದಾತ್ । ಪ್ರಾಯಿಕಾಭಿಪ್ರಾಯಮಿದಂ ವಚನಮ್ । ಅತ ಏವೋಕ್ತಂ ವೃತ್ತಿಕಾರೇಣ- ಇತಿಕರಣೋ ವಿವಕ್ಷಾರ್ಥಃ ಸರ್ವತ್ರಾಭಿಸಂಬಧ್ಯತೇ ಇತಿ । ತೇನಕ್ವಚಿದ್ಭವತಿ ಕಾರ್ಯೀ, ಕಾರ್ಯಿಕಃ, ತಂಡುಲೀ, ತಂಡುಲಿಕ ಇತಿ । ತಥಾ ಚ ಕೃದಂತಾತ್ ಜಾತೇಶ್ಚ ಪ್ರತಿಷೇಧಸ್ಯ ಪ್ರಾಯಕತ್ವಮ್ । ಅನುಶಯಶಬ್ದಸ್ಯ ಕೃದಂತತಯಾ ಇನೇರುಪಪತ್ತಿರಿತಿ ಸಿದ್ಧಮ್ । ಪೂರ್ವಜನ್ಮಾನುಭೂತಮರಣ ದುಃಖಾನುಭವ ವಾಸನಾಬಲಾತ್ ಸರ್ವಸ್ಯ ಪ್ರಾಣಭೃನ್ಮಾತ್ರಸ್ಯಾಕೃಮೇರಾಚ ಮಿದುಷಃ ಸಂಜಾಯಮಾನಃ ಶರೀರವಿಷಯಾದೇರ್ಮಮ ವಿಯೋಗೋ ಮಾಭೂದಿತಿ ಪ್ರತ್ಯಹಂ ನಿಮಿತ್ತಂ ವಿನಾ ಪ್ರವರ್ತಮಾನೋ ಭಯರೂಪೋಽಭಿನಿವೇಶಃ ಪಂಚಮಃ ಕ್ಲೇಶಃ । ಮಾ ನ ಭೂವಂ ಹಿ ಭೂಯಾಸಮಿತಿ ಪ್ರಾರ್ಥನಾಯಾಃ ಪ್ರತ್ಯಾತ್ಮಮನುಭವಸಿದ್ಧತ್ವಾತ್। ತದಾಹ—ಸ್ವರಸವಾಹೇ ವಿದುಷೋಽಪಿ ತಥಾರೂಢೋಽಭಿನಿವೇಶಃ (ಪಾ-ಯೋ-ಸೂ-೨೯) ಇತಿ। ತೇ ಚಾವಿದ್ಯಾದಯಃ ಪಂಚ ಸಾಂಸಾರಿಕ ವಿವಿಧದುಃಖೋಪಹಾರಹೇತುತ್ವೇನ ಪುರುಷಂ ಕ್ಲಿಶ್ನಂತೀತಿ ಕ್ಲೇಶಾಃ ಪ್ರಸಿದ್ಧಾಃ ॥

'ಏಕಾಕ್ಷರಾತ್' —ಎಂಬ ವಚನವು ಸಾರ್ವತ್ರಿಕವಲ್ಲ. ಪ್ರಾಯಿಕ—ಹೆಚ್ಚು ಕಡೆಯಲ್ಲಿ ಬರುವುದು. 'ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್' ಸೂತ್ರದಲ್ಲಿ ಪಾಣಿನಿಯು ಇತಿ ಎಂದು ಹೇಳಿರುತ್ತಾನೆ. ಆ ಇತಿ ಶಬ್ದವು ಲೌಕಿಕವಿವಕ್ಷೆಯನ್ನನುಸರಿಸಬೇಕೆಂದು ತಿಳಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ. ಲೌಕಿಕಪ್ರಯೋಗಾನುಸಾರವಾಗಿ ಪ್ರತ್ಯಯವನ್ನು ವಿಧಿಸಬೇಕೆಂದರ್ಥ. ಅದು ಉತ್ತರಸೂತ್ರಗಳಲ್ಲಿಯೂ ಸಂಬದ್ಧವಾಗುವುದರಿಂದ ಇನಿ, ಠನ್ ಪ್ರತ್ಯಯಗಳೂ ಲೌಕಿಕ ಪ್ರಯೋಗಾನುಸಾರವಾಗಿ ಮಾಡಬೇಕು ಎಂದು ತಿಳಿಸುವುದರಿಂದ ಸ್ವವಾನ್ ಇತ್ಯಾದಿಗಳಲ್ಲಿ ಪ್ರವರ್ತಿಸುವುದಿಲ್ಲ. ತನ್ಮೂಲಕವಾಗಿ ಏಕಾಕ್ಷರಾತ್'—ವಚನ ಪ್ರವೃತ್ತವಾಗಿದೆ. ಅದು ಅಪೂರ್ವವಚನವಲ್ಲ. ಲೋಕದಲ್ಲಿ ಕೆಲವು ಕಡೆ ಕೃದಂತದ ಮೇಲೆಯೂ ಇನಿ ಠನ್‌ಗಳು ದೃಷ್ಟವಾಗಿವೆಯೆಂದು ತೋರಿಸುತ್ತಾನೆ. 'ಕಾರ್ಯೀ'—ಇತ್ಯಾದಿ. ಜಾತಿವಾಚಕಕ್ಕೆ ಉದಾಹರಣೆ. ತಂಡಲೀ, ತಂಡುಲಿಕಃ। ಅದರಂತೆ ಇಲ್ಲಿ ಅನುಶಯ ಶಬ್ದವು ಕೃದಂತವಾದರೂ ಅದರಮೇಲೆ ಮತ್ವರ್ಥದಲ್ಲಿ ಇನಿ ಬರುತ್ತದೆಯೆಂದು ತಿಳಿಯಬೇಕು. ಅಭಿನಿವೇಶವೆಂಬ ಐದನೆಯ ಕ್ಲೇಶವನ್ನು ತೋರಿಸುತ್ತಾನೆ. 'ಪೂರ್ವಜನ್ಮ' ಇತಿ. ಪೂರ್ವ ಜನ್ಮದಲ್ಲಿ ಅನುಭವಿಸಿದ ಮರಣರೂಪದುಃಖಾನುಭವದ ವಾಸನೆಯಿಂದ ಪ್ರಾಣಧರಿಸಿದ ಸಕಲ ಪ್ರಾಣಿಗಳಿಗೂ ಕೃಮಿಯಿಂದ ಆರಂಭಿಸಿ ವಿದ್ವಾಂಸರವರೆಗೆ ಉಂಟಾಗುವ "ಶರೀರವಿಷಯಾದಿಗಳಿಂದ ನನಗೆ ಎಂದೂ ವಿಯೋಗವಾಗದಿರಲಿ" ಎಂದು ಪ್ರತಿನಿತ್ಯವೂ ಕಾರಣವಿಲ್ಲದೆ ಆಗುವಭಯರೂಪವಾದ ಅಭಿನಿವೇಶವೇ ಐದನೆಯ ಕ್ಲೇಶ.

'ಮಾನಭೂ—' ಇತಿ. ನಾನು ಎಂದೂ ಇಲ್ಲದಂತಾಗಬಾರದು, ಯಾವಾಗಲೂ ಇರಬೇಕು. ಎಂಬ ಪ್ರಾರ್ಥನೆಯು ಪ್ರಾಣಿಮಾತ್ರಕ್ಕೆ ಅನುಭವಸಿದ್ಧವಾಗಿದೆ. ಇದನ್ನೇ ಸೂತ್ರದಲ್ಲಿ ತೋರಿಸುತ್ತಾನೆ. 'ಸ್ವರಸವಾಹೀ—' ಇತಿ. ಸ್ವಸ್ಯ ರಸೇನ—ಸಂಸ್ಕಾರಮಾತ್ರೇಣ ಮಹತೀತಿ ಸ್ವರಸವಾಹೀ. ಸ್ವಾಭಾವಿಕವೆಂದರ್ಥ. ಇಂತಹ ಅಭಿನಿವೇಶವು ವಿದ್ವಾಂಸನಿಗೂ ಹೊಸದಲ್ಲ. ನಾನು ಎಂದೂ ನಶಿಸಬಾರದು, ಶಾಶ್ವತವಾಗಿ ಇರಬೇಕು—ಎಂಬ ಭಯವಿಶೇಷವು ಹೇಗೆ ಅಜ್ಞನಿಗೆ ಇರುತ್ತದೆಯೋ ಹಾಗೆ ವಿದ್ವಾಂಸನಿಗೂ ಇರುತ್ತದೆ. ಇದೇ ಐದನೆಯ ಅಭಿನಿವೇಶವೆಂದು ಸೂತ್ರಾರ್ಥ. ಉಪಹಾರ—ಪ್ರಾಪ್ತಿ. ಈ ಅವಿದ್ಯಾದಿ ಐದು ಕ್ಲೇಶಗಳು ಸಂಸಾರದಲ್ಲಿ ಉಂಟಾಗುವ ನಾನಾ ವಿಧ ದುಃಖಪ್ರಾಪ್ತಿಗೆ ಕಾರಣಗಳಾಗುವುದರಿಂದ ಪುರುಷನನ್ನು ಪೀಡಿಸುವುದರಿಂದ ಕ್ಲೇಶವೆಂಬ ಅನ್ವರ್ಥವನ್ನು ಹೊಂದಿರುತ್ತವೆ.

ಕರ್ಮಾಣಿ ವಿಹಿತ ಪ್ರತಿಷಿದ್ಧರೂಪಾಣಿ ಜ್ಯೋತಿಷ್ಟೋಮ ಬ್ರಹ್ಮಹತ್ಯಾದೀನಿ। ವಿಪಾಕಾಃ ಕರ್ಮಫಲಾನಿ ಜಾತ್ಯಾಯುರ್ಭೋಗಾಃ। ಆ ಫಲವಿಪಾಕಾಚ್ಚಿತ್ತಭೂಮೌ ಶೇರತ ಇತ್ಯಾಶಯಾ ಧರ್ಮಾಧರ್ಮ ಸಂಸ್ಕಾರಾಃ। ತತ್ಪರಿಪಂಥಿ ಚಿತ್ತವೃತ್ತಿ ನಿರೋಧೋ ಯೋಗಃ। ನಿರೋಧೋ ನಾಭಾವಮಾತ್ರಮಭಿಮತಮ್। ತಸ್ಯ ತುಚ್ಛತ್ವೇನ ಭಾವರೂಪಸಾಕ್ಷಾತ್ಕಾರ ಜನನಕ್ಷಮತ್ವಾಸಂಭವಾತ್। ಕಿಂ ತು ತದಾಶ್ರಯೋ ಮಧುಮತೀಮಧುರಪ್ರತೀಕಾವಿಶೋಕಾಸಂಸ್ಕಾರಶೇಷಾವ್ಯಪದೇಶ್ಯ ಶ್ಚಿತ್ತಸ್ಯಾವಸ್ಥಾವಿಶೇಷಃ। ನಿರುಧ್ಯಂತೇಽಸ್ಮಿನ್ ಪ್ರಮಾಣಾದ್ಯಾಶ್ಚಿತ್ತವೃತ್ತಯ ಇತಿ ವ್ಯುತ್ಪತ್ತೇರುಪಪತ್ತೇಃ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಕ್ಲೇಶಕರ್ಮವಿಪಾಕಾಶಯಸರಿಸಂಥಿಚಿತ್ತವೃತ್ತಿನಿರೋಧೋಯೋಗಃ' ಎಂದು ಹಿಂದೆ ಹೇಳಿದೆ. ಅಲ್ಲಿ ಸೇರಿರುವ ಮೊದಲನೆಯ ಕ್ಲೇಶವನ್ನು ವಿವರಿಸಿ ಈಗ ಕರ್ಮವನ್ನು ನಿರೂಪಿಸುತ್ತಾನೆ. 'ಕರ್ಮಾಣಿ—' ಇತಿ. ಜ್ಯೋತಿಷ್ಟೋಮಾದಿಗಳು ವಿಹಿತಕರ್ಮಗಳು. ಬ್ರಹ್ಮಹತ್ಯಾದಿಗಳು ನಿಷಿದ್ಧಕರ್ಮಗಳು ವಿಪಾಕವೆಂದರೆ ಕರ್ಮಫಲ. ವಿಪಚ್ಯತೇ ಸಾಧ್ಯತೇ ಕರ್ಮಭಿರಿತಿವಿಪಾಕಃ ಇದು ಜಾತಿ, ಆಯುಸ್ಸು ಭೋಗವೆಂದು ಮೂರುವಿಧವಾಗಿದೆ. ಜಾತಿಯೆಂದರೆ ಜನ್ಮ. ಆಯುಸ್ಸೆಂದರೆ ಜೀವನ ಕಾಲ. ಭೋಗವೆಂದರೆ ಸುಖದುಃಖಮೋಹಾತ್ಮಕಶಬ್ದಾದಿವೃತ್ತಿ. ಇವುಗಳಲ್ಲಿ ಭೋಗವೆಂಬುದೇ ಮುಖ್ಯ ಕರ್ಮಫಲವಾಗುತ್ತದೆ. ಇದನ್ನನುಸರಿಸಿ ಜನ್ಮಾಯುಷ್ಯ ಇದ್ದೇ ಇರುತ್ತವೆ. ಆಶಯವೆಂದರೆ ಧರ್ಮಾಧರ್ಮಸಂಸ್ಕಾರಗಳು. ಅದಕ್ಕೆ ವ್ಯುತ್ಪತ್ತಿ ತೋರಿಸುತ್ತಾನೆ. 'ಆಫಲ' ಇತಿ. ಫಲವಿಪಾಕದವರೆಗೆ ಚಿತ್ತ ಭೂಮಿಯಲ್ಲಿ ನೆಲೆಯಾಗಿರುವುದು ಆಶಯ.

'ತತ್ಪರಿಪಂಥಿ'– ಇತಿ. ಈ ಕ್ಲೇಶಾದಿನಾಲ್ಕನ್ನು ತಡೆಯುವ ಚಿತ್ತವೃತ್ತಿನಿರೋಧವೇ ಯೋಗವೆಂದರ್ಥ. ತುಚ್ಛತ್ವಂ—ನಿಃಸ್ವರೂಪತ್ವಮ್. ವೃತ್ತಿನಿರೋಧಪದಕ್ಕೆ ವೃತ್ತ್ಯಭಾವವೆಂಬ ಅರ್ಥವನ್ನು ಹೇಳುವುದಾದರೆ ಅದಕ್ಕೆ ಯಾವಸ್ವರೂಪವೂ ಇಲ್ಲದಿರುವುದರಿಂದ ಆದರಿಂದ ಧ್ಯೇಯಸಾಕ್ಷಾತ್ಕಾರವಾಗಲಾರದು. ಎಲ್ಲಿಯೂ ಅಭಾವದಿಂದ ಭಾವೋತ್ಪತ್ತಿಯಾಗುವುದಿಲ್ಲ. ಸ್ವರೂಪವಿಲ್ಲದ ಗಗನಕುಸುಮದಿಂದ ಯಾವ ಕಾರ್ಯವೂ ಹುಟ್ಟುವುದಿಲ್ಲ. ಆದುದರಿಂದ ವೃತ್ತಿನಿರೋಧಕ್ಕೆ ಆಶ್ರಯವಾದ ಹಿಂದೆ ಹೇಳಿದ ಸವಿತರ್ಕಾದಿ ಸಂಪ್ರಜ್ಞಾತಸಮಾಧಿಯ ಅವಾಂತರಭೇದಚತುಷ್ಟಯವನ್ನು ತೆಗೆದುಗೊಳ್ಳಬೇಕು. ಅಲ್ಲಿ ಸವಿತರ್ಕಸಮಾಧಿಯಲ್ಲಾಗುವ ಚಿತ್ತಾವಸ್ಥೆಗೆ ಮಧುಮತೀ ಎಂದೂ, ಸವಿಚಾರದಲ್ಲಿ ಮಧುಪ್ರತೀಕವೆಂದೂ, ಸಾನಂದದಲ್ಲಿ ವಿಶೋಕವೆಂದೂ, ಸಾಸ್ಮಿತದಲ್ಲಿ ಸಂಸ್ಕಾರಶೇಷವೆಂದೂ ಹೆಸರು. ಚಿತ್ತಾವಸ್ಥೆಗಳು ಭಾವರೂಪಗಳಾಗುವುದರಿಂದ ಅವುಗಳಿಂದ ಧ್ಯೇಯಸಾಕ್ಷಾತ್ಕಾರವಾಗಲು ಯಾವ ತೊಂದರೆಯೂ ಇಲ್ಲ. ಈ ನಾಲ್ಕು ಅವಸ್ಥೆಗಳು ನಿರೋಧಶಬ್ದವಾಚ್ಯವಾಗುತ್ತವೆಂಬುದನ್ನು ತೋರಿಸುತ್ತಾನೆ. 'ನಿರುಧ್ಯಂತೇ'—ಇತಿ. ನಿ ಉಪಸರ್ಗಪೂರ್ವಕವಾದ ರುಧ ಧಾತುವಿಗೆ ಅಧಿಕರಣಾರ್ಥದಲ್ಲಿ ಘಞ್‌ಪ್ರತ್ಯಯ ಬಂದು ನಿರೋಧ ಎಂದಾಗಿದೆ. ಈ ಅವಸ್ಥೆಯಲ್ಲಿ ಪ್ರಾಣಾದಿ ಚಿತ್ತವೃತ್ತಿಗಳು ತಡೆಯಲ್ಪಡುತ್ತವೆಯೆಂದರ್ಥ.

ಅಭ್ಯಾಸವೈರಾಗ್ಯಾಭ್ಯಾಂ ವೃತ್ತಿನಿರೋಧಃ । ತತ್ರ ಸ್ಥಿತೌ ಯತ್ನೋಽಭ್ಯಾಸಃ । (ಪಾ- ಯೋ-ಸೂ. ೧–೧೨–೧೩) । ವೃತ್ತಿರಹಿತಸ್ಯ ಚಿತ್ತಸ್ಯ ಸ್ವರೂಪನಿಷ್ಠಃ ಪ್ರಶಾಂತವಾಹಿತಾರೂಪಃ ಪರಿಣಾಮವಿಶೇಷಃ ಸ್ಥಿತಿಃ। ತಂ ನಿಮಿತ್ತೀಕೃತ್ಯ ಯತ್ನಃ ಪುನಃ ಪುನಃ ತಥಾತ್ವೇನ ಚೇತಸಿ ನಿವೇಶನಮಭ್ಯಾಸಃ । 'ಚರ್ಮಣಿ ದ್ವೀಪಿನಂ ಹಂತೀ' ತಿವತ್ ನಿಮಿತ್ತಾರ್ಥೇ ಇಯಂ ಸಪ್ತಮೀತ್ಯುಕ್ತಂ ಭವತಿ । ದೃಷ್ಟಾನುಶ್ರವಿಕವಿಷಯತೃಷ್ಣಸ್ಯ ವಶೀಕಾರಸಂಜ್ಞಾ ವೈರಾಗ್ಯಮ್ (ಸೂ–೧೧೫), ಐಹಿಕಪಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ರಿಕವಿಷಯಾದೌ ದೋಷದರ್ಶನಾನ್ನಿರಭಿಲಾಷಸ್ಯ ಮನ್ಯೈತೇ ವಿಷಯಾ ವಶ್ಯಾ ನಾಹಮೇತೇಷಾಂ ವಶ್ಯ ಇತಿ ವಿಮರ್ಶೋ ವೈರಾಗ್ಯಮಿತ್ಯುಕ್ತಂ ಭವತಿ.

ಚಿತ್ತವೃತ್ತಿನಿರೋಧೋಪಾಯವನ್ನು ತಿಳಿಸುತ್ತಾನೆ 'ಅಭ್ಯಾಸ—' ಇತಿ. ಅಭ್ಯಾಸವೈರಾಗ್ಯಗಳೆರಡರಿಂದಲೂ ಚಿತ್ತವೃತ್ತಿನಿರೋಧವಾಗುತ್ತದೆ. ಚಿತ್ತವೆಂಬ ನದಿಯ ಪ್ರವಾಹವು ಯಾವಾಗಲೂ ಸ್ವಭಾವದಿಂದ ವಿಷಯಮಾರ್ಗಗಾಮಿಯಾಗುತ್ತದೆ. ವಿಷಯದೋಷದರ್ಶನದಿಂದ ಉಂಟಾದ ವೈರಾಗ್ಯದಿಂದ ಇದನ್ನು ತಡೆಯುವುದು ಅಸಾಧ್ಯ. ತಡೆದರೇನೇ ಇದು ವಿವೇಕದರ್ಶನಾಭ್ಯಾಸದಿಂದ ವಿವೇಕಮಾರ್ಗಗಾಮಿಯಾಗುತ್ತದೆ. ಅದರಿಂದ ಧ್ಯೇಯಾಕಾರವೃತ್ತಿ ಪ್ರವಾಹಕ್ಕೆ ಬಲವೂ, ದಾರ್ಢ್ಯವೂ ಉಂಟಾಗುವುದರಿಂದ ಅಭ್ಯಾಸ ವೈರಾಗ್ಯೋಭಯಾಧೀನವಾಗಿಯೇ ಚಿತ್ತನಿರೋಧವಾಗುತ್ತದೆ. ಅಭ್ಯಾಸ ನಿರೂಪಣಸೂತ್ರ 'ತತ್ರ'— ಇತಿ. ತತ್ರ—ಅಭ್ಯಾಸವೈರಾಗ್ಯಗಳ ಮಧ್ಯದಲ್ಲಿ ವೃತ್ತಿರಹಿತವಾದ ಚಿತ್ತವೆಂದರೆ ರಾಜಸತಾಮಸವೃತ್ತಿರಹಿತವಾದ ಚಿತ್ತವೆಂದರ್ಥ. ಇಂತಹ ಚಿತ್ತದ ಸ್ವರೂಪದಲ್ಲಿರುವ ಪ್ರಶಾಂತವಾಹಿತಾರೂಪವಾದ ಪರಿಣಾಮ ವಿಶೇಷವೇ ಸ್ಥಿತಿ. ಈ ಪರಿಣಾಮವಿಶೇಷವನ್ನು ನಿಮಿತ್ತೀಕರಿಸಿ ಆ ರೀತಿಯಾದ ಸ್ಥಿತಿಯನ್ನು ಹೊಂದಲು ಮಾಡುವ ಯತ್ನವೇ ಅಭ್ಯಾಸ. ಸೂತ್ರದಲ್ಲಿರುವ ಸ್ಥಿತೌ ಎಂಬ ಸಪ್ತಮ್ಯಂತಕ್ಕೆ ಸಾಮಂಜಸ್ಯವನ್ನು ತೋರಿಸುತ್ತಾನೆ. "ಚರ್ಮಣಿ"— ಇತಿ. ಚರ್ಮನಿಮಿತ್ತವಾಗಿ, ಚರ್ಮಪ್ರಾಪ್ತಿಗೋಸ್ಕರ ಹುಲಿಯನ್ನು ಕೊಲ್ಲುತ್ತಾನೆಂದು ವಾಕ್ಯಾರ್ಥ. ಹಾಗೆ ಇಲ್ಲಿಯೂ ನಿಮಿತ್ತಾರ್ಥದಲ್ಲಿ ಸಪ್ತಮೀ ಬಂದಿದೆ.

"ದೃಷ್ಟ"— ಇತಿ. ಈ ಲೋಕದಲ್ಲಿ ಹೊಂದುವ ಸ್ತ್ರೀ ಅನ್ನಪಾನಾದಿ ವಿಷಯಗಳೇ ದೃಷ್ಟಗಳು. ಅನುಶ್ರೂಯತೇ ಗುರುಮುಖಾತ್ ಇತಿ — ಅನುಶ್ರವಃ—ವೇದಃ. ತತಆಗತಃ—ಆನುಶ್ರವಿಕಃ. ಆ ವೇದದಿಂದ ತಿಳಿಯಲ್ಪಡುವ ಸ್ವರ್ಗಾದಿವಿಷಯಗಳೇ ಆನುಶ್ರವಿಕಗಳಾಗುತ್ತವೆ. ಈ ಎರಡು ರೀತಿಯಾದ ವಿಷಯಗಳಲ್ಲಿಯೂ ಪರಿಣಾಮವಿರಸತ್ವರೂಪವಾದ ದೋಷದರ್ಶನದಿಂದ ನಿವೃತ್ತಿ ಹೊಂದುವ ಅಭಿಲಾಷೆಯ ಯಾವ ವಶೀಕಾರವಿರುವುದೋ ಅದೇ ವೈರಾಗ್ಯ. 'ಮನ್ಯೈತೇ'— ಇತಿ. ನನಗೆ ಈ ವಿಷಯಗಳು ವಶ್ಯವಾಗಿರುತ್ತವೆ ; ನಾನು ಎಂದೂ ಈ ವಿಷಯಗಳಿಗೆ ವಶ್ಯನಲ್ಲ ಎಂಬ ವಿಚಾರಕ್ಕೆ ವಶೀಕಾರಸಂಜ್ಞಾ ಎಂದು ವ್ಯವಹರಿಸಲ್ಪಡುತ್ತದೆ.

ಸಮಾಧಿಪರಿಪಂಥಿ ಕ್ಲೇಶತನೂಕರಣಾರ್ಥಂ ಸಮಾಧಿಲಾಭಾರ್ಥಂ ಚ ಪ್ರಥಮಂ ಕ್ರಿಯಾಯೋಗವಿಧಾನಪರೇಣ ಯೋಗಿನಾ ಭವಿತವ್ಯಮ್ । ಕ್ರಿಯಾಯೋಗಸಂಪಾದನೇಽಭ್ಯಾಸವೈರಾಗ್ಯಯೋಃ ಸಂಭವಾತ್ । ತದುಕ್ತಂ ಭಗವತಾ—

ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ (೧-೬-೩) ಇತಿ ॥

ಕ್ರಿಯಾಯೋಗಶ್ಚೋಪದಿಷ್ಟಃ । ಪತಂಜಲಿನಾ—ತಪಃ ಸ್ವಾಧ್ಯಾಯೇಶ್ವರಪ್ರಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಾನಾನಿ ಕ್ರಿಯಾಯೋಗಃ । (ಸೂ-೨ । ೨) ತಪಃ ಸ್ವರೂಪಂ ನಿರೂಪಿತಂ ಯಾಜ್ಞ್ಯವಲ್ಕ್ಯೇನ—

ವಿಧಿನೋಕ್ತೇನ ಮಾರ್ಗೇಣ ಕೃಚ್ಛ್ರಚಾಂದ್ರಾಯಣಾದಿಭಿಃ ।
ಶರೀರಶೋಷಣಂ ಪ್ರಾಹುಸ್ತಪಸಾಂ ತಪ ಉತ್ತಮಮ್ ॥ ಇತಿ ॥
ಪ್ರಣವಗಾಯತ್ರೀಪ್ರಭೃತೀನಾಂ ಮಂತ್ರಾಣಾಮಧ್ಯಯನಂ ಸ್ವಾಧ್ಯಾಯಃ ।

ಚಿತ್ತವೃತ್ತಿನಿರೋಧೋಪಾಯಗಳಾದ ಅಭ್ಯಾಸ ವೈರಾಗ್ಯಗಳನ್ನು ತೋರಿಸಿ ಆ ಅಭ್ಯಾಸವೈರಾಗ್ಯಗಳ ಸಾಧನೆಗೋಸ್ಕರ ಕ್ರಿಯೋಯೋಗವನ್ನು ಹೇಳುತ್ತಾನೆ. 'ಸಮಾಧಿ' —ಇತಿ. ಚಿತ್ತವೃತ್ತಿನಿರೋಧವೇ ಸಮಾಧಿ. ಇದಕ್ಕೆ ಶತ್ರುಗಳಾದ ಯಾವ ಅವಿದ್ಯಾದಿ ಕ್ಲೇಶಗಳಿವೆಯೋ ಅವುಗಳ ತನೂಕರಣವೆಂದರೆ ಸ್ವಕಾರ್ಯಕರಣಪ್ರತಿಬಂಧ. ಇದಕ್ಕೋಸ್ಕರ ಯೋಗಿಯು ಕ್ರಿಯಾಯೋಗವನ್ನಾಶ್ರಯಿಸಬೇಕೆಂದರ್ಥ. 'ಆರುರು'—ಇತಿ. ಚಿತ್ತ ವೃತ್ತಿನಿರೋಧರೂಪವಾದ ಯೋಗವನ್ನು ಹೊಂದಬೇಕೆಂದು ಬಯಸುವ ಮುನಿಗೆ ಕ್ರಿಯಾಯೋಗ ಕಾರಣವಾಗುತ್ತದೆ. ಮುಂದೆ ಮುನಿಯಾಗುವುದರಿಂದ ಮೊದಲೇ ಮುನಿಶಬ್ದ ಪ್ರಯೋಗಿಸಿದೆ. ಯೋಗಾರೋಹಣ ಸಾಧನವು ಕರ್ಮವಾಗುತ್ತದೆ. ನಿಷ್ಕಾಮ ಕರ್ಮದಿಂದ ಚಿತ್ತಶುದ್ಧಿಯೂ, ಆದರಿಂದ ವೈರಾಗ್ಯವೂ, ಆಮೇಲೆ ವೃತ್ತಿ ನಿರೋಧವೂ ಆಗುತ್ತದೆ. ಯೋಗಾರೂಢನಿಗಾದರೋ ಶಮವೆಂದರೆ ಸರ್ವಕರ್ಮ ಸಂನ್ಯಾಸವೇ ಜ್ಞಾನಪರಿಪಾಕಸಾಧನವಾಗುತ್ತದೆ. ಯೋಗಾರೂಢನ ಲಕ್ಷಣ ಗೀತೆಯಲ್ಲಿ "ಯದಾಹಿ"—ಶ್ಲೋಕದಲ್ಲಿ ಹೇಳಿದೆ. ಯಾವಾಗ ಇಂದ್ರಿಯಾರ್ಥಗಳಾದ ವಿಷಯ ಗಳಲ್ಲಿ, ಕರ್ಮಗಳಲ್ಲಿ ಸ್ವಲ್ಪವೂ ಸಂಬಂಧ ಹೊಂದುವುದಿಲ್ಲವೋ, ಯಾವಾಗ ಸಕಲ ಸಂಕಲ್ಪವನ್ನೂ ತೊರೆದವನಾಗುವನೋ ಆಗ ಯೋಗಾರೂಢನಾಗುತ್ತಾನೆ. "ತಪಃ"— ಸೂತ್ರದಲ್ಲಿ ಕ್ರಿಯಾಯೋಗವು ಉಪದಿಷ್ಟವಾಗಿದೆ. ತಪಸ್ಸು, ಸ್ವಾಧ್ಯಾಯ, ಈಶ್ವರ ಪ್ರಣಿಧಾನ ಇವು ಕ್ರಿಯಾಯೋಗಗಳು ಕ್ರಿಯಾರೂಪವಾದ ಯೋಗವೇ ಕ್ರಿಯಾ ಯೋಗ. ತಪಸ್ಸು ಮುಂತಾದ ಕ್ರಿಯೆಗಳು. ಯೋಗಸಾಧನಗಳಾದುದರಿಂದ ಅಲ್ಲಿ ಯೋಗಶಬ್ದವನ್ನು ಆರೋಪಿಸಿರುತ್ತಾರೆ. ಔಪಚಾರಿಕಪ್ರಯೋಗ. ತಪಃ ಸ್ವರೂಪ ವನ್ನು ಯಾಜ್ಞ್ಯವಲ್ಕ್ಯರು ವಿವರಿಸಿರುತ್ತಾರೆ.

"ವಿಧಿನಾ"—ಇತಿ. ಕೃಚ್ಛ್ರಗಳನ್ನು ನಾನಾರೀತಿಯಾಗಿ ಹೇಳಿರುತ್ತಾರೆ. ಮನು ಸ್ಮೃತಿಯಲ್ಲಿ ೧೨ ದಿನಗಳಲ್ಲಿ ಮಾಡುವ ಪ್ರಾಜಾಪತ್ಯವೆಂಬ ಕೃಚ್ಛ್ರವು ಹೀಗೆ ಹೇಳಿದೆ. ಮೂರು ದಿನ ಬೆಳಿಗ್ಗೆ, ಮೂರುದಿನ ಸಾಯಂಕಾಲ, ಊಟಮಾಡಬೇಕು. ಇನ್ನು ಮೂರುದಿನ ಅಯಾಚಿತವಾಗಿ ಬಂದದನ್ನು ತಿನ್ನಬೇಕು. ಉಳಿದ ಮೂರುದಿನ ಏನೂ ತಿನ್ನದೆ ಉಪವಾಸದಿಂದ ಇರಬೇಕು. ಇದೇ ಪ್ರಾಜಾಪತ್ಯಕೃಚ್ಛ್ರ. ಯವಮಧ್ಯ ಚಾಂದ್ರಾಯಣ, ಪಿಪೀಲಿಕಾಮಧ್ಯಚಾಂದ್ರಾಯಣವೆಂದು ಚಾಂದ್ರಾಯಣವ್ರತ ಎರಡು ವಿಧ. ಶುಕ್ಲಪಕ್ಷದ ಪಾಡ್ಯಮಿಯಲ್ಲಿ ಒಂದು ಮಯೂರಾಂಡದಗಾತ್ರದ ತುತ್ತು, ಎರಡನೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿನ ಎರಡು, ಹೀಗೆ ಹೆಚ್ಚಿಸುತ್ತಾ ಪೂರ್ಣಿಮೆಯಲ್ಲಿ ಹದಿನೈದು ತುತ್ತು ಸೇವಿಸಿ, ಆಮೇಲೆ ಕೃಷ್ಣಪಕ್ಷದಲ್ಲಿ ಒಂದೊಂದೇ ಕಡಿಮೆ ಮಾಡುತ್ತಾ ಸೇವಿಸಿ ಅಮಾವಾಸ್ಯೆ ಉಪವಾಸದಿಂದ ಇರುವುದು ಯವಮಧ್ಯಚಾಂದ್ರಾಯಣ. ಕೃಷ್ಣಪ್ರತಿಪತ್ತಿನಲ್ಲಿ ೧೪ ತುತ್ತನ್ನಾರಂಭಿಸಿ ಮಧ್ಯೆ ಅಮಾವಾಸ್ಯೆಯಲ್ಲಿ ಏನೂ ಇಲ್ಲದೆ ಆಮೇಲೆ ಶುಕ್ಲಪಕ್ಷದಲ್ಲಿ ಒಂದೊಂದಾಗಿ ಹೆಚ್ಚಿಸುತ್ತಾ ಪೂರ್ಣಿಮೆಯಲ್ಲಿ ಹದಿನೈದು ತುತ್ತುಗಳನ್ನು ಸೇವಿಸುವುದು ಪಿಪೀಲಿಕಾಮಧ್ಯ ಚಾಂದ್ರಾಯಣ. ಈ ಕೃಚ್ಛ್ರ ಚಾಂದ್ರಾಯಣಾದಿಗಳನ್ನು ವಿಧಿವತ್ತಾಗಿ ಆಚರಿಸುತ್ತಾ ಶರೀರಶೋಷಣಮಾಡುವ ತಪಸ್ಸೇ ಉತ್ತಮವಾದ ತಪಸ್ಸು. ಈ ಸಮಯದಲ್ಲಿ ಚಿತ್ತ ಪ್ರಸಾದ (ನೈರ್ಮಲ್ಯ) ಕೆಡದಂತೆ ನೋಡಿಕೊಳ್ಳಬೇಕು. ಸ್ವಾಧ್ಯಾಯವನ್ನು ನಿರೂಪಿಸುತ್ತಾನೆ. 'ಪ್ರಣವ'— ಇತಿ. ಓಂಕಾರವೇ ಪ್ರಣವ. ಪ್ರಭೃತಿಪದದಿಂದ ಪುರುಷ ಸೂಕ್ತರುದ್ರಾದಿಗಳನ್ನು ತೆಗೆದುಕೊಳ್ಳಬೇಕು. ಈ ಮಂತ್ರಗಳ ಅಧ್ಯಯನವೇ ಸ್ವಾಧ್ಯಾಯವಾಗುತ್ತದೆ. 'ಮನನಾತ್ ತ್ರಾಯತೇ ಯಸ್ಮಾತ್ ತಸ್ಮಾತ್ ಮಂತ್ರಃ ಪ್ರಕೀರ್ತಿತಃ' ಎಂದು ಮಂತ್ರಲಕ್ಷಣ ಹೇಳುತ್ತಾರೆ. ಮಂತ್ರಗಳಿಗೆ ಅಂಚಿತ್ಯವಾದ ಸಾಮರ್ಥ್ಯವಿರುತ್ತದೆಂದು ಕಲ್ಪಸೂತ್ರದಲ್ಲಿ ಹೇಳಿದೆ.

ತೇ ಚ ಮಂತ್ರಾ ದ್ವಿವಿಧಾ ವೈದಿಕಾಸ್ತಾಂತ್ರಿಕಾಶ್ಚ । ವೈದಿಕಾಶ್ಚ ದ್ವಿವಿಧಾಃಪ್ರಗೀತಾಃ ಅಪ್ರಗೀತಾಶ್ಚ । ತತ್ರ ಪ್ರಗೀತಾಃ ಸಾಮಾನಿ । ಅಪ್ರಗೀತಾಶ್ಚ ದ್ವಿವಿಧಾಃ । ಛಂದೋಬದ್ಧಾಸ್ತದ್ವಿ ಲಕ್ಷಣಾಶ್ಚ । ತತ್ರ ಪ್ರಥಮಾ ಋಚೋ ದ್ವಿತೀಯಾ ಯಜೂಂಷಿ । ತದುಕ್ತಂ ಜೈಮಿನಿನಾ — ತೇಷಾಮೃಗ್ಯತ್ರಾರ್ಥವಶೇನ ಪಾದ ವ್ಯವಸ್ಥಾ । ಗೀತಿಷು ಸಾಮಾಖ್ಯಾ । ಶೇಷೇ ಯಜುಃ ಶಬ್ದಃ (ಜೈ–ಸೂ–೨–೧–೩೩–೩೫) ಇತಿ ॥ ತಂತ್ರೇಷು ಕಾಮಿಕಕಾರಣಪ್ರಪಂಚಾದ್ಯಾಗಮೇಷುಯೇ ಯೇ ವರ್ಣಿತಾಸ್ತೇ ತಾಂತ್ರಿಕಾಃ । ತೇ ಪುನರ್ಮಂತ್ರಾಸ್ತ್ರಿವಿಧಾಃ ಸ್ತ್ರೀಪುಂನಪುಂಸಕಭೇದಾತ್ । ಯದಾಹ—

ಸ್ತ್ರೀಪುಂನಪುಂಸಕತ್ವೇನ ತ್ರಿವಿಧಾ ಮಂತ್ರಜಾತಯಃ ।
ಸ್ತ್ರೀಮಂತ್ರಾ ವಹ್ನಿಜಾಯಾಂತಾ ನಮೋಂತಾಃ ಸ್ಯುರ್ನಪುಂಸಕಾಃ ॥
ಶೇಷಾಃ ಪುಮಾಂಸಸ್ತೇ ಶಸ್ತಾಃ ಸಿದ್ಧಾ ವಶ್ಯಾದಿಕರ್ಮಣಿ ॥ ಇತಿ ॥

ಜನನಾದಿ ಸಂಸ್ಕಾರಾಭಾವೇಽಪಿ ನಿರಸ್ತಸಮಸ್ತದೋಷತ್ವೇನ ಸಿದ್ಧಿಹೇತುತ್ವಾತ್ಸಿದ್ಧತ್ವಮ್ ।

ಮಂತ್ರಸ್ವರೂಪವನ್ನು ವಿಭಾಗಪೂರ್ವಕವಾಗಿ ವಿವರಿಸುತ್ತಾರೆ. "ತೆ" — ಇತಿ. ವೈದಿಕ, ತಾಂತ್ರಿಕವೆಂದು ಮೊದಲು ಮಂತ್ರ ಎರಡು ವಿಧವಾಗಿರುತ್ತದೆ. ಅದರಲ್ಲಿ ವೈದಿಕಮಂತ್ರವು ಪ್ರಗೀತ, ಅಪ್ರಗೀತವೆಂದು ಎರಡು ವಿಧ. ಸಾಮಮಂತ್ರಗಳು ಪ್ರಗೀತಗಳು. ಅಪ್ರಗೀತಮಂತ್ರಗಳು ಛಂದೋಬದ್ಧಗಳು, ತದ್ವಿಲಕ್ಷಣಗಳೆಂದು ಎರಡು ವಿಧ. ಋಜ್ ಮಂತ್ರಗಳು ಛಂದೋಬದ್ಧಗಳು. ಹಾಗಿಲ್ಲದಿರುವವುಗಳು ಯಜುರ್ಮಂತ್ರಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೈಮಿನಿಗಳು ನಿವುಗಳ ಸ್ವರೂಪವನ್ನು ಸೂತ್ರದಲ್ಲಿ ವಿವರಿಸಿರುತ್ತಾರೆ. 'ತೇಷಾಂ'—ಇತಿ. ಆ ಮಂತ್ರಗಳ ಮಧ್ಯದಲ್ಲಿ —ಯಾವ ವಾಕ್ಯದಲ್ಲಿ ಅರ್ಥದಿಂದ, ಛಂದೋವಿಶೇಷದಿಂದ ಪಾದವ್ಯವಸ್ಥಾ ಇರುತ್ತದೆಯೋ ಅದು ಋಙ್ಮಂತ್ರವಾಗುತ್ತದೆ. ಆ ಋಙ್ಮಂತ್ರಗಳಲ್ಲಿಯೇ ಗಾನವಿದ್ದರೆ ಸಾಮ ಎಂಬ ಹೆಸರು ಬರುತ್ತದೆ. ಗಾನ ನಾನಾ ಪ್ರಕಾರವಿರುವುದರಿಂದ ಗೀತಿಷು ಎಂದು ಬಹುವಚನ ಹೇಳಿದೆ. 'ಶೇಷ'—ಇತಿ. ಯಾವ ಮಂತ್ರದಲ್ಲಿ ಪಾದ ವ್ಯವಸ್ಥೆಯೂ ಇಲ್ಲದೆ ಗೀತಿಯೂ ಇಲ್ಲದೆ ಇದ್ದರೆ ಅದು ಯಜುರ್ಮಂತ್ರವಾಗುತ್ತದೆ. 'ತಂತ್ರ'–ಇತಿ. ಕಾಮಿಕ ಮುಂತಾದ ಆಗಮಗಳಿಗೆ ತಂತ್ರವೆಂದು ಸಂಜ್ಞೆ. ತಂತ್ರವೆಂದರೆ ಶಾಸ್ತ್ರ. ಆಗಮಪದಕ್ಕೆ "ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ । ಮತಂ ಚ ವಾಸುದೇವಸ್ಯ ತಸ್ಮಾದಾಗಮಮುಚ್ಯತೇ" ಎಂದು ಶಬ್ದಾರ್ಥ ಹೇಳಿದೆ. ಈಶ್ವರನ ಪಂಚಮುಖದಿಂದ ಬಂದುದು ಅಗಮ.

ಆಗಮಲಕ್ಷಣ— "ಸೃಷ್ಟಿಶ್ಚ ಪ್ರಲಯಶ್ಚೈವ ದೇವತಾನಾಂ ತಥಾರ್ಚನಂ । ಸಾಧನಂ ಚೈವ ಸರ್ವೇಷಾಂ ಪುರಶ್ಚರಣಮೇವ ಚ । ಷಟ್ಕರ್ಮ ಸಾಧನಂ ಚೈವ ಧ್ಯಾನ ಯೋಗಶ್ಚತುರ್ವಿಧಃ । ಸಪ್ತಭಿರ್ಲಕ್ಷಣೈರ್ಯುಕ್ತ ಮಾಗಮಂ ತದ್ವಿದುರ್ಬುಧಾಃ । ಇತಿ' ಷಟ್‌ಕರ್ಮಗಳು. "ಶಾಂತಿವಶ್ಯಸ್ತಂಭನಾನಿ ವಿದ್ವೇಷೋಚ್ಚಾಟನೇ ತತಃ । ಮರಣಾಂ ತಾನಿ ಶಂಸಂತಿ ಷಟ್ಕರ್ಮಾಣಿ ಮನೀಷಣಃ" ಇತಿ. ಇದು ಶಾರದಾತಿಲಕದಲ್ಲಿ ಹೇಳಿದೆ. ಇಂತಹ ಆಗಮಗಳಲ್ಲಿ ಯಾವ ಮಂತ್ರಗಳು ಹೇಳಿವೆಯೋ ಅವು ತಾಂತ್ರಿಕಗಳು. ಇವು ಸ್ತ್ರೀಪುಂನಪುಂಸಕ ಭೇದಗಳಿಂದ ಮೂರುವಿಧವಾಗಿರುತ್ತವೆ. ವಹ್ನಿಜಾಯಾಂತಾಃ — ಸ್ವಾಹಾಶಬ್ದಾಂತಾಃ. ಅಗ್ನಿಯ ಪತ್ನಿಗೆ ಸ್ವಾಹಾ ಎಂದು ಹೆಸರು. ಸ್ವಾಹಾ ಅಂತ ವಾಗಿರುವ ಮಂತ್ರಗಳು ಸ್ತ್ರೀ ಮಂತ್ರಗಳು. ಇದನ್ನು ಬ್ರಹ್ಮವೈವರ್ತದಲ್ಲಿ ವಿವರಿಸಿರು ತ್ತಾರೆ. (ಬ್ರ–ವೈ–ಪ್ರ–ಅ–೩೭) ಪ್ರಕೃತೇಃ ಕಲಯಾ ಚೈವ ಸರ್ವಶಕ್ತಿಸ್ವರೂಪಿಣೀ। ಭೂವ ದಾಹಿಕಾ ಶಕ್ತಿರಗ್ನೇಃ ಸ್ವಾಹಾಸ್ವಕಾಮಿನೀ । ಗ್ರೀಷ್ಮಮಧ್ಯಾಹ್ನಮಾರ್ತಂಡ ಪ್ರಭಾಚ್ಛಾದನಕಾರಿಣೀ । ತ್ವಮಗ್ನೇರ್ದಾಹಿಕಾಶಕ್ತಿರ್ಭವ ಪತ್ನೀ ಚ ಸುಂದರೀ" ॥ ಇತಿ. ನಮಃ ಅಂತವಾಗಿರುವ ಮಂತ್ರಗಳು ನಪುಂಸಕಗಳು. ಉಳಿದವುಗಳು ಪುರುಷ ಮಂತ್ರಗಳು. 'ಸಿದ್ಧಾ'—ಇತಿ. ಸಿದ್ಧಿಹೇತುವಾದುದರಿಂದ ಸಿದ್ಧಗಳಾಗುತ್ತವೆ. ರುದ್ಧಕೀಲಿತಾದಿ ಮಂತ್ರದೋಷಗಳನ್ನು ಮುಂದೆ ಹೇಳುತ್ತಾರೆ. ಅವು ಸ್ವಭಾವದಿಂದಲೇ ನಿರಸ್ತವಾದವುಗಳು ಸಿದ್ಧಮಂತ್ರಗಳು. ಸಂಸ್ಕಾರಗಳು ಹತ್ತುವಿಧಗಳೆಂದು ಶಾರದಾ ತಿಲಕದಲ್ಲಿ ಹೇಳದೆ

ಸ ಚ ಸಂಸ್ಕಾರೋ ದಶವಿಧಃ ಕಥಿತಃ ಶಾರದಾತಿಲಕೇ —
ಮಂತ್ರಾಣಾಂ ದಶ ಕಥ್ಯಂತೇ ಸಂಸ್ಕಾರಾಃ ಸಿದ್ಧಿದಾಯಿನಃ ।
ನಿರ್ದೋಷತಾಂ ಪ್ರಯಾಂತ್ಯಾಶು ತೇ ಮಂತ್ರಾಃ ಸಾಧು ಸಂಸ್ಕೃತಾಃ ঃ
ಜನನಂ ಜೀವನಂ ಚೈವ ತಾಡನಂ ಬೋಧನಂ ತಥಾ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿಷೇಕೋಽಥ ವಿಮಲೀ ಕರಣಾಪ್ಯಾಯತೇ ಪುನಃ ।
ತರ್ಪಣಂ ದೀಪನಂ ಗುಪ್ತಿರ್ದಶೈತಾ ಮಂತ್ರ ಸಂಸ್ಕ್ರಿಯಾಃ ।
ಮಂತ್ರಾಣಾಂ ಮಾತೃಕಾಯಂತ್ರಾದುದ್ಧಾರೋ ಜನನಂ ಸ್ಮೃತಮ್ ।
ಪ್ರಣವಾಂತರಿತಾನ್ ಕೃತ್ವಾ ಮಂತ್ರವರ್ಣಾನ್ ಜಪೇತ್ಸುಧೀಃ ।
ಮಂತ್ರಾಣಾಂ ಸಂಖ್ಯಯಾತದ್ಧಿ ಜೀವನಂ ಸಂಪ್ರಚಕ್ಷತೇ ।
ಮಂತ್ರವರ್ಣಾನ್ ಸಮಾಲಿಖ್ಯ ತಾಡಯೇಚ್ಚಂದನಾಂ ಭ ಸಾ ।
ಪ್ರತ್ಯೇಕಂ ವಾಯುಬೀಜೇನ ತಾಡನೇ ತದುದಾನಹೃತಮ್ ।
ವಿಲೇಖ್ಯ ಮಂತ್ರವರ್ಣಾಸ್ತು ಪ್ರಸೂನ್ಯೈಃ ಕರವೀರಜೈಃ
ಮಂತ್ರಾಕ್ಷರೇಣ ಸಂಖ್ಯಾತೈರ್ಹನ್ಯಾತ್ತದ್ಬೋಧನಂ ಮತಮ್ ॥

ಕರ್ಮದಲ್ಲಿ ಪ್ರಯೋಗಿಸಿದರೂ ಮಂತ್ರಗಳು ಜಡವಾಗಿದ್ದರೆ ಆ ದೋಷ ನಾಶ ಮಾಡಲು ಜನನಾದಿ ಈ ಹತ್ತು ಸಂಸ್ಕಾರಗಳನ್ನು ಮಾಡಬೇಕು. ಶಕ್ತಿಮಂತ್ರೋದ್ಧಾರ ದಲ್ಲಿ ಚತುರಸ್ರ, ಚತುರ್ದ್ವಾರೋಪೇತವಾದ ಮಾತೃಕಾ ಯಂತ್ರವನ್ನು ಕುಂಕುಮ ದಿಂದಲೂ, ವಿಷ್ಣುಮಂತ್ರೋದ್ಧಾರಧಲ್ಲಿ ಚಂದನದಿಂದಲೂ, ಶಿವಮಂತ್ರೋದ್ಧಾರದಲ್ಲಿ ಭಸ್ಮದಿಂದಲೂ ಸ್ವರ್ಣಾದಿಪಾತ್ರೆಯಲ್ಲಿ ಬರೆಯಬೇಕು. ಯಂತ್ರದಿಂದ ಮಂತ್ರಾಕ್ಷರಗಳ ಭಾವನೆಯೇ ಉದ್ಧಾರ. ಕಾದಿಮಾಂತದವರೆಗಿರುವ ಐದು ವರ್ಗೀಯಾಕ್ಷರಗಳನ್ನು ಆ ಯಂತ್ರದಲ್ಲಿ ಪೂರ್ವದಲ್ಲಿಯೂ, ಯಾದಿವಾಂತದವರೆಗಿನ, ಶಾದಿಹಾಂತದವರೆಗಿನ, ಮತ್ತು ಲ ಕ್ಷ–ಈ ವರ್ಣಗಳನ್ನು ಈಶಾನ್ಯದಲ್ಲಯೂ ಬರೆಯಬೇಕು. ಮಂತ್ರದ ಆದಿಯಲ್ಲಿ ಪ್ರಣವವೂ ಆಮೇಲೆ ಮೊದಲಿನ ಅಕ್ಷರವೂ ಆಮೇಲೆ ಪ್ರಣವವೂ ಆಮೇಲೆ ದ್ವಿತೀಯಾ ಕ್ಷರವೂ ಆಮೇಲೆ ಪ್ರಣವವೂ ಈ ಕ್ರಮದಿಂದ ಜಪಿಸಬೇಕು. ಹೀಗೆ ಕೊನೆಯ ಅಕ್ಷರದ ಮೇಲೆ ಪ್ರಣವವನ್ನು ಕಲ್ಪಿಸಿ ಆ ಮಂತ್ರಜಪವನ್ನು ಮಾಡಬೇಕು. ಮಂತಾಕ್ಷರಗಳು ಎಷ್ಟಿವೆಯೋ ಅಷ್ಟು ಬಾರಿ ಜಪಿಸಬೇಕು. ಅರ್ಣಶಬ್ದವೂ ವರ್ಣವಾಚಿಯಾಗಿರುತ್ತದೆ.

ಸ್ವತಂತ್ರೋಕ್ತವಿಧಾನೇನ ಮಂತ್ರೀಮಂತ್ರಾರ್ಣಸಂಖ್ಯಯಾ ।
ಅಶ್ವತ್ಥಪಲ್ಲವೈರ್ಮಂತ್ರಮಭಿಷಿಂಚೇ ದ್ವಿಶುದ್ಧಯೇ ॥
ಸಂಚಿಂತ್ಯ ಮನಸಾ ಮಂತ್ರಂ ಜ್ಯೋತಿರ್ಮಂತ್ರೇಣ ನಿರ್ದಹೇತ್ ।
ಮಂತ್ರೇ ಮಲತ್ರಯಂ ಮಂತ್ರೀ ವಿಮಲೀಕರಣಂ ಹಿತತ್ ॥
ತಾಂವ್ಯೋಮಾಗ್ನಿಮನುಯುಗ್ ಜ್ಯೋತಿರ್ಮಂತ್ರ ಉದಾಹೃತಃ ।
ಕುಶೋದಕೇನ ಜಪ್ರೇನ ಪ್ರತ್ಯರ್ಣಂ ಪ್ರೋಕ್ಷಣಂ ಮನೋಃ ।
ವಾರಿಬೀಜೇನ ವಿಧಿವದೇತದಾಪ್ಯಾಯನಂ ಮತಮ್ ।
ಮಂತ್ರೇಣ ವಾರಿಣಾ ಮಂತ್ರೇ ತರ್ಪಣಂ ತರ್ಪಣಂ ಸ್ಮೃತಮ್ ।
ತಾರಮಾಯಾರಮಾಯೋಗೋ ಮನೋರ್ದೀಪನಮುಚ್ಯತೇ ।
ಜಪ್ಯಮಾನಸ್ಯ ಮಂತ್ರಸ್ಯ ಗೋಪನಂ ತ್ವಪ್ರಕಾಶನಮ್ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರಾ ದಶ ಮಂತ್ರಾಣಾಂ ಸರ್ವತಂತ್ರೇಷು ಗೋಪಿತಾಃ ।
ಯತ್ ಕೃತ್ವಾ ಸಂಪ್ರದಾಯೇನ ಮಂತ್ರೀ ವಾಂಛಿತಮಶ್ನುತೇ ।
ರುದ್ಧಕೀಲಿತ ವಿಚ್ಛಿನ್ನ ಸುಪ್ತಶಪ್ತಾದಯೋಽಪಿ ಚ ।
ಮಂತ್ರದೋಷಾಃ ಪ್ರಣಶ್ಯಂತಿ ಸಂಸ್ಕಾರೈರೇಭಿರುತ್ತಮೈಃ ॥ ಇತಿ ॥
ತದಲಮಕಾಂಡತಾಂಡವಕಲ್ಪೇನ ಮಂತ್ರಶಾಸ್ತ್ರರಹಸ್ಯೋದ್ಘೋಷಣೇನ ॥

ಮಾಯಿಕಂ, ಕಾರ್ಮಣಂ, ಆನವ್ಯಂ ಎಂದು ಮೂರು ಮಲಗಳು. ಸ್ತ್ರೀಸಂಬಂಧದಿಂದ ಉಂಟಾದುದು ಮಾಯಿಕ, ಪುರುಷಸಂಬಂಧದಿಂದ ಆದುದು ಕಾರ್ಮಣ, ನಾವೀನ್ಯವಲ್ಲದಿರುವುದು ಆನವ್ಯವಾಗುತ್ತದೆ. ನ ನವಂ, ಅನವಂ, ತಸ್ಯಭಾವಃ ಆನವ್ಯಂ—ವೃದ್ಧತ್ವಂ । ಜ್ಯೋತಿರ್ಮಂತ್ರವನ್ನು ತೋರಿಸುತ್ತಾನೆ. 'ತಾರ'—ಇತಿ. ತಾರ—ಪ್ರಣವ. ವ್ಯೋಮ—ಹಕಾರ. ಅಗ್ನೀ—ರೇಫ. ಮನು—ಔಕಾರ. ಅನುಸ್ವಾರವನ್ನು ಅಂತ್ಯದಲ್ಲಿ ಹೇಳದಿದ್ದರೂ ತೆಗೆದುಕೊಳ್ಳಬೇಕು. ಇದಕ್ಕೆ (ಅನುಸ್ವಾರ) ದಂಡೀ ಎಂದು ಹೆಸರು. ಪ್ರತ್ಯರ್ಣಂ—ಪ್ರತಿವರ್ಣಮ್. ಮನು—ಮಂತ್ರ. (ವಾಯುಬೀಜ—ಯಮ್ ಎಂಬುದು.) ವಾರಿಬೀಜ—ವಮ್ ಎಂಬುದು. ಮಾಯಾಶಬ್ದದಿಂದ ಮಾಯಾಬೀಜವಾದ ಹ್ರೀಂ ಎಂಬುದು ಹೇಳಲ್ಪಡುತ್ತದೆ. ರಮಾಶಬ್ದದಿಂದ ಶ್ರೀಂ ಗ್ರಹಣ. ಈ ತ್ರಿತಯದಿಂದ ಮಂತ್ರಕ್ಕೆ ಯಾವ ಯೋಗವಿದೆಯೋ ಅದು ದೀಪನವೆಂದು ಹೇಳಲ್ಪಡುತ್ತದೆ. 'ರುದ್ಧ'—ಇತಿ. ಆದಿ, ಮಧ್ಯಅವಸಾನಗಳಲ್ಲಿ ಭೂಬೀಜವಾದ 'ಲಂ' ಎಂಬುದರ ದ್ವಂದ್ವದಿಂದ ಕೂಡಿದರೆ ಅದು ರುದ್ಧವಾಗುತ್ತದೆ. ಹೀಗೆಯೇ ಕೀಲಿತಾದಿಗಳನ್ನು ಮಂತ್ರಶಾಸ್ತ್ರದಲ್ಲಿ ವಿವರಿಸಿರುತ್ತಾರೆ. ಪ್ರಕೃತ ಇದರವಿಸ್ತರ ಅನಾವಶ್ಯಕವೆಂದು ಮುಗಿಸುತ್ತಾನೆ. 'ತದಲ'—ಇತಿ.

ಈಶ್ವರಪ್ರಣಿಧಾನಂ ನಾಮ ಅಭಿಹಿತಾನಾಮನಭಿಹಿತಾನಾಂ ಚ ಸರ್ವಾಸಾಂ ಕ್ರಿಯಾಣಾಂ ಪರಮೇಶ್ವರೇ ಪರಮಗುರೌ ಫಲಾನಪೇಕ್ಷಯಾ ಸಮರ್ಪಣಮ್ । ಯತ್ರೇದಮುಕ್ತಮ್—

ಕಾಮತೋಽಕಾಮತೋ ವಾಪಿ ಯತ್ಕರೋಷಿ ಶುಭಾಶುಭಮ್ ।
ತತ್ಸರ್ವಂ ತ್ವಯಿ ವಿನ್ಯಸ್ತಂ ತ್ವತ್ಪ್ರಯುಕ್ತಃ ಕರೋಮ್ಯಹಮ್ । ಇತಿ॥
ಕ್ರಿಯಾಫಲಸಂನ್ಯಾಸೋಽಪಿ ಭಕ್ತಿವಿಶೇಷಾಪರಪರ್ಯಾಯಂ ಪ್ರಣಿಧಾನಮೇವ । ಫಲಾನಭಿಸಂಧಾನೇನ ಕರ್ಮಕರಣಾತ್ । ತಥಾ ಚ ಗೀಯತೇ ಗೀತಾಸು ಭಗವತಾ—

ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥ ಇತಿ ॥
(ಗೀ–೨।೪೭)

ಫಲಾಭಿಸಂಧೇರುಪಘಾತಕತ್ವಮಭಿಹಿತಂ ಭಗವದ್ಭಿರ್ನೀಲಕಂಠಭಾರತೀ ಶ್ರೀ ಚರಣೈಃ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಪಿ ಪ್ರಯತ್ನಸಂಪನ್ನಂ ಕಾಮೇನೋಪಹತಂ ತಪಃ ।
ನ ತುಷ್ಟಯೇ ಮಹೇಶಸ್ಯ ಶ್ವಲೀಢಮಿವ ಪಾಯಸಮ್ । ಇತಿ॥
ಸಾ ಚ ತಪಃ ಸ್ವಾಧ್ಯಾಯೇಶ್ವರ ಪ್ರಣಿಧಾನಾತ್ಮಿಕಾ ಕ್ರಿಯಾ ಯೋಗಸಾಧನತ್ವಾತ್ ಯೋಗ ಇತಿ ಶುದ್ಧ ಸಾರೋಪಲಕ್ಷಣಾವೃತ್ತ್ಯಾಶ್ರಯಣೇನ ನಿರೂಪ್ಯತೇ ಯಥಾ 'ಆಯುರ್ಘೃತಂ' ಇತಿ ॥

ಸ್ವಾಧ್ಯಾಯ ಸ್ವರೂಪವನ್ನು ಹೇಳಿ ಕ್ರಮಪ್ರಾಪ್ತವಾದ ಈಶ್ವರಪ್ರಣಿಧಾನವನ್ನು ನಿರೂಪಿಸುತ್ತಾನೆ. 'ಈಶ್ವರ'—ಇತಿ. ಅಭಿಹಿತವೆಂದರೆ ವಿಹಿತವೆಂದರ್ಥ. ಅದರಂತೆ ಅನಭಿಹಿತವೆಂದರೆ ಅನಿಷಿದ್ಧ ಕರ್ಮಗಳೆಂದರ್ಥ ಕೆಲವರು ಅಭಿಹಿತವೆಂದರೆ ವೈದಿಕವೆಂದೂ ಅನಭಿಹಿತವೆಂದರೆ ಲೌಕಿಕವೆಂದೂ ಅರ್ಥ ಹೇಳುತ್ತಾರೆ. ಈ ಎಲ್ಲಾ ಕ್ರಿಯೆಗಳನ್ನು ಪರಮೇಶ್ವರ ಅಥವಾ ಗುರುವಿನಲ್ಲಿ ಅರ್ಪಿಸುವುದೇ ಪ್ರಣಿಧಾನ. ಇದನ್ನೇ 'ಕಾಮತಃ—' ಎಂಬಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ. ಕೂರ್ಮಪುರಾಣದಲ್ಲಿಯೂ—'ನಾಹಂ ಕರ್ತಾ ಸರ್ವಮೇತತ್ ಬ್ರಹ್ಮೈವ ಕುರುತೇ ತಥಾ । ಏತದ್‌ಬ್ರಹ್ಮಾರ್ಪಣಂ ಪ್ರೋಕ್ತಮೃಷಿಭಿಸ್ತತ್ವದರ್ಶಿಭಿಃ' ॥ ಎಂದು ವಿವರಿಸಿದೆ. ಫಲೇಚ್ಛೆಯಿಲ್ಲದೆ ಕರ್ಮವನ್ನು ಮಾಡಬೇಕೆಂದು ಗೀತೆಯಲ್ಲಿಯೂ ಹೇಳಿದೆ.

'ಕರ್ಮಣಿ'—ಇತಿ. ಕರ್ಮದಲ್ಲಿಯೇ ಅಧಿಕಾರವಲ್ಲದೆ ಕರ್ಮಫಲದಲ್ಲಿ ಅಧಿಕಾರವಿಲ್ಲ. ಕರ್ಮಫಲದಲ್ಲಿ ಅಧಿಕಾರವೆಂದರೆ 'ನನ್ನಿಂದ ಈ ಫಲವು ಅನುಭವಿಸಲ್ಪಡಬೇಕು' ಎಂಬ ಇಚ್ಛೆ. ಫಲೇಚ್ಛೆಯಿಂದ ಕಾರ್ಯಮಾಡುವವನೇ ಫಲಹೇತುವಾಗುತ್ತಾನೆ. 'ಕೆಲಸಮಾಡದಿರುವ ವಿಷಯದಲ್ಲಿಯೂ ನಿನಗೆ ಪ್ರೀತಿಯುಂಟಾಗದಿರಲಿ' ಎಂದು ಉಪದೇಶಿಸಿರುವನು. ಕರ್ಮಫಲಾಭಿಲಾಷೆಯು ತಪಸ್ಸನ್ನು ನಾಶಮಾಡುತ್ತದೆಂದು ಸಪ್ರಮಾಣವಾಗಿ ತೋರಿಸುತ್ತಾನೆ. 'ಅಪಿಪ್ರ'—ಇತಿ. ನಾಯಿ ಮುಟ್ಟಿದ ಪಾಯಸದಂತೆ ಅದು ಈಶತೃಪ್ತಿದಾಯಕವಾಗುವುದಿಲ್ಲವೆಂದು ತಾತ್ಪರ್ಯ. 'ಆಯುಃ ಘೃತಂ' ಎಂಬಲ್ಲಿ ಶುದ್ಧಸಾರೋಪಾ ಲಕ್ಷಣಾ. ಆಯುಃಸಾಧಕವಾದ ತುಪ್ಪವು ಆಯುಸ್ಸೆಂದು ಆರೋಪಿಸಿ ಹೇಳಿದೆ. ಅದರಂತೆ 'ತಪಃಸ್ವಾಧ್ಯಾಯ'—ಸೂತ್ರದಲ್ಲಿ ಯೋಗಪದಕ್ಕೆ ಲಕ್ಷಣೆಯಿಂದ ಯೋಗಸಾಧನವೆಂದರ್ಥವಾಗುತ್ತದೆ.

ಶುದ್ಧಸಾರೋಪಲಕ್ಷಣಾ ನಾಮ ಲಕ್ಷಣಾಪ್ರಭೇದಃ । ಮುಖ್ಯಾರ್ಥಬಾಧತದ್ಯೋಗಾಭ್ಯಾಮರ್ಥಾಂತರ ಪ್ರತಿಪಾದನಂ ಲಕ್ಷಣಾ । ಸಾ ದ್ವಿವಿಧಾ । ರೂಢಿಮೂಲಾ ಪ್ರಯೋಜನಮೂಲಾ ಚ । ತದುಕ್ತಂ ಕಾವ್ಯಪ್ರಕಾಶೇ—
ಮುಖ್ಯಾರ್ಥಬಾಧೇ ತದ್ಯೋಗೇ ರೂಢಿತೋಽಥ ಪ್ರಯೋಜನಾತ್ ॥
ಅನ್ಯೋಽರ್ಥೋ ಲಕ್ಷ್ಯತೇ ಯತ್ಸಾ ಲಕ್ಷಣಾರೋಪಿತಾ ಕ್ರಿಯಾ ॥
(ಕಾ-ಪ್ರ-೨೯) ಇತಿ
ಯಚ್ಛಬ್ದೇನ ಲಕ್ಷ್ಯತೇ ಇತ್ಯಾಖ್ಯಾತೇ ಗುಣೀಭೂತಂ ಪ್ರತಿಪಾದನಮಾತ್ರಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಾಮೃಶ್ಯತೇ । ಸಾ ಲಕ್ಷಣೇತಿ ಪ್ರತಿನಿರ್ದಿಶ್ಯಮಾನಾಪೇಕ್ಷಯಾ ತಚ್ಛಬ್ದಸ್ಯ ಸ್ತ್ರೀಲಿಂಗತ್ವೋಪಪತ್ತಿಃ । ತದುಕ್ತಂ ಕೈಯಟ್ಟೈಃ—ನಿರ್ದಿಶ್ಯಮಾನಪ್ರತಿನಿರ್ದಿಶ್ಯಮಾನಯೋ ‑ರೈಕ್ಯಮಾಪಾದಯಂತಿ ಸರ್ವನಾಮಾನಿ ಪರ್ಯಾಯೇಣ ತತ್ರಲ್ಲಿಂಗಮುಪಾದದತ ಇತಿ । ಕರ್ಮಣಿ ಕುಶಲ ಇತ್ಯಾದಿ ರೂಢಿಲಕ್ಷಣಾಯಾ ಉದಾಹರಣಮ್ ಕುಶಾನ್ ಲಾತೀತಿ ವ್ಯುತ್ಪತ್ತ್ಯಾ ಧರ್ಭಾದಾನಕರ್ತರಿ ಯೌಗಿಕಂ ಕುಶಲಪದಂ, ವಿವೇಕಪತ್ವಸಾರೂಪ್ಯಾತ್ ಪ್ರವೀಣೇ ಪ್ರವರ್ತಮಾನಮನಾದಿವೃದ್ಧವ್ಯವಹಾರಪರಸ್ಪರಾನುಪಾತಿತ್ವೇನಾಭಿಧಾನವತ್ ಪ್ರಯೋಜನಮನಪೇಕ್ಷ್ಯ ಪ್ರವರ್ತತೇ । ತದಾಹ—

ನಿರೂಡಲಕ್ಷಣಾಃ ಕಾಶ್ಚಿತ್ ಸಾಮರ್ಥ್ಯಾದಭಿಧಾನವತ್ ॥

(ತಂ‑ವಾ) ಇತಿ ॥

ತಸ್ಮಾತ್ ರೂಢಿಲಕ್ಷಣಾಯಾಃ ಪ್ರಯೋಜನಾಪೇಕ್ಷಾ ನಾಸ್ತಿ ॥

ಶುದ್ಧಸಾರೋಪಾ ಎಂಬುದು ಲಕ್ಷಣಾವೃತ್ತಿಯ ಒಂದು ಭೇದ. ಶುದ್ಧಾ, ಗೌಣೀ ಎಂದು ಲಕ್ಷಣಾ ಎರಡುವಿಧವಾಗಿರುತ್ತದೆ. ಸಾದೃಶ್ಯಮೂಲಕವಾಗಿ ಆರೋಪಬಂದಲ್ಲಿ ಗೌಣೀ ಆಗುತ್ತದೆ. 'ಸಿಂಹೋ ಮಾಣವಕಃ' ಎಂಬಲ್ಲಿ ಕ್ರೌರ್ಯಾದಿಗುಣಗಳಿಂದ ಸಿಂಹಸದೃಶನಾದ ಮಾಣವಕನಲ್ಲಿ ಸಿಂಹಶಬ್ದವನ್ನು ಪ್ರಯೋಗಿಸಿದೆ. ಸಾದೃಶ್ಯೇತರಗಳಾದ ಕಾರ್ಯಕಾರಣಸಂಬಂಧಾದಿ ಮೂಲಕವಾಗಿ ಆರೋಪ ಹೇಳಿದರೆ ಅಲ್ಲಿ ಶುದ್ಧಲಕ್ಷಣಾ ಆಗುತ್ತದೆ. ಯೋಗ ಶಬ್ದವನ್ನು ಯೋಗಸಾಧನಾರ್ಥದಲ್ಲಿ ಕಾರ್ಯಕಾರಣ ಸಂಬಂಧ ಮೂಲಕವಾಗಿ ಪ್ರಯೋಗಿಸಿರುವುದರಿಂದ ಇಲ್ಲಿ ಶುದ್ಧ ಲಕ್ಷಣಾ ಆಗುತ್ತದೆ. ವಿಷಯ, ವಿಷಯಿಗಳನ್ನು ಭೇದದಿಂದ ಹೇಳಿರುವುದೇ ಆರೋಪ. ಇಲ್ಲಿ ಯೋಗವು ಆರೋಪ್ಯಮಾಣವಾದುದರಿಂದ ವಿಷಯೀ. ಆರೋಪದ ವಿಷಯವೇ ಕ್ರಿಯೆ. ಎರಡನ್ನೂ ಹೇಳಿರುವುದರಿಂದ ಸಾರೋಪವಾಗುತ್ತದೆ. 'ಸಿಂಹೋ ಮಾಣವಕಃ' ಎಂಬಲ್ಲಿ ವಿಷಯೀ ಸಿಂಹ. ವಿಷಯ ಮಾಣವಕ. ಎರಡೂ ಹೇಳಿರುವುದರಿಂದ ಗೌಣೀ ಸಾರೋಪಾ ಆಗುತ್ತದೆ. ಮಾಣವಕನನ್ನು ಹೇಳದೆ ಕೇವಲ 'ಸಿಂಹ' ಎಂದು ಹೇಳಿದಾಗ ಅರ್ಥಾತ್ ವಿಷಯವಾದ ಮಾಣವಕ ಪ್ರತೀತನಾಗುವುದರಿಂದ ಸಾಧ್ಯವಸಾನವಾಗುತ್ತದೆ. ವಿಷಯಿವಾಚಕ ಪದದಿಂದ ವಿಷಯಕ್ಕೆ ನಿಗರಣವು ಅಧ್ಯವಸಾನವೆನ್ನಲ್ಪಡುತ್ತದೆ. 'ಮುಖ್ಯಾರ್ಥ'—ಇತಿ. "ಗಂಗಾಯಾಂ ಘೋಷಃ" ಎಂಬಲ್ಲಿ ಗಂಗಾಪದಕ್ಕೆ ಪ್ರವಾಹಾರ್ಥ. ಅದಕ್ಕೆ ಘೋಷಾಧಾರತ್ವ ಸಂಭವಿಸದಿರುವುದರಿಂದ ಬಾಧ ಬರುತ್ತದೆ. ಮುಖ್ಯಾರ್ಥವಾದ ಪ್ರವಾಹದ ಸಾಮೀಪ್ಯಸಂಬಂಧವಿರುವುದರಿಂದ ಗಂಗಾಪದವು ತೀರರೂಪಾರ್ಥಬೋಧಕವಾಗುತ್ತದೆ. ಲಕ್ಷಣಾ ಎಂಬುದು ಮುಖ್ಯವೃತ್ತಿಯಲ್ಲ, ಮುಖ್ಯವೃತ್ತಿಗೆ ಅಭಿಧಾ ಎಂದು ಹೆಸರು. 'ಗಂಗಾತಟೇ ಘೋಷಃ' ಎಂದು ಹೇಳದೇ ಗಂಗೆಯಲ್ಲಿ ಗೊಲ್ಲರಹಳ್ಳಿ (ಘೋಷ) ಎಂದುದರಿಂದ ಲಕ್ಷಣಾವ್ಯಾಪಾರದಿಂದ ಗಂಗಾಪದದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೀರರೂಪಾರ್ಥ ತೋರಿ ಅಲ್ಲಿ ಶೈತ್ಯಪಾವನತ್ವಾದಿ ಪ್ರಯೋಜನವು ತೋರುತ್ತದೆ. ತೀರವು ಗಂಗಾತ್ವದಿಂದ ತೋರಿದರೇ ಈ ಪ್ರಯೋಜನ ತೋರುವುದು. 'ಗಂಗಾತಟೇ ಘೋಷಃ' ಎಂದರೆ ಅಲ್ಲಿ ನಿಯತವಾಗಿ ಆಪ್ರಯೋಜನ ತೋರುವುದಿಲ್ಲ. ಆದುದರಿಂದ ಇಂತಹ ಲಕ್ಷಣಾ ಪ್ರಯೋಜನ ಮೂಲವಾಗುತ್ತದೆ.

ಕೆಲವು ಕಡೆ ಪ್ರಯೋಜನೋದ್ದೇಶವಿಲ್ಲದೆ ಲೋಕಪ್ರಯೋಗಪ್ರಸಿದ್ಧಿಯನ್ನು ನೋಡಿ ಕೇವಲ ಲಕ್ಷಣಾ ಆಶ್ರಯಿಸಲ್ಪಡುತ್ತದೆ. ಅದಕ್ಕೆ ರೂಢಿಲಕ್ಷಣಾ ಎಂದು ಕರೆಯುತ್ತಾರೆ. ರೂಢಿಯೆಂದರೆ ಪ್ರಸಿದ್ಧಿ. 'ಕರ್ಮಣಿ ಕುಶಲಃ' ಎಂದರೆ ಕುಶಲಪದಕ್ಕೆ ದರ್ಭೆತರುವವನು (ದರ್ಭಾನ್ ಲಾತಿ) ಎಂದರ್ಥವು. ಪದವ್ಯುತ್ಪತ್ತಿಯಿಂದ ಬೋಧಿತವಾಗುತ್ತದೆ. ಇದು ಮುಖ್ಯಾರ್ಥ. ಆದು ಇಲ್ಲಿ ಬಾಧಿತವಾದುದರಿಂದ ಕುಶಲ ಎಂಬಲ್ಲಿ ಲಕ್ಷಣಾಶ್ರಯಣ ದಿಂದ ನಿಪುಣಾರ್ಥ ಹೇಳಬೇಕು. ದರ್ಭೆತರುವವನಿಗೂ, ನಿಪುಣನಿಗೂ ಸಾಧ್ವಸಾಧು ವಿವೇಚಕತ್ವಸಾದೃಶ್ಯವಿರುತ್ತದೆ. ಇಲ್ಲಿ 'ಕರ್ಮಣಿನಿಪುಣಃ' ಎಂಬುದರಿಂದ 'ಕರ್ಮಣಿ ಕುಶಲಃ ಎಂದು ಹೇಳಿದರೆ ವಿಶೇಷವೇನೂ ಭೋಧಿತವಾಗುವುದಿಲ್ಲ. ಅಭಿಧಾಸಮಾನ ವಾದುದರಿಂದ ಇದು ರೂಢಿಲಕ್ಷಣಾ ಆಗುತ್ತದೆ. 'ಮುಖ್ಯಾರ್ಥ'—ಇತಿ. ಮುಖ್ಯಾ ರ್ಥಕ್ಕೆ ಬಾಧಬಂಧು (ಅನ್ವಯಾನುಪಪತ್ತಿ) ಮುಖ್ಯಾರ್ಥಸಂಬಂಧವಿರುವಾಗ ರೂಢಿ ಮೂಲಕವಾಗಿ ಅಥವಾ ಪ್ರಯೋಜನ ಮೂಲಕವಾಗಿ ಯಾವ ಅನ್ಯಾರ್ಥದ ಬೋಧನ ವಿದೆಯೋ ಅದೇ ಲಕ್ಷಣಾವ್ಯಾಪಾರವಾಗುತ್ತದೆ. ಕ್ರಿಯಾ—ವ್ಯಾಪಾರ. ಇಲ್ಲಿ ಮುಖ್ಯಾರ್ಥವಾದ ಜಲಾದಿಗಳಲ್ಲಿ ಲಕ್ಷಣಾವ್ಯಾಪಾರವಿರುವುದು. ಗಂಗಾಶಬ್ದದಲ್ಲಿರುವು ದಿಲ್ಲ. ಅರ್ಥದಲ್ಲಿರುವ ವ್ಯಾಪಾರವು ಅರ್ಥ ಮೂಲಕವಾಗಿ ಶಬ್ದದಲ್ಲಿ ಆರೋಪಿಸಲ್ಪಟ್ಟು ದರಿಂದ ಆರೋಪಿತವ್ಯಾಪಾರವಾಗುತ್ತದೆ. ಇದರಿಂದಲೇ ಗಂಗಾಶಬ್ದವು ಲಕ್ಷಣೆಯಿಂದ ತೀರರೂಪಾರ್ಥ ತಿಳಿಸುತ್ತದೆಂದು ಲೋಕದಲ್ಲಿ ಪ್ರಸಿದ್ಧವಾಗಿದೆ. ಲಕ್ಷಣವಾಕ್ಯದಲ್ಲಿ 'ಯತ್' ಎಂದು ಪ್ರಯೋಗಿಸಿದೆ. ಇದಕ್ಕೆ ಅನ್ವಯವನ್ನು ವ್ಯಾಖ್ಯಾಕಾರರು ನಾನಾ ರೀತಿಯಾಗಿ ಕಲ್ಪಿಸಿರುತ್ತಾರೆ. ಪ್ರಕೃತಗ್ರಂಥಕಾರನು ಯಚ್ಛಬ್ದಾನ್ವಯವನ್ನು ವಿವರಿ ಸುತ್ತಾನೆ. 'ಯತ್'.... ಇತಿ. ಪಾಚಕಾದಿಪದಗಳಲ್ಲಿರುವಂತೆ ಪಚತಿ, ಸಚ್ಯತೇ ಇತ್ಯಾದಿ ಕ್ರಿಯಾಪದಗಳಲ್ಲಿಯೂ (ಅಖ್ಯಾತ—ತಿಙಂತ) ಪ್ರತ್ಯಯಾರ್ಥಕ್ಕೆ ಪ್ರಾಧಾನ್ಯ ವಿರುತ್ತದೆ. ಧಾತ್ವರ್ಥವು ಇದಕ್ಕೆ ವಿಶೇಷಣವೆಂದು ನೈಯಾಯಿಕಮತ. ಪ್ರಕೃತ 'ಲಕ್ಷ್ಯತೇ' ಎಂಬಲ್ಲಿ ಧಾತುವಿಗೆ ಪ್ರತಿಪಾದನ ಅರ್ಥ. ಇದು ಪ್ರತ್ಯಯಾರ್ಥದಲ್ಲಿ ವಿಶೇಷಣವಾಗಿ ಅಪ್ರಧಾನವಾಗಿದ್ದರೂ ಯತ್‌ಪದವು ಅದನ್ನೇ ಪರಾಮರ್ಶಿಸುತ್ತದೆ. ತದ್ವಿಶಿಷ್ಟವಾದ ಪ್ರಧಾನವಾದ ಪ್ರತ್ಯಯಾರ್ಥವನ್ನು ಪರಾಮರ್ಶ ಮಾಡುವುದಿಲ್ಲ. ಪ್ರತಿ ಪಾದನವೇ ಲಕ್ಷಣೆಯಾಗುವುದಲ್ಲದೆ ಪ್ರತಿಪಾದಿತವಾದ ಅರ್ಥವು ಎಂದೂ ಲಕ್ಷಣಾ ಆಗು ವುದಿಲ್ಲ. ವೈಯಾಕರಣಮತವನ್ನನುಸರಿಸಿದರೆ ಧಾತ್ವರ್ಥಕ್ಕೇ ಪ್ರಾಧಾನ್ಯವಿರುವುದರಿಂದ ಅಲ್ಲಿ ಅನ್ವಯ ಹೇಳಲು ಯಾವ ಬಾಧಕವೂ ಇಲ್ಲ. ಕ್ರಿಯಾಪದದಲ್ಲಿ ಮಾತ್ರ ಧಾತ್ವರ್ಥ ಪ್ರಧಾನ, ಪ್ರತ್ಯಯಾರ್ಥ ಅಪ್ರಧಾನವೆಂದು ಅವರ ಸಿದ್ಧಾಂತ. ಯತ್ತಚ್ಛಬ್ದಾರ್ಥಗಳಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವಾಗಲೂ ಸಮಾನಾರ್ಥವಿರುವುದರಿಂದ ತಚ್ಛಬ್ದದಿಂದಲೂ ಪ್ರತಿಪಾದನವೇ ಬೋಧಿತವಾಗುವುದರಿಂದ ತತ್ ಲಕ್ಷಣಾ ಎಂದು ಹೇಳದೆ ಸಾಲಕ್ಷಣಾ ಎಂದು ಹೇಳಿರುವುದು ಹೇಗೆ ? ಅಂದರೆ ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಸಾ'—ಇತಿ. ವಿಧೇಯಪ್ರಾಧಾನ್ಯದಿಂದ ಸ್ತ್ರೀಲಿಂಗನಿರ್ದೇಶ ಸಂಗತವಾಗುತ್ತದೆ. ಪ್ರತಿಪಾದನವೇ ಲಕ್ಷಣಾ ಎಂದುದರಿಂದ ಲಕ್ಷಣಾ ವಿಧೇಯವಾದುದರಿಂದ ಅದು ಸ್ತ್ರೀಲಿಂಗವಾದುದರಿಂದ ಸಾ ಎಂದು ಹೇಳಿದೆ.

ಇದನ್ನು ಕೈಯಟರು ಸ್ಪಷ್ಟಪಡಿಸಿರುತ್ತಾರೆ. ಮಹಾಭಾಷ್ಯದಪಸ್ಪಶಾಹ್ನಿಕದಲ್ಲಿ ಶಬ್ದಸ್ವರೂಪವಿವೇಚನಮಾಡುವಾಗ "ಕಿಂ ಯತ್ತತ್ಸಾಲಾಂಗೂಲಕಕುದಖುರವಿಷಾಣ್ಯರ್ಥರೂಪಂ ಸ ಶಬ್ದಃ" ಎಂದು ಹೇಳಿದೆ ಅಲ್ಲಿ ವಿಧೇಯವಾದುದು ಶಬ್ದವಾದುದರಿಂದ ತದನುಸಾರವಾಗಿ ಸಃ ಎಂದು ಪುಲ್ಲಿಂಗನಿರ್ದೇಶಮಾಡಿದೆ. ಅದರ ಉಪಪತ್ತಿಯನ್ನು ತೋರಿಸುವಾಗ ಕೈಯಟರು ಈ ಮಾತನ್ನು ಹೇಳಿರುತ್ತಾರೆ. 'ನಿರ್ದಿಶ್ಯ—' ಇತಿ. ನಿರ್ದಿಶ್ಯಮಾನಂ— ಉದ್ದೇಶ್ಯ. ಪ್ರತಿನಿರ್ದಿಶ್ಯಮಾನಂ— ವಿಧೇಯ. ಯದ್ಯಪಿ ಉದ್ದೇಶ್ಯ ಪರಾಮರ್ಶಿಯಾಗಿಯೇ ತಚ್ಛಬ್ಧವನ್ನು ಪ್ರಯೋಗಿಸಬೇಕು. ಆದರೂ ಅದು ಉದ್ದೇಶ್ಯವಿಧೇಯಗಳಿಗೆ ಐಕ್ಯಬೋಧಕವಾದುದರಿಂದ ಉದ್ದೇಶ್ಯಲಿಂಗದಿಂದಲೇ ನಿರ್ದೇಶಿಸಬೇಕೆಂಬನಿಯಮವಿರುವುದಿಲ್ಲ. ವಿಧೇಯಲಿಂಗದಿಂದ ನಿರ್ದೇಶಿಸಿದರೂ ಬಾಧಕವಿಲ್ಲವೆಂದು ಅವರು ವಿವರಿಸಿರುತ್ತಾರೆ. ಲೋಕದಲ್ಲಿ ಇದಕ್ಕೆ ಉದಾ:—'ಯೋಽಸೌ ಪುತ್ರಃ ಸಃ ರತ್ನಮ್, ಯೋಽಸೌ ಪುತ್ರಃ, ತದ್ರತ್ನಮ್. ಅಭಿಧಾನವತ್—ಶಕ್ತಿಯಂತೆ 'ನಿರೂಢಾಂ—' ಇತಿ ತಂತ್ರವಾರ್ತಿಕದಲ್ಲಿ ಕುಮಾರಿಲಭಟ್ಟರು ಈ ವಾಕ್ಯವನ್ನು ಹೇಳಿರುತ್ತಾರೆ. ಕೆಲವು ನಿರೂಢಲಕ್ಷಣಾ ಇರುತ್ತವೆ. ಸಾಮರ್ಥ್ಯಾತ್—ಪ್ರಸಿದ್ಧಿಯಿಂದ ಪ್ರಯೋಜನಾಪೇಕ್ಷೆ ಇಲ್ಲದೆ ಪ್ರಸಿದ್ಧಿಯನ್ನನುಸರಿಸಿ ಇದನ್ನು ಆಶ್ರಯಿಸುವುದರಿಂದ ಈ ರೂಢಿಲಕ್ಷಣಾವ್ಯಾಪಾರವು ಅಭಿಧಾವ್ಯಾಪಾರದಂತೆಯೇ ಆಗುತ್ತದೆ. 'ಯದ್ಯಪಿ—' ಇತಿ. ಆರೋಪಿತಕ್ರಿಯಾ ಹೇಗೆಂಬುದನ್ನು ಹಿಂದೆ ವಿವರಿಸಿದೆ. 'ಸ್ವಸಿದ್ಧಯೇ ಪರಾಕ್ಷೇಪಃ—' ಇದು ಉಪಾದಾನಲಕ್ಷಣಾಲಕ್ಷಣ. 'ಕುಂತಾಃ ಪ್ರವಿಶಂತಿ' ಉದಾಹರಣೆ. ಮುಖ್ಯಾರ್ಥವಾದ ತನ್ನ ಅನ್ವಯ (ಪ್ರವೇಶ) ಸಿದ್ಧಿಗೋಸ್ಕರ ಅನ್ಯಾರ್ಥದ ಆಕ್ಷೇಪ ಅಂದರೆ ಗ್ರಹಣ ಬಂದಲ್ಲಿ ಉಪಾದಾನಲಕ್ಷಣಾ ಆಗುತ್ತದೆ. ಸ್ವಾರ್ಥಾಪರಿತ್ಯಾಗೇನ ಪರಾರ್ಥಗ್ರಹಣಮುಪಾದಾನಮ್. ಕುಂತವೆಂದರೆ ಈಟಿ ಭರ್ಜಿ ಮುಂತಾದ ಅಚೇತನಗಳಿಗೆ ಪ್ರವೇಶನಕ್ರಿಯಾಕರ್ತೃತ್ವ ಕೂಡದಿರುವುದರಿಂದ ಅನ್ವಯ ಬಾರದಿರುವುದರಿಂದ ಅನ್ವಯಸಿದ್ಧಿಗೋಸ್ಕರ ಅವುಗಳಿಂದ ಕುಂತವಿಶಿಷ್ಟಪುರುಷರು ಲಕ್ಷಣೆಯಿಂದ ಬೋಧಿತರಾಗುತ್ತಾರೆ. ಕುಂತವಿಶಿಷ್ಟಪುರುಷರ ಪ್ರವೇಶವೇ ಅಲ್ಲಿ ವಿವಕ್ಷಿತವಾಗಿರುತ್ತದೆ.

"ಪರಾರ್ಥಂ—" ಎಂಬುದು ಲಕ್ಷಣಲಕ್ಷಣಾಲಕ್ಷಣ. ಪರದಅನ್ವಯ ಸಿದ್ಧಿಗೋಸ್ಕರ ಸ್ವ ಅಂದರೆ ಮುಖ್ಯಾರ್ಥದ ಸಮರ್ಪಣ—ಎಲ್ಲಿದೆಯೋ ಅಲ್ಲಿ ಲಕ್ಷಣಲಕ್ಷಣಾ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾರ್ಥಪರಿತ್ಯಾಗೇನ ಪರಾರ್ಥಲಕ್ಷಣಂ ಲಕ್ಷಣಂ—ಲಕ್ಷಣಲಕ್ಷಣಾ. 'ಗಂಗಾಯಾಂ ಘೋಷಃ' (ಮಂಚಾಃ ಕ್ರೋಶಂತಿ) ಉದಾಹರಣೆ. ಗಂಗಾಪದದಿಂದ ಪ್ರವಾಹವು ಮುಖ್ಯಾರ್ಥವಾಗಿ ತೋರುತ್ತದೆ. ಪರವಾದ ಘೋಷ (ಗೊಲ್ಲರಹಳ್ಳಿ) ದ ಅಧಿಕರಣತ್ವ ಸಿದ್ಧಿಯಾಗಲು ಗಂಗಾಪದವು ಸ್ವಾರ್ಥಪ್ರವಾಹವನ್ನು ಬಿಟ್ಟು ಲಕ್ಷಣೆಯಿಂದ ತೀರ ರೂಪಾರ್ಥವನ್ನು ತಿಳಿಸುತ್ತದೆ. ಗಂಗಾತೀರದಲ್ಲಿ ಘೋಷವೆಂದರ್ಥವಾಗುತ್ತದೆ. ಇವೆರಡೂ ಶುದ್ಧಲಕ್ಷಣಾ ಆಗುತ್ತವೆ. ಸಾದೃಶ್ಯ ಸಂಬಂಧದ ಮೂಲಕ ಇಲ್ಲಿ ಆರೋಪ ಬರಲಿಲ್ಲ. 'ಸಾರೋಪಾನ್ಯಾ—' ಇತಿ. ಸಾದೃಶ್ಯಸಂಬಂಧಮೂಲಕವಾಗಿ ಆರೋಪ ವಿರುವಲ್ಲಿ ಸಾರೋಪಾಗೌಣೀ. ವಿಷಯವಿಷಯಿಗಳಿಗೆ ಅಭೇದೋಪನ್ಯಾಸವೇ ಆರೋಪ. ಎರಡೂ ಶಬ್ದಪ್ರತಿಪಾದ್ಯಗಳಾಗಿರಬೇಕು. 'ಗೌರ್ವಾಹೀಕಃ' ಉದಾಹರಣೆ. ಇಲ್ಲಿ ಗೋಶಬ್ದದಿಂದ ಬುದ್ಧಿಮಾಂದ್ಯಾದಿಸಾದೃಶ್ಯದಿಂದ ಜಡನೆಂಬರ್ಥವು ಲಕ್ಷಣೆಯಿಂದ ಬೋಧಿತವಾಗುತ್ತದೆ. ಎರಡೂ ಹೇಳಿರುವುದರಿಂದ ಸಾರೋಪಾ ಆಗುತ್ತದೆ.

'ವಿಷಯ್ಯಂತಃ—' ಇತಿ. ಸಾಧ್ಯವಸಾನಗೌಣೀಯನ್ನು ಹೇಳುತ್ತಾನೆ. ಆರೋಪಿಸಲ್ಪಡುವವಿಷಯಿಯಿಂದ ವಿಷಯವು ನಿಗೀರ್ಣವಾದರೆ (ಶಬ್ದತಃ ಹೇಳದೇ ಅದರ ಅರ್ಥತೋರುತ್ತಿರುವಾಗ) ಸಾಧ್ಯವಸಾನಲಕ್ಷಣೆಯಾಗುತ್ತದೆ. ವಿಷಯಿಯಿಂದ ವಿಷಯದ ತಿರೋಭಾವವೇ ಅಧ್ಯವಸಾನ "ಗೌಃ (ಅಯಮ್)" ಉದಾಹರಣೆ. ಇಲ್ಲಿ ಸೇವಕರೂಪಬಾಹೀಕಾರ್ಥವು ಗೋವಿನಲ್ಲಿ ನಿಗೀರ್ಣವಾಗಿದೆ. ಶಬ್ದಾಂತರದಿಂದ ಬೇರೆ ಉಪಸ್ಥಿತಿ ಇಲ್ಲ. 'ಭೇದಾವಿಮೌ' ಇತಿ. ಇವೆರಡೂ ಸಾದೃಶ್ಯಸಂಬಂಧದಿಂದ ಬರುವುದರಿಂದ ಗೌಣಗಳೆಂದು ತಿಳಿಯಬೇಕು. ಸಾದೃಶ್ಯಸಂಬಂಧವನ್ನು ಬಿಟ್ಟು ಇತರ ಕಾರ್ಯಕಾರಣಾದಿ ಸಂಬಂಧಗಳಿಂದ ಬರುವುದಾದರೆ ಅವು ಎರಡು ಶುದ್ಧವಾಗುತ್ತವೆ. ಆಯುರ್ಘೃತಮ್, ಆಯುರೇವೇದಮ್. ಉದಾಹರಣೆಗಳು. ಮೊದಲನೆಯದರಲ್ಲಿ ವಿಷಯವಿಷಯಿಗಳೆರಡೂ ಹೇಳಿ ಕಾರ್ಯಕಾರಣಭಾವಸಂಬಂಧದಿಂದ ಆರೋಪಮಾಡಿದೆ. ಆದುದರಿಂದ ಶುದ್ಧಸಾರೋಪಾ. ಎರಡನೆಯದರಲ್ಲಿ ವಿಷಯಿಮಾತ್ರ ಹೇಳಿ ಅದರಿಂದ ವಿಷಯಪ್ರತಿಪತ್ತಿಯಾಗುವುದರಿಂದ ಶುದ್ಧಸಾಧ್ಯವಸಾನವಾಗುತ್ತದೆ. ಹೀಗೆ ಲಕ್ಷಣಾ ಆರುವಿಧವಾಗಿದೆ. ಪ್ರಸಂಗದಿಂದ (ಪ್ರಕೃತಾನುಪಯುಕ್ತವಾದರೂ) ಈ ಲಕ್ಷಣಾ ಲಕ್ಷಣವು ಆಲಂಕಾರಶಾಸ್ತ್ರರೀತಿಯಿಂದ ವಿವರಿಸಿದೆ.

ಸ ಚ ಯೋಗೋ ಯಮಾದಿಭೇದವಶಾತ್ ಅಷ್ಟಾಂಗ ಇತಿ ನಿರ್ದಿಷ್ಟಃ । ತತ್ರ ಯಮಾ ಅಹಿಂಸಾದಯಃ । ತದಾಹ ಪತಂಜಲಿಃ—ಅಹಿಂಸಾಸತ್ಯಾಸ್ತೇಯ ಬ್ರಹ್ಮಚರ್ಯಾ ಪರಿಗ್ರಾಹಾ ಯಮಾಃ (ಸೂ-೨೩೦) ಇತಿ । ನಿಯಮಾಃ ಶೌಚಾದಯಃ । ತದಪ್ಯಾಹ — ಶೌಚಸಂತೋಷತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ— (ಸೂ ೨೩೨) ಇತಿ. ಏತೇ ಚ ಯಮನಿಯಮಾ ವಿಷ್ಣು ಪುರಾಣೇ ದರ್ಶಿತಾಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮಚರ್ಯಮಹಿಂಸಾಂ ಚ ಸತ್ಯಾಸ್ತೇಯಾಪರಿಗ್ರಹಾನ್ ।
ಸೇವೇತ ಯೋಗೋ ನಿಷ್ಕಾಮೋ ಯೋಗ್ಯತಾಂ ಸ್ವಂ ಮನೋ ನಯನ್ ।
ಸ್ವಾಧ್ಯಾಯಶೌಚ ಸಂತೋಷತಪಾಂಸಿ ನಿಯತಾತ್ಮವಾನ್ ।
ಕುರ್ವೀತ ಬ್ರಹ್ಮಣಿ ತಥಾ ಪರಸ್ಮಿನ್ ಪ್ರವಣಂ ಮನಃ ।
ಏತೇ ಯಮಾಃ ಸನಿಯಮಾಃ ಪಂಚಪಂಚಪ್ರಕೀರ್ತಿತಾಃ
ವಿಶಿಷ್ಟಫಲದಾಃ ಕಾಮೇ ನಿಷ್ಕಾಮಾಣಾಂ ವಿಮುಕ್ತಿದಾಃ ॥
ವಿ. ಪು ೬-೭-೩೬-೩೮) ಇತಿ ।

ಈ ಯೋಗವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂದು ಎಂಟುವಿಧಗಳಾಗಿವೆ. ಅಹಿಂಸಾದಿಗಳ ಮತ್ತು ಯಮನಿಯಮಾಗಳ ಸ್ವರೂಪ ಹಿಂದೆ ಹೇಳಿದೆ. ವಿಷ್ಣುಪುರಾಣದಲ್ಲಿಯೂ ಇವು ವರ್ಣಿತವಾಗಿವೆ. 'ಯೋಗ್ಯತಾಃ'—ಇತಿ. ಸ್ವಂ.— ಸ್ವಕೀಯೇ, ತನ್ನ ಮನಸ್ಸನ್ನು ಆತ್ಮವಿಚಾರಯೋಗ್ಯವನ್ನಾಗಿ ಹೊಂದಿಸುತ್ತದೆಂದರ್ಥ. ಫಲಾಭಿಸಂಧಿರಹಿತವಾಗಿ ಅಹಿಂಸಾದಿಗಳ ಅನುಷ್ಠಾನದಿಂದ ಮನಸ್ಸು ಆತ್ಮವಿಚಾರಯೋಗ್ಯವಾಗುತ್ತದೆಂದರ್ಥ. 'ಸ್ವಾಧ್ಯಾಯ'—ಇತಿ. ನಿಯತಾತ್ಮವಾನ್—ನಿಗ್ರಹಿಸಿದ ಮನಸ್ಸುಳ್ಳವನು. ಇವನೇ ಸ್ವಾಧ್ಯಾಯಾದಿಗಳನ್ನು ಸೇವಿಸಬೇಕು. ಯಾವಾಗಲೂ ಪರಬ್ರಹ್ಮನಲ್ಲಿ ಪ್ರವಣಂ — ಆಸಕ್ತವಾದ ಮನಸ್ಸನ್ನೇ ಮಾಡುತ್ತಿರಬೇಕು- ಇದರಿಂದ ಈಶ್ವರಪ್ರಣಿಧಾನ ರೂಪವಾದ ಐದನೆಯ ನಿಯಮವು ಹೇಳಿದಂತಾಗುತ್ತದೆ.

ಸ್ಥಿರಸುಖಮಾಸನಂ ಪದ್ಮಾಸನಭದ್ರಾಸನವೀರಾಸನ ಸ್ವಸ್ತಿಕಾಸನದಂಡಕಾಸನ ಸೋಪಾಶ್ರಯಪರ್ಯಂಕಕ್ರೌಂಚನಿಷದನೋಷ್ಟ್ರನಿಷದನ ಸಮಸಂಸ್ಥಾನ ಭೇದಾದ್ದಶವಿಧಮ್
ಪಾದಾಂಗುಷ್ಠೌ ನಿಬಧ್ನೀಯಾದ್ಧಸ್ತಾಭ್ಯಾಂ ವ್ಯುತ್ಕ್ರಮೇಣ ತು ।
ಊರ್ವೋರುಪರಿ ವಿಪ್ರೇಂದ್ರ ಕೃತ್ವಾ ಪಾದತಲೇ ಉಭೇ ।
ಪದ್ಮಾಸನಂ ಭವೇದೇತತ್ಸರ್ವೇಷಾಮಭಿಪೂಜನಮ್ ॥
ಇತ್ಯಾದಿನಾ ಯಾಜ್ಞವಲ್ಕ್ಯಃ ಪದ್ಮಾಸನಾದಿಸ್ವರೂಪಂ ನಿರೂಪಿತವಾನ್ । ತತ್ಸರ್ವಂ ತತ ಏವಾವಗಂತವ್ಯಮ್ । ತಸ್ಮಿನ್ನಾಸನಸ್ಥೈರ್ಯೇ ಸತಿ ಪ್ರಾಣಾಯಾಮಃ ಪ್ರತಿಷ್ಠಿತೋ ಭವತಿ । ಸ ಚ ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಸ್ವರೂಪಃ। ತತ್ರ ಶ್ವಾಸೋನಾಮ ಬಾಹ್ಯಸ್ಯ ವಾಯೋರಂತರಾನಯನಮ್ । ಪ್ರಶ್ವಾಸಃ ಪುನಃ ಕೋಷ್ಠ್ಯಸ್ಯಬಹಿ ರ್ನಿಃಸರಣಮ್ । ತಯೋರುಭಯೋರಪಿ ಸಂಚರಣಾಭಾವಃ । ಪ್ರಾಣಯಾಮಃ ॥

ಆಸನಲಕ್ಷಣ ಹಿಂದೆ ಹೇಳಿದೆ. ಅದು ಪದ್ಮಾಸನಾದಿಭೇದದಿಂದ ಹತ್ತುವಿಧವಾಗಿರುತ್ತದೆ. 'ಪಾದಾಂಗುಷ್ಠೌ—' ಎಂಬುದರಿಂದ ಪದ್ಮಾಸನಲಕ್ಷಣವನ್ನು ತೋರಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತಾನೆ. ಇವುಗಳನ್ನು ಬರದಂತೆ ತಿಳಿದುಕೊಳ್ಳುವುದು ಕಷ್ಟವಾಗುವುದರಿಂದ ಯೋಗಾಸನ ಬಲ್ಲವರಿಂದ ತಿಳಿದುಕೊಳ್ಳುವುದೇ ಉತ್ತಮವಾಗಿದೆ.

(ಗುಲ್ಫೌತು ವೃಷಣಸ್ಯಾಧಃಸೀವನ್ಯಾಃ ಪಾರ್ಶ್ವಯೋಃ ಕ್ಷಿಪೇತ್ । ಪಾರ್ಶ್ವಪಾದೌ ಚ ಪಾಣಿಭ್ಯಾಂ ದೃಢಂ ಬಧ್ವಾ ಸುನಿಶ್ಚಲಃ ॥ ಭದ್ರಾಸನಂ ಭವೇದೇತತ್ ಸರ್ವ ವ್ಯಾಧಿ ವಿಷಾಪಹಮ್ । ಏಕಪಾದಮಥೈಕಸ್ಮಿನ್ ವಿನ್ಯಸ್ಯೋರೌ ಚ ಸಂಸ್ಥಿತಃ । ಇತರಸ್ಮಿಂಸ್ತಥಾ ಪಾದಂ ವೀರಾಸನ ಮುದಾಹೃತಮ್ । ಜಾನೂರ್ವೋರಂತರೇ ಸಮ್ಯಕ್ ಕೃತ್ವಾ ಪಾದತಲೇ ಉಭೇ ಋಜುಕಾಯಃ ಸುಖಾಸೀನಃ ಸ್ವಸ್ತಿಕಂ ತತ್ ಪ್ರಚಕ್ಷತೇ ಕ್ಲಿಷ್ಟಾಂಗುಲಿಕೌ ಕ್ಲಿಷ್ಟಗುಲ್ಫೌ ಭೂಮಿಶ್ಲಿಷ್ಟಜಂಘೋರು ಪಾದೌ ಪ್ರಸಾರ್ಯೋಪವೇಶನಂ ದಂಡಕಾಸನಮ್ । ಯೋಗಪಟ್ಟಯೋಗೇ ನೋಪವೇಶನಂ ಸೋಪಾಶ್ರಯಮ್ । ಜಾನುಪ್ರಸಾರಿತ ಬಾಹೋಃಶಯನಂ ಪರ್ಯಂಕಃ । ನಿಷಣ್ಣಕ್ರೌಂಚವದವಸ್ಥಾನಂ ಕ್ರೌಂಚನಿಷದನಮ್ । ನಿಷಣ್ಣೋಷ್ಟ್ರವದವಸ್ಥಾನಮುಷ್ಟ್ರನಿಷದನಮ್ । ಜಾನ್ವೋರುಪರಿ ಹಸ್ತೌ ಕೃತ್ವಾ ಕಾಯಶಿರೋಗ್ರೀವಾಣಾ ಮವಕ್ರಭಾವೇನಾವಸ್ಥಾನಂ ಸಮಸಂಸ್ಥಾನಮ್ ॥

ಆಸನಸ್ಥೈರ್ಯ ಸಂಪಾದಿಸಿದ ಮೇಲೆ ಪ್ರಾಣಾಯಾಮವು ವೀರ್ಯವತ್ತಾಗುತ್ತದೆ. ಶ್ವಾಸಪ್ರಶ್ವಾಸಗಳ ಗತಿಯನ್ನು ತಡೆಯುವುದೇ ಪ್ರಾಣಾಯಾಮ. ಹೊರಗಿನ ಗಾಳಿಯನ್ನು ಒಳಗೆ ಎಳೆದುಕೊಳ್ಳುವುದು ಶ್ವಾಸ. ಹೊರಗೆ ಬಿಡುವುದುಪ್ರಶ್ವಾಸ. ಎರಡರ ಸಂಚಾರವಿಲ್ಲದಂತೆ ಮಾಡುವುದೇ ಪ್ರಾಣಾಯಾಮ.

ನನುನೇದಂಪ್ರಾಣಾಯಾಮಸಾಮಾನ್ಯಲಕ್ಷಣಮ್ । ತದ್ವಿಶೇಷೇಷು ರೇಚಕಪೂರಕ ಕುಂಭಕಪ್ರಕಾರೇಷು ತದನುಗತೇರಯೋಗಾದಿತಿ ಚೇತ್ — ನೈಷದೋಷಃ । ಸರ್ವತ್ರಾಽಪಿ ಶ್ವಾಸಪ್ರಶ್ವಾಸಗತಿ ವಿಚ್ಛೇದಸಂಭವಾತ್ । ತಥಾಹಿ-ಕೋಷ್ಠ್ಯಸ್ಯ ವಾಯೋರ್ಬಹಿರ್ನಿ: ಸರಣಂ ರೇಚಕಃ ಪ್ರಾಣಾಯಾಮೋ ಯಃ ಪ್ರಶ್ವಾಸತ್ವೇನ ಪ್ರಾಗುಕ್ತಃ। ಬಾಹ್ಯಸ್ಯ ವಾಯೋರಂತರ್ಧಾರಣಂ ಪೂರಕೋ ಯಃ ಶ್ವಾಸ ರೂಪಃ ! ಅಂತಸ್ತಂಭವೃತ್ತಿಃ ಕುಂಭಕಃ । ಯಸ್ಮಿನ್ ಜಲಮಿವ ಕುಂಭೇ ನಿಶ್ಚಲ ತಯಾಪ್ರಾಣಾಖ್ಯೋ ವಾಯುರವಸ್ಥಾಪ್ಯತೇ । ತತ್ರ ಸರ್ವತ್ರ ಶ್ವಾಸಪ್ರಶ್ವಾಸ ದ್ವಯಗತಿವಿಚ್ಛೇದೋಽಸ್ತೀತಿ ನಾಸ್ತಿ ಶಂಕಾವಕಾಶಃ । ತದುಕ್ತಂ — ತಸ್ಮಿನ್ ಸತಿ ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಃ ಪ್ರಾಣಯಾಮಃ (ಸೂ ೨ । ೪೯) ಇತಿ ॥

ವಾಯುವಿನ ಗತಿಯನ್ನು ತಡೆಯುವುದೇ ಪ್ರಾಣಾಯಾಮವೆನ್ನುವುದಾದರೆ (ಸಾಮಾನ್ಯಲಕ್ಷಣ ಹೇಳಿದರೆ) ಆಗ ಕುಂಭಕದಲ್ಲಿಮಾತ್ರ ಸಮನ್ವಯವಾಗಬೇಕಾಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ. ರೇಚಕ ಪೂರಕಗಳಲ್ಲಿ ಸಂಭವಿಸಲಾರದು. ರೇಚಕದಲ್ಲಿ ಬಹಿರ್ನಿಃಸರಣ ರೂಪವಾದ, ಪೂರಕದಲ್ಲಿ ಅಂತಃ ಪ್ರವೇಶರೂಪ ಗತಿಯು ಇದ್ದೇ ಇರುತ್ತದೆ ಎಂದು ಶಂಕಿಸುವವನ ಅಭಿಪ್ರಾಯ. ಪ್ರಾಣಾಯಾಮದಲ್ಲಿ ಶ್ವಾಸಪ್ರಶ್ವಾಸಗಳೆರಡರಗತಿ ನಿರೋಧವಿದ್ದೇ ಇರುತ್ತದೆಂದು ಸಮಾಧಾನ. "ಏಕಸತ್ವೇ ದ್ವಯಂ ನಾಸ್ತಿ" ಎಂಬ ನ್ಯಾಯದಿಂದ ಉಭಯಾಭಾವವು ರೇಚಕಪೂರಕಗಳಲ್ಲಿ ಬರುತ್ತದೆಂದು ತಾತ್ಪರ್ಯ. ರೇಚಕವಿರುವಾಗ ಪೂರಕದಗತಿಯಿರುವುದಿಲ್ಲ. ಪೂರಕವಿರುವಾಗ ರೇಚಕಗತಿನಿರೋಧ ವಿರುತ್ತದೆ. ಅದೂ ಅಲ್ಲದೆ ಗತಿನಿರೋಧವೆಂದರೆ ಸ್ವಾಭಾವಿಕವಾದ ಗತಿಯವಿಚ್ಛೇದ ವೆಂದರ್ಥ. ರೇಚಕದಲ್ಲಾಗಲೀ ಪೂರಕದಲ್ಲಾಗಲೀ ವಾಯುವಿನ ಸ್ವಾಭಾವಿಕವಾದ ಗತಿ ಇರುವುದಿಲ್ಲ. ದೇಶಾಪೇಕ್ಷೆಯೂ ಕಾಲಾಪೇಕ್ಷೆಯೂ ಅಧಿಕವಾಗಿರುತ್ತದೆ. ಆಗ ಸ್ವಾಭಾವಿಕಗತಿವಿಚ್ಛೇದ ಆಗಿಯೇ ಆಗುತ್ತದೆ. ಪ್ರಶ್ವಾಸಪೂರ್ವಕವಾದ ಗತ್ಯಭಾವವೇ ರೇಚಕವೆಂದೂ, (ಒಳಗೆ ತುಂಬುವುದರಿಂದ ಉಂಟಾಗುವ ಗತ್ಯಭಾವ) ಶ್ವಾಸಪೂರ್ವಕ ಗತ್ಯಭಾವವೇ ಪೂರಕವೆಂದು ತಿಳಿಯಬೇಕು. ಕಾಯಿಸಿದ ಕಲ್ಲಿನಮೇಲೆ ನೀರು ಎಲ್ಲಾ ಕಡೆಯಿಂದಲೂ ಸಂಕೋಚ ಹೊಂದುವಂತೆ, (ಇಂಗಿಹೋಗುವಂತೆ) ಕುಂಭಕದಲ್ಲಿ ಬಾಹ್ಯಾಭ್ಯಂತರವಾಯುಗಳು ಏಕಕಾಲದಲ್ಲಿ ಗತ್ಯಭಾವಹೊಂದುವುದರಿಂದ ಸಂಕೋಚ ರೂಪವಾದ ಸ್ತಂಭವುಂಟಾಗುತ್ತದೆ.

ಸ ಚ ವಾಯುಃ ಸೂರ್ಯೋದಯಮಾರಭ್ಯ ಸಾರ್ಧಘಟಿಕಾದ್ವಯ ಘಟೀಯಂತ್ರಸ್ಥಿತಘಟ ಭ್ರಮಣನ್ಯಾಯೇನೈಕೈಕಸ್ಯಾಂ ನಾಡ್ಯಾಂ ಭವತಿ । ಏವಂ ಸತ್ಯಹರ್ನಿಶಂ ಶ್ವಾಸ ಪ್ರಶ್ವಾಸಯೋಃ ಷಟ್‌ಶತಾಧಿಕೈಕವಿಂಶತಿಸಹಸ್ರಾಣಿ ಜಾಯಂತೇ । ಅತ ಏವೋಕ್ತಂ ಮಂತ್ರಸಮರ್ಪಣ ರಹಸ್ಯವೇದಿಭಿರಜಪಾಮಂತ್ರಸಮರ್ಪಣೇ—

ಷಟ್‌ಶತಾನಿ ಗಣೇಶಾಯ ಷಟ್ ಸಹಸ್ರಂ ಸ್ವಯಂಭುವೇ ।
ವಿಷ್ಣವೇ ಷಟ್ ಸಹಸ್ರಂ ಚ ಷಟ್ ಸಹಸ್ರಂ ಪಿನಾಕಿನೇ ।
ಸಹಸ್ರಮೇಕಂ ಗುರುವೇ ಸಹಸ್ರಂ ಪರಮಾತ್ಮನೇ ।
ಸಹಸ್ರಮಾತ್ಮನೇ ಚೈವಮರ್ಪಯಾಮಿ ಕೃತಂ ಜಪಮ್ !

ತಥಾನಾಡೀ ಸಂಚಾರಣ ದಶಾಯಾಂ ವಾಯೋಃ ಸಂಚರಣೇ ಪೃಥಿವ್ಯಾದೀನಿ ತತ್ವಾನಿ ವರ್ಣವಿಶೇಷವಶಾತ್ಪುರುಷಾರ್ಥಾಭಿಲಾಷುಕೈಃ ಪುರುಷೈರವಗಂತವ್ಯಾನಿ

ಪ್ರಾಣಾಯಾಮ ಪ್ರಸಂಗದಿಂದ ವಾಯುವು ಸಂಚರಿಸುವ ಸ್ಥಾನಾದಿಗಳನ್ನು ನಿರೂಪಿಸುತ್ತಾನೆ. 'ಸ ಚ'—ಇತಿ. ಪ್ರಾಣಿಗಳ ದಕ್ಷಿಣನಾಡಿಗೆ 'ಪಿಂಗಲಾ' ಎಂದೂ ವಾಮನಾಡಿಗೆ 'ಇಡಾ' ಎಂದೂ, ಮಧ್ಯನಾಡಿಗೆ 'ಸುಷುಮ್ನಾ' ಎಂದೂ ಹೆಸರು. ಎರಡೂವರೆ ಗಳಿಗೆಯವರೆಗೆ ಪಿಂಗಳಾನಾಡಿಯಿಂದ ವಾಯುಸಂಚಾರವಾಗುತ್ತದೆ. ಆಮೇಲೆ ಎರಡೂವರೆ ಗಳಿಗೆಯವರೆಗೆ ಇಡಾನಾಡಿಯಿಂದ ಸಂಚರಿಸುತ್ತದೆ. ಗಡಿಯಾರದ ಮುಳ್ಳಿನಂತೆ ಈ ಎರಡು ನಾಡಿಗಳಲ್ಲಿ ಯಾವಾಗಲೂ ಈ ಕ್ರಮದಿಂದಲೇ ವಾಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಚಾರವಾಗುತ್ತಿರುತ್ತದೆ. ಒಂದು ಗಳಿಗೆಗೆ ಅರವತ್ತು ಪಲಗಳು. (ಸೆಕೆಂಡ್) ಒಂದು ಪಲಸಮಯದಲ್ಲಿ ಆರುಶ್ವಾಸ ಪ್ರಶ್ವಾಸಗಳಾಗುತ್ತವೆ. ಒಂದು ಗಳಿಗೆಯಲ್ಲಿ ೩೬೦ ಶ್ವಾಸಪ್ರಶ್ವಾಸಗಳು. ಎರಡೂವರೆ ಗಳಿಗೆಗಳಲ್ಲಿ ೯೦೦ ಆಗುತ್ತವೆ. ಸೂರ್ಯೋದಯದಿಂದ ಸೂರ್ಯೋದಯದವರೆಗೆ ೧ ದಿನದಲ್ಲಿ ೨೧೬೦೦ ಆಗುತ್ತವೆ.

'ಅಜಪಾಮಂತ್ರ'—ಇತಿ. ಸ್ವಭಾವಸಿದ್ಧವಾದ ಶ್ವಾಸಪ್ರಶ್ವಾಸರೂಪವಾದುದೇ ಅಜಪಾಮಂತ್ರ. ಸ್ವಭಾವಸಿದ್ಧವಾದುದರಿಂದಲೇ ಇತರ ಮಂತ್ರಗಳಂತೆ ಇದು ಜಪ್ಯವಾಗುವುದಿಲ್ಲ. ಆದುದರಿಂದ ಅಜಪಾ ಎಂದು ಹೆಸರು ಬಂದಿದೆ. ಇಲ್ಲಿ ಶ್ವಾಸಪ್ರಶ್ವಾಸಗಳಿಗೆ ಹಂಸವೆಂಬ ಮಂತ್ರ ಭಾವನೆ ಮಾಡಲ್ಪಡುತ್ತದೆ. ಈ ಮಂತ್ರವು ಶ್ವಾಸಪ್ರಶ್ವಾಸರೂಪವಾದುದರಿಂದ ಪ್ರತಿಹಗಲೂ ರಾತ್ರಿಯೂ ೨೧೬೦೦ ಬಾರಿ ಆವೃತವಾಗುತ್ತದೆ. ಅದು ವಿಭಾಗಿಸಲ್ಪಟ್ಟು ಗಣಪತ್ಯಾದಿದೇವತೆಗಳಿಗೆ ಸಮರ್ಪಿಸಲ್ಪಡುತ್ತದೆ. ಗಣಪತಿಗೆ ೬೦೦. ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಆರಾರುಸಾವಿರ ಪರಮಾತ್ಮನಿಗೆ ಒಂದು ಸಾವಿರ. ತನಗೆ ಸಾವಿರ. ಹೀಗೆ ಅರ್ಪಿಸಬೇಕು. 'ತಥಾ'—ಇತಿ. ಹೇಗೆ ವಾಯುವಿನ ಸ್ವಭಾವಗತಿಯಿಂದ ಪ್ರತಿಶ್ವಾಸ ಪ್ರಶ್ವಾಸಗಳನ್ನು ಹಂಸವೆಂಬಮಂತ್ರ ಭಾವನೆಯಿಂದ ಅಜಪಾಜಪವು ಸಾಧಿಸಲ್ಪಟ್ಟಿದೆಯೋ ಅದರಂತೆ ವಾಯುಸಂಚಾರದಿಂದ ಸಂಚರಿಸಲ್ಪಡುವ ನಾಡಿಯಲ್ಲಿ ಅದರ ಒಳಗಿರುವ ಸಂಚರಿಸುವ ಪೃಥಿವ್ಯಾದಿತತ್ತ್ವಗಳೂ ಅಂತರದೃಷ್ಟಿಯಿಂದ ನೋಡಲ್ಪಟ್ಟವುಗಳಾಗಿ ಪೀತಾದಿವರ್ಣ ವಿಶೇಷವಿಶಿಷ್ಟಬಿಂದುಗಳಿಂದ ತಿಳಿದು ಪುರುಷಾರ್ಥವು ಸಾಧಿಸಲ್ಪಡಬೇಕು. ಇದನ್ನೇ ಮುಂದೆ ಶ್ಲೋಕಗಳಿಂದ ವಿವರಿಸುತ್ತಾನೆ.

ತದುಕ್ತಮಭಿಯುಕ್ತೈಃ—

ಸಾರ್ಧಂ ಘಟೀದ್ವಯಂ ನಾಡ್ಯೋರೇಕೈಕಾರ್ಕೋದಯಾದ್ವಹೇತ್ ।
ಅರಘಟ್ಟಘಟೀಭ್ರಾಂತಿನ್ಯಾಯೋ ನಾಡ್ಯೋಃ ಪುನಃ ಪುನಃ ॥
ಶತಾನಿ ತತ್ರ ಜಾಯಂತೇ ನಿಶ್ವಾಸೋಚ್ಛ್ವಾಸಯೋರ್ನವ ।
ಷ್ವಷ್ವಷಟ್ಕದ್ವಿಕೈಃ ಸಂಖ್ಯಾಹೋರಾತ್ರೇ ಸಕಲೇ ಪುನಃ।
ಷಟ್‌ತ್ರಿಂಶದ್ಗುರುವರ್ಣಾನಾಂ ಯಾ ವೇಲಾ ಭಣನೇ ಭವೇತ್ ।
ಸಾ ವೇಲಾ ಮರುತೋ ನಾಡ್ಯಂತರೇ ಸಂಚರತೋ ಭವೇತ್ ॥
ಪ್ರತ್ಯೇಕಂ ಪಂಚ ತತ್ತ್ವಾನಿ ನಾಡ್ಯೋಶ್ಚ ವಹಮಾನಯೋಃ ।
ವಹಂತ್ಯಹರ್ನಿಶಂ ತಾನಿ ಜ್ಞಾತವ್ಯಾನಿ ಯತಾತ್ಮಭಿಃ ।
ಊರ್ಧ್ವಂ ವಹ್ನಿರಧಸ್ತೋಯಂ ತಿರಶ್ಚೀನಃ ಸಮೀರಣಃ ।
ಭೂಮಿರರ್ಧಪುಟೇ ವ್ಯೋಮ ಸರ್ವಗಂ ಪ್ರವಹೇತ್ಪುನಃ ।
ವಾಯೋರ್ವಹ್ನೇರಪಾಂ ಪೃಥ್ವ್ಯಾ ವ್ಯೋಮ್ನಸ್ತತ್ತ್ವಂ ವಹೇತ್‌ಕ್ರಮಾತ್
ವಹಂತ್ಯೋರುಭಯೋರ್ನಾಡ್ಯೋಃ ಜ್ಞಾತವ್ಯೋಯಂ ಕ್ರಮಃ ಸದಾ ॥
ಪೃಥ್ವ್ಯಾಃ ಪಲಾನಿ ಪಂಚಾಶಚ್ಚತ್ವಾರಿಂ ಶತ್ತಥಾಂಭಸಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಗ್ನೇಸ್ತ್ರಿಂಶತ್ಪುನ ರ್ವಾಯೋರ್ವಿಂಶಂತಿರ್ನಭಸೋದಶ ||
ಪ್ರವಾಹಕಾಲಸಂಖ್ಯೇಯಂ ಹೇತುಸ್ತತ್ರ ಪ್ರದರ್ಶ್ಯತೇ ||
ಪೃಥ್ವೀಪಂಚಗುಣಾ ತೋಯಂ ಚತುರ್ಗುಣಮಥಾನಲಃ||
ತ್ರಿಗುಣೋ ದ್ವಿಗುಣೋ ವಾಯುರ್ವಿಯದೇಕಗುಣಂ ಭವೇತ್ |
ಗುಣಂ ಪ್ರತಿ ದಶ ಪಲಾನ್ಯುರ್ವ್ಯಾಂ ಪಂಚಾಶದಿತ್ಯತಃ ||
ಏಕೈಕಹಾನಿಸ್ತೋಯಾದೇ ಸ್ತಥಾ ಪಂಚ ಗುಣಾಃಕ್ಷಿತೇಃ |
ಗಂಧೋ ರಸಶ್ಚರೂಪಂ ಚ ಸ್ಪರ್ಶಃ ಶಬ್ದಃ ಕ್ರಮಾದಮೀ ||
ತತ್ವಾಭ್ಯಾಂ ಭೂ ಜಲಾಭ್ಯಾಂ ಸ್ಯಾಚ್ಛಾಂತಿಃ ಕಾರ್ಯೇ ಫಲೋನ್ನತಿಃ|
ದೀಪ್ತಾಸ್ಥಿರಾವ್ಯೂಹವೃತ್ತಿ ಸ್ತೇ ಜೋವಾಯ್ವಂಬರೇಷು ಚ ||
ಪೃಥಿವ್ಯಸ್ತೇಜೋ ಮರುದ್ವ್ಯೋ ಮತತ್ವಾನಾಂ ಚಿಹ್ನಮುಚ್ಯತೇ |
ಆದ್ಯೇಸ್ಥೈರ್ಯಂ ಸ್ವಚಿತ್ತಸ್ಯ ಶೈತ್ಯೇ ಕಾಮೋದ್ಭವೋ ಭವೇತ್ ||
ತೃತೀಯೇ ಕೋಪಸಂತಾಪೌ ಚತುರ್ಥೇ ಚಂಚಲಾತ್ಮಕಾ |
ಪಂಚಮೇ ಶೂನ್ಯತೈವ ಸ್ಯಾದಥ ವಾಧರ್ಮವಾಸಸಾ ||
ಶ್ರುತ್ಯೋರಂಗುಷ್ಠಕೌ ಮಂಧ್ಯಾಂಗುಲ್ಯಾ ನಾಸಾಪುಟದ್ವಯೇ |
ಸೃಕ್ಕಿಣ್ಯೋಃ ಪ್ರಾಂತ್ಯಕೋಪಾಂತ್ಯಂಗುಲೀ ಶೇಷೇ ದೃಗಂತಯೋಃ |
ನ್ಯಸ್ಯಾಂತಸ್ಥಪೃಥಿವ್ಯಾದಿತತ್ವಜ್ಞಾನಂ ಭವೇತ್ ಕ್ರಮಾತ್ |
ಪೀತಶ್ವೇತಾರುಣ ಶ್ಯಾಮೈರ್ಬಿಂದುಭಿರ್ನಿರುಪಾಧಿಕಮ್ | ಇತ್ಯಾದಿನಾ ||
ಯಥಾವದ್ವಾಯುತತ್ವಮವಗಮ್ಯ ತನ್ನಿಯಮನೇ ವಿಧೀಯಮಾನೇ ವಿವೇಕ
ಜ್ಞಾನಾವರಣ ಕರ್ಮಕ್ಷಯೋ ಭವತಿ | ತಪೋ ನ ಪರಂ ಪ್ರಾಣಾಯಾಮಾದಿತಿ|
ದಹ್ಯಂತೇ ಧ್ಮಾಯಮಾನಾನಾಂ ಧಾತೂನಾಂ ಹಿ ಯಥಾ ಮಲಾಃ ||
ಪ್ರಾಣಾಯಾಮೈಸ್ತು ದಹ್ಯಂತೇ ತದ್ವದಿಂದ್ರಿಯಜಾ ಮಲಾಃ || ಇತಿ ಚ ||

'ಸಾರ್ಧಂ'—ಇತಿ. ಇಡಾಪಿಂಗಲನಾಡಿಗಳ ಮಧ್ಯದಲ್ಲಿ ಒಂದೊಂದು ನಾಡಿಯಿಂದ ಪ್ರಾಣವಾಯುವು ಎರಡೂವರೆ ಘಂಟೆಯವರೆಗೆ ಸಂಚರಿಸುತ್ತದೆ. ಯಾವನಾಡಿಯಿಂದ ವಾಯುಗತಿ ಇರುತ್ತದೆಯೋ ಆಗ ವಾಯುಸಂಚಾರದಿಂದ ಆ ನಾಡಿಯು ಸಂಚಲನವಾಗುವುದರಿಂದ ಆ ನಾಡಿಯೇ ಸಂಚರಿಸುತ್ತದೆಂದು ಹೇಳಲ್ಪಡುತ್ತದೆ. ಸೂರ್ಯೋದಯವನ್ನಾರಂಭಿಸಿ ಈ ಎರಡು ನಾಡಿಗಳು ಹಿಟ್ಟನಗಿರಣಿತಿರುಗುನಂತೆ ಕ್ರಮವಾಗಿ ಸಂಚಲಿಸುತ್ತಿರುತ್ತವೆ. ಎರಡೂವರೆ ಘಂಟೆಯಲ್ಲಿ ? (ಘಟಿ|) ೯೦೦ ಶ್ವಾಸೋಚ್ಛ್ವಾಸಗಳಾಗುತ್ತವೆ. ಒಟ್ಟಿಗೆ ಇಡೀ ದಿನದಲ್ಲಿ ೨೧೬೦೦ ಸಂಖ್ಯಾತಗಳಾಗುತ್ತವೆ. ಖ ಅಂದರೆ ಆಕಾಶ. ಅದು ಶೂನ್ಯವಾದುದರಿಂದ ಶೂನ್ಯದ್ಯೋತಕವಾದ ಖ ಶಬ್ದವು ಜ್ಯೋತಿಃಶಾಸ್ತ್ರದಲ್ಲಿ ಪ್ರಯೋಗಿಸಲ್ಪಡುತ್ತದೆ. 'ಅಂಕಾನಾಂ ವಾಮತೋ ಗತಿಃ' ಎಂದು ಎಂದು ಅವರ ಸಿದ್ಧಾಂತ. ಖಖ ಎಂದರೆ ಎರಡು ಸೊನ್ನೆಗಳು. ಅದರ ಹಿಂದೆ ಆರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದರ ಹಿಂದೆ ಒಂದು. ಅದರ ಹಿಂದೆ ಎರಡು. ಹೀಗೆ ೨೧೬೦೦ ಆಗುತ್ತವೆ. ಈ ವಿಷಯದಲ್ಲಿ ಪ್ರಮಾಣತೋರಿಸುತ್ತಾನೆ.

'ಷಟ್‌ತ್ರಿಂ—' ಇತಿ. ಮೂವತ್ತಾರುಗುರುವರ್ಣಗಳನ್ನು ಉಚ್ಚರಿಸಲು ಎಷ್ಟು ಕಾಲಬೇಕೋ ಅಷ್ಟು, ಪ್ರಮಾಣದ ಕಾಲದಲ್ಲಿ ನಾಡೀಮಧ್ಯದಲ್ಲಿ ತಿರುಗುವ ವಾಯುವಿನ ಶ್ವಾಸೋಚ್ಛ್ವಾಸಗಳು ಆಗುತ್ತವೆ. ಅಷ್ಟು ಕಾಲಕ್ಕೆ ಪ್ರಾಣವೆಂದು ಸಂಜ್ಞೆ. ಆರು ಪ್ರಾಣಗಳಿಗೆ ಒಂದು ಪಲವಾಗುತ್ತದೆ. ೬೦ ಪಲಗಳಿಗೆ ಒಂದುಘಳಿಗೆ. ಒಂದುಘಳಿಗೆ ಯಲ್ಲಿ ಮುನ್ನೂರರವತ್ತು ಶ್ವಾಸೋಚ್ಛ್ವಾಸಗಳಾಗುತ್ತವೆ. ಅರವತ್ತು ಘಟಿಕಾಗಳಿಗೆ ಒಂದು ಅಹೋರಾತ್ರ. ಮುನ್ನೂರರವತ್ತಕ್ಕೆ ಅರವತ್ತರಿಂದ ಗುಣಿಸಿದಾಗ ಇಪ್ಪತ್ತೊಂದು ಸಾವಿರದ ಆರುನೂರು ಆಗುತ್ತವೆ. ವಾಯುಸಂಚರಣದಿಂದ ಚಲಿಸುವ ಎರಡುವಿಧ ಗಳಾದ ನಾಡಿಗಳೂ ತಮ್ಮ ಒಳಗಿರುವ ಸೂಕ್ಷ್ಮಗಳಾದ ಪೃಥಿವ್ಯಾದಿ ಪಂಚತತ್ತ್ವಗಳಲ್ಲಿ ಒಂದಂಶವನ್ನೊಳಗೊಂಡು ಚಲಿಸುತ್ತವೆ. ಯಾವಾಗ ಯಾವ ತತ್ತ್ವವನ್ನು ಧರಿಸಿ ದೆಯೋ ಆಗ ಅದರಿಂದ ನಾಡಿಯು ಸಂಚಲಿಸುತ್ತದೆಂದು ವ್ಯವಹಾರ. ಇದನ್ನು ಯೋಗ ದಿಂದಲೇ ತಿಳಿಯಲು ಶಕ್ಯವಾಗುತ್ತದೆ. ಸಾಮಾನ್ಯವಾಗಿ ನಾವು ತಿಳಿಯಲು ಸಾಧ್ಯವಿಲ್ಲ ನಾಡಿಗಳಲ್ಲಿ ಸಂಚರಿಸುವ ಪಂಚತತ್ತ್ವಗಳ ಸ್ಥಾನಗಳನ್ನು ತೋರಿಸುತ್ತಾನೆ. 'ಊರ್ಧ್ವಂ' —ಇತಿ. ಸಂಚರಿಸುವಾಗ ಕ್ರಮ ತಿಳಿಸುತ್ತಾನೆ.

'ವಾಯೋಃ'—ಇತಿ. ಚಲಿಸಲು ಪ್ರವೃತ್ತವಾದ ನಾಡಿಯಲ್ಲಿ ಮೊದಲು ೨೦ ಪಲದವರೆಗೆ ವಾಯುತತ್ತ್ವ ಸೇರಿರುತ್ತದೆ. ಆಮೇಲೆ ೩೦ ಪಲದವರೆಗೆ ತೇಜಸ್ತತ್ತ್ವವೂ, ಆಮೇಲೆ ೪೦ ಪಲದವರೆಗೆ ಜಲತತ್ತ್ವವೂ, ಆಮೇಲೆ ೫೦ ಪಲದವರೆಗೆ ಪೃಥಿವೀ ತತ್ತ್ವವೂ, ಚಲಿಸುತ್ತದೆ. ಆಮೇಲೆ ೧೦ ಪಲದವರೆಗೆ ಆಕಾಶತತ್ವ. ಇವು ಒಟ್ಟಿಗೆ ಸೇರಿದಾಗ ೧೫೦ ಸಂಖ್ಯಾ ಆಗುವುದರಿಂದ ಎರಡುವರೆ ಘಟಿಕಾ ಆಗುತ್ತದೆ. 'ಗಂಧೋ ರಸ'—ಇತಿ. ಪೃಥಿವಿಯಲ್ಲಿ ಗಂಧಾದಿ ಐದು ಗುಣಗಳಿರುತ್ತವೆ. ಜಲದಲ್ಲಿ ಗಂಧವಿಲ್ಲದೆ ರಸಾದಿ ನಾಲ್ಕು ಗುಣಗಳಿರುತ್ತವೆ. ತೇಜಸ್ಸಿನಲ್ಲಿ ರಸರಹಿತ ರೂಪಾದಿ ಮೂರುಗುಣ ಗಳೂ, ವಾಯುವಿನಲ್ಲಿ ರೂಪರಹಿತ ಸ್ಪರ್ಶಾದಿ ಶಬ್ದಗಳೂ ಆಕಾಶದಲ್ಲಿ ಕೇವಲ ಶಬ್ದವೂ ಇರುತ್ತದೆ. ಭೂತತ್ತ್ವವಿರುವಾಗ ಶಾಂತಿಯೂ, ಜಲತತ್ತ್ವವಿರುವಾಗ ಆರಂಭಿಸಿದ ಕಾರ್ಯದಲ್ಲಿ ಫಲಾಧಿಕ್ಯವೂ, (ಬಲಾಧಿಕ್ಯಪ್ರತೀತಿ ಪಾಠಾಂತರ). ತೇಜಸ್ತತ್ವವಿರುವಾಗ ದೀಪ್ತವಾದ ಚಿತ್ತವೃತ್ತಿಯೂ, ವಾಯುತತ್ತ್ವದಲ್ಲಿ ಅಸ್ಥಿರವಾದ ಚಿತ್ತವೃತ್ತಿಯೂ, ಆಕಾಶ ತತ್ವದಲ್ಲಿ ವ್ಯೂಹರಹಿತಚಿತ್ತವೃತ್ತಿಯೂ ಇರುತ್ತದೆ. ಅವ್ಯೂಹ ಅಂದರೆ ವಿಯೋಗ. 'ಅಥವಾ'—ಇತಿ. ಅಥರ್ವವಾಸನಾ ಎಂದು ಭೇದ. ಹರಿಯುತ್ತಿರುವ ಚಿತ್ತವಿಶೇಷ ಜ್ಞಾನಕ್ಕೋಸ್ಕರ ಉಪಾಯವಾದ ಆಂತರಬಿಂದ್ವವಲೋಕನಕ್ರಮವನ್ನು ಹೇಳುತ್ತಾನೆ.

'ಶ್ರುತ್ಯೋಃ'—ಇತಿ. ಶ್ರುತಿ—ಕಿವಿ. ಸೃಕ್ವಿಣೀ—ತುಟಿಯ ಅಂಚು. ಪ್ರಾಂತ್ಯ ಕಾಂಗುಲೀ—ಕಿರಿಬೆರಳುಗಳು ಉಪಾಂತ್ಯಾಂಗುಲೀ—ಉಂಗುರಬೆರಳುಗಳು. ಶೇಷೇ – ತೋರುಬೆರಳುಗಳು. ಮುಖದ ಬಲಭಾಗದಲ್ಲಿ ಬಲಗೈಯ ಬೆರಳುಗಳನ್ನು ಆಯಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆರಳುಗಳನ್ನು ಆಯಾಯ ಸ್ಥಳದಲ್ಲಿ ಇಡುವುದು. ಎಡಭಾಗದಲ್ಲಿ ಎಡಗೈಯ ಬೆರಳುಗಳನ್ನಿಡಬೇಕು. ಕಿವಿಯಲ್ಲಿ ಅಂಗುಷ್ಠವೂ, ಕಣ್ಣಿನ ತುದಿಯಲ್ಲಿ ತೋರುಬೆರಳೂ, ನಾಸಾಪುಟದಲ್ಲಿ ಮಧ್ಯದ ಬೆರಳೂ, ಮೇಲ್ತುಟಿಯ ಅಂಚಿನಲ್ಲಿ ಉಂಗುರಬೆರಳೂ, ಕೆಳದುಟಿಯ ತುದಿಯಲ್ಲಿ ಕಿರಿಬೆರಳೂ, ಇಡುವ ಕ್ರಮ. ಹೀಗೆ ಇಟ್ಟು ಅಂತರ್ದೃಷ್ಟಿಯಿಂದ ನೋಡಿದಾಗ ಬಿಂದುವು ತೋರುತ್ತದೆ. ಹಳದಿಬಿಂದುವು ತೋರಿದರೆ ಪೃಥಿವೀತತ್ತ್ವವೂ, ಬಿಳಿಯ ಬಿಂದು ತೋರಿದರೆ ಜಲತತ್ತ್ವವೂ, ಅರುಣಬಿಂದುದರ್ಶನವಾದಾಗ ತೇಜಸ್ತತ್ತ್ವವೂ, ಕಪ್ಪುಬಿಂದು ತೋರಿದಾಗ ವಾಯುತತ್ತ್ವವೂ, ಪೀತಾದಿವರ್ಣವಿಲ್ಲದೆ ಕುಂಡಲಾಕಾರವಾಗಿ ತೋರಿದರೆ ಆಕಾಶತತ್ತ್ವವು ಹರಿಯುತ್ತಿದೆಯೆಂದು ತಿಳಿಯಬೇಕು. ಉಪಾಧಿಶಬ್ದದಿಂದ ಪೀತಾದಿವರ್ಣಗಳು ತಿಳಿಯಬೇಕು.

'ಯಥಾವತ್' ಇತಿ. ಹೀಗೆ ಶ್ವಾಸೋಚ್ಛ್ವಾಸ ತತ್ತ್ವವನ್ನು ಚೆನ್ನಾಗಿ ತಿಳಿದು ಪ್ರಾಣಾಯಾಮದಿಂದ ಗಾಳಿಯ ಗತಿಯನ್ನು ತಡೆದಾಗ ವಿವೇಕಜ್ಞಾನವನ್ನು ಮುಚ್ಚಿದ ಕರ್ಮವು ನಾಶವಾಗುತ್ತದೆ. ಇಲ್ಲಿ ಕರ್ಮಶಬ್ದದಿಂದ ಕರ್ಮಜನ್ಯವಾದ ಪಾಪವೂ, ಕರ್ಮಕಾರಣಗಳಾದ ಅವಿದ್ಯಾದಿ ಕ್ಲೇಶಗಳೂ ವಿವಕ್ಷಿತವಾಗಿವೆ. ಅವುಗಳು ಮಹಾಮೋಹ ಪ್ರಚುರಗಳಾದ ಶಬ್ದಾದಿ ವಿಷಯಜಾಲಸಹಾಯದಿಂದ ವಿವೇಕಜ್ಞಾನಶೀಲವಾದ ಬುದ್ಧಿಸತ್ವವನ್ನು ಮುಚ್ಚಿರುತ್ತವೆ. ಮುಚ್ಚಿರುವುದಲ್ಲದೆ ಅದೇ ಬುದ್ಧಿಸತ್ತ್ವವನ್ನು ಅಕಾರ್ಯವಾದ ಸಂಸಾರಕ್ಕೆ ಕಾರಣವಾದ ವ್ಯಾಪಾರದಲ್ಲಿ ನಿಯೋಗಿಸುತ್ತವೆ. ಪ್ರಾಣಾಯಾಮದ ಅಭ್ಯಾಸದಿಂದ ಈ ಕ್ಲೇಶಗಳು ದುರ್ಬಲಗಳಾಗಿ ತಮ್ಮ ಕಾರ್ಯ ಮಾಡಲು ಅಸಮರ್ಥವಾಗುತ್ತವೆ. ಕ್ಷಣಕ್ಷಣದಲ್ಲಿ ಕ್ಷೀಣವಾಗುತ್ತವೆ. ಹೀಗೆ ಕರ್ಮಕ್ಷಯಕಾರಿಯಾದುದರಿಂದ ಪ್ರಾಣಾಯಾಮವು ತಪಸ್ಸೆಂದು ಹೇಳುತ್ತಾರೆ. ಕೃಚ್ಛ್ರಚಾಂದ್ರಾಯಣಾದಿಗಳಿಂದ ಕೇವಲ ಪಾಪಕರ್ಮನಷ್ಟವಾಗುತ್ತದೆ. ಪ್ರಾಣಾಯಾಮದಿಂದಲಾದರೋ ಕರ್ಮಕ್ಕೆ ಮೂಲವಾದ ಅವಿದ್ಯಾದಿಕ್ಲೇಶಗಳೇ ನಾಶವಾಗುತ್ತವೆ. 'ತಪಃ'—ಇತಿ. ಪ್ರಾಣಾಯಾಮಕ್ಕಿಂತ ಶ್ರೇಯಸ್ಕರವಾದ ತಪಸ್ಸು ಬೇರೊಂದಿಲ್ಲ. 'ಧ್ಮಾಯ'—ಇತಿ. ಅಗ್ನಿಸಂಯುಕ್ತಗಳಾದ ಸುವರ್ಣಾದಿಧಾತುಗಳ ಮಲವು ಹೇಗೆ ನಷ್ಟವಾಗುವುದೋ ಅದರಂತೆ ಪ್ರಾಣಾಯಾಮದಿಂದ ಇಂದ್ರಿಯಗಳಿಂದುಂಟಾಗುವ ಮಲವು ನಾಶವಾಗುತ್ತದೆ.

ತದೇವಂ ಯಮಾದಿಭಿಃ ಸಂಸ್ಕೃತಮನಸ್ಕಸ್ಯ ಯೋಗಿನಃ ಸಂಯಮಾಯ ಪ್ರತ್ಯಾಹಾರಃ ಕರ್ತವ್ಯಃ। ಚಕ್ಷುರಾದೀನಾಮಿಂದ್ರಿಯಾಣಾಂ ಪ್ರತಿನಿಯತರಂಜನೀಯ ಕೋಪನೀಯ ಮೋಹನೀಯ ಪ್ರವಣತ್ವಪ್ರಹಾಣೇನಾವಿಕೃತಸ್ವರೂಪಪ್ರವಣಚಿತ್ತಾನುಕಾರಃ ಪ್ರತ್ಯಾಹಾರಃ। ಇಂದ್ರಿಯಾಣಿ ವಿಷಯೇಭ್ಯಃ ಪ್ರತೀಪಮಾಹ್ರಿಯಂತೇಽಸ್ಮಿನ್ನಿತಿ ವ್ಯುತ್ಪತ್ತೇಃ। ನನು ತದಾ ಚಿತ್ತಮಭಿನಿವಿಶತೇ ನೇಂದ್ರಿಯಾಣಿ। ತೇಷಾಂ ಬಾಹ್ಯವಿಷಯತ್ವೇನ ತತ್ರ ಸಾಮರ್ಥ್ಯಾಭಾವಾತ್। ಅತಃ ಕಥಂ ಚಿತ್ತಾನುಕಾರಃ। ಅದ್ಧಾ। ಅತಏವ ವಸ್ತುತತ್ತ್ವಸ್ಯಾಸಂಭವಮಭಿಸಂಧಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾದೃಶ್ಯಾರ್ಥಮಿವಶಬ್ದಂ ಚಕಾರ ಸೂತ್ರಕಾರಃ :—'ಸ್ವವಿಷಯಾಸಂಪ್ರಯೋಗೇ ಚಿತ್ತಸ್ವರೂಪಾನುಕಾರ ಇವೇಂದ್ರಿಯಾಣಾಂ ಪ್ರತ್ಯಾಹಾರಃ (ಸೂ ೨।೫೪) ಇತಿ। ಸಾದೃಶ್ಯಂ ಚ ಚಿತ್ತಾನುಕಾರನಿಮಿತ್ತಂ ವಿಷಯಾಸಂಪ್ರಯೋಗಃ । ಯದಾಚಿತ್ತಂ ನಿರುಧ್ಯತೇ ತದಾ ಚಕ್ಷುರಾದೀನಾಂ ನಿರೋಧೇ ಪ್ರಯತ್ನಾಂತರಂ ನಾಪೇಕ್ಷಣೀಯಮ್ । ಯಥಾ ಮಧುಕರರಾಜಂ ಮಧುಮಕ್ಷಿಕಾ ಅನುವರ್ತಂತೇ ತಥೇಂದ್ರಿಯಾಣಿ ಚಿತ್ತಮಿತಿ ॥

ಐದನೆಯ ಪ್ರತ್ಯಾಹಾರವನ್ನು ನಿರೂಪಿಸುತ್ತಾನೆ. 'ತದೇವಂ' — ಇತಿ. ಯೋಗಾಂಗಗಳಲ್ಲಿ ಕೊನೆಯ ಧಾರಣ, ಧ್ಯಾನ, ಸಮಾಧಿರೂಪಗಳಾದ ಅಂತರಂಗಸಾಧನ ತ್ರಯಕ್ಕೆ ಸಂಯಮವೆಂದು ಹೆಸರು. ಇದು ಪ್ರತ್ಯಾಹಾರವಿಲ್ಲದೇ ಸಿದ್ಧಿಸಲಾರದು. 'ಚಕ್ಷುರಾ'—ಇತಿ. ಶಬ್ದಾದಿ ವಿಷಯಗಳಲ್ಲಿ ಕೆಲವು ಒಬ್ಬನಿಗೆ ರಂಜನೀಯವಾಗಿರುತ್ತವೆ. ಅಂದರೆ ರಾಗಪ್ರಯೋಜಕಗಳಾಗುತ್ತವೆ. ಕೆಲವು ಕೋಪನೀಯ ಅಂದರೆ ದ್ವೇಷ ಪ್ರಯೋಜಕಗಳಾಗುತ್ತವೆ. ಕೆಲವು ಮೋಹನೀಯವೆಂದರೆ ವೈಚಿತ್ಯಪ್ರಯೋಜಕಗಳು. ಇಂತಹ ವಿಷಯಪ್ರವಣತ್ವವೇ ಇಂದ್ರಿಯಗಳ ಆಸಕ್ತಿ. ಇದು ಅನಾದಿಕಾಲವನ್ನಾರಂಭಿಸಿ ಪ್ರವೃತ್ತವಾದುದರಿಂದ ಪ್ರತಿನಿಯತವಾಗಿರುತ್ತವೆ. ಇದನ್ನು ಬಿಡಿಸಿ ತತ್ತ್ಯಾಗಪೂರ್ವಕವಾಗಿ ಇಂದ್ರಿಯಗಳ ಯಾವ ನಿರ್ವಿಕಾರಾತ್ಮಸ್ವರೂಪಾಸಕ್ತಚಿತ್ತದ ಅನುಕರಣವಿದೆಯೋ (ಚಿತ್ತಾನುರೋಧಿತ್ವ) ಅದೇ ಪ್ರತ್ಯಾಹಾರ. ಬದ್ಧ ಜೀವರ ಚಿತ್ತವು ಸ್ವಭಾವದಿಂದ ಇಂದ್ರಿಯಾನುಸಾರಿಯಾಗಿರುತ್ತವೆ. ಪ್ರತ್ಯಾಹಾರದಲ್ಲಿ ಇದಕ್ಕೆ ವಿರುದ್ಧವಾಗಿ ಇಂದ್ರಿಯಗಳು ಚಿತ್ತಾನುಸಾರಿಯಾಗಿರುತ್ತವೆ. ನಿರೋಧೋನ್ಮುಖವಾದ ಚಿತ್ತದಲ್ಲಿ ಇತರ ಪ್ರಯತ್ನವಿಲ್ಲದೆ ಯಾವ ಇಂದ್ರಿಯಗಳ ನಿರೋಧವಿದೆಯೋ ಅದೇ ಚಿತ್ತಾನುಕಾರವಾಗುತ್ತದೆ. ಇದನ್ನೇ ಶಂಕಾಸಮಾಧಾನಗಳಿಂದ ವಿವರಿಸುತ್ತಾನೆ.

'ನನು'—ಇತಿ. ನಿರ್ವಿಕಾರಾತ್ಮಸ್ವರೂಪದಲ್ಲಿ ಚಿತ್ತವು ಇರುತ್ತದೆ. ಇಂದ್ರಿಯಗಳು ಬಾಹ್ಯವಿಷಯಗಳನ್ನು ಗ್ರಹಿಸುವಾಗ ಚಿತ್ತಾನುಕಾರ ಸಂಭವಿಸುವುದು ಹೇಗೆ ? ಅದ್ಧಾ ಎಂಬುದು ಅಂಗೀಕಾರಾರ್ಥಕವಾದ ಒಂದು ಅವ್ಯಯ. ಶಂಕಾಕಾರನಿಂದ ಹೇಳಿದ್ದು ಅಂಗೀಕೃತವಾಗಿದೆಯೆಂದರ್ಥ. ತಸ್ಯ — ಚಿತ್ತಾನುಕಾರಕ್ಕೆ 'ಸ್ವವಿಷಯ' — ಇತಿ. ಇಂದ್ರಿಯಗಳು ತಮ್ಮ ವಿಷಯಸಂಬಂಧ ಹೊಂದದಿರುವಾಗ ಚಿತ್ತಸ್ವರೂಪಾನುಕಾರಿತ್ವದಂತೆ ಯಾವ ಅವಸ್ಥೆ ಹೊಂದುವವೋ ಅದೇ ಪ್ರತ್ಯಾಹಾರವೆಂದು ಸೂತ್ರಾರ್ಥ. ಜಿತೇಂದ್ರಿಯನಾಗದ ಬದ್ಧಜೀವನ ಇಂದ್ರಿಯಗಳೂ ಕೂಡಾ ವಿಷಯೋಪಭೋಗಕಾಲದಲ್ಲಿ ಚಿತ್ತಾನುಕಾರಿಗಳೇ ಆಗಿರುತ್ತವೆ. ಇದನ್ನು ವ್ಯಾವೃತ್ತಿಪಡಿಸಲು 'ಸ್ವವಿಷಯಾಸಂಪ್ರಯೋಗೇ' ಎಂದು ಹೇಳಿದೆ. 'ಅನುವರ್ತಂತೇ' — ಇತಿ. ದುಂಬಿಯರಾಜನು ಹಾರಿದಾಗ ಅದನ್ನನುಸರಿಸಿ ದುಂಬಿಗಳೂ ಹಾರುತ್ತವೆ. ಒಂದು ಕಡೆ ನಿಂತರೆ ಅವುಗಳೂ ನಿಲ್ಲುತ್ತವೆ. ಹಾಗೆ ಚಿತ್ತೇಂದ್ರಿಯಗಳ ಸ್ವಭಾವವೆಂದು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದುಕ್ತಂ ವಿಷ್ಣುಪುರಾಣೇ—

ಶಬ್ದಾದಿಷ್ವನುರಕ್ತಾನಿ ನಿಗೃಹ್ಯಾಕ್ಷಾಣಿ ಯೋಗವಿತ್ ॥
ಕುರ್ಯಾಚ್ಚಿತ್ತಾನುಕಾರೀಣಿ ಪ್ರತ್ಯಾಹಾರಪರಾಯಣಃ ।
ವಶ್ಯತಾ ಪರಮಾ ತೇನ ಜಾಯತೇತಿಚಲಾತ್ಮನಾಮ್ ।
ಇಂದ್ರಿಯಾಣಾಮವಶ್ಯೈಸ್ತೈರ್ನ ಯೋಗೀ ಯೋಗಸಾಧಕಃ ॥
(ವಿ. ಪು. ೬|೭ + ೪೩-೪೪) ಇತಿ ॥

ನಾಭಿಚಕ್ರಹೃದಯಪುಂಡರೀಕನಾಸಾಗ್ರಾದಾವಾಧ್ಯಾತ್ಮಿಕೇ ಹಿರಣ್ಯಗರ್ಭವಾಸವ ಪ್ರಜಾಪತಿಪ್ರಭೃತಿಕೇ ಬಾಹ್ಯೇವಾದೇಶೇ ಚಿತ್ತಸ್ಯ ವಿಷಯಾಂತರಪರಿಹಾರೇಣ ಸ್ಥಿರೀಕರಣಂ ಧಾರಣಾ । ತದಾಹ—ದೇಶಬಂಧಶ್ಚಿತ್ತಸ್ಯ ಧಾರಣಾ ಸೂ (೩|೧) ಇತಿ । ಪೌರಾಣಿಕಾಶ್ಚ—

ಪ್ರಾಣಾಯಾಮೇನ ಪವನಂ ಪ್ರತ್ಯಾಹಾರೇಣ ಚೇಂದ್ರಿಯಮ್ ।
ವಶೀಕೃತ್ಯ ತತಃ ಕುರ್ಯಾಚ್ಚಿತ್ತಸ್ಥಾನಂ ಶುಭಾಶ್ರಯೇ ॥
(ವಿ-ಪು-೬|೭|೪೬) ಇತಿ

'ಶಬ್ದಾದಿ'—ಇತಿ. ಯೋಗ ತಿಳಿದವನು ಶಬ್ದಾದಿ ವಿಷಯಗಳಲ್ಲಿ ಅನುರಕ್ತವಾದ (ಅಕ್ಷಾಣಿ—ಇಂದ್ರಿಯಗಳು) ಇಂದ್ರಿಯಗಳನ್ನು ತಡೆದು ಪ್ರತ್ಯಾಹಾರದಿಂದ ಚಿತ್ತಾನು ಕಾರಿಗಳನ್ನಾಗಿ ಮಾಡಬೇಕು. ಚಿತ್ತಕ್ಕೆ ಯಾವುದು ವಿಷಯವೋ ತದತಿರಿಕ್ತವಿಷಯ ರಹಿತಗಳನ್ನಾಗಿ ಮಾಡಬೇಕೆಂದರ್ಥ. ಪ್ರತ್ಯಾಹಾರದ ಉಪಯೋಗ ರೀತಿಯನ್ನು ತೋರಿಸುತ್ತಾನೆ. 'ವಶ್ಯತಾ' — ಇತಿ. ಪ್ರತ್ಯಾಹಾರದಿಂದ ಅತಿ ಚಂಚಲಸ್ವರೂಪ ಗಳಾದ ಇಂದ್ರಿಯಗಳ ವಶ್ಯತಾ ಉಂಟಾಗುತ್ತದೆ. ಅವಶ್ಯೈ :—ಎಂಬುದರಿಂದ ಅದಕ್ಕೆ ವ್ಯತಿರೇಕವು ತೋರಿಸಿದೆ. ಇಂದ್ರಿಯಗಳು ಎಲ್ಲಿಯವರೆಗೆ ವಶ್ಯವಾಗುವುದಿಲ್ಲವೋ ಅಲ್ಲಿಯ ವರೆಗೆ ಅವುಗಳಿಂದ ಯೋಗಿಯು ಯೋಗಸಾಧಕನಾಗುವುದಿಲ್ಲವೆಂದರ್ಥ. ಧಾರಣಾ ಸ್ವರೂಪವನ್ನು ತೋರಿಸುತ್ತಾನೆ. 'ನಾಭಿಚಕ್ರ,—ಇತಿ. ಆದಿಪದದಿಂದ ಭ್ರೂಮಧ್ಯ, ಮೂರ್ಧಾದಿಗಳನ್ನು ತೆಗೆದುಕೊಳ್ಳಬೇಕು. ಆಧ್ಯಾತ್ಮಿಕವೆಂದರೆ ಇಲ್ಲಿ ಶರೀರದ ಒಳಗಿರುವ ವೆಂದರ್ಥ. ಹಿರಣ್ಯಗರ್ಭಾದಿಪದಗಳಿಂದ ಅವುಗಳ ಪ್ರತಿಮೆಯನ್ನು ತೆಗೆದುಕೊಳ್ಳಬೇಕು. ಇಲ್ಲಿ ಆದಿಪದದಿಂದ ಪರ್ವತಶಿಖರಾದಿಗಳಿಗೆ ಗ್ರಹಣ. ದೇಶೇ—ಧ್ಯಾನಕ್ಕೆ ಆಧಾರವಾದ ದೇಶವಿಶೇಷದಲ್ಲಿ ಎಂದರ್ಥ. ಇಲ್ಲಿಯೇ ಆಮೇಲೆ ಧ್ಯೇಯದ ಚಿಂತನೆಯಾಗುತ್ತದೆ. ದೇಶಬಂಧಃ—ಬಂಧವೆಂದರೆ ದೃಢವಾದ ಸಂಬಂಧ. ತದೇಕಾಗ್ರತಾ ಎಂದು ತಾತ್ಪರ್ಯ. ಯಾವ ನಾಭಿಚಕ್ರಾದಿದೇಶದಲ್ಲಿ ಧ್ಯೇಯವು ಚಿಂತಿಸಲ್ಪಡಬೇಕೋ ಅಲ್ಲಿ ಚಿತ್ತದ ಸ್ಥಿರೀ ಕರಣವೇ ಧಾರಣವೆಂದು ಸೂತ್ರಾರ್ಥ. ಹೃದಯ ಪುಂಡರೀಕ, ನಾಭಿ, ಮೂರ್ಧಾ, ಪರ್ವತಶಿಖರಾದಿ ಪ್ರದೇಶಗಳಲ್ಲಿ ಚಿತ್ತಬಂಧನವೇ ಧಾರಣ. ಇಲ್ಲಿ ಸ್ಥಿರೀಕರಣವೆಂದರೆ ವೃತ್ತಿಮಾತ್ರದಿಂದ ಹೇಳಬೇಕು. ಧ್ಯೇಯಕಲ್ಪನೆಯಿಂದ ಸ್ಥಿರಿಕರಣವಲ್ಲ. ಅದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂದೆ ಹೇಳುತ್ತಾನೆ. 'ಪ್ರಾಣಾಯಾಮ'—ಇತಿ. ಚಿತ್ತಸ್ಥಾನವೆಂದರೆ ಚಿತ್ತಾವಸ್ಥಿತಿ. ನಾಭಿಚಕ್ರಾದಿದೇಶಗಳಿಗೆ ಶುಭಾಶ್ರಯವೆಂದು ಹೆಸರು. ಅಲ್ಲಿ ಚಿತ್ತಾವಸ್ಥಿತಿಯನ್ನು ಮಾಡಬೇಕೆಂದರ್ಥ. ಸ್ಥಾನವೆಂಬಲ್ಲಿ ಭಾವಾರ್ಥದಲ್ಲಿ ಲ್ಯುಟ್ ಬಂದಿದೆ. (ಅನಾದೇಶ.) ಶುಭಾಶ್ರಯಂ—ಎಂದು ಪಾಠವಿದ್ದರೆ ಅಧಿಕರಣದಲ್ಲಿ ಲ್ಯುಟ್ ಹೇಳಬೇಕು. ನಾಭ್ಯಾದಿದೇಶವನ್ನು ಚಿತ್ತಾವಸ್ಥಿತ್ಯಧಿಕರಣವನ್ನಾಗಿ ಮಾಡಬೇಕೆಂದರ್ಥವಾಗುತ್ತದೆ.

ತಸ್ಮಿನ್ದೇಶೇ ಧ್ಯೇಯಾವಲಂಬನಸ್ಯ ಪ್ರತ್ಯಯಸ್ಯ ವಿಸದೃಶಪ್ರತ್ಯಯಪ್ರಹಾಣೇನ ಪ್ರವಾಹೋ ಧ್ಯಾನಮ್ । ತದುಕ್ತಂ—ತತ್ರ ಪ್ರತ್ಯಯೈಕತಾನತಾ ಧ್ಯಾನಮ್ (ಪಾ-ಸೂ-೩।೨) ಇತಿ ॥ ಅನ್ಯೈರುಕ್ತಮ್—

ತದ್ರೂಪಪ್ರತ್ಯಯೈಕಾಗ್ರ್ಯ ಸಂತತಿಶ್ಚಾನ್ಯನಿಃ ಸ್ಪೃಹಾ ॥
ತದ್ಧ್ಯಾನಂ ಪ್ರಥಮೈರಂಗೈಃ ಷಡ್ಭಿರ್ನಿಷ್ಪಾದ್ಯತೇ ನೃಪ ॥
(ವಿ-ಪು-೯-೭-೮೯)

ಪ್ರಸಂಗಾಚ್ಚರಮಮಂಗಂ ಪ್ರಾಗೇವ ಪ್ರತ್ಯಪೀಪದಾಮ ॥
ತದನೇನ ಯೋಗಾಂಗಾನುಷ್ಠಾನೇನಾದರ ನೈರಂತರ್ಯ ದೀರ್ಘಕಾಲ ಸೇವಿತೇನ ಸಮಾಧಿಪ್ರತಿಪಕ್ಷ ಕ್ಲೇಶಪ್ರಕ್ಷಯೇಭ್ಯಾಸವೈರಾಗ್ಯವಶಾನ್ಮಧುಮತ್ಯಾದಿಸಿದ್ಧಿ ಲಾಭೋಭವತಿ ।

ಏಳನೆಯ ಯೋಗಾಂಗವಾದ ಸಮಾಧಿಯನ್ನು ತೋರಿಸುತ್ತಾನೆ. 'ತಸ್ಮಿನ್'—ಇತಿ. ಧ್ಯೇಯಾವಲಂಬನವೆಂದರೆ ಪ್ರಸನ್ನನಾದ ಚತುರ್ಮುಖಾದಿಧ್ಯೇಯಾಕಾರವೆಂದರ್ಥ. ತದ್ರೂಪವೆಂದರೂ ಅದೇ ಪ್ರಸನ್ನವದನಾದಿಧ್ಯೇಯರೂಪವೆಂದರ್ಥ. ಅದರ ಪ್ರತ್ಯಯವೆಂದರೆ ಜ್ಞಾನ. ತದೈಕಾಗ್ರ್ಯ—ತತೇಕಾಕಾರಾ. ಅನ್ಯನಿಃಸ್ಪೃಹಾ—ವಿಷಯಾಂತರವ್ಯವಧಾನ ಶೂನ್ಯಾ. ಈ ರೀತಿಯಾದ ಸಂತತಿಯು ಪ್ರವಾಹ. ಇದೇ ಧ್ಯಾನವೆಂದರ್ಥ. ಈ ಧ್ಯಾನವು ಮೊದಲಿನ ಯಮಾದಿ ಆರು ಅಂಗಗಳಿಂದ ಸಾಧಿಸಲ್ಪಡುತ್ತದೆ. ನೃಪವೆಂಬುದು ಖಾಂಡಿಕ್ಯರಾಜನ ಸಂಬೋಧನೆ. ಎಂಟನೆಯ ಸಮಾಧಿಯೆಂಬ ಕೊನೆಯ ಅಂಗವು ಯೋಗಾನುಶಾಸನಂ-ಎಂಬಲ್ಲಿ ಯೋಗಶಬ್ದನಿರ್ವಚನ ಮಾಡುವಾಗಲೇ ಹೇಳಿದೆ. 'ಆದರ'—ಇತಿ. ಮೊದಲನೆಯ ಸಮಾಧಿಪಾದದಲ್ಲಿ ಪತಂಜಲಿಗಳು ಇದನ್ನು ವಿವರಿಸಿರುತ್ತಾರೆ. "ಸತು ದೀರ್ಘಕಾಲನೈರಂತರ್ಯಸತ್ಕಾರಾಸೇವಿತೋ ಸಮಾಧಿಃ" ಎಂದು ಸೂತ್ರ. ತಪೋಬ್ರಹ್ಮಚರ್ಯಾದಿ ಪೂರ್ವಕವಾಗಿ ಯಾವ ಯೋಗಾಂಗಾನುಷ್ಠಾನಸಂಪಾದನವಿದೆಯೋ ಅದೇ ಅದರ ಆದರದ ಸೇವನೆ. ಮಧುಮತ್ಯಾದಿಪದದಿಂದ ಮಧುಪ್ರತೀಕಾ, ವಿಶೋಕಾ, ಅಸಂಸ್ಕಾರಶೇಷಾರೂಪಸಿದ್ಧಿಗಳನ್ನು ತೆಗೆದುಕೊಳ್ಳಬೇಕು.

ಅಥ ಕಿಮೇವಮಕಸ್ಮಾದಸ್ಮಾನತಿವಿಕಟಾಭಿರತ್ಯಂತಾಪ್ರಸಿದ್ಧಾಭಿಃ ಕರ್ಣಾಟಗೌಡಲಾಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಾಭಿರ್ಭೀಷಯತೇ ಭವಾನ್ । ನ ಹಿ ವಯಂ ಭವಂತಂ ಭೀಷಯಾಮಹೇ। ಕಿಂ ತು ಮಧುಮತ್ಯಾದಿಪದಾರ್ಥವ್ಯುತ್ಪಾದನೇನ ತೋಷಯಾಮಃ। ತತಶ್ಚಾ ಕುತೋಭಯೇನ ಭವತಾ ಶ್ರೂಯತಾಮವಧಾನೇನ। ತತ್ರ ಮಧುಮತೀ ನಾಮಾಭ್ಯಾಸವೈರಾಗ್ಯಾದಿವಶಾದಪಾಸ್ತರಜಸ್ತಮೋಲೇಶಸುಖಪ್ರಕಾಶಮಯಸ ತ್ತ್ವಭಾವನಯಾ ನವದ್ಯವೈಶಾರದ್ಯವಿದ್ಯೋತನರೂಪಋತಂಭರಪ್ರಜ್ಞಾಖ್ಯಾ ಸಮಾ ಧಿಸಿದ್ಧಿಃ। ತದುಕ್ತಂಋತಂಭರಾ ತತ್ರ ಪ್ರಜ್ಞಾ (ಪಾ-ಸೂ-೧೪೮) ಇತಿ। ಋತಂ ಸತ್ಯಂ ಬಿಭರ್ತಿ ಕದಾಚಿದಪಿ ನ ವಿಪರ್ಯಯೇಣಾಚ್ಛಾದ್ಯತೇ। ತತ್ರ ಸ್ಥಿತೌ ದಾರ್ಢ್ಯೇ ಸತಿ ದ್ವಿತೀಯಸ್ಯ ಯೋಗಿನಃ ಸಾ ಪ್ರಜ್ಞಾ ಭವತೀತ್ಯರ್ಥಃ। ಚತ್ವಾರಃ ಖಲು ಯೋಗಿನಃ ಪ್ರಸಿದ್ಧಾಃ ಪ್ರಾಥಮಕಲ್ಪಿಕೋ ಮಧುಭೂಮಿಕಃ ಪ್ರಜ್ಞಾಜ್ಯೋತಿರತಿಕ್ರಾಂತ ಭಾವನೀಯಶ್ಚೇತಿ। ತತ್ರಾಭ್ಯಾಸೀ ಪ್ರವೃತ್ತಮಾತ್ರ ಜ್ಯೋತಿಃ ಪ್ರಥಮಃ। ನ ತತ್ತ್ವೇನ ಪರಿಚಿತ್ತಾದಿ ಗೋಚರ ಜ್ಞಾನರೂಪಂ ಜ್ಯೋತಿ ರ್ವಶೀಕೃತಮಿತ್ಯುಕ್ತಂ ಭವತಿ। ಋತಂಭರಪ್ರಜ್ಞೋ ದ್ವಿತೀಯಃ। ಭೂತೇಂದ್ರಿಯಜಯೀ ತೃತೀಯಃ। ಪರವೈರಾಗ್ಯಸಂಪನ್ನಶ್ಚತುರ್ಥಃ।

ಈ ಮಧುಮತ್ಯಾದಿಶಬ್ದಗಳು ಅಶ್ರುತಪೂರ್ವವಲ್ಲದೆ ಅಜ್ಞಾತಾರ್ಥಕವೆಂದು ಪ್ರಶ್ನಿಸಿ ಸಮಾಧಾನ ಹೇಳುತ್ತಾನೆ. ವಿಕಟವೆಂದರೆ ವಿಕರಾಲ. ಭಯಜನಕವೆಂದು ತಾತ್ಪರ್ಯ. ಅಪ್ರಸಿದ್ಧವಾದುದರಿಂದ ಅನ್ಯಭಾಷೆಯಲ್ಲಿರುವವುಗಳೆಂದು ಕಲ್ಪಿಸಿ ಕರ್ಣಾ ಟಾದಿಗಳು ಹೇಳಿವೆ. ದೇಶವಿಶೇಷವಾಚಕಗಳಾದರೂ ಲಕ್ಷಣಯಾ ಭಾಷಾವಾಚಕ ಗಳಾಗುತ್ತವೆ. 'ನಹಿ'—ಎಂಬುದರಿಂದ ಉತ್ತರ ಹೇಳುತ್ತಾನೆ. ಪದವ್ಯುತ್ಪತ್ತಿ ತೋರಿಸಿದರೆ ಆಗ ಭಯಕ್ಕೆ ಅವಕಾಶವಿರುವುದಿಲ್ಲ. 'ತತ್ರ' —ಇತಿ. ಅಭ್ಯಾಸವೈರಾಗ್ಯ ಗಳು ಹಿಂದೆ ಹೇಳಿವೆ. ಅವುಗಳಿಂದ ಅಪಾಸ್ತವೆಂದರೆ ಹೋಗಲಾಡಿಸಿದ ರಜಸ್ತಮಸ್ಸುಗಳ ಲೇಶವುಳ್ಳ (ಸ್ವಲ್ಪವೂ ರಜಸ್ತಮಸ್ಸುಗಳ ಸಂಬಂಧವಿಲ್ಲದ) ಸುಖಪ್ರಕಾಶರೂಪವಾದ ಬುದ್ಧಿ ಸತ್ವದ ಭಾವನೆಯಿಂದ ಯಾವ ಅನವದ್ಯವೈಶಾರದ್ಯವಿದೆಯೋ ಅಂದರೆ ಬುದ್ಧಿ ಸತ್ವದ ಸ್ವಚ್ಛವಾದ ಸ್ಥಿತಿಪ್ರವಾಹವಿದೆಯೋ ಅದರ ವಿದ್ಯೋತನ ರೂಪವಾದ ಋತಂಭರ ಪ್ರಜ್ಞಾ ಎಂಬ ಹೆಸರುಳ್ಳ ಸಮಾಧಿಜನ್ಯವಾದ ಸಿದ್ಧಿಯೇ ಮಧುಮತಿಯೆಂದು ಹೇಳಲ್ಪಡು ತ್ತದೆ.

'ಕದಾಚಿತ್'—ಇತಿ. ರಜಸ್ತಮಸ್ಸುಗಳ ಸಂಬಂಧವಿಲ್ಲದಿರುವುದರಿಂದ ಯಾವಾಗಲೂ ವಿಪರೀತಜ್ಞಾನ, ಅಥವಾ ಅಜ್ಞಾನದಿಂದ ಆವೃತವಾಗದೆ, ಸತ್ಯವನ್ನೇ ಧರಿಸಿರುತ್ತದೆ. ತತ್ರ—ಆಸ್ಥಿತಿಯಲ್ಲಿ, ದಾರ್ಢ್ಯೇ—ಚಿತ್ತವು ಕ್ಲೇಶವಾಸನಾರಹಿತವಾಗಿ ಸ್ಥಿತಿ ಪ್ರವಾಹಯೋಗ್ಯವಾಗಿರುವಾಗ ಎಂದರ್ಥ. ಇಂತಹ ಪ್ರಜ್ಞೆಯಿರುವಾಗಲೇ ಮಧು ಮತೀಸಿದ್ಧಿಯಾಗುತ್ತದೆ. ಪ್ರಾಥಮಕಲ್ಪಿಕ, ಮಧುಭೂಮಿಕ, ಪ್ರಜ್ಞಾಜ್ಯೋತಿ, ಅತಿ ಕ್ರಾಂತ ಭಾವನೀಯ ಎಂದು ನಾಲ್ಕುವಿಧಯೋಗಿಗಳು ಪ್ರಸಿದ್ಧರಾಗಿರುತ್ತಾರೆ. ಅಭ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಸುವವನು ಪ್ರವೃತ್ತಮಾತ್ರ ಜ್ಯೋತಿಯು. ಜ್ಯೋತಿಯೆಂದರೆ ಜ್ಞಾನ. ಕೇವಲ ಪ್ರವೃತ್ತವಾಗಿದೆ, ಇನ್ನೂ ನಿಷ್ಪನ್ನವಾಗದ ಜ್ಞಾನವುಳ್ಳವನು. ಋತಂಭರಪ್ರಜ್ಞನೇ ಎರಡನೆಯವನು. ಇವನಿಗೇ ಮಧುಮತೀಸಂಜ್ಞಕಸಿದ್ಧಿ ಹಿಂದೆ ಹೇಳಿರುವುದು. ಭೂತ ಮತ್ತು ಇಂದ್ರಿಯಗಳನ್ನು ಇವನು ಗೆದ್ದಿರುವುದಿಲ್ಲ. ಅವುಗಳನ್ನು ಜಯಿಸಲು ಬಯಸುತ್ತಾನೆ. ಪ್ರಜ್ಞಾಜ್ಯೋತಿಯೇ ಮೂರನೆಯವನು. ಭೂತೇಂದ್ರಿಯಜಯಗಳನ್ನು ಇವನು ಜಯಿಸಿರುತ್ತಾನೆ. ಅತಿಕ್ರಾಂತ ಭಾವನೀಯನೇ ನಾಲ್ಕನೇಯವನು. ಇವನಿಗೆ ಬಾವನೀಯವೊಂದೂ ಇರುವುದಿಲ್ಲ. ಉತ್ಕೃಷ್ಟವೈರಾಗ್ಯವುಳ್ಳವನು. ಇವನೇ ಜೀವನ್ಮುಕ್ತನು.

ಮನೋಜವಿತ್ವಾದಯೋ ಮಧುಪ್ರತೀಕಸಿದ್ಧಯಃ। ತದುಕ್ತಂ—ಮನೋಜವಿತ್ವಂ ವಿಕರಣಭಾವಃ ಪ್ರಧಾನಜಯಶ್ಚ (ಪಾ–ಸೂ ೩।೪೮) ಇತಿ। ಮನೋಜವಿತ್ವಂ ನಾಮ ಕಾಯಸ್ಯ ಮನೋವದನುತ್ತಮೋ ಗತಿಲಾಭಃ। ವಿಕರಣಭಾವಃ ಕಾಯ ನಿರಪೇಕ್ಷಾಣಾಮಿಂದ್ರಿಯಾಣಾಮಭಿಮತದೇಶಕಾಲವಿಷಯಾಪೇಕ್ಷವೃತ್ತಿ ಲಾಭಃ। ಪ್ರಧಾನಜಯಃ ಪ್ರಕೃತಿವಿಕಾರೇಷು ಸರ್ವೇಷು ವಶಿತ್ವಮ್। ಏತಾಶ್ಚ ಸಿದ್ಧಯಃ ಕರಣಪಂಚಕರೂಪಜಯಾತ್ಪ್ರತೀಯಸ್ಯ ಯೋಗಿನಃ ಪ್ರಾದುರ್ಭವಂತಿ ಯಥಾ ಮಧುನ ಏಕದೇಶೋಽಪಿ ಸ್ವದತೇ ತಥಾ ಪ್ರತ್ಯೇಕಮೇವ ತಾಃ ಸಿದ್ಧಯಃ ಸ್ವದಂತ ಇತಿ ಮಧುಪ್ರತೀಕಾಃ। ಸರ್ವಭಾವಾಧಿಷ್ಠಾತೃತ್ವಾದಿರೂಪಾವಿಶೋಕಾ ಸಿದ್ಧಿಃ। ತದಾಹ—ಸತ್ವಪುರುಷಾನ್ಯಥಾಖ್ಯಾತಿಮಾತ್ರಸ್ಯ ಸರ್ವಭಾವಾಧಿಷ್ಠಾತೃತ್ವಂ ಸರ್ವಜ್ಞತ್ವಂಚ (ಪಾ–ಸೂ–೩।೪೯)ಇತಿ।

ಮನೋಜವಿತ್ವ, ವಿಕರಣಭಾವ, ಪ್ರಧಾನಜಯಗಳೆಂದು ಮೂರು ಮಧುಪ್ರತೀಕ ಸಿದ್ಧಿಗಳು. ನ ಉತ್ತಮಃ ಯಸ್ಮಾತ್ ಸಃ ಅನುತ್ತಮಃ. ಶರೀರಕ್ಕೆ ಮನಸ್ಸಿನಂತೆ ಅತ್ಯುತ್ತಮವಾದ ಗತಿಲಾಭವೇ ಮನೋಜವಿತ್ವಸಿದ್ಧಿ. ಶರೀರೇಂದ್ರಿಯಗಳ ಅಪೇಕ್ಷೆಯಿಲ್ಲದೆ ದೇಶಾಂತರದಲ್ಲಿರುವ, ಕಾಲಾಂತರದಲ್ಲಿರುವ ಅಭಿಮತವಸ್ತುವಿಷಯಕಜ್ಞಾನವನ್ನು ಹೊಂದುವುದೇ ವಿಕರಣಭಾವಸಿದ್ಧಿ. ಪ್ರಕೃತಿವಿಕಾರಗಳಾದ ಮಹತ್ತತ್ವಾದಿ ಸಕಲ ವಿಕಾರಗಳನ್ನು ಸ್ವಾಧೀನಪಡಿಸಿಕೊಳ್ಳುವುದೇ ಪ್ರಧಾನಜಯಸಿದ್ಧಿ. ಇವನು ಅನಂತಗಳಾದ ಭೂತೇಂದ್ರಿಯಗಳಿಗೆ ಪ್ರಕೃತಿಗಳಾದ ಸತ್ವಾದಿಗುಣಗಳನ್ನೂ ಅವುಗಳ ವಿಕಾರಗಳನ್ನೂ ಸ್ವೇಚ್ಛೆಯಿಂದ ನಿಯಮನ ಮಾಡಿರುತ್ತಾನೆ. ಕರಣಪಂಚಕಗಳೆಂದರೆ ಜ್ಞಾನೇಂದ್ರಿಯಪಂಚಕಗಳು. ಅವುಗಳ ಗ್ರಹಣಾದಿಪಂಚಕಗಳ ಜಯದಿಂದ ಮೂರನೇ ಯೋಗಿಗೆ ಈ ಸಿದ್ಧಿಗಳುಂಟಾಗುತ್ತವೆ. ಪ್ರಧಾನಾದಿಗಳು ಇಂದ್ರಿಯರೂಪಾಂತರ್ಗತಗಳಾದುದರಿಂದ ಇಂದ್ರಿಯಗಳ ಜಯದಿಂದಲೇ ಅವುಗಳ ಕಾರಣಗಳಾದ ಪ್ರಧಾನಾದಿಗಳ ಜಯವುಂಟಾಗುತ್ತದೆ. ಗ್ರಹಣ, ಸ್ವರೂಪ, ಅಸ್ಮಿತ, ಅನ್ವಯ, ಅರ್ಥವತ್ತ್ವಗಳೇ ಗ್ರಹಣಾದಿಪಂಚಕಗಳು. ನಿಶ್ಚಯಾಭಿಮಾನ ಸಂಕಲ್ಪದರ್ಶನ ಶ್ರವಣಾದಿವೃತ್ತಿಗಳೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಹಣವಾಗುತ್ತದೆ. ಏಕಾದಶೇಂದ್ರಿಯಗಳಿಗೆ ಸ್ವರೂಪವೆಂದು ಹೆಸರು. ಬುದ್ಧ್ಯಹಂಕಾರಗಳು ಅಸ್ಮಿತಾ ಎನಿಸುತ್ತವೆ. ಕಾರಣಾನುಗಮವೇ ಅನ್ವಯ. ಘಟದಲ್ಲಿ ಮಣ್ಣು ಅನುಸರಿಸಿರುತ್ತದೆ. ಇದೇ ಕಾರಣಾನುಗಮ. ಇಂದ್ರಿಯ ಪ್ರಕೃತಿಭೂತಗಳಾದ ಗುಣಗಳಲ್ಲಿ ಅನುಗತವಾದ ಪುರುಷಾರ್ಥಗಳಿಗೇ ಅರ್ಥವತ್ತ್ವವೆಂದು ಹೇಳುತ್ತಾರೆ. ಮನೋಜವಿತ್ವಾದಿಸಿದ್ಧಿಗಳಿಗೆ ಮಧುಪ್ರತೀಕವೆಂಬ ಸಂಜ್ಞೆ ಬರಲುಕಾರಣ ತೋರಿಸುತ್ತಾನೆ.

'ಯಥಾ' ಇತಿ. ಜೇನಿನ ಒಂದು ಬಿಂದುವೂ ಆಸ್ವಾದಯೋಗ್ಯವಾದಂತೆ ಪ್ರತ್ಯೇಕವಾಗಿ ಆಸಿದ್ಧಿಗಳು ಒಂದೊಂದೂ ಆಸ್ವಾದನೀಯವಾಗಿವೆ. ವಿಶೋಕಸಿದ್ಧಿಯನ್ನು ವಿವರಿಸುತ್ತಾನೆ. 'ಸರ್ವ'—ಇತಿ. ಸತ್ವವೆಂದರೆ ಬುದ್ಧಿತತ್ತ್ವ. ಸತ್ವಪುರುಷರ ಯಾವ ಭೇಧಸಾಕ್ಷಾತ್ಕಾರ (ಅನ್ಯಥಾಖ್ಯಾತಿ) ವಿದೆಯೋ ಅದನ್ನು ಸಾಧಿಸಿದವನಿಗೆ ಸರ್ವಭಾವಾಧಿಷ್ಠಾತೃತ್ವವೂ ಸರ್ವಜ್ಞತ್ವವೂ ಬರುತ್ತದೆ. ಯಥೇಚ್ಛವಾಗಿ ವಿನಿಯೋಗಿಸುವವನಿಗೆ ಅಧಿಷ್ಠಾತನೆಂದು ಹೆಸರು. ಸರ್ವಭಾವಾಧಿಷ್ಠಾತೃತ್ವವನ್ನು ಮುಂದೆ ವಿವರಿಸುತ್ತಾನೆ.

ಸರ್ವೇಷಾಂ ವ್ಯವಸಾಯಾ ವ್ಯವಸಾಯಾತ್ಮಕಾನಾಂ ಗುಣಪರಿಣಾಮರೂಪಾಣಾಂ ಭಾವಾನಾಂ ಸ್ವಾಮಿವದಾಕ್ರಮಣಂ ಸರ್ವಭಾವಾಧಿಷ್ಠಾತೃತ್ವಮ್ । ತೇಷಾಮೇವ ಶಾಂತೋದಿತಾವ್ಯಪದೇಶ್ಯಧರ್ಮಿತ್ವೇನ ಸ್ಥಿತಾನಾಂ ವಿವೇಕಜ್ಞಾನಂ ಸರ್ವಜ್ಞಾತೃತ್ವಮ್ । ತದುಕ್ತಂ—ವಿಶೋಕಾ ವಾ ಜ್ಯೋತಿಷ್ಮತೀ (ಸೂ ೧।೩೬) ಇತಿ ಸರ್ವವೃತ್ತಿ ಪ್ರತ್ಯಸ್ತಮಯೇ ಪರಂ ವೈರಾಗ್ಯಮಾಶ್ರಿತಸ್ಯ ಜಾತಾದಿ ಬೀಜಾನಾಂ ಕ್ಲೇಶಾನಾಂ ನಿರೋಧಸಮರ್ಥೋ ನಿರ್ಬೀಜಃ ಸಮಾಧಿರಸಂಪ್ರಜ್ಞಾತ ಪದವೇದನೀಯಃ ಸಂಸ್ಕಾರ ಶೇಷತಾ ವ್ಯಪದೇಶ್ಯಶ್ಚಿತ್ತಸ್ಯಾವಸ್ಥಾ ವಿಶೇಷಃ । ತದುಕ್ತಂ—ವಿರಾಮಪ್ರತ್ಯಯಾಭ್ಯಾಸಪೂರ್ವಃ ಸಂಸ್ಕಾರಶೇಷೋನ್ಯಃ (ಸೂ–೧।೧೮) ಇತಿ । ಏವಂ ಚ ಸರ್ವತೋ ವಿರಜ್ಯಮಾನಸ್ಯ ತಸ್ಯ ಪುರುಷಧೌರೇಯಸ್ಯ ಕ್ಲೇಶಬೀಜಾನಿ ನಿರ್ದಗ್ಧಶಾಲಿ ಬೀಜಕಲ್ಪಾನಿ ಪ್ರಸವಸಾಮರ್ಥ್ಯ ವಿಧುರಾಣಿ ಮನಸಾ ಸಾರ್ಧಂ ಪ್ರತ್ಯಸ್ತಂ ಗಚ್ಛಂತಿ ॥

ವ್ಯವಸಾಯಃ—ಪ್ರಕಾಶಃ. ತದಾತ್ಮಕಭಾವಗಳೆಂದರೆ ಇಂದ್ರಿಯಗಳು. ಇಂದ್ರಿಯ ವಿಷಯಗಳಾದ ಶಬ್ದಸ್ಪರ್ಶರೂಪರಸಗಂಧಗಳೂ, ಅದಕ್ಕೆ ಆಶ್ರಯಗಳಾದ ಪೃಥಿವ್ಯಾದಿ ಭಾವಗಳೂ ಅವ್ಯವಸಾಯಾತ್ಮಕಭಾವಗಳು. ಇವು ಜಡಗಳಾಗಿರುತ್ತವೆ. ಭಾವವೆಂದರೆ ಪದಾರ್ಥಗಳು. ಇವೆಲ್ಲವೂ ಸತ್ವಾದಿಗುಣತ್ರಯಗಳ ಪರಿಣಾಮರೂಪಗಳಾಗಿರುತ್ತವೆ. 'ತೇಷಾಂ'—ಇತಿ ಧರ್ಮದಿಂದ ಶಾಂತಾದಿಧರ್ಮಾಧಾರಭೂತಗಳಾದ ಆ ಸಕಲಭಾವಗಳ ಭೇದಪೂರ್ವಕವಾದ ಯಾವ ಜ್ಞಾನವಿದೆಯೋ ಅದೇ ಸರ್ವಜ್ಞಾತೃತ್ವ. ಧರ್ಮಗಳು ಕೆಲವು ಶಾಂತಗಳಾಗಿ ಮಾಡಲ್ಪಟ್ಟ ತಮ್ಮ ವ್ಯಾಪಾರವುಳ್ಳವುಗಳಾಗಿ ಅತೀತ ಪದಾರ್ಥಗಳಲ್ಲಿ ಸೇರಿರುತ್ತವೆ. ಮಾಡಲ್ಪಡುವ ವ್ಯಾಪಾರಗಳುಳ್ಳವುಗಳು ಈ ಶಕ್ತಿರೂಪದಿಂದ ಇದ್ದು ಹೀಗೆಂದು ಹೇಳಲು ಅಶಕ್ಯಗಳಾದುದರಿಂದ ಅವ್ಯಪದೇಶ್ಯಗಳಾಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಭೂತ, ವರ್ತಮಾನ, ಭವಿಷ್ಯದ್ರೂಪದಿಂದ ಮೂರುವಿಧಗಳಾದ ಯಾವ ಧರ್ಮಗಳಿವೆಯೋ ಅವು ಮೂರರಲ್ಲಿಯೂ ಅನ್ವಯಹೊಂದಿ ಯಾವಾಗಲೂ ಇರುವವುಗಳಾಗಿ, ಅವುಗಳಿಗೆ ಆಶ್ರಯಗಳಾಗಿರುವುದರಿಂದಲೇ ಆ ಧರ್ಮಗಳಿಗಿಂತ ಬೇರೆಯಾಗಿವೆಯೆಂಬ ಯಾವ ಜ್ಞಾನವಿದೆಯೋ ಅದೇ ವಿವೇಕಜ್ಞಾನ.

'ಜ್ಯೋತಿಷ್ಮತಿ'—ಇತಿ. ಯೋಗಜಸಾಕ್ಷಾತ್ಕಾರರೂಪವಾದ ಅಂತಃಕರಣವೃತ್ತಿಗೆ ಜ್ಯೋತಿಷ್ಮತೀ ಎಂದು ಹೆಸರು. ಇದು ಶೋಕನಾಶಕವಾದುದರಿಂದ ವಿಶೋಕವಾಗುತ್ತದೆ. ಈ ವೃತ್ತಿಯು ಮನಸ್ಸಿನ ಸ್ಥೈರ್ಯಕ್ಕೆ ಕಾರಣವಾದುದರಿಂದ ವಿಶೋಕವೆಂದು ಸೂತ್ರದಲ್ಲಿ ಹೇಳಿರುತ್ತಾರೆ. ಇಲ್ಲಿ ಅದೇ ಸಿದ್ಧಿರೂಪವಾಗಿ ವರ್ಣಿತವಾಗಿದೆ. ಇದು ಅತ್ಯಂತಶ್ರೇಷ್ಠವಾದ ಸಿದ್ಧಿ. ಇದು ನಾಲ್ಕನೆಯ ಯೋಗಿಗುಂಟಾಗುತ್ತದೆ. ಸಂಸ್ಕಾರಶೇಷಸಿದ್ಧಿಯನ್ನು ತೋರಿಸುತ್ತಾನೆ. 'ಸರ್ವವೃತ್ತಿ'—ಇತಿ. ವಿರಾಮಪ್ರತ್ಯಯವೆಂದರೆ ಅದು ತತ್ತ್ವಜ್ಞಾನರೂಪವಾದರೂ 'ವೃತ್ತಿಯು ವಿರಾಮಹೊಂದಲಿ' ಎಂಬ ಜ್ಞಾನಕಾಲಿಕವಾದ ಅಲಂಬುದ್ಧಿ. ಇದರಿಂದ ಉಂಟಾಗುವ ಸಂಸ್ಕಾರಮಾತ್ರಾವಶೇಷವಾದ ವೃತ್ತಿನಿರೋಧವೇ ಸಂಪ್ರಜ್ಞಾತಸಮಾಧಿಗಿಂತ ಬೇರೆಯಾದ ಅಸಂಪ್ರಜ್ಞಾತಸಮಾಧಿಯಾಗುತ್ತದೆ. ಸಂಸ್ಕಾರಮಾತ್ರಾವಶೇಷವೆಂದುದರಿಂದ ಮೋಕ್ಷಕಾಲಿಕನಿರೋಧವ್ಯಾವೃತ್ತಿಯಾಗುತ್ತದೆ. ಅಸಂಪ್ರಜ್ಞಾತಸಮಾಧಿಯಲ್ಲಿ ಪುನರುತ್ಥಾನವಾಗಲು ವೃತ್ತಿಸಂಸ್ಕಾರಮಾತ್ರವಿರುತ್ತದೆ. ವೃತ್ತಿ ಇರುವುದಿಲ್ಲ. ಮೋಕ್ಷದಲ್ಲಿ ಚಿತ್ತವು ಅತ್ಯಂತವಿಲಯವಾಗುವುದರಿಂದ ಸಂಸ್ಕಾರವೂ ಇರುವುದಿಲ್ಲ. 'ಏವಂ'—ಇತಿ. ಹೀಗೆ ಸರ್ವವೈರಾಗ್ಯವನ್ನು ಹೊಂದಿದಪುರುಷಶ್ರೇಷ್ಠನ ಕ್ಲೇಶಬೀಜಗಳು ಹುರಿದ ಬತ್ತದಂತೆ ಪ್ರಸವಸಾಮರ್ಥ್ಯಶೂನ್ಯಗಳಾದುದರಿಂದ ಮನಸ್ಸಿನೊಡನೆ ನಾಶಹೊಂದುತ್ತವೆ.

ತದೇತೇಷು ಪ್ರಲೀನೇಷು ನಿರುಪಪ್ಲವವಿವೇಕಖ್ಯಾತಿಪರಿಪಾಕವಶಾತ್ ಕಾರ್ಯಕಾರಣಾತ್ಮಕಾನಾಂ ಪ್ರಧಾನೇ ಲಯಃ ಚಿತಿಶಕ್ತಿಃ ಸ್ವರೂಪಪ್ರತಿಷ್ಠಾ ಪುನರ್ಬುದ್ಧಿಸತ್ತ್ವಾಭಿಸಂಬಂಧವಿಧುರಾ ವಾ ಕೈವಲ್ಯಂ ಲಭತ ಇತಿ ಸಿದ್ಧಮ್ । ದ್ವಯೀ ಚ ಮುಕ್ತಿರುಕ್ತಾ ಪತಂಜಲಿನಾ — ಪುರುಷಾರ್ಥಶೂನ್ಯಾನಾಂ ಗುಣಾನಾಂ ಪ್ರತಿಪ್ರಸವಃ ಕೈವಲ್ಯಂ ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತಿಃ (ಪಾ-ಯೋ-ಸೂ ೪।೩೪) ಇತಿ। ನ ಚಾಸ್ಮಿನ್ ಸತ್ಯಪಿ ಕಸ್ಮಾನ್ನ ಜಾಯತೇ ಜಂತುರಿತಿ ವದಿತವ್ಯಮ್ । ಕಾರಣಾಭಾವಾತ್ಕಾರ್ಯಾಭಾವ ಇತಿಪ್ರಮಾಣಸಿದ್ಧಾರ್ಥೇ ನಿಯೋಗಾನುಯೋಗಯೋರಯೋಗಾತ್ । ಅಪರಥಾ ಕಾರಣಾಭಾವೇಽಪಿ ಕಾರ್ಯಸಂಭವೇ ಮಣಿವೇಧಾದಯೋಂಧಾದಿಭ್ಯೋ ಭವೇಯುಃ । ತಥಾಚಾನುಪಪನ್ನಾರ್ಥತಾಯಾಮಾಭಾಣಕೋ ಲೌಕಿಕ ಉಪಪನ್ನಾರ್ಥೋ ಭವೇತ್ ॥

ಕರ್ಮಾಶಯಗಳಾದ ಕ್ಲೇಶಬೀಜಗಳು ತಮ್ಮ ಕಾರಣಗಳಲ್ಲಿ ಲೀನವಾದಮೇಲೆ ಪ್ರಕೃತಿಪುರುಷರಭೇದ ಸಾಕ್ಷಾತ್ಕಾರವಾದ ವಿವೇಕಖ್ಯಾತಿಯು ನಿರ್ಬಾಧವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದರ ಪರಿಪಾಕಾವಸ್ಥೆಯಿಂದ ಇಂದ್ರಿಯಗಳಿಗೂ ತಮ್ಮ ಕಾರಣಗಳಲ್ಲಿ ಲಯವುಂಟಾಗುತ್ತದೆ. ಇದೇ ಪ್ರಕೃತಿಯ ಕೈವಲ್ಯ. ಕೈವಲ್ಯವೆಂದರೆ ಏಕಾಕಿಯಾಗಿರುವುದು. ಪ್ರಕೃತಿಕಾರ್ಯಗಳೆಲ್ಲವೂ ಲಯಹೊಂದಿರುವುದರಿಂದ ಪ್ರಕೃತಿ ಮತ್ತು ಪುರುಷರಿಗೆ ಪರಸ್ಪರಾತ್ಯಂತವಿಯೋಗವಾದುದರಿಂದ ಪ್ರಕೃತಿಯು ಏಕಾಕಿಯಾಗುತ್ತದೆ. ಪುರುಷಕೈವಲ್ಯವನ್ನು ತೋರಿಸುತ್ತಾನೆ. 'ಚಿತಿಶಕ್ತಿಃ—' ಇತಿ. ಆತ್ಮನೇ ಚಿತಶಕ್ತಿ. ಅವನ ಔಪಾಧಿಕರೂಪವನ್ನು ತ್ಯಜಿಸಿ ಮೂಲಸ್ವರೂಪದಿಂದ ಇರುವುದೇ ಪುರುಷನ ಕೈವಲ್ಯ. ಇದು ಸಿದ್ಧವಾದಮೇಲೆ ಮುಂದೆ ಎಂದೂ ಅವನಿಗೆ ಬುದ್ಧಿಸತ್ವಸಂಬಂಧವುಂಟಾಗುವುದಿಲ್ಲ. 'ದ್ವಯೀ—' ಇತಿ. ಪತಂಜಲಿಗಳು ಎರಡುರೀತಿಯಾದ ಮುಕ್ತಿಯನ್ನು ಹೇಳಿರುತ್ತಾರೆ. 'ಪುರುಷಾರ್ಥ—' ಇತಿ. ಮಹತ್ತತ್ತ್ವವನ್ನಾರಂಭಿಸಿ ಸೂಕ್ಷ್ಮಭೂತಗಳವರೆಗಿರುವ ಲಿಂಗಶರೀರರೂಪಗಳಾದ, ಪುರುಷೋಪಕಾರಕಗುಣಗಳಿಗೆ ಸ್ವಕರ್ತವ್ಯವು ಪೂರೈಸಿದುದರಿಂದ ಪುರುಷಾರ್ಥಶೂನ್ಯಗಳಾಗಿ ತಮ್ಮ ಕಾರಣಗಳಲ್ಲಿ ಅವುಗಳ ಯಾವ ಪ್ರತಿಪ್ರಸವವಿದೆಯೋ ಅಂದರೆ ಅತ್ಯಂತಲಯವಿದೆಯೋ ಅದೇ ಪ್ರಕೃತಿಯಕೈವಲ್ಯ. ಬುದ್ಧಿತತ್ತ್ವಾಸಂಬಂಧದಿಂದ ಕೇವಲ ಚಿತಿಶಕ್ತಿರೂಪವಾದ ಯಾವ ಪುರುಷನ ಸ್ವರೂಪಾವಸ್ಥಾನವಿದೆಯೋ ಅದೇ ಪುರುಷನಕೈವಲ್ಯ. ಜಪಾಕುಸುಮದ (ಕೆಂಪು ದಾಸವಾಳ) ಸಂಬಂಧವಿಲ್ಲದಿರುವಾಗ ಸ್ಫಟಿಕವು ತನ್ನ ಸ್ವರೂಪವನ್ನು ಹೊಂದಿರುವಂತೆ ಉಪಾಧಿಯಾದ ಬುದ್ಧಿತತ್ತ್ವಸಂಬಂಧವಿಲ್ಲದಿರುವುದರಿಂದ ಪುರುಷನು ಆಗ ಯಾವಾಗಲೂ ಸ್ವಸ್ವರೂಪದಿಂದ ಇರುತ್ತಾನೆ. ಇದೇ 'ಪುರುಷಾರ್ಥ—' ಎಂಬ ಸೂತ್ರದ ಅರ್ಥ.

'ನಚ—' ಇತಿ. ಕೈವಲ್ಯವಿರುವಾಗ ಪ್ರಾಣಿಗಳಿಗೆ ಪುನರ್ಜನ್ಮ ಏಕಾಗುವುದಿಲ್ಲವೆಂದು ಕೇಳಬಾರದು. ಕ್ಲೇಶಬೀಜಗಳು (ಸುಟ್ಟು) ನಾಶವಾಗಿ ಕಾರಣವಿಲ್ಲದಿರುವುದರಿಂದ ಅದರ ಕಾರ್ಯವಾದ ಜನ್ಮಮರಣಾದಿಗಳೂ ಇರುವುದಿಲ್ಲ. ನಿಯೋಗಃ— ವಿಧಿ. ಅಪೂರ್ವಾರ್ಥಬೋಧಕಕ್ಕೆ ವಿಧಿಯೆಂದು ಹೆಸರು. ಆಬಾಲವೃದ್ಧರವರೆಗೆ ಪ್ರಮಾಣಸಿದ್ಧವಾದ ಅರ್ಥದಲ್ಲಿ ವಿಧಿ ಸಂಭವಿಸುವುದಿಲ್ಲ. ಅನುಯೋಗವೆಂದರೆ ಪ್ರಶ್ನೆ. ಅಜ್ಞಾತಾರ್ಥವಿಷಯದಲ್ಲಿ ಪ್ರಶ್ನೆಗೆ ಅವಕಾಶ. ಇವೆರಡಕ್ಕೂ ಇಲ್ಲಿ ಅವಕಾಶವಿಲ್ಲ. 'ಅಪರಥಾ—' ಇತಿ. ಕಾರಣವಿಲ್ಲದಿದ್ದರೂ ಕಾರ್ಯವಾಗುತ್ತದೆಂದು ಅಂಗೀಕರಿಸಿದರೆ ಕುರುಡನೂ ಕಣ್ಣಿಲ್ಲದಿದ್ದರೂ ಸೂಚ್ಯಾದಿಗಳಿಂದ ಮಣಿಯನ್ನು ಕೊರೆದು ನೂಲು ಪೋಣಿಸಲು ಸಮರ್ಥನಾಗಬೇಕಾಗುತ್ತದೆ. 'ತಥಾಚ—' ಇತಿ. ಈ ವಿಷಯವು ಸುತರಾಂ ಅಸಂಭವಿದೆಯೆಂದು ತೋರಿಸಲು ಲೋಕದ ಗಾದೆ ಹೇಳಿದೆ. ಅದು ಸಂಭವ್ಯರ್ಥಪ್ರತಿಪಾದಕವಾದೀತೆಂದು ಆಪಾದನೆ. ಇದಕ್ಕೆ ಶ್ರುತಿ ಪ್ರಶಂಸೆಯನ್ನೂ ಮುಂದೆ ತೋರಿಸುತ್ತಾನೆ.

ತಥಾ ಚ ಶ್ರುತಿಃ—ಅಂಧೋಮಣಿಮವಿಂದತ್ । ತಮನಂಗುಲಿರಾವಯತ್ । ಅಗ್ರೀವಃ ಪ್ರತ್ಯಮುಂಚತ್ । ತಮಜಿಹ್ವಾ ಅಸಶ್ಚತ (ತೈ-ಆ-೧-೧೧-೫) ಅವಿಂದತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಿಧ್ಯತ | ಅನಯತ್ ಗೃಹೀತವಾನ್ | ಪ್ರತ್ಯಮುಂಚತ್ ಪಿನದ್ಧವಾನ್ | ಅಸಶ್ಚತ ಅಭ್ಯಪೂಜಯತ್ ಸ್ತುತವಾನ್ ಇತಿಯಾವತ್ | ಏವಂ ಚ ಚಿಕಿತ್ಸಾ ಶಾಸ್ತ್ರವತ್ ಯೋಗಶಾಸ್ತ್ರಂ ಚತುರ್ವ್ಯೂಹಮ್ | ಯಥಾ ಚಿಕಿತ್ಸಾಶಾಸ್ತ್ರಂ ರೋಗೋ ರೋಗಹೇತು ರಾರೋಗ್ಯಂ ಭೇಷಜಮಿತಿ ತಥೇದಮಪಿ ಸಂಸಾರಃ ಸಂಸಾರಹೇತುರ್ಮೋಕ್ಷೋ ಮೋಕ್ಷೋಪಾಯ ಇತಿ | ತತ್ರ ದುಃಖಮಯಃ ಸಂಸಾರೋ ಹೇಯಃ | ಪ್ರಧಾನಪುರುಷಯೋಃ ಸಂಯೋಗೋ ಹೇಯಭೋಗ ಹೇತುಃ | ತಸ್ಯಾತ್ಯಂತಿಕೀ ನಿವೃತ್ತಿರ್ಹಾನಮ್ | ತದುಪಾಯಃ ಸಮ್ಯಗ್ ದರ್ಶನಮ್ | ಏವಮನ್ಯದಪಿ ಶಾಸ್ತ್ರಂ ಯಥಾಸಂಭವಂ ಚತುರ್ವ್ಯೂಹ ಮೂಹನೀಯಮಿತಿ ಸರ್ವಮವದಾತಮ್ ||

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನಸಂಗ್ರಹೇ
ಪಾತಂಜಲದರ್ಶನಮ್

ಗಾದೆಯ ಅರ್ಥವನ್ನು ಶ್ರುತಿಯೇ ಹೇಳುತ್ತದೆ — ಕುರುಡನು ಮಣಿಯನ್ನು ತೂತುಕೊರೆದನು. ಬೆರಳಿಲ್ಲದವನು ಅದನ್ನು ಹಿಡಿದುಕೊಂಡನು. ಕತ್ತಿಲ್ಲದವನು ಅದನ್ನು ಧರಿಸಿದನು ನಾಲಿಗೆ ಇಲ್ಲದವನು ಅದನ್ನು ಹೊಗಳಿದನು ಎಂದರ್ಥ. ಲೋಕ ದಲ್ಲಿ ಪುರುಷನು ಕಣ್ಣಿನಿಂದ ಮಣಿಯನ್ನು ನೋಡಿ ಬೆರಳುಗಳಿಂದ ಹಿಡಿದು ಕತ್ತಿನಲ್ಲಿ ಧರಿಸಿ ಚನ್ನಾಗಿದೆಯೆಂದು ಹೊಗಳುತ್ತಾನೆ. ಚಿದ್ರೂಪ ಆತ್ಮನಾದರೋ ಚಕ್ಷುರಾದ್ಯ ವಯವಗಳಿಲ್ಲದಿದ್ದರೂ ಅಚಿಂತ್ಯಮಹಿಮನಾದುದರಿಂದ ಆ ಎಲ್ಲಾ ಸಕಲವ್ಯಾಪಾರಗಳನ್ನು ಮಾಡುತ್ತಾನೆಂದು ಶ್ರುತಿ ಬೋಧಿಸುತ್ತದೆ. ಇದು ಅವನ ಸ್ತುತಿಯನ್ನು ತಿಳಿಸುವ ಶ್ರುತಿ. ಅವನು ಅಸಂಭಾವ್ಯವಾದ ಅರ್ಥವನ್ನೂ ಮಾಡುತ್ತಾನೆಂದು ತಾತ್ಪರ್ಯ. ಕಾರಣವಿಲ್ಲದಿದ್ದರೂ ಕಾರ್ಯವಾಗುವುದಾದರೆ ಈ ಶ್ರುತಿಯು ಪ್ರಶಂಸಾಪರವಾಗದೇ ಹೋಗಬೇಕಾಗುತ್ತದೆ. ವೈದ್ಯಶಾಸ್ತ್ರವು ಸಂಕ್ಷಿಪ್ತಾನಯುವ ರಚನೆಯಿಂದ ನಾಲ್ಕು ವಿಭಾಗ ಒಳಗೊಂಡಂತೆ ಎಲ್ಲಾ ಶಾಸ್ತ್ರಗಳೂ ಹೀಗಿರುತ್ತವೆಯೆಂದು ಹೇಳಬಹುದು. ಹಾಗೆ ಯೋಗಶಾಸ್ತ್ರವೂ ಚತುರ್ವ್ಯೂಹದಿಂದ ಕೂಡಿದೆಯೆಂದು ತೋರಿಸುತ್ತಾನೆ. ಸಂಸಾರವು ದುಃಖಮಯವಾದುದರಿಂದ ಅವಶ್ಯತ್ಯಾಜ್ಯವಾಗಿದೆ. ಪ್ರಧಾನಪುರುಷ ಸಂಯೋಗವೇ ಹೇಯಸಂಸಾರಕ್ಕೆ ಕಾರಣ. ಇಲ್ಲಿ ಪ್ರಧಾನವೆಂದರೆ ಅದರ ಪರಿಣಾಮ ರೂಪವಾದ ಬುದ್ಧಿತತ್ತ್ವವೆಂದು ತಿಳಿಯಬೇಕು. ಬುದ್ಧಿಪುರುಷಸಂಯೋಗದಮೂಲಕ ಅವಿದ್ಯೆಯೇ ಸಂಸಾರ ಹೇತುವಾಗುತ್ತದೆ. ಸಮ್ಯಗ್‌ದರ್ಶನವೆಂದರೆ ಪ್ರಕೃತಿಪುರುಷರ ವಿವೇಕಸಾಕ್ಷಾತ್ಕಾರ. ಇದು ಸಂಸಾರದ ಆತ್ಯಂತಿಕನಿವೃತ್ತಿಗೆ ಉಪಾಯವಾಗುತ್ತದೆ.

ಪಾತಂಜಲದರ್ಶನದ ಕನ್ನಡ ವ್ಯಾಖ್ಯಾನಮುಗಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಶಾಂಕರದರ್ಶನಮ್ ॥ ೧೬ ॥

ಸೋಽಯಂ ಪರಿಣಾಮವಾದಃ ಪ್ರಾಮಾಣಿಕಗರ್ಹಣ ಮರ್ಹತಿ । ನ ಹ್ಯಚೇತನಂ ಪ್ರಧಾನಂ ಚೇತನಾನಧಿಷ್ಠಿತಂ ಪ್ರವರ್ತತೇ । ಸುವರ್ಣಾದೌ ರುಚಕಾದ್ಯುಪಾದಾನೇ ಹೇಮಕಾರಾದಿ ಚೇತನಾಧಿಷ್ಠಾನೋಪಲಂಭೇನ ನಿತ್ಯತ್ವಸಾಧಕಕೃತಕತ್ವವತ್ ಸುಖದಃಖಮೋಹಾತ್ಮನಾನ್ವಿತತ್ವಾದೇಃ ಸಾಧನಸ್ಯ ಸಾಧ್ಯವಿಪರ್ಯಯವ್ಯಾಪ್ತತಯಾ ವಿರುದ್ಧತ್ವಾತ್ ! ಸ್ವರೂಪಾಸಿದ್ಧತ್ವಾಚ್ಚ । ಅಂತರಾಃ ಖಲ್ವಮೀ ಸುಖದುಃಖಮೋಹಾಃ ಬಾಹ್ಯೇಭ್ಯಶ್ಚಂದನಾದಿಭ್ಯೋ ವಿಭಿನ್ನಪ್ರತ್ಯಯವೇದನೀಯೇಭ್ಯೋ ವ್ಯತಿರಿಕ್ತಾ ಅಧ್ಯಕ್ಷಮೀಕ್ಷ್ಯಂತೇ । ಯದ್ಯಮೀ ಸುಖಾದಿಸ್ವಭಾವಾ ಭವೇಯುಸ್ತದಾ ಹೇಮಂತೇಽಪಿ ಚಂದನಃ ಸುಖಃ ಸ್ಯಾತ್ । ನ ಚಂದನಃ ಕದಾಚಿದಚಂದನಃ । ತಥಾ ನಿದಾಘೇಷ್ವಪಿಕುಂಕುಮಪಂಕಃ ಸುಖೋ ಭವೇತ್ । ನ ಹ್ಯಸೌ ಕದಾಚಿದಕುಂಕುಮಪಂಕ ಇತಿ । ಏವಂ ಕಂಟಕಃ ಕ್ರಮೇಲಕಸ್ಯೇವ ಮನುಷ್ಯಾದೀನಾಮಪಿ ಪ್ರಾಣಭೃತಾಂ ಸುಖಃ ಸ್ಯಾತ್ । ನ ಹ್ಯಸೌ ಕಾಂಶ್ಚಿತ್ ಪ್ರತ್ಯೇವ ಕಂಟಕ ಇತಿ । ತಸ್ಮಾತ್ ಚಂದನಕುಂಕುಮಾದಯೋ ವಿಶೇಷಾಃ ಕಾಲವಿಶೇಷಾದ್ಯಪೇಕ್ಷಯಾ ಸುಖಾದಿಹೇತವೋ ನ ತು ಸುಖಾದಿಸ್ವಭಾವಾ ಇತಿ ರಮಣೀಯಮ್ । ತಸ್ಮಾತ್ ಹೇತುರಸಿದ್ಧ ಇತಿ ಸಿದ್ಧಮ್ ॥

ಸಾಂಖ್ಯಯೋಗಾಭಿಮತವಾದ ಪರಿಣಾಮವಾದವು ಹಿಂದೆ ವಿವೃತವಾಗಿದೆ. ಸುಖದುಃಖಮೋಹಾನ್ವಿತವಾದುದರಿಂದ (ಹೇತು) ಪದಾರ್ಥಸಮುದಾಯವು (ಪಕ್ಷ) ಸುಖದುಃಖಮೋಹಸ್ವರೂಪವೇ ಕಾರಣವಾಗಿರುವುದಾಗಿದೆ (ಸಾಧ್ಯ) ಎಂದು ಹಿಂದೆ ಸಾಂಖ್ಯದರ್ಶನದಲ್ಲಿ ಅನುಮಾನ ಹೇಳಿದೆ. ಸುಖದುಃಖ ಮೋಹಾತ್ಮಕವಾದುದೇ ಪ್ರಧಾನ. (ಮೂಲಪ್ರಕೃತಿ). ಇದು ಕಾರಣವಾಗಿ ಉಳ್ಳದ್ದು ಎಂಬುದು ಸಾಧ್ಯ. ಆಗ ಕಾರಣವಾದ ಪ್ರಧಾನವು ಚೇತನಾಧಿಷ್ಠಿತವಾಗಿ ಕಾರಣವಾಗುವುದೇ ಅಥವಾ ಅನಧಿಷ್ಠಿತವಾಗಿ ಕಾರಣವೇ ? ಚೇತನಾಧಿಷ್ಠಿತವಾಗಿ ಕಾರಣವಾಗುತ್ತದೆಂದರೆ ಸಾಂಖ್ಯಸಿದ್ಧಾಂತಭಂಗವುಂಟಾಗುತ್ತದೆ. ಏಕೆಂದರೆ ಅವರು ಅಚೇತನವಾದ ಪ್ರಧಾನವು ಸ್ವತಂತ್ರವಾಗಿ ಜಗತ್ಕಾರಣವಾಗುತ್ತದೆಂದು ಹೇಳುತ್ತಾರೆ. ಎರಡನೆಯ ಪಕ್ಷವನ್ನು ಸ್ವೀಕರಿಸಿದರೆ ಹೇತು ವಿರುದ್ಧವಾಗುತ್ತದೆಂದು ತೋರಿಸುತ್ತಾನೆ. 'ನಹಿ'—ಇತಿ ಚೇತನಾನಧಿಷ್ಠಿತವಾದ ಅಚೇತನವಾದ ಪ್ರಧಾನವು ಎಂದೂ ಪ್ರವೃತ್ತಿಹೊಂದಲಾರದು. ರುಚಕವೆಂದರೆ ಸುವರ್ಣಪಾತ್ರೆ. ಅದಕ್ಕೆ ಉಪಾದಾನಕಾರಣವಾದ ಸುವರ್ಣದಲ್ಲಿ ಚೇತನಾನಧಿಷ್ಠಿತತ್ವವಿರುದ್ಧವಾಗಿ ಚೇತನಾಧಿಷ್ಠಿತತ್ವವೇ ತೋರುವುದರಿಂದ ಸುಖದುಃಖ ಮೋಹಾನ್ವಿತತ್ವರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇತುವು ಸಾಧ್ಯಾಭಾವವ್ಯಾಪ್ತವಾದುದರಿಂದ ನಿತ್ಯತ್ವಸಾಧಕವಾದ ಕೃತಕತ್ವ ಹೇತು ವಿನಂತೆ ವಿರುದ್ಧವಾಗುತ್ತದೆ. ಹೊರಗಿನ ಚಂದನಾದಿ ವಿಷಯಗಳು ಸುಖದುಃಖ ಮೋಹಾತ್ಮಕಗಳಾಗಿವೆಯೆಂದು ಅಂಗೀಕರಿಸಿ ಈ ದೋಷ ಹೇಳಿದೆ. ಚೇತನಾನಧಿಷ್ಠಿತ ಸುಖದುಃಖಮೋಹಾತ್ಮಕಕಾರಣಕತ್ವವೆಂಬುದು ಸಾಧ್ಯ. ಅದರ ವಿಪರ್ಯಯವೆಂದರೆ ಚೇತನಾಧಿಷ್ಠಿತಸುಖದುಃಖಮೋಹಾತ್ಮಕ ಕಾರಣಕತ್ವ. ಇದು ಸಾಧ್ಯಾಭಾವವಾಗು ತ್ತದೆ. ಇದರಿಂದ ವ್ಯಾಪ್ತವಾದ ಹೇತುವೆಂದರೆ ಸುಖದುಃಖಮೋಹಾನ್ವಿತತ್ವರೂಪ ಹೇತು. ವಾಸ್ತವವಾಗಿ ಇದೂ ಸಂಭವಿಸುವುದಿಲ್ಲವೆಂದು ತೋರಿಸುತ್ತಾನೆ.

'ಸ್ವರೂಪಾ—' ಇತಿ. ಪಕ್ಷದಲ್ಲಿ ಹೇತು ಬಾರದಿದ್ದರೆ ಅದು ಸ್ವರೂಪಾಸಿದ್ಧ ವಾಗುತ್ತದೆ. ಶಬ್ದೋ—ಗುಣಃ—ಚಾಕ್ಷುಷತ್ವಾತ್ । ಎಂದಾಗ ಚಾಕ್ಷುಷತ್ವಹೇತುವು ಶಬ್ದರೂಪಪಕ್ಷದಲ್ಲಿ ಬಾರದಿರುವುದರಿಂದ ಸ್ವರೂಪಾಸಿದ್ಧವಾಗುತ್ತದೆ. ಅದರಂತೆ ಸುಖ ದುಃಖಮೋಹಾನ್ವಿತತ್ವರೂಪಹೇತುವು ಚಂದನಾದಿಪದಾರ್ಥಜಾತರೂಪ ಪಕ್ಷದಲ್ಲಿ ಬರುವುದಿಲ್ಲ. ಪಕ್ಷದಲ್ಲಿ ಹೇತುವಿದ್ದು ಅಲ್ಲಿ ಸ್ವರೂಪದಿಂದ ಸಾಧ್ಯಜ್ಞಾಪಕವಾದರೆ ಅದು ಸದ್ಧೇತುವಾಗುತ್ತದೆ. ಸುಖಾದಿಗಳು ಆಂತರಿಕಗಳಾದುದರಿಂದ ಮಾನಸಪ್ರತ್ಯಯವೇದ್ಯ ಗಳಾಗುತ್ತವೆ. ಚಂದನಾದಿಪದಾರ್ಥಗಳು ಬಾಹ್ಯನಯನಾದಿಗಳಿಂದ ಗ್ರಾಹ್ಯವಾಗು ತ್ತವೆ. ಅವು ಸುಖಾದಿಸ್ವಭಾವಗಳಾದರೆ ಒಂದೇ ಇಂದ್ರಿಯದಿಂದ ತಿಳಿಯಲ್ಪಡ ಬೇಕಾಗುತ್ತವೆ. ಸುಖ ಮತ್ತು ಚಂದನವು ಒಂದು ಇಂದ್ರಿಯದಿಂದ ಗ್ರಾಹ್ಯವಾಗುವು ದಿಲ್ಲ. ವಿಭಿನ್ನಪ್ರತ್ಯಯವೇದ್ಯಗಳಾದುದರಿಂದಲೇ ಅಂದರೆ ಬೇರೆ ಬೇರೆ ಇಂದ್ರಿಯ ಗ್ರಾಹ್ಯ ಗಳಾದುದರಿಂದಲೇ ಅವು ಚಂದನಾದಿಗಳಿಗಿಂತ ಬೇರೆಯೆಂದು ಸಿದ್ಧವಾಗುತ್ತದೆ. ಅವು ಒಂದೆಂದರೆ ದೋಷ ತೋರಿಸುತ್ತಾನೆ. "ಯದಿ—" ಇತಿ. ಸುಖಸ್ವಭಾವವೇ ಚಂದನವೆನ್ನುವುದಾದರೆ ವಸ್ತುವು ಎಂದೂ ಅದರ ಸ್ವಭಾವ ಬಿಡದಿರುವುದರಿಂದ ಚಳಿಗಾಲ ದಲ್ಲಿಯೂ ಅದು ಸುಖರೂಪವಾಗಿಯೇ ತೋರಬೇಕಾಗುತ್ತದೆ. ಆದರೆ ಹಾಗೆ ಎಂದೂ ಆಗುವುದಿಲ್ಲ. ಚಂದನವು ಒಂದು ಸಮಯ ಚಂದನವಾಗದಿರುವುದಿಲ್ಲ. ಒಂಟೆಗೆ ಮುಳ್ಳಿನಗಿಡ ಸುಖವಾದಂತೆ ಎಲ್ಲಾ ಪ್ರಾಣಿಗಳಿಗೂ ಸುಖವೇ ಆಗಲಿ. ಎಂದರೆ ಎಂದೂ ಹಾಗೆ ಆಗುವುದಿಲ್ಲ. ಆದುದರಿಂದ ಚಂದನಾದಿವಿಷಯಗಳು ಯಾವಾಗಲೂ ಕಾಲ ವಿಶೇಷದಲ್ಲಿ ಸುಖಾದಿಕಾರಣಗಳಾಗುವುದಲ್ಲದೆ ಎಂದೂ ಸುಖಾದಿಸ್ವಭಾವಗಳಾಗಿರುವುದಿಲ್ಲ ವೆಂದೇ ಅಂಗೀಕರಿಸಬೇಕು. ಯಾವುದು ಯಾವುದಕ್ಕೆ ಕಾರಣವೋ ಅದು ತದ್ರೂಪ ವಾಗಿರುತ್ತದೆ ಎಂಬ ವ್ಯಾಪ್ತಿಯೂ ವ್ಯಭಿಚರಿತವಾಗುವುದರಿಂದ ಅದೂ ಸಾಧಕವಾಗ ಲಾರದು. ಆದುದರಿಂದ ಚಂದನಾದಿಗಳಲ್ಲಿ ಸುಖಾದ್ಯನ್ವಿತತ್ವ ಹೇತುಬಾರದಿರುವುದರಿಂದ ಸ್ವರೂಪಾಸಿದ್ಧವಾಗುತ್ತದೆ.

ನಾಪಿ ಶ್ರುತಿಃ ಪ್ರಧಾನಕಾರಣತ್ವವಾದೇ ಪ್ರಮಾಣಮ್ । ಯತಃ—ಯದಗ್ನೇರೋಹಿತಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಛಾಂ-೬-೪-೧) ಇತಿ ಛಾಂದೋಗ್ಯಶಾಖಾಯಾಂ ತೇಜೋಬನ್ನಾತ್ಮಿಕಾಯಾಃ ಪ್ರಕೃತೇರ್ಲೋಹಿತಶುಕ್ಲಕೃಷ್ಣರೂಪಾಣಿ ಸಮಾಮ್ನಾತಾನಿ ತಾನ್ಯೇವಾತ್ರ ಪ್ರತ್ಯಭಿಜ್ಞಾಯಂತೇ । ತತ್ರ ಶ್ರೌತಪ್ರತ್ಯಭಿಜ್ಞಾಯಾಃ ಪ್ರಾಬಲ್ಯಾಲ್ಲೋಹಿತಾದಿ ಶಬ್ದಾನಾಂ ಮುಖ್ಯಾರ್ಥಸಂಭವಾಚ್ಚ ತೇಜೋಬನ್ನಾತ್ಮಿಕಾ ಜರಾಯುಜಾಂಡಜ ಸ್ವೇದಜೋದ್ಭಿಜ್ಜ ಚತುಷ್ಟಯಸ್ಯ ಭೂತಗ್ರಾಮಸ್ಯ ಪ್ರಕೃತಿರನಸೀಯತೇ । ಯದ್ಯಪಿ ತೇಜೋಬನ್ನಾನಾಂ ಪ್ರಕೃತೇರ್ಜಾತತ್ವೇನ ಯೋಗವೃತ್ತ್ಯಾ ನ ಜಾಯತ ಇತ್ಯಜಾತ್ವಂ ನ ಸಿಧ್ಯತಿ, ತಥಾಪಿ ರೂಢಿವೃತ್ತ್ಯಾವಗತಮಜಾತ್ವಮುಕ್ತಪ್ರಕೃತೌ ಸುಖಾವಬೋಧಾಯ ಪ್ರಕಲ್ಪ್ಯತೇ । 'ಯಥಾ ಅಸೌ ವಾದಿತ್ಯೋ ದೇವಮಧು (ಛಾ-೩-೧-೧) ಇತ್ಯಾದಿವಾಕ್ಯೇನಾದಿತ್ಯಸ್ಯಮಧುತ್ವಂ ಪರಿಕಲ್ಪ್ಯತೇ ತಥಾ ತೇಜೋಬನ್ನಾತ್ಮಿಕಾ ಪ್ರಕೃತಿರೇವಾಜೇತಿ। ಅತೋಽಜಾಮೇಕಾಮಿತ್ಯಾದಿಕಾ ಶ್ರುತಿ ರಪಿ ನ ಪ್ರಧಾನ ಪ್ರತಿಪಾದಿಕಾ ॥

ಅಜಾಮೇಕಾ- (ಶ್ವೇ-೪|೫) ಎಂಬ ಶ್ರುತಿಯೇ ಪ್ರಧಾನಕ್ಕೆ ಸೃಷ್ಟಿಕರ್ತೃತ್ವ ಹೇಳುತ್ತದೆಂದು ಹಿಂದೆ ಹೇಳಿದೆ. ಅದೇ ಪ್ರಮಾಣವೆಂದರೆ ಅದು ಅನ್ಯಾರ್ಥಪ್ರತಿ ಪಾದಕವಾದುದರಿಂದ ಪ್ರಮಾಣವಾಗಲಾರದೆಂದು ಖಂಡಿಸುತ್ತಾನೆ. 'ನಾಪಿ'—ಇತಿ. ಪಂಚೀಕರಣದಂತೆ ಅಗ್ನಿಜಲಪೃಥಿವಿಗೆ ತ್ರಿವೃತ್‌ಕರಣ ಛಾಂದೋಗ್ಯದಲ್ಲಿ ಹೇಳಿದೆ. ತ್ರಿವೃತ್ಕೃತವಾದ ಆಗ್ನಿಯ ಯಾವ ಕೆಂಪುಬಣ್ಣವಿದೆಯೋ ಅದು ತ್ರಿವೃತ್ಕರಣ ಹೊಂದ ದಿರುವ ತೇಜಸ್ಸಿನರೂಪ. ಅದೇ ಅಗ್ನಿಯ ಯಾವ ಬಿಳೀಬಣ್ಣವಿದೆಯೋ ಅದು ಅತ್ರಿ ವೃತ್ಕೃತವಾದ ಜಲದ ರೂಪ. ಆದೇ ಆಗ್ನಿಯ ಯಾವ ಕೃಷ್ಣವರ್ಣವಿದೆಯೋ ಅತ್ರಿ ವೃತ್ಕೃತವಾದ ಪೃಥಿವಿಯರೂಪವಾಗುತ್ತದೆ. ಹೀಗೆ ತೇಜೋಬನ್ನಾತ್ಮಕಪ್ರಕೃತಿಯ ರೂಪಗಳು ಛಾಂದೋಗ್ಯದಲ್ಲಿ ವರ್ಣಿತವಾಗಿದೆ. ಅವುಗಳನ್ನೇ 'ಅಜಾಮೇಕಾಂ'—ಶ್ರುತಿ ಯಲ್ಲಿ ಹೇಳಿಹುವುದು. ಯದ್ಯಪಿ ಲೋಹಿತಾದಿಶಬ್ದಗಳು ಸತ್ತ್ವಾದಿಗುಣತ್ರಯ ಪ್ರತಿ ಪಾದಕಗಳೆಂದು ಸಾಂಖ್ಯರ ಸಿದ್ಧಾಂತ. ಆದರೂ ಶ್ರುತಿಯಲ್ಲಿ ಅವು ವರ್ಣವಾಚಕಗಳೇ ಆಗಿರುತ್ತವೆ. "ಯದಗ್ನೇ ರೋಹಿತಂ ರೂಪಂ" ಎಂದು ಬೇರೆ ಸ್ಥಳದಲ್ಲಿ ರೂಪವೆಂದೇ ಹೇಳಿರುವುದರಿಂದ ವರ್ಣವಾಚಿಯೆಂದೇ ಅಂಗೀಕರಿಸುವುದು ನ್ಯಾಯ್ಯವಾಗಿದೆ ಇದೇ ಮುಖ್ಯಾರ್ಥ. ಸಾಂಖ್ಯರು ಮುಖ್ಯಾರ್ಥವನ್ನು ಅಂಗೀಕರಿಸಿಲ್ಲ. ರಂಜಕತ್ವಾದಿಸಾಧರ್ಮ್ಯ ದಿಂದ ಅವರು ರೋಹಿತಾದಿಶಬ್ದಗಳಿಗೆ ಗುಣತ್ರಯದಲ್ಲಿ ಲಕ್ಷಣಾ ಎಂದು ವಾದಿಸುತ್ತಾರೆ. ಅದು ಸಮಂಜಸವಲ್ಲ. ಅಜಾ ಎಂದರೆ ಪ್ರಕೃತ ಶ್ರುತಿಯಲ್ಲಿ ಹೇಳಿದಂತೆ ಭೂತತ್ರಯ ಲಕ್ಷಣವಾದ ಪ್ರಕೃತಿ. ಭೂತಗ್ರಾಮ (ಸಮುದಾಯ) ಜರಾಯುಜಾದಿಭೇದಗಳಿಂದ ನಾಲ್ಕುವಿಧ. ಮನುಷ್ಯಪಶ್ವಾದಿಗಳು ಜರಾಯುಜಗಳು. ಗರ್ಭಾಶಯಕ್ಕೆ ಜರಾಯು ವೆಂದು ಹೆಸರು. ಅದರಿಂದ ಹುಟ್ಟಿದವುಗಳು ಜರಾಯುಜಗಳು. ಪಕ್ಷಿಸರ್ಪಾದಿಗಳು ಅಂಡಜಗಳು. ಸ್ವೇದ ಪದದಿಂದ ಅದಕ್ಕೆ ಕಾರಣವಾದ ಸೆಖೆಯನ್ನು ತೆಗೆದುಕೊಳ್ಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕು. ಕ್ರಿಮಿ ತಿಗಣೆ ಸೊಳ್ಳೆ ಮುಂತಾದವುಗಳು ಸ್ವೇದಜಗಳು. ಭೂಮಿಯನ್ನು ಭೇದಿಸಿ ಮೇಲಕ್ಕೆ ಬರುವ ಮರಗಿಡಾದಿಗಳು ಉದ್ಭಿಜಗಳು.

'ಯದ್ಯಪಿ'—ಇತಿ. ತೇಜೋಬನ್ನಗಳು ಮೂಲಕಾರಣವಾದ ಪ್ರಧಾನದಿಂದ ಹುಟ್ಟಿರುವುದರಿಂದ 'ನಜಾಯತೇ' ಎಂಬ ಯೋಗಾರ್ಥವು ಅಜಾಶಬ್ದಕ್ಕೆ ಹೇಗೆ ಅಂಗೀಕರಿಸುವುದು ? ಎಂಬ ಶಂಕೆ ಬರುತ್ತದೆ. 'ತಥಾಪಿ'—ಇತಿ. ಅಜಾಶಬ್ದವು ರೂಢಿಯಿಂದ ಪಶುವಿಶೇಷವನ್ನು (ಆಡು) ತಿಳಿಸುತ್ತದೆ. ಯೋಗರೂಢಿಗೆ ಇಲ್ಲಿ ಅವಕಾಶವಿಲ್ಲ. ಕೇವಲ ರೂಢ್ಯರ್ಥವನ್ನು ಅಂಗೀಕರಿಸಬೇಕು. ಉತ್ಪತ್ತಿರಾಹಿತ್ಯರೂಪಯೋಗಾರ್ಥವು ಆಡಿನಲ್ಲಿ ಸಂಭವಿಸುವುದಿಲ್ಲ. ಪಶುವಿಶೇಷದಲ್ಲಿರು ಅಜಾತ್ವವನ್ನು ತೇಜೋಬನ್ನಲಕ್ಷಣವಾದ ಭೂತ ಪ್ರಕೃತಿಯಲ್ಲಿ ಕಲ್ಪಿಸಿ ರೂಪಕದಿಂದ ಆ ಅರ್ಥದಲ್ಲಿ ಅಜಾ ಶಬ್ದ ಹೇಳಿದೆ. ಸುಖವಾಗಿ ಅರ್ಥ ತಿಳಿಯುವುದಕ್ಕೋಸ್ಕರ ರೂಪಕಲ್ಪನೆ ಮಾಡಿದೆ. ಅದಕ್ಕೆ ಉದಾಹರಣೆ ತೋರಿಸುತ್ತಾನೆ.

'ಅಸೌ'—ಇತಿ. ಒಬ್ಬಬ್ರಾಹ್ಮಣನಲ್ಲಿರುವ ತೇಜಸ್ವಿತಾತಿಶಯವನ್ನು ತಿಳಿಸಲು 'ಈ ಬ್ರಾಹ್ಮಣನು ಸೂರ್ಯ' ನೆಂದು ಲೋಕವಲ್ಲಿಯೂ ಪ್ರಯೋಗಿಸುತ್ತಾರೆ. ತೇಜಸ್ಸಿನ ಆಧಿಕ್ಯವು ಸೂರ್ಯನಲ್ಲಿ ಪ್ರಸಿದ್ಧವಾದುದರಿಂದ ಹಾಗೆ ಆರೋಪವಮಾಡಿದಾಗ ಬ್ರಾಹ್ಮಣನಲ್ಲಿಯೂ ಅದು ಅಧಿಕವಾಗಿ ಜಾಗ್ರತೆಯಾಗಿ ತೋರುತ್ತದೆ. ಪ್ರಕೃತ ಆಡು ಹೇಗೆ ಸಮಾನರೂಪವುಳ್ಳ ಹಲವು ಮರಿಗಳನ್ನು ಹಡೆಯುವುದೋ ಅದರಂತೆ (ಈ ರೂಪಕದಿಂದ) ತೇಜೋಬನ್ನಲಕ್ಷಣವಾದ ಭೂತಪ್ರಕೃತಿಯು ಬಹುಸರೂಪಕಗಳಾದ ವಿಕಾರಜಾತವನ್ನು ಹುಟ್ಟಿಸುತ್ತದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಸೂರ್ಯನು ದೇವಮಧುವೆಂದು ರೂಪಕಮಾಡಿದೆ. ಜೇನಿನಲ್ಲಿ ಮೋಹಹೇತುತ್ವವು ಪ್ರಸಿದ್ಧವಾದುದರಿಂದ ಸೂರ್ಯನಲ್ಲಿ ಅದನ್ನು ಆರೋಪಿಸಿದುದರಿಂದ ದೇವತೆಗಳ ಮೋಹ ಹೇತುತ್ವವು ಸ್ಪಷ್ಟವಾಗಿ ತಿಳಿಯುತ್ತದೆ. ಯಜ್ಞಕರ್ಮದಲ್ಲಿ ಅಗ್ನಿಯಲ್ಲಿ ಸಮರ್ಪಿಸಿದ ಸೋಮಾಜ್ಯಾದಿ ಹವಿಸ್ಸುಗಳು ರಶ್ಮಿಮೂಲಕವಾಗಿ ರಸರೂಪದಿಂದ ಸೂರ್ಯನನ್ನು ಹೊಂದುತ್ತವೆ. ದುಂಬಿಗಳು ಹೂಗಳಿಂದ ರಸವನ್ನು ಹೀರಿ ಒಂದುಕಡೆ ಜೇನನ್ನು ಕೂಡಿಡುವಂತೆ ಮಂತ್ರರೂಪ ದುಂಬಿಗಳು ವೇದೋಕ್ತಕರ್ಮರೂಪಹೂಗಳಿಂದ ಸೋಮಾಜ್ಯಾದಿ ಹವಿಸ್ಸುಗಳಿಂದುಂಟಾದ ಅಮೃತವನ್ನು ಕಿರಣಗಳ ಮೂಲಕ ಸೂರ್ಯಮಂಡಲಕ್ಕೆ ಒಯ್ಯುತ್ತವೆ. ಆ ಅಮೃತವನ್ನು ನೋಡುವುದರಿಂದ ದೇವತೆಗಳಿಗೆ ತೃಪ್ತಿಯುಂಟಾಗುತ್ತದೆ. ಹೀಗೆ ರೂಪಕದಿಂದ ಪ್ರಕೃತಾರ್ಥವೈಶದ್ಯವು ಸ್ಪಷ್ಟವಾಗಿದೆ.

ಯದವಾದಿ ನಿದರ್ಶನಂ ಪೂರ್ವವಾದಿನಾ ಕ್ಷೀರಾದಿಕಮಚೇತನಂ ಚೇತನಾನಧಿಷ್ಠಿತಮೇವ ವತ್ಸವಿವೃದ್ಧ್ಯರ್ಥಂ ಪ್ರವರ್ತತ ಇತಿ । ನೈತದ್ರಮಣೀಯಮ್ । ಬುದ್ಧಿವಿಶೇಷಶಾಲಿನಃ ಪರಮೇಶ್ವರಸ್ಯ ತತ್ರಾಪ್ಯಧಿಷ್ಠಾತೃತ್ವಾಭ್ಯುಪಗಮಾತ್ । ನ ಚ ಪರಮೇಶ್ವರಸ್ಯ ಕರುಣಯಾ ಪ್ರವೃತ್ತ್ಯಂಗೀಕಾರೇ ಪ್ರಾಗುಕ್ತವಿಕಲ್ಪಾವಸರಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೃಷ್ಟೇಃ ಪ್ರಾಕ್ ಪ್ರಾಣಿನಾಂ ದುಃಖ ಸಂಬಂಧಾಸಂಭವೇಽಪಿ ತನ್ನಿದಾನಾದೃಷ್ಟ ಸಂಬಂಧಸಂಭವೇನ ತತ್ ಪ್ರಹಾಣೇಚ್ಛಯಾ ಪ್ರವೃತ್ತ್ಯುಪಪತ್ತೇಃ ॥ ಕಿಂ ಚ ಪುರುಷಾರ್ಥಪ್ರಯುಕ್ತಾ ಪ್ರಧಾನಪ್ರವೃತ್ತಿರಿತ್ಯುಕ್ತಂ ತದ್ವಿವೇಕ್ತವ್ಯಮ್ । ಕಿಂ ಪ್ರಧಾನಂ ಕೇವಲಂ ಭೋಗಾರ್ಥಂ ಪ್ರವರ್ತತೇ ಕಿಂ ವಾ ಕೇವಲ ಮೋಕ್ಷಾರ್ಥ ಮಾಹೋಸ್ವಿದುಭಯಾರ್ಥಮ್ ।

ಅಚೇತನವಾದ ಪ್ರಧಾನದ ಪ್ರವೃತ್ತಿಯಲ್ಲಿ ದನದ ಹಾಲಿನ ದೃಷ್ಟಾಂತ ಹಿಂದೆ ಹೇಳಿದೆ. ಅಚೇತನವಾದರೂ ಹಾಲು ಚೇತನಸಂಬಂಧವಿಲ್ಲದೇ ತಾನಾಗಿ ಕರುವಿನವೃದ್ಧಿ ಗೋಸ್ಕರ ಸುರಿಯುತ್ತದೆ. ಅದರಂತೆ ಪ್ರಧಾನದ ಪ್ರವೃತ್ತಿಯೆಂದರೆ ಅದು ರಮಣೀಯ ವಲ್ಲವೆಂದು ಖಂಡಿಸುತ್ತಾರೆ. ಪ್ರಧಾನದಪ್ರವೃತ್ತಿಯಲ್ಲಿ ಪರಮೇಶ್ವರನ ಅಧಿಷ್ಠಾತೃತ್ವ ವಿದೆಯೆಂದು ಶ್ರುತಿಯೇ ಹೇಳುತ್ತದೆ. ಅವನ ಕರುಣೆಯಿಂದ ಪ್ರಧಾನಪ್ರವೃತ್ತಿಯೆನ್ನುವು ದಾದರೆ ಹಿಂದೆ ಹೇಳಿದ ವಿಕಲ್ಪಗಳೇ ಬರುತ್ತವೆ. ಸೃಷ್ಟಿಯ ಮೊದಲು ಅದು ಇದೆಯೋ ಇತ್ಯಾದಿ ನಾನಾವಿಕಲ್ಪಹೇಳಿ ಯಾವುದೂ ಆಗುವುದಿಲ್ಲವೆಂದು ಅಲ್ಲಿ ನಿರ್ಧರಿಸಿದೆ ಆದರೆ ಅಂತಹವಿಕಲ್ಪಕ್ಕೆ ಅವಕಾಶವಿಲ್ಲವೆಂದು ತೋರಿಸುತ್ತಾನೆ. 'ಸೃಷ್ಟೇಃ—' ಇತಿ. ಸೃಷ್ಟಿಯ ಮೊದಲು ಪ್ರಾಣಿಗಳಿಗೆ ದುಃಖಸಂಬಂಧವಿಲ್ಲದಿದ್ದರೂ ಅದಕ್ಕೆ ಕಾರಣವಾದ ಅದೃಷ್ಟಸಂಬಂಧವಿರುವುದರಿಂದ ಅದನ್ನು ಹೋಗಲಾಡಿಸಬೇಕೆಂಬ ಇಚ್ಛೆಯಿಂದ ಪ್ರವೃತ್ತಿ ಸಂಗತವಾಗುತ್ತದೆ. ಪುರುಷಾರ್ಥಕ್ಕೋಸ್ಕರ ಪ್ರಧಾನಪ್ರವೃತ್ತಿಯೆಂಬಲ್ಲಿಯೂ ವಿಚಾರ ಮಾಡಬೇಕಾಗಿದೆ. ಕೇವಲ ಭೋಗಕ್ಕೋಸ್ಕರ ಅದರ ಪ್ರವೃತ್ತಿಯೋ ? ಅಥವಾ ಕೇವಲ ಮೋಕ್ಷಕ್ಕೋಸ್ಕರವೇ ? ಅಥವಾ ಭೋಗಮೋಕ್ಷಗಳಿಗೋಸ್ಕರವೇ? ಎಂದು ಮೂರು ವಿಕಲ್ಪ ಉಂಟಾಗುತ್ತವೆ. ಯಾವುದೂ ಸಂಗತವಲ್ಲವೆಂದು ಪ್ರತಿಪಾದಿಸುತ್ತಾನೆ.

ನ ತಾವದಾದ್ಯಃ ಕಲ್ಪೋಽವಕಲ್ಪತೇ । ಅನಾಧೇಯಾತಿಶಯಸ್ಯ ಕೂಟಸ್ಥನಿತ್ಯಸ್ಯ ಪುರುಷಸ್ಯ ತಾತ್ತ್ವಿಕಭೋಗಾಸಂಭವಾತ್ । ಅನಿರ್ಮೋಕ್ಷಪ್ರಸಂಗಾಚ್ಚ । ಯೇನ ಹಿ ಪ್ರಯೋಜನೇನ ಪ್ರಧಾನಂಪ್ರವರ್ತಿತಂ ತದನೇನ ವಿಧಾತವ್ಯಮ್। ಭೋಗೇನ ಚೈತತ್ಪ್ರವರ್ತಿತಮಿತಿ ತಮೇವ ವಿದಧ್ಯಾನ್ನ ಮೋಕ್ಷಮಿತಿ । ನಾಪಿ ದ್ವಿತೀಯಃ । ಚಿದ್ಧಾತೋರ್ನಿತ್ಯಶುದ್ಧಬುದ್ಧಮುಕ್ತ ಸ್ವಭಾವತಯಾ ಕರ್ಮಾನುಭವವಾಸನಾ ನಾಮಸಂಭವೇನ ಪ್ರಧಾನಪ್ರವೃತ್ತೇಃ ಪ್ರಾಗಪಿ ಮುಕ್ತತಯಾ ತದರ್ಥಂ ಪ್ರವೃತ್ತ್ಯನುಪಪತ್ತೇಃ । ಶಬ್ದಾದ್ಯುಪಭೋಗಾರ್ಥಮಪ್ರವೃತ್ತತ್ವೇನ ಪ್ರಧಾನಸ್ಯ ತದಜನಕತ್ವಪ್ರಸಂಗಾಚ್ಚ । ನಾಪಿ ತೃತೀಯಃ । ಪ್ರಾಗುಕ್ತದೂಷಣಲಂಘನಾ ಲಂಘಿತತ್ವಾತ್ । ಪ್ರವೃತ್ತಿಸ್ವಭಾವಾಯಾಃ ಪ್ರಕೃತೇಃ ಔದಾಸೀನ್ಯಾ ಯೋಗಾಚ್ಚ ॥

ಪುರುಷನ ಭೋಗಕ್ಕೋಸ್ಕರ ಪ್ರಧಾನಪ್ರವೃತ್ತಿಯೆಂಬ ಮೊದಲನೆಯ ವಿಕಲ್ಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಿಯಲ್ಲ. ಪುರುಷನು ಅನಾಧೇಯಾತಿಶಯನು—ಸುಖಪ್ರಾಪ್ತಿ, ದುಃಖಪರಿಹಾರಾದ್ಯತಿಶಯರಹಿತನೆಂದರ್ಥ. ಇಂತಹ ಪುರುಷನಿಗೆ ವಾಸ್ತವವಾದ ಯಾವ ಭೋಗವೂ ಇರುವುದಿಲ್ಲ ಭೋಗಕ್ಕೋಸ್ಕರಪ್ರವೃತ್ತಿಯೆಂದರೆ ಮೋಕ್ಷವೇ ಇಲ್ಲದೇ ಹೋಗಬೇಕಾಗುತ್ತದೆ. "ಯೇನ—" ಇತಿ. ಯಾವ ಪ್ರಯೋಜನಕ್ಕೋಸ್ಕರ ಪ್ರಧಾನವು ಪ್ರವೃತ್ತವಾಗುವುದೋ ಅದನ್ನು ಅದು ಮಾಡಲೇಬೇಕು. ಭೋಗಕ್ಕೋಸ್ಕರಪ್ರವೃತ್ತಿ ಇರುವುದರಿಂದ ಯಾವಾಗಲೂ ಭೋಗವನ್ನೇ ಉಂಟುಮಾಡಬೇಕಾಗುತ್ತದೆ. ಮೋಕ್ಷಕ್ಕೆ ಪ್ರವೃತ್ತಿ ಇಲ್ಲದಿರುವುದರಿಂದ ಮೋಕ್ಷಕ್ಕೆ ಅವಕಾಶವೇ ಇಲ್ಲದೇ ಹೋಗಬೇಕಾಗುತ್ತದೆ. ಎರಡನೆಯ ವಿಕಲ್ಪವೂ ಸರಿಯಲ್ಲ. ಚಿತ್ಸ್ವರೂಪನಾದ ಆತ್ಮನು ಸದಾ ಶುದ್ಧಬುದ್ಧಮುಕ್ತನಾದುದರಿಂದ ಅವನಲ್ಲಿ ಕರ್ಮಾನುಭವ ವಾಸನೆಯೇ ಇರುವುದಿಲ್ಲ. ಇಂತಹ ಅನಾದಿ ವಾಸನೆಗಳಿಗೆ ಪ್ರಧಾನವು ಆಧಾರವಾಗಿರುತ್ತದೆ. ಪ್ರಧಾನಪ್ರವೃತ್ತಿಯ ಮೊದಲೇ ಅವನು ಮುಕ್ತನಾದುದರಿಂದ ಆ ವಿಷಯದಲ್ಲಿ ಪ್ರಧಾನ ಪ್ರವೃತ್ತಿಯು ವ್ಯರ್ಥವೇ ಆಗುತ್ತದೆ. ಸ್ವಸ್ವರೂಪಾವಸ್ಥಿತಿಯೇ ಮುಕ್ತಿಯಲ್ಲದೆ ಬೇರೆ ರೂಪವಲ್ಲ. ಇವೆರಡು ವಿಕಲ್ಪ ಸಂಗತವಲ್ಲವೆಂದಮೇಲೆ ಮೂರನೇ ವಿಕಲ್ಪವೂ ಕೂಡುವುದಿಲ್ಲ. ಹಿಂದಿನ ದೂಷಣೆಯೇ ಇಲ್ಲಿ ತೋರುತ್ತದೆ. ಅನಾಧೇಯಾತಿಶಯವುಳ್ಳ ಪುರುಷನಿಗೆ ತಾತ್ವಿಕಭೋಗ ಯಾವುದೂ ಇಲ್ಲ. ಪ್ರಧಾನ ಪ್ರವೃತ್ತಿಯ ಮೊದಲೇ ಅವನು ಮುಕ್ತನಾಗಿರುವುದರಿಂದ ಉಭಯಾರ್ಥ ಪ್ರವೃತ್ತಿಯೆಂಬುದು ಸಮಂಜಸವಾಗುವುದಿಲ್ಲ. ಮೋಕ್ಷವು ಸಾಧ್ಯವಲ್ಲ. ಒಂದು ಸಾರಿ ಶಬ್ದಾದ್ಯುಪಲಬ್ಧಿರೂಪ ಭೋಗವು ಸಮಾಪ್ತವಾದುದರಿಂದ ಅದಕ್ಕೋಸ್ಕರ ಪ್ರಧಾನ ಪ್ರವೃತ್ತಿ ಇರುವುದಿಲ್ಲ. ಇದರಿಂದ ಮೋಕ್ಷವು ಅಯತ್ನ ಸಾಧ್ಯವಾಗುತ್ತದೆ. ನಿಃಶೇಷ ಶಬ್ದಾದ್ಯುಪಭೋಗವು ಅನಂತವಾದುದರಿಂದ ಸಮಾಪ್ತಿಯೇ ಕೂಡದಿರುವುದರಿಂದ ಮೋಕ್ಷವಿಲ್ಲದೇ ಹೋಗಬೇಕಾಗುವುದೂ ಒಂದು ದೋಷ ಪ್ರಾಪ್ತವಾಗುತ್ತದೆ.

ನನು ಸತ್ವಪುರುಷಾನ್ಯಥಾಖ್ಯಾತಿಃಪುರುಷಾರ್ಥಃ। ತಸ್ಯಾಂ ಜಾತಾಯಾಂ ಸಾ ನಿವರ್ತತೇ ಕೃತಕಾರ್ಯತ್ವಾದಿತಿ ಚೇತ್—ತದಸಮಂಜಸಮ್। ಅಚೇತನಾಯಾಃ ಪ್ರಕೃತೇರ್ವಿಚಾರ್ಯ ಕಾರ್ಯಕಾರಿತ್ವಾಯೋಗಾತ್। ಯಥೇಯಂ ಕೃತೇಽಪಿ ಶಬ್ದಾದ್ಯುಪಲಂಭೇ ತದರ್ಥಂ ಪುನಃ ಪ್ರವರ್ತತ ಏವಮುತ್ರಾಪಿ ಪುನಃ ಪ್ರವರ್ತೇತ। ಸ್ವಭಾವಸ್ಯಾನಪಾಯಾತ್। ಕಿಂ ಚ ಪ್ರಕೃತಿರ್ವಿವೇಕಖ್ಯಾತಿವಶಾದುಚ್ಛಿದ್ಯತೇ ನವಾ। ಉಚ್ಛೇದೇ ಸರ್ವಸ್ಯ ಸಂಪ್ರತಿ ಸಂಸಾರೋಽಸ್ತಮಿಯಾತ್। ಅನುಚ್ಛೇದೇನಕಸ್ಯಚಿನ್ಮೋಕ್ಷಃ। ನನು ಪ್ರಧಾನಾಭೇದೇಽಪಿ ತತ್ತತ್ಪುರುಷಾವಿವೇಕಖ್ಯಾತಿಲಕ್ಷಣಾವಿದ್ಯಾಸದಸತ್ತ್ವನಿಬಂಧನೌ ಬಂಧಮೋಕ್ಷಾವುಪಪದ್ಯೇಯಾತಾಮಿತಿ ಚೇತ್ — ಹಂತ ತರ್ಹಿಕೃತಂ ಪ್ರಕೃತ್ಯಾ। ಅವಿದ್ಯಾಸದಸದ್ಭಾವಾಭ್ಯಾಮೇವ ತದುಪಪತ್ತೇಃ।

ಸತ್ವವೆಂದರೆ ಬುದ್ಧಿತತ್ತ್ವ. ಇದು ಬೇರೆ ಪುರುಷ ಬೇರೆ ಎಂದು ವಾಸ್ತವವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿಯುವುದೇ ಮೋಕ್ಷ. ಈ ಜ್ಞಾನ ಬಂದ ಮೇಲೆ ಪ್ರಕೃತಿಯು ಕೃತಕೃತ್ಯವಾಗುವುದರಿಂದ ಪುರುಷನಿಂದ ನಿವೃತ್ತವಾಗುತ್ತದೆ ಎಂದರೆ ಇದೂ ಸರಿಯಲ್ಲ. ಪ್ರಕೃತಿಯು ಅಚೇತನ ಜಡವಾದ ವಸ್ತು, ಅದು ವಿಚಾರ ಮಾಡಿ ಕಾರ್ಯ ಮಾಡುವುದು ಹೇಗೆ ? ಕಾರ್ಯರೂಪದಿಂದ ಪರಿಣಾಮ ಹೊಂದುವುದೇ ಅದರ ಸ್ವಭಾವವಾದುದರಿಂದ ಶಬ್ದಾದ್ಯುಪಭೋಗವನ್ನು ಒಂದು ಸಾರಿ ಒದಗಿಸಿಕೊಟ್ಟ ಮೇಲೆ ಪುನಃ ಪುನಃ ಪ್ರವರ್ತಿಸುತ್ತಲೇ ಇರಬೇಕಾಗುತ್ತದೆ. "ಚಲಂ ಗುಣವೃತ್ತಂ" ಎಂದು ಇದನ್ನು ಒಪ್ಪಿರುತ್ತಾರೆ. ತ್ರಿಗುಣಾತ್ಮಕವಾದ ಪ್ರಕೃತಿಯು ಹೀಗೆ ಪ್ರವೃತ್ತಿಸ್ವಭಾವವುಳ್ಳದ್ದಾದರೆ ಮೋಕ್ಷವು ಅನುಪಪನ್ನವಾಗುತ್ತದೆ.

'ಅತ್ರಾಪಿ'—ಇತಿ. ಸತ್ವಪುರುಷಾನ್ಯಥಾಖ್ಯಾತಿ ಬಂದಾಗಲೂ ಅದು ಪ್ರವೃತ್ತಿ ಹೊಂದುತ್ತಲೇ ಇರುವುದರಿಂದ ಮೋಕ್ಷಪ್ರಾಪ್ತಿಯಾಗಲಾರದು ಎಂದು ತಾತ್ಪರ್ಯ. ಪ್ರಧಾನವು ಪ್ರತಿಜೀವ ಭಿನ್ನವಾಗಿಲ್ಲ. ಸರ್ವಜೀವಸಾಧಾರಣವಾಗಿ ಒಂದೇ ಆದುದರಿಂದ ಅದು ವಿವೇಕಖ್ಯಾತಿಯಿಂದ ನಾಶಹೊಂದಿದರೆ ಎಲ್ಲಾ ಪುರುಷರೂ ಮುಕ್ತರಾಗಬೇಕಾಗುತ್ತದೆ. ನಾಶಹೊಂದಲಿಲ್ಲವೆಂದರೆ ಯಾರಿಗೂ ಮೋಕ್ಷವಿಲ್ಲದೇ ಹೋಗಬೇಕಾಗುತ್ತದೆ. 'ನನು—ಇತಿ. ಪ್ರಧಾನ ಒಂದೇ ಆಗಿದ್ದರೂ ತತ್ತತ್ಪುರುಷರ ಅವಿವೇಕಖ್ಯಾತಿರೂಪವಾದ ಅವಿದ್ಯಾಸಂಬಂಧ, ಅಸಂಬಂಧಗಳಿಂದ ಬಂಧ ಮೋಕ್ಷಗಳು ಉಪಪನ್ನವಾಗುತ್ತವೆಯೆಂದರೆ ಆಗ ಪ್ರಕೃತಿಯಿಂದ ಪ್ರಯೋಜನವೇನು ? ಅವಿದ್ಯೆಯಿಂದಲೇ ಅದು ಉಪಪನ್ನವಾಗುವಾಗ ಪ್ರಕೃತಿಯಿಂದ ಆಗಬೇಕಾದುದು ಏನೂ ಇರುವುದಿಲ್ಲವಾದುದರಿಂದ ತತ್ಕೃತ ಬಂಧ ಮೋಕ್ಷಗಳೆಂದು ತಪ್ಪಾಗುತ್ತದೆ.

ನನ್ವವಿದ್ಯಾಪಕ್ಷೇ ಽಪ್ಯೇಷದೋಷಃ ಪ್ರಾದುಃಷ್ಯಾದಿತಿ ಚೇತ್— ತದೇತದ್ಪೃಶ್ಯವಸ್ಥಾನಮಸ್ಥಾನೇ । ನ ಹಿ ವಯಂ ಪ್ರಧಾನವದವಿದ್ಯಾಂ ಸರ್ವೇಷು ಜೀವೇಷ್ವೇಕಾಮಾಚಕ್ಷ್ಮಹೇ ಯೇನ್ನೈವಮುಪಾಲಭ್ಯೇಮಹಿ । ಅಪಿ ತ್ವಿಯಂ ಪ್ರತಿಜೀವಂ ಭಿದ್ಯತೇ। ತೇನ ಯಸ್ಯೈವ ಜೀವಸ್ಯ ವಿದ್ಯೋತ್ಪದ್ಯತೇ ತಸ್ಯೈವಾವಿದ್ಯಾ ಸಮುಚ್ಛಿದ್ಯತೇ ನಾನ್ಯಸ್ಯ । ಭಿನ್ನಾಯತನಯೋಸ್ತಯೋರ್ವಿರೋಧಾಭಾವಾತ್ । ಅತೋ ನ ಸಮಸ್ತಸಂಸಾರೋಚ್ಛೇದ ಪ್ರಸಂಗದೋಷಃ । ತಸ್ಮಾತ್ಪರಿಣಾಮಃ ಪರಿತ್ಯಕ್ತವ್ಯಃ ಸ್ವೀಕರ್ತವ್ಯಶ್ಚ ವಿವರ್ತವಾದಃ । ನನು ಜೀವಜಡಯೋಃ ಸಾರೂಪ್ಯಾಭಾವೇನ ಚಿದ್ವಿವರ್ತತ್ವಂ ಪ್ರಪಂಚಸ್ಯ ನ ಸಂಪರಿಪದ್ಯತ ಇತಿ ಪ್ರಾಗವಾದಿಷ್ಮೇತಿಚೇತ್— ನೈತತ್ಸಾಧು । ನಹಿ ಸಾರೂಪ್ಯನಿಬಂಧನಾಃ ಸರ್ವೇ ವಿಭ್ರಮಾ ಇತಿ ವ್ಯಾಪ್ತಿರಸ್ತಿ । ಅಸರೂಪಾದಪಿ ಕಾಮಾದೇಃ ಕಾಂತಾಲಿಂಗಾನಾದಿಷ್ವಿವ ಸ್ವಪ್ನವಿಭ್ರಮಸ್ಯೋಪಲಂಭಾತ್। ಕಿಂಚ ಕಾದಾಚಿತ್ಕೇ ವಿಭ್ರಮೇ ಸಾರೂಪ್ಯಾಪೇಕ್ಷಾ ನಾನಾದ್ಯವಿದ್ಯಾನಿಬಂಧನೇ ಪ್ರಪಂಚೇ । ತದವೋಚ ದಾಚಾರ್ಯವಾಚಸ್ಪತಿಃ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವರ್ತಸ್ತು ಪ್ರಪಂಚೋಽಯಂ ಬ್ರಹ್ಮಣೋಽಪರಿಣಾಮಿನಃ ।
ಅನಾದಿವಾಸನೋದ್ಭೂತೋ ನ ಸಾರೂಪ್ಯಮಪೇಕ್ಷತೇ ॥ ಇತಿ ॥

ಅವಿದ್ಯಾಪಕ್ಷದಲ್ಲಿ ಈ ದೋಷವಿಲ್ಲವೇ ಎಂದು ಶಂಕಿಸಿ ಸಮಾಧಾನ ತೋರಿಸುತ್ತಾನೆ. 'ತದೇತತ್' — ಇತಿ. ಅವಿದ್ಯಾ ಪ್ರತಿಶರೀರಭಿನ್ನವಾದುದರಿಂದ ಯಾರಿಗೆ ವಿವೇಕಖ್ಯಾತಿ ಬಂದಿದೆಯೋ ಅವರಿಗೇ ಅದು ನಾಶವಾಗುತ್ತದೆ. ಆದುದರಿಂದ ಸಮಸ್ತ ಸಂಸಾರನಾಶಕ್ಕೆ ಕಾರಣವಿರುವುದಿಲ್ಲ. 'ತಸ್ಮಾತ್'—ಇತಿ. ವಸ್ತುವಿಗೆ ಪೂರ್ವಾವಸ್ಥಾತ್ಯಾಗಪೂರ್ವಕವಾಗಿ ಬೇರೊಂದು ಅವಸ್ಥೆಯನ್ನು ಹೊಂದುವುದೇ ಪರಿಣಾಮ. ಮಣ್ಣು ಘಟ ರೂಪವಾಗಿ ಪರಿಣಾಮ ಹೊಂದುತ್ತದೆ. ಪ್ರಧಾನವು ಪರಿಣಾಮ ಹೊಂದುತ್ತದೆಂದರೆ ಹಿಂದೆ ಹೇಳಿದ ದೋಷವೇ ಬರುತ್ತದೆ. ಉಚ್ಛೇದವೆಂದರೆ ಸಕಲ ಸಂಸಾರನಾಶವೂ, ಅನುಚ್ಛೇದವೆಂದರೆ ಮೋಕ್ಷವೇ ಇಲ್ಲದಂತಾಗುವ ದೋಷವು ಸಂಭವಿಸುತ್ತದೆ. ವಿವರ್ತವಾದವನ್ನು ಅಂಗೀಕರಿಸಿದರೆ ಈ ದೋಷಕ್ಕೆ ಅವಕಾಶವಿರುವುದಿಲ್ಲ. ಪೂರ್ವಾವಸ್ಥೆಯನ್ನು ಬಿಡದೆ ವಸ್ತುವು ಅವಸ್ಥಾಂತರ ಹೊಂದಿದಂತೆ ತೋರುವುದೇ ವಿವರ್ತ. ಶುಕ್ತಿಯಲ್ಲಿ ರಜತಭಾನ ವಿವರ್ತವಾಗುತ್ತದೆ. ಇದು ಪ್ರತಿ ಜೀವನಲ್ಲಿಯೂ ತತ್ತತ್ಸಾಧನ ಭೇದದಿಂದ ಭಿನ್ನವಾಗುವುದರಿಂದ ಯಾವ ದೋಷಕ್ಕೂ ಅವಕಾಶವಿರುವುದಿಲ್ಲ. ವಿವರ್ತ ಹೊಂದಲು ಎರಡು ನಿರೂಪಕವಾಗಿರಬೇಕೆಂಬ ನಿಯಮವಿಲ್ಲ.

ಚಿತ್, ಜಡಗಳು ಭಿನ್ನಸ್ವರೂಪಗಳಾಗಿದ್ದರೂ ಚಿದ್ವಿವರ್ತತ್ವವು ಪ್ರಪಂಚಕ್ಕೆ ಸಂಗತವಾಗುತ್ತದೆ. ಇದಕ್ಕೆ ಸ್ವಪ್ನವಿಭ್ರಮವೇ ದೃಷ್ಟಾಂತ. ಕಾಮದಿಂದ ಅಲ್ಲಿ ಕಾಂತಾಲಿಂಗನವಾಗುತ್ತದೆ. ಎರಡೂ ಭಿನ್ನಸ್ವಭಾವದವುಗಳು. ಮನಸ್ಸು ಒಂದು ಕಡೆ ನಿಲ್ಲದಂತೆ ಮಾಡುವ ತೀವ್ರಾಭಿಲಾಷಾರೂಪವಾದ ವೃತ್ತಿವಿಶೇಷವೇ ಕಾಮ. ಇದರಿಂದ ಸ್ವಪ್ನದಲ್ಲಿ ಕಾಂತಲಿಂಗನಭ್ರಮವುಂಟಾಗುತ್ತದೆ. ಜಾಗೃದವಸ್ಥೆಯಲ್ಲಿಯೂ ಕೆಲವು ಸಮಯ ಭಾವನೆಯಿಂದ ಹಾಗಾಗುತ್ತದೆ. ಕಾಮಾದಿಗಳಿಗೆ ರೂಪವೇ ಇಲ್ಲದಿರುವುದರಿಂದ ಅಲ್ಲಿ ಸಾರೂಪ್ಯ ವಿಷಯವೇ ಬರುವುದಿಲ್ಲ. ಸಾರೂಪ್ಯವೆಂದರೆ ಹೇಗೋ ಒಂದು ಸಾಮ್ಯವೆನ್ನುವುದಾದರೆ ಆಗ ಚಿಜ್ಜಡಗಳಿಗೆ ಹೇಗೋ ಸಾಮ್ಯ ಹೇಳಬಹುದು. ಅದೂ ಅಲ್ಲದೆ ತಾತ್ಕಾಲಿಕವಾದ ಭ್ರಾಂತಿಯಲ್ಲಿ ಸಾರೂಪ್ಯಾಪೇಕ್ಷೆ ಇರುವುದಲ್ಲದೆ ಅನಾದ್ಯವಿದ್ಯಾನಿಬಂಧನ ಪ್ರಪಂಚ ವಿವರ್ತದಲ್ಲಿ ಅಪೇಕ್ಷೆ ಇರುವುದಿಲ್ಲ. ಇದನ್ನು ವಾಚಸ್ಪತಿಮಿಶ್ರರೂ ಸೃಷ್ಟಿಪಡಿಸುತ್ತಾರೆ. 'ವಿವರ್ತಃ'—ಇತಿ. ಪರಿಣಾಮಹೊಂದದಿರುವ ಬ್ರಹ್ಮನ ವಿವರ್ತವೇ ಈ ಪ್ರಪಂಚ. ಅನಾದಿವಾಸನೆಯಿಂದ ಇದು ಪ್ರಕಾಶಿತವಾಗಿದೆ ಈ ವಿಷಯದಲ್ಲಿ ಸಾರೂಪ್ಯಾಪೇಕ್ಷೆ ಇರುವುದಿಲ್ಲ. ಇವೆಲ್ಲವೂ ವೇದಾಂತಶಾಸ್ತ್ರಜ್ಞರಿಗೆ ಸುಗಮವಾಗುತ್ತದೆ.

ತಚ್ಚ ವೇದಾಂತಶಾಸ್ತ್ರಂ ಚತುರ್ಲಕ್ಷಣಮ್ ॥ ಭಗವತಾ ಬಾದರಾಯಣೇನ ಪ್ರಣೀತಸ್ಯ ವೇದಾಂತಶಾಸ್ತ್ರಸ್ಯ ಪ್ರತ್ಯಗ್ಬ್ರಹ್ಮೈಕ್ಯಂ ವಿಷಯ ಇತಿ ಶಂಕರಾಚಾರ್ಯಾಃ ಪ್ರತ್ಯಪೀಪದನ್ । ತತ್ರ ಪ್ರಥಮೇ ಸಮನ್ವಯಾಧ್ಯಾಯೇ ಸರ್ವೇಷಾಂ ವೇದಾಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾನಾಂ ಬ್ರಹ್ಮಣಿ ತಾತ್ಪರ್ಯೇಣ ಪರ್ಯವಸಾನಮ್ । ದ್ವಿತೀಯೇಽವಿರೋಧಾಧ್ಯಾಯೇ ಸಾಂಖ್ಯಾದಿತರ್ಕವಿರೋಧನಿರಾಕರಣಮ್ । ತೃತೀಯೇ ಸಾಧನಾಧ್ಯಾಯೇ ಬ್ರಹ್ಮವಿದ್ಯಾಸಾಧನಮ್ । ಚತುರ್ಥೇ ಫಲಾಧ್ಯಾಯೇ ವಿದ್ಯಾಫಲಮ್ । ತತ್ರ ಪ್ರತ್ಯಧ್ಯಾಯಂ ಪಾದಚತುಷ್ಟಯಮ್ । ತತ್ರ ಪ್ರಥಮಸ್ಯಾಧ್ಯಾಯಸ್ಯ ಪ್ರಥಮೇ ಪಾದೇ ಸ್ಪಷ್ಟಬ್ರಹ್ಮಲಿಂಗಂ ವಾಕ್ಯಜಾತಂ ಮೀಮಾಂಸ್ಯತೇ ದ್ವಿತೀಯೇಽಸ್ಪಷ್ಟಬ್ರಹ್ಮಲಿಂಗಮುಪಾಸ್ಯವಿಷಯಮ್ । ತೃತೀಯೇ ತಾದೃಶಂ ಜ್ಞೇಯವಿಷಯಮ್। ಚತುರ್ಥೇ ಅವ್ಯಕ್ತಾಜಾಪದಾದಿ ಸಂದಿಗ್ಧಂ ಪದಜಾತಮಿತಿ । ಅವಿರೋಧಸ್ಯ ದ್ವಿತೀಯಸ್ಯ ಪ್ರಥಮೇ ಸಾಂಖ್ಯಯೋಗಕಣಾದಾದಿ ಸ್ಮೃತಿವಿರೋಧಪರಿಹಾರಃ । ದ್ವಿತೀಯೇ ಸಾಂಖ್ಯಾದಿಮತಾನಾಂ ದುಷ್ಟತ್ವಮ್। ತೃತೀಯೇ ಪಂಚಮಹಾಭೂತಶ್ರುತೀನಾಂ ಜೀವಶ್ರುತೀನಾಂ ಚ ಪರಸ್ಪರ ವಿರೋಧ ಪರಿಹಾರಃ। ಚತುರ್ಥೇ ಲಿಂಗಶರೀರಶ್ರುತೀನಾಂ ವಿರೋಧಪರಿಹಾರಃ ।

ಚತುರ್ಲಕ್ಷಣವೆಂದರೆ ನಾಲ್ಕು ಅಧ್ಯಾಯಗಳಿಂದ ಕೂಡಿರುವುದೆಂದರ್ಥ. ಪ್ರತಿಪಾದ್ಯವಿಷಯಭೇದದಿಂದ ಈ ಅಧ್ಯಾಯಗಳು ಆಯಾಯ ಹೆಸರಿನಿಂದ ಸಮನ್ವಯಾಧ್ಯಾಯ, ಅವಿರೋಧಾಧ್ಯಾಯ, ಸಾಧನಾಧ್ಯಾಯ, ಫಲಾಧ್ಯಾಯಗಳೆಂದು ಪ್ರಸಿದ್ಧವಾಗಿವೆ. ಹೀಗೆ ನಾಲ್ಕು ಅಧ್ಯಾಯಗಳಿಂದ ಕೂಡಿದ ಈ ಶಾರೀರಿಕ ಮೀಮಾಂಸೆಯು "ಅಥಾತೋ ಬ್ರಹ್ಮ ಜಿಜ್ಞಾಸಾ" ಎಂದು ಆರಂಭಿಸಿ 'ಅನಾವೃತ್ತಿಃ ಶಬ್ದಾತ್' ಸೂತ್ರದ ವರೆಗೆ ವ್ಯಾಪ್ತವಾಗಿ, ಜೀವಬ್ರಹ್ಮೈಕತ್ವಸಾಕ್ಷಾತ್ಕಾರಕ್ಕೆ ಕಾರಣವಾಗಿ, ಮನನವೆಂಬ ವಿಚಾರಕ್ಕೆ ಉಪಯೋಗಿಗಳಾದ ನ್ಯಾಯಗಳನ್ನು ತೋರಿಸುತ್ತಾ ಪೂಜ್ಯರಾದ ಬಾದರಾಯಣರಿಂದ ರಚಿತವಾಗಿದೆ. ಪ್ರತ್ಯಕ್ ಅಂದರೆ ಜೀವ. (ಪ್ರತಿ, ಪ್ರತಿಶರೀರಂ ಅಂಚತಿ—ಸ್ಫುರತೀತಿ ಪ್ರತ್ಯಕ್—ಜೀವಃ) ಇಂತಹ ಜೀವನಿಗೆ ಬ್ರಹ್ಮನೊಡನೆ ಐಕ್ಯವನ್ನು ಹೇಳುವುದೇ ವೇದಾಂತಶಾಸ್ತ್ರ ವಿಷಯವಾಗಿದೆ.

'ಪ್ರಥಮೇ'—ಇತಿ. ಸಂಶಯಾಸ್ಪದಾರ್ಥಗಳನ್ನು ಕೊಡುವ ಉಪನಿಷದ್ವಾಕ್ಯಗಳಿಗೆ ಸಾಕ್ಷಾತ್ ಅಥವಾ ಪರಂಪರೆಯಿಂದ ಪ್ರತ್ಯಗಭಿನ್ನವಾದ ಅದ್ವಿತೀಯ ಬ್ರಹ್ಮನಲ್ಲಿಯೇ ತಾತ್ಪರ್ಯವೆಂದು ತೋರಿಸಿಕೊಡುವುದು ಸಮನ್ವಯ. ಇದು ಮೊದಲನೇ ಅಧ್ಯಾಯದಲ್ಲಿ ಹೇಳಿರುವುದರಿಂದ ಅದು ಸಮನ್ವಯಾಧ್ಯಾಯವಾಗುತ್ತದೆ. ಹೀಗೆ ಸಮನ್ವಯ ಪ್ರತಿಪಾದಿತವಾದಮೇಲೆ ಅಲ್ಲಿ ಸಂಭಾವಿತವಾಗುವ ಸ್ಮೃತಿತರ್ಕಾದಿವಿರೋಧವನ್ನಾಶಂಕಿಸಿ ಅದನ್ನು ದ್ವಿತೀಯಾಧ್ಯಾಯದಲ್ಲಿ ಪರಿಹಾರ ಮಾಡುವುದರಿಂದ ಅದಕ್ಕೆ ಅವಿರೋಧಾಧ್ಯಾಯವೆಂದು ಪ್ರಸಿದ್ಧಿ ಬಂದಿದೆ. ಪ್ರತಿಯೊಂದು ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿರುತ್ತವೆ. ಒಂದೊಂದು ಪಾದದಲ್ಲಿಯೂ ಪ್ರತಿಪಾದಿಸುವ ವಿಷಯವನ್ನು ತೋರಿಸುತ್ತಾನೆ. 'ಪ್ರಥಮೇಪಾದೇ' — ಇತಿ. ತಾದೃಶಂ — ಅಸ್ಪಷ್ಟಬ್ರಹ್ಮಲಿಂಗಮ್. ಸಂದಿಗ್ಧಂ—ಸಾಂಖ್ಯಾಭಿಮತವಾದ ಪ್ರಧಾನವನ್ನೂ ಪ್ರತಿಪಾದಿಸುತ್ತದೆಯೇ ಇಲ್ಲವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದು ಸಂದೇಹವಿಷಯವಾದುದು. 'ಮಹತಃ ಪರಮವ್ಯಕ್ತಮ್' (ಕಾ ೧-೩-೧೧) ಎಂಬಲ್ಲಿ ಅವ್ಯಕ್ತಪದವಿರುತ್ತದೆ. 'ಅಜಾಮೇಕಾಂ'—ಎಂಬಲ್ಲಿ ಅಜಾಪದವಿರುತ್ತದೆ. ಇವು ಪ್ರಧಾನಪ್ರತಿಪಾದಕಗಳೇ ? ಅಥವಾ ಅಲ್ಲವೇ ? ಎಂದು ಸಂದೇಹ ಬರುತ್ತದೆ. ದುಷ್ಟತ್ವಂ—ಸಾಂಖ್ಯಪ್ರತಿಪಾದಿತಾರ್ಥವು ತಪ್ಪೆಂದು ತಿಳಿಯುವುದು. ಈ ವಿಚಾರ ಅತ್ಯಾವಶ್ಯಕವಾಗಿರುತ್ತದೆ. ಸ್ವಪಕ್ಷಸ್ಥಾಪನ ಪರಪಕ್ಷನಿರಾಕರಣ ಮಾಡುವುದೇ ವಿಚಾರ. 'ಲಿಂಗಶರೀರ'—ಇತಿ. ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಪ್ರಾಣ ಪಂಚಕ, ಮನಸ್ಸು, ಬುದ್ಧಿ ಹೀಗೆ ಹದಿನೇಳರ ಸಂಘಾತಕ್ಕೆ ಲಿಂಗಶರೀರವೆಂದು ಹೆಸರು.

ತೃತೀಯಸ್ಯ ಪ್ರಥಮೇ ಜೀವಸ್ಯ ಪರಲೋಕಗಮನಾಗಮನವಿಚಾರಪುರಃಸರಂ ವೈರಾಗ್ಯಮ್ । ದ್ವಿತೀಯೇ ತ್ವಂಪದ ತತ್ಪದಾರ್ಥಪರಿಶೋಧನಂ, ತೃತೀಯೇ ಸಗುಣ ವಿದ್ಯಾಸು ಗುಣೋಪಸಂಹಾರಃ । ಚತುರ್ಥೇ ನಿರ್ಗುಣ ಬ್ರಹ್ಮವಿದ್ಯಾಯಾ ಬಹಿರಂಗಾಂತರಂಗ ಶ್ರಮಯಜ್ಞಶಮಾದಿ ಸಾಧನಜಾತಮ್ । ಚತುರ್ಥಸ್ಯ ಪ್ರಥಮೇ ಬ್ರಹ್ಮಸಾಕ್ಷಾತ್ಕಾರೇಣ ಜೀವತಃ ಪಾಪಪುಣ್ಯಕ್ಲೇಶ್ಯೈಧುರ್ಯಲಕ್ಷಣಾ ಮುಕ್ತಿಃ । ದ್ವಿತೀಯೇ ಮರಣೋತ್ಕ್ರಮಣ ಪ್ರಕಾರಃ । ತೃತೀಯೇ ಸಗುಣ ಬ್ರಹ್ಮೋಪಾಸಕಸ್ಯೋತ್ತರಮಾರ್ಗಃ । ಚತುರ್ಥೇ ನಿರ್ಗುಣ ಸಗುಣ ಬ್ರಹ್ಮ ವಿದೋ ವಿದೇಹ ಕೈವಲ್ಯ ಬ್ರಹ್ಮಲೋಕಾವಸ್ಥಾನಾನಿ । ತದಿತ್ಥಂ ಬಹ್ಮವಿಚಾರ ಶಾಸ್ತ್ರಧ್ಯಾಯಃಪದಾರ್ಥಸಂಗ್ರಹಃ ।

ಮೂರನೇ ಅಧ್ಯಾಯದ ಪ್ರಥಮಪಾದದಲ್ಲಿ ಜೀವನ ಪರಲೋಕಗಮನಾಗಮನ ವಿಚಾರಮೂಲಕವಾಗಿ ವೈರಾಗ್ಯನಿರೂಪಣೆ ಇರುತ್ತದೆ. ಗುಣೋಪಸಂಹಾರಃ—ಬೇರೆ ಕಡೆ ಹೇಳಿದ ಉಪಾಸ್ಯಗುಣಗಳಿಗೆ ಬೇರೆ ಕಡೆಸಂಗ್ರಹವಾಗಿ ಹೇಳುವುದು. ಬಹ್ಮ ಚರ್ಯಾದ್ಯಾಶ್ರಮಕರ್ಮಯಜ್ಞಾದಿಗಳು ಬಹಿರಂಗಸಾಧನಗಳು. ಶಮದಮನಿದಿಧ್ಯಾಸ ನಾದಿಗಳು ಅಂತರಂಗಸಾಧನಗಳು. ಮುಕ್ತಿಯೆಂದರೆ ಜೀವನ್ಮುಕ್ತಿ. ನಾಲ್ಕನೇ ಅಧ್ಯಾಯದ ನಾಲ್ಕನೇಪಾದದಲ್ಲಿ ನಿರ್ಗುಣಬ್ರಹ್ಮಜ್ಞಾನಿಗೆ ವಿದೇಹಮುಕ್ತಿಯೂ, ಸಗುಣ ಬ್ರಹ್ಮಜ್ಞಾನಿಗೆ ಬ್ರಹ್ಮಲೋಕಾವಸ್ಥಾನವೂ ಪ್ರತಿಪಾದಿಸಿದೆ. ಹೀಗೆ ಬ್ರಹ್ಮವಿಚಾರಶಾಸ್ತ್ರ ಪ್ರತಿಪಾದ್ಯವಾದ, ಅಧ್ಯಾಯ ಪ್ರತಿಪಾದ್ಯವಾದ, ಪಾದಪ್ರತಿಪಾದ್ಯವಾದ ಅರ್ಥವನ್ನು ಸಂಗ್ರಹದಿಂದ ನಿರೂಪಿಸಿರುತ್ತಾರೆ.

ತತ್ರ ಪ್ರಥಮಮಧಿಕರಣಂ—ಅಥಾತೋ ಬ್ರಹ್ಮಜಿಜ್ಞಾಸಾ (ಬ್ರ-ಸೂ ೧।೧।೧) ಇತಿ ಬ್ರಹ್ಮಮೀಮಾಂಸಾರಂಭೋಪಪಾದನಪರಮ್। ಅಧಿಕರಣಂ ಚ ಪಂಚಾವಯವಂ ಪ್ರಸಿದ್ಧಮ್ । ತೇ ಚ ವಿಷಯಾದಯಃ ಪಂಚಾವಯವಾ ನಿರೂಪ್ಯಂತೇ। ಆತ್ಮಾ ವಾರೇದ್ರಷ್ಟವ್ಯಃ (ಬೃ-೨।೪।೫) ಇತ್ಯೇದ್ವಾಕ್ಯಂ ವಿಷಯಃ । ಬ್ರಹ್ಮಜಿಜ್ಞಾಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತವ್ಯಂ ನವಾ ಇತಿ ಸಂಶಯಃ । ಜಿಜ್ಞಾಸ್ಯತ್ವವ್ಯಾಪಕಯೋಃ ಸಂದೇಹಪ್ರಯೋಜನಯೋಃ ಸಂಭವಾಸಂಭವಾಭ್ಯಾಮ್ ।

ತತ್ರ ಕಸ್ಯೇದಂ ಜಿಜ್ಞಾಸ್ಯತ್ವಮನಗಮ್ಯತೇ । ಅಹಮನುಭವಗಮ್ಯಸ್ಯ ಶ್ರುತಿಗಮ್ಯಸ್ಯ ವಾ। ನಾದ್ಯಃ । ಸರ್ವಜನೀನೇನಾಹಮನುಭವೇನೇದಮಾಸ್ಪದ ದೇಹಾದಿಭ್ಯೋ ವಿವೇಕೇನಾತ್ಮನಃ ಸ್ಪಷ್ಟಂ ಪ್ರತಿಭಾಸಮಾನತ್ವಾತ್ । ನನು ಸ್ಥೂಲೋಽಹಂ ಕೃಶೋಽಹಮಿತ್ಯಾದಿದೇಹಧರ್ಮಸಾಮಾನಾಧಿಕರಣ್ಯಾನುಭವಾದಧ್ಯಸ್ತಾತ್ಮಭಾವ ದೇಹಾಲಂಬನೋಽಯಮಹಂಕಾರ ಇತಿ ಚೇನ್ನ । ಬಾಲ್ಯಾದ್ಯವಸ್ಥಾಸು ಭಿನ್ನಪರಿಮಾಣತಯಾ ಬದರಾಮಲಕಾದಿವತ್ಪರಸ್ಪರಭೇದೇನ ಶರೀರಸ್ಯ ಪ್ರತ್ಯಭಿಜ್ಞಾನಾನುಪಪತ್ತೇಃ ॥

'ಅಥಾತೋ'—ಎಂಬುದು ವೇದಾಂತಶಾಸ್ತ್ರದ ಮೊದಲನೆಯಸೂತ್ರ. ಶಾಸ್ತ್ರದಲ್ಲಿ ಅಧಿಕರಣರಚನೆ ಮುಖ್ಯವಾಗಿದೆ. ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಸಂಗತಿ ಎಂದು ಇದರಲ್ಲಿ ಪಂಚಾವಯವಗಳಿರುತ್ತವೆ. ಇವುಗಳ ಸ್ವರೂಪವು ಹಿಂದೆ ಜೈಮಿನಿ ದರ್ಶನದಲ್ಲಿ ವಿವೃತವಾಗಿದೆ. 'ಆತ್ಮಾ ವಾರೇ'—ಎಂಬ ಬೃಹದಾರಣ್ಯಕದ ವಾಕ್ಯವು ಇಲ್ಲಿ ವಿಷಯ. ಜಿಜ್ಞಾಸ್ಯತ್ವ ಎಲ್ಲಿ ಇದೆಯೋ ಅಲ್ಲಿ ಸಂದೇಹ ಪ್ರಯೋಜನಗಳು ಇದ್ದೇ ಇರುವುದರಿಂದ ಅವು ವ್ಯಾಪಕವಾಗುತ್ತವೆ. ಒಂದು ಅರ್ಥವು ನಿಶ್ಚಿತವಾಗಿದ್ದರೆ ಅಲ್ಲಿ ಪ್ರಯೋಜನವಿದ್ದರೂ ಅದು ಜ್ಞಾತವಾದುದರಿಂದ ಜಿಜ್ಞಾಸ್ಯವಾಗುವುದಿಲ್ಲ. ಎಲ್ಲಿ ಫಲವಿಲ್ಲವೋ ಅಲ್ಲಿ ಸಂದೇಹವಿದ್ದರೂ(ಅರ್ಥಸಂದಿಗ್ಧವಾಗಿದ್ದರೂ) ಜ್ಞಾನ ನಿರರ್ಥಕವಾಗುವುದರಿಂದ ಅಲ್ಲಿಯೂ ಜಿಜ್ಞಾಸ್ಯತ್ವ ಬರುವುದಿಲ್ಲ. ಹೀಗೆ ಸಂದೇಹಪ್ರಯೋಜನವಿರುವಲ್ಲಿ ಮಾತ್ರ ಜಿಜ್ಞಾಸ್ಯತ್ವವಿರುತ್ತದೆ. ಸಂದೇಹಪ್ರಯೋಜನಾಸಂಭವವನ್ನು ತಿಳಿದವನು ಶಂಕಿಸುತ್ತಾನೆ.

'ತತ್ರ'—ಇತಿ. ಅಹಮನುಭವಗಮ್ಯನಾದ ಆತ್ಮನಿಗೆ ಜಿಜ್ಞಾಸ್ಯತ್ವವೇ ಅಥವಾ ಶ್ರುತಿಗಮ್ಯನಾದವನಿಗೇ ? ಎಂದು ವಿಕಲ್ಪ. ಅಹಮನುಭವಗಮ್ಯನಿಗೆಂದರೆ ಆಗ ಜಿಜ್ಞಾಸ್ಯತ್ವ ಸಂಭವಿಸಲಾರದು. ನಾನು ಎಂಬ ಅನುಭವವು ಪ್ರಾಣಿಮಾತ್ರಕ್ಕೆ ಪ್ರಸಿದ್ಧವಾದುದರಿಂದ ನಿಶ್ಚಿತವಾಗಿರುತ್ತದೆ. ನಾನು ಎಂಬ ಅನುಭವಕ್ಕೆ ವಿಷಯನಾದ ಜೀವಾತ್ಮನು ದೇಹಾದಿಗಳಿಗಿಂತ ಬೇರೆಯಾದವನೆಂದು ಸ್ಪಷ್ಟವಾಗಿ ತಿಳಿದಿರುವುದರಿಂದ ನಿಶ್ಚಿತವಸ್ತುವಿನಲ್ಲಿ ಜಿಜ್ಞಾಸಾ ಹುಟ್ಟದಿರುವುದರಿಂದ ಅಲ್ಲಿ ಜಿಜ್ಞಾಸಾ ಬರುವುದಿಲ್ಲ. 'ನನು'—ಇತಿ ಸ್ಥೂಲತ್ವ, ಕೃಶತ್ವಾದಿಗಳು ದೇಹಧರ್ಮಗಳು. ಅವು ಆತ್ಮನಧರ್ಮವಲ್ಲ. ಸ್ಥೂಲತ್ವಾದಿವಿಶಿಷ್ಟದೇಹವೇ ಅಹಂಪ್ರತ್ಯಯವಿಷಯವಾಗಿರುತ್ತದೆ. ಆತ್ಮಸಂಬಂಧದಿಂದ ಜಡದೇಹದಲ್ಲಿಯೂ ಆತ್ಮಾತ್ವಾರೋಪದಿಂದ 'ಅಹಂ' ಎಂಬ ಅನುಭವವು ಪ್ರಸಿದ್ಧವಾಗಿದೆ. ದೇಹಾತಿರಿಕ್ತ ಆತ್ಮನು ನಾನಲ್ಲ ಎಂಬ ಅನುಭವವೂ ಇರುತ್ತದೆ. ಆದುದರಿಂದ ಆತ್ಮಜಿಜ್ಞಾಸಾ ಸಂಭವಿಸುತ್ತದೆ ಎಂದರೆ ಅದನ್ನು ಖಂಡಿಸುತ್ತಾನೆ. 'ಬಾಲ್ಯಾದಿ'—ಇತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾನು ಬಾಲ್ಯದಲ್ಲಿ ಹೀಗೆ ಆಟವಾಡಿದೆ, ನಾನು ತಾರುಣ್ಯದಲ್ಲಿ ವಿಷಯಸುಖವನ್ನು ಹೊಂದಿದೆನು. ಎಂದು ಹೀಗೆ ಪ್ರತ್ಯಭಿಜ್ಞಾ ಬರುತ್ತದೆ. ದೇಹವೇ ಅಹಂಪ್ರತ್ಯಯ ವಿಷಯವಾಗುವುದಾದರೆ ಈ ಪ್ರತ್ಯಭಿಜ್ಞಾ ಸಂಗತವಾಗುವುದಿಲ್ಲ. ಬಾಲ್ಯಾದ್ಯವಸ್ಥೆಗಳಲ್ಲಿ ಪರಿಣಾಮಭೇದದಿಂದ ದೇಹಭೇದವುಂಟಾಗುವುದರಿಂದ ಅದೇ ನಾನು ಎಂಬ ಪ್ರತ್ಯಭಿಜ್ಞಾ ಕೂಡುವುದಿಲ್ಲ. ಇದರಿಂದ ದೇಹಾತಿರಿಕ್ತನಾದ ಜೀವಾತ್ಮನೇ ಅಹಂ ಪ್ರತ್ಯಯ ವಿಷಯನಾಗುತ್ತಾನೆಂದು ಸಿದ್ಧವಾಗುತ್ತದೆ. 'ಸ್ಥೂಲೋಽಹಂ' ಎಂಬ ಪ್ರತೀತಿಯು ಲಾಕ್ಷಣಿಕವೆಂದು ಮುಂದೆ ವಿವರಿಸುತ್ತಾನೆ.

ಅಥೋಚ್ಯೇತ ಯಥಾ ಪೀಲುಪಾಕಪಕ್ಷೇ ಪಿಠರಪಾಕಪಕ್ಷೇ ವಾ ಕಾಲಭೇದೇನೈಕಸ್ಮಿನ್ ವಸ್ತುನಿ ಪಾಕಜಭೇದೋ ಯುಜ್ಯತೇ ತಥೈಕಸ್ಮಿನ್ ಶರೀರಾಭಿಧೇ ವಸ್ತುನಿ ಕಾಲಭೇದೇನ ಪರಿಮಾಣಭೇದಃ। ಅತ ಏವ ಲೌಕಿಕಾಃ ಶರೀರಮಾತ್ಮನಃ ಸಕಾಶಾದಭಿನ್ನಂ ಪ್ರತಿಪದ್ಯಮಾನಾಃ ಪ್ರತ್ಯಭಿಜಾನತೇ ಚೇತಿ। ನ ತದ್ಭದ್ರಮ್। ಮಣಿಮಂತ್ರೌಷಧಾದ್ಯುಪಾಯಭೇದೇನ ಭೂಮಿಕಾಧಾನವನ್ನಾನಾವಿಧಾನ್ ದೇಹಾನ್ ಪ್ರತಿಪದ್ಯಮಾನಸ್ಯ ಅಹಮಾಲಂಬನಸ್ಯ ಭಿನ್ನಸ್ಯಾತ್ಮನಃ ಶರೀರಾದ್ಭೇದೇನ ಭಾಸಮಾನತ್ವಾತ್। ಅತ ಏವ ಚಕ್ಷುರಾದೀನಾಮಪ್ಯಹಮಾಲಂಬನತ್ವಮಶಕ್ಯಶಂಕಮ್। 'ನಾನ್ಯದೃಷ್ಟಂ ಸ್ಮರತ್ಯನ್ಯಃ' (ನ್ಯಾ-ಸೂ-೩।೧೫) ಇತಿ ನ್ಯಾಯೇನ ಚಕ್ಷುರಾದೌ ನಷ್ಟೇಽಪಿ ರೂಪಾದಿಪ್ರತಿಸಂಧಾನಾನುಪಪತ್ತೇಃ। ನಾಪ್ಯಂತಃಕರಣಸ್ಯಾಹಮಾಲಂಬನತ್ವಮಾಸ್ಥೇಯಮ್। ಅಯಮೇವ ಭೇದಃ ಭೇದಹೇತುರ್ವಾ ಯದ್ವಿರುದ್ಧ ಧರ್ಮಾಧ್ಯಾಸಃ ಕಾರಣಭೇದಶ್ಚೇತಿ ನ್ಯಾಯೇನ ಕರ್ತೃಕರಣಭೂತಯೋರಾತ್ಮಾಂತಃಕರಣಯೋಃ ಸ್ತ್ರಕ್ಷ್ವಾಸಿವತ್ಸಂಭೇದಾಽಸಂಭವಾತ್।

ಪೀಲುಪಾಕ, ಪಿಠರಪಾಕವಿಷಯ ಹಿಂದೆ ಔಲೂಕ್ಯದರ್ಶನದಲ್ಲಿ ವಿವರಿಸಿದೆ. ಪಾಕಜಭೇದವಿದ್ದರೂ ವಸ್ತು ಒಂದೇ ಆದಂತೆ ಶರೀರದಲ್ಲಿ ಪರಿಮಾಣಭೇದವಿದ್ದರೂ ಒಂದೇಶರೀರವಾದುದರಿಂದ ಶರೀರವೇ ಅಹಂಪ್ರತ್ಯಯವಿಷಯವಾಗುತ್ತದೆಂದುತಾತ್ಪರ್ಯ. ಲೌಕಿಕವೆಂದರೆ ಇಲ್ಲಿ ಚಾರ್ವಾಕರು. ಅವರು ಶರೀರವೇ ಆತ್ಮನೆಂದು ನಂಬಿರುವುದರಿಂದ ಪ್ರತ್ಯಭಿಜ್ಞೆಯುಂಟಾಗಲು ತೊಂದರೆ ಇಲ್ಲ. 'ನತತ್'—ಇತಿ. ಖಂಡಿಸುತ್ತಾನೆ ಚೈತ್ರನು ಒಬ್ಬನೇ ಆದರೂ ಮಣಿಮಂತ್ರಾದಿ ಸಹಾಯದಿಂದ ಕ್ಷಣಕಾಲದಲ್ಲಿ ಹುಲಿಯೂ, ಕ್ಷಣಕಾಲ ಆನೆಯೂ, ಕ್ಷಣಕಾಲ ಹೀಗೆ ಭಿನ್ನ ಭಿನ್ನ ರೂಪಹೊಂದಿ ಕೊನೆಗೆ ಪುನಃ ಮನುಷ್ಯನಾಗುತ್ತಾನೆ. ಅಲ್ಲಿ ಒಬ್ಬ ಜೀವಾತ್ಮನೇ ನಟನಂತೆ ಅನೇಕ ಭೂಮಿಕೆಗಳನ್ನು (ವೇಷವನ್ನು) ಹೊಂದುತ್ತಾನೆ. ಇದರಿಂದ ದೇಹಭೇದ ಸ್ಪಷ್ಟವಾಗುವುದರಿಂದ ಅದಕ್ಕಿಂತ ಬೇರೆಯಾದ ಜೀವಾತ್ಮನೇ ಅಹಂಪ್ರತ್ಯಯ ವಿಷಯನೆಂದು ಸಿದ್ಧವಾಗುತ್ತದೆ. ಶರೀರದಿಂದ ಬೇರೆಯಾದಂತೆ ಆತ್ಮನು ಇಂದ್ರಿಯಗಳಿಂದಲೂ ಬೇರೆಯಾಗಿರುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂದ್ರಿಯವೇ ಆತ್ಮನೆನ್ನುವುದಾದರೆ ಇಂದ್ರಿಯ ನಷ್ಟವಾದಾಗ ರೂಪಸ್ಮರಣೆಬಾರದೇ ಹೋಗಬೇಕಾಗುತ್ತದೆ. ಒಬ್ಬನು ನೋಡಿದ್ದನ್ನು ಇನ್ನೊಬ್ಬನು ಎಂದೂ ಸ್ಮರಿಸುವುದಿಲ್ಲ. ಹೀಗೆಯೇ ಅಹಂಪ್ರತ್ಯಯಕ್ಕೆ ಅಂತಃಕರಣವೂ ಆಶ್ರಯವಾಗುವುದಿಲ್ಲ.

ಯತ್ ಎಂಬುದು ಅವ್ಯಯ. 'ಯಃವಿರುದ್ಧಧರ್ಮಾಧ್ಯಾಸಃ ಅಯಮೇವ ಭೇದಃ' 'ಯಃ ಕಾರಣಭೇದಃ ಅಯಮೇವಭೇದಹೇತುಃ' ಎಂದು ನ್ಯಾಯಾರ್ಥ. ಜ್ಞಾನದ್ವೈಧರ್ಮ್ಯವೇ ಅನ್ಯೋನ್ಯಾಭಾವವೆಂಬ ಮತವನ್ನಾಶ್ರಯಿಸಿ ವಿರುದ್ಧಧರ್ಮಾಧ್ಯಾಸವೇ ಭೇದವೆಂದು ಹೇಳಿದೆ. ಆತ್ಮನು ಕರ್ತೃ. ಅಂತಃಕರಣ ಕರಣ. ಹೀಗೆ ಇವೆರಡು ವಿರುದ್ಧಧರ್ಮಾಕ್ರಾಂತಗಳಾದುದರಿಂದ ಇವುಗಳಿಗೆ ಭೇದವಿರುತ್ತದೆ. ತಕ್ಷಾ—ಬಡಗಿ, ವಾಸಿಃ—ಉಳಿಮುಂತಾದವುಗಳು. ಇವುಗಳಿಗೆ ಭೇದವಿರುವಂತೆ ಭೇದವಿರುವುದರಿಂದ ಸಂಭೇದ ಅಂದರೆ ತಾದಾತ್ಮ್ಯಕೂಡುವುದಿಲ್ಲವೆಂದರ್ಥ.

ಯದ್ಯಭೇದ ಏವ ನಾದ್ರಿಯತೇ ತರ್ಹಿ ಸ್ಥೂಲೋಽಹಂ ಕೃಶೋಽಹಂ ಕೃಷ್ಣೋಽಹಮಿತ್ಯಾದಿ ಸಂಖ್ಯಾನಮುತ್ಪನ್ನಸಂಕಥಂ ಸ್ಯಾತ್ । ನ ಸ್ಯಾತ್ । ಏವಂ ಲೋಕೇ ಶಾಸ್ತ್ರೇ ಚೋಭಯಥಾ ಶಬ್ದಪ್ರಯೋಗದರ್ಶನೇನ ಮುಖ್ಯಾರ್ಥತ್ವಾನುಪಪತ್ತೌ ಮಂಚಾಃ ಕ್ರೋಶಂತೀತ್ಯಾದಿವದೌಪಚಾರಿಕತ್ವೇನೋಪಪತ್ತೇಃ । ನ ದ್ವಿತೀಯಃ। ಅಹಮನುಭವಗಮ್ಯಸ್ಯೈವ ಶ್ರುತಿಗಮ್ಯತ್ವಾತ್ । ಸತ್ಯಂ ಜ್ಞಾನಮನಂತಂ ಬ್ರಹ್ಮ (ತೈ ೨।೧।೧) ಇತ್ಯಾದಿ ಶ್ರುತಿಭ್ಯೋ ಹಿ ಬ್ರಹ್ಮಾವಗಮ್ಯತೇ । ಬ್ರಹ್ಮಭಾವಶ್ಚಾಹಮಾತ್ಮಾ ಬ್ರಹ್ಮ (ಬೃ ೨।೫।೧೯) ತತ್ತ್ವಮಸಿ (ಛಾಂ ೬।೮।೭) ಇತ್ಯಾದಿಷು ಶ್ರುತಿಷು ಅಹಂಪ್ರತ್ಯಯಗಮ್ಯಸ್ಯೈವ ಭೋಧ್ಯತೇ । ತಥಾ ಚೇದಮನುಮಾನಮಸೂಚಿ । ವಿಮತಂ— ಅಜಿಜ್ಞಾಸ್ಯಂ—ಅಸಂದಿಗ್ಧತ್ವಾತ್ । ಕರತಲಾಮಲಕವತ್ ॥

ಆತ್ಮಶರೀರಗಳಿಗೆ ಅಭೇದವನ್ನು ಅಂಗೀಕರಿಸದಿದ್ದರೆ 'ಸ್ಥೂಲೋಹಂ' ಇತ್ಯಾದಿ ಸಂಖ್ಯಾನವು ಅಂದರೆ ಸಮ್ಯಗ್ ಜ್ಞಾನವು ಲುಪ್ತವಾಗಬೇಕಾಗುತ್ತದೆ. ಉತ್ಪನ್ನಸಂಕಥಂ-- ನಾಶವಾದ ಸಂಲಾಪವುಳ್ಳದ್ದು. ಇಂತಹ ವ್ಯವಹಾರ ಇಲ್ಲದೇ ಹೋಗಬೇಕಾಗುತ್ತದೆಯೆಂದರ್ಥ. 'ಏವಂ—' ಇತಿ. ಲೋಕಶಾಸ್ತ್ರಗಳಲ್ಲಿ ಉಭಯಥಾ ಅಂದರೆ ಮುಖ್ಯವೃತ್ತಿಯಿಂದಲೂ ಗೌಣವೃತ್ತಿಯಿಂದಲೂ ಈ ರೀತಿಯಾದ ಪ್ರಯೋಗಗಳು ಪ್ರಸಿದ್ಧವಾಗಿರುತ್ತವೆ. "ಮಂಚಾಃ ಕ್ರೋಶಂತಿ" ಎಂಬಲ್ಲಿ ಕ್ರೋಶನರೂಪವಾದ ಚೇತನಧರ್ಮವು ಅಚೇತನಗಳಾದ ಮಂಚಗಳಲ್ಲಿ ಬಾರದಿರುವುದರಿಂದ ಮಂಚಪದಕ್ಕೆ ಲಕ್ಷಣಾವೃತ್ತಿಯಿಂದ ಮಂಚದಲ್ಲಿರುವ ಪುರುಷರು ಎಂದರ್ಥವಾಗುತ್ತದೆ. ಗೌಣೀ ಅಂದರೆ ಲಕ್ಷಣಾವೃತ್ತಿ. ಪ್ರಕೃತಜೀವಾತ್ಮನಲ್ಲಿ ಸ್ಥೌಲ್ಯಾದಿಧರ್ಮಗಳು ಅನುಪಪನ್ನಗಳಾದುದರಿಂದ ಸ್ಥೂಲಾದಿಶಬ್ದಗಳು ಸ್ಥೂಲತ್ವಾದಿಧರ್ಮವಿಶಿಷ್ಟಶರೀರವಿಶಿಷ್ಟವಾದ ಅರ್ಥವನ್ನು ಲಕ್ಷಣೆಯಿಂದ ತಿಳಿಸುವುದರಿಂದ ಹಿಂದಿನ ವ್ಯವಹಾರವು ಎಂದೂ ಅನುಪಪನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುವುದಿಲ್ಲ. ಎರಡನೆಯಪಕ್ಷ ಅಂದರೆ ಶ್ರುತಿಗಮ್ಯನಾದವನು ಜಿಜ್ಞಾಸ್ಯನು ಎಂಬುದೂ ಸಂಗತವಾಗುವುದಿಲ್ಲ. ಅಹಮನುಭವಗಮ್ಯನೇ ಶ್ರುತಿಗಮ್ಯನಲ್ಲದೆ ಬೇರೆ ಯಾವನನಲ್ಲ. ಇದಕ್ಕೆ ಪ್ರಮಾಣಗಳನ್ನು ತೋರಿಸುತ್ತಾನೆ.

"ಅಹಂ—" ಇತಿ. ಅಹಂಪ್ರತ್ಯಯಗಮ್ಯನು ಸಾಂಸಾರಿಕಸುಖದುಃಖಗಳನ್ನು ಹೊಂದುವ ಜೀವನು. ಅವನೇ ಬ್ರಹ್ಮನು ಎಂದು ಹೇಳುವುದಾದರೆ 'ನಿಷ್ಕಲಂ ನಿರ್ಗುಣಂ ಶಾಂತಂ' "ಅಪ್ರಾಣೋ ಹ್ಯಮನಾಃ." ಇತ್ಯಾದಿ ಶ್ರುತಿವಿರೋಧ ಬರುವುದಿಲ್ಲವೇ ಅಂದರೆ "ಯಜಮಾನಃ ಪ್ರಸ್ತರಃ" (ತೈ-ಬ್ರಾ ೨।೨।೯) ಇತ್ಯಾದಿ ಶ್ರುತಿಗಳಂತೆ ಅವು ಅರ್ಥವಾದ ವೆಂದು ಅಂಗೀಕರಿಸುವುದರಿಂದ (ಅವು ಜೀವಪ್ರಶಂಸಾವಾಚಕಗಳೆಂದು) ಯಾವ ದೋಷವೂ ಬರುವುದಿಲ್ಲ ಹೀಗೆ ಸಂದೇಹವೇ ಬಾರದಿರುವುದರಿಂದ ಜಿಜ್ಞಾಸ್ಯತ್ವವೂ ಅದಕ್ಕೆ ಸಂಭವಿಸುವುದಿಲ್ಲವೆಂದು ಫಲಿತವಾದ ಅನುಮಾನ ತೋರಿಸುತ್ತಾನೆ. 'ವಿಮತಂ—' ಇತಿ. ಕೈಯಲ್ಲಿರುವ ನೆಲ್ಲಿಕಾಯಿಯು ಹೇಗೆ ನಿಶ್ಚಿತವೋ ಅದರಂತೆ ಸರ್ವಾನುಭವಗೋಚರನಾಗಿ ನಿಶ್ಚಿತನಾಗುವುದರಿಂದ ಸಂದೇಹವೇ ಬರುವುದಿಲ್ಲವೆಂದರ್ಥ.

ತಥಾ ಫಲಂ ನ ಫಲಭಾವಮೀಕ್ಷತೇ । ಪುರುಷೈರರ್ಥ್ಯತ ಇತಿ ವ್ಯುತ್ಪತ್ತ್ಯಾನಿಃಶೇಷ ದುಃಖೋಪಶಮುಲಕ್ಷಿತಂ ಪರಮಾನಂದೈಕರಸಂ ಚ ಪುರುಷಾರ್ಥಶಬ್ದಸ್ಯಾರ್ಥಃ ಸಕಲಪುರುಷಧೌರೇಯೈಃ ಪ್ರೇಪ್ಸ್ಯತೇ ನೈತತ್ಸಾಂಸಾರಿಕಂ ಸುಖಜಾತಮ್ । ತಸ್ಯೈಹಿಕಸ್ಯ ಪಾರಲೌಕಿಕಸ್ಯ ಚ ಸಾತಿಶಯತಯಾ ಚ ಸದೃಕ್ಷತಯಾ ಚ ಪ್ರೇಕ್ಷಾವದ್ಭಿರರ್ಥ್ಯಮಾನತ್ವಾನುಪಪತ್ತೇಃ । ಯತ್ತತ್ಪರಿಪಂಥಿ ದುಃಖಜಾತಂ ತಜ್ಜಿಹಾಸ್ಯತೇ । ತಚ್ಚಾವಿದ್ಯಾಪರಪರ್ಯಾಯಸಂಸಾರ ಏವ । ಕರ್ತೃತ್ವಾದಿ ಸಕಲಾನರ್ಥಕರತ್ವಾದವಿದ್ಯಾಯಾಃ । ಸಮಿತ್ಯೇಕೀಕರಣೇ ವರ್ತತೇ । ಸಂಭೇದಾದೌತಥಾ ಜೋಪಲಂಭಾತ್ । ತಥಾ ಚಾತ್ಮಾನಂ ದೇಹೇನೈಕೀಕೃತ್ಯಸ್ವರ್ಗ ನರಕಮಾರ್ಗಯೋಃ ಸರತಿ ಯೇನ ಪುರುಷಃ ಸ ಸಂಸಾರೋಽವಿದ್ಯಾ ಶಬ್ದಾರ್ಥಃ । ತನ್ನಿವೃತ್ತಿಃ ಫಲಂ ಫಲವತಾಮಭಿಮತಮ್ । ತಥಾ ಕಥಿತಮ್ ಅವಿದ್ಯಾಸ್ತಮಯೋ ಮೋಕ್ಷಃ ಸಾ ಚ ಬಂಧ ಉದಾಹೃತಃ ॥ ಇತಿ ॥ ತಚ್ಚ ಕಾಶಕುಶಾವಲಂಬನಕಲ್ಪಮ್ । ಅತ್ಮಯಾಥಾತ್ಮ್ಯಾನುಭವೇನ ಸಹ ವರ್ತಮಾನಸ್ಯ ಸಂಸಾರಸ್ಯ ರೂಪರಸವದ್ವಿರೋಧಾಭಾವೇನ ನಿವರ್ತ್ಯನಿವರ್ತಕ ಭಾವಾಭಾವಾತ್ ॥

ಸಂದೇಹ ಕೂಡುವುದಿಲ್ಲವೆಂದು ತೋರಿಸಿ ಈಗ ಪ್ರಯೋಜನವೂ ಇಲ್ಲವೆಂದು ತೋರಿಸುತ್ತಾನೆ. 'ತಥಾ—' ಇತಿ. ಫಲವೆಂದು ಯಾವುದನ್ನು ಹೇಳುತ್ತಾರೋ ಅಲ್ಲಿ ಫಲತ್ವವೇ ಇಲ್ಲವೆಂದು ಸಿದ್ಧಾಂತಿಗಳು ಹೇಳುವ ಫಲವನ್ನು ಮೊದಲು ಅನುವಾದ ಮಾಡುತ್ತಾನೆ. 'ಪುರುಷೈಃ—' ಇತಿ. ಸಕಲಪುರುಷರಲ್ಲಿ ಶ್ರೇಷ್ಠರಾದ ವಿದ್ವಾಂಸರು ನಿರತಿಶಯ, ನಿರುಪಮವಾದ ಪುರುಷಾರ್ಥವನ್ನು ಬಯಸುತ್ತಾರೆ. ಐಹಿಕವಾದ, ಪಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೌಕಿಕವಾದ ಎರಡೂ ಸಾಂಸಾರಿಕಸುಖಗಳು ಎಂದೂ ಪುರುಷಾರ್ಥವೆಂದು ಪರಿಗಣಿತವಾಗುವುದಿಲ್ಲ. ನಾನಾವಿಧವಾದ ಸಾಂಸಾರಿಕಸುಖಗಳು ತರತಮಭಾವದಿಂದ ಅನುಭವಿಸಲ್ಪಡುತ್ತವೆ. ಸರ್ವಶ್ರೇಷ್ಠತೆ ಅಲ್ಲಿ ದುರ್ಲಭವಾಗಿದೆ. ರಾಜ್ಯಸುಖವು ಸ್ವರ್ಗಸುಖಕ್ಕಿಂತ ಕಡಿಮೆಯಾಗಿದೆ. ಈ ದೃಷ್ಟಾಂತದಿಂದ ಸ್ವರ್ಗಸುಖವೂ ಇನ್ನೊಂದರಿಂದ ಅಪಕೃಷ್ಟವೆಂದು ತಿಳಿಯುತ್ತದೆ. ಸ್ವಲ್ಪವೈಲಕ್ಷಣ್ಯದಿಂದ ಐಹಿಕಸುಖಸಮಾನವೇ ಆಗಿರುತ್ತದೆ. ಹೀಗಿರುವುದರಿಂದ ಸ್ವರ್ಗಸುಖವೂ ಪುರುಷಾರ್ಥವಾಗಲಾರದು. ಯಾವುದು ನಿರತಿಶಯವಾಗಿದೆಯೋ ಸರ್ವವಿಲಕ್ಷಣವಾದುದರಿಂದ ಅಸದೃಶವಾಗಿದೆಯೋ ಅದನ್ನೇ ಪುರುಷಾರ್ಥವೆಂದು ವಿದ್ವಾಂಸರು ಹೇಳುತ್ತಾರೆ. ಲೇಶದುಃಖಸಂಬಂಧವೂ ಅಲ್ಲಿ ಇರಬಾರದು. ಪುರುಷಾರ್ಥವಿರೋಧಿಯಾದ ದುಃಖಜಾತವನ್ನು ದೂರಮಾಡಿಕೊಳ್ಳಬೇಕು. ದುಃಖಮೂಲವೂ ಕೂಡಾ ದುಃಖವೇ ಆದುದರಿಂದಮೊದಲು ಅದನ್ನು ತ್ಯಜಿಸಬೇಕಾಗಿದೆ. ಅವಿದ್ಯಾಪದವಾಚ್ಯವಾದ ಮೂಲಜ್ಞಾನವೇ ದುಃಖಮೂಲವಾಗಿರುತ್ತದೆ.

ಈ ಅವಿದ್ಯೆಯೇ ನಮಗೆ ಸರ್ವಾನರ್ಥವನ್ನು ತಂದೊಡ್ಡುತ್ತಿದೆ. ಅವಿದ್ಯಾಶಬ್ದಾರ್ಥವೇ ಈ ಸಂಸಾರ. "ಸಂಸರತಿ ಪುರುಷೋ ಯೇನ ಸ ಸಂಸಾರಃ." ಕರಣಾರ್ಥದಲ್ಲಿ ಸೃಧಾತುವಿಗೆ ಘಞ್ ಬಂದಿದೆ. ಸಂಭೇದ, ಸಂಗಮಾದಿಶಬ್ದಗಳಲ್ಲಿರುವಂತೆ ಸಂಸಾರಶಬ್ದದಲ್ಲಿಯೂ ಸಮ್ ಉಪಸರ್ಗಕ್ಕೆ ಏಕೀಕರಣವೆಂದರ್ಥ. ಆತ್ಮನನ್ನು ದೇಹದೊಡನೆ ಏಕೀಕರಿಸಿ ಸ್ವರ್ಗನರಕಮಾರ್ಗಗಳಲ್ಲಿ ತಿರುಗುವಂತೆ ಮಾಡುವುದೇ ಸಂಸಾರ. ಇದರಿಂದ ಅವಿದ್ಯಾಽಜ್ಞಾನಸಂಸಾರಾದಿಶಬ್ದವಾಚ್ಯ ದುಃಖತ್ಯಾಗವೇ ಬ್ರಹ್ಮಜಿಜ್ಞಾಸಾ ಪ್ರಯೋಜನವೆಂದು ಸಿದ್ಧವಾಗುತ್ತದೆ. ಅವಿದ್ಯಾನಾಶವೇ ಮೋಕ್ಷವೆಂದೂ ಅದರ ಸಂಬಂಧವೇ ಬಂಧವೆಂದೂ ಹೇಳಿರುತ್ತಾರೆ. ಈ ಪ್ರಯೋಜನವು ಸಂಭವಿಸುವುದಿಲ್ಲವೆಂದು ತೋರಿಸುತ್ತಾನೆ. 'ತಚ್ಚ—' ಇತಿ. ನೀರಿನಲ್ಲಿ ಮುಳುಗುವವನಿಗೆ ದುರ್ಬಲವಾದ ಹುಲ್ಲು ಹೇಗೆ ಅವಲಂಬನವಾಗುವುದಿಲ್ಲವೋ ಹಾಗೆ ಬ್ರಹ್ಮಜಿಜ್ಞಾಸೆಗೆ ಸಂಸಾರನಿವೃತ್ತಿರೂಪವಾದ ಪ್ರಯೋಜನವನ್ನು ತೋರಿಸುವುದು ವ್ಯರ್ಥವೆಂದು ತಾತ್ಪರ್ಯ. 'ಆತ್ಮ—' ಇತಿ. ಸಂಸಾರದಲ್ಲಿ ಸಂಚರಿಸುವ ಪ್ರಾಣಿಗೆ ಆಂತರಸುಖಾದಿಜ್ಞಾನವು ಹೇಗೋ ಹಾಗೆ ಆತ್ಮಾನುಭವವು ಇರುವುದೂ ವಿರೋಧಿಯಾಗದಿರುವುದರಿಂದ ಅದು ಸಂಸಾರನಿವರ್ತಕವಾಗಲಾರದು. ಅಲ್ಲಿ ನಿವರ್ತ್ಯನಿವರ್ತಕಭಾವ ಸಂಭವಿಸುವುದಿಲ್ಲವೆಂದು ತಾತ್ಪರ್ಯ.

ನನು ಸಹಾನುವರ್ತಮಾನೋ ಬೋಧಃ ಸಂಸಾರಂ ಮಾ ಬಾಧಿಷ್ಟ । ಸಹಾವರ್ತಮಾನಸ್ತು ಬೋಧಃ ಪ್ರಕಾಶಸ್ತಮೋವದ್ಬಾಧಿಷ್ಯತ ಇತಿ ಚೇತ್ ತದೇತದ್ರಿಕ್ತಂ ವಚಃ । ಅಹಮನುಭವಾದನ್ಯಸ್ಯಾತ್ಮಜ್ಞಾನಸ್ಯ ಮೂಷಿಕವಿಷಾಯಮಾಣತ್ವಾತ್ [ನಹ್ಯನ್ಯೋಽಯಮನುಭವಃ ಪಾಮರಾಣಾಂವಾ ಸ್ಮ ಭವನ್ನಾಮ। ವೇದಾಂತವಚನನಿಚಯಪರ್ಯಾಲೋಚನಕ್ಷಮಾಣಾಂ ಪರೀಕ್ಷಕಾಣಾಂ ಸಂಭವತ್ಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇತ್ಯಪಿ ನ ವಕ್ತವ್ಯಮ್ । ಅಬಾಧಿತಾನುಭವವಿರೋಧೇನ ವೇದಾಂತ ವಾಕ್ಯಾನಾಂ ಗ್ರಾವಪ್ಲವನಾದಿವಾಕ್ಯಕಲ್ಪನತ್ವಾತ್। ನಹ್ಯಾಗಮಾಃ ಪರಃ ಶತಂ ಘಟಂ ಪಟಯಿತುಮುತ್ಸಹಂತೇ । ನಚಾಧ್ಯಯನವಿಧಿವ್ಯಾಕೋಪಃ ಗುರುಮ ಮತಾನುಸಾರೇಣ ಹುಂಫಡಾದಿವಾಕ್ಯವಜ್ಜಪಮಾತ್ರೋಪಯೋಗಿತ್ವೇನಾ ಚಾರ್ಯಮತಾನುಸಾರೇಣ ವಾ ಯಜಮಾನಃ ಪ್ರಸ್ತರ ಇತ್ಯಾದಿ ವಾಕ್ಯವತ್ ಸ್ತಾವಕೇನ ವೇದಾಂತಸಿದ್ಧಾಂತಸ್ಯಾಧ್ಯೇತವ್ಯತ್ವಸಂಭವಾತ್ । ತಥಾಚ ಪ್ರಯೋಗಃ—ವಿವಾದಾಸ್ಪದಂ ಬ್ರಹ್ಮ ವಿಚಾರ್ಯಪದಂ ನ ಭವತಿ-—ಅಫಲತ್ವಾತ್। ಕಾಕದಂತವತ್ ॥ ಇತಿ ॥

'ಅಹಂ' ಎಂಬ ಆತ್ಮಜ್ಞಾನವು ಸಂಸಾರ ನಿವರ್ತಕವಾಗುವುದು ಬೇಡ. ಸಹ ಅವರ್ತಮಾನಭೋಧ ಅಂದರೆ ಶುದ್ಧ ಅದ್ವಿತೀಯಾತ್ಮಸ್ವರೂಪಜ್ಞಾನವು ಪ್ರಕಾಶವು ಕತ್ತಲೆಯನ್ನು ಹೋಗಲಾಡಿಸಿದಂತೆ ಸಂಸಾರಕ್ಕೆ ನಿವರ್ತಕವಾಗಿಯೇ ಆಗುತ್ತದೆ ಎಂದು ಶಂಕಿಸುವವನ ಅಭಿಪ್ರಾಯ. 'ಅನ್ಯ'—ಇತಿ. 'ಅಹಂ' ಎಂಬ ಅನುಭವವು ಪಾಮರ ನಿಗೂ ಇರುತ್ತದೆ. ಇದಕ್ಕಿಂತ ಬೇರೆಯಾದ 'ಸದೇವ ಸೋಮ್ಯ' — ಇತ್ಯಾದಿ ಶ್ರುತಿ ವಾಕ್ಯಜನ್ಯವಾದ ಶುದ್ಧಾದ್ವಿತೀಯಾತ್ಮಸ್ವರೂಪಾನುಭವವು ಪಾಮರನಿಗೆ ಇಲ್ಲದಿದ್ದರೂ ವಿದ್ವಾಂಸರಿಗೆ ಬರುವುದರಿಂದ ದ್ವೈತಪ್ರತಿಭಾಸನಾತ್ಮಕವಾದ ಸಂಸಾರಕ್ಕೆ ವಿರೋಧ ವಾದುದರಿಂದ ನಿವರ್ತಕವಾಗುತ್ತದೆ ಎಂದು ಹೇಳಬಾರದು. 'ಅಬಾಧಿತ'—ಇತಿ. 'ಅಹಂ' ಎಂಬ ದ್ವೈತಪ್ರತ್ಯಕ್ಷಕ್ಕೆ ಬಾಧೆ ತೋರದಿರುವುದರಿಂದ ಅದು ಪ್ರಮಾಣವಾಗು ತ್ತದೆ. ಇದಕ್ಕೆ ವಿರೋಧವಾದ 'ಸದೇವ ಸೋಮ್ಯ'—ಇತ್ಯಾದಿ ಅದ್ವಿತೀಯಾತ್ಮಪ್ರತಿ ಪಾದಕಶ್ರುತಿಗಳು ಅಪ್ರಮಾಣವಾಗುತ್ತವೆ. 'ಗ್ರಾವಾಣಃ ಪ್ಲವಂತೇ' ಇತ್ಯಾದಿ ಶ್ರುತಿ ವಾಕ್ಯಗಳಂತೆ ಅವು ಅಪ್ರಮಾಣವಾಗುತ್ತವೆ. ಗ್ರಾವಪ್ಲವನವು ಅಸಂಭವಿಯಾದುದ ರಿಂದ ಅನುಭವ ವಿರುದ್ಧಾರ್ಥಬೋಧಕವಾಕ್ಯಗಳಿಗೆ ಅಪ್ರಾಮಾಣ್ಯವನ್ನೇ ಅಂಗೀಕರಿಸ ಬೇಕು. ಆಗಮವಾದರೂ ಅಸಂಭವ್ಯರ್ಥವನ್ನು ಅದು ಬೋಧಿಸಲಾರದು. ನೂರು ಅಥವಾ ಸಾವಿರ ಶ್ರುತಿಗಳು ಒಂದಾದರೂ ಘಟಕ್ಕೆ ಪಟರೂಪವನ್ನುಂಟುಮಾಡಲು ಸಮರ್ಥವಾಗಲಾರವು.

'ನ ಚ' — ಇತಿ. ಅಧ್ಯಯನಕ್ಕೆ ಅರ್ಥಜ್ಞಾನ ಮೂಲಕವಾಗಿ ಕರ್ಮದಲ್ಲಿ ಉಪಯೋಗ. ಅಸಂಭವ್ಯರ್ಥಪ್ರತಿಪಾದಕಗಳಾದ ಶ್ರುತಿವಾಕ್ಯಗಳಿಗೆ ಆ ರೀತಿಯು ಉಪಯೋಗವಿಲ್ಲದಿರುವುದರಿಂದ ಅದರ ಅಧ್ಯಯನವು ವ್ಯರ್ಥವಾಗುತ್ತದೆ. ಸ್ವಾಧ್ಯಾಯಾಂತವಾದ ಆ ಶ್ರುತಿ ವಾಕ್ಯಗಳಿಗೆ 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ಅಧ್ಯಯನ ವಿಧಿ ಪ್ರವೃತ್ತಿಯು ವಿರುದ್ಧವಾಗುವುದಿಲ್ಲವೆ ? ಎಂದರೆ ಸಮಾಧಾನ ತೋರಿಸುತ್ತಾನೆ. ಗುರುಮತದಲ್ಲಿ 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬುದು ಅಪೂರ್ವ ವಿಧಿಯಲ್ಲ. ಅಧ್ಯಾಪನವಿಧಿಸಿದ್ಧ ಅನುವಾದವಾಗುತ್ತದೆ. ಅಧ್ಯಾಪನ ವಿಧಿಯು ಕೇವಲ ಪಾಠವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿಸುವುದಲ್ಲದೆ ಅರ್ಥಾವಬೋಧವನ್ನು ಅಪೇಕ್ಷಿಸುವುದಿಲ್ಲ. ವಿಧ್ಯನುಸಾರವಾಗಿ ಅರ್ಥ ಜ್ಞಾನಕ್ಕೆ ಎಲ್ಲಾಕಡೆ ಆವಶ್ಯಕತೆ ಇರುವುದಿಲ್ಲ. ಎಲ್ಲಿ ಸಂಭವಿಸುವುದೋ ಅಲ್ಲಿ ಅ ರ್ಥಕ್ಕೆ ಗ್ರಹಣ. ಎಲ್ಲಿ ಅಸಂಭವ ಬರುವುದೋ ಅಲ್ಲಿ ಅದಕ್ಕೆ ತ್ಯಾಗ ಹೇಳಬೇಕು. ಹುಂಫಡಾದಿ ವೈದಿಕಶಬ್ದದಂತೆ ಜಪಮಾತ್ರದಿಂದ ಅವುಗಳಿಗೆ ಉಪಯೋಗವೆಂದಾಗು ತ್ತದೆ.

ಭಟ್ಟಾಚಾರ್ಯರ ಮತದಲ್ಲಿ ಅರ್ಥಜ್ಞಾನಸ್ವರೂಪದೃಷ್ಟಫಲೋದ್ದೇಶದಿಂದ ಅಧ್ಯಯನವಿಧಿಗೆ ಪ್ರವೃತ್ತಿ. ಎಲ್ಲಿ ವಾಚ್ಯಾರ್ಥವು ಕೂಡುವುದಿಲ್ಲವೋ ಅಲ್ಲಿ "ಯಜ ಮಾನಃ ಪ್ರಸ್ತರ" ಇತ್ಯಾದಿ ವಾಕ್ಯಗಳಂತೆ ಅರ್ಥವಾದವೆಂದು ಸ್ವೀಕರಿಸಬೇಕು. ಲಕ್ಷಣಯಾ ಪ್ರಾಶಸ್ತ್ಯದಲ್ಲಿ ತಾತ್ಪರ್ಯವೆಂದು ಕಲ್ಪಿಸಿ ಉಪಯೋಗ ಹೇಳುವುದರಿಂದ ಅಪ್ರಾಮಾಣ್ಯವೂ ಹೇಳಿದಂತಾಗುವುದಿಲ್ಲ. ಬ್ರಹ್ಮಪ್ರತಿಪಾದಕ ವೇದಾಂತವಾಕ್ಯಗಳಿಗೆ ಜೀವಪ್ರಾಶಸ್ತ್ಯ ಬೋಧನದಲ್ಲಿ ತಾತ್ಪರ್ಯವೆಂದು ವ್ಯಕ್ತವಾಗುತ್ತದೆ. ಜೀವಾತ್ಮನೆಂದರೆ ಯಜ್ಞಾದಿಗಳಲ್ಲಿ ಕರ್ತೃವಾದವನು, ಅಥವಾ ಉಪಾಸ್ಯತೇವತೆಯಾಗುತ್ತಾನೆ. ಫಲಿತ ವಾದ ಅನುಮಾನದಿಂದ ಬ್ರಹ್ಮವಿಚಾರಕ್ಕೆ ಪ್ರಯೋಜನವಿಲ್ಲವೆಂದು ತಿಳಿಸುತ್ತಾನೆ. 'ವಿವಾದ'—ಇತಿ. ಕಾಕದಂತವೆಂದರೆ ನಿರರ್ಥಕವಾದ ಒಂದು ಗಾದೆಯಂತಿರುವ ಶ್ಲೋಕ. 'ಕಾಕಸ್ಯ ಕತಿ ವಾ ದಂತಾಃ ಮೇಷಸ್ಯಾಂಡಂ ಕಿಯತ್ಪಲಮ್ । ಕಂಬಲೇ ಕತಿ ರೋಮಾಣಿ ಕಾ ವಾ ವಾರ್ತಾ ಜೋಳಮಂಡಲೇ ॥' ಎಂಬ ಶ್ಲೋಕ. (ಪಾ-ಕಾ ವಾರ್ತಾ ಸಿಂಧುಸೌವೀರೇಷ್ವೇಷಾ ಮೂರ್ಖವಿಚಾರಣಾ-ಇತಿ)

ತದಾಹುರಾಚಾರ್ಯಾ :—
ಅಹಂಧಿಯಾತ್ಮನಃ ಸಿದ್ಧೇಸ್ತಸ್ಯೈವ ಬ್ರಹ್ಮಭಾವತಾ ।
ತಜ್ಞಾನಾನ್ಮುಕ್ತ್ಯಭಾವಾಚ್ಚ ಜಿಜ್ಞಾಸಾ ನಾವಕಲ್ಪತೇ ॥ ಇತಿ ॥
ನ ಚ ಭೇದೇನಾಧ್ಯಸ್ತದೇಹಾದಿನಿವೃತ್ತಿಃ ಫಲಮಿತ್ಯಫಲತ್ವಹೇತುರಸಿದ್ಧ ಇತಿ ವೇದಿತವ್ಯಮ್ । ಭೇದಗ್ರಹೋಹಿ ವ್ಯಾಪಕನಿವೃತ್ತ್ಯಾ ವ್ಯಾಪ್ಯನಿವೃತ್ತಿರಿತಿ ನ್ಯಾಯೇನ ಭೇದಗ್ರಾಹಪರಿಪಂಥಿನಂ ಭೇದಸಂಸ್ಕಾರಮಪೇಕ್ಷ ತೇ । ಅನಾಕಲಿತ ಕಲಧೌತಸ್ಯ ಶುಕ್ತಿಶಕಲೇ ತತ್ಸಮಾರೋಪಾನುಪಲಂಭಾತ್ । ಸಂಸ್ಕಾರಶ್ಚ ಪ್ರಕೃತಿಮಾಕಾಂಕ್ಷತಿ । ಅನನುಭೂತೇ ಸಂಸ್ಕಾರಾನುದಯಾತ್ । ನ ಚ ಭ್ರಾಂತಿ ರೂಪೋನುಭವಸ್ತತ್ಕಾರಣಮಿತಿ ಭಣಿತವ್ಯಮ್ । ಭ್ರಾಂತೇರಭ್ರಾಂತಿಪೂರ್ವ ಕತ್ವೇನ ಕ್ವಚಿತ್ಪ್ರಮಿತೇರವಶ್ಯಾಭ್ಯುಪಗಮಯಿತವ್ಯತ್ವಾತ್ । ಪ್ರಯೋಗಶ್ಚ — ವಿಮತಾವಾತ್ಮಾನಾತ್ಮಾನೌ — ಭೇದೇನ ಪ್ರಮಿತೌ — ಅಭೇದಾಯೋಗ್ಯ ತ್ವಾತ್ । ತಮಃ ಪ್ರಕಾಶವತ್ । ನ ಜಾತ್ಮಾನಾತ್ಮನೋರಭೇದಾಯೋಗ್ಯತ್ವ ಲಕ್ಷಣೇ ಹೇತುರಸಿದ್ಧ ಇತಿ ಶಂಕನೀಯಮ್ । ವಿಕಲ್ಪಾಸಹತ್ವಾತ್ ।

'ಅಹಂ' ಅನುಭವವಿಷಯನಾಗಿ ಆತ್ಮನು ಸಿದ್ಧನಾಗುತ್ತಾನೆ. ಅವನೇ ಬ್ರಹ್ಮನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಸಿದ್ಧವಾಗುವುದರಿಂದ ಜಿಜ್ಞಾಸೆಗೆ ಅವಕಾಶವಿಲ್ಲವೆಂದು ಶ್ಲೋಕತಾತ್ಪರ್ಯ. 'ನಚ—' ಇತಿ. ಅದ್ವಿತೀಯವಾದ ಬ್ರಹ್ಮನಲ್ಲಿ ಭಿನ್ನರೂಪದಿಂದ ಆರೋಪಿತವಾದ ದೇಹಾದಿವಸ್ತುಜಾತವು ತೋರುವುದರಿಂದ ಅದಕ್ಕೆ ಅದ್ವಿತೀಯಬ್ರಹ್ಮವಿಚಾರದಿಂದ ನಿವೃತ್ತಿಯುಂಟಾಗುತ್ತದೆ. ಇದರಿಂದ ಪೂರ್ವೋಕ್ತವಾದ ಅನುಮಾನದಲ್ಲಿ ಅಫಲತ್ವ ಹೇತುವು ಅಸಿದ್ಧವಾಗುತ್ತದೆಂದು ಶಂಕೆ. ವ್ಯಾಪಕನಿವೃತ್ತಿಯಿಂದ ವ್ಯಾಪ್ಯನಿವೃತ್ತಿ ಪ್ರಸಿದ್ಧವಾಗಿದೆ. ಈ ನ್ಯಾಯದಿಂದ ಯಾವಾಗಲೂ ಲೋಕದಲ್ಲಿ ವ್ಯಾಪ್ಯವಾದ ಧೂಮವು ವ್ಯಾಪಕವಾದ ಅಗ್ನಿಯನ್ನು ಅಪೇಕ್ಷಿಸುತ್ತದೆ. ವ್ಯಾಪಕವಾದ ಅಗ್ನಿ ಇಲ್ಲದಿದ್ದರೆ ವ್ಯಾಪ್ಯವಾದ ಧೂಮವೂ ಇರುವುದಿಲ್ಲ. ಪ್ರಕೃತ ಭೇದಾಧ್ಯಾಸವು (ಆರೋಪ) ಭೇದಸಂಸ್ಕಾರವನ್ನು ಅಪೇಕ್ಷಿಸುತ್ತದೆ. ಭೇದಸಂಸ್ಕಾರವಿಲ್ಲದೆ ಭೇದಾಧ್ಯಾಸ ಉಂಟಾಗಲಾರದು. ಭೇದಸಂಸ್ಕಾರವು ಭೇದ ಅಗ್ರಹವನ್ನು ವಿನಾಶಗೊಳಿಸಿ ಭೇದಾಧ್ಯಾಸವನ್ನು ಹುಟ್ಟಿಸುತ್ತದೆ. 'ಈ ರೀತಿಯಾದುದು ಬೆಳ್ಳಿ' ಎಂದು ಹುಟ್ಟಿದ ರಜತಸಂಸ್ಕಾರವು ರಜತಜ್ಞಾನವನ್ನು ನಾಶಪಡಿಸಿ 'ಇದು ರಜತ' ವೆಂಬ ಯಥಾರ್ಥವಾದ ಅಥವಾ ಅಯಥಾರ್ಥವಾದ ರಜತಜ್ಞಾನವನ್ನು ಹುಟ್ಟಿಸುತ್ತದೆ.

ರಜತಸಂಸ್ಕಾರವಿಲ್ಲದೆ ರಜತಜ್ಞಾನವೆಂದೂ ಹುಟ್ಟುವುದಿಲ್ಲ. ಅಯಥಾರ್ಥಾನುಭವದಿಂದಲೂ ಸಂಸ್ಕಾರೋತ್ಪತ್ತಿಯಾಗುವುದಾದರೂ ಆ ಅಯಥಾರ್ಥಾನುಭವಕ್ಕೆ ಪೂರ್ವದಲ್ಲಿ ಸಂಸ್ಕಾರವಿರಬೇಕಾದುದರಿಂದ ಅದಕ್ಕೆ ಯಥಾರ್ಥಾನುಭವವು ಮೊದಲು ಬೇಕೇಬೇಕಾಗುತ್ತದೆ. ಪ್ರಕೃತ ಭೇದಸಂಸ್ಕಾರಕ್ಕೊಸ್ಕರ ಮೊದಲು ಯಥಾರ್ಥವಾದ ಭೇದಜ್ಞಾನವನ್ನು ಅವಶ್ಯವಾಗಿ ಅಂಗೀಕರಿಸಲೇಬೇಕಾಗುತ್ತದೆ. ಆ ಭೇದಗ್ರಹವು ಯಥಾರ್ಥವಾದುದರಿಂದ ಬ್ರಹ್ಮವಿಚಾರದಿಂದ ಅದಕ್ಕೆ ನಿವೃತ್ತಿ ಇಲ್ಲದಿರುವುದರಿಂದ ಬ್ರಹ್ಮವಿಚಾರ ವಿಫಲವೆಂದೇ ಸಿದ್ಧವಾಗುತ್ತದೆ. ಇದರಿಂದ ಪೂರ್ವೋಕ್ತಾನುಮಾನದಲ್ಲಿ ಅಫಲತ್ವಹೇತುವು ಅಸಿದ್ಧವಾಗುತ್ತದೆಂಬ ಶಂಕೆಗೆ ಅವಕಾಶವಿರುವುದಿಲ್ಲ. ಅಭೇದಾಯೋಗ್ಯತ್ವರೂಪಹೇತುವಿಗೆ ಅಸಿದ್ಧತ್ವವನ್ನು ಶಂಕಿಸುತ್ತಾನೆ. 'ನಚಾತ್ಮಾ'— ಇತಿ ವಿಕಲ್ಪವೊಂದೂ ಸಮಂಜಸವಾಗದಿರುವುದರಿಂದ ಅಸಿದ್ಧಿಶಂಕಾ ವ್ಯರ್ಥವಾಗುತ್ತದೆಂದು ಸಮಾಧಾನ. ವಿಕಲ್ಪವನ್ನು ತೋರಿಸುತ್ತಾನೆ.

ತಥಾ ಹಿ—ಅನಾತ್ಮಾ ಆತ್ಮಪರಿಶೇಷಃ ಸ್ಯಾತ್, ಆತ್ಮಾ ಅನಾತ್ಮಪರಿಶೇಷೋವಾ । ಆದ್ಯೇ ಮುಕ್ತಿದಶಾಯಾಮಿವ ಪರಿದೃಶ್ಯಮಾನಂ ಜಗದಸ್ತಮಿಯಾತ್ । ದ್ವಿತೀಯೇ ಜಗದಾಂಧ್ಯಂ ಪ್ರಸಜ್ಯೇತ । ತಮಃಪ್ರಕಾಶವದ್ವಿರುದ್ಧ ಸ್ವಭಾವತ್ವಾಚ್ಚ ದೃಗ್ದೃಶ್ಯಯೋರಾತ್ಮಾನಾತ್ಮನೋರಭೇದಾಯೋಗ್ಯತ್ವ ಮುವಧೇಯಮ್ । ತತಶ್ಚಾರ್ಥಾಧ್ಯಾಸಾನುಪಪತ್ತಾ ತತ್ಪೂರ್ವಕಸ್ಯ ಜ್ಞಾನಾಧ್ಯಾಸಸ್ಯಾ ಸಂಭವೇನ ಬ್ರಹ್ಮಣೋ ವಿಚಾರ್ಯತ್ವಾಸಂಭವಾತ್ ವಿಚಾರಾತ್ಮಿಕಾ ಚತುರ್ಲಕ್ಷಣಶಾರೀರಿಕ ಮೀಮಾಂಸಾ ನಾರಂಭಣೀಯಮಿತಿ ಪೂರ್ವಪಕ್ಷೇ ಪ್ರಾಪ್ತೇ ಸಿದ್ಧಾಂತೋಽಭಿಧೀಯತೇ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಶೇಷಃ —ಅಂಗಭೂತಃ, ತತ್ಸ್ವರೂಪನಾಗಿ ಅಲ್ಲಿಯೇ ಲೀನನಾಗುವುದೆಂದರ್ಥ. ಆತ್ಮಾನಾತ್ಮರಿಗೆ ಅಭೇದಾಯೋಗ್ಯತ್ವವು ಅಸಿದ್ಧವೆನ್ನುವ ವಾದಿಯನ್ನು ಹೀಗೆ ಕೇಳಬೇಕು. ಅವುಗಳಿಗೆ ಅಭೇದಯೋಗ್ಯತಾ ಇರುವುದಾದರೆ ಹೇಗೆ? ಉಪ್ಪು ನೀರಿನಲ್ಲಿ ಲಯವಾದಂತೆ ಒಬ್ಬನಲ್ಲಿ ಇನ್ನೊಂದರ ಲಯ ಹೇಳಬೇಕು. ಅನಾತ್ಮನು ಆತ್ಮನಲ್ಲಿ ಲೀನವಾಗಿ ಆತ್ಮ ಒಂದೇ ಉಳಿಯುವುದಾದರೆ ಆಗ ಮೋಕ್ಷಾವಸ್ಥೆಯಲ್ಲಿ ಇದ್ದಂತೆ ಈ ತೋರತಕ್ಕ ಪ್ರಪಂಚವು ಲಯವಾಗಿ ತೋರದಂತಾಗಬೇಕಾಗುತ್ತದೆ. ಅಪ್ರಕಾಶವಾದ ಜಡಪ್ರಪಂಚದಲ್ಲಿ ಆತ್ಮನು ಲೀನನಾಗಿ ಜಡವೊಂದೇ ಉಳಿಯುವುದಾದರೆ ಆಗ ಆಂಧ್ಯಪ್ರಸಕ್ತಿದೋಷ. ಆದುದರಿಂದ ಅಭೇದಾಯೋಗ್ಯತಾ ಸ್ಪಷ್ಟವಾಗಿದೆ. ಆತ್ಮನಲ್ಲಿ ಪ್ರಪಂಚರೂಪಾರ್ಥದ ಅಧ್ಯಾಸವೂ ಇಲ್ಲ. ಪ್ರಪಂಚವು ವಾಸ್ತವಿಕವಾದುದರಿಂದ ತದ್ವಿಷಯಕವಾದ ಲೌಕಿಕ ಜ್ಞಾನವೂ ಯಥಾರ್ಥವಾಗುವುದರಿಂದ ಆತ್ಮನಲ್ಲಿ ಜ್ಞಾನದ ಅಧ್ಯಾಸವೂ ಇರುವುದಿಲ್ಲ. ಹೀಗೆ ಯಾವ ಅಧ್ಯಾಸವೂ ಕೂಡದಿರುವುದರಿಂದ ಬ್ರಹ್ಮವಿಚಾರಕ್ಕೆ ಅಧ್ಯಸ್ತದೇಹಾದಿ ನಿವೃತ್ತಿಯೇ ಫಲವೆಂದು ಹೇಳಲು ಸಾಧ್ಯವಾಗದಿರುವುದರಿಂದ ಅಫಲತ್ವ ಹೇತುವಿನಿಂದ ಬ್ರಹ್ಮನಿಗೆ ವಿಚಾರ್ಯತ್ವಾಭಾವವು ಸಿದ್ಧವಾಗುತ್ತದೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಅಹಂಪದಾಧಿ ಗಮ್ಯಾದನ್ಯದಾತ್ಮತತ್ತ್ವಂ ನಾಸ್ತೀತಿ ನ ವಕ್ತವ್ಯಮ್ । ನಿರಸ್ತಸಮಸ್ತೋಪಾಧಿಕಸ್ಯಾತ್ಮತತ್ತ್ವಸ್ಯ ಶ್ರುತ್ಯಾದಿಷುಪ್ರಸಿದ್ಧತ್ವಾತ್। ನ ಚ ತೇಷಾಮುಪಚರಿತಾರ್ಥತಾ । ಉಪಕ್ರಮೋಪಸಂಹಾರಾದಿಷಡ್ವಿಧತಾತ್ಪರ್ಯ ಲಿಂಗವತ್ತಯಾ ತತ್ತ್ವಂ ಬೋಧಯತಾಮುಪಚರಿತಾರ್ಥತ್ವಾನುಪಪತ್ತೇಃ । ಲಿಂಗಷಟ್ಕಂಚ ಪೂರ್ವಾಚಾರ್ಯೈರ್ದರ್ಶಿತಮ್ —

ಉಪಕ್ರಮೋಪಸಂಹಾರಾ ವಭ್ಯಾಸೋಽಪೂರ್ವತಾ ಫಲಮ್ ।
ಅರ್ಥವಾದೋಪಪತ್ತೀಚ ಲಿಂಗಂ ತಾತ್ಪರ್ಯನಿರ್ಣಯೇ ॥ ಇತಿ ॥

ತತ್ರ ಸದೇವ ಸೋಮ್ಯೇದಮಗ್ರ ಆಸೀದಿತ್ಯುಪಕ್ರಮಃ । 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತ್ಯುಪಸಂಹಾರಃ । ತಯೋರ್ಬ್ರಹ್ಮವಿಷಯತ್ವೇನೈಕ್ಯರೂಪಮೇಕಲಿಂಗಮ್। ಅಸಕೃತ್ತತ್ತ್ವಮಸೀತ್ಯುಕ್ತಿರಭ್ಯಾಸಃ । ಮಾನಾಂತರಾಗಮ್ಯತ್ವಮಪೂರ್ವತ್ವಮ್ । ಏಕವಿಜ್ಞಾನೇನ ಸರ್ವವಿಜ್ಞಾನಂ ಫಲಮ್। ಸೃಷ್ಟಿಸ್ಥಿತಿಪ್ರಲಯಪ್ರವೇಶ ನಿಯಮನಾನಿ ಪಂಚಾರ್ಥವಾದಾಃ । ಮೃದಾದಿದೃಷ್ಟಾಂತಾ ಉಪಪತ್ತಯಃ । ತಸ್ಮಾದೇತೈರ್ಲಿಂಗೈರ್ವೇದಾಂತಾನಾಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಬ್ರಹ್ಮಾತ್ಮಪರತ್ವಂ ನಿಶ್ಚೇತವ್ಯಮ್ । ತದಿತ್ಥಮೌಪನಿಷದಸ್ಯಾತ್ಮತತ್ತ್ವಸ್ಯಾಹಮನುಭವೇಽನವಭಾಸಮಾನತ್ವಾತ್ತಸ್ಯಾನುಭವಸ್ಯಾಧ್ಯಸ್ತಾತ್ಮವಿಷಯತ್ವಂ ಸಿದ್ಧಮ್

ಅಹಂಪ್ರತ್ಯಯಗಮ್ಯನಾದ ಜೀವಾತ್ಮನಿಗಿಂತ ಬೇರೆ ಆತ್ಮತತ್ತ್ವ ಇಲ್ಲವೆಂದು ಹೇಳಬಾರದು. ಆ ಜೀವಾತ್ಮನು ಉಪಾಧಿರಹಿತನಾಗಿರುವುದಿಲ್ಲ. ಅಹಂಭಾವಾದಿಸಕಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮಗಳೂ ಔಪಾಧಿಕಗಳಾಗಿರುತ್ತವೆ. ನಿರುಪಾಧಿಕವಾದ ಸದೇವೇತ್ಯಾದಿಶ್ರುತಿ ಪ್ರಸಿದ್ಧವಾದ, ಬ್ರಹ್ಮಶಬ್ದವಾಚ್ಯವಾದ ಆತ್ಮತತ್ತ್ವದ ನಿಶ್ಚಯಕ್ಕೋಸ್ಕರ ಬ್ರಹ್ಮವಿಚಾರ ಆವಶ್ಯಕವಾಗಿರುತ್ತದೆ. 'ನಚ—' ಇತಿ. ಸದೇವೇತ್ಯಾದಿವೇದಾಂತ ವಾಕ್ಯಗಳಿಗೆ ಗೌಣಾರ್ಥವನ್ನು ಅಂಗೀಕರಿಸಿ ಜೀವಾತ್ಮಪ್ರಶಂಸಾಪರವಾಗಿ ಕಷ್ಟದಿಂದ ಯೋಜನೆ ಮಾಡುವುದು ನ್ಯಾಯವಲ್ಲ. ತಪ್ಪೆಂದರೆ ನಿರುಪಾಧಿಕವಾದ ಅದ್ವಿತೀಯವಾದ ಶುದ್ಧ ಬ್ರಹ್ಮ ಉಪಕ್ರಮೋಪಸಂಹಾರಾದಿಗಳಿಂದ ಒಂದು ಅರ್ಥವನ್ನು ನಿಶ್ಚಯಿಸಬೇಕು. ಪ್ರಕರಣಪ್ರತಿಪಾದ್ಯವಾದ ಅರ್ಥವನ್ನು ಪ್ರಕರಣಾದಿಯಲ್ಲಿಯೂ ಪ್ರಕರಣಾಂತದಲ್ಲಿಯೂ ಪ್ರತಿಪಾದಿಸುವುದಕ್ಕೆ ಉಪಕ್ರಮ, ಉಪಸಂಹಾರವೆಂದು ಹೆಸರು. ಇವೆರಡೂ ಸೇರಿ ಒಂದು ಲಿಂಗವಾಗುತ್ತದೆ. ಪ್ರಕರಣಪ್ರತಿಪಾದ್ಯವಾದ ಅರ್ಥವನ್ನು ಪುನಃ ಪುನಃ ಪ್ರತಿ ಪಾದನ ಮಾಡುವುದಕ್ಕೆ ಅಭ್ಯಾಸವೆಂದು ಹೆಸರು. ಪ್ರಕರಣಪ್ರತಿಪಾದ್ಯವಸ್ತುವು ಪ್ರಮಾಣಾಂತರದಿಂದ ವಿಷಯೀಕೃತವಾಗದಿರುವುದಕ್ಕೆ ಅಪೂರ್ವತಾ ಎಂದು ಹೆಸರು. ಪ್ರಕರಣದಲ್ಲಿ ಅಲ್ಲಲ್ಲಿ ಹೇಳುವ ಪ್ರಯೋಜನವೇ ಫಲವು. ಪ್ರಕರಣಪ್ರತಿಪಾದ್ಯವಸ್ತುವಿನ ಪ್ರಶಂಸೆಯೇ ಅರ್ಥವಾದ. ಅಂತಹ ಅರ್ಥವನ್ನು ಸಾಧಿಸುವ ಅಲ್ಲಲ್ಲಿ ವರ್ಣಿಸುವ ಯುಕ್ತಿಯೇ ಉಪಪತ್ತಿ. ಈ ಆರು ಲಿಂಗಗಳಿಂದ ಪ್ರಕರಣತಾತ್ಪರ್ಯವನ್ನು ನಿಶ್ಚಯಿಸ ಬೇಕು.

'ಸದೇವ'—ಇತಿ. ಛಾಂದೋಗ್ಯದ ಆರನೆಯ ಪ್ರಪಾಠಕವಲ್ಲಿ ಪ್ರಕರಣಾದಿಯಲ್ಲಿ "ಸದೇವಸೋಮ್ಯೇದಮಗ್ರ ಆಸೀದೇಕಮೇವಾಽದ್ವಿತೀಯಂ" ಎಂದು ಆದಿಯಲ್ಲಿ ನಿರು ಪಾಧಿಕವಾದ, ಸದ್ರೂಪವಾದ, ಅದ್ವಿತೀಯ ಬ್ರಹ್ಮವನ್ನುಪಕ್ರಮಿಸಿ, ಪ್ರಕರಣಾಂತದಲ್ಲಿ "ಐತದಾತ್ಮ್ಯಮಿದಂ ಸರ್ವಂ" ಎಂದು ಉಪಸಂಹಾರಮಾಡಿದೆ.

'ತತ್ತ್ವಮಸಿ' ಎಂದು ಒಂಬತ್ತುಸಾರಿ ಅದ್ವಿತೀಯಾತ್ಮನನ್ನು ಪ್ರತಿಪಾದಿಸಿರು ವುದೇ ಅಭ್ಯಾಸ. ಅದ್ವಿತೀಯಾತ್ಮನು ಪ್ರಮಾಣಾಂತರಗಮ್ಯನೆಂದು ತೋರಿಸಿರುವುದರಿಂದ ಅಪೂರ್ವತಾ. "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" ಇತ್ಯಾದಿಶ್ರುತಿಗಳು ಈ ವಿಷಯದಲ್ಲಿ ಉಪೋದ್ಬಲಕಗಳಾಗಿವೆ. 'ಯೇನಾಶ್ರುತಂ ಶ್ರುತಂ ಭವತಿ' ಎಂಬುದರಿಂದ ಏಕ ವಿಜ್ಞಾನದಿಂದ ಸರ್ವವಿಜ್ಞಾನವುಂಟಾಗುತ್ತದೆಯೆಂದುದರಿಂದ ಫಲಹೇಳಿದೆ. 'ತದೈ ಕ್ಷತ ಬಹು ಸ್ಯಾಂ ಪ್ರಜಾಯೇತ' 'ತತ್ತೇಜೋಽಸೃಜತ' ಎಂಬುದರಿಂದ ಅದ್ವಿತೀಯ ಬ್ರಹ್ಮನಿಂದ ಸೃಷ್ಟಿಯಾಗಿದೆಯೆಂದು ಹೇಳಿದೆ. 'ಸನ್ಮೂಲಾಃ ಸೌಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' ಎಂಬುದರಿಂದ ಸ್ಥಿತಿನಿಯಮನ ಹೇಳಿದೆ. 'ತೇಜಃ ಪರಸ್ಯಾಂ ದೇವತಾಯಾಂ' ಎಂದು ಪ್ರಲಯ ಹೇಳಿದೆ. 'ಇಮಾಸ್ತಿಸ್ರೋ ದೇವತಾಃ ಅನೇನ ಜೀವೇನಾತ್ಮಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಎಂದು ಪ್ರವೇಶ ಹೇಳಿದೆ. ಹೀಗೆ ಶ್ರುತಿಪ್ರತಿಪಾದಿತಗಳಾದ ಸೃಷ್ಟ್ಯಾದಿಗಳಿಂದ ಬ್ರಹ್ಮನನ್ನು ಪ್ರಶಂಸಿಸಿದುದರಿಂದ ಅರ್ಥವಾದವಾಗುತ್ತದೆ. 'ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ವಾಚಾರಂಭಣಂವಿಕಾರೋ ನಾಮಧೇಯಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನ್ಮೃತ್ತಿಕೇತ್ಯೇವ ಸತ್ಯಂ' ಇತ್ಯಾದಿಗಳಿಂದ ಅದ್ವಿತೀಯವಸ್ತುಸಾಧನದಲ್ಲಿ ಹೇಳುವ ಯುಕ್ತಿಯೇ ಉಪಪತ್ತಿ. ಹೀಗೆ ಬೃಹದಾರಣ್ಯಕಾದಿಗಳಲ್ಲಿಯೂ ಈ ಲಿಂಗಷಟ್ಕವು ಹೇಳದಿರುವುದರಿಂದ ಅವುಗಳಿಂದ ವೇದಾಂತಕ್ಕೆ ಅದ್ವಿತೀಯನಿತ್ಯಶುದ್ಧಮುಕ್ತಸ್ವಭಾವ ಬ್ರಹ್ಮಾತ್ಮತತ್ತ್ವವೇ ವಿಷಯವೆಂದು ತಿಳಿಯಬೇಕು.

'ಅಧ್ಯಸ್ತ'—ಇತಿ. 'ಆರೋಪಿತಾತ್ಮತ್ವವಿಶಿಷ್ಟದೇಹಾದಿವಿಷಯಕತ್ವಂ' ಎಂದರ್ಥ. ಇಲ್ಲಿ ಆರೋಪವೆಂದರೆ ಭ್ರಮಮೂಲಕವಾದ ಅನಾಹಾರ್ಯಜ್ಞಾನವೆಂದು ತಿಳಿಯಬೇಕು. ರಜತರೂಪದಿಂದ ಶುಕ್ತಿ ತೋರುವಂತೆ ಆತ್ಮ ರೂಪದಿಂದ ತೋರುವ ಯಾವ ದೇಹ ವಿದೆಯೋ ತದ್ವಿಷಯಕವಾದ 'ಅಹಂ' ಎಂಬ ಅನುಭವವೆಂದು ತಾತ್ಪರ್ಯ. ಇಲ್ಲಿ ಕೆಲವರು ಹೀಗೆ ಶಂಕಿಸುತ್ತಾರೆ. ಅಹಮನುಭವದಲ್ಲಿ ನಿರ್ವಿಶೇಷ ಬ್ರಹ್ಮ ತೋರದಿದ್ದರೂ ಆತ್ಮಾವಭಾಸ ಇದ್ದೇ ಇದೆ. ಆತ್ಮನೆಂದರೆ ಬ್ರಹ್ಮನಿಗಿಂತ ಬೇರೆಯಾಗಿ ಪ್ರತಿಶರೀರದಲ್ಲಿಯೂ ಬೇರೆ ಬೇರೆಯಾಗಿರುವ ವೈಶೇಷಿಕಾದಿಗಳು ಅಂಗೀಕರಿಸಿರುವ ಜೀವಾತ್ಮನೆಂದರ್ಥ. ಹೀಗಿರುವಾಗ ಅಹಮನುಭವದಲ್ಲಿ ಅಧ್ಯಸ್ತಾತ್ಮತ್ವವಿಶಿಷ್ಟದೇಹಾದಿವಿಷಯಕತ್ವ ತೋರುವುದು ಹೇಗೆ ? ಅಂದರೆ ಶ್ರುತಿಪ್ರಾಮಾಣ್ಯದಿಂದ ಬ್ರಹ್ಮನಿಗಿಂತ ಬೇರೆಯಾದ ಜೀವಾತ್ಮನಲ್ಲಿ ಪ್ರಮಾಣವಿಲ್ಲದಿರುವುದರಿಂದ ಆ ಶಂಕೆ ಯುಕ್ತವಲ್ಲವೆಂದು ತಿಳಿಯಬೇಕು.

ಕಣಭಕ್ಷಾಕ್ಷಚರಣಾದಿಕಕ್ಷೀಕೃತಸ್ಯಾತ್ಮನೋ ಭಾನಾಭಾವಾದಹಮನುಭವಸ್ಯಾಧ್ಯಸ್ತಾತ್ಮವಿಷಯತ್ವಮೇಷಿತವ್ಯಮ್ । ನ ತಾವದಹಮನುಭವಃ ಸರ್ವಗತತ್ವಮಾತ್ಮನೋಽವಗಮಯಿತುಮೀಷ್ಟೇ । ಅಹಮಿಹಾಸ್ಮಿ ಸದನೇ ಜಾನಾನ ಇತಿ ಪ್ರಾದೇಶಿಕತ್ವಗ್ರಹಣಾತ್ । ನ ಚೇದಂ ದೇಹಸ್ಯ ಪ್ರಾದೇಶಿಕತ್ವಂ ಪ್ರತಿಭಾಸತ ಇತಿ ವೇದಿತವ್ಯಮ್ । ಅಹಮಿತ್ಯುಲ್ಲೇಖಾಯೋಗಾತ್ । ನನು ಯಥಾ ರಾಜ್ಞಃ ಸರ್ವಪ್ರಯೋಜನವಿಘಾತರಿ ಭೃತ್ಯೇ ಮಮಾತ್ಮಾ ಭದ್ರಸೇನ ಇತ್ಯುಪಚಾರಸ್ತದ್ವದಾತ್ಮವಚನಸ್ಯಾಹಂಶಬ್ದಸ್ಯ ದೇಹ ಉಪಚಾರ ಇತಿ ಚೇತ್ — ನೈವಂ ವೋಚಃ । ಉಪಚರಿತಾತ್ಮಭಾವಸ್ಯ ದೇಹಾದೇಃ ಸ್ವಸಮಾನಾಕೃತಿಶಿಲಾಪುತ್ರಕಾದಿವತ್ ಜ್ಞಾತೃತ್ವಾಯೋಗಾತ್ । ನ ಚ ಜ್ಞಾತೃತ್ವಮಪ್ಯುಪಚರಿತಮ್ । ಪ್ರಯೋಕ್ತುಃ ಸ್ವಪ್ರತಿಪತ್ತಿಪ್ರಕಾಶಕೇ ಪ್ರಯೋಗೇ ಪ್ರತಿಪತ್ತೃತ್ವೋಪಚಾರಾನುಪಪತ್ತೇಃ ॥

ಅಂಗೀಕರಿಸಿ ಹೇಳುತ್ತಾನೆ— 'ಕಣಭಕ್ಷ—' ಇತಿ. ವೈಶೇಷಿಕಶಾಸ್ತ್ರಪ್ರವರ್ತಕರಾದ ಕಣಾದ ಋಷಿಗಳೂ, ನ್ಯಾಯಶಾಸ್ತ್ರಪ್ರವರ್ತಕರಾದ ಗೌತಮರೂ ಅಂಗೀಕರಿಸಿರುವ ಜೀವಾತ್ಮನೂ ಅಹಮನುಭವದಲ್ಲಿ ಗೋಚರಿಸುವುದಿಲ್ಲ. ಅದುದರಿಂದ ಅಲ್ಲಿ ಅಧ್ಯಸ್ತಾತ್ಮವಿಷಯಕತ್ವವನ್ನೇ ಸ್ವೀಕರಿಸಬೇಕಾಗಿದೆ. ಗೋಚರಿಸದಿರುವುದನ್ನು ಪ್ರತಿಪಾದಿಸುತ್ತಾನೆ. 'ನತಾವತ್—' ಇತಿ. ಸರ್ವಗತತ್ವಂ—ವಿಭುತ್ವಂ, ವೈಶೇಷಿಕಾದಿಗಳು ಪ್ರತ್ಯೇಕವಾಗಿ ಜೀವಾತ್ಮರಿಗೆ ವಿಭುತ್ವವನ್ನಂಗೀಕರಿಸಿರುತ್ತಾರೆ. ಪ್ರದೇಶೇವಿದ್ಯಮಾನಃ ಪ್ರಾದೇಶಿಕಃ—ಒಂದು ಭಾಗದಲ್ಲಿ ಇರುವವನು. ದೇಶಪರಿಚ್ಛಿನ್ನನಾದವನು ಅಹಮನುಭವದಲ್ಲಿ ಇಂತಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆತ್ಮನು ಪ್ರತೀತನಾಗುತ್ತಾನೆ. 'ಸದನೆ' ಎಂಬ ಅಲ್ಪಾಧಾರವನ್ನು ಹೇಳಿರುವುದರಿಂದ ದೇಶಪರಿಚ್ಛೇದ ವ್ಯಕ್ತವಾಗುತ್ತದೆ. ಇದು ವಿಭುವಾದ ಜೀವನಿಗೆ ಸಂಗತವಾಗುವುದಿಲ್ಲ. ಅಹಮಿಹ—ವಾಕ್ಯದಲ್ಲಿ ಅಹಂಶಬ್ದದಿಂದ ಆತ್ಮತ್ವವೂ, ಸದನೇ, ಎಂಬುದರಿಂದ ಪ್ರಾದೇಶಿಕತ್ವವೂ, ಜಾನಾನಃ ಎಂಬುದರಿಂದ ಜ್ಞಾತೃತ್ವವೂ ಒಬ್ಬನಿಗೇ ಪ್ರತೀತವಾಗುತ್ತವೆ. ಇದು ದೇಹಕ್ಕೆ ಸಂಗತವಾಗುವುದಿಲ್ಲ. ಏಕೆಂದರೆ ಅದು ಆತ್ಮನಲ್ಲ. ಅದರಲ್ಲಿ ಜ್ಞಾತೃತ್ವವಿಲ್ಲವೆಂದು ಎಲ್ಲರಿಗೂ ತಿಳಿದವಿಷಯವೇ. ಪ್ರಾದೇಶಿಕತ್ವವಿಲ್ಲದಿರುವುದರಿಂದ ಆತ್ಮನಿಗೂ ಪ್ರತೀತವಾಗುವುದಿಲ್ಲ ಅಭ್ಯಾಸದಿಂದಲೇ ಈ ಪ್ರತೀತಿ ಉಪಪನ್ನವಾಗುತ್ತದೆಂದು ತಿಳಿಯಬೇಕು. ಆಹಾರ್ಯಾರೋಪದಿಂದ ಈ ಪ್ರತೀತಿ ಏಕೆ ಸಂಗತವಾಗಬಾರದು ? ಬಾಧಜ್ಞಾನವಿದ್ದರೂ ಆರೋಪ ಎಲ್ಲಿ ಹೇಳಲ್ಪಡುವುದೋ ಅದು ಆಹಾರ್ಯವಾಗುತ್ತದೆ.

"ಸಿಂಹೋ ಮಾಣವಕಃ" ಎಂಬಲ್ಲಿ ಆರೋಪಮಾಡುವಾಗ ಇವನು ಸಿಂಹವಲ್ಲವೆಂಬ ಬಾಧಜ್ಞಾನವಿದ್ದೇ ಇರುತ್ತದೆ. ಪ್ರಕೃತ ಆರೋಪದಲ್ಲಿ ದೇಹಧರ್ಮವು ಆತ್ಮನಲ್ಲಿಯೂ, ಆತ್ಮಧರ್ಮವು ದೇಹದಲ್ಲಿಯೂ ಆರೋಪಿತವಾಗುವುದರಿಂದ ಎರಡು ರೀತಿಯಾಗಿರುತ್ತದೆ. ಆತ್ಮಧರ್ಮವು ದೇಹದಲ್ಲಿ ಆರೋಪಿತವಾಗಿದೆ ಎಂಬ ಪಕ್ಷದಲ್ಲಿ ಶಂಕಿಸುತ್ತಾನೆ. 'ನನು'—ಇತಿ. ಆರೋಪಿತವಾದ ಆತ್ಮತ್ವದಿಂದ ವಿಶಿಷ್ಟವಾದ ದೇಹವೇ ಅಹಂಪ್ರತ್ಯಯದಲ್ಲಿ ವಿಷಯವಾಗಿರುತ್ತದೆ. ಇಲ್ಲಿ ದೇಹವು ಆತ್ಮನಲ್ಲ ಎಂಬ ಬಾಧಜ್ಞಾನವಿರುವಾಗಲೇ ಈ ಜ್ಞಾನ ಬಂದುದರಿಂದ ಆರೋಪವು ಆಹಾರ್ಯವಾಗಿ ಇರುತ್ತದೆ. ಉದಾಹರಣೆಯಲ್ಲಿ ಭದ್ರಸೇನನು ಆತ್ಮನಲ್ಲ ಎಂಬ ಬಾಧಜ್ಞಾನವಿರುತ್ತದೆ ಆದರೂ ಅವನು ಸರ್ವಕಾರ್ಯನಿರ್ವಾಹಕನಾದುದರಿಂದ 'ಭದ್ರಸೇನನು ನನ್ನ ಆತ್ಮಾ' ಎಂದು ಲಕ್ಷಣೆಯಿಂದ ಹೇಳಿದೆ. ಅದರಂತೆಯೇ ಇಲ್ಲಿ ಆರೋಪವೆಂದರೆ ಅದಕ್ಕೆ ಸಮಾಧಾನ ಹೇಳುತ್ತಾನೆ- 'ನೈವಂ'— ಇತಿ. ಶಿಲಾಪುತ್ರಕ—ಕಲ್ಲಿನಿಂದ ಮಾಡಿದ ಶಿಲಾಪ್ರತಿಮೆ. ಅದು ಚಿತ್ರದಂತೆ ಅಚೇತನವಾದುದರಿಂದ ಅಲ್ಲಿ ಜ್ಞಾತೃತ್ವಧರ್ಮವಿರುವುದಿಲ್ಲ. ಹಾಗೆ ಇಲ್ಲಿ 'ಅಹಮಿಹಾಸ್ಮಿ'—ಎಂಬ ಉಕ್ತಿಯಲ್ಲಿ ಜಾನಾನಃ ಎಂಬುದು ಕೂಡುವುದಿಲ್ಲ.

'ಜ್ಞಾತೃತ್ವಂ' — ಇತಿ. ಆತ್ಮತ್ವವು ದೇಹದಲ್ಲಿ ಕಲ್ಪಿತವಾದಂತೆ ಅಲ್ಲಿಯೇ ಜ್ಞಾತೃತ್ವವೂ ಆರೋಪಿಸಲ್ಪಟ್ಟಿದೆ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಪತ್ತಿ—ಜ್ಞಾನ. ಜ್ಞಾತೃವಾದವನು ತನ್ನ ಜ್ಞಾನವನ್ನು ಪ್ರಕಾಶಪಡಿಸುವುದಕ್ಕೋಸ್ಕರ ಜ್ಞಾನವನ್ನನುಸರಿಸಿ ಮುಖ್ಯ ಅಥವಾ ಗೌಣವೃತ್ತಿಯಿಂದ ವಾಕ್ಯವನ್ನು ಪ್ರಯೋಗಿಸುತ್ತಾನೆ. ಅವನೇ ಗೌಣವೃತ್ತಿಯಿಂದ ಪ್ರಯೋಗಿಸಲು ಬಯಸಿ ಒಂದು ಧರ್ಮವನ್ನು ಒಂದರಲ್ಲಿದಿರುವುದನ್ನು ಕಲ್ಪಿಸುವುದಿಲ್ಲ. ಜ್ಞಾತೃವಾದನು ಕಲ್ಪಿಸುವವನು ಪ್ರಯೋಗಿಸುವವನೂ ಒಬ್ಬನೇ ಆಗಿರುತ್ತಾನೆ. ಅಂತಹವನೇ ಇಲ್ಲಿ ಅಹಂಪದಾರ್ಥವೆಂದು ತಿಳಿಯಬೇಕು. ಇವನು ಕಲ್ಪಿತಜ್ಞಾತೃತ್ವವಿಶಿಷ್ಟವಾದ ದೇಹವಾದರೆ ಅವನು ತನ್ನಲ್ಲಿರುವ ಜ್ಞಾತೃತ್ವಕ್ಕೆ ಕಲ್ಪಕನು ಆಗುವುದು ಹೇಗೆ ? ಅದೂ ಅಲ್ಲದೆ ಕಲ್ಪಿತ ಜ್ಞಾತೃತ್ವವಿಶಿಷ್ಟವಾದ ದೇಹದಲ್ಲಿ ವಾಸ್ತವವಾಗಿ ಜ್ಞಾತೃತ್ವವಿಲ್ಲದಿರುವುದರಿಂದ ಅಲ್ಲಿ ಪ್ರಯೋಕ್ತೃತ್ವವೂ ಸಂಭವಿಸುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ಪಿತವಾದುದು ಎಂದೂ ಪರಮಾರ್ಥಕಾರಿಯಾಗಲಾರದು. ಕಲ್ಪಿತಾಗ್ನಿಭಾವವುಳ್ಳ ಮಾಣವಕನಲ್ಲಿ ಸುಡುವಶಕ್ತಿ ಇರುವುದಿಲ್ಲ. ಎರಡನೆಯಪಕ್ಷದಲ್ಲಿ ಹೇಳುವ ಉತ್ತರವು ಇಲ್ಲಿಯೂ ಸಂಭವಿಸುತ್ತದೆ. ದೇಹಧರ್ಮವು ಆತ್ಮನಲ್ಲಿ ಆರೋಪಿತವಾಗಿದೆಯೆಂಬ ಎರಡನೆಯ ಪಕ್ಷದಲ್ಲಿ ಶಂಕಾಮಾಡಿ ದೂಷಿಸುತ್ತಾನೆ. 'ಅಥ'—ಇತಿ. ಬುದ್ಧಿಪೂರ್ವಕವಾಗಿ ಎಲ್ಲಿ ಇನ್ನೊಂದರ ಧರ್ಮಕ್ಕೆ ಆರೋಪ ಹೇಳುತ್ತೇವೋ ಅಲ್ಲಿ ಮೊದಲು ಅವೆರಡು ವಸ್ತುಗಳಿಗೆ ಭೇದಜ್ಞಾನ ಆವಶ್ಯವಾಗಿ ಇರಬೇಕು. ಸಿಂಹತ್ವಧರ್ಮವಿಶಿಷ್ಟವಾದ ಸಿಂಹದಿಂದ ಭೇದವು ಮಾಣವಕನಲ್ಲಿ ಪ್ರಸಿದ್ಧವಾಗಿದ್ದು, ಅವನಲ್ಲಿ ಕ್ರೌರ್ಯಾದಿಗುಣಗಳನ್ನು ನೋಡಿ ಸಿಂಹತ್ವವನ್ನು ಆರೋಪಿಸಿ 'ಸಿಂಹೋಽಯಂ ಮಾಣವಕಃ' ಎಂದು ಪ್ರಯೋಗಿಸಲ್ಪಡುತ್ತದೆ. ಇಲ್ಲಿ ಸಾಂಪ್ರತಿಕಗೌಣತ್ವ ತೋರುವುದಲ್ಲದೆ ನಿರೂಢಗೌಣತ್ವವಲ್ಲ. ಏಕೆಂದರೆ ಮಾಣವಕನಲ್ಲಿ ಸಿಂಹ ಶಬ್ದ ಪ್ರಯೋಗ ಸದಾ ಇರುವುದಿಲ್ಲ. (ಕ್ವಾಚಿತ್ಕ) ಪ್ರಯೋಗಸಿದ್ಧಿಬಾಹುಲ್ಯದಿಂದ ಗೌಣಶಬ್ದವು ರೂಢಶಬ್ದದಂತೆ ಎಲ್ಲಿ ಯಾವಾಗಲೂ ಪ್ರಯೋಗಿಸಲ್ಪಡುವುದೋ ಅಲ್ಲಿ ನಿರೂಢಗೌಣತ್ವ ಬರುತ್ತದೆ.

ತಿಲರಸವಾಚಕತೈಲಶಬ್ದವು ಯೋಗಬಲದಿಂದ ಸರ್ಷಪ (ಸಾಸಿವೆ) ಮುಂತಾದವುಗಳ ರಸದಲ್ಲಿಯೂ ಪ್ರಯೋಗಿಸಲ್ಪಡುತ್ತದೆ ಅಲ್ಲಿ ಅವೆರಡು ರಸಗಳಿಗೆ ಭೇದವಿದ್ದರೂ ತಿರೋಹಿತವಾದುದರಿಂದ ಗೌಣವೃತ್ತಿಯಿಂದ ಪ್ರಯೋಗಿಸಲ್ಪಟ್ಟಿದೆ. ಇಲ್ಲಿ ತಿಲಶಬ್ದವು ಗೌಣವೆಂಬ ಜ್ಞಾನವು ಭೇದಜ್ಞಾನವುಳ್ಳ ಕೆಲವರಿಗೆ ಮಾತ್ರ ತೋರುತ್ತದೆ ಸಕಲರಿಗೂ ಪ್ರತೀತವಾಗದಿರುವುದರಿಂದ ರೂಢಿ ಸಮಾನವಾಗಿ ನಿರೂಢಗೌಣತ್ವವೆಂದು ತಿಳಿಯಬೇಕು ಹೇಗಾದರೂ ಆಹಾರ್ಯಾರೋಪವಿದ್ದಲ್ಲಿ ಆರೋಪ್ಯಮಾಣ, ಆರೋಪ ವಿಷಯಗಳಿಗೆ ಭೇದಜ್ಞಾನ ಆವಶ್ಯಕವಾಗಿರುತ್ತದೆ. ಇದರಿಂದ ಎಲ್ಲಿ ಗೌಣತ್ವವಿದೆಯೋ ಅಲ್ಲಿ ಭೇದಜ್ಞಾನವೆಂಬ ವ್ಯಾಪ್ತಿ ಸಿದ್ಧವಾಗುತ್ತದೆ. ಆತ್ಮನಾದರೋ ದೇಹದಿಂದ ಬೇರೆ ತೋರದಿರುವುದರಿಂದ ಇಲ್ಲಿ ಆಹಾರ್ಯಾರೋಪದಿಂದ ಗೌಣವೃತ್ತಿಯನ್ನಾರೋಪಿಸಬೇಕಾಗಿಲ್ಲ.

ಅಥ ಮಮ ಶರೀರಮಿತಿ ಭೇದಭಾನಸಂಭವಾತ್ ಗೌಣತ್ವಂ ಮನ್ಯೇಥಾಃ ತದಪ್ಯಯುಕ್ತಮ್ । ಅಹಂ ಶಬ್ದಾರ್ಥಸ್ಯ ದೇಹಾದಿಭ್ಯೋ ನಿಷ್ಕೃಷ್ಯ ಅಸಾಧಾರಣಧರ್ಮವತ್ತ್ವೇನ ಪ್ರತಿಭಾಸಮಾನತ್ವಾಭಾವಾತ್ । ಅನ್ಯಥಾ ಲೋಕಾಯತಿಕಮತಂ ನೋದಯಮಾಸಾದಯೇತ್ । ಮಮ ಶರೀರ ಮಿತ್ಯುಕ್ತಿಸ್ತು ರಾಹೋಃ ಶಿರ ಇತಿವದೌಪಚಾರಿಕೀ । ಮಮ ಶರೀರಮಿತಿ ಬ್ರುವಾಣೇನಾಪಿ ಕಸ್ತ್ವಮಿತಿ ಪೃಷ್ಟೇನ ವಕ್ಷಸ್ಥಲನ್ಯಸ್ತಹಸ್ತೇನ ಶೃಂಗಗ್ರಾಹಿಕಯಾ ಅಯಮಹಂ ಇತಿ ಪ್ರತಿವಚನಸ್ಯ ದೀಯಮಾನತ್ವೇನ ದೇಹಾತ್ಮಪ್ರತ್ಯಯಸ್ಯ ಸಕಲಾನುಭವಸಿದ್ಧತ್ವಾತ್ ತದುಕ್ತಮ್—

ದೇಹಾತ್ಮಪ್ರತ್ಯಯೋ ಯದ್ವತ್ ಪ್ರಮಾಣತ್ವೇನ ಕಲ್ಪಿತಃ ।
ಲೌಕಿಕಂ ತದ್ವದೇವೇದಂ ಪ್ರಮಾಣಂ ತ್ವಾತ್ಮನಿಶ್ಚಯಾತ್॥ ಇತಿ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಥಾ ಚ ವ್ಯಾಪಕಸ್ಯ ಭೇದಧಾನಸ್ಯ ನಿವೃತ್ತೇರ್ವ್ಯಾಪ್ಯಸ್ಯ ಗೌಣತ್ವಸ್ಯ ನಿವೃತ್ತಿರಿತಿ ನಿರವದ್ಯಮ್ ॥

ನನ್ನ ಶರೀರವೆಂಬಲ್ಲಿ ಆತ್ಮ ಶರೀರಗಳಿಗೆ ಭೇದ ತೋರುವುದರಿಂದ ಗೌಣತ್ವಕಲ್ಪಿಸಬಹುದೆಂದು ಪುನಃ ಶಂಕೆ ಮಾಡುತ್ತಾನೆ. ಇದು ಯುಕ್ತವಲ್ಲ. ಅಲ್ಲಿ ಅಹಂಪದಾರ್ಥವು ಶರೀರಸಂಬಂಧವಿಲ್ಲದೆ ತನ್ನ ಅಸಾಧಾರಣಧರ್ಮದಿಂದ ತೋರುವುದಿಲ್ಲ. 'ಅಪರಥಾ'—ಇತಿ. ದೇಹದಿಂದ ಬೇರೆಯಾಗಿ ಆತ್ಮನು ತನ್ನ ಅಸಾಧಾರಣಧರ್ಮದಿಂದ ತೋರುವುದಾದರೆ ಆ ರೀತಿಯ ಅನುಭವಕ್ಕೆ ವಿರುದ್ಧವಾಗಿ ಚಾರ್ವಾಕರು ದೇಹವೇ ಆತ್ಮನೆಂಬ ಸಿದ್ಧಾಂತವನ್ನು ಹೇಗೆ ಅಂಗೀಕರಿಸಿರುತ್ತಾರೆ ? ಅಭೇದಜ್ಞಾನ ಬರುವುದಾದರೆ ನನ್ನ ಶರೀರವೆಂಬ ಭೇದಜ್ಞಾನ ಬರುವುದು ಹೇಗೆ? ಅಂದರೆ ರಾಹುವೇ ಶಿರೋರೂಪವಾಗಿದ್ದರೂ ಭೇದಕಲ್ಪಿಸಿ ವ್ಯವಹರಿಸುವಂತೆ, ಇಲ್ಲಿಯೂ ಅಭೇದಜ್ಞಾನವಿದ್ದರೂ ಹೇಗೋ ಭೇದವನ್ನು ಕಲ್ಪಿಸಿ ನಿರ್ವಾಹಮಾಡಬೇಕೆಂದರ್ಥ. ಅಭೇದಜ್ಞಾನದಲ್ಲಿ ಸಾಧಕ ತೋರಿಸುತ್ತಾನೆ.

'ಮನು'—ಇತಿ ಒಂದೊಂದು ಹಸುವಿನ ಕೊಂಬನ್ನು ಹಿಡಿದು ಇದು ಹಸು ಎಂದು ತದ್ವಿಶೇಷವನ್ನು ತೋರಿಸಿಕೊಡುವುದಕ್ಕೆ ಶೃಂಗಗ್ರಾಹಿಕನ್ಯಾಯವೆಂದು ಹೆಸರು ಅದರಂತೆ ನೀನು ಯಾರು ಎಂದು ಕೇಳಿದಾಗ ಎದೆಯಮೇಲೆ ಕೈಯಿಟ್ಟು "ಈ ನಾನು (ಬರುತ್ತೇನೆ)" ಇತ್ಯಾದಿ ಉತ್ತರವನ್ನು ಹೇಳುವುದರಿಂದ ದೇಹಾತ್ಮಭ್ರಮವುಳ್ಳವನಾದರೂ ಭ್ರಾಂತನೆಂದು ಯಾರು ಹೇಳುವುದಿಲ್ಲ. ಅವನ ಮಾತನ್ನು ಪ್ರಮಾಣವನ್ನಾಗಿಯೇ ಜನರು ಗ್ರಹಿಸುತ್ತಾರೆ. 'ದೇಹಾತ್ಮ'—ಇತಿ. ಆ ಆತ್ಮನಿಶ್ಚಯಾತ್—ಆತ್ಮಸಾಕ್ಷಾತ್ಕಾರಪರ್ಯಂತವಾಗಿ ದೇಹಾತ್ಮಪ್ರತ್ಯಯವು ಪ್ರಮಾಣವೆಂದೇ ಸ್ವೀಕರಿಸಲ್ಪಡುತ್ತದೆಂದರ್ಥ. ಭೇದಜ್ಞಾನವು ವ್ಯಾಪಕವಾದುದರಿಂದ ಅದು ನಿವೃತ್ತವಾದರೆ ವ್ಯಾಪ್ಯವಾದ ಗೌಣತ್ವವೂ ನಿವೃತ್ತವಾಗುತ್ತದೆ.

ನನ್ವಭಿಜ್ಞಯಾ ಭೇದಸಿದ್ಧಿರ್ಮಾ ಸಂಭೂನ್ನಾಮ। ಪ್ರತ್ಯಭಿಜ್ಞಯಾ ತು ಸೋಽಹಮಿತ್ಯೇವಂ ರೂಪಯಾ ತತ್ಸಿದ್ಧಿಃ ಸಂಭವಿಷ್ಯತೀತಿ ಚೇನ್ನ। ವಿಕಲ್ಪಾಸಹತ್ವಾತ್। ಕಿಮಿಯಂ ಪ್ರತ್ಯಭಿಜ್ಞಾ ಪಾಮರಾಣಾಂ ಸ್ಯಾತ್ ಪರೀಕ್ಷಕಾಣಾಂ ವಾ। ನಾದ್ಯಃ ದೇಹವ್ಯತಿರಿಕ್ತಾತ್ಮೈಕ್ಯಮವಗಾಹಮಾನಾಯಾಃ ಪ್ರತ್ಯಭಿಜ್ಞಾಯಾ ಅನುದಯಾತ್। ಪ್ರತ್ಯುತ ಶ್ಯಾಮಸ್ಯ ಲೌಹಿತ್ಯವತ್ ಕಾರಣವಿಶೇಷಾದಲ್ಪಸ್ಯಾಪಿ ಮಹಾಪರಿಮಾಣತ್ವಮವಿರುದ್ಧಮನುಭವತಾಂ ತದ್ದೇಹ ಏವ ತಸ್ಯಾಃ ಸಂಭವಾಚ್ಚ। ನ ದ್ವಿತೀಯಃ। ವ್ಯವಹಾರಸಮಯೇ ಪಾಮರಸಾಮ್ಯಾನತಿರೇಕಾತ್। ಅಪರೋಕ್ಷಭ್ರಮಸ್ಯ ಪರೋಕ್ಷ ಜ್ಞಾನವಿನಾಶ್ಯತ್ವಾನುಪಪತ್ತೇಃ। ಯದುಕ್ತಂ ಭಗವತಾ ಭಾಷ್ಯಕಾರೇಣ "ಪಶ್ವಾದಿಭಿಶ್ಚಾವಿಶೇಷಾತ್" (ಬ್ರ-ಸೂ ೧-೧-೧ ಭಾ) ಇತಿ ॥ ಭಾಮತೀಕಾರೈರಪ್ಯುಕ್ತಂ - ಶಾಸ್ತ್ರಚಿಂತಕಾಃ ಖಲ್ವೇದಂ ವಿಚಾರ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಯಂತಿ ನ ಪ್ರತಿಪತ್ತಾರಃ ॥ ಇತಿ ॥ ತಥಾ ಚಾತ್ಮಗೋಚರಸ್ಯಾಧ್ಯಾಸಾತ್ಮರೂಪತ್ವಂ ಸುಸ್ಥಮ್ ॥

'ಅಹಂ' ಎಂಬ ಅನುಭವದಿಂದ ಭೇದವು ಸಿದ್ಧಿಸದಿರಲಿ. 'ಸೋಽಹಂ' ಎಂಬ ಪ್ರತ್ಯಭಿಜ್ಞೆಯಿಂದ ಭೇದಸಿದ್ಧಿಯಾಗುತ್ತದೆಂದು ತಿರುಗಿ ಶಂಕಿಸುತ್ತಾನೆ. 'ಸ್ಥೂಲಃಅಹಂ' ಇತ್ಯಾದಿ ಪ್ರತೀತಿ ವಿರುದ್ಧವಾಗುವುದರಿಂದ 'ಮಮ ಶರೀರಂ' ಎಂಬ ಅಭಿಜ್ಞೆಯಿಂದ (ಜ್ಞಾನ) ಜೀವಾತ್ಮಶರೀರಗಳಿಗೆ ಯದ್ಯಪಿ ಭೇದ ಸಿದ್ಧಿಸಲಾರದು. ಆದರೆ 'ಸೋಽಹಂ' ಎಂಬ ಪ್ರತ್ಯಭಿಜ್ಞೆಯಿಂದ ಅದು ಸಿದ್ಧವಾಗುವುದೆಂದು ತಾತ್ಪರ್ಯ. ಸಃ ಅಂದರೆ ಪರಮಾತ್ಮ. ಅಹಮೆಂದರೆ ಜೀವಾತ್ಮ. ಇವರಿಬ್ಬರಿಗೆ ಐಕ್ಯಸಿದ್ಧಿಸಬೇಕಾದರೆ ಜೀವಾತ್ಮನು ದೇಹದಿಂದ ಬೇರೆಯಾಗಿರಲೇ ಬೇಕು. ಇಲ್ಲವಾದರೆ ಸಂಗತವಾಗಲಾರದು. ದೇಹವೇ ಜೀವಾತ್ಮನಾಗುವುದಾದರೆ ಅವನು ಯಾವ ರೀತಿಯಿಂದಲೂ ಪರಮಾತ್ಮನಾಗಲಾರನು. ಹೀಗೆ ದೇಹಾತ್ಮರಿಗೆ ಭೇದಸಿದ್ಧವಾಗುವುದರಿಂದ ಅಹಂ ಎಂಬ ಜ್ಞಾನವೂ ಗೌಣವೆಂದು ಹೇಳಲು ಸಾಧ್ಯವಾಗುತ್ತದೆ. ಹೀಗೆ ಶಂಕೆ ಬಂದರೆ ಸಮಾಧಾನ ತೋರಿಸುತ್ತಾನೆ.

'ಕಿಮಿಯಂ'—ಇತಿ. ಈ ರೀತಿಯ ಪ್ರತ್ಯಭಿಜ್ಞೆಯು ಪಾಮರರಿಗೇ ಅಥವಾ ವಿದ್ವಾಂಸರಿಗೇ ? ಅಸಂಸ್ಕೃತವಾದ ಅಂತಃಕರಣವುಳ್ಳ ಅಜ್ಞಾನಿಗಳಾದ ಕುರುಬ ಮುಂತಾದವರು ಪಾಮರರು. 'ಸೋಽಹಂ' ಎಂಬ ಪ್ರತಿಭಿಜ್ಞೆಯಲ್ಲಿ ದೇಹವ್ಯತಿರಿಕ್ತವಾದ ಜೀವಾತ್ಮನಿಗೆ ಪರಮಾತ್ಮನೊಡನೆ ಐಕ್ಯವು ತೋರುತ್ತದೆ. ಇಂತಹ ಪ್ರತಿಭಿಜ್ಞೆಯು ಪಾಮರನಿಗೆ ಎಂದೂ ಬರುವುದಿಲ್ಲ. ದೇಹಕ್ಕಿಂತ ಬೇರೆಯಾಗಿ ಅವರಿಗೆ ಜೀವಾತ್ಮನು ತೋರುವುದಿಲ್ಲ. "ಪ್ರತ್ಯುತ" — ಇತಿ. ಕೆಲವು ಕಡೆ ಪೂರ್ವಾವಸ್ಥಾವಿರುದ್ಧವಾಗಿ ಕಾರ್ಯವು ಕಾರಣಸಾಮಗ್ರೀ ವಿಶೇಷದಿಂದ ಉಂಟಾಗುತ್ತದೆ. ಹಿಂದೆನೀಲವಾದ ಘಟವು ತೇಜಃ ಸಂಯೋಗದಿಂದ ಪಕ್ವವಾಗಿ ಕೆಂಪಾಗಿ ತೋರುತ್ತದೆ. ಅಲ್ಪವಾದ ಬೀಜವು ಮಣ್ಣು ನೀರು ಮುಂತಾದವುಗಳ ಸಂಬಂಧದಿಂದ ದೊಡ್ಡಮರವಾಗುತ್ತದೆ. ಹಾಗೆ ಜೀವಾತ್ಮನೂ ದೇಹರೂಪನಾದರೂ ಕಾರಣವಿಶೇಷದಿಂದ ಪರಮಾತ್ಮರೂಪನಾಗಬಹುದು ಎಂಬ ಸಂಭಾವನೆಯಿಂದ ಸೋಽಹಂ ಎಂಬ ಪ್ರತ್ಯಭಿಜ್ಞೆಯೂ ಹುಟ್ಟಬಹುದು. ಆದುದರಿಂದ ಇದಕ್ಕೆ ದೇಹಾತ್ಮರ ಭೇದಜ್ಞಾನವು ಆವಶ್ಯಕವಾಗಲಾರದು

"ನದ್ವಿತೀಯಃ"—ಇತಿ. ಪರೀಕ್ಷಕರೂ ಕೂಡಾ ತತ್ತ್ವಸಾಕ್ಷಾತ್ಕಾರಹೊಂದದೆ ಶ್ರವಣಮನನ ಕುಶಲರಾಗಿ ಪರೋಕ್ಷಜ್ಞಾನಿಗಳಾಗಿ ಆಗನು, ಉಪಪತ್ತಿಗಳಿಂದ ದೇಹೇಂದ್ರಿಯಾದಿಗಳಿಗಿಂತಲೂ ಬೇರೆಯಾಗಿ ಜೀವಾತ್ಮನನ್ನು ತಿಳಿಯಲಿ. ಪ್ರಮಾಣ ಪ್ರಮೇಯ ವ್ಯವಹಾರದಲ್ಲಿ ಅವರೂ ಪಾಮರರಂತೆಯೇ ಇರುತ್ತಾರೆ. ದೇಹಾತ್ಮಭ್ರಮೆಯಿಂದ ಅಹಂ ಭಾವಪೂರ್ವಕವಾಗಿ ಪಾಮರರ ವ್ಯವಹಾರವಿರುವಂತೆ ಇವರ ವ್ಯವಹಾರವೂ ಸಮಾನವಾಗಿರುತ್ತದೆ. ಪ್ರತ್ಯಭಿಜ್ಞಾ ಇರುವುದಾದರೆ ಆಗ ವಿರೋಧದಿಂದ ಪಾಮರವ್ಯವಹಾರ ಸಾದೃಶ್ಯ ಬಾರದೇ ಹೋಗಬೇಕಾಗುತ್ತದೆ. ಸಾಕ್ಷಾತ್ಕಾರ ಹೊಂದಿದ ಜ್ಞಾನಿಗಳ ದೃಷ್ಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಲ್ಲಿ ಜ್ಞಾತೃಜ್ಞೇಯಜ್ಞಾನರೂಪತ್ರಿಪುಟಿಯೇ ನಷ್ಟವಾದುದರಿಂದ ತನ್ಮೂಲಕವಾದ ಭೇದಜ್ಞಾನಕ್ಕೆ ಅವಕಾಶವೇ ಇರೋವುದಿಲ್ಲ. 'ಅಪರೋಕ್ಷ'—ಇತಿ. ಹಗ್ಗದಲ್ಲಿ ಪ್ರತ್ಯಕ್ಷವಾಗಿ ಸರ್ಪಭ್ರಮ್ಹಬಂದಿರುತ್ತದೆ. ಇದು ಈ ದೇಶದಲ್ಲಿ ಸರ್ಪವಿಲ್ಲವೆಂಬ ವಾಕ್ಯದಿಂದ ಉಂಟಾಗುವ ಪರೋಕ್ಷಜ್ಞಾನದಿಂದ ನಿವೃತ್ತಿಹೊಂದಲಾರದು. ಭ್ರಮಾಭಾವಜ್ಞಾನ ಬಂದರೂ ಭ್ರಮನಿವೃತ್ತಿಯಾಗುವುದಿಲ್ಲ. ಅದು ಹೋಗಬೇಕಾದರೆ ಇದು ಹಗ್ಗವೆಂಬ ಪ್ರತ್ಯಕ್ಷಾನುಭವದಿಂದಲೇ ಹೋಗಬೇಕು.

'ಯದುಕ್ತಂ'—ಇತಿ. ಅಧ್ಯಾಸಭಾಷ್ಯದಲ್ಲಿ ಅಧ್ಯಾಸನಿರೂಪಣ ಮಾಡುವಾಗ ಶ್ರೀಶಂಕರಾಚಾರ್ಯರು ಈ ಮಾತನ್ನು ಹೇಳಿರುತ್ತಾರೆ. ಶಾಸ್ತ್ರ ಚಿಂತಕರಾದರೂ ಮನನ ಕುಶಲರಾದರೂ ಬ್ರಹ್ಮಸಾಕ್ಷಾತ್ಕಾರ ಪಡೆಯದಿರುವವರಿಗೆ ವ್ಯವಹಾರದೆಶೆಯಲ್ಲಿ ಪಶುಸಾಮ್ಯವಿರುತ್ತದೆ. ಎತ್ತಿದದಂಡವುಳ್ಳ ಪುರುಷನನ್ನು ನೋಡಿದಾಗ ಹಸುವು ಅವನಿಂದ ನಿವೃತ್ತವಾಗುತ್ತದೆ. ಎಳೆ ಹುಲ್ಲನ್ನು ಹಿಡಿದು ಕರೆದರೆ ಹತ್ತಿರ ಬರುತ್ತದೆ. ಅದರಂತೆ ಶಾಸ್ತ್ರಚಿಂತಕರೂ ದೇಹವಿನಾಶೋದ್ಯುಕ್ತನನ್ನು ನೋಡಿ ಓಡಿ ಹೋಗುತ್ತಾರೆ. ಹಿತಕರನನ್ನು ಸಮೀಪಿಸುತ್ತಾರೆ. ಭಾಮತೀಕಾರರೂ ಇದನ್ನೇ ಸಮರ್ಥಿಸಿರುತ್ತಾರೆ. ಶಾಸ್ತ್ರಚಿಂತಕರೆಂದರೆ ಆತ್ಮಸಾಕ್ಷಾತ್ಕಾರ ಪಡೆಯದವರು. ಕೇವಲ ಶ್ರವಣಮನನಕುಶಲರೆಂದರ್ಥ. ಪ್ರತಿಪತ್ತೃಗಳೆಂದರೆ ಆತ್ಮಸಾಕ್ಷಾತ್ಕಾರಪಡೆದವರು. ಹೀಗೆ ಅಹಮನುಭವದಲ್ಲಿ ಅಧ್ಯಸ್ತಾತ್ಮ ರೂಪವೇ ಇರುತ್ತದೆಂದು ಸಿದ್ಧವಾಗುತ್ತದೆ.

ನ ಚಾರ್ಹತಮತಾನುಸಾರೇಣ ಅಹಂಪ್ರತ್ಯಯ ಪ್ರಾಮಾಣ್ಯಾಯ ಆತ್ಮನೋ ದೇಹಪರಿಮಾಣತ್ವಮಂಗೀಕರಣೀಯಮಿತಿ ಸಾಂಪ್ರತಮ್। ಮಧ್ಯಮ ಪರಿಮಾಣಸ್ಯ ಸಾವಯವತ್ವೇನ ದೇಹಾದಿವದನಿತ್ಯತ್ವೇ ಕೃತಹಾನಾಕೃತಾಭ್ಯಾಗಮಪ್ರಸಂಗಾತ್ ಅಥೈದ್ದೋಷಪರಿಜಿಹೀರ್ಷಯಾ ಅವಯವಸಮುದಾಯ ಆತ್ಮೇತ್ಯಭ್ಯುಪಗಮ್ಯೇತ ತದಾ ವಕ್ತವ್ಯಮ್ । ಕಿಂ ಪ್ರತ್ಯೇಕಮವಯವಾನಾಂ ಚೈತನ್ಯಂ ಸಂಘಾತಸ್ಯ ವಾ । ನಾದ್ಯಃ । ಬಹೂನಾಂ ಚೇತನಾನಾಮಹಮಹಮಿಕಯಾ ಪ್ರಧಾನಭಾವಮನುಭವತಾಮೈಕಮತ್ಯಾಭಾವೇನ ಸಮಸಮಯಂ ವಿರುದ್ಧದಿಕ್‌ಕ್ರಿಯತಯಾ ಶರೀರಸ್ಯಾಪಿ ವಿಶರಣನಿಷ್ಕ್ರಿಯತ್ವಯೋರನ್ಯತರಾಪಾತಾತ್ । ದ್ವಿತೀಯೇಽಪಿ ಸಂಘಾತಾಪತ್ತಿಃ । ಕಿಂ ಶರೀರೋಪಾಧಿಕೀ ಯಾದೃಚ್ಛಿಕೀ ವಾ। ನಾದ್ಯಃ। ಏಕಸ್ಮಿನ್ನವಯವೇ ಛಿನ್ನೇ ಚಿದಾತ್ಮನೋಽಪ್ಯವಯವಶ್ಛಿನ್ನ ಇತ್ಯಚೇತನತ್ವಾಪಾತಾತ್ । ನ ದ್ವಿತೀಯಃ । ಅನೇಕೇಷಾಮವಯವಾನಾಂ ಅನ್ಯೋನ್ಯಸಾಹಿತ್ಯನಿಯಮಾದರ್ಶನಾತ್ । ನ ತೃತೀಯಃ । ಸಂಶ್ಲೇಷವದ್ವಿಶ್ಲೇಷಸ್ಯಾಪಿ ಯಾದೃಚ್ಛಿಕತ್ವೇನ ಸುಖೇನ ವಸತಾಮಕಸ್ಮಾದಚೇತನತ್ವಪ್ರಸಂಗಾತ್ ॥

ಆರ್ಹತರೆಂದರೆ ಜೈನರು. ಅವರ ದರ್ಶನದಲ್ಲಿ ಜೀವನು ವಿಭುವಲ್ಲ. ಮಧ್ಯಮ ಪರಿಮಾಣ ಎಂದರೆ ಶರೀರತುಲ್ಯ ಪರಿಮಾಣವುಳ್ಳವನು. ಆಗ 'ಅಹಮಿಹಾಸ್ಮಿ ಸದನೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾನಾನಃ' ಎಂಬ ಅಹಃಪ್ರತ್ಯಯದಲ್ಲಿ ಜೀವನಿಗೆ ಪ್ರಾದೇಶಿಕತ್ವಗ್ರಹಣವು ಯುಕ್ತವಾಗುವುದರಿಂದ ಅಲ್ಲಿ ಪ್ರಾಮಾಣ್ಯಸಿದ್ಧವಾಗುತ್ತದೆ. ಎಂದರೆ ದೋಷತೋರಿಸುತ್ತಾನೆ. 'ಮಧ್ಯಮ'—ಇತಿ. ಕೃತಹಾನ, ಅಕೃತಾಭ್ಯಾಗಮದೋಷ ಹಿಂದೆ ವಿವರಿಸಿದೆ. ಮಧ್ಯಮಪರಿಮಾಣ ಒಪ್ಪಿದರೆ ದೇಹಾದಿಗಳಂತೆ ಆವನಿಗೆ ಅನಿತ್ಯತ್ವಸಂಭವಿಸುವುದರಿಂದ ಆ ದೋಷ ಪ್ರಾಪ್ತವಾಗುತ್ತದೆ. ಈ ದೋಷವನ್ನು ನಿವಾರಣೆಮಾಡಲು ಅವಯವಸಮುದಾಯವೇ ಆತ್ಮನೆಂದು ಹೇಳುವುದಾದರೆ ಆಗ ವಿಕಲ್ಪ ಬರುತ್ತದೆ ಪ್ರತ್ಯೇಕಾವಯವದಲ್ಲಿ ಚೈತನ್ಯವಿದೆಯೋ ಆಥವಾ ಸಂಘಾತದಲ್ಲಿಯೋ ? ಪ್ರತ್ಯೇಕದಲ್ಲಿ ಎಂದು ಅಂಗೀಕರಿಸಿದರೆ ಆಗ ಅನೇಕರಿಗೆ ಸಾಮರ್ಥ್ಯಸಾಮ್ಯವಿರುವುದರಿಂದ ಸ್ವಭಾವವೈಲಕ್ಷಣ್ಯದಿಂದ ಪರಸ್ಪರ ವೈಮತ್ಯ ಸ್ಪಷ್ಟವಾಗುತ್ತದೆ. ಹೇಗೆಂದರೆ ಒಂದೇ ಶರೀರದಲ್ಲಿ ಒಬ್ಬ ಜೀವಾತ್ಮನು ಪೂರ್ವದಿಕ್ಕಿನಲ್ಲಿಯೂ, ಇನ್ನೊಬ್ಬನು ಪಶ್ಚಿಮದಲ್ಲಿಯೂ ಕಾರ್ಯಮಾಡಲು ಬಯಸುತ್ತಾರೆ. ಆಗ ಒಂದು ಶರೀರದಿಂದ ಎರಡು ವಿರುದ್ಧದಿಕ್ಕಿನಲ್ಲಿ ಕಾರ್ಯಮಾಡಲು ಸಾಧ್ಯವಾಗದಿರುವುದರಿಂದ ಇಬ್ಬರೂ ಒಂದೊಂದು ಕಡೆಗೆಎಳೆಯುವುದರಿಂದ ಶರೀರ ಸೀಳಿ ನಾಶವಾಗಬೇಕಾಗುತ್ತದೆ. ಅಥವಾ ಪರಸ್ಪರ ವಿರೋಧದಿಂದ ಇಬ್ಬರೂ ಕೆಲಸಮಾಡದೆ ಇರುವುದರಿಂದ ಶರೀರವು ನಿಷ್ಕ್ರಿಯವುಳ್ಳದ್ದಾಗಬೇಕಾಗುತ್ತದೆ.

ಅವಯವಸಮುದಾಯವೇ ಜೀವವೆಂದು ಎರಡನೇಮತವನ್ನು ಅಂಗೀಕರಿಸಿದರೂ ದೋಷವೇ. ಸಮುದಾಯಭಾವವೆಂದರೆ ಬೇರೆಯಾದ ಅನೇಕಾವಯವಗಳು ಅನ್ಯೋನ್ಯವಾಗಿ ಸೇರಿಕೊಂಡಿರುವ ಸ್ಥಿತಿ. ಹೀಗೆ ಸೇರಿಕೊಂಡಿರುವುದೆಂದರೆ ಸಿದ್ಧವಾದ ಶರೀರದಲ್ಲಿ ಅದನ್ನನುಸರಿಸಿ ಉಂಟಾಗುವುದೇ ? ಅಥವಾ ಸ್ವಭಾವದಿಂದ ಸೇರಿರುತ್ತದೆಯೋ? ಆಥವಾ ಅಕಸ್ಮಾತ್ ಉಂಟಾಗುತ್ತದೆಯೋ? ಎಂದು ವಿಕಲ್ಪವುಂಟಾಗುತ್ತದೆ. 'ಏಕಸ್ಮಿನ್'—ಇತಿ ಪಾದ, ಅಥವಾ ಬೆರಳು ಇತ್ಯಾದಿ ಸೂಕ್ಷ್ಮಗಳಾದ ಒಂದು ಶರೀರದ ಅವಯವ ಕತ್ತರಿಸಲ್ಪಟ್ಟರೂ ಜೀವನ ಅವಯವವೂ ಭೇದಹೊಂದುವುದರಿಂದ ಜೀವವಿನಾಶವಾಗಬೇಕಾಗುತ್ತದೆ. ಸ್ವಾಭಾವಿಕವೆನ್ನುವುದಾದರೆ ಯಾವಾಗಲೂ ಒಂದೇರೂಪವಿರಬೇಕಾಗುತ್ತದೆ. ಸಂಶ್ಲೇಷವಿಶೇಷ ವಸ್ತುವಿನ ಸ್ವಭಾವಧರ್ಮವೆಂದರೆ ಸ್ವಭಾವಕ್ಕೆ ಎಂದೂ ನಾಶವಿಲ್ಲದಿರುವುದರಿಂದ ಅಲ್ಪಾವಯವದ ವಿಶ್ಲೇಷವೂ ಉಂಟಾಗಲಾರದು. ಆದರೆ ಜೈನರು ಹಾಗೆ ಅಂಗೀಕರಿಸುವುದಿಲ್ಲ. ಬಾಲ್ಯಾದ್ಯವಸ್ಥಾ ಭೇದದಿಂದಲೂ, ಜನ್ಮಾಂತರದಿಂದಲೂ ಶರೀರಭೇದವನ್ನಂಗೀಕರಿಸಿ ಆ ಪರಿಮಾಣವುಳ್ಳವನು ಜೀವನೆಂದು ಅಂಗೀಕರಿಸಿರುತ್ತಾರೆ. ಅಕಸ್ಮಾತ್ ಎಂದರೆ ಸಂಶ್ಲೇಷದಂತೆ ವಿಶ್ಲೇಷವೂ ಆಕಸ್ಮಿಕವಾಗಿ ಅಚೇತನತ್ವಪ್ರಾಪ್ತಿ ದೋಷ ಬರುತ್ತದೆ.

ನ ಚಾಣುಪರಿಮಾಣತ್ವಮಾತ್ಮನಃ ಶಂಕನೀಯಮ್ । ಸ್ಥೂಲೋಽಹಂ ದೀರ್ಘೋಽಹ
ಮಿತಿ ಪ್ರತ್ಯಯಾನುಪಪತ್ತೇಃ ॥

ಜೀವನಿಗೆ ಅಣುಪರಿಮಾಣವನ್ನಂಗೀಕರಿಸುವುದರಿಂದ ಪ್ರಾದೇಶಿಕತ್ವ ಸಂಭವಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ರದೆಂದು ಶಂಕಿಸುತ್ತಾನೆ. 'ನಚ'—ಇತಿ. ಅಣುತ್ವಾಂಗೀಕಾರದಿಂದ ಪ್ರಾದೇಶಿಕತ್ವ ಸಂಗತವಾದರೂ ಸ್ಥೌಲ್ಯಾದಿಪ್ರತೀತಿ ಸಂಗತವಾಗಲಾರದು.

ನಚ ವಿಜ್ಞಾನಾತ್ಮಭಾಷಿಣಾಂ ನೈಷ ದೋಷಃ। ವಿಶುದ್ಧಸಾವಯವತ್ವಾಭಾವಾದಿತಿ ಗಣನೀಯಮ್। ಯಃ ಸುಷುಪ್ತಃ ಸೋಽಹಂ ಜಾಗರ್ಮೀತಿ ಸ್ಥಿರಗೋಚರಸ್ಯಾಹಮುಲ್ಲೇಖಸ್ಯ ಕ್ಷಣಭಂಗಿವಿಜ್ಞಾನಗೋಚರತ್ವೇ ಅತಸ್ಮಿನ್ ತದ್ಬುದ್ಧಿರೂಪ ಮಿಥ್ಯಾಧ್ಯಾಸಸ್ಯ ತದವಸ್ಥಾನಾತ್। ತದನೇನ ಕೃಶೋಽಹಂ ಕೃಷ್ಣೋಽಹಮಿತ್ಯಾದೀನಾಂ ಪ್ರಖ್ಯಾನಾನಾಂ ಬುದ್ಧ್ಯೈಕ್ಯ ಸರೂಪತಾಖ್ಯಾನೇನ ಔಪಚಾರಿಕತ್ವಂ ಪ್ರತ್ಯಾಖ್ಯಾತಮ್। ತದ್ವ್ಯಾಪಕ ಭೇದಭಾನಾಸಂಭವಸ್ಯ ಪ್ರಾಗೇವ ಪ್ರಪಂಚಿತತ್ವಾತ್। ತಥಾ ಚ ಪ್ರಯೋಗಃ— ವಿಮತಂ ಶಾಸ್ತ್ರಂ ವಿಷಯಪ್ರಯೋಜನಸಹಿತ ಮಾವಿದ್ಯಕಬಂಧನಿವರ್ತಕತ್ವಾತ್। ಸುಪ್ತೋತ್ಥಿತಭೇದವತ್। ಯಥಾ ಸ್ವಪ್ನಾವಸ್ಥಾಯಾಂ ಮಾಯಾಪರಿಕಲ್ಪಿತಯೋಷಾದಿ ಕೃತಬಂಧ ನಿವರ್ತಕಸ್ಯ ಸುಪ್ತೋತ್ಥಿತಬೋಧಸ್ಯ ಸುಪ್ತಬೋಧೇನಾನಿಶ್ಚಯಾತ್। ಸ್ವಪ್ನಮಾಯಾವಿಜೃಂಭಿತಾನರ್ಥನಿವೃತ್ತಿಃ ಪ್ರಯೋಜನಮ್॥

ವಿಜ್ಞಾನಾತ್ಮವಾದಿಗಳು ಬೌದ್ಧರು. ಬೌದ್ಧಮತದಲ್ಲಿ ವಿಜ್ಞಾನವೇ ಆತ್ಮಾ; ಜ್ಞಾನವು ಸಾಕಾರವಾದುದರಿಂದ ಆಧ್ಯಾತ್ಮಿಕದೇಹಾದ್ಯಾಕಾರನು ನಾನು ಎಂದು ಪ್ರತೀತವಾಗುತ್ತದೆ. ಇದರಿಂದ ಜೀವಾತ್ಮನಿಗೆ ಪ್ರಾದೇಶಿಕತ್ವ, ಸ್ಥೂಲತ್ವಾದಿ ಧರ್ಮಗಳೆಲ್ಲವೂ ಸಂಗತವಾಗುವುದರಿಂದ ದೋಷಕ್ಕೆ ಅವಕಾಶವಿರುವುದಿಲ್ಲ. ಹಿಂದಿನಂತೆ ಶರೀರಾವಯವಚ್ಛೇದಾದಿಗಳಿಂದ ಅವನಿಗೆ ಚ್ಛೇದಪ್ರಾಪ್ತಿಯೂ ಆಗುವುದಿಲ್ಲ. ವಿಜ್ಞಾನವು ಪ್ರತಿಕ್ಷಣದಲ್ಲಿ ಭೇದಹೊಂದುತ್ತದೆ. ಯಾವಾಗ ಹೀಗೆ ಶರೀರಸ್ಥಿತಿ ಇರುತ್ತದೆಯೋ ಹಾಗೆ ವಿಜ್ಞಾನಾಕಾರವಿರುತ್ತದೆ. ಶರೀರಾದ್ಯವಯವಸಮಾನಗಳಾದ ವಿಜ್ಞಾನದ ಅವಯವಗಳೂ ವಿಶುದ್ಧವಾಗಿರುವುದಿಲ್ಲ. ಮೂರ್ತವಾದ ಪರಮಾಣುಸಂಘಾತವೇ ಶರೀರ. ವಿಜ್ಞಾನಾದಿಗಳು ಆಂತರವಾದ ಸ್ಕಂಧಸಂಘಾತಗಳು. ಅದು ಕಲ್ಪನಾಮಯವಾದುದರಿಂದ ಸ್ವಪ್ನಾದಿವಸ್ತುಸದೃಶವಾಗಿರುತ್ತದೆ. ಆದುದರಿಂದ ಅದರ ಅವಯವಗಳು ಅನ್ಯೋನ್ಯವಾಗಿ ಬೇರೆ ಬೇರೆಯಾಗಿ ಸಿದ್ಧವಾಗಿರುವುದಿಲ್ಲ. ಅವಯವಾಂತರಾನಧೀನೋತ್ಪತ್ತ್ಯಾದಿಗಳುಳ್ಳದ್ದು ವಿಶುದ್ಧವೆನಿಸುತ್ತದೆ. ಇವರ ಮತದಲ್ಲಿಯೂ ಅಹಂಪ್ರತ್ಯಯವು ಮುಖ್ಯವಾಗಿಲ್ಲವೆಂಬುದನ್ನು ತೋರಿಸುತ್ತಾನೆ.

"ಯಃ ಸುಷುಪ್ತಃ" — ಇತಿ. ಅಸ್ಥಿರನಲ್ಲಿ ಸ್ಥಿರತ್ವಭ್ರಾಂತಿ ಇರುವುದರಿಂದ ಅಧ್ಯಾಸವಿದ್ದೇ ಇರುತ್ತದೆಂದರ್ಥ. ವಿಜ್ಞಾನಸಂತಾನವೇ ಆತ್ಮಾ ಎಂದು ಅವರು ಅಂಗೀಕರಿಸಿರುವುದು ಸಂಗತವಾಗುವುದಿಲ್ಲ. ಸಂತಾನವು ಸಂತಾನಿಯಿಂದ ಭಿನ್ನವೇ ಅಭಿನ್ನವೇ? ಎಂಬ ವಿಕಲ್ಪವುಂಟಾಗಿ ಒಂದೂ ಸರಿಯಾಗುವುದಿಲ್ಲ. "ತದನೇನ'—ಇತಿ. ವಿಜ್ಞಾನವಾದಿಗಳಾದ ಬೌದ್ಧರಲ್ಲಿ ಕೆಲವರು ವಿಜ್ಞಾನಕ್ಕಿಂತ ಬೇರೆಯಾಗಿ ಯಾವತತ್ತ್ವವೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲವೆಂದು ಅಂಗೀಕರಿಸುತ್ತಾರೆ. ಬುದ್ಧಿಯೇ ಗ್ರಾಹ್ಯಗ್ರಾಹಕಾಕಾರವುಳ್ಳದ್ದಾಗಿ ತನಗೆ ಸಮವಾದ ಆಕಾರವುಳ್ಳ ಹೊರಗಿನ ಘಟಾದಿಗಳನ್ನು ತನ್ನಿಂದ ಭಿನ್ನವಾಗಿ ಕಲ್ಪಿಸುತ್ತದೆ. ಇದನ್ನೇ ಅವರು "ಅವಿಭಾಗೋಽಪಿ ಬುದ್ಧ್ಯಾತ್ಮಾ ವಿಪರ್ಯಾಸಿತದರ್ಶನೈಃ । ಗ್ರಾಹ್ಯ ಗ್ರಾಹಕಸಂವಿತ್ತಿಭೇದವಾನಿವ ಲಕ್ಷ್ಯತೇ" ಎಂದು ವಿವರಿಸಿರುತ್ತಾರೆ ಇದರಿಂದ 'ಸ್ಥೂಲೋಽಹಂ' ಇತ್ಯಾದ್ಯಹಂಪ್ರತ್ಯಯವು ಔಪಚಾರಿಕವೆಂದು ಅವರ ಸಿದ್ಧಾಂತ. 'ಪ್ರತ್ಯಾಖ್ಯಾತಂ'—ಇತಿ. ಇವರಸಿದ್ಧಾಂತವೂ ನಿರಸ್ತವಾಗುತ್ತದೆ. ಔಪಚಾರಿಕಸ್ಥಲದಲ್ಲಿ ಭೇದಭಾನ ಅವಶ್ಯವಿರಬೇಕು. ಇವರಮತದಲ್ಲಿ ವಾಸ್ತವಭೇದಸಂಗತವಾಗುವುದಿಲ್ಲ. ವಿಜ್ಞಾನಾತಿರಿಕ್ತವಾಗಿ ವಾಸ್ತವಿಕವಾದ ಪದಾರ್ಥವೇ ಅವರ ಮತದಲ್ಲಿ ಇಲ್ಲದಿರುವಾಗ ಭೇದ ಹೇಳಲು ಸಾಧ್ಯವಿಲ್ಲ.

ಇಲ್ಲಿಯವರೆಗೆ ಹೇಳಿದ ಗ್ರಂಥದಿಂದ ಅಹಂಪ್ರತ್ಯಯಕ್ಕೆ ಅಧ್ಯಸ್ತಾತ್ಮವಿಷಯುತ್ವವು ಸಿದ್ಧವಾಗುವುದರಿಂದ ಅಂತಹ ಅಧ್ಯಾಸನಿವೃತ್ತಿಯೇ ಪ್ರಯೋಜನವಾಗುವುದರಿಂದಲೂ, ಆತ್ಮರೂಪಕ್ಕೆ ಸಂದಿಗ್ಧವಿಷಯತ್ವವಿರುವುದರಿಂದಲೂ ವೇದಾಂತಶಾಸ್ತ್ರವು ಆರಂಭಣೀಯವೆಂದು ಉಪಸಂಹಾರ ತೋರಿಸುತ್ತಾನೆ. 'ತಥಾಚ'—ಇತಿ. ಅವಿದ್ಯಕಬಂಧನಿವರ್ತಕವಾಗುವುದರಿಂದ ಅಂದರೆ ಅನಾದ್ಯವಿದ್ಯಾಮೂಲಕವಾದ ಯಾವ ಸಂಸಾರಬಂಧವಿದೆಯೋ ಅದನ್ನು ನಿವೃತ್ತಿಪಡಿಸುವುದರಿಂದ ವೇದಾಂತಶಾಸ್ತ್ರವು ವಿಷಯಪ್ರಯೋಜನಗಳಿಂದ ಕೂಡಿರುತ್ತದೆ. ಸುಪ್ತೋತ್ಥಿತಬೋಧವೆಂಬುದು ದೃಷ್ಟಾಂತ. ಸ್ವಪ್ನಾವಸ್ಥೆಯಲ್ಲಿ ಮಾಯಾಕಲ್ಪಿತವಾದ ಸ್ತ್ರೀಕೃತವಾದ ಬಂಧನಿರುತ್ತದೆ. ಸುಪ್ತೋತ್ಥಿತಬೋಧವು ಇದಕ್ಕೆ ನಿವರ್ತಕವಾಗುತ್ತದೆ. ಮಂದಿರಮಧ್ಯದಲ್ಲಿ ಸುಖದಿಂದ ಹಾಸಿಗೆಯಲ್ಲಿ ಇರುವ ಶರೀರವೇ ಇದಕ್ಕೆ ವಿಷಯ. ಸುಪ್ತಬೋಧದಿಂದ (ನಿದ್ರೆಯಲ್ಲಿಲ್ಲದಿರುವುದರಿಂದ) ಅದಕ್ಕೆ ಸಂಶಯವೂ, ಸ್ವಪ್ನಮಾಯಾವಿಜೃಂಭಿತಾರ್ಥನಿವೃತ್ತಿಯು ಪ್ರಯೋಜನವಾಗಿಯೂ ಇರುತ್ತದೆ.

ಏವಂ ಮನನಾದಿಜನ್ಯಪರೋಕ್ಷಜ್ಞಾನದ್ವಾರೇಣ ಆಧ್ಯಾಸಿಕ ಕರ್ತೃತ್ವಬೋಧಕತ್ವಾತ್ತ್ವಾದ್ಯನರ್ಥನಿಷೇಧಕಸ್ಯ ಶಾಸ್ತ್ರಸ್ಯ ಸಚ್ಚಿದಾನಂದೈಕರಸ ಸಂಪ್ರತ್ಯಗಾತ್ಮಭೂತಂ ಬ್ರಹ್ಮ ವಿಷಯಃ । ತಸ್ಯಾಹಮನುಭವೇನಾನಿಶ್ಚಯಾತ್ । ಆಧ್ಯಾಸನಿವೃತ್ತಿಃ ಪ್ರಯೋಜನಮ್ । ತಥಾ ಚಾಫಲತ್ವಾದಿತಿ ಹೇತುರಸಿದ್ಧ ಇತಿ ಸಿದ್ಧಮ್ ! ತದುಕ್ತಮ್—
ಶ್ರುತಿಗಮ್ಯಾತ್ಮತತ್ತ್ವಂತು ನಾಹಂಬುದ್ಧ್ಯಾವಗಮ್ಯತೇ ॥
ಅಪಿ ಖೇ ಕಾಮತೋ ನೋಹಾ ನಾತ್ಮನ್ಯಸ್ತವಿಪರ್ಯಯೇ ॥ಇತಿ॥
ಇತೋಽಯಮಸಂದಿಗ್ಧತ್ವಾದಿತಿ ಹೇತುರಪ್ಯಸಿದ್ಧ ಇತಿ ಸಿದ್ಧಮ್ ॥

ಅಫಲತ್ವ ಹೇತುವಿನಿಂದ ಬ್ರಹ್ಮ ವಿಚಾರ್ಯಸ್ಥಾನಹೊಂದುವುದಿಲ್ಲವೆಂದು ಪೂರ್ವಪಕ್ಷಿಯು ಹಿಂದೆ ಸಾಧಿಸಿದ್ದನು. ಆ ಹೇತುವೇ ಅಸಿದ್ಧವಾಗುತ್ತದೆಂದು ತಿಳಿಸುತ್ತಾನೆ. 'ತಥಾಚ'—ಇತಿ. ಮನನಾದಿಗಳಿಂದ ಪರೋಕ್ಷಜ್ಞಾನವುಂಟಾಗುತ್ತದೆ. ಕರ್ತೃತ್ವಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧರ್ಮಗಳು ಆರೋಪಿತಗಳಾದುದರಿಂದ ಆಧ್ಯಾಸಿಕಗಳಾಗುತ್ತವೆ. ಇಂತಹ ಅನರ್ಥಗಳನ್ನು ನಿಷೇಧಿಸುವ ವೇದಾಂತಶಾಸ್ತ್ರಕ್ಕೆ ಬ್ರಹ್ಮವೇ ವಿಷಯ. ಅದಕ್ಕೆ ಅಹಮನುಭವದಿಂದ ಸಂಶಯವಿರುತ್ತದೆ. ಅಧ್ಯಾಸನಿವೃತ್ತಿಯೇ ಪ್ರಯೋಜನವಿರುತ್ತದೆ 'ಶ್ರುತಿ'— ಇತಿ. ಶ್ರುತಿಮಾತ್ರದಿಂದ ತಿಳಿಯಲ್ಪಡುವ ಆತ್ಮತತ್ತ್ವವು ಅಹಂಪ್ರತ್ಯಯವೇದ್ಯವಾಗುವುದಿಲ್ಲ. ಅಹಂಕಾರಾತ್ಮರಿಗೆ ತಾದಾತ್ಮ್ಯಧ್ಯಾಸಮೂಲಕವಾಗಿ ಅಹಂಪ್ರತ್ಯಯವುಂಟಾಗುತ್ತದೆ. ಆತ್ಮನು ಪ್ರತ್ಯಕ್ಷವಿಷಯನಲ್ಲವೆಂದರೂ ಆಗ ಆಕಾಶದಲ್ಲಿಯೆಂಬಂತೆ ಯಾದೃಚ್ಛಿಕವಾದ ಮೋಹ ಉಂಟಾಗುತ್ತದೆ. ಮಿಥ್ಯಾಜ್ಞಾನರಹಿತನಾದ ಆತ್ಮನಲ್ಲಿ ಎಂದೂ ಮೋಹಕ್ಕೆ ಆಸ್ಪದವಿಲ್ಲವೆಂದರ್ಥ. ಇದರಿಂದ ಹಿಂದೆ ಪೂರ್ವಪಕ್ಷಿಯು ಪ್ರಯೋಗಿಸಿದ 'ವಿಮತಂ—ಅಜಿಜ್ಞಾಸ್ಯಂ—ಅಸಂದಿಗ್ಧತ್ವಾತ್' ಎಂಬ ಅನುಮಾನದಲ್ಲಿ ಹೇಳಿದ ಅಸಂದಿಗ್ಧತ್ವರೂಪ ಹೇತುವೂ ಅಸಿದ್ಧವಾಗುತ್ತದೆ.

ಯದ್ಯಪಿ ಸರ್ವಃ ಪ್ರಾಣೀ ಪ್ರತ್ಯಗಾತ್ಮಾಸ್ತಿತ್ವಂ ಪ್ರತ್ಯೇತಿ-ಅಹಮಸ್ಮೀತಿ। ನ ಹಿ ಕಶ್ಚಿದಪಿ ನಾಹಮಸ್ಮೀತಿ ವಿಪ್ರತಿಪದ್ಯತೇ । ಪ್ರತ್ಯಗಾತ್ಮೈವ ಬ್ರಹ್ಮ "ತತ್ತ್ವಮಸಿ" (ಛಾ- ೬ । ೮ । ೭) ಇತಿ ಸಾಮಾನಾಧಿಕರಣ್ಯಾತ್ । ತಸ್ಮಾದಾತ್ಮತತ್ತ್ವಮಸಂದಿಗ್ಧಂ ಸಿದ್ಧಮ್ । ತಥಾಪಿ ಧರ್ಮಿಂ ಪ್ರತಿ ವಿಪ್ರತಿಪನ್ನಾ ಬಹುವಿಧಾ ಇತಿ ನ್ಯಾಯೇನ ವಿಶೇಷಪ್ರತಿಪತ್ತಿರುಪಪದ್ಯತ ಏವ । ತಥಾ ಹಿ । ಚೈತನ್ಯವಿಶಿಷ್ಟಂ ದೇಹಮಾತ್ಮಾ ಇತಿ ಲೋಕಾಯತಾ ಮನ್ಯಂತೇ । ಇಂದ್ರಿಯಾಣ್ಯಾತ್ಮೇತ್ಯನ್ಯೇ । ಅಂತಃಕರಣಮಾತ್ಮೇತ್ಯಪರೇ । ಕ್ಷಣಭಂಗುರಂ ಸಂತನ್ಯಮಾನಂ ವಿಜ್ಞಾನಮಾತ್ಮೇತಿ ಬೌದ್ಧಾ ಬುಧ್ಯಂತೇ । ದೇಹಪರಿಮಾಣ ಆತ್ಮೇತಿ ಜೈನಾ ಜಿನಾಃ ಪ್ರತಿಜಾನತೇ । ಕರ್ತೃತ್ವಾದಿವಿಶಿಷ್ಟಃ ಪರಮೇಶ್ವರಾದ್ಭಿನ್ನಃ ಜೀವಾತ್ಮೇತಿ ನೈಯಾಯಿಕಾದಯೋ ವರ್ಣಯಂತಿ । ದ್ರವ್ಯಬೋಧಸ್ವಭಾವ ಮಾತ್ಮೇತ್ಯಾಚಾರ್ಯಾಃ ಪರಿಚಕ್ಷತೇ । ಭೋಕ್ತೈವ ಕೇವಲಂ ನ ಕರ್ತೇತಿ ಸಾಂಖ್ಯಾಃ ಸಂಗಿರಂತೇ । ಚಿದ್ರೂಪಃ ಕರ್ತೃತ್ವಾದಿರಹಿತಃ ಪರಸ್ಮಾದಭಿನ್ನಃ ಪ್ರತ್ಯಗಾತ್ಮೇತ್ಯೌಪನಿಷದಾ ಭಾಷಂತೆ । ಏವಂ ಪ್ರಸಿದ್ಧೇ ಧರ್ಮಿಣಿ ವಿಶೇಷತೋ ವಿಪ್ರತಿಪತ್ತೇಸ್ತದ್ವಿಶೇಷಸಂಶಯೋ ಯುಜ್ಯತೇ । ತಥಾ ಚ ಸಂದೇಹಸಂಭವಾತ್ ಜಿಜ್ಞಾಸ್ಯತ್ವಂ ಬ್ರಹ್ಮಣಃ ಸಿದ್ಧಮ್ । ತದಿತ್ಥಂ ಬ್ರಹ್ಮಣೋ ವಿಚಾರ್ಯತ್ವಸಂಭವೇನ ತದ್ವಿಚಾರಾತ್ಮಕಂ ಬ್ರಹ್ಮಮೀಮಾಂಸಾಶಾಸ್ತ್ರಮಾರಂಭಣೀಯಮಿತಿ ಯುಕ್ತಂ। ಜನ್ಮಾದ್ಯಸ್ಯ ಯತಃ (ಬ್ರಾ-ಸೂ- ೧-೧-೨) ಇತ್ಯಾದಿ ಸರ್ವಸ್ಯ ಶಾಸ್ತ್ರಸ್ಯೈತದ್ವಿಚಾರಾಪೇಕ್ಷಾತ್ವಾತ್ ಶಾಸ್ತ್ರಪ್ರಥಮಾಧ್ಯಾಯಸಂಗತ ಮಿದಮಧಿಕರಣಮ್ ॥

ಆತ್ಮವಿಷಯಕಸಂದೇಹವನ್ನು ತೋರಿಸುತ್ತಾನೆ. "ಯದ್ಯಪಿ—" ಇತಿ. 'ನಾನು ಇದ್ದೇನೆ' ಎಂಬ ಜ್ಞಾನವು ಪ್ರಾಣಿಸಾಮಾನ್ಯಕ್ಕೂ ಇರುತ್ತದೆ. ಆತ್ಮಾಸ್ತಿತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಲ್ಲಿ ಯಾರಿಗೂ ಸಂದೇಹವಿಲ್ಲ. ಹೀಗಿರುವಾಗ ಅಸಂದಿಗ್ಧತ್ವಹೇತುವು ಅಸಿದ್ಧ ಹೇಗೆ? ಅಂದರೆ ಅವನಿಗೆ ಧರ್ಮವಿಷಯದಲ್ಲಿ ವಿಪ್ರತಿಪತ್ತಿ ನಾನಾರೀತಿಯಾಗಿರುವುದರಿಂದ ತದ್ವಿಶೇಷಜ್ಞಾನವು ಅಪೇಕ್ಷಿತವಾಗುವುದರಿಂದ ವಿಚಾರಮಾಡಬೇಕಾಗಿದೆ. ಚೈತನ್ಯ ವಿಶಿಷ್ಟವಾದ ಶರೀರವೇ ಆತ್ಮನೆಂದು ಚಾರ್ವಾಕರ ಮತ. ಅವರಲ್ಲಿಯೇ ಕೆಲವರು ಇಂದ್ರಿಯಗಳೇ ಆತ್ಮನೆಂದೂ ಅಂತಃಕರಣವೇ ಆತ್ಮನೆಂದು ಅಂಗೀಕರಿಸಿರುತ್ತಾರೆ. ಕ್ಷಣ ಭಂಗುರವಾದ ವಿಜ್ಞಾನಸಂತಾನವೆಂದು ಬೌದ್ಧರ ಮತ. ದೇಹಪರಿಮಾಣವುಳ್ಳವನೆಂದು ಜೈನರು ಹೇಳುತ್ತಾರೆ. ಈಶ್ವರನಿಗಿಂತ ಬೇರೆಯಾಗಿ ಕರ್ತೃತ್ವಾದಿಧರ್ಮವಿಶಿಷ್ಟ ನಾದವನು ಜೀವಾತ್ಮನೆಂದು ತಾರ್ಕಿಕರಮತ. ದ್ರವ್ಯಸ್ವಭಾವ, ಬೋಧಸ್ವಭಾವನು ಆತ್ಮಾ ಎಂದು ಮೀಮಾಂಸಕಭಟ್ಟಾಚಾರ್ಯಮತ. ಜ್ಞಾನಾಜ್ಞಾನಸ್ವರೂಪನೆಂದು ತಾತ್ಪರ್ಯ.

'ಆತ್ಮಾನಂದಮಯಃ' ಎಂಬಲ್ಲಿ ಪ್ರಾಚುರ್ಯಾರ್ಥದಲ್ಲಿ ಮಯಟೆಂದು ಅಂಗೀಕರಿಸು ವುದರಿಂದ ಲೇಶತಃ ವಿರೋಧ್ಯಂಶವೂ ಇದೆಯೆಂದು ವ್ಯಕ್ತವಾಗುತ್ತದೆ. ದ್ರವ್ಯಾಂಶವೇ ವಿರೋಧ್ಯಂಶ. ನಿದ್ರೆಮಾಡಿ ಎದ್ದವನು "ಸುಖವಾಗಿ ನಾನು ನಿದ್ರಿಸಿದೆನು, ನಿದ್ರೆಯಲ್ಲಿ ಏನೂ ತಿಳಿಯಲಿಲ್ಲ" ಎಂದು ಹೇಳುತ್ತಾನೆ. ಇದರಿಂದ ಸುಷುಪ್ತಿಯಲ್ಲಿ ಪ್ರಕಾಶಾಂಶ ಸಿದ್ಧವಾಗುತ್ತದೆ. ಏನೂ ತಿಳಿಯಲಿಲ್ಲವೆಂಬುದರಿಂದ ಅಪ್ರಕಾಶರೂಪವಾದ ದ್ರವ್ಯಾಂಶ ಸಿದ್ಧವಾಗುತ್ತದೆ. ಎಂದು ಅವರ ಅಭಿಪ್ರಾಯ. ಭೋಕ್ತೃವಾದವನೆಂದು ಸಾಖ್ಯರ ಸಿದ್ಧಾಂತ. ಅವರ ಮತದಲ್ಲಿ ಪ್ರಕೃತಿ ಕರ್ತೃ ಆಗುತ್ತದೆ. ಕರ್ತೃತ್ವಾದಿರಹಿತನಾಗಿ ಚಿದ್ರೂಪನಾಗಿ ಪರಮೇಶ್ವರನಿಂದ ಅಭಿನ್ನನಾಗಿರುವವನೇ ಆತ್ಮನೆಂದು ಅದ್ವೈತ ವೇದಾಂತಮತ. ಹೀಗೆ ಪ್ರಸಿದ್ಧವಾದ ಧರ್ಮಿಯಲ್ಲಿ ವಿಶೇಷವಿಪ್ರತಿಪತ್ತಿಯುಂಟಾಗು ವುದರಿಂದ ಸಂಶಯು ಸ್ವಾಭಾವಿಕವಾಗಿ ಬರುತ್ತದೆ. ಇದರಿಂದ ಬ್ರಹ್ಮನಿಗೆ ಜಿಜ್ಞಾಸ್ಯತ್ವ ಸಿದ್ಧವಾಗುತ್ತದೆ. ವಿಚಾರ್ಯತ್ವಸಿದ್ಧವಾದಮೇಲೆ ತದ್ವಿಚಾರಾತ್ಮಕವಾದ ಬ್ರಹ್ಮ ಮೀ ಮಾಂಸಾಶಾಸ್ತ್ರವು ಆರಂಭಿಸಲ್ಪಡುವುದು ಯುಕ್ತವಾಗುತ್ತದೆ. 'ಜನ್ಮಾದಿ—' ಇತಿ. ಈ ತೋರತಕ್ಕ ಪ್ರಪಂಚದ ಉತ್ಪತ್ತಿಸ್ಥಿತಿಲಯಗಳು ಯಾರಿಂದ ಉಂಟಾಗಿದೆಯೋ ಅದೇ ಬ್ರಹ್ಮವೆಂದು ಸೂತ್ರಾರ್ಥ. ಸಕಲವೇದಾಂತವಾಕ್ಯಗಳಿಗೂ ಬ್ರಹ್ಮನಲ್ಲಿ ತಾತ್ಪರ್ಯವೆಂದು ಸಮನ್ವಯವೆಂಬ ಪ್ರಥಮಾಧ್ಯಾಯದಲ್ಲಿ ವಿಷಯುವಾಗುತ್ತದೆ. ಇದರಿಂದ ಬ್ರಹ್ಮವಿಚಾರಾ ರಂಭಬೋಧಕವಾದ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮಾಧಿಕರಣವು ಪ್ರಥಮಾಧ್ಯಾಯದಲ್ಲಿ ಸಂಗತವಾಗುತ್ತದೆ.

ನನ್ವಿತ್ಥಂಭೂತೇ ಬ್ರಹ್ಮಣಿ ಕಿಂ ಪ್ರಮಾಣಂ ಪ್ರತ್ಯಕ್ಷಮನುಮಾನಮಾಗಮೋ ವಾ । ನ ಕದಾಚಿತ್ತತ್ರ ಪ್ರತ್ಯಕ್ಷಂ ಕ್ರಮತೇ । ನಾಪ್ಯನುಮಾನಮ್ । ವ್ಯಾಪ್ತಸ್ಯ ಲಿಂಗಸ್ಯಾ ಭಾವಾತ್ । ನಾಪ್ಯಾಗಮಃ । ಯತೋವಾಚೋ ನಿವರ್ತಂತೇ (ತೈ-೨-೧-೮) ಇತಿ ಶ್ರುತ್ಯೈವಾಗಮಗಮ್ಯತ್ವನಿಷೇಧಾತ್ । ಉಪಮಾನಾದಿಕಮಶಕ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಂಕವಮ್ । ನಿಯತವಿಷಯತ್ವಾತ್ । ತಸ್ಮಾತ್ ಬ್ರಹ್ಮಣಿ ಪ್ರಮಾಣಂ ನ ಸಂಭವತೀತಿ । ಚೇತ್– ಮೈನಂ ವೋಚಃ । ಪ್ರತ್ಯಕ್ಷಾದ್ಯಸಂಭವೇಪ್ಯಾಗಮಸ್ಯ ಸತ್ತ್ವಾತ್ । ಯತೋ ವಾಚೋ ನಿವರ್ತಂತೇ ಇತಿ ವಾಗ್ಗೋಚರತ್ವನಿಷೇಧಾತ್ ಕಥಮೇತದಿತಿ ಚೇತ್– ಶ್ರುತಿರೇವ ನಿಷೇಧತಿ ವೇದಾಂತವೇದ್ಯತ್ವಂ ಬ್ರಹ್ಮಣಃ ಶ್ರುತಿರೇವ ವಿಧತ್ತೇ । ನ ಹಿ ವೇದಶ್ರುತಿಪ್ರತಿಪಾದಿತೇಽರ್ಥೇಽನುಪಪನ್ನೇ ವೈದಿಕಾನಾಂ ಬುದ್ಧಿಃ ಖಿದ್ಯತೇ । ಅಪಿತು ತದುಪಪಾದನಮಾರ್ಗಮೇವ ವಿಚಾರಯತಿ । ತಸ್ಮಾದುಭಯಮಪಿ ಪ್ರತಿಪಾದನೀಯಮ್ ।

ಬ್ರಹ್ಮನು ಅತೀಂದ್ರಿಯನಾದುದರಿಂದ ಪ್ರತ್ಯಕ್ಷಪ್ರಮಾಣವಿಲ್ಲ. ಅಗ್ನಿವ್ಯಾಪ್ತವಾದ ಧೂಮರೂಪಹೇತುವಿರುವಂತೆ ಬ್ರಹ್ಮವ್ಯಾಪ್ತವಾದ ಯಾವ ಲಿಂಗವೂ ಇಲ್ಲದಿರುವುದರಿಂದ ಅನುಮಾನಪ್ರಮಾಣವೂ ಇಲ್ಲ. "ಯತೋ ವಾಚೋ—" ಇತ್ಯಾದ್ಯಾಗಮಗಮ್ಯತ್ವ ನಿಷೇಧತೋರುವುದರಿಂದ ಆಗಮಪ್ರಮಾಣವೂ ಇಲ್ಲ. ಸದೃಶವಸ್ತು ಬೇರೊಂದಿದಿರರುವುದರಿಂದ ಉಪಮಾನಾದಿಗಳಿಗೆ ಅವಕಾಶವಿಲ್ಲ. ಹೀಗೆ ಬ್ರಹ್ಮನಲ್ಲಿ ಯಾವ ಪ್ರಮಾಣವೂ ಇಲ್ಲವೆಂದು ಪೂರ್ವಪಕ್ಷ. ಆಗಮಪ್ರಮಾಣವಿದೆಯೆಂದು ಸಿದ್ಧಾಂತ. "ಯತೋ ವಾಚಃ —' ಇತ್ಯಾದಿ ಶ್ರುತಿ ನಿಷೇಧಿಸಿದರೂ 'ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ' (ಬ್ರ–೩।೯।೨೬) ಇತ್ಯಾದಿ ಶ್ರುತಿಗಳಲ್ಲಿ ಪರಮಾತ್ಮನು ಉಪನಿಷತ್ಪ್ರತಿಪಾದ್ಯನೆಂದೂ ಹೇಳಿವೆ. 'ಆನಂದೋ ಬ್ರಹ್ಮ' 'ಯಃ ಸರ್ವಜ್ಞಃ' ಇತ್ಯಾದಿ ಶ್ರುತಿಗಳು ಅವನನ್ನು ಪ್ರತಿಪಾದಿಸುತ್ತವೆ. ಒಂದು ಕಡೆ ಶ್ರುತಿಪಾದಿತಾರ್ಥವು ಅನುಪಪನ್ನವಾದಾಗ ವೈದಿಕರ ಬುದ್ಧಿಯು ಖೇದಗೊಳ್ಳದೆ ಉಪಪಾದನಮಾರ್ಗವನ್ನು ಹುಡುಕುತ್ತದೆ. 'ತಸ್ಮಾತ್—' ಇತಿ. ಆದುದರಿಂದ ಎರಡು ವಾಕ್ಯಗಳಿಗೂ ಏಕವಾಕ್ಯತೆಯನ್ನು ಹೊಂದಿಸಬೇಕೆಂದರ್ಥ.

ವಿಷಯತ್ವನಿಷೇಧಕಾನಿ ವಾಕ್ಯಾನಿ ವಾಕ್ಯಜನ್ಯವೃತ್ತಿವ್ಯಕ್ತಸ್ಫುರಣಲಕ್ಷಣ ಫಲಾಸಂಭವ ವಿವಕ್ಷಯಾ ಪ್ರವೃತ್ತಾನಿ । ವಿಷಯತ್ವಬೋಧಕಾನಿ ತು ವೃತ್ತಿಜನ್ಯಾವರಣ ಭಂಗ ಲಕ್ಷಣಫಲಸಂಭವವಿವಕ್ಷಯಾ । ತದುಕ್ತಂ ಭಗವದ್ಭಿಃ—

ಅನಾಧೇಯಫಲತ್ವೇನ ಶ್ರುತೇರ್ಬ್ರಹ್ಮ ನ ಗೋಚರಃ ।
ಪ್ರಮೇಯಂ ಪ್ರಮಿತೌ ತು ಸ್ಯಾದಾತ್ಮಾಕಾರ ಸಮರ್ಪಣಾತ್ ॥ ಇತಿ ॥
ನ ಪ್ರಕಾಶ್ಯಂ ಪ್ರಮಾಣೇನ ಪ್ರಕಾಶೋ ಬ್ರಹ್ಮಣಃ ಸ್ವಯಮ್ ।
ತಜ್ಜನ್ಯಾವೃತ್ತಿ ಭಂಗತ್ವಾತ್ ಪ್ರಮೇಯಮಿತಿ ಗೀಯತೇ ॥ ಇತಿ ಚ

ಏಕವಾಕ್ಯತೆಯನ್ನು ತೋರಿಸುತ್ತಾನೆ. 'ವಿಷಯತ್ವಂ'—ಇತಿ. ಯಾವಾಗ ಘಟಾದಿಜ್ಞಾನವಾಗುತ್ತದೆಯೋ ಆಗ ಬುದ್ಧಿರೂಪವಾದ ಅಂತಃಕರಣ ವಿಶೇಷವು ತನ್ನಲ್ಲಿರುವ ಚಿದಾಭಾಸಸಹಿತವಾಗಿ ಘಟಾದಿವಿಷಯವನ್ನು ವ್ಯಾಪಿಸುತ್ತದೆ. ಬುದ್ಧಿವ್ಯಾಪ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಂದ ಅಜ್ಞಾನರೂಪವಾದ ಆವರಣವು ನಾಶವಾಗುತ್ತದೆ. ಚಿದಾಭಾಸವ್ಯಾಪ್ತಿಯಿಂದ ಘಟವು ಪ್ರಕಾಶಿಸುತ್ತದೆ. (ಜಡವಾದ ಘಟಕ್ಕೆ ಸ್ವಯಂಪ್ರಕಾಶವಿರುವುದಿಲ್ಲ.) ಇದನ್ನೇ ಕಾರಿಕೆಯಲ್ಲಿ ವಿವರಿಸಿರುತ್ತಾರೆ. "ಬುದ್ಧಿತತ್ ಚಿದಾಭಾಸೌ ದ್ವಾವಪಿ ವ್ಯಾಪ್ನುತೋ ಘಟಮ್ । ತತ್ರಾಜ್ಞಾತಂ ಧಿಯಾ ನಶ್ಯೇದಾಭಾಸೇನ ಘಟಃ ಸ್ಫುರೇತ್" (ಪಂಚದಶೀ ೭।೯೧) ಜ್ಞಾನದಲ್ಲಿ ಸ್ವಾಕಾರಸಮರ್ಪಣವೇ ಸ್ಫುರಣ. ಹೀಗೆ ಆವರಣಭಂಗ, ಸ್ಫುರಣ, ಎರಡು ಫಲಗಳಾಗಿರುತ್ತವೆ. ಎಲ್ಲಿ 'ತತ್ತ್ವಮಸಿ' ಇತ್ಯಾದಿ ವಾಕ್ಯಗಳಿಂದ ಆತ್ಮಜ್ಞಾನ ವುಂಟಾಗುತ್ತದೆಯೋ ಅಲ್ಲಿ ಬುದ್ಧಿವೃತ್ತಿವ್ಯಾಪ್ತಿಯಿಂದ ಆವರಣಭಂಗರೂಪಫಲವುಂಟಾಗುತ್ತದೆ. ಆವರಣಭಂಗವಾದಾಗ ಸ್ವಯಂಪ್ರಕಾಶನಾದ ಆತ್ಮನು ತಾನಾಗಿ ಸ್ಫುರಿಸುತ್ತಾನೆ. ಇಲ್ಲಿ ಸ್ಫುರಣವು ಸ್ವಯಂ ಸಿದ್ಧವಾದುದರಿಂದ ವಾಕ್ಯಜನ್ಯಜ್ಞಾನಕ್ಕೆ ಅದು ಫಲವಾಗುವುದಿಲ್ಲ. ಈ ಅಭಿಪ್ರಾಯದಿಂದ ಆತ್ಮನಲ್ಲಿ ಜ್ಞಾನವಿಷಯತ್ವನಿಷೇದ ಮಾಡಿವೆ. ಆವರಣ ಭಂಗರೂಪಫಲವು ಸಂಭವಿಸುವುದರಿಂದ ಈ ಅಭಿಪ್ರಾಯದಿಂದ ಜ್ಞಾನವಿಷಯತ್ವ ಹೇಳಿದೆ ಯೆಂದು ತಿಳಿಯಬೇಕು.

'ಅನಾಧೇಯಃ'—ಇತಿ. ಶ್ರುತಿಯು ಸ್ವಯಂ ಸ್ಫುರಣ ಬ್ರಹ್ಮನಲ್ಲಿ ಸ್ಫುರಣರೂಪ ಫಲವನ್ನು ಹುಟ್ಟಿಸಲು ಸಮರ್ಥವಾಗದಿರುವುದರಿಂದ ಬ್ರಹ್ಮನು ಶ್ರುತಿಗೆ ಗೋಚರವಾಗುವುದಿಲ್ಲ. ಜ್ಞಾನದಲ್ಲಿ (ಪ್ರಮಿತಿ) ಸ್ವಾಕಾರಸಮರ್ಪಣದಿಂದ ಅದಕ್ಕೆ ಪ್ರಮೇಯತ್ವ ಸಿದ್ಧ ವಾಗುತ್ತದೆ. ಸ್ವಯಂಪ್ರಕಾಶನಾದುದರಿಂದ ಪ್ರಮಾಣದಿಂದ ಅವನು ಪ್ರಕಾಶ್ಯನಾಗುವುದಿಲ್ಲ. ಆವರಣಭಂಗವು ಪ್ರಮಾಣದಿಂದ ಆಗುವುದರಿಂದ ಬ್ರಹ್ಮನು ಪ್ರಮೇಯ ಅಂದರೆ ಪ್ರಮಾ ವಿಷಯನಾಗುತ್ತಾನೆ ಎಂದರ್ಥ.

ನನು ಸ್ಯಾದೇವ ಮನೋರಥೋ ಯದಿ ಸಿದ್ಧೇಽರ್ಥೇ ವೇದಸ್ಯ ಪ್ರಾಮಾಣ್ಯಂ ಸಿದ್ಧ್ಯೇತ್ ಸಂಗತಿಗ್ರಹಣಾಯತ್ತತ್ವಾತ್ ಪ್ರಾಮಾಣ್ಯನಿಶ್ಚಯಸ್ಯ ॥ ಸಂಗತಿಗ್ರಹಣಸ್ಯ ಚ ವೃದ್ಧವ್ಯವಹಾರಾಯತ್ತತ್ವಾತ್ । ವೃದ್ಧವ್ಯವಹಾರಸ್ಯ ಚ ಲೋಕೇ ಕಾರ್ಯೈಕ ನಿಯತತ್ವಾತ್ । ನ ಹ್ಯಸ್ತಿ ಸಂಭವಃ ಶಬ್ದಾನಾಂ ಕಾರ್ಯೇಽರ್ಥೇ ಸಂಗತಿಗ್ರಹಃ ಸಿದ್ಧಾರ್ಥಾಭಿಧಾಯಕತ್ವಂ ತತ್ರ ವಾ ಪ್ರಾಮಾಣ್ಯಮಿತಿ । ನಹಿ ತುರಂಗತ್ವೇ ಗೃಹೀತಸಂಗತಿಕಂ ತುರಂಗಪದಂ ಗೋತ್ವಮಾಚಷ್ಟೇ ತತ್ರ ವಾ ಪ್ರಾಮಾಣ್ಯಂ ಭಜತೇ । ತಸ್ಮಾತ್ ಕಾರ್ಯಗೃಹೀತಸಂಗತಿಕಾನಾಂ ಶಬ್ದಾನಾಂ ಕಾರ್ಯ ಏವ ಪ್ರಾಮಾಣ್ಯಮ್ ।

ಶಬ್ದಗಳಿಗೆ ಕಾರ್ಯಾರ್ಥದಲ್ಲಿಯೇ ಶಕ್ತಿಗ್ರಹವೆಂದು ಅಂಗೀಕರಿಸುವ ಮೀಮಾಂಸಕ ಮತವನ್ನನುಸರಿಸಿ ಆಶಂಕಿಸುತ್ತಾನೆ. "ನನು—" ಇತಿ. ಕರ್ತವ್ಯಂ—ಮಾಡಬೇಕು ಎಂಬ ಬುದ್ಧಿಗೆ ವಿಷಯವಾದುದೇ ಕಾರ್ಯ. ಸಂಗತಿಯೆಂದರೆ ಶಬ್ದಾರ್ಥಗಳಿಗೆ ಇರುವ ಸಂಬಂಧ. ಬಾಲಕರಿಗೆ ಮೊದಲು ವೃದ್ಧವ್ಯವಹಾರದಿಂದ ಶಕ್ತಿಗ್ರಹವುಂಟಾಗುತ್ತದೆ. 'ಗಾಮಾನಯ' (ಹಸುತಾ) ಎಂಬ ವಿಧಿವಾಕ್ಯಶ್ರವಣವಾದೊಡನೆ. ಯಾವ ಗವಾನಯನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದೆಯೋ ಅದೇ ವ್ಯವಹಾರ. ಇಲ್ಲಿ ಗವಾನಯನವು ಕಾರ್ಯತ್ವರೂಪದಿಂದ ಪ್ರತೀತವಾಗುತ್ತದೆ. ವಿಧಿವಾಕ್ಯಶ್ರವಣವಾದೊಡನೆ 'ಇದು ಮಾಡಬೇಕು' ಎಂದು ಕರ್ತವ್ಯತ್ವರೂಪದಿಂದ ಬುದ್ಧ್ಯಾರೂಢವಾಗುತ್ತದೆ. ಆಗ ಬಾಲಕನು ನೀಧಾತುವಿಗೆ ಕಾರ್ಯವಾದ ಆ ನಯನದಲ್ಲಿ ಸಂಗತಿಯನ್ನು ಗ್ರಹಿಸುತ್ತಾನೆ. 'ರಾಮನು ರಾವಣನನ್ನು ಕೊಂದನು.' ಎಂಬ ಸಿದ್ಧವಾಕ್ಯವು ಯಾವ ವ್ಯವಹಾರಕ್ಕೂ ಪ್ರಯೋಜಕವಾಗದಿರುವುದರಿಂದ ಆದರಿಂದ ಬಾಲಕನಿಗೆ ಶಕ್ತಿಗ್ರಹವೇ ಇಲ್ಲದಿರುವಾಗ ಅಂತಹ ಅರ್ಥದಲ್ಲಿ ಪ್ರಯೋಗಿಸಲ್ಪಡುವ ಶಬ್ದವು ಪ್ರಮಾಣವಾಗುವುದು ಪ್ರಮಾಣವಾಗುವುದು ಹೇಗೆ? "ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ವಾಕ್ಯಗಳು ಸಿದ್ಧಬ್ರಹ್ಮಬೋಧಕಗಳಾದುದರಿಂದ ಅವುಗಳಿಗೆ ಪ್ರಾಮಾಣ್ಯವಿರುವುದಿಲ್ಲ. ಪ್ರಾಮಾಣ್ಯನಿಶ್ಚಯವು ಸಂಗತಿಗ್ರಹಣಾಧೀನವಾಗಿರುತ್ತದೆ. ಸಂಗತಿ ಗ್ರಹಣವು ವೃದ್ಧವ್ಯವಹಾರಾಧೀನವಾಗಿದೆ. ವೃದ್ಧವ್ಯವಹಾರವು ಕಾರ್ಯಾರ್ಥಾಧೀನವಾಗಿರುತ್ತದೆ. 'ನಹ್ಯಸ್ತಿ'—ಇತಿ. ಶಬ್ದವು ಸಿದ್ಧಾರ್ಥಕಪ್ರದಿಪಾದಕವೂ ಆ ಅರ್ಥದಲ್ಲಿ ಶಬ್ದಕ್ಕೆ ಪ್ರಾಮಾಣ್ಯವೂ ಇವೆರಡೂ ಶಬ್ದಕ್ಕೆ ಕಾರ್ಯಾರ್ಥದಲ್ಲಿ ಶಕ್ತಿಗ್ರಹವಿರುವುದರಿಂದ ವಿರುದ್ಧವಾಗುತ್ತದೆ. 'ನಹಿ'—ಇತಿ. ತುರಂಗಶಬ್ದಕ್ಕೆ ತುರಂಗತ್ವದಲ್ಲಿ ಶಕ್ತಿಗ್ರಹವಿರುವುದರಿಂದ ಅದು ಗೋತ್ವವನ್ನು ಎಂದೂ ಬೋಧಿಸುವುದಿಲ್ಲ. ಮತ್ತು ಗೋತ್ವಾರ್ಥದಲ್ಲಿ ಪ್ರಮಾಣ್ಯವನ್ನು ಹೊಂದುವುದಿಲ್ಲ. ಆದುದರಿಂದ ಕಾರ್ಯಾರ್ಥದಲ್ಲಿ ಗೃಹೀತಶಕ್ತಿಕ ಪದಗಳಿಗೆ ಕಾರ್ಯದಲ್ಲಿಯೇ ಪ್ರಾಮಾಣ್ಯ ಹೇಳಬೇಕು.

ನನು ಮುಖವಿಕಾಸಾದಿಲಿಂಗಾದ್ಧರ್ಷಹೇತುಂ ಪ್ರಸಿದ್ಧಾರ್ಥಂ ಅನುಮಾಯ ಯತ್ರ ಶಬ್ದಸ್ಯ ಸಂಗತಿಗ್ರಹೋ ಯಥಾ "ಪುತ್ರಸ್ತೇಜಾತ" ಇತ್ಯಾದಿಷು ತತ್ರಾವಶ್ಯಂ ಕಾರ್ಯಮಂತರೇಣೈವ ಶಬ್ದಸ್ಯ ಸಿದ್ಧೇಽರ್ಥೇ ಪ್ರಾಮಾಣ್ಯಮಾಶ್ರೀಯತ ಇತಿ ಚೇನ್ನ, ಪುತ್ರಜನ್ಮಪದೇವಪ್ರಿಯಾಸುಖಪ್ರಸವಾದೇರನೇಕಸ್ಯ ಹರ್ಷಹೇತೋರುಪಸ್ಥಿತೇಯಮಾನತ್ವೇನ ಪರಿಶೇಷಾವಧಾರಣಾನುಪಪತ್ತೇಃ। ಪುತ್ರಸ್ತೇ ಜಾತ ಇತ್ಯಾದಿಷು ಸಿದ್ಧಾರ್ಥಪರೇಷು ಪ್ರಯೋಗೇಷು ದ್ವಾರಂದ್ವಾರಮಿತ್ಯಾದಿವತ್ಕಾರ್ಯಾಧ್ಯಾಹಾರೇಣ ಪ್ರಯೋಗೋಪಪತ್ತೇಶ್ಚ। ಶಾಸ್ತ್ರತ್ವಪ್ರಸಿದ್ಧ್ಯಾ ಚ ನ ವೇದಾಂತಾನಾಂ ಸಿದ್ಧಾರ್ಥಪರತ್ವಮ್। ಪ್ರವೃತ್ತಿನಿವೃತ್ತಿಪರಾಣಾಮೇವ ವಾಕ್ಯಾನಾಂ ಶಾಸ್ತ್ರತ್ವಪ್ರಸಿದ್ಧೇಃ। ತದುಕ್ತಂ ಭಟ್ಟಾಚಾರ್ಯೈಃ —

ಪ್ರವೃತ್ತಿರ್ವಾ ನಿವೃತ್ತಿರ್ವಾ ನಿತ್ಯೇನ ಕೃತಕೇನ ವಾ।
ಪುಂಸಾಂ ಯೇನೋಪದಿಶ್ಯೇತ ತಚ್ಛಾಸ್ತ್ರಮಭಿಧೀಯತೇ ॥ಇತಿ॥

ನ ಚೈತೇಷಾಂ ಸ್ವರೂಪಪರತ್ವೇ ಪ್ರಯೋಜನಮಸ್ತಿ। ಶ್ರುತವೇದಾಂತಾರ್ಥಸ್ಯಾಪಿ ಪುಂಸಃ ಸಾಂಸಾರಿಕಧರ್ಮಾಣಾಮನಿವೃತ್ತೇಃ। ತಸ್ಮಾದ್ವೇದಾಂತಾನಾಮಪ್ಯಾತ್ಮಾ ಜ್ಞಾತವ್ಯ ಇತಿ ಸಮಾಮ್ನಾತೇನ ವಿಧಿನೈಕವಾಕ್ಯತಾಮಾಶ್ರಿತ್ಯ ಕಾರ್ಯಪರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ಯೈವಾಶ್ರಯಣೀಯೇತಿ ಸಿದ್ಧಮ್ ! ತತಶ್ಚ ಕೇವಲ ಸಿದ್ಧರೂಪೇ ಬ್ರಹ್ಮಣಿ ವೇದಾಂತಾನಾಂ ಪ್ರಾಮಾಣ್ಯಂ ನ ಸಿಧ್ಯತೀತಿ ಚೇತ್—

ಕೆಲವು ಕಡೆ ಸಿದ್ಧವಾಕ್ಯದಿಂದಲೂ ಶಕ್ತಿಗ್ರಹವಾಗುತ್ತದೆಂದು ತೋರಿಸುತ್ತಾನೆ. "ನನು"—ಇತಿ. 'ಚೈತ್ರ ಪುತ್ರಸ್ತೇ ಜಾತಃ' (ಚೈತ್ರನೇ ನಿನಗೆ ಗಂಡುಮಗುವಾಗಿದೆ) ಎಂಬ ಸಿದ್ಧಾರ್ಥಪ್ರತಿಪಾದಕ ವಾಕ್ಯವನ್ನು ದೇವದತ್ತನು ಹೇಳಿದಾಗ ಚೈತ್ರನಿಗೆ ಮುಖ ವಿಕಾಸವುಂಟಾಗುತ್ತದೆ. ಅವನ ಮುಖವಿಕಾಸಲಿಂಗದಿಂದ ಚೈತ್ರನಿಗೆ ವಾಕ್ಯಾರ್ಥ ವಾಗಿದೆಯೆಂದು ತಿಳಿಯಬಹುದು. ದ್ರವ್ಯಪ್ರಾಪ್ತ್ಯಾದಿಗಳಿಂದಲೂ ಮುಖವಿಕಾಸವಾಗ ಬಹುದು. ಆದರೆ ಚೈತ್ರನ ಹೆಂಡತಿ ಆಸನ್ನಪ್ರಸವಳಾಗಿದ್ದಳೆಂದು ದೇವದತ್ತನು ತಿಳಿ ದುದರಿಂದ ಪುತ್ರಜನ್ಮದಿಂದಲೇ ಈ ಮುಖವಿಕಾಸವೆಂದು ನಿಶ್ಚಯವಾಗುತ್ತದೆ. ಹೀಗೆ ಸಿದ್ಧವಾಕ್ಯದಿಂದಲೂ ಕಾರ್ಯಾರ್ಥವಿಲ್ಲದಿದ್ದರೂ ಶಕ್ತಿಗ್ರಹಸಂಭವಿಸುವುದರಿಂದ ಸಿದ್ಧವಾಕ್ಯ ಗಳಿಗೆ ಪ್ರಾಮಾಣ್ಯವಿಲ್ಲವೆಂದುದು ಸಂಗತವಾಗುವುದಿಲ್ಲವೆಂದು ಇದರ ಮೇಲೆ ಆಶಂಕೆ ಬರುತ್ತದೆ. ಅದಕ್ಕೆ ಸಮಾಧಾನ ತೋರಿಸುತ್ತಾನೆ. 'ಪುತ್ರಜನ್ಮವತ್'—ಇತಿ. ಇತರ ಕಾರಣಗಳು ಸಂಭವಿಸದಿದ್ದರೆ ಮಾತ್ರ ಪರಿಶೇಷದಿಂದಪುತ್ರಜನ್ಮವೇ ಹರ್ಷಕರಣವೆಂದು ತಿಳಿಯಬಹುದು. ಆದರೆ ಇಲ್ಲಿ ಇತರ ಕಾರಣಗಳೂ ಸಂಭವಿಸಬಹುದು. ಕನ್ಯಾಜನನ ವಾದರೂ ಸುಖಪ್ರಸವವಾಗಿದೆಯೆಂದು ತಿಳಿದುದರಿಂದ ಹರ್ಷವಾಗುತ್ತದೆ. (ಒಳ್ಳೇ ಮುಹೂರ್ತದಲ್ಲಿ ಪ್ರಸವವಾಗಿದೆಯೆಂದು ಆದಿ ಪದದಿಂದ ತಿಳಿಯಬೇಕು) ಅದೂ ಅಲ್ಲದೆ 'ಪುತ್ರಸ್ತೇ ಜಾತಃ' ಎಂಬುದೂ ಸಿದ್ಧವಾಕ್ಯವಾಗುವುದಿಲ್ಲ. ವಕ್ತೃತಾತ್ಪರ್ಯದಿಂದ ದ್ವಾರಂ ಎಂದಾಗ ಪಿಧೇಹೀತ್ಯಾದಿ ಕ್ರಿಯಾಪದಗಳನ್ನು ಅಧ್ಯಾಹಾರ ಮಾಡಿಕೊಂಡಂತೆ "ತ್ವಂ ಜಾನಾಸಿ" ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ವಾಕ್ಯದಲ್ಲಿ ವಿಧಿ ಮುಖ್ಯ ವಾದುದರಿಂದ ಅದನ್ನು ಅಧ್ಯಾಹಾರಮಾಡಿಗೂಳ್ಳುವುದು ಉಚಿತವಲ್ಲವೆಂದು ಹೇಳುವುದು ನ್ಯಾಯವಲ್ಲ. ಆದುದರಿಂದ ಇಲ್ಲಿಯೂ ಕಾರ್ಯವಾಕ್ಯವೇ ಆಗುತ್ತದೆ. ತಾತ್ಪರ್ಯ ವಿದ್ದಲ್ಲಿ ವಿಧಿಬೋಧಕಪದಾಧ್ಯಾಹಾರಮಾಡಲು ಯಾವ ತೊಂದರೆಯೂ ಇರುವುದಿಲ್ಲ. ಶಾಸ್ತಿ ಅನೇನ ಇತಿ ಶಾಸ್ತ್ರಮ್.

'ಪ್ರವೃತ್ತಿರ್ವಾ'—ಇತಿ. ನಿತ್ಯವಾದ ವೇದದಿಂದ ಅಥವಾ ಕೃತಕವಾದ ಸೂತ್ರಾದಿ ಗಳಿಂದ ಪುರುಷರಿಗೆ ಪ್ರವೃತ್ತಿ, ಅಥವಾ ನಿವೃತ್ತಿಯುಂಟಾಗುತ್ತದೆ. ಹೀಗೆ ಹುಟ್ಟಿಸು ವ ವಾಕ್ಯಕ್ಕೇ ಶಾಸ್ತ್ರತ್ವವಿರುತ್ತದೆ. ಶಾಸನವೆಂದರೆ ಇದನ್ನು ಮಾಡು, ಅಥವಾ ಇದನ್ನು ಮಾಡಬೇಡ ಎಂದು ಎರಡು ರೀತಿಯಿಂದ ಮಾತ್ರ ತಿಳಿಸುವುದು. ಪ್ರಕೃತ ವೇದಾಂತಕ್ಕೆ ಶಾಸ್ತ್ರತ್ವಬರಬೇಕಾದರೆ ಅದು ಸಿದ್ಧಾರ್ಥಪರವಾಗಬಾರದು. ಆದರೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿವಾಕ್ಯಗಳಿಂದ ವಿಧಿಯಾಗಲೀ ಪ್ರತಿಷೇಧವಾಗಲೀ ತೋರದಿರುವುದರಿಂದ ಅದಕ್ಕೆ ಶಾಸ್ತ್ರತ್ವವಿಲ್ಲದೇ ಹೋಗಬೇಕಾಗುತ್ತದೆ. 'ನಚೈತೇಷಾಂ'—ಇತಿ. ಸತ್ಯಂ ಜ್ಞಾನಂ—ಇತ್ಯಾದಿ ಸಿದ್ಧಬ್ರಹ್ಮಬೋಧಕವಾಕ್ಯಗಳಿಗೆ ವಿಧಿಸಂಭವಿಸದಿರುವುದರಿಂದ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಸ್ವರೂಪಬೋಧನವೇ ಫಲವೆಂದರೆ ಇದರಿಂದ ಯಾವ ಉಪಯೋಗವೂ ಇಲ್ಲದಿರುವುದರಿಂದ ಹೀಗೆ ಹೇಳುವುದೂ ಸರಿಯಲ್ಲ. ವೇದಾಂತಾರ್ಥವನ್ನು ಕೇಳಿದವನಿಗೂ ಸಾಂಸಾರಿಕಧರ್ಮನಿವೃತ್ತವಾಗುವುದಿಲ್ಲ. ಆದುದರಿಂದ ವೇದಾಂತವಾಕ್ಯಗಳಿಗೆ 'ಜ್ಞಾತವ್ಯಃ' ಎಂಬ ವಿಧಿವಾಕ್ಯದೊಡನೆ ಏಕವಾಕ್ಯತಾ ಕಲ್ಪಿಸಿ ಕಾರ್ಯಪರತ್ವವನ್ನೇ ಆಶ್ರಯಿಸಬೇಕು. ಕೇವಲ ಸಿದ್ಧರೂಪ ಬ್ರಹ್ಮನಲ್ಲಿ ವೇದಾಂತಗಳಿಗೆ ಪ್ರಾಮಾಣ್ಯವೇ ಇರುವುದಿಲ್ಲವೆಂದು ಕುಮಾರಿಲಭಟ್ಟಾಚಾರ್ಯರ ಆಶಂಕೆ.

ಅತ್ರ ಪ್ರತಿವಿಧೀಯತೇ—ನ ತಾವತ್ಸಿದ್ಧೇ ವ್ಯುತ್ಪತ್ತ್ಯಸಿದ್ಧಿಃ। ಪ್ರಾಗುನ್ನೀತಯಾನೀತ್ಯಾ ಪುತ್ರಸ್ತೇಜಾತ ಇತಿ ವಾಕ್ಯಾತ್ಸಿದ್ಧಪರಾದಪಿ ವ್ಯುತ್ಪತ್ತಿಸಿದ್ಧೇಃ। ನಚಪರಿಶೇಷಾವಧಾರಣಾನುಪಪತ್ತಿಃ। ಪ್ರಿಯಾಸುಖಪ್ರಸವಾದೇರಪಿ ಸಂಭವಾದಿತಿ ಭಣಿತವ್ಯಮ್। ಪುತ್ರಪದಾಂಕಿತಪಟಪ್ರದರ್ಶನವತ್ ಪ್ರಿಯಾಸುಖಪ್ರಸವಾದಿಸೂಚಕಾಭಾವಾತ್ ಪುತ್ರಜನ್ಮೈವ ತತ್ಸೂಚಕಮಿತಿ ಚೇತ್—ಪ್ರಥಮಪ್ರತೀತಪುತ್ರಜನ್ಮಪರಿತ್ಯಾಗೇ ಕಾರಣಾಭಾವಾತ್। ಪುತ್ರಜನನಸ್ಯೈವಾಧಿಕಾನಂದ ಹೇತುತ್ವಾಚ್ಚ।

ಪುತ್ರೋತ್ಪತ್ತಿವಿಪತ್ತಿಭ್ಯಾಂ ನಾ ಪರಂ ಸುಖ ದುಃಖಯೋಃ ॥
ಇತಿ ವಿದ್ಯಮಾನತ್ವಾತ್। ತಥಾ ಚಾಚಕಥಚ್ಚಿತ್ಸುಖಾಚಾರ್ಯಃ
ದೃಷ್ಟಶ್ಚೈತ್ರಮುಖೋತ್ಪತ್ತೇಸ್ತತ್ಪದಾಂಕಿತವಾಸಸಾ।
ವಾರ್ತಾಹಾರೇಣ ಯಾತಸ್ಯ ಪರಿಶೇಷವಿನಿಶ್ಚಿತೇಃ ॥ (ಚಿತ್ಸು-ಪ್ರ-೮೮) ಇತಿ।

ಸಿದ್ಧವಾಕ್ಯದಿಂದಲೂ ಶಕ್ತಿಗ್ರಹ ಪ್ರಸಿದ್ಧವಾಗಿದೆಯೆಂದು ಸಮಾಧಾನ ತೋರಿಸುತ್ತಾನೆ. 'ನತಾವತ್'—ಇತಿ. ಪುತ್ರಪದದಿಂದ ಚಿಹ್ನಿತವಾದ ವಸ್ತ್ರವನ್ನು ತೋರಿಸುತ್ತಾ ಸಮಾಚಾರ ತಿಳಿಸುವವನು ಚೈತ್ರನಿಗೆ "ನಿನಗೆ ಮಗನು ಹುಟ್ಟಿದ್ದಾನೆ" ಎಂದು ಹೇಳಿದಾಗ ಆಗ ಪುತ್ರಜನ್ಮವೇ ಹರ್ಷಾತಿಶಯಕಾರಣವೆಂದು ನಿಶ್ಚಿತವಾಗುತ್ತದೆ. ಇದರಿಂದ ಸಿದ್ಧವಾಕ್ಯದಿಂದಲೂ ಶಕ್ತಿಗ್ರಹವಾಗುತ್ತದೆಂದು ಸಿದ್ಧವಾಗುತ್ತದೆ. ಚೈತ್ರನು ತನಗೆ ಪುತ್ರೋತ್ಪತ್ತಿಯಾದುದನ್ನು ಪ್ರತ್ಯಕ್ಷವಾಗಿ ತಿಳಿದಿರುತ್ತಾನೆ. ಆಗ ದೇವದತ್ತನು ಪುತ್ರಪದಾಂಕಿತಪಟದಿಂದ ಕೂಡಿದ ವಾರ್ತಾಹರನೊಡನೆ ಚೈತ್ರನ ಸಮೀಪಕ್ಕೆ ಬರುತ್ತಾನೆ. ಚೈತ್ರನೆ 'ನಿನ್ನ ಅದೃಷ್ಟ ಸಫಲವಾಗಿದೆ. ನಿನಗೆ ಗಂಡುಮಗನು ಹುಟ್ಟಿರುತ್ತಾನೆ' ಎಂದು ವಾರ್ತಾಹರನು ಹೇಳಿದ ಮಾತನ್ನು ಕೇಳಿದ ಚೈತ್ರನ ವಿಕಸಿತಮುಖವನ್ನು ನೋಡಿದ ದೇವದತ್ತನು ಪುತ್ರೋತ್ಪತ್ತಿಯೇ ಇವನಿಗೆ ಹರ್ಷಕಾರಣವಾಗಿರುತ್ತದೆಂದು ನಿಶ್ಚಯಿಸುತ್ತಾನೆ. ಇದರಿಂದ ಪರಿಶೇಷಾವಧಾರಣವಾಗುವುದಿಲ್ಲವೆ ? ಎನ್ನುವುದಕ್ಕೆ ಅವಕಾಶವಿಲ್ಲ. ಪ್ರಿಯಸುಖಪ್ರಸವಾದಿಗಳನ್ನು ಸೂಚಿಸುವ ಯಾವ ಕಾರಣವೂ ಇರುವುದಿಲ್ಲ. ಪುತ್ರಜನ್ಮವು ಅದಕ್ಕೆ ಕಾರಣವಾಗುವುದಿಲ್ಲ. ಗವಾನಯದಲ್ಲಿ ಪ್ರವೃತ್ತನಾದವನು ಛತ್ರಿಪಾದರಕ್ಷೆಯನ್ನು ಧರಿಸಿರುತ್ತಾನೆ. ಆಗ 'ಗಾಮಾನಯ' ಇತ್ಯಾದಿ ವಾಕ್ಯಕ್ಕೆ ಛತ್ರಧಾರಣಾದ್ಯರ್ಥದಲ್ಲಿ ಶಕ್ತಿಗ್ರಹವಿದೆಯೆಂದು ಯಾರೂ ಹೇಳುವುದಿಲ್ಲ. ಹಾಗೆ ಸುಖ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸವಾದಿಗಳಿದ್ದರೂ ಅಲ್ಲಿ ಶಕ್ತಿಗ್ರಹವೆಂದು ಹೇಳಲು ಸಾಧ್ಯವಿಲ್ಲ. ಹೀಗೆ ಸುಖೋತ್ಪತ್ತಿಯಲ್ಲಿ ಪುತ್ರಜನ್ಮವೂ ದುಃಖೋತ್ಪತ್ತಿಯಲ್ಲಿ ಅನನವಿಪತ್ತಿಯೂ ಕಾರಣವಾಗುವುವಲ್ಲದೆ ಇನ್ನಾವುದೂ ಕಾರಣವಾಗುವುದಿಲ್ಲ. ವಿಜ್ಞಾತವಾದ ಪುತ್ರಜನ್ಮವನ್ನು ಬಿಟ್ಟು ತಿಳಿಯದಿರುವ ಹರ್ಷಹೇತುವನ್ನು ಕಲ್ಪಿಸುವುದು ಅನ್ಯಾಯವೆಂದು ಚಿತ್ಸುಖಾಚಾರ್ಯರೂ ಹೇಳಿರುವುದನ್ನು ತೋರಿಸುತ್ತಾನೆ. 'ದೃಷ್ಟ' — ಇತಿ. ವಿಜ್ಞಾತವಾದ ಪ್ರಿಯಾಸುಖಪ್ರಸವಾದಿಗಳಿಗಿಂತ ವಿಶೇಷ ತೋರಿಸಲು 'ತತ್ಪದಾಂಕಿತವಾಸಸಾ' ಎಂದು ಹೇಳಿರುತ್ತಾರೆ.

ಯದುಕ್ತಂ ಸಿದ್ಧಾರ್ಥಪರೇಷು ಕಾರ್ಯಾರ್ಥ್ಯಾಹಾರ ಇತಿ ತದಯುಕ್ತಮ್ | ಮುಖ್ಯಾರ್ಥವಿಷಯತಯಾ ಸಿದ್ಧೇಽಪಿ ಪ್ರಯೋಗಸಿದ್ಧಾವಧ್ಯಾಹಾರಾನುಪಪತ್ತೇಃ | ಯದುಕ್ತಂ ಶಾಸ್ತ್ರತ್ವಪ್ರಸಿದ್ಧ್ಯೈ ಚ ನ ಸ್ವರೂಪಪರತ್ವಮಿತಿ ತದಪ್ಯಯುಕ್ತಮ್ | ಹಿತಶಾಸನಾದಪಿ ಶಾಸ್ತ್ರತ್ವೋಪಪತ್ತೇಃ | ನ ಚ ಪ್ರಯೋಜನಾಭಾವಃ | ಶ್ರುತಮತವೇದಾಂತಜನ್ಯಾಽದ್ವಿತೀಯಾತ್ಮವಿಜ್ಞಾನಾಭ್ಯಾಸೇನ ವಿದ್ಯೋದಯೇ ಸಂಸಾರನಿದಾನಾವಿದ್ಯಾ ನಿವೃತ್ತ್ಯುಪಲಕ್ಷಿತಬ್ರಹ್ಮಾತ್ಮತಾಲಕ್ಷಣಪರಮ ಪುರುಷಾರ್ಥಸಿದ್ಧೇಃ | ನಚಾತ್ರ ವಿಧಿಃ ಸಂಭವತಿ | ವಿಕಲ್ಪಾಸಹತ್ವಾತ್ | ತಥಾ ಹಿ —ಕಿಂ ಶಾಬ್ದಜ್ಞಾನಂ ವಿಧೇಯಂ ಕಿಂ ವಾ ಭಾವನಾತ್ಮಕಮಾಹೋಸ್ವಿತ್ಸಾಕ್ಷಾತ್ಕಾರರೂಪಮ್ ||

ಕಾರ್ಯಾಧ್ಯಾಹಾರವೆಂದುದೂ ಸಂಗತವಾಗುವುದಿಲ್ಲ. 'ಮುಖ್ಯಾರ್ಥ'—ಇತಿ. ಸಿದ್ಧಾರ್ಥಪರವಾಕ್ಯದಲ್ಲಿಯೂ ಮುಖ್ಯಾರ್ಥವಾಚಕವಾಗುವುದರಿಂದ ಪ್ರಯೋಗವು ಸಮಂಜಸವಾಗುವಾಗ ಅಧ್ಯಾಹಾರವು ಸಂಗತವಾಗುವುದಿಲ್ಲ. ಶಾಸ್ತ್ರವಾಗಬೇಕಾದರೆ ಅದು ವಿಧಿನಿಷೇಧಕಾರ್ಯಪರವಾಗಿರಬೇಕೆಂದು ಪೂರ್ವಪಕ್ಷಿಯ ಅಭಿಪ್ರಾಯ. ಇದೂ ಸರಿಯಲ್ಲ. ಹಿತಶಾಸನದಿಂದಲೂ ಶಾಸ್ತ್ರತ್ವಸಂಭವಿಸುತ್ತದೆ. 'ಶ್ರುತ'—ಇತಿ, ಶ್ರವಣಮನನಗಳಿಂದುಂಟಾದ ವೇದಾಂತಜ್ಞಾನದಿಂದ ಅದ್ವಿತೀಯಾತ್ಮಜ್ಞಾನಾಭ್ಯಾಸವುಂಟಾಗಿ ಅದರಿಂದ ವಿದ್ಯೋದಯವಾಗುತ್ತದೆ. ಆಗ ಸಂಸಾರಕ್ಕೆ ಕಾರಣವಾದ ಅವಿದ್ಯಾನಿವೃತ್ತಿಯುಂಟಾಗಿ ಬ್ರಹ್ಮಸ್ವರೂಪವಾದ ಪುರುಷಾರ್ಥಸಿದ್ಧಿಯಾಗುತ್ತದೆ. 'ನಚ'—ಇತಿ. ಬ್ರಹ್ಮಪ್ರತಿಪಾದಕವೇದಾಂತವಾಕ್ಯಗಳಲ್ಲಿ ವಿಧಿಸಂಭವಿಸುವುದಿಲ್ಲವೆಂದು ವಿವರಿಸುತ್ತಾನೆ. ಮೂರು ವಿಕಲ್ಪಗಳಿಂದಲೂ ವಿಧಿತ್ವಸಂಭವಿಸುವುದಿಲ್ಲವೆಂದು ವಿಕಲ್ಪಗಳನ್ನು ತೋರಿಸುತ್ತಾನೆ. 'ಕಿಂ'—ಇತಿ.

ನಾದ್ಯಃ | ವಿದಿತಪದಾರ್ಥಸಂಗತಿ ಕಸ್ಯಾಧೀತಶಬ್ದನ್ಯಾಯತತ್ತ್ವಸ್ಯಾಂತರೇಣಾಪಿ ವಿಧಿಂ ಶಬ್ದಾದೇವೋಪಪತ್ತೇಃ | ನಾಪಿ ದ್ವಿತೀಯಃ | ಭಾವನಾಯಾ ಜ್ಞಾನಪ್ರಕರ್ಷಹೇತುಭಾವಸ್ಯಾನ್ವಯ ವ್ಯತಿರೇಕಸಿದ್ಧತಯಾ ಪ್ರಾಪ್ತತ್ವೇನಾ ವಿಧೇಯತ್ವಾತ್| ಅಪ್ರಾಪ್ತಪ್ರಾಪಕಸ್ಯೈವ ವಿಧಿತ್ವಾಂಗೀಕಾರಾತ್ | ತೃತೀಯೇ ಸಾಕ್ಷಾತ್ಕಾರಃ ಕಿಂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಬ್ರಹ್ಮಸ್ವರೂಪಃ ಕಿಂ ವಾಂತಃಕರಣಪರಿಣಾಮಭೇದಃ । ನಾದ್ಯಃ । ತಸ್ಯ ನಿತ್ಯತ್ವೇ ನಾವಿಧೇಯತ್ವಾತ್ । ನಾಪಿ ದ್ವಿತೀಯಃ । ಆನಂದಸಾಕ್ಷಾತ್ಕಾರರೂಪತಯಾ ಫಲತ್ವೇನಾವಿಧೇಯತ್ವಾತ್ । ತಸ್ಮಾತ್ ಜ್ಞಾತವ್ಯ ಇತ್ಯಾದೀನಾಮವಿಧೇಯಕತ್ವಾತ್ —ಅರ್ಹೇ ಕೃತ್ಯತೃಚಶ್ಚ (ಪಾಣಿ-ಸೂ ೩-೩-೧೬೯) ಇತಿ ಕೃತ್ಯಪ್ರತ್ಯಯಾನಾಮರ್ಹಾರ್ಥೇ ವಿಧಾನಾದರ್ಹಾರ್ಥತ್ವೈವ ವ್ಯಾಖ್ಯೇಯಾ । ತಥಾ ಚ ಸರ್ವೇಷಾಂ ವೇದಾಂತವಾಕ್ಯಾನಾಮುಪಕ್ರಮೋಪಸಂಹಾರಾದಿ ಷಡ್ವಿಧತಾತ್ಪರ್ಯೋಪೇತತ್ವಾತ್ ನಿತ್ಯಶುದ್ಧಬುದ್ಧಮುಕ್ತಸ್ವಭಾವ ಬ್ರಹ್ಮಾತ್ಮಪರತ್ವಮಾಸ್ಥೇಯಮ್ ।

ವೇದಾಂತವಾಕ್ಯವು ಶಾಬ್ದಜ್ಞಾನವನ್ನು ವಿಧಿಸುವುದಿಲ್ಲ. ಶಬ್ದಾರ್ಥಸಂಬಂಧವನ್ನು ತಿಳಿದವನಿಗೆ ವ್ಯಾಕರಣ ಮೀಮಾಂಸಾಶಾಸ್ತ್ರಗಳನ್ನು ಅಧ್ಯಯನಮಾಡಿದವನಿಗೆ ಶಾಬ್ದಜ್ಞಾನವು ಇತರಾಪೇಕ್ಷೆ ಇಲ್ಲದೆ ಉಂಟಾಗುವುದರಿಂದ ಅಲ್ಲಿ ವಿಧ್ಯಪೇಕ್ಷೆ ಬರುವುದಿಲ್ಲ. ಇಲ್ಲಿ ನ್ಯಾಯಪದಕ್ಕೆ ಜೈಮಿನಿನ್ಯಾಯವೆಂದರ್ಥ. ಪುನಃ ಪುನಃ ಚಿಂತಿಸುವುದೇ ಭಾವನಾನಿದಿಧ್ಯಾಸನವೆಂದರ್ಥ. ಇದಕ್ಕೂ ವಿಧಿತ್ವ ಕೂಡುವುದಿಲ್ಲ. ಅಗ್ನಿಸಾಮೀಪ್ಯವಿರುವಾಗ ಶೈತ್ಯಬಾಧೆ ನಿವೃತ್ತವಾಗುತ್ತದೆ. ಅದರ ಸಾಮೀಪ್ಯವಿಲ್ಲದಿರುವಾಗ ಶೈತ್ಯಪೀಡಾನಿವೃತ್ತಿಯೂ ಇರುವುದಿಲ್ಲ. ಹೀಗೆ ಅನ್ವಯವ್ಯತರೇಕಗಳಿಂದಲೇ ಅಗ್ನಿಸಾಮೀಪ್ಯಕ್ಕೆ ಶೈತ್ಯವಿನಾಶಕಾರಣತ್ವವು ಅವಗತವಾಗುವಾಗ ಶೈತ್ಯವನ್ನು ಹೋಗಲಾಡಿಸಿಕೊಳ್ಳಲು ಅಗ್ನಿಯನ್ನು ಸೇವಿಸಬೇಕೆಂದು ಹೇಗೆ ವಿಧಿಯನ್ನು ಮಾಡಬೇಕಾಗಿಲ್ಲವೋ ಅದರಂತೆ ನಿದಿಧ್ಯಾಸನದಲ್ಲಿಯೂ ಜ್ಞಾನಾತಿಶಯವಿರುವುದರಿಂದ ಅದಕ್ಕೋಸ್ಕರ ವಿಧಿಯು ಅಪೇಕ್ಷಿತವಾಗುವುದಿಲ್ಲ. ಹೀಗೆ ವಿಧಿ ಇಲ್ಲದೇ ಭಾವನಾ ಪ್ರಾಪ್ತವಾಗುತ್ತದೆ. ಮೂರನೆಯ ವಿಕಲ್ಪವೂ ಕೂಡುವುದಿಲ್ಲ.

ಸಾಕ್ಷಾತ್ಕಾರವೆಂದರೆ ಬ್ರಹ್ಮಸ್ವರೂಪವೇ ಅಥವಾ ಅಂತಃಕರಣಪರಿಣಾಮಭೇದವೇ ? ಎಂದು ವಿಕಲ್ಪವುಂಟಾಗುತ್ತದೆ. ಬ್ರಹ್ಮಸ್ವರೂಪವೆಂದರೆ ಅದು ನಿತ್ಯವಾದುದರಿಂದ ಅದಕ್ಕೆ ವಿಧೇಯತ್ವ ಸಂಭವಿಸುವುದಿಲ್ಲ. ಯಾವುದು ಮಾಡಲು ಯೋಗ್ಯವಾಗಿದೆಯೋ ಅದಕ್ಕೆ ವಿಧೇಯತ್ವ ಸಂಭವಿಸುತ್ತದೆ. ಯಾವುದು ಶಶಶೃಂಗದಂತೆ ಎಂದೂ ಇಲ್ಲವೋ ಅದಕ್ಕೂ, ಯಾವುದು ನಿತ್ಯವೋ (ಬ್ರಹ್ಮಸ್ವರೂಪ) ಅದಕ್ಕೂ ಕಾರ್ಯತ್ವ ಸಂಭವಿಸುವುದಿಲ್ಲ. ಶಶಶೃಂಗಾದಿಗಳಿಗೆ ಕಾರಕವ್ಯಾಪಾರಸಂಬಂಧವೇ ಕೂಡುವುದಿಲ್ಲ. ಬ್ರಹ್ಮಸ್ವರೂಪವು ಕಾರಕವ್ಯಾಪಾರಕ್ಕಿಂತ ಪೂರ್ವದಲ್ಲಿಯೇ ಇರುವುದರಿಂದ ಸಿದ್ಧವಾಗಿರುತ್ತದೆ. ಅಂತಃಕರಣಪರಿಣಾಮಭೇದವೆಂದರೆ ಅದು ಆನಂದಸಾಕ್ಷಾತ್ಕಾರರೂಪವಾಗಿ ಫಲವಾಗುವುದರಿಂದ ಅದಕ್ಕೆ ವಿಧೇಯತ್ವಸಂಭವಿಸುವುದಿಲ್ಲ. ಲೋಕದಲ್ಲಿ ಫಲವನ್ನುದ್ದೇಶಿಸಿ ಉಪಾಯವನ್ನು ವಿಧಿಸುವುದು ಪ್ರಸಿದ್ಧವಾಗಿದೆ. ಸ್ವರ್ಗೋದ್ದೇಶದಿಂದ ಯಾಗಾದಿಗಳು ವಿಹಿತವಾಗಿವೆ. ಫಲವು ತಾನಾಗಿ ವಿಧೇಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುವುದಿಲ್ಲ. 'ತಸ್ಮಾತ್—' ಇತಿ. ಆದುದರಿಂದ 'ಜ್ಞಾತವ್ಯಃ' ಇತ್ಯಾದಿ ವೇದಾಂತ ವಾಕ್ಯಗಳಲ್ಲಿ ತವ್ಯಪ್ರತ್ಯಯವಿದ್ದರೂ ಅರ್ಹಾರ್ಥದಲ್ಲಿ ಕೃತ್ಯಸಂಜ್ಞೆ ಇರುವ ತವ್ಯಾದಿಗಳೂ ತೃಚ್‌ಪ್ರತ್ಯಯವೂ ವಿಹಿತವಾದುದರಿಂದ ತಿಳಿಯಲು ಯೋಗ್ಯವಾದುದು ಎಂದರ್ಥವಾಗುತ್ತದೆ. 'ದ್ರಷ್ಟವ್ಯಃ' ಎಂಬಲ್ಲಿ ನೋಡಲು ಯೋಗ್ಯವಾದುದು ಎಂದರ್ಥ. ಇದರಿಂದ ಸಕಲವೇದಾಂತವಾಕ್ಯಗಳಿಗೂ ಉಪಕ್ರಮೋಪಸಂಹಾರಬಲದಿಂದ ನಿತ್ಯಶುದ್ಧ ಬುದ್ಧಮುಕ್ತಸ್ವಭಾವ ಬ್ರಹ್ಮಸ್ವರೂಪಬೋಧನದಲ್ಲಿ ತಾತ್ಪರ್ಯವೆಂದು ತಿಳಿಯಬೇಕು.

ನಿಷ್ಪ್ರದೇಶೇ ಪರಮಾಣೌ ಪ್ರದೇಶವೃತ್ತಿತ್ವೇನಾಭಿಮತಸ್ಯ ಸಂಯೋಗಸ್ಯ ದುರುಪಪಾದನತಯಾ ತನ್ನಿಬಂಧನಸ್ಯ ದ್ವ್ಯಣುಕಸ್ಯಾಸಿದ್ಧೌ ದ್ವ್ಯಣುಕಾದಿ ಕ್ರಮೇಣಾರಂಭವಾದಾಸಂಭವಾದ ಚೇತನಯಾಃ ಪ್ರಕೃತೇರ್ಮಹದಾದಿರೂಪೇಣ ಪರಿಣಾಮವಾದಾಸಂಭವಾಚ್ಚ ಖ್ಯಾತಿಬಾಧಾನ್ಯಥಾನುಪಪತ್ತ್ಯಾ ನಿರ್ವಚನೀಯಃ ಪ್ರಪಂಚಶ್ಚಿದ್ವಿವರ್ತ ಇತಿ ಸಿದ್ಧಮ್ । ಸ್ವರೂಪಾಪರಿತ್ಯಾಗೇನ ರೂಪಾಂತರಾಪತ್ತಿರ್ವಿವರ್ತ ಇತಿ ಸತ್ಯಮಿಥ್ಯಾಖ್ಯಾವಭಾಸ—ಇತಿ । ಅವಭಾಸೋಽಧ್ಯಾಸ ಇತಿ ಪರ್ಯಾಯಃ ಸ ಚಾಧ್ಯಾಸೋ ದ್ವಿವಿಧಃ । ಅರ್ಥಾಧ್ಯಾಸೋಜ್ಞಾನಾಧ್ಯಾಸಶ್ಚೇತಿ । ತದುಕ್ತಮ್ ।

ಪ್ರಮಾಣದೋಷಸಂಸ್ಕಾರ ಜನ್ಮಾನ್ಯಸ್ಯ ಪರಾತ್ಮತಾ ।
ತದ್ಧೀಶ್ಚಾಧ್ಯಾಸ ಇತಿ ಹಿ ದ್ವಯಮಿಷ್ಟಂ ಮನೀಷಿಭಿಃ ॥ ಇತಿ ॥

ವೇದಾಂತಶಾಸ್ತ್ರಕ್ಕೆ ಸಚ್ಚಿದಾನಂದೈಕರಸವಾದ ಪ್ರತ್ಯಗಾತ್ಮರೂಪವಾದ ಬ್ರಹ್ಮವೇ ವಿಷಯವೆಂದು ತಿಳಿಸಿ ಈಗ ಶಾಸ್ತ್ರಕ್ಕೆ ಅಧ್ಯಾಸನಿವೃತ್ತಿಯೇ ಪ್ರಯೋಜನವೆಂದು ಹಿಂದೆ ಹೇಳಿದ ಪ್ರಯೋಜನವನ್ನು ವಿವರಿಸಲು ಆರಂಭಿಸುತ್ತಾನೆ. 'ನಿಷ್ಪ್ರದೇಶೇ' — ಇತಿ. ಪ್ರದೇಶವೆಂದರೆ ಅವಯವ. ತಾರ್ಕಿಕರಮತದಲ್ಲಿ ಪರಮಾಣುವಿಗೆ ಅವಯವವಿಲ್ಲ. ಅದು ಅಂತ್ಯಾವಯವಿ. ಪರಮಾಣುಗಳ ಸಂಯೋಗದಿಂದ ದ್ವ್ಯಣುಕವೂ, ದ್ವ್ಯಣುಕ ಸಂಯೋಗದಿಂದ ತ್ರ್ಯಣುಕವೂ ಉಂಟಾಗುತ್ತದೆ. ಹೀಗೆ ಕ್ರಮವಾಗಿ ಉತ್ಪತ್ತಿಯಾಗುತ್ತಾ ಪೃಥಿವ್ಯಪ್‌ತೇಜೋರೂಪಸ್ಥೂಲಭೂತಗಳು ಉಂಟಾಗುತ್ತವೆ. ತೋರತಕ್ಕ ಈ ಪ್ರಪಂಚವು ಸತ್ಯವಲ್ಲದೆ ಅಧ್ಯಸ್ತವಲ್ಲ. ತಾರ್ಕಿಕರು ಆರಂಭವಾದಿಗಳು. ಅಂದರೆ ಹಿಂದೆ ಇಲ್ಲದ ಘಟವು ಅವಯವಗಳಿಂದ ಆರಬ್ಧವಾಗುತ್ತದೆ. ಹೊಸದಾಗಿ ಘಟ ಪದಾರ್ಥ ಸೃಷ್ಟವಾಗುತ್ತದೆ. ಹೀಗೆ ಅವರ ಮತದಲ್ಲಿ ಅಧ್ಯಾಸವೇ ಸಂಭವಿಸದಿರುವುದರಿಂದ ಅಧ್ಯಾಸನಿವೃತ್ತಿರೂಪ ಪ್ರಯೋಜನಪ್ರದರ್ಶನ ಕೂಡುವುದೇ ಇಲ್ಲವೆಂದರೆ ಈ ಆರಂಭವಾದ ಸಮೀಚೀನವಲ್ಲವೆಂದು ತಿಳಿಸುತ್ತಾನೆ. ಸಂಯೋಗವು ಯಾವಾಗಲೂ ಅವ್ಯಾಪ್ಯವೃತ್ತಿಯಾಗಿರುತ್ತದೆ. ಇದೂ ಕೂಡಾ ಸಾವಯವಪದಾರ್ಥಗಳಿಗೇ ಉಂಟಾಗುತ್ತದೆ. ಪರಮಾಣುಗಳು ನಿರವಯವಗಳಾದುದರಿಂದ ಅವುಗಳಿಗೆ ಸಂಯೋಗವುಂಟಾಗುವುದು ಹೇಗೆ ? ಇದು ಅಸಂಭವವಾದುದರಿಂದ ಮೂಲವೇ ವಿಚ್ಛಿನ್ನವಾಗಿ ದ್ವ್ಯಣುಕಾದಿ ಸಿದ್ಧಿಯಾಗದಿರುವುದರಿಂದ ಆರಂಭವಾದವು ಯುಕ್ತಿಬಾಹಿರವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಂಖ್ಯಾಭಿಮತವಾದ ಪರಿಣಾಮವಾದವೂ ಯುಕ್ತವಲ್ಲ. ಅಚೇತನವಾದ ಮೂಲಪ್ರಕೃತಿಗೆ ಚೇತನಸಂಬಂಧವಿಲ್ಲದೆ ಪರಿಣಾಮ ಕೂಡುವುದಿಲ್ಲ. ಪುರುಷನಾದರೋ ಚೇತನನಾದರೂ ಉದಾಸೀನನೆಂದು ಅವರ ಸಿದ್ಧಾಂತ. ಆರಂಭವಾದ, ಪರಿಣಾಮವಾದಗಳೆರಡೂ ಕೂಡದಿದ್ದ ಮೇಲೆ ಪ್ರಪಂಚವು ತೋರುವುದು ಹೇಗೆ ? ಇದು ಇಲ್ಲವೆಂದೇ ಹೇಳಬೇಕಾಗುತ್ತವೆ. ತೋರಿದಮೇಲೆ ಯಾವುದಾದರೊಂದು ವಾದವನ್ನಾಶ್ರಯಿಸಿ ಪ್ರಪಂಚ ಸತ್ಯವೆಂದೇ ಅಂಗೀಕರಿಸಬೇಕಾಗುತ್ತದೆಯೆಂದು ಶಂಕಿಸಬಾರದು. ಜ್ಞಾನಿಯದೃಷ್ಟಿಯಿಂದ ಪ್ರಪಂಚಕ್ಕೆ ಬಾಧ ಇರುವುದರಿಂದ ಸತ್ಯತ್ವ ಎಂದೂ ಸಂಭವಿಸುವುದಿಲ್ಲ. ಇತ್ತೆಂದರೆ ಅದಕ್ಕೆ ಎಂದೂ ಬಾಧವಿರುವುದಿಲ್ಲ. ಆದುದರಿಂದ ಪ್ರಪಂಚ ತೋರುವುದು ಅದಕ್ಕೆ ಬಾಧ ಇವೆರಡೂ ಸಿದ್ಧಿಸಬೇಕಾದರೆ ವಿವರ್ತವಾದವನ್ನೇ ಅಂಗೀಕರಿಸಬೇಕು. ಇದರಿಂದ ಪ್ರಪಂಚಕ್ಕೆ ಅಧ್ಯಸ್ತತ್ವಸಿದ್ಧವಾಗುತ್ತದೆ. ಪ್ರಪಂಚವು ಅನಿರ್ವಚನೀಯವಾಗಿದೆ. ಅನಿರ್ವಚನೀಯವೆಂದರೆ ಜ್ಞಾನಬಾಧ್ಯವೆಂದರ್ಥ. ಇದು ಚಿದ್ವಿವರ್ತವಾಗಿದೆ. ಅಂದರೆ ಈ ಪ್ರಪಂಚವು ಬ್ರಹ್ಮನಲ್ಲಿ ಕಲ್ಪಿತವಾಗಿದೆ. ಸ್ವರೂಪಪರಿತ್ಯಾಗವಿಲ್ಲದೆ (ಭಂಗಾದಿಗಳಿಲ್ಲದೆ) ರೂಪಾಂತರದಿಂದ ತೋರುವುದೇ ವಿವರ್ತ. ವಾಸ್ತವಶುಕ್ತಿಯಲ್ಲಿ 'ಇದು ಬೆಳ್ಳಿ' ಎಂಬ ಜ್ಞಾನ. ಶುಕ್ತಿಯು ಸ್ವರೂಪ ತ್ಯಾಗವಿಲ್ಲದೆ ರಜತಾಕಾರದಿಂದ ತೋರುವುದು.

'ಸತ್ಯಮಿಥ್ಯಾ'—ಇತಿ. ಸತ್ಯವೆಂದರೆ ಆತ್ಮಾ. ಅಹಂಕಾರಾದಿ ಪ್ರಪಂಚವೇ ಮಿಥ್ಯಾ. ಅವಭಾಸವೆಂದರೆ ಅಧ್ಯಾಸ. ಇಲ್ಲಿ ಅನಾತ್ಮರೂಪವಾದ ಅಹಂಕಾರಾದಿಗಳಲ್ಲಿ ಆತ್ಮ ಸ್ವರೂಪಕ್ಕೆ ಆಧ್ಯಾಸವಿಲ್ಲ. ಅಲ್ಲಿ ಆತ್ಮಸಂಸರ್ಗ ಅಧ್ಯಸ್ತವಾಗುತ್ತದೆ. ಆತ್ಮನಲ್ಲಿ ಅನಾತ್ಮಭೂತವಾದ ಮಿಥ್ಯಾಭೂತವಾದ ಅಹಂಕಾರಾದಿಗಳ ಸ್ವರೂಪಕ್ಕೆ ಅಧ್ಯಾಸವಿರುತ್ತದೆ. ಇದಕ್ಕೇ ಸತ್ಯಮಿಥ್ಯಾಖ್ಯಾವಭಾಸವೆಂದು ಕರೆಯುತ್ತಾರೆ. ಹೀಗೆಯೇ ಶುಕ್ತ್ಯಾದಿಗಳಲ್ಲಿ ರಜತಾದ್ಯಧ್ಯಾಸವನ್ನು ತಿಳಿಯಬೇಕು. ಶುಕ್ತಿಯಲ್ಲಿ ಮಿಥ್ಯಾಭೂತವಾದ ರಜತದ ಅಧ್ಯಾಸವು ಅರ್ಥಾಧ್ಯಾಸವಾಗುತ್ತದೆ. ಮಿಥ್ಯಾಭೂತವಾದ ಜ್ಞಾನಕ್ಕೆ ಆತ್ಮನಲ್ಲಿ ಅಧ್ಯಾಸವು ಜ್ಞಾನಾಧ್ಯಾಸವಾಗುತ್ತದೆ. 'ಪ್ರಮಾಣ'—ಇತಿ ಪ್ರಮಾಣ, ದೋಷ, ಸಂಸ್ಕಾರ ಈ ಮೂರರಿಂದ ಉಂಟಾದ ಉತ್ಪತ್ತಿಯುಳ್ಳ ಯಾವ ಒಂದು ವಸ್ತುವಿಗೆ ಇನ್ನೊಂದು ವಸ್ತುವಿನ ಸ್ವರೂಪವಿದೆಯೋ (ಅನ್ಯಸ್ಯ ಪರಾತ್ಮತಾ) ಮತ್ತು ಅಂತಹ ವಸ್ತು ಜ್ಞಾನವೇನಿದೆಯೋ ಅವೆರಡು ವಿದ್ವಾಂಸರಿಂದ ಅಧ್ಯಾಸವೆಂದು ಅಂಗೀಕರಿಸಲ್ಪಟ್ಟಿವೆಯೆಂದರ್ಥ. ಚಕ್ಷುರಾದಿ ಇಂದ್ರಿಯಗಳೇ ಪ್ರಮಾಣಗಳು. ದೂರತ್ವಾದಿ ದೋಷಗಳು. ಸಂಸ್ಕಾರವೆಂದರೆ ಮೊದಲು ರಜತಾನುಭವದಿಂದ ಆತ್ಮನಲ್ಲಿ ಉಂಟಾಗಿರುವುದು. ಇವು ಮೂರಿರುವಾಗ ಶುಕ್ತಿಯಲ್ಲಿ ರಜತವೆಂಬ ಭ್ರಮೆಯುಂಟಾಗುತ್ತದೆ.

ಪುನರಪಿ ದ್ವಿವಿಧೋಽಧ್ಯಾಸಃ । ನಿರುಪಾಧಿಕಸೋಪಾಧಿಕಭೇದಾತ್ ।

ತದಪ್ಯುಕ್ತಮ್—

ದೋಷೇಣ ಕರ್ಮಣಾ ವಾಪಿ ಕ್ಷೋಭಿತಾಜ್ಞಾನಸಂಭವಃ ।

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ತತ್ರ್ತ್ವವಿದ್ಯಾವಿರೋಧೀ ಚ ಭ್ರಮೋಽಯಂ ನಿರುಪಾಧಿಕಃ ।
ಉಪಾಧಿಸಂನಿಧಿ ಪ್ರಾಪ್ತಕ್ಷೋಭಾವಿದ್ಯಾವಿಜೃಂಭಿತಮ್ ।
ಉಪಾಧ್ಯಪಗಮಾಪೋಹ್ಯಮಾಹುಃ ಸೋಪಾಧಿಕಂ ಭ್ರಮಮ್ । ಇತಿ ।
ತತ್ರ ಸ್ವರೂಪೇಣ ಕಲ್ಪಿತಾಹಮಾದ್ಯಧ್ಯಾಸೋ ನಿರುಪಾಧಿಕಃ । ತದಪ್ಯುಕ್ತಮ್
ನೀಲಿಮೇವ ವಿಯತ್ಯೇಷಾ ಭ್ರಾಂತ್ಯಾಬ್ರಹ್ಮಣಿ ಸಂಸೃತಿಃ ।
ಘಟವ್ಯೋಮೇವ ಭೋಕ್ತ್ರಯಂ ಭ್ರಾಂತೋ ಭೇದೇನ ನ ಸ್ವತಃ ॥ ಇತಿ ॥
ಅತಏವ ಭಾಷ್ಯಕಾರಃ ಶುಕ್ತಿಕಾ ರಜತವದವಭಾಸತೇ, ಏಕಶ್ಚಂದ್ರಃ ಸದ್ವಿತೀಯ ವದಿತಿ ನಿದರ್ಶನದ್ವಯಮುದಾಜಹಾರ । ಶಿಷ್ಟಂ ಶಾಸ್ತ್ರ ಏವ ಸ್ಪಷ್ಟಮಿತಿ ವಿಸ್ತರ ಭಿಯಾ ಉಪರಮ್ಯತೇ । ಏವಂ ಚ ದೃಗ್ದೃಶ್ಯೌ ದ್ವಾವೇವ ಪದಾರ್ಥಾವಿತಿ ವೇದಾಂತಿನಾಂ ಸಿದ್ಧಾಂತ ಇತಿ ಸರ್ವಮನವದಾತಮ್ ।

ಅಧ್ಯಾಸವು ನಿರುಪಾಧಿಕ, ಸೋಪಾಧಿಕವೆಂದು ಎರಡುವಿಧವಾಗಿದೆ. 'ದೋಷೇಣ' —ಇತಿ. ಆತ್ಮನಲ್ಲಿ ಅಹಂಕಾರಾಧ್ಯಾಸವು ನಿರುಪಾಧಿಕಭ್ರಮವಾಗುತ್ತದೆ. ಹೇಗೆ ಅನುಪಹಿತವಾದ ಇದಮಂಶದಲ್ಲಿ ರಜತಸಂಸ್ಕಾರದಿಂದ ಕೂಡಿದ ಅವಿದ್ಯೆಯಿಂದ ರಜತಾಧ್ಯಾಸವುಂಟಾಗುತ್ತದೆಯೋ ಅದರಂತೆ ಪೂರ್ವಪೂರ್ವ ಅಹಂಕಾರಾದಿಗಳಿಂದ ಅಥವಾ ಕರ್ಮದಿಂದ ಕ್ಷೋಭೆಗೊಂಡ ಅವಿದ್ಯೆಯಿಂದ ತದ್ರೂಪ ಆತ್ಮನಲ್ಲಿ (ಅನುಪಹಿತನಾಗಿರುವಾಗಲೇ) ಅಹಂಕಾರಾಧ್ಯಾಸವುಂಟಾಗುತ್ತದೆ. ಒಬ್ಬನೇ ಆದ ಬ್ರಹ್ಮನು ಉಪಹಿತನಾದಾಗ (ಉಪಾಧಿ ಹೊಂದಿದಾಗ) ಜೀವೇಶ್ವರರೂಪದಿಂದ ಭೇದ ತೋರುವುದೇ ಸೋಪಾಧಿಕ ಭ್ರಮವಾಗುತ್ತದೆ. ಶ್ರೀಶಂಕರಾಚಾರ್ಯರು ಸೂತ್ರಭಾಷ್ಯದ ಆರಂಭದಲ್ಲಿಯೇ ಅಧ್ಯಾಸಭಾಷ್ಯದಲ್ಲಿ ಈ ಎರಡು ದೃಷ್ಟಾಂತಗಳನ್ನು ಉದಾಹರಿಸಿ ಲೋಕಾನುಭವವನ್ನು ತೋರಿಸಿರುತ್ತಾರೆ. ಕಪ್ಪೆಚಿಪ್ಪು ಬೆಳ್ಳಿಯಂತೆ ತೋರುವುದು, ಒಬ್ಬ ಚಂದ್ರನೇ ಎರಡಾಗಿ ತೋರುವುದು, ಇದರಂತೆ ಹಿಂದೆ ಹೇಳಿದ ಎರಡು ಭ್ರಮಗಳು ಸಂಭವಿಸುತ್ತವೆ. ಆಕಾಶದಲ್ಲಿ ನೈಲ್ಯವನ್ನು ಕಲ್ಪಿಸಿದಂತೆ ಬ್ರಹ್ಮನಲ್ಲಿ ಸಂಸಾರ ಕಲ್ಪಿತವಾಗುತ್ತದೆ. ಘಟಾಕಾಶವೆಂಬಂತೆ ಇವನು ಭೋಕ್ತೃ ಆಗುತ್ತಾನೆಂದೂ ಕಲ್ಪನೆ ಪ್ರಸಿದ್ಧವಾಗಿದೆ. ವೇದಾಂತದಲ್ಲಿ ದೃಕ್, ದೃಶ್ಯಗಳೆಂಬ ಎರಡೇ ಪದಾರ್ಥಗಳು ಪ್ರಸಿದ್ಧವಾಗಿವೆ.

ಅತ್ರ ಪ್ರಭಾಕರಃ—ಶುಕ್ತಿಕಾ ರಜತವದವಭಾಸತೇ ಇತಿ ದೃಷ್ಟಾಂತೋನೇಷ್ಟಃ । ರಜತಪ್ರತ್ಯಯಸ್ಯ ಶುಕ್ತಿಕಾಲಂಬನತ್ವಾನುಪಪತ್ತೇಃ ॥ ತಥಾ ಹಿ ಇದಂ ರಜತಮಿತಿ ಪ್ರತೀತೌ ಶುಕ್ತೇರಾಲಂಬನತ್ವಂ ಪುರೋದೇಶಸತ್ತಾಮಾತ್ರೇಣಾವಲಂಬ್ಯತೇ ಕಾರಣತ್ವೇನ ಭಾಸಮಾನತ್ವೇನ ವಾ । ನಾದ್ಯಃ । ಪುರೋವರ್ತಿನಾಂ ಲೋಷ್ಟಾದೀನಾಮಪ್ಯಾಲಂಬನತ್ವಪ್ರಸಂಗಾತ್। ಅಥ ಕಲಧೌತಬೋಧಕರಣಸಂಸ್ಕಾರೋದ್ಬೋಧಕಾರಣತ್ವೇನ ತದ್ದ್ವಾರಾ ರಜತಜ್ಞಾನ ಕಾರಣತ್ವಾತ್ ಆಲಂಬನತ್ವಂ ಮನ್ಯಸೇ । ತದಪಿ ನ ಸಂಗಚ್ಛತೇ । ಚಕ್ಷುರಾದೀನಾಮಪಿ ಕಾರಣತ್ವೇನ ವಿಷಯ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ತ್ವಾಪಾತಾತ್ ಅಥ ಭಾಸಮಾನತಯಾ ವಿಷಯತ್ವಮಿಷ್ಯತೇ ತದಪ್ಯಶ್ಲಿಷ್ಟಮ್। ರಜತನಿರ್ಭಾಸಸ್ಯ ಶುಕ್ತಿಕಾಲಂಬನತ್ವಾನುಪಪತ್ತೇಃ ॥ ಯಸ್ಮಿನ್ ವಿಜ್ಞಾನೇ ಯದವಭಾಸತೇತತ್ತದಾಲಂಬನಮ್ ।ಅತ್ರ ಚ ಕಲಾಧೌತಾನುಭವಃ ಶುಕ್ತಿಕಾಲಂಬನತ್ವ ಕಲ್ಪನಾಯಾಂವಿರುಧ್ಯತೇ । ತಥಾ ಚಾಚಕಥಯನ್ನ್ಯಾಯವೀಥ್ಯಾಂ ಶಾಲಿಕನಾಥ :—

ಅತ್ರಬ್ರೂಮೋ ಯ ಏವಾರ್ಥೋ ಯಸ್ಯಾಂ ಸಂವಿದಿ ಭಾಸತೇ ।
ವೇದ್ಯಃ ಸ ಏವ ನಾನ್ಯದ್ಧಿ ವೇದ್ಯಾವೇದ್ಯತ್ವಲಕ್ಷಣಮ್ ।
ಇದಂ ರಜತಮಿತ್ಯತ್ರ ರಜತಂ ತ್ವವಭಾಸತೇ
ತದೇವ ತೇನ ವೇದ್ಯಂ ಸ್ಯಾನ್ನ ತು ಶುಕ್ತಿರವೇದನಾತ್ ।
ತೇನಾದ್ಯಸ್ಯಾನ್ಯಥಾ ಭಾಸಃ ಪ್ರತೀತ್ಯೈವ ಪರಾಹತಃ ।
ಅನ್ಯಸ್ಮಿನ್ ಭಾಸಮಾನೇ ಹಿ ನ ಪರಂ ಭಾಸತೇ ಯತಃ ॥
(ಪ್ರಕ–ಪ–೪।೨೩–೨೫) ಇತಿ ॥

ಅಧ್ಯಾಸವನ್ನು ಒಪ್ಪದಿರುವ ಅಖ್ಯಾತಿವಾದಿಗಳಾದ ಮೀಮಾಂಸಕರ ಮತದಿಂದ ಆಕ್ಷೇಪಿಸುತ್ತಾನೆ. 'ಅತ್ರ'—ಇತಿ. (–ಇತಿ ಸಿದ್ಧಂ' ವಾಕ್ಯದವರೆಗೆ ಮೀಮಾಂಸಕರ ಆಕ್ಷೇಪ.) ಅವರ ಮತದಲ್ಲಿ ಶುಕ್ತಿಯಲ್ಲಿ ಉಂಟಾಗುವ 'ಇದಂ ರಜತಂ' ಎಂಬ ಜ್ಞಾನವು ಭ್ರಮವಾಗುವುದಿಲ್ಲ. ಅದೂ ಯಥಾರ್ಥಜ್ಞಾನವೇ ಆಗುತ್ತದೆ. ಆದರೆ ಅದು ಒಂದು ಜ್ಞಾನವಲ್ಲ. ಇದಂ ಎಂಬುದು ಪ್ರತ್ಯಕ್ಷಜ್ಞಾನ. ರಜತಂ ಎಂಬುದು ಹಿಂದೆ ನೋಡಿದ ರಜತದ ಸ್ಮೃತಿಯು ಆಕಾರಪ್ರದರ್ಶನವಾಗುತ್ತತೆ. ಇದಂ ಎಂಬ ಪ್ರತ್ಯಕ್ಷದಲ್ಲಿ ಎದುರುಗಿರುವ ದ್ರವ್ಯಮಾತ್ರ ಗೃಹೀತವಾಗುತ್ತದೆ. ದೋಷದಿಂದ ಅಲ್ಲಿರುವ ಶುಕ್ತಿತ್ವವು ಗೃಹೀತವಾಗುವುದಿಲ್ಲ. ಗೃಹೀತವಾದ ದ್ರವ್ಯವು ರಜತಸಮಾನವಾದುದರಿಂದ ರಜತಸಂಸ್ಕಾರೋದ್ಬೋಧಕ್ರಮದಿಂದ ರಜತಸ್ಮೃತಿಯನ್ನು ಹುಟ್ಟಿಸುತ್ತದೆ. ಈ ಸ್ಮೃತಿಯು (ತತ್ ಗೃಹೀತಂ–ಎಂಬ) ಗೃಹೀತಗ್ರಹಣ ಸ್ವಭಾವವಾಗಿದ್ದರೂ ಅಲ್ಲಿ ದೋಷ ಮಹಿಮೆಯಿಂದ ಗೃಹೀತತ್ವಾಂಶತೋಶವೇ ಹೋಗಿ(ಪ್ರಮೋಷ) ಗ್ರಹಣಾಂಶಮಾತ್ರದಿಂದ ಶೋಭಿಸುತ್ತದೆ. ಇದಕ್ಕೆ ತತ್ತಾಂಶಪ್ರಮೋಷವೆಂದು ಕರೆಯುತ್ತಾರೆ. ಹೀಗೆ ಪ್ರತ್ಯಕ್ಷ, ಸ್ಮರಣರೂಪವಾದ ಎರಡು ಜ್ಞಾನಗಳಿಗೆ ಅನ್ಯೋನ್ಯವಾಗಿ ಸ್ವರೂಪ ಮತ್ತು ವಿಷಯದಿಂದ ಭೇದತೋರದಿರುವುದರಿಂದ ವಸ್ತುತಃ ಇವೆರಡು ಭಿನ್ನವಾಗಿದ್ದರೂ 'ಇದಂ ರಜತಂ' ಎಂಬ ಅಭೇದವ್ಯವಹಾರವನ್ನು ತಂದುಕೊಡುತ್ತವೆ.

ಪುರೋವರ್ತಿ ಪದಾರ್ಥದಲ್ಲಿ 'ನೇದಂರಜತಂ' ಎಂಬ ರಜತಭೇದವು ಗೃಹೀತವಾಗದಿರುವುದರಿಂದ ರಜತಾರ್ಥಿಗೆ ಅಲ್ಲಿ ಪ್ರವೃತ್ತಿಯುಂಟಾಗುತ್ತದೆ. ಇದನ್ನೇ 'ರಜತಪ್ರತ್ಯಯಸ್ಯ'—ಇತ್ಯಾದಿ ವಾಕ್ಯಗಳಿಂದ ವಿವರಿಸುತ್ತಾನೆ. ರಜತಜ್ಞಾನಕ್ಕೆ ಶುಕ್ತಿಯು ಎಂದೂ ಆಶ್ರಯವಾಗುವುದಿಲ್ಲ. ಅಂದರೆ ಅಜ್ಞಾನದಲ್ಲಿ ಶುಕ್ತಿಕಾವಿಷಯತ್ವವು ಸಂಭವಿಸುವುದಿಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂದರ್ಥ. ಘಟಜ್ಞಾನವೆಂದೂ ಪಟವನ್ನು ವಿಷಯೀಕರಿಸುವುದಿಲ್ಲ. ಅದರಂತೆ 'ಇದಂ ರಜತಂ' ಎಂಬ ಜ್ಞಾನದಲ್ಲಿ ಶುಕ್ತಿಗೆ ವಿಷಯತ್ವ ತೋರುವುದಿಲ್ಲ. ಎದುರಿಗಿರುವ ವಸ್ತು ಮಾತ್ರ ವಿಷಯವಾಗುತ್ತದೆ. ಪುರೋದೇಶಸತ್ತಾಮಾತ್ರದಿಂದ ಆಲಂಬನವಾಗುತ್ತದೆ ಯೆನ್ನುವುದಾದರೆ ಮುಂದಿರುವ ಮಣ್ಣು ಹೆಂಟೆ ಮುಂತಾದವೂ ವಿಷಯವಾಗಬೇಕಾಗುತ್ತವೆ. ರಜತಪ್ರತೀತಿಗೆ ಕಾರಣವಾದುದರಿಂದ ಶುಕ್ತಿಯು ಜ್ಞಾನದಲ್ಲಿ ವಿಷಯವಾಗುತ್ತದೆಂಬ ಪಕ್ಷವೂ ಸಮಂಜಸವಲ್ಲ ರಜತಬೋಧಕ್ಕೆ ಕಾರಣವಾದ ಸಂಸ್ಕಾರವನ್ನು ಉದ್ಬೋಧಗೊಳಿಸು ವುದರಲ್ಲಿ ಕಾರಣವಾಗುವುದರಮೂಲಕ ರಜತಜ್ಞಾನಕ್ಕೆ ಕಾರಣವಾಗಿ ಆಶ್ರಯವಾಗುತ್ತ ದೆಂದು ಹೇಳಬೇಕು. ಹೀಗೆ ಹೇಳುವುದಾದರೆ ಚಕ್ಷುರಾದಿಗಳೂ ಕಾರಣವಾಗುವುದರಿಂದ ಅವುಗಳಿಗೂ ವಿಷಯತ್ವ ಸಂಭವಿಸಬೇಕಾಗುತ್ತದೆ. ರಜತಭೋಧವೆಂದರೆ ಇಲ್ಲಿ ಸ್ಮರಣಾ ತ್ಮಕವಾದ ಜ್ಞಾನವಾಗುತ್ತದೆ. ಅದಕ್ಕೆ ಕಾರಣವಾದುದು ಸಂಸ್ಕಾರ ಅದರ ಉದ್ಬೋ ಧಕ್ಕೆ ಕಾರಣ ಶುಕ್ತಿಯೆಂದು ತಾತ್ಪರ್ಯ. ತೋರುವುದರಿಂದ ವಿಷಯವಾಗುತ್ತದೆಂದು ಹೇಳುವುದೂ ಅಶ್ಲಿಷ್ಟ ಅಂದರೆ ಅಯುಕ್ತವೆಂದರ್ಥ. ರಜತ ತೋರುವಾಗ ಅದಕ್ಕೆ ಶುಕ್ತಿ ಆಶ್ರಯವೆನ್ನುವುದು ಎಂದೂ ಕೂಡುವುದಿಲ್ಲ. ಯಾವಜ್ಞಾನದಲ್ಲಿ ಯಾವುದು ತೋರು ವುದೋ ಅದು ಅದಕ್ಕೆ ಆಶ್ರಯವೆನ್ನಬೇಕು. ಕಲಧೌತವೆಂದರೆ ಬೆಳ್ಳಿ. ಬೆಳ್ಳಿಯೆಂಬ ಜ್ಞಾನದಲ್ಲಿ ಶುಕ್ತಿ ಆಶ್ರಯವೆಂದು ಕಲ್ಪಿಸಿದರೆ ವಿರೋಧವಾಗುತ್ತದೆ ಶುಕ್ತಿ ವಿಷಯು ವಾದರೆ ಶುಕ್ತಿಯ ಅನುಭವವೇ ಬರಬೇಕಲ್ಲದೆ ರಜತಾನುಭವ ಬರಲಾರದು. ಶಾಲಿಕಾ ನಾಥನೆಂಬವನು ಪ್ರಭಾಕರಮತವನ್ನನುಸರಿಸಿ ಪ್ರಕರಣಪಂಚಿಕಾ ಎಂಬ ಗ್ರಂಥವನ್ನು ರಚಿಸಿರುತ್ತಾನೆ. ಅಲ್ಲಿ ನ್ಯಾಯವೀಥೀ ಎಂಬ ನಾಲ್ಕನೇ ಪ್ರಕರಣದಲ್ಲಿ ಈ ವಿಷಯ ಹೇಳಿರುತ್ತಾನೆ. 'ಅತ್ರಬ್ರೂಮಃ"—ಇತಿ.

ಕಿಂ ಚ ಮಿಥ್ಯಾಜ್ಞಾನೋತ್ಪತ್ತೌ ಸಾಮಗ್ರೀ ನ ಸಮಸ್ತಿ । ಕಿಂ ಕೇವಲಾನಿ ಇಂದ್ರಿಯಾ ದೀನಿ ಕಾರಣಾನಿ ದೋಷದೂಷಿತಾನಿ ವಾ । ನಾದ್ಯಃ । ತೇಷಾಂಜ್ಞಾನಂ ನ ಕದಾಚಿದುದಯ ಮಾಸಾದಯೇತ್ । ನ ದ್ವಿತೀಯಃ । ದೋಷಾಣಾಂ ಔತ್ಸ ರ್ಗಿಕಕಾರ್ಯಪ್ರಸವಶಕ್ತಿಪ್ರತಿಬಂಧಮಾತ್ರಪ್ರಭಾವತ್ವಾತ್ । ನ ಹಿ ದೃಷ್ಟಂ ಕುಟಜ ಬೀಜಂ ವಟಾಂಕುರಂ ಜನಯಿತುಮೀಷ್ಟೇ । ನ ವಾ ತೈಲಕಲುಷಿತಂ ಶಾಲಿಬೀಜ ಮಶಾಲ್ಯಂಕುರಜನನಾಯಾಲಮ್ । ಕಿಂ ತು ಸ್ವಕಾರ್ಯಂ ನಕರೋತಿ । ನನು ದಾವದಹನದಗ್ಧಸ್ಯ ವೇತ್ರಬೀಜಸ್ಯ ಕದಲೀಕಾಂಡಜನಕತ್ವಂ ದೃಷ್ಟಮಿತಿ ಚೇತ್ ತನ್ನ ಸ್ಥಾನೇ । ದಗ್ಧಸ್ಯಾವೇತ್ರಬೀಜತ್ವೇನ ದೋಷಾಣಾಂ ವಿಪರೀತಕಾರ್ಯ ಕಾರಿತ್ವಂ ಪ್ರತ್ಯನುದಾಹರಣಾತ್ । ನ ಚ ಭಸ್ಮಕದೋಷದೂಷಿತಸ್ಯ ಕೌಕ್ಷೇ ಯಸ್ಯಾಶುಶುಕ್ಷಣೇರ್ಬಹ್ವನ್ನಪಚನ ಸಾಮರ್ಥ್ಯಂ ದೃಷ್ಟಮಿತ್ಯೇಷ್ಟವ್ಯಮ್ । ಅಶಿತ ಪೀತಾದ್ಯಾಹಾರಪರಿಣತೌ ಜಾಠರಸ್ಯ ಜಾತವೇದಸಃ ಶಕ್ತತ್ವಾತ್ ।
ತದುಕ್ತಮ್—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಯುತಾರ್ಥಸ್ಯ ಬೋಧಸ್ಯ ನೋತ್ಪತ್ತಾವಸ್ತಿ ಕಾರಣಮ್ ।
ತೋಷಾಶ್ಚೇನ್ನ ಹಿ ದೋಷಾಣಾಂ ಕಾರ್ಯಶಕ್ತಿವಿಘಾತತಾ ॥
ಭಸ್ಮಕಾದಿಷು ಕಾರ್ಯಸ್ಯ ವಿಘಾತಾದೇವ ದೋಷತಾ ॥
ಅಗ್ನೇ ರ್ಹಿ ರಸನಿಷ್ಪತ್ತಿಃ ಕಾರ್ಯಂ ಜಠರವರ್ತಿನಃ ॥

(ಪ್ರಕ-ಪ-೪।೭೩-೭೪) ಇತಿ ॥

ಭ್ರಮಾತ್ಮಕ ಜ್ಞಾನೋತ್ಪತ್ತಿಯಲ್ಲಿ ಕಾರಣವಿಲ್ಲದಿರುವುದರಿಂದಲೂ ಅಂತಹ ಜ್ಞಾನವನ್ನು ಸ್ವೀಕರಿಸಲು ಶಕ್ಯವಿಲ್ಲವೆಂದು ವಿವರಿಸುತ್ತಾನೆ. 'ಕಿಂಚ'—ಇತಿ. ನ ಸಮಸ್ತಿ—ಸಂಭವಿಸುವುದಿಲ್ಲವೆಂದರ್ಥ. ಮಿಥ್ಯಾಜ್ಞಾನೋತ್ಪತ್ತಿಯಲ್ಲಿ ಕೇವಲ ಇಂದ್ರಿಯ ಗಳು ಕಾರಣವಾಗುತ್ತವೆಯೆಂದು ಹೇಳಲು ಶಕ್ಯವಿಲ್ಲ. ಅವು ಯಾವಾಗಲೂ ಸರಿಯಾದ ಜ್ಞಾನವನ್ನು ಹುಟ್ಟಿಸುವ ಸಾಮರ್ಥ್ಯವನ್ನೇ ಹೊಂದಿರುತ್ತವೆ. ಹಾಗಿಲ್ಲವೆನ್ನುವುದಾದರೆ ಸರಿಯಾದ ರಜತಜ್ಞಾನವು ಎಂದೂ ಉಂಟಾಗದಿರಬೇಕಾಗುತ್ತದೆ. ಇಂದ್ರಿಯಗಳು ದೋಷದೂಷಿತವಾಗಿ ಮಿಥ್ಯಾಜ್ಞಾನಕ್ಕೆ ಕಾರಣವಾಗುತ್ತವೆಯೆಂಬ ಎರಡನೆಯಪಕ್ಷವೂ ಯುಕ್ತವಾಗುವುದಿಲ್ಲ. ದೋಷಗಳು ಯಾವಾಗಲೂ ತನ್ನ ಆಶ್ರಯದಲ್ಲಿ ಸ್ವಭಾವ ದಿಂದ ಇರುವ ಕಾರ್ಯೋತ್ಪಾದನ ಸಾಮರ್ಥ್ಯವನ್ನು ಪ್ರತಿಬಂಧಿಸುವುದಲ್ಲದೆ ಅಲ್ಲಿ ಒಂದು ಅಪೂರ್ವಸಾಮರ್ಥ್ಯವನ್ನು ಹುಟ್ಟಿಸಲಾರವು 'ನಹಿ'—ಇತಿ ದೋಷವಿಶಿಷ್ಟಕುಟಜ (ವತ್ಸಕ) ಬೀಜವು ಆಲದ ಮೊಳಕೆಯನ್ನು ಹುಟ್ಟಿಸುವ ಸಾಮರ್ಥ್ಯವನ್ನು ಎಂದೂ ಹೊಂದುವುದಿಲ್ಲ. ಎಣ್ಣೆಯಿಂದ ಕೆಟ್ಟುಹೋದ ಬತ್ತವು ಇತರ ಮೊಳಕೆಯನ್ನು ಹುಟ್ಟಿಸು ವುದಿಲ್ಲ. ಆದರೆ ತನ್ನ ಕಾರ್ಯವನ್ನು ಮಾಡುವುದಿಲ್ಲ ಅಂದರೆ ಬತ್ತದಿಂದ ಉಂಟಾಗ ಬೇಕಾದ ಅಂಕುರವನ್ನು ಹುಟ್ಟದಂತೆ ತಡೆಯುತ್ತದೆ.

'ನನು'—ಇತಿ. ದುಷ್ಟಬೀಜವು ಇತರಾಂಕುರಜನನ ಸಾಮರ್ಥ್ಯ ಹೊಂದುತ್ತದೆ ಯೆಂಬುದರಲ್ಲಿ ಪೂರ್ವಪಕ್ಷಿಯು ದೃಷ್ಟಾಂತವನ್ನು ತೋರಿಸುತ್ತಾನೆ. ಕಾಡ್ಗಿಚ್ಚಿನಿಂದ ಸುಟ್ಟುಹೋದ ವೇತ್ರಬೀಜದಿಂದ ಬಾಳೆಯುಂಟಾಗುತ್ತದೆಂದು ವನೌಷಧಿಚತುರರು ಹೇಳಿರುತ್ತಾರೆ. ಇದು ಹೇಗೋ ಹಾಗೆ ದುಷ್ಟೇಂದ್ರಿಯದಿಂದ ಮಿಥ್ಯಾಜ್ಞಾನವುಂಟಾಗ ಬಹುದೆಂದರೆ ಅದೂ ಯುಕ್ತವಲ್ಲವೆಂದು ಖಂಡಿಸುತ್ತಾನೆ. ನಸ್ಥಾನೇ—ನ ಯುಕ್ತಮ್. 'ದಗ್ಧಸ್ಯ'—ಇತಿ. ಸುಟ್ಟಮೇಲೆ ಅದು ವೇತ್ರಬೀಜವೇ ಆಗುವುದಿಲ್ಲ. ಹೀಗಿರುವಾಗ ದೋಷಕ್ಕೆ ವಿಪರೀತಕಾರ್ಯಕಾರಿತ್ವ ಬರುವುದಾದರೂ ಹೇಗೆ? ವೇತ್ರೋತ್ಪಾದನಸಾಮರ್ಥ್ಯ ವಿರುವಾಗಲೇ ಅದು ಅರ್ಧಸುಟ್ಟು ಕದಲಿಯನ್ನೂ ಹುಟ್ಟಿಸುವುದಾದರೆ ಆಗ ಅದು ಉದಾ ಹರಣೆ ಆಗಬಹುದು. ಸುಟ್ಟಮೇಲೆ ಅದು ಬೇರೆಯೇ ಕಾರಣವಾಗುವುದರಿಂದ ಆ ಉದಾಹರಣೆ ಸಮಂಜಸವಾಗುವುದಿಲ್ಲ. "ನಚ"—ಇತಿ. ಭಸ್ಮಕವೆಂದರೆ ಒಂದು ರೋಗ ವಿಶೇಷ. ಆದರಿಂದ ಜಾಠರಾಗ್ನಿದೂಷಿತವಾದರೆ ಆಗ ಎಷ್ಟು ಆಹಾರ ಅಧಿಕ ವಾಗಿ ಸೇವಿಸಿದರೂ ಕ್ಷಣಕಾಲದಲ್ಲಿ ಅದು ಭಸ್ಮವಾಗುತ್ತದೆ. ಕೌಕ್ಷೇಯಕಾಶುಶುಕ್ಷಣಿಃ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾಠರಾಗ್ನಿಃ. 'ಅಶಿತ'—ಇತಿ. ತಿಂದ ಆಹಾರವನ್ನು ಜೀರ್ಣಿಸುವುದರಲ್ಲಿಯೂ ಅದರಿಂದ ರಕ್ತಾದಿರಸೋತ್ಪಾದನದಲ್ಲಿಯೂ ಜಾಠರಾಗ್ನಿಗೆ ಸ್ವಾಭಾವಿಕವಾದ ಸಾಮರ್ಥ್ಯವಿರುವುದರಿಂದ ಅದು ಉದಾಹರಣೆಯಾಗಲಾರದು. ಆಹಾರಾಧಿಕ್ಯವಾದಾಗ ಅಗ್ನಿಯಲ್ಲಿ ಮಾಂದ್ಯವುಂಟಾದಾಗ ಭಸ್ಮಕರೋಗವು ಅಲ್ಲಿ ಪ್ರತಿಬಂಧವುಂಟುಮಾಡುವುದು ಪ್ರಸಿದ್ಧವಾಗಿದೆ. ರಕ್ತಾದ್ಯುತ್ಪತ್ತಿಯಲ್ಲಿಯೂ ಪ್ರತಿಬಂಧವಾಗುತ್ತದೆ. ಭಸ್ಮಕರೋಗದಿಂದಲೇ ಪಚನಸಾಮರ್ಥ್ಯವುಂಟಾಗದಿರುವುದರಿಂದ ಅದೂ ಉದಾಹರಣೆಯಾಗುವುದಿಲ್ಲ.

'ಅಯಥಾ'—ಇತಿ. ಶುಕ್ತ್ಯಾದಿಗಳಲ್ಲಿ ಬೇರೆಯಾಗಿ ರಜತಾದಿರೂಪದಿಂದ ತೋರುವ ಅಯಥಾರ್ಥಜ್ಞಾನ ಹುಟ್ಟುವುದರಲ್ಲಿ ಯಾವುದೂ ಕಾರಣವಾಗುವುದಿಲ್ಲ ದೋಷವೂ ಅಲ್ಲಿ ಕಾರಣವಾಗಲಾರದು. ದೋಷಗಳಿಗೆ ಯಾವಾಗಲೂ ಕಾರ್ಯೋತ್ಪಾದನ ಪ್ರತಿಬಂಧಕತ್ವವಿರುವುದಲ್ಲದೆ ಎಂದೂ ಅಪೂರ್ವಶಕ್ತ್ಯುತ್ಪಾದನಸಾಮರ್ಥ್ಯವಿರುವುದಿಲ್ಲ. ಭಸ್ಮಕಾದಿ ದೋಷಗಳಿಗೆ ರಕ್ತಾದಿರಸೋತ್ಪತ್ತಿ ಪ್ರತಿಬಂಧಕತ್ವವಿರುವುದಲ್ಲದೆ ಅಪೂರ್ವ ಪಚನಶಕ್ತಿ ಇರುವುದಿಲ್ಲ. ಅಲ್ಲಿ ರುಧಿರಾದ್ಯುತ್ಪಾದನವು ಸ್ವಾಭಾವಿಕವಾಗಿ ಜಾಠರಾಗ್ನಿಯ ಕಾರ್ಯವೇ ಆಗಿರುವುದಲ್ಲದೆ ಬೇರೆಯಾವುದರ ಕಾರ್ಯವೂ ಆಗುವುದಿಲ್ಲ.

ಅಪಿ ಚಾಸತ್ಯಪ್ಯರ್ಥೇ ಜ್ಞಾನಪ್ರಾದುರ್ಭಾವಾಭ್ಯುಪಗಮೇ ಸಮೀಚೀನಸ್ಥಲೇಽಪಿ ಜ್ಞಾನಾನಾಂ ಸ್ವಗೋಚರವ್ಯಭಿಚಾರಶಂಕಾಂಕುರಸಂಭವೇನ ನಿರಂಕುಶೋ ವ್ಯವಹಾರೋ ಲುಪ್ಯತೇ । ತದಾಹ—

ಯದಿ ಚಾರ್ಥಂ ಪರಿತ್ಯಜ್ಯ ಕಾಚಿದ್ಬುದ್ಧಿಃ ಪ್ರಕಾಶತೇ ।
ವ್ಯಭಿಚಾರವತಿ ಸ್ವಾರ್ಥೇ ಕಥಂ ವಿಶ್ವಾಸಕಾರಣಮ್ ।

(ಪ್ರಕ-ಪ-೪।೬೬। ಇತಿ)

'ನನು' ರಜತಗೋಚರೈಕವಿಶಿಷ್ಟಜ್ಞಾನಾನಂಗೀಕಾರೇ ವಿಶಿಷ್ಟ ವ್ಯವಹಾರೋ ನ ಸಿದ್ಧ್ಯೇತ್ । ಅತಸ್ತತ್ಸಿದ್ಧಯೇಽಪಿ ವಿಪರ್ಯಯೋಂಗೀಕಾರ್ಯ ಇತಿ ಚೇನ್ನ। ಇದಂರಜತಮಿತಿ ಗ್ರಹಣಸ್ಮರಣಾಭಿಧಸ್ಯ ಬೋಧದ್ವಯಸ್ಯ ವ್ಯವಹಾರಕಾರಣತ್ವಾಂಗೀಕಾರಾತ್ । ಯದ್ಯೇವಮಿದಂ ಶುಕ್ತಿಕಾಶಕಲಂ ತದ್ರಜತಮಿತ್ಯತೋಽಪಿ ವಿಶಿಷ್ಟ ವ್ಯವಹಾರಃ ಸ್ಯಾದಿತಿ । ತನ್ನ । ತತ್ರೇದಮಿತಿ ಪುರೋವರ್ತಿದ್ರವ್ಯಮಾತ್ರಗ್ರಹಣಸ್ಯ ದೋಷದೂಷಿತಚಕ್ಷುರ್ಜನ್ಯತ್ವೇನಾನಾಕಲಿತಶುಕ್ತಿತ್ವಾದಿವಿಶೇಷಿತಸ್ಯ ಸಾಮಾನ್ಯಮಾತ್ರಗ್ರಹಣರೂಪತ್ವಾದ್ರಜತಮಿತಿ ಜ್ಞಾನಸ್ಯಾಸಂನಿಹಿತವಿಷಯಸ್ಯ ಸಂಪ್ರಯೋಗಲಿಂಗಾದ್ಯಪ್ರಸೂತತಯಾ ಸದೃಶಾವಬೋಧಿತ ಸಂಸ್ಕಾರಮಾತ್ರ ಪ್ರಭವತ್ವೇನ ಪರಿಶೇಷಪ್ರಾಪ್ತಸ್ಮೃತಿಭಾವಸ್ಯ ದೋಷಹೇತುಕತಯಾ ಗೃಹೀತತತ್ತಾಂಶಪ್ರಮೋಷಾದ್ಗ್ರಹಣಮಾತ್ರತ್ವೋಪಪತ್ತೇಃ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜತವಿಲ್ಲದಿದ್ದರೂ ರಜತಜ್ಞಾನ ಹುಟ್ಟುವುದಾದರೆ ವಿಷಯವಿಲ್ಲದಿದ್ದರೂ ಜ್ಞಾನ ಹುಟ್ಟುವುದಾದುದರಿಂದ ಅದು ವಿಷಯವ್ಯಭಿಚಾರಿಯಾಗಬೇಕಾಗುತ್ತದೆ. ಆಗ ರಜತವಿದೆಯೆಂದು ಆಪ್ತನು ಹೇಳಿದರೂ ಆಪ್ತಜ್ಞಾನವು ಕೆಲವು ಸಮಯ ವಿಷಯವಿಲ್ಲದಿದ್ದರೂ ಹುಟ್ಟಿಸುವುದೆಂಬ ಶಂಕೆಯುಂಟಾಗುವುದರಿಂದ ರಜತನಿಶ್ಚಯವುಂಟಾಗಲಾರದು. ಇದರಿಂದ ರಜತಾರ್ಥಿಗೆ ಪ್ರವೃತ್ತಿ ಹುಟ್ಟದೇ ಹೋಗಬೇಕಾಗುತ್ತದೆ. ಹೀಗೆ ಸಕಲಜ್ಞಾನವು ಶಂಕಾಕಲಂಕಿತವಾಗುವುದರಿಂದ ವ್ಯವಹಾರಲೋಪಪ್ರಸಕ್ತಿಯುಂಟಾಗುತ್ತದೆ. ಲೋಕದಲ್ಲಿಯಾದರೋ ವ್ಯವಹಾರವು ನಿಶ್ಚಿತಜ್ಞಾನಪೂರ್ವಕವಾಗಿ ಅಪ್ರತಿಹತವಾಗಿ ಆಗುವುದು ತೋರುತ್ತದೆ. "ಯದಿಚ"—ಇತಿ. ರಜತಾದ್ಯರ್ಥವಿಲ್ಲದೇ ಅದರ ಜ್ಞಾನವುಂಟಾಗುವುದಾದರೆ ಅಂತಹ ವ್ಯಭಿಚಾರಿಜ್ಞಾನವು ಹೇಗೆ ತಾನೇ ತನಗೆ ವಿಷಯವಾದ ಪದಾರ್ಥದ ಅಸ್ತಿತ್ವವಿಷಯಕವಾದ ವಿಶ್ವಾಸವನ್ನು ಹುಟ್ಟಿಸೀತು ? ಎಂದರ್ಥ. ಆದುದರಿಂದ ಅಲ್ಲಿ ಇಲ್ಲದಿರುವ ರಜತಕ್ಕೆ ಪ್ರತ್ಯಕ್ಷಜ್ಞಾನವಿಷಯತ್ವ ಸಂಭವಿಸುವುದಿಲ್ಲ. ಅಲ್ಲಿ ವಸ್ತುಮಾತ್ರ ಪ್ರತ್ಯಕ್ಷ, ಮತ್ತು ರಜತಸ್ಮರಣ, ಹೀಗೆ ಎರಡು ಜ್ಞಾನವನ್ನು ಅಂಗೀಕರಿಸುವುದೇ ನ್ಯಾಯವಾಗಿದೆ. ರಜತವಿಷಯಕವಾದ ಒಂದು ವಿಶಿಷ್ಟಜ್ಞಾನವುಂಟಾಗಲು ಯಾವ ಕಾರಣವೂ ಇರುವುದಿಲ್ಲ.

'ನನು'—ಇತಿ ವಿಪರ್ಯಯವೆಂದರೆ ಮಿಥ್ಯಾಜ್ಞಾನ. ರಜತವಿಷಯಕವಾದ ಒಂದು ವಿಶಿಷ್ಟಪ್ರತ್ಯಕ್ಷಜ್ಞಾನವನ್ನಂಗೀಕರಿಸದಿದ್ದರೆ ವಿಶಿಷ್ಟವ್ಯವಹಾರವೇ ಸಿದ್ಧಿಸಲಾರದು. ಅದಕ್ಕೋಸ್ಕರ ಮಿಥ್ಯಾಜ್ಞಾನವನ್ನು ಅಂಗೀಕರಿಸಲೇಬೇಕು. ಇದರಿಂದಲೇ 'ಇದಂರಜತಂ ಎಂಬ ಶಬ್ದಪ್ರಯೋಗರೂಪವಾದ ವಿಶಿಷ್ಟವ್ಯವಹಾರ ಸಂಗತವಾಗುತ್ತದೆ. ಎಂದು ಆಕ್ಷೇಪಿಸುವುದು ಯುಕ್ತವಲ್ಲ. "ಇದಂ ರಜತಂ" ಎಂಬಲ್ಲಿ ಗ್ರಹಣಸ್ಮರಣಾತ್ಮಕವಾದ ಬೋಧದ್ವಯವೇ ವ್ಯವಹಾರ ಕಾರಣವಾಗುತ್ತದೆಂದು ಅಂಗೀಕರಿಸುವುದರಿಂದ ಯಾವ ದೋಷವೂ ಬರುವುದಿಲ್ಲ. 'ಯದಿ'—ಇತಿ. ಜ್ಞಾನದ್ವಯವೇ ವಿಶಿಷ್ಟವ್ಯವಹಾರ ಹೇತುವಾಗುವುದಾದರೆ ವಸ್ತುತಃ ಎರಡು ಜ್ಞಾನವಿರುವಾಗ ಅಂದರೆ ಶುಕ್ತಿಯಲ್ಲಿ ಶುಕ್ತಿಕಾತ್ವೇನ ಜ್ಞಾನವೂ, ಆಮೇಲೆ ತನ್ಮೂಲಕವಾಗಿ ರಜತಸ್ಮರಣವೂ ಇರುವಾಗ "ಇದಂ ರಜತಂ" ಎಂಬ ವಿಶಿಷ್ಟವ್ಯವಹಾರವುಂಟಾಗಲಿ ಎಂದು ಆಪತ್ತಿ. ಅದಕ್ಕೆ ಸಮಾಧಾನ ತೋರಿಸುತ್ತಾನೆ.

'ತತ್ರೇದಂ'—ಇತಿ. ದ್ರವ್ಯಮಾತ್ರವೆಂದುದರಿಂದ ಶುಕ್ತಿಗೆ ಶುಕ್ತಿತ್ವರೂಪದಿಂದ ಗ್ರಹಣವ್ಯಾವೃತ್ತವಾಗುತ್ತದೆ. ಚಕ್ಷುರಿಂದ್ರಿಯವು ದೋಷದೂಷಿತವಾದುದರಿಂದ ಶುಕ್ತಿಯನ್ನು ಅದು ಶುಕ್ತಿತ್ವರೂಪದಿಂದ ಗ್ರಹಿಸುವುದಿಲ್ಲ. ಎದುರಿಗೆ ಸಾಮಾನ್ಯ ಒಂದು ವಸ್ತುವೆಂದು ಮಾತ್ರ ಗ್ರಹಣಮಾಡುತ್ತದೆ. 'ಅನಾಕಲಿತ'—ಇತಿ. ಶುಕ್ತಿತ್ವಾದಿ ವಿಶೇಷಧರ್ಮವನ್ನು ತಿಳಿಸದಿರುವುದೆಂದರ್ಥ. ರಜತಜ್ಞಾನವಾದರೋ ಪ್ರತ್ಯಕ್ಷವಲ್ಲ. ಏಕೆಂದರೆ ಅಲ್ಲಿ ವಿಷಯೀಭೂತವಾದ ರಜತವು ಸಂನಿಹಿತವಾಗಿರುವುದಿಲ್ಲ. ಸಂಪ್ರಯೋಗವೆಂದರೆ ವಿಷಯೇಂದ್ರಿಯಸಂನಿಕರ್ಷ. ಅದೂ ಇಲ್ಲ. ಅನುಮಿತಿಜ್ಞಾನವೆಂದು ಹೇಳಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜತವ್ಯಾಪ್ತಲಿಂಗವೂ ಇರುವುದಿಲ್ಲ. ಆಯಾಯನಿಮಿತ್ತವಿಲ್ಲದಿರುವುದರಿಂದ ಉಪಮಿತ್ಯಾದಿಜ್ಞಾನವೂ ಆಗುವುದಿಲ್ಲ. ಹೀಗೆ ಈ ರಜತಜ್ಞಾನವು ಅನುಭವ ಹೇತುವಾದ ವಿಷಯೇಂದ್ರಿಯಸಂನಿಕರ್ಷಾದಿಗಳಿಂದ ಉಂಟಾಗದಿರುವುದರಿಂದ ಪ್ರತ್ಯಕ್ಷಾದ್ಯನುಭವವು ಸಂಭವಿಸದಿರುವುದರಿಂದ ಪರಿಶೇಷದಿಂದ ಅದು ಸ್ಮರಣರೂಪವೇ ಆಗುತ್ತದೆ. ರಜತಸದೃಶವಸ್ತುದರ್ಶನದಿಂದ ಉದ್ಬುದ್ಧವಾದ ರಜತಸಂಸ್ಕಾರಮಾತ್ರದಿಂದ ಅದು ಹುಟ್ಟಿದುದರಿಂದ ಸ್ಮರಣಲಕ್ಷಣವೂ ಅಲ್ಲಿ ಸಂಗತವಾಗುತ್ತದೆ. ಈ ಸ್ಮರಣೆಯಲ್ಲಿ ದೋಷವಶವಾಗಿ ತತ್ತಾಂಶಕ್ಕೆಮಾತ್ರ ಗ್ರಹಣವಿರುವುದಿಲ್ಲ. ಇದನ್ನೇ ವಿವರಿಸುತ್ತಾರೆ. "ನನ್ವತ್ರ"—ಇತಿ

ತದಪ್ಯುಕ್ತಮ್—
ನನ್ವತ್ರ ರಜತಾಭಾಸಃ ಕಥಮೇಷ ಘಟಿಷ್ಯತೇ ।
ಉಚ್ಯತೇ ಶುಕ್ತಿಶಕಲಂ ಗೃಹೀತಂ ಭೇದವರ್ಜಿತಮ್ ।
ಶುಕ್ತಿಕಾಯಾ ವಿಶೇಷಾ ಯೇ ರಜತಾದ್ಭೇದಹೇತವಃ ।
ತೇ ನ ಜ್ಞಾತಾ ಅಭಿಭವಾತ್ ಜ್ಞಾತಾ ಸಾಮಾನ್ಯರೂಪತಾ ।
ಅನಂತರಂ ಚ ರಜತಸ್ಮೃತಿರ್ಜಾತಾ ತಯಾಪಿ ಚ
ಮನೋದೋಷಾತ್ತದಿತ್ಯಂಶ ಪರಾಮರ್ಶವಿವರ್ಜಿತಮ್ ।
ರಜತಂ ವಿಷಯೀಕೃತ್ಯ ನೈವ ಶುಕ್ತೇರ್ವಿವೇಚನಮ್ ।
ಸ್ಮೃತ್ಯಾತೋ ರಜತಾಭಾಸ ಉಪಪನ್ನೋ ಭವಿಷ್ಯತಿ ॥
(ಪ್ರಕ-ಪ-೪।೨೬-೨೯)
ನ ಹ್ಯಸಂನಿಹಿತಂ ತಾವತ್ ಪ್ರತ್ಯಕ್ಷಂ ರಜತಂ ಭವೇತ್ ।
ಲಿಂಗಾದ್ಯಭಾವಾಚ್ಚಾನ್ಯಸ್ಯ ಪ್ರಮಾಣಸ್ಯ ನ ಗೋಚರಃ ।
ಪರಿಶೇಷಾತ್ ಸ್ಮತಿರಿತಿ ನಿಶ್ಚಯೋ ಜಾಯತೇ ಪುನಃ ॥
(ಪ್ರಕ-ಪಂ-೪।೩೧-೩೦ ॥ ಇತಿ)

ರಜತವೇ ಇಲ್ಲದಿರುವಾಗ ರಜತಾಭಾಸವು ಹೇಗೆ ಕೂಡುತ್ತದೆ ? ಎಂದು ಪ್ರಶ್ನೆ. ಉಚ್ಯತೇ— ಎಂದು ಅದಕ್ಕೆ ಉತ್ತರ. ವಿವೇಚಿತಂ—ಪೃಥಕ್ಕೃತಮ್. ರಜತದಿಂದ ಭೇದಕಾರಣವಾಗಿರುವ ಶುಕ್ತಿಯ ವಿಶೇಷಗಳು ಅಭಿಭೂತವಾದುದರಿಂದ ಅವು ತಿಳಿಯಲ್ಪಡುವುದಿಲ್ಲ. ಸಾಮಾನ್ಯಕಾರದಿಂದ ಇದು ಎಂದು ತಿಳಿಯಲ್ಪಡುತ್ತದೆ. ಆಮೇಲೆ ರಜತಸ್ಮೃತಿಯುಂಟಾಗುತ್ತದೆ. ಆ ಸ್ಮೃತಿಯಿಂದಲೂ, ಮನೋದೋಷದಿಂದಲೂ ತತ್ತಾಂಶಪರಾಮರ್ಶ ಬರುವುದಿಲ್ಲ. ತತ್ತಾಂಶಪ್ರಮೋಷವಾಗುತ್ತದೆ. ಸ್ಮೃತಿಯಿಂದ ಶುಕ್ತಿಯಪೃಥಕ್ಕಾರವಿಲ್ಲದೆ ರಜತಮಾತ್ರವಿಷಯವು ಅಲ್ಲಿ ತೋರುತ್ತದೆ. ಹೀಗೆ ರಜತಾಭಾಸ ತೋರಲು ಯಾವ ಪ್ರತಿಬಂಧವೂ ಇಲ್ಲ. 'ನಹಿ—' ಇತಿ. ಇಂದ್ರಿಯಸಂನಿಕರ್ಷವಿಲ್ಲದಿರುವುದರಿಂದ ರಜತ ಪ್ರತ್ಯಕ್ಷವೆಂದು ಹೇಳಲು ಸಾಧ್ಯವಿಲ್ಲ. ಲಿಂಗಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು ಇಲ್ಲದಿರುವುದರಿಂದ ಅನುಮಿತ್ಯಾದಿಗಳೆಂದೂ ಹೇಳಲು ಬರುವುದಿಲ್ಲ. ಪರಿಶೇಷ ದಿಂದ ರಜತಸ್ಮೃತಿಯೆಂದೇ ನಿಶ್ಚಿತವಾಗುತ್ತದೆ.

ನನು ಕಿಮಿಪಸೇಕ್ಕೈಕಂ ವ್ಯವಹಾರಕಾರಣಮುತಸಂಭೂಯ । ನ ಪ್ರಥಮಃ । ದೇಶ ಭೇದೇನ ಪ್ರವೃತ್ತಿಪ್ರಸಂಗಾತ್ । ನ ಚರಮಃ । ಪ್ರಯತ್ನಾಯೌಗಪದ್ಯಾತ್ ಜ್ಞಾನಾಯೌಗಪದ್ಯಾತ್ (ನ್ಯಾ-ಸೂ-೩-೨-೩) ಇತ್ಯಾದಿನಾ ಜ್ಞಾನಯೌಗ ಪದ್ಯನಿಷೇಧಾತ್ । ಅತೋ ಜ್ಞಾನದ್ವಯಂ ಹೇತುರಿತ್ಯಯುಕ್ತಂ ವಚ ಇತಿ ಚೇತ್— ನ್ನೈವಂ ವೋಚಃ । ಅವಿನಶ್ಯತೋಃ ಸಹಾವಸ್ಥಾನನಿಷೇಧೇಽಪಿ ವಿನಶ್ಯದವಿನಶ್ಯತೋಃ ಸಹಾವಸ್ಥಾನಸ್ಯಾನಿಷಿದ್ಧತ್ವೇನ ನಿರಂತರೋತ್ಪನ್ನಯೋ ಸ್ತದುಪಪತ್ತೇಃ । ನನು ರಜತಜ್ಞಾನಾತ್ ರಜತಾರ್ಥೀ ರಜತೇ ಪ್ರವರ್ತತಾಂ ನಾಮ । ಪೌರಸ್ತ್ಯೇ ವಸ್ತುನಿ ಕಥಂ ಪ್ರವೃತ್ತಿಃ ಸ್ಯಾದಿತಿ ಚೇನ್ನ । ಸ್ವರೂಪತೋ ವಿಷಯತಶ್ಚಾಗೃಹೀತಭೇದಯೋರ್ಗ್ರಹಣಸ್ಮರಣಯೋಃ ಸಂನಿಹಿತರಜತ ಗೋಚರಜ್ಞಾನಸಾರೂಪ್ಯೇಣ ವಸ್ತುತಃ ಪರಸ್ಪರಂ ವಿಭಿನ್ನಯೋರಪ್ಯಭೇದೋಚಿತ ಸಾಮಾನಾಧಿಕರಣ್ಯವ್ಯಪದೇಶಹೇತುತ್ವೋಪಪತ್ತೇಃ । ಗ್ರಹಣಸ್ಮರಣಯೋಃ ಸಂನಿಹಿತರಜತಜ್ಞಾನಸಾರೂಪ್ಯಂ ಕಥಮ್ । ಯಥಾ ಚೈತತ್ತಥಾ ನಿಶಮ್ಯ ತಾಮ್ । ಸಂನಿಹಿತರಜತಗೋಚರಂ ಹಿ ವಿಜ್ಞಾನಮಿದಮಂಶರಜತಾಂಶ ಯೋರಸಂಸರ್ಗಂ ನಾವಗಾಹತೇ । ತಯೋಃ ಸಂಸೃಷ್ಟತ್ವೇನಾಸಂಸರ್ಗಸ್ಯೈವಾ ಭಾವಾತ್ । ನಾಪಿ ಸ್ವಗತಂ ಭೇದಮ್ । ಏಕಜ್ಞಾನತ್ವಾತ್ । ಏವಂ ಗ್ರಹಣ ಸ್ಮರಣೇ ಅಪಿ ದೋಷವಶಾದ್ವಿದ್ಯಮಾನಮಪೀದಮಂಶರಜತಾಂಶಯೋರಸಂಸರ್ಗಂ ಭೇದಂ ನಾವಗಾಹತ ಇತಿ । ಭೇದಾಗ್ರಹಣಮೇವ ಸಾರೂಪ್ಯಮ್ ।

'ಇದಂ ರಜತಂ' ಎಂಬ ವ್ಯವಹಾರಕ್ಕೆ ಪ್ರತ್ಯಕ್ಷ, ಸ್ಮೃತಿ ಎರಡು ಕಾರಣವೆಂದು ಹೇಳಿದೆ. ಅಲ್ಲಿ ಒಂದು ಜ್ಞಾನಕಾರಣವೇ ? ಅಥವಾ ಎರಡೂ ಕಾರಣವೇ ? ಅಂದರೆ ಒಂದೊಂದು ಜ್ಞಾನಕಾರಣವೆಂದು ಹೇಳುವುದು ಸಮಂಜಸವಾಗುವುದಿಲ್ಲ. 'ದೇಶ—' ಇತಿ. ಇದಂ ಎಂಬ ಪ್ರತ್ಯಕ್ಷದಿಂದ ಸಾಮಾನ್ಯಪದಾರ್ಥಾಭಿಮುಖವಾದ ಪ್ರವೃತ್ತಿ ಯುಂಟಾಗುತ್ತದೆ. ಸ್ಮರಣದಿಂದ ನಿಯಮವಾಗಿ ಅಂತಹಪ್ರವೃತ್ತಿಯೇ ಬರುವುದಿಲ್ಲ. ಅದೂ ಅಲ್ಲದೆ ಒಂದೊಂದು ಜ್ಞಾನದಿಂದ ಒಂದೊಂದು ಪ್ರವೃತ್ತಿಯುಂಟಾಗಬೇಕಾಗುತ್ತದೆ. ಒಟ್ಟಿಗೆ ಕಾರಣವೆಂದರೂ ದೋಷ ಬರುತ್ತದೆ 'ಪ್ರಯತ್ನಾ—' ಎಂಬುದು ಕಣಾದ ಸೂತ್ರ. ಈ ಸೂತ್ರದಿಂದ ಒಂದು ಶರೀರದಲ್ಲಿ ಒಂದೇ ಮನಸ್ಸು ಇದೆಯೆಂದು ತಿಳಿಯು ತ್ತದೆ. ಒಂದು ಶರೀರದಲ್ಲಿ ಅನೇಕ ಮನಸ್ಸುಗಳಿರುವುದಾದರೆ ಆಗ ಜ್ಞಾನಗಳಿಗೂ ಪ್ರಯತ್ನಗಳಿಗೂ ಯೌಗಪದ್ಯವುಂಟಾಗಬೇಕಾಗುತ್ತದೆ. ಹೀಗೆಯೇ ಎರಡು ಇಂದ್ರಿಯ ಗಳಿಂದ ಎರಡು ಜ್ಞಾನಗಳು ಏಕಕಾಲದಲ್ಲಿ ಉಂಟಾಗಬೇಕಾಗುತ್ತದೆ. ಹೀಗೆ ಎಲ್ಲಿಯೂ ಆಗದಿರುವುದರಿಂದ ಒಂದು ಶರೀರದಲ್ಲಿ ಒಂದೇ ಮನಸ್ಸಿದೆಯೆಂದು ಸಿದ್ಧವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದ ಎರಡು ಜ್ಞಾನಗಳು ಏಕಕಾಲದಲ್ಲಿ ಸಂಭವಿಸದಿರುವುದರಿಂದ ಒಟ್ಟಿಗೆ ಕಾರಣ ವೆಂದು ಹೇಳಲು ಸಾಧ್ಯವಿಲ್ಲವೆಂದು ವ್ಯಕ್ತವಾಗುತ್ತದೆ.

"ನ್ನೈವಂ"—ಇತಿ. ವಿನಾಶಹೊಂದದಿರುವ ಎರಡು ಜ್ಞಾನಗಳಿಗೆ ಸಹಾನವಸ್ಥಾನ ನಿಷೇಧ ಹೇಳಿದ್ದರೂ ಒಂದು ನಾಶ ಹೊಂದುವ ಇನ್ನೊಂದು ನಾಶ ಹೊಂದದ ಎರಡು ಜ್ಞಾನಗಳಿಗೆ ಸಹಾನವಸ್ಥಾನವನ್ನು ನಿಷೇಧಿಸದಿರುವುದರಿಂದ (ನಿರಂತರೋತ್ಪನ್ನಯೋಃ) ಅವ್ಯವಧಾನದಿಂದ ಉತ್ಪನ್ನಗಳಾದ ಅವುಗಳಿಗೆ ಅದು ಸಂಭವಿಸಲು ಯಾವ ದೋಷವೂ ಇರುವದಿಲ್ಲ. ಒಂದು ಜ್ಞಾನ ಪ್ರಥಮಕ್ಷಣದಲ್ಲಿ ಹುಟ್ಟುತ್ತದೆ. ಇನ್ನೊಂದು ಜ್ಞಾನವು ದ್ವಿತೀಯಕ್ಷಣವ್ಯವಧಾನದಿಂದ ಮೂರನೇ ಅಥವಾ ಅದರ ಮುಂದಿನ ಕ್ಷಣದಲ್ಲಿ ಹುಟ್ಟು ತ್ತದೆ. ಆಗ ಅಲ್ಲಿ ಯಾವ ರೀತಿಯಿಂದಲೂ ಸಹಾನವಸ್ಥಾನ ಬರುವುದಿಲ್ಲ. ಆದರೆ ಅವ್ಯವ ಧಾನದಿಂದ ಹುಟ್ಟಿದ ಎರಡು ಜ್ಞಾನಗಳಿಗೆ ಮೂರನೇ ಕ್ಷಣದಲ್ಲಿ ಸಹಾವಸ್ಥಾನ ಸಂಭವಿ ಸಲು ಯಾವ ತೊಂದರೆಯು ಇಲ್ಲ. ಪ್ರಥಮ ಕ್ಷಣದಲ್ಲಿ ಹುಟ್ಟಿದ ಜ್ಞಾನವು ದ್ವಿತೀಯ ಕ್ಷಣದಲ್ಲಿರುತ್ತದೆ. ಮೂರನೇ ಕ್ಷಣದಲ್ಲಿ ನಾಶಹೊಂದುತ್ತದೆ. 'ಇದಂ ರಜತಂ' ಎಂಬ ಗ್ರಹಣಸ್ಮರಣಾತ್ಮಕಗಳಾದ ಎರಡು ಜ್ಞಾನಗಳಲ್ಲಿ ಒಂದು ಪ್ರಥಮ ಕ್ಷಣದಲ್ಲಿ ಹುಟ್ಟುತ್ತದೆ ಎರಡನೇ ಜ್ಞಾನ ಎರಡನೆಯ ಕ್ಷಣದಲ್ಲಿ ಹುಟ್ಟುತ್ತದೆ. ಅನೆರಡೂ ಒಟ್ಟಿಗೆ ಸೇರಿ ಮೂರನೇ ಕ್ಷಣದಲ್ಲಿ ಕಾರ್ಯಕಾರಿಯಾಗುತ್ತವೆಯೆಂದು ಹೇಳಲು ತೊಂದರೆಯಿಲ್ಲ. ಅಲ್ಲಿ ಪ್ರಥಮ ಕ್ಷಣೋತ್ಪನ್ನಜ್ಞಾನವು ವಿನಶ್ಯದವಸ್ಥಾಪನ್ನವಾಗಿಯೂ ದ್ವಿತೀಯಕ್ಷಣೋತ್ಪನ್ನವಾದ ಜ್ಞಾನವು ಅವಿನಶ್ಯದವಸ್ಥಾಪನ್ನವಾಗಿಯೂ ಇರುತ್ತದೆ.

'ನನು ರಜತ'—ಇತಿ. ರಜತ ಸ್ಮರಣಾತ್ಮಕಜ್ಞಾನದಿಂದ ರಜತವನ್ನು ಬಯಸು ವವನು ರಜತದಲ್ಲಿ ಪ್ರವೃತ್ತಿಹೊಂದಲಿ ಅಂದರೆ ಆ ಸ್ಮರಣದಲ್ಲಿ ವಿಷಯವಾದ ಮನೆಯ ಪೆಟ್ಟಿಗೆಯಲ್ಲಿರುವ ರಜತದಲ್ಲಿ ಪ್ರವೃತ್ತಿ ಹೊಂದಲಿ. ಎದುರಿಗಿರುವ ವಸ್ತ್ವಭಿಮುಖ ವಾದ ಪ್ರವೃತ್ತಿ ಎಂದೂ ಆಗಲಾರದು ಎಂದು ಆಕ್ಷೇಪ. 'ಸ್ವರೂಪತ'—ಇತಿ. ಸಂನಿ ಹಿತರಜತಗೋಚರ (ಹತ್ತಿರದಲ್ಲಿ ಬೆಳ್ಳಿ ನೋಡಿದ ಜ್ಞಾನ) ಜ್ಞಾನವು ಚಕ್ಷುಸ್ಸಂನಿಕೃಷ್ಟ ಸತ್ಯರಜತವಿಷಯಕವಾದುದರಿಂದ ಯಥಾರ್ಥವಾದ ಪ್ರತ್ಯಕ್ಷಜ್ಞಾನವಾಗುತ್ತದೆ. "ಇದಂ ರಜತಂ" ಎಂಬ ಈ ಪ್ರತ್ಯಕ್ಷಜ್ಞಾನದಲ್ಲಿ ರಜತತ್ವ ಇದಂತಾಗಳಿಗೆ ಸಾಮಾನಾಧಿಕರಣ್ಯ ವ್ಯವಹಾರವಿರುವುದರಿಂದ ತನ್ಮೂಲಕ ಪ್ರವೃತ್ತಿಯುಂಟಾಗುತ್ತದೆ. ಇದರ ಸಾರೂಪ್ಯ ಇಲ್ಲಿರುವುದರಿಂದ (ಗ್ರಹಣಸ್ಮರಣ ರೂಪವಾದ "ಇದಂ ರಜತಂ" ಎಂಬ ಭ್ರಾಂತಿಜ್ಞಾನ) ಸಾಮಾನಾಧಿಕರಣ್ಯವ್ಯವಹಾರವೂ ತನ್ಮೂಲಕ ಪ್ರವೃತ್ತಿಯುಂಟಾಗುತ್ತದೆ. ಭೇದಗ್ರಹಣ ವಿಲ್ಲದಿರುವುದೇ ಇಲ್ಲಿ ಸಾರೂಪ್ಯ. ಆದರೆ ಆ ಎರಡು ಜ್ಞಾನಗಳಿಗೆ ಹೀಗೆ ವಿಶೇಷವಿರು ತ್ತದೆ. ಸತ್ಯರಜತಪ್ರತ್ಯಕ್ಷದಲ್ಲಿ ರಜತತ್ವ ಇದಂತ್ವಗಳು ವಾಸ್ತವವಾಗಿ ಅನ್ಯೋನ್ಯಸಂಬದ್ಧ ಗಳಾದುದರಿಂದ ಅವುಗಳಿಗೆ ಅಸಂಸರ್ಗವಿಲ್ಲ. ಅಂದರೆ ಯಾವಾಗಲೂ ಸಂಸ್ಪೃಷ್ಟವಾಗಿರು ತ್ತವೆ. ಆದುದರಿಂದ ಆ ಜ್ಞಾನವು ಅಸಂಸರ್ಗಾವಿಷಯಕವಾಗಿರುತ್ತದೆ. ಹಾಗೆಯೇ ಆ ಪ್ರತ್ಯಕ್ಷಜ್ಞಾನವು ವಾಸ್ತವವಾಗಿ ಒಂದಾದುದರಿಂದ ನಾನಾರೂಪವಲ್ಲದೆ ಅವಾಂತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೇದರಹಿತವಾಗಿರುತ್ತದೆ. ಆದುದರಿಂದಲೇ ವಾಸ್ತವವಾಗಿ ಅಲ್ಲಿ ಭೇದಗ್ರಹಣವಿರುವುದಿಲ್ಲ. ಜ್ಞಾನದ್ವಯಸ್ಥಲದಲ್ಲಿಯಾದರೋ ವಾಸ್ತವವಾಗಿ ಅವೆರಡಕ್ಕೆ ಸಂಸರ್ಗವಿಲ್ಲದಿರುವುದರಿಂದ ಒಂದಾಗದಿರುವುದರಿಂದ ಅವಾಂತರಭೇದವಿರುತ್ತದೆ. ಆದರೂ ದೋಷವಶದಿಂದ ಅದು ಗೃಹೀತವಾಗುವುದಿಲ್ಲ,

ಅಸಂಸರ್ಗ ಅಂದರೆ ಭೇದ ಗ್ರಹಣವು ವಿರೋಧಸ್ಫುರಣದಿಂದ ಆಗುತ್ತದೆ. ವಿರೋಧವೆಂದರೆ ಇಲ್ಲಿ ತತ್ತೇದಂತಾಗಳಿಗೆ, ಹಾಗೆಯೇ ಶುಕ್ತಿತ್ವರಜತತ್ವಗಳಿಗೆ ಇರುತ್ತದೆ. ಇಲ್ಲಿ ಪ್ರತ್ಯಕ್ಷದಲ್ಲಿ ಯದ್ಯಪಿ ಇದಂತಾ ತೋರಿದರೂ ತದ್ವಿರುದ್ಧವಾದ ತತ್ತಾಂಶವು ದೋಷದಿಂದ ಸ್ಮರಣೆಯಲ್ಲಿ ತೋರುವುದಿಲ್ಲ. ಹೀಗೆಯೇ ಸ್ಮರಣೆಯಲ್ಲಿ ಯದ್ಯಪಿ ರಜತತ್ವವು ವಿಷಯವಾದರೂ ತದ್ವಿರುದ್ಧವಾದ ಶುಕ್ತಿತ್ವವು ದೋಷವಶದಿಂದ ಪ್ರತ್ಯಕ್ಷದಲ್ಲಿ ವಿಷಯವಾಗುವುದಿಲ್ಲ. ಹೀಗೆ ವಿರೋಧತೋರದಿರುವುದರಿಂದ ಸ್ವರೂಪದಿಂದಲೂ ವಿಷಯದಿಂದಲೂ ಭೇದವಿದ್ದರೂ ಅದು ಗೃಹೀತವಾಗುವುದಿಲ್ಲ. ಸ್ವರೂಪದಿಂದ ಇರುವ ಭೇದದ ಅಗ್ರಹಣವು ತತ್ತಾರೂಪ ಪರೋಕ್ಷಾಂಶಕ್ಕೆ ದೋಷದಿಂದ ಸ್ಮರಣದಲ್ಲಿ ತೋರದಿರುವುದರಿಂದಲೂ, ವಿಷಯದಿಂದ ಇರುವ ಭೇದಕ್ಕೆ ಅಗ್ರಹಣವು ದೋಷದಿಂದ ಶುಕ್ತ್ಯಂಶಕ್ಕೆ ಪ್ರತ್ಯಕ್ಷದಲ್ಲಿ ತೋರದಿರುವುದರಿಂದಲೂ ಆಗುತ್ತದೆಂದು ತಿಳಿಯಬೇಕು. 'ಏವಂ'— ಇತಿ. ಯಾವ ಎರಡುಜ್ಞಾನಗಳಿಗೆ ಭೇದವಿದ್ದರೂ ತೋರುವುದಿಲ್ಲವೋ ಅಂತಹ ಈ ಗ್ರಹಣ ಸ್ಮರಣಾತ್ಮಕವಾದ ಜ್ಞಾನದ್ವಯವು ರಜತದ ಯಥಾರ್ಥಜ್ಞಾನದಿಂದ ಭಿನ್ನವಾಗಿದ್ದರೂ ಭೇದಗ್ರಹಣವಿಲ್ಲದಿರುವುದರಿಂದ ಅಭಿನ್ನದಂತಾಗಿ ಅದರಂತೆ ಕಾರ್ಯಕಾರಿಯಾಗುತ್ತದೆ. ಇದನ್ನೇ ಕಾರಿಕೆಗಳಲ್ಲಿ ವಿವರಿಸುತ್ತಾನೆ.

ತದುಕ್ತಂಗುರುಮತಾನುಸಾರಿಭಿಃ—
ಗ್ರಹಣಸ್ಮರಣೇ ಚೇಮೇ ವಿವೇಕಾನವಭಾಸಿನೀ ।
ಸಮ್ಯಗ್ರಜತಬೋಧಾಚ್ಚ ಭಿನ್ನೇ ಯದ್ಯಪಿ ತತ್ತ್ವತಃ ।
ತಥಾಪಿ ಭಿನ್ನೇ ನಾಭಾತೇ ಭೇದಾಗ್ರಹಸಮುತ್ಥಿತಃ ।
ಸಮ್ಯಗ್ರಜತಬೋಧಸ್ತು ಸಮುಕ್ಷ್ಯಕಾರ್ಥಗೋಚರಃ ।
ತತೋ ಭಿನ್ನೇ ಅಬುದ್ಧ್ವಾ ಚ ಗ್ರಹಣಸ್ಮರಣೇ ಇಮೇ ।
ಸಮಾನೇನೈವ ರೂಪೇಣ ಕೇವಲಂ ಮನ್ಯತೇ ಜನಃ
ಅಪರೋಕ್ಷಾವಭಾಸೇನ ಸಮಾನಾರ್ಥ ಗ್ರಹೇಣ ಚ ।
ಅವ್ಯೈಲಕ್ಷಣ್ಯ ಸಂವಿತ್ತಿರಿತಿ ತಾವತ್ ಸಮರ್ಥಿತಾ ।
ವ್ಯವಹಾರೋಽಪಿ ತತ್ತುಲ್ಯಸ್ತತ ಏವ ಪ್ರವರ್ತತೇ ॥

(ಪ್ರಕ-ಪ-೪-೩೩-೩೭)

'ತದುಕ್ತಂ'—ಇತಿ ಹಿಂದೆ ವಿವರಿಸಿದ ಅರ್ಥವೇ ಇಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದೆ. ಗ್ರಹಣಸ್ಮರಣಾತ್ಮಕವಾದ 'ಇದಂ ರಜತಂ' ಎಂಬ ಜ್ಞಾನವು ಯಥಾರ್ಥವಾದ 'ಇದಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜತಂ' ಎಂಬ ಜ್ಞಾನದ ಸಾರೂಪ್ಯದಿಂದ ಭೇದಾಗ್ರಹಣನಿಬಂಧನವಾಗಿ ವ್ಯವಹಾರಕ್ಕೆ ಪ್ರಯೋಜಕವಾಗಿ ಪ್ರವೃತ್ತಿಜನಕವಾಗುತ್ತದೆ.

ಏವಮಗೃಹೀತವಿವೇಕಮಾಪನ್ನಸಂನಿಹಿತ ರೂಪ್ಯಜ್ಞಾನಸಾರೂಪ್ಯಂ ಗ್ರಹಣಸ್ಮರಣದ್ವಯಮಯಥಾವ್ಯವಹಾರಹೇತುರಿತಿ ಸಿದ್ಧಮ್ । ಯದ್ಯೇವಮಯಥಾವ್ಯವಹಾರೋ ಗ್ರಹಣಸ್ಮರಣಜನ್ಯಸ್ತರ್ಹಿ ಪೀತಃ ಶಂಖ ಇತ್ಯಾದೌ ಸ ನ ಸಿದ್ಧಸ್ತತ್ರ ತಯೋರಭಾವಾದಿತಿ ಚೇನ್ನ । ಅಗೃಹೀತವಿವೇಕಯೋಃ ಪ್ರಾಪ್ತಸಮೀಚೀನಸಂಸರ್ಗಜ್ಞಾನಸಾರೂಪ್ಯತ್ವೇ ಗ್ರಹಣಯೋರೇವ ವ್ಯವಹಾರಸಂಪಾದಕತ್ವೋಪಪತ್ತೇಃ । ನಯನರಶ್ಮಿವರ್ತಿನಃ ಪಿತ್ತದ್ರವ್ಯಸ್ಯ ಪೀತಿಮಾ ದೋಷವಶಾದ್ದ್ರವ್ಯರಹಿತೋ ಗೃಹ್ಯತೇ । ಶಂಖೋಽಪ್ಯಕಲಿತ ಶುಕ್ಲಗುಣಃ ಸ್ವರೂಪತೋ ಗೃಹ್ಯತೇ । ತದನಯೋರ್ಗುಣಗುಣಿನೋಃ ಸಂಸರ್ಗಯೋಗ್ಯಯೋ ರಸಂಸರ್ಗಾಗ್ರಹಸಾರೂಪ್ಯಾತ್ ಪೀತ ತಪನೀಯ ಪಿಂಡಪ್ರತ್ಯಯಾವ್ಯೈಲಕ್ಷಣ್ಯಾದ್ವ್ಯವಹಾರ ಉಪಪದ್ಯತೇ ॥

'ಏವಂ'—ಇತಿ. ನ ಗೃಹೀತೋ ವಿವೇಕೋ—ಮಿಥೋ ಭೇದೋ ಯೇನ ತತ್— ಅಗೃಹೀತ ವಿವೇಕಮ್. ಇದರಿಂದಲೇ ಅದು ಅಪ...ಸ್ಯ ಉಳ್ಳದ್ದಾಗುತ್ತದೆ. ಆಪನ್ನಂ—ಪ್ರಾಪ್ತಂ ಸನ್ನಿಹಿತರೂಪ್ಯಜ್ಞಾನೇನ —ರಜತಯಥಾರ್ಥ ಪ್ರತ್ಯಕ್ಷೇಣ ಸಹ ಸಾರೂಪ್ಯಂಯೇನ ತಾದೃಶಮ್. ಹೀಗೆ ಗ್ರಹಣಸ್ಮರಣದ್ವಯಾತ್ಮಕವಾದ ಈ ಜ್ಞಾನವು ಅಯಥಾವ್ಯವಹಾರಕ್ಕೆ ಕಾರಣವಾಗುತ್ತದೆ. 'ಯದಿ'—ಇತಿ. 'ಪೀತಃ ಶಂಖಃ' ಎಂಬ ಭ್ರಾಂತಿಯಲ್ಲಿ ಗ್ರಹಣಸ್ಮರಣರೂಪಜ್ಞಾನದ್ವಯವಿರುವುದಿಲ್ಲ. ಅಲ್ಲಿ ಗ್ರಹಣವಿದ್ದರೂ ಸ್ಮರಣವಿರುವುದಿಲ್ಲ. ಏಕೆಂದರೆ ಸಂಸ್ಕಾರೋದ್ಬೋಧಕಸಾಮಗ್ರಿಯಲ್ಲದಿರುವುದರಿಂದ ಪೀತತ್ವಾಂಶವು ಅಲ್ಲಿ ಸ್ಮರಣ ವಿಷಯವಾಗಿರುವುದಿಲ್ಲ. ಆದ್ದರಿಂದ 'ಪೀತಃ ಶಂಖಃ' ಎಂಬ ವ್ಯವಹಾರ ಉಂಟಾಗದೇ ಹೋಗಬೇಕಾಗುತ್ತದೆ. ಎಂದು ಶಂಕಾಭಿಪ್ರಾಯ ಸಮಾಧಾನ ತೋರಿಸುತ್ತಾನೆ.

'ಅಗೃಹೀತ—' ಇತಿ. ಅಲ್ಲಿ ಗ್ರಹಣಸ್ಮರಣಾತ್ಮಕಜ್ಞಾನದ್ವಯವಿಲ್ಲದಿದ್ದರೂ ಗ್ರಹಣಾತ್ಮಕವಾದ ಎರಡುಜ್ಞಾನಗಳೇ ವ್ಯವಹಾರಪ್ರಯೋಜಕವಾಗುತ್ತವೆ. 'ಪೀತ' ಎಂಬುದೊಂದು ಪ್ರತ್ಯಕ್ಷಾತ್ಮಕವಾದ ಜ್ಞಾನ. "ಶಂಖಃ" ಎಂಬ ಇನ್ನೊಂದು ಪ್ರತ್ಯಕ್ಷಜ್ಞಾನ. ಈ ಎರಡುಜ್ಞಾನಗಳಲ್ಲಿ ವಾಸ್ತವವಾಗಿ ಇರುವ ಪರಸ್ಪರ ಅಸಂಸರ್ಗ, ಭೇದಗಳು ದೋಷವಶದಿಂದ ತೋರುವುದಿಲ್ಲ. ಪಿತ್ತದೋಷದಿಂದ 'ಪೀತಃ ಶಂಖ' ಎಂಬ ಜ್ಞಾನವುಂಟಾಗುತ್ತದೆ. ಪಿತ್ತವೆಂದರೆ ನಯನರಶ್ಮಿಯಲ್ಲಿರುವ ಪೀತರೂಪವಿಶಿಷ್ಟವಾದ ಸೂಕ್ಷ್ಮವಾದ ಒಂದು ದ್ರವ್ಯ. ಆ ರಶ್ಮಿಗಳು ಶಂಖಸಂಬದ್ಧಗಳಾಗುತ್ತವೆ. ದೋಷಾಧೀನವಾಗಿ ಪಿತ್ತದ್ರವ್ಯಕ್ಕೆ ಗ್ರಹಣವಿರುವುದಿಲ್ಲ. ಆದರೆ ಅದರಲ್ಲಿರುವ ಪೀತರೂಪಮಾತ್ರ ಗೃಹೀತವಾಗುತ್ತದೆ. ಶಂಖಪ್ರತ್ಯಕ್ಷದಲ್ಲಿಯೂ ದೋಷಾಧೀನವಾಗಿ ಶ್ವೇತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪಕ್ಕೆ ಗ್ರಹಣವಿರುವುದಿಲ್ಲ. ಶ್ವೇತರೂಪಕ್ಕೆ ಆಶ್ರಯವಾದ ಶಂಖ ಮಾತ್ರ ಗ್ರಹೀತವಾಗುತ್ತದೆ. ಹೀಗೆ ಈ ಎರಡು ಜ್ಞಾನಗಳು ಸಮೀಚೀನಸಂಸರ್ಗಜ್ಞಾನಕ್ಕೆ ಸಮಾನವಾಗಿಯೇ ಇರುತ್ತವೆ. ಸುವರ್ಣಾದಿಗಳಲ್ಲಿ ವಾಸ್ತವವಾಗಿರುವ ಪೀತಗುಣಸಂಬಂಧಜ್ಞಾನವು ಸಮೀಚೀನಸಂಸರ್ಗಜ್ಞಾನವಾಗುತ್ತದೆ. ಇದರೊಡನೆ 'ಪೀತಃ ಶಂಖಃ' ಎಂಬ ಎರಡು ಪ್ರತ್ಯಕ್ಷಜ್ಞಾನಗಳಿಗೆ ಅಸಂಸರ್ಗಾಗ್ರಹರೂಪಸಾಧರ್ಮ್ಯದಿಂದ ಅಲ್ಲಿ ಬಂದಂತೇ ಇಲ್ಲಿಯೂ ಪೀತಃ ಎಂಬ ವ್ಯವಹಾರ ಉಂಟಾಗುತ್ತದೆಯೆಂದು ತಾತ್ಪರ್ಯ. ತಪನೀಯಂ—ಚಿನ್ನ, ಅಪ್ಯೇಕ್ಷಣ್ಯ—ಸಾರೂಪ್ಯ, ಇದನ್ನೇ ಕಾರಿಕೆಯಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ. 'ಯಥೋಕ್ತಂ"—ಇತಿ.

ಪೀತಶಂಖಾವಬೋಧೇ ಹಿ ಪಿತ್ತಸ್ಯೇಂದ್ರಿಯವರ್ತಿನಃ ।
ಪೀತಿಮಾ ಗೃಹ್ಯತೇ ದ್ರವ್ಯರಹಿತೋ ದೋಷತಸ್ತಥಾ ॥
ಶಂಖಸ್ಯೇಂದ್ರಿಯದೋಷೇಣ ಶುಕ್ಲಿಮಾ ನ ಚ ಗೃಹ್ಯತೇ ।
ಕೇವಲಂ ದ್ರವ್ಯಮಾತ್ರಂ ತು ಪ್ರಥತೇ ರೂಪವರ್ಜಿತಮ್ ॥
ಗುಣೇ ದ್ರವ್ಯವ್ಯಪೇಕ್ಷೇ ಚ ದ್ರವ್ಯೇ ಚ ಗುಣಕಾಂಕ್ಷಿಣಿ ।
ಭಾಸಮಾನೇ ತಯೋರ್ಬುದ್ಧಿರಸಂಬಂಧಂ ನ ಬುಧ್ಯತೇ ॥
ಸತ್ಯಪೀತಾವಭಾಸೇನ ಸಮೇ ಭಾತೇ ಮತೀ ಇಮೇ ।
ವ್ಯವಹಾರೋಽಪಿ ತತ್ತುಲ್ಯ ಏವಮತ್ರಾಪಿ ಯುಜ್ಯತೇ ॥
(ಪ್ರಕ–ಪ–೪।೪೮।೫೧) ಇತಿ.

"ಪೀತಃ ಶಂಖಃ" ಎಂಬಲ್ಲಿ ಪೀತಜ್ಞಾನ, ಶಂಖಜ್ಞಾನ ಹೀಗೆ ಎರಡು ಜ್ಞಾನಗಳಿರುತ್ತವೆ. 'ಪೀತ' ಎಂಬಲ್ಲಿ ದೋಷಾಧೀನವಾಗಿ ನಯನದಲ್ಲಿರುವ ಪಿತ್ತದ್ರವ್ಯದಲ್ಲಿರುವ ಪೀತ ಬಣ್ಣ ಮಾತ್ರ (ದ್ರವ್ಯಬಿಟ್ಟು) ಗೃಹೀತವಾಗುತ್ತದೆ. "ಶಂಖ" ಎಂಬಲ್ಲಿ ಇಂದ್ರಿಯದೋಷದಿಂದ ಶಂಖದ ಶೌಕ್ಲ್ಯಗೃಹೀತವಾಗದೇ ಶಂಖದ್ರವ್ಯಮಾತ್ರ ಗೃಹೀತವಾಗುತ್ತದೆ. ಗುಣಕ್ಕೆ ಸ್ವಾಶ್ರಯದ್ರವ್ಯಾಪೇಕ್ಷೆಯೂ, ದ್ರವ್ಯಕ್ಕೆ ಸ್ವಾಶ್ರಿತಗುಣಾಪೇಕ್ಷೆಯೂ ಇರುವುದು ಸ್ವಾಭಾವಿಕ. ಎಲ್ಲಿ ಗುಣವೂ ದ್ರವ್ಯವೂ ತೋರುತ್ತವೆಯೋ ಅಲ್ಲಿ ವಾಸ್ತವವಾಗಿ ಪರಸ್ಪರ ಸಂಬಂಧವಿಲ್ಲದಿದ್ದರೂ ಆ ಅಸಂಬಂಧವನ್ನು ಆ ಎರಡು ಜ್ಞಾನಗಳೂ ವಿಷಯೀಕರಿಸುವುದಿಲ್ಲ. ಸತ್ಯಪೀತಾವಭಾಸವು ಸುವರ್ಣಾದಿಗಳಲ್ಲಿ ಪ್ರಸಿದ್ಧವಾಗಿದೆ.

ನ ನ್ವಿದಂ ರಜತಮಿತಿ ಭ್ರಾಂತಿಜ್ಞಾನಾನಭ್ಯುಪಗಮೇ ರಜತಪ್ರಸಕ್ತೇರಸತ್ತ್ವಾತ್ ನೇದಂ ರಜತಮಿತಿ ನಿಷೇಧಃ ಕಥಂ ಕಲಧೌತಾಭಾವಂ ಬೋಧಯತೀತಿ ಚೇತ್ ನೈಷ ದೋಷಃ । ಭೇದಾಗ್ರಹ ಪ್ರಸಂಜಿತಸ್ಯ ಶುಕ್ತೌ ರಜತವ್ಯವಹಾರಸ್ಯ ನಿಷೇಧ ಸ್ವೀಕಾರೇಣ ಕಲ್ಪನಾಲಾಘವಸದ್ಭಾವಾತ್ । ತದುಕ್ತಂ ಪಂಚಿಕಾಪ್ರಕರಣೇ —

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಿಥ್ಯಾಭಾವೋಽಪಿ ತತ್ತುಲ್ಯವ್ಯಹಾರ ಪ್ರವರ್ತನಾತ್ ।
ರಜತವ್ಯವಹಾರಾಂಶೇ ವಿಸಂವಾದಯುತೋ ಸರಾತ್ ।
ಬಾಧಕ ಪ್ರತ್ಯಯಸ್ಯಾಪಿ ಬಾಧಕತ್ವಮತೋ ಮತಮ್ ॥
ಪ್ರಸಜ್ಯಮಾನರಜತ ವ್ಯವಹಾರಾನವಾರಣಾತ್ ॥
(ಪ್ರಕ-ಪ ೪।೩ಲವರ್ಷಿ) ಇತಿ ॥

ತದನೇನ ಪ್ರಾಚೀನಯೋಃ ಜ್ಞಾನಯೋಃ ಸತ್ಯತ್ವೇ ಕಥಂ ಭ್ರಮತ್ವಪ್ರಸಿದ್ಧಿರಿತಿ ಶಂಕಾ ಪರಾಕೃತಾ । ಅಯಥಾವ್ಯವಹಾರ ಪ್ರವರ್ತಕತ್ವೇನ ತದುಪಪತ್ತೇಃ ॥

ನಿಷೇಧ ಹೇಳಬೇಕಾದರೆ ಪ್ರಾಪ್ತಿಪೂರ್ವಕವಾಗಿರಬೇಕು. ಬ್ರಾಂತಿ ಒಪ್ಪದಿದ್ದರೆ ನಿಷೇಧಕೊಡುವುದು ಹೇಗೆ ? ಕಲಧೌತಃ ಬೆಳ್ಳಿ. ಸಮಾಧಾನ ತೋರಿಸುತ್ತಾನೆ. “ಭೇದಾಗ್ರಹ”—ಇತಿ. ‘ಇದಂ ರಜತವ್ಯವಹಾರಾರ್ಹಂ ನ’ ಎಂಬ ಅಭಿಪ್ರಾಯದಿಂದ ‘ನೇದಂ ರಜತಂ’ ಎಂದು ಹೇಳಲ್ಪಡುತ್ತದೆಂದು ತಾತ್ಪರ್ಯ. ರಜತನಿಷೇಧಾಂಗೀಕಾರ ಮಾಡಿದರೂ ತನ್ಮೂಲಕವಾಗಿ ರಜತವ್ಯವಹಾರ ನಿಷೇಧವು ಬಂದೇ ಬರುತ್ತದೆ. ಇದರಿಂದ ಉಭಯಾಂಗೀಕೃತವಾದ ರಜತ ವ್ಯವಹಾರ ನಿಷೇಧವೇ ಲಾಘವದಿಂದ ಸ್ವೀಕರಿಸುವುದು ಉತ್ತಮವೆಂದಾಗುತ್ತದೆ. ಹೀಗಿರುವಾಗ ಅತಿರಿಕ್ತವಾಗಿ ‘ನೇದಂ ರಜತಂ’ ಎಂಬ ನಿಷೇಧವನ್ನು ಕಲ್ಪಿಸಬೇಕಾಗಿಲ್ಲ. ಮಿಥ್ಯಾಭಾವಃ — ಮಿಥ್ಯಾತ್ವಂ. ಭ್ರಮವೆಂದರ್ಥ. ಇದಂ ಎಂಬ ಅನುಭವರೂಪ ವಿಜ್ಞಾನವು ಪ್ರಮಾಣವಾಗಿರುತ್ತದೆ. ಸ್ಮರಣರೂಪ ಜ್ಞಾನವು ಭ್ರಾಂತಿಯಾಗಿರುತ್ತದೆ. ಯಥಾರ್ಥಾನುಭವದಿಂದ ಉಂಟಾಗುವ ವ್ಯವಹಾರಕ್ಕೆ ಸಮಾನವಾದ ವ್ಯವಹಾರಪ್ರವರ್ತಕವಾದರೂ ವ್ಯವಹಾರಕಾಲದಲ್ಲಿ ವಿಸಂವಾದಕವಾದುದರಿಂದ ಅದು ಭ್ರಾಂತಿಯಾಗುತ್ತದೆ. ಅದರಿಂದುಂಟಾಗುವ ಪ್ರವೃತ್ತಿಯೂ ನಿಷ್ಫಲವಾಗಿರುತ್ತದೆ. ‘ಇದಂ ರಜತಂ’ ಎಂಬುದು ಒಂದೇ ಜ್ಞಾನವೆಂದೂ ಅದು ಭ್ರಮವೆಂದೂ ಅಂಗೀಕರಿಸುವವರ ಮತದಲ್ಲಿಯೂ ಬಾಧಕಪ್ರತ್ಯಯಾಧೀನವಾಗಿಯೇ ಮಿಥ್ಯಾತ್ವವನ್ನಂಗೀಕರಿಸಬೇಕು. ಅವರು ಇದಮಂಶಕ್ಕೆ ಮಿಥ್ಯಾತ್ವ ಹೇಳಲು ಸಮರ್ಥರಾಗುವುದಿಲ್ಲ. ಏಕೆಂದರೆ ಆ ಅಂಶದಲ್ಲಿ ಬಾಧಕಪ್ರತ್ಯಯದಶೆಯಲ್ಲಿಯೂ ಬಾಧಕವಿಲ್ಲದಿರುವುದರಿಂದ ಮಿಥ್ಯಾತ್ವಸಂಭವಿಸುವುದಿಲ್ಲ. ‘ತದನೇನ’—ಇತಿ. ಹೀಗೆ ಜ್ಞಾನದ್ವಯಕ್ಕೆ ಸತ್ಯತ್ವವಿದ್ದರೂ ಅಯಥಾವ್ಯವಹಾರವನ್ನುಂಟುಮಾಡುವುದರಿಂದ ಅದಕ್ಕೆ ಭ್ರಮತ್ವ ಸಿದ್ಧವಾಗುತ್ತದೆ. ಭ್ರಾಂತಿಯೆಂದು ಅಂಗೀಕರಿಸಬೇಕಾಗಿಲ್ಲ.

ಕಿಂ ಚ ನೇದಂ ರಜತಮಿತಿ ಬಾಧಕಾವಬೋಧೋ ನಾಭಾವಮವಗಾಹತೇ । ಭಾವವ್ಯತಿರೇಕೇಣಾಭಾವಸ್ಯ ದುರ್ಗ್ರಹಣತ್ವಾತ್ । ಯದ್ಯೇವಮಂಗನಾಸ್ತೀತಿ ಪ್ರತ್ಯಯಸ್ಯ ಕಿಮಾಲಂಬನಮ್ ? । ಅಪರಥಾ ಮಹಾಭಾನಿಕಪಕ್ಷಾನುಪ್ರವೇಶ ಇತಿ ಚೇತ್—ಮೈವಂ ಭಾಷಿಷ್ಠಾಃ । ಅಭಾವಸ್ಯ ಧರ್ಮಿಪ್ರತಿಯೋಗಿ ನಿರೂಪಣಾಧೀನ ನಿರೂಪ್ಯತ್ವೇವಾವಶ್ಯಾಭ್ಯುಪಗಮನೀಯೋ ದೃಶ್ಯೇ ಪ್ರತಿಯೋಗಿನ್ಯದೃಶ್ಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಮಾಣ್ಯಮಾಣೇಧಿಕರಣಮಾತ್ರಬುದ್ಧೇರೇವ ನಾಸ್ತೀತಿ ವ್ಯವಹಾರೋಪಪತ್ತೌ ಅತಿರಿಕ್ತಾಭಾವಕಲ್ಪನಾಯಾಂ ಪ್ರಮಾಣಾಭಾವಾತ್ । ತದುಕ್ತಮನ್ವೃತಕಲಾಯಾಮ್ ।

ಅತ್ರೋಚ್ಯತೇ ದ್ವಯೀ ಸಂವಿದ್ವಸ್ತುನೋ ಭೂತಲಾದಿನಃ ।
ಏಕಾ ಸಂಸೃಷ್ಟವಿಷಯಾ ತನ್ಮಾತ್ರವಿಷಯಾ ಪರಾ ॥
ತನ್ಮಾತ್ರವಿಷಯಾ ವಾಪಿ ದ್ವಯೀ ಸಾಥ ನಿಗದ್ಯತೇ ।
ಪ್ರತಿಯೋಗಿನ್ಯದೃಶ್ಯೇ ಚ ದೃಶ್ಯೇ ಚ ಪ್ರತಿಯೋಗಿನಿ ।
ತತ್ರ ತನ್ಮಾತ್ರಧೀರ್ಯೇಯಂ ಸ್ಮೃತೇ ಚ ಪ್ರತಿಯೋಗಿನಿ ।
ನಾಸ್ತಿತ್ವಂ ಸೈವ ಭೂಭಾಗೇ ಘಟಾದಿಪ್ರತಿಯೋಗಿನಃ ॥
(ಪ್ರಕ-ಪ-೯।೩೭ + ೩೭)

ಇದು ರಜತವಲ್ಲವೆಂಬ ನಿಷೇಧವು ಅಭಾವವನ್ನು ವಿಷಯೀಕರಿಸುವುದಿಲ್ಲ. ಭಾವಕ್ಕಿಂತಬೇರೆಯಾಗಿ ಅಭಾವವೆಂಬುದು ಬೇರೊಂದಿಲ್ಲ. ಅಭಾವ ಅಧಿಕರಣಸ್ವರೂಪವೆಂದು ರಾಮಾನುಜದರ್ಶನದಲ್ಲಿ ವಿವೃತವಾಗಿದೆ. ಹಾಗಾದರೆ (ಅಭಾವ ಇಲ್ಲದೆ ಹೋದರೆ) 'ನಾಸ್ತಿ' ಎಂಬ ಪ್ರತ್ಯಯಕ್ಕೆ ಆಶ್ರಯ ಯಾವುದು ? ಆಶ್ರಯವಿಲ್ಲದೆ ಜ್ಞಾನವುಂಟಾಗುತ್ತದೆಯೆಂದು ಅಂಗೀಕರಿಸಿದರೆ ಮಾಹಾಭಾಸಿಕ ಮತವನ್ನಂಗೀಕರಿಸಿದಂತಾಗುತ್ತದೆ. ಮಾಧ್ಯಮಿಕ ಬೌದ್ಧನಿಗೆ ಮಾಹಾಭಾಸಿಕನೆಂದು ಹೆಸರು. ಶೂನ್ಯವಾದಿಯಾದ ಅವನು ಸಕಲವ್ಯವಹಾರವನ್ನು ನಿರಾವಲಂಬನವಾಗಿ ಅಂಗೀಕರಿಸುತ್ತಾನೆ. ಸಮಾಧಾನ ತೋರಿಸುತ್ತಾನೆ.

'ಅಭಾವಸ್ಯ'—ಇತಿ. 'ಭೂತಲೇ ಘಟೋನಾಸ್ತಿ' ಎಂಬಲ್ಲಿ ಘಟಾಭಾವಜ್ಞಾನ ಬರಬೇಕಾದರೆ ಮೊದಲು ಭೂತಲರೂಪಧರ್ಮಿಜ್ಞಾನವೂ, ಘಟರೂಪ ಪ್ರತಿಯೋಗಿ ಜ್ಞಾನವೂ ಇರಬೇಕು. ಅಭಾವವೆಂಬ ಸ್ವತಂತ್ರಪದಾರ್ಥವನ್ನಗೀಕರಿಸಿದರೂ ಧರ್ಮಿ ಪ್ರತಿಯೋಗಿಜ್ಞಾನಗಳು ಅತ್ಯಾವಶ್ಯಕಗಳಾಗಿರುತ್ತವೆ. ಆಗ "ಧರ್ಮಿಕಲ್ಪನಾತಃ ವರಂ ಧರ್ಮಕಲ್ಪನಾ" ಎಂಬ ನ್ಯಾಯದಿಂದ ಅಭಾವವೆಂಬ ಒಂದು ಅಧಿಕರಣದ ಧರ್ಮವಿಶೇಷವೆಂದು ಸಿದ್ಧವಾಗುತ್ತದೆ. ಧರ್ಮವೆಂದರೆ ಕೇವಲ ಭೂತಲಸ್ವರೂಪವಾಗಿರುತ್ತದೆ. ಇದರಿಂದಲೇ 'ಘಟೋನಾಸ್ತಿ' ಎಂಬ ವ್ಯವಹಾರವು ಉಪಪನ್ನವಾಗುತ್ತದೆ. ಘಟಾದಿಪ್ರತಿಯೋಗಿಯ ಅದರ್ಶನದಿಂದ ಕೇವಲ ಭೂತಲಜ್ಞಾನವುಂಟಾಗುತ್ತದೆ. ಪ್ರತಿಯೋಗಿಯ ಅದರ್ಶನವು, ಪ್ರತಿಯೋಗಿ ಸ್ಮರಣ ಸಹಕೃತವಾಗಿದ್ದರೂ ಅದರಿಂದ ತೊಂದರೆ ಇಲ್ಲ ಹೀಗೆ ಅತಿರಿಕ್ತವಾದ ಅಭಾವವನ್ನು ಕಲ್ಪಿಸಬೇಕಾಗಿಲ್ಲವೆಂದು ಮೀಮಾಂಸಕ ಮತ. ಇದನ್ನೇ ಕಾರಿಕೆಯಲ್ಲಿ ವಿವರಿಸುತ್ತಾನೆ. ಶಾಲಿಕಾನಾಥಮಿಶ್ರರ ಪ್ರಕರಣಪಂಚಿಕಾದಲ್ಲಿ ಅನ್ವೃತಕಲಾ ಎಂಬುದು ಆರನೆಯಪ್ರಕರಣ. ಭೂತಲಾದಿನಃ ಎಂಬುದು ವಸ್ತುನಾಃ ಎಂಬುದಕ್ಕೆ ವಿಶೇಷಣ. ಭೂತಲಾದಿವಸ್ತುವಿನ ಜ್ಞಾನವು ಎರಡು ರೀತಿಯಾಗಿರುತ್ತದೆ. ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸೃಷ್ಟವಿಷಯಕವಾದುದು. 'ಘಟವತ್ ಭೂತಲಂ' ಎಂಬಲ್ಲಿ ಘಟವೈಶಿಷ್ಟ್ಯ ತೋರುತ್ತದೆ. ಇನ್ನೊಂದು ಅಸಂಸೃಷ್ಟವಿಷಯಕವಾದುದು. ಭೂತಲಮಾತ್ರಜ್ಞಾನವಿದು. ಇದೂ ಎರಡು ವಿಧವಾಗಿವೆ. ಘಟಾದ್ಯದರ್ಶನ ಸಹಕೃತಜ್ಞಾನ, ತದ್ದರ್ಶನಕಾಲಿಕಜ್ಞಾನ. ಇಲ್ಲಿ ಮೊದಲನೆಯ ಜ್ಞಾನವು ಯಾವಾಗ ಉಂಟಾಗುತ್ತದೆಯೋ ಆಗ ತತ್ಸಹಕೃತವಾದ ಭೂತಲಸ್ವರೂಪವೇ ಅಭಾವವಾಗುತ್ತದೆಂದರ್ಥ.

ಅತ ಏವ ಚ ಪ್ರಾಭಾಕರಮತಾನುಸಾರಿಭಿಃ ಪ್ರಮಾಣಪಾರಾಯಣೇ ಪ್ರತ್ಯಕ್ಷಾದೀನಿ ಪಂಚೈವ ಪ್ರಮಾಣಾನಿ ಪ್ರಪಂಚಿತಾನಿ । ನನ್ವೇವಮಭಾವಸ್ಯಾಭಾವೇ ನಕಾರಸ್ಯ ವೈಯರ್ಥ್ಯಮಾಪದ್ಯೇತ । ಅನುಶಾಸನವಿರೋಧಶ್ಚಾಪತೇದಿತಿ ಚೇತ್—ತದೇತದ್ವಾರ್ತಮ್ । ಏಕೋನಪಂಚಶಾದ್ವರ್ಣಾನಾಂ ಮಧ್ಯೇ ಕಸ್ಯಾಪಿ ವರ್ಣಸ್ಯಾಭಾವಾರ್ಥತ್ವಾದರ್ಶನೇನ ವರ್ಣಸ್ಯ ಸತೋ ನಕಾರಸ್ಯ ತದರ್ಥತ್ವಾನುಪಪತ್ತೇಃ । ನ ಚೈವಮನುಶಾಸನವಿರೋಧಃ। ತದನ್ಯತದಭಾವತದ್ವಿರುದ್ಧೇಷದರ್ಥೇಷ್ವನುಶಾಸಸ್ಯೈವಮರ್ಥಃ ಸ್ಯಾತ್ । ತಥಾ ಹಿ — ಚೇತನಾನಾಂ ಮಧ್ಯೇ ಕಶ್ಚನ ಕಸ್ಯಚಿಚ್ಛತ್ರುಃ ಕಶ್ಚನ ಕಸ್ಯಚಿನ್ಮಿತ್ರಂ ಕಶ್ಚನ ಕಸ್ಯಚಿದುದಾಸೀನಸ್ತಥೈವಾಚೇತನಾನಾಮಪಿ । ತದನ್ಯಪದೇನ ತದುದಾಸೀನೋ ನಕಾರಾರ್ಥಃ । ವಿರುದ್ಧಪದೇನ ಶತ್ರುರ್ನಕಾರಾರ್ಥಃ । ತದಭಾವಪದೇನ ಮಿತ್ರಂ ನಕಾರಾರ್ಥಃ । ತಥಾ ಚ ಅಬ್ರಾಹ್ಮಣಪದ ಏವೈತತ್ತ್ರಯಂ ಪ್ರತೀಯತೇ ಶೂದ್ರ ಇತ್ಯುದಾಸೀನೋ ಯವನ ಇತಿ ಶತ್ರುಃ ಕ್ಷತ್ರಿಯ ಇತಿ ಮಿತ್ರಮ್ । ಏವಂ ಸರ್ವತ್ರ ನಞ್ಪ್ರಯೋಗಸ್ಥಲೇ ದ್ರಷ್ಟವ್ಯಮಿತಿ ನ ಕಶ್ಚಿದಭಾವೋ ಭಾವವ್ಯತಿರಿಕ್ತಃ ಸಂಭವತಿ । ತಸ್ಮಾದುಕ್ತಯಾ ರೀತ್ಯಾ ಭ್ರಮಪ್ರಸಿದ್ಧ್ಯಾ ವಿವಾದಾಧ್ಯಾಸಿತಾಃ ಪ್ರತ್ಯಯಾ ಯಥಾರ್ಥಾಃ—ಪ್ರತ್ಯಯತ್ವಾತ್-ದಂಡೀತಿ ಪ್ರತ್ಯಯವತ್ ಇತಿ ಸಿದ್ಧಮ್ ॥

ಪ್ರಕರಣ ಪಂಚಿಕೆಯಲ್ಲಿ ಪ್ರಮಾಣಪಾರಾಯಣವೆಂಬುದು ೫ನೇ ಪ್ರಕರಣ. ಅಲ್ಲಿ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಎಂದು ಐದೇ ಪ್ರಮಾಣಗಳು ಹೇಳಿವೆ. ಮೀಮಾಂಸಕೈಕದೇಶಿಗಳಾದ ಭಾಟ್ಟರು ಅನುಪಲಬ್ಧಿ ಎಂಬ ೬ನೇ ಪ್ರಮಾಣವನ್ನಂಗೀಕರಿಸಿದ್ದರೂ ಪ್ರಾಭಾಕರಮತಾನುಯಾಯಿಗಳು ಅದನ್ನು ಸ್ವೀಕರಿಸಿಲ್ಲ. ಅನುಪಲಬ್ಧಿಪ್ರಮಾಣದಿಂದ ಅಭಾವಮಾತ್ರ ಗೃಹೀತವಾಗುತ್ತವೆ. ಭಾವಾತಿರಿಕ್ತವಾಗಿ ಅಭಾವವೆಂಬ ಪದಾರ್ಥವನ್ನೇ ಅಂಗೀಕರಿಸಿದ ಮೇಲೆ ಅದನ್ನು ಗ್ರಹಿಸಲು ಏಕೆ ಒಂದು ಪ್ರಮಾಣವನ್ನಂಗೀಕರಿಸಬೇಕೆಂದು ಆವರ ಅಭಿಪ್ರಾಯ. 'ನನು'— ಇತಿ. ಅಭಾವವನ್ನಂಗೀಕರಿಸದ ಮೇಲೆ ಅದನ್ನು ತಿಳಿಯುವ ನಞ್ ವ್ಯರ್ಥವಲ್ಲವೇ? ನಞ್ ಅವ್ಯಯ. ಇದಕ್ಕೆ ವಾಚ್ಯಾರ್ಥವೇ ಇಲ್ಲದಂತಾಗುತ್ತದೆ· ಪಾಣಿನಿಋಷಿಗಳೂ ಕೂಡಾ ಈ ಅವ್ಯಯವನ್ನು ಸ್ವರಾದಿಗಣದಲ್ಲಿ ಪಠಿಸಿರುತ್ತಾರೆ. ನಞ್ (ಪಾ–ಸೂ–೨–೨–೬) ಎಂಬ ಸೂತ್ರದಲ್ಲಿ ನಞ್‌ಗೆ ಉತ್ತರಪದದೊಡನೆ ತತ್ಪುರುಷಸಮಾಸ ಹೇಳಿರುತ್ತಾನೆ. ಈಗ ಅರ್ಥವಿಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಂದರೆ ಅದಕ್ಕೆ ಉತ್ತರಪದದೊಡನೆ ಅನ್ವಯವೇ ಬಾರದಿರುವುದರಿಂದ ಸಮಾಸಸಿದ್ಧಿಸ ಲಾರದು ಎಂದು ಆಶಂಕಿಸಿದರೆ ಅದು ವಾರ್ತ ಅಂದರೆ (ಫಲ್ಗು) ತಿರುಳಿಲ್ಲದ ಆಶಂಕೆ ಯೆಂದು ಖಂಡಿಸುತ್ತಾನೆ.

'ಏಕೋನ'—ಇತಿ. ೧೬ ಸ್ವರಗಳು. ೨೫ ಕಕಾರಾದಿವರ್ಗೀಯಾಕ್ಷರಗಳು. ಯಕಾರಾದಿ ೮. ಹೀಗೆ ೪೯ ವರ್ಣಗಳಾಗುತ್ತವೆ. ಇವುಗಳಲ್ಲಿ ಯಾವ ವರ್ಣಕ್ಕೂ ಅಭಾವಾರ್ಥಕವಿಲ್ಲ. ಹೀಗಿರುವಾಗ ಇವುಗಳ ಮಧ್ಯದಲ್ಲಿರುವ ನಕಾರವು ಅಭಾವಾರ್ಥಕ ವಾಗುವುದು ಹೇಗೆ ? ಇದರಿಂದ ವ್ಯಾಪ್ತಿ ಸೂಚಿತವಾಗುತ್ತದೆ. ನವರ್ಣಃ —ನಾ ಭಾವಾರ್ಥಕಃ—ವರ್ಣತ್ವಾತ್ [ಅಕಾರಾದಿವರ್ಣವತ್ । ಅನುಶಾಸನ ವ್ಯರ್ಥವಾಗುವು ದಿಲ್ಲವೇ ? ಅಂದರೆ ಅದು ತದನ್ಯ, ತದಭಾವ, ತದ್ವಿರುದ್ಧಾರ್ಥಗಳಲ್ಲಿ ಚಾರಿತಾರ್ಥ್ಯ ಹೊಂದುತ್ತದೆ. ಚೇತನ ಪ್ರಾಣಿಗಳಲ್ಲಿ ಒಂದಕ್ಕೆ ಒಂದು ಶತ್ರುವೂ, ಒಂದಕ್ಕೆ ಒಂದು ಮಿತ್ರನೂ, ಒಂದಕ್ಕೆ ಒಂದು ಉದಾಸೀನವೂ ಆಗಿರುತ್ತದೆ. ಹೀಗೆಯೇ ಅಚೇತನ ವಿಷಯದಲ್ಲಿಯೂ ತಿಳಿಯಬೇಕು. ತದನ್ಯವೆಂದಾಗ ಉದಾಸೀನವೆಂಬುದು ನಞರ್ಥ. ವಿರುದ್ಧಪದದಿಂದ ಶತ್ರು ನಕಾರಾರ್ಥ. ತದಭಾವದಿಂದ ಮಿತ್ರ ನಕಾರಾರ್ಥವಾಗುತ್ತದೆ. ಅಬ್ರಾಹ್ಮಣ ಎಂಬಲ್ಲಿ ನಞಿನಿಂದ ಶೂದ್ರನಾದರೆ ಉದಾಸೀನನೆಂದೂ, ಯವನನಾದರೆ ಶತ್ರುವೆಂದೂ, ಕ್ಷತ್ರಿಯನಾದರೆ ಮಿತ್ರನೆಂದೂ ಬೋಧಿತವಾಗುತ್ತದೆ. ಹೀಗೆ ನಞ ಸ್ಥಳ ದಲ್ಲಿ ಅರ್ಥಸಂಗತವಾಗುವುದರಿಂದ ಭಾವವ್ಯತಿರಿಕ್ತವಾದ ಅಭಾವವೆಂಬುದು ಎಲ್ಲಿಯೂ ಅರ್ಥವಾಗುವುದಿಲ್ಲ. 'ಉಕ್ತಯಾ'—ಇತಿ. 'ಇದಂ ರಜತಂ' ಎಂಬಲ್ಲಿ ಗ್ರಹಣಸ್ಮರ ಣಾತ್ಮಕ ಜ್ಞಾನಗಳೆರಡೂ ಸತ್ಯವಾದರೂ ವಿಸಂವಾದಿಪ್ರವೃತ್ತಿಜನಕವಾದುದರಿಂದ ಅದಕ್ಕೆ ಭ್ರಮತ್ವ ಸಿದ್ಧವಾಗುತ್ತದೆ. ರಜತವ್ಯವಹಾರನಿಷೇಧಾಭಿಪ್ರಾಯದಿಂದ 'ನೇದಂ ರಜತಂ' ಎಂಬ ಬಾಧವೂ ಕೂಡುತ್ತದೆ. ವಿವಾದಾಧ್ಯಾಸಿತಾಃ — ಯಥಾರ್ಥವೋ ಅಯ ಥಾರ್ಥವೋ ಎಂದು ವಾದಗ್ರಸ್ತವಾದ 'ಇದಂ ರಜತಂ' ಇತ್ಯಾದಿ ಪ್ರತ್ಯಯಗಳೆಂದರ್ಥ. ಇದನ್ನು ಹೇಳಿರುವುದರಿಂದ ಸಂದಿಗ್ಧಸಾಧ್ಯಾವತ್ತ್ವರೂಪಪಕ್ಷವನ್ನು ತೋರಿಸಿದಂತಾಗು ತ್ತದೆ. ಇಲ್ಲಿಯವರೆಗೆ ಮೀಮಾಂಸಕಮತ.

ತದಪರೇ ನ ಕ್ಷಮಂತೇ । ಇಹ ಖಲು ನಿಖಿಲಪ್ರೇಕ್ಷಾವಾನ್ ಸಮೀಹಿತತತ್ಸಾಧನಯೋ ರನ್ಯತರವೇದನೇ ಪ್ರವರ್ತತೇ ನ ಚ ರಜತಮರ್ಥಯಮಾನಸ್ಯ ಶುಕ್ತಿಕಾಶಕಲ ಜ್ಞಾನಂ ತದ್ರೂಪಮನುಭಾವಯಿತುಂ ಪ್ರಭವತಿ । ಶುಕ್ತಿಕಾಶಕಲಸ್ಯ ಸಮೀಹಿತ ತತ್ಸಾಧನಯೋರನ್ಯತರಭಾವಾಭಾವಾತ್ । ನಾಪಿ ರಜತಸ್ಮರಣಂ ಪುರೋವರ್ತಿನಿ ಪ್ರವೃತ್ತಿಕಾರಣಮ್ । ತಸ್ಯಾನುಭವಪಾರತಂತ್ರ್ಯತಯಾನುಭವದೇವ ಏವ ಪ್ರವರ್ತಕತ್ವಾತ್ । ನಾಪಿ ಭೇದಾಗ್ರಹೋ ವ್ಯವಹಾರಕಾರಣಮ್ । ಗ್ರಹಣ ನಿಬಂಧನತ್ವಾತ್ ಚೇತನವ್ಯವಹಾರಸ್ಯ । ನನು ನ ವಯ ಮೇಕೈಕಸ್ಯ ಕಾರಣತ್ವಂ ಬ್ರೂಮ ಹೇಯೋನ್ಯೈವಮುಪಾಲಭ್ಯೇಮಹಿ । ಕಿಂ ತ್ವಗೃಹೀತವಿವೇಕಸ್ಯ ಜ್ಞಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವಯಸ್ಯ ಪ್ರಾಪ್ತಸಮೀಚೀನಪುರಃಸ್ಥಿತ ರಜತಜ್ಞಾನಸಾರೂಪ್ಯಸ್ಯೈತ್ಯನುಕ್ತೋಽಪಾಲಂಭೋಽಯಮಿತಿಚೇತ್—ತದಪ್ಯಯುಕ್ತಮ್ । ವಿಕಲ್ಪಾಸಹತ್ವಾತ್ ॥

ಅಯತಾರ್ಥಜ್ಞಾನವೇ ಇಲ್ಲವೆಂಬ ಮೀಮಾಂಸಕಮತವನ್ನು ದೂಷಿಸುತ್ತಾನೆ. 'ತದಪರೇ'—ಇತಿ. ಲೋಕದಲ್ಲಿ ಜ್ಞಾನವಿದ್ದವನು ತನಗೆ ಇಷ್ಟವನ್ನು ಅಥವಾ ಅದರ ಸಾಧನವನ್ನು ತಿಳಿಯಲು ಯತ್ನಿಸುತ್ತಾನೆ. ವಸ್ತುತಃ ರಜತವಿಲ್ಲದಿರುವಾಗ ಇರುವ ಶುಕ್ತಿಕಾಶಕಲ (ತುಂಡು)ವು ಅಥವಾ ಅದರಲ್ಲಿರುವ ಇದಂತ್ವೇನ ಜ್ಞಾನವೂ ರಜತಾರ್ಥಿಗೆ ಸಮೀಹಿತವಸ್ತುಸ್ವರೂಪಾನುಭವವನ್ನಾಗಲೀ, ಅಥವಾ ಅದರ ಸಾಧನಸ್ವರೂಪಾನುಭವವನ್ನಾಗಲೀ ಉಂಟುಮಾಡಲು ಶಕ್ತನಾಗುವುದಿಲ್ಲ. ಏಕೆಂದರೆ ಶುಕ್ತಿಕಾಶಕಲವು ಇಷ್ಟವಾದ ವಸ್ತುವೂ ಅಲ್ಲ, ಅಥವಾ ತತ್ಸಾಧನವೂ ಆಗಿರುವುದಿಲ್ಲ. ರಜತಸ್ಮರಣವೂ ಕೂಡಾ ಮುಂದಿರುವ ವಸ್ತುವಿನಲ್ಲಿ ಪ್ರವೃತ್ತಿಕಾರಣವಾಗುವುದಿಲ್ಲ. ಸ್ಮರಣ ಯಾವಾಗಲೂ ಅನುಭವಾನುಸಾರಿಯಾದುದರಿಂದ ಯಾವ ದೇಶದಲ್ಲಿ ಮೊದಲು ರಜತವನ್ನನುಭವಿಸಿದ್ದನೋ ಆದೇಶಾಭಿಮುಖವಾಗಿಯೇ ಆ ಅನುಭವಜನ್ಯಸ್ಮರಣದಿಂದ ಪ್ರವೃತ್ತಿ ಹೊಂದಬೇಕೇವಿನಾ ಎದುರಿಗಿರುವ ಶುಕ್ತಿಯಲ್ಲಿ ಎಂದೂ ಪ್ರವೃತ್ತಿ ಹೊಂದುವುದು ಸಾಧ್ಯವಿಲ್ಲ. ಭೇದಾಗ್ರಹವು ವ್ಯವಹಾರಕಾರಣವೆಂದುದೂ ಸಮಂಜಸವಲ್ಲ. ಚೇತನ ವ್ಯವಹಾರವು ಯಾವಾಗಲೂ ಗ್ರಹಣ ಮೂಲಕವಾಗಿರುತ್ತದೆ. ಹೀಗಿರುವಾಗ ಅಗ್ರಹಣಮಾತ್ರದಿಂದ ಅವು ಉಂಟಾಗುವುದು ಹೇಗೆ ?

'ನನು'—ಇತಿ. ಮೀಮಾಂಸಕನು ತನ್ನ ಮತವನ್ನು ಸಾಧಿಸುತ್ತಾನೆ. ಕೇವಲ 'ಇದಂ' ಎಂಬ ಗ್ರಹಣ (ಜ್ಞಾನ) ಕ್ಕಾಗಲೀ, ಕೇವಲ ರಜತಸ್ಮರಣಕ್ಕಾಗಲೀ ನಾವು ವ್ಯವಹಾರಕಾರಣತ್ವವನ್ನು ಹೇಳುವುದಿಲ್ಲ. ಯಥಾರ್ಥರಜತಜ್ಞಾನಸಾದೃಶ್ಯವಿರುವ ಆ ಎರಡು ಜ್ಞಾನಗಳಿಗೂ ಕಾರಣತ್ವ ಹೇಳುವುದರಿಂದ ಎಲ್ಲಿಯೂ ದೋಷ ಬರುವುದಿಲ್ಲವೆಂದರೆ ಅಲ್ಲಿಯೂ ವಿಕಲ್ಪಕೂಡದಿರುವುದರಿಂದ ಅಂತಹವಾದವು ಯುಕ್ತವಲ್ಲವೆಂದು ಖಂಡಿಸುತ್ತಾನೆ. 'ವಿಕಲ್ಪಾಸಹತ್ವಾತ್'—ಇತಿ.

ತಥಾ ಹಿ—ಸಮೀಚೀನರಜತಾವಭಾಸಸಾರೂಪ್ಯಂ ಭಾಸಮಾನಂ ಪ್ರವರ್ತಕಂ ಸತ್ತಾಮಾತ್ರೇಣ ವಾ। ಆದ್ಯೇ ವಿಕಲ್ಪೇ ಭೇದಾಗ್ರಹಾಪರಪರ್ಯಾಯಸ್ಯ ಸಾರೂಪ್ಯಸ್ಯ ಸಮೀಚೀನಸಂನಿಭೇ ಇಮೇ ಜ್ಞಾನೇ ಇತಿ ವಿಶೇಷಾಕಾರೇಣ ಗೃಹ್ಯಮಾಣಸ್ಯ ಪ್ರವೃತ್ತಿಕಾರಣತ್ವಂ ಕಿಂ ವಾ ತಯೋರೇವ ಸ್ವರೂಪತೋ ವಿಷಯತಶ್ಚ ಮಿಥೋ ಭೇದಾಗ್ರಹೋ ವಿದ್ಯತ ಇತಿ ಸಾಮಾನ್ಯಾಕಾರೇಣ ಗೃಹ್ಯಮಾಣಸ್ಯಸಾರೂಪ್ಯಸ್ಯ। ನಾದ್ಯಃ। ಸಮೀಚೀನಜ್ಞಾನವತ್ ತತ್ಸಂನಿಭಜ್ಞಾನಸ್ಯ ತದುಚಿತವ್ಯವಹಾರಪ್ರವರ್ತಕತ್ವಾನುಪಪತ್ತೇಃ। ನ ಖಲು ಗೋಸಂನಿಭೋ ಗವಯ ಇತ್ಯವಭಾಸೋ ಗವಾರ್ಥಿನಂ ಗವಯೇ ಪ್ರವರ್ತಯತಿ ॥ ನ ದ್ವಿತೀಯಃ। ವ್ಯಾಹತತ್ವಾತ್। ನ ಖಲ್ವನಾಕಲಿತ ಭೇದಸ್ಯಾನಯೋರಿತಿ ಅನಯೋರಿತಿ ಗ್ರಹೇ ಭೇದಾಗ್ರಹ ಇತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚ ಪ್ರತಿಪತ್ತಿರ್ಭವತಿ ಅತಃ ಪರಿಶೇಷಾತ್ ಸತ್ತಾಮಾತ್ರೇಣ ಭೇದಾಗ್ರಹರೂಪಸ್ಯ ಸಾರೂಪ್ಯಸ್ಯ ವ್ಯವಹಾರಕಾರಣತ್ವಮಂಗೀಕರ್ತವ್ಯಮ್ । ಏವಮೇ ವಾಸ್ತ್ವಿತಿ ಚೇತ್—ತರ್ಹೀದಮಿಹ ಸಂಪ್ರಧಾರ್ಯಮ್ । ಕಿಮಯಂ ಭೇದಾಗ್ರಹಃಸಮಾರೋಪೋತ್ಪಾದನಕ್ರಮೇಣ ವ್ಯವಹಾರಕಾರಣಮಸ್ತು, ಉತಾನುತ್ಪಾದಿತಾರೋಪ ಏವ ಸ್ವಯಮಿತಿ । ನ ಚ ದ್ವಿತೀಯಃ ಪಕ್ಷ ಏವ ಶ್ರೇಯಾನ್ । ತಾವತೈವ ವ್ಯವಹಾರೋತ್ಪತ್ತಾವಾರೋಪಸ್ಯ ಗೌರವದೋಷದುಷ್ಟತ್ವಾದಿತಿ ಮಂತವ್ಯಮ್ । ವಿಶಿಷ್ಟವ್ಯವಹಾರಸ್ಯ ವಿಶಿಷ್ಟಜ್ಞಾನಪೂರ್ವಕತ್ವನಿಯಮೇನ ಅಜ್ಞಾನಪೂರ್ವಕತ್ವಾನುಪಪತ್ತೇಃ ॥

ಮೀಮಾಂಸಕನು ಜ್ಞಾನದ್ವಯಕ್ಕಿರುವ ಸತ್ಯರಜತಜ್ಞಾನಸಾದೃಶ್ಯವನ್ನು ಪ್ರವೃತ್ತಿ ಕಾರಣವೆಂದು ಹೇಳುತ್ತಾನೆ. ಅಲ್ಲಿ ಎರಡು ವಿಕಲ್ಪ. ಜ್ಞಾಯಮಾನಸಾದೃಶ್ಯ (ಅಂದರೆ ಸಾದೃಶ್ಯವಿದೆಯೆಂದು ತಿಳಿದುದು ಮಾತ್ರ)ವು ಕಾರಣವೇ ಅಥವಾ ವಸ್ತುತಃ ಇರುವ ಸಾದೃಶ್ಯವು ಕಾರಣವೇ ? ಎಂದು ವಿಕಲ್ಪಾಕಾರ. ಜ್ಞಾನ ಎರಡು ವಿಧವಾಗುವುದರಿಂದ ಜ್ಞಾಯಮಾನಸಾದೃಶ್ಯವು ಕಾರಣವೆಂಬಲ್ಲಿಯೂ ಎರಡು ವಿಕಲ್ಪ ಬರುತ್ತದೆ. ಯಾವ ಧರ್ಮದಿಂದ ಸಾದೃಶ್ಯವು ಅಭಿಮತವಾಗಿದೆಯೋ ಆ ಧರ್ಮಕ್ಕಿಂತ ಸಾದೃಶ್ಯ ಬೇರೆಯಾಗುವುದಿಲ್ಲ. ಆ ಧರ್ಮದ ಅಪರಪರ್ಯಾಯವೇ ಸಾದೃಶ್ಯವೆಂದು ವೈಶೇಷಿಕರ ಮತ. ಈ ಉಪಮೇಯಕ್ಕೆ ಈ ಉಪಮಾನದೊಡನೆ ಈ ಧರ್ಮವು ಸಮಾನವಾಗಿದೆಯೆಂಬುದೇ ಸಾದೃಶ್ಯ. ಇದು ಕೆಲವು ಕಡೆ ವಿಶೇಷಾಕಾರದಿಂದ ತಿಳಿಯಲ್ಪಡುತ್ತದೆ. ಕೆಲವು ಕಡೆ ಸಾಮಾನ್ಯ ರೂಪದಿಂದ ಇದರಲ್ಲಿರುವ ಧರ್ಮವೆಂದು ತಿಳಿಯಲ್ಪಡುತ್ತದೆ. ಇಲ್ಲಿ ಭೇದಾಗ್ರಹವೇ ಸಮಾನ ಧರ್ಮ. ಹೇಗೆ ಸತ್ಯರಜತಜ್ಞಾನದಲ್ಲಿ ಭೇದವು ಗ್ರಹಿಸಲ್ಪಡುವುದಿಲ್ಲವೋ ಹಾಗೆ ಜ್ಞಾನದ್ವಯದಲ್ಲಿ ಭೇದವು ಗೃಹೀತವಾಗುವುದಿಲ್ಲ. ಹೀಗಿರುವ ಭೇದಗ್ರಹಜ್ಞಾನವು ಪ್ರವೃತ್ತಿ ಕಾರಣವೇ ? ಅಥವಾ ಈ ಎರಡು ಜ್ಞಾನಗಳಲ್ಲಿ ಪರಸ್ಪರ ಭೇದವು ಗ್ರಹಿಸಲ್ಪಡುವುದಿಲ್ಲವೆಂಬ ಜ್ಞಾನವು ಪ್ರವೃತ್ತಿಜನಕವೇ? ಎಂದು ಎರಡು ವಿಕಲ್ಪಗಳಾಗುತ್ತವೆ. ಇದರಲ್ಲಿ ಒಂದು ವಿಶೇಷಾಕಾರದಿಂದ ತೋರಿದ ಸಾದೃಶ್ಯ. ಎರಡನೇದು ಸಾಮಾನ್ಯಾಕಾರದಿಂದ ಇರುವ ಧರ್ಮವಾಗುತ್ತದೆ. ಇದರಲ್ಲಿ ಮೊದಲನೆಯ ವಿಕಲ್ಪಸಂಗತವಾಗುವುದಿಲ್ಲ.

'ಸಮೀಚೀನ'—ಇತಿ. ಯಥಾರ್ಥಜ್ಞಾನದಂತೆ ಇರುವ ಸದೃಶಜ್ಞಾನವು ತದುಚಿತವಾದ ವ್ಯವಹಾರಕ್ಕೆ ಎಂದೂ ಪ್ರವರ್ತಕವಾಗಲಾರದು (ಯಥಾರ್ಥಜ್ಞಾನವು ಪ್ರವರ್ತಕವಾದಂತೆ ಎಂದೂ ಆಗಲಾರದು.) ಗೋವಿಗೆ ಸಮಾನವಾದುದು ಗವಯ ಎಂಬ ಸಾದೃಶ್ಯ ಜ್ಞಾನವು ಗವಾರ್ಥಿಗೆ ಗವಯದಲ್ಲಿ ಪ್ರವೃತ್ತಿಯನ್ನುಂಟುಮಾಡುವುದಿಲ್ಲ. ದ್ವಿತೀಯ ವಿಕಲ್ಪವೂ ಸಮಂಜಸವಾಗುವುದಿಲ್ಲ. ಭೇದಗ್ರಹಗೃಹೀತವಾಗದಿದ್ದರೆ ಈ ಎರಡಕ್ಕೆ ಎಂಬ ಜ್ಞಾನ ಬರುವುದು ಹೇಗೆ ? ಈ ಎರಡರ ಜ್ಞಾನವಿರುವಾಗ ಭೇದಾಗ್ರಹಜ್ಞಾನಬರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುದು ಹೇಗೆ? ಪರಸ್ಪರವ್ಯಾಹತವಾಗುವುದರಿಂದ ಆವಿಕಲ್ಪವೂ ಕೂಡುವುದಿಲ್ಲ. 'ಅತಃ'– ಇತಿ. ಆದುದರಿಂದ ವಾಸ್ತವವಾಗಿರುವ ಭೇದಾಗ್ರಹರೂಪ ಸಾರೂಪ್ಯಕ್ಕೆ ವ್ಯವಹಾರ ಕಾರಣತ್ವವನ್ನಂಗೀಕರಿಸಬೇಕು. ಇಂದ್ರಿಯವು ಸ್ವಯಂ ಅಜ್ಞಾತವಾಗಿದ್ದರೂ ಹೇಗೆ ಜ್ಞಾನಕಾರಣವಾಗುವುದೋ, ಸಂನಿಹಿತವಾದ ಅಗ್ನಿಯು ತಾನು ಅಜ್ಞಾತವಾದರೂ ಹೇಗೆ ದಾಹಕಾರಣವಾಗುವುದೋ ಹಾಗೆ ಗ್ರಹಣಸ್ಮರಣಾತ್ಮಕಗಳಾದ ಎರಡು ಜ್ಞಾನ ಗಳಿಗೆ ವಾಸ್ತವವಾಗಿರುವ ಭೇದಾಗ್ರಹವು ತಾನು ಅಜ್ಞಾತವಾಗಿದ್ದರೂ ವ್ಯವಹಾರ ಕಾರಣವೂ ಪ್ರವೃತ್ತಿಕಾರಣವೂ ಆಗುತ್ತದೆಂದು ಸ್ಪಷ್ಟವಾಗುತ್ತದೆ. ಮೀಮಾಂಸಕರೂ ಹೀಗೆಯೇ ಅಂಗೀಕರಿಸಿರುತ್ತಾರೆ.

'ಏವಂ'—ಇತಿ. ಹೀಗೇ ಆಗಲಿ ಎಂದರೆ ಅಲ್ಲಿಯೂ ವಿಕಲ್ಪಾಸಹನದಿಂದ ದೋಷ ಬರುತ್ತದೆ. ಭೇದಾಗ್ರಹವು ಶುಕ್ತಿಯಲ್ಲಿ ರಜತಸ್ವರೂಪಾರೋಪಕ್ಕೆ ಕಾರಣ ವಾಗುತ್ತದೆ. ಆ ಆರೋಪವೇ ವ್ಯವಹಾರಕಾರಣವಾಗುತ್ತದೆ. ಆಗ ಆರೋಪಮೂಲಕ ವಾಗಿ ಭೇದಾಗ್ರಹವು ವ್ಯವಹಾರಾದಿಕಾರಣವೇ ಅಥವಾ (ಅಸ್ತು ತಾನುತ್ಪಾದಿತಾರೋಪ) ರಜತಸ್ವರೂಪವನ್ನು ಆರೋಪಿಸದೇ ಭೇದಾಗ್ರಹವು ತಾನಾಗಿ ವ್ಯವಹಾರಕಾರಣವಾಗು ತ್ತದೆಯೇ? ಎಂದು ವಿಕಲ್ಪ ಉತ್ಥಿತವಾಗುತ್ತದೆ. ಆರೋಪವಿಲ್ಲದೆ ಸ್ವಯಂಕಾರಣವೆನ್ನು ವುದು ಯುಕ್ತವಲ್ಲ ಕೇವಲ ಭೇದಾಗ್ರಹದಿಂದ ವ್ಯವಹಾರವು ಸಂಭವಿಸುವಾಗ ಆರೋ ಪವು ಗೌರವದೋಷದುಷ್ಟವಾಗುತ್ತದೆ. 'ವಿಶಿಷ್ಟ'—ಇತಿ. ಪುರುಷನಲ್ಲಿ ದಂಡವೈಶಿಷ್ಟ್ಯ ವನ್ನು ತಿಳಿದೇ (ಇವನು) 'ಅಯಂ ದಂಡೀ' ಎಂಬ ವ್ಯವಹಾರವುಂಟಾಗುತ್ತದೆ. ಹಾಗೆ ಮುಂದಿರುವ ಪದಾರ್ಥದಲ್ಲಿ ರಜತತ್ವವೈಶಿಷ್ಟ್ಯವನ್ನು ತಿಳಿದೇ "ಇದಂ ರಜತಂ" ಎಂಬ ವ್ಯವಹಾರವುಂಟಾಗುತ್ತದೆಂದು ಹೇಳಬೇಕು. ವೈಶಿಷ್ಟ್ಯವು ಅಜ್ಞಾತವಾದರೆ ವ್ಯವಹಾರ ವುಂಟಾಗಲಾರದು. ಅಜ್ಞಾನವೆಂದರೆ ಭೇದಜ್ಞಾನಾಭಾವ. ಇದೇ ಕಾರಣವಾಗುವು ದಾದರೆ ಮುಂದಿರುವ ಪದಾರ್ಥಸಂನಿಕರ್ಷವಾಗಬೇಕಾದರೂ ಮೊದಲು ಅಂತಹ ಅಜ್ಞಾನ ವಿರುವುದರಿಂದ ವ್ಯವಹಾರವಾಗಲೀ ಪ್ರವೃತ್ತಿಯಾಗಲೀ ಏಕೆ ಉಂಟಾಗುವುದಿಲ್ಲ? ಆದುದ ರಿಂದ ಜ್ಞಾನವಿಶೇಷಕ್ಕೆ ಚೇತನವ್ಯವಹಾರಕಾರಣತ್ವವನ್ನಂಗೀಕರಿಸಬೇಕು.

ನನ್ವಯಂ ವ್ಯವಹಾರೋ ನಾಜ್ಞಾನಪೂರ್ವಕ ಇತ್ಯನಾಕಲಿತಪರಾಭಿಸಂಧಿಃ ಸ್ವಸಿದ್ಧಾಂತ ಸಿದ್ಧಾರ್ಥಾದ್ಯದಿ ಕಶ್ಚಿತ್ ಶಂಕೇತ ಸ ಪ್ರತಿವ್ಯಕ್ತವ್ಯಃ । ಶುಕ್ತಿಕಾವಿಷಯಸ್ಯ ಗ್ರಹಣಸ್ಯಾಸಮೀಹಿತವಿಷಯತ್ವೇನ ರಜತಾರ್ಥಿಪ್ರವೃತ್ತಿಹೇತುತ್ವಾಸಂಭವಾತ್ ಅನ್ವಯವ್ಯತಿರೇಕಾಭ್ಯಾಂ ರಜತಜ್ಞಾನಸ್ಯ ಸಮೀಹಿತವಿಷಯತ್ವೇನ ಪ್ರವೃತ್ತಿ ಹೇತುತ್ವಸಂಭವಾಚ್ಛೇದಮರ್ಥಾಭಿ ಸಂಭಿನ್ನಗ್ರಹವಿವಿಕ್ತಸ್ಯಾಪಿ ರಜತಸ್ಮರಣಸ್ಯ ಕಾರಣತ್ವಂ ವಕ್ತವ್ಯಮ್ । ತಚ್ಚ ವಕ್ತುಂ ನ ಶಕ್ಯತೇ । ಜಾನಾತಿ ಇಚ್ಛತಿ ತತಃ ಪ್ರವರ್ತತೇ ಇತಿ ನ್ಯಾಯೇನ ಜ್ಞಾನೇಚ್ಛಾಪ್ರವೃತ್ತೀನಾಂ ಸಮಾನವಿಷಯತ್ವೇನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವ್ಯಮ್ । ತಥಾಚೇದಂಕಾರಾಸ್ಪದಾಭಿಮುಖ ಪ್ರವೃತ್ತಸ್ಯ ರಜತಾರ್ಥಿನ ಸ್ತದಿಚ್ಛಾನಿಬಂಧನಮ್ । ಅನ್ಯಥಾ ನ್ಯದಿಚ್ಛನ್ನನ್ಯದ್ವ್ಯವಹರತೀತಿ ವ್ಯಾಹನ್ಯೇತ।

ಶುಕ್ತಿಯಲ್ಲಿ ರಜತವ್ಯವಹಾರವು ಆರೋಪಪೂರ್ವಕವಾಗಿಲ್ಲ. ಯಾವ ಎರಡು ಜ್ಞಾನಗಳಿವೆಯೋ ಅವುಗಳಿಗೆ ಪರಸ್ಪರ ಭಿನ್ನತ್ವದಿಂದ ಯಾವ ಅಗ್ರಹಣವಿದೆಯೋ ತದ್ರೂಪಜ್ಞಾನ ಪೂರ್ವಕವಾಗಿ ವ್ಯವಹಾರವುಂಟಾಗುತ್ತದೆಯೆಂಬ ಮೀಮಾಂಸಕ ಸಿದ್ಧಾಂತಸಿದ್ಧಾರ್ಥಾನುಸಾರವಾಗಿ ಶಂಕಿಸುತ್ತಾನೆ. 'ನನು'—ಇತಿ. ಈ ವ್ಯವಹಾರವು ಅಜ್ಞಾನಪೂರ್ವಕವಲ್ಲವೆಂಬುದಕ್ಕೆ ಅಭಿಸಂಧಿಯಲ್ಲಿ ಅನ್ವಯ. ಶಂಕಕನು ಪರಾಶಯ ವನ್ನು ತಿಳಿಯದೇ ಕೇವಲ ತನ್ನ ಸಿದ್ಧಾಂತವನ್ನನುಸರಿಸಿ ಶಂಕಿಸಿದರೆ ಆಗ ಅದಕ್ಕೆ ಪ್ರತಿ ಯಾಗಿ ಹೀಗೆ ಹೇಳಬೇಕು. ಇಲ್ಲಿಯೇ ಮುಂದೆ ಹೇಳುವ ಆರೋಪಾವಶ್ಯಕತ್ವಸಾಧಕ ವಾದ ವೇದಾಂತಿಯ ಗೂಢಾಭಿಪ್ರಾಯವನ್ನು ಅರಿಯದೆ ಶಂಕಿಸುತ್ತಾನೆಂದು ತಾತ್ಪರ್ಯ. ಇಲ್ಲವಾದರೆ ಈ ಶಂಕೆಗೆ ಉತ್ಥಿತಿಯೇ ಬರುವುದಿಲ್ಲ. 'ಶುಕ್ತಿಕಾ' —ಇತಿ. ಶುಕ್ತಿಕಾ ವಿಷಯಜ್ಞಾನವು ರಜತಾರ್ಥಿಯಪ್ರವೃತ್ತಿಗೆ ಕಾರಣವಾಗುವುದಿಲ್ಲ. ಏಕೆಂದರೆ ಅದು ಸಮೀಹಿತ (ಇಷ್ಟ) ವಿಷಯಕವಾಗಿಲ್ಲ. ಇಷ್ಟವಸ್ತುಜ್ಞಾನದಲ್ಲಿ ಪ್ರವೃತ್ತಿಯುಂಟಾಗು ತ್ತದೆ. ಅದಿಲ್ಲದಿದ್ದರೆ ಪ್ರವೃತ್ತಿಯೂ ಇರುವುದಿಲ್ಲ. ಹೀಗೆ ಅನ್ವಯವ್ಯತಿರೇಕ ದೃಷ್ಟವಾದುದರಿಂದ ರಜತಜ್ಞಾನವೇ ಸಮೀಹಿತವಿಷಯವಾಗುತ್ತದೆ. ಅನ್ವಯವ್ಯತಿರೇಕ ಗಳಿಂದ ಅದೇ ಪ್ರವೃತ್ತಿಗೆ ಕಾರಣವೂ ಆಗುತ್ತದೆ.

'ಇದಮರ್ಥ'—ಇತಿ. ಇದಮರ್ಥದಿಂದ ಅಭಿಸಂಭಿನ್ನವಾದ ಅಂದರೆ ಕೂಡಿರುವ ಜ್ಞಾನವೆಂದರೆ "ಇದಂ" ಎಂಬ ಅಪರೋಕ್ಷಾನುಭವ. ಅದಕ್ಕೆ ವಿವಿಕ್ತವಾದ ಅಂದರೆ ಅಂದರೆ ಭಿನ್ನವಾದರೂ ರಜತಸ್ಮರಣವೇ ಪ್ರವೃತ್ತಿಕಾರಣವೆನ್ನಬೇಕು ಆದರೆ ಸ್ಮರಣಾತ್ಮಕ ವಾದ ರಜತಜ್ಞಾನವು ಇಲ್ಲಿ ಪ್ರವೃತ್ತಿಕಾರಣವೆಂದು ಹೇಳಲು ಸಾಧ್ಯವಿಲ್ಲ. ಮೊದಲು ಜ್ಞಾನ, ಆಮೇಲೆ ಇಚ್ಛಾ, ಆಮೇಲೆ ಪ್ರವೃತ್ತಿಯೆಂದು ಎಲ್ಲರಿಗೂ ತಿಳಿದವಿಷಯ. ಈ ಭಾನೇಚ್ಛಾಪ್ರವೃತ್ತಿಗಳಲ್ಲಿ ಸಮಾನವಿಷಯತ್ವ ನಿಯತವಾಗಿರುತ್ತದೆ. ಜ್ಞಾನದಲ್ಲಿ ಯಾವುದು ವಿಷಯವಾಗಿದೆಯೋ ಅದೇ ಇಚ್ಛಾಪ್ರವೃತ್ತಿಗಳಲ್ಲಿಯೂ ವಿಷಯವಾಗಿರ ಬೇಕು. ಪ್ರಕೃತ ಜ್ಞಾನೇಚ್ಛೆಗಳಲ್ಲಿ ಸಮಾನವಿಷಯತ್ವವಿದ್ದರೂ ಇಚ್ಛಾಪ್ರವೃತ್ತಿಗಳಿಗೆ ಸಮಾನವಿಷಯತ್ವಭಂಗವುಂಟಾಗುತ್ತದೆ. ಇಚ್ಛಾವಿಷಯವಾದದ್ದು ರಜತ. ಆದರೆ ಅದು ಪ್ರವೃತ್ತಿವಿಷಯವಾಗಿಲ್ಲ. ಇದಮರ್ಥಾಭಿಮುಖವಾಗಿ ಪ್ರವೃತ್ತಿಯುಂಟಾಗಿದೆ. ಆದುದರಿಂದ ಯದಭಿಮುಖ ಪ್ರವೃತ್ತಿದೃಷ್ಟವಾಗಿದೆಯೋ ಅಂದರೆ ಪ್ರವೃತ್ತಿಯಲ್ಲಿ ಯಾವುದು ವಿಷಯವಾಗಿದೆಯೋ ಅದೇ ಜ್ಞಾನದಲ್ಲಿಯೂ ಇಚ್ಛೆಯಲ್ಲಿಯೂ ವಿಷಯವಾಗು ತ್ತದೆಂದು ಯಾವಉಪಾಯದಿಂದಲಾದರೂ ಹೇಳಬೇಕು. ಇದು ರಜತಾರೋಪದಿಂದಲೇ ಸಿದ್ಧಿಸುತ್ತದೆ. ಪ್ರವೃತ್ತಿಯಲ್ಲಿ ವಿಷಯವಾದ ಇದಮರ್ಥವು ಇಚ್ಛೆಯಲ್ಲಿ ವಿಷಯವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜತಾರೋಪವಿಲ್ಲದೆ ಸಿದ್ಧಿಸಲಾರದು. 'ತದಿಚ್ಛಾನಿಬಂಧನಂ' ಎಂಬಲ್ಲಿ ತಚ್ಛಬ್ದದಿಂದ ಇದಂಕಾರಾಸ್ಪದವಾದ ವಸ್ತು ಪರಾಮೃಷ್ಟವಾಗುತ್ತದೆ.

ತಥಾ ಚ ಯದಿ ಇದಂಕಾರಾಸ್ಪದಂ ರಜತಾವಭಾಸಗೋಚರತಾಂ ನಾಚರೇತ್ ಕಥಂ ರಜತಾರ್ಥೀ ತದಿಚ್ಛೇತ್। ಯದ್ಯರಜತತ್ವಾಗ್ರಹಣಾದಿತಿ ಬ್ರೂಯಾತ್ ರಜತತ್ವಾಗ್ರಹಾತ್ ಕಸ್ಮಾದಯಂ ನೋಪೇಕ್ಷೇತೇತಿ। ಯುಗಪತ್ತದ್ಭೇದಾಗ್ರಹಾಭೇದಾಗ್ರಹನಿಬಂಧನಾಭ್ಯಾಮುಪಾದಾನೋಪೇಕ್ಷಾಭ್ಯಾಂ ಪುರತಃ ಪೃಷ್ಠತಶ್ಚಾಕೃಷ್ಯಮಾಣಃ ಪುರುಷೋ ದೋಲಾಯಮಾನತಯಾ ರೂಪ್ಯಾರೋಪಮಂತರೇಣೋಪಾದಾನಪಕ್ಷ ಏವ ನ ವ್ಯವಸ್ಥಾಪ್ಯೇತ ಇತ್ಯನಿಚ್ಛತಾಪ್ಯಚ್ಛಮತಿನಾ ಸಮಾರೋಪಃ ಸಮಾಶ್ರಯಣೀಯಃ। ಯಥಾಹ—ಭೇದಾಗ್ರಹಾದಿದಂಕಾರಾಸ್ಪದೇ ರಜತತ್ವಮಾರೋಪ್ಯ ತಜ್ಜಾತೀಯಸ್ಯೋಪಕಾರಹೇತುಭಾವಮನುಸ್ಮೃತ್ಯ ತಜ್ಜಾತೀಯತ್ವೇನಾಸ್ಯಾಪಿ ತದನುಮಾಯ ತದರ್ಥೀ ಪ್ರವರ್ತತ ಇತಿ ಪ್ರಥಮಃ ಪಕ್ಷಃ ಪ್ರಶಸ್ಯಃ॥

ರಜತಜ್ಞಾನವಿಷಯತ್ವವು ಇದಮರ್ಥದಲ್ಲಿ ತೋರದಿದ್ದರೆ ಆಗ ರಜತವನ್ನು ಬಯಸುವವನಿಗೆ ಅಲ್ಲಿ ಇಚ್ಛೆಯುಂಟಾಗಲಾರದು. "ಯದಿ"—ಇತಿ. ಮುಂದಿರುವ ವಸ್ತು ರಜತಭಿನ್ನವೆಂದು ಗ್ರಹಿಸಲ್ಪಡದಿರುವುದರಿಂದ ಪ್ರವೃತ್ತಿಯುಂಟಾಗುತ್ತದೆ ಎಂದು ಮೀಮಾಂಸಕನು ಹೇಳುವುದಾದರೆ ಆಗ ತನ್ಮತಾನುಸಾರದಿಂದಲೇ ಪುರೋವರ್ತಿವಸ್ತುವು ರಜತವೆಂದು ತಿಳಿಯಲ್ಪಡದಿರುವುದರಿಂದಲೇ ಪ್ರವೃತ್ತಿಯುಂಟಾಗಲಿಲ್ಲವೆಂದೂ ಹೇಳಲು ಸಾಧ್ಯ. ಪ್ರವೃತ್ತ್ಯಭಾವವೇ ಮೋಕ್ಷ 'ಯುಗಪತ್'—ಇತಿ. ಆಗ ಪುರೋವರ್ತಿವಸ್ತುವಿನಲ್ಲಿ ರಜತಭೇದದ ಅಜ್ಞಾನ, ರಜತಾಭೇದಾಜ್ಞಾನ ಹೀಗೆ ಇವೆರಡೂ ಒಟ್ಟಿಗೆ ತಮ್ಮ ತಮ್ಮ ಕಾರ್ಯಗಳನ್ನು ಏಕಕಾಲದಲ್ಲಿ ಮಾಡುವುದಾದರೆ ಯಾವಫಲವೂ ಆಗಲಾರದು. ಪ್ರವೃತ್ತಿ, ಅದರಭಾವ ಹೀಗೆ ವಿರುದ್ಧಗಳಾದ ಎರಡು ಕಾರ್ಯಗಳು ಏಕಕಾಲದಲ್ಲಿ ಸಂಭವಿಸಲಾರದು. ಹಿಂದೆ ಮುಂದೆ ಒಬ್ಬನನ್ನು ಎಳೆದರೆ ಅವನು ಏನುಮಾಡಬೇಕು. ಯಾವಕಡೆಯೂ ಹೋಗದೆ ತೂರಾಡುತ್ತಾನೆ. ಹೀಗಿರುವಾಗ ನಿಯಮದಿಂದ ರಜತಗ್ರಹಣದಲ್ಲಿ ತೋರುವ ಪ್ರವೃತ್ತಿ ಉಂಟಾಗದೇ ಹೋಗಬೇಕಾಗುತ್ತದೆ. ಆದುದರಿಂದ ಆ ವಸ್ತುವಿನಲ್ಲಿ ಅವಶ್ಯವಾಗಿ ರಜತಾರೋಪವನ್ನು ಸ್ವೀಕರಿಸಲೇಬೇಕು.

'ಯಥಾ'—ಇತಿ. ಭೇದಾಗ್ರಹದಿಂದ ಇದಂಕಾರಾಸ್ಪದ ವಸ್ತುವಿನಲ್ಲಿ ರಜತತ್ವವನ್ನು ಆರೋಪಿಸಿ, ತತ್ಸಮಾನವಾದ ಸತ್ಯರಜತದಲ್ಲಿ ಉಪಕಾರ ಹೇತುತ್ವವಿದೆಯೆಂದು ಸ್ಮರಿಸಿ, ಇದೂ ತಜ್ಜಾತೀಯವಾದುದರಿಂದ ಇದರಲ್ಲಿ ಉಪಕಾರಹೇತುತ್ವವನ್ನು ಅನುಮಾನಮಾಡಿ ರಜತಾರ್ಥಿಯು ಪ್ರವೃತ್ತಿಹೊಂದುತ್ತಾನೆ. ಆರೋಪೋತ್ಪಾದನಕ್ರಮದಿಂದ ಹೇಳಿದ ಮೊದಲನೆಯ ಪಕ್ಷವೇ ಸಾಧುವಾಗಿದೆ. ಅನುಮಾನಪ್ರಯೋಗ--ಪುರೋವರ್ತಿಪದಾರ್ಥಃ—ಉಪಕಾರಹೇತುಃ—ರಜತತ್ವಾತ್। ಪೂರ್ವಾನುಭೂತರಜತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವತ್ ॥ ಇಲ್ಲಿ ಪಕ್ಷದಲ್ಲಿ ಹೇತು ಇರಬೇಕಾದರೆ ಆರೋಪಹೇಳಲೇಬೇಕು. ಇಲ್ಲವಾದರೆ ಪಕ್ಷಸತ್ವ ಹೇತುವಿಗೆ ಬಾರದೇ ದುಷ್ಟಹೇತುವಾಗುತ್ತದೆ. ಆದುದರಿಂದ ಭೇದಾಗ್ರಹವು ಸಮಾರೋಪೋತ್ಪಾದನ ಕ್ರಮದಿಂದ ವ್ಯವಹಾರಹೇತುವಾಗುತ್ತದೆಂಬ ಮೊದಲನೆಯ ಪಕ್ಷವೇ ಯುಕ್ತವಾಗಿದೆ.

ನ ಚ ತಟಸ್ಥರಜತಸ್ಮರಣಪಕ್ಷೇಽಪಿ ಹೇತೋರ್ಗೃಹೀತತ್ವೇನಾಯಂ ಮಾರ್ಗಃ ಸಮಾನ ಇತಿ ವಾಚ್ಯಮ್ । ರಜತತ್ವಸ್ಯ ಹೇತೋಃ ಪಕ್ಷಧರ್ಮತ್ವಾಭಾವಾತ್ । ನ ಚ ಪಕ್ಷಧರ್ಮತಾಯಾ ಅಭಾವೇಽಪಿ ವ್ಯಾಪ್ತಿಬಲಾತ್ ಗಮಕತ್ವಂ ಶಂಕ್ಯಮ್ ವ್ಯಾಪ್ತಿಪಕ್ಷಧರ್ಮತಾವತ್ ಲಿಂಗಸ್ಯೈವ ಗಮಕತ್ವಾಂಗೀಕಾರಾತ್ । ತದಾಹುಃ ಶಬರಸ್ವಾಮಿನಃ —ಜ್ಞಾತಸಂಬಂಧಸ್ಯೈವ ಪುಂಸೋ ಲಿಂಗವಿಶಿಷ್ಟಧರ್ಮ್ಯೈಕ ದೇಶದರ್ಶನಾಲ್ಲಿಂಗಿವಿಶಿಷ್ಟಧರ್ಮ್ಯೇಕ ದೇಶ ಬುದ್ಧಿರನುಮಾನಮಿತಿ ।

ಆಚಾರ್ಯೋಽಪ್ಯವೋಚತ್—

ಸ ಏವ ಚೋಭಯಾತ್ಮಾ ಯೋ ಗಮ್ಯೇ ಗಮಕ ಇಷ್ಯತೇ ।
ಅಸಿದ್ಧೇನೈಕದೇಶೇನ ಗಮ್ಯಾಸಿದ್ಧೇರ್ನ ಬೋಧಕಃ ॥ಇತಿ॥

ಪೂರ್ವಾನುಭೂತವಾದ ಅನಾರೋಪಿತವಾದ ರಜತವು ತಟಸ್ಥವಾಗುತ್ತದೆ. ಇಂತಹರಜತಸ್ಮರಣದಿಂದ ಆರೋಪವಿಲ್ಲದಿದ್ದರೂ ಹೇತುಜ್ಞಾನವಿರುವುದರಿಂದ ಅನುಮಾನ ಬರಲು ಯಾವ ತೊಂದರೆಯೂ ಇಲ್ಲವೆಂದು ಶಂಕಿಸುವವನ ಅಭಿಪ್ರಾಯ. 'ಹೇತೋಃ —' ಇತಿ. ಶಂಕಕನು ಆರೋಪವನ್ನಂಗೀಕರಿಸದಿರುವುದರಿಂದ ಪಕ್ಷವಾದ ಇದಮರ್ಥದಲ್ಲಿ ರಜತತ್ವರೂಪಹೇತುವು ಬಾರದಿರುವುದರಿಂದ ಪಕ್ಷಧರ್ಮತಾ ಸಂಭವಿಸು ವುದಿಲ್ಲವೆಂದರ್ಥ. ಪಕ್ಷಧರ್ಮತಾ ಇಲ್ಲದಿದ್ದರೂ ವ್ಯಾಪ್ತಿಯಿಂದ ಗಮಕತ್ವಕೊಡುತ್ತ ದೆಂದು ಹೇಳಬಾರದು. ವ್ಯಾಪ್ತಿಪಕ್ಷಧರ್ಮತಾವಿಶಿಷ್ಟಹೇತುವಿಗೇ ಗಮಕತ್ವವಿರುವುದಲ್ಲದೆ ಕೇವಲ ಹೇತುವಿಗೆ ಅದು ಸಂಭವಿಸುವುದಿಲ್ಲ. ಲಿಂಗವೆಂದರೆ ಸಾಧನವಾದ ಧೂಮಾದಿ. ಅದು ಜ್ಞಾಪಕವಾಗಿರುತ್ತದೆ. ಲಿಂಗಿ ಅಂದರೆ ಸಾಧ್ಯವಾದ ಅಗ್ನ್ಯಾದಿಗಳು. ಧೂಮಾಗ್ನಿಗಳಿಗೆ ವ್ಯಾಪ್ತಿ ಗೃಹೀತವಾದಮೇಲೆ ಧೂಮವಿಶಿಷ್ಟವಾದ ಪರ್ವತದ ಏಕದೇಶ ದಲ್ಲಿ ಧೂಮದರ್ಶನವಾದರೆ ಆಗ ಅಗ್ನಿವಿಶಿಷ್ಟಪರ್ವತದ ಏಕದೇಶದಲ್ಲಿ ಅಗ್ನಿಯಜ್ಞಾನ ವುಂಟಾಗುತ್ತದೆ. ಇದೇ ಅನುಮಾನವೆಂದು ಶಬರಸ್ವಾಮಿಗಳು ಹೇಳಿರುತ್ತಾರೆ. ಆಚಾರ್ಯರೂ ಹೇತುಪಕ್ಷದಲ್ಲಿರಬೇಕೆಂದು ಹೇಳಿರುತ್ತಾರೆ.

'ಸಏವಃ—' ಇತಿ. ಗಮ್ಯಃ—ಜ್ಞಾಪ್ಯಃ ಸಾಧ್ಯಾದಿ. ಗಮಕಃ— ಜ್ಞಾಪಕಃ—ಹೇತು. ಪರ್ವತದಲ್ಲಿ ಅಗ್ನಿಸಾಧ್ಯವಾಗಿರುವಾಗ ಧೂಮಾದಿಗಳು ಜ್ಞಾಪಕ ವಾಗಬೇಕಾದರೆ ಅದು ಉಭಯಾತ್ಮಕವಾಗಿರಬೇಕು. ವ್ಯಾಪ್ತಿವಿಶಿಷ್ಟವಾಗಿದ್ದು, ಪಕ್ಷ ನಿಷ್ಠವಾಗಿರಬೇಕು. ಹೀಗೆ ಸ್ವರೂಪದ್ವಯಾಕ್ರಾಂತಹೇತುವೇ ಜ್ಞಾಪಕವಾಗುತ್ತದೆ. ವ್ಯಾಪ್ತಿವಿಶಿಷ್ಟವಾದರೂ ಪಕ್ಷನಿಷ್ಠವಾಗದಿದ್ದರೆ, ಪಕ್ಷನಿಷ್ಠವಾದರೂ ವ್ಯಾಪ್ತಿವಿಶಿಷ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗದಿದ್ದರೆ ಹೀಗೆ ಒಂದು ಸ್ವರೂಪವು ಅಸಿದ್ಧವಾಗಿದ್ದರೆ ಇದರಿಂದ ಜ್ಞಾಪ್ಯವು ಸಿದ್ಧಿಸಲಾರದು. ಹೇತುತ್ವರೂಪದಿಂದ ಅಭಿಮತವಾದ ಧೂಮಾದಿಗಳು ಬೋಧಕವಾಗುವುದಿಲ್ಲ. (ಜ್ಞಾಪಕಗಳಾಗಲಾರವು) ಎಂದು ತಾತ್ಪರ್ಯ.

ನನು ಭವತ್ಪಕ್ಷೇಽಪಿ ಪುರಃ ಸ್ಥಿತಸ್ಯೇದಮರ್ಥಸ್ಯ ಪರಮಾರ್ಥತೋ ರಜತತ್ವಂ ನಾಸ್ತೀತಿ ನ ರಜತತ್ವಂ ಧರ್ಮ್ಯೇಕದೇಶ ಇತಿ ಚೇನ್ನ । ಯಕ್ಷಾನುರೂಪೋಬಲಿರಿತಿ ನ್ಯಾಯೇನ ಅನುಮಿತ್ಯಾಭಾಸಾನುಗುಣಸ್ಯೈಕದೇಶಸ್ಯ ವಿದ್ಯಮಾನತ್ವಾತ್ । ತಥಾ ಚ ಪ್ರಯೋಗಃ— ವಿವಾದಾಧ್ಯಾಸಿತಂ ರಜತಜ್ಞಾನಂ—ಪುರೋವರ್ತಿವಿಷಯಂ—ರಜತಾರ್ಥಿನಸ್ತತ್ರ ನಿಯಮೇನ ಪ್ರವರ್ತಕತ್ವಾತ್ । ಯದುಕ್ತಸಾಧನಂ ತದುಕ್ತಸಾಧ್ಯಂ ಯಥೋಭಯವಾದಿಸಂಮತಂ ಸತ್ಯರಜತಜ್ಞಾನಮ್ । ವಿವಾದಪದಂ ಶುಕ್ತಿಶಕಲಂ ರಜತಜ್ಞಾನವಿಷಯೋಽನ್ಯವಧಾನೇನ ರಜತಾರ್ಥಿ ಪ್ರವೃತ್ತಿವಿಷಯತ್ವಾದ್ರಜತಪದಸಮಾನಾಧಿಕರಣಪದಾಂತರ ವಾಚ್ಯತ್ವಾದ್ವಾವಸ್ತು ರಜತಮಿತ್ ॥

ಶುಕ್ತಿಯಲ್ಲಿ ರಜತತ್ವಾರೋಪ ಎಂಬವರ ಪಕ್ಷದಲ್ಲಿಯೂ ಪರಮಾರ್ಥರಜತತ್ವ ಪಕ್ಷದಲ್ಲಿಲ್ಲದಿರುವುದರಿಂದ ದೋಷವಿದ್ದೇ ವಿರುತ್ತದೆಂದು ಶಂಕೆ. 'ಯಕ್ಷಃ—' ಇತಿ. ಮುಂದಿರುವ ಇದಮರ್ಥದಲ್ಲಿ ಸಾಧ್ಯವಾದ ಉಪಕಾರಹೇತುತ್ವವು ವಾಸ್ತವವಾಗಿ ಇಲ್ಲ. ಕೆಲವು ಕಾಲದವರೆಗೆ ತೋರುವುದರಿಂದ ಅದು ಪಾರಮಾರ್ಥಿಕವಲ್ಲ. ಇಂತಹ ಅಪಾರಮಾರ್ಥಿಕಸಾಧ್ಯಕ್ಕೆ ಅನುಮಾಪಕವಾದ (ಲಿಂಗವಾದ) ರಜತತ್ವವೂ ಅಪಾರಮಾರ್ಥಿಕವಾದರೆ ಯಾವ ಹಾನಿಯೂ ಇಲ್ಲವೆಂದು ತಾತ್ಪರ್ಯ. ಪುರೋವರ್ತಿವಿಷಯಂ ಎಂಬಲ್ಲಿ ಬಹುವ್ರೀಹಿ. ಪುರೋವರ್ತೀ ತಿಪಯಃ ಯಸ್ಯತತ್. ರಜತಾರ್ಥಿಗೆ ನಿಯಮದಲ್ಲಿ ಅಲ್ಲಿ ಪ್ರವೃತ್ತಿಯುಂಟಾಗುವುದರಿಂದ ರಜತಜ್ಞಾನವು ಪುರೋವರ್ತಿವಿಷಯವಾಗುತ್ತದೆ. ಹೀಗೆ ಅನುಮಾನದಿಂದ ರಜತವಿಷಯಜ್ಞಾನಕ್ಕೆ ಪುರೋವರ್ತಿವಿಷಯಕತ್ವ ಸಾಧಿತವಾದ ಮೇಲೆ ರಜತಕ್ಕೂ ಪುರೋವರ್ತಿವಸ್ತುವಿಗೂ ತಾದಾತ್ಮ್ಯಸಿದ್ಧವಾಗುತ್ತದೆ. ಎರಡನೇ ಅನುಮಾನದಲ್ಲಿ ಶುಕ್ತಿಶಕಲವೇ ಪಕ್ಷ. ರಜತವಿಷಯಕಜ್ಞಾನವಿಷಯತ್ವ ಸಾಧ್ಯ. ಅವ್ಯವಧಾನದಿಂದ ರಜತಾರ್ಥಿಪ್ರವೃತ್ತಿವಿಷಯತ್ವ ಹೇತು. (ರಜತಪದಸಮಾನಾಧಿಕರಣಪದಾಂತರವಾಚ್ಯತ್ವ ಇನ್ನೊಂದು ಹೇತು.) 'ಇದಂ ರಜತಂ' ಎಂಬಲ್ಲಿ ರಜತಪದಸಮಾನಾಧಿಕರಣವಾದ ಪದಾಂತರವೆಂದರೆ ಇದಂಪದ. ತದ್ವಾಚ್ಯತ್ವಶುಕ್ತಿಶಕಲಕ್ಕೆ ಬರುತ್ತದೆ. ಶುಕ್ತಿಶಕಲದಲ್ಲಿ ರಜತವಿಷಯಕಜ್ಞಾನವಿಷಯತ್ವವು ಸಾಧಿತವಾದಮೇಲೆ ಅರ್ಥಾತ್ ಶುಕ್ತಿಶಕಲರಜತಗಳಿಗೆ ತಾದಾತ್ಮ್ಯಸಿದ್ಧವಾಗುತ್ತದೆ. ಹೀಗೆ ಈ ಎರಡು ತಾದಾತ್ಮ್ಯಗಳೂ ಆರೋಪದಿಂದಲೇ ಉಪಪಾದಿತವಾಗುತ್ತವೆ. ಆದುದರಿಂದ ಆರೋಪ ಹೇಳಲೇಬೇಕೆಂದು ತಾತ್ಪರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯದುಕ್ತಂ ರಜತಜ್ಞಾನಸ್ಯ ಶುಕ್ತಿಕಾಲಂಬನತ್ವೇ ವಿರೋಧ ಇತಿ ತದಪ್ಯಯುಕ್ತಮ್ । ವಿಕಲ್ಪಾಸಹತ್ವಾತ್ । ತಥಾಹಿ— ತತ್ರ ಕಿಂ ರಜತಾಕಾರಪ್ರತೀತಿಂ ಪ್ರತಿ ಶುಕ್ತೇರಾಲಂಬನತ್ವೇ ಅನುಭವವಿರೋಧಃ ಉದ್ಭಾವ್ಯತೇ ಇದಮಂಶಸ್ಯ ವಾ । ನಾದ್ಯಃ । ಅನಂಗೀಕಾರಪರಾಹತತ್ವಾತ್ । ನ ದ್ವಿತೀಯಃ । ಇದಂತಾನಿಯತ ದೇಶಾಧಿಕರಣಸ್ಯ ಚಾಕಚಕ್ಯವಿಶಿಷ್ಟಸ್ಯವಸ್ತುನೋರಜತಜ್ಞಾನಾಲಂಬನತ್ವಮನವ ಲಂಬಮಾನಸ್ಯ ಭವತ ಏವ ಅನುಭವವಿರೋಧಾತ್ । ಇದಂ ರಜತಮಿತಿ ಸಾಮಾನಾಧಿಕರಣ್ಯೇನ ಪುರೋವರ್ತಿನ್ಯಂಗುಲಿ ನಿರ್ದೇಶಪೂರ್ವಕಮುಪಾದಾ ನಾದಿವ್ಯವಹಾರದರ್ಶನಾಚ್ಚ ॥

ರಜತಜ್ಞಾನಕ್ಕೆ ಶುಕ್ತಿ ಆಲಂಬನವೆಂದರೆ ಅನುಭವವಿರೋಧವಾಗುತ್ತದೆಂದು ಹಿಂದೆ ಶಂಕಿಸಿರುವುದೂ ಸರಿಯಲ್ಲ. 'ತತ್ರ—' ಇತಿ. ಮುಂದಿರುವಪದಾರ್ಥವನ್ನನುಸರಿಸಿ ರಜತವೆಂಬ ಜ್ಞಾನ ಬರುವುದು ಎಲ್ಲರಿಗೂ ಅನುಭವಸಿದ್ಧವಾಗಿದೆ. ಹೀಗಿರುವಾಗ ಅನುಭವವಿರೋಧ ಎಂಬವನಿಗೆ ಹೀಗೆ ಅಭಿಪ್ರಾಯ ಹೇಳಬೇಕು. ಮುಂದಿರುವ ಪದಾರ್ಥವು ಶುಕ್ತಿಕಾತ್ವರೂಪದಿಂದ ರಜತಪ್ರತೀತಿಗೆ ಅನಲಂಬನವಾಗುತ್ತದೆಂಬುದರಲ್ಲಿ ಅನುಭವವಿರೋಧವೇ ? ಅಂದರೆ ಹೀಗೆ ಹೇಳಲು ಸಾಧ್ಯವಿಲ್ಲ. ಮುಂದಿರುವ ಪದಾರ್ಥವು ಶುಕ್ತಿಕಾತ್ವರೂಪದಿಂದ ರಜತಪ್ರತೀತಿಗೆ ಆಶ್ರಯವಾಗುತ್ತದೆಂದು ನಾವು ಅಂಗೀಕರಿಸಲೇ ಇಲ್ಲ. ಪುರೋವರ್ತಿಪದಾರ್ಥವು ಇದಂತ್ವರೂಪದಿಂದ ರಜತ ಪ್ರತೀತಿಗೆ ಆಲಂಬನವಾಗುತ್ತದೆಂಬುದರಲ್ಲಿ ಅನುಭವವಿರೋಧವೆಂದರೆ ಈ ಅನುಭವ ವಿರೋಧವೆನ್ನುವ ನಿನ್ನಮಾತೇ ಅನುಭವವಿರುದ್ಧವಾಗುತ್ತದೆ. ಅನುಭವಪ್ರಸಿದ್ಧಿ ಹೀಗಿದೆ. ದೂಷಿತನಯನನಿಗೆ ಮುಂದಿರುವ ದ್ರವ್ಯಸಂಯೋಗದಿಂದ ಇದಮಾಕಾರವುಳ್ಳ ಚಾಕಚಿಕ್ಯಾಕಾರವಾದ ಅಂತಃಕರಣವೃತ್ತಿ ಉತ್ಪನ್ನವಾಗುತ್ತದೆ. ಶುಕ್ತಿತ್ವಪ್ರಕಾರವಾದ ಅಂತಃಕರಣವೃತ್ತಿ ಎಂದೂ ಹುಟ್ಟುವುದಿಲ್ಲ. ಹೀಗೆ ಶುಕ್ತಿತ್ವಪ್ರಕಾರಕಾಂತಃಕರಣವೃತ್ತ್ಯ ಭಾವರೂಪವಾಗಿರುವ ಯಾವ ಅವಿದ್ಯೆಯಿದೆಯೋ ಅದೇ ಚಾಕಚಿಕ್ಯಾದಿಸಾದೃಶ್ಯ ಸಂದರ್ಶನದಿಂದ ಉದ್ಬೋಧಿತವಾದ ರಜತಸಂಸ್ಕಾರಸಹಿತವಾಗಿ ದೋಷದಿಂದ ಕೂಡಿಕೊಂಡು ರಜತರೂಪ ಪದಾರ್ಥಾಕಾರದಿಂದಲೂ, ರಜತಜ್ಞಾನಾಭಾಸಾ ಕಾರದಿಂದಲೂ ಪರಿಣಾಮಹೊಂದುತ್ತದೆ. ಇದೇ ಕ್ರಮವಾಗಿ ಅರ್ಥಾಧ್ಯಾಸವೆಂದೂ ಜ್ಞಾನಾಧ್ಯಾಸವೆಂದೂ ಕರೆಯಲ್ಪಡುತ್ತದೆ. ಜ್ಞಾನಾಧ್ಯಾಸವು ಅರ್ಥಾಧ್ಯಾಸಾವಿನಾ ಭೂತವಾಗಿರುವುದರಿಂದ ಬೇರೆಯಾಗಿ ಸಾಧಿಸಲ್ಪಡಬೇಕಾಗಿಲ್ಲ. ಇದಂತಾನಿಯತ ದೇಶಾಧಿಕರಣಸ್ಯ—ಇದಂತಾನಿಯತವಾದುದು ಪುರೋವರ್ತಿಪದಾರ್ಥ. ಅಂತಹದೇಶವೇ ಅಧಿಕರಣವಾಗಿರುವ ಎಂದರ್ಥ. ಇದು ರಜತವೆಂದು ಮುಂದಿರುವ ವಸ್ತುವನ್ನು ಬೆರಳು ತೋರಿಸುತ್ತಾ ನಿರ್ದೇಶಿಸಿ ಉಪಾದಾನಾದಿವ್ಯವಹಾರ ಲೋಕಪ್ರಸಿದ್ಧವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಚ್ಚೋಕ್ತಂ-ದೋಷಾಣಾಂ ಔತ್ಸರ್ಗಿಕಕಾರ್ಯಪ್ರಸವಶಕ್ತಿಪ್ರತಿಬಂಧಕತಯಾ ವಿಪರೀತ ಕಾರಿತ್ವಂ ನಾ ಸ್ತೀತಿ । ತದಸ್ಯಯುಕ್ತಮ್ । ದಾವದಗ್ಧವೇತ್ರಬೀಜಾದೌ ತಥಾ ದರ್ಶನಾತ್ । ನ ಚ ದಗ್ಧಸ್ಯ ವೇತ್ರಬೀಜತ್ವಂ ನಾಸ್ತೀತಿ ಮಂತವ್ಯಮ್ । ಶ್ಯಾಮಸ್ಯ ಘಟಸ್ಯ ರಕ್ತತಾಮಾತ್ರೇಣ ಘಟತ್ವನಿವೃತ್ತಿಪ್ರಸಂಗಾತ್ । ನನು ಘಟೋಽಯಂ ಘಟೋಽಯಂ ಇತ್ಯನುವೃತ್ತಯೋಃ ಪ್ರತ್ಯಯಪ್ರಯೋಗಯೋಃ ಸದ್ಭಾವಾತ್ ಘಟತ್ವಸ್ಯ ಸದ್ಭಾವ ಇತಿ ಚೇನ್ನ । ಅತ್ರಾಪಿ ಇದಂ ವೇತ್ರಬೀಜ ಮಿತಿ ತಯೋಃ ಸಮಾನತ್ವಾತ್ । ತಥಾ ಭಸ್ಮಕದೋಷದೂಷಿತಸ್ಯ ಜಠರಾಗ್ನೇ ರ್ಬಹ್ವನ್ನಪಚನಸಾಮರ್ಥ್ಯಂ ದೃಶ್ಯತೇ । ನ ಚ ಬಹ್ವನ್ನಪಚನಸಾಮರ್ಥ್ಯಂ ಜಾಠರಸ್ಯೈವ ಜಾತವೇದಸೋ ನ ಭಸ್ಮಕವ್ಯಾಧೇರಿತಿ ವಕ್ತುಂ ಯುಕ್ತಮ್ । ತಸ್ಯ ಮಂದಮಲ್ಪಪಚನಸಾಮರ್ಥ್ಯೇಽಪಿ ಸಹಸಾ ಮಹತ್ಪಚನಸ್ಯ ಭಸ್ಮಕವ್ಯಾಧಿ ಸಹಾಯಕಮಂತರೇಣಾನುಪಪತ್ತೇಃ । ಅನ್ಯಥಾ ಸರ್ವೇಷಾಂ ತಥಾಪತ್ತೇಃ । ಕಿಂ ಚ ಜ್ಞಾನಾನಾಂ ಯಥಾರ್ಥವ್ಯವಹಾರಕಾರಣತ್ವೇಪಿ ದೋಷವಶಾದಯ ಥಾರ್ಥವ್ಯವಹಾರಕಾರಣಮಂಗೀಕುರ್ವಾಣೋ ಭವಾನೇವಪರ್ಯನುಯೋಜ್ಯೋ ಭವತಿ । ತದುಕ್ತಂ ಭಾಷ್ಯೇ–ಯಶ್ಚೋಭಯೋಃ ಸಮಾನೋ ದೋಷೋ ದ್ಯೋ ತತೇ ತತ್ರ ಕಶ್ಚೋದ್ಯೋ ಭವತೀತಿ ।

ದೋಷಗಳು ಸಾಮಾನ್ಯವಾಗಿ ಕಾರ್ಯಪ್ರಸವಶಕ್ತಿಯನ್ನು ಹುಟ್ಟದಂತೆ ಮಾಡುವುದ ರಿಂದ ವಿರುದ್ಧಕಾರ್ಯಕಾರಿತ್ವವಿಲ್ಲವೆಂದು ಹಿಂದೆ ಮೀಮಾಂಸಕಮತದಲ್ಲಿ ವಿವರಿಸಿದೆ. ಆದರೆ ಇದು ಸರಿಯಲ್ಲ. ಕಾಡ್ಗಿಚ್ಚಿನಿಂದ ಸುಡಲ್ಪಟ್ಟ ವೇತ್ರಬೀಜದಲ್ಲಿ ವಿರುದ್ಧವಾದ ಬಾಳೆ ಯನ್ನು ಹುಟ್ಟಿಸುವಶಕ್ತಿ ಲೋಕಪ್ರಸಿದ್ಧವಾಗಿದೆ. ಅಲ್ಲಿ ಸುಟ್ಟಮೇಲೆ ವೇತ್ರಬೀಜತ್ವವೇ ಇಲ್ಲವೆಂದು ಶಂಕಿಸುವುದೂ ತಪ್ಪು. ಶ್ಯಾಮಘಟಕ್ಕೆ ರಕ್ತತ್ವಬಂದದ್ದರಿಂದ ಅಲ್ಲಿ ಘಟತ್ವ ನಿವೃತ್ತವಾಗುವುದಿಲ್ಲ. ನಿನ್ನ ಮತದಲ್ಲಿ ಅದು ಪರಿಣಾಮ ವಿಶೇಷದಿಂದ ನಿವೃತ್ತವಾಗ ಬೇಕಾಗುತ್ತದೆ. ಆದುದರಿಂದ ಸ್ವಾಭಾವಿಕ ಧರ್ಮಕ್ಕೆ ಪರಿಣಾಮವಿಶೇಷದಿಂದ ಹೇಗೆ ನಾಶವಿಲ್ಲವೋ ಅದರಂತೆ ವೇತ್ರಬೀಜಕ್ಕೆ ಬೀಜತ್ವನಾಶವಿಲ್ಲದೆ ವಿಪರೀತ ಕಾರ್ಯಕಾರಿತ್ವ ಸಿದ್ಧವಾಗುತ್ತದೆ. 'ನನು' — ಇತಿ. ಘಟದೃಷ್ಟಾಂತ ಸಂಗತವಾಗುವುದಿಲ್ಲವೆಂದು ಆಕ್ಷೇಪಿಸುತ್ತಾನೆ. ಪಾಕದಿಂದ ಕೆಂಪಾದ ಘಟದಲ್ಲಿ ಹಿಂದಿನಂತೆಯೇ ಘಟವಿಷಯಕ ಜ್ಞಾನವು ಅನುವೃತ್ತವಾಗುವುದರಿಂದ 'ಅಯಂಘಟಃ' ಎಂಬ ಪ್ರಯೋಗವೂ ಹಿಂದಿ ನಂತೆಯೇ ಬರಲು ತೊಂದರೆ ಇಲ್ಲವೆಂದರೆ ಸಮಾಧಾನ ತೋರಿಸುತ್ತಾನೆ.

'ಅತ್ರಾಪಿ—' ಇತಿ. ಇಲ್ಲಿಯೂ ಕೂಡಾ ಇದು ವೇತ್ರ ಬೀಜವೆಂಬ ಪ್ರಯೋಗ ಹಿಂದಿನಂತೆಯೇ ಬರುವುದರಿಂದ ಸಮಾನಯೋಗಕ್ಷೇಮವಿರುತ್ತದೆ. ಭಸ್ಮಕದೋಷದಿಂದ ದೂಷಿತವಾದ ಜಾಠರಾಗ್ನಿಗೆ ಅಧಿಕಾಹಾರಪಚನಸಾಮರ್ಥ್ಯವಿರುತ್ತದೆ. ಇಲ್ಲಿಯೂ ಬಹ್ವನ್ನಪಚನಸಾಮರ್ಥ್ಯವು ಜಾಠರಾಗ್ನಿಗೇ ಇರುವುದಲ್ಲದೆ ಭಸ್ಮಕವ್ಯಾಧಿಗಿಲ್ಲವೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳುವುದೂ ಸರಿಯಲ್ಲ. ಜಾಠರಾಗ್ನಿಯು ತಿಂದ ಅನ್ನವನ್ನು ನಿಧಾನವಾಗಿ ಜೀರ್ಣಿಸುವುದಲ್ಲದೆ ಬಹುಜಾಗ್ರತೆಯಾಗಿ ಜೀರ್ಣಿಸಲಾರದು. ಹಾಗೆಯೇ ಬಹಳವಾಗಿ ತಿಂದುದನ್ನು ಪಕ್ವಮಾಡಲಾರದು. ಅಲ್ಪಾನ್ನವನ್ನು ಜೀರ್ಣಿಸುತ್ತದೆ. ಭಸ್ಮಕವ್ಯಾಧಿಸಹಾಯವಿಲ್ಲದೆ ಅದು ವಿಪರೀತವಾಗಿ ಏನೂ ಮಾಡಲು ಶಕ್ತವಾಗುವುದಿಲ್ಲ. ಹೀಗೆ ಹೇಳದಿದ್ದರೆ (ಸರ್ವೇಷಾಂ) ಭಸ್ಮಕರೋಗರಹಿತರಿಗೂ ಜಾಗ್ರತೆಯಾಗಿ ಬಹ್ವನ್ನಪಚನವಾಗಬೇಕಾಗುತ್ತದೆ. ಮೀಮಾಂಸಕನಿಗೆ ಸ್ವಮತವಿರೋಧವನ್ನು ತೋರಿಸುತ್ತಾನೆ. 'ಕಿಂಚ' ಇತಿ. ಇವರ ಮತದಲ್ಲಿ ಪುರೋವರ್ತಿಪದಾರ್ಥಪ್ರತ್ಯಕ್ಷವೂ, ರಜತಸ್ಮರಣವೂ ಈ ಎರಡು ಜ್ಞಾನಗಳೂ ಸತ್ಯವಾಗಿರುತ್ತವೆ. ಏಕಜ್ಞಾನದಿಂದ ಹುಟ್ಟುವಂತೆ ದೋಷದಿಂದ ಹುಟ್ಟಿದ 'ಇದಂರಜತಂ' ಎಂಬ ವ್ಯವಹಾರಮಾತ್ರ ಅಸತ್ಯವೆಂದು ಅವರ ಸಿದ್ಧಾಂತ. ಆಗ ಯಥಾರ್ಥಜ್ಞಾನಕ್ಕೆ ವಿರುದ್ಧವಾದ ಅಯಥಾರ್ಥವ್ಯವಹಾರರೂಪಕಾರ್ಯಕಾರಿತ್ವವು ದೋಷಕ್ಕೆ ಅಂಗೀಕೃತವಾಗುವುದರಿಂದ ಸ್ವಮತವಿರೋಧ ಬರುತ್ತದೆ.

ಅತ್ರಾಪ್ಯುಕ್ತಮ್—
ಯಶ್ಚೋಭಯೋಃ ಸಮೋ ದೋಷಃ ಪರಿಹಾರೋಽಪಿ ವಾಸಮಃ ।
ನೈಕಃ ಪರ್ಯನುಯೋಕ್ತವ್ಯಸ್ತಾದೃಗರ್ಥವಿಚಾರಣೇ ॥ ಇತಿ॥
ತಥಾಪಿ ಮಾಮಕಸ್ಯಾನುಮಾನಸ್ಯ ಕಿಂ ದೂಷಣಂ ದತ್ತಮಾಸೀತ್ । ಯದ್ಯನುಮಾನದೂಷಣಂ ವಿನಾ ನ ಪರಿತುಷ್ಯತಿ ಹಂತ ಕಾಲಾತ್ಯಯಾಪದಿಷ್ಟತಾ। ಕೃಷ್ಣವರ್ತ್ಮಾನುಷ್ಣತ್ವಾನುಮಾನವತ್ । ಏತಾವಂತಂ ಕಾಲಂ ಯದಿದಂ ರಜತಮಿತ್ಯಭಾದಸೌ ಶುಕ್ತಿರಿತಿ ಪ್ರತ್ಯಕ್ಷೇಣ ಪ್ರಾಚೀನಪ್ರತ್ಯಯಸ್ಯಾಯಥಾರ್ಥತ್ವಂ ಪ್ರವೇದಯತಾ ಯಥಾರ್ಥತ್ವಾನುಮಾನಸ್ಯಾಪಹೃತವಿಷಯತ್ವಾತ್ ಬಾಧ್ಯತ್ವಸಂಭವಾತ್ ॥

ವಾದಿಪ್ರತಿವಾದಿಗಳಿಬ್ಬರ ಮತಗಳಲ್ಲಿಯೂ ದೋಷವಾಗಲೀ ಪರಿಹಾರವಾಗಲೀ ಸಮವಾಗಿದ್ದರೆ ಆಗ ಅಲ್ಲಿ ಯಾರೂ ಚೋದ್ಯಾರ್ಹರಾಗುವುದಿಲ್ಲವೆಂದು ಪದ್ಯಾರ್ಥ. ಹೀಗಿದ್ದರೂ "ವಿವಾದಾಧ್ಯಾಸಿತಾಃ ಪ್ರತ್ಯಯಾಃ—ಯಥಾರ್ಥಾಃ—ಪ್ರತ್ಯಯತ್ವಾತ್ । ದಂಡೀತಿಪ್ರತ್ಯಯವತ್" ಎಂದು ಹಿಂದೆ ಹೇಳಿದ ಅನುಮಾನಕ್ಕೆ ಯಾವ ದೂಷಣವೂ ಹೇಳಿಲ್ಲವೆಂದು ಮೀಮಾಂಸಕನು ಆಕ್ಷೇಪಿಸುವುದಾದರೆ ಅಲ್ಲಿಯೂ ದೂಷಣ ತೋರಿಸುತ್ತಾನೆ. "ಯದಿ"—ಇತಿ. ಕಾಲಾತ್ಯಯಾಪದಿಷ್ಟತಾ—ಬಾಧಿತತ್ವಮ್ । ಕೃಷ್ಣವರ್ತ್ಮ ಅಂದರೆ ಅಗ್ನಿ. "ಅಗ್ನಿಃ—ಅನುಷ್ಣಃ—ದ್ರವ್ಯತ್ವಾತ್" ಎಂದು ಅನುಮಾನ ಮಾಡಿದಾಗ ಹೇಗೆ ಹೇತುವು ಬಾಧಿತವಾಗುತ್ತದೆಯೋ ಅದರಂತೆ ಮೀಮಾಂಸಕನ ಅನುಮಾನದಲ್ಲಿಯೂ ಬಾಧವೆಂದರ್ಥ. ಇದುವರೆಗೆ ರಜತವಾಗಿ ತೋರಿತು. ಈಗ ಇದು ನಿಜವಾಗಿಯೂ ಶುಕ್ತಿಯೆಂಬ ಪ್ರತ್ಯಕ್ಷದಿಂದ ಹಿಂದಿನ ಜ್ಞಾನಕ್ಕೆ ಅಯಥಾರ್ಥತ್ವಸಿದ್ಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗುತ್ತದೆ. ಹೀಗೆ ಪ್ರತ್ಯಕ್ಷದಿಂದ ಅನುಮಾನಕ್ಕೆ ಬಾಧಬರುವುದರಿಂದ ದೂಷಣ ಹೇಳಿದಂತಾಗುತ್ತದೆ.

ಯಚ್ಚೋಕ್ತಂ ಕ್ವಗೋಚರವ್ಯಭಿಚಾರೇ ಸರ್ವತ್ರಾನಾಶ್ವಾಸಪ್ರಸಂಗ ಇತಿ । ತದಸಾಂಪ್ರತಮ್ । ಸಂವಿದಾಂ ಕ್ವಚಿತ್ ಸಂವಾದಿವ್ಯವಹಾರಜನಕತ್ವೇಽಪಿ ನ ಸರ್ವತ್ರ ತಚ್ಛಂಕಯಾ ಪ್ರವೃತ್ತ್ಯುಚ್ಛೇದ ಇತಿ ಯಥಾ ತಾವಕೇ ಮತೇ ತಥಾ ಮಾಮಕೇಪ್ಯಸೌ ಪಂಥಾ ನ ವಾರಿತ ಇತಿ ಸಮಾನಯೋಗಕ್ಷೇಮತ್ವಾತ್ । ತೌತಾತಿತಮತಮನುವಲಂಬ್ಯ ವಿಧಿವಿವೇಕಂ ವ್ಯಾಕುರ್ವಾಣೈರಾಚಾರ್ಯವಾಚಸ್ಪತಿಮಿಶ್ರೈಃ ಬೋಧಕತ್ವೇನ ಸ್ವತಃ ಪ್ರಾಮಾಣ್ಯಂ ನವ್ಯಭಿಚಾರೇಣೇತಿ ನ್ಯಾಯಕಣಿಕಾಯಾಂ ಪ್ರತ್ಯಪಾದಿ । ತಸ್ಮಾದವಿಶ್ವಾಸಶಂಕಾನವಕಾಶಂ ಲಭತೇ ।

'ಇದಂ ರಜತಂ' ಎಂಬಲ್ಲಿ ವ್ಯಭಿಚಾರವಿರುವುದಾದರೆ ಸರ್ವತ್ರ ಪ್ರವೃತ್ತಿ ಬಾರದೇ ಹೋಗಬೇಕಾಗುತ್ತದೆಂದು ಶಂಕಿಸುವುದು ನ್ಯಾಯವಲ್ಲ. ನಮ್ಮ ಮತದಲ್ಲಿ ವಿಷಯ ವ್ಯಭಿಚಾರವಿದ್ದರೂ ಅದರ ಜ್ಞಾನವನ್ನು (ರಜತವಿಲ್ಲದಿದ್ದರೂ, ರಜತವಿಷಯಕಜ್ಞಾನ) ಅಂಗೀಕರಿಸಿರುವುದರಿಂದ ಜ್ಞಾನದಲ್ಲಿ ವಿಷಯ ವ್ಯಭಿಚಾರವಿರುತ್ತದೆ. ಮೀಮಾಂಸಕ ಮತದಲ್ಲಿ ವ್ಯವಹಾರ ಅಸತ್ಯವಾದರೂ ತತ್ಪ್ರಯೋಜಕಜ್ಞಾನವು ಯಥಾರ್ಥವಾದುದರಿಂದ ಜ್ಞಾನದಲ್ಲಿ ವ್ಯವಹಾರ ವ್ಯಭಿಚಾರವು ಅಂಗೀಕೃತವಾಗಿರುವುದರಿಂದ ಅವಿಶ್ವಾಸ ಪ್ರಸಂಗ ರೂಪದೋಷವು ಇಬ್ಬರಿಗೂ ಸಮಾನವಾಗಿದೆ. ಒಬ್ಬನು ವೀಳ್ಯದೆಲೆ ತಿಂದು ಸತ್ತನೆಂದರೆ ಎಲ್ಲರೂ ಅದನ್ನು ಬಿಡುವುದಿಲ್ಲ. ಅದರಂತೆ ಕ್ವಾಚಿತ್ಕ (ಎಲ್ಲೋ ಒಂದು ಕಡೆ) ವ್ಯಭಿಚಾರವನ್ನು ನೋಡಿ ಆಶಂಕೆಯಿಂದ ಎಲ್ಲಾ ಕಡೆ ಪ್ರವೃತ್ತ್ಯಂಟಾಗದಿರುವುದು ಎಲ್ಲಿಯೂ ದೃಷ್ಟವಾಗಿಲ್ಲವೆಂದು ಹೇಳುವುದಾದರೆ ಇದೂ ಉಭಯಸಮಾನವಾದುದರಿಂದ ಯಾರ ಮತದಲ್ಲಿಯೂ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲ. ವೇದವಿಹಿತಪುತ್ರಕಾಮೇಷ್ಟಿಯಾಗಾದಿಗಳನ್ನು ಮಾಡಿದಾಗ ಎಲ್ಲಿಯಾದರೂ ಒಂದು ಕಡೆ ಪುತ್ರೋತ್ಪತ್ತಿಯಾಗದಿರುವಾಗ ಫಲ ವ್ಯಭಿಚಾರ ಬಂದುದರಿಂದ ವೇದಕ್ಕೆ ಅಪ್ರಾಮಾಣ್ಯವೆಂದು ಚಾರ್ವಾಕನ ಆಕ್ಷೇಪ. ಈ ಆಕ್ಷೇಪವನ್ನೆತ್ತಿ ವಾಚಸ್ಪತಿಮಿಶ್ರರು — ಅಪೂರ್ವಾರ್ಥ ಬೋಧಕವಾದುದರಿಂದ ವಿಧಿಗೆ ಸ್ವತಃ ಪ್ರಾಮಾಣ್ಯ ಹೇಳಬೇಕಲ್ಲದೆ ಫಲವ್ಯಭಿಚಾರದಿಂದ ಇಲ್ಲವೆಂದು ಹೇಳಬಾರದು ಎಂದು ಹೇಳಿರುತ್ತಾರೆ. ಆದುದರಿಂದ ಅವಿಶ್ವಾಸ ಶಂಕೆಗೆ ಅವಕಾಶವಿಲ್ಲ.

ನನು ಮಾಧ್ಯಮಿಕಮತಾವಲಂಬನೇನ ರಜತಾದಿವಿಭ್ರಮಾಲಂಬನಮಸದಿತಿ ಚೇತ್— ತದುಕ್ತಮ್ । ಅಸತೋಽಪರೋಕ್ಷ ಪ್ರತಿಭಾಸಾಯೋಗ್ಯತ್ವಾತ್ । ತದುಪಾದಿತ್ಸಯಾ ಪ್ರವೃತ್ತ್ಯನುಪಪತ್ತೇಶ್ಚ ॥ ನನು ವಿಜ್ಞಾನಮೇವವಾಸನಾದಿ ಸ್ವಕಾರಣ ಸಾಮರ್ಥ್ಯಾಸಾದಿತ ದೃಷ್ಟಾಂತಸಿದ್ಧ ಸ್ವಭಾವವಿಶೇಷಂ ಅಸತ್ಪ್ರಕಾಶನಸಮರ್ಥನಂ ಉಪಜಾತಮ್ । ಅಸತ್ಪ್ರಕಾಶನಶಕ್ತಿರವಿದ್ಯಾ ಸಂವೃತಿರಿತಿ ಪರ್ಯಾಯಃ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಸ್ಮಾದವಿದ್ಯಾವಶಾತ್ ಅಸಂತೋ ಭಾಂತೀತಿ ಚೇತ್–ತದಪಿ ವಕ್ತುಮಶಕ್ಯಮ್ ಶಕ್ಯಸ್ಯ ದುರ್ನಿರೂಪಸ್ಯತ್ವಾತ್ । ಕಿಮತ್ರ ಶಕ್ಯಂ ಕಾರ್ಯಂ ಜ್ಞಾಪ್ಯಂ ವಾ। ನಾದ್ಯಃ ಅಸತಃ ಕಾರಣತ್ವಾನುಪಪತ್ತೇಃ । ನ ದ್ವಿತೀಯಃ ॥ ಶಕ್ಯಸ್ಯ ಕಾರಣತ್ವೇನಾಂಗೀ ಕೃತತ್ವಾತ್ । ಜ್ಞಾನದನ್ಯಸ್ಯ ಜ್ಞಾನಸ್ಯ ಅನುಪಲಬ್ಧೇಶ್ಚ । ಉಪಲಬ್ಧೌ ವಾ ತಸ್ಯಾಪಿ ಜ್ಞಾಪ್ಯತ್ವೇನ ಜ್ಞಾಪಕಾಂತರಾಪೇಕ್ಷಾಯಾಂ ಅನವಸ್ಥಾಪತ್ತೇಶ್ಚ ॥

ಶೂನ್ಯವಾದಿ ಬೌದ್ಧರು ಮಾಧ್ಯಮಿಕರು. ಬೌದ್ಧದರ್ಶನದಲ್ಲಿ ಇವರ ಮತ ವಿವೃತವಾಗಿದೆ. ಇವರ ಮತದಲ್ಲಿ ಸಕಲವೂ ಶೂನ್ಯವಾದುದರಿಂದ ವಸ್ತುತಃ ಇಲ್ಲಿ ಶುಕ್ತಿಯೂ ಇರುವುದಿಲ್ಲ. ಅಸತ್ತೇ ರಜತಭ್ರಾಂತಿಗೆ ಆಶ್ರಯವಾಗಿರುತ್ತದೆ. ಹೀಗೆ ಹೇಳುವುದೂ ಯುಕ್ತವಾಗುವುದಿಲ್ಲ. ಅಸತ್ತಾದುದು ಪ್ರತ್ಯಕ್ಷವಾಗಿ ತೋರಲಾರದು. ಅದೂ ಅಲ್ಲದೆ ಭ್ರಾಂತಿಯಿಂದ ಅದನ್ನು ಹೊಂದಬೇಕೆಂಬ ಇಚ್ಛೆಯಿಂದ ಪ್ರವೃತ್ತಿ ಹೊಂದುವುದು ಪ್ರಸಿದ್ಧವಾಗಿದೆ. ಅದೂ ಇಲ್ಲದೇ ಹೋಗಬೇಕಾಗುತ್ತದೆ· 'ನನು' — ಇತಿ. ವಿಜ್ಞಾನವೇ ವಾಸನಾದಿ ತನ್ನ ಕಾರಣವಸಾಮರ್ಥ್ಯದಿಂದ ಹೊಂದಿದ, ದೃಷ್ಟಾಂತದಿಂದ ಸಿದ್ಧವಾದ ಸ್ವಭಾವವಿಶೇಷವುಳ್ಳದ್ದಾಗಿ ಅಸತ್ಪ್ರಕಾಶನಸಮರ್ಥವುಳ್ಳದ್ದಾಗುತ್ತದೆ. ವಾಸನಾದಿ ಸ್ವಕಾರಣಸಾಮರ್ಥ್ಯಾಸಾದಿತಃ, ದೃಷ್ಟಾಂತಸಿದ್ಧಶ್ಚ ಸ್ವಭಾವವಿಶೇಷಃ ಯಸ್ಯತತ್ ವಾಸನಾದಿ ....ವಿಶೇಷಮ್. ಅಸತ್ತನ್ನು ಪ್ರಕಾಶಪಡಿಸುವ ಶಕ್ತಿಯುಳ್ಳ ವಾಸನೆಯು ತಾನು ಅಸತ್ತಾಗಿದ್ದರೂ ಸತ್ತಿನಂತೆ ಪ್ರಕಾಶಿತವಾಗುತ್ತದೆ. ಇಂತಹ ಪ್ರಕಾಶವು ಅನಾದಿಯಾಗಿರುತ್ತದೆ. ಈ ರೀತಿಯಾದ ವಾಸನೆಯು ಅಸತ್ತಾಗಿಯೇ ವಿಜ್ಞಾನವನ್ನು ಸತ್ತಿನಂತೆ ಪ್ರಕಾಶಪಡಿಸುತ್ತದೆ ಮತ್ತು ತನಗೆ ಸಮಾನವಾಗಿರುವ ಇನ್ನೊಂದು ಅಸತ್ಪ್ರಕಾಶನ ಶಕ್ತಿಯನ್ನು ಪ್ರಕಾಶಪಡಿಸುತ್ತದೆ. ಸ್ವಪ್ನದೃಷ್ಟಾಂತದಿಂದ ವಿಜ್ಞಾನಕ್ಕೆ ಅಸತ್ಪ್ರಕಾಶನ ಸ್ವಭಾವವು ಸಿದ್ಧವಾಗುತ್ತದೆ. ಹೀಗೆ ದೃಷ್ಟಾಂತ ಸಿದ್ಧವಾದ, ವಾಸನಾದಿ ತನ್ನ ಕಾರಣ ಸಾಮರ್ಥ್ಯದಿಂದ ವಿಜ್ಞಾನವು ಅಸತ್ಪ್ರಕಾಶನ ಶಕ್ತಿಯನ್ನು ಹೊಂದಿರುತ್ತದೆ. ಈ ಅಸತ್ಪ್ರಕಾಶನ ಶಕ್ತಿಗೆ ಅವಿದ್ಯಾ, ಸಂವೃತಿ ಎಂದು ಕರೆಯುತ್ತಾರೆ. ಆದುದರಿಂದ ಅವಿದ್ಯಾವಶದಿಂದ ಅಸತ್ತುಗಳೂ ಪ್ರಕಾಶಿಸುತ್ತವೆಯೆಂದರೆ ಹೀಗೆ ಹೇಳುವುದು ಸಂಗತವಾಗುವುದಿಲ್ಲವೆಂದು ಖಂಡಿಸುತ್ತಾನೆ.

"ಶಕ್ಯಸ್ಯ—" ಇತಿ. ಅಸತ್ಪ್ರಕಾಶನಶಕ್ತಿಯಿಂದಕೂಡಿದ ವಿಜ್ಞಾನವು ಶಕ್ತವಾಗುತ್ತದೆ. ಆ ಶಕ್ತಿಯಿಂದ ಪ್ರಕಾಶಿಸಲ್ಪಟ್ಟ ಪಟಾದಿಪದಾರ್ಥಸಮುದಾಯವು ಶಕ್ಯವಾಗುತ್ತದೆ. ಈ ಶಕ್ಯವಾದ ಪದಾರ್ಥಜಾತವು ವಿಜ್ಞಾನದ ಕಾರ್ಯವೇ ? ಅಥವಾ ಜ್ಞಾಪ್ಯವೇ ? ದಂಡಾದಿಕಾರಣದಿಂದ ಘಟವು ಹುಟ್ಟುವಂತೆ ಕಾರ್ಯವು ಯಾವಾಗಲೂ ಜನ್ಯವಾಗಿರುತ್ತದೆ. ಜ್ಞಾಪ್ಯವೆಂದರೆ ಜನ್ಯಜ್ಞಾನವಿಷಯವಾಗುತ್ತದೆ. ದೀಪಾದಿಗಳಿಂದ ಘಟಾದಿಗಳು ಜ್ಞಾಪ್ಯವಾಗುತ್ತವೆ. ಹೀಗಿರುವಾಗ ಅಸತ್ತಿಗೆ ಎಲ್ಲಿಯೂ ಕಾರಣತ್ವ ಸಿದ್ಧವಾಗುವುದಿಲ್ಲ. ಸರ್ವಶೂನ್ಯವಾದಿಯಾದ ಮಾಧ್ಯಮಿಕನ ಮತದಲ್ಲಿ ವಿಜ್ಞಾನವೂ ಕೂಡಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸತ್ತಾದುದರಿಂದ ಅದಕ್ಕೆ ಘಟಾದಿಕಾರಣತ್ವಸಂತಗವಾಗುವುದಿಲ್ಲ ಶಕ್ಯಕ್ಕೆ ವಿಜ್ಞಾನವು ಕಾರಣವೆಂದು ಅವನ ಮತದಲ್ಲಿ ಅಂಗೀಕೃತವಾದುದರಿಂದ ಜ್ಞಾಪ್ಯತ್ವವೂ ಕೂಡುವುದಿಲ್ಲ. ಅದೂ ಅಲ್ಲದೆ ಜ್ಞಾನಕ್ಕಿಂತ ಬೇರೆಯಾದ ಜ್ಞಾನವು ಉಪಲಬ್ಧವಾಗುವುದಿಲ್ಲ. ಘಟಾದ್ಯರ್ಥಜಾತವು ಜ್ಞಾಪ್ಯವಾಗುವುದಾದರೆ ಅರ್ಥಾತ್ ತಜ್ಜ್ಞಾಪಕತ್ವವು ವಿಜ್ಞಾನಕ್ಕೆ ಬರುತ್ತದೆ. ಜ್ಞಾಪಕಕ್ಕೆ ಜ್ಞಾಪ್ಯದೊಡನೆ ಸಾಕ್ಷಾತ್ಸಂಬಂಧವಿರುವುದಿಲ್ಲ. ಸ್ವಜನ್ಯಜ್ಞಾನದ್ವಾರಾ ಸಂಬಂಧಹೇಳಬೇಕು ಲೋಕದಲ್ಲಿ ಜ್ಞಾಪಕವಾದ ದೀಪವು ಕೂಡಾ ಹೀಗೆಯೇ ಘಟಾದಿಜ್ಞಾನಜನಕವಾಗುವುದು ಎಲ್ಲರಿಗೂ ತಿಳಿದ ವಿಷಯ. ಅದರಂತೆ ಜ್ಞಾಪಕವಾದ ವಿಜ್ಞಾನವು ಸ್ವಜನ್ಯಜ್ಞಾನದ್ವಾರಾ ಪದಾರ್ಥಜ್ಞಾನಜನಕವಾಗುತ್ತದೆಂದು ಹೇಳಬೇಕು. ಆದರೆ ಆ ವಿಜ್ಞಾನದಿಂದ ಹುಟ್ಟುವ ವಿಜ್ಞಾನಕ್ಕಿಂತಬೇರೆಯಾದ ಘಟಾದಿಗಳನ್ನು ವಿಷಯೀಕರಿಸುವ ಎರಡನೆಯ ಜ್ಞಾನವು ಎಂದೂ ಉಪಲಬ್ಧವಾಗುವುದಿಲ್ಲ.

'ಉಪಲಬ್ಧಾ'—ಇತಿ. ಇನ್ನೊಂದು ಜ್ಞಾನವುಂಟಾಗುತ್ತದೆಂದು ಧಾರ್ಷ್ಟ್ಯದಿಂದ ಹೇಳುವುದಾದರೆ ಆ ರೀತಿಯಾದ ಎರಡನೆಯ ಜ್ಞಾನಕ್ಕೆ ಶಕ್ಯನಾದ ಘಟಾದ್ಯರ್ಥಜಾತವು ಹಿಂದೆ ಹೇಳಿದ ನ್ಯಾಯದಿಂದ ಕಾರ್ಯವಾಗಲಾರದು. ಜ್ಞಾಪ್ಯವೆಂದೇ ಹೇಳಬೇಕು. ಆಗ ದ್ವಿತೀಯಜ್ಞಾನವು ಜ್ಞಾಪಕವಾಗುತ್ತದೆ. ಜ್ಞಾಪಕವೆಂದರೆ ಜ್ಞಾನಜನಕವಾದುದರಿಂದ ಪುನಃ ದ್ವಿತೀಯಜ್ಞಾನಜನ್ಯವಾದ ತೃತೀಯಜ್ಞಾನವನ್ನು ಅಂಗೀಕರಿಸಬೇಕಾಗುತ್ತದೆ. ಅದಕ್ಕೂ ಹಿಂದೆ ಹೇಳಿದ ರೀತಿಯಿಂದ ಜ್ಞಾಪಕತ್ವವನ್ನಂಗೀಕರಿಸುವುದರಿಂದ ಅದರಿಂದ ಉಂಟಾದ ಚತುರ್ಥಜ್ಞಾನವನ್ನಂಗೀಕರಿಸಬೇಕು. ಹೀಗಿ ಒಪ್ಪುತ್ತಾ ಹೋದರೆ ಆಗ ಅನವಸ್ಥಾದೋಷ ಬರುತ್ತದೆ. ಆದುದರಿಂದ ಮಾಧ್ಯಮಿಕಮತವನ್ನು ಸರಿಸಿ ಹೇಳುವುದು ಸಂಗತವಾಗುವುದಿಲ್ಲ.

ಅಥೈತದ್ದೋಷಪರಿಜಿಹೀರ್ಷಯಾ ವಿಜ್ಞಾನಂ ಸದ್ರೂಪಮೇವಾಸತಃ ಪ್ರಕಾಶಕಮಿತಿ ಕಕ್ಷೀಕ್ರಿಯತ ಇತಿ ಚೇತ್— ಅತ್ರ ದೇವಾನಾಂಪ್ರಿಯಃ ಪ್ರಷ್ಟವ್ಯಃ ಪುನಃ । ಅಸೌ ಸದಸತೋಃ ಸಂಬಂಧೋ ನಿರೂಪ್ಯನಿರೂಪಕಭಾವೋಽವಿನಾಭಾವೋ ವಾ । ನಾದ್ಯಃ । ಅಸತಃ ಉಪಕಾರಾಧಾರತ್ವಾಯೋಗೇನ ಅನುಪಕೃತತಯಾ ನಿರೂಪ್ಯತ್ವಾನುಪಪತ್ತೇಃ । ನ ಚರಮಃ । ಧೂಮಧೂಮಧ್ವಜಯೋರಿವ ತದುತ್ಪತ್ತಿಲಕ್ಷಣಸ್ಯ ಶಿಂಶಪಾವೃಕ್ಷಯೋರಿವ ತಾದಾತ್ಮ್ಯಲಕ್ಷಣಸ್ಯ ವಾ ಅವಿನಾಭಾವನಿದಾನಸ್ಯ ಸದಸತೋರಸಂಭವಾತ್ । ತಸ್ಮಾದ್ವಿಜ್ಞಾನಮೇವಾಸತ್ಪ್ರಕಾಶಕಮಿತ್ಯಸದ್ವಾದಿನಾಮಯಮುಪತ್ಪ್ರಲಾಪ ಇತ್ಯಾರೋಪ್ಯಮಾಣಂ ನಾಸತ್ ॥

ಪುನಃ ಶಂಕಿಸುತ್ತಾನೆ. 'ಅಥ'—ಇತಿ. ಅಸತ್ತಾದ ಘಟಾದಿಗಳಿಗೆ ಉಪಾದಾನಕಾರಣವಾಗಿ ಅಂಗೀಕೃತವಾದ ವಿಜ್ಞಾನವನ್ನೇ ಘಟಾದಿಗೆ ಜ್ಞಾಪಕವಾಗಿ ಸ್ವೀಕರಿಸುವುದರಿಂದ ಯಾವದೋಷಕ್ಕೂ ಅವಕಾಶವಿಲ್ಲವೆಂದು ಅವನ ಅಭಿಪ್ರಾಯ. ಈ ರೀತಿಯಾಗಿ ಶಂಕಿಸುವವನು ಸರ್ವಥಾ ಶೂನ್ಯವಾದಿಯಾದ ಮಾಧ್ಯಮಿಕಮತಾನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಯಿಯೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇವನು ಜ್ಞಾನವನ್ನು ಸದ್ರೂಪ ವೆಂದು ಅಂಗೀಕರಿಸಿರುತ್ತಾನೆ. ವಿಜ್ಞಾನವಾದಿಯಾದ ಯೋಗಾಚಾರನು ತಾನುಯಾಯಿ ಯೆಂದು ಹೇಳಲೂ ಸಾಧ್ಯವಿಲ್ಲ. ಏಕೆಂದರೆ ಬಾಹ್ಯಘಟಾದಿಗಳನ್ನು ಜ್ಞಾನರೂಪವೆಂದು ಅಂಗೀಕರಿಸಿಲ್ಲ. ಅರ್ಧಜರತೀಯತ್ವಾಂಗೀಕಾರಿಯಾದುದರಿಂದ "ದೇವಾನಾಂಪ್ರಿಯಃ" ಎಂದು ಹೇಳಿರುತ್ತಾನೆ. ಸತ್ತಾದಜ್ಞಾನಕ್ಕೂ ಅಸತ್ತಾದ ಘಟಕ್ಕೂ ಯಾವ ಸಂಬಂಧ ಹೇಳುತ್ತಿ ? ನಿರೂಪ್ಯನಿರೂಪಕಭಾವವೇ ? ಅಥವಾ ಅವಿನಾಭಾವವೇ ? ಯಾವುದೂ ಕೂಡುವುದಿಲ್ಲ. ಈ ಸದಸತ್ತಾದ ವಿಜ್ಞಾನ ಘಟಗಳಿಗೆ ಉಪಾದಾನೋಪಾದೇಯ ಸಂಬಂಧವೇ ಸಮಂಜಸವಾಗುವುದಿಲ್ಲ. ಸದಸತ್ತುಗಳಿಗೆ ಎಲ್ಲಿಯೂ ಈ ಸಂಬಂಧ ದೃಷ್ಟ ವಾಗಿಲ್ಲ. ಹೀಗೆಯೇ ಜ್ಞಾಪ್ಯಜ್ಞಾಪಕಭಾವವೂ ಅವುಗಳಿಗೆ ಸಂಗತವಾಗುವುದಿಲ್ಲ. ವಿಜ್ಞಾನವು ಘಟಾದಿನಿರೂಪಕವಾದುದರಿಂದ ಘಟಾದಿಗಳಿಗೆ ಜ್ಞಾಪಕವಾಗುತ್ತದೆಯೇ ? ಅಥವಾ ಘಟಾದ್ಯವಿನಾಭಾವಿಯಾದುದರಿಂದ ಜ್ಞಾಪಕವೇ ? ಎಂದು ಕೇಳುತ್ತೇವೆ. ನಿರೂಪಕವೆಂದರೆ ಘಟಾದಿಗಳಿಗೆ ವಿಜ್ಞಾನ ನಿರೂಪ್ಯತ್ವ ಹೇಳಬೇಕು.

ನಿರೂಪ್ಯವು ನಿರೂಪಕದಿಂದ ಉಪಕೃತವಾದರೇ ನಿರೂಪ್ಯವಾಗುತ್ತವೆ ; ಅಂದರೆ ನಿರೂಪಕದಿಂದ ಎಲ್ಲಿ ಒಂದು ಅತಿಶಯಾಧಾನವಾಗುವುದೋ ಅಲ್ಲಿ ನಿರೂಪ್ಯವೆಂದು ವ್ಯವಹರಿಸಲು ಸಾಧ್ಯ. ಅಸತ್ತಾದ ಘಟಾದಿಗಳಲ್ಲಿ ಅತಿಶಯಾಧಾನಸಂಭವಿಸಲಾರದು. ಅಸತ್ತಿಗೆ ಆಶ್ರಯತ್ವವೇ ಇಲ್ಲದಿರುವಾಗ ಅತಿಶಯಾಧಾನ ಹೇಳುವುದು ಹೇಗೆ ? ವ್ಯಾಪ್ತಿ ಗ್ರಾಹಕಪ್ರಮಾಣಗಳಿಲ್ಲದಿರುವುದರಿಂದ ವಿಜ್ಞಾನವು ವ್ಯಾಪ್ತಿಬಲದಿಂದಲೂ ಘಟಾದಿಗಳಿಗೆ ಜ್ಞಾಪಕವೆಂದು ಸಾಧಿಸಲಾಗುವುದಿಲ್ಲ. ಲೋಕದಲ್ಲಿ ಅನುಕೂಲತರ್ಕದಿಂದ ವ್ಯಾಪ್ತಿಯು ನಿಶ್ಚಿತವಾಗುತ್ತದೆ. ಅನುಕೂಲತರ್ಕವು ಕಾರ್ಯಕಾರಣಭಾವ ಮೂಲಕವಾಗಿಯೂ, ಸಾಮಾನ್ಯವಿಶೇಷಭಾವ ಮೂಲಕವಾಗಿಯೂ ಬರುತ್ತದೆ. ಸತ್, ಅಸತ್ತುಗಳಿಗೆ ಇವೆರಡೂ ಸಂಭವಿಸದಿರುವುದರಿಂದ ಅನುಕೂಲತರ್ಕಸಂಭವಿಸದೇ ವ್ಯಾಪ್ತಿ ಜ್ಞಾನವೂ ಉಂಟಾಗಲಾರದು. ಈ ಎಲ್ಲಾ ವಿಷಯಗಳು ಬೌದ್ಧದರ್ಶನದಲ್ಲಿ ವಿವೃತವಾಗಿವೆ. 'ತಸ್ಮಾತ್' — ಇತಿ. ಸತ್ಪದಾರ್ಥವೇ ಇನ್ನೊಂದು ಕಡೆ ಆರೋಪಿಸಲ್ಪಡುವುದಲ್ಲದೆ ಅಸತ್ತಲ್ಲ. ಮೊಲದಲ್ಲಿ ಶೃಂಗದ ಆರೋಪ ಮಾಡುತ್ತಾರೆ. ಶೃಂಗವು ಬೇರೆ ಕಡೆ ಇರುವ ವಸ್ತುವಾಗಿದೆ. ಶಶಶೃಂಗಕ್ಕೆ ಇನ್ನೊಂದು ಕಡೆ ಎಂದೂ ಆರೋಪವಿಲ್ಲ. ಏಕೆಂದರೆ ಶಶಶೃಂಗವು ಎಲ್ಲಿಯೂ ಪ್ರಸಿದ್ಧವಾಗಿಲ್ಲ. ಆದುದರಿಂದ ಅಸದ್ವಾದಿಗಳ ಈ ವಾದವು ಅಸ ತ್ಪ್ರಲಾಪವಾದುದರಿಂದ ಆರೋಪಿಸಲ್ಪಡುವುದು ಅಸತ್ತೆಂದು ಹೇಳುವುದು ತಪ್ಪಾಗುತ್ತದೆ.

ನನು ವಿಜ್ಞಾನವಾದಿನಯಾನುಸಾರೇಣ ಪ್ರತೀಯಮಾನಂ ರಜತಂ ಜ್ಞಾನಾತ್ಮಕಮ್ । ತತ್ರ ಚ ಯುಕ್ತಿರಭಿಧೀಯತೇ—ಯದ್ಯಥಾನುಭೂಯತೇ ತತ್ತಥಾ । ಅನ್ಯಥಾ ತ್ವಂ ತು ಬಲವದ್ಬಾಧಕೋಪನಿಪಾತಾದಾಸ್ಥೀಯತ ಇತ್ಯುಭಯವಾದಿ ಸಂಮ ತೋಽರ್ಥಃ । ತತ್ರ ಚ ನೇದಂ ರಜತಮಿತಿ ನಿಷಿದ್ಧೇದಂಭಾವಂ ರಜತಮರ್ಥಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾಂತರ ಜ್ಞಾನರೂಪಮನುವರ್ತಿಷ್ಯತೇ । ನ ಚೇದಂ ತಯಾ ನಿಷೇಧೇ ಸತ್ಯನಿದಂ ತಯಾ ಚ ಬಹಿರಪಿ ವ್ಯವಸ್ಥೋಪಪತ್ತೇಃ ಕುತಃ ಸಂವಿದಾಕಾರತೇತಿ ವಾಚ್ಯಮ್ ವ್ಯವಹಿತಸ್ಯ ಅಪರೋಕ್ಷತ್ವಾನುಪಪತ್ತೇಃ ಅಪರೋಕ್ಷಸ್ಯ ವಿಜ್ಞಾನಸ್ಯ ಕಕ್ಷೀಕರ್ತವ್ಯತ್ವಾತ್ । ತಥಾ ಚ ಪ್ರಯೋಗಃ—ವಿವಾದಪದಂ- ವಿಜ್ಞಾನಾಕಾರಃ — ಸಂಪ್ರಯೋಗ ಮಂತರೇಣ (ಸಂನಿಕರ್ಷ) ಅಪರೋಕ್ಷತ್ವಾತ್ -ವಿಜ್ಞಾನವದಿತಿ । ತದನುಪಪನ್ನಮ್ ॥

ವಿಜ್ಞಾನವಾದಿಮತಾನುಸಾರದಿಂದ ತೋರತಕ್ಕ ರಜತವು ಜ್ಞಾನಸ್ವರೂಪವಾಗಿರುತ್ತದೆ ಯಾವುದು ಹೇಗೆ ಅನುಭವಿಸಲ್ಪಡುತ್ತದೆಯೋ ಅದರ ಸ್ವರೂಪವನ್ನೇ ಹೇಳಬೇಕು. ಅದಕ್ಕೆ ಅನ್ಯಥಾಸ್ವರೂಪವು ಬಲವತ್ತಾದ ಬಾಧಕದಿಂದ ಬರುತ್ತವೆಯೆಂಬುದು ಇಬ್ಬರಿಗೂ ಸಂಮತವಾದ ವಿಷಯ. ಜಲದಲ್ಲಿ ಅನುಭವಿಸಲ್ಪಡುವ ಉಷ್ಣಸ್ಪರ್ಶವು ಜಲದ್ದಲ್ಲವೆಂಬುದು ತಿಳಿದ ವಿಷಯವೇ. ಅದು ಅಗ್ನಿಸಂಬಂಧವಾದುದು. ಅನ್ವಯವ್ಯತಿರೇಕದಿಂದ ಜಲದಲ್ಲಿ ಶೀತವೂ, ಅಗ್ನಿಯಲ್ಲಿ ಉಷ್ಣತ್ವವೂ ಇದೆಯೆಂಬುದು ಸಿದ್ಧವಾಗಿದೆ. ಎಲ್ಲಿ ಬಾಧಕವಿರುವುದರಿಂದ ಹೀಗಿಲ್ಲವೋ ಅಲ್ಲಿ ಅನುಭವಾನುಸಾರವಾಗಿ ವಸ್ತು ನಿಶ್ಚಯಿಸಲ್ಪಡಬೇಕು. 'ನೇದಂ ರಜತಂ' ಎಂಬಲ್ಲಿ ನಞರ್ಥ-ನಿಷೇಧಕ್ಕೆ ಸಂನಿಹಿತವಾದ ಇದಮರ್ಥದಿಂದ ಸಂಬಂಧ ಹೇಳಬೇಕು. ರಜತದೊಡನೆ ಅದಕ್ಕೆ ಸಂಬಂಧವಿಲ್ಲ. ರಜತವನ್ನು ಉದ್ದೇಶಿಸಿ ಇದಂ ತಾ ನಿಷೇಧಿಸಲ್ಪಡುತ್ತದೆ. ರಜತವಿದ್ದೇ ಇರುತ್ತದೆ. ಆದರೆ ಅದು ಇದಲ್ಲ ಎಂದು ಹೊರಗೆ ತೋರುವುದನ್ನು ನಿಷೇಧಿಸಿರುವುದರಿಂದ ಅರ್ಥಾತ್ ರಜತಕ್ಕೆ ಆಂತರತ್ವಸಿದ್ಧವಾಗುತ್ತದೆಂದು ಶಂಕಿಸುವವನ ಅಭಿಪ್ರಾಯ.

'ನ ಚ'—ಇತಿ. ಇದಂತಾ ನಿಷೇಧ ಮಾಡಿದಾಗ ರಜತಕ್ಕೆ ಅನಿದಂತಾಸ್ಥಿತಿಯು ಸಿದ್ಧಿಸುವುದು ಸ್ವಾಭಾವಿಕ. ಆದರೆ ಈ ಅನಿದಂತಾಸ್ಥಿತಿಯು ಸಂನಿಹಿತವಾದ (ಅಬಹಿರ್ಭೂತ) ಆಂತರಿಕವಸ್ತುವಿಗಿದ್ದಂತೆ ಬಹಿರ್ಭೂತವಾದ ಅಸಂನಿಹಿತವಾದ ವಸ್ತುವಿಗೂ ಸಂಭವಿಸುತ್ತದೆ. ಅಂದರೆ ಮನೆಯ ಮಧ್ಯದಲ್ಲಿರುವ ಪೆಟ್ಟಿಗೆಯ ಒಳಗಿರುವ ಬೆಳ್ಳಿಯಲ್ಲಿಯೂ ಸಂಭವಿಸುವುದರಿಂದ ರಜತವು ಆಂತರಜ್ಞಾನರೂಪವಾಗಿಯೇ ಇರುತ್ತದೆಂಬುದರಲ್ಲಿ ಪ್ರಮಾಣವೇನು ? ಎಂದು ಇದರ ಮೇಲೆ ಶಂಕೆ ಬರುತ್ತದೆ. 'ವ್ಯವಹಿತ'–ಇತಿ. ವ್ಯವಹಿತವೆಂದರೆ ಅಸಂನಿಹಿತವಾಗಿರುವುದು. ಅಪರೋಕ್ಷವೆಂದರೆ ಪ್ರತ್ಯಕ್ಷ. 'ನೇದಂ ರಜತಂ' ಎಂಬಲ್ಲಿ ಇದಂತಾ ನಿಷಿದ್ಧವಾಗುವುದಲ್ಲದೆ ಪ್ರತ್ಯಕ್ಷತ್ವ ನಿಷಿದ್ಧವಾಗುವುದಿಲ್ಲ. ಹೀಗೆ ನಿಷೇಧ ಸಾಮರ್ಥ್ಯದಿಂದ ಬೇರೆ ಕಡೆ ಸತ್ಯವಾಗಿ ಕಲ್ಪಿಸಲ್ಪಡುವ ವಸ್ತುವು ಆಂತರಿಕವಾಗಿಯೇ ಸಿದ್ಧಿಸುವುದರಿಂದ ಅದಕ್ಕೆ ಸುಖಾದಿಗಳಂತೆ ಪ್ರತ್ಯಕ್ಷತ್ವಹಾನಿ ಸಂಭವಿಸುವುದಿಲ್ಲ. ಇದೂ ಅಭಿಮಾನವೇ ಎಂದು ಖಂಡಿಸುತ್ತಾನೆ.

ವಿಕಲ್ಪಾಸಹತ್ವಾತ್ । ಬಾಧಕಾವಬೋಧಃ ಕಿಂ ಸಾಕ್ಷಾತ್ ಜ್ಞಾನಾಕಾರತಾಂ ಬೋಧಯತಿ, ಅರ್ಥಾದ್ವಾ । ನಾದ್ಯಃ । ನೇದಂ ರಜತಮಿತಿ ಪ್ರತ್ಯಯಸ್ಯ ರಜತವಿವೇಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ ಗೋಚರಸ್ಯ ಜ್ಞಾನಾಭೇದಗೋಚರತಾಯಾ ಮನುಭವವಿರೋಧಾತ್ | ನೇದಂ ರಜತಮಿತಿ ರಜತಸ್ಯ ಪುರೋವರ್ತಿತ್ವ ಪ್ರತಿಷೇಧೋ ಜ್ಞಾನಾಕಾರತಾಂ ಕಲ್ಪಯತೀತಿ ಚೇತ್—ತದೇತದ್ವಾರ್ತಮ್ | ಪ್ರಸಕ್ತಪ್ರತಿಷೇಧಾತ್ಮನೋ ಬಾಧಕಾವಬೋಧಸ್ಯ ತತ್ರೈವ ಸತ್ವಾತ್ ಪ್ರತಿಷೇಧೋಪಪತ್ತೇಃ || ವಿಜ್ಞಾನಾಕಾರತ್ವಸಾಧನಮಪ್ಯವಿಜ್ಞಾನಾಕಾರೇ ಬಹಿಷ್ಠೇ ಸಾಕ್ಷಿಪ್ರತ್ಯಕ್ಷೇಭಾವರೂಪಾಜ್ಞಾನೇ ವರ್ತತ ಇತಿ ಸವ್ಯಭಿಚಾರಃ ||

ವಿವಾದಾಸ್ಪದವಾದ ರಜತವು—ವಿಜ್ಞಾನಾಕಾರವಾಗಿದೆ—(ಸಂಪ್ರಯೋಗವೆಂದರೆ ಬಹಿರಿಂದ್ರಿಯಸಂನಿಕರ್ಷ) ಸಂಪ್ರಯೋಗವಿಲ್ಲದೆ ಪ್ರತ್ಯಕ್ಷವಾದುದರಿಂದ— ವಿಜ್ಞಾನದಂತೆ ಎಂದು ಪೂರ್ವಪಕ್ಷಿಯ ಅನುಮಾನಾಕಾರ. 'ನೇದಂ ರಜತಂ' ಎಂಬ ಬಾಧಜ್ಞಾನವು ಸಾಕ್ಷಾತ್ತಾಗಿ ಜ್ಞಾನಾಕಾರತ್ವವನ್ನು ಬೋಧಿಸುವುದೇ ? ಅಥವಾ ಅರ್ಥಾತ್ ಬೋಧಿಸುತ್ತದೆಯೇ ಎಂದು ವಿಕಲ್ಪ. ಸಾಕ್ಷಾತ್ ಎಂದು ಹೇಳಲು ಸಾಧ್ಯವಿಲ್ಲ. ಬಾಧಕ ಜ್ಞಾನವು ರಜತಭೇದಮಾತ್ರವಿಷಯಕವಾಗಿರುವುದಲ್ಲದೆ ರಜತಕ್ಕೆ ಜ್ಞಾನಸ್ವರೂಪತ್ವ ವಿಷಯಕವಾಗುವುದಿಲ್ಲ. ಹೀಗೆಯೇ ಅನುಭವವಿರುತ್ತದೆ. 'ನೇದಂ'—ಇತಿ. 'ನೇದಂ ರಜತಂ' ಎಂಬ ಬಾಧಕ ಜ್ಞಾನವು ರಜತಕ್ಕೆ ಪುರೋವರ್ತಿತ್ವವನ್ನು ನಿಷೇಧಿಸಿ ಜ್ಞಾನಾಕಾರತ್ವವನ್ನು ಕಲ್ಪಿಸುತ್ತದೆ ಎಂದು ಹೇಳುವುದೂ ವಾರ್ತ ಅಂದರೆ (ಫಲ್ಗು) ಸಾರವಿಲ್ಲದಿರುವುದು "ಪ್ರಸಕ್ತ"—ಇತಿ. ಬಾಧಕಜ್ಞಾನವು ಪ್ರಸಕ್ತವಾದುದನ್ನು ನಿಷೇಧಿಸುವುದಲ್ಲದೆ ಅಪ್ರಸಕ್ತವಾದುದನ್ನು ವಿಧಿಸುವುದಿಲ್ಲ. ದೋಷದಿಂದ ಕಲ್ಪಿತವಾಗಿ ತೋರುವ ರಜತವೇ ಇಲ್ಲಿ ಪ್ರಸಕ್ತವಾದುದು. ಪುರೋವರ್ತಿಪ್ರದೇಶದಲ್ಲಿಯೇ ಆ ನಿಷೇಧವೆಂದರೆ ನಿಷೇಧವು ಸಂಗತವಾಗುತ್ತದೆ. ಹೀಗೆ ಈ ನಿಷೇಧದಿಂದ ಅರ್ಥಾತ್ ಆಂತರಿಕರಜತವೂ ಸಿದ್ಧಿಸುವುದಿಲ್ಲ. ಅಸಂನಿಹಿತದ ಪ್ರತ್ಯಕ್ಷತ್ವವೂ ಆಗುವುದಿಲ್ಲ.

'ವಿಜ್ಞಾನಾ'—ಇತಿ. ಬಹಿರಿಂದ್ರಿಯಸಂನಿಕರ್ಷವಿಲ್ಲದೆ ಪ್ರತ್ಯಕ್ಷತ್ವಹೇತುವಿನಿಂದ ರಜತಕ್ಕೆ ವಿಜ್ಞಾನಾಕಾರತ್ವವು ಸಾಧಿಸಲ್ಪಟ್ಟದು ಸಮಂಜಸವಲ್ಲ. ಭಾವರೂಪವಾದ ಅಜ್ಞಾನದಲ್ಲಿ ವ್ಯಭಿಚಾರ ಬರುವುದರಿಂದ ಅಲ್ಲಿ ವ್ಯಾಪ್ತಿಯೇ ಬರುವುದಿಲ್ಲ. ಜಗತ್ತಿಗೆ ಮೂಲಕಾರಣವಾಗಿ ಭಾವರೂಪವಾದ ಅನಾದಿಯಾದ ಅಜ್ಞಾನವನ್ನು ಮುಂದೆ ವಿವರಿಸುತ್ತಾರೆ. ಆದರೆ ಅದು ವಿಜ್ಞಾನಾಕಾರವಲ್ಲ. ಜಗನ್ಮೂಲಕಾರಣವಾಗಿ ಹೊರಗೆ ಇರುತ್ತದೆ. ಬಹಿರಿಂದ್ರಿಯ ಸಂನಿಕರ್ಷವಿಲ್ಲದಿದ್ದರೂ "ಅಹಂ ಅಜ್ಞಃ" ಎಂದು ಅದರ ಪ್ರತ್ಯಕ್ಷವಾಗುತ್ತದೆ. ವಿಜ್ಞಾನಾಕಾರತ್ವ ರೂಪಸಾಧ್ಯವಿಲ್ಲದಿರುವ ಅಜ್ಞಾನದಲ್ಲಿ ಬಹಿರಿಂದ್ರಿಯ ಸಂನಿಕರ್ಷವಿಲ್ಲದೇ ಪ್ರತ್ಯಕ್ಷತ್ವರೂಪ ಹೇತುವು ಅಲ್ಲಿ ಬಂದುದರಿಂದ ವ್ಯಭಿಚಾರ ಬರುತ್ತದೆ.

ನನ್ವನ್ಯಥಾಖ್ಯಾತಿವಾದಿಮತಾನುಸಾರೇಣ ರಜತಸ್ಯ ದೇಶಾಂತರಸತ್ತ್ವೇನ ಭಾವ್ಯಮ್ | ಅನ್ಯಥಾ ತಸ್ಯ ಪ್ರತಿಷೇಧಪ್ರತಿಯೋಗಿತ್ವಾನುಪಪತ್ತೇಃ | ನ ಹಿ ಕಶ್ಚಿತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರೇಕ್ಷಾವಾನ್ ಶಶವಿಷಾಣಂ ಪ್ರತಿಷೇದ್ಧುಂ ಪ್ರಭವತಿ । ತದುಕ್ತಮ್-
ವ್ಯಾವರ್ತ್ಯಾಭಾವವತ್ತ್ವೈವ ಭಾವಿಕೀ ಹಿ ವಿಶೇಷ್ಯತಾ॥
ಅಭಾವವಿರಹಾತ್ಮತ್ವಂ ವಸ್ತುನಃ ಪ್ರತಿಯೋಗಿತಾ ॥ ನ್ಯಾ-ಕು- ೩-೨- ಇತಿ ॥
ತಥಾ ಚ ತಸ್ಯ ದೇಶಾಂತರಸತ್ವಮಾಶ್ರಯಣೀಯಮಿತಿ ಚೇತ್-ತದಪಿ ನ ಪ್ರಮಾಣ ಪದ್ಧತಿಮಧ್ಯಾಸ್ತೇ । ಅಸತಃ ಸಂಸರ್ಗಸ್ಯೈವ ಕಲಧೌತಸ್ಯ ಪ್ರತಿಷೇಧ ಪ್ರತಿಯೋಗಿತ್ವೋಪಪತ್ತೇಃ ॥

'ನೇದಂ ರಜತಂ' ಎಂಬ ನಿಷೇಧದಿಂದ ಆರ್ಥಿಕವಾಗಿ ಆಂತರಿಕವಿಜ್ಞಾನಾಕಾರವಾದ ರಜತ ಸಿದ್ಧಿಯಾಗುವುದು ಬೇಡ. ದೂರದಲ್ಲಿರುವ ಅಂದರೆ ಮನೆಯಲ್ಲಿರುವ ರಜತ ಸಿದ್ಧಿಯು ಈ ನಿಷೇಧದಿಂದ ಉಂಟಾಗಲೆಂದು ಶಂಕಿಸುತ್ತಾನೆ. 'ನನು—' ಇತಿ. ಅನ್ಯಥಾಖ್ಯಾತಿಯನ್ನು ಹೇಳುವವರು ನೈಯಾಯಿಕರು. ಒಂದಕ್ಕೆ ಇನ್ನೊಂದು ರೂಪದಿಂದ ತೋರುವುದೇ ಅನ್ಯಥಾಖ್ಯಾತಿ. ಅನ್ಯರೂಪದಿಂದ ತೋರಬೇಕಾದರೂ ಅದು ಒಂದು ಕಡೆ ವಾಸ್ತವವಾಗಿ ಇರಬೇಕು. ಅತ್ಯಂತಾಸತ್ತ್ವವಾಗಿದ್ದರೆ ಅದಕ್ಕೆ ಪ್ರತೀತಿ ವಿಷಯತ್ವ ಕೂಡುವುದಿಲ್ಲ. ಆಗ ಅಸಂನಿಹಿತವಾದ ರಜತವೇ ಬೇರೆ ಕಡೆ ಇದೆಯೆಂದು ಸಿದ್ಧವಾಗುತ್ತದೆ. ಮೊಲದ ಕೊಂಬನ್ನು ಯಾರೂ ಇಲ್ಲವೆಂದು ನಿಷೇಧಮಾಡುವುದಿಲ್ಲ. 'ವ್ಯಾವರ್ತ್ಯ—' ಇತಿ. ಪ್ರತಿಯೋಗಿಗೆ ವ್ಯಾವರ್ತ್ಯ ಎಂದು ಹೆಸರು. ಭಾವಿಕೀ— ಪಾರಮಾರ್ಥಿಕೀ. ವಿರಹಃ— ಅಭಾವಃ. ಇಲ್ಲಿ ವಸ್ತುವೆಂದರೆ ಪಾರಮಾರ್ಥಿಕವಾದ ಪದಾರ್ಥ. ಅತ್ಯಾಂತಾಸತ್ತ್ವಾದ ಶಶಶೃಂಗಾದಿಗಳಿಗೂ, ಆಭಾಸವಾಗಿತೋರುವ ಶುಕ್ತಿ ರಜತಾದಿಗಳಿಗೂ ತುಚ್ಛತ್ವವಲ್ಲದೆ ನಿಜವಾದ ವಸ್ತುತ್ವವಿಲ್ಲ. ತುಚ್ಛವಸ್ತುವಿಗೆ ವಿಶೇಷ್ಯತ್ವವಾಗಲೀ, ಪ್ರತಿಯೋಗಿತ್ವವಾಗಲೀ ಇಲ್ಲವೆಂದು ಈ ಶ್ಲೋಕದಿಂದ ಉದಯನಾಚಾರ್ಯರು ಪ್ರತಿಪಾದಿಸಿರುತ್ತಾರೆ. ಸಂಬಂಧಕ್ಕೆ ಪ್ರತಿಯೋಗಿ, ಅನುಯೋಗಿಗಳೆಂದು ಎರಡು ಸಂಬಂಧಿ ಪದಾರ್ಥಗಳಿರುತ್ತವೆ.

ಇವುಗಳಿಗೆ ಕ್ರಮವಾಗಿ ವಿಶೇಷಣ, ವಿಶೇಷ್ಯಗಳೆಂದು ಕರೆಯುತ್ತಾರೆ, 'ಘಟವದ್ಭೂತಲಂ' ಎಂಬಲ್ಲಿ ಘಟ ವಿಶೇಷಣ. ಭೂತಲ ವಿಶೇಷ್ಯ. ಘಟವತ್‌ಪದದಿಂದ ಭೂತಲದಲ್ಲಿ ಘಟಾಭಾವವು ವ್ಯಾವೃತ್ತಿಗೊಳಿಸಲ್ಪಡುತ್ತದೆ. (ಘಟಾಭಾವವು ಇಲ್ಲವೆಂದು ತಿಳಿಸುತ್ತದೆ.) ವ್ಯಾವರ್ತ್ಯಕ್ಕೆ ವಿರೋಧಿಯಾದುದು ವ್ಯಾವರ್ತಕ. ಘಟಾಭಾವಾಭಾವವು ಘಟಾಭಾವಕ್ಕೆ ವ್ಯಾವರ್ತಕವಾಗುತ್ತದೆ. ಘಟಾಭಾವಾಭಾವವೆಂದರೆ ಘಟವೇ ಆಗುವುದರಿಂದ ಘಟಕ್ಕೆ ಘಟಾಭಾವಾಭಾವಸ್ವರೂಪಸತ್ತ್ವವು ಸಿದ್ಧವಾಗುತ್ತದೆ. ವ್ಯಾವರ್ತ್ಯವಾದುದು ಘಟಾಭಾವ. ಅದರ ಅಭಾವ ಅಂದರೆ ಘಟಾಭಾವಾಭಾವ. ಭೂತಲದಲ್ಲಿ ತದ್ವತ್ತ್ವವು (ಅಂದರೆ ಘಟವತ್ತ್ವ) ಪಾರಮಾರ್ಥಿಕವಾದುದರಿಂದ (ಭಾವಿಕೀ) ಅದೇ ಅಲ್ಲಿ ವಿಶೇಷ್ಯತಾ ಎಂದು ತಿಳಿಯಬೇಕು. ಘಟಾಭಾವದ ವಿರಹವೆಂದರೆ ಅಭಾವ. ತತ್ಸ್ವರೂಪತ್ವವು ಪಾರಮಾರ್ಥಿಕವಸ್ತುವಿಗಿರುವುದರಿಂದ ಅದೇ ಅಲ್ಲಿ ಪ್ರತಿಯೋಗಿತಾ ಆಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ. 'ನೇದಂ ರಜತಂ' ಎಂಬಲ್ಲಿ ಪ್ರತಿಷೇಧಪ್ರತಿಯೋಗಿತ್ವವು ಪಾರಮಾರ್ಥಿಕವಾದ ರಜತಕ್ಕೇ ಹೇಳಬೇಕು. ಅಭಾಸಪ್ರತಿಪನ್ನವಾದುದಕ್ಕೆ ಅಂದರೆ ಪ್ರತಿಭಾಸವಾಗುವ ರಜತಕ್ಕೆಂದು ಹೇಳಬಾರದು. ಆದುದರಿಂದ ಆ ರಜತನಕ್ಕೆ ದೇಶಾಂತರಸತ್ವವನ್ನಂಗೀಕರಿಸಬೇಕು ಎಂದು ತಾರ್ಕಿಕಸಿದ್ಧಾಂತ. ಇದೂ ಸಮಂಜಸವಾಗುವುದಿಲ್ಲ. 'ಅಸತಃ'—ಇತಿ. ಅಸತ್ಸಂಸರ್ಗನಿಷೇಧದಂತೆ ಕಲ್ಪನಾಜೀವಿತರಜತಕ್ಕೆ ನಿಷೇಧಹೇಳಲು ಯಾವ ತೊಂದರೆಯೂ ಇಲ್ಲ. "ರೂಪಂ ನ ರಸಸಂಯುಕ್ತಂ" ಎಂಬಲ್ಲಿ ರಸರೂಪಗಳಿಗೆ ಸಾಮಾನಾಧಿಕರಣ್ಯಬಲದಿಂದ ಕಲ್ಪಿತವಾದ ಸಂಯೋಗಕ್ಕೆ ನಿಷೇಧ ಹೇಳುತ್ತಾರೆ. ಏಕೆಂದರೆ ರೂಪಸಂಯೋಗವು ಬೇರೆ ಕಡೆ ಎಲ್ಲಿಯೂ ದೃಷ್ಟವಾಗಿಲ್ಲ. ಹಾಗೆ ಇಲ್ಲಿ ಕಲ್ಪಿತರಜತಕ್ಕೆ ನಿಷೇಧನೆಂದರೆ ಎಲ್ಲಿಯೂ ಬಾಧ ಬರುವುದಿಲ್ಲ.

ನನ್ವಿದಂ ರಜತಮಿತಿ ಜ್ಞಾನಮೇಕಮನೇಕಂ ವಾ ? । ನ ತಾವದಾದ್ಯಃ । ಅಪಸಿದ್ಧಾಂತಾಪತ್ತೇರಸಂಭವಾಚ್ಚ । ತಥಾ ಹಿ । ಶುಕ್ತೀದಮಂಶೇಂದ್ರಿಯ ಸಂಪ್ರಯೋಗಾದಿದಮಾಕಾರಾಂತಃಕರಣಪರಿಣಾಮ ರೂಪಮೇಕಂ ಜ್ಞಾನಂ ಜಾಯತೇ । ನ ಚ ತತ್ರ ಕಲಧೌತಂ ವಿಷಯಭಾವಮಾಕಲ್ಪಯಿತು ಮುತ್ಸಹತೇ । ಅಸಂಪ್ರಯುಕ್ತತ್ವಾತ್ತಸ್ಯ । ವಿಷಯತ್ವಾಂಗೀಕಾರೇ ಸರ್ವಜ್ಞತ್ವಾಪತ್ತೇಃ । ನ ಚ ಚಕ್ಷುರನ್ವಯವ್ಯತಿರೇಕಾನುವಿಧಾಯಿತಯಾ ತಜ್ಜ್ಞಾನಸ್ಯ ತಜ್ಜನ್ಯತ್ವಂ ವಾಚ್ಯಮ್ । ಇದಮಂಶಜ್ಞಾನೋತ್ಪತ್ತೌ ತದುಪಕ್ಷಯೋಪಪತ್ತೇಃ । ನ ಚಾಪಿ ಸಂಸ್ಕಾರಾದ್ರಜತಜ್ಞಾನಸ್ಯ ಜನ್ಮ । ಸ್ಮೃತಿತ್ವಾಪತ್ತೇಃ । ಅಥೇಂದ್ರಿಯದೋಷಸ್ಯ ತತ್ಕಾರಣತ್ವಮ್ । ತದಪ್ಯಯುಕ್ತಮ್ । ಸ್ವಾತಂತ್ರ್ಯೇಣ ತಸ್ಯ ಜ್ಞಾನಹೇತುತ್ವಾನುಪಪತ್ತೇಃ । ನ ಹಿ ಗ್ರಹಣಸ್ಮರಣಾಭ್ಯಾಮನ್ಯಃ ಪ್ರಕಾರಃ ಸಮಸ್ತಿ । ತಸ್ಮಾದಿದಮಂಶರಜತತಾದಾತ್ಮ್ಯವಿಷಯಮೇಕಂ ವಿಜ್ಞಾನಂ ನ ಘಟತೇ ।

'ಇದಂ ರಜತಂ' ಎಂಬಲ್ಲಿ ಜ್ಞಾನವು ಒಂದೇ ಅಥವಾ ಅನೇಕವೇ ? ಒಂದು ಎಂದರೆ ಅಪಸಿದ್ಧಾಂತವಾಗುವುದಲ್ಲದೆ ಅಸಂಭವ ದೋಷವೂ ಪ್ರಾಪ್ತವಾಗುತ್ತದೆ. ಒಂದು ಎಂದು ಹೇಳಲು ಸಾಧ್ಯವಿಲ್ಲ. 'ಶುಕ್ತೀದ'—ಇತಿ. ವಸ್ತುತಃ ಶುಕ್ತಿರೂಪವಾದ ಯಾವ ಇದಮಂಶವಿದೆಯೋ ಅದಕ್ಕೆ ಇಂದ್ರಿಯಸಂನಿಕರ್ಷವಾಗುವುದರಿಂದ, ಇಂದ್ರಿಯದ ಮೂಲಕ (ತೈಜಸವಾದುದರಿಂದ) ಹೊರಗೆ ಬಂದ ಅಂತಃಕರಣದ ಇದಮಾಕಾರವಾದ ಪರಿಣಾಮವುಂಟಾಗುತ್ತದೆ. ಈ ಪರಿಣಾಮವೇ ವೃತ್ತಿ, ಜ್ಞಾನಪದಗಳಿಂದ ವ್ಯವಹರಿಸಲ್ಪಡುತ್ತದೆ. ಈ ಜ್ಞಾನದಲ್ಲಿ ರಜತವು ವಿಷಯವಾಗುವುದಿಲ್ಲ. ವಾಸ್ತವವಾಗಿ ಅಲ್ಲಿ ರಜತವಿಲ್ಲದಿರುವುದರಿಂದ ಅದಕ್ಕೆ ಇಂದ್ರಿಯ ಸಂನಿಕರ್ಷವುಂಟಾಗುವುದಿಲ್ಲ. ಅಸಂನಿಕೃಷ್ಟವಾದರೂ ಜ್ಞಾನವಿಷಯವಾಗುತ್ತದೆಯೆಂದರೆ ಆಗ ಸರ್ವಜ್ಞತ್ವಪ್ರಸಕ್ತಿ ಬರುತ್ತದೆ. 'ನಚ'—ಇತಿ. ಚಕ್ಷುಃ ಸಂನಿಕರ್ಷವಾಗದೆ ಮೊದಲು 'ಇದಂ ರಜತಂ' ಎಂಬ ಜ್ಞಾನವುಂಟಾಗುವುದಿಲ್ಲ. ಸಂನಿಕರ್ಷವಾದಮೇಲೆ ಆ ಜ್ಞಾನ ಬರುತ್ತದೆ. ಹೀಗೆ ಅನ್ವಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯತಿರೇಕಗಳಿಂದ ರಜತಜ್ಞಾನವು ಚಕ್ಷುರಿಂದ್ರಿಯಜನ್ಯವಾಗುತ್ತದೆಂದು ಹೇಳುವುದೂ ಸರಿಯಲ್ಲ. ಇದಮಂಶಜ್ಞಾನೋತ್ಪತ್ತಿಯಿಂದ ಚಕ್ಷುರಿಂದ್ರಿಯೋಪಯೋಗ ಗತಾರ್ಥವಾಗುತ್ತದೆ ಇದಮಂಶವಿಷಯೀಭಾವದಲ್ಲಿಯೇ ಚಕ್ಷುರಿಂದ್ರಿಯೋಪಯೋಪಯೋಗ ದೃಷ್ಟವಾದುದರಿಂದ ರಜತಜ್ಞಾನಜನಕವಾಗುವುದಿಲ್ಲವೆಂದು ತಾತ್ಪರ್ಯ. ಇಂದ್ರಿಯದೋಷವು ರಜತಜ್ಞಾನಕ್ಕೆ ಕರಣವಾಗಲಿ ಎನ್ನುವುದೂ ಸಮಂಜಸವಾಗುವುದಿಲ್ಲ. ಸ್ವಾತಂತ್ರ್ಯದಿಂದ ಅದಕ್ಕೆ ಜ್ಞಾನಹೇತುತ್ವ ಕೊಡುವುದಿಲ್ಲ. ಇಂದ್ರಿಯದೋಷವು ಇಂದ್ರಿಯದಮೂಲಕವೇ ಯಾವುದಾದರೂ ಕಾರ್ಯಕ್ಕೆ ಹೇತುವಾಗುವುದಲ್ಲದೆ ಸ್ವತಂತ್ರವಾಗಿ ಕಾರಣವಾಗುವುದಿಲ್ಲ.

'ನಹಿ'—ಇತಿ. ಗ್ರಹಣಾತ್ಮಕಜ್ಞಾನವೆಂದರೆ ಇಂದ್ರಿಯಜನ್ಯವಾದ ಜ್ಞಾನ. ಸಂಸ್ಕಾರಜನ್ಯವಾದುದು ಸ್ಮರಣಾತ್ಮಕವಾದ ಜ್ಞಾನ. ಈ ಎರಡು ಜ್ಞಾನಗಳಿಗಿಂತ ವಿಲಕ್ಷಣವಾಗಿ ದೋಷಜನ್ಯಜ್ಞಾನ ಬೇರೊಂದಿಲ್ಲ. ಆದುದರಿಂದ ಇದಮಂಶವಿಷಯಕ ಪ್ರತ್ಯಕ್ಷದಲ್ಲಿ ಯಾಪರೀತಿಯಿಂದಲೂ ರಜತಕ್ಕೆವಿಷಯತ್ವರೂಪದಿಂದ ಪ್ರವೇಶವಿಲ್ಲದಿರುವುದರಿಂದ ಅದು ಒಂದು ಜ್ಞಾನವೆಂದು ಹೇಳಲು ಸಾಧ್ಯವಿಲ್ಲ.

ನಾಪ್ಯನೇಕಮಖ್ಯಾತಿಮತಾಪತ್ತೇರಿತಿ ಚೇತ್—ಉಚ್ಯತೇ। ಪ್ರಥಮಂದೋಷಕಲುಷಿತೇನ ಚಕ್ಷುಷಾ ಇದಂತಾಮಾತ್ರವಿಷಯಾಂತಃಕರಣವೃತ್ತಿರುತ್ಪದ್ಯತೇ । ಅನಂತರಂ ತಯಾ ವೃತ್ತ್ಯಾ ಚೈತನ್ಯಾವರಣಾಭಿಭವೇ ಸತಿ ತಚ್ಚೈತನ್ಯಮಭಿವ್ಯಜ್ಯತೇ । ಪಶ್ಚಾದಿದಮಂಶ ಚೈತನ್ಯನಿಷ್ಠಾ ಅವಿದ್ಯಾ ರಾಗಾದಿದೋಷಕಲುಷಿತಾ ಕಲಧೌತಾಕಾರೇಣ ಪರಿಣಮತೇ । ಇದಮಾಕಾರಾಂತಃಕರಣಪರಿಣಾಮಾವಚ್ಛಿನ್ನಚೈತನ್ಯನಿಷ್ಠಾ ಕಲಧೌತಗೋಚರಪರಿಣಾಮಸಂಸ್ಕಾರಸಚಿವಾ ಕಲಧೌತಜ್ಞಾನಾಭಾಸಾಕಾರೇಣ ಪರಿಣಮತೇ ತೌ ಚ ರಜತವೃತ್ತಿಪರಿಣಾಮೌ ಸ್ವಾಧಿಷ್ಠಾನೇನ ಸಾಕ್ಷಿಚೈತನ್ಯೇನಾವ್ಯವಧಾನೇನ ಭಾಸ್ಯೇತೇ । ತಥಾ ಚ ಸವೃತ್ತಿಕಾಯಾ ಅವಿದ್ಯಾಯಾಃ ಸಾಕ್ಷಿಭಾಸ್ಯತ್ವಾಭ್ಯುಪಗಮೇ ವೃತ್ತ್ಯಂತರವೇದ್ಯತ್ವಾಭಾವಾನ್ನಾನವಸ್ಥಾ । ಯದ್ಯಪ್ಯಂತಃಕರಣವೃತ್ತಿರವಿದ್ಯಾವೃತ್ತಿಶ್ಚೇತಿ ದ್ವೇ ಇಮೇ ಜ್ಞಾನೇ ತಥಾಪಿ ವಿಷಯಾಧೀನಂ ಫಲಮ್ । ಜ್ಞಾತೋ ಘಟ ಇತಿ ವಿಷಯಾವಚ್ಛಿನ್ನತಯಾ ಫಲಪ್ರತೀತೇಃ, ತದ್ವಿಷಯಶ್ಚ ಸತ್ಯಮಿಥ್ಯಾಭೂತಯೋರಿದಮಂಶರಜತಾಂಶಯೋರನ್ಯೋನ್ಯಾತ್ಮಕಯೈಕತ್ವಮಾಪನ್ನಃ । ತಸ್ಮಾತ್ ವಿಷಯಾವಚ್ಛಿನ್ನಫಲಸ್ಯಾಪ್ಯೇಕತ್ವಾತ್ ಜ್ಞಾನೈಕ್ಯಮುಪಚರ್ಯತೇ ॥

ಅನೇಕಜ್ಞಾನವೆಂದರೆ ಅಖ್ಯಾತಿ ಮತವನ್ನಂಗೀಕರಿಸಿದಂತಾಗುತ್ತದೆ (ಮೀಮಾಂಸಕಮತ) 'ಪ್ರಥಮಂ'—ಇತಿ. ದೋಷದಿಂದ ಮುಂದಿರುವವಸ್ತುವನ್ನು ಶುಕ್ತಿಯೆಂದು ಗ್ರಹಿಸದಿರುವುದರಿಂದ ಕೇವಲ ಇದಮಾಕಾರವಾದ ಅಂತಃಕರಣವೃತ್ತಿಯುಂಟಾಗುತ್ತದೆ. ಈ ವೃತ್ತಿಯು ಇದಂತ್ವಾವಚ್ಛಿನ್ನಚೈತನ್ಯಾಭಿವ್ಯಕ್ತಿಗೆ ಪ್ರತಿಬಂಧಕವಾದ ಚೈತನ್ಯಾವರಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನುದೂರವಮಾಡುತ್ತದೆ. ಆಗ ಇದಂತಾಗ್ರಾಹಕವೃತ್ತಿಯಲ್ಲಿ ಚೈತನ್ಯವು ಪ್ರತಿಬಿಂಬಿತ ವಾಗಿ ತತ್ತದ್ರೂಪದಿಂದ ಅಭಿವ್ಯಕ್ತವಾಗುತ್ತದೆ. ಆದರೆ ಶುಕ್ತ್ಯಂಶದಿಂದ ಚೈತನ್ಯಕ್ಕೆ ಅಭಿವ್ಯಕ್ತಿ ಇರುವುದಿಲ್ಲ. ಏಕೆಂದರೆ ದೋಷದಿಂದ ಅಲ್ಲಿ ಅದು ಚೈತನ್ಯಾವರಣ ಭಂಗವಾಗಿರುವುದಿಲ್ಲ.

ಇದಮಂಶಾವಚ್ಛಿನ್ನಚೈತನ್ಯವು ಶುಕ್ತಿರೂಪದಿಂದ ತೋರದಿರುವುದೂ, ಅದ ರಿಂದಲೇ ತದಾಕಾರವೃತ್ತಿರೂಪದಿಂದ ತೋರದಿರುವುದೂ ಅವಿದ್ಯೆಯಾಗಿರುತ್ತದೆ. ಈ ಅವಿದ್ಯೆಗೆ ಕ್ರಮವಾಗಿ ಇದುಮಂಶಾವಚ್ಛಿನ್ನವೂ ಇದುಮಾಕಾರವೃತ್ತ್ಯವಚ್ಛಿನ್ನ ಚೈತನ್ಯವೂ ಆಶ್ರಯವಾಗಿರುತ್ತದೆ. ಎರಡು ರೀತಿಯಾದ ಈ ಅವಿದ್ಯೆಯು ದೋಷದಿಂದ ಕ್ಷೋಭೆ ಹೊಂದುತ್ತದೆ. ಅಲ್ಲಿ ಇದಮಂಶಾವಚ್ಛಿನ್ನ ಚೈತನ್ಯದಲ್ಲಿರುವ ಅವಿದ್ಯೆಯು ಕ್ಷೋಭೆ ಹೊಂದಿ ಚಾಕಚಿಕ್ಯಾದಿಸಾದೃಶ್ಯಸಂದರ್ಶನದಿಂದ ಉದ್ಬೋಧಗೊಳಿಸಲ್ಪಟ್ಟ ರಜತ ಸಂಸ್ಕಾರದ ಸಹಾಯದಿಂದ ರಜತಾಕಾರವಾಗಿ ಪರಿಣಾಮ ಹೊಂದುತ್ತದೆ. ವೃತ್ತ್ಯ ವಚ್ಛಿನ್ನಚೈತನ್ಯದಲ್ಲಿರುವ ಅವಿದ್ಯೆಯು ರಜತಗ್ರಾಹಿಸಂಸ್ಕಾರಸಹಕೃತವಾಗಿ ವೃತ್ತಿರೂಪ ದಿಂದ ಪರಿಣಾಮ ಹೊಂದುತ್ತದೆ. ಈ ಎರಡು ಪರಿಣಾಮಗಳೂ ತಮಗೆ ಅಧಿಷ್ಠಾನವಾದ ಸಾಕ್ಷಿ ಚೈತನ್ಯದಿಂದ ಪ್ರಕಾಶಗೊಳಿಸಲ್ಪಡುತ್ತವೆ. ಇವುಗಳಿಗೆ ಕ್ರಮವಾಗಿ ಅರ್ಥಾ ಧ್ಯಾಸ, ಜ್ಞಾನಾಧ್ಯಾಸವೆಂದು ಕರೆಯುತ್ತಾರೆ. ಇಲ್ಲಿ ವಿಷಯಾಕಾರವಾದ ಅಂತಃಕರಣ ವೃತ್ತಿಯಿಂದ ಹೇಗೆ ವಿಷಯಾವಭಾಸವಾಗುವುದೋ ಹಾಗೇ ತದ್ವೃತ್ತಿಯ ಅವಭಾಸವೂ ತದ್ವೃತ್ತ್ಯಾಕಾರವಾದ ಇನ್ನೊಂದು ಅಂತಃಕರಣವೃತ್ತಿಯಿಂದ ಆಗುವುದೆಂದು ಅನವಸ್ಥಾ ದೋಷವನ್ನು ಶಂಕಿಸಬಾರದು. ವೃತ್ತಿಯು ವೃತ್ತ್ಯಂತರ ವಿಷಯವಾಗದಿದ್ದರೂ ಸ್ವವಿಷ ಯತ್ವವನ್ನಂಗೀಕರಿಸುವುದರಿಂದ ಈ ದೋಷಕ್ಕೆ ಅವಕಾಶವಿರುವುದಿಲ್ಲ. ಹೀಗೆ ಇಲ್ಲಿ ವೃತ್ತಿಸಹಿತವಾದ ಅವಿದ್ಯೆಯು ಸಾಕ್ಷಿಭಾಸ್ಯವಾಗುತ್ತದೆ. ಅವಿದ್ಯಾಸಾಕ್ಷಿಭ್ಯಾಸವೆಂದು ಸಿದ್ಧವಾದ ವಿಷಯ. ಇಲ್ಲಿ ಇದಮಾಕಾರವೃತ್ತಿಯು ಅಂತಃಕರಣದ್ದೂ, ರಜತಾಕಾರ ವೃತ್ತಿಯು ಅವಿದ್ಯೆಯದ್ದೂ ಆಗಿರುತ್ತದೆ. ವೃತ್ತಿಯೇ ಜ್ಞಾನವೆಂದುದರಿಂದ ವಸ್ತುತಃ ಜ್ಞಾನದ್ವಯವಿರುತ್ತದೆ. 'ಇದಂ ರಜತಂ' ಎಂಬುದು ಒಂದೇ ಜ್ಞಾನವೆಂಬ ವ್ಯವಹಾರವು ಫಲೈಕ್ಯದಿಂದ ಉಪಚರಿತವಾಗುತ್ತದೆ. ವೃತ್ತಿರೂಪವಾದುದು ಜ್ಞಾನ. ವಿಷಯಾವ ಭಾಸವೇ ಅದರ ಫಲ. ವಿಷಯವಿದ್ದಂತೆ ಅದು ಉಂಟಾಗುವುದರಿಂದ ವಿಷಯಾಧೀನ ವಾಗಿರುತ್ತದೆ. ಪ್ರಕೃತ ವಿಷಯವು ಸತ್ಯಾನೃತಗಳಾದ ಇದಂರಜತಗಳಿಗೆ ಅನ್ಯೋ ನ್ಯಾತ್ಮಕಕಲ್ಪನೆಯಿಂದ ಏಕತ್ವವು ಕಲ್ಪಿತವಾಗಿ ತದವಭಾಸರೂಪಫಲವೂ ಒಂದೇ ಎಂದು ಸಿದ್ಧವಾಗುತ್ತದೆ. ವಿಷಯಾವಚ್ಛಿನ್ನಫಲವು ಒಂದಾದುದರಿಂದ ಜ್ಞಾನವೂ ಒಂದೇ ಎಂದು ಉಪಚರಿತವಾಗಿದೆ.

ತದುಕ್ತಮ್—

ಶುಕ್ತೀದಮಂಶಚೈತನ್ಯಸ್ಥಿತಾವಿದ್ಯಾ ವಿಜೃಂಭತೇ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಗಾದಿದೋಷಸಂಸ್ಕಾರ ಸಚಿವಾ ರಜತಾತ್ಮತಾ ||
ಇದಮಾಕಾರವೃತ್ತ್ಯಕ್ತ ಚೈತನ್ಯಸ್ಥಾ ತಥಾವಿಧಾ |
ವಿವರ್ತತೇ ತದ್ರಜತ ಜ್ಞಾನಾಭಾಸಾತ್ಮನಾಪ್ಯಸೌ ||
ಸತ್ಯಮಿಥ್ಯಾತ್ಮನೋರೈಕ್ಯಾದೇಕಸ್ತದ್ವಿಷಯೋ ಮತಃ |
ತದಾಯುಕ್ತಫಲೈಕತ್ವಾತ್ ಜ್ಞಾನೈಕ್ಯಮುಪಚರ್ಯತೇ || ಇತಿ ||

ಪಂಚಪಾದಿಕಾಯಾಮಪಿ ಫಲೈಕ್ಯಾತ್ ಜ್ಞಾನೈಕ್ಯಮುಪಚರ್ಯತ ಇತ್ಯಭಿಪ್ರಾಯೇಣ ಸಾ ಚೈಕಮೇವ ಜ್ಞಾನಮೇಕಫಲಂ ಜನಯತಿ (ಪ-ಪಾ-ಪೃ-ಪ ೧೫) ಇತ್ಯುಕ್ತಮ್ ||

ಹಿಂದೆ ಹೇಳಿದ ವಿಷಯವೇ ಪಂಚಪಾದಿಕಾ ಮುಂತಾದ ಗ್ರಂಥಗಳಲ್ಲಿ ಹೇಳಿದುದನ್ನು ತೋರಿಸುತ್ತಾನೆ. ಶ್ರೀಶಂಕರಾಚಾರ್ಯರ ಬ್ರಹ್ಮಸೂತ್ರಭಾಷ್ಯದ ವ್ಯಾಖ್ಯಾನವನ್ನು ಶ್ರೀಪದ್ಮಪಾದಾಚಾರ್ಯರು ಚತುಃಸೂತ್ರೀಪರ್ಯಂತ ಮಾಡಿರುತ್ತಾರೆ. ಇದು ಪಂಚಪಾದಿಕಾ ಹೆಸರಿನಿಂದ ಪ್ರಸಿದ್ಧವಾಗಿದೆ. ಇದಕ್ಕೆ ವ್ಯಾಖ್ಯಾನವಾಗಿ ಶ್ರೀಪ್ರಕಾಶಾತ್ಮಯತಿಗಳು ವಿವರಣವೆಂಬ ಗ್ರಂಥ ಬರೆದಿರುತ್ತಾರೆ. ಅದರಲ್ಲಿ ಇದು ಸ್ಪಷ್ಟವಾಗಿ ವಿಸ್ತೃತವಾಗಿದೆ. ಅವಿದ್ಯಾ ವಿಜೃಂಭಣವೆಂದರೆ ಹಿಂದೆ ಹೇಳಿದಂತೆ ಪರಿಣಾಮವೆಂದರ್ಥ. ಇದಮಾಕಾರವೃತ್ತ್ಯಕ್ತಚೈತನ್ಯವೆಂದರೆ ಇದಮಾಕಾರವೃತ್ತ್ಯವಚ್ಛಿನ್ನಚೈತನ್ಯದಲ್ಲಿರುವುದು ಎಂದರ್ಥ.

ನನು ಶುಕ್ತಿಕಾಮಸ್ತಕೇ ಭಾಸ್ಯಮಾನಸ್ಯ ಕಲಧೌತಸ್ಯ ತತ್ರೈವಸತ್ಯತ್ವಾಭ್ಯುಪಗಮೇ ನೇದಂ ರಜತಮಿತಿ ನಿಷೇಧಃ ಕಥಂ ಪ್ರಭವೇದಿತಿ ಚೇನ್ನ | ಪ್ರಾತಿಭಾಸಿಕಸತ್ಯತ್ವೇಽಪಿ ವ್ಯಾವಹಾರಿಕಸತ್ಯತ್ವಾಭಾವೇನ ಪ್ರತಿಷನ್ನೋಪಾಧೌ ಪ್ರತಿಯೋಗಿತ್ವಸಂಭವಾತ್ | ತದುಕ್ತಂ ಪಂಚಪಾದಿಕಾವಿವರಣೇ (ಪ್ರ-೪೧-ಪ-೧) ತ್ರಿವಿಧಂ ಸತ್ವಂ | ಪರಮಾರ್ಥಸತ್ವಂ ಬ್ರಹ್ಮಣಃ ಅರ್ಥಕ್ರಿಯಾ ಸಾಮರ್ಥ್ಯಂ ಸತ್ವಂ ಮಾಯೋಪಾಧಿಕಮಾಕಾಶಾದೇಃ | ಅವಿದ್ಯೋಪಾಧಿಕಂ ಸತ್ವಂ ರಜತಾದೇರಿತಿ | ಅನ್ಯತ್ರಾಪ್ಯುಕ್ತಮ್—

ಕಾಲತ್ರಯೇ ಜ್ಞಾತೃಕಾಲೇ ಪ್ರತೀತಿ ಸಮಯೇ ತಥಾ |
ಬಾಧಾಭಾವಾತ್ ಪದಾರ್ಥಾನಾಂ ಸತ್ತ್ವತ್ರೈವಿಧ್ಯಮಿಷ್ಯತೇ |
ತಾತ್ತ್ವಿಕಂ ಬ್ರಹ್ಮಣಃ ಸತ್ತ್ವಂ ವ್ಯೋಮಾದೇರ್ವ್ಯಾವಹಾರಿಕಮ್ |
ರೂಪ್ಯಾದೇರರ್ಥಜಾತಸ್ಯ ಪ್ರಾತಿಭಾಸಿಕಮಿಷ್ಯತೇ ||ಇತಿ||
ಲೌಕಿಕೇನ ಪ್ರಮಾಣೇನ ಯದ್ಬಾಧ್ಯಂ ಲೌಕಿಕೇವಧೌ |
ತತ್ಪ್ರಾತಿಭಾಸಿಕಂ ಸತ್ವಂ ಬಾಧ್ಯಂ ಸತ್ಯೇವ ಮಾತರಿ ||
ವೈದಿಕೇನ ಪ್ರಮಾಣೇನ ಯದ್ಬಾಧ್ಯಂ ವೈದಿಕೇವಧೌ|
ತದ್ವ್ಯಾವಹಾರಿಕಂ ಸತ್ವಂ ಬಾಧ್ಯಂ ಮಾತ್ರಾ ಸಹೈವತತ್ ||ಇತಿ ಚ||

ತತಃ ಖ್ಯಾತಿಬಾಧಾನ್ಯಥಾನುಪಪತ್ತ್ಯಾ ಭ್ರಾಂತಿಗೋಚರಸ್ಯಾ ಮಾಯಾಮಯಸ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜತಾದೇಃ ಸದಸದ್ವಿಲಕ್ಷಣತ್ವಲಕ್ಷಣಮನಿರ್ವಚನೀಯತ್ವಂ ಸಿದ್ಧಮ್ । ತಮ
ವೋಚಚ್ಚಿತ್ಸುಖಾಚಾರ್ಯಃ —
ಪ್ರತ್ಯೇಕಂ ಸದಸತ್ತ್ವಾಭ್ಯಾಂ ವಿಚಾರಪದವೀಂ ನಯತ್ ।
ಗಾಹತೇ ತದನಿರ್ವಾಚ್ಯಮಾಹುರ್ವೇದಾಂತವಾದಿನಃ ॥ (ಚಿತ್ಸು-ಪೃ ೭೧) ಇತಿ

'ಸತ್ಯತ್ವ'— ಇತಿ. ಶುಕ್ತಿಕಾಸ್ಥಳದಲ್ಲಿಯೇ ಅವಿದ್ಯಾಪರಿಣಾಮವಾದ ರಜತವನ್ನು ವನ್ನು ಅಂಗೀಕರಿಸಿರುವುದರಿಂದ ರಜತಸತ್ಯವಾದುದರಿಂದ ಅದಕ್ಕೆ ನಿಷೇಧ ಹೇಗೆ? ಎಂದು ಪೂರ್ವಪಕ್ಷ 'ಪ್ರತಿಪನ್ನ' ಇತಿ. ಉಪಾಧಿಯಿಂದ ಕೂಡಿರುವಾಗ ಎಂದರ್ಥ. ಶುಕ್ತಿಕಾದೇಶದಲ್ಲಿಯೇ 'ನೇದಂ ರಜತಂ' ಎಂದು ನಿಷೇಧ ತೋರುತ್ತದೆ. ಅಲ್ಲಿ ನಿಷೇಧಪ್ರತಿಯೋಗಿತ್ವವು ಯದ್ಯಪಿ ರಜತಕ್ಕೆ ಬರುವುದಿಲ್ಲ. ಏಕೆಂದರೆ ಅಲ್ಲಿ ಅವಿದ್ಯಾಪರಿಣಾಮರೂಪವಾದ ರಜತವು ಕೆಲವುಕಾಲದವರೆಗೆ ಇದ್ದೇ ಇರುತ್ತದೆ. 'ನೇದಂ ಕದಾಪಿರಜತಂ' ಎಂದು ಕಾಲಾನವಚ್ಛಿನ್ನವಾಗಿಯೇ ರಜತನಿಷೇಧ ತೋರುವುದರಿಂದ ವ್ಯಾವಹಾರಿಕತ್ವೋಪಾಧಿವಿಶಿಷ್ಟರಜತವು ಅಲ್ಲಿ ಎಂದೂ ಇಲ್ಲದಿರುವುದರಿಂದ ಆ ರೀತಿಯಾದ ರಜತಕ್ಕೆ ನಿಷೇಧಪ್ರತಿಯೋಗಿತ್ವವು ಸಂಗತವಾಗುತ್ತದೆ. 'ತ್ರಿವಿಧಂ'— ಇತಿ. ಸತ್ತ್ವ ಮೂರು ವಿಧವಾಗಿದೆ. ಬ್ರಹ್ಮಸತ್ತ್ವ ಪಾರಮಾರ್ಥಿಕವಾಗಿದೆ. ಅರ್ಥಕ್ರಿಯಾಸಾಮರ್ಥ್ಯವುಳ್ಳ ಅಂದರೆ ಅರ್ಥಕ್ರಿಯಾಕಾರಿಯಾದ ಸತ್ತ್ವವು ಮಾಯೋಪಾಧಿಕವಾಗಿ ಆಕಾಶಾದಿಗಳಲ್ಲಿರುತ್ತದೆ. ಇದನ್ನು ವ್ಯಾವಹಾರಿಕಸತ್ತ್ವವೆಂದು ಕರೆಯುತ್ತಾರೆ. ಅವಿದ್ಯೋಪಾಧಿಕವಾದ ಸತ್ತ್ವವು ಈ ರಜತಾದಿಗಳಲ್ಲಿರುತ್ತದೆ. ಇದನ್ನೇ 'ಕಾಲತ್ರಯೇ'— ಎಂಬ ಪದ್ಯಗಳಿಂದ ವಿವರಿಸುತ್ತಾನೆ.

ಜ್ಞಾತೃಕಾಲವೆಂದರೆ ವ್ಯವಹಾರದಶಾ. ಕಾಲತ್ರಯದಲ್ಲಿ ಬಾಧವಿಲ್ಲದ ಸತ್ತ್ವವೇ ಪಾರಮಾರ್ಥಿಕಸತ್ತ್ವ. ವ್ಯವಹಾರಕಾಲದಲ್ಲಿ ಮಾತ್ರ ಬಾಧವಿಲ್ಲದ ಸತ್ತ್ವವು ವ್ಯಾವಹಾರಿಕಸತ್ತ್ವವಾಗುತ್ತದೆ. ತೋರುವ ಸಮಯದಲ್ಲಿ ಮಾತ್ರ ಇರುವುದು. ಪ್ರಾತಿಭಾಸಿಕಸತ್ತ್ವ. ವ್ಯವಹಾರದಶೆಯಲ್ಲಿಯೇ ಪ್ರತ್ಯಕ್ಷಾದಿಪ್ರಮಾಣದಿಂದ 'ನೇದಂ ರಜತಂ' ಎಂದು ರಜತವು ಬಾಧಿತವಾಗುತ್ತದೆ ಲೌಕಿಕೇವಧಿಯೆಂದರೆ ವ್ಯವಹಾರಕಾಲ. ದೇವದತ್ತಾದಿ ಪ್ರಮಾತೃಗಳು ಔಪಾಧಿಕವಾಗಿದ್ದರೂ ಅಲ್ಲಿ ಬಾಧಿಸಲ್ಪಡುವುದಿಲ್ಲ. 'ವೈದಿಕ—' ಇತಿ. ಆಕಾಶಾದಿಪ್ರಪಂಚದ ಸತ್ತ್ವ ವ್ಯಾವಹಾರಿಕವಾಗಿರುತ್ತದೆ. ವ್ಯವಹಾರದೆಶೆಯಲ್ಲಿ ಇದಕ್ಕೆ ಬಾಧವಿರುವುದಿಲ್ಲ. ಆತ್ಮೈಕ್ಯಸಾಕ್ಷಾತ್ಕಾರಾದಿಕಾಲದಲ್ಲಿ ಅದು ಬಾಧಿತವಾಗುತ್ತದೆ. ಆ ಸಮಯದಲ್ಲಿ ಯಾವ ದ್ವೈತಪ್ರಪಂಚವೂ ಇರುವುದಿಲ್ಲ. ಪ್ರಮಾತೃವಿನಲ್ಲಿರುವ ಪ್ರಮಾತೃತ್ವವೂ ಆಗ ತೋರುವುದಿಲ್ಲ. ಆದುದರಿಂದ ಪ್ರಮಾತೃವೂ ಆಗ ಬಾಧಿತನಾಗುತ್ತಾನೆ. ಇಲ್ಲಿ ಬಾಧವೆಂದರೆ ತೋರದಿರುವುದು. ನಿಷೇಧವಿಷಯಕಪ್ರತೀತಿಯಲ್ಲ. 'ತತ್ರಃ—' ಇತಿ. ಶುಕ್ತಿಯಲ್ಲಿ ರಜತಪ್ರತೀತಿಯಿರುವುದರಿಂದ ರಜತವು ಅಸತ್ತೆಂದು ಹೇಳಲು ಸಾಧ್ಯವಿಲ್ಲ. 'ನೇದಂ ರಜತಂ' ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಧವಿರುವುದರಿಂದ ಸತ್ತೆಂದೂ ಹೇಳಲು ಸಾಧ್ಯವಿಲ್ಲ. ಖ್ಯಾತಿವಿಷಯತ್ವ, ಬಾಧವಿಷಯತ್ವಗಳೆರಡೂ ಒಂದೆಡೆ ಬಂದುದರಿಂದ ಅದನ್ನು ಅನಿರ್ವಚನೀಯಖ್ಯಾತಿಯೆಂದೇ ಸ್ವೀಕರಿಸಬೇಕು. ಸದಸದ್ವಿಲಕ್ಷಣತ್ವಕ್ಕೆ ಅನಿರ್ವಚನೀಯತ್ವವೆಂದು ಹೆಸರು. ಅದು ಮಾಯಾಪರಿಣಾಮವಾದುದರಿಂದ ಅದಕ್ಕೆ ಮಾಯಾಮಯತ್ವ ಸಿದ್ಧವಾಗುತ್ತದೆ. ಚಿತ್ಸುಖಾಚಾರ್ಯರ ಪಂಚಪಾದಿಕೆಯಲ್ಲಿಯೂ ಅದಕ್ಕೆ ಮಾಯಾಮಯತ್ವವನ್ನೇ ನಿರೂಪಿಸಿರುತ್ತಾರೆ. 'ಸದಸತ್—' ಇತಿ. ಸತ್ತ್ವರೂಪದಿಂದಾಗಲೀ ಅಸತ್ತ್ವರೂಪದಿಂದಾಗಲೀ ಯಾವುದು ವಿಚಾರಕ್ಕೆ ಅರ್ಹವಾಗುವುದಿಲ್ಲವೋ ಅದು ಅನಿರ್ವಾಚ್ಯವಾಗುತ್ತದೆಂದರ್ಥ.

ನನು ಮಾಯಾವಿದ್ಯಯೋಃ ಸ್ವಾಶ್ರಯವ್ಯಾಮೋಹಹೇತುತ್ವ ತದಭಾವಾಭ್ಯಾಂ ಭೇದಸ್ಯ ಜಾಗರೂಕತ್ವೇನ ಅವಿದ್ಯಾಮಯತ್ವೇ ವಕ್ತವ್ಯೇ ಮಾಯಾಮಯತ್ವೋಕ್ತಿರಾರೋಪ್ಯಸ್ಯಾಯುಕ್ತೇತಿ ಚೇತ್— ತದಯುಕ್ತಮ್ । ಅನಿರ್ವಚನೀಯತ್ವ ತತ್ತ್ವಾವಭಾಸಪ್ರತಿಬಂಧಕತ್ವಾದಿಲಕ್ಷಣಜಾತಸ್ಯ ಮಾಯಾವಿದ್ಯಯೋಃ ಸಮಾನತ್ವಾತ್ । ಕಿಂ ಚಾಶ್ರಯಶಬ್ದೇನ ದ್ರಷ್ಟೋಚ್ಯತೇ ಕರ್ತಾವಾ । ನಾದ್ಯಃ । ಮಂತ್ರೌಷಧಾದಿನಿಮಿತ್ತ ಮಾಯಾದರ್ಶಿನಸ್ತಸ್ಯ ವ್ಯಾಮೋಹದರ್ಶನಾತ್ । ನ ದ್ವಿತೀಯಃ । ವಿಷ್ಣೋಃ ಸ್ವಾಶ್ರಿತಮಾಯಯೈವ ರಾಮಾವತಾರೇ ಮೋಹಿತತ್ವೇನ ತತ್ರ ಮಾಯಾವಿತ್ತ್ವಸ್ಯಾಪ್ರಯೋಜಕತ್ವಾತ್ । ಬಾಧನಿಶ್ಚಯಮಂತ್ರಾದಿಪ್ರತೀಕಾರಬೋಧಯೋರೇವ ಪ್ರಯೋಜಕತ್ವಾತ್ । ಅನ್ಯಥಾ ಪಂಗ್ವಂಧವತ್ ಕರ್ತಾ ವ್ಯಾಮುಹ್ಯೇತ ॥

'ನನು'—ಇತಿ. ರಜತವು ಮಾಯಾಮಯವಲ್ಲ. ಅದು ಅವಿದ್ಯಾಮಯವಾಗುತ್ತದೆಂದು ಶಂಕಿಸುತ್ತಾನೆ. ಕರ್ತೃವಿನ ಇಚ್ಛೆಯನ್ನು ಅನುಸರಿಸುತ್ತಾ ಆಶ್ರಯವನ್ನು ವ್ಯಾಮೋಹಗೊಳಿಸದಿರುವುದೇ ಮಾಯಾ. ಇದಕ್ಕೆ ವಿಪರೀತವಾದುದು ಅವಿದ್ಯಾ. ಶುಕ್ತಿರಜತದಲ್ಲಿ ರಜತಕ್ಕೆ ಉಪಾದಾನವಾಗಿರುವುದು ಅವಿದ್ಯೆಯೇ ಆಗುತ್ತದೆ. ರಜತವನ್ನು ನೋಡುವವನಿಗೆ ಭ್ರಾಂತಿಯುಂಟಾದುದರಿಂದ ವ್ಯಾಮೋಹವಿರುತ್ತದೆ. ಅಲ್ಲಿ ಅವನ ಇಚ್ಛಾನುಸಾರಿತ್ವವೂ ಇಲ್ಲಿರುವುದಿಲ್ಲ. ಏಕೆಂದರೆ ಅಲ್ಲಿ ದೃಷ್ಟೃವಿನ ಇಚ್ಛೆಯಿಲ್ಲದಿದ್ದರೂ ಅವಿದ್ಯೆಯ ವಿಜೃಂಭಣವಿರುತ್ತದೆ. ಹೀಗೆ ಶಂಕೆ ಬಂದರೆ ಅವಿದ್ಯೆಯು ಮಾಯೆಗಿಂತ ಬೇರೆಯಲ್ಲವೆಂಬ ಅಭಿಪ್ರಾಯದಿಂದ ಸಮಾಧಾನ ಹೇಳುತ್ತಾನೆ. 'ಅನಿರ್ವಚನೀಯತ್ವ ಮತ್ತು ತತ್ತ್ವಪ್ರತೀತಿಪ್ರತಿಬಂಧಕತ್ವ ಇವೆರಡೂ ಮಾಯೆಯಲ್ಲಿಯೂ ಅವಿದ್ಯೆಯಲ್ಲಿಯೂ ಸಮಾನವಾಗಿರುತ್ತವೆ. ಆದಿಪದದಿಂದ ವಿಪರ್ಯಯಾವಭಾಸಕತ್ವವನ್ನು ತೆಗೆದುಕೊಳ್ಳಬೇಕು. 'ಕಿಂಚ'—ಇತಿ. ಆಶ್ರಯನೆಂದರೆ ಇಲ್ಲಿ ಯಾರು ? ಮಾಯಾಪರಿಣಾಮವಾಗಿರುವ ಹಸ್ತ್ಯಶ್ವಾದಿಗಳನ್ನು ನೋಡುವವನು ಮಾಯಾಶ್ರಯನೇ? ಅಥವಾ ಮಾಯೆಯನ್ನು ಸೃಜಿಸುವವನು ಮಾಯಾಶ್ರಯನೇ ಎಂದು ವಿಕಲ್ಪ. ಮೊದಲನೆಯವನಾಗುವುದಿಲ್ಲ. ಮಾಂತ್ರಿಕ, ವಿಷವೈದ್ಯಾದಿಗಳು ಮಂತ್ರೌಷಧಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧದಿಂದ ಮಾಯೆಯನ್ನು ಪ್ರಯೋಗಿಸುತ್ತಾರೆ. ಅಂತಹಮಾಯಾಪರಿಣಾಮ ವಾಗಿರುವ ಹಸ್ತ್ಯಶ್ವಾದಿಗಳನ್ನು ನೋಡಿದ ಪ್ರೇಕ್ಷಕರಿಗೆ ವ್ಯಾಮೋಹವುಂಟಾಗುತ್ತದೆ. ಆಶ್ರಯಶಬ್ದದಿಂದ ದ್ರಷ್ಟೃಪುರುಷನನ್ನು ತೆಗೆದುಕೊಳ್ಳುವುದಾದರೆ ಆಗ ಮಾಯೆಯು ತನ್ನ ಆಶ್ರಯಕ್ಕೆ ಮೋಹವನ್ನುಂಟುಮಾಡುವುದಿಲ್ಲ (ವ್ಯಾಮೋಹಕಾರಣವಾಗುವುದಿಲ್ಲ) ವೆಂಬ ಮಾತು ವಿರುದ್ಧವಾಗುತ್ತದೆ.

"ತತ್ರ"—ಇತಿ. ಸ್ವಾಶ್ರಯವ್ಯಾಮೋಹವಿಲ್ಲದಿರುವಾಗ ಎಂದರ್ಥ. ಅವಿದ್ಯೆ ಯಂತೆ ಮಾಯೆಗೂ ವ್ಯಾಮೋಹವನ್ನುಂಟುಮಾಡುವುದು ಅದರ ಸ್ವಭಾವವಾಗಿರುತ್ತದೆ. ಸ್ವಭಾವವು ನೋಡುವವನ ವಿಷಯದಲ್ಲಿ ಹೇಗೋ ಪ್ರಯೋಕ್ತೃ ವಿಷಯದಲ್ಲಿಯೂ ಸಮಾನವಾಗಿರುತ್ತದೆ. ಆಗ ಅವಿದ್ಯೆಯನ್ನು ಅಥವಾ ಮಾಯೆಯನ್ನು ನೋಡುವವ ನಾಗಲೀ ಅಥವಾ ಪ್ರಯೋಗಿಸುವವನಾಗಲೀ ಬಾಧನಿಶ್ಚಯವನ್ನು ಮಾಡುವುದಾದರೆ ಅಥವಾ ಮಂತ್ರಾದಿ ಪ್ರತೀಕಾರವನ್ನು ತಿಳಿಯುವುದಾದರೆ ಆಗ ವ್ಯಾಮೋಹವನ್ನು ಹೊಂದುವುದಿಲ್ಲ. ಹಾಗಾಗದಿದ್ದರೆ ನೋಡುವವನಂತೆ ಪ್ರಯೋಗಿಸುವವನೂ ವ್ಯಾಮೋಹ ಹೊಂದುತ್ತಾನೆ. ಆದರೆ ಅಲ್ಲಿ ಇಷ್ಟು ವಿಶೇಷವಿದೆ. ದ್ರಷ್ಟೃಪುರುಷನಲ್ಲಿ ಅದು ಅಧಿಕ ವಾಗಿರುತ್ತದೆ. ರಾಮಾವತಾರದಲ್ಲಿ ಪ್ರತೀಕಾರಾನುಸಂಧಾನವಿಲ್ಲದಿರುವುದರಿಂದ ವ್ಯಾಮೋಹವಿರುತ್ತದೆ. ಅಂಧಪಂಗು ಮುಂತಾದವರಿಗೆ ಅಂಗವೈಕಲ್ಯದಿಂದ ತತ್ತ ತ್ಕಾರ್ಯವು ಹೇಗೆ ಆಗುವುದಿಲ್ಲವೋ ಹಾಗೆಯೇ ಪ್ರತೀಕಾರರೂಪ ಅಂಗವೈಕಲ್ಯದಿಂದ ವ್ಯಾಮೋಹವಾಗುತ್ತದೆ.

ಅವಿದ್ಯಾಸ್ಥಳದಲ್ಲಿಯೂ ನಿಯತವಾಗಿ ಆಶ್ರಯ ವ್ಯಾಮೋಹವು ತೋರುವುದಿಲ್ಲ. ನೀರಿನ ಮಧ್ಯದಲ್ಲಿ ಕೆಳಮುಖವಾಗಿ ಮರಗಿಡಾದಿಗಳು ಅಧ್ಯಸ್ತವಾಗಿದ್ದರೂ ನೋಡುವ ವನಿಗೆ ಎಂದೂ ವ್ಯಾಮೋಹವುಂಟಾಗುವುದಿಲ್ಲ. ಇಲ್ಲಿ ತೀರದಲ್ಲಿರುವ ಮರವನ್ನು ನೋಡು ವುದರಿಂದ ಉಂಟಾದ ವಿವೇಕದಿಂದ ವ್ಯಾಮೋಹವುಂಟಾಗದಿರಬಹುದು. ಆದರೆ ಅವಿದ್ಯೆಗೆ ವ್ಯಾಮೋಹಕಾರಿತ್ವವು ಸ್ವಭಾವವೆಂದು ಹೇಳುವುದಾದರೆ ಮಾಯೆಯೂ ಸ್ವಭಾವದಿಂದ ವ್ಯಾಮೋಹಜನಕವೆಂದು ತಿಳಿಯಬೇಕು. ಮಾಯೆಯನ್ನು ಪ್ರಯೋಗಿಸುವ ಐಂದ್ರ ಜಾಲಿಕನಿಗೆ ಪ್ರತೀಕಾರಜ್ಞಾನವಿರುವುದರಿಂದ ವ್ಯಾಮೋಹವುಂಟಾಗುವುದಿಲ್ಲ. ಹೀಗೆ ಅವಿದ್ಯೆಗೆ ಆಶ್ರಯರಾದವರು ಪ್ರತೀಕಾರಜ್ಞಾನವಂತರಾಗಿದ್ದರೆ ಅವರಿಗೆ ವ್ಯಾಮೋಹ ವುಂಟಾಗುದಿಲ್ಲವೆಂದು ತಿಳಿಯಬೇಕು. ಇದರಿಂದ ಅವಿದ್ಯೆಯು ಮಾಯೆಯಿಂದ ಬೇರೆ ಯಲ್ಲವೆಂದು ಸಿದ್ಧವಾಗುತ್ತದೆ.

ನ ಚೇಚ್ಛಾನುವಿಧಾನ ಅನನುವಿಧಾನಾಭ್ಯಾಂ ತಯೋರ್ಭೇದಃ ಇತಿ ಭಣಿತವ್ಯಮ್ । ಮಾಯಾಸ್ಥಲೇ ಮಣಿಮಂತ್ರೌಷಧಾದಿಪ್ರಯೋಗವದವಿದ್ಯಾಸ್ಥಲೇಪಿದ್ವಿಚಂದ್ರಕೇ ಶೋಂಡ್ರಕಾದಿವಿಭ್ರಮನಿಮಿತ್ತಾಂಗುಲ್ಯವಷ್ಟಂಭಾದಾವಪಿ ಸ್ವಾತಂತ್ರ್ಯೋಪ ಲಂಭಾತ್ । ಅತ ಏವ ತತ್ರ ತತ್ರ ಶ್ರುತಿಸ್ಮೃತಿಭಾಷ್ಯಾದಿಷುಮಾಯಾವಿದ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋರಭೇದೇನ ವ್ಯವಹಾರಃ ಸಂಗಚ್ಛತೇ । ಕ್ವಚಿದ್ವಿಕ್ಷೇಪಪ್ರಾಧಾನ್ಯೇನಾವರಣಪ್ರಾಧಾನ್ಯೇನ ಚ ಮಾಯಾವಿದ್ಯಯೋರ್ಭೇದೇ ತದ್ವ್ಯವಹಾರೋ ವ ವಿರುಧ್ಯತೇ ತದುಕ್ತಮ್—

ಮಾಯಾ ವಿಕ್ಷಿಪದಜ್ಞಾನಮೀಶೇಚ್ಛಾವಶವರ್ತಿ ವಾ ।
ಅವಿದ್ಯಾಚ್ಛಾದಯತ್ತತ್ಸ್ವಂ ಸ್ವಾತಂತ್ರ್ಯಾನುವಿಧಾಯಿ ವಾ ॥ ಇತಿ

'ನಚ'—ಇತಿ. ಮಾಯೆಯು ಕರ್ತೃವಿನ ಇಚ್ಛೆಯನ್ನನುಸರಿಸುತ್ತದೆ. ಅವಿದ್ಯೆಯಾದರೋ ಕರ್ತೃವಿನ ಇಚ್ಛೆಯಿಲ್ಲದಿದ್ದರೂ ಸ್ವಾತಂತ್ರ್ಯದಿಂದ ಪರಿಣಾಮಾದಿಕಾರ್ಯಗಳನ್ನು ಹುಟ್ಟಿಸುತ್ತದೆ. ಹೀಗೆ ಅವುಗಳಿಗೆ ಭೇಧವಿರುತ್ತದೆಯೆಂದು ಶಂಕಿಸುವವನ ಅಭಿಪ್ರಾಯ. "ಮಾಯಾ"—ಇತಿ. ಮಾಯಾಸ್ಥಲದಲ್ಲಿ ಐಂದ್ರಜಾಲಿಕ ಮುಂತಾದವರು ಸ್ವೇಚ್ಛೆಯಿಂದ ಮಣಿಮಂತ್ರಾದಿ ಸಹಾಯದಿಂದ ಮಾಯೆಯನ್ನು ಪ್ರಯೋಗಿಸುತ್ತಾರೋ ಹಾಗೆಯೇ ಉಪಸಂಹಾರಮಾಡುತ್ತಾರೋ, ಹಾಗೆ ಅವಿದ್ಯಾಸ್ಥಳದಲ್ಲಿಯೂ ಪ್ರಯೋಕ್ತೃವಾದವನು ಸ್ವಾತಂತ್ರ್ಯದಿಂದ ಕಣ್ಣುಗಳನ್ನು ಬೆರಳು ಮುಂತಾದವುಗಳಿಂದ ಅಡ್ಡ ಹಿಡಿದು ಇಚ್ಛಾಪರ್ಯಂತ ದ್ವಿಚಂದ್ರಾದಿಗಳನ್ನು ನೋಡುತ್ತಾನಾದುದರಿಂದ ಎರಡಕ್ಕೂ ಸಮಾನತೆ ಇರುತ್ತದೆ. "ಅತ"—ಇತಿ. 'ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ' (ಶ್ವೇ ೧।೧೦) ಎಂದು ಶ್ರುತಿಯಲ್ಲಿ ಸಮ್ಯಗ್ಜ್ಞಾನದಿಂದ ನಿವೃತ್ತವಾಗುವ ಅವಿದ್ಯೆಯು ಮಾಯಾಶಬ್ದದಿಂದಲೇ ವ್ಯವಹರಿಸಲ್ಪಟ್ಟಿದೆ. ಹೀಗೆಯೇ ಸ್ಮೃತಿಯಲ್ಲಿಯೂ—

ತರತ್ಯವಿದ್ಯಾಂ ವಿತತಾಂ ಹೃದಿ ಯಸ್ಮಿನ್ನಿವೇಶಿತೇ ।
ಯೋಗೀ ಮಾಯಾಮಮೇಯಾಯ ತಸ್ಮೈ ವಿದ್ಯಾತ್ಮನೇ ನಮಃ ॥

ಎಂದು ಮಾಯಾಮತ್ತು ಅವಿದ್ಯೆಯು ಏಕರೂಪವಾಗಿ ಹೇಳಿದೆ. 'ಅವಿದ್ಯಾ ಮಾಯಾ, ಅವಿದ್ಯಾತ್ಮಿಕಾ ಮಾಯಾಶಕ್ತಿಃ' ಎಂದು ಭಾಷ್ಯದಲ್ಲಿಯೂ ಹೇಳಿದೆ. ಭಾಷ್ಯಾದಿಯೆಂಬಲ್ಲಿ ಆದಿಪದದಿಂದ ಟೀಕಾಕಾರರ ಮಾತನ್ನೂ ತೆಗೆದುಕೊಳ್ಳಬೇಕು. ಇದರಿಂದ ಮಾಯಾವಿದ್ಯೆಗಳಿಗೆ ಐಕ್ಯವು ಸಿದ್ಧವಾಗುತ್ತದೆ. ಲೋಕದಲ್ಲಿ ಅವುಗಳಿಗೆ ಭೇದಪ್ರಸಿದ್ಧಿ ಹೇಗೆ? ಎಂದು ಶಂಕಿಸಬಾರದು. ಉಪಾಧಿಭೇದದಿಂದ ಒಂದೇವಸ್ತುವು ಎರಡುವಿಧವಾಗಿ ತೋರುವುದು ಪ್ರಸಿದ್ಧವಾಗಿದೆ. ಇದನ್ನೇ 'ಕ್ವಚಿತ್—' ವಾಕ್ಯದಿಂದ ವಿವರಿಸಿರುತ್ತಾನೆ. ಅಜ್ಞಾನಕ್ಕೆ ಆವರಣಶಕ್ತಿ, ವಿಕ್ಷೇಪಶಕ್ತಿಯೆಂದು ಎರಡುಶಕ್ತಿಗಳಿರುತ್ತವೆ. ಶುಕ್ತಿರಜತಪ್ರತಿಭಾಸವಾಗಿರುವವಾಗ ಮೊದಲನೆಯಶಕ್ತಿಯು ಶುಕ್ತಿರೂಪವಿದ್ದರೂ ಅದನ್ನು ಮುಚ್ಚುತ್ತದೆ. (ಆವರಣಮಾಡುತ್ತದೆ.) ಎರಡನೆಯಶಕ್ತಿಯೂ ರಜತವಿಲ್ಲದಿದ್ದರೂ ತೋರುವಂತೆ ಮಾಡುತ್ತದೆ.

ಹೀಗೆ ಅನಾದಿಯಾದ ಅಜ್ಞಾನವು ಬ್ರಹ್ಮಸ್ವರೂಪವನ್ನು ಆಚ್ಛಾದನ ಮಾಡಿ ಜಗತ್ತನ್ನು ಪ್ರದರ್ಶಿಸುತ್ತದೆ. ಇಲ್ಲಿ ಆವರಣ ಶಕ್ತಿ ಪ್ರಾಧಾನ್ಯವಿರುವಾಗ ಅವಿದ್ಯೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೆಂದೂ, ವಿಕ್ಷೇಪ ಶಕ್ತಿಪ್ರಾಧಾನ್ಯವಿರುವಾಗ ಮಾಯಾಶಬ್ದದಿಂದಲೂ ವ್ಯವಹರಿಸುತ್ತಾರೆ. ಇದನ್ನೇ 'ಮಾಯಾ' — ಕಾರಿಕೆಯಿಂದ ವಿವರಿಸುತ್ತಾನೆ. ವಿಕ್ಷೇಪಶಕ್ತಿಯಿಂದ ಕೂಡಿ ಈಶ್ವರೇಚ್ಛಾಧೀನವಾಗಿರುವ ಅಜ್ಞಾನವು ಮಾಯಾ ಎಂದೂ, ಆವರಣ ಶಕ್ತಿಯಿಂದ ಕೂಡಿ ಸ್ವತಂತ್ರವಾಗಿರುವ ಅಜ್ಞಾನವು ಅವಿದ್ಯೆಯೆಂದೂ ವ್ಯವಹರಿಸಲ್ಪಡುತ್ತದೆ. ವಿವಕ್ಷಾಭೇದದಿಂದ ಹಾಗೆ ಶಬ್ದಗಳನ್ನು ಪ್ರಯೋಗಿಸಿದರೂ ವಸ್ತುತಃ ಅವೆರಡಕ್ಕೆ ಭೇದವಿರುವುದಿಲ್ಲವೆಂದು ತಾತ್ಪರ್ಯ.

ನನ್ವವಿದ್ಯಾಸದ್ಭಾವೇ ಕಿಂ ಪ್ರಮಾಣಮ್ ? ಅಹಮಜ್ಞೋ ಮಾಮನ್ಯಂ ಚ ನ ಜಾನಾಮೀತಿ ಪ್ರತ್ಯಕ್ಷಪ್ರತಿಭಾಸ ಏವ । ನನು ಜ್ಞಾನಾಭಾವ ವಿಷಯೋಽಯಂ ನಾಭಿಪ್ರೇತಮರ್ಥಂ ಗಮಯತೀತಿ ಚೇತ್—ನ ತಾವದನುಪಲಬ್ಧಿವಾದಿನಶ್ಚೋದ್ಯಮೇತತ್ । ಪರೋಕ್ಷಪ್ರತಿಭಾಸಹೇತುತ್ವಾತ್ತಸ್ಯಾಃ । ಅಯಮಪಿ ಪರೋಕ್ಷಪ್ರತಿಭಾಸ ಏವೇತಿ ಚೇತ್—ನ ತಾವಲ್ಲಿಂಗಶಬ್ದಾನುಪಪದ್ಯಮಾನಾರ್ಥಜನ್ಯಃ । ಜ್ಞಾತಕರಣತ್ವಾತ್ತೇಷಾಮ್ । ನ ಚೈತತ್ಸಾಮಗ್ರೀಕಾಲೇ ಜ್ಞಾನಮಸ್ತಿ । ಅನುಭೂಯತೇ ವಾ । ಅನುಪಲಬ್ಧ್ಯಾ ಜನ್ಯತ ಇತಿ ಚೇತ್—ನ ತಾವದಿಯಮಜ್ಞಾತಾಕರಣಮ್ । ಪ್ರತ್ಯಕ್ಷೇತರಸ್ಯ ಜ್ಞಾತಕರಣತ್ವನಿಯಮಾತ್ । ನಾಪಿ ಜ್ಞಾತೈವ ಕರಣಮ್ । ಅನುಪಲಬ್ಧ್ಯನವಸ್ಥಾನಾತ್ । ನ ಚ ಯಥಾ ಪರೇಷಾಮಭಾವಗ್ರಹಣೇ ಯೋಗ್ಯಾನುಪಲಬ್ಧಿಃ ಸಹಕಾರಿಣೀ ತಥಾ ನಃ ಕರಣಮಿತಿ ಶಂಕ್ಯಮ್ । ಜ್ಞಾನಕರಣ ಇವ ಸಹಕಾರಿಣಿ ಜ್ಞಾತತ್ವನಿಯಮಾಭಾವಾತ್ । ಅಸ್ತು ವಾ ತಥಾ ಜ್ಞೇಯಾಭಾವಗ್ರಹಣೇ ಕರಣಮ್ । ಜ್ಞಾನಾಭಾವಗ್ರಹಣೇ ಕರಣಂ ನ ಭವತ್ಯೇವೇತಿ ವಕ್ಷ್ಯತೇ ॥

ಅವಿದ್ಯೆ ಇದೆಯೆಂಬುದರಲ್ಲಿ ಪ್ರಮಾಣವೇನು ? ಅಂದರೆ ಅಹಂ ಅಜ್ಞಃ ಎಂಬ ಅಜ್ಞಾನವಿಷಯಕವಾದ ಪ್ರತ್ಯಕ್ಷಾನುಭವವೇ ಅವಿದ್ಯೆಯಲ್ಲಿ ಪ್ರಮಾಣವೆಂದು ತಿಳಿಯಬೇಕು. ಇಲ್ಲಿ ಆತ್ಮನನ್ನಾಶ್ರಯಿಸಿ ಬಾಹ್ಯಾಧ್ಯಾತ್ಮಿಕಗಳಲ್ಲಿ ವ್ಯಾಪ್ತವಾದ ಜಡಾತ್ಮಕವಾದ ಅವಿದ್ಯಾಶಕ್ತಿಯು ಅನುಭವಿಸಲ್ಪಡುತ್ತದೆ. ಈ ಅಜ್ಞಾನವು ಜ್ಞಾನಾಭಾವ ಸ್ವರೂಪವೆಂದು ತಿಳಿಯಬಾರದು. ಜ್ಞಾನಾಭಾವಕ್ಕಿಂತ ಅದು ಬೇರೆಯೇ ಆಗುತ್ತದೆ. ಭಾವಕಾರ್ಯಕ್ಕೆ ಅದು ಉಪಾದಾನಕಾರಣವಾದುದರಿಂದ ಅದು ಭಾವರೂಪವಾಗಿರುತ್ತದೆ. 'ನನು'—ಇತಿ. 'ಅಹಮಜ್ಞ' ಎಂದು ತೋರುವುದು ಜ್ಞಾನಾಭಾವವಲ್ಲದೆ ಅದಕ್ಕಿಂತ ಬೇರೆಯಾದ ಒಂದು ಅಜ್ಞಾನರೂಪವಾದ ಪದಾರ್ಥವಲ್ಲ. ಜಗತ್ತಿಗೆ ಮೂಲಕಾರಣವಾದುದು ಪ್ರಧಾನ ಅಥವಾ ಪರಮಾಣ್ವಾದಿಗಳಾಗುತ್ತವೆಯೆಂದು ಪೂರ್ವಪಕ್ಷಿಯ ಆಶಯ. 'ನತಾವತ್'—ಇತಿ ಅನುಪಲಬ್ಧಿಯೆಂಬ ಹೆಸರಿರುವ ಅಭಾವಗ್ರಾಹಕವಾದ ಅತಿರಿಕ್ತ ಪ್ರಮಾಣವನ್ನು ಭಾಟ್ಟರೂ ಅದ್ವೈತಿಗಳೂ ಅಂಗೀಕರಿಸಿರುತ್ತಾರೆ. 'ಭೂತಲೇ ಘಟೋನಾಸ್ತಿ' ಎಂದು ಉಂಟಾಗುವ ಘಟಾಭಾವ ಜ್ಞಾನವು ಅನುಪಲಬ್ಧಿಪ್ರಮಾಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನ್ಯವಾಗಿ ಪರೋಕ್ಷವಾಗಿರುವುದಲ್ಲವೆ ಪ್ರತ್ಯಕ್ಷವಲ್ಲ. ಅನುಮಾನಾದಿ ಪ್ರಮಾಣಾಂತರ ಗಳಿಂದಲೂ ಅಭಾವಜ್ಞಾನವಾಗುತ್ತದೆಂಬುದು ಸರ್ವಸಮ್ಮತವಾದವಿಷಯ. ಅವರಮತ ದಲ್ಲಿ ಎಂದೂ ಅಭಾವದ ಪ್ರತ್ಯಕ್ಷಜ್ಞಾನವುಂಟಾಗುವುದಿಲ್ಲ. ಆದುದರಿಂದ 'ಅಹಮಜ್ಞಃ' ಎಂಬ ಪ್ರತ್ಯಕ್ಷದಲ್ಲಿ ಜ್ಞಾನಾಭಾವವು ಎಂದೂ ವಿಷಯವಾಗುವುದಿಲ್ಲ. 'ಅಯಂ'—ಇತಿ "ಅಹಮಜ್ಞಃ' ಎಂಬ ಜ್ಞಾನವೂ ಪ್ರತ್ಯಕ್ಷವಲ್ಲ. ಅದೂ ಪರೋಕ್ಷವೆಂದೇ ಅಂಗೀಕೃತ ವಾಗುತ್ತದೆಂದು ತಾತ್ಪರ್ಯ.

'ನತಾವತ್'—ಇತಿ. 'ಅಹಮಜ್ಞಃ' ಎಂಬ ಜ್ಞಾನವು ಪರೋಕ್ಷವಾಗುವುದಾದರೆ ಅನುಮಾನಾದ ಪ್ರಮಾಣದಿಂದ ಅದು ಹುಟ್ಟುತ್ತದೆಂದು ಹೇಳಬೇಕು. ಆದರೆ ಹಾಗೆ ಹೇಳಲು ಸಾಧ್ಯವಿಲ್ಲ. ಅನುಮಾನದಿಂದ ಅಥವಾ ಶಬ್ದದಿಂದ, ಅಥವಾ ಅರ್ಥಾಪತ್ತಿ ಯಿಂದ ಈ ಅರ್ಥವು ತಿಳಿಯುತ್ತದೆಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಅಲ್ಲಿ ಲಿಂಗ, ಅಥವಾ ಶಬ್ದ, ಅಥವಾಅನುಪಪದ್ಯಮಾನವಾದ ಅರ್ಥವು ಮೊದಲು ತಿಳಿಯಲ್ಪಟ್ಟೇ ಆ ಮೇಲೆ ಅರ್ಥಾಂತರವನ್ನು ಬೋಧಿಸಲು ಸಮರ್ಥವಾಗುತ್ತದೆ. ವಸ್ತುತಃ ಧೂಮ ವಿದ್ದರೂ ಅದು ಅಜ್ಞಾತವಾದರೆ ಅಗ್ನಿಯನ್ನು ತಿಳಿಸಿಕೊಡಲು ಸಮರ್ಥವಾಗುವುದಿಲ್ಲ. ಹೀಗೆಯೇ ಶಬ್ದಾದಿಗಳೂ ಆಗುತ್ತವೆ. ಕಿವುಡನಿಗೆ ಎಂದೂ ಶಾಬ್ದಬೋಧವಾಗುವುದಿಲ್ಲ. ಅರ್ಥಾಪತ್ತಿಸ್ಥಳದಲ್ಲಿಯೂ ಹಗಲಿನಲ್ಲಿ ಊಟಮಾಡದಿರುವ ದೇವದತ್ತನಪೀನತ್ವವು ಜ್ಞಾತ ವಾಗಿಯೇ ರಾತ್ರಿಭೋಜನರೂಪವಾದ ಅರ್ಥವನ್ನು ತಿಳಿಸುತ್ತದೆ. 'ಅಹಮಜ್ಞಃ' ಎಂಬಲ್ಲಿ ಎಂದೂ ಲಿಂಗಾದಿಜ್ಞಾನವಿರುವುದಿಲ್ಲ.

'ಅನುಪಲಭ್ಧ್ಯಾ'—ಇತಿ. ಭೂತಲದಲ್ಲಿ ಘಟವು ಇಲ್ಲದಿರುವುದರಿಂದ (ಅನುಪ ಲಬ್ಧಿಯಿಂದ) ಘಟಾಭಾವವು ಹೇಗೆ ಜ್ಞಾತವಾಗುತ್ತದೋ ಹಾಗೆ ಇಲ್ಲಿ ಜ್ಞಾನಾನುಪ ಲಬ್ಧಿಯಿಂದ ಜ್ಞಾನಾಭಾವವು ಜ್ಞಾತವಾಗುತ್ತದೆ ಎಂದು ಶಂಕಿಸಬಾರದು. 'ನತಾವತ್' —ಇತಿ. ಘಟಾನುಪಲಬ್ಧಿಯೂ ಕೂಡಾ ಅಜ್ಞಾತವಾದರೆ ಹೇಗೆ ಅದರಿಂದ ಘಟಾ ಭಾವವನ್ನು ತಿಳಿಯಲು ಶಕ್ಯವಿಲ್ಲವೋ ಅದರಂತೆ ಇದು ಅಜ್ಞಾತವಾದರೆ ಕಾರಣವಾಗ ಲಾರದು. 'ಅನುಪಲಬ್ಧಿ'—ಇತಿ. ಘಟಾನುಪಲಬ್ಧಿಯು ಜ್ಞಾತವಾಗಿಯೇ ಘಟಾ ಭಾವಕ್ಕೆ ಕಾರಣವೆಂದರೆ ಅದು ಜ್ಞಾತವಾದುದು ಹೇಗೆ ? ಘಟಾನುಲಬ್ಧಿಯೆಂದರೆ ಘಟೋಪಲಬ್ಧಿಯ ಅಭಾವ. ಅದು ತಿರುಗಿ ಅನುಪಲಬ್ಧಿಪ್ರಮಾಣದಿಂದ ತಿಳಿಯಲ್ಪಡು ತ್ತದೆ ಎಂದು ಹೇಳುವುದಾದರೆ ಉಪಲಬ್ಧಿಯ ಅನುಪಲಬ್ಧಿಯಿಂದ ಉಪಲಬ್ಧ್ಯಭಾವವು ತಿಳಿಯಲ್ಪಡುತ್ತದೆ ಎಂದು ಹೇಳಬೇಕಾಗುತ್ತವೆ. ಅದು ತಿರುಗಿ ಉಪಲಬ್ಧಿಗೆ ಅನುಪ ಲಬ್ಧಿಯು ಜ್ಞಾತವಾಗಿ ಕಾರಣವೆಂದು ಅಲ್ಲಿ ಪುನಃ ಅನುಲಬ್ಧಿಯೆಂಬ ಪ್ರಮಾಣಾಂತರ ವನ್ನು ಹೇಳಬೇಕಾದುದರಿಂದ ಅನವಸ್ಥಾ ಬರುತ್ತದೆ.

'ನ ಚ ಯಥಾ'—ಇತಿ. ನೈಯಾಯಿಕಾದಿಗಳು ಅನುಪಲಬ್ಧಿಯನ್ನು ಪ್ರಮಾ ಣಾಂತರವೆಂದು ಅಂಗೀಕರಿಸುವುದಿಲ್ಲ. ಭೂತಲದಲ್ಲಿ ಘಟಾಭಾವವು ಪ್ರತ್ಯಕ್ಷಪ್ರಮಾಣ ದಿಂದಲೇ ಗ್ರಹಿಸಲ್ಪಡುತ್ತದೆ. ಯೋಗ್ಯಾನುಪಲಬ್ಧಿಯು ಅಲ್ಲಿ ಸಹಕಾರಿಯೆಂದು ಅಂಗೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರಿಸಿರುತ್ತಾರೆ. ಘಟವಿಲ್ಲಿ ಇರುವುದಾದರೆ ಅವಶ್ಯವಾಗಿ ನೋಡಲಾದೀತು (ದೊರೆತೀತು) ಎಂದು ಎಲ್ಲಿ ಹೇಳಲು ಶಕ್ಯವೋ ಅಲ್ಲಿ ಅದರ ಅನುಪಲಬ್ಧಿಯು ಯೋಗ್ಯವಾಗುತ್ತದೆ. ಅವರ ಮತದಲ್ಲಿ ಅನುಪಲಬ್ಧಿಯು ಅಜ್ಞಾತವಾಗಿರಲಿ ಅಥವಾ ಜ್ಞಾತವಾಗಲಿ, ಸಹಕಾರಿಯಾಗಿರುತ್ತದೆಂದು ಅಂಗೀಕರಿಸಿ ಅನವಸ್ಥೆಯನ್ನು ಹೇಗೆ ಪರಿಹರಿಸಿರುತ್ತಾರೆಯೋ ಹಾಗೆಯೇ ನಮ್ಮ ಮತದಲ್ಲಿಯೂ ಅನುಪಲಬ್ಧಿಯು ಪ್ರಮಾಣಾಂತರವೆಂದು ಸ್ವೀಕರಿಸಿದ್ದರೂ ಅದು ಜ್ಞಾನಕರಣವಾಗಿದ್ದರೂ ಅನವಸ್ಥಾ ಎಂಬುದು ಪರಿಹರಿಸಲ್ಪಡುತ್ತದೆ. 'ನಿಯಮಾಭಾವಾತ್' —ಇತಿ. ಸಹಕಾರಿಯೆಂದಾಗ ಅದು ಜ್ಞಾತವಾಗಿಯೇ ಸಹಕಾರಿಯಾಗಬೇಕೆಂಬ ನಿಯಮವಿರುವುದಿಲ್ಲ. ಆದರೆ ಅದೇ ಕರಣವೆಂದರೆ ಅಲ್ಲಿ ಜ್ಞಾತವಾಗಿಯೇ ಕರಣವಾಗಬೇಕೆಂಬ ನಿಯಮವಿರುತ್ತದೆ. 'ಅಸ್ತು'—ಇತಿ. ಅನುಪಲಬ್ಧಿಯು ಆರನೆಯ ಪ್ರಮಾಣವಾಗಿ ಜ್ಞಾನಕಾರಣವಾಗಿರುತ್ತದೆಂದು ಅಂಗೀಕರಿಸುವವರ ಪಕ್ಷದಲ್ಲಿಯೂ ಅದು ಅಜ್ಞಾತವಾಗಿ ಅಥವಾ ಜ್ಞಾತವಾಗಿ ಕರಣವಾಗಲಿ, ಆದರೆ ಅದರಿಂದ ಜ್ಞಾನವ್ಯತಿರಿಕ್ತನಾದ ಒಂದು ಅಭಾವವೆಂದು ಗ್ರಹಿಸಬೇಕೇ ವಿನಾ ಜ್ಞಾನಾಭಾವವೆಂದು ಮುಂದೆ ಹೇಳುತ್ತಾನೆ. ಇದರಿಂದ ಅನುಪಲಬ್ಧಿಮತದಲ್ಲಿ 'ಅಹಮಜ್ಞ' ಎಂಬುದಕ್ಕೆ ಪರೋಕ್ಷತ್ವಾಭಾವವು ಹೇಳಿದಂತಾಗುತ್ತದೆ.

ಪ್ರತ್ಯಕ್ಷಾಭಾವವಾದೇ ತು ಪ್ರತ್ಯಕ್ಷೇಣ ತಾವದ್ಧರ್ಮಿಪ್ರತಿಯೋಗಿ ಜ್ಞಾನಯೋಃ ಸತೋರಾತ್ಮನಿ ಜ್ಞಾನಮಾತ್ರಾಭಾವಗ್ರಹಣಂ ನ ಬ್ರೂಯಾತ್ । ಘಟವತಿ ಭೂತಲೇ ಘಟಾಭಾವಸ್ಯೇವ ಜ್ಞಾನಮಾತ್ರಾಭಾವಸ್ಯ ಗ್ರಹೀತುಮಶಕ್ಯತ್ವಾತ್ । ತಯೋರಸತೋಸ್ತು ಮತರಾಮ್ । ಕಾರಣಾಭಾವಾತ್ । ಅತೋಽಪಿ ಯೋಗ್ಯಾನುಪಲಬ್ಧ್ಯಾ ಫಲಲಿಂಗಾದ್ಯಭಾವೇನ ವಾತ್ಮನಿ ಜ್ಞಾನಮಾತ್ರಾಭಾವಗ್ರಹಣಂ ದುರ್ಲಭಮಿತಿ ಪರಮತೇಽಪ್ಯಯಂ ನ್ಯಾಯಃ ಸಮಾನಃ । ತದೇವಮಾತ್ಮನಿ ಪ್ರತ್ಯಕ್ಷೇಣ ವಾನ್ಯೇನ ವಾಜ್ಞಾನಮಾತ್ರಾಭಾವಸ್ಯ ಗ್ರಹಣಮಶಕ್ಯಮಿತಿ ಸಿದ್ಧಮ್ ॥

ಈಗ ಅನುಪಲಬ್ಧಿಯನ್ನು ಬೇರೆ ಪ್ರಮಾಣವೆಂದು ಸ್ವೀಕರಿಸದೇ ಅಭಾವವು ಪ್ರತ್ಯಕ್ಷವಾಗುತ್ತದೆ ಎಂದು ಹೇಳುವ ನೈಯಾಯಿಕರು 'ಅಹಮಜ್ಞ' ಎಂಬ ಪ್ರತ್ಯಕ್ಷಕ್ಕೆ ಜ್ಞಾನಾಭಾವ ವಿಷಯಕತ್ವವನ್ನು ಹೇಳುತ್ತಾರೆ. ಇದನ್ನು ಖಂಡಿಸುತ್ತಾನೆ. 'ಪ್ರತ್ಯಕ್ಷ—ಇತಿ. 'ಅಹಮಜ್ಞ' ಎಂಬಲ್ಲಿ ಜ್ಞಾನಸಾಮಾನ್ಯಾಭಾವವು ಪ್ರತ್ಯಕ್ಷವಿಷಯವೇ ? ಅಥವಾ ಜ್ಞಾನವಿಶೇಷಾಭಾವವು ಪ್ರತ್ಯಕ್ಷ ವಿಷಯವೇ? ಇಲ್ಲಿ ದ್ವಿತೀಯಕಲ್ಪವನ್ನು 'ನತಾವತ್ ಸ್ಮರಣಾಭಾವಃ'—ಎಂದು ಮುಂದೆ ಖಂಡಿಸುತ್ತಾನೆ. ಮೊದಲನೆಯ ಕಲ್ಪವೂ ಸಂಗತವಾಗುವುದಿಲ್ಲ. ಜ್ಞಾನಾಭಾವಕ್ಕೆ "ಅಹಂ" ಎಂದು ಆತ್ಮನು ಆಶ್ರಯನಾಗಿರುತ್ತಾನೆ. ಅಲ್ಲಿ ಅಭಾವಕ್ಕೆ ಪ್ರತಿಯೋಗಿರೂಪದಿಂದ ಜ್ಞಾನಾವಗತಿ ಇರುವುದರಿಂದ ಜ್ಞಾನಸಾಮಾನ್ಯಾಭಾವ ಅಲ್ಲಿ ಬರುವುದಿಲ್ಲ. ಹೀಗಿರುವಾಗ ಜ್ಞಾನಾಭಾವಪ್ರತ್ಯಕ್ಷವಾಗುವುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಗೆ ? ಧರ್ಮಿ (ತಾನು) ಪ್ರತಿಯೋಗಿಯಾದ ಜ್ಞಾನಗಳೆರಡೂ ಇರುವುದರಿಂದ ಸಾಮಾನ್ಯಾಭಾವ ಹೇಳಲು ಸಾಧ್ಯವಿಲ್ಲ. ಘಟವಿರುವ ಭೂತಲದಲ್ಲಿ ಘಟಾಭಾವ ಹೇಳಲು ಹೇಗೆ ಸಾಧ್ಯವಿಲ್ಲವೋ ಹಾಗೆ ಯಾವ ರೀತಿಯಿಂದಲಾದರೂ ಜ್ಞಾನವಿರುವಾಗ ಜ್ಞಾನಸಾಮಾನ್ಯಾಭಾವ ಹೇಳುವುದು ಯುಕ್ತವಲ್ಲ. "ತಯೋಃ" — ಇತಿ. ಧರ್ಮಿ ಜ್ಞಾನವೂ, ಪ್ರತಿಯೋಗಿಜ್ಞಾನವೂ ಇದವೆನ್ನುವುದಾದರೆ 'ಅಹಮಜ್ಞಃ' ಎಂಬಲ್ಲಿ ಜ್ಞಾನಾಭಾವಪ್ರತ್ಯಕ್ಷವನ್ನು ಸುತರಾಂ ಹೇಳಲು ಅಶಕ್ಯವೆಂದರ್ಥ. ಅಭಾವಜ್ಞಾನವಾಗ ಬೇಕಾದರೆ ಪ್ರತಿಯೋಗಿಜ್ಞಾನ ಮತ್ತು ಅಧಿಕರಣ ಜ್ಞಾನವು ಕಾರಣವಾದುದರಿಂದ ಇಲ್ಲಿ ಅವು ಇರುವುದಿಲ್ಲ.

'ಅತೋಽಪಿ—' ಇತಿ. ಈ ರೀತಿಯಿಂದ ಧರ್ಮಿಪ್ರತಿಯೋಗಿಜ್ಞಾನವಿರಲಿ ಅಥವಾ ಇಲ್ಲದಿರಲಿ ಜ್ಞಾನಸಾಮಾನ್ಯಾಭಾವವನ್ನು ಹೇಳಲು ಹೇಗೆ ಸಾಧ್ಯವಿಲ್ಲವೋ ಹಾಗೆ ಇಲ್ಲಿ ಅನುಪಲಬ್ಧಿಯಿಂದಾಗಲೀ ಅನುಮಾನದಿಂದಾಗಲೀ ಜ್ಞಾನಸಾಮಾನ್ಯಾಭಾವಗ್ರಹಣವು ದುರ್ಲಭವೆಂದರ್ಥ. ಎಲ್ಲಾ ಕಡೆಯಲ್ಲಿಯೂ ವ್ಯವಹಾರವೇ ಜ್ಞಾನಕ್ಕೆ ಫಲವಾಗಿ ಲಿಂಗ ವಾಗುತ್ತದೆ. (ಅನುಮಾನಕ್ಕೆ ಉಕ್ತಿಸಂಭವ ಇದರಿಂದಲೇ ತಿಳಿಯಬೇಕು.) ಇಂತಹ ಲಿಂಗ ಇಲ್ಲಿ ತೋರದಿರುವುದರಿಂದ ಅದರ್ಶನರೂಪ ಹೇತುವಿನಿಂದ ಜ್ಞಾನಾಭಾವವನ್ನು ಅನುಮಾನಮಾಡಲು ಶಕ್ಯವೆಂದು ತಿಳಿಯಬೇಕು. 'ಪರಮತೇ'— ಇತಿ. ಅನುಪಲಬ್ಧಿ ವಾದಿಗಳಾದ ಭಾಟ್ಟಾದಿಗಳಮತದಲ್ಲಿಯೂ ಎಂದರ್ಥ. ಹೀಗೆ ಆತ್ಮನಲ್ಲಿ ಪ್ರತ್ಯಕ್ಷದಿಂದ ಅಥವಾ ಇತರಪ್ರಮಾಣದಿಂದ ಜ್ಞಾನಸಾಮಾನ್ಯಾಭಾವಗ್ರಹಣವು ಅವಶ್ಯವೆಂದಾಗು ತ್ತದೆ.

ನನು ಜ್ಞಾನವಿಶೇಷಾಭಾವಃ ಪ್ರತ್ಯಕ್ಷೇಣ ಗೃಹ್ಯತಾಮ್ । ನ ತಾವತ್ ಸ್ಮರಣಾಭಾವಃ। ಅಭಾವಗ್ರಹಣೇ ಪ್ರತಿಯೋಗಿಸ್ಮರಣಸ್ಯ ಕಾರಣತ್ವಾತ್ । ನಾಪ್ಯನುಭವಾಭಾವಃ । ತಸ್ಯಾವರ್ಜನೀಯತ್ವಾತ್ । ನನ್ವಾತ್ಮನಿ ಘಟಾನುಭವಾಭಾವಃ ಪ್ರತ್ಯಕ್ಷವಿಷಯ ಸ್ತರ್ಹಿ "ಅಹಮಜ್ಞಃ" ಇತಿ ಜ್ಞಾನಸಾಮಾನ್ಯವಚನೋ ಜಾನಾತಿರ್ಜ್ಞಾನ ವಿಶೇಷೇಽನುಭವೇ ಲಕ್ಷಣಯಾ ವರ್ತನೀಯಃ ॥ ಲಕ್ಷಣಾ ಚ ಸಂಬಂಧೇಽನು ಪಪತ್ತ್ಯಾ ಚ ಸತ್ಯಾಂ ವರ್ತತೇ । ಸಂಬಂಧಸ್ತಾವದನುಭವತ್ವಜ್ಞಾನತ್ವಯೋ ರೇಕವ್ಯಕ್ತಿಸಮಾವೇಶೋ ವ್ಯಾಪ್ಯವ್ಯಾಪಕಭಾವೋ ವಾ ವಿದ್ಯತ ಏವ। ಅನು ಪಪತ್ತಿಂ ತು ನ ಪಶ್ಯಾಮಃ ।

ಜ್ಞಾನವಿಶೇಷವೆಂದರೆ ಯಾವುದು ? ಸ್ಮರಣವೇ ಎಂದು ವಿಚಾರಿಸುತ್ತಾನೆ. 'ನನು'— ಇತಿ. 'ಅಹಮಜ್ಞ' ಎಂಬಲ್ಲಿ "ಅಹಂ ಸ್ಮರಣರೂಪಜ್ಞಾನಾಭಾವವಾನ್" ಎಂದು ಅರ್ಥ ಹೇಳುವುದಾದರೆ ಅದು ಕೂಡುವುದಿಲ್ಲ. ಅಭಾವಜ್ಞಾನದಲ್ಲಿ ಪ್ರತಿಯೋಗಿ ಜ್ಞಾನವು ಕಾರಣವಾಗುವುದರಿಂದ ಇಲ್ಲಿ ಪ್ರತಿಯೋಗಿಯಾದ ಸ್ಮರಣದ ಜ್ಞಾನವು ಆವಶ್ಯಕ ವಾಗುತ್ತದೆ. ಈ ಜ್ಞಾನವು ಸ್ಮರಣಾತ್ಮಕವೇ ಆಗಿರುವಾಗ ಅಲ್ಲಿ ಸ್ಮರಣಾಭಾವ ಬರುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಲ್ಲ. ಹಾಗಾದರೆ ಜ್ಞಾನವಿಶೇಷವೆಂದರೆ ಅನುಭವವೇ ? ಅಂದರೆ ಅದೂ ಆಗುವುದಿಲ್ಲವೆಂದು ತಿಳಿಸುತ್ತಾನೆ. 'ನಾಪಿ'—ಇತಿ. 'ಅಹಮಜ್ಞಃ' ಎಂಬುದು ಜ್ಞಾನಾಭಾವವಿಷಯಕಜ್ಞಾನವಾದುದರಿಂದ ಅದು ಅನುಭವವೇ ಆಗಿರುತ್ತದೆ. ಅದರ ಅಭಾವ ಹೇಳಲು ಸಾಧ್ಯವಿಲ್ಲ. 'ಜ್ಞಾನವಿಶೇಷ'—ಇತಿ ಆತ್ಮಸ್ವರೂಪ ವಿಶೇಷವಿಷಯಕಾನುಭವವೆಂದರ್ಥ. ಜ್ಞಾನವೆಂದರೆ ಲಕ್ಷಣಾವೃತ್ತಿಯಿಂದ ಹೀಗೆ ಹೇಳಬೇಕೆಂದರ್ಥ.

'ಗಂಗಾಯಾಂ ಘೋಷಃ' ಎಂಬಲ್ಲಿ ಗಂಗಾಪದಶಕ್ಯಾರ್ಥವಾದ ಗಂಗಾತ್ವಕ್ಕೆ ಲಕ್ಷ್ಯಾರ್ಥವಾದ ತೀರತ್ವದೊಡನೆ ಸಂಬಂಧವನ್ನು ಆಶ್ರಯದಮೂಲಕ ಹೇಳಬೇಕು. ಗಂಗಾತೀರಗಳಿಗೆ ಸಂಯೋಗಸಂಬಂಧವಿರುತ್ತದೆ. ಜಾತಿಪದಾರ್ಥವಾದಿಮತದಲ್ಲಿ ಹೀಗೆ ಹೇಳಬೇಕು. ವ್ಯಕ್ತಿ ಪಕ್ಷದಲ್ಲಿ ಮುಖ್ಯಾರ್ಥಲಕ್ಷ್ಯಾರ್ಥಗಳಾದ ಪ್ರವಾಹತೀರಗಳಿಗೆ ಸಾಕ್ಷಾತ್ ಸಂಯೋಗಸಂಬಂಧವೇ ಇರುತ್ತದೆ. ಹಾಗೆ ಇಲ್ಲಿ ಜ್ಞಾಧಾತುವಿನ ಶಕ್ಯಾರ್ಥವಾದ ಜ್ಞಾನತ್ವಕ್ಕೂ ಲಕ್ಷ್ಯಾರ್ಥವಾದ ವಿಶೇಷಾನುಭವತ್ವಕ್ಕೂ ಸಾಮಾನಾಧಿಕರಣ್ಯ ಸಂಬಂಧವಿರುತ್ತದೆ. ಹೀಗೆಯೇ ಜ್ಞಾನತ್ವವು ವ್ಯಾಪಕವೂ, ವಿಶೇಷಾನುಭವತ್ವವು ವ್ಯಾಪ್ಯವೂ ಆದುದರಿಂದ ವ್ಯಾಪ್ಯವ್ಯಾಪಕಭಾವಸಂಬಂಧವೂ ಇರುತ್ತದೆ. ಆದರೆ ಗಂಗಾಪದಶಕ್ಯಾರ್ಥದಲ್ಲಿ ಘೋಷಾಧಿಕರಣತ್ವವಿಲ್ಲದುದರಿಂದ ಹೇಗೆ ಅನುಪಪತ್ತಿ ಇದೆಯೋ ಅದರಂತೆ ಇಲ್ಲಿ ಯಾವ ಅನುಪಪತ್ತಿಯೂ ಇಲ್ಲದಿರುವುದರಿಂದ ಲಕ್ಷಣಾ ಹೇಳುವುದೂ ಕೂಡುವುದಿಲ್ಲ.

ನನ್ವನುಭವಾಭಾವೇ ಪ್ರತ್ಯಕ್ಷಸ್ಯ ಪ್ರಮೇಯಲಾಭಸ್ತೇನೈವ ತಸ್ಯಾರ್ಥವತ್ತಾ ಸಿಧ್ಯತಿ । ಸತ್ಯಮ್ । ಪ್ರಯೋಜನಮೇತನ್ನಾನುಪಪತ್ತಿಃ । ಅನ್ಯೋನ್ಯಾಶ್ರಯಾತ್ । ನನ್ವಹಮಜ್ಞ ಇತ್ಯತ್ರ ನಞ್ ಆತ್ಮನಿ ಜ್ಞಾನಮಾತ್ರಾಭಾವಂ ನ ಬ್ರೂತೇ । ಜ್ಞಾನವತಿ ತಸ್ಮಿನ್ ತದಾಭಾವಾತ್ । ನಾಪ್ಯನುಭವಾಭಾವಮ್ । ಜ್ಞಾನೋಕ್ತೇಸ್ತದನಭಿಧಾಯಕತ್ವಾತ್ । ನೈರರ್ಥಕ್ಯಂ ಚ ನ ಯುಕ್ತಮಿತ್ಯನಯೈವಾನುಪಪತ್ತ್ಯಾ ಲಕ್ಷಣೇತಿ ಚೇತ್— ಉಕ್ತಲಕ್ಷಣೈವಾವಿದ್ಯಾತದರ್ಥೋಽಸ್ತು । ಸಂದೇಹ ಇತಿ ಚೇನ್ನ । ಅಸಮತ್ವಾತ್ ಕೋಟಿದ್ವಯಸ್ಯ । ಅನ್ಯತ್ರ ಹಿ ಪ್ರತಿಯೋಗಿನಿವೃತ್ತಿರ್ನಞರ್ಥಃ । ಅತ್ರ ತು ಪ್ರತಿಯೋಗಿವ್ಯಾಪ್ಯನಿವೃತ್ತಿರಿತಿ । ಜಾನಾತಿಸಮಭಿವ್ಯಾಹೃತಸ್ಯ ನಞಃ ಕ್ವಚಿದುಕ್ತಲಕ್ಷಣಾವಿದ್ಯಾವಿಷಯತ್ವಸಿದ್ಧಿಮಂತರೇಣ ನ ಸಂದೇಹ ಇತ್ಯವಶ್ಯಂಭಾವೇನ ಸೈವ ಜಾನಾತಿಸಮಭಿವ್ಯಾಹೃತಸ್ಯ ನಞಃ ಸರ್ವತ್ರ ತದ್ವಿಷಯತ್ವಮವಗಮಯತಿ ವಿಲುಂಪತಿ ಜ್ಞಾನಾಭಾವಕೋಟ್ಯಂತರಮಿತಿ ಕ್ವ ಸಂದೇಹಾವಕಾಶಃ । ತದೇವಂ ಲಕ್ಷಣಾಹೇತ್ವಭಾವೇಽನುಭವಾಭಾವೋಽಸ್ಯಾತ್ಮನಿ ನ ಪ್ರತ್ಯಕ್ಷೇಣ ಗೃಹ್ಯತೇ ಇತಿ ಪರಿಶೇಷಾದುಕ್ತಲಕ್ಷಣಾವಿದ್ಯೈವಾಜ್ಞ ಇತಿ ಪ್ರತಿಭಾಸಸ್ಯವಿಷಯ ಇತಿ ಸ್ಥಿತಮ್ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ನನು'—ಇತಿ. ಲಕ್ಷಣಾ ಅಂಗೀಕರಿಸದಿದ್ದರೆ 'ಅಹಮಜ್ಞಃ' ಎಂಬ ಪ್ರತ್ಯಕ್ಷ ದಿಂದ ಜ್ಞಾಪಿಸಲ್ಪಡುವುದು ಯಾವುದು ? ಜ್ಞಾನಸಾಮಾನ್ಯಾಭಾವವೆನ್ನುವುದಾದರೆ ಅದು ಅಸಂಭವನೆಂದು ಪ್ರಸಿದ್ಧವಾಗಿದೆ. ಪ್ರತ್ಯಕ್ಷಪ್ರಮಾಣಸಾಫಲ್ಯಕ್ಕೋಸ್ಕರ ಯಾವುದಾದ ರೊಂದು ಪ್ರಮೇಯವನ್ನು ಕಲ್ಪಿಸಲೇ ಬೇಕು. ಲಕ್ಷಣೆಯನ್ನನುಸರಿಸಿದರೆ ಅದನ್ನು ಅನುಭಾವವಿಶೇಷಾಭಾವರೂಪವೆಂದು ಹೇಳಬಹುದು. ಇದರಿಂದ ಲಕ್ಷಣೆಯನ್ನು ಅವಶ್ಯ ವಾಗಿ ಅಂಗೀಕರಿಸಬೇಕೆಂದು ವ್ಯಕ್ತವಾಗುತ್ತದೆ. "ಅನ್ಯೋನ್ಯ"—ಇತಿ. ಪ್ರಯೋಜನ ನಿಮಿತ್ತವಾಗಿ ಲಕ್ಷಣಾಂಗೀಕಾರ, ಲಕ್ಷಣಾ ಮೂಲಕವಾಗಿ ಸಾಫಲ್ಯ, ಹೀಗೆ ಅನ್ಯೋ ನ್ಯಾಶ್ರಯ ದೋಷ ಬರುತ್ತದೆ. "ನನ್ವಹ"—ಇತಿ. ಇದರಿಂದ ಲಕ್ಷಣೆಗೆ ಕಾರಣ ವಾದ ಅನುಪಪತ್ತಿಯನ್ನು ಪ್ರಕಾರಾಂತರದಿಂದ ತೋರಿಸುತ್ತಾನೆ. ಅಜ್ಞಃ ಎಂಬಲ್ಲಿ ನ ಞ್ ಇದೆ. ಇದಕ್ಕೆ ಅಭಾವ ಅರ್ಥ. ಇಲ್ಲಿ ಜ್ಞಾನ ಸಾಮಾನ್ಯದ ಅಭಾವವನ್ನು ಹೇಳಲು ಸಾಧ್ಯವಿಲ್ಲ. 'ಅಹಮಜ್ಞ' ಎಂಬ ಪ್ರತ್ಯಕ್ಷಜ್ಞಾನವೇ ಇರುವುದರಿಂದ ಜ್ಞಾನ ಸಾಮಾನ್ಯಾಭಾವ ಇರುವುದಿಲ್ಲ. ಜ್ಞಾನವಿಶೇಷಾನುಭವದ ಅಭಾವವನ್ನು ಹೇಳುವುದೂ ಸಾಧ್ಯವಿಲ್ಲ. ಏಕೆಂದರೆ ಜ್ಞಾ ಧಾತುವಿಗೆ ಜ್ಞಾನವಿಶೇಷಾರ್ಥ ಬೋಧಕತ್ವವಿಲ್ಲ. ಜನ ನಿಬಿಡವಾಗಿರುವ ಗ್ರಾಮದಲ್ಲಿ ದೇವದತ್ತನಿಲ್ಲವೆಂಬ ಅಭಿಪ್ರಾಯದಿಂದ ಮನುಷ್ಯರಿಲ್ಲದ ಗ್ರಾಮವೆಂದು ಯಾರೂ ಹೇಳುವುದಿಲ್ಲ. ಅನುನ್ಮತ್ತನು ಪ್ರಯೋಗಿಸಿರುವುದರಿಂದ "ಅಹ ಮಜ್ಞಃ' ಎಂಬ ವಾಕ್ಯವು ನಿರರ್ಥಕವೆಂದು ಹೇಳಲೂ ಸಾಧ್ಯವಿಲ್ಲ. ಹಾಗಾದರೆ ಯಾವ (ವಿಷಯವನ್ನು ತೋರಿಸುವ) ಜ್ಞಾನವು ಅಲ್ಲಿ ವಿವಕ್ಷಿತವಾಗಿದೆ ? ಅಂದರೆ ಇದನ್ನು ತಿಳಿಸು ವುದಕ್ಕೋಸ್ಕರವೇ ಲಕ್ಷಣೆಯನ್ನು ಅಂಗೀಕರಿಸಬೇಕೆಂದು ತಿಳಿಯಬೇಕು.

'ಉಕ್ತಲಕ್ಷ'—ಇತಿ. ಲಕ್ಷಣಾಬೀಜಭೂತವಾದ ಅನುಪಪತ್ತಿಯನ್ನು ಹೇಳು ವವನು ಇಂತಹ ಜ್ಞಾನವೆಂದು ಹೇಳಲು ಶಕ್ಯವಿಲ್ಲವೆಂದು ಹೇಳುವುದರಿಂದ ಅದು ಅನಿ ರ್ವಚನೀಯವೆಂದು ಅವನ ಅಭಿಪ್ರಾಯವಾಗುವುದರಿಂದ ಅದು ಅವಿದ್ಯೆಯೇ ಆಗುತ್ತದೆ. 'ಸಂದೇಹ'—ಇತಿ. ಅನುಪಪತ್ತಿಯೇ ಅವಿದ್ಯೆಯಾಗಲಿ. ಅದು ಅನಿರ್ವಚನೀಯ ರೂಪವುಳ್ಳದ್ದಾಗಿ ಭಾವರೂಪವೇ ಆಗಿರಲಿ. (ಅದೊಂದು ಪದಾರ್ಥಾಂತರವೆಂದಾಗಲಿ.) ಆದರೂ ಅದೇ ನಞರ್ಥವೆಂದು ನಿಶ್ಚಯಿಸುವುದು ಹೇಗೆ? ನ ಞ್ ಗೆ ಅಭಾವಾರ್ಥವೂ ಇರು ವುದರಿಂದ ಸಂದೇಹವುಂಟಾಗುವುದಿಲ್ಲವೇ? ಅಂದರೆ ಕೋಟಿದ್ವಯ ಸಾಮ್ಯವಿಲ್ಲವಾಗದು ದರಿಂದ ಸಂದೇಹವೆಂದು ಹೇಳಲು ಸಾಧ್ಯವಿಲ್ಲವೆಂದು ತಿಳಿಸುತ್ತಾನೆ. 'ಅಸಮತ್ವಾ' ಇತಿ. ಕೋಟಿದ್ವಯಃ ಸಾಮ್ಯವಿರುವಾಗ ಮಾತ್ರ ಸಂದೇಹವುಂಟಾಗುತ್ತದೆ. ಒಂದು ವಿಷಯಕ್ಕೆ ಪ್ರಾಬಲ್ಯ ಇನ್ನೊಂದು ವಿಷಯಕ್ಕೆ ದೌರ್ಬಲ್ಯವಿರುವಾಗ ಸಂಶಯ ಬರುವು ದಿಲ್ಲ.

'ಅಘಟಂ ಭೂತಲಂ' ಎಂಬಲ್ಲಿ ಅಭಾವಾರ್ಥಕವಾದ ನಞನ್ನು ಹೇಳಿರುವುದರಿಂದ ಅಲ್ಲಿ ಅಭಾವಕ್ಕೆ ಪ್ರತಿಯೋಗಿಯಾದ ಘಟದ ನಿವೃತ್ತಿ ಬೋಧಿತವಾಗುತ್ತದೆ. 'ಅಹಮಜ್ಞ' ಎಂಬಲ್ಲಿ ಪ್ರತಿಯೋಗಿಭೂತವಾದ ಜ್ಞಾನದ ನಿವೃತ್ತಿ ಸಂಭವಿಸುವುದಿಲ್ಲ. ಜ್ಞಾನವ್ಯಾಪ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ಅನುಭವ ವಿಶೇಷದ ವ್ಯಾವೃತ್ತಿ ಬೋಧಿತವಾಗುವುದರಿಂದ ಲಕ್ಷಣಾಶ್ರಯಣ ದಿಂದ ಅಭಾವಾರ್ಥಕಕೋಟಿ ದುರ್ಬಲವಾಗುತ್ತದೆ. ಅವಿದ್ಯಾರ್ಥಕಕೋಟಿಯೇ ಪ್ರಬಲವಾಗುತ್ತದೆ. 'ಅಹಮಜ್ಞಃ' ಎಂಬಲ್ಲಿ ನಞ್ ಜಾನಾತಿಸಮಭಿವ್ಯಾಹೃತ (ಜ್ಞಾ ದೊಡನೆ ಹೇಳಿದ) ವಾದುದರಿಂದ ಶೀಘ್ರವಾಗಿ ಅದಕ್ಕೆ ಅವಿದ್ಯಾರ್ಥವು ಮನಸ್ಸಿಗೆ ಹೊಳೆಯುತ್ತದೆ. ಅಭಾವಾರ್ಥವು ಬೇಗನೆ ಬುದ್ಧಿಸ್ಥವಾಗುವುದಿಲ್ಲ. ಆದುದರಿಂದ ಇಲ್ಲಿ ಅದು ಲುಪ್ತವಾದಂತೇ ತೋರುತ್ತದೆ. 'ಅನುಭವಾ'—ಇತಿ. ಅನುಪಪತ್ತಿ ಯಿಲ್ಲದೆ ಲಕ್ಷಣಾ ಬರುವುದಿಲ್ಲ. ಅನುಭವಾಭಾವವು ಆತ್ಮನಲ್ಲಿ ಪ್ರತ್ಯಕ್ಷಗೃಹೀತವಾಗಿ ದ್ದರೆ ಬೀಜವಿರುವುದರಿಂದ ಅಲ್ಲಿ ಲಕ್ಷಣಾ ಹೇಳಬಹುದಿತ್ತು. ಇದರಿಂದ "ಅಹಮಜ್ಞಃ" ಎಂಬಲ್ಲಿ ಪ್ರತ್ಯಕ್ಷಕ್ಕೆ ಅವಿದ್ಯೆಯೇ ವಿಷಯವೆಂದು ನಿರ್ಣೀತವಾಗುತ್ತದೆ.

ಅಸ್ತು ವಾ ಜ್ಞಾನಾಭಾವಪ್ರತಿಭಾಸಃ। ಅಯಮಭಾವಶ್ಚ ಪ್ರತಿಯೋಗೀ ಯತ್ರನಿಷಿಧ್ಯತೇ ನ ತತಸ್ತತ್ತ್ವಾಂತರಮನ್ಯದಧಿಕರಣಭಾವಾತ್ । ಮಾ ಭೂದನ್ಯಭಾವತ್ವ ಮನ್ಯಾಭಾವತ್ವಂ ತು ಸ್ಯಾತ್ । ನನು ತದಪಿ ವಿರುದ್ಧಮ್। ಸತ್ಯಂ ಸತಿ ಭೇದೇ। ಸ ಚ ಪ್ರಮಾಣಾತ್। ತಚ್ಚ ಸತಿ ಪ್ರತಿಯೋಗ್ಯಭಾವಾಧಿಕರಣ ತಸ್ತತ್ತ್ವಾಂತರೇ। ನನು ಘಟವತಿ ಭೂತಲೇ ಘಟಾಭಾವಮಿತಿವ್ಯವಹೃತೀ ಸ್ಯಾತಾಮಿತಿ ಚೇತ್ — ಮಾ ಭೂತಾಮತೇ ಪ್ರತಿಯೋಗಿನಾ ಸಹಾನುಭೂಯಮಾನೇಽಧಿಕರಣೇ। ಪ್ರತಿ ಯೋಗಿ ಸ್ಮರಣೇ ಸತ್ಯನುಭೂಯಮಾನೇಽಧಿಕರಣೇ ತು ಸ್ಯಾತಾಮ್ । ಏವ ಮಪ್ಯುಪಪತ್ತೌ ನ ತತ್ತ್ವಾಂತರ ವಿಷಯತ್ವಂ ಕಲ್ಪ್ಯಮ್ । ಕಾನುಪಪತ್ತಿರಿತಿ ಚೇದ್ಬಾಧಕಾಭಾವಸ್ತಾವದುಕ್ತ ಏವ। ಬಾಧಕಂ ತು ಕಲ್ಪನಾ ಗೌರವಮೇವ। ತಥಾಹಿ—ತತ್ತ್ವಾಂತರತ್ವಂ ತಾವದೇಕಂ ಕಲ್ಪ್ಯಮ್ । ತಸ್ಯಾಪರೋಕ್ಷತ್ವಾ ಯೇಂದ್ರಿಯಸಂನಿಕರ್ಷಃ ಕಲ್ಪ್ಯಃ। ಸ ಚ ಸಂಯೋಗಾದಿರ್ನಭವತೀತಿ ಸಂಯುಕ್ತ ವಿಶೇಷಣತ್ವಾದಿಃ ಕಲ್ಪ್ಯಃ। ಸ ಚ ಇತ್ಯತೋ ವರಮುಕ್ತಲಕ್ಷಣಸ್ಯಾ ಧಿಕರಣಸ್ಯ ವ್ಯವಹಾರ ವಿಷಯೇಂಗೀಕಾರಃ। ಸತಿ ಚೈವಂ ಜ್ಞಾನಾಭಾವೇನಾಪಿ ಪ್ರತಿಯೋಗಿಸ್ಮೃತೌ ಸತ್ಯಾಮನುಭೂಯಮಾನಮಧಿಕರಣಂ ಜ್ಞಾತ್ರೈವ। ಸ ಚ ನ ಕೇವಲಮಂತಃಕರಣಮ್। ಜಡತ್ವಾತ್। ನಾಪಿ ಕೇವಲಃ ಆತ್ಮೈವ। ಅಪರಿಣಾಮಿತ್ವಾದಗುಣತ್ವಾಚ್ಚ। ಅತ ಉಭಯೋರಭೇದಾಧ್ಯಾಸಃ। ಆತ್ಮಾ ಧ್ಯಾಸಶ್ಚೋಕ್ತಲಕ್ಷಣಾ ವಿದ್ಯಾತ್ಮೇತ್ಯಾಯಾತಮವಿದ್ಯಾಯಾಮೇವಾಹಮಜ್ಞಃ ಇತಿ ಪ್ರತಿಭಾಸಃ ಪ್ರಮಾಣಮಿತಿ ॥

ಇನ್ನೊಂದು ರೀತಿಯಿಂದ ಅವಿದ್ಯೆಯನ್ನು ಸಾಧಿಸುತ್ತಾನೆ. 'ಅಸ್ತು'—ಇತಿ. 'ಅಹ ಮಜ್ಞಃ' ಎಂಬಲ್ಲಿ ಜ್ಞಾನಾಭಾವವೇ ತೋರಲಿ. ಆದರೆ ಈ ಅಭಾವವು ಎಲ್ಲಿ ಪ್ರತಿ ಯೋಗಿ ಇಲ್ಲವೆಂದು ಹೇಳುತ್ತೇವೋ ಅದಕ್ಕಿಂತ (ನತತಃ) ಬೇರೆಯಾವ ಒಂದು ತತ್ತ್ವ ವಲ್ಲ. ಅಧಿಕರಣ ಸ್ವರೂಪವೇ ಈ ಅಭಾವವಾಗುತ್ತದೆಂದು ಹಿಂದೆ ಈ ವಿಷಯ ಹೇಳಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರ ಮೇಲೆ ಆಕ್ಷೇಪಿಸುತ್ತಾನೆ. 'ಮಾ ಭೂತ್'—ಇತಿ. ಘಟಾದ್ಯಭಾವಗಳು ಭೂತಲಾದಿಗಳಿಗಿಂತ ಬೇರೆಯಾದ ಭಾವವೆನ್ನುವುದು ಬೇಡ. ಅಭಾವವು ಅಧಿಕರಣಕ್ಕಿಂತ ಬೇರೆಯಾಗಲಿ. ಆಗ 'ಅಹಮಜ್ಞ' ಎಂಬಲ್ಲಿ ನಞರ್ಥವು ಅಧಿಕರಣಕ್ಕಿಂತ ಬೇರೆಯಾದ ಅಭಾವವನ್ನೇ ವಿಷಯೀಕರಿಸುತ್ತದೆ ಎಂದು ಏಕೆ ಹೇಳಬಾರದು. "ನನು"—ಇತಿ. 'ಅಹಮಜ್ಞಃ' ಎಂಬ ಪ್ರತ್ಯಕ್ಷವು ಭಾವರೂಪವಾದ ಅಜ್ಞಾನವಿಷಯಕವೆಂದು ಹೇಳುವವರ ಮತದಲ್ಲಿ ಅಧಿಕರಣಕ್ಕಿಂತ ಬೇರೆಯಾದದ್ದು ಅಭಾವವೆಂದರೆ ವಿರುದ್ಧವಾಗುವುದಿಲ್ಲವೇ ? ಅಂದರೆ ಆ ಪ್ರತ್ಯಕ್ಷವು ಅಭಾವವನ್ನೇ ವಿಷಯೀಕರಿಸುತ್ತದೆಂದು ಅನ್ಯಥಾ ಉಪಪತ್ತಿ ಕಲ್ಪಿಸುವುದರಿಂದ ದೋಷವಿಲ್ಲವೆಂದು ಶಂಕಿಸಿದರೆ ಅದಕ್ಕೆ ಪರಿಹಾರ ತೋರಿಸುತ್ತಾನೆ.

'ಸತ್ಯಂ'—ಇತಿ. ಅಧಿಕರಣಕ್ಕಿಂತ ಅಭಾವವು ಬೇರೆಯೆಂದು ಸಿದ್ಧವಾದ ಮೇಲೆ ತದ್ವಿಷಯಕವಾಗಿ 'ಅಹಮಜ್ಞಃ' ಎಂಬ ಪ್ರತ್ಯಕ್ಷ ಬರಬೇಕು. ಆದರೆ ಅದು ಅಧಿಕರಣಕ್ಕಿಂತ ಅನ್ಯವೆಂದು ಸಿದ್ಧವಾಗಿಯೇ ಇಲ್ಲ. ಅಭಾವವಿಷಯಕವಾದ ಪ್ರತ್ಯಕ್ಷವು ಅಭಾವವಿರುವವಿಷಯದಲ್ಲಿ ಪ್ರಮಾಣವಾಗುವುದಲ್ಲದೆ ಅಭಾವವು ಅಧಿಕರಣಕ್ಕಿಂತ ಅನ್ಯವೆಂಬುದರಲ್ಲಿ ಪ್ರಮಾಣವಾಗಲಾರದು. ಇದರಿಂದ ಅಭಾವವು ಅನ್ಯವೆಂದು ಹೇಗೆ ಸಿದ್ಧಿಸುವುದು? ಭೇದಸಿದ್ಧವಾದಮೇಲೆಪ್ರತ್ಯಕ್ಷಪ್ರಮಾಣಕ್ಕೆ ಭಿನ್ನಾಭಾವವಿಷಯಕತ್ವವೂ, ಪ್ರತ್ಯಕ್ಷವು ಭಿನ್ನಾಭಾವವನ್ನು ವಿಷಯೀಕರಿಸಿದಮೇಲೆ ಅಭಾವವು ಭಿನ್ನವೆಂದೂ ಸಿದ್ಧವಾಗುವುದರಿಂದ ಅನ್ಯೋನ್ಯಾಶ್ರಯದೋಷ ಬರುತ್ತದೆ. ಈ ದೋಷದಿಂದ ಅಭಾವವು ತತ್ತ್ವಾಂತರವೆಂದು ಸಿದ್ಧಿಯಾಗಲಾರದು. ಅಭಾವಮಿತಿಯೆಂದರೆ ಅಭಾವವ್ಯವಹಾರ. ಅಭಾವವು ಅಧಿಕರಣಸ್ವರೂಪವೆಂದರೆ ಘಟವಿರುವಾಗಲೂ ಘಟಾಭಾವವ್ಯವಹಾರವೂ, ಪ್ರತಿಯೋಗ್ಯಧಿಕರಣ ವಿಷಯಕತ್ವವೂ ಬರಲಿಯೆಂದರೆ ಅವೆರಡೂ ಬರುವುದಿಲ್ಲವೆಂದು ತಿಳಿಸುತ್ತಾನೆ. "ಮಾಭೂತಾಂ"—ಇತಿ. ವಿಷಯವಿರುವಾಗ ಅದರಜ್ಞಾನವು ಬಂದೇ ಬರಬೇಕೆಂಬ ನಿಯಮವಿರುವುದಿಲ್ಲ. ಘಟವಿರುವಾಗ ಅಲ್ಲಿ ಆ ಪ್ರತಿಯೋಗಿಸಂಸರ್ಗವೇ ಅರೀತಿವ್ಯವಹಾರಬರಲು ಪ್ರತಿಬಂಧಕವಾಗುತ್ತದೆಂದು ತಾತ್ಪರ್ಯ. ಇದರಿಂದ ಪ್ರತಿಯೋಗಿಸ್ಮರಣಕಾಲಿಕಾಧಿಕರಣಸ್ವರೂಪವೇ ಅಭಾವವೆಂದು ವ್ಯಕ್ತವಾಗುತ್ತದೆ. ಅದು ಅತಿರಿಕ್ತವಾದ ಪದಾರ್ಥವಲ್ಲ. ಅಲ್ಲದೆ ಪ್ರತಿಯೋಗಿಯಿಂದ ಕೂಡಿದ ಅಧಿಕರಣವನ್ನೂ ಅದು ವಿಷಯೀಕರಿಸುವುದಿಲ್ಲ. ಇಲ್ಲಿ ಪಾಠವ್ಯತ್ಯಾಸವಿದೆಯೆಂದು ವಿದ್ವಾಂಸರ ಮತ. 'ಏವಂ'—ಇತಿ. ಅಭಾವವ್ಯವಹಾರವೂ (ಪ್ರಮಿತಿ) ತನ್ಮೂಲಕವಾದ 'ನಾಸ್ತಿ' ಎಂಬ ವ್ಯವಹಾರವೂ ಕೂಡುತ್ತಿರುವಾಗ ಅತಿರಿಕ್ತವಾದಅಭಾವವನ್ನು ಕಲ್ಪಿಸಿದರೆ ಬಾಧಕವೇನು? ಅಂದರೆ ಹಾಗೆ ತತ್ತ್ವಾಂತರವೆಂದು ಕಲ್ಪಿಸುವುದೇ ಗೌರವ ಮೊದಲು. ಆಮೇಲೆ ಅದು ಪ್ರತ್ಯಕ್ಷವೆನ್ನಬೇಕಾದರೆ ಇಂದ್ರಿಯಸಂನಿಕರ್ಷವನ್ನು ಕಲ್ಪಿಸಬೇಕು. 'ಘಟಾಭಾವವದ್ಭೂತಲಂ' ಎಂಬಲ್ಲಿ ಚಕ್ಷುಃ ಸಂಯುಕ್ತಭೂತಲದಲ್ಲಿ ಘಟಾಭಾವವು ವಿಶೇಷಣವಾಗಿರುತ್ತದೆ. 'ಭೂತಲೇ ಘಟಾಭಾವಃ' ಎಂಬಲ್ಲಿ ಚಕ್ಷುಃಸಂಯುಕ್ತಭೂತಲದಲ್ಲಿ ಘಟಾಭಾವವಿಶೇಷ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿರುತ್ತದೆ. 'ಖತ್ವಾಭಾವವಾನ್ ಕಕಾರಃ' ಎಂಬಲ್ಲಿ ಸಮವೇತ ವಿಶೇಷಣತ್ವಸಂನಿಕರ್ಷವಾಗುತ್ತದೆ. ಶ್ರೋತ್ರ ಸಮವೇತಕದಲ್ಲಿ ಖತ್ವಾಭಾವವಿಶೇಷಣವಾಗುತ್ತದೆ. ಹೀಗೆಯೇ ಸಂಬಂಧವನ್ನು ಕಲ್ಪಿಸಬೇಕಾಗುತ್ತದೆ.

'ಉಕ್ತಲಕ್ಷಣಸ್ಯ' — ಇತಿ. ಪ್ರತಿಯೋಗಿಸ್ಮರಣಕಾಲಿಕಸ್ವರೂಪವಿಶಿಷ್ಟವಾದುದನ್ನು ಅವ್ಯವಹಾರದಲ್ಲಿ ಅಂಗೀಕರಿಸುತ್ತೇವೆಯೆಂದರ್ಥ. ಇದರಿಂದ ಅಭಾವಾನುಭವವೆಂದರೆ ಪ್ರತಿಯೋಗಿಸ್ಮರಣಸಹಕೃತವಾದ ಅಧಿಕರಣದ ಅನುಭವವೆಂದು ತಿಳಿಯಬೇಕು. 'ಅಹಮಜ್ಞಃ' ಎಂಬ ಅನುಭವಕಾಲದಲ್ಲಿ ಅವಿದ್ಯಮಾನ (ಇಲ್ಲದಿರುವ) ಜ್ಞಾನವಿಶೇಷ ಸ್ಮರಣಪೂರ್ವಕವಾಗಿ ಜ್ಞಾತೃ ಅನುಭವವಿಷಯನಾಗುತ್ತಾನೆ. (ಜ್ಞಾತೈವ-ಇತಿ) ಜ್ಞಾತೃ ಎಂದರೆ ಇಲ್ಲಿ ವಿಷಯಾಕಾರ ಪರಿಣಾಮಾಶ್ರಯನಾಗುತ್ತಾನೆ. ಅಂತಃಕರಣವು ಜಡವಾದುದರಿಂದ ಕೇವಲವಾದ ಅಂತಃಕರಣಕ್ಕೆ ಈ ರೀತಿಯಾದ ಪರಿಣಾಮವು ಸಂಭವಿಸುವುದಿಲ್ಲ. ಹಾಗೆಯೇ ಅಪರಿಣಾಮಿಯಾದುದರಿಂದ ಕೇವಲ ಆತ್ಮನ ಪರಿಣಾಮವೆಂದು ಹೇಳಲೂ ಶಕ್ಯವಿಲ್ಲ. ಧರ್ಮಾಂತರದಿಂದ ಆವಿರ್ಭಾವವೇ ಪರಿಣಾಮ. ನಿರ್ಧರ್ಮಕವಾದ ಆತ್ಮನಿಗೆ ಈ ರೀತಿ ಪರಿಣಾಮಸಂಭವಿಸುವುದಿಲ್ಲ. ಆತ್ಮಾಂತಃಕರಣಗಳಿಗೆ ಅಭೇದಾಧ್ಯಾಸವಿರುವಾಗ ಅಧ್ಯಸ್ತಾತ್ಮತಾದಾತ್ಮ್ಯವಿರುವ ಅಂತಃಕರಣದ ಪರಿಣಾಮವೆಂದು ಹೇಳಬೇಕು. ಈ ಅಧ್ಯಾಸವು ಅವಿದ್ಯಾಸ್ವರೂಪವೇ ಆದುದರಿಂದ 'ಅಹಮಜ್ಞಃ' ಎಂಬ ಪ್ರತ್ಯಕ್ಷದಿಂದ ಈ ಅವಿದ್ಯೆಯು ಸಿದ್ಧವಾಗುತ್ತದೆ.

ಅನುಮಾನಂ ಚ — ವಿವಾದಪದಂ ಪ್ರಮಾಣಜ್ಞಾನಂ ಸ್ವಪ್ರಾಗಭಾವವ್ಯತಿರಿಕ್ತಸ್ವವಿಷಯಾವರಣ ಸ್ವನಿವರ್ತ್ಯಸ್ವದೇಶಗತವಸ್ತ್ವಂತರಪೂರ್ವಕಂ ಅಪ್ರಕಾಶಿತಾರ್ಥಪ್ರಕಾಶಕತ್ವಾತ್ । ಅಂಧಕಾರೇ ಪ್ರಥಮೋತ್ಪನ್ನಪ್ರದೀಪಪ್ರಭಾವತ್ ಇತಿ । ವಸ್ತುಪೂರ್ವಕಮಿತ್ಯುಕ್ತೇ ಆತ್ಮವಸ್ತುಪೂರ್ವಕತ್ವೇನಾರ್ಥಾಂತರತಾ । ತದಂತರಂ ವಸ್ತ್ವಂತರೇತಿ । ತಥಾಪಿ ವಿಷಯಭೂತೇ ವಸ್ತ್ವಂತರೇऽರ್ಥಾಂತರತಾ । ತದರ್ಥಂ ಸ್ವದೇಶಗತೇತಿ । ಅದೃಷ್ಟಾದಿಕಂ ಪ್ರತ್ಯಾದೇಷ್ಟುಂ ಸ್ವನಿವರ್ತ್ಯೇತಿ । ಉತ್ತರಜ್ಞಾನನಿವರ್ತ್ಯಂ ಪ್ರಥಮಜ್ಞಾನಂ ನಿವರ್ತಯಿತುಂ ಸ್ವವಿಷಯಾವರಣೇತಿ । ಪ್ರಾಗಭಾವಂ ಪ್ರತಿಕ್ಷೇಪ್ತುಂ ಸ್ವಪ್ರಾಗಭಾವವ್ಯತಿರಿಕ್ತೇತಿ । ಸ್ವಪ್ರಾಗಭಾವವ್ಯತಿರಿಕ್ತಪೂರ್ವಕಮಿತ್ಯುಕ್ತೇ ವಿಷಯೇಣಾರ್ಥಾಂತರತಾ । ತದರ್ಥಂ ವಿಷಯಾವರಣೇತಿ । ತಾದೃಶಮಂಧಕಾರಂ ವ್ಯಾವರ್ತಯಿತುಂ ಸ್ವನಿವರ್ತ್ಯೇತಿ । ವಿಷಯಗತಾಮಜ್ಞಾತತಾಂ ನಿರಾಕರ್ತುಂ ಸ್ವದೇಶಗತೇತಿ । ಮಿಥ್ಯಾಜ್ಞಾನಮಪೋಹಿತುಂ ವಸ್ತ್ವಂತರೇತಿ । ಧಾರಾವಾಹಿಕವಿಜ್ಞಾನೇ ವ್ಯಭಿಚಾರಂ ವ್ಯಾವರ್ತಯಿತುಂ ಅಪ್ರಕಾಶಿತೇತಿ । ಮಧ್ಯವರ್ತಿಪ್ರದೀಪಪ್ರಭಾಯಾಂ ಸಾಧ್ಯಸಾಧನವೈಧುರ್ಯಪ್ರತಿರೋಧಾಯ ಪ್ರಥಮೋತ್ಪನ್ನವಿಶೇಷಣಮ್ । ಸೌರಾಲೋಕವ್ಯಾಪ್ತದೇಶಸ್ಥಪ್ರದೀಪಪ್ರಭಾಪ್ರತಿಕ್ಷೇಪಾಂಧಕಾರೇತಿ । ನ ಚ ಜ್ಞಾನಸಾಧಕೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಮಾಣೇ ವ್ಯಭಿಚಾರಃ ಶಂಕನೀಯಃ | ವಿಪ್ರತಿಪನ್ನಂ ಪ್ರತ್ಯಸತ್ವನಿವೃತ್ತಿ ಮಾತ್ರಸ್ಯ ಪ್ರಮಾಣಕೃತ್ಯತ್ವಾತ್ | ತದುಕ್ತಂ ದೇವತಾಧಿಕರಣೇ ಕಲ್ಪತರು ಕಾರೈರನುಮಾನಾದಿಭಿರಸತ್ವನಿವೃತ್ತಿಃ ಕ್ರಿಯತ ಇತಿ ||

ಈ ಅನುಮಾನದಲ್ಲಿ ಪ್ರಮಾಣಜ್ಞಾನವೇ ಪಕ್ಷ. ಇದರಲ್ಲಿ ಅಪ್ರಕಾಶಿತಾರ್ಥ ಪ್ರಕಾಶಕತ್ವಹೇತುವಿನಿಂದ ಸ್ವಪ್ರಾಗಭಾವವ್ಯತಿರಿಕ್ತವಾಗಿಯೂ, ಸ್ವವಿಷಯಾವರಣಭೂತ ವಾಗಿಯೂ, ಸ್ವನಿವರ್ತ್ಯವಾಗಿಯೂ, ಸ್ವದೇಶಗತವಾಗಿರುವ ಯಾವವಸ್ತ್ವಂತರವಿದೆಯೋ ತತ್ಪೂರ್ವಕತ್ವರೂಪ ಸಾಧ್ಯವು ಸಾಧಿಸಲ್ಪಡುತ್ತದೆ. ಸ್ವಶಬ್ದದಿಂದ ಪ್ರಮಾಣಜ್ಞಾನ ವನ್ನು ತೆಗೆದುಕೊಳ್ಳಬೇಕು. ವಸ್ತ್ವಂತರವೆಂದರೆ ಇಲ್ಲಿ ಅವಿದ್ಯೆಯಾಗಿರುತ್ತದೆ. ಈರೀತಿ ಯಾಗಿರುವ ವಸ್ತ್ವಂತರವು ಬೇರೆಯಾವುದೂ ಇರುವುದಿಲ್ಲ. ಅವಿದ್ಯಾಸಿದ್ಧಿಯೇ ಈ ಅನುಮಾನದಫಲ. "ಅಯಂಘಟಃ" ಎಂಬ ಪ್ರಮಾಣಜ್ಞಾನದ ಸ್ಥಲದಲ್ಲಿ ಪ್ರಮಾಣ ಜ್ಞಾನಕ್ಕಿಂತ ಮೊದಲು ಅವಿದ್ಯಾ ಇರುತ್ತದೆ. ಈ ಅವಿದ್ಯೆಯೂ ಕೂಡಾ ಪ್ರಮಾಣ ಜ್ಞಾನಕ್ಕಿಂತ ಬೇರೆಯಾಗಿದೆ (ವಸ್ತ್ವಂತರ). ಪ್ರಮಾಣಜ್ಞಾನಕ್ಕೆ ಆಶ್ರಯವಾದ ಆತ್ಮ ರೂಪದೇಶದಲ್ಲಿ ಇರುವುದರಿಂದ ಸ್ವದೇಶಗತತ್ವ ಬರುತ್ತದೆ. ಪ್ರಮಾಣಜ್ಞಾನದಿಂದ ನಾಶ ವಾಗುವುದರಿಂದ ಸ್ವನಿವರ್ತ್ಯತ್ವ ಬರುತ್ತದೆ. ಪ್ರಮಾಣಜ್ಞಾನಕ್ಕೆ ವಿಷಯವಾದ ಘಟಕ್ಕೆ ಆವರಣವಾಗುವುದರಿಂದ ಸ್ವವಿಷಯಾ ವರಣತ್ವ ಬರುತ್ತದೆ. ಸ್ವಪ್ರಾಗಭಾವವ್ಯತಿರಿಕ್ತವೂ ಆಗಿರುತ್ತದೆ. ಈ ಅವಿದ್ಯೆಯನ್ನು ಪ್ರಮಾಣಜ್ಞಾನ ಪ್ರಾಗಭಾವ ಭಿನ್ನವೆಂದು ಇವರು ಅಂಗೀಕರಿಸಿರುತ್ತಾರೆ. ಈ ರೀತಿಯಾದವಸ್ತುವು ಅವಿದ್ಯೆಗಿಂತ ಬೇರೆಯಾಗಿದ್ದರೆ ಆಗ ಅದರಿಂದ ಈ ಅನುಮಾನವು ಅಪ್ರಯೋಜಕವಾಗುವುದರಿಂದ ಅದರಿಂದ ಅವಿದ್ಯೆಯು ಸಿದ್ಧಿಸಲಾರದು. ಆದರೆ ಹಿಂದೆ ಹೇಳಿದಂತೆ ಅಂತಹ ವಸ್ತ್ವಂತರವೇ ಇಲ್ಲದಿರುವುದರಿಂದ ಯಾವ ದೋಷವೂ ಇಲ್ಲ. ಸಾಧ್ಯಾಂಶದಲ್ಲಿ ಯಾವ ದಳವನ್ನು ಬಿಟ್ಟರೂ ಅದರಿಂದ ಅರ್ಥಾಂತರವು ಸಿದ್ಧಿಸುವುದರಿಂದ ಅವಿದ್ಯಾಸಿದ್ಧಿಯಾಗಲಾರದು. ಆದುದರಿಂದ ಗುರು ವಾದ ಸಾಧ್ಯ ಉಪಾತ್ತವಾಗಿದೆ. ದಳಕೃತ್ಯತೋರಿಸುತ್ತಾನೆ.

'ವಸ್ತು'—ಇತಿ. 'ವಸ್ತುಪೂರ್ವಕಂ' ಎಂದು ಸಾಧ್ಯ ಹೇಳಿದರೆ ಪ್ರಮಾಣಜ್ಞಾನಕ್ಕೆ ಆಶ್ರಯವಾದ ಆತ್ಮರೂಪವಸ್ತುವು ಇರುವುದರಿಂದ ಅವಿದ್ಯೆಗಿಂತ ವಸ್ತ್ವಂತರವು ಸಾಧಿತ ವಾದಂತಾಗುತ್ತದೆ. ವಸ್ತ್ವಂತರಪೂರ್ವಕಂ ಎಂದರೆ ಆತ್ಮನು ಪ್ರಮಾಣಜ್ಞಾನಕ್ಕಿಂತ ಬೇರೆಯಾದ ವಸ್ತು ಆಗದಿರುವುದರಿಂದ ಅತಿವ್ಯಾಪ್ತಿ ಬರುವುದಿಲ್ಲ. ವಸ್ತ್ವಂತರಪದಕ್ಕೆ ತಾನು, ತನಗೆ ಆಶ್ರಯವಾದುದು ಇವುಗಳಿಂದ ಬೇರೆಯಾದುದು ಎಂದರ್ಥ. 'ವಸ್ತ್ವಂತರ ಪೂರ್ವಕಂ[1] ಎಂದು ಮಾತ್ರ ಸಾಧ್ಯ ಹೇಳಿದರೆ ಪ್ರಮಾಣಜ್ಞಾನಕ್ಕೆ ವಿಷಯವಾಗಿರುವ ಘಟಾದಿಗಳು ಅವಿದ್ಯಾಕ್ಕಿಂತ ಬೇರೆಯಾಗಿರುವುದರಿಂದ ಅರ್ಥಾಂತರ ಸಿದ್ಧವಾಗುತ್ತದೆ. ಅದನ್ನು ವ್ಯಾವೃತ್ತಿಪಡಿಸಲು ಸ್ವದೇಶಗತವೆಂಬ ದಳ ಹೇಳಿದೆ. ಸ್ವದೇಶವೆಂದರೆ ಪ್ರಮಾಣ ಜ್ಞಾನಕ್ಕೆ ಆಶ್ರಯನಾದ ಆತ್ಮನು. ಅಲ್ಲಿ ಘಟಾದಿಗಳು ಇರುವುದಿಲ್ಲ. ಅವಿದ್ಯೆಮಾತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿರುತ್ತದೆ. ಆದರೆ ಆತ್ಮನಲ್ಲಿ ಅದೃಷ್ಟಪದವಾಚ್ಯವಾದ ಧರ್ಮಾಧರ್ಮಗಳೂ ಸುಖಾದಿಗಳೂ ಇರುವುದರಿಂದ ಅವುಗಳನ್ನು ವ್ಯಾವೃತ್ತಿಪಡಿಸಲು ಸ್ವನಿವರ್ತ್ಯವಿಶೇಷಣ ಹೇಳಿದೆ. ಧರ್ಮಾದಿಗಳು ಪ್ರಮಾಣಜ್ಞಾನನಿವರ್ತ್ಯಗಳಾಗುವುದಿಲ್ಲ. ಉತ್ತರಜ್ಞಾನದಿಂದ ನಿವರ್ತ್ಯವಾದ ಪೂರ್ವದಲ್ಲಿರುವ ಕ್ಷಣಿಕಜ್ಞಾನವ್ಯಾವೃತ್ತಿಗೋಸ್ಕರ ಸ್ವವಿಷಯಾವರಣವೆಂಬ ವಿಶೇಷಣ ಹೇಳಿದೆ. ಇಷ್ಟು ವಿಶೇಷಣಗಳಿಂದ ಕೂಡಿ ಪೂರ್ವದಲ್ಲಿರುವುದು ಪ್ರಮಾಣಜ್ಞಾನದ ಪ್ರಾಗಭಾವವಾಗುವುದರಿಂದ ಅದನ್ನು ವ್ಯಾವೃತ್ತಿಪಡಿಸಲು ಸ್ವಪ್ರಾಗಭಾವವ್ಯತಿರಿಕ್ತವೆಂಬ ದಳ ಹೇಳಿದೆ. ಹೀಗೆ ಕೊನೆಯವಿಶೇಷಣವನ್ನಾರಂಭಿಸಿ ಅದರ ಪೂರ್ವಪೂರ್ವವಿಶೇಷಣಗಳ ಸಾರ್ಥಕ್ಯ ತೋರಿಸಿರುತ್ತಾನೆ. ಈಗ ಮೊದಲಿನ ವಿಶೇಷಣವನ್ನು ಪ್ರಾರಂಭಿಸಿ ಅದರ ಉತ್ತರೋತ್ತರ ವಿಶೇಷಣದ ಸಾರ್ಥಕ್ಯವನ್ನು ತೋರಿಸುತ್ತಾನೆ.

'ಸ್ವಪ್ರಾಗಭಾವ'—ಇತಿ. 'ಸ್ವಪ್ರಾಗಭಾವವ್ಯತಿರಿಕ್ತಂ' ಎಂದು ಹೇಳಿದರೆ ಘಟಾದಿ ವಿಷಯದಲ್ಲಿ ಅತಿವ್ಯಾಪ್ತಿ. ಅದಕ್ಕೋಸ್ಕರ ಸ್ವವಿಷಯಾವರಣವೆಂಬ ದಳ ಹೇಳಿದೆ. 'ತಾದೃಶಂ'—ಇತಿ. ಇವೆರಡನ್ನು ಮಾತ್ರ ಹೇಳಿದರೆ ಅಂಧಕಾರದಲ್ಲಿ ಅತಿವ್ಯಾಪ್ತಿ ಬರುತ್ತದೆ. ಅದು ಅತಿರಿಕ್ತವಾಗಿ ಆವಾರಕವಾಗಿರುತ್ತದೆ. ಅದನ್ನು ವ್ಯಾವೃತ್ತಿಪಡಿಸಲು ಸ್ವನಿವರ್ತ್ಯವೆಂಬ ದಳ ಹೇಳಿದೆ. ಅಂಧಕಾರವು ಪ್ರಮಾಣಜ್ಞಾನ ವ್ಯಾವರ್ತ್ಯವಾಗುವುದಿಲ್ಲ. ಅದು ಪ್ರಕಾಶದಿಂದ ವ್ಯಾವರ್ತ್ಯವಾಗುತ್ತದೆ. ಘಟಾದಿ ವಿಷಯದಲ್ಲಿರುವ ಅಜ್ಞಾತತತ್ವವು ಪ್ರಮಾಣಜ್ಞಾನದಿಂದ ನಿವೃತ್ತವಾದರೂ ಅದು ಸ್ವದೇಶಗತವಾಗುವುದಿಲ್ಲ. ಇದರ (ಅಜ್ಞಾತತತ್ವ) ವ್ಯಾವೃತ್ತಿಗೆ ಸ್ವದೇಶಗತವೆಂದು ಹೇಳಿದೆ. "ಮಿಥ್ಯಾ"—ಇತಿ. ಶುಕ್ತಿಯಲ್ಲಿ ರಜತಜ್ಞಾನವು ಮಿಥ್ಯಾಜ್ಞಾನ ಇದು ಶುಕ್ತಿತ್ವಪ್ರಕಾರಕಪ್ರಮಾಣಜ್ಞಾನದ ಪ್ರಾಗಭಾವವ್ಯತಿರಿಕ್ತವಾಗಿಯೂ, ತದ್ವಿಷಯೀಭೂತವಾದ ಶುಕ್ತಿಗೆ ಆವರಣವೂ, ಆ ಶುಕ್ತಿಜ್ಞಾನದಿಂದ ನಿವರ್ತ್ಯವೂ, ಆ ಶುಕ್ತಿಜ್ಞಾನಕ್ಕೆ ಆಶ್ರಯವಾದ ಆತ್ಮನಲ್ಲಿರುವುದೂ ಆಗುವುದರಿಂದ ಅದನ್ನು ವ್ಯಾವೃತ್ತಿಪಡಿಸಲು ವಸ್ತ್ವಂತರವೆಂದು ಹೇಳಿದೆ. ಅದೂ ಜ್ಞಾನವಾಗುವುದರಿಂದ ವಸ್ತ್ವಂತರವಾಗುವುದಿಲ್ಲ.

'ಧಾರಾವಾಹಿಕ' —ಇತಿ. ಅಪ್ರಕಾಶಿತಾರ್ಥಪ್ರಕಾಶಕತ್ವಾತ್ ಎಂದು ಹೇತು. ಇಲ್ಲಿ ಅಪ್ರಕಾಶಿತ ಪದವನ್ನು ಹೇಳದಿದ್ದರೆ ಧಾರಾವಾಹಿಕ ಜ್ಞಾನಸ್ಥಲದಲ್ಲಿ ವ್ಯಭಿಚಾರ ಬರುತ್ತದೆ. ಅಲ್ಲಿ ಪ್ರಥಮಜ್ಞಾನವು ಅಜ್ಞಾನಪೂರ್ವಕವಾಗಿರುವುದರಿಂದ ಹಿಂದೆ ಹೇಳಿದ ವಸ್ತ್ವಂತರಪೂರ್ವಕತ್ವ ಸಾಧ್ಯವಿರುತ್ತದೆ. ಪ್ರಥಮಜ್ಞಾನದಿಂದ ಅಜ್ಞಾನನಿವೃತ್ತವಾದಾಗ ವಿಷಯಪ್ರಕಾಶವಾಗುತ್ತದೆ. ಅಲ್ಲಿ ದ್ವಿತೀಯಾದಿಜ್ಞಾನಗಳಿಗೆ ಈ ರೀತಿಯಾದ ವಸ್ತ್ವಂತರಪೂರ್ವಕತ್ವವಿಲ್ಲದಿರುವುದರಿಂದ ಸಾಧ್ಯವಿಲ್ಲದೆ ಅರ್ಥಪ್ರಕಾಶಕತ್ವರೂಪ ಹೇತು ಸಂಭವಿಸುವುದರಿಂದ ವ್ಯಭಿಚಾರ ಬರುತ್ತದೆ. ಅಪ್ರಕಾಶಿತವೆಂಬ ಪದವನ್ನು ಹೇಳಿದರೆ ದ್ವಿತೀಯಾದಿಜ್ಞಾನಗಳಿಗೆ ಪೂರ್ವಜ್ಞಾನಪ್ರಕಾಶಿತಾರ್ಥ ಪ್ರಕಾಶಕತ್ವವಿದ್ದರೂ ಅಪ್ರಕಾಶಿತಾರ್ಥಪ್ರಕಾಶಕತ್ವರೂಪಹೇತುವಿಲ್ಲದಿರುವುದರಿಂದ ದೋಷ ಬರುವುದಿಲ್ಲ. 'ಮಧ್ಯವರ್ತಿ'--ಇತಿ. ವೈಧುರ್ಯವೆಂದರೆ ಅಭಾವ. ಪ್ರತಿರೋಧಃ—ನಿವಾರಣ. ಪ್ರಭೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿಕ್ಷಣದಲ್ಲಿಯೂ ಬೇರೆಯಗುತ್ತದೆ. ಅಂಧಕಾರದಿಂದ ವ್ಯಾಪ್ತವಾದ ದೇಶದಲ್ಲಿ ಪ್ರಥಮ ಕ್ಷಣದಲ್ಲಿ ಉಂಟಾದ ಪ್ರದೀಪಪ್ರಭೆಯು ಇಲ್ಲಿ ದೃಷ್ಟಾಂತವಾಗಿದೆ. ಅಲ್ಲಿ ಆ ರೀತಿಯಾದ ವಸ್ತ್ವಂತರವೆಂದರೆ ಅಂಧಕಾರ. ಅಂಧಕಾರ ಪೂರ್ವಕತ್ವಸಾಧ್ಯವೂ ಅಪ್ರಕಾಶಿತಾರ್ಥ ಪ್ರಕಾಶಕತ್ವ ಹೇತುವೂ ಅಲ್ಲಿ ಇರುತ್ತವೆ. ದ್ವಿತೀಯಾದಿಕ್ಷಣೋತ್ಪನ್ನವಾದ ಪ್ರದೀಪ ಪ್ರಭೆಯು ಮಧ್ಯದಲ್ಲಿರುತ್ತದೆ. ಆದರೆ ಅದು ಆ ರೀತಿಯ ವಸ್ತ್ವಂತರಪೂರ್ವಕವಾಗು ವುದಿಲ್ಲ. ಏಕೆಂದರೆ ಅಂಧಕಾರವು ಪ್ರಥಮಕ್ಷಣೋತ್ಪನ್ನ ಪ್ರಭೆಯಿಂದಲೇ ನಿವೃತ್ತವಾಗು ತ್ತದೆ. ಅದೂ ಅಲ್ಲದೆ ಮಧ್ಯವರ್ತಿಯಾದ ಅದು ಅಪ್ರಕಾಶಿತಾರ್ಥಪ್ರಕಾಶಕವಾಗುವು ದಿಲ್ಲ. ಏಕೆಂದರೆ ಪ್ರಥಮಕ್ಷಣೋತ್ಪನ್ನಪ್ರಭೆಯಿಂದಲೇ ಅರ್ಥವು ಪ್ರಕಾಶಿತವಾಗಿರು ತ್ತದೆ. ಆದುದರಿಂದ ಮಧ್ಯವರ್ತಿ ಪ್ರಭೆಯಲ್ಲಿ ಸಾಧ್ಯಸಾಧನಗಳೆರಡೂ ಬಾರದಿರುವುದ ರಿಂದ ದೃಷ್ಟಾಂತತ್ವ ಕೂಡುವುದಿಲ್ಲ. ಇದಕ್ಕೋಸ್ಕರ ಪ್ರಥಮೋತ್ಪನ್ನವೆಂದು ಹೇಳಿದೆ.

'ಸೌರಾಲೋಕ'—ಇತಿ. ಹಗಲಿನಲ್ಲಿ ಸೂರ್ಯಪ್ರಕಾಶವಿರುವಾಗಲೂ ಪ್ರಥಮೋ ತ್ಪನ್ನ ದೀಪಪ್ರಭೆಯಲ್ಲಿ ಸಾಧ್ಯಸಾಧನಗಳು ಬಾರದಿರುವುದರಿಂದ ಅದಕ್ಕೆ ದೃಷ್ಟಾಂತತ್ವ ಸಂಗತವಾಗುವುದಿಲ್ಲ. ಇದನ್ನು ವ್ಯಾವೃತ್ತಿಪಡಿಸಲು ಅಂಧಕಾರವೆಂದು ಹೇಳಿದೆ. 'ನಚ' —ಇತಿ. ಪ್ರತ್ಯಕ್ಷಜ್ಞಾನವನ್ನು ಹುಟ್ಟಿಸಿಕೊಡುವುದರಿಂದ ಇಂದ್ರಿಯವು ಪ್ರತ್ಯಕ್ಷ ಪ್ರಮಾಣವಾಗುತ್ತದೆ. ಹೀಗೆಯೇ ಅನುಮಿತಿ ಸಾಧಕವಾದ ಲಿಂಗಪರಾಮರ್ಶರೂಪ ವಾದ ಅನುಮಾನವೂ ಪ್ರಮಾಣವಾಗುತ್ತದೆ. ಶಾಬ್ದಜ್ಞಾನ ಸಾಧಕವಾದ ಶಬ್ದವೂ ಪ್ರಮಾಣ. ಇವುಗಳಲ್ಲಿ ಸ್ವಫಲೀಭೂತಜ್ಞಾನವಿಷಯಪ್ರಕಾಶಕತ್ವವಿರುವುದರಿಂದ ಅಪ್ರ ಕಾಶಿತಾರ್ಥಪ್ರಕಾಶತ್ವಸಂಭವಿಸುವುದರಿಂದ ಹೇತು ಬಂದಂತಾಗುತ್ತದೆ. ಆದರೆ ನಿರುಕ್ತ ವಸ್ತ್ವಂತರ ಪೂರ್ವಕತ್ವರೂಪಸಾಧ್ಯವಿಲ್ಲದಿರುವುದರಿಂದ ವ್ಯಭಿಚಾರಬರುತ್ತದೆ. 'ಪ್ರಮಾಣಕೃತ್ಯ'—ಇತಿ. ಒಂದು ವಸ್ತುವಿನ ಅಸ್ತಿತ್ವದಲ್ಲಿ ವಿವಾದವಿರುವಾಗ ಅಲ್ಲಿ ಪ್ರಮಾಣಗಳು ಆ ವಸ್ತುವಿನ ನಾಸ್ತಿತ್ವವನ್ನು ನಿವಾರಣೆಮಾಡುತ್ತವೆ. ಆಗ ಅಲ್ಲಿ ಆ ವಸ್ತು ಪ್ರಕಾಶಕವೆಂದು ಯಾರೂ ಹೇಳುವುದಿಲ್ಲ. ಅಲ್ಲಿ ವಸ್ತು ಪ್ರಕಾಶಕವೆಂದರೆ ಆ ಪ್ರಮಾಣದಿಂದ ಹುಟ್ಟಿದ ಜ್ಞಾನವೇ ಆದುದರಿಂದ ವ್ಯಭಿಚಾರಶಂಕೆಗೆ ಅವಕಾಶವಿಲ್ಲ. ಅನುಮಾನಾದಿಗಳಿಂದ ಅಸತ್ವನಿವೃತ್ತಿಮಾತ್ರವೆಂದು ಕಲ್ಪತರುಕಾರರೇ ಮುಂತಾದವರು ಹೇಳಿರುತ್ತಾರೆ.

ನನು ಸಾಧನವಿಕಲೋ ದೃಷ್ಟಾಂತ ಇತಿ ಚೇನ್ನ । ಪ್ರಕಾಶಶಬ್ದೇನ ತಮೋವಿರೋಧ್ಯಾ ಕಾರಸ್ಯ ವಿವಕ್ಷಿತತ್ವಾತ್ । ತದುಕ್ತಂ ವಿವರಣವಿವರಣೇ ಸಹಸರ್ವಜ್ಞವಿಷ್ಣು ಭಟ್ಟೋಪಾಧ್ಯಾಯೈಃ—ನ ಚಾತ್ರ ಪಕ್ಷದೃಷ್ಟಾಂತಯೋರೇಕ ಪ್ರಕಾಶರೂಪಾನ ನ್ವಯಃ ಶಂಕನೀಯಃ ॥ ತಮೋವಿರೋಧ್ಯಾಕಾರೋಹಿ ಪ್ರಕಾಶಶಬ್ದವಾಚ್ಯಃ ॥ ತೇನಾಕಾರೇಣೈಕಮುಭಯತ್ರಾಪ್ಯಸ್ತೀತಿ । ನರೇಂದ್ರಗಿರಿ ಶ್ರೀಚರಣೈಸ್ತ್ವೇವಮುಕ್ತಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ಅಪ್ರಕಾಶಿತಪ್ರಕಾಶವ್ಯವಹಾರಹೇತುತ್ವಂ ಹೇತ್ವರ್ಥಃ । ತಸ್ಯ ಚೋಭಯತ್ರಾ ನನುಗತತ್ವಾನ್ನಾಸಿದ್ಧ್ಯಾದಿರಿತಿ ॥

ಶ್ರುತೇಶ್ಚ —'ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ' (ಶ್ವೇ ೧।೧೦) ಇತ್ಯಾದಿನಾ ಶ್ರುತಿಃ । ತರತ್ಯವಿದ್ಯಾಂ ವಿತತಾಂ ಹೃದಿ ಯಸ್ಮಿನ್ನಿವೇಶಿತೇ ॥

"ಯೋಗಿ ಮಾಯಾಮಮೇಯಾಯ ತಸ್ಮೈ ವಿದ್ಯಾತ್ಮನೇನಮಃ" ಇತಿ ಚ ॥

ಏತೇನೈತತ್ ಪ್ರತ್ಯುಕ್ತಂ ಯದುಕ್ತಂ ಭಾಸ್ಕರೇಣ ಕ್ಷಪಣಕಚರಣಂ ಪ್ರಮಾಣ ಶರಣೇ ಭೇದಾಭೇದವಾದಿನಾಂ ಭಾವರೂಪಮಜ್ಞಾನಂ ನಾಸ್ತಿ ಕಿಂ ತು ಜ್ಞಾನಾಭಾವ ಇತಿ । ತಥಾ ಚ ಭಾಸ್ಕರಪ್ರಣೀತ ಶಾರೀರಿಕಮೀಮಾಂಸಾಭಾಷ್ಯಗ್ರಂಥಃ। ಯದೇವ ಪರರೂಪಾದರ್ಶನಂ ಸೈವಾವಿದ್ಯೇತಿ ಭಾವರೂಪಾಜ್ಞಾನಾನಭ್ಯುಪಗಮೇ ಜೀವೇಶ್ವರಾದಿವಿಭಾಗಾನುಪಪತ್ತೇಃ । ನ ಚ ಭಾವಿಕಃ `ಪರಮಾತ್ಮನೋಂಶೋ ಜೀವ ಇತಿ ವಾಚ್ಯಮ್ । "ನಿಷ್ಕಲನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂತರಂ" (೯।೧೯) ಇತ್ಯಾದಿ ಶ್ರುತಿ ವಿರೋಧಾತ್

ದೃಷ್ಟಾಂತವಾದ ಪ್ರಭೆಯಲ್ಲಿ ಹೇತು ಬರುವುದಿಲ್ಲವೆಂದು ಶಂಕಿಸುತ್ತಾನೆ. 'ನನು —ಇತಿ. ಪ್ರಭೆಯು ಸ್ವತಃ ಅರ್ಥಪ್ರಕಾಶಿಕವಾಗುವುದಿಲ್ಲ. ಜ್ಞಾನವೊಂದೇ ಅರ್ಥ ಪ್ರಕಾಶಕವಾಗಿರುತ್ತದೆ. ಅರ್ಥ ಸ್ಫುರಣಕ್ಕೆ ಪ್ರಕಾಶನೆಂದು ಕರೆಯುತ್ತಾರೆ. ಪ್ರಭೆಯಾದರೋ ಕತ್ತಲೆಯನ್ನು ದೂರ ಮಾಡುವುದರಿಂದ ಇಂದ್ರಿಯಗಳಿಗೆ ಸಹಾಯವನ್ನುಂಟು ಮಾಡುತ್ತದೆ. ಇದರಿಂದ ಅದರಲ್ಲಿ ಸಾಧನ ಬಾರದಿರುವುದರಿಂದ ದೃಷ್ಟಾಂತತ್ವ ಸಂಭವಿಸಲಾರದು ಎಂದು ಶಂಕಿಸುವವನ ಅಭಿಪ್ರಾಯ. ಪರಂಪರೆಯಿಂದ ಪ್ರಕಾಶವೆನ್ನುವುದಾದರೆ ಇಂದ್ರಿಯಗಳು ಹಾಗಾಗುವುದರಿಂದ ಅವುಗಳಲ್ಲಿಯೂ ಪ್ರಕಾಶಕತ್ವ ಬರಬೇಕಾಗುತ್ತದೆ. ಇಷ್ಟಾಪತ್ತಿಯೆಂದರೆ ಅಲ್ಲಿ ಸಾಧ್ಯವಿಲ್ಲದೆ ಹೇತು ಸಂಭವಿಸುವುದರಿಂದ ವ್ಯಭಿಚಾರದೋಷ ಪ್ರಾಪ್ತವಾಗುತ್ತದೆ ಸಮಾಧಾನ ತೋರಿಸುತ್ತಾನೆ. 'ಪ್ರಕಾಶ'—ಇತಿ. ಇಲ್ಲಿ ಪ್ರಕಾಶವೆಂದರೆ ಅರ್ಥಸ್ಫುರಣವು ವಿವಕ್ಷಿತವಲ್ಲ. ತಮೋನಿರಾಸಕತ್ವರೂಪವಾದ ಅರ್ಥಮಾತ್ರ ಇಲ್ಲಿ ವಿವಕ್ಷಿತವಾಗಿದೆ. ಜ್ಞಾನವೆಂಬ ಅಂತಃಕರಣವೃತ್ತಿಯೂ ಕೂಡಾ ವಿಷಯದಲ್ಲಿರುವ ಆಂತರವಾದ ಆವರಣರೂಪತಮಸ್ಸನ್ನು ಹೋಗಲಾಡಿಸುತ್ತದೆ. ಪ್ರಭೆಯು ಹೊರಗಿರುವ ಆವರಣರೂಪವಾದ ಕತ್ತಲೆಯನ್ನು ಹೊಗಲಾಡಿಸುತ್ತದೆ. ವಿಷಯಸ್ಫುರಣವಾದರೋ ಬುದ್ಧಿಯಲ್ಲಿರುವ ಚಿದಾಭಾಸವ್ಯಾಪ್ತಿಯಿಂದಾಗುತ್ತದೆಯೆಂದು ಹಿಂದೆ ವಿವರಿಸಿದೆ. ಇಂದ್ರಿಯಗಳು ಅಂತಃಕರಣಕ್ಕೆ ಮಾರ್ಗದರ್ಶನ ಮಾಡುವುದರ ಮೂಲಕ ಸಹಾಯ ಮಾಡುತ್ತವೆ. ಅವು ತಮಸ್ಸನ್ನು ಹೋಗಲಾಡಿಸುವುದಿಲ್ಲ. ಇದನ್ನೇ ಪ್ರಾಚೀನರು ವಿವರಿಸಿರುತ್ತಾರೆಂದು ತೋರಿಸುತ್ತಾನೆ.

'ತದುಕ್ತಂ'—ಇತಿ ಪಕ್ಷದೃಷ್ಟಾಂತಗಳಲ್ಲಿ ಒಂದರಲ್ಲಿ ಪ್ರಕಾಶಕತ್ವವಿಲ್ಲದಿರುವುದರಿಂದ ಅನನ್ವಯವೆಂದು ಶಂಕಿಸಬಾರದು. "ಪ್ರಕಾಶಯತಿ" (ತಮೋನಿರಾಸಕತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ) ಎಂಬ ವ್ಯವಹಾರವು ಲೋಕದಲ್ಲಿ ಜ್ಞಾನದಲ್ಲಿಯೂ, ಪ್ರಭೆಯಲ್ಲಿಯೂ ಸಮಾನವಾಗಿರುತ್ತದೆ. ಆದುದರಿಂದ ಪ್ರಕಾಶ ವ್ಯವಹಾರ ಕಾರಣವು ಉಭಯಸಮಾನವಾಗಿರುವುದರಿಂದ ಎಲ್ಲಿಯೂ ದೋಷವಿಲ್ಲ. ಹೀಗೆ ಪ್ರತ್ಯಕ್ಷಾನುಮಾನಗಳು ಅವಿದ್ಯೆ ಇದೆಯೆಂಬುದರಲ್ಲಿ ಪ್ರಮಾಣವಾಗಿರುತ್ತವೆ. ಇನ್ನು ಈ ವಿಷಯದಲ್ಲಿ ಶಬ್ದಪ್ರಮಾಣವನ್ನು ತೋರಿಸುತ್ತಾನೆ. 'ಭೂಯಃ'—ಇತಿ. ವಿಶ್ವಮಾಯಾ ಎಂದರೆ ಅವಿದ್ಯೆ. ಪರಮಾತ್ಮಧ್ಯಾನದಿಂದ ಅಂತ ಅಂದರೆ ಮೋಕ್ಷಕಾಲದಲ್ಲಿ ಅವಿದ್ಯೆಗೆ ನಿವೃತ್ತಿಯುಂಟಾಗುತ್ತದೆಂದರ್ಥ. "ತರತಿ"—ಇತಿ. ಯೋಗಿಯು ಧ್ಯಾನದಿಂದ ತನ್ನ ಹೃದಯದಲ್ಲಿ ಯಾವ ಪರಮಾತ್ಮನನ್ನು ಸ್ಥಿರೀಕರಿಸುತ್ತಾನೋ ಆಗ ವಿದ್ಯೆಗೆ ವಿರುದ್ಧವಾಗಿರುವ ವಿಸ್ತೃತವಾದ ಈ ಮಾಯೆಯನ್ನು ಹೋಗಲಾಡಿಸಿಕೊಳ್ಳುತ್ತಾನೆಯೋ ಅಂತಹ ಜ್ಞಾನ ಸ್ವರೂಪನಾದ, ತಿಳಿಯಲು ಅಶಕ್ಯನಾದ ಪರಮಾತ್ಮನಿಗೆ ನಮಸ್ಕಾರವೆಂದರ್ಥ. 'ಏತೇನ' —ಇತಿ. ಭಾವರೂಪವಾದ ಅವಿದ್ಯೆಯು ಪ್ರಮಾಣ ಸಿದ್ಧವಾಗಿದ್ದರೂ ಭೇದಾಭೇದವಾದಿಗಳಾದ ಭಾಸ್ಕರಚಾರ್ಯರು ಅದನ್ನು ಅಂಗೀಕರಿಸುವುದಿಲ್ಲ. ಅವರ ಮತವನ್ನು ಖಂಡಿಸುತ್ತಾನೆ.

'ಭಾವ'—ಇತಿ. ಜ್ಞಾನಾಭಾವವೇ ಅಜ್ಞಾನವೆಂದು ಅವರು ತಮ್ಮ ಭಾಷ್ಯದಲ್ಲಿ ಹೇಳಿರುತ್ತಾರೆ. ಇದು ಸರಿಯಲ್ಲ. ಪರರೂಪಾದರ್ಶನವೇ ಅವಿದ್ಯೆಯೆಂದು ಅಂಗೀಕರಿಸಬೇಕು. ಬ್ರಹ್ಮನೇ ಭಾವರೂಪಾಜ್ಞಾನೋಪಾಧಿಕನಾಗಿ ಈಶ್ವರನೂ ಜೀವನು ಆಗುತ್ತಾನೆಂದು ಅದ್ವೈತವಾದದಲ್ಲಿ ವಿವರಿಸಿದೆ. ಇಲ್ಲವಾದರೆ ಅವರಲ್ಲಿ ಈ ವಿಭಾಗವಿಲ್ಲದೇ ಹೋಗಬೇಕಾಗುತ್ತದೆ. ಭಾವಿಕಃ ಅಂದರೆ ಸತ್ಯವೆಂದರ್ಥ. 'ನಚ'—ಇತಿ. ವಸ್ತ್ರಕ್ಕೆ ದಾರವು ಅವಯವವಾಗಿರುವಂತೆ ಜೀವನು ಪರಮಾತ್ಮನ ವಾಸ್ತವವಾದ ಅವಯವವೆಂದು ಹೇಳಬಾರದು. ನಿಷ್ಕಲಂ—ಇತ್ಯಾದಿ ಶ್ರುತಿವಿರೋಧ ಬರುತ್ತದೆ. ನಿರ್ಗತಾಃ ಕಲಾಃ ಅಂಶಾಃ ಯಸ್ಮಾತ್ ತತ್ ನಿಷ್ಕಲಂ—ನಿರವಯವವೆಂದರ್ಥ. ನಿಷ್ಕ್ರಿಯಂ—ಕ್ರಿಯಾರಹಿತವಾದುದು. ಶಾಂತಂ—ಪರಿಣಾಮರಹಿತವಾದುದು. ಊರ್ಮಿಷಟ್ಕರಹಿತವಾದುದೆಂದರ್ಥ. ಬುಭುಕ್ಷಾ—ಹಸಿವೆ, ಪಿಪಾಸಾ—ಬಾಯಾರಿಕೆ, ಶೋಕ, ಮೋಹ, ಜರಾ ಮೃತ್ಯು ಇವು ಊರ್ಮಿಷಟ್ಕಗಳು. ನಿರವದ್ಯಂ—ರಾಗಾದಿ ದೋಷರಹಿತವಾದುದು. ನಿರಂಜನಂ—ಧರ್ಮಾಧರ್ಮಾತಿಸಂಬಂಧರಹಿತವಾದುದು. ಹೀಗೆ ಈ ಶ್ರುತಿಯು ಅಂಶರಾಹಿತ್ಯವನ್ನು ತಿಳಿಸುತ್ತದೆ.

ಕೇಚನ ಶಾಕ್ತಾಃ—ಶಕ್ತಿಂ ಮಾಯಾಶಬ್ದಾರ್ಥಭೂತಾಂ ಜಗತ್ಕಾರಣತ್ವೇನಾಂಗೀಕೃತಾಂ ಸತ್ಯಾಮಭ್ಯುಪೇತ್ಯ ಮಾತುಲಿಂಗಗದಾಖೇಟಧಾರಿಣೀ ಮಹಾಲಕ್ಷ್ಮೀಃ ತಸ್ಯಾಃ ಪ್ರಥಮಾವತಾರ ಇತಿ ವರ್ಣಯಂತಿ । ಸಾ ಚ ಕಾಲರಾತ್ರಿಃ ಸರಸ್ವತೀತಿ ದ್ವೇ ಶಕ್ತೀ ಉತ್ಪಾದ್ಯ ಬಹ್ಮಾಣಂ ಪುರುಷಂ ಶ್ರಿಯಂಸ್ತ್ರಿಯಂಚ ಉತ್ಪಾದಯಾಮಾಸ । ಸ್ವಯಂ ಮಿಥುನಂ ಜನಯಿತ್ವಾ ಸ್ವಸುತೇ ಅಪ್ಯಾಹ—ಅಹಮಿವಯುವಾಮಪಿ ಮಿಥುನ ಮುತ್ಪಾದಯತಮಿತಿ । ತತಃ ಕಾಲರಾತ್ರಿರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾದೇವಂ ಪುರುಷಂ ಸ್ವರಾಂ ಸ್ತ್ರಿಯಂ ಚ ಜನಯಾಮಾಸ। ಸರಸ್ವತೀ ಚ ವಿಷ್ಣುಂ ಪುರುಷಂ ಗೌರೀಂ ಚ ಸ್ತ್ರಿಯಮುದಪಾದಯತ್। ತತಶ್ಚಾದಿರ್ವಿವಾಹ ಮಕರೋದಕಾರಯಚ್ಚ। ಏವಂ ಬ್ರಹ್ಮಣೇ ಸ್ವರಾಂ ವಿಷ್ಣವೇ ಶ್ರಿಯಂ ಶಿವಾಯ ಗೌರೀಂದತ್ವಾ ಶಕ್ತಿಯುಕ್ತಾನಾಂ ತೇಷಾಂ ಸೃಷ್ಟಿಸ್ಥಿತಿಸಂಹಾರಾಖ್ಯಾನಿ ಕರ್ಮಾಣಿ ಪ್ರತ್ಯಪಾದಯದಿತಿ। ತದೇತನ್ಮತಂ ಶ್ರುತ್ಯಾದಿಮೂಲಪ್ರಮಾಣವಿಧುರ ತಯಾಸ್ವೋತ್ಪ್ರೇಕ್ಷಾಮಾತ್ರಪರಿಕಲ್ಪಿತಮಿತಿ ಸ್ವರೂಪವ್ಯಾಕ್ರಿಯೈವ ನಿರಾಕ್ರಿಯೇ ತ್ಯುಪೇಕ್ಷಣೀಯಮ್। ತತಶ್ಚಾನಿರ್ವಚನೀಯಾನಾದ್ಯವಿದ್ಯಾಲಸಿತಃ ಪ್ರತ್ಯಗಾತ್ಮ ನಿ ಪ್ರತೀಯಮಾನಃ ಪ್ರಮಾತೃತ್ವಾದಿಪ್ರಪಂಚ ಇತ್ಯಲಮತಿಪ್ರಸಂಗೇನ॥

'ಕೇಚನ--' ಇತಿ. ಈ ಮತವು ಸಪ್ತಶತಿಯಲ್ಲಿ ಪ್ರಾಧಾನಿಕರಹಸ್ಯದಲ್ಲಿ ಹೇಳಿದೆ. ಮಾಯೂ ಎಂದರೆ ಶಕ್ತಿದೇವತೆ ಇದೇ ಸತ್ಯವಾದುದು. ಜಗತ್ತಿಗೆ ಕಾರಣವಾದುದೂ ಇದೇ. ಮಾತು ಲಿಂಗನೆಂದರೆ ಒಂದು ಫಲವಿಶೇಷ. ಗದಾ— ಒಂದು ಆಯುಧ. ಖೇಟ— ಚರ್ಮ. ಇವುಗಳನ್ನು ಧರಿಸಿದ ಮಹಾಲಕ್ಷ್ಮಿಯೇ ಈ ಶಕ್ತಿಯ ಪ್ರಥಮಾವ ತಾರ. ಇವಳ ಮಕ್ಕಳು ಕಾಲರಾತ್ರಿ, ಸರಸ್ವತಿಯರು. ತಾನು ಬ್ರಹ್ಮನೆಂಬ ಪುರುಷನನ್ನೂ, ಶ್ರೀ ಎಂಬ ಸ್ತ್ರೀಯನ್ನೂ ಹೀಗೆ ಒಂದು ಮಿಥುನವನ್ನು ಹುಟ್ಟಿಸಿ ತನ್ನ ಮಕ್ಕಳಿಗೂ ಮಕ್ಕಳನ್ನು ಹುಟ್ಟಿಸಬೇಕೆಂದು ಪ್ರೇರೇಪಿಸಿದಳು. 'ತತಃ—' ಇತಿ. ಆಗ ಕಾಲರಾತ್ರಿಯು ಮಹಾದೇವನೆಂಬ ಪುರುಷನನ್ನೂ ಸ್ವರಾ ಎಂಬ ಸ್ತ್ರೀಯನ್ನೂ, ಸರಸ್ವತಿಯು ವಿಷ್ಣುವೆಂಬ ಪುರುಷನನ್ನೂ ಗೌರಿಯೆಂಬ ಸ್ತ್ರೀಯನ್ನೂ ಹುಟ್ಟಿಸಿದಳು. ಆಮೇಲೆ ಶಕ್ತಿಯು ವಿವಾಹವನ್ನು ಮಾಡಿ ಮಾಡಿಸಿದಳು. ಬ್ರಹ್ಮನಿಗೆ ಸ್ವರಾ ಎಂಬುವ ಳನ್ನೂ, ವಿಷ್ಣುವಿಗೆ ಶ್ರೀಯನ್ನೂ, ಶಿವನಿಗೆ ಗೌರಿಯನ್ನೂ ಕೊಟ್ಟು, ಶಕ್ತಿಯುಕ್ತರಾದ ಅವರಿಗೆ ಸೃಷ್ಟಿ ಸ್ಥಿತಿ ಸಂಹಾರವೆಂಬ ಕರ್ಮಗಳನ್ನು ವಿಧಿಸಿದಳು. ಹೀಗೆ ಈ ಮತವು ಪ್ರತಿಪಾದಿತವಾದರೂ ಇದು ಶ್ರುತ್ಯಾದಿ ಮೂಲಪ್ರಮಾಣಕ್ಕೆ ವಿರುದ್ಧವಾದುದರಿಂದ ಉಪೇಕ್ಷಣೀಯವಾಗಿದೆ. ಕೇವಲ ಸ್ವಕಪೋಲ ಕಲ್ಪಿತವಾದ ಮತವಿದು.

"ಸ್ವರೂಪವ್ಯಾ—" ಇತಿ. ಚೈತ್ರನು "ನಾನು ಹೋಗುತ್ತೇನೆ" ಎಂದಾಗ ಮೈತ್ರನು ಯಾವವಿಧಿನಿಷೇಧಗಳನ್ನೂ ಹೇಳದೆ ಆ ಮಾತನ್ನು ಕೇಳಿದೊಡನೆಯೇ 'ನಾನು ಹೋಗುತ್ತೇನೆ' ಎಂದು ಅನುಮೋದನ ಮಾಡುತ್ತಾನೆ. ಇಲ್ಲಿ ಅವನ ಮಾತ್ತನ್ನು ಅನುಕರಿಸುವುದೇ ಪ್ರತಿಷೇಧಸೂಚಕವಾಗುತ್ತದೆ. ಅದರಂತೆ ಇಲ್ಲಿ ತಿಳಿಯಬೇಕು. 'ತತಶ್ಚ—' ಇತಿ. ಹೀಗೆ ಅವಿದ್ಯಾಸಿದ್ಧವಾಗುವಾಗ ತನ್ಮೂಲಕವಾದ ಸಕಲ ಪ್ರಪಂಚಕ್ಕೂ ಮಿಥ್ಯಾತ್ವ ಸಿದ್ಧವಾಗುತ್ತದೆ. ಪ್ರಮೇಯವಿದ್ದರೇ ಪ್ರಮಾತೃತ್ವಕೂಡು ತ್ತದೆ. ಪ್ರಕೃತ ಪ್ರಮೇಯವಾದ ಪ್ರಪಂಚವೇ ಮಿಥ್ಯಾವೆಂದಮೇಲೆ ತನ್ನಿರೂಪಿತವಾದ ಪ್ರಮಾತೃತ್ವಾದಿ ಸಕಲಧರ್ಮಗಳೂ ಮಿಥ್ಯಾಗಳೇ ಆಗುವುದರಿಂದ ಆತ್ಮನಿಗೆ ನಿರ್ವಿಶೇಷತ್ವವು ಸಿದ್ಧವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನು ಕಿಮರ್ಥಂ ಪ್ರಮಾತೃತ್ವಾದೀನಾಮಾವಿದ್ಯಕತ್ವಂ ನಿಗದ್ಯತೇ । ಬ್ರಹ್ಮ ಜ್ಞಾನೇನ ನಿವರ್ತನಾಯ ಜೀವಸ್ಯ ಬ್ರಹ್ಮಭಾವಾಯ ವಾ । ನ ಪ್ರಥಮಃ । ಶಾಸ್ತ್ರ ಪ್ರಾಮಾಣ್ಯಾದೇವ ಸತ್ಯಸ್ಯಾಪಿ ಜ್ಞಾನೇನ ನಿವೃತ್ತೇರುಪಪತ್ತೇಃ । ಉಪಲಂಭಾಚ್ಚ । ತಥಾಹಿ— "ಸೇತುಂ ದೃಷ್ಟ್ವಾ ವಿಮುಚ್ಯೇತ ಬ್ರಹ್ಮಹಾ ಬ್ರಹ್ಮ ಹತ್ಯಯಾ" ಇತ್ಯಾದಿನಾ ಪಾಪಂ ಸನೀಪ್ರುಸ್ಯತೇ । ವಿಷಯದೋಷದರ್ಶನೇನ ರಾಗೋ ದಂದಹ್ಯತೇ । ತಾರ್ಕ್ಷ್ಯಧ್ಯಾನೇನ ವಿಷಂ ಶಮ್ಯತೇ । ಏವಂ ಕರ್ತೃತ್ವಾದಿಬಂಧಃ ಪಾರಮಾರ್ಥಿಕೋಽಪಿ ತತ್ತ್ವಜ್ಞಾನೇನ ನಿವರ್ತ್ಯೇತ । ಚರಮಃ । ಔಪಾಧಿಕಸ್ಯ ಜೀವಭಾವಸ್ಯೋಪಾಧಿನಿವೃತ್ತ್ಯಾ ನಿವೃತ್ತೌ ಬ್ರಹ್ಮಭಾವ ಸಂಭವಾತ್ । ತಸ್ಮಾದ್ಬಂಧಸ್ಯಾವಿದ್ಯಕತ್ವವಾಚೋಯುಕ್ತಿಃ ಸಾವದ್ಯೇತಿ ಚೇತ್— ನೈತದನವದ್ಯಮ್ । ಸತ್ಯಸ್ಯಾತ್ಮವತ್ ಜ್ಞಾನನಿವರ್ತ್ಯತ್ವಾನುಪಪತ್ತೇಃ । ಬಂಧಸ್ಯ ಮಿಥ್ಯಾತ್ವಮಂತರೇಣ ಶಾಸ್ತ್ರಪ್ರಾಮಾಣ್ಯಾದಪಿ ತದಸಿದ್ಧೇಶ್ಚ । ಶಾಸ್ತ್ರಮಪಿ

ಲೋಕಾವಗತಸಾಮರ್ಥ್ಯಃ ಶಬ್ದೋ ವೇದೇಽಪಿ ಬೋಧಕಃ ॥

ಇತಿ ನ್ಯಾಯೇನ ಲೋಕಾವಲೋಕಿತಾಂ ಪದಶಕ್ತಿಂ ಪದಾರ್ಥಯೋಗ್ಯತಾಂ ಚೋರರೀಕೃತ್ಯ ಪ್ರಚರತೀತಿ । ಅನ್ಯಥಾ 'ಆದಿತ್ಯೋ ಯೂಪಃ (ತೈ-ಬ್ರಾ ೨-೧-೫) ಯಜಮಾನಃ ಪ್ರಸ್ತರಃ (ತೈ-ಸಂ ೧-೭-೪) ಇತ್ಯಾದಿ ವಾಕ್ಯಸ್ತೋಮಸ್ಯ ಯಥಾಶ್ರುತೇರ್ಥೇ ಪ್ರಾಮಾಣ್ಯಾಪತ್ತೇಃ । ವೈದಿಕ್ಯಾಃ ಕ್ರಿಯಾಯಾಃ ಸಮುತ್ಕ್ಷಯಿತಯಾ ಪಾರತ್ರಿಕಫಲಕರಣತ್ವಾನ್ಯಥಾನುಪಪತ್ತ್ಯಾ ಅಪೂರ್ವಾಂಗೀಕರಣಾನುಪಪತ್ತಿಶ್ಚ ।

'ನನು—' ಇತಿ. ಆವಿದ್ಯಕತ್ವಂ — ಅವಿದ್ಯೆಯಿಂದ ಕಲ್ಪಿತವಾದುದು. ಮಿಥ್ಯಾ ಎಂದು ತಾತ್ಪರ್ಯ. 'ಬ್ರಹ್ಮ—' ಇತಿ. ಮಿಥ್ಯಾಭೂತವಾದ ವಸ್ತುವೇ ಜ್ಞಾನ ನಿವರ್ತ್ಯವಲ್ಲದೆ ಸತ್ಯವಾದ ವಸ್ತು ನಿವೃತ್ತವಾಗುವುದಿಲ್ಲ. ಜೀವನಲ್ಲಿರುವ ಪ್ರಮಾತೃತ್ವಾದಿಧರ್ಮಗಳು ಸತ್ಯವಾದರೆ ಜೀವನು ಸವಿಶೇಷನಾಗುವುದರಿಂದ ಅವನಿಗೆ ನಿರ್ವಿಶೇಷನಾದ ಬ್ರಹ್ಮನೊಡನೆ ತಾದಾತ್ಮ್ಯವು ಕೂಡಲಾರದು. 'ಬ್ರಹ್ಮವೇದ ಬ್ರಹ್ಮೈವ ಭವತಿ' (ಮುಂ ೩-೨-೯) ಎಂಬ ಶ್ರುತಿಯಲ್ಲಿ ಬ್ರಹ್ಮಜ್ಞಾನದಿಂದ ಬ್ರಹ್ಮಭಾವವು ಬೋಧಿತವಾಗುತ್ತದೆ. ಜೀವನು ಉಪಾಧಿನಿರ್ಮುಕ್ತನಾದರೆಮಾತ್ರ ಅವನಿಗೆ ಬ್ರಹ್ಮ ಭಾವವು ಸಂಗತವಾಗುತ್ತದೆ. "ಘಟೇ ನಷ್ಟೇ ಯಥಾ ವ್ಯೋಮ ವ್ಯೋಮೈವ ಭವತಿ ಸ್ವಯಮ್ । ತಥೈವೋಪಾಧಿವಿಲಯೇ ಬ್ರಹ್ಮೈವ ಬ್ರಹ್ಮವಿತ್ ಸ್ವಯಮ್" ॥ ಎಂದು ದೃಷ್ಟಾಂತದಿಂದ ಈ ವಿಷಯ ವಿವೃತವಾಗಿದೆ. ಆಕಾಶವು ಒಂದಾದರೂ ಉಪಾಧಿಭೇದಗಳಿಂದ ಘಟಾಕಾಶ, ಮಠಾಕಾಶವೆಂದು ಭೇದಹೊಂದುತ್ತದೆ. ಘಟಾದ್ಯುಪಾಧಿಗಳು ನಷ್ಟವಾದಾಗ ಆಕಾಶ ಆಕಾಶವೇ ಆಗಿರುವಂತೆ ಜೀವೋಪಾಧಿಗಳಾದ ಮನಸ್ಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂತಾದವುಗಳು ಸತ್ಯವಾಗಿದ್ದರೂ ಈ ಶ್ರುತಿ ಬಲದಿಂದ ಪ್ರಮಾರೂಪವಾದ ಬ್ರಹ್ಮ ಜ್ಞಾನದಿಂದ ಅವುಗಳಿಗೆ ನಿವೃತ್ತಿ ಕೂಡುತ್ತದೆ. ಉಪಾಧಿನಷ್ಟವಾಗದೆ ಜೀವನಿಗೆ ಬ್ರಹ್ಮಭಾವ ಕೂಡುವುದಿಲ್ಲ.

"ಸೇತುಂ—" ಇತಿ. ಶ್ರೀರಾಮನಿಂದ ರಚಿತವಾದ ಸೇತುದರ್ಶನದಿಂದ ವಾಸ್ತವ ಬ್ರಹ್ಮಹತ್ಯಾದೋಷವು ನಿವೃತ್ತವಾಗುತ್ತದೆ. ಹಾಗೆಯೇ ವಿಷಯದೋಷದರ್ಶನದಿಂದ ರಾಗವೂ, ತಾರ್ಕ್ಷ್ಯ(ಗರುಡ) ಧ್ಯಾನದಿಂದ (ಇವು ಜ್ಞಾನವಿಶೇಷವಾಗಿರುತ್ತವೆ.) ವಿಷವೂ ಸತ್ಯವಾದರೂ ನಿವೃತ್ತಿಹೊಂದುತ್ತವೆ. ಅದರಂತೆ ಕರ್ತೃತ್ವಾದಿ ಬಂಧವು ಪಾರಮಾರ್ಥಿಕ ವಾದರೂ ಬ್ರಹ್ಮಜ್ಞಾನದಿಂದ ನಿವೃತ್ತವಾಗುತ್ತದೆ. 'ಔಪಾಧಿಕಸ್ಯ—' ಇತಿ ಜೀವ ಭಾವವೇ ಉಪಾಧಿನಿಮಿತ್ತವಾಗಿ ಉಂಟಾದುದರಿಂದ ಉಪಾಧಿನಾಶವಾದರೆ ಬ್ರಹ್ಮ ಭಾವವೇ ಉಳಿಯುತ್ತದೆ. ಆದುದರಿಂದ ಬಂಧವು ಅವಿದ್ಯಾಕಲ್ಪಿತವೆನ್ನುವುದು ಸಾನವದ್ಯಾ ಅಂದರೆ ನಿಂದಿತವಾದುದು ಎಂದರೆ ಇದು ಸರಿಯಲ್ಲವೆಂದು (ಅನವದ್ಯ—ನಿರ್ದುಷ್ಟ) ತಿಳಿಸುತ್ತಾನೆ. 'ನೈತತ್—' ಇತಿ. ಸತ್ಯನಾದ ಆತ್ಮನು ಜ್ಞಾನದಿಂದ ಹೇಗೆ ನಿವೃತ್ತಿಹೊಂದುವುದಿಲ್ಲವೋ ಅದರಂತೆ ಜೀವೋಪಾಧಿಗಳಾದ ಮನಸ್ಸು ಮುಂತಾದವುಗಳು ವಾಸ್ತವವಾದರೆ ಅವು ಎಂದೂ ಜ್ಞಾನದಿಂದ ನಿವೃತ್ತವಾಗಲಾರವು. ಉಪಾಧಿಗಳು ಮಿಥ್ಯಾಭೂತಗಳೆಂಬ ದೃಷ್ಟಿಯಿಂದಲೇ ಶಾಸ್ತ್ರವು ಉಪಾಧಿನಿವೃತ್ತಿಯನ್ನು ತಿಳಿಸುತ್ತದೆ. ಯುಕ್ತಿವಿರುದ್ಧಾರ್ಥಾವಭಾಷವಿದ್ದಾಗ ಯುಕ್ತಿಯುಕ್ತವಾದ ಶಾಸ್ತ್ರದ ಅಭಿಪ್ರಾಯವನ್ನೇ ಸ್ವೀಕರಿಸಬೇಕು. "ಲೋಕ—" ಇತಿ ಲೋಕವಿದಿತಾರ್ಥಾವ ಬೋಧಕವಾದ ಶಬ್ದವೇ ಶಾಸ್ತ್ರದಲ್ಲಿರುವುದರಿಂದ ಲೋಕಪ್ರಸಿದ್ಧವಾದ ಪದಶಕ್ತಿಯನ್ನೂ, ಪದಾರ್ಥಯೋಗ್ಯತೆಯನ್ನೂ ಅಂಗೀಕರಿಸಿ ಶಾಸ್ತ್ರವು ಬೋಧಕವಾಗುತ್ತದೆ.

"ಆದಿತ್ಯ—" ಇತಿ. ಶ್ರುತಿಯು ಸಂಭವಿಸುವ ಅರ್ಥತಾತ್ಪರ್ಯದಿಂದಲೇ ಪ್ರಮಾಣವಾಗುತ್ತದೆ. ಯೂಪವೆಂದರೆ ಯಜ್ಞದಲ್ಲಿ ಪಶ್ವಾಲಂಭನೆಗೋಸ್ಕರವಿರುವ ಒಂದು ಕಂಭ. ಅದು ಸೂರ್ಯನೆಂದು ಶ್ರುತಿ ತಿಳಿಸುತ್ತದೆ. ಈ ಯಥಾಶ್ರುತಾರ್ಥದಲ್ಲಿ ಶ್ರುತಿಯು ಪ್ರಮಾಣವಾಗುವುದಿಲ್ಲ. ಎಂದೂ ಕಂಭವು ಸೂರ್ಯನಾಗುವುದಿಲ್ಲ. ಆದರೆ ತೇಜಸ್ವಿತ್ವಾದಿಧರ್ಮದಿಂದ ಆದಿತ್ಯನ ಸಾದೃಶ್ಯ ಸಂಭವಿಸುವುದರಿಂದ ಶ್ರುತಿಗೆ ಸಾದೃಶ್ಯ ಬೋಧನೆಯಲ್ಲಿ ಪ್ರಾಮಾಣ್ಯ ಹೇಳಬೇಕು. ಹೀಗೆಯೇ 'ಯಜಮಾನಃ ಪ್ರಸ್ತರಃ, ಎಂಬಲ್ಲಿಯೂ ಪ್ರಾಮಾಣ್ಯ ತಿಳಿಯಬೇಕು.

'ವೈದಿಕ್ಯಾಃ'— ಇತಿ. 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' ಇತ್ಯಾದಿ ಶ್ರುತಿಗಳು ಸ್ವರ್ಗಾದ್ಯುದ್ದೇಶದಿಂದ ಯಾಗ ವಿಧಾನಮಾಡುತ್ತವೆ. ಯಾಗ ಕ್ರಿಯಾರೂಪವಾಗಿದೆ. ಕ್ರಿಯಾ ಕ್ಷಣವಿನಾಶಿಯಾದುದರಿಂದ ಸ್ವರ್ಗಪ್ರಾಪ್ತಿಯವರೆಗೆ ಅದು ಇರುವುದಿಲ್ಲ. ಹೀಗಿರುವಾಗ ಸ್ವರ್ಗಯಾಗಗಳಿಗೆ ಕಾರ್ಯಕಾರಣಭಾವ ಕೂಡದಿರುವುದರಿಂದ ಶ್ರುತ್ಯರ್ಥವು ಸಂಗತವಾಗುವುದು ಹೇಗೆ ? ಅದಕ್ಕೋಸ್ಕರ ಅಲ್ಲಿ ಯಾಗಕ್ರಿಯೆಯಿಂದ ಉಂಟಾದ, ಸ್ವರ್ಗಪ್ರಾಪ್ತಿಯವರೆಗಿರುವ ಅಪೂರ್ವವನ್ನು ಅಂಗೀಕರಿಸಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸಂಭವಿಯಾದ ಅರ್ಥವನ್ನು ಶ್ರುತಿಯು ಬೋಧಿಸುತ್ತದೆಯೆಂದರೆ ಆಗ ಲೋಕದಲ್ಲಿ ಎಂದೂ ತೋರದಿರುವ ವಿನಷ್ಟವಾದ ಕಾರಣದಿಂದ ಕಾರ್ಯೋತ್ಪತ್ತಿಯನ್ನು ಶ್ರುತಿಬಲದಿಂದ ಕಲ್ಪಿಸಬೇಕಾಗುತ್ತದೆ. ಇದು ಎಲ್ಲಿಯೂ ಇಲ್ಲ. ಆದುದರಿಂದ ಲೋಕದೃಷ್ಟವ್ಯವಹಾರಾನುಸಾರವಾಗಿಯೇ ಶ್ರುತಿತಾತ್ಪರ್ಯವನ್ನು ಕಲ್ಪಿಸಬೇಕು. ಇದರಿಂದ ಶ್ರುತ್ಯುಕ್ತವಾದ ಉಪಾಧಿನಿವೃತ್ತಿಗೋಸ್ಕರ ಪ್ರಪಂಚಕ್ಕೆ ಅವಶ್ಯವಾಗಿ ಮಿಥ್ಯಾತ್ವವನ್ನು ಅಂಗೀಕರಿಸಬೇಕು.

ಲೋಕೇ ಚ ಶುಕ್ತಿವ್ಯಕ್ತಿತತ್ತ್ವಾಭಿವ್ಯಕ್ತೌ ಅಪನೀಯಮಾನಸ್ಯ ಆರೋಪಿತಸ್ಯ ಮಿಥ್ಯಾತ್ವದೃಷ್ಟೌ ತದ್ದೃಷ್ಟಾಂತಾವಷ್ಟಂಭೇನ ಆತ್ಮತತ್ತ್ವಸಾಕ್ಷಾತ್ಕಾರವಿದ್ಯಾಪನೋದ್ಯಸ್ಯ ಆವಿದ್ಯಕಸ್ಯ ಬಂಧಸ್ಯ ಮಿಥ್ಯಾತ್ವಾನುಮಾನಸಂಭವಾತ್ । ವಿಮತಂ-ಮಿಥ್ಯಾ—ಅಧಿಷ್ಠಾನತತ್ತ್ವಜ್ಞಾನನಿವರ್ತ್ಯತ್ವಾತ್—ಶುಕ್ತಿಕಾರೂಪ್ಯವತ್ । ಇತಿ । ನ ಚ ವಿಮತಂ ಸತ್ಯಂ—ಭಾಸಮಾನತ್ವಾದಿತಿ ಪ್ರತಿಪ್ರಯೋಗೇ ಸಮಾನಬಲತಯಾ ಬಾಧಪ್ರತಿರೋಧಃ । ಪ್ರತಿರೋಧಭಿಯಾನ್ಯತರದೋಷತ್ವಸಂಭವಾದಿತಿವದಿತವ್ಯಮ್ । ಮರುಮರೀಚಿಕೋದಕಾದೌ ಸವ್ಯಭಿಚಾರಾತ್ । ಅಬಾಧಿತತ್ವೇನ ವಿಶೇಷಣಾನ್ನ ದೋಷ ಇತಿ ಚೇತ್ ನ್ನೈವಂ ಭಾಷಿಷ್ಠಾಃ । ವಿಶೇಷಣಾಸಿದ್ಧೇಃ । ತತ್ರೇದಂ ಭವಾನ್ ಪೃಷ್ಟೋ ವ್ಯಾಚಷ್ಟಾಮ್ । ಕತಿಪಯಪುರುಷಕತಿಪಯಕಾಲಾಬಾಧಿತತ್ವಂ ಹೇತುವಿಶೇಷಣಂ ಕ್ರಿಯತೇ, ಸರ್ವಥಾ ಬಾಧವೈಧುರ್ಯಂ ವಾ ನ ಪ್ರಥಮಃ ।

ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।
ಅಭಿಯುಕ್ತತರೈರನ್ಯೈರನ್ಯಥೈವೋಪಪಾದ್ಯತೇ ॥ (ವಾಕ್ಯ ಪ-೧।೩೪)

ಇತಿ ನ್ಯಾಯೇನ ತ್ರಿಚತುರ ಪ್ರತಿಪತ್ತೃಪ್ರತಿಪಾದಿತಸ್ಯಾಪಿ ಪ್ರತಿಪತ್ತ್ರಂತರೇಣ ಪ್ರಕಾರಾಂತರಮುರರೀಕೃತ್ಯ ಪ್ರತಿಪಾದನಾತ್ ।

'ಲೋಕೇ'—ಇತಿ. ಶುಕ್ತಿತತ್ತ್ವವನ್ನು ಆವರಣಮಾಡಿರುವುದು ಆರೋಪಿತವಾದ ರಜತಜ್ಞಾನ. ಶುಕ್ತಿತತ್ತ್ವಾಭಿವ್ಯಕ್ತಿಯಾದಾಗ ಆರೋಪಿತರಜತಜ್ಞಾನವು ನಿವೃತ್ತವಾಗುವುದರಿಂದ ಅದು ಮಿಥ್ಯಾ ಎಂದು ಸಿದ್ಧವಾಗುವುದರಿಂದ ಆ ದೃಷ್ಟಾಂತದಿಂದ ಆತ್ಮತತ್ತ್ವ ಸಾಕ್ಷಾತ್ಕಾರಜ್ಞಾನದಿಂದ ಹೋಗಲಾಡಿಸಲ್ಪಡುವ ಆವಿದ್ಯಕಬಂಧಕ್ಕೆ ಮಿಥ್ಯಾತ್ವವು ಅನುಮಾನದಿಂದ ಸಿದ್ಧವಾಗುತ್ತದೆ. ಅವಿದ್ಯಾಕಲ್ಪಿತಪ್ರಪಂಚವು ಪಕ್ಷ. ಮಿಥ್ಯಾತ್ವ ಸಾಧ್ಯ. ಅಧಿ—ತ್ವಾತ್ ಹೇತು. ಬ್ರಹ್ಮಜ್ಞಾನದಿಂದ ನಿವೃತ್ತಿಹೊಂದುವುದರಿಂದ ಎಂಬುದು ಹೇತು. ಪೂರ್ವಪಕ್ಷಿಯು ಸಾಧ್ಯಾಭಾವವನ್ನು ಸಾಧಿಸುತ್ತಾನೆ. 'ನಚ'—ಇತಿ. ತೋರುವುದರಿಂದ ಪ್ರಪಂಚವು ಸತ್ಯವೆಂದು ಅವನ ಮತ. ಇದರಿಂದ ಪೂರ್ವೋಕ್ತ ಹೇತುವು ಸತ್ಪ್ರತಿಪಕ್ಷಿತವಾಗುತ್ತದೆ. 'ಪ್ರತಿರೋಧ'—ಇತಿ. ಒಂದೇ ಪಕ್ಷದಲ್ಲಿ ಪರಸ್ಪರ ವಿರುದ್ಧವಾದ ಸಾಧ್ಯದ್ವಯ ಸಾಧಕವಾದ ಹೇತುದ್ವಯವು ತೋರಿದಾಗ ಅಲ್ಲಿ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದ್ಧೇತುವೆಂದೂ, ಇನ್ನೊಂದು ದುಷ್ಟಹೇತುವೆಂದೂ ಅಂಗೀಕರಿಸಬೇಕಾಗುತ್ತದೆ. ಆದರೆ ಎರಡರಲ್ಲಿ ಯಾವುದಾದರೂ ಒಂದಕ್ಕೆ ಪ್ರಾಬಲ್ಯ ತೋರದಿದ್ದರೆ ಹೇತುದ್ವಯವೂ ದುಷ್ಟವೆಂಬ ಶಂಕೆಯಿಂದ ತನ್ನ ಸಾಧ್ಯಸಾಧನಸಾಮರ್ಥ್ಯವನ್ನು ಹೊಂದಲಾರದು.

'ಮರುಮರೀ'—ಇತಿ. ಮರುಭೂಮಿಯಲ್ಲಿ ಮೃಗ ಜಲ ತೋರುತ್ತದೆ. ಆದರೆ ಅಲ್ಲಿ ನೀರು ದೊರೆಯದಿರುವುದರಿಂದ ನೀರಿಲ್ಲವೆಂದು ನಿಶ್ಚಯಬಂದಮೇಲೆ ಸತ್ಯತ್ವರೂಪ ಸಾಧ್ಯವಿಲ್ಲದಿದ್ದರೂ ಭಾಸಮಾನತ್ವರೂಪಹೇತುವಿರುವುದರಿಂದ ಅದು ವ್ಯಭಿಚರಿತವಾಗಿ ದುಷ್ಟವಾಗುತ್ತದೆ. 'ಅಬಾಧಿತ.—ಇತಿ. ತಾತ್ಪರ್ಯ. ಮೃಗಜಲದಲ್ಲಿ ಭಾಸಮಾನತ್ವರೂಪಹೇತುವಿದ್ದರೂ ಅಬಾಧಿತತ್ವವಿಶಿಷ್ಟಭಾಸಮಾನತ್ವರೂಪಹೇತುವಿಲ್ಲದಿರುವುದರಿಂದ ವ್ಯಭಿಚಾರ ಬರುವುದಿಲ್ಲ. 'ವಿಶೇಷಣ'—ಇತಿ ಪಕ್ಷವಾದ ಭಾಸಮಾನಪ್ರಪಂಚದಲ್ಲಿ ಅಬಾಧಿತತ್ವವಿಶೇಷಣವು ಸಂಭವಿಸದಿರುವುದರಿಂದ ಪೂರ್ವಪಕ್ಷಿಯ ಹೇತುವು ವಿಶೇಷಣಾಸಿದ್ಧವಾಗುತ್ತದೆ. ಅದನ್ನೇ ವಿವರಿಸುತ್ತಾನೆ. 'ತತ್ರ'—ಇತಿ. ಕೆಲವು ಪುರುಷರಿಗೆ ಕೆಲವು ಕಾಲ ಅಬಾಧಿತವಾದುದೆಂದು ಹೇತುವಿಶೇಷಣವೇ ? ಅಥವಾ ಎಲ್ಲಾವಿಧದಿಂದಲೂ ಅಬಾಧಿತವೇ ? ಎಂದು ಕೇಳುತ್ತೇವೆ.

'ನ ಪ್ರಥಮಃ'—ಇತಿ. (ಮರುಮರೀಚಿಕಾಜಲವು) ತೋರುತ್ತಿರುವ ಅವಸ್ಥೆಯಲ್ಲಿಯೂ ಅಬಾಧಿತವಾಗಿಲ್ಲದಿದ್ದರೆ ಆಗ ಬಾಧಜ್ಞಾನವಿಲ್ಲದಿದ್ದರೂ ಬಾಧವಿರುವುದರಿಂದ ಮುಂದಿನ ಬಾಧಜ್ಞಾನವು ಭಾಸಮಾನದಶಾಸ್ಥಬಾಧೆಯನ್ನೂ ವಿಷಯೀಕರಿಸುವುದರಿಂದ ಅಲ್ಲಿ ಹಿಂದೆಯೂ ನೀರಿಲ್ಲವೆಂದು ವ್ಯಕ್ತವಾಗುತ್ತದೆ. ಹೀಗೆ ಎಂದಾದರೂ ಅದು ಅಬಾಧಿತವಾಗದಿರುವುದರಿಂದ ಹೇತುವು ದುಷ್ಟವಲ್ಲವೆಂದು ಹೇಳುವುದಾದರೆ ಪ್ರಪಂಚವು ಹಾಗೆಯೇ ಎಂದು ತಿಳಿ. ಏಕೆಂದರೆ ಬದ್ಧಾವಸ್ಥೆಯಲ್ಲಿಯೂ ಜ್ಞಾನಿದೃಷ್ಟಿಯಿಂದ ಪ್ರಪಂಚವು ಬಾಧಿತವಾಗಿರುತ್ತದೆ. 'ಯತ್ನೇನ'—ಇತಿ. ಎಂಬ ಹರಿಕಾರಿಕೆಯೂ ಇದನ್ನೇ ವಿವರಿಸುತ್ತದೆ. ಅನುಮಾನಕುಶಲರಿಂದ ಪ್ರಯತ್ನದಿಂದ ಒಂದು ಅರ್ಥವು ಸಾಧಿತವಾದರೆ ಇನ್ನೂ ಚೆನ್ನಾಗಿ ತಿಳಿದವರು ಅದನ್ನು ಬೇರೆ ರೀತಿಯಿಂದ ಪ್ರತಿಪಾದಿಸುತ್ತಾರೆ. ಹಾಗೆ ಮೂರುನಾಲ್ಕು ಜನರಿಂದ ಒಂದು ವಿಷಯ ಪ್ರತಿಪಾದಿತವಾದರೂ ಇನ್ನು ಕೆಲವರು ಬೇರೆ ರೀತಿಯಿಂದಲೇ ಅದನ್ನು ಪ್ರತಿಪಾದಿಸುತ್ತಾರೆ. ಪ್ರಪಂಚವು ಅಜ್ಞರಿಗೆ ಬಾಧಿತವಾಗದಿದ್ದರೂ ಜ್ಞಾನಿಗೆ ಆತ್ಮನಲ್ಲಿ ಅಧ್ಯಸ್ತವಾದ ಪ್ರಪಂಚಕ್ಕೆ ಬಾಧ ತೋರಿಯೇ ತೋರುತ್ತದೆ

ನಾಪಿ ಚರಮಃ । ಸರ್ವಥಾ ಬಾಧವೈಧುರ್ಯಸ್ಯಾಪ್ರಸರ್ವಜ್ಞ ದುರ್ಜ್ಞೇಯತ್ವಾತ್ । ಯದ್ಯೇವಂ ಹಂತ ತರ್ಹಿ ಜ್ಞಾನಾತ್ಮನೋಽಪಿ ಸತ್ಯತ್ವಂ ನಾವ ಗಮ್ಯೇತ ಇತಿ ಚೇತ್— ಮೈವಂ ಮಂಸ್ಥಾಃ । ತತ್ಸತ್ಯಂ ಸ ಆತ್ಮಾ (ಛಾ-೬-೮-೭) ಇತ್ಯಾಗಮಸಂವಾದಗತೇಃ । ನ ಚ ಪ್ರಪಂಚೇಽಪ್ಯಯಂ ನ್ಯಾಯ ಇತಿ ಮಂತವ್ಯಮ್ । ತಾದೃಶಸ್ಯಾಗಮಸ್ಯಾನುಪಲಂಭಾತ್ । ಪ್ರತ್ಯುತಾದ್ವಿತೀಯತ್ವಂ ಶ್ರಾವಯಂತ್ಯಾಃ ಶ್ರುತೇಃ ಪ್ರಪಂಚಮಿಥ್ಯಾತ್ವ ಏವ ಪಕ್ಷಪಾತಾತ್ । ನನು

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಕಲ್ಪನಾಮಾತ್ರ ಶರೀರಸ್ಯ ಪಕ್ಷಸಪಕ್ಷವಿಪಕ್ಷಾದೇಃ ಸರ್ವಸುಲಭತ್ವೇನ ಜಯಪರಾಜಯ ವ್ಯವಸ್ಥಯಾ ಕಥಂ ಕಥಾ ಪ್ರಥೇತ । ಕಾತ್ರ ಕಥಂತಾ ॥
ಏವಂ ತ್ರಿಚತುರಜ್ಞಾನಜನ್ಮನೋ ನಾಧಿಕಾಮತಿಃ (ಶ್ಲೋ-ವಾ-೧-೧೨ಸೂತ್ರೇ) ಇತಿ ನ್ಯಾಯೇನ ತ್ರಿಚತುರಕಕ್ಷ್ಯಾವಿಶ್ರಾಂತಸ್ಯ ತತ್ತದಾಭಾಸಲಕ್ಷಣಾನಾಲಿಂಗಿತಸ್ಯ ದೂಷಣಭೂಷಣಾದೇಸ್ತತ್ರ ಕಥಾಂಗತ್ವಾಂಗೀಕಾರಾತ್ । ಅತ ಏವೋಕ್ತಂ ಖಂಡನಾಕಾರೇಣ—ವ್ಯಾವಹಾರಿಕೀಂ ಪ್ರಮಾಣಸತ್ತಾಮಾದಾಯ ವಿಚಾರಾರಂಭಃ (ಖ-ಪೃ-೪೪) ಇತಿ ॥

ಸರ್ವಥಾ ಬಾಧವೈಧುರ್ಯವೆಂಬ ಎರಡನೆಯ ಪಕ್ಷವೂ ಕೂಡುವುದಿಲ್ಲ. ಇದನ್ನು ಅಸರ್ವಜ್ಞರಾದ ನಮ್ಮಂತಹ ಜನರು ತಿಳಿಯುವುದು ಕಷ್ಟವಾಗಿದೆ. 'ಯದಿ' — ಇತಿ. ಜ್ಞಾನಸ್ವರೂಪನಾದ ಆತ್ಮನೂ ಯಾವ ಅವಸ್ಥೆಯಲ್ಲಿಯೂ ಬಾಧಿತನಾಗುವುದಿಲ್ಲವೆಂದು ಅಸರ್ವಜ್ಞರಾದ ನಾವು ತಿಳಿಯುವುದು ಹೇಗೆ ? ಎಂದು ಪೂರ್ವಪಕ್ಷಿಯ ಅಭಿಪ್ರಾಯ. ಈ ವಿಷಯದಲ್ಲಿ ಶ್ರುತಿಯೇ ಪ್ರಮಾಣವೆಂದು ತೋರಿಸುತ್ತಾನೆ. 'ತತ್ಸತ್ಯಂ' — ಇತಿ. 'ಸದೇವ ಸೋಮ್ಯೇದಮಗ್ರಆಸೀತ್ ಏಕಮೇವಾದ್ವಿತೀಯಮ್' ಇತ್ಯಾದಿ ಶ್ರುತಿಗಳಿಂದ ಆತ್ಮಭಿನ್ನವಾಗಿರುವ ಸಕಲವೂ ನಿಷಿದ್ಧವಾಗಿರುವುದರಿಂದ ಪ್ರಪಂಚಕ್ಕೆ ನಿತ್ಯತ್ವಬೋಧಕವಾದ ಶ್ರುತಿ ಯಾವುದೂ ಇಲ್ಲ. ಅದ್ವಿತೀಯತ್ವವನ್ನು ಬೋಧಿಸುವ ಶ್ರುತಿಯು ಪ್ರಪಂಚಕ್ಕೆ ಮಿಥ್ಯಾತ್ವವನ್ನೇ ಬೋಧಿಸುತ್ತದೆ.
'ನನು'—ಇತಿ. ನಾನಾ ವಕ್ತೃಗಳಿಂದಕೂಡಿ ಪೂರ್ವೋತ್ತರ ಪಕ್ಷಪ್ರತಿಪಾದಕವಾದ ವಾಕ್ಯಸಂದರ್ಭಕ್ಕೆ ಕಥಾ ಎಂದು ಹೆಸರು. ಇದು ವಾದಜಲ್ಪವಿತಂಡಾರೂಪವಾಗಿರುತ್ತದೆ. ತತ್ತ್ವನಿರ್ಣಯಘಟಕವಾದ ಕಥಾವಿಶೇಷಕ್ಕೆ ವಾದವೆಂದು ಹೆಸರು. ಇಲ್ಲಿ 'ಯತ್ನೇನ' ಎಂಬ ಹರಿಕಾರಿಕೆಯಲ್ಲಿ ಹೇಳಿರುವಂತೆ ತರ್ಕಕ್ಕೆ ಎಲ್ಲೆ ಇಲ್ಲದಿರುವುದರಿಂದ ವಾದಿಪ್ರತಿವಾದಿಗಳಿಬ್ಬರೂ ತಮತಮಗೆ ಅಭಿಮತವಾದ ಅರ್ಥವನ್ನು ಸಾಧಿಸಲು ಅನುಮಾನವನ್ನು ಹೇಳಲು ಸಮರ್ಥರಾದುದರಿಂದ ಯಾರಿಗೂ ಜಯವಾಗಲೀ ಪರಾಜಯವಾಗಲೀ ಆಗದಿರುವುದರಿಂದ ತತ್ತ್ವನಿರ್ಣಯವಾಗಲಾರದು. 'ಏವಂತ್ರಿ'—ಇತಿ. ಮೂರು ಅಥವಾ ನಾಲ್ಕು ಜ್ಞಾನಗಳ ಉತ್ಪತ್ತಿಯಾಗುತ್ತದೆ. ಇದಕ್ಕಿಂತ ಅಧಿಕವಾದ ಬುದ್ಧಿ ಇರುವುದಿಲ್ಲವೆಂದು ನ್ಯಾಯದ ಅರ್ಥ. ಸಾಧಕವಾಗಲೀ ಭಾಧಕವಾಗಲೀ ಹೇತ್ವಾಭಾಸಾದಿ ಲಕ್ಷಣವಿನಿರ್ಮುಕ್ತವಾದುದು ಮೂರನೆಯ ಅಥವಾ ನಾಲ್ಕನೆಯ ಅವಸ್ಥೆಯಲ್ಲಿ ವಿಶ್ರಾಂತವಾಗುತ್ತದೆ. ಹೇತ್ವಾಭಾಸಾದಿ ಲಕ್ಷಣದಿಂದ ಕೂಡಿದ್ದರೆ ಮಾತ್ರ ತರ್ಕಕ್ಕೆ ಪರ್ಯವಸಾನವಿಲ್ಲವಾದುದರಿಂದ ಎಲ್ಲಿಯೂ ವಿಶ್ರಾಂತವಾಗುವುದಿಲ್ಲ. ಆಗ ಅದು ಕಥಾಂಗವಾಗುವುದಿಲ್ಲ. ಆದುದರಿಂದ ನಿರ್ದುಷ್ಟವಾಗಿರುವ ಸಾಧಕದಿಂದ ಅಥವಾ ಭಾಧಕದಿಂದ ಕಥಾಸಮಾಪ್ತಿ ಹೇಳಬೇಕು ಎಂದು ತಾತ್ಪರ್ಯ. ವ್ಯಾವಹಾರಿಕವಾದ ಪ್ರಮಾಣಸತ್ತೆಯನ್ನೇ ಆಶ್ರಯಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಚಾರಮಾಡಬೇಕೆಂದು ಪ್ರಾಚೀನರ ಸಂಮತಿಯನ್ನು ತೋರಿಸುತ್ತಾನೆ. 'ಅತಏವ'— ಇತಿ.

ನ ಚ ಭೇದಗ್ರಾಹಿಭಿಃ ಪ್ರಮಾಣೈರದ್ವೈತಶ್ರುತೇರ್ಜಘನ್ಯತಾ ಇತಿ ಶಂಕ್ಯಮ್ । ಬ್ರಹ್ಮಣಿ ಪಾರಮಾರ್ಥಿಕಸತ್ಯತ್ವೇನ ತದಾವೇದಿಕಾಯಾಸ್ತತ್ತ್ವಾವೇದನಲಕ್ಷಣ ಪ್ರಾಮಾಣ್ಯಾಯಾಃ ಶ್ರುತೇರ್ವ್ಯಾವಹಾರಿಕಪ್ರಮಾಣಭಾವಾನಾಂ ಪ್ರತ್ಯಕ್ಷಾ ದೀನಾಂ ಚ ವಿಭಿನ್ನವಿಷಯತಯಾ ಪರಸ್ಪರಂ ಬಾಧ್ಯಬಾಧಕಭಾವಾಸಂಭವಾತ್। ತದಪ್ಯುಕ್ತಂ ತೇನೈವ—

ತದದ್ವೈತಶ್ರುತೇಸ್ತಾವದ್ಬಾಧಃ ಪ್ರತ್ಯಕ್ಷತಃ ಕ್ಷತಃ ।
ನಾನುಮಾನಾದಿ ತಂ ಕರ್ತುಂ ತವಾಪಿ ಕ್ಷಮತೇ ಮತೇ॥ (ಖ-೧-೨೦)
ಧೀಧನಾ ಬಾಧನಾಯಾಸ್ಯಾಸ್ತದಾ ಪ್ರಜ್ಞಾಂ ಪ್ರಯಚ್ಛಥ ।
ಕ್ಷೇಪ್ತುಂ ಚಿಂತಾಮಣಿಂ ಪಾಣಿಲಬ್ಧಮಬ್ಧೌ ಯದೀಚ್ಛಥ ॥ ಖ-೧-೨-೪॥

ತಸ್ಮಾತ್ ತತ್ತ್ವಜ್ಞಾನೇನ ನಿವರ್ತನಾಯಾಸ್ಯ ಬಂಧಸ್ಯಾಜ್ಞಾನಕಲ್ಪಿತತ್ವಮಂಗೀ ಕರ್ತವ್ಯಮ್ । ಯತ ಉಕ್ತಂ ಯತೋ ಜ್ಞಾನಮಜ್ಞಾನಸ್ಯ ನಿವರ್ತಕಮ್ ॥ಇತಿ॥

ಜಘನ್ಯತಾ— ಗೌಣತ್ವಮ್. ಜೀವೇಶ್ವರಭೇದವಾಗಲೀ, ಜೀವರಲ್ಲಿಯೇ ಪರಸ್ಪರಭೇದವಾಗಲೀ, ಜಡಭೇದವಾಗಲೀ ವ್ಯವಹಾರದಶೆಯಲ್ಲಿ ಅನುಭೂತವಾಗುತ್ತದೆ. ಅನುಭವಕ್ಕೆ ವಿರುದ್ಧವಾಗಿರುವ 'ಸದೇವ ಸೋಮ್ಯ—' ಇತ್ಯಾದಿ ಅದ್ವೈತಬೋಧಕ ವಾಗಿರುವ ಶ್ರುತಿಗೆ ಗೌಣಾರ್ಥವನ್ನು ಕಲ್ಪಿಸಿ ಹೇಗಾದರೂ ಹೊಂದಿಸಬೇಕೆಂದು ಪೂರ್ವ ಪಕ್ಷಿಯ ಮತ- 'ವಿಭಿನ್ನವಿಷಯ—' ಇತಿ. ವ್ಯಾವಹಾರಿಕ ಶುಕ್ತಿಸತ್ಯತ್ವವು ಪ್ರಾತಿ ಭಾಸಿಕರಜತಸತ್ಯತ್ವದಿಂದ ಹೇಗೆ ವಿರೋಧ ಹೊಂದುವುದಿಲ್ಲವೋ, ಹಾಗೆಯೇ ಶ್ರುತಿ ಪ್ರತಿ ಪಾದಿತವಾದ ಪಾರಮಾರ್ಥಿಕವಾದ ಬ್ರಹ್ಮಾದ್ವೈತಸತ್ಯತ್ವವು ಲೋಕದಲ್ಲಿ ಅನುಭವಿಸ ಲ್ಪಡುವ ವ್ಯಾವಹಾರಿಕದ್ವೈತ ಸತ್ಯತ್ವದಿಂದ ವಿರೋಧ ಹೊಂದುವುದಿಲ್ಲವೆಂದು. ತಾತ್ಪರ್ಯ. ತೇನ—ಖಂಡನಕಾರನಿಂದಲೇ.

'ತತ್ರ—' ಇತಿ. ಆದುದರಿಂದ ಅದ್ವೈತ ಶ್ರುತಿಗೆ ಪ್ರತ್ಯಕ್ಷದಿಂದ ಬಾಧ ವೆಂಬುದು ಇಲ್ಲ (ಕ್ಷತಃ) ವೆಂದರ್ಥ. ಸಕಲಪ್ರಮಾಣಗಳಲ್ಲಿ ಮೂರ್ಧನ್ಯವಾದ ಪ್ರತ್ಯಕ್ಷ ಪ್ರಮಾಣಕ್ಕೇ ಈ ಗತಿಯಾದರೆ ಅದನ್ನು ಉಪಜೀವಿಸಿ ಬಂದಿರುವ ಅನುಮಾನಾದಿ ಪ್ರಮಾಣಗಳವಿಷಯದಲ್ಲಿ ಹೇಳುವುದೇನಿದೆಯೆಂದರೆ ವಿವರಿಸುತ್ತಾನೆ. 'ನಾನುಮಾ—' ಇತಿ. ಅನುಮಾನಾದಿಗಳೂ ಆಶ್ರುತಿಯನ್ನು ಬಾಧಿಸಲು (ತವಮತೇಪಿ) ಸಮರ್ಥವಾಗ ಲಾರವು. ಅದೂ ಅಲ್ಲದೆ ಶ್ರುತಿಗಿಂತ ಲಿಂಗವು ದುರ್ಬಲವಾಗಿರುತ್ತದೆ. ಹೇಧೀ ಧನಾಃ— ಬುದ್ಧಿವಂತರೇ. ನೀವು ಅನಾಯಾಸವಾಗಿ ಕೈಯಲ್ಲಿ ಹೊಂದಿದ ಚಿಂತಾ ಮಣಿಯನ್ನು ಸಮುದ್ರದಲ್ಲಿ ಎಸೆಯಲು ಬಯಸುವುದಾದರೆ ಆಗ ಅದ್ವೈತಶ್ರುತಿಬಾಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಕೋಸ್ಕರ ಬುದ್ಧಿಪ್ರಯೋಗಿಸಿರಿ ಹಾಗೆ ಮಾಡುವುದು ಅಯುಕ್ತ, ಅಪ್ರಯೋಜಕ ವೆಂದು ತಾತ್ಪರ್ಯ.

ಯದುಕ್ತಂ ಸತ್ಯಸ್ಯಾಪಿ ದುರಿತಸ್ಯ ಸೇತುದರ್ಶನೇನ ನಿವೃತ್ತಿರುಪಲಭ್ಯತ ಇತಿ । ತದಯುಕ್ತಮ್ । ವಿಹಿತಕ್ರಿಯಾನುಷ್ಠಾನೇನ ಜನಿತಸ್ಯ ಧರ್ಮಸ್ಯಾಧರ್ಮನಿವರ್ತಕತ್ವ ಧ್ರೌವ್ಯಾತ್ । ಧರ್ಮೇಣ ಪಾಪಮಪನುದಂತಿ (ಮ–ನಾ ೨೧–೧) ಇತಿ ಶ್ರುತೇಃ । ಪ್ರಮಾಣ ವಸ್ತು ಪರತಂತ್ರಶಾಲಿನ್ಯಾ ದರ್ಶನಕ್ರಿಯಾಯಾಶ್ಚೋದಿತ ಪುರುಷ ಪ್ರಯತ್ನತಂತ್ರತ್ವಾಭಾವೇನ ವಿಧಾನಾಸಂಭವಾತ್ —

ಬ್ರಹ್ಮಹತ್ಯಾಂ ಪ್ರಮುಚ್ಯೇತತಸ್ಮಿನ್ ಸ್ನಾತ್ವಾಮಹೋದಧೌ

ಇತ್ಯಾದಿಸ್ಮೃತಿವಿಹಿತ ಬ್ರಹ್ಮಚರ್ಯಾಂಗಸಹಿತದೂರತರದೇಶಗಮನ ಸಾಧ್ಯಬ್ರಹ್ಮಹನನ ನಿವೃತ್ತಿಫಲಕ ಸೇತುಸ್ನಾನಪ್ರಶಂಸಾರ್ಥತ್ವಾತ್ । ಯಸ್ಯ ಹಿ ದರ್ಶನಮಾತ್ರೇಣೈವದುರಿತೋಪಶಮಃ ಕಿಮುತ ಸ್ನಾನೇನ । ಅನ್ಯಥಾ ದೂರಗಮನಾನರ್ಥಕ್ಯಂ ಪ್ರಸಜೇತ್ । ತತ್ರ ಖದೀನಾಮಪ್ಯನರ್ಥನಿವೃತ್ತಿರಾಪತೇತ್ । ಅಂಧಸ್ಯ ನಸ್ಯಾಚ್ಚ ।

ಸತ್ಯವಾದ ದುರಿತವು ಸೇತುದರ್ಶನದಿಂದ ನಿವೃತ್ತಿಯಾಗುತ್ತದೆಂದುದೂ ಸರಿಯಲ್ಲ. 'ಧರ್ಮೇಣ ಪಾಪಮಪನುದಂತಿ' ಇತ್ಯಾದಿ ಶ್ರುತಿಪ್ರಾಮಾಣ್ಯದಿಂದ ಪಾಪನಾಶಕತ್ವವು ಧರ್ಮಕ್ಕಲ್ಲದೆ ಜ್ಞಾನಕ್ಕೆ ಹೇಳಿಲ್ಲ. ಜ್ಞಾನವು ಪ್ರಮಾಣಾಧೀನವಾಗಿಯೂ ವಿಷಯಾಧೀನವಾಗಿಯೂ ಇರುವುದರಿಂದ ಅದಕ್ಕೆ ವಿಧಾನತ್ವ ಸಂಭವಿಸುವುದಿಲ್ಲ. ಯಜ್ಞಾದಿ ಕರ್ಮಗಳಾದರೋ ಮುಖ್ಯವಾಗಿ ಪುರುಷಪ್ರಯತ್ನಾಧೀನವಾದುದರಿಂದ ಅದರ ವಿಧಾನವು ಕೂಡುತ್ತದೆ. 'ಸೇತುಂ ದೃಷ್ಟ್ವಾ'—ಎಂಬಲ್ಲಿ ಸೇತುದರ್ಶನವಿಧಿಯಲ್ಲಿ ತಾತ್ಪರ್ಯವಿಲ್ಲ. ಸ್ನೇತುಸ್ನಾನಪ್ರಶಂಸೆಗೋಸ್ಕರ ದರ್ಶನವನ್ನು ಹೇಳಿರುತ್ತಾರೆ. ದರ್ಶನದಿಂದಲೇ ದುರಿತ ನಿವೃತ್ತಿಯೆಂದ ಮೇಲೆ ಸ್ನಾನದಿಂದ ಹೇಳಬೇಕಾದುದೇನಿದೆ ? ಹೀಗೆ ತಾತ್ಪರ್ಯ ಹೇಳದಿದ್ದರೆ ಅತ್ಯಂತ ಪಾಪಿಗಳಾದ ಖರಾದಿಗಳಿಗೂ ಸುಲಭವಾಗಿ ಸೇತುದರ್ಶನವಾಗುವುದರಿಂದ ಅನರ್ಥನಿವೃತ್ತಿಯಾಗಬೇಕಾಗುತ್ತದೆ. ಕುರುಡನು ನೋಡಲು ಅಶಕ್ತನಾದುದರಿಂದ ಅವನಿಗೆ ಫಲವಿಲ್ಲದೇ ಹೋಗಬೇಕಾಗುತ್ತದೆ.

ನನು

ಅಗ್ನಿಚಿತ್ಕಪಿಲಾರಾಜಾ ಸತೀ ಭಿಕ್ಷುರ್ಮಹೋದಧಿಃ ॥
ದೃಷ್ಟಮಾತ್ರಾಃ ಪುನಂತ್ಯೇತೇ ತಸ್ಮಾತ್ಪಶ್ಯೇತ ನಿತ್ಯಶಃ ।

ಇತಿ ಕ್ವಚಿದ್ದರ್ಶನ ಕ್ರಿಯಾಯಾ ಅಪಿ ವಿಧಾನಂ ದರೀದೃಶ್ಯತ ಇತಿ ಚೇತ್ —

ಮೈವಂವೋಚಃ । ತತ್ರಾಪ್ಯನಯ್ಯೆವಾನುಪಪತ್ತ್ಯಾಗ್ನಿಚಿದಾದ್ಯರ್ಥಪರಿಚರ್ಯಾದಾವೇವ ತಾತ್ಪರ್ಯಾವಧಾರಣಾತ್ । ಯಚ್ಚೋಕ್ತಂ ವಿಷಯದೋಷದರ್ಶನಾತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಗೋ ದಂದಹ್ಯತ ಇತಿ । ತತ್ರ ವಿಷಯದೋಷದರ್ಶನೇನ ವಿರೋಧಭೂತಾನಭಿರತಿ ಸಂಜ್ಞಕ ವೈರಾಗ್ಯೈಕಪ್ರಾದುರ್ಭಾವಾತ್ ರಾಗ ನಿವೃತ್ತೌ ತದದರ್ಶನಮಾತ್ರಮಿತಿ ನ ವ್ಯಭಿಚಾರಃ । ಯದಪಿ ತಾರ್ಕ್ಷ್ಯಧ್ಯಾನಾದಿನಾ ವಿಷಾದಿಸತ್ಯಂ ವಿನಶ್ಯತೀತಿ ॥ ತನ್ನ ಶ್ಲಿಷ್ಯತೇ । ತತ್ರಾಪಿ ಮಂತ್ರಪ್ರಯೋಗಾದಿ ಕ್ರಿಯಾಯಾ ಏವ ವಿಷಾದ್ಯಪನೋದಕತ್ವಾತ್ । ಧ್ಯಾನಸ್ಯ ಪ್ರಮಾತ್ವಾಭಾವಾಚ್ಚ । ಯದವಾದ್ಯೌಪಾಧಿಕಸ್ಯ ಜೀವಭಾವಸ್ಯೋಪಾಧಿನಿವೃತ್ತ್ಯಾ ನಿವೃತ್ತೌ ಬ್ರಹ್ಮಭಾವೋಪಪತ್ತೇರ್ನ ತದರ್ಥಮರ್ಥವೈತಥ್ಯಕಥನಮಿತಿ । ತದಪಿ ಕಾಶಕುಶಾವಲಂಬನಕಲ್ಪಮ್ । ವಿಕಲ್ಪಾಸಹತ್ವಾತ್ । ಕಿಮುಪಾಧೇಃ ಸತ್ಯತ್ವಮಭಿಪ್ರೇತ್ಯ ಮಿಥ್ಯಾತ್ವಂ ವಾ । ನ ಪ್ರಥಮಃ । ಪ್ರಮಾಣಾಭಾವಾತ್ । ನಾಪರಃ । ಇಷ್ಟಾಪತ್ತೇಃ । ತಸ್ಮಾದಾವಿದ್ಯಕೋಭೇದ ಇತಿ ಶ್ರುತಾವದ್ವಿತೀಯತ್ವೋಪಪತ್ತಯೇಽಭಿಧೀಯತೇ ನ ತು ವ್ಯಸನಿತಯಾ ॥

'ಅಗ್ನಿ'—ಇತಿ ಅಗ್ನಿಂ ಚಿನೋತಿ ಇತಿ ಅಗ್ನಿಚಿತ್. ಯಾಗಮಾಡುವ ಯಜಮಾನ. ಕಪಿಲಹಸು, ಪತಿವ್ರತಾ (ಸತೀ), ಭಿಕ್ಷುವೆಂದರೆ ಸರ್ವಕರ್ಮಸಂನ್ಯಾಸಿಯಾದ ಪರಮಹಂಸನು, ಮಹಾ ಸಮುದ್ರ ಇವರನ್ನು ನೋಡಿದೊಡನೆಯೇ ಪವಿತ್ರರಾಗುವುದರಿಂದ ನಿತ್ಯವೂ ನೋಡಬೇಕೆಂಥರ್ಥ. ಇಲ್ಲಿ ದರ್ಶನಕ್ರಿಯೆಗೆ ವಿಧಾನವಿದೆಯೆಂದು ಆಕ್ಷೇಪಿಸಬಾರದು. ಇಲ್ಲಿಯೂ ಆಯಾಯ ವಿಷಯಸೇವನೆಯಲ್ಲಿಯೇ ತಾತ್ಪರ್ಯ ಹೇಳಬೇಕು. ಪರಿಚರ್ಯಾಪ್ರಶಂಸೆಗೋಸ್ಕರ ಹಿಂದಿನಂತೆ ಹೇಳಿದೆಯೆಂದು ತಿಳಿಯಬೇಕು. ವಿಷಯದೋಷದರ್ಶನದಿಂದ ರಾಗನಾಶವೆಂಬಲ್ಲಿಯೂ ವಿಷಯರಾಗಕ್ಕೆವಿರೋಧವಾಗಿರುವ ('ವಿರೋಧಭೂತ'—ಇತಿ) ವಿಷಯಾನಭಿರತಿಯೆಂಬ ಸಂಜ್ಞೆಯನ್ನು ಹೊಂದಿರುವ ವೈರಾಗ್ಯವು ಹುಟ್ಟಿದಾಗ ವಿಷಯರಾಗವು ತೋರುವುದಿಲ್ಲವೆಂಬ ಅಭಿಪ್ರಾಯದಿಂದ ರಾಗವು ಸುಟ್ಟು ಹೋಗುತ್ತದೆಯೆಂದು ಹೇಳಿದೆ. ಆದುದರಿಂದ ವ್ಯಭಿಚಾರಕ್ಕೆ ಅವಕಾಶವಿಲ್ಲ. ತಾರ್ಕ್ಷ್ಯಧ್ಯಾನದಿಂದ ಸತ್ಯವಾದ ವಿಷವು ನಾಶವಾಗುತ್ತದೆಂದು ಕೊನೆಯಪೂರ್ವಪಕ್ಷ. ಇದೂ ಸರಿಯಲ್ಲ, ಶ್ಲಿಷ್ಯತೇ—ಯುಜ್ಯತೇ.

'ಪ್ರಮಾಭಾವಾತ್'—ಇತಿ. ಜ್ಞಾನವಿಶೇಷವಾದ ಪ್ರಮಾಪದದಿಂದ ವ್ಯವಹರಿಸಲ್ಪಡುವ ಯಥಾರ್ಥಾನುಭವವು ಶಾಸ್ತ್ರಪ್ರಾಮಾಣ್ಯದಿಂದ ಸತ್ಯವಾದ ವಿಷಯಕ್ಕೆ ವಿನಾಶಕವೆಂದು ಪೂರ್ವಪಕ್ಷಿಯ ಅಭಿಪ್ರಾಯವಾಗಿರುತ್ತದೆ. ಈ ವಿಷಯದಲ್ಲಿ ಮೇಲಿನ ಉದಾಹರಣೆ ಕೂಡುವುದಿಲ್ಲ. ಧ್ಯಾನನೆಂದರೆ ಅವಿಚ್ಛಿನ್ನಸ್ಮೃತಿಸಂತಾನರೂಪವಾಗಿರುತ್ತದೆ. ಹೀಗೆ ಇದು ಅನುಭವವೇ ಆಗದಿರುವುದರಿಂದ ಇದಕ್ಕೆ ಯಥಾರ್ಥಾನುಭವತ್ವವು ಸಂಭವಿಸುವುದು ಹೇಗೆ ? "ಯದವಾದಿ"—ಇತಿ ಔಪಾಧಿಕವಾದ ಜೀವಭಾವವು ಉಪಾಧಿನಿವೃತ್ತವಾಗುವುದರಿಂದ ಬ್ರಹ್ಮಭಾವವು ಕೂಡುತ್ತಿರುವಾಗ ಇದಕ್ಕೋಸ್ಕರ ಅರ್ಥವೈತಥ್ಯ ಅಂದರೆ ಪ್ರಮಾತೃತ್ವಾದಿನಿಖಿಲಪ್ರಪಂಚಕ್ಕೆ ಮಿಥ್ಯಾತ್ವವನ್ನು ಹೇಳುವುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯುಕ್ತವಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ. ವಿಕಲ್ಪಕೂಡದಿರುವುದರಿಂದ ಇದೂ ಯುಕ್ತಿ ಯುಕ್ತವಾಗುವುದಿಲ್ಲ. 'ಕಿಮುತ—' ಇತಿ. ಉಪಾಧಿಯಿಂದ ಜೀವಭಾವವೆಂದರೆ ಆ ಉಪಾಧಿಯು ಸತ್ಯವೇ ? ಅಂದರೆ ಸತ್ಯತ್ವದಲ್ಲಿ ಪ್ರಮಾಣವಿಲ್ಲದಿರುವುದರಿಂದ ಸತ್ಯವೆಂದಾಗುವುದಿಲ್ಲ. ಮಿಥ್ಯಾ ಎಂದರೆ ಅದು ನಮಗೆ ಇಷ್ಟವಾದುದೇ ಆಗಿದೆ. 'ತಸ್ಮಾತ್—' ಇತಿ. 'ಸದೇವ ಸೋಮ್ಯ—' ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮನಿಗೆ ಅದ್ವಿತೀಯತ್ವವನ್ನು ಬೋಧಿಸುವುದರಿಂದ ಅದು ಕೂಡಬೇಕಾದರೆ ಪ್ರತ್ಯಕ್ಷವಾಗಿ ತೋರುವ ಭೇದವು ಅವಿದ್ಯಾಕಲ್ಪಿತವೆಂದೇ ಅಂಗೀಕರಿಸಬೇಕಾಗುತ್ತದೆ. ಇದನ್ನೇ ನಾವು ಹೇಳಿರುವುದಲ್ಲದೆ ಅದ್ವೈತವಾದದವ್ಯಸನದಿಂದ (ಹಠ) ಹೇಳಲಿಲ್ಲ.

ಯದಿ ವಸ್ತುತಃ ಸರ್ವೋಪದ್ರವರಹಿತಮಾತ್ಮತತ್ತ್ವಂ ತರ್ಹಿ ಕಥಂಕಾರಂದೇಹಾದಿರೂಪಂ ಕಾರಾಗಾರಂ ಕಾರಂಕಾರಂ ಪುನಃ ಪುನಸ್ತತ್ರಪ್ರವಿಶತಿ । ತದತಿಫಲ್ಗು । ಅವಿದ್ಯಾಯಾಃ ಅನಾದಿತ್ವೇನ ದತ್ತೋತ್ತರತ್ವಾತ್ । ಅತೋ ನಿವೃತ್ತ್ಯುಪಾಯ ಏವಾನ್ವೇಷಣೀಯಃ ಪ್ರೇಕ್ಷಾವತಾ । ನ ತು ವಿಸ್ಮಯಃ ಕರ್ತವ್ಯಃ । ತತಶ್ಚ ತತ್ತ್ವಮಸ್ಯಾದಿವಿದ್ಯಯಾ ತದವಿದ್ಯಾನಿವೃತ್ತೌ ನಿರತಿಶಯಾನಂದಾತ್ಮಲಾಭರೂಪ ಪರಮಪುರುಷಾರ್ಥಃಸೇತ್ಸ್ಯತಿ । ತಥಾ ಚಾಪಸ್ತಂಬಸ್ಮೃತಿಃ—ಆತ್ಮಲಾಭಾನ್ನ ಪರತವಿದ್ಯತ ಇತಿ । ನನ್ವಸೌ ನಿತ್ಯಲಬ್ಧಃ । ನ ಹಿ ಸ್ವಯಮೇವ ಸ್ವಸ್ಯಾಲಬ್ಧೋ ಭವತಿ ಸತ್ಯಮ್ । ಕಿಂತ್ವನಾದಿಮಾಯಾಸಂಬಂಧಾತ್ ಕ್ಷೀರೋದಕವತ್ ಸಮುದಾಚಾರವೃತ್ತಿತಾಂ ನ ಲಭತೇ । ತಥಾ ಚ ಯಥಾ ಶಬರಾದಿಭಿಃ ಬಾಲ್ಯಾತ್ ಸ್ವಸುತೈಃ ಸಹ ವರ್ಧಿತೋ ರಾಜಪುತ್ರಸ್ತಜ್ಜಾತೀಯಮಾತ್ಮಾನಮವಗಚ್ಛನ್ ಬಂಧುಭಿರ್ಯ ಏವಂಭೂತೋ ರಾಜಾ ಸ ತ್ವಮಸೀತಿ ಬೋಧಿತೋ ಸ್ವರೂಪೇ ಲಬ್ಧಸ್ವರೂಪ ಇವ ಭವತಿ ತಥಾ ವೇಶ್ಯಾಸ್ಥಾನೀಯಯಾನಾದ್ಯವಿದ್ಯಯಾ ಸ್ವಭಾವಾಂತರಂ ನೀತ ಆತ್ಮಾ ಮಾತೃಸ್ಥಾನೀಯಯಾತತ್ತ್ವಮಸೀತ್ಯಾದಿಕಯಾ ಶ್ರುತ್ಯಾ ಸ್ವಭಾವಂ ನೀಯತೇ ॥

ವಸ್ತುತಃ ಆತ್ಮತತ್ತ್ವವು ಸರ್ವೋಪದ್ರವರಹಿತವಾಗಿದ್ದರೆ ಕಾರಾಗಾರರೂಪದೇಹವನ್ನು ಪುನಃ ಪುನಃ ಪ್ರವೇಶಮಾಡುವುದು ಹೇಗೆ ? ಅಂದರೆ ಅನಾದಿಯಾಗಿರುವ ಅವಿದ್ಯೆಯಿಂದ ಎಂದು ಹಿಂದೆ ಹೇಳಿದೆ. ಆದುದರಿಂದ ಆ ಅನಾದಿಯಾದ ಅವಿದ್ಯಾನಿವೃತ್ತ್ಯುಪಾಯವನ್ನು ಹುಡುಕಬೇಕು. ಆದುದರಿಂದ ತತ್ತ್ವಮಸ್ಯಾದಿವಾಕ್ಯಾರ್ಥಚಿಂತನೆಯಿಂದ ಉಂಟಾದ ವಿದ್ಯೆಯಿಂದ (ಜ್ಞಾನ) ಅವಿದ್ಯಾನಿವೃತ್ತಿಯಾದಾಗ ನಿರತಿಶಯಾನಂದರೂಪವಾದ ಆತ್ಮಲಾಭರೂಪ ಪರಮ ಪುರುಷಾರ್ಥವು ಸಿದ್ಧಿಸುತ್ತದೆ. ಆತ್ಮಲಾಭಕ್ಕಿಂತ ಉತ್ಕೃಷ್ಟವಾದುದು ಯಾವುದೂ ಇಲ್ಲವೆಂದು ಆಪಸ್ತಂಬಸ್ಮೃತಿಯಲ್ಲಿಯೂ ಹೇಳಿದೆ. 'ನನು'—ಇತಿ. ಆತ್ಮನು ನಿತ್ಯಲಬ್ಧನಾಗಿರುವಾಗ ಪುನಃ ಹೊಂದುವುದೆಂದರೇನು ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂದರೆ ಹಾಲು ನೀರು ಬೆರತಾಗ ಇದು ನೀರು, ಇದು ಹಾಲು ಎಂದು ವಿಶದವಾಗಿ ಹೇಗೆ ತಿಳಿಯುವುದಿಲ್ಲವೋ ಅದರಂತೆ ಮಾಯಾತ್ಮರಿಗೆ ವೈಶದ್ಯಪ್ರತೀತಿ ಇರುವುದಿಲ್ಲ.

ಆತ್ಮನು ಮಾಯಾಸಂಬಂಧಿಯಾದ ವೃದ್ಧ್ಯಾದಿಗಳನ್ನು ತನ್ನದೆಂದು ತಿಳಿಯುವುದ ರಿಂದ ತದ್ವಿವಿಕ್ತವಾಗಿ ಸ್ವಸ್ವರೂಪವನ್ನು ತಿಳಿಯಲಾರನು. ಮಾಯಾತ್ವರೂಪದಿಂದ ಮಾಯೆಯನ್ನು ತಿಳಿಯುವುದಿಲ್ಲ. ಇದಕ್ಕೆ ರಾಜಪುತ್ರನ ದೃಷ್ಟಾಂತವನ್ನು ತೋರಿಸು ತ್ತಾನೆ. "ಶಬರಾದಿಭಿಃ"—ಇತಿ. ಬೇಡರಿಂದ ಬೆಳಸಲ್ಪಟ್ಟ ರಾಜಕುವರನು ಮೊದಲು ತಾನೂ ಬೇಡರವನೆಂದು ತಿಳಿದಿರುವಾಗ ಅವನ ಬಂಧುಗಳು ನೀನು ಇಂತಹವನು ಎಂದು ಅವನ ಸ್ವರೂಪವನ್ನು ತಿಳಿಸಿದಾಗ ನೂತನವಾಗಿ ತನ್ನ ಸ್ವರೂಪವನ್ನು ತಿಳಿದವನಂತೆ ಆಗುತ್ತಾನೆ. ಅದರಂತೆ ವೇಶ್ಯೆಯಂತಿರುವ ಅನಾದ್ಯವಿದ್ಯೆಯಿಂದ ಅನ್ಯಸ್ವಭಾವವನ್ನು ಹೊಂದಿದ ಆತ್ಮನು ಮಾತೃವಿನಂತಿರುವ ತತ್ತ್ವಮಸ್ಯಾದಿ ಶ್ರುತಿಯಿಂದ ಸ್ವಭಾವಶಾಲಿ ಯಾಗುತ್ತಾನೆ. ರಾಜಪುತ್ರನಂತೆ ಮೊದಲು ಮಾಯಾಕಾರ್ಯಗಳಾದ ಅಹಂಕಾರಾದಿ ಗಳಿಂದ ವಿವೇಕ ಹೊಂದದೆ ಆದಕ್ಕೆ ಅನುರೂಪವಾಗಿ ತನ್ನನ್ನು ಸುಖಾದಿವಿಶಿಷ್ಟನೆಂದು ತಿಳಿಯುತ್ತಾನೆ. ವಿವೇಕ ಬಂದ ಮೇಲೆ ಸ್ವಸ್ವರೂಪವನ್ನು ತಿಳಿಯುತ್ತಾನೆ.

ಏತದಾಹುಸ್ತ್ರ್ಯವಿದ್ಯವೃದ್ಧಾಃ—

ನೀಚಾನಾಂ ವಸತೋ ತದೀಯತನಯ್ಯೈಃ ಸಾರ್ಧಂ ಚಿರಂ ವರ್ಧಿತಃ
ತಜ್ಜಾತೀಯಮವೈತಿ ರಾಜತನಯಃ ಸ್ವಾತ್ಮಾನಮಪ್ಯಂಜಸಾ ।
ಸಂವಾದೇ ಮಹದಾದಿಭಿಃ ಸಹ ವಸಂಸ್ತದ್ವದ್ಭವೇತ್ಪೂರುಷಃಸ್ವಾತ್ಮಾನಂ ಸುಖ
ದುಃಖಜಾಲಕಲಿತಂ ಮಿಥ್ಯೈವ ಧಿಙ್ಮನ್ಯತೇ ॥
ದಾತಾ ಭೋಗಪರಃ ಸಮಗ್ರವಿಭವೋ ಯಃ ಶಾಸಿತಾ ದುಷ್ಕೃತಾನ್ ರಾಜಾ
ಸ ತ್ವಮಸೀತಿ ರಕ್ಷಿತೃಮುಖಾತ್ ಶ್ರುತ್ವಾ ಯಥಾವತ್ ಸತು ।
ರಾಜೀಭೂಯೆ ಯಥಾರ್ಥಮೇವ ಯತತೇ ತದ್ವತ್ಪುಮಾನ್ ಬೋಧಿತಃ
ಶ್ರುತ್ಯಾ ತತ್ತ್ವಮಸೀತ್ಯಪಾಸ್ಯ ದುರಿತಂ ಬ್ರಹ್ಮೈವ ಸಂಪದ್ಯತೇ ।

ರಾಜಪುತ್ರನ ದೃಷ್ಟಾಂತವನ್ನು ಪ್ರಾಚೀನರು ಶ್ಲೋಕರೂಪವಾಗಿ ತಿಳಿಸಿರುವುದನ್ನು ತೋರಿಸುತ್ತಾರೆ. 'ನೀಚಾನಾಂ—' ಇತಿ. ನೀಚರಮಧ್ಯದಲ್ಲಿ ವಾಸಮಾಡುತ್ತಾ ಅವರ ಮಕ್ಕಳೊಡನೆ ಬಹುಕಾಲದಿಂದ ಬೆಳೆದ ರಾಜಪುತ್ರನು ತನ್ನನ್ನು ನೀಚಜಾತಿಯವ ನೆಂದೇ ತಿಳಿದಿರುತ್ತಾನೆ. ಹೀಗೆಯೇ ಪುರುಷನು ಜನಸಂವಾದದಲ್ಲಿ ಮಾಯಾಕಾರ್ಯ ಗಳಾದ ಮಹದಾದಿಗಳಿಂದ ಅಭೇದಹೊಂದಿ ತನ್ನನ್ನು ಸುಖದುಃಖಾದಿವ್ಯಾಪೃತನೆಂದು (ಅವಾಸ್ತವವಾಗಿ) ತಿಳಿಯುತ್ತಾನೆ. ನೀನು ದಾನಿ, ಭೋಗಿ, ಸಕಲೈಶ್ವರ್ಯಸಂಪನ್ನನು ದುಷ್ಟನಿಗ್ರಹಮಾಡುವವನೂ ಆದ ರಾಜನೆಂದು ರಕ್ಷಣೆಮಾಡಿದವರು ತಿಳಿಸಿದಾಗ ಅದರಂತೆ ತಾನೂ ರಾಜಕುಮಾರನೆಂದು ಸ್ವರೂಪವನ್ನು ತಿಳಿದು ರಾಜನಾಗಿ ವಿಜಯಾರ್ಥಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಗುವಂತೆ ಪುರುಷನೂ ತತ್ತ್ವಮಸ್ಯಾದಿ ಶ್ರುತಿಯಿಂದ ಬೋಧಿತನಾಗಿ ದುಃಖಾದಿಗಳನ್ನು ಕಳೆದು ಬ್ರಹ್ಮಸ್ವರೂಪವನ್ನು ಹೊಂದುತ್ತಾನೆ ಎಂದು ತಾತ್ಪರ್ಯ.

ಏತೇನೈತತ್ ಪ್ರತ್ಯುಕ್ತಂ—ಯದುಕ್ತಂ ಪರೈಃ ಕಿಂ ದ್ವಯೋಸ್ತಾದಾತ್ಮ್ಯಂ, ಏಕಸ್ಯ ವಾ । ನಾದ್ಯಃ । ಅದ್ವೈತಭಂಗಪ್ರಸಂಗಾತ್ । ನ ದ್ವಿತೀಯಃ । ಅಸಂಭವಾತ್ । ತನ್ನ । ಅವಿದ್ಯಾಪರಿಕಲ್ಪಿತಭೇದನಿವೃತ್ತಿಪರತ್ವೇನ ತತ್ತ್ವಮಸ್ಯಾದಿತಾದಾತ್ಮ್ಯವಾದ ಪ್ರಾಮಾಣ್ಯೋಪಪತ್ತೇಃ । ತೌ ಚ ಪರ್ಯನುಯೋಗಪರಿಹಾರೌ ಅಗ್ರಾಹಿಷಾತಾಂ ಮನೀಷಿಭಿಃ ।

ನ ದ್ವಯೋರಸ್ತಿ ತಾದಾತ್ಮ್ಯಂ ನ ಚೈಕಸ್ಯಾದ್ವಯತ್ವತಃ ।
ಅಪ್ರಾಮಾಣ್ಯಂ ಶ್ರುತೇರೇವಂ ನಾರೋಪಧ್ವಂಸಮಾತ್ರತಃ ಇತಿ ॥

ಬ್ರಹ್ಮಾತ್ಮಭಾವವನ್ನು ಹೀಗೆ ತಿಳಿಯದಿರುವುದರಿಂದ ವಾದಿಯ ಪೂರ್ವಪಕ್ಷವು ತಿರುಳಿಲ್ಲದಂತಾಗುತ್ತದೆ. ಸ ಆತ್ಮಾ ಯಯೋಸ್ತೌ ತದಾತ್ಮಾನೌ । ತಯೋರ್ಭಾವಃ ತಾದಾತ್ಮ್ಯಮ್ । ಇಲ್ಲಿ ಎರಡು ವಸ್ತುಗಳಿಗೂ ಭೇದವೆಂದರೆ ಅದ್ವೈತಹಾನಿ. ಒಂದು ವಸ್ತುವಿಗೇ ಭೇದಾಭಾವವೆಂದರೆ ತಾದಾತ್ಮ್ಯಶಬ್ದಾರ್ಥವು ಕೂಡುವುದಿಲ್ಲವೆಂದು ಪೂರ್ವಪಕ್ಷ. ಅವಿದ್ಯೆಯಿಂದ ಕಲ್ಪಿತವಾದ ಭೇದನಿವೃತ್ತಿಯನ್ನೇ ಶ್ರುತಿಯು ಬೋಧಿಸುವುದರಿಂದ ಅಪ್ರಾಮಾಣ್ಯಶಂಕೆಗೆ ಅವಕಾಶವಿಲ್ಲವೆಂದು ಸಿದ್ಧಾಂತ. ಇದನ್ನೇ ವಿದ್ವಾಂಸರು "ನ ದ್ವಯೋಃ—" ಎಂಬ ಶ್ಲೋಕದಿಂದ ವಿವರಿಸಿರುತ್ತಾರೆ. ಆರೋಪಿತವಾದುದು ವಾಸ್ತವವಲ್ಲ. ಅದರ ನಿವೃತ್ತಿಯೇ ಶ್ರುತಿತಾತ್ಪರ್ಯವಾದುದರಿಂದ ಎಲ್ಲಿಯೂ ದೋಷಕ್ಕೆ ಅವಕಾಶವಿಲ್ಲ.

ತತಶ್ಚ ತತ್ತ್ವಮಸೀತಿ ತತ್ತ್ವಂಪದಾರ್ಥಶ್ರವಣಮನನ ಭಾವನಾಬಲಭುವಾ ಸಾಕ್ಷಾತ್ಕಾರೇಣ ಅನಾದ್ಯವಿದ್ಯಾನಿವೃತ್ತೌ ಸಚ್ಚಿದಾನಂದೈಕರಸಬ್ರಹ್ಮಾವಿರ್ಭಾವಃ ಸಂಪತ್ಸ್ಯತ ಇತಿ ಬ್ರಹ್ಮಣೋ ಜಿಜ್ಞಾಸ್ಯತ್ವಂ ಪ್ರಥಮಸೂತ್ರೋಕ್ತಂ ಯುಕ್ತಮ್ ।

ಅಜ್ಞಾತಂ ವಿಷಯೋ ಬ್ರಹ್ಮ ಜ್ಞಾತಂ ತಚ್ಚ ಪ್ರಯೋಜನಮ್ ।
ಮುಮುಕ್ಷುರಧಿಕಾರೀ ಸ್ಯಾತ್ ಸಂಬಂಧಃ ಶಕ್ತಿತಃ ಶ್ರುತೇಃ ॥ ಇತಿ ॥

ಜನ್ಮಾದ್ಯಸ್ಯ ಯತಃ (ಬ್ರ-ಸೂ-೧-೧-೨) ಇತಿ ದ್ವಿತೀಯಸೂತ್ರೇ ಬ್ರಹ್ಮಸ್ವರೂಪಲಕ್ಷಣ ತಟಸ್ಥಲಕ್ಷಣಾಭ್ಯಾಂ ನ್ಯರೂಪಿ । ತತ್ರ ಸ್ವರೂಪಾಂತರ್ಗತತ್ವೇ ಸತಿ ವ್ಯಾವರ್ತಕಂ ಸ್ವರೂಪಲಕ್ಷಣಂ "ಸತ್ಯಂ ಜ್ಞಾನಮನಂತಂ ಬ್ರಹ್ಮ" (ತೈ-೨-೧-೧) ಇತ್ಯಾದಿವೇದಾಂತೈಃ ಪ್ರತಿಪಾದಿತಮ್ । ತಸ್ಯ ಸತ್ಯಜ್ಞಾನಾದ್ಯಾತ್ಮಕ ಸ್ವರೂಪಾಂತರ್ಗತತ್ವೇ ಸತಿ ವ್ಯಾವರ್ತಕತ್ವಾತ್ । ತಟಸ್ಥಲಕ್ಷಣಂ 'ಯತೋವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಮಾನಿ' (ತೈ ೨।೧) ಇತ್ಯಾದೀನಿ ವಾಕ್ಯಾನಿ ನಿರೂಪಯಂತಿ ಜಗಜ್ಜನ್ಮಾದಿ ಕಾರಣತ್ವೇನ ||

'ಅಥಾತೋ ಬ್ರಹ್ಮಜಿಜ್ಞಾಸಾ' ಮೊದಲನೆಯಸೂತ್ರ. ತತ್ತ್ವಮಸ್ಯಾದಿ ಶ್ರುತಿವಾಕ್ಯದಿಂದ ತತ್ ತ್ವಂಪದಾರ್ಥಗಳಿಗೆ ಅಭೇದ ಬೋಧಿತವಾಗುವುದರಿಂದ ಅವುಗಳ ಶ್ರವಣ, ಮನನ, ನಿದಿಧ್ಯಾಸನಗಳಿಂದ ಉಂಟಾದ ಜ್ಞಾನದಿಂದ ಅನಾದ್ಯವಿದ್ಯಾನಿವೃತ್ತಿಯುಂಟಾಗುವುದರಿಂದ ಸತ್ ಚಿತ್ ಆನಂದೈಕರಸರೂಪ ಬ್ರಹ್ಮಸಾಕ್ಷಾತ್ಕಾರವಾಗುವುದರಿಂದ ಬ್ರಹ್ಮಜಿಜ್ಞಾಸ್ಯತ್ವವನ್ನು ಈ ಮೊದಲನೆಯ ಸೂತ್ರವು ಬೋಧಿಸುತ್ತದೆ. 'ಅಜ್ಞಾತಂ' ಇತಿ. ವೇದಾಂತಕ್ಕೆ ಅನುಬಂಧ ಚತುಷ್ಟಯವನ್ನು ತಿಳಿಸುತ್ತಾನೆ. ಅಜ್ಞಾತಬ್ರಹ್ಮವೇ ವಿಷಯ. ಬ್ರಹ್ಮಜ್ಞಾನವೇ ಪ್ರಯೋಜನ. ಮೋಕ್ಷಾಭಿಲಾಷಿಯೇ ಅಧಿಕಾರಿ. ಶ್ರುತ್ಯಾದಿಗಳಿಂದ ಸಂಬಂಧವನ್ನು ಊಹಿಸಿತಿಳಿಯಬೇಕು. 'ಜನ್ಮಾದಿ'—ಇತಿ. ಅಸ್ಯ—ಈ ತೋರುವ ಸಕಲಪ್ರಪಂಚದ ಉತ್ಪತ್ತಿಸ್ಥಿತಿಲಯಗಳು ಯಾರಿಂದ ಉಂಟಾಗುತ್ತದೆಯೋ ಅದೇ ಬ್ರಹ್ಮವೆಂದು ಎರಡನೇ ಸೂತ್ರಾರ್ಥ. ಬ್ರಹ್ಮಜಿಜ್ಞಾಸಾ ಉಂಟಾದಾಗ ಆ ಬ್ರಹ್ಮಸ್ವರೂಪ ಹೇಗಿದೆಯೆಂಬ ಆಕಾಂಕ್ಷೆ ಸ್ವತಃ ಬರುತ್ತದೆ. ಇದಕ್ಕೋಸ್ಕರ ಬ್ರಹ್ಮಲಕ್ಷಣವನ್ನು ಅವಶ್ಯವಾಗಿ ಹೇಳಬೇಕು. ಇದನ್ನು ಈ ಎರಡನೆಯಸೂತ್ರ ತಿಳಿಸುತ್ತದೆ. ಲಕ್ಷಣಾವಶ್ಯಕತೆ ಮುಖ್ಯವೆಂಬುದರಲ್ಲಿ ಅಭಿಯುಕ್ತೋಕ್ತಿ ಹೀಗಿದೆ — ಖಪಯೋಽಪಿ ಪದಾರ್ಥಾನಾಂ ನಾಂತಂ ಯಾಂತಿ ಪೃಥಕ್ತ್ವತಃ। ಲಕ್ಷಣೇನ ತು ಸಿದ್ಧಾನಾಮಂತಂ ಯಾಂತಿ ವಿಪಶ್ಚಿತಃ' ಸಕಲಗೋಗಳನ್ನು ತಿಳಿಯಲು ಶಕ್ಯವಿಲ್ಲ 'ಸಾಸ್ನಾದಿಮತ್ವಂ ಗೋರ್ಲಕ್ಷಣಂ' ಎಂದು ಗೋಲಕ್ಷಣತಿಳಿದಾಗ ಅದರಿಂದ ಸಕಲಗೋಜ್ಞಾನವಾಗುತ್ತದೆ. ಸ್ವರೂಪಲಕ್ಷಣ, ತಟಸ್ಥಲಕ್ಷಣವೆಂದು ಲಕ್ಷಣವು ಎರಡುವಿಧವಾಗಿದೆ. ಈ ಎರಡು ಲಕ್ಷಣಗಳೂ ವ್ಯಾವರ್ತಕಗಳಾಗಿರುವುದಲ್ಲದೆ ವ್ಯಾವಹಾರ ಪ್ರಯೋಜಕಗಳೂ ಆಗಿರುತ್ತವೆ. ಸ್ವರೂಪಲಕ್ಷಣದಿಂದ ವಸ್ತುಸ್ವರೂಪ ಪರಿಚಯವಾಗುತ್ತದೆ. ಜಗಜ್ಜನ್ಮಾದಿಕಾರಣತ್ವವು ಮಾಯಾವಿಶಿಷ್ಟಬ್ರಹ್ಮನ ಸ್ವರೂಪಲಕ್ಷಣವಾಗುತ್ತದೆ. ಇದು ಶುದ್ಧಬ್ರಹ್ಮನಿಗೆ ತಟಸ್ಥ ಲಕ್ಷಣವಾಗುತ್ತದೆ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬುದು ಶುದ್ಧಬ್ರಹ್ಮನ ಸ್ವರೂಪಲಕ್ಷಣವಾಗುತ್ತದೆ.

ತದುಕ್ತಂ ವಿವರಣೇ—

ಜಗಜ್ಜನ್ಮಸ್ಥಿತಿಧ್ವಂಸಾ ಯತಃ ಸಿಧ್ಯಂತಿ ಕಾರಣಾತ್ ।

ತತ್ ಸ್ವರೂಪತಟಸ್ಥಾಭ್ಯಾಂ ಲಕ್ಷಣಾಭ್ಯಾಂ ಪ್ರದರ್ಶ್ಯತೇ । ಇತಿ ||

'ಶಾಸ್ತ್ರಯೋನಿತ್ವಾತ್' (ಬ್ರ-ಸೂ-೧-೧-೩) ಇತಿ ತೃತೀಯಸೂತ್ರೇ ಪ್ರಥಮವರ್ಣಕೇನ ಷಷ್ಠೀಸಮಾಸಮಾಶ್ರಿತ್ಯ ಸರ್ವಜ್ಞತ್ವಂ ಪ್ರತ್ಯಪಾದಿ । ದ್ವಿತೀಯವರ್ಣಕೇನ ಬಹುವ್ರೀಹಿಸಮಾಸಮಭ್ಯುಪೇತ್ಯ ಬ್ರಹ್ಮಣೋ ವೇದಾಂತಪ್ರಮಾಣಕತ್ವಂ ಪ್ರತ್ಯಪಾದಿ । 'ತತ್ತು ಸಮನ್ವಯಾತ್' (ಬ್ರ ಸೂ-೧-೧-೪) ಇತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚತುರ್ಥೇ ಸೂತ್ರೇ ಪ್ರಥಮವರ್ಣಕೇನ ವೇದಾಂತಾನಾಂ ಬ್ರಹ್ಮಣಿ ತಾತ್ಪರ್ಯಂ ಪ್ರತ್ಯಪಾದಿ ದ್ವಿತೀಯವರ್ಣಕೇನ ವೇದಾಂತಾನಾಂ ಪ್ರತಿಪತ್ತಿವಿಧಿಶೇಷತಯಾ ಬಹ್ಮಪ್ರತಿಪಾದಕತ್ವಂ ಪ್ರತ್ಯಕ್ಷೇಪಿ। ದಿಙ್ಮಾತ್ರಮತ್ರ ಪ್ರದರ್ಶಿತಮ್ । ಶಿಷ್ಟಂ ಶಾಸ್ತ್ರ ಏವ ಸ್ಪಷ್ಟಮಿತಿ ಸಕಲಂ ಸಮಂಜಸಮ್ ॥

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನಸಂಗ್ರಹೇ
ಸಕಲದರ್ಶನಶಿರೋಽಲಂಕಾರರತ್ನಂ ಶ್ರೀಮಚ್ಛಾಂಕರದರ್ಶನಂ
ಸಮಾಪ್ತಮ್ ॥

ಸಮಾಪ್ತೋಽಯಂ ಸರ್ವದರ್ಶನ ಸಂಗ್ರಹಃ ॥

ಶ್ರೀಪ್ರಕಾತ್ಮಯತಿವಿರಚಿತವಾದ ಪಂಚಪಾದಿಕಾವಿವರಣದಲ್ಲಿ ದ್ವಿತೀಯಸೂತ್ರಾರಂಭದಲ್ಲಿ ಈ ವಿಷಯ ಹೇಳಿದೆ. 'ಜಗತ್'—ಇತಿ. ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳು ಯಾವ ಕಾರಣದಿಂದ ಸಿದ್ಧವಾಗುತ್ತವೆಯೋ ಅದು ಸ್ವರೂಪಲಕ್ಷಣ, ತಟಸ್ಥಲಕ್ಷಣಗಳಿಂದ ತೋರಿಸಲ್ಪಡುತ್ತದೆ. ಎಂದರ್ಥ. 'ಶಾಸ್ತ್ರಯೋನಿ' — ಇತಿ. ಎರಡನೆಯ ಸೂತ್ರದಲ್ಲಿ ಜಗತ್ತಿಗೆ ಕಾರಣನಾದುದರಿಂದ ಬ್ರಹ್ಮನಿಗೆ ಸರ್ವಜ್ಞತ್ವವು ಅರ್ಥಾತ್ ಪ್ರತೀತವಾಗುತ್ತದೆ ಆರ್ಥಿಕಸರ್ವಜ್ಞತ್ವವು ಪ್ರಧಾನಾದಿಗಳಿಗೆ ಪ್ರಾಪ್ತವಾದರೆ ಅದನ್ನು ಹೋಗಲಾಡಿಸಲು ವೇದಕರ್ತೃತ್ವಹೇತುವಿನಿಂದ ಸಮರ್ಥಿಸಲು ಮೂರನೇ ಸೂತ್ರವು ಆರಬ್ಧವಾಗಿದೆ. ಶಾಸ್ತ್ರವೆಂದರೆ (ಬ್ರಹ್ಮ) ವೇದ. "ಪ್ರವೃತ್ತಿರ್ವಾ ನಿವೃತ್ತಿರ್ವಾ ಪುಂಸಾಂ ಯೇನೋಪದಿಶ್ಯತೇ। ತದ್ಧರ್ಮಶ್ಚೋಪದಿಶ್ಯಂತೇ ಶಾಸ್ತ್ರಂ ಶಾಸ್ತ್ರವಿದೋ ವಿದುಃ।" ಎಂದು ವೇದ ಲಕ್ಷಣ ಹೇಳಿದೆ. ಶಾಸ್ತ್ರಸ್ಯಯೋನಿಃ—ಕಾರಣಮ್. ಸರ್ವಜ್ಞಕಲ್ಪವೇದಕರ್ತೃವಾದುದರಿಂದ ಬ್ರಹ್ಮನಿಗೆ ಸರ್ವಜ್ಞತ್ವ ಸಿದ್ಧವಾಗುತ್ತದೆ. ಇದು ಪ್ರಥಮವರ್ಣಕ ಅಂದರೆ ಒಂದು ರೀತಿ (ಪ್ರಕಾರ). ದ್ವಿತೀಯ ವರ್ಣಕದಲ್ಲಿ ಬಹುವ್ರೀಹಿಸಮಾಸ.

ಶಾಸ್ತ್ರಂ—ವೇದಃ, ಯೋನಿಃ—ಪ್ರಮಾಣಂ ಯಸ್ಯ ತತ್ತ್ವಮ್, ಜಗಜ್ಜನ್ಮ ಕಾರಣವೆಂದಾಗ ಕ್ಷಿತ್ಯಂಕುರಾದಿಕಂ—ಸಕರ್ತೃಕಂ—ಕಾರಣತ್ವಾತ್—ಎಂಬ ಅನುಮಾನವು ಪ್ರಮಾಣವಾಗಬಹುದೆಂಬ ಶಂಕೆಯನ್ನು ಹೋಗಲಾಡಿಸಲು ಈ ಸೂತ್ರ ಆರಬ್ಧವಾಗಿದೆ. ಶಾಸ್ತ್ರಯೋನಿತ್ವವಿರುವುದರಿಂದ ಬ್ರಹ್ಮವು ಪ್ರಮಾಣಾಂತರಗನ್ಯವಾಗುವುದಿಲ್ಲವೆಂದರ್ಥ. 'ತಂತ್ವೌಪನಿಷದಂ ಪುರುಷಂ ಪೃಚ್ಛಾಮಿ (ಬೃ-೩-೨೬) ಎಂದು ಬ್ರಹ್ಮವು ಉಪನಿಷದ್ವೇದ್ಯವೆಂದು ಪ್ರತೀತವಾಗುತ್ತದೆ. 'ನಾವೇದವಿನ್ಮನುತೇ ತಂ ಬೃಹಂತಂ (ತೈ-ಬ್ರಾ-೩।೧೨।೯।೭) ಎಂಬ ಶ್ರುತಿಯಿಂದ ಪ್ರಮಾಣಾಂತರ ನಿಷೇಧವು ಸ್ಪಷ್ಟವಾಗಿ ತಿಳಿಯುತ್ತದೆ. ಅನುಮಾನವು ಶ್ರುತಿ ಮೂಲಕವಾಗಿ ಹೇಳಬೇಕಲ್ಲದೆ ಸ್ವತಂತ್ರವಾಗಿ ಪ್ರಮಾಣವಾಗಲಾರದು. 'ತತ್ತು'—ಇತಿ. ಸಮ್ಯಗನ್ವಯಃ ಸಮನ್ವಯಃ — ತಾತ್ಪರ್ಯ ವಿಷಯತ್ವವೆಂದರ್ಥ. ಬ್ರಹ್ಮನಿಗೆ ಶಾಸ್ತ್ರಯೋನಿತ್ವವು ವೇದಾಂತವಾಕ್ಯ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ತಾತ್ಪರ್ಯ ವಿಷಯತ್ವದಿಂದ ಸಿದ್ಧವಾಗುತ್ತದೆಂದು ಸೂತ್ರಾರ್ಥ. ಅಲ್ಲಿ ಮೊದಲು ವೇದಾಂತವಾಕ್ಯಗಳಿಗೆ ಬ್ರಹ್ಮ ತಾತ್ಪರ್ಯವು ಪ್ರತಿಪಾದಿಸಿದೆ. ದ್ವಿತೀಯ ವರ್ಣಕದಲ್ಲಿ ವೇದಾಂತವಾಕ್ಯಗಳು ವಿಧೇಯೋಪಾಸನಾ ವಿಷಯರೂಪದಿಂದ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲ. ಮುಖ್ಯವಾಗಿಯೇ ಬೋಧಿಸುತ್ತವೆಯೆಂದು ವಿವರಿಸಿರುತ್ತಾರೆ. ಹೀಗೆ ಇಲ್ಲಿ ದಿಕ್ಪ್ರದರ್ಶನ ಮಾಡಿದೆ. ಅಧಿಕ ವಿಷಯವನ್ನು ಶಾಸ್ತ್ರದಿಂದಲೇ ತಿಳಿಯಬೇಕೆಂದು ಬೋಧಿಸಿರುತ್ತಾರೆ. ಸಕಲದರ್ಶನಗಳಿಗೂ ಚೂಡಾಮಣಿಯಂತೆ ಈ ಶಾಂಕರದರ್ಶನವಿರುತ್ತದೆ.

ವಿಷ್ಣುಮೂರ್ತಿಕೃತ ದರ್ಶನ ಪ್ರಕಾಶವೆಂಬ ಕನ್ನಡ ವ್ಯಾಖ್ಯಾನದಲ್ಲಿ
ಶಾಂಕರದರ್ಶನ ಸಮಾಪ್ತವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Library
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥಕರ್ತರ ಇತರ ಕನ್ನಡ ವ್ಯಾಖ್ಯಾನ ಗ್ರಂಥಗಳು

೧.	ವೈ. ಸಿದ್ಧಾಂತ ಕೌಮುದೀ (ಕಾರಕಾಂತ)	೧೦—೦೦
೨.	ನ್ಯಾಯಸಿದ್ಧಾಂತಮುಕ್ತಾವಳೀ	೧೫—೦೦
೩.	ನೀತಿಶತಕ	೨—೫೦
೪.	ತರ್ಕಸಂಗ್ರಹದೀಪಿಕಾ	೨—೫೦
೫.	ಅಮರಕೋಶ	೫—೦೦
೬.	ಚಂದ್ರಾಲೋಕ	೧—೭೫
೭.	ವೃತ್ತರತ್ನಾಕರ	೧—೫೦
೮.	ರಘುವಂಶ. ಸರ್ಗ ೪, ೫	೩—೦೦
೯.	ಕಿರಾತಾರ್ಜುನೀಯ ೧, ೨	೨—೫೦
೧೦.	ಸಾಂಖ್ಯಕಾರಿಕಾ	೩—೨೫
೧೧.	ಮೇಘದೂತ	೪—೦೦
೧೨.	ಶಬ್ದರೂಪಾವಳೀ	೧—೨೫

ಪುಸ್ತಕ ದೊರೆಯುವ ಸ್ಥಳ.

ವೇದಾಂತಭವನ
ಚಾಮರಾಜ ಪೇಟೆ
ಬೆಂಗಳೂರು – ೧೮

ಶಿವಸ್ವಾಮಿಭವನಂ
ವಾಣೀವಿಲಾಸ ರೋಡ್
ಮೈಸೂರು – ೪

CC-0. In Public Domain. Gurukul Kangri Collection, Haridwar